ನಿರಂಜನರ ನಾಟಿಕೆ

ಪ್ರತಿಧ್ವನಿ



ಕನ್ನಡ
ಸಾಹಿತ್ಯ
ಪರಿಷತ್ತು
ಬೆಂಗಳೂರು-೧೮

"ನೆನಪಿನ ಕಾಣಿಕೆ"

ಕನ್ನಡ ಸಂಸ್ಥೆ
ಜ್ಞಾನ ಭಾರತಿ
ಕನ್ನಡ ಅಧ್ಯಯನ ಕೇಂದ್ರ

ನಿರಂಜನ ವಾಚಿಕೆ

ಪ್ರತಿಧ್ವನಿ

ಸಂಕಲನ

ನಿರಂಜನ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ ಬೆಂಗಳೂರು–೫೬೦ ೦೧೮

PRATIDHWANI (NIRANJANA VAACHIKE) A NIRANJANA READER, in Kannada; Compied by Niranjana; Published Under the scheme of Gowrava Sadasyatva; by The Kannada Sahitya Parishat, Pampa Mahakavi Road, Chamarajapet, Bangalore-560 018. Pages: 520+X; Price: Rs. 5-00

ಬೆಲೆ : ಐದು ರೂಪಾಯಿ

ಮುದ್ರಕರು

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ
ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು ೫೬೦ ೦೧೮

ಮುನ್ನುಡಿ

'ನಿರಂಜನ' ಕನ್ನಡ ಸಾಹಿತ್ಯ ಲೋಕದಲ್ಲಿ ಮಂತ್ರಶಕ್ತಿ ಪಡೆದ ಒಂದು ವಿಶಿಷ್ಟ ಹೆಸರು. ಬದುಕಿನುದ್ದಕ್ಕೂ ತಾನು ನಂಬಿಕೊಂಡ ಸಿದ್ಧಾಂತವನ್ನು ಅನುಷ್ಠಾನಕ್ಕೆ ತರಲು ಹೆಣಗುತ್ತಿದ್ದ ಸಾಹಿತಿಯ ಬವಣೆ ಬಡತನವನ್ನು ಅನುಭವಿಸುತ್ತಾ ಮೆಟ್ಟಿ ಮುಂದುವರೆದ ಜೀತನ ನಿರಂಜನ.

ಕೇವಲ ಹದಿಮೂರನೇ ವಯಸ್ಸಿನಲ್ಲೇ ಕರ್ಣ-ಕವಚದಂತೆ ಮೂಡಿಬಂದ ಪ್ರತಿಭೆಗೆ ಎಲ್ಲೆಡೆಯಲ್ಲೂ ಮುನ್ನುಗ್ಗಬೇಕು, ಎಲ್ಲೆಡೆಯಲ್ಲೂ ಹರಡಿಕೊಳ್ಳಬೇಕೆಂಬ ತವಕ.

ಹಿರಿಯಣ್ಣಂದಿರ ಆಶೀರ್ವಾದದಿಂದ ಬೆಳೆದ ಬದುಕೇನಲ್ಲ. ಎಲ್ಲಾ ಸ್ವಯಾರ್ಜಿತ. ರೇಷ್ಮೆಹುಳು ಸಿಕ್ಕಿದ ಎಲೆಯನ್ನೆಲ್ಲಾ ತಿಂದು ತನ್ನೊಳಗೆ ಶ್ರೇಷ್ಠ ರೇಷ್ಮೆ ಸೃಷ್ಟಿ ಮಾಡುವಂತೆ ಕಥೆ, ಕವಿತೆ, ಕಾದಂಬರಿ, ನಾಟಕ, ವಿಮರ್ಶೆ, ಪತ್ರಿಕೋದ್ಯಮ ಸಾಹಿತ್ಯ ಕೃಷಿ, ಶ್ರೇಷ್ಠ ಅಂಕಣ ಲೇಖನ, ಪ್ರಧಾನ ಸಂಪಾದಕರಾಗಿ ಏಳು ಸಂಪುಟಗಳ—ಕಿರಿಯ ವಿಶ್ವಕೋಶ 'ಜ್ಞಾನಗಂಗೋತ್ರಿ', ಇಪ್ಪತ್ತೈದು ಸಂಪುಟಗಳ-'ವಿಶ್ವಕಥಾಕೋಶ' ರಚನೆ ಈ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲಿ ಒಂಟಿ ಸಲಗದಂತೆ ನುಗ್ಗಿ ಸಿಕ್ಕಿದುದನೆಲ್ಲಾ ಅರಗಿಸಿಕೊಂಡು ಕುಳುಕುಂದ ಶಿವರಾಯ – 'ನಿರಂಜನ'ರಾಗಿ ಮೂಡಿಬಂದುದು ಸಾಹಿತ್ಯ ಕ್ಷೇತ್ರದ ಒಂದು ಆಕಸ್ಮಿಕವೇ ಸರಿ. ಬಂಗಾಳಿ, ಹಿಂದಿ, ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಇಂಗ್ಲಿಷ್, ರಷ್ಯನ್, ಪೋಲಿಸ್ ಭಾಷೆಗಳಲ್ಲಿ ಅವರ ಅನೇಕ ಕೃತಿಗಳು ಅನುವಾದಗೊಂಡಿರುವುದನ್ನು ನೋಡಿದಾಗ ದಿಗ್ಭ್ರಾಂತಿ ಉಂಟಾಗುತ್ತದೆ ಮತ್ತು 'ನಿರಂಜನ' ಒಂದು ವ್ಯಕ್ತಿಯಲ್ಲ, ಒಂದು ಸಂಸ್ಥೆ, ಒಂದು ವಿಶ್ವವಿದ್ಯಾಲಯ, ಒಂದು ವಿಶ್ವಕೋಶವೇ ಎನಿಸುತ್ತಧೆ.

ಅವರ ಆಳವಾದ ಅಧ್ಯಯನ, ಚಿಂತನ ತಾರ್ಕಿಕವಾಗಿ ಅವರು ಸೃಷ್ಟಿಸಿರುವ ಸಾಹಿತ್ಯ, ಈಜಿಪ್ಟಿನ ಪಿರಿಮಿಡ್ಡುಗಳಂತೆ, ಆಗ್ರಾದ ತಾಜ್‌ಮಹಲ್‌ಗಳಂತೆ, ಹಂಪೆಯ ಉಗ್ರನರಸಿಂಹನಂತೆ, ಬೆಳಗೊಳದ ಬಾಹುಬಲಿಯಂತೆ, ಬೇಲೂರಿನ ಕಲಾ ಜಾಲದಂತೆ ಓದುಗರನ್ನು ಆಕರ್ಷಿಸುವುದರಲ್ಲಿ ಸಂದೇಹವಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯ ಕ್ಷೇತ್ರದ ದಿಗ್ಗಜಗಳೆಂದು ಪರಿಗಣಿಸಿದ್ದ ಐದು ಜನ ಶ್ರೇಷ್ಠ ಸಾಹಿತಿಗಳಾದ ಡಾ|| ಮಾಸ್ತಿ, ಡಾ|| ಕುವೆಂಪು, ಡಾ|| ಕೆ. ಶಿವರಾಮ ಕಾರಂತ, ಶ್ರೀ ನಿರಂಜನ ಮತ್ತು ಶ್ರೀ ಕೆ.ಎಸ್. ನರಸಿಂಹಸ್ವಾಮಿ ಅವರಿಗೆ ಪರಿಷತ್ತಿನ ಗೌರವ ಸದಸ್ಯತ್ವವನ್ನು ನೀಡಿತು. ಅಂತೆಯೇ ಅವರ ಒಂದು ಕೃತಿಯ ಐದು ಸಾವಿರ ಪ್ರತಿಗಳನ್ನು ಮುದ್ರಣ ಮಾಡುವ ಏರ್ಪಾಡನ್ನೂ ಮಾಡಿತು. ಇದಕ್ಕಾಗಿ ಸರಕಾರ ಎರಡು ಲಕ್ಷ ರೂಪಾಯಿಗಳ ಅನುದಾನವನ್ನು ನೀಡಿದೆ.

ಅದರಂತೆ ನಿರಂಜನರನ್ನು ತಮ್ಮ ಕೃತಿಗಳಲ್ಲಿ ಒಂದು ಕೃತಿಯನ್ನು ಹೊರ ತರಲು ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸಿದೆವು. ಇಷ್ಟರಲ್ಲಿ ಅವರ ಎಲ್ಲಾ ಕೃತಿಗಳನ್ನು ಐ. ಬಿ. ಎಚ್. ಪ್ರಕಾಶನದವರು 'ನಿರಂಜನ: ಮೂವತ್ತು ಸಂಪುಟ ಗಳಲ್ಲಿ' ಹೊರತರುವ ಕಾರ್ಯ ಪ್ರಾರಂಭವಾಗಿತ್ತು. ಅದಕ್ಕೆ ಸಂವಾದಿಯಾಗಿ, 'ಧ್ವನಿ'ಗೆ 'ಪ್ರತಿಧ್ವನಿ'ಯಾಗುವಂತೆ ಈ ಕೃತಿಯನ್ನು ರೂಪಿಸಿ ನಮಗೆ ಕೊಟ್ಟಿದ್ದಾರೆ. ಈ ಕೃತಿಯಲ್ಲಿರುವ ನಿರಂಜನರ ಎಲ್ಲಾ ಸಾಹಿತ್ಯ ಪ್ರಕಾರಗಳ ತುಣುಕುಗಳೂ ಓದುಗನ ಮನಸ್ಸನ್ನು 'ನಿರಂಜನ: ಮೂವತ್ತು ಸಂಪುಟಗಳು' ಓದುವಿಕೆಗೆ ಭೂಮಿಕೆಯನ್ನು ಸಿದ್ಧಪಡಿಸುವಲ್ಲಿ ಸಂದೇಹವಿಲ್ಲ.

ಶ್ರೀ ನಿರಂಜನರವರಿಗೆ, ಸರ್ಕಾರಕ್ಕೆ, ಬಿ. ಎಂ. ಶ್ರೀ. ಅಚ್ಚುಕೂಟದ ವ್ಯವಸ್ಥಾಪಕರಾದ ಎಸ್.ವಿ. ಮನ್ವಾಚಾರ್ ಮತ್ತು ಇತರ ಕಾರ್ಮಿಕ ಬಂಧುಗಳಿಗೆ ಹಾಗೂ ಪರಿಷತ್ತಿನ ಕಾರ್ಯದರ್ಶಿಯಾದ ಶ್ರೀ ಚಂದ್ರಕಾಂತ ಗಂ. ಪಡೇಸೂರ ಅವರಿಗೆ ನಾನು ಆಭಾರಿಯಾಗಿದ್ದೇನೆ.

೨೦-೧೦-೧೯೮೭ | ಹೆಚ್. ಬಿ. ಜ್ವಾಲನಯ್ಯ
ಬೆಂಗಳೂರು | ಅಧ್ಯಕ್ಷರು

ಎರಡು ಮಾತು

ನಿರಂಜನ ಅವರು ಕನ್ನಡ ನಾಡಿನ ಹಿರಿಯ ಸಾಹಿತಿ. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ನಿರಂಜನ ಅವರು ಕನ್ನಡ ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಲ್ಲೂ ಕೈ ಆಡಿಸಿ ಸೈ ಎನಿಸಿಕೊಂಡಿರುವ ಪ್ರಬುದ್ಧ ಲೇಖಕರು.

'ಪ್ರತಿಧ್ವನಿ' ನಿರಂಜನ ಅವರ, ಸಾಹಿತ್ಯದ ಎಲ್ಲ ಪ್ರಕಾರಗಳ ಸಿದ್ಧಿ ಸಾರವನ್ನು ಒಳಗೊಂಡ ಒಂದು ಅಪರೂಪದ ಕೃತಿ. ಇದನ್ನು ನಿರಂಜನ ಅವರು 'ವಾಚಿಕೆ' ಎಂದು ಕರೆದು ಸೂಕ್ತ ಅರ್ಥವನ್ನೇ ನೀಡಿದ್ದಾರೆ. ಅವರ ಎಲ್ಲ ಬರವಣಿಗೆಯ ಸಾರ ಸಂಗ್ರಹವನ್ನು ಓದುಗರ ಮುಂದಿಡುವ ಪ್ರತಿಧ್ವನಿ ಕನ್ನಡ ವಾಚಕ ಬಳಗಕ್ಕೆ ಒಂದು ಅಪರೂಪದ ಕೊಡುಗೆ ಎಂದು ಭಾವಿಸುತ್ತೇನೆ.

ಗೌರವ ಸದಸ್ಯತ್ವ ಮಾಲೆಯ ಯೋಜನೆಯಡಿ ಪ್ರಕಟಿಸಲು ತಮ್ಮ ಸಮ್ಮತಿ ನೀಡಿ ಈ ಕೃತಿಯನ್ನು ಸಂಕಲಿಸಿಕೊಟ್ಟ ನಿರಂಜನ ಅವರಿಗೆ ಪರಿಷತ್ತಿನ ಪರವಾಗಿ ಕೃತಜ್ಞತೆಗಳು. ಇಂಥ ವಿಶಿಷ್ಟ ಕನ್ನಡದ ಅಪರೂಪದ ಕೃತಿಯು ಓದುಗರಿಗೆ ಸುಲಭ ಬೆಲೆಯಲ್ಲಿ ದೊರಕುವಂತಾಗಲು ಸಹಾಯಧನ ನೀಡಿದ ಘನ ಸರ್ಕಾರದ ನೆರವನ್ನು ಇಲ್ಲಿ ಸ್ಮರಿಸುತ್ತೇನೆ.

ಅ. ರಾ. ಚಂದ್ರಹಾಸಗುಪ್ತ
ಆಡಳಿತಾಧಿಕಾರಿ

೮-೨-೧೯೮೮

ಕೃತಜ್ಞ

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ|| ಹಂಪ. ನಾಗರಾಜಯ್ಯನವರು ತಮ್ಮ ಅಧಿಕಾರಾವಧಿಯ ಮುಕ್ತಾಯ ಹಂತದಲ್ಲಿ ರೂಪಿಸಿ ಕೃತಿಗಿಳಿಸಿದ ವಿನೂತನ ಯೋಜನೆ, ಐವರು ಸಾಹಿತಿಗಳಿಗೆ ಗೌರವ ಸದಸ್ಯತ್ವದ ನೀಡಿಕೆ. ಆಯ್ಕೆಯಾದ ಐವರಲ್ಲಿ ನಾನು ಒಬ್ಬ. ಈ ಗೌರವಕ್ಕೆ ಪಾತ್ರರಾದವರ ಒಂದೊಂದು ಕೃತಿಯನ್ನು ಮುದ್ರಿಸಿ ಕಡಮೆ ಬೆಲೆಗೆ ಓದುಗರಿಗೆ ಒದಗಿಸುವುದು ಮೇಲಿನ ಯೋಜನೆಯ ಒಂದಂಗ.

ನನ್ನದೊಂದು ವಿಶಿಷ್ಟ ಕೃತಿಯನ್ನು ಪರಿಷತ್ತು ಪ್ರಕಟಿಸಿದರೆ ಚೆನ್ನು ಎನಿಸಿತು. ಬಯಸಿದ್ದು ಇಷ್ಟು: ಆ ಗ್ರಂಥವನ್ನು ಓದಿದವರಿಗೆ ಅರ್ಧ ಶತಮಾನ ಕಾಲ (೧೯೩೭-೧೯೮೭) ನಿರಂಜನ ಸೃಷ್ಟಿಸಿದ ಸಾಹಿತ್ಯದ ಸೂಕ್ಷ್ಮ ಪರಿಚಯ ಲಭಿಸಬೇಕು; ವಿಸ್ತೃತ ಓದಿಗೆ ಆ ಪರಿಚಯ ದಾರಿ ಮಾಡಬೇಕು. ಅಂಥ ವಿಚಾರದಿಂದ ಮೂರ್ತ ರೂಪ ತಳೆಯಿತು, 'ಪ್ರತಿಧ್ವನಿ'ಯ ಚೌಕಟ್ಟು.

ನನ್ನ ಭೇರಿ ನಾನು ಬಾರಿಸುವುದಿಲ್ಲ. ಇತರರು ಅದನ್ನು ಬಾರಿಸುವುದೂ ನನಗೆ ಇಷ್ಟವಿಲ್ಲ. ಈ ಬಗೆಯ ಚಂಡೆ ಸದ್ದಿಲ್ಲದೆಯೇ ಹಲವು ಓದುಗರು ಒಂದು ಸಂಗತಿಯನ್ನು ಗಮನಿಸಿರಬಹುದು. ಅದು ನಿರಂಜನ ಸಾಹಿತ್ಯದಲ್ಲಿರುವ ವೈವಿಧ್ಯ. ಈತ ಹದಿಮೂರನೆಯ ವಯಸ್ಸಿನಲ್ಲಿ ಬರೆಯತೊಡಗಿದ; ಅರುವತ್ತ ಮೂರರ ಪ್ರಾಯದಲ್ಲೂ ಬರೆಯುತ್ತಿದ್ದಾನೆ. ಪುಟಸಂಖ್ಯೆ ದೊಡ್ಡದು. ಆದರೆ, ಆ ಕೃತಿ ರಾಶಿಯಲ್ಲಿ ಜಳ್ಳೆಷ್ಟು, ಕಾಳೆಷ್ಟು ? ಅದು ಕಾಲ ಜರಡಿ ಹಿಡಿದು ಮಾಡಬೇಕಾದ ನಿರ್ಧಾರ. ಅದು ನಾಳೆಗೆ ಸಂಬಂಧಿಸಿದ್ದು. ಇವತ್ತು ಸುಮ್ಮನಿರುವುದು ಮೇಲು.

ಕಲೆಯಲ್ಲೂ ಸಾಹಿತ್ಯದಲ್ಲೂ ನಾನು ಕಂಡಿರುವ ಒಂದು ಸೋಜಿಗ ಉಂಟು. ಸಮಕಾಲೀನರಿಂದ ಉಪೇಕ್ಷೆಗೆ ಗುರಿಯಾಗುವ ಕಲಾಕೃತಿ ಅಥವಾ ಸಾಹಿತ್ಯ ಕೃತಿ ಮುಂದಿನ ಪೀಳಿಗೆಯವರ ಆದರಕ್ಕೆ ಪಾತ್ರವಾಗುತ್ತದೆ. ಒಂದು ಕಾಲದಲ್ಲಿ ಹೊಗಳಿಕೆಯ ಮಳೆಯಲ್ಲಿ ತೋಯ್ದದ್ದು ಮುಂದೆ ಬಿಸಿಲಿನ ಪ್ರಖರತೆಯಲ್ಲಿ ಪುಡಿಪುಡಿಯಾಗುತ್ತದೆ. ಹಾಗೆ ಶತಮಾನಗಳು ಉರುಳಿದ ಅನಂತರವೂ ಉಳಿಯುವ ಕೃತಿ ಮಹಾನ್ ಎನಿಸಿಕೊಳ್ಳುತ್ತದೆ. ಇದು ಬದುಕಿನ ವಾಸ್ತವತೆ.

ನಾನು ಯಾವ ಭ್ರಮೆಯೂ ಇಲ್ಲದೆ ಬರೆಯುವವನು. ಬರೆದವನು ಸವಾಲೆಸೆಯುವುದು, ಪಂಥಾಹ್ವಾನವೀಯುವುದು ನನ್ನ ಅಭಿಪ್ರಾಯದಲ್ಲಿ ಅ–ಕಾವ್ಯ ಗುಣಗಳು. ನನ್ನಲ್ಲಿ ಅಂತಹ ಗುಣಗಳಿಲ್ಲ.

ನಿರಂಜನ ಸಾಹಿತ್ಯ ಎಂಥದೆಂದು ತಿಳಿಯಲು ಈಗ ಯಾರೂ ಹೆಚ್ಚು ಕಷ್ಟ ಪಡಬೇಕಾಗಿಲ್ಲ. ‘ಪ್ರತಿಧ್ವನಿ’ಯನ್ನು ಕೈಗೆತ್ತಿಗೊಂಡರೆ ಸಾಕು. ಆ ಬಳಿಕ ಓದುಗನೂ ನಾನೂ ಸ್ನೇಹಿತರಾಗುವುದು ಸಾಧ್ಯ.

‘ಪ್ರತಿಧ್ವನಿ’ಯನ್ನು ನಾನು ವಾಚಿಕೆ ಎಂದು ಕರೆದಿದ್ದೇನೆ. ನಿರಂಜನ ವಾಚಿಕೆ. ಇದು ನನ್ನ ಬರೆವಣಿಗೆಯ ನಮೂನೆಗಳ, ಮಾದರಿಗಳ ಸಂಪುಟ.

ಕನ್ನಡ ಸಾಹಿತ್ಯ ಪರಿಷತ್ತಿನ ಈಗಿನ ಅಧ್ಯಕ್ಷ ಶ್ರೀ ಎಚ್. ಬಿ. ಜ್ವಾಲನಯ್ಯನವರ ಕಾರ್ಯಕ್ಷಮತೆಯ ಫಲವಾಗಿ ‘ಪ್ರತಿಧ್ವನಿ’ ಹೊರಬೀಳುತ್ತಿದೆ. ‘ಮಾಜಿ’ ಮತ್ತು ‘ಹಾಲಿ’ ಅಧ್ಯಕ್ಷದ್ವಯರಿಗೂ ನಾನು ಆಭಾರಿ.

೫೨೦ ಡೆಮ್ಮಿ ಅಷ್ಟದಳ ಪುಟಗಳ ‘ಪ್ರತಿಧ್ವನಿ’ಯನ್ನು ಬಿ. ಎಂ. ಶ್ರೀ. ಅಚ್ಚುಕೂಟದಲ್ಲೇ ಮುದ್ರಿಸಿರುವುದು ಹಿರಿಯ ಸಾಧನೆ. ಅದಕ್ಕೆ ಕಾರಣರಾಗಿರುವ ಅಚ್ಚುಕೂಟದ ಅಧಿಕಾರಿ ಶ್ರೀ ಎಸ್. ವಿ. ಮನ್ನಾಚಾರ್ ಅವರಿಗೂ ಕಾರ್ಮಿಕ ಬಂಧುಗಳಿಗೂ ರಕ್ಷಾಕವಚದ ಚಿತ್ರಕಾರ ಶ್ರೀ ಆರ್. ಸೂರಿ ಅವರಿಗೂ ನಾನು ಕೃತಜ್ಞ.

೧ ಅಕ್ಟೋಬರ್, ೧೯೮೭ — ನಿರಂಜನ

‘ಕಥೆ’ ೫೧೫, ೭ನೇ ಮುಖ್ಯಬೀದಿ
೫ನೇ ಬ್ಲಾಕ್, ಜಯನಗರ
ಬೆಂಗಳೂರು–೫೬೦ ೦೪೧

ಪರಿವಿಡಿ

೧

ಕವಿತೆ

೧ ನಾನು ರಚಿಸಿರುವ ಕವಿತೆಗಳ ಸಂಖ್ಯೆ ಎಂಟು ಅಥವಾ ಹತ್ತು. ಇವನ್ನು ನಾನು ಬರೆದುದು ೧೯೩೭ರಲ್ಲಿ ಹಾಗೂ ೧೯೩೮ರಲ್ಲಿ—ನನ್ನ ಹದಿಮೂರನೆಯ ಮತ್ತು ಹದಿನಾಲ್ಕನೆಯ ವಯಸ್ಸಿನಲ್ಲಿ. ಕವಿತೆಗಳನ್ನು ಮೊದಲು ಬರೆದುದು ತುಳು ಭಾಷೆಯಲ್ಲಿ (ಲಿಪಿ: ಕನ್ನಡ). ೧೯೩೭ರ ಉತ್ತರಾರ್ಧದಲ್ಲಿ ಕನ್ನಡಕ್ಕೆ ಅಂಟಿಕೊಂಡೆ. ಕತೆಗಳು; ನಡುವೆ ಒಮ್ಮೊಮ್ಮೆ ಕವಿತೆ. ನನಗೆ ನೆನಪಾಗುತ್ತಿರುವ ಸ್ವರಚಿತ ಕನ್ನಡ ಕವಿತೆಗಳು ನಾಲ್ಕು. ಒಂದು ಅಚ್ಚಾದದ್ದು ಧಾರವಾಡದ 'ಕನ್ನಡಕಂದ' ಮಾಸ ಪತ್ರಿಕೆಯಲ್ಲಿ. ಇನ್ನೆರಡು ಬೆಂಗಳೂರಿನ 'ಕನ್ನಡ ಜ್ಯೋತಿ' ಮಾಸಿಕದಲ್ಲಿ. ಇವು ನನ್ನ ಬಳಿ ಇಲ್ಲ. ಇರುವುದು ಒಂದೇ ಒಂದು: 'ಕರ್ಣಾಟಕದ ಕೊಡಗೂಸು'.

ಕನ್ನಡನಾಡು ಉದಯವಾದುದಕ್ಕೆ ಮುಂಚಿನ ದಕ್ಷಿಣ ಕನ್ನಡದ ಚಂದ್ರಗಿರಿ ನದಿಯ ದಕ್ಷಿಣದ ಭಾಗ ಕೇರಳ ಎಂಬುದು ಪರಂಪರಾನುಗತ ಸತ್ಯಾಂಶ. ೧೯೩೮-೧೯೪೧ರ ಅವಧಿಯಲ್ಲಿ ಆ ಪ್ರದೇಶದ ನೀಲೇಶ್ವರದಲ್ಲಿ ನಾನು ಹೈಸ್ಕೂಲು ವಿದ್ಯಾರ್ಥಿಯಾಗಿದ್ದೆ. ಆಗಿನ ದಕ್ಷಿಣ ಕನ್ನಡದ ವ್ಯಾಪ್ತಿಯೊಳಗಿದ್ದ ಆ ಪರಿಸರ ಕೊಡಗೂಸಾಗಿ ನನಗೆ ಕಂಡಿತು. ಆ ಕಿರಿಮಗಳನ್ನು ಕನ್ನಡಮ್ಮ ಕಳುಹಿಸುವುದು ಕೇರಳಕ್ಕೆ. ವರ ಅಲ್ಲಿಯವನು. ಮುದ್ದಣ ಬಹಳ ಪೀಡಿಸುತ್ತಿದ್ದ ಆ ಅವಧಿಯಲ್ಲಿ ಕವಿತೆ ಬರೆಯಲು ನಾನು ಬಳಸಿದ್ದು, ಇಂದು ಹಳೆಯದಾಗಿ ಕಾಣುವ ಕನ್ನಡದಲ್ಲಿ

ಕನ್ನಡದ ಹಿರಿಯ ಕವಿ, ಕತೆಗಾರ, ಕಾದಂಬರಿಕಾರ. ಪ್ರಾಧ್ಯಾಪಕ. ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು ಮಂಗಳೂರಿನ 'ರಾಷ್ಟ್ರಬಂಧು' ಸಾಪ್ತಾಹಿಕ. ಅದು ಕೆಲವು ವರ್ಷ ಪ್ರತಿ ತಿಂಗಳೂ ನಾಲ್ಕು ಪುಟಗಳ ಸಾಹಿತ್ಯ ಸಂಚಿಕೆ ನೀಡುತ್ತಿತ್ತು. ೨೮ ನವೆಂಬರ್ ೧೯೩೮ರ ಸಾಹಿತ್ಯ ಸಂಚಿಕೆಯಲ್ಲಿ 'ಕರ್ಣಾಟಕದ ಕೊಡಗೂಸು' ಪ್ರಕಟವಾಯಿತು. ಅಂಕಿತ: ಕು. ಶಿ. ರಾ.

ಏಳು ವರ್ಷಗಳ ಬಳಿಕ, ೧೯೪೫ರಲ್ಲಿ ರಷ್ಯದ ಕಾನ್‌ಸ್ಟಾಂಟಿನ್ ಸಿಮೊನೊವ್ ಎಂಬ ಕವಿಯ ಒಂದು ಕೃತಿಯನ್ನು ಕನ್ನಡಿಸಿದೆ. ಶೀರ್ಷಿಕೆ: 'ಕಾದಿರೆನಗಾಗಿ'

(ಯುದ್ಧ ರಂಗದಿಂದ ಯೋಧ ನಲ್ಲೆಗೆ ಬರೆದಂತೆ ...). ಬಳಸಿದ ಭಾಷೆ ಹೊಸಗನ್ನಡ. ಬೆಂಗಳೂರಿನ 'ಉಷಾ' ಮಾಸಿಕದಲ್ಲಿ ಅಚ್ಚಾಯಿತು (ಸಂ: ಬಸವರಾಜ ಕಟ್ಟೀಮನಿ).

ಮೂರು ದಶಕ ಕಳೆದ ಮೇಲೆ 'ಮೃತ್ಯುಂಜಯ' ಕಾದಂಬರಿ ಬರೆಯುತ್ತಿದ್ದಾಗ ಈಜಿಪ್ಟಿನ ಕೆಲ ಪ್ರಾಚೀನ ಗೀತೆಗಳನ್ನು ಅನುವಾದಿಸುವ ಅಗತ್ಯ ಇದಿರಾಯಿತು. ಮಗಳು ತೇಜಸ್ವಿನಿಯ ನೆರವು ಪಡೆದೆ.

ಒಟ್ಟಿನಲ್ಲಿ, ಕಾವ್ಯಕ್ಷೇತ್ರದಲ್ಲಿ ನನ್ನ ಕೃಷಿ ಅತಿ ಸ್ವಲ್ಪ. ಓದುವ ಮಟ್ಟಿಗಷ್ಟೇ ಆ ಒಲವು ಸೀಮಿತ: ಹಳಗನ್ನಡ, ನಡುಗನ್ನಡ, ಹೊಸಗನ್ನಡ; ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಎಲ್ಲವೂ ....

ಕರ್ನಾಟಕದ ಕೊಡಗೂಸು

೧

ಗರಿಮೋಡ, ಕಿರುಮೋಡ-
ವಂಬರವ ಮುಸುಕಿತ್ತು.
ಬಾಸಣಿಸಿದವಕುಂಠ-
ನದಲೆಡೆಯಲೊಮ್ಮೊಮ್ಮೆ,
ಬಾಂಬೆಣ್ಣು ಹೊರಗಿಣಿಕಿ,
ತಿರೆವೆಣ್ಣು ಕುರಿತಣಕಿ-
ಪಂತೆ ಲಕ್ಷಣವಾಗಿ
ಗಗನ ಕಂಗೊಳಿಸಿತ್ತು

೨

ಸೆಖೆಗೆ ಮಾಸಿತು ಬಣ್ಣ,
ಕೃಷ್ಣಮೇಘದ ತೆರದಿ;
ಮಾಲಿನ್ಯ ಮುಸುಕಿತ್ತು
ಕಾಯವನು ಪರಿಸರದಿ
ಗೆಲವ ಕಾಣಲಿಕಿಲ್ಲ,
ಹಸನ ಕಂಡವರಿಲ್ಲ,
ಕಾಲಚಕ್ರದ ಗೈಮೆ,
ಸೃಷ್ಟಿಮಾತೆಯ ಮೈಮೆ,
ವೈಶಾಖದಲಿ ನಕ್ಕ-
ಳಿಂದು ಅಳುತಿಹಳವಳು

೦೦ ೦೦ ೦೦

೩

ಪಡುಗಡಲ ತಂಬೆಲರು
    ಸುಂಯ್‌ಸುಯ್ಯೆ ಬೀಸುತಿರೆ,
ಪಟಪಟನೆ ಧ್ವಜಪಟವು
    ಮಂಡಲದಲಲೆಯುತಿರೆ,
ಅಳುವಳೆಮ್ಮಯ ಮಾತೆ
    ಕಿರು ಮಗಳ ಪತಿಗೃಹಕೆ-
ಕಳುಹಿಕೊಡಲೆನುತೆ

೪

ದಿಗ್ದೇಶ-ನಾಲ್ಮೂಲೆ
    -ಗಳ ಜಯಿಸೆ ತೆರಳಿದ್ದ,
ವೀರ ಪುತ್ರರು ಬಂದು
    ಮಾತೆಯಡಿಗಳಿಗೆರಗಿ,
ಸುಖಿಪ ದಿನ ಬಂದಿಹುದು ;
ಒಕ್ಕೊಡೆಯ ನೆರಳಲ್ಲಿ-
    ವಿರಮಿಸುತಲಿಹುದು.

೫

ಕನ್ನಡದ ಕೊಡಗೂಸು
    ನಮ್ಮವಳು ಅವಳು
ಸುದಿನವನು ಲೆಕ್ಕಿಸದೆ
    ಹೊರಟು ನಿಂದಿಹಳು
ಹತ್ತು ತಿಂಗಳು ಹೊತ್ತು
ಸಾಕಿ ಸಲಹಿದ ಮಗಳ
ಹೆತ್ತ ಹೆಂಗರುಳೊಂದು
ಆಗಲಲಿಚ್ಛಿಪುದೇನು ?
ನಿಟ್ಟುಸಿರು ಕಟ್ಟುಸಿರು
    ಬಿಡುತಮ್ಮನಿರುತಿಹಳು

೬

ವಿನಯದಾರೇಳೊಸಗೆ
    ದಿನದಿನವು ಬರುತಿತ್ತು
ಕೇರಳದ ದಿಬ್ಬಣವು,
ಕೊಡಗೂಸು ನಮ್ಮವಳು ;
ಅಮ್ಮನಾಶೀರ್ವದಿಪ–
    ಳಣ್ಣ ಕಾಂಬಂತಿಲ್ಲ
ನವವಧುವು ವರನೊಡನೆ
    ಹೊರಡಲಿಹಳು
ಭೂಷಣವನರೆ ತೊರೆದು
    ಉಕ್ಕೆವದೊಳಿಹಳು

೨

ಸಣ್ಣ ಕತೆ

○ ಹಲವು ವರ್ಷ ಖುಶಿಯಿಂದ ನಾನು ಲೇಖನಿ ಓಡಿಸಿದ ಸಾಹಿತ್ಯ ಪ್ರಕಾರ, ಸಣ್ಣ ಕತೆ. ಚಿಕ್ಕವನಿದ್ದಾಗ ನನಗೆ ಓದಲು ಸಿಗುತ್ತಿದ್ದ ಪ್ರತಿಯೊಂದು ಸಾಪ್ತಾಹಿಕದ ಪ್ರತಿಯೊಂದು ಸಂಚಿಕೆಯಲ್ಲೂ ವಾರದ ಕತೆ ಇರುತ್ತಿತ್ತು. ಮಾಸ ಪತ್ರಿಕೆಗಳಲ್ಲಿ ಒಂದಕ್ಕಿಂತ ಹೆಚ್ಚು. ದಸರಾ ಸಂಚಿಕೆಗಳಲ್ಲಿ (ಮುಂದೆ ದೀಪಾವಳಿ ವಿಶೇಷಾಂಕ ಗಳಲ್ಲಿ) ಕತೆಗಳ ಹಬ್ಬ. ಇಂಗ್ಲಿಷನ್ನು ಓದಿ ಅರ್ಥಮಾಡಿಕೊಳ್ಳುವುದು ಸಾಧ್ಯ ವಾದಾಗ ಮತ್ತಷ್ಟು ವಿಸ್ತಾರಗೊಂಡ ಕಥಾಲೋಕ. ಅಭಿವ್ಯಕ್ತಿಗೆ ಬರೆವಣಿಗೆಯನ್ನು ಆರಿಸಿಕೊಂಡು ಹೊರಟ ಶಿವರಾಯ ಏರಿದ್ದು ಕಥಾಶ್ವವನ್ನು.

ಹದಿಮೂರರ ಹರೆಯದಲ್ಲಿ 'ಮೋಹಜಾಲ' ಎಂಬ ಕತೆ ಬರೆದೆ. 'ರಾಷ್ಟ್ರ ಬಂಧು'ವಿನಲ್ಲಿ ಅಚ್ಚಾಯಿತು. ಕುದುರೆಗೆ ಸ್ಫೂರ್ತಿ ಬಂತು; ಲಂಗುಲಗಾಮಿಲ್ಲದೆ ಓಡಿತು. ಕತೆ ಬರೆಯುವುದು ಚಟವಾಯಿತು. ಪ್ರಗತಿಶೀಲತೆಯ ಪರಿಚಯ ನನಗಾದದ್ದು ಮುಂದೆ ೧೯೪೩ರಲ್ಲಿ. ಆ ವೇಳೆಗಾಗಲೇ ನಾನು ಸಾಕಷ್ಟು 'ನುರಿತ' ಕತೆಗಾರನಾಗಿದ್ದೆ. ಬದುಕಿಗೆ ಸ್ಪಂದಿಸಿ ಬರೆಯುತ್ತಿದ್ದುದರಿಂದ ಕತೆಗಳಲ್ಲಿ ಹೆಚ್ಚಿನವು ಅರ್ಥಪೂರ್ಣವಾಗಿದ್ದುವು. ಮುಂದೆ ಘೋಷಣೆಗಳಿಂದ ಬಂತು, ವಿಶೇಷ ಆಯಾಮ. ಒಳ್ಳೆಯ ಪರಿಣಾಮ, ಕೆಟ್ಟ ಪರಿಣಾಮ—ಎರಡೂ.

ಐವತ್ತು ವರ್ಷಗಳ ಅವಧಿಯಲ್ಲಿ (೧೯೩೭–೧೯೮೭) ನಾನು ಬರೆದ ನೂರಾರು ಕತೆಗಳಲ್ಲಿ ಪ್ರಾತಿನಿಧಿಕವೆನಿಸುವ ಐದು ಕತೆಗಳನ್ನು ಇಲ್ಲಿ ಕೊಟ್ಟಿದೆ. 'ರಕ್ತಸರೋವರ', 'ಕೊನೆಯ ಗಿರಾಕಿ', 'ತಿರುಕಣ್ಣನ ಮತದಾನ', 'ಒಂಟಿ ನಕ್ಷತ್ರ ನಕ್ಕಿತು', 'ಒಂದು ನಮೂನೆ ಹುಡುಗ ಮತ್ತು ಉತ್ಸವ ಭೋಜನ'. ಈ ಬಗೆಯ ಇನ್ನೂ ಹತ್ತಾರು ಗುಚ್ಛಗಳನ್ನು ಕಟ್ಟುವುದು ಸಾಧ್ಯ.

ಹಲವು ಅಂಕಿತಗಳಲ್ಲಿ ಬರೆದವನು : 'ಕಿಶೋರ', 'ಕತೆಗಾರ', ಕು. ಶಿ. ರಾ., ಶಿ. ರಾ. ಕುಳುಕುಂದ, ಕುಳುಕುಂದ ಶಿವರಾಯ. ೧೯೫೦ರ ಬಳಿಕ ನಿರಂಜನ.

'ನಿರಂಜನ: ಮೂವತ್ತು ಸಂಪುಟಗಳಲ್ಲಿ' ಸರಣಿಯ ೧–೨ನೇ ಸಂಪುಟಗಳಿಂದ ಈ ಐದು ಕತೆಗಳನ್ನು ಆಯ್ದುಕೊಳ್ಳಲಾಗಿದೆ.

ರಕ್ತ ಸರೋವರ

ಕಣ್ಣೊರೆಸಿಕೊಂಡಳು ಜೈನಬಿ. ನುಂಗಲಾಗದೊಂದು ಉಗುಳು ಗಂಟಲಲ್ಲಿ ತಡೆದು ನಿಂತಿತ್ತು. ಮಾತು ಹೊರಡುತ್ತಿರಲಿಲ್ಲ. ಮುದಕ ಮಾವ ಮುಸ್ಸಂಜೆಯ ನಮಾಜು ಮಾಡುತ್ತಿದ್ದ. ಪುಟ್ಟ ಮಗು ಓಡಿಯಾಡಿ ಬಸವಳಿದು ನಿದ್ದೆ ಹೋಗಿತ್ತು. ಶೇಕ ಮೂಕನಾಗಿ ಕುಳಿತಿದ್ದ. ತುಟಿಯಲುಗುತ್ತಿರಲಿಲ್ಲ; ಆದರೆ ಕಣ್ಣು ಮಾತಾಡುತ್ತಿತ್ತು.

ಮನುಸ್ಸು-ಭಾವನೆಗಳನ್ನು ಮುಗ್ಧಗೊಳಿಸುವ ನೀರವತೆ ಸುತ್ತಲೂ ಹರಡಿತ್ತು.

ನೆರೆಮನೆಯೊಂದರಲ್ಲಿ ನಡೆಯುತ್ತಿದ್ದ ಕೊರಾನಿನ ಪಠನ ಅಲೆಯಲೆಯಾಗಿ ಹತ್ತಿರ ಬಂದು ಆ ಮೂರು ಜೀವಗಳ ಸುತ್ತಲೂ ಅವ್ಯಕ್ತ ಜಾಲವನ್ನು ಹೆಣೆಯುತ್ತಿತ್ತು.

ಶೇಕ ಆ ಸ್ವಪ್ನ ಸಮಾನ ಮೌನವನ್ನು ಭೇದಿಸಿ ಹೇಳಿದ:

"ಬೆಳಕು ಹರಿಯುವ ಹೊತ್ತಿಗೆ ಮರಳಿ ಬರುತ್ತೇವೆ ಜೈನಬಿ."

ಜೈನಬಿ ಆ ದಲ್ ತಟಾಕವನ್ನು ನೋಡಿದ್ದಳು. ಆ ಕೆಂದಾವರೆಗಳಿಗಾಗಿ ಆಸೆ ಪಟ್ಟಿದ್ದಳು. ಮದುವೆಯಾದ ಮೊದಲ ದಿನಗಳಲ್ಲೊಮ್ಮೆ "ಶೇಕ! ಒಂದು ಬಾರಿ ಶಿಕಾರಾ(ದೋಣಿ)ದಲ್ಲಿ ಕುಳಿತು ನಾವು ವಿಹಾರಕ್ಕೆ ಹೋಗಬಾರದೇಕೆ?" ಎಂದಿದ್ದಳು. "ಹುಚ್ಚಿ ಬೇರೆ ಊರಿನಿಂದ ಬರುವ ಶ್ರೀಮಂತರು ಮಾತ್ರ ಅಲ್ಲಿ ವಿಹರಿಸುವುದು. ಅದು ರಾಜರ ಸರೋವರ. ನಮ್ಮಂಥವರು ಅಲ್ಲಿಗೆ ಹೋಗ ಬಾರದು" ಎಂದು ಶೇಕ ಉತ್ತರ ಕೊಟ್ಟಿದ್ದ.

ಅದು ಮೂರು ವರ್ಷಗಳ ಹಿಂದಿನ ಮಾತು. ತಮ್ಮ ಬಡ ಗುಡಿಸಲಿನಲ್ಲಿ ತಾವೇ ರಾಜ ರಾಣಿಯರಾಗಿ ಶೇಕ ಮತ್ತು ಜೈನಬಿ ಬಾಳಿದರು.

ಸುಂದರ ನಾಡಾದ ಕಾಶ್ಮೀರದಲ್ಲಿ ಅರಳಿಯೂ ಬಾಡಿ ಹೋಗುವ, ಅರಳದೆ ಮುದುಡಿ ಹೋಗುವ, ಮಾನವ ಸುಮಗಳು ಲೆಕ್ಕವಿಲ್ಲದಷ್ಟು. ಅವುಗಳಲ್ಲಿ ಜೈನಬಿ ಒಂದು ಹೂ. ಶೇಕ ಒಂದು ಹೂ.

ಅವು ವನಸುಮಗಳೂ ಅಲ್ಲ; ಉದ್ಯಾನದ ಹೂಗಳೂ ಅಲ್ಲ; ಆ ರಾಜ ರಾಣಿ ಬಾಳಿನಲ್ಲಿ ಸುಖ ಕಾಣಲಿಲ್ಲ. ವಿಕಾಸವಿಲ್ಲದ, ಪರಿಮಳವಿಲ್ಲದ ಪುಷ್ಪಗಳಾದರು.

ಬಡತನ ಅವರ ಸಂತೋಷವನ್ನು ಕೆಡಿಸಿತು. ಇದ್ದ ಹೊಲವನ್ನು ಜಹಗೀರುದಾರ ಕಸಿದುಕೊಂಡ.

ಬಿಡುಗಚ್ಚಿ ನೌಜವಾನ ಶೇಕ ಕೂಗ ಿದ: "ಎಂಥ ಅಬ್ಬರ! ಎಂಥ ದರ್ಪ! ನೋಡೋಣ—ಇದಕ್ಕೂ ಒಂದು ಕೊನೆ ಇದೆ. ಒಂದಲ್ಲ ಒಂದು ದಿನ ಇದನ್ನು ನಿಲ್ಲಿಸೇನು.. ನನ್ನ ಈ ಬಿಗಿ ಮುಷ್ಟಿಯಲ್ಲಿ ಶಕ್ತಿ ಇಲ್ಲ? ನನ್ನ ಈ ತೋಳುಗಳಲ್ಲಿ ಸಾಮಾರ್ಥ್ಯವಿಲ್ಲ? ಹುಂ. ಹುಂ!"

ಅವನಪ್ಪ ಮುದುಕ "ಖುದಾ ಪರವರ್ದಿಗಾರ! ನನ್ನ ಮಗನ ಬಾಯಿಂದ ಏನು ಮಾತಾಡಿಸುತ್ತಿದ್ದಿ? ನನ್ನ ಶೇರ್‌ನಿಂದ ಏನು ಮಾಡಿಸುತ್ತಿದ್ದಿ?" ಎಂದು ಚಿಂತಿಸಿದ.

ಕೊನೆಗೊಮ್ಮೆ ಆ ದಿನ ಬಂದಿತ್ತು! ಆ ರಾತ್ರೆ, ಅಮಾವಾಸ್ಯೆಯ ನಡು ಇರುಳಿನಲ್ಲಿ, ದಲ್ ಸರೋವರವನ್ನು ದಾಟಿ ಆ ಪ್ರದೇಶದ ಯುವಜನ ಅತ್ತ ಕಡೆ ಇದ್ದ ರಾಜರ ಬೀಡಿನ ಮೇಲೆ ಏರಿಹೋಗವರು! ಕಾಶ್ಮೀರದಲ್ಲಿ ಕ್ರಾಂತಿಯಾಗಿತ್ತಂತೆ. ಶ್ರೀನಗರದ ಬೀದಿ ರಕ್ತ ಕಾಲುವೆಯಾಯಿತಂತೆ. ಪೋಲೀಸರೂ ಸಂಪು ಹೂಡಿದರಂತೆ. ಮಿಲಿಟರಿಯವರು ಹೆಂಗಸರು ಗಂಡಸರು ಮಕ್ಕಳ ತಲೆಗಳನ್ನು ಚೆಂಡಾಡಿದರಂತೆ. ಹಿಂದಿನ ವರ್ಷ ಅವರ ಊರಿಗೆ ಬಂದಿದ್ದ 'ಕಾಶ್ಮೀರದ ಸಿಂಹ' ಅಬ್ದುಲ್ಲಾನನ್ನು ಮಹಾರಾಜರು ಸೆರೆ ಹಿಡಿದರಂತೆ. ಊರು-ಊರುಗಳಲ್ಲಿ ಬಂಡಾಯವೆದ್ದು ರೈತರು ಸ್ವತಃ ತಮ್ಮ ಜಹಗೀರುದಾರರನ್ನು ಕೈದು ಮಾಡಿದರಂತೆ—ಹೀಗೆ ಎಷ್ಟೋ ಸುದ್ದಿ ಕಿವಿಯಿಂದ ಕಿವಿಗೆ ಹಾಯ್ದು ಆ ಊರಿಗೆ ಬಂತು. ತಮ್ಮ ಹೊಲಕ್ಕೆ ತಾವೇ ಒಡೆಯರಾಗಬಹುದೆಂದು ರೈತರು ಹುಚ್ಚರಾದರು. ಮುದುಕ ಮುದಕಿಯರು ಮುಂದೇನಾಗುತ್ತದೆ?" ಎಂದೂ ತವಕಗೊಂಡರು. ಯುವಕ ರೈತರು ಒಬ್ಬರ ಮುಖವನ್ನೊಬ್ಬರು ನೋಡಿದರು. ಒಬ್ಬರು ಒಂದು ಮಾತನ್ನೂ ಆಡಲಿಲ್ಲ. ಪ್ರತಿಯೊಬ್ಬರ ಕರ್ತವ್ಯ ಎಲ್ಲರಿಗೂ ತಿಳಿದಿತ್ತು.

....ಯಾವಾಗಲೂ ಒಂದು ಸಣ್ಣ ನಿದ್ದೆಯಾಗುವ ಹೊತ್ತು ಕಳೆಯುವುದರೊಳಗೆ ಊರ ಗಂಡಾಳುಗಳು ತಟಾಕದ ದಂಡೆಯಲ್ಲಿ ಬಂದು ಕೂಡಬೇಕಾಗಿತ್ತು.

ಮಲಗಿದ್ದ ಪುಟಾಣಿಯ ಹಣೆಯನ್ನು ಚುಂಬಿಸಿ, ಜೈನಬಿಯನ್ನು ಎದೆಗವಚಿಕೊಂಡು, ಆ ಮುದ್ದು ಮುಖವನ್ನು ಎರಡೂ ಕೈಗಳಿಂದ ಸವರಿ, "ಬರುತ್ತೇನೆ ಜಾನ್, ನಾಳೆ ಬೆಳಗಾಗುವುದರೊಳಗಾಗಿ ಬರುತ್ತೇನೆ" ಎಂದು ಹೇಳಿ ಶೇಕ ಹೊರಟ. ತಂದೆ, ಕಿಶನಚಂದನ ಮನೆಯವರೆಗೆ ಬಂದು ಮಗನನ್ನು ಬೀಳ್ಕೊಟ್ಟ.

ಕಿಶನಚಂದ ಹಿಂದೂ ಹುಡುಗ, ಶೇಕನ ಒಡನಾಡಿ. ಮದುವೆಯಾಗಿ ಆರು ತಿಂಗಳೂ ಆಗಿರಲಿಲ್ಲ. ಹುಡುಗಿ ನೀರಾ "ಹೋಗುತ್ತೀಯಾ? ಹೋಗಲೇ ಬೇಕೆ?" ಎಂದು ಗೋಳಾಡಿದಳು.

ಎಲ್ಲಾ ಮಾತು ವ್ಯರ್ಥವಾದ ಮೇಲೆ ಇದ್ದೊಬ್ಬಳೇ ತಾಯಿ ಹೇಳಿದಳು "ನಿನ್ನ ಹಟ ನಿನಗೆ. ಒಳ್ಳೆದು. ಹೋಗು. ಹೋಗಿ ಬಾ. ನನಗಾಗಿ ಅಲ್ಲವಾದರೂ ಈ ಹೆಣ್ಣುಕೂಸಿನ ಮೋರೆ ನೋಡಿ ಹಿಂದೆ ಬಾ—" ಎಂದು.

ಜತೆಯಲ್ಲೇ, "ಶೇಕ, ಕಿಶೂ ನಿನಗಿಂತಲೂ ಸಣ್ಣವ. ನಿನ್ನ ತಮ್ಮ ಅಂತ ಜೋಪಾನವಾಗಿ ನೋಡಿಕೋ. ಯಾವ ಹೊತ್ತಿಗೂ ಅವನ ಜತೆ ಬಿಡಬೇಡ" ಎಂದು ತುಂಬಿ ಬರುತ್ತಿದ್ದ ಕಂಬನಿಯನ್ನು ಒತ್ತಿ ಹಿಡಿದು ಆ ತಾಯಿ ದೈನ್ಯದಿಂದ ಮಾತಾಡಿದಳು.

೦ ೦ ೦ ೦ ೦

ಆ ಊರಿನ ಎಪ್ಪತ್ತಾರು ಗಂಡುಗಲಿಗಳು ಅವರು. ಆ ತಾಯ್ನೆಲದ ಮಮತೆಯ ಮಕ್ಕಳು. ಈ ರಾತ್ರಿ ಅವರೊಂದು ಮಹಾ ಸಾಹಸದ ಕೆಲಸವನ್ನು ಮಾಡುವರು. ಅವರ ಹಿರಿಯರೆಂದೂ ಅಂಥಾದ್ದನ್ನು ಮಾಡಿರಲಿಲ್ಲ. "ನಮ್ಮ ನಾಡಿನ ಇತಿಹಾಸದಲ್ಲೇ ಇಂಥ ಪರಿಸ್ಥಿತಿ ಬಂದದ್ದಿಲ್ಲ" ಎಂದು ಅವರ ಹಳ್ಳಿಯ ಸಾಲೆಯ ಮಾಸ್ತರನೂ ಆ ದಿನ ಹೇಳಿದ್ದ.

ಶಿಕಾರಾಗಳು ಸಿದ್ಧವಾಗಿದ್ದುವು. ಆರು ದೋಣಿಗಳಲ್ಲಿ ಆ ಎಪ್ಪತ್ತಾರು ಮಂದಿ ಕುಳಿತು ಹುಟ್ಟು ಹಾಕಿದರು. ನಿದ್ರಿಸಿದ್ದ ಸರೋವರವನ್ನು ಸೀಳಿ ಅವರ ನೌಕಪಡೆ ಮುಂದೆ ಸಾಗಿತು.

ಅಲ್ಲೇ ಒಂದೂವರೆ ಮೈಲಿನಾಚೆ ವಾಯುವ್ಯದ ದಂಡೆಯಲ್ಲಿ ಕಾಶ್ಮೀರದ ಮಹಾರಾಜರು ರಾಣೀವಾಸದೊಡನೆ ಸುಖನಿದ್ರೆ ಮಾಡುತ್ತಿದ್ದಾರೆ. ಪ್ರಧಾನಿ ಕಾಕನ ಕೈಯಲ್ಲಿ ರಾಜ್ಯಸೂತ್ರವನ್ನು ಕೊಟ್ಟು, ಬಂದೂಕು ಮೆಶಿನ್‌ಗನ್ನುಗಳ ಗುಂಡಿನ ಸಪ್ಪಳದಿಂದ ದೂರವಿರಬೇಕೆಂದು ಆ ವಿಹಾರ ಸರೋವರದ ದಂಡೆಗೆ ಆವರು ಬಂದಿದ್ದಾರೆ. ಅಲ್ಲಿ ಕೆಂಪು ತಾವರೆಗಳ ಮೇಲಿಂದ ಕಂಪಿನಲರು ಬೀಸುವುದು. ಹೊರಗಿನೆಲ್ಲ ಗೊಂದಲಗಳನ್ನು ಮರೆತು ಆ ಅಮೃತ ಶಾಂತಿಯಲ್ಲಿ, ಭೂಮಿಯ ಮೇಲಿನ ಸ್ವರ್ಗದಲ್ಲಿ, ಸುಖವಾಗಿರಬಹುದು. ಆದರೆ ಪ್ರಧಾನಿ ಕಾಕ ಹೇಳಿದ್ದ "ಈ ಪ್ರಜೆಗಳನ್ನು ನಂಬುವ ಹಾಗಿಲ್ಲ ಮಹಾರಾಜ. ಹಳ್ಳಿಯವರಾದರೇನು? ಯಾವ ಹೊತ್ತಿನಲ್ಲಿ ಏನು ಮಾಡುವರೋ ಹೇಳುವುದು ಹೇಗೆ?" "ಹೂಂ" ಎಂದರು ರಾಜರು. ಸುಸಜ್ಜಿತ ಸೇನೆಯೂ ಅವರ ರಕ್ಷಣೆಗೆ ಹೊರಟಿತು.

ಕೆಲೆವೆಡೆ ಸ್ವಚ್ಛ ನೀರಿನ ಮೇಲೆ, ಬೇರೆ ಕೆಲವಡೆ ತಾವರೆಗಳ ದಂಟು ದಳಗಳನ್ನು ಸರಿಸಿ, ದೋಣಿಗಳು ಸಾಗಿದುವು. ಆ ಎಪ್ಪತ್ತಾರು ಮಂದಿ ಉಸಿರು ಬಿಗಿ ಹಿಡಿದು ಕುಳಿತಿದ್ದರು. ಹುಟ್ಟಿನದೊಂದು ಏಕನಾದ, ನೀರಿನ ಸುಳು ಸುಳು ಸಪ್ಪಳ—ಇವೇ ಸಂಗೀತವಾಗಿತ್ತು.

ಅವರೇನು ಮಾಡುವರು? ಆ ದಂಡೆಯನ್ನು ಸೇರಿ ಅವರೇನು ಮಾಡುವರು? ಒಬ್ಬನೆಂದಿದ್ದ: "ಆ ರಾಜನಿಗೆ ನಮ್ಮ ಕಷ್ಟಗಳನ್ನು ವಿವರಿಸಿ ಹೇಳೋಣ. ಅವನ

ಮನಸ್ಸನ್ನು ಬದಲಿಸೋಣ". ಆ ಮಾತಿಗೆ ಹಲವರು ಥೂ-ಥೂ-ಎಂದಿದ್ದರು. ಕಣ್ಣಲ್ಲಿ ನೇತ್ರರಿಲ್ಲದ, ಹೃದಯ ಕಲ್ಲಾಗಿದ್ದ, ಮಾನವತೆಯ ಅರಿವಿಲ್ಲದ ಮಹಾರಾಜನ ಮನಸ್ಸನ್ನು ಬದಲಿಸುವುದೆ?

ಹಿಂದಿನ ದಿನ ನಗರದ ವಿದ್ಯಾಲಯದಿಂದ ಓದು ನಿಲ್ಲಿಸಿ ಹಿಂದೆ ತಮ್ಮ ಹಳ್ಳಿಗೆ ಬಂದಿದ್ದ ಇಬ್ಬರು ತರುಣರಲ್ಲೊಬ್ಬ, "ಹೃದಯ ಪರಿವರ್ತನೆಯಂತೆ! ಅವನಿಗೆ ಹೃದಯವಿದ್ದರಲ್ಲವೆ ಪರಿವರ್ತನೆ?" ಎಂದಿದ್ದ. ಇನ್ನೊಬ್ಬ. "ಮಹಾರಾಜರನ್ನು ಸೆರೆ ಹಿಡಿಯೋಣ. 'ಕಾಶ್ಮೀರ ಸಿಂಹ'ನ ಬಿಡುಗಡೆಯಾಗುವವರೆಗೆ ಬಂದೀಖಾನೆಯಲ್ಲಿಡೋಣ. ಆ ಮೇಲೆ ಗಂಟುಮೂಟೆ ಸಹಿತ ಕಾಶ್ಮೀರದ ಹೊರಕ್ಕಟ್ಟೋಣ" ಎಂದು ತೀರ್ಪುಕೊಟ್ಟಿದ್ದ.

ದೂರ ದೂರ—ಒಂದು ಯುಗವಾಗಿ ತೋರುತ್ತಿದ್ದುವು ಆ ಕೆಲವು ಸಂದಿಗ್ಧ ನಿಮಿಷಗಳು. ನೂರುನೂರೇ ಗಜ ಮುಂದೆ ಮುಂದಕ್ಕೆ. ಅರಸು ಭವನದ ವಿದ್ಯುದ್ದೀಪಗಳಲ್ಲಿ ಆಗಲಿನ್ನೂ ಪ್ರಜ್ವಲಿಸುತ್ತಿದ್ದ ಕೆಲವು ದೂರದ ಹತ್ತಾರು ನಕ್ಷತ್ರಗಳಂತೆ ಕಾಣುತ್ತಿದ್ದುವು.

ಇನ್ನೆರಡು ಫರ್ಲಾಂಗು ಮುಂದೆ ಹೋದರಾಯಿತು, ಅವರ ಗುರಿ ಸಮೀಪಿಸುವುದು, ದಂಡೆ ಸಿಗುವುದು. ಆನಂತರ ಅವರ ಕಾರ್ಯ ಕೈಗೂಡುವುದು.

ಅಲ್ಲಿ ಆಗಲೆ ಆಚೆ ದಂಡೆಯ ವಿದ್ಯುದ್ದೀಪಗಳು ಬೆಳಗಿ ಅನಂತ ತಾರೆಗಳಾದುವು. ಕಾವಲುಗಾರರಿಗೆ ಸುಳಿವು ಹತ್ತಿತೇನೋ. ಶಿಕಾರಿಯ ವಿದ್ಯುತ್ ಕಂದೀಲು ಸರೋವರದುದ್ದಕ್ಕೂ ಬೆಳಕು ಹಾಯಿಸಿತು. ಢಂ ಎಂದೊಂದು ಗುಂಡು ದೋಣಿಗಳೆಡೆಯಿಂದ ಸುಂಯ್‌ಗುಟ್ಟಿ ಹಾದುಹೋಯಿತು. ನಗರದ ಆ ವಿದ್ಯಾರ್ಥಿ ಯುವಕ ಆರಂಭಿಸಿದ:

"ಇಂಕ್ವಿಲಾಬ್ !—"

ಎಪ್ಪತ್ತಾರು ಕಂಠಗಳೂ ಒಮ್ಮೆಲೆ ಘೋಷಿಸಿದವು.

"ಜಿಂದಾಬಾದ್ !"

"ಕಾಶ್ಮೀರ್ ಬಾಗಿ—"

"ಜಿಂದಾ ಹೈ !"

"ಕಾಶ್ಮೀರ್ ಕೋ—"

"ಛೋಡ್‌ದೋ"

"ಇಂಕ್ವಿಲಾಬ್ !—"

"ಜಿಂದಾಬಾದ್"

ಢಂ—ಢಂ—ಢಂ— ಎಂದು ಹತ್ತಾರು ಬಂದೂಕುಗಳಿಂದ ಗುಂಡು ಹಾರಿಬಂತು. ಮುಂದಿದ್ದ ದೋಣಿಯಿಂದೊಬ್ಬ ಕಾಶ್ಮೀರದ ರಾಷ್ಟ್ರೀಯ ಗೀತೆಯನ್ನು ಹಾಡತೊಡಗಿದ. ಢಂ-ಢಂ—ತಾಳ ಮೇಳದೊಡನೆ ಆ ಗೀತ ಮಹಾ ಸಂಗೀತ

ವಾಯಿತು. ಶೇಕ ಪಲ್ಲವಿ ಹಾಡಿದ; ಕಿಶನ್ ಪಲ್ಲವಿ ಹಾಡಿದ. ಎಲ್ಲರೂ ಹಾಡಿದರು. "ಸ್ವಾತಂತ್ರ್ಯ ಸಮತೆಯ ನೂತನ ಕಾಶ್ಮೀರವನ್ನು ಕಟ್ಟುವ ವೀರರು ನಾವ್! ವೀರರು ನಾವ್ ! ಸೋಲನರಿಯದ ಸಿಂಹಹೃದಯದ ವೀರರು ನಾವ್ ವೀರರು ನಾವ್!"

ಮತ್ತೆ ಅದೇ ಎಪ್ಪತ್ತಾರು ಕಂಠಗಳಿಂದ ರಣ ಗರ್ಜನೆ. "ಇಂಕ್ವಿಲಾಬ್—ಜಿಂದಾಬಾದ್ !"

ಎಪ್ಪತ್ತಾರೊ, ಎಪ್ಪತ್ತ ನಾಲ್ಕೊ, ಎಪ್ಪತ್ತೆರಡೊ ! ಬಲಿದಾನಕ್ಕೆ ಆರಂಭ ವಾಗಿತ್ತು. ಆಚೆ ದಡದ ಸಿಪಾಯಿಗಳೆಲ್ಲ ಎಚ್ಚತ್ತಿದ್ದರು. ರಾಜರ ಸುಖ ಸ್ವಪ್ನ ಕಡಿದು ಹೋಯಿತು. ಬಾಹು ಬಲದ ವಜ್ರ ಹೃದಯದ ಸ್ವಾತಂತ್ರ್ಯ ಯೋಧರೆಡೆಗೆ ಮರ್ದನದ ಶೋಷಣೆಯ ಕ್ರೂರ ಗುಂಡುಗಳು ಧಾವಿಸಿ ಬಂದುವು.

ದೋಣಿಗಳು ಮುಂದೆ ಸಾಗುತ್ತಲೇ ಹೋದುವು. ಜಯಘೋಷ ನಡೆಯುತ್ತಲೇ ಇತ್ತು. ಆ ಯುವಕ ಹಾಡುತ್ತಲೇ ಇದ್ದ. ಶೇಕ-ಕಿಶನರು ಪಲ್ಲವಿಗೆ ದನಿ ಕೂಡಿಸುತ್ತಲೇ ಇದ್ದರು.

ಒಂದು ದೋಣಿಗೆ ಗುಂಡು ತಗಲಿ ತೂತು ಬಿದ್ದು ಜನ ನೀರು ಪಾಲಾದರು. ಸರೋವರಕ್ಕೆ ಬಿದ್ದ ಜನ ಈಸಾಡಿದರು. ಇನ್ನೊಂದು ದೋಣಿ ದಡದ ತೀರಕ್ಕೆ ಬಂತು. ಆ ಇರುಳಲ್ಲಿ ಬಯನೆಟುಗಳು ಬೇಟೆ ಸಿಗದೆ ಒಂದಕ್ಕೊಂದು ತಗಲಿದುವು.

ದೋಣಿಗಳಲ್ಲಿದ್ದ ಜನ ನೋಡುತ್ತಲೇ ಇದ್ದರು. ವಿದ್ಯುದ್ದೀಪದ ಬೆಳಕಿನಲ್ಲಿ ಕಾಣಿಸುತ್ತಲೇ ಇತ್ತು. ಆ ಯುವಕನೂ ಇನ್ನೊಬ್ಬನೂ ದಡವನ್ನೇರಿದರು. ಯುವಕನೆದೆಗೆ ಮಿಲಿಟರಿಯವನೊಬ್ಬ ಬಯನೆಟನಿಂದ ತಿವಿದ. ಆ ಸಲದ "ಇಂಕ್ವಿಲಾಬ್ !" ಅವನ ಕೊನೆಯ ಗರ್ಜನೆಯಾಯಿತು. ಬಯನೆಟು ಸಹಿತ, ಅದನ್ನು ಹಿಡಿದುಕೊಂಡಿದ್ದ ಮಿಲಿಟರಿಯವನನ್ನೂ ಬರಸೆಳೆದು ಆ ಯುವಕ ತಟಾಕದ ಆಳಕ್ಕೆ ಇಳಿದು ಹೋದ.

ದಡದ ಸಮೀಪವಿದ್ದ ಮತ್ತೊಂದು ದೋಣಿ ಒಡೆಯಿತು. ಕ್ಷಣಕಾಲ ರಣ ಗರ್ಜನೆ ಇರಲಿಲ್ಲ. ಶೇಕ-ಕಿಶನ್ ಇಬ್ಬರೂ ಹುಟ್ಟು ಬಿಟ್ಟು ಉದ್ವಿಗ್ನರಾಗಿ ಎದ್ದು ನಿಂತರು. ಶೇಕ ಕೂಗಿದ, "ಇಂಕ್ವಿಲಾಬ್ !" ಈಸುತ್ತಿದ್ದ ಜನ, ಮುಳುಗುತ್ತಿದ್ದ ಜನ, ಜೀವಂತವಿದ್ದ ಜನ "ಜಿಂದಾಬಾದ್" ಎಂದು ಮರುನುಡಿದರು.

ಮತ್ತೊಮ್ಮೆ ಶೇಕ ಕೂಗಿದ "ಇಂಕ್ವಿಲಾಬ್!" ಮರುನುಡಿಯ ಘೋಷಣೆಯ ನಡುವೆ ಗುಂಡೊಂದು ಬಂದು ಶೇಕನೆದೆಯಲ್ಲಿ ನಾಟಿತು. "ಹಾ !" ಎಂದ ಕಿಶನ್. ದೋಣಿಯಲ್ಲಿ ನಿಂತಿದ್ದ ಶೇಕ ಉರುಳಿ ಹೋದ ಕೆಳಕ್ಕೆ, ನೀರಿನ ಆಳಕ್ಕೆ ! "ಹಾ! ಅಯ್ಯೋ !" ಎಂದ ಕಿಶನ್. ಆಳಕ್ಕೆ ಆ ಸಿಂಹ ಜೀವ ಇಳಿದು ಹೋಗುತ್ತಿತ್ತು.

....ಹೋರಾಟ ವಿಫಲವಾದಾಗ ಉಳಿದ ಮೂರು ದೋಣಿಗಳು ಹಿಮ್ಮೆಟ್ಟಿದುವು. ಕೆಲವರು ಈಸಾಡಿ ಈಚೆ ದಡ ಸೇರಿದರು. ದೂರದಿಂದ ಬರುತ್ತಿದ್ದ ಗುಂಡುಗಳಿಗೆ ಅಳುಕಿ ಬೀಳುತ್ತ ತಪ್ಪಿಸಿಕೊಳ್ಳುತ್ತ ಇವರು ಇತ್ತ ಬಂದರು.

ದಡ ಸೇರದವರು ಅಲ್ಲೆ ಬಿದ್ದುಕೊಂಡರು. ಆ ವಿಸ್ತಾರ ಸರೋವರದಲ್ಲಿ ಯಾವ ದಂಡೆಗೆ ಹೋದರೋ ಏನೋ ಎಂದು ರಾಜರ ಮಿಲಿಟರಿ ಅವರನ್ನು ಬೆನ್ನಟ್ಟಲಿಲ್ಲ.

ಯಾವುದೋ ಜೀವ ದನಿ ತೆಗೆದು ಅಳುತ್ತಿತ್ತು.

o o o o o

ಮಾತು ಬಾರದ ಮೂಕ ಕಿಶನ್ ಮನೆಗೆ ಬಂದ.

"ಬಂದೆಯಾ-ಬಂದೆಯಾ ?" ಎಂದಳು ಹೆಂಡತಿ ನೀರಾ.

"ಬಾ–ಬಾ ಮಗನೆ !" ಎಂದಳು ತಾಯಿ.

ಕಿಶನ್ ಮಾತಾಡಲೊಲ್ಲ.

"ಮಗೂ ! ಮಗೂ ! ಯಾಕೆ ಹೀಗೆ ? ಶೇಕ ಎಲ್ಲಿ ?"

ಶೇಕನ ತಂದೆ ನಡೆಗೋಲನ್ನೂರುತ್ತಾ ಬಂದು ಕೇಳಿದ:

"ಕಿಶನ್ ! ಎಲ್ಲಿ ನನ್ನ ಶೇಕ್ ? ಎಲ್ಲಿ ನನ್ನ ಶೇರ್ ?"

ಜೈನಬಿ ಹುಚ್ಚಿಯಂತೆ ಧಾವಿಸಿ ಬಂದು ಕಿಶನನ ಹೆಗಲನ್ನಲುಗಿಸಿ ಚೀರಾಡಿದಳು :

"ಅಣ್ಣ ಅಣ್ಣ ! ಎಲ್ಲಿ ? ಶೇಕ ಎಲ್ಲಿ?"

ಶೇಕ, ವಿಹಾರ ಸರೋವರದ ಜಲಗರ್ಭದಲ್ಲಿ ಸಮಾಧಿಸ್ಥನಾಗಿದ್ದ. ಶಾಂತಿಯ ಪರಮ ಶಾಂತಿಯ ತಾಣ ಅದು. ಅಲ್ಲಿ ಹೂ ರಾಶಿಯ ಕೆಳಗೆ, ಕೆಂದಾವರೆಯ ದಂಟುಗಳಡಿಯಲ್ಲಿ ಆ ವೀರ ವಿರಮಿಸುತ್ತಿದ್ದ.

ಶೇಕನ ಮನೆಯ ಸುತ್ತು ಮುತ್ತಲಿನವರೆಲ್ಲ ಬಂದು ಸರೋವರದ ದಂಡೆಯಲ್ಲಿ ನಿಂತು ನೋಡಿದರು. ಅಲ್ಲೇ ಒಂದು ಮೈಲಿಯಾಚೆ ಇಪ್ಪತ್ತಾರು ಜೀವಗಳು ಪ್ರಾಣ ಬಿಟ್ಟದ್ದುವು. ಅಲ್ಲೇ–ಓ ಅಲ್ಲೇ ಶೇಕ ಕಣ್ಮರೆಯಾಗಿದ್ದ.

ಬೆಳಕು ಚೆನ್ನಾಗಿ ಹರಡಿತ್ತು. ಬೇಕೋ ಬೇಡವೋ ಎಂದು ಸೂರ್ಯ ಮೇಲೆ ಬರುತ್ತಿದ್ದ. ಹಿಮರಾಶಿ "ಒಲ್ಲೆ ! ಕರಗಲೊಲ್ಲೆ !" ಎನ್ನುತ್ತಿತ್ತು. ತಾವರೆಗಳು "ಬೇಡ, ನಾವು ಅರಳುವುದಿಲ್ಲ !" ಎನ್ನುತ್ತಿದ್ದುವು. ಗಾಳಿ ಮೆಲ್ಲಮೆಲ್ಲನೆ ತಟಾಕದ ಮೇಲಿಂದ ಬೀಸುತ್ತಿತ್ತು. ವಿಹಾರ ಸರೋವರ ರಕ್ತ ಸರೋವರವಾಗಿ ರುದ್ರಭೀಕರವಾಗಿತ್ತು.

೧೯೪೭

ಕೊನೆಯ ಗಿರಾಕಿ

ಆ ಸರ್ಕಲಿನಾಚೆ ಯಾರೂ ಹೋಗಲೊಲ್ಲರು. ಕಟ್ಟಡಗಳ ಅಡೆತಡೆಯಿಲ್ಲದ ವಿಸ್ತಾರ ಭೂಮಿಯ ಮೇಲಿಂದ ಬೀಸುತ್ತಿದ್ದ ತಂಗಾಳಿ ದುರ್ಗಂಧವನ್ನು ತರುತ್ತಿತ್ತು. ಜನ ಗುಜುಗುಜು ಮಾತಾಡುತ್ತಿದ್ದರು. ಅದೆಲ್ಲ ಅಸ್ಪಷ್ಟ ಕಲರವ.

ಸೂರ್ಯ ಮೇಲಕ್ಕೆ ಬಂದಂತೆ ಕಾವೇರತೊಡಗಿತು. ಸರ್ಕಲನ್ನು ಹಾದು ಹೋಗಲೇಬೇಕಾದವರು, ಭೀತಿಯಿಂದೊಮ್ಮೆ ಎಡಕ್ಕೆ ಕಣ್ಣು ಹೊರಳಿಸಿ, ಮತ್ತೆ ತಲೆಕೆಳಗೆ ಮಾಡಿ, ಸರಸರನೆ ನಡೆದು ಹೋಗುತ್ತಿದ್ದರು.

ಎಲ್ಲರೂ ಚಲಿಸುತ್ತಲೇ ಇದ್ದರು........ನಿಲ್ಲುವವರು ಯಾರೂ ಇರಲಿಲ್ಲ........

ನಿಧಾನವಾಗಿ ಪುರಸಭೆಗೆ ವರದಿ ಹೋಯಿತು.

o o o o o

ಅದೊಂದು ದಿನ ಬೆಳಗ್ಗೆ ಕಾಣಿ ಎದ್ದು ನೋಡುತ್ತಾಳೆ—ರಾತ್ರಿ ಜತೆಯಲ್ಲಿ ಮಲಗಿದ್ದ ಸಂಗಡಿಗನಿಲ್ಲ. ಹದಿನಾರರ ಆ ಹುಡುಗಿ ಹತ್ತು ದಿನಗಳ ಹಿಂದೆ ಅವನ ಬೆಂಬತ್ತಿ ಕರ್ನಾಟಕದ ರಾಜಧಾನಿಗೆ ಓಡಿಬಂದಿದ್ದಳು—ತಮಿಳು ನಾಡಿನೊಂದು ಊರಿಂದ. ತಿರುಪೆ ಎತ್ತುವ ಗರೀಬ ಆತ ಒಂದು ಕೈ ಮೊಂಡು. ಆದರೆ ಒಂದು ರಾತ್ರೆ, ಇನ್ನೊಂದು ತೋಳಿನಿಂದ ಆಕೆಯನ್ನು ಆತ ಬಳಸಿ ಬರಸೆಳೆದಿದ್ದ. ಕಂಪಿಸುತ್ತಿದ್ದ ಹೃದಯದಿಂದ ಆಕೆ ಆತನನ್ನು ನೋಡಿದಳು; ಆ ಬಲಿಷ್ಠ ತೋಳನ್ನು ನೋಡಿದಳು. ಎರಡು ಕೈಗಳ ಶಕ್ತಿಯೂ ಇತ್ತದಕ್ಕೆ.

ಅಲ್ಲಿಂದ ಆ ರಾತ್ರೆಯೇ ಅವರು ಓಡಿಹೋದರು.

ಮನೆ ಇತ್ತು ಆಕೆಗೆ—ಚಿಕ್ಕ ಗುಡಿಸಲು. ಹೊಲವಿತ್ತು ಆಕೆಯ ತಾಯ್ತಂದೆಯರಿಗೆ—ಒಕ್ಕಲುತನದ ಒಂದಿಷ್ಟು ಹೊಲ. ಆ ವರ್ಷವೇ ಎಲ್ಲವೂ ಕೈಬಿಟ್ಟುವು! ದೇಶಪ್ರೇಮಿಯಾದ ಆ ಹಿರಿಯ ಜಮೀನ್ದಾರ ಹೆಚ್ಚು ಗೇಣಿ ಕೇಳಿದ. ಕೊಡದೇ ಹೋದರೆ ಹೊಸ ಒಕ್ಕಲನ್ನು ಹುಡುಕುವುದಾಗಿ ಹೇಳಿದ. ಹಾಗೆಯೇ ಆಯಿತು. ಕಾಣಿಯ ತಾಯ್ತಂದೆಯರು ಹೊಲ ಕಳೆದುಕೊಂಡರು. ಮಡಿಕೆ ಕುಡಿಕೆಗಳೊಡನೆ ಗುಳೆ ಹೊರಟಿತು ಆ ಸಂಸಾರ. ಹಿರಿಯ ಮಗ ಕೂಲಿಯಾಗುವೆನೆಂದು ಮದರಾಸಿಗೆ ಹೋದ. ಕಿರಿಯವನು ಜಗಳಾಡಿ ದೇಶಾಂತರ ಹೋದ. ತಂದೆ–ತಾಯಿ ಮೂಕಿಯಾದ ಮಗಳನ್ನು ಕಟ್ಟಿಕೊಂಡು ಊರೂರು ಸುತ್ತಿದರು.

ಎಷ್ಟು ಸುತ್ತಾಡಿದರೂ ಕೆಲಸ ಸಿಗಲಿಲ್ಲ. ಬೇಡಿಬೇಡಿ ಸರ್ವೇಸಾದ ಬಳಿಕ, ಭಿಕ್ಷೆ ಎತ್ತುವ ಕೆಲಸ ಅವರಿಗೆ ಖಾಯಮಾಯಿತು.

ತಾಯ್ತಂದೆಯುವರನ್ನು ಬಿಟ್ಟು ಬಂದಾಗ ಆ ಮೂಕಿಗೆ ಸ್ವಲ್ಪ ದುಃಖವಾಗಿತ್ತು—ಎಂಬುದನ್ನು ಒತ್ತಿ ಹೇಳುವುದು ವಾಸಿ. ಯಾಕೆಂದರೆ ಯಾವುದೋ ಮನೆಯ ಮಾಡಿನ ಕೆಳಗೆ ಬೀದಿಯ ಬಳಿ ಆ ರಾತ್ರೆ ತನ್ನೊಡನೆ ಹೊರಳಾಡಿದ ಮೊಂಡುಕೈಯ ಯುವಕ ಭಿಕ್ಷುಕ, ಆಕೆಗೊಂದು ಆಧಾರವಾಗಿದ್ದ.

ನಿಮಿಷ ನಿಮಿಷಕ್ಕೂ ಕುಸಿದು ಬೀಳುವ ಆಧಾರ ಅದು.

ಓಡಿಬಂದ ಮೇಲೆ ಆ ದೊಡ್ಡ ನಗರದಲ್ಲಿ ಕಳೆದುದು ಹತ್ತೇ ದಿನ. ಹನ್ನೊಂದನೆಯ ಬೆಳಗು ಮುಂಜಾನೆ ಆಕೆ ಒಬ್ಬಳೇ, ಆಶ್ರಯಕ್ಕೆ ಹುಲ್ಲುಕಡ್ಡಿಯೂ ಇಲ್ಲದ ಮಹಾ ಆಳದಲ್ಲಿ ಕೈಕಾಲು ಬಡಿಯುತ್ತಿದ್ದಳು.

ಆ ದಿನವೆಲ್ಲ ಆ ಮೂಕಿಯ ಕಣ್ಣುಗಳಿಂದ ಬಳಬಳ ಕಣ್ಣೀರು ಸುರಿಯುತ್ತಲೇ ಇತ್ತು. ಆಕೆ ಹೊಟ್ಟೆ ಹಿಸುಕಿಕೊಂಡು, ಕೂತಲ್ಲೆ ಗೋಡೆಗೆ ತನ್ನ ಹಣೆಚಚ್ಚಿ, ಗೊಳೋ ಎಂದು ರೋದಿಸಿದಳು. ಅಲ್ಲಿ ಇಲ್ಲಿ ಸುತ್ತಾಡಿದಳು. ಆತ ಸಿಗಲಿಲ್ಲ. ಯಾವ ಗಾಡಿ ಹತ್ತಿ ಯಾವ ಊರಿಗೆ ಟಿಕೆಟಿಲ್ಲದ ಪ್ರವಾಸವನ್ನು ಕೈಗೊಂಡಿದ್ದನೋ ಆ ಮಹಾರಾಯ !

ರೈಲು ನಿಲ್ದಾಣದ ಹಿಂದಿದ್ದ ಕೆರೆಗೆ ಕಾಣಿ ಹೋದಳು. ನೀರಲ್ಲಿ ಕಾಲುಗಳನ್ನು ಇಳಿಬಿಟ್ಟು ಕುಳಿತಳು. ರವಕೆಗೆ ಸಿಕ್ಕಿಸಿದ್ದ ಬಾಚಣಿಗೆಯನ್ನು ತೆಗೆದು, ತಲೆಗೆ ಕೈಯಿಂದ ನೀರು ಹನಿಸಿ, ಬಾಚಿದಳು. ಅದೇ ಕೆರೆಯ ನೀರನ್ನು ಸ್ವಲ್ಪಕುಡಿದಳು. ಹಾಗೆಯೇ ಉದ್ದಕ್ಕೂ ಆ ಕಾಲುಹಾದಿಯಲ್ಲಿ ನಡೆದು ಹೋದಳು.

ಆಕೆ ರೂಪವತಿಯಲ್ಲ. ತೆಳ್ಳನೆಯ ಜೀವ. ಆದರೆ ವಯಸ್ಸಿಗೆ ವಿಾರಿ ಮೈತುಂಬಿತ್ತು. ಬರಿಯ ದೇಹಮಾಂಸಕ್ಕಾಗಿ ಹಂಬಲಿಸುವವರಿಗೆ ಆಕೆ ಮನ ದಣಿಯುವ ಊಟವಾಗಿದ್ದಳು.

ನಡೆದು ಹೋಗುತ್ತ ಹೋಗುತ್ತ ಆಕೆಯೊಮ್ಮೆ ತಿರುಗಿ ನೋಡಿದಳು. ಯಾವನೋ ಒಬ್ಬ ಸಿಗರೇಟು ಕುಡಿದುಕೊಂಡು ಹಿಂಬಾಲಿಸಿ ಬರುತ್ತಿದ್ದ. ಬೀದಿಯ ದೀಪಗಳು ಹತ್ತಿಕೊಂಡುವು. ಯಾವುದೋ ಹೊಸ ಪ್ರಪಂಚದ ಬಾಗಿಲು ತನ್ನ ಪಾಲಿಗೆ ತೆರೆದ ಹಾಗೆ ಕಾಣಿ ಆ ದೀಪಗಳತ್ತ ಪಿಳಿ ಪಿಳಿ ನೋಡಿದಳು. ಒಂದು ಸೈಕಲ್ ಎದುರು ದಿಕ್ಕಿನಿಂದ ಹರಿದುಹೋಯಿತು. ಪೋಲೀಸನ ಸಿಳ್ಳೊಂದು ಎಲ್ಲಿಂದಲೋ ಸದ್ದುಮಾಡಿತು........ಆಕೆ ಮತ್ತೊಮ್ಮೆ ಹಿಂತಿರುಗಿ ನೋಡಿದಳು. ಆತ ಬರುತ್ತಲೇ ಇದ್ದ.

ಫುಟ್‌ಪಾತಿನ ಮೇಲೆ ಒಂದು ದೇವದಾರು ಮರದ ಬಳಿ ಆಕೆ ನಿಂತಳು. ಆತ ಸಮಿಾಪ ಬಂದ. ತಿಂಡಿಯ ಪೊಟ್ಟಣವನ್ನು ಆತ ಮುಂದಕ್ಕೆ ನೀಡಿದ. "ಅ ಅ"

ಎಂದು ಆಕೆಯ ಗಂಟಲಿಂದ ಸ್ವರ ಹೊರಟಿತು. ಪೊಟ್ಟಣವನ್ನಾಕೆ ಬಿಚ್ಚಿ ಆ ಚೌಚೌವನ್ನು ಗಬಗಬನೆ ತಿಂದಳು. ಆತ ಇನ್ನೊಂದು ಸಿಗರೇಟು ಹಚ್ಚಿದ.

"ಬೆಳಗ್ಗಿಂದಲೇ ನಿನ್ನ ನೋಡ್ತಾ ಇದ್ದೆ" ಎಂದನಾತ.

ಆಕೆ, ಆತನ ತುಟಿಯಲುಗುತ್ತಿದ್ದುದರಿಂದಲೇ ಏಷ್ಟನ್ನೋ ಅರ್ಥಮಾಡಿಕೊಂಡಳು. ಕಿವಿಯ ಭೇರಿಯ ಮೇಲೆ ತಣ್ಣನೆ ಸದ್ದೇನೋ ಆಗುತ್ತಿತ್ತು ; ಆದರೆ ಅರ್ಥವಾಗುತ್ತಿರಲಿಲ್ಲ.

ಆಕೆ "ಕಕಾಕ ಅ ಅ ಅ" ಎಂದೇನೋ ಹೇಳಿದಳು. ಕಣ್ಣೀರು ಚಿಮ್ಮತೊಡಗಿತು.

"ಚು ಚು ಚ್" ಎಂದು ಆತ ಸಂತಾಪ ಸೂಚಿಸಿದ. ಬಾ, ಎಂದು ಕೈಸನ್ನೆ ಮಾಡಿದ. ಆಕೆ ತಲೆಬಾಗಿಸಿಕೊಂಡು ಆತನನ್ನೇ ಹಿಂಬಾಲಿಸಿದಳು—ನಾಯಿ ವಿನಮ್ರವಾಗಿ ಹಿಂದಿನಿಂದ ಹೋಗುವಂತೆ ಸಾಗಿದಳು.

ಯಾವುದೋ ಆಶ್ರಯದಲ್ಲಿ ಹಾಗೆ ಆ ರಾತ್ರೆ ಬೆಳಗಾಯಿತು.

o o o o o

ಆ ರೀತಿ ನಾಲ್ಕು ದಿನ ಕಳೆದುವು. ಆಕೆಯನ್ನು ಅವನು ಸಿಂಗರಿಸಿದ.

ಅರ್ಥ ಮಾತಿನಿಂದ ಅರ್ಥ ಕೈಸನ್ನೆಯಿಂದ ವಿವರಿಸಿ ವಿವರಿಸಿ ಹೇಳಿದ :

"ನಾನು ಹೊಸಬರನ್ನು ಕರಕೊಂಡು ಬರ್ತೀನಿ. ನೀನು ಸುಮ್ಮಗಿರಬೇಕು. ಬಾಯಿ ಬಿಚ್ಚಬಾರದು. ಮೂಕಿ ಅಂತ ತೋರಿಸಬಾರದು."

ಆಕೆ ಕುಂಯ್ ಕುಂಯ್ ಎನ್ನುತ್ತಿದ್ದಳು. ತನ್ನನ್ನು ಮೂಕಿ ಎಂದು ಸಂಬೋಧಿಸಿದ ಆತ ಹಾವಭಾವ ಮಾಡಿದಾಗ ಆಕೆಗೆ ತುಂಬ ಸಿಟ್ಟು ಬರುತ್ತಿತ್ತು. ಆದರೆ ಕುಂಯ್ ಕುಂಯ್ ಶಬ್ದದಲ್ಲೇ ಆ ಸಿಟ್ಟು ಮುಕ್ತಾಯವಾಗುತ್ತಿತ್ತು.

ಆತ ಯಾರನ್ನೋ ಕರೆದು ತಂದ. ಸಂಭಾವಿತರಂತೆ ಕಾಣುತ್ತಿದ್ದರವರು. ಅವರೆದುರು ಆತ ಹಾಗೆ ಹಲ್ಲುಕಿರಿಯುತ್ತಿದ್ದ. ತಿಂಡಿಯ ತುಣುಕಿನ ಮೇಲೆ ನಾಯಿಯ ಕಣ್ಣಿದ್ದ ಹಾಗೆ! ಅವನ ದೃಷ್ಟಿ ಅವರ ಜೇಬುಗಳ ಮೇಲಿತ್ತು.

ಬಂದವರಲ್ಲೊಬ್ಬ ಶುದ್ಧ ಪಶು. ಆಕೆಯ ಅಂಗಾಂಗಗಳನ್ನೆಲ್ಲ ಹಿಡಿದು ನೋಯಿಸತೊಡಗಿದ.

ಆಕೆ ನೋವು ತಡೆಯಲಾರದೆ "ವೆ ವೆ ವೆ ವೆ" ಎಂದು ಪ್ರತಿಭಟಿಸಿದಳು ಎರಡೂ ಕೈಯಿಂದ ದಬ್ಬಿ ಅವನನ್ನು ಕೆಳಕ್ಕೆ ಬೀಳಿಸಿದಳು. ರಂಪವಾಯಿತು. ಆಕೆಯ ಯಜಮಾನನು ಬಡ ನಾಯಿಗೆ ಹೊಡೆದ ಹಾಗೆ ಆಕೆಗೆ ಬಡೆದ. ಆಕೆ ಮುದುಡಿಕೊಂಡು ಮೂಲೆಯಲ್ಲಿ ಬಿದ್ದಳು. ಬಂದವರು ಮುಖ ಸಿಂಡರಿಸಿಕೊಂಡು ಹೊರಟು ಹೋದರು.

ನಡುರಾತ್ರೆ ಆತ, ಬಿದ್ದಿದ್ದ ಜಾಗದಿಂದ ಆಕೆಯನ್ನೆತ್ತಿ ಚಾಪೆಯ ಮೇಲೆ ಇರಿಸಿದ. "ನೋವಾಯಿತೆ? ನೋವಾಯಿತೆ?" ಎಂದ. ಆಕೆ ಏನನ್ನೂ ಹೇಳ

ಲಿಲ್ಲ. ಕಣ್ಣುಗಳಲ್ಲಿ ಮಾತ್ರ ಏನೇನೋ ವಿವಿಧ ವಿಕಾರಗಳಾಗುತ್ತಿದ್ದವು. ಆದರೆ ಆ ಅಲ್ಪ ಮಾನವನಿಗೆ ಅದರ ಅರ್ಥವಾಗಲಿಲ್ಲ.

ಅಂದಿನಿಂದ ಕಾಣಿ ಬಲು ಮೆದುವಾದಳು.

ಆತನನ್ನು ಆಕೆ ಪ್ರೀತಿಸಲಿಲ್ಲ. ಮೊದಲ ಸಾರಿ ಮೊಂಡುಕೈಯವನನ್ನು ಪ್ರೀತಿಸಿದ ಹಾಗೆ ಯಾರನ್ನೂ ಆಕೆ ಪ್ರೀತಿಸಲಿಲ್ಲ.

ದುಡ್ಡಿನ ಬೆಲೆ ಕಾಣಿಗೆ ತಿಳಿಯದು. ಎಷ್ಟು ಬರುತ್ತಿತ್ತೋ ಏನೋ. ಎರಡು ಸೀರೆ-ರವಿಕೆ, ಜಂಪರ್, ರಾತ್ರೆ ಹೊರಹೋಗುವಾಗ ಹಾಕಿಕೊಳ್ಳಲು ತೂತಾಗಿದ್ದ ಆದರೆ ಉಣ್ಣೆಯ ಸ್ತ್ರೀ ಕೋಟು; ಮುಡಿಯಲು ಹೂ; ಮೂಗಿಗೆ ಹೊಡೆಯುವ ಎಣ್ಣೆ-ಕೂದಲಿಗೆ; ಹೊಟ್ಟೆ ತುಂಬ ಊಟ-ತಿಂಡಿ....ಹಾಗೆಯೇ ದಿನ ಕಳೆಯಿತು.

ಸದ್ಯ; ಆಕೆ ಬಸುರಿಯಾಗಲಿಲ್ಲ!

ಇಷ್ಟಿದ್ದರೂ ಒಂದು ದಿನ ಆಕೆಗೆ ಎದೆ ನೋವಾಯಿತು. ಹೊರಳಾಡಿದಳು. ವಿಲಿವಿಲಿ ಒದ್ದಾಡಿದಳು. ತನ್ನ ಹಳ್ಳಿಯ, ತಾನು ಹುಟ್ಟಿದ ಗುಡಿಸಲಿನ, ತನ್ನ ಭಾಷೆಯಾಡುವ ಜನರ, ಮೊಂಡುಕೈಯ ಮೊದಲ ಜತೆಗಾರನ ನೆನಪಾಯಿತು. ಓಹೋ ಓ ಓ-ಎಂದೆಲ್ಲ ಸ್ವರವೆತ್ತಿದಳು. ಎರಡು ದಿನವೂ ರಾತ್ರೆಯೂ ಹೀಗೇ ಆಯಿತು. ಗಿರಾಕಿಗಳು ಬರುವುದಾಗಲೇ ಇಲ್ಲ.

ಮೂರನೆಯ ಬೆಳಗು ಮುಂಜಾನೆ, ಅಲ್ಲಿದ್ದ ತಿಂಡಿಯನ್ನೆಲ್ಲ ಬಟ್ಟೆಬರೆಯನ್ನೆಲ್ಲ ಕಟ್ಟಿಕೊಂಡು ಆಕೆ ಓಡಿಹೋದಳು. ನಗರದ ಇನ್ನೊಂದು ಅಂಚನ್ನು ತಲಪಿ ಅದನ್ನೂ ದಾಟಿದಳು.

೦ ೦ ೦ ೦ ೦

ದಾಟಿ ಮುಂದೆ ನಡೆದುದೊಂದು ಹಳ್ಳಿಗೆ. ಹೊಲ, ಉಳುತ್ತಿದ್ದ ಒಂದು ಜತೆ ಎತ್ತು, ರೈತರು . . . ಎಲ್ಲವನ್ನೂ ಆಕೆ ಮೌನವಾಗಿ ನೋಡಿದಳು. ಕೆದರಿದ ತಲೆಕೂದಲನ್ನು ಬಾಚುವುದೂ ನೆನಪಾಗಲಿಲ್ಲ ಆಕೆಗೆ. ಒಂದಾಣೆಯ ಪುಟ್ಟ ಕನ್ನಡಿಯಲ್ಲಿ ತನ್ನ ಪ್ರತಿರೂಪವನ್ನು ನೋಡುವ ಬಯಕೆಯೂ ಆಗಲಿಲ್ಲ. ತಿಂಡಿ ತಿನ್ನುವುದೂ ಬೇಕೆನಿಸಲಿಲ್ಲ.

ಮಳೆ ಹನಿ ಬಿದ್ದು ಸುತ್ತಲಿನ ನೆಲವೆಲ್ಲ ಹಸುರಾಗಿತ್ತು. ಚಿಗುರು ಹುಲ್ಲಿನ ಮೇಲೆ ಕಾಣಿ ಒಂದೆಡೆ ಕುಳಿತಳು.

ತನ್ನ ಬಾಲ್ಯದ ನೂರೊಂದು ನೆನಪುಗಳು ಬಂದುವು. ಮುಖ ಸಣ್ಣದಾಯಿತು. ನಿಧಾನವಾಗಿ ಜೊಂಪು ಹತ್ತಿ ಅಲ್ಲೇ ಒರಗಿ ನಿದ್ದೆ ಹೋದಳು.

ಸಂಜೆ, "ಶ್‌ಶ್ ಏಯ್ ಏಯ್" ಎಂದು ಕೆಲವು ರೈತ ಹೆಂಗಸರು ಎಬ್ಬಿಸಿದಾಗಲೇ ಆಕೆ ಕಣ್ಣು ತೆರೆದದ್ದು.

ಕತ್ತಲಾದಂತೆ ಆ ಹಳ್ಳಿಯಲ್ಲಿ ಆಕೆಗೆ ಹೆದರಿಕೆಯಾಯಿತು. ಧಾವಿಸುತ್ತ ಧಾವಿಸುತ್ತ ಕಾಣಿ ನಗರ ಸೇರಿದಳು.

ಒಂದು ಕೋನೆಯಲ್ಲಿ ಆ ಶಾಲೆ ಇತ್ತು. ರಾತ್ರಿ ಅಲ್ಲಿ ಯಾರೂ ಇರುತ್ತಿರಲಿಲ್ಲ. ಅಲ್ಲಿಯೇ ಜಗಲಿಯ ಒಂದು ಮೂಲೆಯಲ್ಲಿ ಆಕೆ ಮಲಗಿಕೊಂಡಳು.

೦ ೦ ೦ ೦ ೦

ಬೆಳಗಾದೊಡನೆಯೇ ಎದ್ದು ಹೋದಳಾಕೆ. ಹೋಗುತ್ತ ಮೈ ಮೇಲಿನ ಬಟ್ಟೆ ಸರಿಪಡಿಸಿಕೊಂಡಳು; ಕೊಂಚ ಮಟ್ಟಿಗೆ ಸಿಂಗರಿಸಿಕೊಂಡಳು.

ಹಾಗೆಯೇ ಸುತ್ತಾಡಿದಾಗ ಆ ಜಾಗದ ಪರಿಚಯವಾಯಿತು. ವಿಸ್ತಾರ ಭೂಮಿ—ಸುತ್ತಲೂ ಹಸುರು ಹುಲ್ಲು. ಅಲ್ಲಿ ಆ ಸರ್ಕಲ್—ಅದರ ನಡುವಿನಲ್ಲಿ ಕಾರಂಜಿ. ಯಾರದೋ ಒಂದು ಪ್ರತಿಮೆ. ದೂರದಲ್ಲಿ ಒಂದೇ ಒಂದಾದ ಯಾವುದೋ ದೊಡ್ಡ ಕಟ್ಟಡ.

ಮೂಲೆಯಲ್ಲಿ ಕಡಲೆಕಾಯಿ ಮಾರುತ್ತ ಕುಳಿತಿದ್ದವನೊಬ್ಬನಿಗೆ ಇದ್ದ ಪುಡಿ ಕಾಸು ಸುರಿದು, ಕಾಸಿನ ಬೆಲೆ ಏನೆಂಬುದನ್ನು ಆ ಮೂಕಿ ಕಲಿತಳು.

ಹಸಿವು ಇಂಗಲಿಲ್ಲ.

ಕತ್ತಲಾದಾಗ ಆ ಸರ್ಕಲಿನ ಬಳಿ ಹೋಗಿ ಒಂದು ಮೂಲೆಯಲ್ಲಿ ಕುಳಿತಳು. ಕೇಂದ್ರದ ಒಂದೇ ಒಂದು ದೀಪದಿಂದ ಮಂದಪ್ರಕಾಶವಷ್ಟೇ ಬೀಳುತ್ತಿತ್ತು. ಹಾದುಹೋಗುತ್ತಿದ್ದವರು ಆಕೆಯನ್ನು ನೋಡಿ ಹೋಗುತ್ತಿದ್ದರು. ನೋಡಿದ ಒಬ್ಬಿಬ್ಬರು ಮುಂದೆ ಹೋಗಿ ಬಳಿಕ ತಿರುಗಿ ನೋಡುತ್ತಿದ್ದರು.

ಗಂಭೀರನಾಗಿ ಕಾಣುತ್ತಿದ್ದ ಮನುಷ್ಯನೊಬ್ಬ ಕನ್ನಡಕವನ್ನು ಸರಿಪಡಿಸುತ್ತ ಆ ಹಾದಿಯಲ್ಲಿ ಎರಡು ಬಾರಿ ಸುಳಿದ. ಕಾಣಿ ಎದ್ದು ನಿಂತು ಸರ್ಕಲಿನಿಂದ ಹೊರಕ್ಕೆ ಬಯಲಿನತ್ತ ನಡೆದಳು—ಉಲ್ಲೋ ಮರದತ್ತ. ಯಾವುದೋ ಪೊದೆಯ ಬಳಿಗೆ. ಆ ಮನುಷ್ಯ ಹಿಂದೆ ಮುಂದೆ ನೋಡುತ್ತ ಆಕೆಯನ್ನು ಹಿಂಬಾಲಿಸಿದ.

....ಮರುದಿನ ಕಾಗದದ ಚೂರನ್ನು ಕೊಟ್ಟರೆ ತಿಂಡಿಯೂ ಬರುವುದು, ಊಟವೂ ಬರುವುದು, ಚಿಲ್ಲರೆ ಕಾಸೂ ವಾಪಸು ಬರುವುದು, ಎಂದು ಕಾಣಿ ಕಲಿತಳು. ಎಷ್ಟು ವಾಪಸು ಬರುತ್ತಿತ್ತೊ ಏನು ಕತೆಯೋ—ಅಷ್ಟೆಲ್ಲ ಜ್ಞಾನ ವಿರಲಿಲ್ಲ ಆಕೆಗೆ.

ಅಂದಿನಿಂದ ಹಗಲು ಅಲೆದಾಟ. ಸಂಜೆ ಸರ್ಕಲಿನಲ್ಲಿ ಒಂದೋ ಎರಡೋ ಪರಿಚಯ; ಸಮೀಪದ ಹುಲ್ಲುಗಾವಲಿನ ಹಾಸಿಗೆಯಲ್ಲಿ ಆಕೆಯೇ ಒಂದು ಸಾರಿಯೋ ಎರಡು ಮೂರು ಸಾರಿಯೋ ಸಾಯುವುದು—ಸತ್ತು ಜೀವಿಸುವುದು.

ಜೀವಿಸಿ ಮತ್ತೆ ಮಾರನೆಯ ದಿನ ರಾತ್ರೆ ಸಾಯುವುದು.

ಹಾಗೆಯೇ ಕಾಲ ಕಳೆಯಿತು...........

ಎಂಥೆಂಥವರೆಲ್ಲ ಆಕೆಯ ಬಳಿಗೆ ಬರುತ್ತಿದ್ದರೋ ಆಕೆಗೆ ತಿಳಿಯದು. ಕುಡುಕ 'ಲಫಂಗ'ರಿರಬಹುದು; ದಿಕ್ಕುಗೆಟ್ಟ ಭ್ರಮರ ಜೀವನದ ವಿಲಾಸಿಗಳಿರಬಹುದು; ಹಗಲೆಲ್ಲ ಸಾಂಪ್ರದಾಯಿಕ ಬುದ್ಧಿಮತ್ತೆಯ ಸೋಗು ಧರಿಸುವ ಕಾಮುಕರಿರಬಹುದು,

ಮನೆಯ ಅತೃಪ್ತಿಯನ್ನು ಹೋಗಲಾಡಿಸುವ ದಾಹಿಗಳಿರಬಹುದು...... ಆಕೆಗೆ ತಿಳಿಯದು. ಮಾತು ಬರುತ್ತಿದ್ದರೆ, ಏನಾದರೂ ಅರ್ಥವಾಗುತ್ತಿತ್ತೋ ಏನೋ. ಮುಖ ನೋಡಿದರೆ ಅದರ ಹಾವಭಾವದಿಂದ ಸ್ವಲ್ಪವಾದರೂ ತಿಳಿಯಬಹುದಿತ್ತು. ಆದರೆ ಆ ರಾತ್ರೆ ಹೊತ್ತಿನಲ್ಲಿ ಬಂದವರ ಮುಖ ಕಾಣುವುದೇನು ಬಂತು?

ಇದು ಮಾನವೀಯವೇ? ಪಾಶವಿಕವೆ? ಎಂಬುದೂ ಆಕೆಗೆ ತಿಳಿಯದು. ಪ್ರೇಮ-ಕಾಮಗಳ ವಿಚಾರವನ್ನು ಬಲ್ಲವಳಲ್ಲ ಆಕೆ. ಎಳೆ ಮೀಸೆಯವರಿರಲಿ-ಮುದುಕರಿರಲಿ, ಆಕೆಗೆರಡೂ ಸಮವೇ. ದೇಹ ಬಳಲಿದಾಗ ಆಕೆ ನರಳುವಳು. ನೋವಾದಾಗ ಗಂಟಲಿನಿಂದ ಅರ್ಥವಾಗದ ವಿಕೃತ ಸ್ವರ ಹೊರಡಿಸುವಳು..........

ತಾನು ಮೂಕಿ. ಮೂಕಿಯಿಂದ ತೃಪ್ತಿಬಯಸುವವರ ಮನಸ್ಸಿನಲ್ಲಿ ಏನೇನು ಅನುಭವಗಳಾಗುತ್ತವೆಂಬುದೂ ಗೊತ್ತಿಲ್ಲ ಕಾಣಿಗೆ. ನಡೆಯುವುದೆಲ್ಲ ಯಾಂತ್ರಿಕ ವ್ಯವಹಾರ. ಆಕೆಯೊಂದು ಉಸಿರಾಡುವ ಯಂತ್ರ.

o o o o o

ಮಳೆ ಬಲವಾಯಿತು. ಗಿರಾಕಿಗಳು ಬರಲಿಲ್ಲ. ಆಗಾಗ್ಗೆ ಸಂಪಾದನೆ ಕಡಿಮೆಯಾಯಿತು. ಜೀವ ಸಣ್ಣಗಾಯಿತು. ಕಾಣಿ ಬಡಕಲಾದಳು. ತಾನೇ ಎದ್ದು ಜನರಿದ್ದೆಡೆಗೆ ಹೋಗಿ ಅವರ ಸುತ್ತಮುತ್ತ ಸುಳಿಯಲಾರಂಭಿಸಿದಳು.

ಕೆನ್ನೆಗಳು ಗುಳಿಬಿದ್ದುವು; ಕಣ್ಣು ಕೆಳಕ್ಕಿಳಿಯಿತು. ಜ್ವರ ಬರತೊಡಗಿತು.

ಮತ್ತಷ್ಟು ಹೆಚ್ಚು ಸಿಂಗಾರ ಮಾಡಿಕೊಂಡಳಾಕೆ.

ಆಕೆ ದೂರದಲ್ಲಿ ಬಳುಕುತ್ತ ನಡೆಯುತ್ತಿದ್ದರೆ, ಆ ಉಣ್ಣೆ ಕೋಟನ್ನು ಧರಿಸಿದ್ದರೆ, ತಲೆಗೆ ಹೂ ಮುಡಿದಿದ್ದರೆ, ಸುಮಾರಾಗಿ ಕಾಣಿಸುತ್ತಿದ್ದಳು. ಆದರೆ ಹತ್ತಿರದಲ್ಲಿ ಮುಖವಿಟ್ಟು ನೋಡಿದರೆ, ಎರಡು ಕಣ್ಣುಗಳಲ್ಲಿ ಎರಡು ದೆವ್ವಗಳು ನರ್ತಿಸುತ್ತಿದ್ದಂತೆ ತೋರತ್ತಿತ್ತು.

ಕೆಲವು ಪುಂಡರು ಆಕೆ ಮಲಗುತ್ತಿದ್ದ ಶಾಲೆಗೇ ಬರುತ್ತಿದ್ದರು ರಾತ್ರೆಹೊತ್ತು. ಆದರೆ ಪುಡಿಕಾಸು ಬಿಚ್ಚುತ್ತಿರಲಿಲ್ಲ. ಆಕೆ ಜಗಳಾಡುತ್ತಿದ್ದಳು. ಅವರೂ ಪೀಡಿಸಿ ಬಲಾತ್ಕರಿಸುತ್ತಿದ್ದರು. ಅವರ ನಗೆಯೊ-ವಿಕಟ ಅಟ್ಟಹಾಸಗಳೋ! ಕಾಣಿ ಪ್ರತಿಭಟನೆ ವಿಫಲವಾದಾಗ ತೇಕುತ್ತ ತೇಕುತ್ತ ದದ್ದಾಗಲೆಂದು ತಲೆಬಾಗುತ್ತಿದ್ದಳು.

ಜ್ವರ ಹೆಚ್ಚಿತು. ಕೆರೆಯಲ್ಲಿ ಸ್ನಾನಮಾಡಬೇಡವೆಂದು-ಆಕೆಯ ಮನಸ್ಸು ಹೇಳಿದಂತಾಯಿತು.

ಚರ್ಮಕ್ಕೇನೋ ರೋಗ ಬಡಿಯಿತು. ಯುವತಿ ಕಾಣಿ ತುಂಬ ನರಳಾಡಿದಳು.

ಮೈಯಿಂದ ಕೆಟ್ಟವಾಸನೆ ಬರತೊಡಗಿತು.

ಕಾಣಿ ಇರುವ ತಾಣ ಬದಲಿಸಿದಳು. ಒಂದು ಫರ್ಲಾಂಗಿನಾಚೆ ಇದ್ದ ಮುರುಕು ಮನೆಯೊಂದರ ಬಳಿಗೆ ಹೋದಳು. ಅಲ್ಲೊಬ್ಬ ನಡುವಯಸ್ಸಿನ ಭಿಕ್ಷುಕ ತನ್ನ ಅರಮನೆ ಕಟ್ಟಿಕೊಂಡಿದ್ದ.

ಆತ ಮೂರು ದಿನ ಅವಳಿಗಿಷ್ಟು ಗಂಜಿ ನೀಡಿದ.

ಆಕೆ, ಮುರಿದಿದ್ದ ಮಾಡಿನೆಡೆಯಿಂದ ಆಕಾಶದತ್ತ ಬಿರಬಿರನೆ ನೋಡುತ್ತ ಮಲಗಿದಳು.

ನಾಲ್ಕನೆಯ ದಿನ ಜ್ವರ ಸ್ವಲ್ಪ ವಾಸಿ ಎಂದು ತೋರಿತು. ಆಕೆ ಎದ್ದು ಕುಳಿತಳು. ಆ ಭಿಕ್ಷುಕ, ಆಸೆಯಿಂದ ಅವಳ ಕಡೆ ನೋಡಿದ. ಆಕೆಯ ಮುಖದ ಮೇಲೆ ಯಾವ ಭಾವನೆಯೂ ಇರಲಿಲ್ಲ. ಅಂಥ ಭಾವನೆಗಳನ್ನು ಅನುಭವಿಸುವ ಸಾಮರ್ಥ್ಯವೆಲ್ಲ ಆಕೆಯಲ್ಲಿ ನಶಿಸಿಹೋಗಿತ್ತು. ಆತ ಆ ದಿನ ಭಿಕ್ಷವೆತ್ತುವುದಕ್ಕೂ ಹೋಗದೆ ಅವಳೊಡನೆಯೇ ಇದ್ದುಬಿಟ್ಟ. ರೋಗಪೀಡಿತವಾಗಿದ್ದ ಆತನ ದೇಹ, ಬಹಳ ದಿನಗಳ ಬಯಕೆಯನ್ನು ಈಡೇರಿಸಹೊರಟಿತ್ತು.

ಸಂಜೆ ಕಾಣಿ, ತನ್ನ ಕರಿಯ ಕೋಟನ್ನು ಹೊದ್ದುಕೊಂಡು, ನಿಧಾನವಾಗಿ ನಡೆಯುತ್ತ ಹುಲ್ಲುಗಾವಲನ್ನು ದಾಟಿ, ಸರ್ಕಲಿನತ್ತ ಹೋಗಿ, ಕತ್ತಲೆಯಿದ್ದ ಆ ಒಂದು ಮೂಲೆಯಲ್ಲಿ ನಿಂತಳು. ಆಕೆಗೆ ಬವಳಿ ಬಂದ ಹಾಗಾಗುತ್ತಿತ್ತು. ಊರಿನ ಹೊಲ, ತಾಯಿ–ತಂದೆ, ಮೊಂಡು ಕೈಯ ಜತೆಗಾರ, ಇವರೆಲ್ಲ ಕಣ್ಣ ಮುಂದೆ ಬಂದ ಹಾಗಾಯಿತು. ಕೂಲಿಯಾಗಲೆಂದು ಮದರಾಸಿಗೆ ಹೋದ ಅಣ್ಣನೂ ಜಗಳ ವಾಡಿ ಮನೆ ಬಿಟ್ಟ ತಮ್ಮನೂ ಎದುರಲ್ಲಿ ನಿಂತು 'ಕಾಣೀ' ಎಂದು ಕರೆದಹಾಗಾಗುತ್ತಿತ್ತು....ಹೃದಯವೆಲ್ಲ ನೋವಿನಿಂದ ತುಂಬಿತು........

ಬಹಳ ಹೊತ್ತು ನಿಂತಿರಲಾರದೆ ಆಕೆ ಅಲ್ಲಿಯೇ ಮೂಲೆಯಲ್ಲಿ ಕುಸಿದು ಕುಳಿತಳು. ದೂರದಲ್ಲಿ ಕಡಲೆಕಾಯಿ ಮಾರುವಾತನ ಕಾಗದದೊಳಗಿನ ದೀಪ ಬಾ ಎನ್ನುತ್ತಿತ್ತು. ಆದರೆ ಪುಡಿಕಾಸಿರಲಿಲ್ಲ. ಕೈ ಚಾಚಿ ಬಾಚಿ ಕಡಲೆಕಾಯಿ ಒಯ್ದುಬಿಡಬೇಕೆಂದು ತೋರಿತು. ಆದರೆ ಸಾಮರ್ಥ್ಯವಿರಲಿಲ್ಲ.

ಗಂಟೆ ಒಂದು ಕಳೆಯಿತು—ಒಂದೂವರೆಯಾಯಿತು. ಕಾರಂಜಿಯ ಬಳಿ ಕುಳಿತವರೆಲ್ಲ ಒಬ್ಬೊಬ್ಬರಾಗಿ ಮನೆಯ ಕಡೆ ಹೊರಟರು. ಕಾಣಿ ಒಬ್ಬೊಬ್ಬರನ್ನೇ ಆಸೆಯ ದೃಷ್ಟಿಯಿಂದ ನೋಡಿದಳು.

ಕೊನೆಗೊಬ್ಬ ಬಂದು ದೂರದಲ್ಲಿ ನಿಂತ. ಧಾಂಡಿಗ ದೇಹ. ಪೋಲಿ ಸ್ವರೂಪಿ. ತೋಳು ಬೀಸಿ ಸನ್ನೆ ಮಾಡಿದ. ಆಕೆ ಎದ್ದು ನಿಂತು ಪ್ರಯಾಸದಿಂದ ಕಾಲೆಳೆದುಕೊಂಡು ಆತನನ್ನು ಹಿಂಬಾಲಿಸಿದಳು.

ಆತ ಯಾವನೋ ಹೊಸಬ. ಅಲ್ಲೇ ಪೊದರಿನಾಚೆ ಆಕೆಯನ್ನಾತ ಕೆಡವಿದ. 'ಗೊರಕ್' ಎಂದಳು ಕಾಣಿ............

........ಪಿಡಿಮಿಡಿಗೊಂಡು ಆತ ಎದ್ದು ನಿಂತು ಮೈಕೊಡವಿದ. 'ಥುತ್!' ಎಂದು ಆಕೆಯ ಮೇಲೆ ಉಗುಳಿದ. ಕಾಣಿ ಎಷ್ಟು ಕುಳಿತುಕೊಳ್ಳಲು ಯತ್ನಿಸಿದಳು. ಆದರೆ ಶಕ್ತಿಯೇ ಇರಲಿಲ್ಲ.

ಆತ ಮತ್ತೊಮ್ಮೆ 'ಥುತ್ !' ಎಂದು ಹೊರಟ.

ಕಾಸು ಕೊಡಲಿಲ್ಲ.

ಕಾಣಿ ಆರ್ತನಾದ ಮಾಡುವಂತೆ ಬಾಯಿ ತೆರೆದಳು; ಆದರೆ ಸ್ವರ ಹೊರಡಲಿಲ್ಲ. ಏಳಬೇಕೆಂದು ಮತ್ತೊಮ್ಮೆ ಪ್ರಯತ್ನಿಸಿದಳು; ಸಾಧ್ಯವಾಗಲಿಲ್ಲ.

ಆತ ಬೇಗ ಬೇಗನೆ ಹೆಜ್ಜೆ ಇಡತೊಡಗಿದ.

ಕೊನೆಗೊಮ್ಮೆ ಆಕೆ ತೆವಳಿ ಎದ್ದಳು.

ಹೆತ್ತ ಎಳೆಗೂಸನ್ನು ಕಸಿದೊಯ್ಯುವ ಪಾಪಿಯ ಬೆನ್ನಟ್ಟುವಂತೆ, ಆಕೆ ಓಡಿದಳು.

'ಲೊಬೊಲೊಬೊ' ಎಂದಾಕೆ ಬೊಬ್ಬಿಟ್ಟಳು. 'ಯವವಾ ತಕಕಾ ಅಲಿ' ಎಂದು ಚೀರಿದಳು.

ಈತ ದುಡ್ಡು ಕೊಡದೆ ಓಡುತ್ತಿದ್ದಾನೆ; ಆಕೆ ತನ್ನ ಭಾಷೆಯಲ್ಲಿ ನ್ಯಾಯ ವಿಚಾರ ವರ್ತಿಸಬೇಕೆಂದು ಕೇಳುತ್ತಿದ್ದಾಳೆ. ನಾಳೆಯ ಒಂದು ತುತ್ತು ಅನ್ನ ಕಸಿಯಬೇಡವೆಂದು ಮೊರೆಯಿಡುತ್ತಿದ್ದಾಳೆ.

ಈತ ಗಾಬರಿಯಾಗಿ ನಿಂತು ನೋಡಿದ. ಜನರಿನ್ನೂ ಇದ್ದರು. ಅವರಿಗೆ ಕೇಳಿಸಬಹುದು. ಯಾರಾದರೂ ತನ್ನನ್ನು ಬೆನ್ನಟ್ಟಬಹುದು... ....

ಆ ಆಸಾಮಿ ಥಟಕ್ಕನೆ ಹಿಂತಿರುಗಿದ. ಆಕೆಯ ಗಂಟಲಿಗೆ ಕೈ ಹಾಕಿ ಹಿಸುಕಿ ನೆಲಕ್ಕುರುಳಿಸಿದ. "ಹೊಲಸು ರಂಡೆ!" ಎಂದು ಶಪಿಸಿದ. ಆಕೆಯ ಹೊಟ್ಟೆಗೆ ಬೂಟುಗಾಲಿನಿಂದ ಒದೆದ.

ಕಾಣಿ ಹಾಗೆಯೇ ಬಿದ್ದುಕೊಂಡಳು........ಗಂಟಲಲ್ಲಿ ಏನೋ ಸ್ವರ ಬರುತ್ತಿತ್ತು. ಆದರೆ ಅದು ಹೊರಗೆ ಕೇಳಿಸುತ್ತಿರಲಿಲ್ಲ.

ಉಸಿರಾಡುತ್ತಿತ್ತು....ಮೆಲ್ಲಮೆಲ್ಲನೆ...ನಿಂತು ನಿಂತು....ನಿಧಾನವಾದ ಉಸಿರು ಕೊನೆಯ ಒಂದೆರಡು ಉಸಿರಾಟ.

o o o o o

ಬೆಳಗಾಯಿತು.

....ಸೂರ್ಯ ಮೇಲಕ್ಕೆ ಬಂದಂತೆ ಕಾವೇರತೊಡಗಿತು. ಸರ್ಕಲ್ಲನ್ನು ಹಾದು ಹೋಗಲೇಬೇಕಾದವರು, ಭೀತಿಯಿಂದೊಮ್ಮೆ ಎಡಕ್ಕೆ ಕಣ್ಣು ಹೊರಳಿಸಿ, ಮತ್ತೆ ತಲೆಕೆಳಗೆ ಮಾಡಿ, ಸರಸರನೆ ನಡೆದುಹೋಗುತ್ತಿದ್ದರು.

ಎಲ್ಲರೂ ಚಲಿಸುತ್ತಲೇ ಇದ್ದರು. ನಿಲ್ಲುವವರು ಯಾರೂ ಇರಲಿಲ್ಲ.......

........ಪುರಸಭೆಯ ವ್ಯಾನು ಬಂದು ಕಳೇಬರವನ್ನು ಒಯ್ಯುವುದೆಂದು ಯಾರೋ ಹೇಳುತ್ತಿದ್ದರು.

ಕಾಣಿಯ ದೇಹದ ಮೇಲೆ ಎತ್ತರದಲ್ಲಿ ಗಿಡುಗವೊಂದು ಸುತ್ತು ಸುತ್ತು ಬರುತ್ತಿತ್ತು.

ಅದನ್ನೇ ನೋಡುತ್ತಿದ್ದ ಹಾಗೆ ಕಣ್ಣರಳಿಸಿ ಕಾಣಿ ಮಲಗಿದ್ದಳು.

ಸುತ್ತು ಬರುತ್ತಲೇ ಇತ್ತು ಗಿಡುಗ, ಕೆಳಗೆ ನೋಡುತ್ತ.

—ಕೊನೆಯ ಗಿರಾಕಿ. —೧೯೫೧

ತಿರುಕಣ್ಣನ ಮತದಾನ

ಕೆಲಸ ಕಳೆದುಕೊಂಡು ತಿಂಗಳು ಮೂರಾಗಿತ್ತು ನಿಜ. ಆದರೂ ಬೆಳಗ್ಗೆ ಕಾರಖಾನೆಯ ಸಿಳ್ಳು ಕೇಳಿಸಿದಾಗ ತಿರುಕಣ್ಣನಿಗೆ ಎಚ್ಚರವಾಗಿಯೇ ಆಗುತ್ತಿತ್ತು. ಅಭ್ಯಾಸ ಬಲ. ಆದರೆ ಈಗ ಏಳಬೇಕಾದ್ದೇ ಇಲ್ಲವಲ್ಲ! ಎರಡನೆಯ ಸಿಳ್ಳು ಕೇಳಿಸಿದಾಗಲಂತೂ ಮುಸುಕನ್ನು ಮತ್ತಷ್ಟು ಗಟ್ಟಿಯಾಗಿ ಹೊದೆದುಕೊಂಡು ತಿರುಕಣ್ಣ ಮಲಗುತ್ತಿದ್ದ. ಅವನ ಆರೇಳು ವರ್ಷದ ಮಗಳಂತೂ ಏಳುವ ಗೊಡವೆಗೇ ಹೋಗುತ್ತಿರಲಿಲ್ಲ.

ಆದರೆ ಬೆಳಗ್ಗೆ ಆ ಸಿಳ್ಳಿನ ಜತೆಗೆ ಕಾರಿನೊಂದು ಕಿರಿಚಾಟ ಕೇಳಿಸಿತು. ಒಂದೇ ಸಮನೆ ಕೂಗಿ ಕರೆಯುತ್ತಿದ್ದ ಹಾರನ್!

ಯಾರೋ ತನ್ನ ಗುಡಿಸಲಿನ ಬಾಗಿಲನ್ನೇ ತಟ್ಟಿದ ಹಾಗಾಯಿತು.

ಏನೋ ಅಪಾಯದ ಮುನ್‌ಸೂಚನೆ ಇದು—ಎಂದು ಅಂಜಿದ ತಿರುಕಣ್ಣ.

ಆದರೆ ಮೃದುವಾದ ಇಂಪಾದ ಒಂದು ಸ್ವರ ಕೇಳಿಸುತ್ತಿತ್ತು:

“ಮಿಸ್ಟರ್ ತಿರುಕಣ್ಣನ್, ಮಿಸ್ಟರ್ ತಿರುಕಣ್ಣನ್!”

ಆ ಜೀವಮಾನದಲ್ಲೇ ಮೊದಲ ಸಾರಿಗೆ ಅಂಥ ಸಂಬೋಧನೆ! ಅದೇನೋ ಎಂಥ ಶಬ್ದವೋ ಆತನಿಗೆ ಅರ್ಥವೂ ಆಗಲಿಲ್ಲ.

ಆದರೂ ಆತ ಎದ್ದು, ಕಂಬಳಿ ಹೊದ್ದುಕೊಂಡು, ಬಾಗಿಲನ್ನು ಬದಿಗೆ ಸರಿಸಿ ಬಾಗಿ ಹೊರಬಂದ.

ಥಳಥಳಿಸುವ ದೊಡ್ಡದೊಂದು ಕಾರು ದೂರದಲ್ಲಿ ನಿಂತಿತ್ತು. ಪಾಶ್ಚಾತ್ಯ ರೀತಿಯಲ್ಲಿ ಉಣ್ಣೆಯ ಪೋಷಾಕು ಧರಿಸಿದ್ದ ಸಾಹೇಬರೊಬ್ಬರು ಅಲ್ಲೇ ಇದ್ದರು. ಗುಡಿಸಲಿನ ಕೊಳಕು ಅಂಗಳದಲ್ಲಿ ಇನ್ನೊಬ್ಬ ಯುವಕ ನೂರಾರು ಹಾಳೆಗಳಿದ್ದ ಒಂದು ಪುಸ್ತಕವನ್ನು ಕೈಯಲ್ಲಿ ಹಿಡಿದಿದ್ದ. ಬಾಗಿಲು ತಟ್ಟಿ ಹೇಳಿದ:

“ನೀವೇನೋ ತಿರುಕಣ್ಣನ್?”

“ನಾನೇ ಬುದ್ಧಿ, ತಿರುಕಣ್ಣ.”

ಪುಸ್ತಕವಿದ್ದವನು ಓದಿ ಹೇಳಿದ:

“೯ ಎ ೦೦೬೮೩ ತಿರುಕಣ್ಣನ್ ಮತ್ತು ೯ ಎ ೦೦೬೮೪ ಆರೋಗ್ಯಮ್ಮ.”

ತಿರುಕಣ್ಣನಿಗೆ ಅರ್ಥವಾಗಲಿಲ್ಲ. ಆತ ವಿನೀತನಾಗಿ ಕೇಳಿದ:

"ನನ್ನಿಂದೇನು ಮಾಪರಾಧವಾಯ್ತು ಸ್ವಾಮಿ?"

"ಛೆ! ಏನೂ ಇಲ್ಲ....ಇಕೋ ಇವರು ಸ್ವತಂತ್ರ ಭಾರತದ ಸ್ವತಂತ್ರ ಚುನಾವಣೇಲಿ ಸ್ವತಂತ್ರ ಉಮೇದುವಾರರು. ಇವರಿಗೆ ನೀನೂ ಓಟು ಮಾಡಬೇಕು, ನಿನ್ನ ಹೆಂಡತಿಯೂ ಓಟು ಮಾಡಬೇಕು. ಗುರುತು ಕಾರು. ಕಾರು ಗುರುತು...."

"ಅದೆಂಥಾದೋ ತಿಳೀಲಿಲ್ವೆ ಬುದ್ಧಿ."

ಮತ್ತೊಮ್ಮೆ ಆತ ಸಹನೆಯಿಂದ ವಿವರಿಸಿದ:

"ನಾನು ನನ್ನ ಹೆಂಡ್ತಿ, ಅದ್ಹೆಂಗೆ?"

"ಯಾಕೆ?"

"ಅವಳಿಲ್ವಲ್ಲಾ!"

"ಎಲ್ಲಿಗೋಗವ್ಳೆ?"

"ಬರೋ ಹಂಗೇ ಇಲ್ವಲ್ಲಾ!"

"ಏನು ಸಮಾಚಾರ?"

ಸ್ವಲ್ಪ ತಡೆದು ತಿರುಕಣ್ಣನ್ ಹೇಳಿದ:

"ಹಯ್ಯೋ ಒಂಟೋದ್ಲಲ್ಲಾ ಬುದ್ಧಿ ಒಂದು ವಾರದ ಇಂದೇನೇ.... ಭೇದಿ ಆತ್ಕೊಂಡಿತ್ತು. ಅಂಗೇ ಒಂಟೋಗ್ಲಲ್ಲಾ...."

"ಅಯ್ಯೋ ಪಾಪ! ಎಂಥ ಅನ್ಯಾಯ!"

ತನ್ನ ಬಗ್ಗೆ ಕನಿಕರ ತೋರಿಸುತ್ತಿದ್ದಾರೆ ಎಂದುಕೊಂಡ ತಿರುಕಣ್ಣನ್.

"ಎಂಥ ಅನ್ಯಾಯ! ನಮ್ಮ ಒಂದು ಷೂರ್ ಓಟು ಹೊರಟ್ಹೋಯ್ತಲ್ಲಾ!"

ತಿರುಕಣ್ಣನಿಗೆ ಆಶ್ಚರ್ಯವಾಯಿತು. ಇನ್ನೊಬ್ಬ ಕೇಳಿದ.

"ಯಾವ ಮಿಸ್ಗಪ್ಪಾ ನೀವು ಹೋಗ್ತಿರೋದು?"

"ಅದೂ ಆಗೋಯ್ತು ಬುದ್ಧಿ. ಮನೆಗೆ ಕಳಿಸ್ಬಿಟ್ರು. ನಾಕ್ತಿಂಗ್ಳಾಯ್ತು.... ಅದೇನೋ ತುಂಬಾ ಕಾಯಿಲೆಯಾಗಿತ್ತು. ಇಳಿದೋಗ್ಬಿಟ್ಟಿದ್ದೆ. 'ಈ ಕಾಯಿಲೆ ವಾಸೀನೇ ಆಗಂಗಿಲ್ಲ - ಹೊರಟೋಗು' ಅಂದ್ರು."

"ಎಂಥ ಅನ್ಯಾಯ! ಇದಕ್ಕೋಸ್ಕರವೇ ನಮ್ಮ ಯಜಮಾನರು ಎಲೆಕ್ಷನ್‌ಗೆ ನಿಂತಿದ್ದಾರೆ. ಆರೋಗ್ಯಮ್ಮನ ಓಟಂತೂ ಅನ್ಯಾಯವಾಗಿ ಹಾಳಾಯ್ತು. ನಿನ್ನ ಓಟನ್ನು ಅವರಿಗೆ ದಯಪಾಲ್ಸು" ಇನ್ನೊಬ್ಬ ಹೇಳಿದ.

"ಅಂಗೇ ಆಗ಼್್ಲಿ ಬುದ್ಧಿ."

"ನಿಮ್ಮ ಕೇರೀಲಿ ಇನ್ನೂರೈವತ್ತು ಓಟುಗಳಿವೆ. ಅಷ್ಟನ್ನೂ ನಮ್ಮ ಯಜಮಾನರಿಗೇ ಕೊಡಿಸು. ಎಲೆಕ್ಷನ್ ಆದ್ಮೇಲೆ ನೂರು ರೂಪಾಯಿ ಕೊಡ್ತಾರೆ."

ಅಪನಂಬಿಕೆಯ ಕಣ್ಣಿನಿಂದ ತಿರುಕಣ್ಣನ್ ನೋಡಿದ. ಅವನು ಚೇತರಿಸಿಕೊಂಡು "ನಿಜವಾ ಬುದ್ಧಿ?" ಎಂದು ಕೇಳಬೇಕು ಎನ್ನುವುದರೊಳಗೇ ಕಾರು ಹೊರಟುಹೋಗಿತ್ತು.

ನೂರು ಯಾಕೆ, ಬೇರೆಯವರಿಗೆ ಗೊತ್ತಾದರೆ ಐವತ್ತಕ್ಕೂ ಆ ಕೆಲಸಕ್ಕೆ ಒಪ್ಪಬಹುದು, ಎಂದು ತಿರುಕಣ್ಣನ್ ಲೆಕ್ಕಾಚಾರ ಹಾಕಿದ. ಸ್ವಲ್ಪ ಅಡ್ವಾನ್ಸಾದರೂ ತಗೊಂಡಿದ್ದರೆ—ಎಂದು ಹಲುಬಿದ. ಆ ಯಜಮಾನರ ಮನೆ ಎಲ್ಲಿದೆಯಂತ ಲಾದರೂ ತಿಳಕೊಂಡಿದ್ದರೆ?

o . o o o o

ಮತ್ತೆ ನಿದ್ದೆ ಬರಲಿಲ್ಲ. ಮಗಳನ್ನೆಬ್ಬಿಸಿ ಮಂಡಿ ಸಾಹುಕಾರರ ಮನೆಗೆ, ಮುಸುರೆ ತಿಕ್ಕಲು ಕಳುಹಿಸಿಕೊಟ್ಟ. ಹಿಂದೆ ಆರೋಗ್ಯಮ್ಮ ಮಾಡುತ್ತಿದ್ದ ಕೆಲಸ ಅದು. ತಿರುಕಣ್ಣನ ಪಾಲಿನ ಅದೃಷ್ಟದ ಬಾಗಿಲು ಪೂರ್ಣ ಮುಚ್ಚಿರಲಿಲ್ಲ, ಎಂತಲೇ ತಾಯಿಯ ಕೆಲಸ ಮಗಳಿಗೆ ದೊರಕಿತ್ತು. ಒಪ್ಪೊತ್ತಿನ ಊಟ ಮತ್ತು ಎರಡು ರೂಪಾಯಿ ಸಂಬಳ. ಆ ಎರಡು ರೂಪಾಯಿ ಹುಳಿ ಹೆಂಡದ ಬಾಬತ್ತು. ಸ್ವಂತ ಹೊಟ್ಟೆಗೆ ತಿನ್ನಬೇಕಾದರೆ ತಿರುಕಣ್ಣನ್ ದುಡಿದು ತರಬೇಕಾಗಿತ್ತು. ಸಾಯುವುದಕ್ಕೆ ಮುಂಚೆ ಆರೋಗ್ಯಮ್ಮ ಗಂಡನಿಗೊಂದು ಕೊಡಲಿ ತೆಗೆಸಿಕೊಟ್ಟಿದ್ದಳು. ನಡುವಯಸ್ಸಿನಲ್ಲಿ ಸೌದೆ ಒಡೆಯುವುದನ್ನು ಅವನು ಕಲಿತಿದ್ದ. ಆದರೆ ಅವನದು ಸಹಿಸಲಾಗದ ಕೆಮ್ಮು; ದೇಹವೂ ಬಡಕಲಾಗಿತ್ತು. ಎರಡು ಮಣ ಒಡೆಯುವುದರೊಳಗೆ ಸಾಕೋಸಾಕು ಎನಿಸುತ್ತಿತ್ತು.

ಈ ದಿನ ಕೊಡಲಿಯನ್ನು ಹೆಗಲಿಗೇರಿಸಿಕೊಂಡು ತಿರುಕಣ್ಣ ಹೊರಟಾಗ ಬೆಳಗ್ಗೆ ನಡೆದಿದ್ದ ವಿಚಿತ್ರ ಘಟನೆಯನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಿದ್ದ.

ಅವನ ಮೊದಲ ಹುಡುಗ ಆರು ವರ್ಷಗಳ ಹಿಂದೆಯೇ ಮನೆಬಿಟ್ಟು ಓಡಿಹೋಗಿದ್ದ. ಅವನೂ ಇದ್ದಿದ್ದರೆ? ಅವನಿಗೂ ಒಂದು ಓಟು ಇರುತ್ತಿತ್ತೋ ಏನೋ. ಆರೋಗ್ಯಮ್ಮನೂ ಅಷ್ಟೇ. ಇನ್ನೂ ಒಂದಷ್ಟು ದಿನ ಬದುಕಿದ್ದರೆ? ಅಂತೂ ತನ್ನ ಅದೃಷ್ಟ ಖುಲಾಯಿಸಿತು....ಆರೋಗ್ಯಮ್ಮ ಇದ್ದಿದ್ದರೆ ಅವಳೆದುರು ಜಂಭ ತೋರಿಸಬಹುದಾಗಿತ್ತು.

ಈ ವಿಷಯ ಯಾರಿಗೂ ಹೇಳಬಾರದು, ಎಂದುಕೊಂಡ ತಿರುಕಣ್ಣನ್. ಹೇಳಿದರೆ ಸಿಗುವ ಹಣಕ್ಕೆ ಎಲ್ಲಿ ಕಲ್ಲು ಬೀಳುವುದೋ ಎಂಬ ಭಯ. ಆದರೆ ಸಂಜೆ, ಕೇರಿಯ ಕೆಲಸಗಾರರು ವಾಪಸು ಬರುತ್ತಾರೆ. ಮನೆ ಮುದುಕರೋ ಹುಡುಗರೋ ಕಾರು ಬಂದಿದ್ದ ವಿಷಯ ಹೇಳುತ್ತಾರೆ. ಅಂತೂ ನಡೆದದ್ದನ್ನು ತಾನೂ ಹೇಳಲೇಬೇಕು.

ಮಧ್ಯಾಹ್ನವಾದಮೇಲೆ, ತಿರುಕಣ್ಣನ್ ಮೆಲ್ಲನೆ ಈ ವಿಷಯ ಸೌದೆ ಡಿಪೋದ ವೆಂಕಟಪ್ಪನಿಗೆ ತಿಳಿಸಿ ಸಲಹೆ ಕೇಳಿದ.

"ಅಯ್ಯೋ ಬೆಪ್-ಮಗ್ನೇ....ಇನ್ನೂ ಬತ್ತಾರೆ ಕಣೋ ಒಂದಷ್ಟು ಜನಾ.... ಎಲ್ರೂ ಬೇಡ್ಕೊಂಡು ಬರ್ತಾರೆ. ನನಕ್ಕೊಡಿ ಓಟು ನನಕ್ಕೊಡಿ ಅಂತ....ಎಲ್ಲಾ ಮೋಸ—ಮಕ್ಳ...."

ತಿರುಕಣ್ಣನಿಗೆ ತುಂಬ ನಿರಾಶೆಯಾಯಿತು.

ಕೇರಿಯವರ ಕಾಟ ತಪ್ಪಿಸಿಕೊಳ್ಳಲು ಆ ಸಂಜೆ ತಡವಾಗಿ ತಿರುಕಣ್ಣ ವಾಪಸು ಹೋದ. ಬೆಳಗ್ಗೆ ನಡೆದದ್ದು ಅವನ ಮನಶ್ಶಾಂತಿಯನ್ನು ಕದಡಿತ್ತು. ಅದಕ್ಕೆ ಪರಿಹಾರವಾಗಿ ಅವನು ಆ ಸಂಜೆ ನಾಲ್ಕಾಣೆಯಷ್ಟನ್ನು ಕುಡಿದ; ಬಿಮ್ಮನೆ ಮುಖ ಮಾಡಿಕೊಂಡು, ನಾಲಿಗೆಯನ್ನು ಬಿಗಿಹಿಡಿದು, ಒಂದು ಸ್ವರವನ್ನೂ ಹೊರಡಿಸದೆ, ಬೀದಿಯುದ್ದಕ್ಕೂ ನಡೆದ.

ಮರುದಿನ ಭಾನುವಾರ ಅವನ ಎಲ್ಲ ಭ್ರಮೆಯೂ ಹೊರಟುಹೋಯಿತು. ಕೇರಿಯ ಬೇರೆ ನಾಲ್ಕಾರು ಜನರಿಗೂ ಅದೇ ನೂರು ರೂಪಾಯಿಯ ಆಶ್ವಾಸನೆ ದೊರೆತಿತ್ತಂತೆ!

"ಎಲ್ಲಾ ಮೋಸ! ಥೂ!" ಎಂದು ತಿರುಕಣ್ಣನ್ ಉಗುಳಿದ.

ಆನಂತರದ ದಿನಗಳೆಲ್ಲ ತಮಾಷೆಯಾಗಿದ್ದುವು. ಆ ಕಾರುಗಳ ಓಡಾಟವೇನು! ಗಟ್ಟಿ ಸ್ವರಗಳ ಕಿರಿಚಾಟವೇನು! ಆ ಅಂಗಲಾಚಿ ಬೇಡುವ ಸೌಜನ್ಯವೇನು!

ಒಂದು ಮರವನ್ನೇ ಕಡಿದು ಲಾರಿಯೊಳಗೆ ಇರಿಸಿಕೊಂಡು, "ಮರಕ್ಕೆ ಓಟು ಕೊಡಿ!" ಎನ್ನುತ್ತಿದ್ದರು.

ಇನ್ನೊಂದು ವ್ಯಾನಿನ ಮೇಲೆ ಒಂದು ಗುಡಿಸಲನ್ನೇ ಕಟ್ಟಿದ್ದರು, "ಗುಡಿಸಲು ನಮ್ಮ ಗುರುತು, ನಮ್ಮ ಗುರುತು ಗುಡಿಸಲು"—ಎನ್ನುತ್ತಿದ್ದರು.

ಕೇರಿಯ ಮಕ್ಕಳಂತೂ ದಿನವೂ ಧೂಳೆಬ್ಬಿಸುತ್ತಿದ್ದುವು: "ಯಾರಿಗೆ ಓತ್-ಮರಕ್ಕೆನೇತ್-ಕೋತಿಗೆ ಓತ್-ಓತ್‌ಫಾ ಕಾಂಗ್‌ಲೀಸ್,"....ತಾನೀಗ ಒಬ್ಬ ಕೆಲಸದಾಕೆ ಎಂಬುದನ್ನು ಮರೆತು ತಿರುಕಣ್ಣನ ಮಗಳೂ ಆ ಹುಡುಗರ ಜತೆ ಸೇರುತ್ತಿದ್ದಳು.

ಹಾಗೇ ದಿನ ಕಳೆಯಿತು.

ತಿರುಕಣ್ಣನನ್ನು ಕೇಳಿಕೊಂಡು ಬರುತ್ತಿದ್ದ ಜನ ಬಹಳ.

"ತಿರು-ಕಣ್ಣಾ" ಎಂದೊಬ್ಬನು ಕೂಗಿದರೆ, "ತಿರುಕಣ್ಣ ಇದ್ದಾರೆಯೆ?" ಎಂದಿನ್ನೊಬ್ಬ ರಾಗವಾಗಿ; ಮೂರನೆಯವನು "ತಿರ್ಕಣ್ಣನ್ ಇರ್ಕಾರಾ?" ಎಂತ.

"ಆಗಲಿ ಸಾಮಿ, ಆಗಲಿ ಬುದ್ದೀ, ಕೊಡ್ತೀನಿ ಓಟು" ಎಂದು ಹೇಳಿ ಹೇಳಿ ತಿರುಕಣ್ಣನಿಗೆ ಸಾಕಾಗಿ ಹೋಯಿತು.

...ಮೈಯ ನಿಶ್ಶಕ್ತಿ ಹೆಚ್ಚುತ್ತಿತ್ತು, ರೇಷನ್ ತರಲು ಸಾಕಷ್ಟು ಹಣವೇ ಇರುತ್ತಿರಲಿಲ್ಲ. ಹೆಂಡದಂಗಡಿಯವನು, "ನಿನಗಿನ್ನು ಸಾಲ ಕೊಡೋಕಾಗಲ್ಲ, ಕಾರ್ಖಾನೇಲಿ ಕೆಲ್ಸ ಇದ್ದವರಿಗಷ್ಟೇ ಸಾಲ, ಹೋಗು" ಎಂದು ಖಡಾಖಂಡಿತವಾಗಿ ತಿಳಿಸಿದ್ದ.

ಗುಡಿಸಲಿನ ಬಾಡಿಗೆ ಎರಡು ತಿಂಗಳಿಂದ ಬಾಕಿ ಇತ್ತು. ಅದರ ಮಾಲಿಕ ಹೋದ ತಿಂಗಳೇ ಹೇಳಿದ್ದ: "ನೀನು ಬೇರೆ ಕಡೆಗೆ ಹೋಗೋದು ವಾಸಿ," ಎಂತ.

o o o o o

ಕೆಳಗೆ ಮೂರನೆಯ ಬೀದಿಯಲ್ಲಿ ಒಂದು ಹಳೆಯ ಕಟ್ಟಡವಿತ್ತು, ಯಾಕೋ ಅದರ ಬಾಗಿಲು ತೆರೆಯುತ್ತಿರಲಿಲ್ಲ. ಆ ಜಗಲಿಗೆ ತನ್ನ ಬಿಡಾರ ಸಾಗಿಸಿಬಿಡಬೇಕು ಎಂದು ಕಣ್ಣನ್ ಯೋಚಿಸುತ್ತಿದ್ದ. ಮುಂದೆ ಪೋಲೀಸರು ಬಂದು ಕಾಡಿಸಿದರೆ, ಮಗಳನ್ನು ಮಂಡಿ ಸಾಹುಕಾರರ ಮನೆಯಲ್ಲೇ ಬಿಟ್ಟು ಬಿಡುವುದು. ತಾನು ಸಾದೆ ಡಿಪೋವನ್ನು ಆಶ್ರಯಿಸುವುದು—ಎಂದು ತಿರುಕಣ್ಣನ್ ತೀರ್ಮಾನಕ್ಕೆ ಬಂದ.

ಆ ಸಂಜೆ ಸ್ವಲ್ಪ ಮಟ್ಟಿಗೆ 'ಡಿಂಗಾಗಿ'ಯೇ ಅವನು ಗುಡಿಸಲಿಗೆ ಮರಳಿದ್ದ.

ಅಲ್ಲಿ ಅವನ ಹಟ್ಟಿಯ ಎದುರು ಹತ್ತಾರು ಜನ ಗುಂಪು ಕೂಡಿ ಮಾತ ನಾಡುತ್ತಿದ್ದರು. ನಡುವೆ ಅವರ ಸಂಘದ ಅಧ್ಯಕ್ಷ ರಂಗೇಶಿ.

ಒಬ್ಬ ಯುವಕ ಕೆಲಸಗಾರ ಕೂಗಾಡುತ್ತಿದ್ದ........

"ಎಲ್ಲಾ ಬುಟ್ಬುಡಣ್ಣಾ ರಂಗೇಶಿ, ನಿನ್ತಾವ ಎಲ್ಲೈತೆ ದುಡ್ಡು? ಫ್ಯಾಕ್ಟರಿಯವರು ಅತ್ಸಾವಿರ ಕೊಡ್ತಾರೇಂತ ನೀನೂ ಚುನಾವಣೆಗ ನಿಂತುಕೊಂಡಿದ್ಯ........ ನಂಗೊತ್ತಿಲ್ವಾ! ಹಹ್ಹ!"

ರಂಗೇಶಿ ಶಾಂತನಾಗಿ ಉದ್ದುದ ಭಾಷಣ ಕೊಡಲು ಶುರುಮಾಡಿದ. ಆದರೆ ನೆರೆದಿದ್ದವರಲ್ಲಿ ಬಹಳ ಜನ ಹೊರಟು ಹೋದರು; ಕೂತಿದ್ದವರು ಕೆಲವರು ಮಾತ್ರ. ಏಳುವುದೂ. ಒಂದು ಆಯಾಸದ ಕೆಲಸವೇ ಎಂದು ಕುಳಿತೇ ಇದ್ದರು.

ಕೊನೆಗೆ ರಂಗೇಶಿ ತಿರುಕಣ್ಣನ ಬಳಿಗೆ ಬಂದ.

ಅದೇ ರಂಗೇಶಿ! ಆ ದಿನ ಡಿಸ್‌ಮಿಸ್ ಆದಾಗ ಅವನ ಬಳಿ ಹೋಗಿ ಕಾಲುಹಿಡಿದು ಗೋಗರೆದು ತಿರುಕಣ್ಣ ಅತ್ತಿದ್ದ. ಆಗ, "ನೀನು ಸಂಘದ ಮೆಂಬರಲ್ವಲ್ಲಾ" ಎಂದು ಉತ್ತರ ಬಂದಿತ್ತು. ಅವನನ್ನು ಸಿಗಿದು ಹಾಕಬೇಕು, ಎನ್ನುವಷ್ಟು ಸಿಟ್ಟು ಬಂತು ತಿರುಕಣ್ಣನಿಗೆ.

"ಅಂತೂ ನೀನೂ ನಿಂತ್ಬಿಟ್ಟೆ ಚುನಾವಣೆಗೆ!" ಎಂದ ತಿರುಕಣ್ಣ ವ್ಯಂಗ್ಯವಾಗಿ.

ಅದೇ ಧ್ವನಿಯಲ್ಲಿ ಮತ್ತೂ ಹೇಳಿದ!

"ಆರೋಗ್ಯ ಒಂಟೋದ್ಲು. ಇಲ್ಬಿದ್ರೆ ಎಲ್ಲು ಓಟು ಬರ್‌ತ್ತಿತ್ತು ನಿಂಗೆ!"

"ಇಲ್ಲ ತಿರುಕಣ್ಣ. ನೀನು ಒಳ್ಳೆವನು. ಮಾಲಿಕರಿಗೆ ಹೇಳಿ ಕೆಲಸಕೊಡಿಸ್ತಿನಿ. ಒಂದೇ ಶರ್ತ. ಈ ಕೇರಿಯ ಎಲ್ಲಾ ಓಟನ್ನೂ ನೀನು ನಂಗೇ ಕೊಡಿಸ್ಬೇಕು," ಎಂದು ರಂಗೇಶಿ ವಯ್ಯಾರವಾಗಿ ಹೇಳಿದ.

ತಿರುಕಣ್ಣ ಗಟ್ಟಿಯಾಗಿ ಕರ್ಕಶವಾಗಿ ಉತ್ತರ ಕೊಟ್ಟ:

"ಓಗೋಗು........ಮುಚ್ಕೊಂಡು ಹೋಗು........ನಿನ್ನ ಬಂಡ್ವಾಳ್ವೆಲ್ಲ ಬೀದೀಗೆಳ್ದೀನು........ಓಗ್!"

ಇದಾದ ಮರುದಿನವೇ ಗುಡಿಸಲಿನ ಮಾಲೀಕ ಬಂದು ಗುಡಿಸಲಿನಲ್ಲಿದ್ದ ಕುಡಿಕೆ ಮಡಿಕೆಗಳನ್ನೆಲ್ಲ ಬೀದಿಗೆಳೆದು ತಿರುಕಣ್ಣನನ್ನು ಹೊರ ಹಾಕಿದ. ಬಲು ಸಂಕಟವಾಯಿತು ತಿರುಕಣ್ಣನಿಗೆ. ಗುಡಿಸಲನ್ನು ಬಿಡಬೇಕೆಂದು ತಾನಾಗಿಯೇ

ಹಿಂದೆ ಯೋಚಿಸಿದ್ದಾಗ ಆ ನೋವು ತಿಳಿದಿರಲಿಲ್ಲ. ಈಗ ಬಿಡಲೇಬೇಕಾಗಿ ಬಂದಾಗ ಅವನ ಕರುಳು ಕಿವುಚಿ ಬರುತ್ತಿತ್ತು. ಆ ಹಲವು ನೆನಪುಗಳು... , ಆರೋಗ್ಯಮ್ಮನ ಕೊನೆಯ ದಿನಗಳು.

ಆದರೂ ಅವನು ಬೇರೆ ಗತಿ ಇಲ್ಲದೆ ಆ ಜಗಲಿಗೆ ಹೊರಟು ಹೋದ.

o o o o o

ಚುನಾವಣೆಯ ಸಂಭ್ರಮ ನಡೆದೇ ಇತ್ತು.

ಆ ದಿನ ಮತ್ತೆ ಮೂರು ಪಕ್ಷಗಳ ಸ್ವಯಂಸೇವಕರು ಸೌದೆ ಅಂಗಡಿಗೆ ಬಂದರು. ಕಣ್ಣು ತಪ್ಪಿಸಲು ಎಷ್ಟು ಯತ್ನಿಸಿದರೂ ಗಂಟೆಗಟ್ಟಲೇ ಕಾದು ಅವರು ಅವನನ್ನು ಹಿಡಿಸಿದರು.

"ತಿರುಕಣ್ಣನ್–ತಿರುಕಣ್ಣನ್ ! ನಮಗೆ ಓಟು–ನಮಗೆ!"

ಆ ಸಾಯಂಕಾಲ ಇನ್ನೊಂದು ದೊಡ್ಡ ಕಾರು ಬಂತು. ಅದರ ಎದುರು ಎರಡೆತ್ತುಗಳನ್ನು ಎತ್ತಿ ಕಟ್ಟಿದ್ದರು. ಭಾರೀ ದೇಹದ ವ್ಯಕ್ತಿಯೊಬ್ಬರು ಕೆಳಕ್ಕಿಳಿದರು. ಅವರು "ಕೇರಿಯ ತಿರುಕಣ್ಣ ಇದ್ದಾರೆಯೆ ? ಎಂದು ಕೇಳಿದರು.

ಈ ಸಾರೆ ಗಡಸು ಧ್ವನಿಯಲ್ಲೇ ತಿರುಕಣ್ಣ, "ಯಾಕ್ಸಾಮಿ ?" ಎಂದ.

ಬಂದವರು ದೇಶಾವರಿ ನಗೆ ಬೀರಿದರು. ಅವರ ಜತೆಯಲ್ಲಿದ್ದವನೊಬ್ಬ ಹೇಳಿದ:

"ರಾಯರ ಪರಿಚಯ ಇದೆ ಅಲ್ವೇನಪ್ಪಾ ?"

ತಿರುಕಣ್ಣ ಅವರ ಖಾದಿ ಟೋಪಿಯತ್ತ ನೋಡುತ್ತಾ, "ಓಹೋ ! ಇಲ್ದೆ ?" ಎಂದ.

"ಯಾರು ಹೇಳು ?" ಎಂದರು ಸ್ವತಹ ರಾಯರು.

"ಇನ್ನ್ಯಾರು ಬುದ್ಧಿ ಸರ್ಕಾರದೋರು."

ಕ್ಷಣಕಾಲ ರಾಯರು ಸುಮ್ಮನಾದರು.

ಬಳಿಕ "ನಿಮಗೆ ಸ್ವಾತಂತ್ರ್ಯ ತಂದು ಕೊಟ್ಟ ಕಾಂಗ್ರೆಸ್ಸಿನೋರು. ನೆಹ್ರೂ ಹೇಳಿದ್ದಾರೆ........ನನಗೆ ಓಟು ಹಾಕಪ್ಪ...."

ತನಗೆ ಸ್ವಾತಂತ್ರ್ಯ ತಂದು ಕೊಟ್ಟ ಕಾಂಗ್ರೆಸ್ಸಿನವರನ್ನು ಸ್ಮರಿಸಿ ತಿರುಕಣ್ಣ ನಸುನಕ್ಕ.

........ಬೀದಿಗಳಲ್ಲಿ ಕೂಗಾಟ ಹೆಚ್ಚುತ್ತ ಹೋಯಿತು. 'ಪವಿತ್ರ ಹಕ್ಕನ್ನು ಚಲಾಯಿಸಿ' 'ಘನವಾದ ಓಟನ್ನು ನೀಡಿ' 'ಮತದಾನ ಮಾಡಿ' ನಿಮ್ಮ ಮಕ್ಕಳ ಹೆಸರಲ್ಲಿ, ಮುಂದಿನ ವೀರ ಸಂತಾನದ ಹೆಸರಲ್ಲಿ, ನಿಮ್ಮ ಪವಿತ್ರ ಮತವನ್ನು ದಯಪಾಲಿಸಿ'........

ಮೂರು ವಾರಗಳ ಹಿಂದೆ ಒಂದು ಬೆಳಗು ಮುಂಜಾನೆ ಸ್ವತಂತ್ರ ಕಾರೊಂದು ತನ್ನ ಮನೆ ಬಾಗಿಲಿಗೆ ಬಂದಿದ್ದುದನ್ನು ತಿರುಕಣ್ಣ ಮರೆತುಬಿಟ್ಟಿದ್ದ ನೋಡಿ

ನೋಡಿ ಬೇಜಾರವಾಗಿದ್ದ ದಿನನಿತ್ಯದ ನಾಟಕವಾಗಿತ್ತು. ಆ ಬೀದಿಯ ನೋಟ.

"ಇನ್ನು ಆರೇ ದಿನ-ಐದೇ ದಿನ-ನಾಲ್ಕೇ ದಿನ ಅಗೋ ಇನ್ನು ೪೮ ಗಂಟೆಗಳ ಒಳಗಾಗಿ!"

ಆ ದಿವಸ ಯಾರೂ ಸೌದೆ ಒಡೆಸಲೇ ಇಲ್ಲ. ಡಿಪೋದಲ್ಲೂ ಸೌದೆ ಇರಲಿಲ್ಲ. ಮೂರು ಬಾರಿ ಸೇದಿ ಮುಗಿಸಿದ್ದ ಬೀಡಿಯನ್ನೇ ಮತ್ತೂ ಚೀಪುತ್ತಾ ಅವನು ಒಂದೆಡೆ ಕುಳಿತ.

"ಇನ್ನು ಇಪ್ಪತ್ತನಾಲ್ಕೇ ಗಂಟೆ........ಆದೋ ಆ ಸುಪ್ರಭಾತದಲ್ಲಿ.... ಭಾರತೀಯ ಸಂಸ್ಕೃತಿ....

ಆ ಮಾತುಗಳಿಗೆಲ್ಲ ಯಾವ ಅರ್ಥವೂ ಇದ್ದಂತೆ ತೋರಲಿಲ್ಲ ತಿರುಕಣ್ಣನಿಗೆ.

....ಚುನಾವಣೆಯ ದಿನ ಬಂತು. ಯಾವ ಗದ್ದಲವೂ ಆ ಬೆಳಗ್ಗೆ ಕೇಳಿಸಲಿಲ್ಲ. "ಅಂತೂ ಪೀಡೆ ತೊಲಗಿತು!" ಎಂದುಕೊಂಡ ತಿರುಕಣ್ಣ. ಮಗಳ ಮೇಲೂ ತಾನೂ ಮತ್ತೊಮ್ಮೆ ಕಂಬಳಿಯ ಮುಸುಕನ್ನೆಳೆದು, ಮಲಗಿದ.

ಬಿಸಿಲೇರಿತು.

ತಿರುಕಣ್ಣ ಎದ್ದು ಕುಳಿತ.

ಬಹುಶಃ ತನಗಾಗಿ ಆ ದೊಡ್ಡ ಮನುಷ್ಯರೆಲ್ಲ ಹುಡುಕುತಿರಬಹುದು ಎಂಬ ಯೋಚನೆ ಬಂತು. ಅದರಿಂದ ಒಂದು ರೀತಿಯ ಸಮಾಧಾನವೇ ಆಯಿತು ಆತನಿಗೆ. ಭಿಕ್ಷೆ ಬೇಡಿಕೊಂಡು, ದಾನ ಕೇಳಿಕೊಂಡು, ತನ್ನ ಬಳಿಗೂ ಬರುವ ವರಿದ್ದಾರಲ್ಲಾ ಎಂಬ ಹೆಮ್ಮೆ ಅವನಿಗೆ. ಆದರೆ ಅದು ಒಣ ಹೆಮ್ಮೆ. ಅವನ ಕೆಮ್ಮು ಇದ್ದ ಹಾಗೆ.

ಆ ನೂರು ರೂಪಾಯಿ ಬರಲೇ ಇಲ್ಲ. ಆ ರಂಗೇಶಿಯ ಕಾಲು ಹಿಡಿದಿದ್ದರೆ, ಅಥವಾ ಆ ಮರಕ್ಕೋ ಗುಡಿಸಲಿಗೋ ಆತುಕೊಂಡಿದ್ದರೆ ಅಥವಾ ಎತ್ತಿನ ಹಿಂದೆ ಯಾದರೂ ಓಡಿದ್ದರೆ, ಏನಾದರೂ ಪ್ರಯೋಜನವಾಗುತ್ತಿತ್ತೋ ಏನೋ. ಜೀವ ಮಾನವೆಲ್ಲಾ ದೇಹಶ್ರಮವನ್ನು ಮಾರಿಯೇ ಬದುಕಿದ ಆ ಜೀವಕ್ಕೆ ಈ ಮಾರಾಟ ವೇನೂ ಹೊಸದಲ್ಲ. ಆದರೆ ಅವನ ಕಣ್ಣಿಗೆ ಕಾಣದೇ ಇದ್ದ, ರಹಸ್ಯಮಯವಾದ, ಆರೋಗ್ಯಮ್ಮನ ಹೆಸರಿನ ಜತೆಯಲ್ಲೇ ಬರೆಯಲ್ಪಟ್ಟಿದ್ದ, ತನ್ನ ಹಕ್ಕೆಂದು ಹೇಳ ಲಾದ ಒಂದು ಓಟನ್ನು ಮಾರಲು ಅವನ ಮನಸ್ಸು ಒಡಂಬಡಲಿಲ್ಲ.

o o o o o

ಮಧ್ಯಾಹ್ನ ಬಂತು. ಮಗಳು ಆಗಲೇ ಹೊರಟು ಹೋಗಿದ್ದಳು. ಹೊಟ್ಟೆ ಚುರುಕೆನ್ನುತ್ತಿತ್ತು. ಇದ್ದ ಬಿಡಿ ಕಾಸುಗಳನ್ನು ಜೇಬಿಗೆ ಸೇರಿಸಿ ತಿರುಕಣ್ಣ ಹೊರ ಹೊರಡಲು ತೀರ್ಮಾನಿಸಿದ. ಆದರೆ ಮರುಕ್ಷಣದಲ್ಲೇ ಆತನಿಗೆ ಭಯ ವಾಯಿತು. ಆ ಉಮೇದುವಾರರೆಲ್ಲಾದರೂ ತನ್ನನ್ನು ಕಂಡು ಹಿಡಿದರೆ?.... ಯೋಚಿಸಿದಂತೆಲ್ಲ ಆ ಭಯ ಹೆಚ್ಚಿತು.

ಅಂತೂ ಹೊಟ್ಟೆ ಕೇಳದೆ ಇದ್ದಾಗ ತಿರುಕಣ್ಣ ಮೆಲ್ಲನೆ ಬೀದಿಗೆ ನುಸುಳಿ ಆರು ಕಾಸಿನ ಕಡಲೆಕಾಯಿಯನ್ನೂ ಮೂರು ಕಾಸಿನ ಬೀಡಿಯನ್ನೂ ತಂದ. ಕಡಲೆ ಕಾಯಿ ಭೋಜನವಾದ ಮೇಲೆ ಮತ್ತೊಮ್ಮೆ ನುಸುಳಿ ಹೋಗಿ ಬೀದಿ ನಳ್ಳಿಯ ನೀರು ಕುಡಿದು ಬಂದ. ಬೀಡಿ ಹಚ್ಚಿ, ಹೊಗೆಯಾಡುತ್ತಿದ್ದುದನ್ನು ಮೋಜಿನಿಂದ ನೋಡಿದ.

ಈಗ ಓಟು ಕೊಡುವ ಉತ್ಸವ ನಡೆಯುತ್ತಿರಬಹುದೇನೋ. ಅದನ್ನು ನೋಡುವ ಕುತೂಹಲವುಂಟಾಯಿತು ಕ್ಷಣ ಕಾಲ. ಅದು ಹೇಗಿರುವುದೋ ಏನೋ! ಆದರೂ ಹೆದರಿಕೆ! ಯಜ್ಞದ ಪಶುವಾಗಿ ತನ್ನನ್ನೂ ಹಿಡಿದೊಯ್ದರೆ?

ತಿರುಕಣ್ಣ ಸ್ವಲ್ಪಹೊತ್ತು ಮಲಗಿಕೊಂಡ. ನಿದ್ದೆ ಬರಲಿಲ್ಲ. ಎಳೆಂಟು ವರ್ಷಗಳ ಹುಡುಗನಿದ್ದಾಗಲೇ ಅವನು ದುಡಿತ ಆರಂಭಿಸಿದ್ದ. ಅಂತೂ ನಾಲ್ವತ್ತು ವರ್ಷಗಳ ದುಡಿಮೆ ಮುಗಿದ ಹಾಗಾಗಿತ್ತು....ಆ ವರ್ಷಗಳು...."

ತಿರುಕಣ್ಣನಿಗೆ ಏನೇನೋ ನೆನಪಾಗತೊಡಗಿತು ...

ಆತ ಎದ್ದು ಕುಳಿತು, ಮನಸ್ಸನ್ನು ಹಿಂಡುವ ಈ ಯೋಚನೆಗಳನ್ನೆಲ್ಲ ಬದಿಗೆ ತಳ್ಳುವ ಹಾಗೆ ಒಂದಿಷ್ಟು ಹೆಂಡ ಗಂಟಲೊಳಗೆ ಇಳಿಬಿಡುವುದು ಸಾಧ್ಯವಾಗಿದ್ದರೆ! ಯಾರಾದರೂ ನಾಲ್ಕು ಪುಡಿಕಾಸು ದಾನ ಮಾಡಿದರೆ? ಯಾವನಾದರೂ ಸ್ನೇಹಿತ ಕಂಡು ಬಂದರೆ?

ಲೋಹ ಚುಂಬಕದ ಹಾಗೆ ಪಡಖಾನೆ ಅವನನ್ನು ಸೆಳೆಯುತ್ತಿತ್ತು.

ಸಂಜೆಯ ಹೊತ್ತು ತಿರುಕಣ್ಣ ಬೀದಿಗಿಳಿದ. ಕುರುಚಲು ಗಡ್ಡದ ಕೆದರಿದ ಕೂದಲು, ಮಾಸಿದ ಹರಕು ಬಟ್ಟೆಯ, ಕೊಳಕು ದೇಹದ, ತಿರುಕಣ್ಣ ಮೆಲ್ಲನೆ ನಡೆದು ಹೋದ.

ಅಲ್ಲೇ–ಆ ಸ್ಕೂಲಿನಲ್ಲೇ—!

ಓ! ಅವನಿಗೆ ಗೊತ್ತೇ ಇರಲಿಲ್ಲ!

ಪ್ರಮಾದ ನಡೆದುಬಿಟ್ಟಿತ್ತು.

ಮೊದಲ ದಿನ ಕಾರಿನಲ್ಲಿ ಬಂದವರಲ್ಲಿ ಒಬ್ಬ ತಿರುಕಣ್ಣನ ಗುರುತು ಹಿಡಿದ.

"ಓ ಮಿಸ್ಟರ್ ತಿರುಕಣ್ಣ........"

"ತಿರುಕಣ್ಣ? ಎಲ್ಲಿ? ಬಂದರೇ?"

"ಇನ್ನು ಎರಡೇ ನಿಮಿಷ ಇದೆ."

"ಬನ್ನಿ ಹೀಗೆ ಬನ್ನಿ"........

"ಆಲದ ಮರ!"

"ಎತ್ತು!"

"ಗುಡಿಸಲು!"

"ಕಾರು!"

"ಅಯ್ಯಾ, ದೀಪ!"

"ಬುದ್ಧಿ!"

ನಾಲ್ಕು ಜನ ತಿರುಕಣ್ಣನನ್ನು ಸುತ್ತುವರಿದರು. ಉಳಿದವರು ಹಿಂದೂ ಮುಂದೂ ಓಡಾಡಿದರು. ಪ್ರತಿಭಟಿಸುವ ಶಕ್ತಿ ಇರಲಿಲ್ಲ ತಿರುಕಣ್ಣನಿಗೆ. ಅವನ ತೆರೆದ ತುಟಿಗಳು ನಗುತ್ತಲೇ ಇದ್ದುವು.

ಒಬ್ಬ ಪೋಲೀಸಿನವನು ಬಂದು ತಿರುಕಣ್ಣನನ್ನು ಕೆಂಗಣ್ಣಿನಿಂದ ನೋಡಿದ.

"ಏನ್ಸಾರ್? ಆತ ಗಲಾಟೆ ಮಾಡ್ತಿದಾನಾ? ಇಲ್ಕೊಡಿ........ಲಾಕಪ್ಪಿಗೆ ಸೇರಿಸ್ತೀನಿ."

ತಿರುಕಣ್ಣನ ಮುಖ ಬಿಳಿಚಿಕೊಂಡಿತು. ಆದರೆ ಓಟಿನವರು ಪೋಲೀಸಿನವರನ್ನು ದಿಗ್ಭ್ರಮೆಗೊಳಿಸಿದರು.

"ಇನ್ನೊಂದೇ ನಿಮಿಷ ಉಳಿದಿರೋದು, ಹೀಗೆ ಬನ್ನಿ."

"೯೭ ೦೦೬೮೩ ತಿರುಕಣ್ಣನ್! ೯೭ ೦೦೬೮೪ ಹೆಂಡತಿ ಆರೋಗ್ಯಮ್ಮ ಸತ್ಹೋಗಿದಾಳೆ."

ತಿರುಕಣ್ಣನಿಗೆ ಬವಳಿ ಬಂತು. ಕೈಕಾಲುಗಳು ಕುಸಿದು, ಬೀಳುವ ಹಾಗಾಯಿತು.

ಅಷ್ಟರಲ್ಲೇ—ಗಂಟೆ ಬಾರಿಸಿದರು.

ಎಲ್ಲರೂ ತಿರುಕಣ್ಣನ ಕೈ ಬಿಟ್ಟರು. ಆತ ದೇಹವನ್ನೆಳೆದುಕೊಂಡು ಬದಿಗೆ ಸರಿದ.

"ಅನ್ಯಾಯವಾಗಿ ನಮ್ಮ ಒಂದು ಓಟು, ತಿರುಕಣ್ಣನ ಓಟು ವ್ಯರ್ಥವಾಯಿತಲ್ಲ."

"ಅನ್ಯಾಯ! ಅನ್ಯಾಯ!"

ಚೇತರಿಸಿಕೊಂಡು ತಿರುಕಣ್ಣ ಹೇಳಿದ:

"ಓಗ್ಲೀಳಿ....ಅನ್ಯಾಯ ಏನ್ಬಂತು?"

ದೊಡ್ಡ ಮನುಷ್ಯರೊಬ್ಬರು ರೇಗಿಕೊಂಡು ಕೂಗಿದರು:

"ನಿನಗೇನು ಗೊತ್ತೊ ಮುಠ್ಠಾಳ? ಒಂದು ಓಟಿನ ಬೆಲೆ ನಿನಗೇನು ಗೊತ್ತು?"

ಇನ್ನೊಬ್ಬರು ಬಂದು ಕೇಳಿದರು:

"ತಿರುಕಣ್ಣನ್ ಓಟು 'ಪೋಲು' ಮಾಡಿದರೆ?"

ಯಾರೋ ಉತ್ತರ ಕೊಟ್ಟರು:

"ಇಲ್ಲ, ತಿರುಕಣ್ಣ ಈ ಸಾರಿ ಓಟು 'ಪೋಲು' ಮಾಡಲಿಲ್ಲ!"

೧೯೫೨

ಒಂಟಿ ನಕ್ಷತ್ರ ನಕ್ಕಿತು

೧

ಶುಭ ಮುಹೂರ್ತ ಸನ್ನಿಹಿತವಾಗಿತ್ತು.

ಅಡ್ಡಪಂಚೆಯ ಮೇಲೆ ರೇಶಿಮೆಯ ಅಂಗಿತೊಟ್ಟು, ರಾಮ ಗುಡಿಸಲಿನಿಂದ ಹೊರಬಂದ. ಮದುವೆಗೆಂದು ಹಿಂದೆ ಹೊಲಿಸಿದ್ದ ಆ ಅಂಗಿ, ಬೆಳೆದ ಮೈ ಮಾಂಸಖಂಡಗಳಿಗೆ ಹೊದಿಕೆಯಾಗಿ ಈಗ ಬಿರಿಯುತ್ತಿತ್ತು. ತುಂಬು ಮುಖಕ್ಕೆ ಶೋಭೆಯಾಗಿತ್ತು ಕುಡಿಮೀಸೆ. ನೀಳವಾಗಿತ್ತು ತಲೆಗೂದಲು.

ಅಲ್ಲಿಯೇ ಹಿತ್ತಿಲ ಬೇಲಿಗೊರಗಿ ನಿಂತಿದ್ದ ಲಚ್ಚಿ, ನೋವಿನ ಆಯಾಸದ ನಿಟ್ಟುಸಿರು ಬಿಟ್ಟು, ಕಾತರ ತುಂಬಿದ ಧ್ವನಿಯಲ್ಲಿ ಕೇಳಿದಳು:

"ನೀವೂ ಓಗ್ತೀರಾ?"

"ಊಂ. ಬಿನ್ನೆ ಬಂದ್ಬಿಡ್ತೀವಿ," ಎನ್ನುತ್ತ ಆತ, ಗುಡಿಸಲ ಕಡೆಗೆ ನೋಡಿ, ಅಸಹನೆಯ ಸ್ವರದಲ್ಲಿ ಕರೆದ:

"ಅಪ್ಪಾ! ಒತ್ತಾಗೋಯ್ತು! ಒರಡಾನ!"

ಹೊರಬಂದವನು ಮನೆಯ ಹಿರಿಯ. ಮಾಸಿದ ಪಂಚೆ. ಹರಕಲು ಅಂಗಿಯ ಮೇಲಿದ್ದ ಹಳೆಯ ಕೋಟು. ಇಳಿಮುಖವಾಗಿದ್ದ ಬಿಳಿಮೀಸೆ. ಸುಕ್ಕುಗಳನ್ನು ಆವರಿಸಿದ್ದ ನರೆತ ಗಡ್ಡ. ತೆಳ್ಳಗಾಗಿದ್ದ ತಲೆಗೂದಲನ್ನು ಮುಚ್ಚಿದ್ದ ರುಮಾಲು. ಅಪನಂಬಿಕೆಯ ನೆಟ್ಟನೋಟವಾಗಿ ಹೆಪ್ಪುಗಟ್ಟಿದ್ದ ಕಣ್ಣುಗಳು. ಎಕ್ಕಡ ಮೆಟ್ಟಿ ಆತನೆಂದ:

"ನಡಿ."

ಸೊಸೆಯನ್ನು ಹುಡುಕಿಬಂದ ಮನೆಯೊಡತಿ, ಬಾಗಿಲಲ್ಲೆ ತಡೆದು ನಿಂತಳು. ಮನೆಬಿಟ್ಟು ಹೊರಟಿದ್ದ ಮಗನನ್ನೂ ತನ್ನವನನ್ನೂ ಕಂಡಳು:

ಅವಳನ್ನು ದಿಟ್ಟಿಸಿ ಹಿರಿಯನೆಂದ:

"ಅದೇನೈತೋ ನೋಡ್ಬರ್ತೀನಿ."

........ಬಿಸಿಲು. ಸೂರ್ಯ ನೆತ್ತಿಯಾಚೆಗೆ ಆಗಲೆ ಸರಿದಿದ್ದರೂ ಚುರುಕು ಮುಟ್ಟಿಸುತ್ತಿದ್ದ ಖಾರಬಿಸಿಲು. ಬೇಸಗೆಯೇನೊ ಮುಗಿಯುತ್ತ ಬಂದಿತ್ತು. ಆದರೆ,

ಮೋಡಗಳ ಸುಳಿವಿರಲಿಲ್ಲ. ಹಾದಿ ನಡೆಯುತ್ತಿದ್ದ ಹಿರಿಯನನ್ನು,ಎಂದಿನ ಸಂಕಟವೇ ಇಂದೂ ಬಾಧಿಸಿತು. ಮತ್ತೂ ಹತ್ತಾರು ದಿನ ಮಳೆ ಬರದೇ ಹೋದರೆ? ಈ ಸಲದ ಬಿತ್ತನೆಯಲ್ಲಿ ಕ್ಷಾಮರಾಕ್ಷಸ ಹೊಂಚುಹಾಕುತ್ತ ಅಡಗಿ ಕುಳಿತಿದ್ದ. ತಾಯ್ನೆಲ ಭಣಗುಡುತ್ತಿತ್ತು. ಪರೆಕಳಚಿದ ಹಾವು, ಪ್ರಕೃತಿ. ಉದ್ದಕ್ಕೂ ಒರಗಿತ್ತು ಆ ಬಿಳಿಯ ಪರೆ. ಪುಡಿಪುಡಿಯಾಗಿದ್ದ ಕಣಕಣವಾಗಿದ್ದ ಕಾಲುಹಾದಿ. ದಾರಿ ತುಳಿಯುತ್ತ ಆ ಬಿಳಿಯ ಗೆರೆಯನ್ನು ಹಿರಿಯ ನೋಡಿದ. ದೃಷ್ಟಿಯೊಡನೆ ನಡು ಬಾಗಿತು. ಹೃದಯದ ಭಾರದಿಂದ ತಪ್ಪಿಸಿಕೊಂಡ ಬಿಸಿಯುಸಿರು ದೀರ್ಘವಾಗಿ ಹೊರಬಂತು.

ಹಿರಿಯನ ಸಂಕಟವನ್ನು ಗ್ರಹಿಸಿದ ರಾಮು, ಕನಸಿನ ಲೋಕದಿಂದ ಕೆಳಕ್ಕಿಳಿದು ಬಂದ. ಎಂದಿಗಿಂತ ಭಿನ್ನವಾದ ಆ ದಿನದಲ್ಲೂ ಆ ಹೊತ್ತಿನಲ್ಲೂ ಹಾಗಿರಬೇಕೆ ತನ್ನ ತಂದೆ?

"ಏನಪ್ಪಾ ಅದು ?"

"ಈ ದುರ್ಗತಿ ನಮಗೆ ಬಂತಲ್ಲಾ ಅಂತ ಯೋಚಿಸ್ತಿದ್ದೆ, ಮಗಾ."

"ಸಾಕು, ಸಾಕು! ನಿನ್ನದು ಯಾವಾಗಲೂ ಒಂದೇ ಹಾಡು!"

ಬಿಸಿಲಿನಷ್ಟೇ ಬಿಸಿಯಾಗಿದ್ದ ಉಗುಳನ್ನು ಹಿರಿಯ ನುಂಗಿದ. 'ಉಚ್ಮುಂಡೆ!' ಎಂದುಕೊಂಡ ಮನಸಿನಲ್ಲೆ. 'ಒಂದೇ ಹಾಡು'........ಹೂಂ........ಹೀಗಾಗ ಬಹುದೂಂತ ಯಾರಿಗೆ ಗೊತ್ತಿತ್ತು? ತನ್ನ ಹಿರಿಯ ಮಗನಿಗೇ ಈ ರೀತಿ ಹುಚ್ಚು ಹಿಡಿಯುವುದೆಂದರೆ? ಸಾಲದುದಕ್ಕೆ, ಶಹರದಲ್ಲಿ ಓದುತ್ತಿದ್ದ ಎರಡನೆಯ ಮಗ ಕೃಷ್ಣ ಕೂಡಾ........

'ಕಲಿಗಾಲ....'

೨

ಕೆಟ್ಟ ಸುದ್ದಿಯನ್ನು ಕೇಳಿದ ಆ ದಿನ, ತನ್ನ ಓರಗೆಯವರೆಷ್ಟೋ ಜನ ನಕ್ಕಿದ್ದರು.

—'ಆದರೆ ಹೋದರೆ, ಅಜ್ಜಿಗೆ ಮೀಸೆ ಬಂದರೆ....!'

—'ಐ—ಬಿಡಿ!'

ಗಾಳಿಯಲ್ಲಿ ಸುದ್ದಿ, ತೇಲಿ ಬಂದಿತ್ತು—ತೇಲಿ ಹೋಗಿತ್ತು.

ಸ್ವಲ್ಪ ಸಮಯದ ಅನಂತರ, ಅದನ್ನೆಲ್ಲರೂ ಮರೆತಿದ್ದ ಹೊತ್ತಿಗೆ, ಹೊಸ ಜನ ಅಲ್ಲಿಗೆ ಬಂದರು—ಹ್ಯಾಟು ಬೂಟು ತೊಟ್ಟ ಅಪರಿಚಿತರು ಅವರ ಹಿಂದೂ ಮುಂದೂ ಓಡಾಡಿದರು ಗ್ರಾಮಾಧಿಕಾರಿಗಳು.

—'ಹಳ್ಳಿಯನ್ನು ಬಿಟ್ಟುಹೋಗ್ಬೇಕು.'

—['ಅಹಾ! ಎಲ್ಲಿಗೆ ಯಾರಪ್ಪನ ಮನೆಗೆ?']

—'ಏ ಗೌಡ! ನೀನೊಬ್ಬನೇ ಅಲ್ಲ ಕಣಯ್ಯ!'

—'ರೀ, ಗೌರವ ಕೊಟ್ಟು ಮಾತನಾಡಿ.'

'Oh! I see'

—'ಒಟ್ಟು ಹನ್ನೆರಡು ಹಳ್ಳಿ ಖಾಲಿಯಾಗ್ತವೆ.'

—'ಅನ್ನೆರಡು ಅಳ್ಳಿ?'

—'ಹೂಂ. ದೇಸಾಯರು, ಜೋಡೀದಾರ್ರು, ಇನಾಂದಾರ್ರು—ಎಲ್ರೂ ಒಪ್ಕೊಂಡಿದ್ದಾರೆ. ಸಣ್ಣ ಪುಟ್ಟ ಆಸ್ತಿ ಇರೋ ನಿಮ್ಮದೇನಪ್ಪ ಇನ್ನು?'

ಮಹಾ ಬುದ್ಧಿವಂತರೇ ಸರಿ. ಚತುರೋಪಾಯಗಳೂ ಗೊತ್ತಿದ್ದುವು ಅವರಿಗೆ. ಪರಿಹಾರ—ಹಣ. 'ಬೇರೆ ಕಡೆ ಭೂಮಿ ಕೊಂಡ್ಕೋಬಹುದು.' ಅಥವಾ ಹೊಲಕ್ಕೆ ಬದಲು ಹೊಲ [ಬಂಜರು ಭೂಮಿಗೇನು ಬರಗಾಲ?]. ಸಾವಿರಾರು ಜನರಿಗೆ ಕೆಲಸ ಬೇರೆ.

"ಕೆಲಸ? ಎಂಥ ಕೆಲಸ?"

"ಕೂಲಿ ಕೆಲಸ."

"ಕೂಲಿ—? ನಾವು ರೈತರು. ಕೂಲಿ-ನಾಲಿ ಮಾಡೋವರಲ್ಲ!"

"ಈ ರೈತರಿಗೆ ಒಂದೂ ಅರ್ಥವಾಗೋದಿಲ್ಲ."

"ಹುಂ!"

"ಈ ಹಳ್ಳಿಗಳೆಲ್ಲ ನೀರಿನ ಕೆಳಗೆ ಮುಳುಗುತ್ವೆ ಗೌಡರೆ!"

"ನೀರಿನ ಕೆಳಗೆ? ಮುಣಾಗುತ್ವೆ?"

"ಹೌದು. ಸಾವಿರ ಎಕರೆ ಮುಳುಗಿದರೇನ್ರಿ? ಲಕ್ಷ ಎಕರೆ ಭೂಮಿಗೆ ನೀರು ಸಿಗುತ್ತೆ. ಅಷ್ಟೇ ಅಲ್ಲ—"

"ಸಾಕು! ಸಾಕು!"

ಸಿಡಿಮಿಡಿಗೊಂಡ ತಾನು ದಡದಡನೆ ಅಲ್ಲಿಂದ ಹೊರಟುಬಿಟ್ಟಿದ್ದ. ರಾಮ ಮಾತ್ರ, ಆ ಜನರ ಜತೆಯಲ್ಲಿ, ಮಾತುಗಳಿಗೆ ಕಿವಿಗೊಡುತ್ತ, ನಿಂತಿದ್ದ. ಹುಚ್ಮುಂಡೆ! ಕತ್ತಲಾಗುವ ಹೊತ್ತಿಗೆ ಮನೆಗೆ ಬಂದ.

"ಅಲ್ಲೇನೊ ಮಾಡ್ತಿದ್ದೆ ಇಷ್ಟೊತ್ತು?"

"ಇಕಾ, ಕಾಜಗ ಕೊಟ್ಟವ್ರೆ. ಇದರೊಳಗೆಲ್ಲಾ ಪಿರಿಂಟ್ ಮಾಡೈತೆ."

"ಪಿರಿಂಟ್ ಮಾಡೈತೆ—ಮಣ್ಣು!"

o o o o o

ಮುಂದೆ ಆಗಬೇಕಾಗಿದುದು ಆಗಿಯೇ ಹೋಯಿತು. ರಾಮ ಹಲ್ಲವಿ ನುಡಿದ: "ನಡಿ, ಓಗಾನ. ಎಲ್ಲಾರಿಗಾಗೋದು ನಮಗೂ ಆಗ್ತೇತೆ."

ಹೊಲವನ್ನು ಮಾರಲಿಲ್ಲ ನಾನು. ಬದಲಿ ಭೂಮಿಯನ್ನು ಕೊಟ್ಟರು. ಮೂರೆಕರೆಗೆ ಮೂರೆಕರೆ. ನದಿಯ ದಂಡೆಯಲ್ಲಲ್ಲ. ಕೆಳಕ್ಕೆ, ಒಳಕ್ಕೆ.

ಹುಟ್ಟಿ ಬೆಳೆದ ಹಳ್ಳಿಯ ಹನುಮಂತರಾಯನ ಗುಡಿಯ ಮುಂದೆ ನಿಂತು ನಾನೆಂದೆ:

"ಓಗ್ಬರ್‍ತ್ರೀವಪ್ಪಾ. ಅಳ್ಳಿ ಮುಣಿಗಿಸ್ತಾರೆ. ನಿನ್ನನ್ನು ಮುಣಿಗಿಸೋಕಾತದಾ? ಮನಿಸ್ಯರು ತಿಳೀದೆ ತಪ್ಮಾಡ್ತಾ ಅವರೆ. ಕ್ಸಮ್ಸಪ್ಪಾ."

ವಲಸೆ ಬಂದವರನ್ನು ಅಣಕಿಸಿತು ಬರಿದಾಗಿದ್ದ ಹೊಸ ಮಣ್ಣು. ಆ ನೆಲಕ್ಕೆ ಕೈ ಬಡೆದು, ಅಂಥ ಸ್ಥಿತಿಗೆ ನಮ್ಮನ್ನು ತಂದವರಿಗೆ ನಾನು ಶಾಪವಿತ್ತೆ ; ಹಣೆ ಚಚ್ಚಿ ಕೊಂಡು ಮನದಣಿಯೆ ಅತ್ತೆ.

....ಆ ದಿವಸದಿಂದ ಇವತ್ತಿನವರೆಗೆ—ಈ ಮೂರು ವರ್ಷಗಳ ಕಾಲ— ಏನನ್ನೆಲ್ಲ ಕಂಡೆ ನಾನು !

ಮೊದಮೊದಲು, ಎಲ್ಲೋ ಕೇಳಿದ ಯಾವುದೋ ಸುದ್ದಿ ಎನ್ನುವ ಹಾಗೆ— ಬಳಿಕ ಉತ್ಸಾಹದಿಂದ—ನನ್ನ ಮಗ ರಾಮನೇ ಬಂದು ಹೇಳುತ್ತಿದ್ದ :

"ಎಲ್ರೂ ಬಂದ್ಬಿಟ್ಟವ್ರೆ. ನದೀಲಿ ತಳ ಎಷ್ಟು ಆಳಕ್ಕೈತೆ ಅಂತ ಭೈರಿಗೆ ಕೊರೆದು ನೋಡ್ತವ್ರೆ. ದೊಡ್ಡೊಡ್ಡ ಲಾರಿಗ್ಳು ಬಂದವೆ—ಅತ್ತಿಪ್ಪತ್ತು. ಮಿಸ್ನು ಗಳೂ ಯಂತ್ರಗಳೂ ಬಂದ್ಬಿಟ್ಟವೆ. ಆದೇನೋ ಕ್ರೇನೂಂತ ತಗೊಂಡ್ಬಂದವ್ರೆ ಅಪ್ಪಾ. ತೆಂಗಿನಮರದಂಗೆ ಎತ್ತರಕ್ಕೈತೆ.ಎಂಗ್ಬೇಕಾದರೂ ತಿರುಗ್ತೇತೆ. ಕೈಯಿಂದ ಕಡ್ಡೀನ ಇಂಗೆತ್ತಿ ಅಂಗ್ಮಡಾಕಿಲ್ವಾ ನಾವು ?—ಅಂಗೇನೆ, ಎಸ್ಟ್ ಬಾರದ್ದಾಪಾ ನಿದ್ರೂ ಒಂದ್ಕಡೆಯಿಂದ ಇನ್ನೊಂದ್ಕಡೆಗಿಡ್ತೇತೆ."

ನಮ್ಮ ನದಿ. ಬೇಸಗೆಯಲ್ಲಿ ಕಿರುಬೆರಳಿನಷ್ಟು ನೀರು. ಮಳೆ ಬಂದಾಗ ಕೆರಳಿದ ಮಹಾ ಕಾಳಿ. ಏನಾದರೇನು ? ಮನುಷ್ಯ ಮಾಡುವ ತಪ್ಪಿಗೆ, ಅದು ದೇವರು ಕೊಡುವ ಶಿಕ್ಷೆ. ಅಂಥ ದೇವರ ಶಕ್ತಿಯೊಡನೆ ಈ ಜನರ ಸೆಣಸಾಟ. ನಾಸ್ತಿಕರು ! ಹುಂ !

ರಾಮನೆಂದ :

"ಹಾಫೀಸರ್‌ಗಳಲ್ಲಿ ಬಿರಾಮರು, ಲಿಂಗವಂತರು, ಒಕ್ಕಲಿಗರು, ಸಾಬರು, ಕಿರಸ್ತಾನರು—ಎಲ್ಲಾ ಜಾತಿಯವರೂ ಅವರೆ."

ಕಟ್ಟುನಿಟ್ಟಾಗಿ ನಾನೆಂದೆ :

"ಅವರ ಜತೆ ನೀನು ಸೇರ್‍ಕೊಬ್ಯಾಡ."

ದಿನ ಕಳೆದ ಹಾಗೆ ಜನರೆಲ್ಲ ಅವರ ಜತೆ ಸೇರಿದರು. ಕೆಲಸದ ಜಾಗಕ್ಕೆ ಅಂಟಿಕೊಂಡೇ ಊರು ಹುಟ್ಟಿತು. ಎಲ್ಲೆಲ್ಲಿಂದಲೊ ಜನರು ಬಂದರು. ಸಾವಿರ— ಹತ್ತು ಸಾವಿರ—ಇಪ್ಪತ್ತು ಸಾವಿರ ಜನ. ಹೆಣ್ಣಾಳು, ಗಂಡಾಳು. ಹಟ್ಟಿಗಳನ್ನು ಕಟ್ಟಿದರು. ಜತೆಯಲ್ಲೆ ಹೋಟೆಲು ಬಂತು....ದಿನಸಿನಂಗಡಿ, ಹೆಂಡದಂಗಡಿ....

ಮಣ್ಣು ಅಗೆಯುವವರು, ಕಲ್ಲು ಕಡಿಯುವವರು....ಮನುಷ್ಯರು, ಯಂತ್ರಗಳು. ಕಿವಿ ಕಿವುಡಾಗುವ ಹಾಗೆ ಹಗಲೆಲ್ಲ ಸದ್ದು. ಮಣ್ಣು ತೋಡಿ ಕಲ್ಲೆರಚಿದರು. ಕಲ್ಲು, ಗಾರೆ; ಕಲ್ಲು ಗಾರೆ.

'ಮಳೆ ಬರಲಿ, ಆಗ ತಿಳೀತದೆ,' ಎಂದುಕೊಂಡೆ.

ಮಳೆ ಬಂತು. ಕಟ್ಟಿದ್ದು ಮಿಸುಕಲಿಲ್ಲ.

ನವರಾತ್ರಿಯ ರಜೆಯಲ್ಲಿ ಮನೆಗೆ ಬಂದ ಕೃಷ್ಣನೆಂದ:

"ಅಣೆಕಟ್ಟು ಕಟ್ಟಿದ್ಮೇಲೆ ಮಹಾಪೂರ ಬರೋದಿಲ್ಲ. ಕಾಲುವೆ ಕಡಿದು, ಊರೂರಿಗೆ ನೀರು ತಗೊಂಡು ಹೋಗ್ತಾರೆ. ಎಲ್ಲೆಲ್ಲೂ ಬೆಳೆ ಬೆಳೀತದೆ. ವಿದ್ಯುಚ್ಛಕ್ತಿ ಉತ್ಪಾದಿಸ್ತಾರೆ. ಮನೆ ಮನೆಗೆ ದೀಪ ಬರ್ತದೆ. ಕಾರ್ಖಾನೆಗಳು ಹುಟ್ಕೋತವೆ. ನದೀಲಿ ದೊಡ್ಡ ದೊಡ್ಡ ದೋಣಿಗಳು ಸಂಚಾರ ಮಾಡ್ತವೆ"

ರೇಗುತ್ತ ನಾನೆಂದೆ :

"ನಮ್ಮ ಅಳ್ಳಿ ಏನಾಗ್ತೇತೆ ?"

"ಹಳ್ಳಿ ಮುಳುಗೋಗ್ತದೆ"

"ಅಂಗಂತೀಯಾ ನೀನೂ ?"

"ಈ ಪುಸ್ತಕದಲ್ಲಿ ಬರೆದವರೆ"

"ಉಚ್ಚುಂಡೆ! ನಿನ್ನ ಪುಸ್ತಕನ ಸುಡ್ತು !"

ಹುಡುಗರು ಮೊದಲು ಕೆಟ್ಟರು. ವಯಸ್ಸಾದವರು ಆಮೇಲೆ. ಲೋಕ ತಲೆ ಕೆಳಗಾಗಿ ಹಾಳಾಗುತ್ತಿದ್ದುದನ್ನು ನೋಡಲು ನಾನೊಬ್ಬನೆ ಉಳಿದೆನೆನಿಸಿತು....

ಭೂಮಿತಾಯಿ ಮುನಿದಳು. ಅರೆ ಹೊಟ್ಟೆ ಕೆಡವಿದಳು.

....ವರ್ಷ ಒಂದಾಯಿತು. ಅನಂತರವೂ ಒಂದು. ನದಿಗೆ ಅಡ್ಡವಾಗಿ ಮರಳಿನ ಗೋಡೆ ಕಟ್ಟಿ, ಅದರ ಹಾದಿಯನ್ನೆ ಬದಲು ಮಾಡಿದರು. ಎರಡೂ ಕಡೆಗಳಿಂದ ಬಂದಿದ್ದ ಅಣೆಕಟ್ಟು ನಡುವೆ ಕೂಡಿಕೊಂಡಿತು. ನೀರು ನಿಂತು ಕೆರೆ ಯಾಯಿತು. ನದಿ ಆಳವಾಯಿತು.

ಆಗ ಬಲ್ಲಿದನಾಗಿದ್ದ ರಾಮುನನ್ನು, ಕೆಣಕಿ ಕೇಳಿದೆ.

"ಅಳ್ಳಿಗಳನ್ನ ಯಾವತ್ತು ಮುಣುಗಿಸ್ತಾರೆ ?"

"ಇನ್ನೇನು, ಮುಣುಗೋಗ್ತವೆ."

"ಉಂ! ಅನುಮಂತರಾಯನ ಗುಡಿಯೊಳಕ್ಕೆ ನೀರು ನುಗ್ಲಿ. ಆ ಮ್ಯಾಕೆ ಯೇಳ್ತೇನಿ !"

ಗುಡಿಯೊಳಕ್ಕೆ ನೀರು ನುಗ್ಗಿತು. ಗುಡಿ ಮುಳುಗಿತು. ಹನುಮಂತರಾಯ ಆಕ್ಷೇಪಿಸಲಿಲ್ಲ. ಕೆರೆ ಸರೋವರವಾಯಿತು. ಸರೋವರ ನೀರಸಾಗರವಾಯಿತು. ದೇವರು ತುಟಿಪಿಟ್ಟೆನ್ನಲಿಲ್ಲ.

ನನ್ನೊಳಗಿನದೇನೋ ಕುಸಿದುಬಿದ್ದಂತಾಯಿತು.

ನಾನು ಕಾಯಿಲೆ ಮಲಗಿದುದು ಆಗಲೇ....

○ ○ ○ ○ ○

ನಿಶ್ಶಕ್ತನಾಗಿ ಎದ್ದ ಬಳಿಕ, ಅಣೆಕಟ್ಟಿನ ಪ್ರಸ್ತಾಪವನ್ನೇ ಹಿರಿಯ ಮಾಡಲಿಲ್ಲ. ಬದುಕಿನಲ್ಲಿ ಆತ ಒಂದಿಷ್ಟಾದರೂ ಆಸಕ್ತಿ ತೋರಲು ಕಾರಣ. ಅದೇ ಮೊದಲ ಬಾರಿ ಸೊಸೆ ಲಚ್ಚಿಗೆ ನೀರು ನಿಂತುದು. ರಾಮನ ಮುಖದ ಮೇಲೆ ಆಗ ಮೂಡಿದ ಮುಗುಳುನಗೇ ಕರಿಯ ಕಲ್ಲಿನಲ್ಲೇ ಕೊರೆದ ನಿತ್ಯ ಮಲ್ಲಿಗೆಯಾಯಿತು....

ಕಿಂವದಂತಿಯ ಕೀಚಲು ಧ್ವನಿ ಕೇಳಿಸಿತೊಮ್ಮೆ:

"ನರಬಲಿ ಕೊಡ್ತಾರಂಪ್ಪೋ! ಅಯ್ಯಪ್ಪೋ!"

ಎಳೆಯರು—ಮೂರನೆಯವನಾದ ಒಬ್ಬ ಹುಡುಗ, ಕೊನೆಯ ಸಂತಾನವಾದ ಹುಡುಗಿ—ಮನೆಯಲ್ಲೇ ಬಂದಿಗಳಾದರು. ತುಂಬಿದ ಬಸುರಿ ಲಚ್ಚಿ, ಹಿತ್ತಲು ದಾಟಿ ಹೊರಕ್ಕಿಳಿಯಲಿಲ್ಲ.

"ಸುಮ್ನುಸ್ನೆ ಪುಕಾರು ಉಟ್ಸಿಸ್ತಾರೆ," ಎಂದ ರಾಮು.

ಆದರೆ, ಕೆಲಸವೆಲ್ಲ ಮುಗಯುತ್ತ ಬಂದಿದ್ದಂತೆ, ಒಂದು ಯಂತ್ರದಡಿಗೆ ಬಿದ್ದ ಇಬ್ಬರು ಆಳುಗಳು ಬಲಿಯಾದಾಗ, ಜನರೆಲ್ಲ ಕ್ಷಣಕಾಲ ಉಸಿರು ಬಿಗಿ ಹಿಡಿದರು....

....

....ಅಂತೂ ಕೊನೆಗೊಮ್ಮೆ ಬಂದಿತ್ತು ಆ ಘಳಿಗೆ.

ತಂದೆಯನ್ನು ಕರೆದವನು ರಾಮನೇ.

"ನಾಸ್ಯಾಕೊ ಬರ್ಲಿ?"

"ಇಲ್ಲ ಅಪ್ಪ, ನೀನು ನಿನ್ನ ಕಣ್ಣಿಂದ್ಲೇ ನೋಡ್ಬೇಕು."

ಆದಕ್ಕೇ ಆತ ತನ್ನಾಕೆಗೆ ಹೇಳಿದ್ದ.

"ಅದೇನೈತೋ ನೋಡ್ಬರ್ತೀನಿ."

೩

ಅವರನ್ನು ಹಾದು ಮುಂದೆ ಹೋದವರು—ಓಡುತ್ತ ಹೋದವರು—ಹಲವರು. ಹುಡುಗರಿಗೆ ಯುವಕರಿಗೆ ಮುದುಕರಿಗೆ—ಎಲ್ಲರಿಗೂ ಎಲ್ಲಿಲ್ಲದ ಉತ್ಸಾಹ. ತಗ್ಗಿನಿಂದ ಮೇಲಕ್ಕೆ ನಡೆದು ಬಂದಂತೆ ಅವರ ಕಣ್ಣಿಗೆ ಬಿತ್ತು—ಸಹಸ್ರ ಜನರನ್ನು ಹೊತ್ತು ಎತ್ತರದಲ್ಲಿ ಭವ್ಯವಾಗಿ ನಿಂತಿದ್ದ ಅಣೆಕಟ್ಟು. ಮೇಲೂ ಜನರು, ಕೆಳಗೂ ಜನರು. ಒಂದೇ ಕಡೆ ನೆರೆದಿತ್ತು, ಹತ್ತೂರುಗಳ ಜಾತ್ರೆ. ನೀರಿನ ಅಲೆಗಳು, ಮಾತಿನ ಹಾಡಿನ ಅಲೆಗಳು. ಹರ್ಷೋದ್ಗಾರ, ಜಯಜಯಕಾರ. ನಗೆ—ಎಲ್ಲ ಜನರಿಂದಲೂ ಹೊರಟು, ವಿರಾಟ್‌ರೂಪ ತಳೆದು, ಗಿರಿಕಂದರ ಕಾನನಗಳನ್ನು

ಕುಲುಕಿ ಅಲುಗಿಸಿ ನಗಿಸುತ್ತಿದ್ದ ನಗೆ. ತಳಿರುತೋರಣಗಳು, ಬಣ್ಣದ ಕಾಗದಗಳು. ನದಿಯ ಕತ್ತಿಗೆ ನೂರು ಹಾರಗಳಾಗಿದ್ದವು, ಸೂರ್ಯನ ಕೊನೆಯ ರಶ್ಮಿಗೆ ಮಿನುಗುತ್ತಿದ್ದ ಗಾಜಿನ ದೀಪಗಳು.

ಮೇಲೆ ಹೋಗಲು ಹಾದಿಯಿರಲಿಲ್ಲ, ಜಾಗವಿರಲಿಲ್ಲ.

"ತಡವಾಗಿ ಬಂದ್ವಿ," ಎಂದು ರಾಮು ಗೊಣಗಿದ.

"ಏನು ಕೊಳ್ಳೆ ಹೋದದ್ದು? ಇಲ್ಲೇ ಇರಾನ," ಎಂದ ಹಿರಿಯ.

ಜಲಾಶಯದೊಳಕ್ಕೆ ಸೂರ್ಯ ಧುಮುಕಿರಬೇಕು. ಒಮ್ಮೆಲೆ, ಕತ್ತಲಾಯಿತು. ಮತ್ತೆ ಒಮ್ಮೆಲೆ, ಗಾಜಿನ ಬುರುಡೆಗಳೆಲ್ಲ ದೀಪದ ಉಂಡೆಗಳಾದುವು. ನದಿಯ ಕೊರಳಹಾರಗಳ ಹಲವು ಸಹಸ್ರ ಮಣಿಗಳು ವರ್ಣರಂಜಿತವಾಗಿ ಬೆಳಗಿದುವು.

ಆಗ ಇದ್ದಕ್ಕಿದ್ದಂತೆ, ರುದ್ರಕಡಲು ಭೋರ್ಗರೆಯುತ್ತ ಏರಿಬಂದಂತಹ ಸದ್ದಾಯಿತು.

ಹಿರಿಯನ ಅಂಗಾಂಗಗಳು ತಣ್ಣಗಾದವು.

[ಶಿಕ್ಷೆ ವಿಧಿಸಲು ಆ ಘಳಿಗೆಯನ್ನೆ ಆರಿಸಿದ್ದನೆ ದೇವರು?]

"ಅಗೋ!" ಎಂದ ರಾಮು, ಉಳಿದೆಲ್ಲ ಸದ್ದನ್ನೂ ಮೀರಿಸುವ ಏರುದನಿಯಲ್ಲಿ.

ಅಣೆಕಟ್ಟೆನೆರಡು ತೆರೆದ ದ್ವಾರಗಳಿಂದ, ಕೋಟಿ ಶ್ವೇತಾಶ್ವಗಳು ಕರ್ಣಭೇದಕವಾಗಿ ಕೆನೆಯುತ್ತ, ಬಾಯಿಗಳಿಂದ ನೊರೆಯುಗುಳುತ್ತ, ಮುನ್ನುಗ್ಗುತ್ತಿದ್ದುವು. ಕುಪ್ಪಳಿಸುತ್ತ ಹಾರುತ್ತ ಕಿಲಕಿಲನೆ ನಗುತ್ತ ನೀರು ಧುಮು ಧುಮುಕಿ ಹರಿಯಿತು, ಕಾಲಿವೆಗಳಲ್ಲಿ, ಉಪಕಾಲಿವೆಗಳಲ್ಲಿ.

ಎಚ್ಚತ್ತ ಹಿರಿಯ "ಓ್ಹ!" ಎಂದ.

ಬಾಗಿದ್ದ ನಡು ನಿಡಿದುಕೊಂಡಿತು. ಜಡವಾಗಿದ್ದ ಕಾಲುಗಳು ಚೇತನಗೊಂಡುವು.

ಆತ ಮತ್ತೆ ಅಂದ: "ಓ್ಹ! ಓ್ಹ!"

ದೂರಕ್ಕೆ ದೂರಕ್ಕೆ—ಆತನ ಹೊಲಗಳಿದ್ದ ಕಡೆಗೂ—ನೀರು ಧಾವಿಸುತ್ತಿತ್ತು.

ಬೇರೊಂದನ್ನೂ ಗಮನಿಸದೆ ಹಿರಿಯ ಆ ನೀರನ್ನೆ ನೋಡಿದ; ಆ ನೀರಿನ ಹಿಂದೆಯೇ ಓಡಿದ.

ತಂದೆಯಷ್ಟೇ ವೇಗವಾಗಿ ಓಡುವುದು ರಾಮುನಿಗೂ ಕಷ್ಟವೆನಿಸಿತು.

....ಗುಡಿಸಲ ಮುಂದೆ ರಾಮುನ ತಾಯಿ ನಿಂತಿದ್ದಳು. ಚಿಕ್ಕ ಹುಡುಗನಂತೆ ಓಡುತ್ತ ಬಂದ ಗಂಡನನ್ನು ನೋಡಿ ಆಕೆಯೆಂದಳು.

"ಲಜ್ಜೆಗೆ ಎರಗೆಯಾಯ್ತು! ಗಂಡು ಮಗು!"

"ಓ!" ಎಂದ ಹಿರಿಯ, ಧಾರಾಕಾರವಾಗಿ ಸುರಿಯುತ್ತಿದ್ದ ಕಂಬನಿಯನ್ನೊರೆಸಿಕೊಳ್ಳುತ್ತ.

—"ಓ್ಹ ! ಓ್ಹ !"

ಎಲ್ಲ ಬೇಗೆಯನ್ನೂ ಮರೆಸುವ ಹಾಗೆ ಬೀಸುತ್ತಿತ್ತು. ತಣ್ಣನೆಯ ಗಾಳಿ. ವಾತಾವರಣ ತುಂಬಿತ್ತು, ಹಾಲುಹೊಳೆಯ ಜುಳುಜುಳು ಗೀತದಿಂದ.

ಮುಂದವಾಗಿ ಕಾಣಿಸುತ್ತಿದ್ದುವು, ಬಲು ದೂರದಲ್ಲಿ ಅಣೆಕಟ್ಟಿನ ದೀಪಮಾಲೆಗಳು.

ಮೇಲ್ಗಡೆ ಆಕಾಶದಲ್ಲಿ ಕೋಟಿ ನಕ್ಷತ್ರಗಳಿದ್ದುವು.

ಅವುಗಳನ್ನೇ ಮುಗ್ಧನಾಗಿ ಹಿರಿಯ ನೋಡಿದ.

ಪಶ್ಚಿಮದಲ್ಲಿ ಒಂಟಿಯಾಗಿಯೇ ಇದ್ದೊಂದು ನಕ್ಷತ್ರ ಅವನನ್ನು ಕಂಡು ನಕ್ಕಿತು.

ಅದನ್ನು ಗಮನಿಸಿದ ಹಿರಿಯ ರುಮಾಲನ್ನೆಳೆದು ತಲೆಯಾಡಿಸುತ್ತ, ಅಂದ:

"ಉಚ್ಮ್ಕಂಡೆ !"

ಆ ನಕ್ಷತ್ರ ಮತ್ತೆ ನಕ್ಕಿತು. ೧೯೫೭

ಒಂದು ನಮೂನೆ ಹುಡುಗ ಮತ್ತು ಉತ್ಸವ ಭೋಜನ

ಹೆದ್ದಾರಿಯ ಎರಡು ಬದಿಗಳಲ್ಲಿ ಆ ಹಳ್ಳಿ ಮಲಗಿತ್ತು. ಯಕ್ಷಗಾನಪ್ರಿಯ ಸಾಹಿತ್ಯಾಸಕ್ತ ಪಟೇಲರು ಅದರ ಕಾವಲುಗಾರ. ಸುಮಾರು ನೂರು ಮನೆಗಳಿದ್ದು ವೇನೊ. ಹೆಚ್ಚಿನವಕ್ಕೆ ಮುಳಿಛಾವಣಿ, ಒಂದು ಪ್ರಾಥಮಿಕ ಶಾಲೆ ಆ ಹಳ್ಳಿಯ ಮೂಗುತಿ. ಸುತ್ತಲಿನ ಗ್ರಾಮಗಳಿಂದಲೂ ಕಿರಿಯರು ಅಲ್ಲಿಗೆ ಬರುತ್ತಿದ್ದರು. ಆ ಎಲ್ಲ ಹಳ್ಳಿಗಳ ಕಿರೀಟವಾಗಿತ್ತು, ಹೆದ್ದಾರಿಯ ಪಶ್ಚಿಮದಲ್ಲಿ ಹೊಲಗಳ ಆಚೆ ಎತ್ತರ ಸ್ಥಳ ದಲ್ಲಿದ್ದ ದೇವಸ್ಥಾನ.

ಕಾಲ: ೧೯೩೩ನೆಯ ಇಸವಿ. ಪರಿಸರವನ್ನೆಲ್ಲ ಬೆರಗುಗಣ್ಣಿನಿಂದ ನೋಡು ತ್ತಿದ್ದ ಏಳು ವರ್ಷ ವಯಸ್ಸಿನ ಒಬ್ಬ ಹುಡುಗ ಅಲ್ಲಿದ್ದ. ಬಡವ. ಒಂದು ರೀತಿ ಯಲ್ಲಿ ತಬ್ಬಲಿ.

ಅವನ ತಾಯಿ ಬಾಲವಿಧವೆ. ತಾನು ಜಾತಿಗೆಟ್ಟರೂ ಮಗ ಪುನೀತ ಎಂದು ಡಂಗುರ ಸಾರುವ ಹೆಬ್ಬಯಕೆ ಅವಳಿಗೆ. ಕಿರಿಯ ಆ ವಿಷಯದಲ್ಲಿ ಅನಾಸಕ್ತ. ಅಕ್ಷರಗಳನ್ನು ಜೋಡಿಸಿದಾಗ ಪದಗಳಿಂದ ಹೊಮ್ಮುತ್ತಿದ್ದ ಧ್ವನಿಯೊಂದೇ ಅವನಿಗೆ ಇಷ್ಟ. 'ಒಂದು ನಮೂನೆಯ ಆ ಹುಡುಗ' ಪಟೇಲರ ಮನೆಯವರ ಪಾಲಿಗೆ ಕೌತುಕದ ಜೀವವಾಗಿದ್ದ. ಎಂದಾದರೂ ಅತ್ತ ಸುಳಿದಾಗ, ಪಟೇಲರ ಮಗಳು ಅವನಿಗಿಂತ ಆರೆಂಟು ವರ್ಷ ದೊಡ್ಡವಳು. ಅಡುಗೆ ಮನೆಯ ಹೊರಬಾಗಿಲಿನತ್ತ ಕರೆದು, ಆತನಿಗೆ ತಿಂಡಿತಿನಿಸು ನೀಡುತ್ತಿದ್ದಳು. ಅವನು ತಿಂದು ಓಡುತ್ತಿದ್ದ.

ಒಂದು ದಿನ ಹೆತ್ತವಳು ಹುಡುಗನಿಗೆ ಆದೇಶವಿತ್ತಳು:

"ನಾಳೆ ದೇವಸ್ಥಾನದಲ್ಲಿ ಉತ್ಸವ. ಮಧ್ಯಾಹ್ನ ಊಟಕ್ಕೆ ನೀನು ಅಲ್ಲಿಗೆ ಹೋಗ್ಬೇಕು."

"ಬೇಡ, ಬೇಡ. ನನಗೆ ಆ ಊಟ ಬೇಡ."

"ಘಟಿಂಗ! ನಾನು ಹೇಳಿದ ಹಾಗೆ ಮಾಡು."

"ಅಲ್ಲಿ ಅವರು....ಅವರು...."

"ಏನ್ಮಾಡ್ತಾರೆ? ನಾನು ನೋಡ್ಕೊಳ್ತೇನೆ."

(ಉರುಳು ಬಿಗಿಯಾಗುತ್ತಿದೆ. ತಪ್ಪಿಸಿಕೊಳ್ಳಲು ದಾರಿ?)

"ನಾಳೆ ಶಾಲೆ ಉಂಟು, ಅಮ್ಮ."

ಆ ಹುಡುಗರಿಗಿಲ್ವಾ ? ಮಾಸ್ತ್ರಿಗೆ ಹೇಳಿ ಹೊರಡು. ಊಟ ಆದ್ಮೇಕಡ್ಲೆ ಶಾಲೆಗೆ ವಾಪಸು ಬಾ."

ಅವನು ನಿರುತ್ತರನಾದನೆಂದು ತಾಯಿಗೆ ಸಮಾಧಾನ.

ಹುಡುಗ ಬಯಲಿಗೆ ಇಳಿದು ಸಂಜೆಯ ಗಾಳಿಗೆ ಬರಿ ಮೈ ಒಡ್ಡಿದ ; ಸೂರ್ಯ ಕಂತುವುದನ್ನು ನೋಡಿದ....

........ಬೆಳಗ್ಗೆ, ತಲೆಯನ್ನು ಹುಲುಸಾಗಿ ಆವರಿಸಿದ್ದ ನೀಳ ಕೂದಲನ್ನು ತೋಯಿಸಿ ಸ್ನಾನ. ನೀರು ಎಂದಿನಂತೆ ಬಸಳೆ ಬುಡಕ್ಕೆ ಹರಿಯಿತು. ಒದ್ದೆ ತಲೆ ಗೂದಲನ್ನು ಒಣ ಬಟ್ಟೆಯಿಂದ (ಹರಿದ ಸೀರೆಯ ತುಂಡು ?) ತಿಕ್ಕಿದಳು. ತುಸು ಒಣಗಿದಂತೆ, ಮರದ ಹಣಿಗೆ ಮುಟ್ಟಿಸಿ, ಗಂಟು ಹಾಕಿದಳು. ಕೋಮಣ, ಅದನ್ನು ಮರೆಮಾಡಿ ಸೊಂಟದಿಂದ ಮೊಣಕಾಲಿನವರೆಗೆ ಮೈಮುಚ್ಚಿದ ಬೈರಾಸು.

" ಅಂಗಿ ?"

" ಮರ್ಲ ! ಉತ್ಸವದ ಭೋಜನಕ್ಕೆ ಹೋಗುವಾಗ ಅಂಗಿಯಂತೆ !"

" ಈಗ ಏನಾದರೂ...."

" ದೇವರ ಊಟಕ್ಕೆ ಮುಂಚೆ ಉಪವಾಸ."

....ಶಾಲೆಯಲ್ಲಿ ಎಲ್ಲ (ನಾಲ್ಕು) ತರಗತಿಗಳಲ್ಲಿ ದೇವಸ್ಥಾನದ ಊಟಕ್ಕೆ ಅರ್ಹ ರಾದವರಲ್ಲಿ ಹೆಚ್ಚಿನವರು ಆಬ್ಸೆಂಟ್ ಆಗಿದ್ದರು. ರಜೆಗೂ ಅವರು ಅರ್ಹರು. ಅಂಥವ ರಲ್ಲೂ ಕೆಲವರು ಪಾಠ ತಪ್ಪಬಾರದೆಂದು ಮಡಿಮೈಯಲ್ಲಿ ವಿದ್ಯಾದೇಗುಲಕ್ಕೆ ಬಂದು ಅಡ್ಡಬೆಂಚಿನ ಮೇಲೆ ಕುಳಿತರು. ಅವರಿಗೆ ಅಪರಾಹ್ನ ರಜ.

" ನೀನು ?"

" ರಜೆ ಬೇಡ. ಊಟ ಮುಗಿಸಿ ಓಡಿ ಬರ್ತೇನೆ."

(ಮಾಸ್ತ್ರು ಯಾರು ? ಅವರ ತುಟಿಗಳ ಮೇಲೆ ಮುಗುಳುನಗೆ ಮೂಡಿತ್ತೇ)

" ಮಧ್ಯಾಹ್ನ ಘಂಟೆ ಬಾರಿಸಿದೊಡನೆ ಊಟದ ಹುಡುಗರು ಗದ್ದೆಹುಣಿಗಳ ಮೇಲೆ ದೇವಸ್ಥಾನದಕಡೆ ಬಿರಬಿರನೆ ನಡೆದರು. ಬೇರೆಯೇ ಏರಿಯ ಮೇಲೆ ಈತ ನಡೆದ. ಅವರದು ಕಲರವ. ಇವನದು ಏಕಾಕಿಯ ಮೌನ (ಇವನತ್ತ ಕಡೆನೋಟ ಬೀರಿ ನಗುತ್ತಿರಲಿಲ್ಲವೆ ಕೆಲವರು ?).

ದಟ್ಟ ಮರಗಳು ಸುತ್ತುವರಿದಿದ್ದ ದೇವಸ್ಥಾನದಲ್ಲಿ ಗದ್ದಲವೋ ಗದ್ದಲ. ದೇವರು ನೈವೇದ್ಯ ಸ್ವೀಕರಿಸಿದ್ದ. ಇನ್ನು ಭಕ್ತಾದಿಗಳ ಸರದಿ. ಗರ್ಭಗುಡಿಯ ಮುಂದಿನ ಎಡಬಲಗಳ ಏರು ಜಗಲಿಗಳ ಮೇಲೆ ಬಾಳೆ ಎಲೆಗಳನ್ನು ಸಾಲಾಗಿ ಹಾಸಿ ದ್ದರು, ಎದುರು ಬದುರಾಗಿ. ಸ್ಥಳಹಿಡಿಯಲು ನೂಕುನುಗ್ಗಲು. 'ಒಂದು ನಮೂ ನೆಯ ಹುಡುಗ 'ನೂ ಓಡಿ ಒಂದೆಡೆ ಕುಳಿತ. ಗುಂಡಿಗೆ ಡವಡವ. ಶಾಂತವಾಗಿರಲು ಯತ್ನಿಸಿದ. ಉದ್ದಕ್ಕೆ ಎಡಕ್ಕೂ ಬಲಕ್ಕೂ ಎದುರುಗಡೆಯೂ ದೃಷ್ಟಿಬೀರಿದ. ('ನನಗೆ ಇವರೆಲ್ಲರ ಗುರುತಿದೆ....', ಇಲ್ಲ, ನನಗೆ ಇವರು ಯಾರೂ ಗುರುತಿಲ್ಲ....') ತಲೆಗಳು, ಹಣೆಗಳು, ಕಣ್ಣುಗಳು.

ಇನ್ನೇನು, ಬಡಿಸುವವರು ಆಗಮಿಸುತ್ತಾರೆ. ಅಷ್ಟರಲ್ಲಿ ಒಂದು ಮೂಲೆಯಲ್ಲಿ ಸುಂಯ್‌ಗುಟ್ಟಿದ ಸದ್ದು. ಬೇರೆ ಎರಡು ಮೂರುಕಡೆಗಳಿಂದಲೂ ಸುಯಿಲು; ಬಲ ಗೊಂಡ ಹುಯಿಲು. ತೋರುಬೆರಳುಗಳು ತನ್ನೆಡೆಗೆ ಚಾಚಿವೆ. ಹಲವರು ಏಳುತ್ತಿದ್ದಾರೆ ತನ್ನ ಕಡೆಗೆ ನುಗ್ಗಲು....

ಇನ್ನು ಹಿಡಿಯುತ್ತಾರೆ. ಹಿಡಿದು....

ಹುಡುಗ ಚಂಗನೆ ಎದ್ದ. ನೇರವಾಗಿ ಓಡಿ, ಜಗಲಿಯಿಂದ ಧುಮುಕಿ, ಮಹಾದ್ವಾರದಾಚೆಗೆ ಪ್ರಾಂಗಣಕ್ಕೆ ಜಿಗಿದು, ಹೊಲಗಳತ್ತ ಧಾವಿಸಿದ. ಒಂದೇ ಗುರಿ. ಸಾಲೆಗೆ.

ಅಪರಾಹ್ನದ ಪಾಠ ಅದೇ ಆಗ ಆರಂಭವಾಗಿತ್ತು. ಬಿಟ್ಟುಹೋಗಿದ್ದ ಎರಡು ಪಠ್ಯಪುಸ್ತಕಗಳನ್ನೆತ್ತಿಕೊಂಡು, ಇತರ ಹುಡುಗರ ಜತೆಗೆ ತನ್ನ ನಿತ್ಯದ ಸ್ಥಾನದಲ್ಲಿ ಕುಳಿತ.

ಗುರು ಕೇಳಿದರು :

" ಆಯ್ತಾ ?"

" ಆಯ್ತು."

ಗಟ್ಟಿಯಾದ ಸ್ವರದಲ್ಲಿ ಮಾಸ್ತರು ಪಾಠ ಹೇಳುತ್ತಿದ್ದರು (ಯಾವ ಪಾಠವೊ?). ಈ ವಿದ್ಯಾರ್ಥಿಯ ಎದುರು ಕಿಟಕಿ. ಅದರಾಚೆಗೆ ಬಹಳ ದೂರದಲ್ಲಿ ಮರಗಳು ಮರೆಮಾಡಿದ್ದ ದೇವಾಲಯ. ಕಿಟಕಿ ಚೌಕಟ್ಟು ಹಾಕಿದ್ದ ಶೂನ್ಯದ ನೀಲಿ ತುಣುಕನ್ನು ಬಿರುಗಣ್ಣಿನಿಂದ ನೋಡುತ್ತ ಹುಡುಗ ಕುಳಿತ.

ಮಾಸ್ತರ ಗಂಟಲಿನಿಂದ ಪದಗಳು ಹೊರಡುತ್ತಿರಲಿಲ್ಲ. ಬರೀ ಸ್ವರ (ಹಾಡುತ್ತಿದ್ದಾರೋ ಹ್ಯಾಗೆ? ಅಭಿನಯವಿಲ್ಲ. ಆದ್ದರಿಂದ ಇದು ಗದ್ಯ. ತಮಾಷೆ. ತಾನು ಆಳಲೇ ಇಲ್ಲವಲ್ಲ....).

ಹತ್ತು ಮಿನಿಟು ಆಗಿರಬಹುದೇನೊ ? ತಗ್ಗಿನಲ್ಲಿದ್ದ ಅಂಗಳದಿಂದ ಒಂದು ತಲೆ ಮೇಲಕ್ಕೆ ನೆಗೆಯುತ್ತಿತ್ತು, ಕಿಟಕಿಯ ಮೂಲಕ ಒಳಕ್ಕೆ ನೋಡಿ ಕೈಬೀಸಿ ಕೆಳಕ್ಕೆ ಹೋಗುತ್ತಿತ್ತು. ಪುನಃ ನೆಗೆತ, ಇಳಿತ. ಕರೆಯುವ ಕೈ.

ಪಟೇಲರ ಮಗಳು !

ಗುರುತುಹತ್ತಿದೊಡನೆಯೇ ಹುಡುಗ ಮುದುರಿ ಕುಳಿತ. ಯಾರಿಗೆ ತಾನೆ ಇರಲಿಲ್ಲ ಆಕೆಯ ಪರಿಚಯ ? ವಿದ್ಯಾರ್ಥಿಗಳೆಲ್ಲ ಗುಸುಗುಸು ಮಾತನಾಡುತ್ತ ಬೊಟ್ಟುಮಾಡುತ್ತ ಕಿಟಕಿಯನ್ನು ನೋಡಿದರು. ಉಪಾಧ್ಯಾಯರ ಹುಬ್ಬು ಗಂಟಿಕ್ಕಿತು. ಕಿಟಕಿಯತ್ತ ಸರಿದರು. ಹುಬ್ಬು ಸಡಿಲಿತು. ಪ್ರಸನ್ನರಾದರು. ಚುಟುಕು ಪ್ರಶ್ನೋತ್ತರ.

ಮುದುರಿದ್ದ ಬಾಲಕನತ್ತ ಹೊರಳಿದರು ಮಾಸ್ತರು.

" ಕರೀತಿದ್ದಾರೆ, ಹೋಗು."

ಅಂಗಳಕ್ಕಿಳಿಯುತ್ತ ಗಟ್ಟಿಮನಸ್ಸುಮಾಡಿದ ಈತ.

ಪಟೇಲರ ಮಗಳು :

" ಬಾ "

ಇವನು :

" ಯಾಕೆ ?"

" ಊಟಕ್ಕೆ"

" ನಾನು ಬರುವುದಿಲ್ಲ."

" ಬರ್ಲೇಬೇಕು. ಕರೆದುಕೊಂಡು ಬಾ ಅಂತ ಅಪ್ಪಯ್ಯ ಹೇಳಿದ್ರು."

(ಜಪ್ಪಯ್ಯ ಎಂದರೂ ಒಪ್ಪಬಾರದು....)

" ಇಲ್ಲ, ಬರುವುದಿಲ್ಲ."

" ನೋಡು, ಬಾ. ನಾನು ಹೇಳ್ತಿದ್ದೇನೆ, ಬಾ !"

(ಹಿರಿಯಕ್ಕನ ಸ್ಥಾನ ಇವಳದು. ಇನ್ನು ರಟ್ಟೆ ಹಿಡಿದು ಎಳೆದುಕೊಂಡೇ ಹೋಗುತ್ತಾಳೆ).

ಸೋತ ಹುಡುಗ ನಿಟ್ಟುಸಿರು ಬಿಟ್ಟ. ಪಟೇಲರ ಮಗಳು ಮೃದು ಧ್ವನಿಯಲ್ಲಿ " ಬಾ " ಎನ್ನುತ್ತ ಮುಂದಕ್ಕೆ ಹೆಜ್ಜೆ ಇಟ್ಟಳು. ಹುಡುಗ ಹಿಂಬಾಲಿಸಿದ.

ಅವನ ಎಳೆಯ ಮೆದುಳಲ್ಲಿ ಚಿಲಿಮಿಲಿ ನಡೆದಿತ್ತು. ನಾನು ಹಿಡಿದಿದ್ದ ಸ್ಥಳ, ಎಲೆ....ಮತ್ತೆ ಅಲ್ಲಿಯೇ....ಪಟೇಲರು ಆ ಜನರಿಗೆಲ್ಲ ಬುದ್ಧಿ ಹೇಳಿದರೆ? ತನ್ನ ತಾಯಿ ಗೆದ್ದಂತಾಯಿತೆ ?....ಈ ಒಂದು ಅಕ್ಕ ತನ್ನನ್ನು ಬಿಡಲಿಲ್ಲವಲ್ಲ....'ಇವರು ಬೀಸ ಬೀಸ ನಡೀತಾರೆ. ನಾನು ಓಡಬೇಕು.' ಮಾತಿಲ್ಲ, ಕತೆಯಿಲ್ಲ.

ಪ್ರಾಂಗಣ ತಲುಪಿದೆವು. ಹೊರಗೆ ಜನಸಂದಣಿಯಿಲ್ಲ. ಭೋಜನ ಮುಗಿದಿಲ್ಲ ಹಾಗಾದರೆ.

ಬಾವಿಕಟ್ಟೆಯ ಬಳಿಗೆ ನಡಿಗೆ.

" ಕೈ ತೊಳಕೊ."

" ಒಮ್ಮೆ ಆಗಿದೆ."

" ಈಗ ನಾನು ನೀರು ಹಾಕ್ತೇನೆ."

ಎಷ್ಟು ದೊಡ್ಡ ಬಾವಿಯಪ್ಪ ಇದು ! ಅದರ ಮಗ್ಗುಲಲ್ಲೇ ಬಿದಿರು ತಟಿಕೆಯ ಚಪ್ಪರ. ಆಳೆತ್ತರಕ್ಕಿದೆ ಬಿಳಿ ಅನ್ನದ ರಾಶಿ. ಹತ್ತಾರು ಭೀಮ ಬಾಣಸಿಗರು, ಭಾರೀಗಾತ್ರದ ಹಂಡೆ, ಕೊಳದಪ್ಪಲೆ, ಕಡಾಯಿ....ಕಾಗೆಗಳು. ಎಲಾ ! ಮರಗಳ ಮೇಲಿಂದ ಕಾ....ಕಾ....ಇವತ್ತು ಬರಬಾರದು. ಅವುಗಳನ್ನು ಓಡಿಸಲೆಂದೇ ಬೇರೆ ಯವರು ಒಂದಷ್ಟು ಜನ ನಿಂತಿದ್ದಾರೆ. ಆಚೆಗೆ–ಆಚೆಗೆ ಮರಗಳ ಸಂದಿಯಲ್ಲಿ ಮುಟ್ಟಾಳೆ ಧರಿಸಿದ ಕಾಗೆ ಬಣ್ಣದ ಜನ ಮುಟ್ಟಾಟವಾಡುವಂತೆ ಕಾಣುತ್ತಿದೆ ಯಲ್ಲ ?

"ಒಳಗೆ ಬೇಡ. ಇಲ್ಲಿಂಯೇ ಅಡುಗೆ ಚಪ್ಪರದಲ್ಲೇ ನಿನಗೆ ಊಟ."

ಚಿಗುರು ಬಾಳೆ ಎಲೆ ಎದುರು ಬಾವಿಕಟ್ಟೆಗೆ ಒರಗಿಕೊಂಡು ಹುಡುಗ ಕುಳಿತ. ಸಣ್ಣ ಹೊಟ್ಟೆಯವನು. ಎಷ್ಟು ತಿಂದಾನು ?

"ಊಟ ಮಾಡು."

ಕುಂಬಳದ ಹಳದಿ ಹೋಳು. ಬಿಳಿ ಇರಬೇಕಲ್ಲ ? ಈ ಬಣ್ಣ ?

ಒಂದು ತುತ್ತು, ಎರಡು....

"ಹೊಟ್ಟೆ ತುಂಬ್ತು."

"ಪಾಯಸ. ನಾನೇ ಬಡಿಸ್ತೇನೆ. ಅನ್ನ ಬದಿಗೆ ಸರಿಸು."

ಸಿಹಿ, ರುಚಿ, ಸೊರಕ್, ಸೊರಕ್.

"ಸಾಕು. ಎಲೆ ಎಲ್ಲಿ ಬಿಸಾಡ್ಲಿ ?"

"ಅವರು ತೆಗೀತಾರೆ."

ಹುಡುಗ ಕಟ್ಟೆಯ ಆಚೆ ಬದಿಯಲ್ಲಿ ಕೈ-ಬಾಯಿ ತೊಳೆದ. ಬಿಳಿ ಸಪೂರ. ಸೀರೆಯುಟ್ಟ ಅಕ್ಕ (ಅದರ ಬಣ್ಣ ಹಳದಿಯೋ ಹಸುರೋ?). ಹೊಳೆಯುತ್ತಿದ್ದ ಕಣ್ಣುಗಳು.

"ನಾನು ಬರ್ತೇನೆ."

ಹೊಲದ ಏರಿಯ ಮೇಲಿಂದ ಶಾಲೆಯ ದಿಕ್ಕಿಗೆ ಅವನು ಓಡಿದ. ಹಿಂದಿನಿಂದ 'ಗೋವಿಂದಾ' ಕೇಳಿಸುತ್ತಿತ್ತು. ಭೋಜನ ಮುಗಿದಿರಬೇಕು. ಆ ಜನರ ಕಣ್ಣಿಗೆ ತಾನು ಬೀಳುವುದಿಲ್ಲ; ತನಗೆ ಅವರು ಕಾಣಿಸುವುದಿಲ್ಲ.

ಪಟೇಲರು ಸನ್ನೆಮಾಡಿ....ಮುಗಳು ಮೋಡಿ ಬೀಸಿ....

ಇದು ಗೆಲುವೂ ಅಲ್ಲ, ಸೋಲೂ ಅಲ್ಲ....

ತರಗತಿಯ ಬಾಗಿಲ ಬಳಿ ನಿಂತಾಗ ಮಾಸ್ತರು ಕೇಳಿದರು :

"ಆಯ್ತಾ ?"

ಹುಡುಗ ಉತ್ತರಿಸಿದ :

"ಆಯ್ತು."

೧೯೮೮

೩

ಕಾದಂಬರಿ

○ ಮೊದಲು ಜಗಲಿ, ಬಳಿಕ ಗಗನ. ಕತೆಗಾರಿಕೆಯಲ್ಲಿ ನೈಪುಣ್ಯ ಪಡೆದವನಿಗೆ ಕಾದಂಬರಿಯ ಅರಣ್ಯ ವಿಹಾರ ಕಷ್ಟವಲ್ಲ. 'ಈ ಮಾರ್ಗಕ್ರಮಣ ಬೇಡವಪ್ಪ'— ಎನಿಸಬಹುದು ಕೆಲವರಿಗೆ. ಆದರೆ ಹೊಸ(ನಾವೆಲ್) ಪೇಯ ಒಗ್ಗಿದ ಮೇಲೆ, ಕತೆಗೆ ಕಾಫಿಯ ಸ್ಥಾನ ದೊರೆತರೂ ದೊರೆಯಿತೇ! ನಾನು ಕಾದಂಬರಿ ಬರೆದುದು ನಿರಂಜನನಾದ ಮೇಲೆ. ಮೊದಲನೆಯದು 'ವಿಮೋಚನೆ'. ಸಾಹಿತ್ಯ ನನಗೆ ಹೆದ್ದಾರಿಯಾದ ಬಳಿಕ, ಕಾದಂಬರಿಗಳು ಒಂದರ ಮೇಲೊಂದಾಗಿ ಬಂದುವು.

ನನ್ನ ಇಪ್ಪತ್ತೈದು ಕಾದಂಬರಿಗಳಲ್ಲಿ ಐದನ್ನು ಆರಿಸಿ, ಪ್ರತಿಯೊಂದರಿಂದಲೂ ಕೆಲ ಪುಟ್ಟಗಳನ್ನು ಇಲ್ಲಿ ಜೋಡಿಸಿದ್ದೇನೆ. ಒರೆಗಲ್ಲು ಪರೀಕ್ಷೆಗೆ, ಅಥವಾ ರುಚಿ ನೋಡಲ್ಲು. ಪೂರ್ಣ ರೂಪದಲ್ಲಿ ಈ ಐದು 'ನಿರಂಜನ: ಮೂವತ್ತು ಸಂಪುಟಗಳಲ್ಲಿ' ಸರಣಿಯಲ್ಲಿ ದೊರೆಯುತ್ತವೆ. 'ವಿಮೋಚನೆ' (ಸಂಪುಟ-೬), 'ರಂಗಮ್ಮನ ವಠಾರ' (ಸಂಪುಟ-೩), 'ಬನಶಂಕರಿ' (ಸಂಪುಟ-೧೨), 'ಚಿರಸ್ಮರಣೆ' (ಸಂಪುಟ-೬) ಮತ್ತು 'ಮೃತ್ಯುಂಜಯ' (ಸಂಪುಟ-೪).

ಅಪೂರ್ಣ ಓದಿನಿಂದ ತೃಪ್ತಿ ದೊರೆಯದು ಎನ್ನುವಿರಾ? 'ಪ್ರತಿಧ್ವನಿ'ಯ ಮೊಳಗು ಪೂರ್ತಿಯಾಗುವವರೆಗೂ ಸಹನೆ ಇರಲಿ. ಈ ಸಂಕಲನದ ಸಾರ್ಥಕ್ಯ ಸ್ಪಷ್ಟವಾಗುವುದು ವೃತ್ತ ಪೂರ್ಣವಾದಾಗ.

ವಿಯೋಜನೆ

ಮಂಗಳವಾರ

ಜನ ಯಾಕೆ ಬರೆಯುತ್ತಾರೆ? ಈ ಪ್ರಪಂಚದಲ್ಲಿ ಪುಸ್ತಕಗಳನ್ನು ಯಾಕೆ ಅಚ್ಚು ಹಾಕಿಸುತ್ತಾರೆ? ತಾವು ಬರೆದುದು ಹತ್ತು ಜನರಿಗೆ ತಿಳಿಯಲಿ ಎಂದಲ್ಲವೆ? ಸಹಸ್ರ ಜನ ಓದಲಿ ಎಂದಲ್ಲವೆ?

ನಾನು ಬರೆಹಗಾರನಲ್ಲ. ಸಾಹಿತ್ಯ ಸೃಷ್ಟಿ ನನ್ನ ಉದ್ದೇಶವಲ್ಲ. ನಾನು ಹಿಂದೆಂದೂ ಬರೆದುದಿಲ್ಲ. ಆದರೂ ಈಗ ಲೇಖನಿ ಎತ್ತಿ ಬರೆಯತೊಡಗಿದ್ದೇನೆ. ಹೇಳಬೇಕಾದ ಕೆಲವು ವಿಷಯಗಳಿವೆ ನನ್ನಲ್ಲಿ. ಅವುಗಳನ್ನು ನಾನು ಹೇಳಲೇ ಬೇಕು. ಮೂವತ್ತೆಂಟು ವರ್ಷಗಳ ಕಾಲ ನನಗೆ ನೀರು ಗಾಳಿ ಕೊಟ್ಟ ಈ ಲೋಕ ವನ್ನು ಬಿಟ್ಟು ಹೊರಡುವುದಕ್ಕೆ ಮುಂಚೆ, ಆ ವಿಷಯಗಳನ್ನು ನಾನು ಬರೆದಿಡಲೇ ಬೇಕು. ನನ್ನ ಈ ಬರೆವಣಿಗೆ ಸಾಹಿತ್ಯವಾಗದೇ ಹೋಗಬಹುದು. ಆದರೂ ನಾನು ಬರೆಯಬೇಕು.

ಈ ದಿನ ಮಂಗಳವಾರ. ಶುಭ ಕೆಲಸಕ್ಕೆ ಇದು ಯೋಗ್ಯ ದಿನ ಅಲ್ಲವಂತೆ. ಇರಬಹುದು. ಜೀವಮಾನದಲ್ಲಿ ಒಂದು ಸಾರಿಯೂ ಘಳಿಗೆ ಮುಹೂರ್ತ ನೋಡದ ನಾನು ಈಗ ಶುಭ ಅಶುಭಗಳ ಯೋಚನೆ ಮಾಡಲಿ? ಹೆಸರು—ಮಂಗಳವಾರ. ಮಂಗಳ ಎಂದರೆ ಒಳಿತು ಎಂದು ಕೇಳಿದ್ದೇನೆ. ಅಷ್ಟು ಸಾಕು!

ಕರುಳು ಬಿರಿದು ಬರುತ್ತಿದೆ. ಯಾವನೊ ಸೈತಾನ ಹೊಟ್ಟೆಯ ಒಳಹೊಕ್ಕು ಒರಟು ಬೆರಳುಗಳಿಂದ ಕೈಗೆ ಸಿಕ್ಕಿದುದೆಲ್ಲವನ್ನೂ ಹಿಚುಕುತ್ತಿದ್ದಾನೆ. ನನ್ನ ದೇಹ ಸೊರಗಿದೆ. ಎತ್ತರದ ದೃಢಕಾಯನೆಂದು ಪೋಲೀಸರ ದಾಖಲೆಯಲ್ಲಿ ನನ್ನ ಬಗ್ಗೆ ಬರೆದಿದ್ದಾರೆ ಎಂಬುದು ನಿಜ. ಆದರೆ ಅದು ಹಳೆಯ ದಾಖಲೆ. ನಾನೀಗ ಎತ್ತರವಿದ್ದರೂ ಸ್ವಲ್ಪ ಕುಗ್ಗಿ ಹೋಗಿರುವ ಬಡಕಲು ಜೀವಿ. ಹಿಂದೆ ನನ್ನನ್ನು ಸ್ಫುರದ್ರೂಪಿ ಎಂದು ಕರೆಯುತ್ತಿದ್ದರು. ಈಗಲೂ ನಾನು ಸುಂದರನೇ. ಆದರೆ ನೆತ್ತಿಯ ನಡುವಿನಲ್ಲೇ ಹಣೆಯ ಅಂಚಿನಿಂದ ಮೊದಲಾಗಿ ತಲೆ ಕೂದಲು ಬೆಳ್ಳಿ ಯಾಗಿದೆ. ದವಡೆಯ ಎಲುಬುಗಳು ಅಸ್ಪಷ್ಟವಾಗಿ ಎದ್ದುನಿಂತಿವೆ. ಕಣ್ಣುಗಳು ಗುಳಿಬಿದ್ದಿವೆ. ಕಣ್ಣು ರೆಪ್ಪೆಯ ಸುತ್ತಲೂ ಬಣ್ಣ ಕರಿದಾಗಿದೆ. ಯಾಕೆ ಹೀಗಾ

ಯಿತು ? ನ್ಯಾಯಾಸ್ಥಾನದಲ್ಲಿ ನನ್ನನ್ನೇ ನೋಡುತ್ತ ನ್ಯಾಯಾಧೀಶರು ತಿಳಿವಳಿಕೆಯ ಮುಗುಳು ನಗು ನಗುತ್ತಾರೆ. ಕೆಂಪು ಕೆಂಪನೆ ಹೊಳೆಯುವ ತುಂಬು ಮುಖದ ಕೋಮಲಕಾಯ ಅವರದು. ಅವರು ನ್ಯಾಯಮೂರ್ತಿಗಳು ! ಹೀಗೆ ಬಡುಕಲು ಬಡಕಲಾಗಿರುವ ನಾನು ? ಯಾಕೆ, ಸಂದೇಹವೆ ? ನಾನು ಕೊಲೆ ಪಾತಕಿ—ಕೊಲೆಪಾತಕಿ.

ಆದರೆ ನನ್ನನ್ನು ಇಲ್ಲಿ ಗೌರವಿಸುತ್ತಾರೆ. ಸೆರೆಮನೆಯ ಆವರಣದೊಳಗೆ ಕಬ್ಬಿಣದ ಸರಳುಗಳ ಹಿಂದೆ ಬಂಧಿತನಾಗಿರುವ ನನ್ನ ಬಗ್ಗೆ ಅವರಿಗೆ ಗೌರವವಿದೆ. ಕಾರಣ—ನಾನು ವಿದ್ಯಾವಂತ. ಅಧಿಕಾರಿಗಳನ್ನು ನಾಚಿಸುವ ಹಾಗೆ ಆಂಗ್ಲರ ಭಾಷೆ ಮಾತಾಡಬಲ್ಲೆ. ಉಡುಗೆ ತೊಡುಗೆಯ ಸರಳ ರೀತಿಯಲ್ಲಿ ಆಗರ್ಭ ಶ್ರೀಮಂತರನ್ನೂ ಮೀರಿಸಬಲ್ಲೆ. ಅವರ ದೃಷ್ಟಿಯಲ್ಲಿ ನಾನು ಸಾಮಾನ್ಯ ಪಾತಕಿಯಲ್ಲ, ಎಲ್ಲರಿಗೂ ವಿಸ್ಮಯ ಉಂಟುಮಾಡಿರುವ ಮಹಾ ರಹಸ್ಯ ವ್ಯಕ್ತಿ. ವಿಚಾರಣೆಯ ನಡುವೆ ನಾನಿಲ್ಲಿ ಕುಳಿತಿದ್ದರೆ, ಈ ಜೈಲಿನ ಅಧಿಕಾರಿಗಳು ಒಂದು ರೀತಿಯಲ್ಲಿ ಹೆಮ್ಮೆಪಡುತ್ತಾರೆ. ತಮ್ಮ ಬಿಡುವಿನ ಅವಧಿಯಲ್ಲಿ ನನ್ನೊಡನೆ ಹರಟೆಗಾಗಿ ಬರುತ್ತಾರೆ. ಆ ಮಾತು ಈ ಮಾತು ಆಡುತ್ತಾರೆ. ನಿಯಮಗಳನ್ನು ಮೀರಿ ಹೆಚ್ಚು ಸಲಿಗೆಯಿಂದ ವರ್ತಿಸುತ್ತಾರೆ; ಸೌಕರ್ಯ ಒದಗಿಸುತ್ತಾರೆ. ಬರೆಯಲು ಬೇಕಾದ ಈ ಅನುಕೂಲತೆ ನನಗೆ ದೊರೆತಿರುವುದೂ ಅವರ ಔದಾರ್ಯದಿಂದಲೇ . . .

ನಾನು ಯಾರೆಂಬುದನ್ನು, ಏನೆಂಬುದನ್ನು, ಯಾಕೆ ಹೀಗೆ ಎಂಬುದನ್ನು ಯಾರಾದರೂ ಬಲ್ಲರೆ ? ನನ್ನ ಬಾಳ್ವೆಯ ಹಲವು ಅಧ್ಯಾಯಗಳನ್ನು ಎತ್ತಿ ತೋರಿಸಿ ನನ್ನ ಬಗ್ಗೆ ಯಾರಾದರೂ ಅಧಿಕಾರ ವಾಣಿಯಲ್ಲಿ ಮಾತಾಡಬಲ್ಲರೆ ? . . . ನಾನು ಈ ಸಮಾಜದೊಳಗೇ ಒಬ್ಬ ಸದಸ್ಯನಾಗಿದ್ದೆ, ನಿಜ ; ಆದರೆ ನಾನು ಜೀವಿಸಿದ್ದು ಈ ಸಮಾಜದ ಹೊರಗಿನ ಒಬ್ಬ ವ್ಯಕ್ತಿಯಾಗಿ. ಈ ಸಮಾಜಕ್ಕೂ ನನಗೂ ಇದ್ದ ಸಂಬಂಧವೇನು ಹಾಗಾದರೆ ? ಹುಟ್ಟಿ, ಬೆಳೆದು, ಸತ್ತು ಮಣ್ಣಾಗುವ ಕೋಟಿ ಜನರಲ್ಲಿ ನಾನೊಬ್ಬ, ನಿಜ. ಆದರೆ ಸತ್ತ ಬಳಿಕ ನನ್ನ ಬಗ್ಗೆ, ಉಳಿದವರು ಕ್ಷಣ ಕಾಲವೂ ಯೋಚಿಸಲಾರರೆ ? ಅವರ ಪಾಲಿಗೆ ನಾನು ಮುರಿದು ಹೋದ ಮುಳ್ಳು ಕಡ್ಡಿಯೆ ?

ಎಂಟು ವರ್ಷಗಳಿಗೆ ಹಿಂದೆ ನಾನು ಆ ಬರೆಹಗಾರನನ್ನು ಕಂಡೆ. ಎಲ್ಲಿಯೋ ನಾನು ಓದಿದ್ದ ಆತನ ಕೃತಿಗಳು ನನ್ನ ಗಮನವನ್ನು ಸೆಳೆದಿದ್ದುವು. ಅವನ ಮರಣಕ್ಕೆ ಕಾರಣನಾಗಬೇಕಾಗಿದ್ದ ನಾನು ಅವನ ಪ್ರಭಾವಕ್ಕೆ ಒಳಗಾಗಿ, ನನ್ನ ವ್ಯಕ್ತಿತ್ವವನ್ನೇ ಕಳೆದುಕೊಳ್ಳುವ ಗಂಡಾಂತರದಲ್ಲಿ ಸಿಲುಕಿದೆ. ನಾನು ಆಯ್ದು ಕೊಂಡಿದ್ದ ಹಾದಿಯಿಂದ ನನ್ನನ್ನು ಬೇರೆಡೆಗೆ ಒಯ್ಯಲು ಯೋಚಿಸಿದ ಆತನಿಂದ, ನಾನು ಬೇಗನೆ ದೂರವಾದೆ. ಆದರೆ ಈ ದಿನ ಇದನ್ನು ಬರೆಯಲು ನಾನು

ಸಮರ್ಥನಾದುದಕ್ಕೆ ಯಾರಾದರೂ ಕಾರಣರಿದ್ದರೆ, ಅದು ಆತನೊಬ್ಬನೇ. ಆತ ಹೇಳುತ್ತಿದ್ದ : "ಚಂದ್ರಶೇಖರ, ನೀವು ಯಾರೋ ನನಗೆ ತಿಳಿಯದು. ನಿಮ್ಮ ವಿಚಿತ್ರ ವ್ಯಕ್ತಿತ್ವವನ್ನು ನಿಮ್ಮ ಇಚ್ಛೆಗೆ ವಿರುದ್ಧವಾಗಿ ತಿಳಿಯೋ ಬಯಕೆಯೂ ನನಗಿಲ್ಲ. ಆದರೆ ಇಷ್ಟು ಹೇಳಬಲ್ಲೆ. ಈ ಜೀವನ ಪ್ರವಾಹದಲ್ಲಿ ನೀವು ಹುಲ್ಲುಕಡ್ಡಿಯೋ—ಕಲ್ಲುಬಂಡೆಯೋ, ಒಡೆದ ದೋಣಿಯೋ—ಯುದ್ಧದ ಹಡಗೋ ಆಗಿರೋದು ನಿಜ. ನೀವೇನೇ ಇರಿ. ನಿಮ್ಮ ಅನುಭವಗಳನ್ನು ನೀವು ಬರೆದಿಡಬೇಕು. ಅದು ಒಳ್ಳೇ ಸಾಹಿತ್ಯ ಆಗೋದರಲ್ಲಿ ಯಾವ ಸಂಶಯವೂ ಇಲ್ಲ. ಹಾಗೆ ಆತ ಹೇಳಿದಾಗ ನನಗೆ ನಗು ಬಂದಿತ್ತು. ಸ್ವಲ್ಪ ಹೆಮ್ಮೆಯೂ ಅನಿಸಿತ್ತು. ಆದರೆ, ನನ್ನ ಪೂರ್ಣ ಕಥೆ ತಿಳಿದರೆ ಈತ ನನ್ನನ್ನು ದೂರವಿಡಬಹುದೆಂಬ ಭೀತಿಯೂ ನನ್ನನ್ನು ಆವರಿಸಿತ್ತು.

ಅಂತೂ ಈಗ ನಾನು ಬರೆಯತೊಡಗಿದ್ದೇನೆ. ಬರೆದುದನ್ನು ಆ ಸಾಹಿತಿಗೇ ತಲುಪಿಸಿದರಾಯಿತು. ಆತ ಈ ಕೆಲಸಕ್ಕೆ ಒಪ್ಪಕೊಡಲಿ. ಹೊಸದಾಗಿ ಬರೆಯುವವರ ಪುಸ್ತಕಗಳಿಗೆ ಹಲಬರು ಮುನ್ನುಡಿ ಬರೆಯುತ್ತಾರಂತೆ. ನನ್ನ ಪುಸ್ತಕಕ್ಕೆ ಆತನೇ ಮುನ್ನುಡಿ ಬರೆಯಲಿ.

ಯಾಕೆ ಈ ಹಂಬಲ? ನಾನು ಪ್ರಸಿದ್ಧ ಪುರುಷನಾಗಬೇಕೆಂದೆ? ಪತ್ರಿಕೆಗಳಲ್ಲಿ ನನ್ನ ಹೆಸರು ಬರಬೇಕೆಂದೆ? ಇಲ್ಲ. ಅಂಥ ಪ್ರಸಿದ್ಧಿ ನನಗೆ ಬೇಕಾಗಿಲ್ಲ. ಮಹಾ ಅಪಾಯಕಾರಿ ವ್ಯಕ್ತಿಯೆಂದೂ ಸಮಾಜ ಕಂಟಕನೆಂದೂ ನಾನು ಈಗಾಗಲೇ ಸಾಕಷ್ಟು ಪ್ರಸಿದ್ಧನಾಗಿದ್ದೇನೆ. ಯಾರು ಎಲ್ಲಿ ಕೊಲೆಮಾಡಿದರೂ ನಾನೇ ಜವಾಬ್ದಾರ ಎನ್ನುವಷ್ಟರ ಮಟ್ಟಿಗೆ ಪ್ರಖ್ಯಾತನಾಗಿದ್ದೇನೆ. ದಿನಪತ್ರಿಕೆಗಳು ಮೊದಲ ಪುಟದಲ್ಲಿ ದಪ್ಪ ಅಕ್ಷರಗಳಲ್ಲಿ ನನ್ನ ಮೇಲಿನ ಆರೋಪಗಳನ್ನು ಮುದ್ರಿಸಿವೆ. ಇನ್ನು ಆಗಬೇಕಾಗಿರುವುದು ನನ್ನ ವಿಚಾರಣೆ. ಆಮೇಲೆ ಶಿಕ್ಷೆ, ಮರಣ ದಂಡನೆ, ಇಲ್ಲವೆ ಬದುಕಿರುವವರೆಗೂ ಕಾರಾಗೃಹ.

ನನಗೇಕೋ ನಗು ಬರುತ್ತಿದೆ. ಇವರು ಮೂರ್ಖರು. ಇಂಥವರಿಂದಲೇ ತುಂಬಿರುವ ಈ ಸಮಾಜದ ಸಹವಾಸ ಸಾಕುಸಾಕಾಗಿ ನಾನು ಹೊರಟುಹೋಗುತ್ತಿದ್ದೇನೆ. ಕರುಳಿನ ಈ ಸಮಾಜ ಸಹವಾಸ ಸಾಕುಸಾಕಾಗಿ ನಾನು ಹೊರಟು ಹೋಗುತ್ತಿದ್ದೇನೆ. ಕರುಳಿನ ಬಾಧೆಯನ್ನೂ ಸಹಿಸಿ ನನ್ನ ಹೃದಯದಲ್ಲಿ ನೆಲೆಸಿರುವ ನೆಮ್ಮದಿಯನ್ನು ಇವರು ಕಾಣರೇ? ನಾನು ಅಪೇಕ್ಷಿಸಿದ್ದರೆ ಇಲ್ಲಿಂದ ತಪ್ಪಿಸಿಕೊಂಡು ಹೋಗುವುದು ದೊಡ್ಡ ಮಾತಲ್ಲ. ಆದರೆ, ನನಗೆ ಬೇಕಾಗಿರುವುದು ಅಂಥ ವಿಮೋಚನೆಯಲ್ಲ. ಸಣ್ಣ ಸೆರೆಮನೆಯಿಂದ ದೊಡ್ಡ ಸೆರೆಮನೆಗೂ ದೊಡ್ಡದರಿಂದ ಸಣ್ಣದಕ್ಕೂ ಹೋಗಿ ಬಂದು ನಾನು ಬೇಸತ್ತು ಹೋಗಿದ್ದೇನೆ. ನನಗೀಗ ಬಿಡುಗಡೆ ಬೇಕು, ನಿಶ್ಶರ್ತವಾದ ಬಿಡುಗಡೆ. ನ್ಯಾಯದ ದೀರ್ಘ ಹಸ್ತವಾಗಲೀ ಪೋಲೀಸರ ಕೋಳಕಲು ಕೈಯಾಗಲೀ ನಾಗರಿಕರೆಂಬವರ ಸಂಸ್ಕಾರವಾಗಲೀ ಎಂದೆಂದಿಗೂ ನನ್ನನ್ನು

ಬಾಧಿಸದಂತಹ ಬಿಡುಗಡೆ ನನಗೆ ಬೇಕು. ಅದು ಸುಲಭಸಾಧ್ಯವಲ್ಲವೆಂಬುದನ್ನು ನಾನು ಬಲ್ಲೆ. ಅದಕ್ಕೆ, ಅಪಾರ ಬೆಲೆಯನ್ನೇ ನಾನು ತೆತ್ತು ಬಿಡುಗಡೆ ಹೊಂದಬೇಕು.

ನನ್ನ ಪಕ್ಕದ ಕೊಠಡಿಯಲ್ಲಿ ಸುಪ್ರಸಿದ್ಧ ಕೇಡಿಯಾದ ಕರಿಯನಿದ್ದಾನೆ. ಅವನಿಗೆ ಓದು ಬಾರದು. ಆದರೆ, ಆತನಿಗೆ ಇರುವ ಪ್ರಪಂಚ ಜ್ಞಾನ ಸಾಮಾನ್ಯವಾದುದಲ್ಲ. ಆರನೆಯ ಬಾರಿ ಸೆರೆಮನೆ ಸೇರಿದಮೇಲೆ ಆತನಿಗೆ ಇದೊಂದು ವಿಶ್ರಾಂತಿ ಗೃಹವಾಗಿದೆ. ಕಳೆದಸಲ ಬಿಡುಗಡೆ ಹೊಂದಿದವನು ಬೀದಿಬೀದಿ ಅಲೆದನಂತೆ. ಸಂಭಾವಿತನಾಗಿ ಕೂಲಿಯಾಗಿ ಬಾಳುವ ಇಚ್ಛೆ ಹಿಂದೆ ಅವನಿಗಿತ್ತು. ಆದರೆ, ಅಂತಹ ಅವಕಾಶವನ್ನು ಸಮಾಜ ನೀಡಲಿಲ್ಲ. ಆತನನ್ನು 'ಕಳ್ಳ' 'ಕಳ್ಳ' ಎಂದಿತು. ಕರಿಯ ತನ್ನನ್ನು ಹಿಂಬಾಲಿಸುತ್ತಿದ್ದ ಪೋಲೀಸರಿಂದಲೂ ಪೋಕರಿ ಹುಡುಗರಿಂದಲೂ ತಪ್ಪಿಸಿಕೊಳ್ಳಲು ಕಂಡುಕೊಂಡ ಹಾದಿ ಒಂದೇ ಒಂದು. ಮತ್ತೆ ಕಳ್ಳತನ. ಹಿಡಿಯಲು ಪೋಲೀಸರು ಬಂದಾಗ ಓಡದೆ ಇರುವುದು. ಅವರೊಡನೆ ಸೆರೆಮನೆಗೆ ಮರಳಿ ಬರುವುದು! 'ವಿದ್ಯಾವಂತ'ನಾದ 'ದೊಡ್ಡಮನುಷ್ಯ'ನಾದ ನಾನು ಸೆರೆಮನೆಯಲ್ಲಿ ಇರುವುದನ್ನು ಕಂಡು ಆಶ್ಚರ್ಯಪಡುತ್ತಾನೆ. ಅವನಿನ್ನೂ ಪೂರ್ತಿ ಪಶುವಾಗಿಲ್ಲ. ನಮ್ಮ ವಿಭಾಗದಾಚೆ ಇರುವ ಸ್ತ್ರೀ ಕೈದಿಗಳತ್ತ ಆತ ಹೋಗಲು ಯತ್ನಿಸುತ್ತಾನೆ. ಗಂಡು ಪಶುವಾಗಿ ಹಾಗೆ ಹೋಗುವುದಿಲ್ಲ. ಅಲ್ಲೊಬ್ಬಳು ಕೈದಿ ಇದ್ದಾಳೆ—ಎಲ್ಲವ್ವ. ನಾಲ್ಕು ತಿಂಗಳ ಹಿಂದೆ ಕಳ್ಳತನ ಮಾಡಿ ಆಕೆ ಜೈಲಿಗೆ ಬಂದಾಗ ತುಂಬು ಗರ್ಭಿಣಿಯಾಗಿದ್ದಳು. ಒಂದೇ ದಿನ ಅವರಿಬ್ಬರಿಗೂ ಒಂದೇ ನ್ಯಾಯಸ್ಥಾನದಲ್ಲಿ ಶಿಕ್ಷೆ ಆಯಿತು—ಅವಳಿಗೆ ಮೊದಲ ಬಾರಿ; ಆತನಿಗೆ ಆರನೆಯ ಬಾರಿ. ಅಲ್ಲಿಯೇ ಅವರಿಗೆ ಪರಸ್ಪರ ಪರಿಚಯವಾದುದು. ಆ ಪರಿಚಯದ ಅನಂತರ ಈಗ? ಎಲ್ಲವ್ವ ಗಂಡು ಕೂಸನ್ನು ಹಡೆದಿದ್ದಾಳೆ. ಬಂದೀಖಾನೆಯಲ್ಲಿ ಹುಟ್ಟಿದ ಮಗುವಿಗೆ ಕ್ರಿಸ್ನ ಎಂದು ಹೆಸರಿಟ್ಟಿರುವ ರಸಿಕಳು ಆಕೆ. ಹಾದರಕ್ಕೆ ಹುಟ್ಟಿದ ಗಂಡು ಮಗುವಿಗೆ ಕೃಷ್ಣ ಎಂಬ ಹೆಸರು! ಕರಿಯ ಆ ತಾಯಿಯನ್ನೂ ಮಗುವನ್ನೂ ಪ್ರೀತಿಸುತ್ತಾನೆ. ಗಂಡು-ಹೆಣ್ಣಿನ ಸಂಬಂಧದಲ್ಲಿ ಪ್ರೀತಿ ಎಂದರೆ ಏನೆಂಬುದನ್ನು ನೀವು ಬಲ್ಲಿರಾ? ಕೇಡಿಯಾಗಿ ಸಮಾಜ ಬಾಹಿರನಾಗಿ ಅನಾಗರಿಕನೆಂದು ಕರೆಯಲ್ಪಟ್ಟ ಕರಿಯ, ಬೀದಿಗೆ ಬಿದ್ದ ಎಲ್ಲವ್ವಳನ್ನು ಪ್ರೀತಿಸುತ್ತಾನೆ. ಹೆಸರು ಹೇಳಲು ತಂದೆ ಇಲ್ಲದ ಆ ಮಗುವನ್ನು ಕೂಡಾ. ಇದು ಆಶ್ಚರ್ಯದ ಸಂಗತಿ. ಕೊಠಡಿಯ ಸರಳುಗಳ ಎಡೆಯಿಂದ ಕರಿಯ ನನ್ನೊಡನೆ ಮಾತನಾಡುತ್ತ ತನ್ನ ಹೃದಯದೊಳಗಿನ ನೋವನ್ನು, ಹೊರಕ್ಕೆ ಹರಿಯಬಿಡುತ್ತಾನೆ. ಅವಕಾಶ ದೊರೆತರೆ, ಹೊರ ಹೋದಮೇಲೆ ಎಲ್ಲವ್ವನೊಡನೆ ಸಂಸಾರ ಹೂಡಬೇಕೆಂಬ ಆಸೆ ಅವನಿಗೆ. ಮನುಷ್ಯನಾಗುವ ಆಸೆ. ಕೇಡಿಯ ಹಗಲುಗನಸಿಗೆ ಒಂದು ಮಿತಿ ಬೇಡವೆ— ಎಂದು ಕೇಳಬಹುದು ಯಾರಾದರೂ.

ಪಕ್ಕದ ಇನ್ನೊಂದು ಕೋಣೆಯಲ್ಲಿ ಎಳೆ ಹರೆಯದ ಯುವಕನೊಬ್ಬ ಇದ್ದಾನೆ. ಕಾರಿಯನಿಗಿಂತ ಐದಾರು ವರ್ಷ ಚಿಕ್ಕವನು ಈತ. ಇನ್ನೂ ವಿಚಾರಣೆ ಮುಗಿದಿಲ್ಲ. ಈತನ ಮನಸ್ಸು ಅಸ್ತವ್ಯಸ್ತವಾಗಿದೆ. "ನಾನು ಹೊಡೆದೆ. ಅವಳು ಸತ್ಹೋದ್ಲು. ಆದರೆ ಸತ್ಹೋಗ್ಲಿ ಅಂತ ನಾನು ಹೊಡೀಲಿಲ್ಲ. ನಾನು ತಪ್ಪು ಮಾಡಿಲ್ಲ. ಏನ್ಸಾರ್? ನನ್ನನ್ನು ಬಿಟ್ಬಿಡಬಹುದೇ ಸಾರ್?" ಎಂದು ಆತ ಕೇಳುತ್ತಿದ್ದಾನೆ. ಎಲ್ಲರೂ ಹೀಗೆಯೇ. ಆರಂಭದಲ್ಲಿ ಎಲ್ಲರೂ ಹೀಗೆಯೇ. ನಾನದನ್ನು ಚೆನ್ನಾಗಿ ಬಲ್ಲೆ. ನಾಳೆ ಆತನ ಮುಖದ ಚರ್ಯೆ ಬದಲಾಗುವುದು. ಮುಖದ ಮೇಲೆ ಕಾಠಿನ್ಯದ ರೇಖೆಗಳು ಮೂಡುವುವು. ಎಲ್ಲರನ್ನು ನೆಟ್ಟ ದೃಷ್ಟಿಯಿಂದ ನೋಡುವ ಸಾಮರ್ಥ್ಯ ಆ ಕಣ್ಣುಗಳಿಗೆ ಬರುವುದು. ಆಮೇಲೆ ತುಚ್ಛೀಕಾರದ ನೋಟ. ಇದು ಯಾವಾಗಲೂ ಹೀಗೆಯೇ.

... ನನ್ನ ಆತ್ಮಕತೆ ಹೇಳಲು ಹೊರಟವನು ಬೇರೆಯವರ ಬಗ್ಗೆ ಬರೆಯುತ್ತಿದ್ದೇನೆ! ಇದು ಸರಿಯಲ್ಲ. ನನಗಿರುವ ಸ್ವಲ್ಪ ಅವಕಾಶದಲ್ಲಿ, ಹೇಳಬೇಕಾದ್ದೆಲ್ಲವನ್ನೂ ನಾನು ಹೇಳಿ ಮುಗಿಸಬೇಕು. ಆದರೆ ಈದಿನ ನಾನು ಹೆಚ್ಚು ಬರೆಯಲಾರೆ. ಗತಕಾಲದ ಸ್ಮರಣೆಗಳು ಧಾವಿಸಿ ಬರುತ್ತಿವೆ. ಏನನ್ನು ಬರೆಯಲಿ? ಏನನ್ನು ಬಿಡಲಿ? ಆದರೂ ನಾನು ಬರೆಯಬೇಕು. ಯೋಚಿಸಿ, ಯೋಚಿಸಿ, ನೂರು ಎಳೆಗಳನ್ನು ಒಂದೊಂದಾಗಿ ಎತ್ತಿ, ಜೀವನದ ಬಿಡಿಸಲಾಗದ ಸಿಕ್ಕನ್ನು ಮೆಲ್ಲಮೆಲ್ಲನೆ ಬಿಡಿಸಿ, ಒಂದು ನೇರವಾದ ಉದ್ದನೆಯ ದಾರವನ್ನು ನಾನು ಹೊಸೆಯಬೇಕು. ಆ ದಾರದ ಕೊನೆ ಬಂದಾಗ ನನ್ನ ಕತೆಯ ಮುಕ್ತಾಯವಾಗುವುದು. ಆ ರಹಸ್ಯವನ್ನು ಇಲ್ಲಿ ಹೇಳಲೆ? ಆ ದಾರವೇ ನನ್ನ ಪಾಲಿಗೆ ಉರುಳಾಗಿ ಪರಿಣಮಿಸುವುದೆಂದರೆ ನೀವು ನಂಬುವಿರಾ? ದೇಹದ ಕಾಹಿಲೆ, ಮನಸ್ಸಿನ ಕಾಹಿಲೆಯನ್ನು ನೀಗಿಸಿದೆ. ಈ ಸಾರಿ ಈ ಅನಾರೋಗ್ಯದಿಂದ ನಾನು ತಪ್ಪಿಸಿಕೊಳ್ಳಲಾರೆ. ಈ ವಿಚಾರಣೆಯ ನಾಟಕದಲ್ಲಿ ನನಗೆ ಆಸಕ್ತಿಯಿಲ್ಲ. ಆದರೂ ನ್ಯಾಯದ, ಸತ್ಯದ ದೊಡ್ಡ ಹೆಸರಿನಲ್ಲಿ ಆ ವಿಚಾರಣೆ ಆಗಬೇಕು! ನನಗೆ ನಗು ಬರುತ್ತಿದೆ: ನನ್ನ ಬಿಡುಗಡೆಯನ್ನು ನಾನು ಪಡೆದಮೇಲೆ ಇವರೇನು ಮಾಡುವರು? ಒಂದು ವಾರದ ಬಳಿಕ ಇವರೇನು ಮಾಡುವರು?

ಬುಧವಾರ

ಹೇಮಾವತಿ ತುಂಬಿ ಹರಿಯುತ್ತಿತ್ತು. ನನ್ನ ತಂದೆಯ ಕೊರಳಿನ ಸುತ್ತಲೂ ಕಾಲು, ಹಾಕಿ ಭುಜದ ಮೇಲೆ ಕುಳಿತು, ಅವನ ತಲೆಯನ್ನು ನನ್ನ ಪುಟ್ಟ ಕೈಗಳಿಂದ ಬಿಗಿಹಿಡಿದಿದ್ದೆ. ತಾಯಿ, ಚಿಂದಿ ಸೀರೆ ಬಟ್ಟೆಬರೆಗಳ, ದೇವರ, ಗಂಟು ಹೊತ್ತು ನಮ್ಮ ಹಿಂದೆ ನಿಂತಿದ್ದಳು. ನದಿ ದಾಟಿ ನಗರಕ್ಕೆಂದು ನಾವು ಸಾಗಿ ಬರಬೇಕು.

ಬಹಳ ದಿನಗಳ ಮೇಲೆ ತಂದೆ ತನ್ನ ಕಡೆಯ ಘಳಿಗೆಯಲ್ಲಿ, 'ರಾಮ ರಾಮ' ಎನ್ನುತ್ತ, ಆ ಘಟನೆಯನ್ನು ಸ್ಮರಿಸಿಕೊಂಡು ನನ್ನನ್ನು ಕೇಳಿದ್ದ : "ಚಂದ್ರು ನಿಂಗೆ ನೆಪ್ಪಯ್ತಾ ? ನಿಮ್ಮಮ್ಮ. . . .ನೆಪ್ಪಯ್ತೇನೋ ?"

ನನಗೆ ನೆನಪಿತ್ತು, ಚೆನ್ನಾಗಿ ನೆನಪಿತ್ತು !

ಎಲ್ಲವೂ ಕೈಬಿಟ್ಟು, ಹೊಲದ ಜೊತೆ ಆದರ ಮೂಲೆಯಲ್ಲಿದ್ದ ನಮ್ಮ ಗುಡಿಸಲೂ ಹೋದಾಗ, ನಾವು ಅಲ್ಲಿಂದ ಹೊರಬಿದ್ದೆವು ; ದುಡಿದು ಬದುಕುವ ಆಸೆಯಿಂದ ಹೊರಟೆವು. ನಗರದಲ್ಲಿ ಇದ್ದ ಯಾರೋ ಪರಿಚಿತರ ನೆರವನ್ನು ಪಡೆದು ಕೆಲಸ ಹುಡುಕಬೇಕೆಂಬುದು ತಂದೆಯ ತೀರ್ಮಾನ. ಅದಕ್ಕಾಗಿಯೇ ತಂದೆ, ತಾಯಿ, ನಾನು ಹಳ್ಳಿಬಿಟ್ಟು ಬಂದೆವು. ಹಳ್ಳಿಯನ್ನು ಹಿಂದೆ ಬಿಟ್ಟು, ನದಿಯ ದಂಡೆಯ ಮೇಲೆ ನಿಂತೆವು.

ತಂದೆ, ತಾಯಿಯನ್ನು ಕೇಳಿದ : "ಏನ್ಮಾಡೋಣಾಂತೀಯಾ ರುಕ್ಕೂ ?"

ಪ್ರಾಯಶಃ ಅದು ಅವನ ಪ್ರೀತಿಯ ಪ್ರಶ್ನೆಯಾಗಿತ್ತೆಂದು ತೋರುತ್ತದೆ— "ಏನ್ಮಾಡೋಣಾಂತೀಯಾ ರುಕ್ಕೂ ?"

ನಾನು ಹಿಂದಕ್ಕೆ ತಿರುಗಿ ತಾಯಿಯ ಮುಖ ನೋಡಿದೆ. ತಂದೆಯೂ ತಿರುಗಿ ತಾಯಿಯ ಮುಖ ನೋಡಿದ. ಆಕೆ ನಮ್ಮಿಬ್ಬರ ಮುಖವನ್ನು ನೋಡಿದಳು. ಮಾತನಾಡದೆ ಎಂದಿನಂತೆ ತಂದೆಯೇ ನಿರ್ಧಾರ ಮಾಡಿರಬೇಕು. ಆಳ ಕಡಮೆ ಇದ್ದ ಭಾಗದಲ್ಲಿ ನಾವು ನೀರಿಗಿಳಿದೆವು. ಸೊಂಟವನ್ನು ಮೀರಿ ನೀರು ಮೇಲಕ್ಕೆ ಬರಲಿಲ್ಲ. ನಡುಹೊಳೆಯಲ್ಲಿ ನಾವು ಕ್ಷಣಕಾಲ ನಿಂತೆವು. ತಂದೆ ನದಿಯ ಮೇಲಕ್ಕೂ ಕೆಳಕ್ಕೂ ದೃಷ್ಟಿ ಹಾಯಿಸಿದರು. ತಾಯಿ ವೆಂಕಟರಮಣನಿಗೆ ಹಣ್ಣುಕಾಯಿಯ ಹರಕೆ ಹೊತ್ತಳು. ದೇವರು ಒಳ್ಳೆಯವನು, ಅಲ್ಲವೆ ? ಹಳ್ಳಿಯ ಮನುಷ್ಯರು ನನ್ನ ತಂದೆ ಮತ್ತು ತಾಯಿಗೆ ನೆರವಾಗಿರಲಿಲ್ಲ. ಆದರೆ, ದೇವರು ? ಆತ ದಡಹಾಯಿಸದೆ ಇರುವುದುಂಟೆ ? ನಾವು ಮುಂದಕ್ಕೆ ಸರಿದೆವು. ತಂದೆ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ಮೆಲ್ಲ ಮೆಲ್ಲನೆ ಸಾಗಿದ. ತಾಯಿ ದೇವರ–ಬಟ್ಟೆಯ ಮೂಟೆಯೊಡನೆ ಹಿಂಬಾಲಿಸಿ ಬಂದಳು. ದಡ ಹತ್ತಿರವಾಯಿತು. "ಇನ್ನೇನು ಆಗೋಯ್ತು, ದಡ ಬಂದ್ಬಿಡ್ತು" ಎಂದ ತಂದೆ. ನಾನು ತಿರುಗಿ ಹಿಂದಕ್ಕೆ ನೋಡಿದೆ. ತಾಯಿ—

ಆಕೆಯ ಕೊರಳಿನವರೆಗೂ ನೀರು ಬಂದಿತ್ತು. ಬಹಳ ದಿನಗಳ ಮೇಲೆ ಅದನ್ನು ವಿವರಿಸುತ್ತ ತಂದೆ ನನಗೆ ಹೇಳಿದ್ದ : ತನಗೆ ಅಂಟಿಕೊಂಡೇ ಬರುವುದರ ಬದಲು ಆವಳು ಎಲ್ಲೋ ಸ್ವಲ್ಪ ಪಕ್ಕಕ್ಕೆ ಹೊರಳಿರಬೇಕು. ಅಲ್ಲಿಯೇ—

೦ ೦ ೦ ೦ ೦

ನಾನು ಸದ್ದಿಲ್ಲದೆ ಎದ್ದು ದೀಪ ಹಚ್ಚಿದೆ. ಅದರ ಸೊಡರು ಗಾಳಿಯಲ್ಲಿ ತೂರಾಡುತ್ತಿತ್ತು. ಕ್ಯಾಲೆಂಡರಿನ, ಇನ್ನೊಂದು ಚಿತ್ರದ, ತೂಗುಹಾಕಿದ್ದ ಬಟ್ಟೆಬರೆಯ, ನೆರಳುಗಳೆಲ್ಲ ಗೋಡೆಯ ಮೇಲೆ ನರ್ತಿಸುತ್ತಿದ್ದುವು. ವರ್ತನೆಯ ಹಾಲು

ಒಯ್ದು ಕೊಡಲು ತಡವಾಯಿತೆಂದು ನಾನು ಲಗುಬಗೆಯಿಂದ ಹೊರಕ್ಕೋಡಿದೆ. ಅದಕ್ಕೆ ಸರಿಯಾಗಿ ಅಜ್ಜಿ ನನ್ನನ್ನು ಕೂಗಿ ಕರೆದರು :

"ಚಂದ್ರೂ....ಬಂದ್ಯೇನೋ ಮರಿ....?"

ನಮ್ಮ ಗುಡಿಸಿಲಿನಲ್ಲಿ ದೀಪ ಹಚ್ಚಿದ್ದರೆ ನಾನು ಬಂದಿದ್ದೆ ಎಂದರ್ಥ. ಆಗ ಅಜ್ಜಿ ಮರಿಯನ್ನು ಕರೆಯುವರು. ಅವರ ಪಾಲಿಗೆ ನಾನು ಯಾವಾಗಲೂ ಮರಿಯೇ. ವರ್ಷ ಆರಾದರೇನು, ಹದಿನಾರಾದರೇನು? ನಾನು ಯಾವಾಗಲೂ ಅಜ್ಜಿಯ ದೃಷ್ಟಿಯಲ್ಲಿ ಮರಿಯೇ.

ಮುಂದೆಯೂ ಅಷ್ಟೆ. ನಾನು ಕೆಟ್ಟುಹೋದೆನೆಂದು ನಾಲ್ಕು ಜನ ಬಂದು ಅಜ್ಜಿಗೆ ಹೇಳಿದಾಗಲೂ ಅವರು ಮರಿಯ ಬಗ್ಗೆ ಅವಿಶ್ವಾಸ ತಳೆಯಲಿಲ್ಲ. ಪೋಲೀಸರು ಬಂದು ವಿಚಾರಿಸಿದಾಗ, ಮರಿಯ ಮೇಲೆ ಆರೋಪ ಹೊರಿಸಿದ ಆ ಜನರನ್ನು ಅವರು ಶಪಿಸಿದರು.

ಪೋಲೀಸರು—

o o o o o

.....ರಾತ್ರಿ ಹನ್ನೊಂದು ಹೊಡೆಯಲು ಇನ್ನೂ ಸ್ವಲ್ಪ ಹೊತ್ತಿದೆ. ಈ ದಿನ ಬೆಳಗು ಮುಂಜಾನೆಯಿಂದ ನಾನು ಬರೆಯುತ್ತ ಬಂದಿದ್ದೇನೆ. ಎಂದೂ ಇಷ್ಟು ಬರೆದವನಲ್ಲ. ಕೈಬೆರಳುಗಳು ನೋಯುತ್ತಿವೆ. ಮಧ್ಯಾಹ್ನದ ನಿದ್ದೆಯನ್ನು ಬಿಟ್ಟುಕೊಟ್ಟು, ಹರಟೆಗೂ ಹೋಗದೆ ದಿನದ ಪತ್ರಿಕೆಯನ್ನೂ ಓದದೆ, ನಾನು ಈ ಆತ್ಮವೃತ್ತವನ್ನು ಬರೆಯುತ್ತಿದ್ದೇನೆ.

ಇನ್ನೊಂದು ವಿಷಯ ಬರೆದು ನಾನು ವಿರಮಿಸಬೇಕು. ಮನುಷ್ಯನಿಗೆ ನಿದ್ದೆ ಅಗತ್ಯ. ಮುಂದಿನ ವಾರದ ಮಾತು ಮುಂದೆ. ಆದರೆ ಸದ್ಯ ಆತ್ಮವೃತ್ತವನ್ನು ಬರೆಯುತ್ತಿದ್ದೇನೆ. ಆ ಬರವಣಿಗೆ ಸಾಧ್ಯವಾಗುವಂತೆ, ಇನ್ನು ಆರು ದಿನಗಳಲ್ಲಿ ಮುಕ್ತಾಯವಾಗುವಂತೆ, ನಾನು ಕೈಗೂ ಮೆದುಳಿಗೂ ವಿಶ್ರಾಂತಿ ಕೊಡಲೇಬೇಕು.

ಆದರೆ, ಈ ದಿನ ಹೇಳಲು ಉಳಿದಿರುವ ಈ ವಿಷಯವನ್ನು ಹೇಗೆ ಬರೆಯಲಿ— ಹೇಗೆ ಬರೆಯಲಿ?

o o o o o

ನನ್ನ ತಂದೆ ಮತ್ತು ನನ್ನ ಅಜ್ಜಿ....

ಆ ಪೋಲೀಸರು.....

— ಆ ಘಟನೆ ನಡೆದುದು ಹೀಗೆ, ನಾನು ಶಾಲೆ ಬಿಟ್ಟ ಸಂಗತಿ ತಂದೆಗೆ ತಿಳಿದು ಕೆಲವು ತಿಂಗಳುಗಳಾಗಿದ್ದುವು. ಆತ ಸೊರಗುತ್ತಲೇ ಇದ್ದ.

ಆ ಸಂಜೆ ಬೀದಿಯ ದೀಪಗಳು ಬೆಳಗಿಕೊಂಡ ಹೊತ್ತಿಗೆ ನನ್ನ ಕೈಯಲ್ಲಿ ಇನ್ನೂ ಉಳಿದಿದ್ದ ಕೆಲವು ಪತ್ರಿಕೆಗಳನ್ನು ಮಾರಿ ಮುಗಿಸುವುದಕ್ಕೋಸ್ಕರ ಬಸ್ ನಿಲ್ದಾಣದ ಆ ಚೌಕದಲ್ಲಿ ನಾನು ನಿಂತಿದ್ದೆ. ನನ್ನ ಪಕ್ಕದಲ್ಲೇ ಸೂಟು ಧರಿಸಿ, ರುಮಾಲು ಹೊತ್ತು, ಕೈಯಲ್ಲಿ ನಡೆಗೋಲು ಹಿಡಿದಿದ್ದ ದೊಡ್ಡ ಮನುಷ್ಯರೊಬ್ಬರು ನಿಂತಿದ್ದರು.

"ಪೇಪರ್ ಬೇಕೆ ಸಾರ್ ?" ಎಂದು ಕೇಳಿದೆ.

ಅವರು ನನ್ನನ್ನು ದುರುಗುಟ್ಟಿ ನೋಡಿದರು. ಪೇಪರು ಬೇಡವೆಂಬುದು ಆ ನೋಟದ ಅರ್ಥವಾಗಿತ್ತು.

ನಾನು ಅಲ್ಲಿದ್ದುದು ಎರಡೇ ನಿಮಿಷ. ಅಷ್ಟರಲ್ಲಿ ಆ ಕಳ್ಳತನವಾಗಿತ್ತು. ಆ ಹುಡುಗ ನಮ್ಮಿಬ್ಬರಿಗೂ ನಡುವೆ ಹಿಂಬದಿಯಿಂದ ಬಂದು ಅವರ ಷರಾಯಿಯ ಜೇಬಿಗೆ ಕೈಹಾಕಿ ಹಣದ ಪಾಕೀಟು ಹೊಡೆದಿದ್ದ. ಸಾಮಾನ್ಯವಾಗಿ ಕೋಟಿನ ಒಳಗೆ ಹೃದಯಕ್ಕೆ ತಾಗಿಯೇ ಬೆಚ್ಚಗೆ ಇಡಬೇಕಾಗಿದ್ದ ಆ ಪಾಕೀಟನ್ನು ಅದೇಕೆ ಆ ಮಹಾನುಭಾವರು ಷರಾಯಿಯ ಜೇಬಿನಲ್ಲಿ ಇಟ್ಟಿದ್ದರೋ! ನನಗೆ ಆ ಹುಡುಗನ ಪರಿಚಯವಿತ್ತು. ಆತ ಹಿಂದೆ ಪತ್ರಿಕೆ ಮಾರುತ್ತಿದ್ದನಂತೆ. ಆದರೆ ವೃದ್ಧೆಯಾದ ತಾಯಿಯನ್ನೂ ತಂಗಿಯನ್ನೂ ಸಾಕಬೇಕಾದ ಅವಶ್ಯಕತೆ ಹೆಚ್ಚು ಸಂಪಾದನೆಯ ಆ ಕೆಲಸಕ್ಕೆ ಅವನನ್ನು ನೂಕಿತ್ತು.

ಆ ದೊಡ್ಡ ಮನುಷ್ಯರು, ಮನೆಗೆ ಬೆಂಕಿ ಹತ್ತಿಕೊಂಡವರು ಕಿರಿಚುವ ಹಾಗೆ ಬೊಬ್ಬೆ ಇಟ್ಟರು. ಅವರ ನಡೆಗೋಲು ಎತ್ತರಕ್ಕೆ ಆಕಾಶದಲ್ಲಿ ಅತ್ತಿತ್ತ ಬೀಸ ತೊಡಗಿತು. ಇನ್ನು ದೂರ ಸರಿಯುವುದೇ ಮೇಲೆಂದು ನಾನು ಅಲ್ಲಿಂದ ಹೊರಟೆ. ಆಗ ಅವರು ನನ್ನನ್ನು ಹಿಡಿದರು. ತಪ್ಪಿಸಿಕೊಂಡು ಓಡಿಹೋಗಬಹುದಾಗಿತ್ತು. ಆದರೆ ನಿರಪರಾಧಿಯಾದ ನಾನು ಹಾಗೆ ಯಾಕೆ ಮಾಡಬೇಕು? ಎರಡು ನಿಮಿಷ ಗಳಲ್ಲಿ ಪೋಲೀಸರು ಬಂದು ನನ್ನನ್ನು ತಮ್ಮ ವಶಪಡಿಸಿಕೊಂಡರು. ನಿಜವಾಗಿಯೂ ಕದ್ದಿದ್ದ ಹುಡುಗನನ್ನು ನಾನು ತೋರಿಸಿಕೊಡಬಹುದಾಗಿತ್ತು. ಆತ ಓಡಿಹೋಗಿರ ಲಿಲ್ಲ. ಬೀದಿಯ ಆಚೆ ನಿಂತು ನನ್ನನ್ನೇ ನೋಡುತ್ತಿದ್ದ.

ಪೋಲೀಸರು ಬೀದಿಯಲ್ಲೇ ನನ್ನ ಕೆನ್ನೆಗೆ ಏಟು ಬಿಗಿದರು. ಬೆನ್ನಿಗೆ ಗುದ್ದಿದರು. ಕಳೆದುಹೋದ ಪಾಕೀಟಿಗಾಗಿ ನನ್ನ ಮೇಲೆ ಕೈಯಾಡಿಸಿದರು. ಏನೂ ಸಿಗದೆ ಹೋದಾಗ ಹಿಡಿದು ಠಾಣೆಗೆ ಒಯ್ದರು. ಹಣ ಕಳೆದುಕೊಂಡು, ಹತ್ತಾರೊ ನೂರಾರೊ ರೂಪಾಯಿಗಳ ಮಟ್ಟಿಗೆ ಬಡವರಾಗಿದ್ದ ಆ ಶ್ರೀಮಂತರತ್ತ ನಾನು ನೋಡಲಿಲ್ಲ.

ಪೋಲೀಸು ಠಾಣೆಯಲ್ಲಿ ನನ್ನನ್ನು ಲಾಕಪ್ಪಿನಲ್ಲಿಟ್ಟರು.

ಪೋಲೀಸಿನ ಮಿಾಸೆ ಮುನಿಯಪ್ಪ ಬಹಳ ತಿಳಿದವನ ಹಾಗೆ ಇನ್ಸ್‌ಪೆಕ್ಟರಿಗೆ ಹೇಳಿದ:

"ಈ ಪೇಪರ್ ಮಾರೋ ಹುಡುಗರು ಮಹಾ ಖದೀಮರು....ಇವನ್ನ ನಂಬೋಹಂಗೇ ಇಲ್ಲ. ಇವನ ಮನೆ ಸರ್ಚ್ ಮಾಡ್ಬೇಕು. ಆಗ ಇವನೆಂಥವನು ಅಂಬೋದು ಗೊತ್ತಾಗ್ತದೆ."

ಇನ್ಸ್‌ಪೆಕ್ಟರ್ ನಗುತ್ತ ಕೇಳಿದ:

"ಇವನಿನ್ನೂ ಮನೆಗೆ ಹೋಗಿಲ್ಲಪ್ಲೊ ಮುನಿಯಪ್ಪ ?"

ಮುನಿಯಪ್ಪ ತನ್ನ ಹೊಟ್ಟೆಯನ್ನು ಮುಂದಕ್ಕೆ ಬಾಗಿಸಿ ಅರ್ಧ ರೆಪ್ಪೆಯನ್ನು ಮುಚ್ಚಿಕೊಂಡ. ಅವನ ಹುಬ್ಬುಗಳು ಮೇಲಕ್ಕೆ ಹೋಗಿ ಆ ಹೊಟ್ಟೆಯನ್ನು ಮುಟ್ಟಿದುವು. ಬುದ್ಧಿವಂತನಾದ ಮುನಿಯಪ್ಪ ಯೋಚಿಸುತ್ತಿದ್ದ. ಉತ್ತರ ಅವನಿಗೆ ಹೊಳೆಯಿತೇನೊ!

"ಪಾಕೀಟು ಅಲ್ಲ ಸಾರ್. ಇವನು ಬೇರೇನೂ ಕಳ್ಳತನ ಮಾಡಿದ್ರೆ ಮನೆಯೊಳಗೆ ಏನೂ ಸಿಗಾಕಿಲ್ವ?"

"ಮಾರಾಟ ಮಾಡದೆ ಮನೇಲಿ ಇಟ್ಟಿರ್ತಾರೇನು ಕದ್ದ ಸಾಮಾನು?"

ಇದಕ್ಕೆ ಏನು ಉತ್ತರ ಕೊಡಬೇಕೆಂದು ಮುನಿಯಪ್ಪನಿಗೆ ತೋಚಲಿಲ್ಲ.

ತಮಾಷೆಯೆಂದರೆ ಮುನಿಯಪ್ಪನ ಸಲಹೆಯನ್ನು ಅಧಿಕಾರಿ ಮಾನ್ಯಮಾಡಿದ್ದು. ಇನ್ಸ್‌ಪೆಕ್ಟರ್ ನಮ್ಮ ಮನೆ ಶೋಧಿಸಲು ಮುಂದಾದ.

ನಮ್ಮ ಮನೆಯ ಶೋಧನೆ; ಮುಂದೇನಾಗಬಹುದು? ಮಗ ಸಂಭಾವಿತನಾಗುವನೆಂದು, ದೊಡ್ಡ ಮನುಷ್ಯನಾಗುವನೆಂದು, ಆಸೆ ಇರಿಸಿಕೊಂಡಿದ್ದ ತಂದೆ ಪೋಲೀಸರ ಪ್ರಶ್ನೆಗಳಿಗೆ ಉತ್ತರ ಕೊಡಬೇಕು! ಅಜ್ಜಿ ತನ್ನ ಮರಿಯಿಂದ ತನಗಾದ ಅವಮಾನವನ್ನು ಸಹಿಸಿಕೊಳ್ಳಬೇಕು! ನನಗೆ ದಿಕ್ಕು ತೋಚಲಿಲ್ಲ. ಗಲಿಬಿಲಿಯಾಯಿತು. ನಾನು ಇನ್ಸ್‌ಪೆಕ್ಟರನ ಮುಖ ನೋಡಿದೆ. ಅದಾದಾಗಲೆಂದು ಇಂಗ್ಲಿಷ್‌ನಲ್ಲಿ ಆತನನ್ನು ಸಂಬೋಧಿಸಿದೆ. "ದಯವಿಟ್ಟು ನಮ್ಮ ಮನೆಗೆ ಹೋಗ್ಬ್ಯಾಡ್ರಿ ಸಾರ್. ನಾನು ಕಳ್ಳತನ ಮಾಡಿಲ್ಲ ಸಾರ್. ನನ್ನ ತಂದೆಗೆ ಟಿ.ಬಿ. ಕಾಹಿಲೆ—ದಯವಿಟ್ಟು ಮನೆಗೆ ಹೋಗ್ಬ್ಯಾಡ್ರಿ ಸಾರ್."

ಲಾಕಪ್ಪಿನಲ್ಲಿರುವ ಹುಡುಗ, ಪೋಲೀಸರು ತನ್ನ ಮನೆಗೆ ಹೋಗಬಾರದು ಎನ್ನುತ್ತಾನೆ. ತಂದೆಗೆ ಕಾಹಿಲೆ ಎನ್ನುತ್ತಾನೆ. ಆತನಿಗೆ ದುಡ್ಡಿನ ಅವಶ್ಯಕತೆ ಇದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಎಷ್ಟು ಸಾಕ್ಷ್ಯವಿದ್ದರೂ ತಾನು ಕಳ್ಳತನ ಮಾಡಿಲ್ಲವೆಂದೇ ಹಟ ಸಾಧಿಸುತ್ತಾನೆ. ....ಆ ಪೋಲೀಸ್ ಅಧಿಕಾರಿ ಹೀಗೆ ಯೋಚಿಸಿರಬೇಕು. ಆದರೆ ಆತ ತನ್ನ ಸಂದೇಹಗಳನ್ನು ವ್ಯಕ್ತಪಡಿಸಲಿಲ್ಲ.

"ಹಾಗೇ ಆಗಲಿ. ನಿನ್ನ ತಂದೆಗೆ ಕಾಹಿಲೆ ಹೌದೊ ಅಲ್ಲವೊ ತಿಳಿದಬೇಕು. ಮನೆಯ ಅಡ್ರೆಸ್ ಕೊಡು....ಇಂಗ್ಲಿಷ್ ಬೇರೆ ಮಾತಾಡ್ತೀಯಾ, ನಿನ್ನನ್ನ ಕಳ್ಳ ಅಂತ ಹೇಳೋದು ಹ್ಯಾಗೆ?"

ಆ ಮಾತಿನಲ್ಲಿ ವಿನಯವಿತ್ತು. ಆದರೆ ಅದು ಕೃತಕವೆಂದು ಆಗ ನನಗೆ ತಿಳಿಯಲಿಲ್ಲ.

"ವಿಚಾರಿಸಿ ತಿಳ್ಕೊಳ್ಳಿ ಸಾರ್. ಆದರೆ ನಮ್ಮನೇಗೆ ಪೋಲೀಸರು ಹೋಗ್ಬ್ಯಾರ್ದು ನಮ್ಮ ತಂದೆ ನೊಂದ್ಕೋತಾನೆ ಸಾರ್."

"ಆಗಲಿ. ಅಡ್ರೆಸ್ ಕೊಡು."

ನಾನು ನಮ್ಮ ಮನೆಯ ವಿಳಾಸ ಕೊಟ್ಟೆ.

ಅದು ಕೈಸೇರಿದೊಡನೆ ಆ ಅಧಿಕಾರಿ ನಕ್ಕ. ಘಾತವಾಯಿತೆಂದು ಆಗ ನನಗೆ ತಿಳಿಯಿತು.

" ನಿನ್ನನ್ನು ಹೊಡೆದು ಅಡ್ರೆಸ್ ತಿಳಿಕೋಬೇಕಾದ ತೊಂದರೇನೆ ತಪ್ತಲ್ಲೊ ಇಂಗ್ಲಿಷ್ ಸಾಹೇಬ ! ಇಷ್ಟು ಸುಲಭವಾಗಿ ಸಿಕ್ಬಾಕ್ಕೊಳ್ಳೋನು ನೀನೆಂಥ ಕಳ್ತನ ಮಾಡ್ತೀಯಾ ?"

ನನಗೆ ಅಳು ಬಂತು. ನ್ಯಾಯದ ರಕ್ಷಕರಾಗಿದ್ದ ಆ ವ್ಯಕ್ತಿಗಳನ್ನು ನಾನು ಮನಸಾರೆ ದ್ವೇಷಿಸಿದೆ. ಅಂತಹ ಕ್ಷುದ್ರಜಂತುಗಳ ಮುಂದೆ ನನ್ನ ಅಸಹಾಯತೆಯ ಕಣ್ಣೀರು ಹರಿಯಬಾರದೆಂದು ಅದನ್ನು ಹತ್ತಿಕ್ಕಿದೆ.

ಆ ಅಧಿಕಾರಿಯೂ ಇಬ್ಬರು ಪೋಲೀಸರೂ ಹೊರಟುಹೋದರು ನಮ್ಮ ಮನೆಗೆ. ಲಾಕಪ್ಪಿನ ಮುಂದೆ ಕುಳಿತಿದ್ದವನು, ಸ್ಟೇಷನ್ ಡ್ಯೂಟಿಯ ಪೋಲೀಸಿನಾತ, ಜೇಬಿನಿಂದ ಬೀಡಿ ತೆಗೆದು ಕಡ್ಡಿಗೀರಿ ಹೊಗೆಯುಗುಳಿದ. ಗಾಢವಾದ ಯೋಚನೆಯಲ್ಲಿ ತಲ್ಲೀನನಾದ ಹಾಗಿತ್ತು, ಅವನ ಮುಖಮುದ್ರೆ. ಅದೇನು ಯೋಚನೆಗಳು ಅವನನ್ನು ಕಾಡುತ್ತಿದ್ದುವೊ! ನನ್ನನ್ನು ಮಾತ್ರ, ಇಂಥದೇ ಎಂದು ಹೇಳಲಾಗದ ಭೀತಿಯೊಂದು ಆವರಿಸಿತ್ತು. ಮನೆಯಲ್ಲಿ ಏನಾಗುವುದು ? ಏನಾಗುವುದು ?....

....ನಾನು ಲಾಕಪ್ಪಿನೊಳಗೆ ಕುಳಿತಿದ್ದೆ. ಮನೆಯ ಶೋಧನೆಗೆ ಹೋದವರು ಹತ್ತು ಘಂಟೆಯ ಹೊತ್ತಿಗೆ ಮರಳಿ ಬಂದರು. ಬಂದಮೇಲೆ ನನ್ನತ್ತ ಮುಖ ಹೊರಳಿಸಿಯೂ ನೋಡಲಿಲ್ಲ. ನನ್ನ ಬಗ್ಗೆ ಯಾರಿಗೂ ಆಸಕ್ತಿಯೇ ಇದ್ದಂತೆ ತೋರಲಿಲ್ಲ. ನಾನು ಸೊಳ್ಳೆಗಳನ್ನು ತೀಡಿ ಕೊಲ್ಲುತ್ತ, ದುರ್ಗಂಧವನ್ನು ಸಹಿಸಿಕೊಳ್ಳುತ್ತ, ಹೊತ್ತು ಕಳೆದೆ.

ನಡುರಾತ್ರೆ ಇರಬೇಕು. ಇನ್ಸ್‌ಪೆಕ್ಟರ್ ಇನ್ನೂ ಮನೆಗೆ ಹೋಗಿರಲಿಲ್ಲ. ಪೋಲೀಸಿನವನೊಬ್ಬ ಹೊರಗೆ ಜಗಲಿಯ ಮೇಲೆ ತೂಕಡಿಸುತ್ತಿದ್ದ.

" ಸ್ವಾಮಿೊ....ಸ್ವಾಮಿೊ...."

ನಾನು ಬೆಚ್ಚಿಬಿದ್ದೆ. ನನ್ನ ತಂದೆಯ ಸ್ವರ—ನನ್ನ ತಂದೆ. ನೆಲ ಎರಡು ಹೋಳಾಗಿ, ನಾನು ಕೆಳಕ್ಕೆ ಇಳಿದುಹೋಗಿ, ತಂದೆಯ ದೃಷ್ಟಿಯಿಂದ ಮರೆಯಾಗಬಾರದೇ ಎನ್ನಿಸಿತು, ಆದರೆ ಆತ ಜಗಲಿಯ ಮೇಲೆ ನಿಂತು ಬಾಗಿಲಿನ ಎಡೆಯಿಂದ ಲಾಕಪ್ಪಿನೊಳಕ್ಕೆ ನೋಡಿಯೇ ನೋಡಿದ. ನಮ್ಮ ಒಂದೇ ಒಂದಾದ ಹರಕು ಕಂಬಳಿ ಹೊದ್ದು ಆತ ಬಂದಿದ್ದ. ಕುರಚಲು ಗಡ್ಡ, ಬತ್ತಿಹೋಗಿದ್ದ ಕೆನ್ನೆಗಳನ್ನು ಮುಚ್ಚಿತ್ತು. ಕಣ್ಣುಗಳು ಆಳಕ್ಕೆ ಇಳಿದಿದ್ದುವು. ಅವು ಚಲಿಸಿದಾಗ ಆ ನೋಟದಲ್ಲಿ ಯಾವ ಭಾವನೆ ಇತ್ತೆಂಬುದನ್ನು ಆಗ ತಿಳಿಯುವುದು ಸಾಧ್ಯವಿರಲಿಲ್ಲ. ಸ್ಟೇಷನ್ನಿನ ಮಂದಪ್ರಕಾಶದಲ್ಲಿ ಅವನು ನನಗೆ ಕಾಣಿಸುತ್ತಿದ್ದ. ಆದರೆ ಲಾಕಪ್ಪಿನ ಕತ್ತಲೆ ನನ್ನನ್ನು ಆತನಿಂದ ಮರೆಮಾಡಿತ್ತು.

ಹೀಗಿದ್ದರೂ ತಂದೆಯ ಕಣ್ಣುಗಳು ನನ್ನನ್ನು ಗುರುತಿಸಿದುವು.

ಅಧಿಕಾರಿ, " ಏನು ? ಏನೀಗ ?" ಎಂದ.

ಜಗಲಿಯ ಮೇಲೆ ತೂಕಡಿಸುತ್ತಿದ್ದ ಪೋಲೀಸಿನವನು ಎದ್ದು ಬಂದು "ನಡಿ, ಹೊರಕ್ಕೆ ನಡಿ!" ಎಂದ.

ತಂದೆ ಹೊರಕ್ಕೆ ನಡೆಯಲಿಲ್ಲ. ಆತ ಅಧಿಕಾರಿಯನ್ನೇ ದಿಟ್ಟಿಸಿ ನೋಡಿದ. ಆ ನೋಟದಲ್ಲಿ ದೈನ್ಯವಿತ್ತೋ ದ್ವೇಷವಿತ್ತೋ ನನಗೆ ತಿಳಿಯದು. ಆ ಸ್ವರ ಮಾತ್ರ ಏಕರೂಪವಾಗಿ ಹೊರಬೀಳುತ್ತಿತ್ತು :

"ಸ್ವಾಮಿ, ನನ್ನ ಹುಡುಗ ಚಂದ್ರಶೇಖರ....ಸ್ವಾಮಿ....ತಾವು...."

ಅಧಿಕಾರಿ ಸಿಟ್ಟಾಗಿ ಕೂಗಾಡಿದ:

"ಹೊರಟ್ಹೋಗು. ನಿನ್ನ ಮಗನ್ನ ಇಲ್ಲಿ ಯಾರೂ ತಿನ್ನಾ ಇಲ್ಲ. ತೆಪ್ಪಗೆ ಹೊರಟ್ಹೋಗು."

ಆದರೂ ತಂದೆ ಅಲ್ಲೇ ನಿಂತ.

"ಸ್ವಾಮಿ, ನಾನು ಜಾಮೀನು ಕೊಡ್ತೀನಿ. ಹುಡುಗನ್ನ ಬಿಟ್ಬಿಡಿ ಸ್ವಾಮಿ...."

ನನಗೆ ಸಹಿಸುವುದಕ್ಕಾಗಲಿಲ್ಲ. ಎಂತಹ ಆಸೆಗಳನ್ನಿಟ್ಟುಕೊಂಡಿದ್ದ ಆ ತಂದೆ! ಕ್ರೂರಿಯಾದ ನಾನು ಎಂತೆಂತಹ ನೋವುಗಳಿಗೆ ಆ ಜೀವವನ್ನು ಗುರಿಮಾಡಿದ್ದೆ!

ಅಧಿಕಾರಿ ಮತ್ತೆ ಗದರಿದ :

"ನಿನ್ನ ಜಾಮೀನೂ ಬೇಡ, ಏನೂ ಬೇಡ. ಬೆಳಗಾದ್ಮೇಲೆ ಬಿಟ್ಬಿಡ್ತೀವಿ— ಈಗ ಹೊರಟ್ಹೋಗು."

ನನ್ನ ಎದೆ ಡವಡವನೆ ಬಡಿದುಕೊಳ್ಳುತ್ತಿತ್ತು. ನಾನು ಗಟ್ಟಿಯಾಗಿ ಹೇಳಿದೆ.

"ಅಪ್ಪಾ, ನೀನು ಮನೆಗೆ ಹೋಗಪ್ಪಾ. ಈ ಚಳೀಲಿ ಹೊರಗೆ ಹೋಗ್ಬಾರ್ದು ಅಂತಲ್ವಾ ಡಾಕ್ಟರು ಹೇಳಿದ್ದು? ಮನೆಗೆ ಹೋಗಪ್ಪಾ, ಬೆಳಗ್ಗೆ ಬಂದ್ಬಿಡ್ತೀನಿ. ಮನೆಗೆ ಹೋಗಪ್ಪಾ."

ತಂದೆ ನನ್ನತ್ತ ನೋಡಲೇ ಇಲ್ಲ. ಅದರಿಂದ ನನ್ನ ದುಃಖ ಇಮ್ಮಡಿಸಿತು....

ಅದರೆ ಸ್ವಲ್ಪ ಹೊತ್ತಾದಮೇಲೆ, ವಿನೀತನಾಗಿ ಅಧಿಕಾರಿಗೆ ಬಾಗಿ ವಂದಿಸಿ, ಅವನು ಮೆಲ್ಲನೆ ಹೊರಹೋದ.

ನನಗೆ ನಿದ್ದೆ ಬರಲಿಲ್ಲ. ದುಗುಡದಿಂದ ಹೃದಯ ಹೆಪ್ಪುಗಟ್ಟಿತ್ತು. ಮುಖ ಬಿಗಿದುಕೊಂಡಿತ್ತು. ಕೈಕಾಲುಗಳು ಮರವಾಗಿದ್ದುವು. ದೀರ್ಘವಾದ—ಬಲು ದೀರ್ಘವಾದ—ಕತ್ತಲೆಯ ದೊಡ್ಡ ಗವಿಯೊಳಕ್ಕೆ ತಡವರಿಸುತ್ತಾ ತಡವರಿಸುತ್ತಾ ನಾನು, ಮುಂದಕ್ಕೂ ಹೋಗಲಾರದೆ ಹಿಂದಕ್ಕೂ ಹೋಗಲಾರದೆ, ನಿಂತ ಹಾಗಿತ್ತು.

ಒಂದು ಘಂಟೆಯ ಹೊತ್ತಾದ ಮೇಲೆ ಅಧಿಕಾರಿ ಇಬ್ಬರು ಪೋಲೀಸರಿಗೆ ಅವರಲ್ಲಿ ಮುಖ್ಯಸ್ಥನಿಗೆ, ನಿರ್ದೇಶನಗಳನ್ನು ಕೊಟ್ಟು ತಾನು ಮನೆಗೆ ಹೊರಟ. ಆ ನಿರ್ದೇಶನಗಳಲ್ಲಿ ನನಗೆ ಸಂಬಂಧಿಸಿದ್ದು ಏನೂ ಇರಲಿಲ್ಲ.

ಅಧಿಕಾರಿ ಬೀದಿಗಿಳಿಯುತ್ತಿದ್ದಂತೆ ಆತನ ಸ್ವರ ಕೇಳಿಸಿತು :

"ಇನ್ನೂ ಇಲ್ಲೇ ಇದ್ದೀಯೇನೋ? ನಡಿ ಆಚೆಗೆ, ರ್‍ಯಾಸ್ಕಲ್! ಇಲ್ದಿದ್ರೆ ನಿನ್ನೂ ಲಾಕಪ್ಪಿಗೆ ಸೇರಿಸ್ತೀನಿ."

ನನ್ನಪ್ಪ ಇನ್ನೂ ಅಲ್ಲೇ ನಿಂತಿದ್ದ. ಮನೆಗೆ ಹೋಗಿರಲಿಲ್ಲ. ಕ್ಷಯದ ಕಾಹಿಲೆಯ ಆ ಜೀವ ಹೊರಗೆ ಶೀತದಲ್ಲಿ ಚಳಿಯಲ್ಲಿ ನಿಂತಿತ್ತು.

ಆಮೇಲೆ ಯಾವ ಸದ್ದೂ ಕೇಳಿಸಲಿಲ್ಲ. ನಿಮಿಷಗಳು ಘಂಟೆಗಳಾದುವು. ಪ್ರತಿಯೊಂದು ಘಂಟೆಗೆ ಪೋಲೀಸಿನವನು ಗಂಟೆ ಬಾರಿಸುತ್ತಿದ್ದ. ಹಾಗೆ, ರಾತ್ರಿ ಮೆಲ್ಲಮೆಲ್ಲನೆ ಕರಗಿತು. ಬೆಳಗು ಮುಂಜಾವ ನನಗೆ ಜೊಂಪು ಹಿಡಿದಿರಬೇಕು. ಒರಗಿದಲ್ಲಿಯೆ ನಾನು ನಿದ್ದೆ ಹೋಗಿದ್ದೆ. ಎಚ್ಚರವಾದಾಗ ಸ್ಟೇಷನ್ನಿನ ಗೋಡೆ ಗಡಿಯಾರದ ಮುಳ್ಳುಗಳು ಆರೂವರೆಯನ್ನು ಸೂಚಿಸುತ್ತಿದ್ದುವು.

ಬೆಳಗಾಗಿತ್ತು. ಇನ್ನು ಬಿಡುಗಡೆಯಾಗಬೇಕು. ತಂದೆ ಪ್ರಾಯಶಃ ರಾತ್ರಿಯೇ ಮನೆಗೆ ಹೋಗಿರಬಹುದೆಂದು ಭಾವಿಸಿದೆ. ಪೋಲೀಸರು ಶೋಧನೆಗೆ ಹೋದಾಗ ಮನೆಯಲ್ಲಿ ಆಗಿರಬಹುದಾದ ಅವಾಂತರವನ್ನು ಊಹಿಸಿಕೊಳ್ಳುತ್ತ ಕುಳಿತೆ. ನಿನ್ನೆ ಸಂಜೆ ಆ ದೊಡ್ಡ ಮನುಷ್ಯರ ಪಾಕೀಟು ಕಳೆದುಹೋದುದರಿಂದ ಆರಂಭವಾಗಿ ಈವರೆಗಿನ ಎಲ್ಲ ಘಟನೆಗಳಲ್ಲಿ ನಮ್ಮ ಮನೆಯ ಶೋಧನೆಯೊಂದೇ ನನಗೆ ತಿಳಿಯದ ಅಂಶವಾಗಿತ್ತು....

ನಾನು ಎಚ್ಚೆತ್ತೆ. ಆದರೆ ಸ್ಟೇಷನ್ ಇನ್ನೂ ಎದ್ದಿರಲಿಲ್ಲ. ಆಗ........

"ಸ್ವಾಮಿ....ಪೋಲೀಸಪ್ಪನೋರೇ....ಸ್ವಾಮಿ."

ಅದು ನನ್ನ ತಂದೆಯ ಸ್ವರ. ಮನೆಯಿಂದ ಮತ್ತೆ ಬಂದನೇನೋ ಹಾಗಾದರೆ?

"ಏನೋ ಅದು ಗಲಾಟೆ? ರಾತ್ರೆ ಸಾಹೇಬರು ಹೋದ್ಮೇಲೂ ಮರದ ಕೆಳಗೆ ಮುದುರ್‍ಕೊಂಡು ಬಿದ್ದಿದ್ಯಲ್ಲೊ? ನಿನ್ಮಗ ಹುಡುಗಿ ಅಂತ ತಿಳ್ಕೊಂಡ್ಯೇನೊ? ಯಾರು ಮುಟ್ತಾರೆ ಅವನ ಮೈ?"

ಹಾಗಾದರೆ ನನ್ನ ತಂದೆ ಮನೆಗೆ ಹೋಗಿಯೇ ಇರಲಿಲ್ಲ!

ಮಗನ ಬಿಡುಗಡೆಯ ಹಾದಿ ನೋಡುತ್ತ ಆ ರಾತ್ರಿಯನ್ನೆಲ್ಲ ಆತ ಸ್ಟೇಷನ್ನಿನ ಎದುರಿಗಿದ್ದ ಮರದ ಕೆಳಗೇ ಕಳೆದಿದ್ದ!

ಮತ್ತೆ ಹೊತ್ತು ಬಲು ನಿಧಾನವಾಗಿ ಕಳೆಯಿತು. ಹಗಲು ಪಾಳಿಯ ಅಧಿಕಾರಿ ಬಂದುದು ಒಂಭತ್ತು ಗಂಟೆಗೆ. ನನ್ನನ್ನು ಅವರು ಹೋಗಗೊಟ್ಟುದ್ದು ಆಮೇಲೆ. ಅಲ್ಲೆ ಬಾಗಿಲ ಬಳಿ ತಂದೆ ನಿಂತಿದ್ದ. ನಾನು ಅಧಿಕಾರಿಯನ್ನು ನೋಡಿ, "ನನ್ನ ಪೇಪರು ಮತ್ತು ಹಣ" ಎಂದೆ.

"ಏನು?" ಎಂದು ಆತ ಬುಸುಗುಟ್ಟಿದ.

"ನಿನ್ನೆ ನನ್ನನ್ನು ಅರೆಸ್ಟ್ ಮಾಡಿದಾಗ ನನ್ನ ಜೇಬಿನಲ್ಲಿದ್ದ ಒಂದೂವರೆ ರೂಪಾಯಿ ಚಿಲ್ಲರೆಯನ್ನೂ ಉಳಿದಿದ್ದ ಪೇಪರ್‌ಗಳನ್ನೂ ಭದ್ರತೆಗಾಗಿ ವಶ ಪಡಿಸ್ಕೊಂಡ್ರು."

ನನ್ನ ಮಾತಿನಲ್ಲಿ ನನಗರಿಯದ ಹಾಗೆಯೇ ವ್ಯಂಗ್ಯ ಬೆರೆಯುತ್ತಿತ್ತು.

ಅಧಿಕಾರಿಗೆ ಅದು ಸಹನೆಯಾಗಲಿಲ್ಲ.

"ಗೆಟ್‌ಔಟ್, ರ್‍ಯಾಸ್ಕಲ್ !"

ಅದು ಕೇಳಿಸದವನಂತೆ ನಟಿಸುತ್ತ, "ಏನೆಂದಿರಿ ಸಾರ್ ?" ಎಂದೆ.

ನನ್ನ ತಂದೆ ಮುಂದೆ ಹೆಜ್ಜೆಯಿಟ್ಟು ನನ್ನನ್ನು ತನ್ನೆಡೆಗೆ ಎಳೆದುಕೊಂಡ. ನಾವಿಬ್ಬರೂ ಬೀದಿಗಿಳಿದೆವು. ಮನೆಯ ಹಾದಿ ಹಿಡಿದೆವು.

ಅಜ್ಜಿ ನಮ್ಮ ಬರವನ್ನೇ ಇದಿರು ನೋಡುತ್ತಿದ್ದ ಹಾಗಿತ್ತು. ತಂದೆ ಹಾದಿ ಯುದ್ದಕ್ಕೂ ಮಾತನಾಡಿಯೇ ಇರಲಿಲ್ಲ. ಆದರೆ ಅಜ್ಜಿ ನನ್ನನ್ನು ಕಂಡೊಡನೆ ಮುಂದಕ್ಕೆ ಓಡಿಬಂದರು, ಆಕೆ ಮಡಿಯಲ್ಲಿರಲಿಲ್ಲ. ಸ್ನಾನ ಮಾಡಿಯೇ ಇರಲಿಲ್ಲ. ಓಡುತ್ತ ಬಂದು ನನ್ನ ಮೈದಡವಿದರು.

"ಏನಪ್ಪಾ ಚಂದ್ರು . . . ಹೊಡೆದ್ರೇನೋ ನಿಂಗೆ ?"

ಹನ್ನೊಂದು ವರ್ಷಗಳ ಹಿಂದೆ, ನಾನು ಮೊದಲ ಬಾರಿ ಶಾಲೆಗೆ ಹೋಗಿ ಹಿಂತಿರುಗಿದಾಗ, ಆಗ ಹೊಸ ಪರಿಚಯದವರಾಗಿದ್ದ ಆ ಅಜ್ಜಿ ಅದೇ ಪ್ರಶ್ನೆಯನ್ನು ನನಗೆ ಕೇಳಿದ್ದರು. ನಾನೀಗ ದೊಡ್ಡವನಾಗಿದ್ದೆ. ಆದರೂ ಅಜ್ಜಿಯ ಮಡಿಲಲ್ಲಿ ಕ್ಷಣಕಾಲ ಮುಖವಿಟ್ಟೆ. ಆಕೆ ನನ್ನ ತಲೆಗೂದಲು ನೇವರಿಸಿದರು, ಬೆನ್ನಮೇಲೆ ಕೈಯಾಡಿಸಿದರು. ಹೊಡೆತದ ಗುರುತುಗಳನ್ನು ಅವರ ವಯಸ್ಸಾದ ಬೆರಳುಗಳು ಹುಡುಕಿ ಹಿಡಿದುವು.

"ಪಾಪಿ ಮುಂಡೇಗಂಡರು. ಅವರ ಮನೆ ಹಾಳಾಗ! ಅವರ ಸಂತಾನ ಮಣ್ಣು ತಿಂದು ಹೋಗ! ಅವರ ವಂಶ ನಾಶವಾಗ! ನನ್ನ ಮರಿ ಮೈ ಮುಟ್ಟಿದ ಕೈ ಕತ್ತರಿಸಿ ಹೋಗ! . . ."

ನೋವಿನಿಂದಲ್ಲ, ಆ ಅಜ್ಜಿ ನನಗಾಗಿ ತೋರುತ್ತಿದ್ದ ಮಮತೆಯಿಂದ, ನನ್ನ ಹೃದಯ ಬಿರಿಯಿತು. ನಾನು ಪ್ರೀತಿಸಿದ ಅಜ್ಜಿಯ ಎದುರು ಕಣ್ಣೀರನ್ನು ಹರಿಯ ಗೊಟ್ಟೆ. ಹಾಗೆ ಮಾಡಲು ನನಗೆ ನಾಚಿಕೆಯಾಗಲಿಲ್ಲ.

. . . ಅಜ್ಜಿ ಹೇಳಿದ ಮಾತುಗಳಿಂದ ಹಿಂದಿನ ರಾತ್ರೆ ನಡೆದುದನ್ನು ನಾನು ಊಹಿಸಿಕೊಂಡೆ. ಚೆಲ್ಲಾಪಿಲ್ಲಿಯಾಗಿದ್ದ ನಮ್ಮ ಗುಡಿಸಲು ಆ ಕತೆ ಹೇಳಿತು. ನ್ಯಾಯದ ರಕ್ಷಕರು ಆ ವೃದ್ಧೆಯನ್ನು ಅವಮಾನಿಸಿದ್ದರು. ಆ ಮನೆಯ ಅಂಗಳದ ಒಂದೊಂದು ಕಂಬವೂ ಒಂದೊಂದು ಕಲ್ಲೂ ತಮಗಾದ ಅಪಮಾನದ ಕತೆ ಹೇಳು ತ್ತಿದ್ದುವು.

o o o o o

ಹನ್ನೆರಡು ಬಾರಿಸುತ್ತಿದೆ. ನಾನು ಬಳಲಿದ್ದೇನೆ. ಜೈಲಿನ ಸೆಂಟ್ರಿ ಹನ್ನೆರಡು ಹೊಡೆದು ಮುಗಿದ ಮೇಲೆ ಮತ್ತೆ ತೂಕಡಿಸುತ್ತಾನೆ . . . ಯಾರೋ ಒಬ್ಬರು ಅಳುತ್ತಿದ್ದಾರೆ. ನಾಳೆಯ ಕನಸು ಕಾಣುತ್ತಿರುವ ಕರಿಯ ಪಕ್ಕದ ಕೊಠಡಿಯಲ್ಲಿ

ಗೊರಕೆ ಹೊಡೆಯುತ್ತಿದ್ದಾನೆ. ತಾನು ನಿರಪರಾಧಿಯೆಂದು ಸಾಧಿಸಹೊರಟಿರುವ ಯುವಕ ಕನವರಿಸುತ್ತಿದ್ದಾನೆ. ಯಾವುದೋ ನಾಯಿ ಬೋ ೧೧ ಎಂದು ದೀರ್ಘವಾಗಿ ಗೋಗರೆಯುತ್ತಿದೆ.

. . . ನಾಯಿ ಹೀಗೆ ಗೋಳಾಡಿದರೆ ಯಾರಿಗೋ ಸಾವು ಸನ್ನಿಹಿತವಾಯಿತೆಂದು ಅರ್ಥವಂತೆ. ಅಜ್ಜಿ ಹಾಗೆ ಹೇಳುತ್ತಿದ್ದರು. ಸಾವಿನ ಮರಣದ ಈ ವಿಷಯಗಳೆಲ್ಲ ಮನುಷ್ಯನಿಗಿಂತ ಚೆನ್ನಾಗಿ ಆ ಮೂಕಪ್ರಾಣಿಗಳಿಗೆ ಅರ್ಥವಾಗುತ್ತವಂತೆ. ನಿಜವೊ ಅಲ್ಲವೊ ನನಗೆ ತಿಳಿಯದು. ಸಂಸಾರವಂದಿಗನಲ್ಲದ ನಾನು ಆ ಬಗ್ಗೆ ಸಂಶೋಧನೆ ಮಾಡಿಲ್ಲ.

o o o o o

ಪೋಲೀಸರ ದಾಖಲೆಯಲ್ಲಿ ಹೆಸರು ಬರೆಸಿಕೊಂಡ ಆ ದಿನ ಕಳೆದು ನಾಲ್ಕು ತಿಂಗಳಾಗಿತ್ತು. ತಂದೆಯ ಕಾಹಿಲೆ ಹೆಚ್ಚುತಲೇ ಇದ್ದ ದಿನಗಳು. ತನ್ನ ಜೀವನದ ಬಯಕೆಗಳೆಲ್ಲ ಮಣ್ಣುಪಾಲಾದ ಮೇಲೆ ಆ ಮನೋರೋಗವೇ ಅವನಿಗೆ ಕುಠಾರಪ್ರಾಯವಾಯಿತು.

ಆ ಸಂಜೆ ಅದೇ ಆಗ ಮನೆಗೆ, ಪತ್ರಿಕೆಯ ಮಾರಾಟ ಮುಗಿಸಿ, ಹಿಂತಿರುಗಿ ಬಂದಿದ್ದೆನಷ್ಟೆ. ಮನೆಯ ಅಂಗಳದಾಚೆ ನಾಯಿಯೊಂದು ಬೋ ೧೧ ಎಂದಿತು. ಅಜ್ಜಿ ಸೌದೆಯ ಕೊರಡನ್ನೆತ್ತಿಕೊಂಡು ಆ ನಾಯಿಯನ್ನು ಬಲು ದೂರದತನಕ ಅಟ್ಟಿಸಿಕೊಂಡು ಹೋದರು. ನಾಯಿ ಓಡಿಹೋಯಿತು.

ಆಮೇಲೆ ನಾಲ್ಕು ದಿನ ಮಾತ್ರ ತಂದೆ ಬದುಕಿದ. ಹಗಲೂ ರಾತ್ರೆಯೂ ಆತನ ಆರೈಕೆ ಮಾಡಿದೆ. ಒಮ್ಮೆ ನನ್ನನ್ನು ಬಳಿಯಲ್ಲೇ ಕುಳ್ಳಿರಿಸಿಕೊಂಡು ತಂದೆ ಆ ಪ್ರಶ್ನೆ ಕೇಳಿದ:

"ನೀನು ಆ ದಿವಸ ಪಾಕೀಟು ಕದ್ದಿರಲಿಲ್ಲ, ಅಲ್ವಾ ಚಂದ್ರು, ಅಲ್ವಾ?"

ನಾಲ್ಕು ತಿಂಗಳಾದ ಮೇಲೆ ತಂದೆ ಆ ಪ್ರಶ್ನೆ ಕೇಳಿದ್ದ. ನಾನು ನಿರಪರಾಧಿಯೆಂಬುದು ಆತನಿಗೆ ಗೊತ್ತಿತ್ತು. ಆದರೂ ಆ ಪ್ರಶ್ನೆ ಕೇಳಿದ್ದ.

"ಇಲ್ಲಪ್ಪ. ನಾನು ಯಾವತ್ತಾದರೂ ಹಾಗ್ಮಾಡೇನಾ?"

ಅದು ಆ ದಿನ ನಾನು ಹೇಳಿದ ಮಾತು—ಮರಣಶಯ್ಯೆಯಲ್ಲಿದ್ದ ತಂದೆಗೆ ಹೇಳಿದ ಮಾತು.

ಈ ದಿನ ಅದನ್ನು ಸ್ಮರಿಸಿಕೊಂಡಾಗ ನನ್ನ ಬಗ್ಗೆ ನನಗೆ ಕನಿಕರವೆನಿಸುತ್ತಿದೆ...

ಕೊನೆಯ ದಿನ ಕೆಮ್ಮು ಸರಳಾಟಗಳ ನಡುವೆ ಜೀವ ಗುಟುಕರಿಸುತ್ತಿದ್ದಾಗ ತಂದೆ ಹನ್ನೊಂದು ವರ್ಷಗಳ ಹಿಂದಿನ ಆ ದಿನವನ್ನು ಬಾರಿ ಬಾರಿಗೂ ಸ್ಮರಿಸಿದ.

"ಚಂದ್ರೂ, ನಿಂಗೆ ನೆಪ್ಪಯ್ತಾ? ನೆಪ್ಪಯ್ತೆನೊ ಚಂದ್ರು? ನಾವು ಆ ದಿವಸ ಹಳ್ಳಿಯಿಂದ ಬಂದದ್ದು . . . ನಿನ್ನ ತಾಯಿ . . . ಹೇಮಾವತಿ ಹೊಳೇಲಿ . . . ರುಕ್ಕೂ....ನಿನ್ತಾಯಿ ಕಣೋ....ನೆಪ್ಪಯ್ತಾ ನಿಂಗೆ?....ನೆಪ್ಪಯ್ತೇನೊ. . . . ?"

ನಾನು ಧಾರಾಕಾರವಾಗಿ ಕಣ್ಣೀರನ್ನು ಹರಿಯಗೊಟ್ಟೆ. ಮುಂದೆ ಜೀವನದಲ್ಲಿ ಕಂಬನಿಯ ಅವಶ್ಯತೆ ಇಲ್ಲವೆಂಬ ಪೂರ್ವ ಗ್ರಹಿಕೆ ನನಗಿರಲಿಲ್ಲ ನಿಜ. ಆದರೆ ನನ್ನ ಹೃದಯ ಆಳವಾಗಿತ್ತು, ವಿಶಾಲವಾಗಿತ್ತು. ಅಲ್ಲಿ ಒಂದೇ ಸಮನೆ ಸೋರಿಹೋದರೂ ಮುಗಿಯದಷ್ಟು ನೀರಿತ್ತು.

ರಾತ್ರಿ ನಡುವಿರುಳಲ್ಲಿ, "ರುಕ್ಕೂ, ಚಂದ್ರೂ, ರಾಮ-ರಾಮ," ಎನ್ನುತ್ತಾ ತಂದೆ ಕೊನೆಯ ಉಸಿರನ್ನೆಳೆದ.

. . . ಮರುದಿನ ಬೆಳಗ್ಗೆ ನನಗೆ ಜನ್ಮಕೊಟ್ಟಿದ್ದ ತಂದೆಯ ಶವವನ್ನು ಮಣ್ಣು ಮಾಡಿ ಬಂದುದಾಯಿತು. ಆತ ದೀರ್ಘ ನಿದ್ರೆಯಲ್ಲಿ ಮೈಮರೆತಿದ್ದ. ಮುಂದೆಂದೂ ಏಳದ ಹಾಗೆ ಆತ ನಿದ್ದೆ ಹೋಗಿದ್ದ . . .

. . . ಈಗ ಆ ನಿದ್ರೆಯನ್ನು ಸ್ಮರಿಸಿದಾಗ ನನಗೆ ಅಸೂಯೆ ಎನಿಸುತ್ತಿದೆ. ಅದು ಎಷ್ಟು ಆಪ್ಯಾಯಮಾನ ನಿದ್ರೆ! ದೀರ್ಘ ಬಳಲಿಕೆಯ ದೇಹಕ್ಕೆ ಅದೆಂತಹ ವಿಶ್ರಾಂತಿ!

. . . ಇನ್ನು ನಾನು ನಿದ್ರೆ ಹೋಗುವೆ. ನಾಳೆ ಮುಂಜಾವದವರೆಗಾದರೂ ನಿದ್ದೆ ಹೋಗುವೆ.

ಮಂಗಳವಾರ

ಬಲು ತಡವಾಗಿ ಎದ್ದು, ಈ ದಿನ ಎಲ್ಲರ ಕೌತುಕಕ್ಕೆ ಕಾರಣನಾಗಿದ್ದೇನೆ....

ಕರಿಯ ಕೇಳಿದ "ಹೆಂಗಿದೀರಿ ರಾಯರೆ?"

ರಾಯರು ಹೆಂಗಿದ್ದರು!

ಬಲ ಮಗ್ಗುಲಿನ ಯುವಕ ಕೇಳುತ್ತಿದ್ದಾನೆ:

"ನಿಮ್ಮ ವಿಚಾರಣೆ ಯಾವತ್ತು ಸಾರ್?"

ಹೌದು, ಯಾವತ್ತು ನನ್ನ ವಿಚಾರಣೆ? ಯಾವತ್ತು?

ಕಳೆದ ಮಂಗಳವಾರದಿಂದ ಈ ಮಂಗಳವಾರಕ್ಕೆ, ಇನ್ನೊಂದು ವಾರದೊಳಗೆ ಇಷ್ಟೊಂದು ಪುಟಗಳನ್ನು ನಾನು ಬರೆದೆನೆ? ನನಗೆ ಆಶ್ಚರ್ಯವಾಗುತ್ತಿದೆ. ನಿಜವಾಗಿಯೂ ನಾನೇ ಇಷ್ಟನ್ನೂ ಬರೆದೆನೆ?

ಇನ್ನು ನಾನು ಬರೆಯಬೇಕಾಗಿರುವುದು ಬಲು ಸ್ವಲ್ಪ....ಉಳಿದಿರುವುದು ಕೊನೆಯದಾಗಿ ವಿದಾಯ ಹೇಳುವ ಕೆಲಸ.

....ಈ ದಿನ ಬೆಳಕಾಗಿ, ಹಗಲು ಕಳೆದು, ಸಂಜೆ ಬಂದಿದೆ....ಎಷ್ಟೊಂದು ಬೇಗನೆ! ನನ್ನ ಬಾಳ ಸಂಜೆ ಬಂದೊದಗಿರುವುದು ಎಷ್ಟೊಂದು ಬೇಗನೆ!

ಈ ದಿನ ನಾನು ಉಪವಾಸವಿದ್ದೇನೆ....ವ್ರತನಿಷ್ಠೆಯಿಂದಲ್ಲ! ನನ್ನ ಅಂಗಾಂಗಗಳಿಗೆಲ್ಲ ವಿರಾಮ ಕೊಡುವ ಬಯಕೆಯಿಂದ ಹಾಗೆ ಮಾಡುತ್ತಿದ್ದೇನೆ.

ಇನ್ನು ಸಂಜೆಯ ಸೂರ್ಯ ಮುಳುಗುತ್ತಾನೆ— ಈ ಮಂಗಳವಾರ ಚಂದ್ರೋದಯವಾಗಬೇಕಾದರೆ ನಡುರಾತ್ರೆ ಕಳೆಯಬೇಕು. ಈ ಕೊಠಡಿಯ ಹಿಂಭಾಗದಲ್ಲಿ ಎತ್ತರದಲ್ಲಿರುವ ಕಿಟಕಿಯಿಂದ ಚಂದ್ರ ಇಣಿಕಿನೋಡುತ್ತಾನೆ. ಆಗ ಆತನಿಗೆ ಬಟ್ಟೆಯ ಬಲವಾದ ದಾರ ಕಾಣುತ್ತದೆ. ಆ ದಾರಕ್ಕೆ ಆತು ಅವನು ಇಳಿದು ಬರಬಹುದೇನೋ. ಅದಾಗದ ಕೆಲಸ. ನಾನು ಜೋತುಬಿದ್ದಿರುವಾಗ, ಚಂದ್ರನ ಭಾರವನ್ನೂ ಆ ದಾರ ಹೊರುವುದುಂಟೆ?

....ಯಾಕೆ, ಅರ್ಥವಿಲ್ಲದ ಮಾತುಗಳು ಈ ಲೇಖಣಿಯಿಂದ ಹೊರಬೀಳುತ್ತಿವೆಯಲ್ಲ!....

ಅರ್ಥವಿಲ್ಲದ ಮಾತುಗಳು ?

ನಾನು ಬಲ್ಲೆ, ಈಗಿನ ಕಾಲದಲ್ಲಿ ಪದಗಳ ಅರ್ಥವೇ ಬದಲಾಗುತ್ತಿದೆ. ಹಳೆಯ ಪದಗಳಿಗೆ ಹೊಸ ಅರ್ಥ ಬರುತ್ತಿದೆ....

ಆದರೆ ಪದಗಳು ಸಾಯುವುದಿಲ್ಲ.

ನಾನು ?

ಅಮ್ಮಾ—ಅಮ್ಮಾ—ಅಪ್ಪಾ—ಅಪ್ಪಾ—ಅಜ್ಜ—ಅಜ್ಜೀ!

—"ರುಕ್ಕೂ ಏನ್ಮಾಡೋಣಾಂತೀಯಾ ?"

—"ನೀನು ನಿಜವಾಗ಼್ೂ ಕದ್ದಿಲ್ಲ ಅಲ್ವಾ ಚಂದ್ರೂ ?"

—"ನಾನು ಯಾವತ್ತಾದರೂ ಹಾಗ್ಮಾಡೇನಾ ಅಪ್ಪಾ ?"

—"ಒಬ್ಬರನ್ನೊಬ್ಬರು ಸುಲಿದು ತಿನ್ನೋದೇ ಈ ಪ್ರಪಂಚದ ಸೂತ್ರ ಶೇಖರ್."

ದೊಡ್ಡ ಮನುಷ್ಯ—ದೊಡ್ಮನುಷ್ಯ....

—"ಭಿಕ್ಷೆ ಸಿಗ್ತೇನೊ....?"

ಎರಡು ರೂಪಾಯಿ....ಎರಡು....

ವನಜಾ....ವನೂ....

—"ನಾನು ಭಿಕಾರಿಯಾದರೆ ?"

—"ಥೂ ಹೋಗಪ್ಪ, ಎಂಥ ಮಾತಾಡ್ತೀಯಾ ?"

—"ನಾನು ಆ ಹುಡುಗೀನ ನೋಡ಼್ಬೇಕು ಶೇಖರ್...."

—"ಸೈತಾನ ಕಣೋ ನೀನು...."

—"ಮೂರು ತಿಂಗಳ ಬೋನಸ್...."

—"ಸ್ವಾತಂತ್ರ್ಯ ಬಂದ ಘಳಿಗೇಲೇ ನಿದ್ರೆ ಹೋದ್ಯಲ್ಲೋ ಭೂಪ !"

—"ಯಾವಾಗ಼್ೂ ಬ್ಯಾಸ಼್ಗೇನೆ ಇದ್ದಾತಾ ? ಮಳೆ ಬತ್ತದೆ ಕಣ್ರಪೋ"

—"ಶಾರದಾ ಸತ್ತೋದ್ಲು...."

—"ಕರುಳಿನ ಬಾಧೆ—ಒಂದ್ಸಾರಿ ಸರಿಯಾಗಿ ಪರೀಕ್ಷಿಸ಼್ಬೇಕು."

—"ಮನುಷ್ಯನಾದ್ಮೇಲೆ ಜೀವನದಲ್ಲಿ ಒಂದು ಶ್ರದ್ಧೆ—ನಂಬುಗೆ ಇರಬೇಕು ಚಂದ್ರಶೇಖರ್."

—ಗತಕಾಲದ ಸ್ಮರಣೆಗಳ ಈ ಸುರುಳಿ....

—"ಅಷ್ಟು ಶಕ್ತಿ ಬಂತೇನೊ ಭಡವಾ ?"

ಜುಟ್ಟು-ಕ್ರಾಪು !

—"ಇಸ್ಕೂಲ್ಗೆ ಓಯ್ತಿವ್ನಾ ?"

—"ಕೈಲಿ ಕೆಂಪು ಬಾ-ವು-ಟಾ....ಓಹ್ಹೊ....!"

o o o o

ನನ್ನಿಂದಾಗದು. ನಾನಿನ್ನು ಏನನ್ನೂ ಬರೆಯಲಾರೆ.

ಸಮಾಜದ ಏಣಿಯ ಕೆಳ ಹಂತದಲ್ಲಿ ನಾನು ಹುಟ್ಟಿದೆ. ಅಲ್ಲಿಂದ ನಡು ಹಂತಕ್ಕೆ ಬಂದೆ. ಆಮೇಲೆ ಮೇಲಣ ಹಂತ....ಏಣಿ ಇದೆ ಎಂದು ಧೈರ್ಯವಾಗಿ ಮೇಲೇರುವ ಯತ್ನ....ಆದರೆ ಬಾರಿಬಾರಿಗೂ ಜಾರಿ ಹೋಗುವ ಏಣಿ.

ಆಮೇಲೆ ಮುಗಿಲಿಗೆ ನೇತಾಡುವುದು—ಗಾಳಿ ಸೇವಿಸುತ್ತಾ.

ಈ ಪ್ರಪಂಚದಲ್ಲಿ ಇಷ್ಟು ದಿನ ಇದ್ದು ನಾನೇನು ಮಾಡಿದ ಹಾಗಾಯಿತು ? ಎಷ್ಟೊಂದು ತಪ್ಪುಗಳಾಗಿಲ್ಲ ನನ್ನಿಂದ ! ತಿಳಿವಳಿಕೆ ಇಲ್ಲದೆ ಎಷ್ಟೊಂದು ತಪ್ಪುಗಳನ್ನು ಬದುಕಿನುದ್ದಕ್ಕೂ ಮಾಡಿದ್ದೆ ನಾನು !

ನನ್ನ ಕೆಲಸದಲ್ಲಿ ನಾಳೆಯ ದಿನ ಜನ ಮೆಚ್ಚುವಂಥಾದ್ದು ಏನಾದರೂ ಇತ್ತೆ ? ತೆಗಳುವಂಥಾದ್ದು ?

ನಾನೀಗ ಒಬ್ಬಂಟಿಗನಾಗಿ ಗೋರಿಗೆ ಹೋಗುತ್ತಿದ್ದೇನೆ—ನನ್ನ ನೆನಪುಗಳ ದೊಡ್ಡ ಬುತ್ತಿಯೊಡನೆ.

ವನಜ—ವನಜ....

ಯೌವನ, ಗಂಡು-ಹೆಣ್ಣು....ಪ್ರೇಮದ ಚುಂಬನ ಎಂದರೇನೆಂಬುದನ್ನು ತಿಳಿಯದೆಯೇ ನಾನು ಗೋರಿಗೆ ಹೋಗುತ್ತಿದ್ದೇನೆ.

ಕಾಮದ ವಿಚಾರ ಬೇರೆ. ಆದರೆ ಪ್ರೇಮ ?

ಇಂಥ ಸಮಾಜದಲ್ಲೂ ನಾನು ಒಂದಿಷ್ಟು ಒಳ್ಳೆಯ ಕೆಲಸ ಮಾಡುವುದು ಸಾಧ್ಯವಿತ್ತು—ನಾರಾಯಣನ ಹಾಗೆ, ಆ ಕೃಷ್ಣರಾಜರು ಒಳ್ಳೆಯ ಮನುಷ್ಯರಲ್ಲವೆ? ಅವರ ಮಾತುಗಳು ನ್ಯಾಯದ—ಸತ್ಯದ ಮಾತುಗಳಾಗಿರಲಿಲ್ಲವೆ ?

ಆದರೆ ನಾನು ಅಡ್ಡದಾರಿ ಹಿಡಿದು, ಕಲ್ಲು ಮುಳ್ಳು ತುಳಿದು, ಈಗ ಬಂದು ತಲಪಿರುವುದು ಇಲ್ಲಿಗೆ....

ನನ್ನ ಬಾಳಿನ ಈ ದುರವಸ್ಥೆಗೆ ಯಾರು ಕಾರಣ? ನಾನು ಆಕ್ರೋಶ ಮಾಡಬೇಕಾಗಿರುವುದು ಯಾರ ಮೇಲೆ? ನನ್ನ ದುಸ್ಥಿತಿಗಾಗಿ ಯಾವುದೇ ವ್ಯಕ್ತಿಯನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ಆದರೆ ವಿಷಚಕ್ರ ಸುತ್ತುವರಿಯುವ

ರೀತಿಯೇ ಅಂಥದು. ಒಂದೊಂದು ಬಾರಿ ಅದರ ಒಂದೊಂದು ಹಲ್ಲು ನನ್ನನ್ನು ಘಾಸಿಗೊಳಿಸಿದೆ.

ನನ್ನ ತಪ್ಪೇನೂ ಇಲ್ಲ—ಇತರರೇ ಅಪರಾಧಿಗಳು, ಎನ್ನುವುದು ಮೂರ್ಖತನ. ಇನ್ನೇನು ಬೇಕಾದರೂ ನಾನಾಗಿರಬಹುದು. ಆದರೆ ಮೂರ್ಖ ಮಾತ್ರ ಅಲ್ಲ....

ನಾನು ಸಮಾಜದ ಹೊರಗೇ ಇದ್ದೆನೆಂಬುದು ನಿಜ. ಅದು ತಾತ್ವಿಕ ದೃಷ್ಟಿಯಲ್ಲಿ. ನದಿಯ ನೀರಿನಲ್ಲಿ ನಾನು ತುಂತುರು ಹನಿಯಾಗಿರಲಿಲ್ಲ. ಆದರೆ ಆ ಕೆಸರು ನೀರಿನಲ್ಲಿ ನಾನು ಮೀನಾಗಿದ್ದೆ.

ಇನ್ನೂ ಹೆಚ್ಚು ಮಾತುಗಳ ಆವಶ್ಯತೆಯುಂಟೆ ?

ಕರುಳಿನ ನೋವಿಗೆ ಹೃದಯದ ಯಾತನೆಗೆ ಮೆದುಳಿನ ವೇದನೆಗೆ ಔಷಧಿ ದೊರೆಯಲಾರದ ಈ ಸಮಾಜದಲ್ಲಿ ನಾನೊಬ್ಬನಿಲ್ಲದಿದ್ದರೆ ನಷ್ಟವಾಗದು.

ನ್ಯಾಯಸ್ಥಾನದಲ್ಲಿ ನನ್ನ ಪರ ವಕೀಲಿ....ಯಾಕೆ ಈ ವಿಚಾರಣೆ ?....ಇನ್ನು ಯಾಕೆ ವಕೀಲಿ ?

ನೀ ಯಾರಾದರೂ ನನಗೊಂದು ಪ್ರಶ್ನೆ ಕೇಳಬಹುದು :

"ಇನ್ನೊಮ್ಮೆ ಹುಡುಗನಾದೆಯೆಂದರೆ, ಮತ್ತೆ ಬಾಳುವ ಅವಕಾಶ ನಿನಗೆ ದೊರೆಯಿತೆಂದರೆ, ನೀನೇನು ಮಾಡುವೆ ?"

ಅದಕ್ಕಿದು ನನ್ನ ಉತ್ತರ :

"ಈಗ ನಾನು ಪಡೆದಿರುವ ಈ ಪ್ರಪಂಚಜ್ಞಾನದ ನೆರವಿನಿಂದ ಈವರೆಗೆ ಮಾಡಿರುವ ತಪ್ಪುಗಳನ್ನು ಇನ್ನೊಮ್ಮೆ ಮಾಡದೆಯೇ, ನಾಲ್ಕು ಜನರಿಗೆ ನೆರವಾಗುವಂತಹ ಬಾಳ್ವೆ ನಡೆಸುವೆ."

ನನ್ನನ್ನು ಹೇಡಿಯೆಂದು, ದುರ್ಬಲನೆಂದು ಮಾತ್ರ ಕರೆಯಬೇಡಿ. ನನ್ನ ಬಗ್ಗೆ ಕನಿಕರದ ಭಾವನೆ ನಿಮ್ಮಲ್ಲಿ ಉಂಟಾದರೆ ಅದೇ ದೊಡ್ಡದು.

....ಚೆನ್ನಾಗಿ ಕತ್ತಲಾಗಿದೆ. ನಾನು ಸಿದ್ಧನಾಗಲೇ ?

ದಯಪಿಟ್ಟು ನನ್ನನ್ನು ಬಡವರ ಬಳಿ ಮಣ್ಣಿನಲ್ಲಿರಿಸಬೇಡಿ. ನನ್ನ ಮನಶ್ಶಾಂತಿಗೆ ಅವರ ಗೋಳಾಟದಿಂದ ಭಂಗ ಬಂದೀತು. ಹಾಗೆಯೇ ಶ್ರೀಮಂತರಿರುವಲ್ಲಿ ಮಣ್ಣು ಮಾಡಬೇಡಿ....ಅವರ ಜೀವನಸ್ರಾವದಿಂದ ನನಗೆ ಉಸಿರು ಕಟ್ಟೀತು....

ಲೇಖನಿಯನ್ನು ಕೆಳಗಿಡಲೆ ? ಕೊನೆಯ ಬಾರಿಗೆ ಬೆರಳುಗಳ ನೆಟಿಕೆ ಮುರಿಯಲೆ ?

ಇನ್ನು ದೀರ್ಘ ವಿಶ್ರಾಂತಿ ; ಇನ್ನು ನಿಜವಾದ ವಿಮೋಚನೆ.

ರಂಗಮ್ಮನ ವಠಾರ

೬

ಒಂಟಿ ಎತ್ತಿನ ಗಾಡಿಯಲ್ಲಿ ಶಂಕರನಾರಾಯಣಯ್ಯನ ಸಂಸಾರ ರಂಗಮ್ಮನ ವಠಾರಕ್ಕೆ ಸಾಗಿ ಬಂತು. ಹೊರಗೆ ಹುಡುಗರು ನಡೆಸಿದ್ದ ಗದ್ದಲದೊಡನೆ ಸ್ಪರ್ಧಿಸುತ್ತಿದ್ದವನ ಹಾಗೆ ಗುಂಡಣ್ಣ ಗೊರಕೆ ಹೊಡೆಯುತ್ತ ನಿದ್ದೆ ಹೋಗಿದ್ದ. ರಾಜಮ್ಮ ಮಗನನ್ನು ಎಬ್ಬಿಸಿದರು :

"ಏಳೋ ಗುಂಡಾ, ರಂಗಮ್ಮ ಕೂಗ್ತಿದಾರೆ ನೋಡು."

ಮುಖಕ್ಕಿಷ್ಟು ನೀರು ಹನಿಸಿ ಹೊರಬಂದ ಗುಂಡಣ್ಣನಿಗೆ ಕತ್ತಲೆಯ ನಡುಹಾದಿಯ ಆಚೆ ಅಂಗಳಕ್ಕಿಳಿಯುತ್ತಿದ್ದ ಸಾಮಾನುಗಳು ಗೋಚರಿಸಿದುವು. ರಂಗಮ್ಮ ಕರೆದುದರ ಉದ್ದೇಶವೂ ಅರ್ಥವಾಯಿತು. ಅವರ ಬಳಿಗೆ ಹೋಗದೆ ಗುಂಡಣ್ಣ ನೇರವಾಗಿ ಅಂಗಳಕ್ಕೇ ನಡೆದ.

ರಂಗಮ್ಮನೂ ಅವನನ್ನು ಹಿಂಬಾಲಿಸಿಕೊಂಡು ಬಂದರು.

"ಗಾಡಿ ಬಂತು ಕಣೋ ಗುಂಡಣ್ಣ."

ಯಾವ ಸಂದರ್ಭದಲ್ಲೂ 'ಸಹಾಯ ಮಾಡು' ಎಂದು ಬಾಯಿ ಬಿಟ್ಟು ಗುಂಡಣ್ಣನಿಗೆ ಹೇಳಬೇಕಾದ್ದೇ ಇರಲಿಲ್ಲ.

ಮನೆಯ ಎದುರು ಭಾಗದ ಕಿಟಕಿಗಳಿಂದಲೂ ಮಹಡಿಯ ಮೇಲಿನಿಂದಲೂ ವಠಾರದ ಸದಸ್ಯರ—ಹೆಂಗಸರು ಮಕ್ಕಳ—ಮುಖಗಳು ಕಾಣಿಸಿದುವು. ಹಿಂಭಾಗದಲ್ಲೂ ಮನೆಯೊಡತಿಯರು ಬಾಗಿಲಿನಿಂದ ಹೊರಕ್ಕೆ ಕತ್ತು ಚಾಚಿ ಬೀದಿಯತ್ತ ನೋಡಿದರು. ಕೆಲ ಹುಡುಗರು ಹುಲ್ಲು ಜಗಿಯುತ್ತ ನಿಂತಿದ್ದ ಎತ್ತಿನ ಬಳಿಯಲ್ಲೂ ಕೆಳಕ್ಕೆ ಇಳಿಸಿದ ಸಾಮಾನುಗಳ ಸುತ್ತಲೂ ನಿಂತರು.

ಬೇರೆಯವರು ಮೊದಲು ಇದಿರ್ಗೊಂಡುದಾಯಿತೆಂದು ಸ್ಪಷ್ಟವಾದ ಮೇಲೆ ರಂಗಮ್ಮ ತಲೆಯ ಮೇಲುಗಡೆ ಸೆರಗೆಳೆದು ಅಂಗಳಕ್ಕೆ ಇಳಿದರು.

"ಬಂದಿರಾ? ಬನ್ನೀಪ್ಪಾ...."

ಉಟ್ಟಿದ್ದುದು ಕಲಾಬತ್ತಿನ ಸೀರೆ—ಹಳೆಯದು. ತೊಟ್ಟಿದ್ದುದು ಚಿತ್ತಾರದ ಅರಿವೆಯ ರವಕೆ—ಅಗಲವಾಗಿಯೇ ಇತ್ತು ಕತ್ತು. ನಡುವಿಗಿಂತ ನಾಲ್ಕೆಳೆ ಕೂದ

ಉಷ್ಟು ಎಡಕ್ಕೆ ಬೈತಲೆ ತೆಗೆದು ಜಡೆ ಹಾಕಿ ಆಕೆ ಹೆರಳು ಇಳಿಬಿಟ್ಟಿದ್ದಳು. ಎಡ ಕಂಕುಳಲ್ಲಿ, ಬಣ್ಣಬಣ್ಣದ ಬಟ್ಟೆಯ ಲಂಗ ತೊಡಿಸಿದ್ದ ಪುಟ್ಟ ಹೆಣ್ಣುಮಗು. ಮೇಲು ತುಟಿಯನ್ನು ಸ್ವಲ್ಪ ಕೊಂಕಿಸಿ, ತನಗೆ ಸ್ವಾಗತ ಬಯಸಿದವರನ್ನೆಲ್ಲ ನೋಡುತ್ತ ಅದು ಪಿಳಿಪಿಳಿ ಕಣ್ಣು ಬಿಡುತ್ತಿತ್ತು....ವಠಾರದ ಹೆಂಗಸರೆಲ್ಲ ತಮ್ಮ ಜಾತಿಯ ಆ ಇನ್ನೊಬ್ಬಳನ್ನು ನೋಡಿದರು.

ಆ ಸಾಮಾನುಗಳೋ? ಬಟ್ಟೆಬರೆಯನ್ನೆಲ್ಲ ಸುತ್ತಿ ದೊಡ್ಡದಾಗಿ ಕಟ್ಟಿದ್ದ ಹಾಸಿಗೆ. ಒಂದೆರಡು ಕಡೆ ನಜ್ಜುಗುಜ್ಜಾಗಿದ್ದ ಹಳೆಯದೊಂದು ಟ್ರಂಕು, ಪಾತ್ರೆ ಸರಂಜಾಮುಗಳನ್ನು ತುಂಬಿಕೊಂಡಿದ್ದೊಂದು ಗೋಣಿಚೀಲ, ದೇವರ ಪಠ, ಗಾಜು-ಪಿಂಗಾಣಿ ಪಾತ್ರೆಗಳನ್ನು ಹೊತ್ತಿದ್ದ ತೊಟ್ಟಿಲು. ನಾಲ್ಕಾರು ಡಬ್ಬಗಳು, ಕಾಲು ಕಿತ್ತು ಜೋಡಿಸುವ ಒಂದು ಮೇಜು, ಮಡಚುವ ಕುರ್ಚಿ. ಸೌದೆಯದೊಂದು ಸಣ್ಣ ಹೊರೆ. ಚಾಪೆಯಲ್ಲಿ ಸುತ್ತಿದ್ದ ಪೊರಕೆಗಳೆರಡು.

ರಂಗಮ್ಮನ ಮನಸ್ಸಿನಲ್ಲಿ ನೆನಪಿನ ಉಯ್ಯಾಲೆ ತೂಗುತ್ತಲೇ ಇತ್ತು. ಏಳು ವರ್ಷಗಳ ಹಿಂದೆ ಒಂದು ಜಟಕಾ ಗಾಡಿಯಲ್ಲಿ ಬಂದಿದ್ದ ಒಂದು ಸಂಸಾರವನ್ನು ಈ ಸಂಸಾರದೊಡನೆ ಹೋಲಿಸದೆ ಇರುವುದು ಸಾಧ್ಯವಿರಲಿಲ್ಲ. ಆ ದಂಪತಿ ವಯಸ್ಸಿನಲ್ಲಿ ಇವರಿಗಿಂತ ಸ್ವಲ್ಪ ಕಿರಿಯರು. ಆ ಹೆಂಗಸಿಗೆ ಬೆಡಗು ಬಿನ್ನಾಣವೇನೂ ಇರಲಿಲ್ಲ. ಆಕೆ ಸಂಕೋಚದ ಮುದ್ದೆಯಾಗಿದ್ದಳು. ಕಂಕುಳಲ್ಲಿ ಒಂದು ವರ್ಷ ವಯಸ್ಸಿನ ಗಂಡು ಮಗುವಿತ್ತು. ಸಾಮಾನುಗಳೂ ಇಷ್ಟಿರಲಿಲ್ಲ. ಮುಖದ ಮೇಲಿನ್ನೂ ಮಗುತನವೇ ಇದ್ದಂತೆ ತೋರುತ್ತಿದ್ದ ಆ ಗಂಡ ಪ್ರತಿಯೊಂದು ಸಣ್ಣಪುಟ್ಟ ವಿಷಯಕ್ಕೂ ಹೆಂಡತಿಯನ್ನೇ ಕೇಳುತ್ತಿದ್ದ. ನಾರಾಯಣಿ ಮತ್ತು ನಾರಾಯಣಿಯ ಗಂಡ....

ವಠಾರದ ಬೇರೆ ಹೆಂಗಸರೂ ಅಷ್ಟೇ. ತಮ್ಮ ತಮ್ಮ ತಕ್ಕಡಿಯಲ್ಲಿ ಹೊಸ ಸಂಸಾರದ ಒಡತಿಯನ್ನೂ ಒಡೆಯನನ್ನೂ ತೂಗಿ ನೋಡಿದರು.

ಶಂಕರನಾರಾಯಣಯ್ಯನಿಗಿಂತ ಮುಂದಿದ್ದ ಆತನ ಹೆಂಡತಿ ತನ್ನ ಗಂಡ ಬಾಡಿಗೆಗೆ ಹಿಡಿದಿದ್ದ ಮನೆಯ ಒಳಹೊಕ್ಕು ನೋಡಿದಳು. ಇದನ್ನು ಗಮನಿಸಿದ ಕೆಲ ಹೆಂಗಸರು ಮುಖಚೇಷ್ಟೆ ಮಾಡದಿರಲಿಲ್ಲ. ಹೊಸಬಳು ಅಡುಗೆಮನೆ, ಛಾವಣಿ, ನೆಲ, ಗೋಡೆಗಳ ಪರೀಕ್ಷೆ ಮಾಡಿದಳು. ನೆಲವನ್ನು ಸಾರಿಸಿತ್ತು. ಗೋಡೆಗೆ ಅಲ್ಲಿ ಇಲ್ಲಿ ಸುಣ್ಣದ ನೀರಿನ ಸ್ಪರ್ಶವಾದಂತಿತ್ತು.

ಭಾರದ ಸಾಮಾನುಗಳನ್ನು ಹೊರುವ ಕೆಲಸವನ್ನೆಲ್ಲ ಗುಂಡಣ್ಣನಿಗೆ ಬಿಟ್ಟು ಶಂಕರನಾರಾಯಣಯ್ಯ ಹಗುರವಾದೆರಡು ಡಬ್ಬಗಳನ್ನು ಹೊತ್ತು ಒಳಬಂದ.

"ಸುಣ್ಣ ಬಳೆದಿದೆ ತಾನೆ?"

"ಓಹೋ!"

ಆ ಉದ್ಗಾರದಲ್ಲಿ ಅಣಕವಿತ್ತು.

ಒಂಟೆ ಎತ್ತಿನಗಾಡಿ ಹೊರಟುಹೋಯಿತು. ಮನೆಯ ಸಾಮಾನುಗಳೆಲ್ಲ ಒಳಕ್ಕೆ ಬಂದುವು. ಸಾಮಾನುಗಳನ್ನು ಹಿಂಬಾಲಿಸಿದ ಹುಡುಗರು ಬಾಗಿಲ ಮುಂದೆ ನೆರೆದರು.

ಸಾಮಾನುಗಳನ್ನಷ್ಟೇ ನೋಡಿ, ಬಂದಿರುವುದು ಬಡ ಸಂಸಾರವೇ ಎಂದು ತೀರ್ಮಾನಿಸಲು ವಠಾರದ ಹೆಂಗಸರಿಗೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ಅಹಲ್ಯಾ ಮತ್ತು ರಾಧಾ ಕಾಮಾಕ್ಷಿಯ ಮನೆ ಸೇರಿ ಚರ್ಚೆ ನಡೆಸಿದರು. ಚಿತ್ರ ಬರೆಯುವವರ ಮನೆಯೆಂದರೆ ಹಾಗಿರಬಹುದು ಹೀಗಿರಬಹುದು ಎಂದು ಅಹಲ್ಯಾ ತರ್ಕಿಸಿದ್ದಳು. ಅಂಥವೇನೂ ಈಗ ಕಾಣಲಿಲ್ಲವೆಂದು ಆಕೆಗೆ ನಿರಾಸೆಯಾಗಿತ್ತು.

ಇನ್ನು ಏನಾದರೂ ಕೆಲಸವಿದೆಯೇನೋ ಎಂಬಂತೆ ಗುಂಡಣ್ಣ ನಿಂತೇ ಇದ್ದ. ಅವನ ವ್ಯಕ್ತಿತ್ವವನ್ನು ಅಷ್ಟರಲ್ಲೇ ಸೂಕ್ಷ್ಮ ನಿರೀಕ್ಷಣೆಯಿಂದ ತಿಳಿದು ನೋಡಿದ್ದ ಶಂಕರನಾರಾಯಣಯ್ಯ ಹೇಳಿದ:

"ಪರವಾಗಿಲ್ಲ. ಇನ್ನು ನಾವೇ ಇಟ್ಕೋತೀವಿ. ಹೋಗಿ."

ಗುಂಡಣ್ಣ ಹುಡುಗರೆಡೆಯಲ್ಲಿ ಹಾದಿ ಬಿಡಿಸಿಕೊಂಡು ಹೊರಟ. 'ಉಪಕಾರ ವಾಯ್ತು' 'ತೊಂದರೆ ಕೊಟ್ಟೆ' ಎಂದೆಲ್ಲ ಗುಂಡಣ್ಣನಿಗೆ ವಂದನಾರ್ಪಣೆ ಮಾಡುವ ಅಗತ್ಯವಿಲ್ಲವೆಂದು ಶಂಕರನಾರಾಯಣಯ್ಯ ಸುಲಭವಾಗಿ ತೀರ್ಮಾನಿಸಿದ್ದ.

ಹುಡುಗರೆಲ್ಲ ಮುತ್ತಿಕೊಂಡುದರಿಂದ, ಗಾಳಿ ಬೆಳಕು ಓಡಲು ಅವಕಾಶ ದೊರೆಯದೆ ಮಗು ಅಳತೊಡಗಿತು.

ಅಷ್ಟರಲ್ಲಿ ರಂಗಮ್ಮ ಅಲ್ಲಿಗೆ ಬಂದು ತಲುಪಿ, ಹುಡುಗರ ಮೇಲೆ ಎರಗಿದರು.

"ಹೋಗ್ರೋ....ಇಲ್ಲೇನು ಕೋತಿ ಕುಣೀತಿದ್ಯೆ? ಹೂಂ....ಬೀದಿಗೆ ಹೋಗಿ ಆಡ್ಕೊಳ್ಳಿ...."

ಹುಡುಗರು ಮನಸ್ಸಿಲ್ಲದ ಮನಸ್ಸಿನಿಂದ ಹೊರಹೋದರು.

ಸಂಸಾರದೊಡನೆ ರಂಗಮ್ಮನ ಸ್ನೇಹ ಆರಂಭವಾಯಿತು.

"ಮಗು ಅಳ್ತಿದೆಯಲ್ಲಾ. ಹಸಿವಾಗಿದೆಯೋ ಏನೋ...."

"ಅಯ್ಯೋ! ಅವಳಿಗೇನು ಧಾಡಿ? ಅಳ್ತಾ ಇರೋದೇ!"

ಆ ಹೆಂಗಸಿನ ಉತ್ತರ ಕೇಳಿ ರಂಗಮ್ಮ ಬೆಚ್ಚಿಬಿದ್ದರು. ಆದರೂ ಸಾವರಿಸಿ ಕೊಂಡು ಮಗುವಿನೆದುರು ನಿಂತು, ತಮ್ಮ ಹಲ್ಲಿಲ್ಲದ ಬಾಯಿಯನ್ನು ತೋರಿಸುತ್ತ, ಮುಖಚೇಷ್ಟೆ ಮಾಡಿದರು. ಉಸಿರಾಡಲು ಬೇಕಾದ ಗಾಳಿಯೂ ದೊರೆತು, ತಮಾಷೆ ಯಾಗಿದ್ದೊಂದು ಮುಖವನ್ನೂ ಕಂಡು, ಮಗು ಅಳು ನಿಲ್ಲಿಸಿ ನಕ್ಕಿತು.

"ಥತ್ ಮುಂಡೆ," ಎಂದು ರಂಗಮ್ಮ ಬಲು ಪ್ರೀತಿಯಿಂದ ಮಗುವಿನ ಗಲ್ಲ ಮುಟ್ಟಿದರು. ಶಂಕರನಾರಾಯಣಯ್ಯ ಮತ್ತು ಆತನ ಹೆಂಡತಿ ಪರಸ್ಪರರನ್ನು ನೋಡಿ ನಸುನಕ್ಕರು.

ಶಂಕರನಾರಾಯಣಯ್ಯ ಚಾಪೆಯ ಸುರುಳಿಯನ್ನು ಬಿಚ್ಚಿ, ಪೊರಕೆಗಳನ್ನು ಮೂಲೆಗೆಸೆದು, ಚಾಪೆಯನ್ನು ಒಂದು ಬದಿಯಲ್ಲಿ ಹಾಸಿ ಹೇಳಿದ:

" ಕೂತ್ಕೊಳ್ಳಿ ರಂಗಮ್ನೋರೆ, ನಿಂತೇ ಇದೀರಲ್ಲಾ !"

" ಅಯ್ಯೋ ! ಸರಿಹೋಯ್ತು. ಇದೇನು ಉಪಚಾರ ? ನೀವಿನ್ನೂ ಸಾಮಾನು ಗಂಟುಗಳನ್ನ ಬಿಚ್ಚೇ ಇಲ್ಲ."

"ಅದೇನು ಮಹಾ? ರಾತ್ರಿಯೆಲ್ಲ ಇದೆಯಲ್ಲ. ನಿಧಾನವಾಗಿ, ಮಾಡ್ಕೋತೀವಿ."

ಆ ಮಾತು ಕೇಳುತ್ತ ರಂಗಮ್ಮನ ಹುಬ್ಬುಗಳು ಪರಸ್ಪರ ಸಮೀಪಿಸಿದುವು. ಈ ದಂಪತಿಯ ಸಡಗರದಲ್ಲಿ ಆ ರಾತ್ರಿಯೆಲ್ಲಾ ವಿದ್ಯುದ್ದೀಪ ಉರಿಸಬೇಕಾಗಬಹು ದೇನೋ ಎಂದು ಅವರು ಚಿಂತಿಸಿದರು. ಆದರೆ ಆ ವಿಷಯ ಪ್ರಸ್ತಾಪಿಸಿ ಮೊದಲ ದಿನವೇ ವಿರಸಕ್ಕೆ ಎಡೆಗೊಡಲು ಅವರು ಸಿದ್ಧರಿರಲಿಲ್ಲ.

ಆ ಶಂಕರನಾರಾಯಣಯ್ಯನೋ ಬೇಕುಬೇಕೆಂದೇ ಹಾಗೆ ಹೇಳಿದ್ದ. ಎಷ್ಟು ಹೊತ್ತಿಗೆ ಎಂಬುದು ಗೊತ್ತಿಲ್ಲವಾದರೂ ವಠಾರದ ಒಡತಿ ರಾತ್ರೆ ದೀಪಗಳನ್ನೆಲ್ಲ ಆರಿಸುವ ಪದ್ಧತಿ ಇದೆಯೆಂದು ಮೊದಲ ಸಾರಿ ಅಲ್ಲಿಗೆ ಬಂದಾಗಲೇ ಆತ ತಿಳಿದು ಕೊಂಡಿದ್ದ.

ರಂಗಮ್ಮನ ಮುಖದ ಮೇಲೆ ಮೂಡಿ ಮಾಯವಾದ ಕಳವಳ ಆತನಿಗೆ ಗೋಚರಿಸದೆ ಇರಲಿಲ್ಲ. ಗಂಡನ ತುಂಟತನ ಹೆಂಡತಿಗೂ ಅರಿವಾಯಿತು.

ಬಂದವರನ್ನು ಸಂತುಷ್ಟಪಡಿಸುವ ಮಾತನ್ನೇ ರಂಗಮ್ಮ ಆಡಬಯಸಿದರು.

" ಸಾಮಾನು ಎತ್ತಿಟ್ಟ ತಕ್ಷಣ ಹೇಳೀಪ್ಪಾ. ನಲ್ಲಿ ಬೀಗ ತೆಗೀತೀನಿ. ನೀರು ಹಿಡಕೊಂಡೀರಂತೆ."

ಶಂಕರನಾರಾಯಣಯ್ಯನೇನೊ " ಆಗಲಿ " ಎಂದ. ಆದರೆ ಆತನ ಹೆಂಡತಿ ಸುಮ್ಮನಿರಲಿಲ್ಲ.

" ಓ ! ಸಾಯಂಕಾಲ ಯಾವಾಗ್ಲೂ ನಲ್ಲಿಗೆ ಬೀಗ ಹಾಕ್ತೀರೇನು ?"

ಶೇಷಾದ್ರಿಪುರದ ಬಿಡಾರದಲ್ಲಿ ಬಾವಿಯಿಂದಲೆ ನೀರು ಸೇದುತ್ತಿದ್ದವಳು ಆಕೆ. ಆದರೆ ಹಾಗೆಂದು ಇಲ್ಲಿ ತಿಳಿಸಲಿಲ್ಲ.

" ಹೂನಮ್ಮಾ. ಹಾಗೇ ಬಿಟ್ಟರೆ ಹುಡುಗರು ನಲ್ಲಿ ತಿರುಗಿಸಿ ಬಿಡುತ್ವೆ. ಬೀದೀಲಿ ಹೋಗೋರು–ಬರೋರೂ ನೀರಿಗೆ ಬಂದ್ಬಿಡ್ತಾರೆ."

" ಹೌದೌದು. ಗತಿ ಇಲ್ದೆ ಅಲೆಯೋರ ಕಾಟ ಈಗೀಗ ಜಾಸ್ತಿಯಾಗಿ ಬಿಟ್ಟದೆ...." ಎಂದು ಶಂಕರನಾರಾಯಣಯ್ಯ, ಗೋಣಿಯಿಂದ ಸಾಮಾನುಗಳನ್ನು ಹೊರತೆಗೆಯುತ್ತ, ಹೇಳಿದ.

" ಮನೇಲೇ ಇರ್ತೀನಪ್ಪಾ. ಸಾಮಾನು ತೆಗೆದಿಡೋದು ಮುಗಿದ್ಮೇಲೆ ಬನ್ನಿ," ಎಂದು ಹೇಳಿ ರಂಗಮ್ಮ ಹೊರಟು ಹೋದರು.

" ಕೂತ್ಕೋ ಚಂಪಾ. ಹ್ಯಾಗಿದಾರೆ ಮಾಲಿಕರು ?"

ಹೆಂಡತಿಯೊಡನೆ ಮಾತನಾಡಿದ ಶಂಕರನಾರಾಯಣಯ್ಯನ ಸ್ವರದಲ್ಲಿ ಬದ ಲಾವಣೆಯಾಗಿತ್ತು ; ಸ್ವಾಭಾವಿಕವಾಗಿ, ನಯವಾಗಿತ್ತು.

"ನೀವಂತೂ ಒಳ್ಳೇ ಮನೇನೆ ಹುಡುಕಿದೀರಿ!"

"ಯಾಕೆ? ಆ ಕೊಂಪೆಗಿಂತ ಈ ವಠಾರ ವಾಸಿಯಲ್ವೇನು?"

"ಅಲ್ಲ ಅಂದ್ರೆ? ತಮಾಷೆಯಾಗಿದೆ ಮುದುಕಿ. ಆದರೆ ನೀರು ಲೈಟಿನ ಅವಸ್ಥೆ ನೋಡಿದರೆ ದಿನಾ ಜಗಳವಾಗುತ್ತೇನೋ ಅಂತ ಭಯವಾಗ್ತಿದೆ."

"ಶ್! ಮೆಲ್ಲಗೆ ಮಾತ್ನಾಡೇ! ಎದುರು ಮನೆ-ಪಕ್ಕದ್ಮನೆ....ಗೋಡೆ ಏನು ದಪ್ಪಗಿದೇಂತ ತಿಳಿಕೊಂಡ್ಯಾ....?"

ಚಂಪಾವತಿ ನಕ್ಕಳು.

"ಒಳ್ಳೇದೇ ಆಯ್ತು. ಸದ್ಯಃ ನಿಮ್ಮ ಸರಸ ಸಲ್ಲಾಪವಾದರೂ ಕಮ್ಮಿ ಆಗುತ್ತೊ?

ಬೆವರು ಸುರಿಯುತ್ತಿದ್ದ ಮುಖ. ಅದಕ್ಕೆ ತಗಲಿದ ಯಾವುದೋ ಪಾತ್ರೆಯ ಮಸಿ. ಮುಂದಕ್ಕೆ ಇಳಿದ ಕ್ರಾಪು. ಆ ಪರಿಸ್ಥಿತಿಯಲ್ಲೂ ಆತ ಹೆಂಡತಿಯನ್ನು ನೋಡಿ ತುಂಟತನದ ನಗೆ ನಕ್ಕ.

"ಬಾಗಿಲು ಸ್ವಲ್ಪ ಮರೆ ಮಾಡೇ."

"ಯಾಕೆ?"

"ಬೇಕು. ಬಾಗಿಲು ಮುಚ್ಚಿಟ್ಟು ಹತ್ತಿರ ಬಾ."

"ಓಹೋ! ನಿಮ್ಮಿಷ್ಟ ನೆರವೇರ್ದ ಹಾಗೆಯೇ. ಆ ಪೆಟ್ಟಿಗೆಯಿಂದ ಒಂದಿಷ್ಟು ಕನ್ನಡಿ ತಗೊಂಡು ನಿಮ್ಮ ಮುಖ ನೋಡ್ಕೊಳ್ಳಿ."

"ಸಾಕು! ಇಲ್ಲಿ ಬಾ ಅಂದ್ರೆ...."

"ಬರೋಲ್ಲ."

"ಬಾರೇ ಇಲ್ಲಿ!"

"ಎದುರುಮನೆ—ಪಕ್ಕದ್ಮನೆಯವರಿಗೆ ಕೇಳ್ಸುತ್ತೆ."

ಶಂಕರನಾರಾಯಣಯ್ಯ ಉತ್ತರ ಕೊಡದೆ, ಮಗುವನ್ನೆತ್ತಿಕೊಂಡು ಮೂಲೆಯಲ್ಲಿ ನಿಂತಿದ್ದ ಹೆಂಡತಿಯತ್ತ ನಡೆದ.

ಆ ಕ್ಷಣವೆ ಹೆಂಡತಿ ಗಟ್ಟಿಯಾಗಿ ಕೂಗಿ ಕರೆದಳು:

"ರಂಗಮ್ನೋರೇ!...."

ಮೀನಾಕ್ಷಮ್ಮ, ಪದ್ಮಾವತಿ, ಕಮಲಮ್ಮ, ಅಹಲ್ಯಾ, ಕಾಮಾಕ್ಷಿಯರೆಲ್ಲ ತಮ್ಮ ತಮ್ಮ ಮನೆ ಬಾಗಿಲಿಗೆ ಬಂದರು. ಮಧುರವಾಗಿದ್ದರೂ ಗಟ್ಟಿಯಾಗಿದ್ದ ಹೊಸ ಸ್ವರ. ಬಂದ ದಿನವೇ, ಬಂದ ಘಳಿಗೆಯಲ್ಲೇ. ಎಂತಹ ದಿಟ್ಟತನ!

ಶಂಕರನಾರಾಯಣಯ್ಯ "ಥೂ ನಿನ್ನ!" ಎಂದು ಅವಸರವಾಗಿ ಗೋಣಿ ಚೀಲದತ್ತ ಸರಿದ. ಚಂಪಾ ಕುಲುಕುಲು ನಕ್ಕಳು.

ರಂಗಮ್ಮ ಬಂದೇಬಿಟ್ಟರು. ಹೊಸಬಳ ಧೈರ್ಯ ಅವರನ್ನೂ ಚಕಿತಗೊಳಿಸಿತ್ತು.

"ಏನಮ್ಮಾ? ಕೂಗಿದ್ಯಾ?"

ಸುತ್ತುಮುತ್ತು ಎಲ್ಲಿಂದಲೂ ಯಾವ ಸಪ್ಪಳವೂ ಇರಲಿಲ್ಲ. ವಠಾರದ ಆ ಭಾಗವೆಲ್ಲಾ ಒಂದೇ ಕಿವಿಯಾಗಿ ಮಾರ್ಪಟ್ಟು ಹೊಸಬಳ ಉತ್ತರಕ್ಕಾಗಿ ಕಾದಿದ್ದಂತೆ ಕಂಡಿತು. ರಂಗಮ್ಮ ಬರುವುದರೊಳಗೆ ನಗು ನಿಲ್ಲಿಸಿದ್ದ ಚಂಪಾ ಗಂಭೀರ ಮುಖಮುದ್ರೆ ತಳೆದಳು. ಅಳುಕು ಸ್ವಲ್ಪವೂ ಆಕೆಯನ್ನು ಬಾಧಿಸಲಿಲ್ಲ.

"ಹೂಂ ಕಣ್ರೀ....ಒರಳುಗುಂಡು ಇದೆಯೇಂತಾ ?"

ಯಾವ ಸಂಕೋಚವೂ ಇಲ್ಲದೆ ಆ ಮಾತು ಬಂತು. ಆದರೆ ರಂಗಮ್ಮ ಅದನ್ನು ನಿರೀಕ್ಷಿಸಿರಲಿಲ್ಲ.

"ಯಾಕೆ ? ಇಲ್ಲಿಲ್ವೆ ?"

"ನೋಡ್ದೆ. ಎಲ್ಲೂ ಕಾಣಿಸ್ಲಿಲ್ಲ."

—ಎಂದಳು ಚಂಪಾ. ನಾಲ್ಕು ಹೆಜ್ಜೆ ಮುಂದೆ ಹೋಗಿ ಅಡುಗೆಮನೆಯೊಳಗೆ ಹುಡುಕಿ ನೋಡುವ ಶಾಸ್ತ್ರವನ್ನೂ ಆಕೆ ಮಾಡಿದಳು.

ರಂಗಮ್ಮನಿಗೆ ಗಾಬರಿಯಾಯಿತು. ನಾರಾಯಣಿಯ ಗಂಡ ಎಲ್ಲಾದರೂ ಗುಂಡುಕಲ್ಲನ್ನು ಒಯ್ದುಬಿಟ್ಟನೇನೋ, ತನ್ನ ದೃಷ್ಟಿಗೆ ಈವರೆಗೂ ಆ ವಿಷಯ ಗೋಚರವಾಗದೆ ಹೋಯಿತೇನೋ ಎಂದು ದಿಗಿಲಾಯಿತು. ಅವರ ದೃಷ್ಟಿ ಈಗ ಮನೆ ತುಂಬ ಹರಡಿದ್ದ ಸಾಮಾನುಗಳತ್ತ ಹರಿಯಿತು. ರಂಗಮ್ಮನ ಸೂಕ್ಷ್ಮದೃಷ್ಟಿ . . . .

"ನೋಡಿ ! ಅಲ್ಲಿದೆ !"

ರಂಗಮ್ಮ ಬೊಟ್ಟು ಮಾಡಿದತ್ತ ದಂಪತಿ ನೋಡಿದರು. ಹಾಸಿಗೆಯ ಕೆಳಗಿತ್ತು ಗುಂಡುಕಲ್ಲು. ಅದರ ತಲೆ ಮಾತ್ರ ಕಾಣಿಸುತ್ತಿತ್ತು.

"ಓ ! ಇದೆಯಪ್ಪ ಸದ್ಯಃ ! ಸುಮ್ನೆ ತೊಂದರೆ ಕೊಟ್ಟ ಹಾಗಾಯ್ತಮ್ಮ ನಿಮಗೆ."

"ಅಯ್ಯೋ, ಇದೇನು ಮಹಾ ತೊಂದರೆ ? ನಮ್ಮ ಮನೆಯೊಳಗೇ ನಾವು ಅಲ್ಲಿ ಇಲ್ಲಿ ಓಡಾಡ್ದೆ ಇರೋಕಾಗುತ್ಯೆ". . . ಅಲ್ದೆ ಗುಂಡುಕಲ್ಲನ್ನ ಯಾರು ತಗೊಂಡು ಹೋಗ್ತಾರೆ ಹೇಳು ?"

"ಹೇಳೋಕಾಗಲ್ಲಮ್ಮ ಈಗಿನ ಕಾಲ್ದಲ್ಲೀ . . ." ರಂಗಮ್ಮನಿಗಿಂತ ತಾನೇ ಹೆಚ್ಚು ಅನುಭವಿ ಎನ್ನುವಂತೆ ಚಂಪಾ ಅಂದಳು. ರಂಗಮ್ಮ, ಒಂದು ಕ್ಷಣ ಸುಮ್ಮನಾಗಿ, ಮತ್ತೆ ಹೇಳಿದರು :

"ಅದ್ದೂ ನಿಜಾ ಅನ್ನು. ಆದರೆ, ಇಲ್ಲಿ ಯಾರನ್ನು ಬೇಕಾದರೂ ನೀನು ಕೇಳು. ನಮ್ಮ ವಠಾರದಲ್ಲಿ ಕಳ್ಳತನ ಆಗೋದೂಂತ್ಲೇ ಇಲ್ಲ. ಅಪ್ಪಿ ತಪ್ಪಿ ಹುಡುಗರೇನಾದರೂ ಆಚೆ ಇಚೆಗೆ ಪಾತ್ರೆಗೀತ್ರೆ ಇಡ್ಬೇಕೇ ಹೊರತು—"

ಶಂಕರನಾರಾಯಣಯ್ಯನಿಗೆ ತಾಳ್ಮೆ ತಪ್ಪಿತ್ತು. ಆತ ಮನಸ್ಸಿನಲ್ಲೇ ರೇಗ ತೊಡಗಿದ್ದ. ಕೇಳಿಸುತ್ತಿದ್ದ ಒಣ ಹರಟೆಯನ್ನು ಸಹಿಸಲಾರದೆ ರಂಗಮ್ಮನ ಮಾತನ್ನು ನಡುವಿನಲ್ಲೆ ಆತ ತಡೆದ :

"ಅಯ್ಯೋ! ವಠಾರ ಅಂದ್ಮೇಲೆ ಅದೆಲ್ಲಾ ಇಲ್ದೆ ಇರುತ್ತೆ? . . . ಮನೇಲೆ ಇರೀಮ್ಮ ನೀವು. ಬೇಗ್ನೆ ನೀರಿಗೆ ಬಂದ್ಬಿಡ್ತೀವಿ."

ಗಂಡನ ಅವಸ್ಥೆಯನ್ನು ಕಂಡು ಒಳಗಿಂದೊಳಗೇ ಸಂತೋಷಪಡುತ್ತಿದ್ದ ಚಂಪಾ ರಂಗಮ್ಮನನ್ನು ಮತ್ತೂ ಸ್ವಲ್ಪ ಹೊತ್ತು ಅಲ್ಲಿಯೇ ನಿಲ್ಲಿಸಿಕೊಳ್ಳಲು ಬಯಸಿದಳು. ಆಕೆ ಗೃಹಕೃತ್ಯಕ್ಕೆ ಸಂಬಂಧಿಸಿ ಕೇಳಿ ತಿಳಿದುಕೊಳ್ಳಬೇಕಾದ ಎಷ್ಟೋ ವಿಷಯಗಳಿದ್ದುವು.

—"ಇಲ್ಲಿ ವರ್ತನೆ ಹಾಲು ಹಾಕ್ತಾರೆಯೆ?"

—"ಸೌದೆ ಡಿಪೋ ಎಲ್ಲಿದೆ?"

—"ಅಂಗಡಿ ಬೀದಿ ಎಷ್ಟು ದೂರ?"

—ಅಲ್ಲಿ ತರಕಾರಿ ಸಿಗುತ್ತೇನು?"

ರಂಗಮ್ಮ ತಾಳ್ಮೆಯಿಂದ ಉತ್ತರವಿತ್ತು ಪ್ರತಿಯೊಂದಕ್ಕೂ ವಠಾರ ಎಷ್ಟೊಂದು ಅನುಕೂಲವಾಗಿದೆ ಎಂಬುದನ್ನು ಮನಗಾಣಿಸಿ ಕೊಡಲು ಪ್ರಯತ್ನಪಟ್ಟರು.

ಹೊರಗೆ, ಈ ಸಂಭಾಷಣೆಗೆ ಕಿವಿಗೊಡುತ್ತ ನಿಂತಿದ್ದವರು, ಹೊಸಬಳ ಧೈರ್ಯಕ್ಕೆ ಬೆರಗಾಗದಿರಲಿಲ್ಲ.

ಆಗಿನ್ನೂ ಆರು ಘಂಟೆ. ದೀಪ ಹಾಕಲು ಬಹಳ ಹೊತ್ತಿತ್ತು. ಅಲ್ಲದೆ, ಪಶ್ಚಿಮದ ಸೂರ್ಯನ ಕೃಪೆಯಿಂದ ದೊರೆಯುತ್ತಿದ್ದ ಸ್ವಲ್ಪ ಬೆಳಕೂ ಅಲ್ಲಿ ಇಲ್ಲದೆ ಇರಲಿಲ್ಲ. ಆದರೂ ಚಂಪಾ ತನ್ನದೊಂದು ಕೇಳಿಕೆಯನ್ನು ಮುಂದಿಟ್ಟು ರಂಗಮ್ಮನಿಗೆ 'ಚುರುಕು ಮುಟ್ಟಿಸಿದಳು.'

ದೀಪದ ಅವಸ್ಥೆ ಏನೆಂಬುದನ್ನು ಮೊದಲೇ ತಿಳಿದಿದ್ದ ಚಂಪಾ ಗಂಡನಿಗೆ ಹೇಳಿದಳು:

"ದೀಪ ಹಾಕ್ಕೋಬಾರ್ದೆ? ಸಾಮಾನುಗಳೆಲ್ಲಾ ಇವೆಯೋ ಇಲ್ವೋ ಏನೂ ಕಾಣಿಸೋದೇ ಇಲ್ಲ."

ಹೆಂಡತಿಯ ಆ ಮಾತಿಗಾಗಿ ಮನಸ್ಸಿನಲ್ಲೆ ಖುಷಿಯಾದ ಗಂಡ, "ಕರೆಂಟ್ ಇಲ್ಲಾಂತ ತೋರುತ್ತೆ" ಎಂದು ಹೇಳುತ್ತ, ರಂಗಮ್ಮನ ಮುಖ ನೋಡುತ್ತ, ವಿದ್ಯುತ್ ಗುಂಡಿಯನ್ನು ಮುಟ್ಟಿದ.

ರಂಗಮ್ಮ, ಆ ಸಂಭಾಷಣೆ ತಮಗೆ ಕೇಳಿಸದವರಂತೆ ಅತ್ತಿತ್ತ ನೋಡಿದರು.

ಚಂಪಾ ಕೇಳಿಸುವ ಹಾಗೆ ಅಂದಳು:

"ಸ್ವಲ್ಪ ದೀಪ ಹಾಕ್ತೀರಾ?"

ರಂಗಮ್ಮ 'ಹೂಂ' ಅನ್ನಲಿಲ್ಲ: 'ಊಹೂಂ' ಅನ್ನಲಿಲ್ಲ. ಚಕಾರವೆತ್ತದೆ ತಮ್ಮ ಮನೆಗೆ ಹೋಗಿ ವಿದ್ಯುತ್ ಹಿಡಿಯನ್ನೆಳೆದರು. ಎಳೆದ ಮೇಲೆ "ದೀಪ ಬಂತೇ?" ಎಂದು ಕೇಳಲೂ ಇಲ್ಲ. ಹುಬ್ಬು ಗಂಟಿಕ್ಕಿ ಮನೆಯಲ್ಲೆ ಕುಳಿತರು.

ಇವನ್ನೆಲ್ಲ ನೋಡುತ್ತಿದ್ದ ವಠಾರದ ಹೆಂಗಸರು ಪೆಚ್ಚಾಗಿ ಹೋದರು. ಕಾಂತಿಹೀನವಾಗಿದ್ದ ಬೆಳಕನ್ನು ನೋಡುತ್ತ ಚಂಪಾ ಅಂದಳು :

"ಎಷ್ಟೊಂದು ಶುಭ್ರವಾಗಿದೆ !"

ಗಂಡ ಹೇಳಿದ :

"ಪ್ರಚಂಡೆ ಕಣೇ ನೀನು. ಆ ವಯಸ್ಸಾದೋರ್ನ ಗೋಳು ಹುಯ್ಕೊಂಡೆಯಲ್ಲ ! ನರಕಕ್ಕೆ ಹೋಗ್ತಿ ನೋಡು !"

"ಮೆತ್ತಗೆ ಮಾತ್ನಾಡಿ . . ."

ಇಷ್ಟೆಲ್ಲವೂ ನಡೆಯುತ್ತಿದ್ದಾಗ ಮಗು ಸುತ್ತು ಮುತ್ತಲೆಲ್ಲ ಪಿಳಿ ಪಿಳಿ ನೋಡುತ್ತಲೇ ಇತ್ತು. ಉರಿಯತೊಡಗಿದ ದೀಪ ಕ್ಷಣ ಕಾಲ ಅದರ ಪಾಲಿಗೆ ದೊಡ್ಡ ಆಕರ್ಷಣೆಯಾಯಿತು. ಆದರೆ, ಎಷ್ಟು ಹೊತ್ತಾದರೂ ತನ್ನ ಕಡೆಗೆ ಯಾರೂ ಗಮನ ಕೊಡುತ್ತಿಲ್ಲವೆಂದು ಬೇಸರಗೊಂಡು ಅಳತೊಡಗಿತು.

ಶಂಕರನಾರಾಯಣಯ್ಯ ರೇಗುತ್ತ ಹೇಳಿದ :

"ಅಳಿಸ್ಬೇಡ ಮಗೂನ. ಯಾವ ಡಬ್ಬದಲ್ಲಿಟ್ಟಿದೀಯಾ ಬಿಸ್ಕತ್ತು ಪೊಟ್ಟಣ ? ತೆಕ್ಕೊಡ್ಬಾರ್ದೇನು ?"

ಚಂಪಾ ಪ್ರಯಾಸಪಟ್ಟು ಆ ಡಬ್ಬವನ್ನು ಗುರುತಿಸಿ, ಬಿಸ್ಕತ್ತು ಹೊರತೆಗೆದು, ಮಗಳ ಬಾಯಿಗೆ ತುರುಕಿದಳು. ಕೈಗೊಂದು ಚೂರು ಕೊಟ್ಟು ಮಗುವನ್ನು ಚಾಪೆಯ ಮೇಲೆ ಆಡಲು ಬಿಟ್ಟಳು. ತಾನು ಸೆರಗನ್ನು ಸೊಂಟಕ್ಕೆ ಬಿಗಿದು ಗಂಡನ ಜತೆಯಲ್ಲಿ ಸಾಮಾನುಗಳನ್ನು ಎತ್ತಿಡತೊಡಗಿದಳು.

ವಠಾರಕ್ಕೆ ಒಬ್ಬೊಬ್ಬರಾಗಿ ಗಂಡಸರು ಹಿಂತಿರುಗಿ ಬಂದರು. ಕತ್ತಲಾಯಿತು. ಹುಡುಗರೆಲ್ಲ ತಮ್ಮ ತಮ್ಮ ಮನೆಗಳನ್ನು ಸೇರಿದರು. ಹಕ್ಕಿಗಳ ಗೂಡಿನಲ್ಲಿ ಸಂಜೆ ಹೊತ್ತು ಚಿಲಿಪಿಲಿ ಸದ್ದಾಗುವ ಹಾಗೆ, ಮನೆಗಳಿಂದ ವಿವಿಧ ವಯೋಮಾನದ ಮನುಷ್ಯ ಸ್ವರಗಳು ಹೊರಟುವು.

ಪೋಲೀಸನ ಹೆಂಡತಿ "ಕಿಟ್ಟೀ-ಕಿಟ್ಟೀ" ಎಂದು ಕೂಗುತ್ತ ಮುಗಭಾಗದಿಂದ ಓಣಿಗೆ ಬಂದಳು.

"ಮೀನಾಕ್ಷಮ್ಮಾ, ನಮ್ಮ ಕಿಟ್ಟೀ ಇದಾನೇನ್ರಿ ನಿಮ್ಮನೇಲಿ ?" ಎನ್ನುತ ಆಕೆ ಓಣಿಯ ಕೊನೆಯನ್ನು ತಲಪಿದಳು.

ಇಲ್ಲ ಕಣ್ರೀ,ನಮ್ಮೋನು ಆಗ಼್ೇ ಬಂದ,"ಎಂದು ಮೀನಾಕ್ಷಮ್ಮ ಉತ್ತರವಿತ್ತು ದಾಯ್ತು. ಆದರೂ ಮೀನಾಕ್ಷಮ್ಮನ ಬಾಗಿಲಬಳಿ ಇಬ್ಬರೂ ಸೇರಿದರು. ಪ್ರಶ್ನೋತ್ತರಗಳಾದುವು. "ಅಡುಗೆ ಆಯ್ತೆ ?", "ಏನು ಮಾಡಿದ್ರಿ ?", "ನಿವೇನುಮಾಡಿದ್ರಿ ?"

ಆದರೂ ಪೋಲೀಸನ ಹೆಂಡತಿಯ ದೃಷ್ಟಿ ಎದುರು ಮನೆ ಕಡೆಗೇ ಇತ್ತು. ಗಂಡಹೆಂಡತಿ ಸಾಮಾನುಗಳನ್ನೆತ್ತಿ ಇಡುತ್ತಿದ್ದುದನ್ನು ಆಕೆ ಈಕ್ಷಿಸಿದಳು. ಕಿಟ್ಟಿಯನ್ನು ಹುಡುಕುವ ನೆಪ ಮಾಡಿ ಅಲ್ಲಿಗೆ ಬಂದುದೇ ಆ ಉದ್ದೇಶದಿಂದ.

ಗಂಡಸರೂ ಅಷ್ಟೆ. ಕಕ್ಕಸಿಗೆಂದು ಹೊರಟವರು ಕೊನೆಯ ಮನೆ ಬಂದಾಗ ಒಳಕ್ಕೆ ದೃಷ್ಟಿ ಬೀರುತ್ತಿದ್ದರು. ವಠಾರದಲ್ಲಿನ್ನು ತಮ್ಮ ಜತೆ ಇರಲು ಬಂದ ಹೊಸ ಗಂಡಸು ಯಾರೆಂದು ತಿಳಿಯುವ ಸ್ವಾಭಾವಿಕ ಕುತೂಹಲ ಅವರಿಗೆ. ಗಂಡಸನ್ನು ನೋಡಿದ ಮೇಲೆ, ಹಾಗೆಯೇ ಆತನ ಕೈ ಹಿಡಿದಾಕೆಯನ್ನೂ ಅವರು ನೋಡದೆ ಇರುತ್ತಿರಲಿಲ್ಲ.

ರಂಗನ್ನು ವಿಚಾರಿಸಿಕೊಳ್ಳಲು ಮತ್ತೆ ಬರಲಿಲ್ಲ. ಇದು ತನ್ನ ಹೆಂಡತಿಯ ಪ್ರಭಾವ ಎಂಬುದು ಶಂಕರನಾರಾಯಣಯ್ಯನಿಗೆ ಸ್ಪಷ್ಟವಾಗಿತ್ತು.

ಕತ್ತಲಾಗಿ ಒಂದು ಘಳಿಗೆಯಾಗುವುದರೊಳಗೇ ಮನೆಗೊಂದು ಸ್ವರೂಪ ಬಂತು. ಮೇಜು ಕುರ್ಚಿಗಳನ್ನೂ ಶಂಕರನಾರಾಯಣಯ್ಯ ಒಂದು ಮೂಲೆಯಲ್ಲಿ ನಿಲ್ಲಿಸಿದ.

ಮಗು ಚಾಪೆಯ ಮೇಲೆಯೆ ನಿದ್ದೆ ಮಾಡಿತ್ತು. ತಂದೆ ಆಯಾಸ ಪರಿಹಾರ ಕ್ಕೆಂದು ಅದರ ಬಳಿಯಲ್ಲಿ ಕುಳಿತುಕೊಂಡ. ತನ್ನ ಕೊಳಕು ಕೈಯಿಂದ ಮಗುವನ್ನು ಮುಟ್ಟಲು ಮನಸ್ಸಾಗಲಿಲ್ಲ. ಬಾಗಿ ನೋಡಿದಾಗ ಲಂಗದ ಕೆಳಭಾಗವೂ ಚಾಪೆಯೂ ಒದ್ದೆಯಾಗಿದ್ದಂತೆ ಕಂಡಿತು. ಮಗುವಿನ ತಂದೆ, ಮಗುವಿನ ತಾಯಿಯನ್ನು ಗದರಿಸಬಯಸಿದ.

"ನೋಡೆ, ನಿನ್ನ ಮಗಳು ಏನ್ಮಾಡಿದಾಳೇಂತ !"

ಚಂಪಾ, ದೂರದಿಂದಲೇ ಅದೇನೆಂದು ಊಹಿಸಿಕೊಂಡು ಹೇಳಿದಳು :

"ಅಷ್ಟೆ ತಾನೆ ? ತೀರ್ಥ ಪ್ರೋಕ್ಷಣ : ಪಾವನವಾಯ್ತು ಮನೆ."

ತೊಟ್ಟಿಲಿನೊಳಗೆ, ಗೋಡೆಯನ್ನು ಅಲಂಕರಿಸಬೇಕಾದ ಕಟ್ಟು ಹಾಕಿದ ಚಿತ್ರಗಳಿದ್ದುವು. ಅದನ್ನೆಲ್ಲಾ ಹೊರತೆಗೆದು ಗೋಡೆಗೆ ಮೊಳೆ ಬಡಿದು ತಗಲು ಹಾಕುವ ಕೆಲಸವಿತ್ತು. ಅದನ್ನು ಈಗಲೇ ಮಾಡೋಣವೆ ಬೇಡವೆ ಎಂದು ಅನಿಶ್ಚಯತೆಯಿಂದ ತೊಟ್ಟಿಲನ್ನೆ ಶಂಕರನಾರಾಯಣಯ್ಯ ನೋಡಿದ. ಅದನ್ನು ಗಮನಿಸಿ ಚಂಪಾ ಹೇಳಿದಳು :

"ಇವತ್ತಿಗೆ ಇಷ್ಟು ಸಾಕು. ಅದನ್ನೆಲ್ಲಾ ನಾಳೆ ಮಾಡುವಿರಂತೆ."

"ಹೂಂ. ಸೊಂಟ ನೋಯ್ತಿದೆ, ಯಾಕೊ...."

"ಎಷ್ಟೊಂದು ಕೆಲಸ ಮಾಡಿದೀರಿ, ಏನು ಕಥೆ ? ನೋಯದೆ ಇರುತ್ಯೆ ?"

"ನಿನಗೇನು ಹೇಳು, ಎಲ್ಲಾ ತಮಾಷೆಯೆ...."

ಚಂಪಾ ಒಂದು ಪೊರಕೆಯನ್ನೆತ್ತಿಕೊಂಡಳು.

"ಏಳಿ, ಗುಡಿಸ್ಬಿಡ್ತೀನಿ. ನೀವು ಹೋಗಿ ಕೊಳಾಯಿ ಬೀಗ ತೆಗೆಸಿ."

"ಹೂಂ. ಬಿಂದಿಗೆ-ಬಕೀಟು ಎರಡೂ ತಗೊಂಡ್ಬಾ. ನನಗಂತೂ ಸ್ನಾನ ಮಾಡಿಯೇ ತೀರ್ಬೇಕು.

"ಎಲ್ಮಾಡ್ತೀರಾ ಸ್ನಾನ ?"

"ಬಚ್ಚಲು ಮನೆಯೇನೋ ಪಕ್ಕದಲ್ಲಿ ಇದೆ. ಇಷ್ಟು ಹೊತ್ತಿಗೆ ಕ್ಯೂನೂ ಇರಲಾರದು."

ಚಂಪಾ ಹೊರಹೋಗಿ ಬಚ್ಚಲುಮನೆ ನೋಡಿ ಬಂದಳು.

"ಅಲ್ಲಿ ದೀಪ ಇಲ್ಲಾಂದ್ರೆ."

"ಹೋಗಿಲಿ ಬಿಡು. ಅಡುಗೆ ಮನೇಲೂ ಸ್ನಾನಕ್ಕೆ ಏರ್ಪಾಡಿದೆ. ನೀರು ಹೋಗೋಕೆ ಹಾದಿ ಮಾಡಿದಾರೆ."

ಆತ ಎದ್ದು ರಂಗಮ್ಮನವರಲ್ಲಿಗೆ ಹೋದ. ದೇವರ ಸ್ಮರಣೆ ಮಾಡುತ್ತ ಕುಳಿತಿದ್ದ ಅವರು ತಗ್ಗಿದ ಧ್ವನಿಯಲ್ಲಿ ಕೇಳಿದಳು :

"ಎಲ್ಲಾ ಕೆಲಸ ಮುಗಿಯಿತೆ?"

"ಮುಗೀತಾ ಬಂತು ರಂಗಮ್ನೋರೆ, ಸ್ವಲ್ಪ ನೀರು ಬೇಕಲ್ಲ."

ರಂಗಮ್ಮ ಎದ್ದು, ಗೋಡೆಯೊಳಗಿದ್ದ ಗೂಡಿನಿಂದ ಬೀಗದ ಕೈ ತೆಗೆದು ಕೊಟ್ಟರು.

"ನೀರು ತುಂಬಿಸಿ ಆದ್ಮೇಲೆ ಬೀಗ ಹಾಕ್ಬಿಟ್ಟು ಕೈನ ತಂದ್ಕೊಡೀಪ್ಪಾ."

"ಆಗಲಿ ರಂಗಮ್ನೋರೆ."

ರಂಗಮ್ಮ ಪುನಃ ಗೋಡೆಗೊರಗಿ ಕುಳಿತು ದೇವರ ಸ್ಮರಣೆಯಲ್ಲಿ ನಿರತರಾದರು. ಆದರೆ, ರಾತ್ರಿಯ ಹೊತ್ತು ಕೊಳಾಯಿಯಿಂದ ವೇಗವಾಗಿ ಸುರಿಯುತ್ತಿದ್ದ ನೀರಿನ ಸುಂಯ್ ಎಂಬ ಸದ್ದು ಅವರಿಗೆ ಕೇಳಿಸದೆ ಇರಲಿಲ್ಲ.

ಶಂಕರನಾರಾಯಣಯ್ಯ ಮೈತೊಳೆದುಕೊಂಡ. ಚಂಪಾ ಮುಖ ಕೈಕಾಲು ತೊಳೆದುಕೊಂಡಳು.

ಸಂಜೆ ಮಗುವನ್ನೆತ್ತಿಕೊಂಡಿದ್ದ ಚಂಪಾಳನ್ನು ಕಂಡಾಗ ಹತ್ತಿರಕ್ಕೆ ಕರೆದು ಏನೋ ಮಾಡಬೇಕೆಂದು ಗಂಡಸಿಗೆ ತೋರಿತ್ತು. ಈಗ ಕೆಲಸ ಮಾಡಿ ಬಳಲಿದ ಮೇಲೆ, ಅವನಿಗೆ ಆ ಅಪೇಕ್ಷೆಯೇ ಇರಲಿಲ್ಲ.

ಅಡ್ಡಪಂಚೆಯುಟ್ಟು ಬೇರೆ ಜುಬ್ಬ ಧರಿಸುತ್ತ ಆತ ಹೇಳಿದ.

"ಇವತ್ತು ಎಷ್ಟಾಗುತ್ತೋ ಅಷ್ಟು ನೀರು ತುಂಬಿಸ್ಕೊಂಡ್ಬಿಡೇ. ನಾಳೆಯಿಂದ ಬಿಂದಿಗೆ ಲೆಕ್ಕ ಹಿಡೀತಾರೆ."

"ಸರಿ! ಸರಿ!"

ಚಂಪಾ ಬಲಬದಿಯ ಮನೆಗೆ ಹೋಗಿ ಬಾಗಿಲಲ್ಲೆ ನಿಂತಳು.

ನಾಗರಾಜರಾಯ ಅಲ್ಲಿದ್ದ.

"ಯಾರೋ ಬಂದಿದಾರೆ ನೋಡೇ," ಎಂದು, ಅಡುಗೆ ಮನೆಯಲ್ಲಿದ್ದ ಹೆಂಡತಿಗೆ ಆತ ಕರೆದು ಹೇಳಿದ.

ಪದ್ಮಾವತಿ ಹೊರಬಂದಳು. ಮುಗುಳುನಗುತ್ತಿದ್ದ ಚಂಪಾಳನ್ನು ಕಂಡು ಅರೆಕ್ಷಣ ಆಕೆಗೆ ಕಕ್ಕಾವಿಕ್ಕಿಯಾಯಿತು.

"ಏನಾದರೂ ಬೇಕಾಗಿತ್ತೆ ?" ಎಂದು ಆಕೆ ಕೇಳಿದಳು.

"ನೀವು ದಿನಾಗಲೂ ಹಸುವಿನ ಸೆಗಣಿ ಎಲ್ಲಿಂದ ತರ್ತೀರಾ ?"

"ಅದೊಂದು ಇಲ್ಲಿ ಸಿಗೋದು ಸ್ವಲ್ಪ ಕಷ್ಟವೇ. ಸಾಮಾನ್ಯವಾಗಿ ಬೆಳಗ್ಗೆ ಹುಡುಗರನ್ನ ಬೀದಿ ಉದ್ದಕ್ಕೂ ಕಳಿಸ್ತೀವಿ. ಎಲ್ಲಿಯಾದರೂ ಸಿಗುತ್ತೆ. ಒಮ್ಮೆ ತಂದರೆ ಐದಾರು ದಿವಸಕ್ಕೆ ಸಾಕಾಗುತ್ತೆ."

"ಓ....ಹಾಗೇನು ?....ಈಗ ಅಡುಗೆ ಮನೆ ಶುದ್ಧಿ ಮಾಡೋಕೆ ಒಂದು ಚೂರು ಬೇಕಾಗಿತ್ತು. ಸ್ವಲ್ಪ ಕೊಡ್ತೀರಾ ?"

"ಅದಕ್ಕೇನ್ರೀ, ತಾಳಿ ಕೊಡ್ತೀನಿ."

ಪದ್ಮಾವತಿ ಅದನ್ನು ತಂದುಕೊಟ್ಟಳು. ಹೊಸಬಳೊಡನೆ ತಾನೇ ಮೊದಲು ಮಾತನಾಡಿದವಳು, ಆಕೆಗೆ ನೆರವಾದವಳು, ಎಂದು ಅವಳಿಗೆ ಸಂತೋಷ.

ಶಂಕರನಾರಾಯಣಯ್ಯ ಕೇಳಿದ:

"ಒಲೆ ಹಚ್ತೀಯೇನು ?"

"ಯಾಕೆ, ಬೇಡ್ವೆ ?"

"ಅದೇ ಯೋಚ್ನೆ ಮಾಡ್ತಿದೀನಿ."

"ಹೇಳಿ ಬೇಗ್ನೆ. ದೀಪದ ಗತಿ ಏನಾಗುತ್ತೋ ಆಮೇಲೆ."

"ನೀನು ಬಹಳ ವಿಷಯ ವಿಚಾರಿಸ್ಕೊಂಡೆ. ಆದರೆ ಒಂದನ್ನು ಮಾತ್ರ ಕೇಳಲಿಲ್ಲ ನೋಡು."

"ಅದೇನೋ ?"

"ಇಲ್ಲಿ ಹೋಟ್ಲು ಎಲ್ಲಿದೇಂತ ?"

"ನಾನು ಯಾತಕ್ಕೆ ಕೇಳ್ಲಿ ಅದನ್ನ ?"

"ಅದ್ಸರಿ ಅನ್ನು. ನನಗಂತೂ ಈ ವಠಾರ ಎಲ್ಲಿದೇಂತ ಗೊತ್ತಾಗೋಕ್ಮುಂಚೇನೆ ಹೋಟ್ಲಿನ ಪರಿಚಯ ಆಗಿದೆ."

"ಬಿಡಾರ ಬಂದಿದೇವೆ ಅಂತ ಈಗ ಅವರಿಗೆ ಹೇಳ್ಬಿಟ್ಟು ಬರ್ಬೇಕೇನೋ ?"

"ನೋಡಿದ್ಯಾ—ಎಷ್ಟು ಸರಿಯಾಗಿ ಊಹಿಸ್ಕೊಂಡೆ !"

"ನಡೀರಿ. ನಾನೂ ಬರ್ತೀನಿ."

"ರಂಗಮ್ಮನಿಗೆ ಗೊತ್ತಾದರೆ ನಾಳೇನೇ ನೋಟೀಸು ಕೊಡ್ತಾರೆ."

"ಅದೆಲ್ಲಾ ಸಾಕು. ಏನ್ಮಾಡೋಣಾಂತ ಈಗ? ಒಲೆ ಹಚ್ಚಲೋ ಬೇಡ್ವೊ?"

"ಆ ರೈಲುಚೆಂಬು ತಾ. ಹೋಟ್ಲಿಗೆ ಹೋಗಿ ಪೂರಿ ಪಲ್ಯನೋ ಚಪಾತೀನೋ ಕಟ್ಟಿಸ್ಕೊಂಡು, ಕಾಫಿ ತಗೊಂಡ್ಬರ್ತೀನಿ."

"ನೀವು ಅಲ್ಲಿ ಕುಡಿಯೋಲ್ಲ ತಾನೆ ?"

"ಎಷ್ಟೊಂದು ಹೊಟ್ಟೆ ಉರಿಯೆ ನಿಂಗೆ !"

"ಮಗೂಗೆ ?"

"ಎಚ್ಚರವಾದರೆ ಇನ್ನೊ ಒಂದು ಚೂರು ಬಿಸ್ಕತ್ತು ಬಾಯಿಗೆ ಹಾಕಿ ಎರಡು ಚಮಚ ಕಾಫಿ ಕುಡಿಸೋದು."

"ಹೂಂ. ನಿಮ್ಕೈಲಿ ಬಚಾಯಿಸ್ಕೊಂಡೋರು ಯಾರು ?"

ಚಂಪಾ ಒಪ್ಪಿಗೆಯಿಂದಲೆ ರೈಲುಚೆಂಬನ್ನು ತಂದುಕೊಟ್ಟಳು.

"ಇನ್ನೊಂದು ಬಿಂದಿಗೆ ನೀರು ಹಿಡ್ಕೊಂಡ್ಬಿಟ್ತೀನಿ, ಬೀಗ ಹಾಕ್ಬಿಟ್ಟೇ ಹೋಗಿ."

ಶಂಕರನಾರಾಯಣಯ್ಯ ಚಿಲ್ಲರೆ ದುಡ್ಡನ್ನು ಜೇಬಿಗೆ ಸೇರಿಸಿ, ರೈಲುಚೆಂಬನ್ನು ಕೈಲೆತ್ತಿಕೊಂಡ. ಹೊರಬಂದು, ಕೊಳಾಯಿಗೆ ಬೀಗ ಹಾಕಿ, ಬೀಗದ ಕೈಯನ್ನು ರಂಗಮ್ಮನ ಬಳಿಗೊಯ್ದ.

ರಂಗಮ್ಮ ನಿರ್ವಿಕಾರ ಸ್ವರದಲ್ಲಿ ಕೇಳಿದರು :

"ನೀರು ಆಯ್ತೆ ?"

"ಆಯ್ತು."

ಆತನ ಕೈಲಿದ್ದ ರೈಲುಚೆಂಬು ನೋಡುತ್ತ ರಂಗಮ್ಮನೆಂದರು :

"ಹೊರಗೆ ಹೋದರೆ ವಾಪಸು ಬರುವಾಗ ಹಿತ್ತಿಲಗೇಟು ಭದ್ರವಾಗಿ ಹಾಕ್ಕೊಳ್ಳೀಪ್ಪಾ."

"ಹೂಂ. ಹಾಕ್ಕೊಳ್ತೀನಿ."

ಶಂಕರನಾರಾಯಣಯ್ಯ ಹೋಟೆಲಿಗೆ ಬಂದಾಗ, ಅಲ್ಲಿ ಬಾಗಿಲು ಮುಚ್ಚುವ ಸಿದ್ಧತೆ ನಡೆದಿತ್ತು. ಬೇರೆ ಯಾವ ತಿಂಡಿಯೂ ದೊರೆಯದೆ ಕೊನೆಯದಾಗಿ ಉಳಿದಿದ್ದ ಚೌಚೌವನ್ನೇ ಒಂದು ಪಾವು ಕಟ್ಟಿಸಿಕೊಳ್ಳಬೇಕಾಯಿತು. ಕಾಫಿಯೆಂಬ ಹೆಸರಿನ ಒಂದು ದ್ರಾವಕವನ್ನೇನೋ ಅಲ್ಲಿ ಕೊಟ್ಟರು. ಹತ್ತಿರದಲ್ಲೇ ಇದ್ದ ಅಂಗಡಿಯಿಂದ ನಾಲ್ಕು ಪಚ್ಚಬಾಳೆ ಹಣ್ಣುಗಳನ್ನೂ ಒಂದು ಪ್ಯಾಕೇಟು ಚಾರ್ಮಿನಾರ್ ಸಿಗರೇಟನ್ನೂ ಆತ ಕೊಂಡುಕೊಂಡ.

....ವಠಾರದ ಮನೆಯಲ್ಲಿ ಒಂದೊಂದಾಗಿ ದೀಪಗಳು ಆರತೊಡಗಿದ್ದುವು. ಪ್ಯಾಂಟು ಷರಟು ಧರಿಸಿದ್ದ ಯುವಕನೊಬ್ಬ ಚರ್ಮದ ಕಡತಚೀಲವನ್ನು ಎದೆಗೊತ್ತಿಕೊಂಡು ಕೇರಿಯಿಂದ ಮಹಡಿಯ ಮೆಟ್ಟಲೇರುತ್ತಿದ್ದ. ವಠಾರಕ್ಕೆ ಹಿಂತಿರುಗುತ್ತಿದ್ದ ಶಂಕರನಾರಾಯಣಯ್ಯ ಗೇಟಿನ ಸದ್ದು ಮಾಡಿದಾಗ ಆ ಯುವಕ ತಡೆದು ನಿಂತು, ಕೆಳಗೆ ತಿರುಗಿ, ನೋಡಿದ. ಆ ಕತ್ತಲಲ್ಲಿ ಒಳಬಂದವರು ಯಾರೆಂಬುದು ಆತನಿಗೆ ಸ್ಪಷ್ಟವಾಗಿ ತಿಳಿಯಲಿಲ್ಲ. ಆತ್ಮವಿಶ್ವಾಸದ ಅಧಿಕಾರಯುಕ್ತ ಸ್ವರದಲ್ಲಿ ಆತ ಕೇಳಿದ :

"ಯಾರದು ?"

ಶಂಕರನಾರಾಯಣಯ್ಯನೇನು ಕಡಮೆ ಆಸಾಮಿಯೆ ?

"ನಾನು."

"ಸುಬ್ಬಕೃಷ್ಣಯ್ಯ ?"

"ಅಲ್ಲ. ಶಂಕರನಾರಾಯಣಯ್ಯ—ಹೊಸಬ."

"ಓ....ಕತ್ತಲೇಲಿ ಕಾಣಿಸ್ಲಿಲ್ಲ. ಕ್ಷಮಿಸಿ."

"ಏನೂ ಪರವಾಗಿಲ್ಲ."

ಯುವಕ ತನ್ನ ಹೆಸರು ಹೇಳದೆಯೇ ಮೇಲಕ್ಕೆ ಏರಿದ ಸೀನು ಯಾರೋ ನಾಳೆ ನೋಡ್ಕೋತೀನಿ—ಎಂದು ಶಂಕರನಾರಾಯಣಯ್ಯ ಮನಸ್ಸಿನಲ್ಲೆ ಅಂದುಕೊಂಡ.

ಆತನ ದೃಷ್ಟಿ ಗೋಡೆಯತ್ತ ಸರಿಯಿತು. 'ಮನೆ ಬಾಡಿಗೆಗೆ ಇದೆ' ಬೋರ್ಡು ಅಲ್ಲಿದ್ದಂತೆ ತೋರಲಿಲ್ಲ. ರಂಗಮ್ಮ ಅದನ್ನು ತೆಗೆದು ಒಳಕ್ಕೆ ಒಯ್ದುಬಿಟ್ಟಿದ್ದರು.

ಹಿತ್ತಲ ಗೇಟನ್ನು ಭದ್ರವಾಗಿ ಮುಚ್ಚಿ, ವಠಾರಕ್ಕೆ ಹಳಬನೇನೋ ಎಂಬಂತೆ ಕತ್ತಲೆಯಲ್ಲಿ ದೃಢ ಹೆಜ್ಜೆಗಳನ್ನಿಡುತ್ತ ಆತ ಕೊನೆಯ ಮನೆ ಸೇರಿದ.

ಮನೆಯೊಳಗಿನಿಂದ ಅಗರಬತ್ತಿಯ ಘಮಘಮ ವಾಸನೆ ಬರುತ್ತಿತ್ತು. ಅಡುಗೆ ಮನೆಯಲ್ಲಿ ದೇವರಿಗೂ ಜಾಗಮಾಡಿ ಕೊಟ್ಟು, ಆ ಪಟದ ಮುಂದೆ ದೀಪವನ್ನೂ ಅಗರಬತ್ತಿಯನ್ನೂ ಹಚ್ಚಿಟ್ಟು, ಚಂಪಾ ದೇವರಿಗೆ ನಮಸ್ಕಾರ ಮಾಡಿದ್ದಳು.

ಗಂಡ ಬರುತ್ತಲೇ ಕೇಳಿದಳು :

"ಏನ್ರೀ, ಇಲ್ಲಿ ತುಳಸೀಕಟ್ಟೆ ಇದೆ ತಾನೆ? ಕಾಣಿಸ್ಲೇ ಇಲ್ಲ."

"ಎಂಥಾ ಮಾತಾಡ್ತೀಯೆ! ವಠಾರದಲ್ಲಿ ತುಳಸೀಕಟ್ಟೆ ಇಲ್ದೆ! ಹೊರಗೆ ಹಿತ್ತಿಲಲ್ಲೇ ಇದೆ—ಒಂದು ಮೂಲೇಲಿ."

"ಸರಿ ಹಾಗಾದರೆ" ಎನ್ನುತ್ತ ಚಂಪಾ ಹಾಸಿಗೆ ಹಾಸತೊಡಗಿದಳು.

"ಅದನ್ನ ಆಮೇಲೆ ಮಾಡು—ಕಾಫಿ ಆರಿಹೋಗುತ್ತೆ. ಅಲ್ಲಿ ತಿಂಡಿ ಎಲ್ಲಾ ಆಗ್ಹೋಗ್ಬಿಟ್ಟಿತ್ತು. ನಮ್ಮ ಸೌಭಾಗ್ಯಕ್ಕೆ ಸಿಕ್ಕಿದ್ದೇ ಇದು–ಚೌಚೌ."

"ಹೋಗಲಿ ಬಿಡಿ. ಇಷ್ಟು ಸಾಲ್ದೇನು? ಹಣ್ಣು ಬೇರೆ ತಂದಿದೀರಾ...."

....ರಾತ್ರೆಯ ಉಪಾಹಾರ ಮುಗಿಯಿತು.

ಎಚ್ಚರವಾಗದೆಯೆ ಇದ್ದ ಮಗುವಿಗೆ ಮೆತ್ತನ್ನ ಹಾಸಿಗೆ ದೊರೆಯಿತು.

ಶಂಕರನಾರಾಯಣಯ್ಯ ಒಂದು ಸಿಗರೇಟು ಸೇದುತ್ತ ಹಾಯಾಗಿ ಕುಳಿತ. ಚಂಪಾ ಮಗುವನ್ನೂ ಮಗುವಿನ ತಂದೆಯ ಮುಖವನ್ನೂ ಪ್ರೀತಿಯಿಂದ ನೋಡಿದಳು.

ದೀಪ ಆರಿಹೋಯಿತು.

"ಇಲ್ಲಿ ನಾವು ದೀಪ ಆರಿಸ್ಬೇಕಾದ ತೊಂದರೇನೇ ಇಲ್ಲ," ಎಂದು ಶಂಕರ ನಾರಾಯಣಯ್ಯ ನಕ್ಕ.

ನಗೆಯ ಶಾಖ ಚಂಪಾವತಿಗೂ ತಗಲಿತು.

ಗಂಡ ಹೆಂಡತಿ ಇಬ್ಬರೂ ಹಾಸಿಗೆಯ ಮೇಲೆ ತಮಗೂ ಜಾಗ ಬೇಕೆಂದು, ಮಗುವನ್ನು ಮೂಲೆಯಲ್ಲಿ ಮಲಗಿಸಿದರು.

ಹಗಲು ಬಯಸಿದ್ದನ್ನು ಈಗ ಆಕೆಯೇ ಕೊಟ್ಟಳು. ಅದನ್ನಾತ ಹುಸಿ ಮುನಿಸಿನಿಂದ ವಾಪಸು ಮಾಡಿದ. ಆಕೆ ಮತ್ತೆ ಕೊಡಹೋದಳು.

ಚಿತ್ರ ಬರೆಯುವ ಶಂಕರನಾರಾಯಣಯ್ಯ ಹೇಳಿದ:
“ಮೊದಲ ರಾತ್ರಿ.”

೧೭

ಬೇರು ಕಿತ್ತು ಬೇರೆ ಕಡೆ ಮಣ್ಣು ಪಾತ್ರೆಯಲ್ಲಿ ನೆಟ್ಟ ಗಿಡ ಎಷ್ಟೆಂದರೂ ಅಷ್ಟೇ ಸರಿಯಾದ ಆರೈಕೆ ಇಲ್ಲದ ಮೇಲಂತೂ ಅವರ ಅವಸ್ಥೆ ಹೇಳುವುದು ಬೇಡ.

ವಠಾರದ ಹೆಚ್ಚಿನ ಸಂಸಾರಗಳೆಲ್ಲ ಅಂಥವು. ಹಲವರು ಕೆಲವು ತಲೆಮಾರುಗಳಿಂದ ಬೆಂಗಳೂರಲ್ಲೇ ಒಂದಲ್ಲ ಒಂದು ಕಡೆ ಬದುಕಿದವರು. ಕೆಲವರು ಹಳ್ಳಿಗಳಿಂದ ಬಂದು ನೆಲೆಸಿದವರು. ಆದರೆ ಅಂಥವರಲ್ಲಿ ಹೆಚ್ಚಿನವರು ತಮ್ಮ ಹಿಂದೆ ಏನನ್ನೂ ಬಿಟ್ಟು ಬಂದವರಲ್ಲ.

ಇದಕ್ಕೆ ಅಪವಾದವಾಗಿದ್ದ ಒಂದು ಸಂಸಾರವೆಂದರೆ ರಂಗಮ್ಮನ ಬಲಬದಿಗೆ ಇದ್ದ ತಾಯಿ–ಮಕ್ಕಳು. ಕೋಲಾರದ ಕಡೆಯ ಆ ಕುಟುಂಬ ತೇಲುತ್ತಿದ್ದ ದೋಣಿಯಾಗಿರಲಿಲ್ಲ. ಅವರಿಗೆ ಒಂದಿಷ್ಟು ಜಮೀನಿತ್ತು. ಆದರೆ ಅವರು ಶ್ರೀಮಂತರೇನೂ ಅಲ್ಲ.

ಶ್ರೀಮಂತರು ಆ ವಠಾರದಲ್ಲಿ ನೆಲೆಸುವುದಿಲ್ಲವೆಂಬುದು ರಂಗಮ್ಮನಿಗೂ ಗೊತ್ತಿತ್ತು. ಇತರ ಸಂಸಾರಗಳಿಗೂ ಗೊತ್ತಿತ್ತು. ಆದರೆ ವೆಂಕಟಸುಬ್ಬಮ್ಮನದು ಜಮೀನ್ದಾರರ ಕುಟುಂಬ ಎಂಬ ಅಂಶವನ್ನು ಅವರು ಗಮನಿಸಿದ್ದರು. ಆ ಜಮೀನುದಾರಿಕೆ ವೆಂಕಟಸುಬ್ಬಮ್ಮನ ಸೀರೆಯಲ್ಲಿ ಆಭರಣದಲ್ಲಿ ಕಂಡು ಬರದೆ, ಅವರೆಲ್ಲರಿಗೆ ನಿರಾಸೆಯಾಗಿತ್ತು.

ಶ್ರೀರಾಮಪುರದವರೇ ಒಬ್ಬರು ಬಂದು ಬಾಡಿಗೆಗೆ ಗೊತ್ತುಮಾಡಿ ಹೋಗಿದ್ದರು.

ವೆಂಕಟಸುಬ್ಬಮ್ಮನ ವ್ಯಕ್ತಿತ್ವ ಇತರರ ದೃಷ್ಟಿಯಲ್ಲಿ ಸ್ವಲ್ಪ ವಿಚಿತ್ರವಾಗಿತ್ತು. ಆಕೆ ವಠಾರದ ಹೆಂಗಸರೊಡನೆ ಬೆರೆಯುತ್ತಿರಲಿಲ್ಲ. ಹರಟೆಗೆ ಬರುತ್ತಿರಲಿಲ್ಲ. ಇನ್ನೊಬ್ಬರ ವಿಷಯ ತಿಳಿದುಕೊಳ್ಳಲು ಕುತೂಹಲ ತಳೆಯುತ್ತಿರಲಿಲ್ಲ. ಒಂದು ಮಾತಿಗೆ ಒಂದೇ ಉತ್ತರ. ಎಷ್ಟು ಬೇಕೋ ಅಷ್ಟು. ಆಕೆ ಒಂದು ದಿನವಾದರೂ ಸ್ವರವೇರಿಸಿ ಮಾತನಾಡಿದ್ದನ್ನು ಇಲ್ಲವೆ ಗಟ್ಟಿಯಾಗಿ ನಕ್ಕುದನ್ನು ಯಾರೂ ಕಂಡಿರಲಿಲ್ಲ. ಮನೆಯೊಳಗೂ ಅಷ್ಟೆ. ಮಕ್ಕಳ ಜತೆಯಲ್ಲೂ ಮೃದುವಾಗಿಯೆ ಮಾತನಾಡುತ್ತಿದ್ದಳು. ಅಲ್ಲಿ ತಾಯಿ ಮಕ್ಕಳು ಜಗಳಾಡುವುದನ್ನು ನೋಡಿದವರೇ ಇಲ್ಲ.

‘ವೆಂಕಟಸುಬ್ಬಮ್ಮನೋರೇ, ಇದೀರೇನು?’ ಎಂದು ಕೇಳುವ ಪ್ರಮೇಯವೇ ಇರಲಿಲ್ಲ. ಆಕೆ ಯಾವಾಗಲೂ ಮನೆಯಲ್ಲೇ ಇರುತ್ತಿದ್ದಳು.

ಹೀಗಾಗಿ ಬಾಗಿಲ ಬಳಿ ನಿಂತು ಯಾವಳಾದರೂ ಹೆಂಗಸು ಕೇಳುತ್ತಿದ್ದುದಿತ್ತು:
“ಏನ್ಮಾಡ್ತಿದೀರಿ ವೆಂಕಟಸುಬ್ಬಮ್ಮ?”

ಈ ಪ್ರಶ್ನೆಯನ್ನು ಕೇಳಿದಾಗಲೆಲ್ಲ ಸಮಯಕ್ಕೆ ಅನುಸರಿಸಿ ಉತ್ತರಗಳು ಬದಲಾಗುತ್ತಿದ್ದುವು.

"ಕಾಫಿಗೆ ಇಟ್ಟಿದೀನಿ. ಹುಡುಗರು ಬರೋ ಹೊತ್ತಾಯ್ತು."

ಇಲ್ಲವೆ—

"ಹುಡುಗರಿಗೆ ಊಟಕ್ಕಿಡ್ತಾ ಇದೀನಮ್ಮ."

ಅಥವಾ—

"ಹುಡುಗರಿಗೆ ಹಾಸಿಗೆ ಹಾಸ್ತಾ ಇದೀನಿ, ರಂಗಮ್ನೋರೆ."

ಯಾವಾಗ ನೋಡಿದರೂ ಹುಡುಗರು—ಹುಡುಗರು. ಮಕ್ಕಳನ್ನು ಬಿಟ್ಟರೆ ಬೇರೆ ಬದುಕೇ ಇರಲಿಲ್ಲ ಆ ಜೀವಕ್ಕೆ. ಆಕೆಯದು ಸೊರಗಿದ ಶರೀರ. ಮುಖ ಸದಾ ಕಾಲವೂ ಬಾಡಿರುತ್ತಿತ್ತು. ಬೇರೆ ಬೇರೆ ಕಾಲೇಜುಗಳಲ್ಲಿ ಓದುತ್ತಿದ್ದರೂ ಅಣ್ಣ ತಮ್ಮಂದಿರು ಜತೆಯಾಗಿಯೇ ಮನೆಗೆ ಮರಳುತ್ತಿದ್ದರು. ಅವರು ಹಿಂತಿರುಗಲು ಇನ್ನೂ ಅರ್ಧ ಗಂಟೆ ಇದೆ ಎನ್ನುವಾಗಲೇ ವೆಂಕಟಸುಬ್ಬಮ್ಮ ಹೊರ ಅಂಗಳದ ಗೇಟಿಗೆ ಆತುಕೊಂಡು ನಿಂತುಬಿಡುತ್ತಿದ್ದಳು. ದೂರದಲ್ಲಿ ಮಕ್ಕಳನ್ನು ಕಂಡೊಡನೆಯೆ ಆಕೆಯ ಬಾಯಿಯಿಂದ ಮಾತು ಹೊರಡುತ್ತಿತ್ತು:

"ಹುಡುಗ್ರು ಬರ್ತಾ ಇದಾರೆ."

ಹತ್ತಿರ ಯಾರಾದರೂ ಇರಲಿ, ಇಲ್ಲದೆ ಇರಲಿ, ಆ ಮಾತನ್ನು ಆಕೆ ಹೇಳಿಯೇ ಹೇಳುತ್ತಿದ್ದಳು. ಮೊದಮೊದಲು ದಿನವೂ ಅದನ್ನು ಕೇಳಿ ಇತರ ಹೆಂಗಸಿಗೆ ತಮಾಷೆ ಎನಿಸುತ್ತಿತ್ತು. ಕ್ರಮೇಣ ವೆಂಕಟಸುಬ್ಬಮ್ಮನ ಆ ಮಾತಿಗೆ ಲಕ್ಷ್ಯ ಕೊಡುವುದನ್ನೇ ಹೆಂಗಸರು ಕಡಿಮೆ ಮಾಡಿದರು.

ಪ್ರತಿ ತಿಂಗಳೂ ಐದನೆಯ ತಾರೀಕಿಗೆ ಸರಿಯಾಗಿ ವೆಂಕಟಸುಬ್ಬಮ್ಮ ಬಾಡಿಗೆ ಕೊಡುತ್ತಿದ್ದಳು. ಆಕೆ ಒಡಿಯುತ್ತಿದ್ದ ಮೂರು ಬಿಂದಿಗೆ ಹೆಚ್ಚಿನ ನೀರಿನ ಎಂಟಾಣೆಯೂ ರಂಗಮ್ಮನಿಗೆ ಬರುತ್ತಿತ್ತು.

"ಎಲ್ಲರೂ ಹೀಗೆಯೇ ಹೊತ್ತಿಗೆ ಸರಿಯಾಗಿ ಬಾಡಿಗೆ ಕೊಟ್ಟರೆ ಎಷ್ಟು ಚೆನ್ನಾಗಿರುತ್ತೆ," ಎಂದು ರಂಗಮ್ಮ ಇತರರ ಕಿವಿಗೆ ಬೀಳುವಂತೆ ವೆಂಕಟಸುಬ್ಬಮ್ಮನನ್ನು ಹೊಗಳುತ್ತಿದ್ದರು.

ಮೌನದ ಚಿಪ್ಪಿನೊಳಗೆ ಮುದುಡಿಯೇ ಇರುತ್ತಿದ್ದ ವೆಂಕಟಸುಬ್ಬಮ್ಮನ ಮನಸ್ಸಿನ ಹಿಂದೆ ಏನೇನಿದೆಯೆಂದು ತಿಳಿಯಲು ಆರಂಭದಲ್ಲಿ ರಂಗಮ್ಮ ಕುತೂಹಲಿಯಾಗಿದ್ದರು. ಬಹಳ ಕಾಲದ ಸಾಮೀಪ್ಯದ ಬಳಿಕ ಮಾತ್ರ, ವೆಂಕಟಸುಬ್ಬಮ್ಮನ ಬಾಯಿ ಬಿಡಿಸುವುದು ಸಾಧ್ಯವಾಯಿತು. ಒಂದು ದಿನ ಮಧ್ಯಾಹ್ನ ಅಳುತ್ತಳು ಆ ಹೆಂಗಸು ಹೇಳಿದ ಸ್ವಪರಿಚಯವೆಲ್ಲ ಕಣ್ಣೀರಿನ ಕಥೆಯೇ.

ಸ್ವಲ್ಪ ಜಮೀನು ಇತ್ತೆಂಬುದು ನಿಜ. ಎಚ್ಚರಿಕೆಯಿಂದಿದ್ದರೆ ಸುಖವಾಗಿ ದಿನ ಕಳೆಯಲು ಅದು ಸಾಕಾಗುತ್ತಿತ್ತು. ಆದರೆ ಅವರ ಯಜಮಾನರು ದುಂ

ವೆಚ್ಚಕ್ಕೆ ಪ್ರಖ್ಯಾತರಾಗಿದ್ದರು. ಹಳ್ಳಿಯಲ್ಲಿರುವುದರ ಬದಲು ಅವರು ಪೇಟೆಯಲ್ಲಿ ಮನೆ ಮಾಡಿದರು.

"ಅಷ್ಟೇ ಅಲ್ಲ ರಂಗಮ್ನೋರೆ, ಎರಡ್ನೇ ಮದುವೇನೂ ಮಾಡ್ಕೊಂಡ್ರು."

"ಹಾಗೇನು ?" ಎಂದರು ರಂಗಮ್ಮ. 'ನಿನ್ನ ಹಾಗೆ ಸಪ್ಪಗಿದ್ದರೆ ಬೇರೆ ಮದುವೆ ಮಾಡಿಕೊಳ್ಳದೇನು ಮಾಡಿಯಾನು ?' ಎಂದು ಮನಸಿನೊಳಗೇ ಅಂದು ಕೊಂಡರು.

"ಆಕೆಗೆ ಎಷ್ಟು ಜನ ಮಕ್ಕಳು ?"

"ಇಬ್ಬರು, ರಂಗಮ್ನೋರೆ. ಎರಡೂ ಹೆಣ್ಣು."

ಸವತಿಯ ಸಂತಾನ ಹೆಣ್ಣೆಂದು ಸಮಾಧಾನಪಡುವುದಷ್ಟೇ ಉಳಿದಿದ್ದುದು ವೆಂಕಟಸುಬ್ಬಮ್ಮನಿಗೆ !

"ಹೋಗಲಿ, ಎಲ್ಲಾ ಅನ್ಯೋನ್ಯವಾಗಿ ಇದೀರಿ ತಾನೆ ?"

"ಹೂಂ."

ಅದು ನಿಜವಾಗಿರಲಿಲ್ಲ. ಗಂಡನ ಮನೆಯಲ್ಲಿ ವೆಂಕಟಸುಬ್ಬಮ್ಮ ಬರಿಯ ಪರಿಚಾರಿಕೆಯ ಮಟ್ಟಕ್ಕೆ ಇಳಿದಿದ್ದಳು.

"ಧರ್ಮಾತ್ಮ. ಮಕ್ಕಳು ಓದೋಕಾದರೂ ವ್ಯವಸ್ಥೆ ಮಾಡಿದಾನಲ್ಲ."

"ಹೂಂ."

ಅದು ನಿಜವಾಗಿರಲಿಲ್ಲ. ಹಿರಿಯ ಹೆಂಡತಿ ತನ್ನ ಆಭರಣಗಳನ್ನೆಲ್ಲ ಮಾರಿ ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನು ನಿರ್ವಹಿಸುತ್ತಿದ್ದಳು.

ಮಕ್ಕಳ ಪ್ರಸ್ತಾಪ ಬಂದಾಗ ಆಕೆಯೆಂದಳು :

"ದೊಡ್ಡ ಹುಡುಗನ ಮೇಲೆ ಯಜಮಾನರಿಗೆ ತುಂಬಾ ಪ್ರೀತಿ."

ಎಂತಹ ಅಲ್ಪ ಸಂತೋಷಿ ಆ ವೆಂಕಟಸುಬ್ಬಮ್ಮ !

"ದೇವರಿದಾನಮ್ಮ, ಮುಪ್ಪಿನಲ್ಲಿ ಮಕ್ಕಳೇ ಅಲ್ವೆ ನಮ್ಮನ್ನ ನೋಡಿ ಕೊಳ್ಳೋದು ?"

ರಂಗಮ್ಮನ ಮಾತು ಕೇಳಿದರೆ, ಆಕೆಗಂತೂ ಮುಪ್ಪು ಇನ್ನೂ ಬಂದೇ ಇಲ್ಲವೇನೋ ಎನ್ನಬೇಕು ಯಾರಾದರೂ ! ಆದರೂ ಹಿಡಿಕೆಯ ಒಳ್ಳೆಯ ಮಾತೆಂದು ರಂಗಮ್ಮ ಅದನ್ನು ಅಂದರು.

ವೆಂಕಟಸುಬ್ಬಮ್ಮನನ್ನು ಕುರಿತು ಅಷ್ಟೆಲ್ಲವನ್ನೂ ರಂಗಮ್ಮ ಬೇರೆ ಹೆಂಗಸರಿಗೆ ಹೇಳಲಿಲ್ಲ. ಆದರೂ ದಿನ ಕಳೆದಂತೆ ಹೇಗೋ ಹೇಗೋ ಒಂದೊಂದೇ ಅಕ್ಷರವಾಗಿ ಆ ವಿಷಯ ವಠಾರದಲ್ಲಿ ಹರಡಿಕೊಂಡಿತು.

"ಅಯ್ಯೋ ಪಾಪ !"

—ಎಂದರು ಎಷ್ಟೋ ಹೆಂಗಸರು. ತನ್ನ ಗಂಡನನ್ನು ಹತೋಟಿಯಲ್ಲಿಟ್ಟು ಕೊಳ್ಳಲಾರದೇ ಹೋದ ಆ ಹೆಂಗಸಿನ ಬಗೆಗೆ ಅವರೆಲ್ಲರಿಗೂ ಕನಿಕರವೆನಿಸಿತು.

ಒಂದು ದಿನ ಪೋಲೀಸ್ ರಂಗಸ್ವಾಮಿಯ ಹೆಂಡತಿ ಒಂದು ಬಟ್ಟಲು ಜೋಳ ಸಾಲ ಕೇಳಲೆಂದು ವೆಂಕಟಸುಬ್ಬಮ್ಮನ ಬಾಗಿಲ ಮುಂದೆ ನಿಂತಳು. ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದ ಹುಡುಗ ಆಗಲೆ ಹೊರಟು ಹೋಗಿದ್ದ. ಚಿಕ್ಕವನು ಹೊರಡಲು ಹೊತ್ತಾಯಿತೆಂದು ಅವಸರ ಅವಸರವಾಗಿ ಉಣ್ಣುತ್ತಿದ್ದ.

“ಏನ್ಮಾಡ್ತಿದೀರಿ ವೆಂಕಟಸುಬ್ಬಮ್ಮ?” ಎಂದು ರಂಗಸ್ವಾಮಿಯ ಹೆಂಡತಿ ಅಂದಳು.

“ಬಡಿಸ್ತಾ ಇದ್ದೀನಿ, ಬಂದ್ಬಿಟ್ಟೆ ಕಣ್ರೀ.”

ಆದರೆ ಆಕೆ ಹೊರಬರುವುದರೊಳಗೇ ವಠಾರದೆದುರು ಒಂದು ಜಟಕಾಗಾಡಿ ನಿಂತಿತು. ಮಧ್ಯ ವಯಸ್ಸು ದಾಟಿದ್ದ ಭಾರೀ ಗಾತ್ರದ ಬಿಳಿ ಮೀಸೆಯ ದೊಡ್ಡ ರುಮಾಲಿನ ಗೃಹಸ್ಥರೊಬ್ಬರು ಕೆಳಕ್ಕಿಳಿದು ಗಾಡಿಯವನನ್ನು ಕೇಳಿದರು.

“ಇದೇ ಏನಯ್ಯ ?”

“ಹೂಂ ಸ್ವಾಮಿ.”

ಎಡಗೈಯಲ್ಲಿ ಕೊಡೆ, ಬಲಗೈಯಲ್ಲಿ ಧೋತರದ ಅಂಚು. ಎಕ್ಕಡ ಮೆಟ್ಟಿ ಕೊಂಡು ಅವರು ಅನುಮಾನಿಸುತ್ತ ಅಂಗಳ ಸೇರಿದರು.

‘ಯಾರೋ ಬಂದ್ರು’, ‘ಯಾರೋ ಬಂದ್ರು’ ಎಂದು ಸುದ್ದಿ ವಠಾರದ ತುಂಬ ಕುಪ್ಪಳಿಸಿತು.

ರಂಗಸ್ವಾಮಿಯ ಹೆಂಡತಿಯನ್ನು ನೋಡಲು ಬಾಗಿಲಿಗೆ ಬಂದ ವೆಂಕಟ ಸುಬ್ಬಮ್ಮನೂ ಹೊರಕ್ಕೆ ಇಣಿಕಿದಳು. ಒಮ್ಮೆಲೆ ಅವಳ ಮುಖ ಅಷ್ಟಗಲ ವಾಯಿತು.

“ಅಯ್ಯೋ! ನಮ್ಮ ಯಜಮಾನ್ರು” ಎಂದು ಆಕೆ ಪಿಸುದನಿಯಲ್ಲಿ ಅಂದು, ಉಣ್ಣುತ್ತಿದ್ದ ಮಗನಿಗೆ ಕೇಳಿಸುವಂತೆ ಹೇಳಿದಳು :

“ನಿಮ್ಮಪ್ಪ ಬಂದ್ರು ಕಣೋ.”

ಹಾಗೆ ಹೇಳಿ ಸೆರಗು ಸರಿಪಡಿಸಿಕೊಳ್ಳುತ್ತ ಆಕೆ ಹೆಬ್ಬಾಗಿಲಿನತ್ತ ಸರಿದಳು. ಬಂದ ‘ಯಜಮಾನರು’ ಹೆಂಡತಿಯನ್ನು ನೋಡಿದರು. ಮುಗುಳುನಗೆ ಆ ಮುಖ ವನ್ನು ಅಲಂಕರಿಸಿದಂತೆ ತೋರಿತು. ಹೆಂಡತಿಯನ್ನು ಹಿಂಬಾಲಿಸಿ ಅವರು ಒಳಕ್ಕೆ ಕಾಲಿರಿಸಿದರು.

ಸಾಲ ಕೇಳಲು ಬಂದಾಕೆ ಆಗ ಬಾಗಿಲಲ್ಲಿರಲಿಲ್ಲ. ವೆಂಕಟಸುಬ್ಬಮ್ಮನ ಗಂಡ ಬಂದ ಸುದ್ದಿಯನ್ನು ಮನೆ ಮನೆಗೂ ತಿಳಿಸುವ ಕಾರ್ಯದಲ್ಲಿ ನಿರತಳಾಗಿದ್ದಳು.

ಯಜಮಾನರು ರುಮಾಲು ತೆಗೆದಿರಿಸಿ ಹೆಂಡತಿ ಹಾಸಿದ ಚಾಪೆಯ ಮೇಲೆ ಕುಳಿತರು. ಮಗನತ್ತ ನೋಡುತ್ತ ಕೇಳಿದರು :

“ಸ್ಕೂಲ್ಗೆ ಹೋಗೋ ಹೊತ್ತಾಗ್ಲಿಲ್ವೇನೋ ?”

ಅವರ ದೃಷ್ಟಿಯಲ್ಲಿ ಸ್ಕೂಲು-ಕಾಲೇಜು ಎಲ್ಲಾ ಒಂದೇ.

"ಇನ್ನು ಹೊರಟ್ಬಿಡ್ತಾನೆ. ಕಂಠಿ ಆಗ್ಲೇ ಹೋದ," ಎಂದು ತಾಯಿಯೇ ಉತ್ತರವಿತ್ತಳು.

ಮಗ ಕೈ ತೊಳೆದು, ಪುಸ್ತಕಗಳನ್ನೆತ್ತಿಕೊಂಡು, "ಬರ್‍ತೀನಪ್ಪಾ–ಅಮ್ಮಾ ಬರ್‍ತೀನಿ," ಎಂದು ಹೇಳಿ ಹೊರಕ್ಕೆ ಧಾವಿಸಿದ.

ವೆಂಕಟಸುಬ್ಬಮ್ಮನ ಯಜಮಾನರು ಮನೆಯೊಳಗಿನ ಕತ್ತಲೆಯನ್ನು ಕಂಡು ಮೂಗು ಮುರಿದರು.

"ಇದೊಳ್ಳೇ ಮನೆ!" ಎಂದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

"ಇಲ್ಲಿ ಒಳ್ಳೇ ಮನೆ ಸಿಗೋದೇ ಕಷ್ಟ," ಎಂದಳು ವೆಂಕಟಸುಬ್ಬಮ್ಮ.

ಆ ಬಾಗಿಲಿನ ಎದುರಿನಿಂದ ಅತ್ತಿತ್ತ ಹಾದು ಹೋಗುವ ಹೆಂಗಸರ ಸಂಖ್ಯೆ ಒಮ್ಮೆಲೆ ಹೆಚ್ಚಿತು. ಅವರೆಲ್ಲ ಒಳಗೆ ಕುಳಿತಿದ್ದ ಗಂಡಸಿನತ್ತ ದೃಷ್ಟಿ ಬೀರಿದರು. ಹೆಂಗಸರ ದೃಷ್ಟಿಯನ್ನು ಎದುರಿಸುವುದರಲ್ಲಿ ವೆಂಕಟಸುಬ್ಬಮ್ಮನ ಯಜಮಾನರು ಎಂದೂ ಹಿಂದಾದವರಲ್ಲ.

"ಅಂತೂ ಪರವಾಗಿಲ್ಲ ವಠಾರ!" ಎಂದರು ಯಜಮಾನರು, ಅಷ್ಟೊಂದು ಜನ ತಮ್ಮನ್ನು ನೋಡುತ್ತ ಅತ್ತಿತ್ತ ಹೋದ ಬಳಿಕ.

ನಡೆಗೋಲಿನ ಸದ್ದಾಯಿತು. ರಂಗಮ್ಮ ಬಂದು ಬಾಗಿಲ ಬಳಿ ನಿಂತರು.

"ಇವರೇ ರಂಗಮ್ನೋರು," ಎಂದಳು ವೆಂಕಟಸುಬ್ಬಮ್ಮ. ಆಕೆಯ ಯಜಮಾನರು ಮುಗುಳ್ನಕ್ಕರು. ಅವರನ್ನು ನೋಡಿ ರಂಗಮ್ಮನೂ ನಕ್ಕರು.

"ಯಾವಾಗ ಬರೋಣವಾಯ್ತು?"

"ಇದೇ ಈಗ ಬಸ್ನಲ್ಲಿ ಬಂದೆ."

"ವಠಾರಕ್ಕೆ ಬರ್‍ತಿರೋದು ಇದು ಮೊದಲ್ನೇ ಸಲ."

"ಹೌದು."

ರಂಗಮ್ಮ, ಆ ಗಂಡಸನ್ನು ಮಾತಿನಿಂದ ತಿವಿದು ನೋಡಲು ಬಯಸಿದರು.

"ಹೋದ ವರ್ಷವೆಲ್ಲಾ ಬೆಂಗಳೂರಿಗೆ ಬರ್‍ಲೇ ಇಲ್ವೇನೋ?"

"ಇಲ್ಲ. ಒಂದೂವರೆ ವರ್ಷದ ಮೇಲಾಯ್ತು ಬೆಂಗಳೂರಿಗೆ ಬಂದು.

ಹೆಂಡತಿ ಮಕ್ಕಳನ್ನು ಹೀಗೆ ಬಿಟ್ಟಿದ್ದ ಈತನಿಗೆ ನಾಚಿಕೆ ಎಂಬುದೇನೂ ಇಲ್ಲವೆಂಬುದು ಸ್ಪಷ್ಟವಾಗಿತ್ತು. 'ಒಳ್ಳೇ ಗಂಡಸು!' ಎಂದು ಮನಸ್ಸಿನಲ್ಲೇ ಅಂದುಕೊಂಡು ರಂಗಮ್ಮ ಏನನ್ನೋ ಗೊಣಗಿದರು.

"ಆಗಲಿ, ಈಗಲಾದರೂ ಬಂದಿರಲ್ಲ, ಸಂತೋಷ," ಎಂದು ನುಡಿದು ರಂಗಮ್ಮ ಟೀಕೆ ಅಷ್ಟು ಸಾಕೆಂದು ಮುಂದೆ ನಡೆದರು. ಹೆಬ್ಬಾಗಿಲು ಸಮೀಪಿಸುವುದರೊಳಗೇ ಅವರ ಸ್ವರ ಕೇಳಿಸಿತು.

"ಯಾವುದೋ ಹಸು ಒಳಕ್ಕೆ ಬಂದ್ಬಿಟ್ಟಿದೆ! ಯಾರೇ ಅದು ಗೇಟು ತೆರ್‍ದಿಟ್ಟು ಬಂದಿರೋದು? ಹೈ . . . ಹೈ . . . !"

ತನ್ನ ಗಂಡ ತೆರೆದಿಟ್ಟು ಬಂದಿರಬೇಕೆಂದು ವೆಂಕಟಸುಬ್ಬಮ್ಮನಿಗೆ ಹೊಳೆಯಿತು. ಆದರೆ ಆ 'ಯಜಮಾನ'ರಿಗೆ ಅದು ಅರ್ಥವಾಗಲಿಲ್ಲ. ಹೆಂಗಸರ ಅಂತಹ ಕೂಗಾಟಗಳಿಗೆ ಗಮನ ಕೊಡುವ ಅಭ್ಯಾಸವೇ ಅವರಿಗೆ ಇರಲಿಲ್ಲ.

"ಕೋಟು ಬಿಚ್ಚಿಟ್ಟಿರ್ಲ್ಲ? ಸ್ನಾನಕ್ಕೆ ನೀರಿಡ್ತೀನಿ..." ಎಂದು ವೆಂಕಟಸುಬ್ಬಮ್ಮ ಗಂಡನನ್ನು ಉದ್ದೇಶಿಸಿ ಹೇಳಿದಳು.

"ಏನೂ ಬೇಡ, ಸ್ನಾನ ಮಾಡ್ಕೊಂಡೇ ಬಂದೆ."

ಹುಡುಗರ ಊಟವಾಗಿತ್ತು. ಆಕೆ ಇನ್ನೂ ಏನನ್ನೂ ತೆಗೆದುಕೊಂಡಿರಲಿಲ್ಲ.

"ಊಟಕ್ಕೇಳಿ ಹಾಗಾದರೆ."

ತನ್ನ ಪಾಲಿನ ಊಟವನ್ನು ಹೆಂಡತಿ ಕೊಡುತ್ತಾಳೆಂದು ಆ ಗಂಡನಿಗೆ ಗೊತ್ತಿತ್ತು. 'ನಿನಗೇನು ಮಾಡ್ತೀಯಾ?' ಎಂದು ಆತ ಕೇಳಲಿಲ್ಲ. ಮತ್ತೊಮ್ಮೆ ಬೇಯಿಸುತ್ತಾಳೆ ಎಂಬುದನ್ನೂ ಅವರು ತಿಳಿದಿದ್ದರು.

ತಂಬಿಗೆ ನೀರನ್ನೆತ್ತಿಕೊಂಡು ಓಣಿಯುದ್ದಕ್ಕೂ ಅವರು ಅತ್ತಿತ್ತ ದೃಷ್ಟಿ ಹಾಯಿಸುತ್ತ ಹೋಗಿ ಬಂದರು. ಮಾತಿಲ್ಲದೆಯೇ ಅವರ ಊಟ ಮುಗಿಯಿತು. ಹೆಂಡತಿ ಕೊಟ್ಟ ಅಡಿಕೆ ಪುಡಿಯನ್ನಷ್ಟು ಬಾಯಿಗೆ ಹಾಕಿಕೊಂಡು ಅವರು ಮತ್ತೆ ಕೋಟಿಗೆ ಕೈ ಹಾಕಿದರು.

"ಇದೇನು ಹೊರಟೇಬಿಟ್ರಾ?"

"ಹೂಂ. ಕೋರ್ಟಿಗೆ ಹೋಗ್ಬೇಕು. ಆ ದಿವಸ ಡಿಕ್ರಿ ಆಗಿರ್ಲಿಲ್ವೆ? ಅದರ ಅಪೀಲು ಇವತ್ತು."

"ಆಮೇಲೆ ಬರ್ತೀರಿ ತಾನೆ?"

"ಇಲ್ಲ. ಸಾಯಂಕಾಲ ಐದು ಘಂಟೆ ಬಸ್ಸಿಗೇ ಹೋಗ್ಬೇಕು."

ವೆಂಕಟಸುಬ್ಬಮ್ಮನಿಗೆ ಅಳು ಚಿಮ್ಮಿ ಬಂದು, ಸ್ವರ ಗಂಟಲಲ್ಲೇ ಉಡುಗಿತು. ಆದರೂ ಪ್ರಯಾಸಪಟ್ಟು ಆಕೆ ಸುಧಾರಿಸಿಕೊಂಡಳು. ತನಗೋಸ್ಕರ ಆತ ರಾತ್ರೆ ನಿಲ್ಲುವುದಿಲ್ಲ ಎಂಬುದಂತೂ ಗೊತ್ತೇ ಇತ್ತು. ಸವತಿ ಆತನಿಗಾಗೆ ಅಲ್ಲಿ ಕಾಯುತ್ತಿದ್ದಳು.

ಕಣ್ಣಿಗೆ ಕತ್ತಲು ಕವಿದ ಹಾಗಾಯಿತು ಆಕೆಗೆ.

"ಕಂಠೀನ ನೋಡೋಲ್ವೆ?"

"ಎಷ್ಟು ಹೊತ್ತಿಗೆ ಬರ್‍ತಾನೆ?"

"ಆರು ಘಂಟೆಗೆ."

"ಮತ್ತೆ! ಕಡೇ ಬಸ್ಸು ಐದು ಘಂಟೆಗೇ ಹೊರಡುತ್ತೆ."

ವೆಂಕಟಸುಬ್ಬಮ್ಮನ ಬತ್ತಳಿಕೆ ಬರಿದಾಗಿತ್ತು. ಒಂದು ಕಾಲದಲ್ಲಿ ತನ್ನೊಬ್ಬಳ ಸೊತ್ತೇ ಆಗಿದ್ದ ಆ ಜೀವವನ್ನು ಕಾತರದ ದೃಷ್ಟಿಯಿಂದ ಆಕೆ ನೋಡಿದಳು.

ಆಕೆಯ ಗಂಡ ಕೊಡೆಯನ್ನು ಕೈಗೆತ್ತಿಕೊಂಡರು. ಚಪ್ಪಲಿಗಳತ್ತ ಪಾದಗಳು ಚಲಿಸಿದುವು.

"ಏನಾದರೂ ದುಡ್ಡು ಬೇಕೇನು ?"

ಈ ಪ್ರಶ್ನೆಯಿಂದ ವೆಂಕಟಸುಬ್ಬಮ್ಮನ ಸ್ವಾಭಿಮಾನ ಕೆರಳಿತು.

"ಬೇಡಿ. ಇದೆ."

"ಸರಿ ಹಾಗಾದರೆ. ಬರ್ತೀನಿ."

"ಹುಡುಗರು ಇದ್ದಿದ್ದರೆ ಜಟಕಾ ತರಿಸಬಹುದಾಗಿತ್ತು."

"ಬೇಡ, ಹಾದಿ ಗೊತ್ತಿದೆ. ಅಂಗಡಿ ಬೀದಿಗೆ ನಡೆಕೊಂಡು ಹೋಗಿ ಅಲ್ಲಿಂದ ಬಸ್ನಲ್ಲಿ ಹೋಗ್ತೀನಿ."

ಅಷ್ಟು ಹೇಳಿ ವೆಂಕಟಸುಬ್ಬಮ್ಮನ ಯಜಮಾನರು ಬೀದಿಗಿಳಿದು ಹೊರಟೇ ಹೋದರು.

ಕುಸಿದು ಬೀಳುವ ಹಾಗಾಯಿತೆಂದು ಆ ಹೆಂಗಸು ಕ್ಷಣಕಾಲ ಬಾಗಿಲಿಗೊರಗಿ ನಿಂತುಕೊಂಡಳು. ಆಮೇಲೆ ಅಡುಗೆ ಮನೆಗೆ ಹೋಗಿ, ಸೀರೆಯ ಸೆರಗನ್ನು ಕಣ್ಣು ಗಳಿಗೆ ಒತ್ತಿಕೊಂಡು ಎರಡು ನಿಮಿಷ ಮೌನವಾಗಿ ಅತ್ತಳು. ಆಗ ಮತ್ತೆ ಅನ್ನ ಬೇಯಿಸುವ ಗೋಜಿಗೆ ವೆಂಕಟಸುಬ್ಬಮ್ಮ ಹೋಗಲಿಲ್ಲ. ಊಟ ಮಾಡಬೇಕೆಂದೇ ಆಕೆಗೆ ಅನಿಸಲಿಲ್ಲ.

ವೆಂಕಟಸುಬ್ಬಮ್ಮನ ಯಜಮಾನರು ಅಷ್ಟು ಬೇಗ ಹೊರಟು ಹೋದರೆಂದು ತಿಳಿದು ರಂಗಮ್ಮನಿಗೆ ಆಶ್ಚರ್ಯವಾಯಿತು. ಹೊರಟಾಗ ತನಗೊಂದು ಮಾತು ಹೇಳಿ ಹೋಗಲಿಲ್ಲವೆಂದು ಮನಸ್ಸಿನೊಳಗೆ ಕುಟುಕಿತು. ತಾನು ಏನು ಹೇಳಿದರೂ ವೆಂಕಟಸುಬ್ಬಮ್ಮನಿಗೆ ನೋವಾಗುವುದೆಂದು ತಿಳಿದು, ರಂಗಮ್ಮ ನಿಟ್ಟುಸಿರನ್ನಷ್ಟೆ ಬಿಟ್ಟು ಸುಮ್ಮನಾದರು.

ಅದಾಗಿ ಬಹಳ ದಿನಗಳು ಕಳೆದರೂ ಊರಿನಿಂದ ಬಂದ ವೆಂಕಟಸುಬ್ಬಮ್ಮನ ಯಜಮಾನರು ರಾತ್ರೆ ನಿಲ್ಲದೆ ಸಂಜೆಯೇ ಹೊರಟು ಹೋದ ವಿಷಯ ಮಾತ್ರ ವಠಾರದ ಯಾರಿಗೂ ಮರೆತು ಹೋಗಲಿಲ್ಲ. ಅವರೆಲ್ಲ ತಮ್ಮ ತಮ್ಮೊಳಗೆ ವೆಂಕಟ ಸುಬ್ಬಮ್ಮನ ವಿಷಯವಾಗಿ ಸಹಾನುಭೂತಿಯ ಮಾತನ್ನಾಡಿದರು.

ಆ ತಾಯಿ ಮಾತ್ರ ಮಕ್ಕಳ ಸೇವೆಯಲ್ಲಿ ಎಂದಿನಂತೆಯೇ ನಿರತಳಾದಳು.

........ಮತ್ತೊಮ್ಮೆ ಒಂದು ಜಟಕಾ ವಠಾರದೆದುರು ಬಂದು ನಿಂತಿತು. ನಡು ಮಧ್ಯಾಹ್ನ ಆಗ. ತಲೆಯ ಮೇಲೆ ಜರಿ ರುಮಾಲು, ಉಣ್ಣೆಯ ಕೋಟು, ಕಚ್ಚೆ ಪಂಚೆ, ಕೈಯಲ್ಲಿ ಛತ್ರಿ, ಕಾಲಲ್ಲಿ ಚುರುಚುರು ಸದ್ದಾಗುತ್ತಿದ್ದ ಭಾರೀ ಎಕ್ಕಡ. ದೇಹ ಎತ್ತರವಾಗಿದ್ದರೂ ಕ್ಷೀಣವಾಗಿತ್ತು. ಬಿಳಿ ಮೀಸೆ ಇದ್ದರೂ ಅದನ್ನು ಮಾಟವಾಗಿ ಎರಡು ಬದಿಗಳಿಗೆ ವಿಂಗಡಿಸಿರಲಿಲ್ಲ.

ಆತ ಜಟಕಾ ಗಾಡಿಯಿಂದಿಳಿದು ಅತ್ತಿತ್ತ ನೋಡುತ್ತಿದ್ದುದನ್ನು ಮೊದಲು ಕಂಡ ರಾಜಮ್ಮ, 'ನಮ್ಮ ಜನವಲ್ಲ, ಯಾರೋ ಬೇರೆ. ವಿಳಾಸ ತಪ್ಪಿದೆಯೇನೊ' ಎಂದುಕೊಂಡಳು.

ಆದರೆ ಆ ಸದ್ಗೃಹಸ್ಥ ಪಠಾರದ ಗೇಟನ್ನೇ ಸಮೀಪಿಸಿದರು :

"ಅಮ್ಮಣ್ಣಿ, ರಂಗಮ್ನೋರ ವಠಾರ ಅಂದರೆ ಇದೇ ಅಲ್ಲವ್ರ?"

ಅಮ್ಮಣ್ಣಿ ಎಂಬ ಪದ ಕೇಳಿ ರಾಜಮ್ಮ ಸುಪ್ರಸನ್ನಳಾದಳು.

"ಹೌದು. ಇದೇ, ಯಾರು ಬೇಕಾಗಿತ್ತು?"

"ರಂಗಮ್ನೋರ್ನ ರವಷ್ಟು ನೋಡ್ಬೇಕು."

"ತಾಳಿ. ಹೋಗಿ ಹೇಳ್ತೀನಿ."

ರಾಜಮ್ಮ ಸುದ್ದಿ ಮುಟ್ಟಿಸಿದಳು. "ನಿಮ್ಮ ಮಗನ ಕಡೆಯಿಂದ ಬಂದಿದಾರೋ ಏನೋ" ಎಂದು ತನ್ನ ಸ್ವಂತದ ಸಂದೇಹವನ್ನೂ ಮುಂದಿಟ್ಟಳು.

ರಂಗಮ್ಮ ಬೇಗಬೇಗನೆ ನಡೆಗೋಲನ್ನೂರಿಕೊಂಡು ಬಂದರು.

"ಯಾರಪ್ಪಾ. ಎಲ್ಲಿಂದ್ಬಂದ್ರಿ?"

"ಇಲ್ಲಿ ರಾಜಶೇಖರ ಅಂತ ಒಬ್ಬ ಹುಡುಗ ಇಲ್ಲವ್ರ?"

"ಹೌದು, ಇದಾನೆ."

"ಅವನ ಜತೇಲಿ ದೇವಯ್ಯ ಅಂತ ಒಬ್ಬ–"

"ಹೌದು, ದೇವಯ್ಯಾಂತಿದಾನೆ."

"ನಾನು ದೇವಯ್ಯನ ತಂದೆ."

"ಹಾಗೋ? ಬನ್ನಿ—"

ಆದರೆ ಬಂದಿದ್ದ ಗೌಡರು ಕುಳಿತುಕೊಳ್ಳುವುದಕ್ಕೂ ಸರಿಯಾದ ಜಾಗವಿರಲಿಲ್ಲ ಅಧಿಕಾರಿಗಳು ಯಾರಾದರೂ ಬಂದರೆ, ಜಾತಿ ಮತ ಯೋಚನೆ ಮಾಡದೆ ರಂಗಮ್ಮ ಅವರನ್ನು ತಮ್ಮ ಮನೆಗೆ ಕರೆದೊಯ್ಯುವುದಿತ್ತು. ಬಂದವರನ್ನು ಹಾಗೆಯೇ ನಿಲ್ಲಗೊಡುವುದು ಸರಿಯಲ್ಲವೆಂದು ರಂಗಮ್ಮ ಈಗಲೂ ಕರೆದರು :

"ಒಳಗ್ಬನ್ನಿ."

ಆದರೆ ಗೌಡರು ಬರಲಿಲ್ಲ.

"ಬ್ಯಾಡಿ. ಇಲ್ಲೇ ಇರ್ತೀನಿ. ನಮ್ಮ ದೇವಯ್ಯ—"

ರಂಗಮ್ಮ ಆತನ ಮಾತಿಗೆ ಕಿವಿಗೊಡದೆ, ಪೋಲೀಸ್ ರಂಗಸ್ವಾಮಿಯ ಹುಡುಗನನ್ನು ಕಳುಹಿಸಿ ಚಂಪಾವತಿಯ ಮನೆಯಿಂದ ಕುರ್ಚಿ ತರಿಸಿದರು. ಗೌಡರು ಹೆಬ್ಬಾಗಿಲ ಬಳಿಯಲ್ಲೇ ಕುರ್ಚಿಯ ಮೇಲೆ ಆಸೀನರಾದರು. ರಂಗಮ್ಮನೂ ಗೋಡೆಗೊರಗಿ ಬಾಗಿಲ ಬಳಿ ಕುಳಿತುಕೊಂಡರು.

ಆಗ ಹುಡುಗ ದೇವಯ್ಯನ ತಂದೆಯಲ್ಲವೆ ಈತ? ಎಷ್ಟೊಂದು ಸಾರಿ ತಮ್ಮ ಮನಸ್ಸಿನ ನೆಮ್ಮದಿಯನ್ನು ಕದಡಿತ್ತು ಆ ವಿದ್ಯಾರ್ಥಿಗಳ ಕೊರಡು! 'ನನಗೆ ಯಾಕೆ ಇದೆಲ್ಲ? ಹಾಳಾಗಿ ಹೋಗಲಿ' ಎಂದು ಆವರೆಗೂ ರಂಗಮ್ಮ ಸುಮ್ಮನಾಗಿದ್ದರು. ಆದರೆ ಈಗ, ಹೆತ್ತ ತಂದೆಯೇ ಕೇಳುತ್ತಿದ್ದಾಗ, ತಮ್ಮ ಹೃದಯದಲ್ಲಿದ್ದುದನ್ನೆಲ್ಲ ಆತನೆದುರು ತೋಡಿಕೊಳ್ಳಲು ರಂಗಮ್ಮನಿಗೆ ಅಪೇಕ್ಷೆಯಾಯಿತು. ಅಲ್ಲದೆ ಆ

ಹುಡುಗನನ್ನು ಒಳ್ಳೆಯ ಹಾದಿಗೆ ತರಲು ಸ್ವತಃ ತಾವೂ ಎಷ್ಟೊಂದು ಪ್ರಯತ್ನ ಪಟ್ಟೆವೆಂಬುದನ್ನು —ಸ್ವಲ್ಪ ಉಪ್ಪು ಖಾರ ಹಚ್ಚಿಯೇ—ಆತನಿಗೆ ತಿಳಿಸಲು ಅವರು ಬಯಸಿದರು.

"ನಿಮ್ಮ ಹುಡುಗನ ವಿಷಯ ಏನಪ್ಪ ಹೇಳ್ಲಿ ನಾನು ?" ಎಂದು ಆರಂಭಿಸಿ ರಂಗಮ್ಮ, ಸ್ವಲ್ಪ ಹೊತ್ತು ತಡೆದು ಹೇಳುತ್ತಿರುವುದೊಂದೂ ತಮಗೆ ಪ್ರಿಯವಲ್ಲ ವೆಂಬಂತೆ ತಲೆಯಾಡಿಸಿ, ಮನಸ್ಸಿನಲ್ಲಿದ್ದುದನ್ನೆಲ್ಲ ಹೇಳಿಯೇ ಬಿಟ್ಟರು.

ಅದನ್ನು ಕೇಳುತ್ತಿದ್ದ ಆ ಸದ್ಗೃಹಸ್ಥರ ಮುಖ ಸಪ್ಪಗಾಯಿತು. ಹೃದಯ ಭಾರವಾಯಿತು ; ಅವರು ದೀರ್ಘವಾಗಿ ಶ್ವಾಸವೆಳೆದರು.

ಗೌಡರು ಮಾತಿಲ್ಲದೆ ಕುಳಿತಿದ್ದುದನ್ನು ಕಂಡು, ತಾವು ಆಡಿದುದು ಅತಿ ಯಾಯಿತೇನೋ ಎಂದು ರಂಗಮ್ಮನಿಗೇ ವ್ಯಾಕುಲವಾಯಿತು.

"ಆದರೆ ಇದನ್ನೆಲ್ಲ ಮನಸ್ಸಿಗೆ ಹಚ್ಕೋಬಾರ್ದು. ಚಿಕ್ಕ ಹುಡುಗ, ಇನ್ನೂ ಬುದ್ಧಿ ತಿಳೀದು....ಒಂದೆರಡು ಸಾರೆ ಬಯ್ದು ಬುದ್ಧಿವಾದ ಹೇಳಿದ್ರೆ ತಿದ್ಕೋತಾನೆ."

"ಅದೇನು ತಿದ್ಕೋತಾನೋ," ಎಂದಷ್ಟೇ ಉತ್ತರ ಬಂತು.

ಒಂದು ಕ್ಷಣ ತಡೆದು, ಏನೋ ನಿರ್ಧಾರಕ್ಕೆ ಬಂದವರಂತೆ ಗೌಡರೆಂದರು :

"ಎಷ್ಟೊತ್ತಿಗೆ ಬತ್ತವೆ ಹುಡುಗ್ರು ?"

"ಸಾಯಂಕಾಲ ಆರು ಘಂಟೆಗೆಲ್ಲಾ ಸಾಮಾನ್ಯವಾಗಿ ಬಂದ್ಬಿಡ್ತಾರೆ. ರಾಜಶೇಖರನೇನೋ ತಪ್ಪದೆ ಬರ್ತಾನೆ. ನಿಮ್ಹುಡುಗ—"

ಗೌಡರು ಕುಳಿತಲ್ಲಿಂದ ಎದ್ದರು :

"ಆಗಲ್ರಮ್ಮ. ಸಿಟೀ ಕಡೆ ಒಸಿ ಕೆಲಸ ಇದೆ. ಮುಗಿಸ್ಕೊಂಡು ಬತ್ತೀನಿ."

ಅಷ್ಟು ಎತ್ತರವಾಗಿದ್ದ ಗೌಡರು ರಂಗಮ್ಮನ ಮಾತು ಕೇಳಿ ಅಷ್ಟರಲ್ಲೆ ಸ್ವಲ್ಪ ಕುಗ್ಗಿ ಹೋಗಿದ್ದರು. ಅವರು ಬೀದಿಗಿಳಿದು ಮರೆಯಾದುದನ್ನು ನೋಡುತ್ತಲಿದ್ದ ರಂಗಮ್ಮನಿಗೆ ಕಸಿವಿಸಿ ಎನಿಸಿತು.

"ನಾನು ಇಷ್ಟೆಲ್ಲಾ ಹೇಳಬಾರದಿತ್ತೇನೋ. ಆ ಎದುರುಮನೆ ಹುಡುಗಿ ವಿಷಯಾನಾದರೂ ಬಿಡಬಹುದಾಗಿತ್ತು. ಓದೋದನ್ನೇ ನಿಲ್ಲಿಸಿ ಬಿಡ್ತಾನೋ ಏನೋ" ಎಂದು ಅವರು ಮನಸ್ಸಿನಲ್ಲೆ ಪರಿತಪಿಸಿದರು.

ವೆಂಕಟಸುಬ್ಬಮ್ಮನ ಯಜಮಾನರು ಬಂದಾಗ ತೋರಿದಷ್ಟು ಕುತೂಹಲ ವನ್ನು ದೇವಯ್ಯನ ತಂದೆ ಬಂದಾಗ ವಠಾರದ ಹೆಂಗಸರು ತೋರಲಿಲ್ಲ. ಆದರೂ ರಂಗಮ್ಮನ ಮಾತಿಗೆ ಕಿವಿಗೊಡುತ್ತಾ ಕುಳಿತಿದ್ದ ವಯಸ್ಸಾಗಿದ್ದ ಗೌಡರನ್ನು— ಮಹಡಿಯ ಮೇಲಿನ ಹುಡುಗರಲ್ಲೊಬ್ಬನ ತಂದೆಯನ್ನು—ನೋಡುವ ಕೆಲಸವನ್ನಷ್ಟು ಮಾಡಿದರು.

ಅಷ್ಟೇ ಆಗಿದ್ದರೆ, ಆ ಸಂದರ್ಶನವನ್ನು ಅವರು ಮರೆತು ಬಿಡುತ್ತಿದ್ದರು. ಆದರೆ ದೇವಯ್ಯನ ತಂದೆ ಅದಕ್ಕೆ ಅವಕಾಶ ಕೊಡಲಿಲ್ಲ.

ವೆಂಕಟಸುಬ್ಬಮ್ಮನ ಯಜಮಾನರು ತಮ್ಮ ಹುಡುಗರನ್ನು ಸರಿಯಾಗಿ ಮಾತನಾಡಿಸದೆಯೇ ಹೊರಟು ಹೋದರು. ಆದರೆ ದೇವಯ್ಯನ ತಂದೆ ತಮ್ಮ ಹುಡುಗನನ್ನು ಸರಿಯಾಗಿಯೆ ಮಾತನಾಡಿಸಲೆಂದು ಸಂಜೆ ವಾಪಸು ಬಂದರು.

ಆಗ ಕೊಠಡಿಯಲ್ಲಿದ್ದವರು ರಾಜಶೇಖರ ಮತ್ತು ಚಿಕ್ಕ ಹುಡುಗ ಮಾತ್ರ. ದೇವಯ್ಯನ ತಂದೆಯ ಆಗಮನ ವಾರ್ತೆಯನ್ನು ರಂಗಮ್ಮನಿಂದ ತಿಳಿದ ರಾಜಶೇಖರ ನಿಗೆ ಗಲಿಬಿಲಿ ಎನಿಸಿತ್ತು. ನವರಾತ್ರಿಯ ಹಬ್ಬಕ್ಕೆ ದೇವಯ್ಯನೂ ಚಿಕ್ಕ ಹುಡುಗನೂ ಊರಿಗೆ ಹೋಗಿದ್ದರು. ಊರಿನಿಂದ ಹಿಂತಿರುಗಿದ ಮೇಲೆ ದೇವಯ್ಯನ ಹಾರಾಟ ಸ್ವಲ್ಪ ಕಡಮೆಯಾಗಿತ್ತು. ಕಾಲೇಜ್ ಹಾಸ್ಟೆಲಿಗೆ ಸೇರುವ ಪ್ರಸ್ತಾಪವನ್ನು ಮತ್ತೆ ಮಾಡಲಿಲ್ಲ. ಆದರೆ ಕೆಟ್ಟ ಅಭ್ಯಾಸಗಳನ್ನು ಆತ ಬಿಟ್ಟುಕೊಡಲೂ ಇಲ್ಲ.

ದೇವಯ್ಯ ಸೇದಿ ಎಸೆದಿದ್ದ ಸಿಗರೇಟು ಚೂರುಗಳನ್ನು ರಾಜಶೇಖರ ಹೆಕ್ಕಿ ತೆಗೆದು ಕೊಠಡಿಯನ್ನು ಶುದ್ಧಗೊಳಿಸಿದ್ದ.

ಕೊಠಡಿಗೆ ಬಂದ ಗೌಡರು ಮೌನವಾಗಿದ್ದರು. ಆ ಮೌನವನ್ನು ಕಂಡು ರಾಜಶೇಖರನ ಭಯ ಹೆಚ್ಚಿತು.

"ಅಯ್ಯೋ, ಇವರು ಮಾತನ್ನಾದರೂ ಆಡಬಾರದೆ?"

—ಎಂದು ರಾಜಶೇಖರ ಮನಸಿನೊಳಗೇ ಸಂಕಟಪಟ್ಟ.

ಗೌಡರು ಕೊಠಡಿಯಲ್ಲಿದ್ದ ಕನ್ನಡ ಪತ್ರ್ಯ ಪುಸ್ತಕವನ್ನೋದುತ್ತ ಮಗನ ಚಾಪೆಯ ಮೇಲೆ ಕುಳಿತರು. ಮಗನ ಆಗಮನದ ನಿರೀಕ್ಷೆಯಲ್ಲಿ ಗೌಡರಿದ್ದುದನ್ನು ತಿಳಿದ ರಂಗಮ್ಮ ಕತ್ತಲಾದೊಡನೆಯೇ, ಎಂದಿಗಿಂತ ಸ್ವಲ್ಪ ಬೇಗನೆ, ದೀಪ ಹಾಕಿದರು.

ಏಳೂವರೆ ಹೊತ್ತಿಗೆ ದೇವಯ್ಯ ಕೊಠಡಿಗೆ ಬಂದ. ತಂದೆಯನ್ನು ಕಂಡೊಡನೆ ದೇಹದ ಕಸುವೆಲ್ಲ ಹೊರಟು ಹೋದಂತಾಯಿತು ಅವನಿಗೆ.

"ಎಷ್ಟು ಹೊತ್ತಿಗೋ ಮನೇಗ್ಬರೋದು?" ಎಂದು ಗುಡುಗುತ್ತ ಗೌಡರು ಎದ್ದು ನಿಂತು ಮಗನ ಸಮೀಪಕ್ಕೆ ಬಂದರು.

ತಪ್ಪಿಸಿಕೊಳ್ಳಲು ಹಾದಿಯೇ ಇಲ್ಲದ ಅಪರಾಧಿಯ ಹಾಗಾಯಿತು ದೇವಯ್ಯನ ಸ್ಥಿತಿ. ತಾವು ಬರುವ ವಿಷಯವನ್ನು ತಂದೆ ಮೊದಲೇ ಬರೆದು ತಿಳಿಸದೆ ಈ ಸ್ಥಿತಿ ಯೊದಗಿತಲ್ಲಾ ಎಂದು ಆತ ಹಲುಬಿದ. ಏನಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಯುವುದರೊಳಗೇ ಆತನಿಗೆ ಏಟುಗಳು ಬಿದ್ದುವು. ತಂದೆ ಮಗನಿಗೆ ಅಂಗೈ ಬೀಸಿ ಹೊಡೆದರು; ಮುಷ್ಟಿಯಿಂದ ಗುದ್ದಿದರು; ತನ್ನ ಕಾಲು ಹಿಡಿಯಲು ಬಂದವನನ್ನು ಪಾದದಿಂದ ತುಳಿದರು. ತಮ್ಮ ಕುಲಕ್ಕೆ ಮನೆತನಕ್ಕೆ ಕಳಂಕಪ್ರಾಯನಾದ ಆ ಮಗನನ್ನು ಮನಸ್ವೀ ಬಯ್ದರು. ದೇವಯ್ಯ ಯಾವ ರಕ್ಷಣೆಯೂ ದೊರೆಯದೆ "ಅಮ್ಮಾ—ಅಮ್ಮಾ—ಸತ್ತೇ ಸತ್ತೆ," ಎಂದು ಕೂಗಾಡಿದ.

ರಾಜಶೇಖರನೂ ಚಿಕ್ಕ ಹುಡುಗನೂ ಗಡಗಡನೆ ನಡುಗುತ್ತ ಮೂಲೆ ಸೇರಿದರು.

ಜಯರಾಮು ತನ್ನ ತಾಯಿಯೊಡನೆ ಆ ಕೊಠಡಿಯ ಬಾಗಿಲಿನ ಎದುರು ಬಂದು ನಿಂತ. ಕೆಳಗಿನಿಂದ ಚಿಕ್ಕಪುಟ್ಟ ಹುಡುಗರು ದೇವಯ್ಯನ ಚೀರಾಟದ ಸದ್ದು ಕೇಳಿ ಮೇಲಕ್ಕೆ ಓಡಿ ಬಂದರು. ಗೌಡರು ಶರೀರದ ಆದ್ಯಂತ ಕಂಪಿಸುತ್ತಿದ್ದರು. ನೆಲದ ಮೇಲೆ ಮೂಲೆಯಲ್ಲಿ ಮುದುರಿ ಕುಳಿತು ತನ್ನ ಮಗ ಎಳೆಯ ಮಗುವಿನಂತೆ ಅಳತೊಡಗಿದುದನ್ನು ಕಂಡಾಗ, ಗೌಡರ ರೋಷ ಮೆಲ್ಲನೆ ಕರಗಿತು.

ಹೊಡೆತ ನಿಂತಿತೆಂದು ಜಯರಾಮು ತನ್ನ ತಾಯಿಯೊಡನೆ ಹಿಂತಿರುಗಿದ. ಇಷ್ಟು ಬೇಗನೆ ತಮಾಷೆ ಮುಗಿಯಿತಲ್ಲಾ ಎಂದು ನೆರೆದಿದ್ದ ಹುಡುಗರಿಗೆ ನಿರಾಶೆಯಾಗಿ, ದೇವಯ್ಯನಿಗೆ ಏಟು ಬಿದ್ದ ಸುದ್ದಿಯನ್ನು ಕೆಳಗೆ ವಠಾರದಲ್ಲಿ ಪ್ರಸಾರ ಮಾಡಲು ಅವರು ಇಳಿದುಹೋದರು.

ಗೌಡರು ತಮ್ಮ ಹೃದಯದ ಅಳಲನ್ನು ಯಾರೂ ತಿಳಿದುಕೊಳ್ಳಲಾರರೆಂದು ಮನಸಿನೊಳಗೇ ಕೊರಗುತ್ತ, ಅಸಹನೀಯವಾಗುತ್ತ ಬಂದಿದ್ದ ಮೌನವನ್ನು ಮುರಿದು, ಹೇಳಿದರು :

" ಇವತ್ನಿಂದ್ಲೇ ನೀನು ಸುಧಾರಿಸಿದ್ರೆ ಬದುಕ್ದೆ. ಇಲ್ದೆಓದ್ರೆ ನನ್ಮಗ ಸತ್ತಾಂತ ತಿಳ್ಕಂತೀನಿ."

ರಾಜಶೇಖರನ ಕಡೆಗೆ ತಿರುಗಿ ಅವರೆಂದರು :

" ಏನಪ್ಪಾ, ದೇವ್ರೂನ ಒಂದಿಷ್ಟು ನೋಡ್ಕೊ ಅಂದ್ರೆ ಇಂಗ್ಮಾಡೋದಾ ನೀನು ?"

ರಾಜಶೇಖರ ಉತ್ತರ ಕೊಡಲಾರದೆ ಹೋದ.

ಗೌಡರು ರುಮಾಲನ್ನು ತಲೆಗೇರಿಸಿ ಕೆಳಕ್ಕಿಳಿದು ರಂಗಮ್ಮನನ್ನು ಕರೆದರು.

" ನಾನು ಓಗ್ಬರ್ತೀನಿ ತಾಯಿ."

" ಆಗಲಪ್ಪಾ, ಈವಾಗ್ಲೇ ಹೊರಡ್ತೀರಾ ?"

" ರಾತ್ರೆ ಗಾಡಿಗೆ ಓಯ್ತೀನಿ. ನಮ್ಮ ಹುಡುಗನ ಮೇಲೆ ಒಂದಿಷ್ಟು ನಿಗಾ ಮಡಗಿರಿ ಅವ್ವಾ....ದೊಡ್ಡೋನು ಊರಲ್ಲೇ ಹೊಲ ನೋಡ್ಕೊಂತ ಅವ್ನೆ. ಇವ್ನು ಎರಡ್ನೇಯೋನು. ಒಂದಿಷ್ಟು ಓದಿ ಅಭಿವೃದ್ಧಿಗೆ ಬರ್ಲೀಂತ ಆಸೆ."

" ಆಗಲಪ್ಪಾ ಆಗಲಿ. ನಾನೂ ಹೇಳ್ತಿರ್ತೀನಿ. ನಮ್ಮ ವಠಾರದಲ್ಲಿ ಈವರೆಗೆ ಓದಿದೋರೆಲ್ಲ ಒಳ್ಳೊಳ್ಳೆ ಕೆಲಸದಲ್ಲಿದ್ದಾರೆ."

" ಬರ್ತೀನಿ ತಾಯಿ," ಎಂದು ಮತ್ತೊಮ್ಮೆ ಹೇಳಿ ಗೌಡರು ಹೊರಟು ಹೋದರು.

........ಪಿತೃಭಕ್ತಿ ಪುತ್ರವಾತ್ಸಲ್ಯದ ವಿವಿಧ ರೂಪಗಳು ಜಯರಾಮುವಿನ ಕಣ್ಣೆದುರು ಕಟ್ಟಿದಂತಾಗಿ, ಆ ರಾತ್ರೆ ಬಹಳ ಹೊತ್ತು ಆತನಿಗೆ ನಿದ್ದೆ ಬರಲಿಲ್ಲ. ಕತೆಯಲ್ಲಿ ಓದುವುದಕ್ಕಿಂತಲೂ ವಾಸ್ತವತೆಯಲ್ಲಿ ಬದುಕು ಎಷ್ಟೊಂದು ರುದ್ರತರ ಎಂದು ಯೋಚಿಸುತ್ತ ಆತ ಮಲಗಿದ.

ರಾಜಶೇಖರನೂ ಚಿಕ್ಕ ಹುಡುಗನೂ ಊಟ ಮಾಡಿ ಬಂದರು. ಪೈ-ಕೈ ನೋಯುತ್ತಿದ್ದ ದೇವಯ್ಯ ಮುಸುಕೆಳೆದುಕೊಂಡು ಹಾಸಿಗೆಯ ಮೇಲೆ ಉರುಳಿದ. ಆತನನ್ನು ಮಾತನಾಡಿಸಲು ರಾಜಶೇಖರ ಮಾಡಿದ ಯತ್ನಗಳೆಲ್ಲ ವಿಫಲವಾದುವು.

....ದಿನಗಳು ಕಳೆದುವು. ದೇವಯ್ಯ ಹೊತ್ತಿಗೆ ಸರಿಯಾಗಿ ಈಗ ಕೊಠಡಿಗೆ ಬರುತ್ತಿದ್ದ. ದುಂದುವೆಚ್ಚ ಮಾಡುತ್ತಿರಲಿಲ್ಲ. ಸಿಗರೇಟು ಸೇದುವುದು ಕಡಮೆಯಾಯಿತು. ಪಾಠ ಪುಸ್ತಕಗಳನ್ನೋದುವ ಪ್ರಯತ್ನವನ್ನೂ ಆತ ಮಾಡುತ್ತಿದ್ದುದನ್ನು ರಾಜಶೇಖರ ಗಮನಿಸಿದ.

ತಂದೆ ಬಂದುಹೋದ ಮೊದಲಲ್ಲಿ ಕೆಲವು ದಿನ ರಾಜಶೇಖರನೊಡನೆ ದೇವಯ್ಯ ಮಾತನಾಡಲೇ ಇಲ್ಲ. ಒಂದು ದಿನ ಅವನ ಅಂತರ್ಯದ ಬೇಗುದಿ ಸ್ಫೋಟವಾಯಿತು.

" ನನ್ಮೇಲೆ ಚಾಡಿ ಹೇಳಿ ನಿಂಗೇನಪ್ಪಾ ಬಂತು ?"

ಅಂತಹ ಪ್ರಶ್ನೆಯನ್ನು ರಾಜಶೇಖರ ನಿರೀಕ್ಷಿಸಿರಲಿಲ್ಲ. ತನ್ನ ವಿಷಯದಲ್ಲಿ ದೇವಯ್ಯ ಹಾಗೆ ತಪ್ಪು ತಿಳಿಯಬಹುದೆಂದು ಆತ ಕನಸಿನಲ್ಲೂ ಭಾವಿಸಿರಲಿಲ್ಲ.

" ಇಲ್ಲಪ್ಪೋ ನಾನು ಹೇಳಿಲ್ಲ !"

ಅದು ನಿಜವೆಂದು ಚಿಕ್ಕವನು ಸಾಕ್ಷ್ಯ ನುಡಿದ.

ರಂಗಮ್ಮನೇ ವರದಿ ಕೊಟ್ಟಿರಬೇಕೆಂಬುದು ಸ್ಪಷ್ಟವಾಯಿತು. ದೇವಯ್ಯ ಆ ಮುದುಕಿ ಕಣ್ಣಿಗೆ ಬಿದ್ದಾಗಲೆಲ್ಲ ಆಕೆಯನ್ನು ನುಂಗಿಬಿಡುವವನಂತೆ ನೋಡುತ್ತಿದ್ದ.

ಒಂದು ಸಂಜೆ, ಪದ್ಮಾವತಿಯ ಜತೆಯಲ್ಲಿ ಅಂಗಳದಲ್ಲಿ ನಿಂತಿದ್ದ ರಂಗಮ್ಮ, ಕೊಠಡಿಗೆ ಹೋಗುತ್ತಿದ್ದ ದೇವಯ್ಯನನ್ನು ಕಂಡು, ಕೇಳಿದರು :

" ಏನಪ್ಪಾ ನಿಮ್ತಂದೆ ಕಾಗದ ಬರೆದಿದಾರೇನು ?"

" ಹೂಂ."

ಉತ್ತರ ಚುಟುಕಾಗಿತ್ತು. ಅದೂ ಗೊಗ್ಗರ ಧ್ವನಿಯಲ್ಲಿ.

" ಊರಲ್ಲೆಲ್ಲಾ ಚೆನ್ನಾಗಿದಾರೊ ?"

" ಹೂಂ."

ಮತ್ತೆ ಮೊದಲಿನಂತೆಯೇ.

ಹುಡುಗ ಮೆಟ್ಟಲೇರಿ ಹೋದ ಬಳಿಕ ರಂಗಮ್ಮ ನೊಂದುಕೊಂಡ ಧ್ವನಿಯಲ್ಲಿ ಹೇಳಿದರು :

" ನನ್ಮೇಲೆ ಕೋಪ ಆತನಿಗೆ—ಗೌಡ ಬಂದಾಗ ದೂರು ಹೇಳ್ದೆ ಅಂತ. ನನಗೇನು ದ್ವೇಷವೆ ? ಆ ಹುಡುಗನಿಗೆ ಒಳ್ಳೇದಾಗ್ಲೀಂತ್ಲೇ ಅಲ್ವೆ ನಾನು ಹೇಳಿದ್ದು ?"

ಪದ್ಮಾವತಿ, ತನ್ನ ಮೈಗೆ ಅಂಡಿಕೊಂಡಿದ್ದ ಮಗುವನ್ನು ಎರಡೂ ಕೈಗಳಿಂದ ಮತ್ತಷ್ಟು ಬಿಗಿಯಾಗಿ ತನ್ನೆಡೆಗೆ ಎಳೆದುಕೊಳ್ಳುತ್ತ, ಮುಗುಳ್ನಕ್ಕಳು.

೧೮

ಚಳಿಗಾಲ ಬಂದಾಗ ರಂಗಮ್ಮ ಮೈತುಂಬ ಕಂಬಳಿ ಹೊದೆದುಕೊಳ್ಳುತ್ತಿದ್ದರು. ನರನಾಡಿಗಳಲ್ಲಿ ರಕ್ತ ಸಂಚಾರ ಕ್ಷೀಣವಾಗಿ ಅವರಿಗೆ ತುಂಬಾ ಸಂಕಟವಾಗುತ್ತಿತ್ತು.

ಈ ಸಲ ಅವರೆಂದರು :

" ಅಸಾಧ್ಯ ಚಳಿ ಈ ವರ್ಷ ! ಅಸಾಧ್ಯ ಚಳಿ !"

ಆದರೆ ಇದೇ ಮಾತನ್ನು ಅವರು ಪ್ರತಿವರ್ಷವೂ ಹೇಳುತ್ತಿದ್ದರು. ಪ್ರತಿಯೊಂದು ಸಲವೂ 'ಈ ವರ್ಷದ ಚಳಿ ಅಸಾಧ್ಯ' ಎಂದೇ ಅವರಿಗೆ ತೋರುತ್ತಿತ್ತು.

ಹೆಚ್ಚು ಕಡಮೆ ಪ್ರತಿ ಮುಂಜಾನೆಯೂ ಇಬ್ಬನಿ ಬೀಳುತ್ತಿತ್ತು. ಬೇಗನೆ ಎಚ್ಚರವಾದರೂ ರಂಗಮ್ಮ ಮನೆಯಿಂದ ಹೊರಬರುತ್ತಿರಲಿಲ್ಲ. ಸೂರ್ಯನ ಬೆಳಕು ಓಣಿಯೊಳಕ್ಕೆ ಬರುವವರೆಗೂ ಅವರು ಗಂಟಲಿನಿಂದ ಒಂದೇ ಸಮನೆ ಏನಾದರೂ ಸದ್ದು ಹೊರಡಿಸುತ್ತ ಕುಳಿತುಬಿಡುತ್ತಿದ್ದರು.

ಪೋಲೀಸ್ ರಂಗಸ್ವಾಮಿಯ ಹುಡುಗ, ಮೀನಾಕ್ಷಮ್ಮನ ಮಗ, ಇಲ್ಲವೆ ಉಪಾಧ್ಯಾಯರ ಮಕ್ಕಳು ಬಂದು ಕೂಗಿ ಕರೆಯುತ್ತಿದ್ದರು :

" ಅಜ್ಜೀ....ಎದ್ದಿಲ್ವೆ ಅಜ್ಜೀ ?....ಹಾಲು ಬಂತು ಅಜ್ಜೀ...."

ಅಂತಹ ದಿನಗಳಲ್ಲಿ ರಂಗಮ್ಮನ ಪರವಾಗಿ ಕಮಲಮ್ಮನೇ ಹಾಲು ಹಾಕಿಸಿ ಕೊಳ್ಳುತ್ತಿದ್ದಳು.

ಅದನ್ನು ಆಮೇಲೆ ಇಸಕೊಳ್ಳುತ್ತಾ ರಂಗಮ್ಮನೆನ್ನುತ್ತಿದ್ದರು :

" ಏನು ಹಾಲು ಕೊಡುತ್ತೇಂತ ಈ ಚಳಿಗೆ ಹಿಂಡ್ತಾರೋ...."

ಡಿಸೆಂಬರ್‌ನಲ್ಲೊಂದು ರಾತ್ರೆ, ಮುಂಜಾನೆ, ಚಳಿ ವಿಪರೀತವಾಗಿತ್ತು. 'ಅಹ್' ಎಂದು ಉಸಿರುಬಿಟ್ಟರೆ ಸಾಕು, ಬಾಯಿಯಿಂದ ಉಗಿ ಹೊರಡುತ್ತಿತ್ತು.

ಆ ಬೆಳಗ್ಗೆ ಎಷ್ಟು ಹೊತ್ತಾದರೂ ರಂಗಮ್ಮ ಏಳಲೇ ಇಲ್ಲ.

ಎಷ್ಟು ಸಾರೆ ಬಾಗಿಲು ತಟ್ಟಿದರೂ ಉತ್ತರ ಬರಲಿಲ್ಲ. ಕಮಲಮ್ಮ ಗಾಬರಿಗೊಂಡು ಮೀನಾಕ್ಷಮ್ಮನ ಮನೆಗೆ ಓಡಿದಳು. ಗಂಡಸರಲ್ಲಿ ಹೆಚ್ಚಿನವರೆಲ್ಲ ಕೆಲಸಕ್ಕೆ ಹೊರಟುಹೋಗಿದ್ದು, ಉಳಿದಿದ್ದವರು ಸುಬ್ಬುಕೃಷ್ಣಯ್ಯ ಮತ್ತು ಶಂಕರ ನಾರಾಯಣಯ್ಯ ಮಾತ್ರ. ಇಬ್ಬರೂ ಧಾವಿಸಿ ಬಂದು ಬಾಗಿಲು ತಟ್ಟಿದರು. ಪ್ರಯೋಜನವಾಗಲಿಲ್ಲ.

" ಇನ್ನೇನಪ್ಪಾ ಮಾಡೋಮು ?" ಎಂದ ಸುಬ್ಬುಕೃಷ್ಣಯ್ಯ.

ಶಂಕರನಾರಾಯಣಯ್ಯ ತನ್ನ ಕುರ್ಚಿ ತಂದಿಟ್ಟು ಅದರ ಮೇಲೆ ನಿಂತು ಎರಡು ಹಂಚುಗಳನ್ನು ಎತ್ತಿಟ್ಟ. ಸೂರ್ಯನ ಬೆಳಕು ಕಟ್ಟೆಯೊಡೆದ ಕೆರೆಯ ಹಾಗೆ ರಂಗಮ್ಮನ ಮನೆಯೊಳಕ್ಕೆ ನುಗ್ಗಿತು.

ಆದರೆ ಅಷ್ಟು ಹೊತ್ತಿಗಾಗಲೆ ಎದ್ದುಬಿಟ್ಟಿದ್ದರು ರಂಗಮ್ಮ. ಬಾಗಿಲವರೆಗೆ ತೆವಳಿ ಬಂದು ಅಗಣಿ ತೆರೆದರು. ಹೊರಗಿದ್ದವರಿಗೆ ಕಂಡುಬಂದುದು, ಒಂದೇ

ರಾತ್ರೆಯಲ್ಲೇ ಬಹಳ ಕುಗ್ಗಿ ಹೋಗಿದ್ದ ರಂಗಮ್ಮ. ಅವರ ಕಣ್ಣುಗಳು ಹಸಿಗೂಡಿದ್ದುವು. ನೆರೆದಿದ್ದ ಎಲ್ಲರನ್ನೂ ಉದ್ದೇಶಿಸಿ ಮಾತನಾಡುವ ಶಕ್ತಿ ತಮಗಿಲ್ಲವೆನ್ನುವಂತೆ ಸುಬ್ಬುಕೃಷ್ಣಯ್ಯನನ್ನೇ ನೋಡುತ್ತಾ ಅವರೆಂದರು :

"ಕಾಲು ಕಣೋ. ಎರಡೂ ಕಾಲೂ ಹಿಡಕೊಂಬಿಡ್ತು. ಮಡಚೋಕೇ ಆಗ್ಲಿಲ್ಲ. ವಯಸ್ಸಾಯ್ತು. ಇನ್ನು ತುಂಬಾ ಕಷ್ಟಾನಪ್ಪಾ."

"ಮಗನಿಗೆ ಕಾಗದ ಬರೀಬೇಕೇನು ?" ಎಂದು ಕೇಳಿದ ಸುಬ್ಬುಕೃಷ್ಣಯ್ಯ, ಬರೆಯಬೇಕೆಂದಾದರೆ ಬರೆದುಕೊಟ್ಟೇ ಕೆಲಸಕ್ಕೆ ಹೋಗೋಣವೆಂದು.

ಆದರೆ ರಂಗಮ್ಮ ಬೇಡವೆಂದರು :

"ಛೆ ! ಛೆ ! ನನಗೇನಾಗಿದೆ? ಸ್ವಲ್ಪ ಚಳಿಯಾಯ್ತು ಅಷ್ಟೆ...."

ಅವರ ದೃಷ್ಟಿ ಛಾವಣಿಯತ್ತ ಹೋಯಿತು. ಶಂಕರನಾರಾಯಣಯ್ಯ ಮೌನವಾಗಿ ಮತ್ತೊಮ್ಮೆ ಕುರ್ಚಿಯನ್ನೇರಿ ಹಂಚುಗಳನ್ನು ಮೊದಲಿದ್ದಲ್ಲೇ ಇರಿಸಿದ.

ಆ ದಿನ ರಂಗಮ್ಮ ಮನೆಗೆಲಸಗಳನ್ನು ನಿಧಾನವಾಗಿ ಮಾಡಿದರು.

"ಒಂದು ದಿನ ಹೀಗೆ ಚಳೀಲಿ ಮೈ ಹೆಪ್ಪುಗಟ್ಟಿ ಸತ್ತೇ ಹೋಗ್ತೀನಿ ನಾನು" ಎಂದು, ಬಿಸಿಲು ಚೆನ್ನಾಗಿ ಬಂದ ಮೇಲೆ, ರಂಗಮ್ಮ ಹೇಳಿದರು.

....ದಿನಗಳುರುಳಿದುವು. ಚಳಿಗಾಲ ಹಿಮ್ಮೆಟ್ಟಿತು. ಹೊಸ ವರ್ಷದ ವಿವಿಧ ಕ್ಯಾಲೆಂಡರುಗಳು ವಠಾರದ ಮನೆಗೋಡೆಗಳನ್ನು ಅಲಂಕರಿಸಿದುವು.

ಇಂಟರ್ ಪಾಸ್ ಮಾಡಿದ ಜಯರಾಮು, ಎರಡು ತಿಂಗಳ ಕಾಲ ಕೆಲಸಕ್ಕಾಗಿ ಅಲೆದ. ಪ್ರತಿಸಲವೂ ಯಾರನ್ನಾದರೂ ಭೇಟಿ ಮಾಡಿದಾಗಲೆಲ್ಲ, ಈ ಸಲ ಸಿಕ್ಕಿಯೇ ಸಿಗುತ್ತದೆ ಎಂದು ತೋರುತ್ತಿತ್ತು. ಅದು ಆಶಾವಾದದ ಬಳ್ಳಿ ಬಿಟ್ಟಿದ್ದ ಒಂಟಿ ಹೂ. ಭ್ರಮೆ ಎಂದು ಅದರ ಹೆಸರು. ಉದ್ಯೋಗ ಜಯರಾಮುವಿನ ಪಾಲಿಗೆ ಮಿಸುನಿ ಜಿಂಕೆಯಾಯಿತು. ರಾತ್ರೆ ಕನಸಿನಲ್ಲೂ ಮರುಕೊಳಿಸುವ ಹಾಗೆ ಹಗಲು ಯಾರು ಯಾರೋ ಸೀಸದ ಮಾತುಗಳನ್ನು ಅವನ ಕಿವಿಯೊಳಕ್ಕೆ ಎರಕು ಹುಯ್ಯುತ್ತಿದ್ದರು.

—"ನೀನು ಪದವೀಧರನಲ್ಲ."

—"ಜಾತಿ ?"

—"ಷಾರ್ಟ್‌ಹ್ಯಾಂಡ್–ಟೈಪ್‌ರೈಟಿಂಗ್ ತಿಳೀದು ಹಾಗಾದ್ರೆ ?"

ಆತ ಪದವೀಧರನಾಗುವ ಮಾತೇ ಇರಲಿಲ್ಲ.

ಜಾತಿಯ ವಿಷಯದಲ್ಲಿ ಆತನೇನೂ ಮಾಡುವಂತಿರಲಿಲ್ಲ.

ಆದರೆ ಕೊನೆಯದು ಸಾಧ್ಯವಿತ್ತು.

ಶೀಘ್ರಲಿಪಿಯನ್ನೂ ಟೈಪು ಮಾಡುವುದನ್ನೂ ಕಲಿಸಿಕೊಡುವ ಶಾಲೆಗೆ ಆತ ವಿದ್ಯಾರ್ಥಿಯಾಗಿ ಹೋದ.

ಆತನ ಬರವಣಿಗೆ ಸಡೆದೇ ಇತ್ತು. ಅಹಲ್ಯೆಯ ಮದುವೆಯನ್ನು ಹಿನ್ನೆಲೆಯಾಗಿಟ್ಟು ಹೃದಯಸ್ಪರ್ಶಿಯಾದೊಂದು ಕತೆಯನ್ನು ಆತ ಬರೆದ. ಅದನ್ನೋದುತ್ತ

ರಾಧಾ ಒಂದೇ ಸಮನೆ ಕಣ್ಣೀರು ಸುರಿಸಿದಳು. ಅದನ್ನು ಪತ್ರಿಕೆಗೆ ಕಳುಹಿಸ ಬೇಕೆಂದಿದ್ದ ಜಯರಾಮು. ಆದರೆ ರಾಧಾ ಬಿಡಲಿಲ್ಲ. "ಇದನ್ನು ಬೇರೆ ಯಾರೂ ಓದಬಾರದಣ್ಣ," ಎಂದಳು. ಅಹಲ್ಯೆಯ ಬಗೆಗೆ ತನ್ನ ತಂಗಿ ತೋರಿದ ಪ್ರೀತಿಯನ್ನು ಕಂಡು ಜಯರಾಮು ಮೂಕನಾಗಿ ಹೋದ

ಉದ್ಯೋಗದ ಬೇಟೆ ಹಲವಾರು ಕಥಾವಸ್ತುಗಳನ್ನು ಆತನಿಗೆ ಒದಗಿಸಿತು. 'ದಿನಚರಿ ಕತೆಗಳು' ಎಂದು ಹೆಸರಿಟ್ಟು ಆ ಅನುಭವಗಳನ್ನೆಲ್ಲ ಆತ ಟಿಪ್ಪಣಿ ಮಾಡುತ್ತ ಹೋದ. ಆದರೆ ಅದರಿಂದ ದುಡ್ಡು ಬರುತ್ತಿರಲಿಲ್ಲ.

ಶಂಕರನಾರಾಯಣಯ್ಯ ಹೇಳಿರಲಿಲ್ಲವೆ ಒಂದು ದಿನ?

"ಚಿತ್ರ ಬರೆದರೆ ದುಡ್ಡು ಬರೋದಿಲ್ಲ ಜಯರಾಮು."

ಆ ಮಾತು ಸಾಹಿತ್ಯದ ವಿಷಯದಲ್ಲೂ ಸತ್ಯವಾಗಿತ್ತು. ಆದರೆ ಬರವಣಿಗೆ ಯನ್ನು ಬಿಟ್ಟುಕೊಡುವುದು ಮಾತ್ರ ಸಾಧ್ಯವಿರಲಿಲ್ಲ.

....ಎರಡು ತಿಂಗಳ ಅನಂತರವೊಂದು ಸಂಜೆ, ವಠಾರಕ್ಕೆ ಬೇಗನೆ ಹಿಂದಿರುಗಿದ ಚಂದ್ರಶೇಖರಯ್ಯ, ಜಯರಾಮುವನ್ನು ಕರೆದು ಕೇಳಿದ :

"ನಮ್ಮ ವಿಮಾ ಸಂಸ್ಥೆ ಕಚೇರೀಲಿ ಒಂದು ಗುಮಾಸ್ತೆ ಕೆಲಸ ಖಾಲಿ ಬಿದ್ದಿದೆ ಬರ್‍ತೀರೇನು ?—"

ಅದೇನೋ ಕನಸಿನ ಸಂಭಾಷಣೆಯೆಂಬಂತೆ ಜಯರಾಮು ಉತ್ತರಿಸಿದ :

"ಓ ಬರ್‍ತೀನಿ. ಯಾವ ಕೆಲಸ ಮಾಡೋದಕ್ಕೂ ಸಿದ್ಧವಾಗಿದೀನಿ ನಾನು."

"ಸಂಬಳ ಕಮ್ಮಿ. ಈಗ ನಲ್ವತ್ತೈದು ಕೊಡ್ತಾರೆ. ಒಂದು ವರ್ಷ ಆದ್ಮೇಲೆ ಖಾಯಂ ಮಾಡೋ ವಿಷಯದ ಪರಿಶೀಲನೆ. ಖಾಯಂ ಆದರೆ, ಸಂಬಳ ಜಾಸ್ತಿ ಮಾಡ್ತಾರೆ. ಬೇಕಿದ್ದರೆ ನಿಮ್ಮ ತಂದೆಗೆ ಕಾಗದ ಬರೆದು ಕೇಳಿ. ಆದರೆ ತಡ ವಾಗಬಾರದು. ತಮ್ಮ ತಮ್ಮವರಿಗೇ ಕೆಲಸ ಕೊಡಿಸೋಕೆ ಅಲ್ಲಿ ಪ್ರಯತ್ನ ಪಡೋ ಜನ ಬೇಕಾದಷ್ಟಿದಾರೆ."

"ಅದೆಲ್ಲಾ ಯೋಚಿಸ್ಬೇಕಾದ್ದಿಲ್ಲ ಚಂದ್ರಶೇಖರಯ್ಯ. ನಮ್ಮ ತಂದೇನ ಈ ವಿಷಯದಲ್ಲಿ ಕೇಳೋ ಅಗತ್ಯವೇ ಇಲ್ಲ."

"ಹಾಗಾದ್ರೆ ನಾಳೇನೆ ಒಂದು ಅರ್ಜಿ ಬರಕೊಡಿ."

"ಹೂಂ. ಬರಕೊಡ್ತೀನಿ."

ಆಮೇಲೆ ಚಂದ್ರಶೇಖರಯ್ಯ ಮೌನವಾದ. ತಾನು ಕೃತಜ್ಞತೆಯನ್ನರ್ಪಿಸಿಲ್ಲ ವೆಂದು ಜಯರಾಮು ಕಸಿವಿಸಿಗೊಂಡ. ಆದರೆ ಏನನ್ನು ಹೇಳಬೇಕೆಂದು ತೋಚಲಿಲ್ಲ. ಏನನ್ನೋ ಹೇಳಲು ಹೊರಟಾಗ ನಾಲಿಗೆ ತಡವರಿಸಿತು.

"ನೀವು ಮಾಡ್ತಿರೋ ಉಪಕಾರ ಎಂಥದೂಂತ ಖಂಡಿತ ಊಹಿಸಲಾರಿರಿ ಚಂದ್ರಶೇಖರಯ್ಯ."

ಆತ ನಕ್ಕುಬಿಟ್ಟ.

“ ಇನ್ನೂ ಕೆಲಸವೇ ಸಿಕ್ಕಿಲ್ವಲ್ಲ ಜಯರಾಮು. ಆಮೇಲೆ ಥ್ಯಾಂಕ್ಸ್ ಕೊಡಿ.”

ಜಯರಾಮು ತನ್ನ ಮನೆಯೊಳಕ್ಕೆ ಹೋಗಿ, ತಾಯಿಗೂ ತಂಗಿಗೂ ತಾನು ಬರೆಯಲಿರುವ ಹೊಸ ಅರ್ಜಿಯ ವಿಷಯ ತಿಳಿಸಿದ. ಆ ತಾಯಿಯ ಮುಖದ ಮೇಲೆ ಆಸೆಯ ಮುಗುಳುನಗೆ ಮೂಡಿತು. ಯಾವ ಬಗೆಯ ಕೆಲಸ ? ಕಚೇರಿ ಎಲ್ಲಿರೋದು? ಎಂದೆಲ್ಲಾ ವಿವರವಾಗಿ ಕೇಳಿ ರಾಧಾ ಅವನನ್ನು ಬೇಸರಪಡಿಸಿದಳು.

ಬೇರೆಯೂ ಒಂದು ಯೋಚನೆ ಹೊಳೆದು ರಾಧಾ ಕೇಳಿದಳು :

“ ವಿಮಾ ಸಂಸ್ಥೆಯ ಕತೆ ಯಾರೂ ಬರೆದೇ ಇಲ್ಲ, ಅಲ್ವೆ ಅಣ್ಣ ? ನೀನು ಅದನ್ನು ಬರೆದರೆ ಚೆನ್ನಾಗಿರುತ್ತೆ.”

....ಬಟ್ಟೆ ಬದಲಾಯಿಸುತ್ತಿದ್ದ ಚಂದ್ರಶೇಖರಯ್ಯ ತಾಯಿ ಮಕ್ಕಳ ಸಂವಾದ ಕೇಳಿಸುವುದೇನೋ ಎಂದು ಕಿವಿಗೊಟ್ಟ. ತನ್ನ ವಿಷಯವಾಗಿ ಅವರೇನು ಮಾತನಾಡುತ್ತಿದ್ದರೆಂದು ತಿಳಿಯುವ ಆತುರ ಆತನಿಗೆ, ಆದರೆ ಏನೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ. ರಾಧೆಯ ಕೀಟಲೆ ನಗೆ, ಜಯರಾಮುವಿನ ಹುಸಿಮುನಿಸಿನ ಉತ್ತರ........

“ ನೀವು ಮಾಡ್ತಿರೋ ಉಪಕಾರ ಎಂಥದೂಂತ ಖಂಡಿತ ಊಹಿಸ್ಲಾರಿರಿ ಚಂದ್ರಶೇಖರಯ ....”

ಹುಚ್ಚು ಹುಡುಗ. ನಾಳೆಯ ದಿನ ಆ ಕೆಲಸ ದೊರೆತು, ರಾಧೆಯೂ ರಾಧೆಯ ತಾಯ್ತಂದೆಯರೂ ತನ್ನ ಬಗೆಗೆ ಒಳ್ಳೆ ಮಾತನ್ನಾಡುವಾಗ ತನಗೆ ಆಗುವ ಸಂತೋಷ ಎಷ್ಟೆಂಬುದನ್ನು ಊಹಿಸುವುದು ಆವನಿಂದ ಸಾಧ್ಯವೆ ?

ಚಂದ್ರಶೇಖರಯ್ಯ ಮದುವೆಯಾಗಲು ತೀರ್ಮಾನಿಸಿದ್ದ. ಆ ತೀರ್ಮಾನಕ್ಕೆ ಇದೇ ಕಾರಣವೆಂದು ಯಾವುದಾದರೂ ಒಂದನ್ನಷ್ಟೇ ಎತ್ತಿ ತೋರಿಸುವುದು ಸಾಧ್ಯವಿರಲಿಲ್ಲ. ಊರಿನಲ್ಲಿ ಹಿರಿಯರು ಆಡುತ್ತಿದ್ದ ನಿಂದೆಯ ನುಡಿಗಳನ್ನು ಕೇಳಿ ಕೇಳಿ ಆತನಿಗೆ ಸಾಕಾಗಿತ್ತು. ಆದರೆ ಅದಕ್ಕಿಂತಲೂ ಮುಖ್ಯವಾಗಿ ಆತನ ಯೌವನ ಕೇಳುತಿತ್ತು : ‘ಒಂಟಿಯಾಗಿಯೇ ಎಷ್ಟು ದಿನ ಇರೋದು ಸಾಧ್ಯ ?’ ಒಂದು ಹೆಣ್ಣು ಜೀವದ ಸ್ನೇಹವನ್ನು ಆತನ ಮನಸ್ಸು ದೇಹಗಳೆರಡೂ ಬಯಸುತ್ತಿದ್ದುವು. ಅದಕ್ಕೆಲ್ಲ ಕಳಶವಿಡುವಂತೆ ಅಹಲ್ಯೆಯ ವಿವಾಹ ಪ್ರಕರಣ ಆತನ ಮೇಲೆ ಬಲವಾದ ಪರಿಣಾಮವನ್ನುಂಟುಮಾಡಿತ್ತು. ಪ್ರೀತಿಯ ವಿಷಯ, ವಿವಾಹದ ವಿಷಯ. ಅಹಲ್ಯೆ-ವೆಂಕಟೇಶರು ಒಬ್ಬರೊಡನೊಬ್ಬರು ಮಾತನಾಡಿದ್ದರೋ ಇಲ್ಲವೋ, ಆತನಿಗೆ ತಿಳಿಯದು. ಆದರೆ ಅಷ್ಟೆಲ್ಲ ರಂಪವಾದ ಮೇಲೆ, “ಅಹಲ್ಯೆಯನ್ನೇ ಮದುವೆಯಾಗ್ತೇನೆ” ಎಂದು ವೆಂಕಟೇಶ ಹೇಳಬೇಕಾಗಿತ್ತು. ಆದರೆ ಆತ ಅಂತಹ ‘ಗಂಡಸುತನ’ ತೋರಲಿಲ್ಲ. ಅದಕ್ಕಾಗಿ ಆತನನ್ನೆಂದೂ ಚಂದ್ರಶೇಖರಯ್ಯ ಕ್ಷಮಿಸಲಾರ. ಜಯರಾಮುವಿನೆದುರು ವೆಂಕಟೇಶನನ್ನು ಒಂದೆರಡು ಸಾರಿ ಬೈದು ಚಂದ್ರಶೇಖರಯ್ಯ ಸ್ವಲ್ಪ ತೃಪ್ತಿಪಟ್ಟುಕೊಂಡಿದ್ದ. ಏನಾದರೂ ನೆಪ ಮಾಡಿಕೊಂಡು ರಾಮಚಂದ್ರಯ್ಯನೊಡನೆ ಆತ್ಮೀಯವಾಗಿ ಆಗಾಗ್ಗೆ ಮಾತನಾಡಿದ್ದ. ಆದರೆ ಆ ಪ್ರಕರಣ ಸ್ವತ

ಅವನಿಗೇ ಸವಾಲು ಹಾಕಿತ್ತು: 'ನಿನ್ನ ವಿಷಯವೇನು ? ರಾಧೆಯ ಬಗ್ಗೆ ನಿನ್ನ ಅಭಿಪ್ರಾಯವೇನು ?'

ಆ ಅಭಿಪ್ರಾಯಕ್ಕೆ ಸಂಬಂಧಿಸಿ ಅವನ ಮನಸ್ಸಿನಲ್ಲಿ ಈಗ ಯಾವ ಸಂದೇಹವೂ ಇರಲಿಲ್ಲ.

ಈ ಬೀದಿಯಲ್ಲಿ ಬಸ್ಸುಗಳಲ್ಲಿ ಹುಡುಗಿಯರನ್ನು ನೋಡಿದರೂ ರಾಧೆಯ ನೆನಪು ಆತನಿಗೆ ಆಗುತ್ತಿತ್ತು. ದಾಂಪತ್ಯ ಜೀವನದ ಯೋಚನೆಗಳು ಮೂಡಿದಾಗ ಲೆಲ್ಲ ರಾಧೆಯೇ ಕಣ್ಣೆದುರು ನಿಲ್ಲುತ್ತಿದ್ದಳು.

ಚಂದ್ರಶೇಖರಯ್ಯ ತನಗೆ ತಾನೇ ಪ್ರಶ್ನಿಸಿಕೊಂಡ:

'ರಾಧೆಯಿಲ್ಲದೆ ಹೋಗಿದ್ದರೆ, ಖಾಲಿಯಾದ ಜಾಗವನ್ನು ಜಯರಾಮುಗೆ ಕೊಡಿಸ್ತಿದ್ದೆಯೇನು ?'

ಅವನ 'ಅಹಂ' ಎಂದಿತು:

'ಓಹೋ, ಕೊಡಿಸ್ತಿದ್ದೆ.'

ಅದು ಆತ್ಮವಂಚನೆಯ ಉತ್ತರ ಎಂಬುದು ಅವನಿಗೆ ಗೊತ್ತಿತ್ತು.

ಜಯರಾಮುಗೆ, ಚಂದ್ರಶೇಖರಯ್ಯ ಪ್ರತಿನಿಧಿಯಾಗಿ ದುಡಿಯುತ್ತಿದ್ದ ವಿಮಾ ಸಂಸ್ಥೆಯ ಕಚೇರಿಯಲ್ಲಿ ಕೆಲಸ ಸಿಕ್ಕಿತು.

ಆತನ ತಾಯಿ, ದೇವರೆದುರು ತುಪ್ಪದ ದೀಪ ಹಚ್ಚಿಟ್ಟು ಮಗ ಮಂಡಿಯೂರಿ ಕೈಮುಗಿಯುವಂತೆ ಮಾಡಿದಳು.

ಬೇಗನೆ ಹೊರಟುಬರಲು ತನ್ನ ಗಂಡನಿಗೆ ಕಾಗದ ಬರೆಯಬೇಕೆಂದು ಆಕೆ ಯೋಚಿಸಿದಳು. ಆದರೆ ಅದರ ಅಗತ್ಯವಿಲ್ಲವೆಂಬುದು ತನಗೇ ಹೊಳೆದು, ಕೆಲಸ ಸಿಕ್ಕಿದ ವಿಷಯವನ್ನಷ್ಟೇ ಬರೆದು ತಿಳಿಸುವಂತೆ ಜಯರಾಮುಗೆ ಹೇಳಿದಳು: 'ಚಂದ್ರಶೇಖರಯ್ಯ ಕೆಲಸ ಕೊಡಿಸಿದ್ರು' ಎಂಬುದನ್ನೂ ಬರೆಯುವಂತೆ ಸೂಚಿಸದಿರಲಿಲ್ಲ.

ಆ ತಾಯಿ ಕೆಳಕ್ಕಿಳಿದು ತಾನು ಸಂಧಿಸಿದವರಿಗೆಲ್ಲ ಆ ಸುದ್ದಿ ಹೇಳುತ್ತಾ ಬಂದಳು.

"ನಮ್ಮ ಜಯರಾಮುಗೆ ಕೆಲಸ ಸಿಗ್ತು."

ನಮ್ಮ ರಾಧಾಗೆ ಗಂಡು ಗೊತ್ತಾಯ್ತು ಎನ್ನುವಾಗ ಇರಬಹುದಾದ ಸಂತೋಷದ ಧ್ವನಿಯಿತ್ತು ಆ ಮಾತಿನಲ್ಲಿ.

ಅದರ ಜತೆಯಲ್ಲೇ ಇನ್ನೊಂದು ವಾಕ್ಯವನ್ನೂ ಆಕೆ ಹೇಳಿದಳು:

"ಚಂದ್ರಶೇಖರಯ್ಯ ಕೊಡಿಸಿದ್ರು. ಅವರ ಕಚೇರೀಲೇ ಕೆಲಸ."

ರಂಗಮ್ಮ ಆಕೆಗೆ ಅಂದರು:

"ಹಾಗೆಯೇ ಮಗಳ ಮದುವೇನೂ ಒಂದು ಮಾಡಿಬಿಡಮ್ಮ."

ಬೇರೆ ದಿನವಾಗಿದ್ದರೆ, ಆ ಮಾತು ಕೇಳಿದೊಡನೆಯೇ ಆಕೆಯ ಮುಖ ಬಾಡು ತ್ತಿತ್ತು. ಈ ದಿನ ಹಾಗಾಗಲಿಲ್ಲ. ಧೈರ್ಯದಿಂದಲೆ ಆಕೆಯೆಂದಳು :

"ಆಗಲಿ ರಂಗವ್ನೋರೇ. ನಿಮ್ಮ ಆಶೀರ್ವಾದವಿದ್ದರೆ ಅದೂ ಒಂದು ದಿನ ಆದೀತು, ನೋಡೋಣ."

ಅಣ್ಣನಿಗೆ ಕೆಲಸ ಸಿಕ್ಕಿತೆಂದು ರಾಧಾ ಕುಣಿದಾಡಿದಳು.

ಚಂದ್ರಶೇಖರಯ್ಯನನ್ನು ರಾತ್ರೆ ಊಟಕ್ಕೆ ಕರೆಯಬೇಕೆಂದು ಗೊತ್ತಾಯಿತು. ಆದರೆ ಸಂಜೆಯಾದರೂ ಆತನ ಸುಳಿವೇ ಇರಲಿಲ್ಲ. ಜಯರಾಮು ಆತ ಇರಬಹು ದಾದ ಜಾಗಗಳಲ್ಲೆಲ್ಲಾ ಸುತ್ತಾಡಿ, ಒಂದೆಡೆ ಅವನನ್ನು ಕಂಡು, ಕರೆದುಕೊಂಡು ಬಂದ.

....ಹಿಗ್ಗುತ್ತಿದ್ದ ಹೃದಯವನ್ನು ಬಿಗಿಯಾಗಿ ಹಿಡಿದು ಚಂದ್ರಶೇಖರಯ್ಯ ಊಟಕ್ಕೆ ಕುಳಿತ. ಮೂರು ವರ್ಷಗಳಿಂದ ಪಕ್ಕದ ಮನೆಯಲ್ಲೇ ಇದ್ದ ಆತ, ಮೊದಲ ಬಾರಿ ಕಂಡ ಅಪರಿಚಿತರ ಮನೆಯಲ್ಲಿ ಊಟಕ್ಕೆ ಕುಳಿತವನಂತೆ, ಸಂಕೋಚ ದಿಂದ ವರ್ತಿಸಿದ.

ರಾಧಾ ಅಣ್ಣನಿಗೂ ಚಂದ್ರಶೇಖರಯ್ಯನಿಗೂ ಬಡಿಸುತ್ತ ಹೋದಳು. ಆತ ರಾಧೆಯನ್ನು ತಲೆಯೆತ್ತಿ ಕೂಡಾ ನೋಡದೆ ಊಟ ಮಾಡಿದ.

ಕೊಠಡಿಗೆ ಹಿಂತಿರುಗಿದ ಚಂದ್ರಶೇಖರಯ್ಯನಿಗೆ ಅಂತಹ ನಿರ್ಮಲ ಒಲವನ್ನು ದೊರಕಿಸಿಕೊಂಡ ತಾನು ಸುಖಿಯೆಂದು ತೋರಿತು. ಸಿಗರೇಟಿನ ನೆನಪಾಯಿತಾದರೂ ಸೇದಲು ಮನಸ್ಸಾಗಲಿಲ್ಲ.

೧೯

ಬಿಸಿಲು ಚೆನ್ನಾಗಿ ಬೀಳತೊಡಗಿದಂತೆ ನಿತ್ಯದ ಉತ್ಸಾಹದಿಂದ ರಂಗಮ್ಮ ಓಡಾಡಿದರು.

"ಈ ವರ್ಷವಾದರೂ ಬೆಂಗಳೂರಿಗೆ ವರ್ಗವಾಗುವಂತೆ ಪ್ರಯತ್ನಿಸಬೇಕು." ಎಂದು ಆಗಾಗ್ಗೆ ಕಾಗದದಲ್ಲಿ ರಂಗಮ್ಮ ಮಗನಿಗೆ ಷರಾ ಬರೆಸುವುದಿತ್ತು. ಅದು ಎಷ್ಟೋ ವರ್ಷಗಳಿಂದ ಅವರು ಬರೆಸುತ್ತಲೇ ಬಂದ ಒಕ್ಕಣೆ.

'ಪಾಮಿಸ್ಟ್ರಿ ಪ್ರೊಫೆಸರ್ ಪದ್ಮನಾಭಯ್ಯ' ರಂಗಮ್ಮನ ಕೈ ನೋಡಿ ಭವಿಷ್ಯ ನುಡಿದಿರಲಿಲ್ಲ ನಿಜ. ಆದರೆ, ರಂಗಮ್ಮನನ್ನು ಬಿಟ್ಟು ವಠಾರ ಇದ್ದೀತು ಎಂದು ಹೇಳುವ ಸಾಹಸ ಮಾಡಲು ಯಾರೂ ಸಿದ್ಧರಿರಲಿಲ್ಲ.

ಜಾಗೃತಾವಸ್ಥೆಯಿರಲಿ, ಸ್ವಪ್ನಾವಸ್ಥೆಯಿರಲಿ—ರಂಗಮ್ಮನ ಹೆಚ್ಚಿನ ಆಯು ಸ್ಸೆಲ್ಲ ವಠಾರದ ಚಿಂತನೆಯಲ್ಲಿ ಕಳೆದುಹೋಗುತ್ತಿತ್ತು.

"ನಿಮ್ಮ ವಠಾರದಲ್ಲಿ ಎಷ್ಟು ಸಂಸಾರಗಳಿವೆ ರಂಗಮ್ನೋರೆ?" ಎಂದು ಯಾರಾದರೂ ಕೇಳಿದರೆ, ಅವರು ಕೊಡುತ್ತಿದ್ದ ಉತ್ತರ:

"ಹದಿನಾಲ್ಕು."

"ಹದಿನೈದಲ್ವೆ ಅಜ್ಜಿ?"

—ಎಂದು ಯಾರಾದರೂ ತಿದ್ದಲು ಹೋಗುವುದಿತ್ತು. 'ಅಜ್ಜಿ' ಎಂಬ ಸಂಬೋಧನೆ ಅವರಿಗೆ ಪ್ರಿಯವಾಗಿರಲಿಲ್ಲ. ಸ್ವಲ್ಪ ರೇಗುತ್ತ, ಅವರು ಸಾರುತ್ತಿದ್ದರು:

"ಹದಿನೈದಲ್ಲ, ಹದಿನಾಲ್ಕೇ!"

ನಿಜವಾಗಿ, ಅವರದನ್ನೂ ಸೇರಿಸಿ ಹದಿನೈದು ಸಂಸಾರಗಳಾಗುತ್ತಿದ್ದುವು. ಆದರೆ ಅವರ ಲೆಕ್ಕದ ರೀತಿ ಬೇರೆ. ಹದಿನಾಲ್ಕು ಸಂಸಾರಗಳು ತಮ್ಮ ಮನೆಯಲ್ಲಿವೆ, ವಠಾರದಲ್ಲಿವೆ, ಎಂದು ಅವರು ಸಾಧಿಸುತ್ತಿದ್ದರು.

ಸ್ವಲ್ಪ ಕಾಲದ ಹಿಂದೆ ನಡೆದ ಅಹಲ್ಯಾ–ವೆಂಕಟೇಶರ ಪ್ರಕರಣವನ್ನು ರಂಗಮ್ಮ ಮರೆತಿರಲಿಲ್ಲ. ಅದರಿಂದ ಅವರ ಮನಸ್ಸಿಗೆ ತುಂಬಾ ನೋವಾಗಿತ್ತು. ರಾಜಮ್ಮ ತನ್ನ ಮಾತಿಗೆ ಬೆಲೆ ಕೊಡಲಿಲ್ಲವೆಂಬುದು ಆಗಾಗ್ಗೆ ಅವರಿಗೆ ನೆನಪಾಗುತ್ತಿತ್ತು.

ಅದನ್ನು ಮರೆಸುವಂತಹ ಒಳ್ಳೆಯ ಕೆಲಸವನ್ನೇನಾದರೂ ಮಾಡಲು ಅವರು ಹಾತೊರೆಯುತ್ತಿದ್ದರು.

ಹಿಂದೆಯೇ ಅವರ ಮನಸ್ಸಿನೊಳಗಿದ್ದು ಮೂಲೆ ಸೇರಿದ್ದ ವಿಷಯ ಚಳಿಗಾಲದ ಅನಂತರ ಹೊಂಬಿಸಿಲಿನಲ್ಲಿ ಗರಿಗೆದರಿಕೊಂಡು ಹೊರಬಂತು.

ಒಂದು ಸಂಜೆ ಹೊರ ಅಂಗಳದಲ್ಲಿ ನಿಂತಿದ್ದ ಅವರು ವಠಾರಕ್ಕೆ ಹಿಂತಿರುಗುತ್ತಿದ್ದ ಚಂದ್ರಶೇಖರಯ್ಯನನ್ನು ಕಂಡರು. ಆತ ಇತ್ತೀಚಿಗೆ ಇಸ್ತ್ರಿ ಹಾಕಿದ್ದ ತನ್ನ ಹಳೆಯ ಗ್ಯಾಬರ್ಡಿನ್ ಸೂಟನ್ನು ತೊಟ್ಟಿದ್ದ. ರಂಗಮ್ಮನ ಕಣ್ಣಿಗೆ ಸಿಂಗರಿಸಿದ ಮದುವಣಿಗನ ಹಾಗೆಯೇ ಅವನು ಕಂಡ.

"ಏನು ಚಂದ್ರಶೇಖರಯ್ಯ, ನಿಮ್ಮ ಹತ್ತಿರ ಮಾತನಾಡೋಣ ಅಂದ್ರೆ ನಿಮಗೆ ಒಂದು ನಿಮಿಷವೂ ಪುರಸೊತ್ತೇ ಇಲ್ವಲ್ಲಾ!?" ಎಂದು ರಂಗಮ್ಮ ಪೀಠಿಕೆ ಹಾಕಿದರು.

"ಪುರಸೊತ್ತು ನಿಮಗಿರೊಲ್ಲಾಂತ ನಾನೇ ಬಂದು ಮಾತಾಡ್ಸೊಲ್ಲ. ಅಷ್ಟೆ," ಎಂದು ಚಂದ್ರಶೇಖರಯ್ಯ ವಿವರಣೆ ಕೊಟ್ಟು ರಂಗಮ್ಮ ನಿಲ್ಲಿಸಿಕೊಂಡು ಬೈರಿಗೆ ಕೊರೆಯುವರೇನೊ ಎಂಬ ಭಯದಿಂದ, ಮಹಡಿ ಮೆಟ್ಟಲುಗಳನ್ನೇರತೊಡಗಿದ.

"ಕೆಳಗೆ ನಮ್ಮನೇಗ್ಬನ್ನಿ ಸ್ವಲ್ಪ," ಎಂದು ರಂಗಮ್ಮ ಕರೆದರು. ಅವರ ದೃಷ್ಟಿಗೆ, ಕೊನೆಯ ಕಿಟಕಿಯಲ್ಲಿ ರಾಧೆಯ ಮುಖ ಮಸಕುಮಸುಕಾಗಿ ತೋರಿತು.

ಬೇರೆ ಉಪಾಯವಿಲ್ಲದೆ ಚಂದ್ರಶೇಖರಯ್ಯ ಬೂಟ್ಸು ಬಿಚ್ಚಿಟ್ಟು ಬಟ್ಟೆ ಬದಲಾಯಿಸಿ ರಂಗಮ್ಮನ ಮನೆಗೆ ಹೋದ. ಸುಬ್ಬುಕೃಷ್ಣಯ್ಯ ಬರುವುದರೊಳಗೇ ಮೊದಲ ವಾಚನವನ್ನು ಮುಗಿಸಬೇಕಾದ ಕಾಗದವಿರಬಹುದು; ಮನೆಗಂದಾಯಕ್ಕೆ

ಸಂಬಂಧಿಸಿದ ನಗರ ಸಭೆಯಿಂದ ನೋಟೀಸು ಬಂದಿರಬಹುದು–ಎಂದು ಚಂದ್ರಶೇಖರಯ್ಯ ಯೋಚಿಸಿದ್ದ. ಆದರೆ ಅದೊಂದೂ ಇರಲಿಲ್ಲ.

"ಸುಮ್ನೆ ಕರ್ದೆ. ಬಹಳ ದಿವಸವಾಯ್ತು ನಿಮ್ಜೊತೇಲಿ ಮಾತನಾಡಿ," ಎಂದು ರಂಗಮ್ಮ ನಗೆ ಬೀರಿದರು. ಇಷ್ಟು ವಯಸ್ಸಾದ ಮೇಲೆ ನಕ್ಕಾಗಲೂ ನೋಡಲು ಚೆನ್ನಾಗಿರುತ್ತದೆಂಬ ಅವರ ನಂಬಿಕೆ ಆಶ್ಚರ್ಯಕರವಾಗಿತ್ತು.

ಚಂದ್ರಶೇಖರಯ್ಯನೂ ಮುಗುಳ್ನಕ್ಕ.

"ಏನಪ್ಪಾ, ಆರೋಗ್ಯವಾಗಿದೀರಾ? ಊರಿಂದೇನಾದರೂ ಕಾಗದ ಬಂತೆ?"

ಇಷ್ಟರಲ್ಲೇ ಚಂದ್ರಶೇಖರಯ್ಯನಿಗೆ, ರಂಗಮ್ಮ ಮುಂದೆ ಪ್ರಸ್ತಾಪಿಸಲಿದ್ದ ವಿಷಯ ಯಾವುದೆಂಬುದು ತಿಳಿಯಿತು. ಬೇರೆ ದಿನಗಳಲ್ಲಾದರೆ ತೇಲಿಸಿ ಮಾತನಾಡುತ್ತಿದ್ದವನು ಈ ದಿನ ಸ್ವಲ್ಪ ತಬ್ಬಿಬ್ಬಾದ.

"ಮೊನ್ನೆ ಒಂದು ಕಾಗದ ಬಂದಿತ್ತು."

"ಏನ್ಹೇಳ್ತಾರೆ ನಿಮ್ಮ ತಂದೆ? ಮದುವೆ ಬೇಡ, ಹಾಗೇ ಇದ್ಬಿಡೂಂತ್ಲೊ?"

ಚಂದ್ರಶೇಖರಯ್ಯ ಆ ಕ್ಷಣವೆ, ತಾನು ಹೇಗೆ ಮುಂದುವರಿಯಬೇಕೆಂಬುದನ್ನು ನಿರ್ಧರಿಸಿದ.

"ಹಾಗೇನಿಲ್ಲ ರಂಗಮ್ನೋರೆ. ಬೇಗ್ನೆ ಮಾಡ್ಕೊ ಅಂತ್ಲೇ ಅಪ್ಪ ಹೇಳ್ತಾನೆ. ಆದರೆ ಸರಿಯಾದ ಹುಡುಗಿ ಸಿಗ್ಬೇಕಲ್ಲ?"

ಆತನ ಉತ್ತರದ ಧ್ವನಿಯಲ್ಲಾದ ಬದಲಾವಣೆಯನ್ನು ಗಮನಿಸಿ ರಂಗಮ್ಮ ಹಿಗ್ಗಿದರು.

"ಅದೇನು ಹಾಗಂದ್ರೆ? ಈ ಭೂಮಿ ಮೇಲೆ ನಿಮಗೆ ಬೇಕಾದ ಹುಡುಗೀರೇ ಇಲ್ವೆ?"

"ಎಲ್ಲಾದ್ರೂ ಇದ್ರೆ ಪ್ರಯೋಜನವೇನು? ಹೊರಗೆ ಮದುವೆ ಮಾಡ್ಕೊಂಡು ಈ ವಠಾರ ಬಿಟ್ಟು ಹೋಗು ಅಂತೀರೇನು?

ರಂಗಮ್ಮನಿಗೆ ಏನು ಹೇಳಬೇಕೋ ತೋಚಲಿಲ್ಲ. ತಮ್ಮ ಮನಸ್ಸಿನಲ್ಲಿದ್ದುದೇ ಆತನ ಮನಸ್ಸಿನಲ್ಲಿಯೂ ಇದೆಯೇ ಎಂದು ತಿಳಿಯಲು ಅವರು ಕಾತರರಾದರು.

"ಹಾಗಂದ್ರೆ ಈ ವಠಾರದಲ್ಲೇ ಯಾವುದಾದರೂ ಹುಡುಗಿ ಇದ್ರೆ ಗೊತ್ತು ಮಾಡೋಣ್ವೇನು?"

ಹೇಳಬೇಕಾದ್ದನ್ನು ನಗೆಗೀಡಾಗುವಂತೆ ಹೇಳಿದೆನೇನೋ ಎಂದು ಅಳುಕುತ್ತ ಚಂದ್ರಶೇಖರಯ್ಯನೆಂದ:

"ಮಾಡಿ, ಆಗಿಹೋಗ್ಲಿ."

ವಠಾರದಲ್ಲಿ ಮದುವೆಯನ್ನಿದಿರು ನೋಡುತ್ತಿರುವ ಹುಡುಗಿ ರಾಧೆಯೊಬ್ಬಳೇ ಎಂದು ಯಾರಿಗೆ ಗೊತ್ತಿರಲಿಲ್ಲ?

"ಹಾಗಾದರೆ ನಿಮ್ಮ ಜಾತಕ ಒಂದಿಷ್ಟು ತಂದ್ಕೊಡಿ."

"ಜಾತಕ ಇಲ್ವಲ್ಲ."

"ಊರಲ್ಲೂ ಇಲ್ವೆ?"

"ಇದೆ. ತರಿಸ್ಕೊಡ್ತೀನಿ."

........ಆ ಬಳಿಕ ಕೆಲವು ದಿನ ರಂಗಮ್ಮ ಗೆಲುವಾಗಿದ್ದರು. ಯಾರಿಗೂ ಅವರು ಬಾಯಿ ಬಿಟ್ಟು ಏನನ್ನೂ ಹೇಳಲಿಲ್ಲ. ಗುಪ್ತ ಸಂಧಾನಗಳು ಮಾತ್ರ ನಡೆದುವು.

....ಅಹಲ್ಯೆ ಗಂಡನ ಮನೆಗೆ ಹೊರಟು ಹೋದ ಬಳಿಕ, ರಾಧೆ ಚಂಪಾವತಿಗೆ ಹೆಚ್ಚು ಆಪ್ತಳಾದ ಸ್ನೇಹಿತೆಯಾದಳು. ಆಕೆಗೆ ಹಾಡು ಬರುತ್ತಿರಲಿಲ್ಲ. ಆದರೆ ಹಾಡಿನ ಪುಸ್ತಕವನ್ನು ತಂದು ಆಕೆ ಚಂಪಾವತಿಗೆ ಕೊಡುತ್ತಿದ್ದಳು. ಓದಲೆಂದು ಕಾದಂಬರಿಗಳನ್ನು ತರುತ್ತಿದ್ದಳು.

ಶಂಕರನಾರಾಯಣಯ್ಯನೀಗ ಬೇಗನೆ ಮನೆಗೆ ಬರುತ್ತಿದ್ದ; ತಡವಾಗಿ ಕೆಲಸಕ್ಕೆ ಹೋಗುತ್ತಿದ್ದ. ಚಂಪಾ ತುಂಬಿದ ಗರ್ಭಿಣಿ. ಆತ ಹೊಸ ಗಡಿಯಾರ ಕೊಂಡು ತಂದಿರಲಿಲ್ಲ. ಆದರೆ ಸಾಲಮಾಡಿ ಹೆಂಡತಿಯನ್ನು ಹೆರಿಗೆ ಆಸ್ಪತ್ರೆಗೆ ಸೇರಿಸಲು ಸಿದ್ಧನಾಗಿದ್ದ.

"ಬೇಡವೇ ಬೇಡ! ಇಲ್ಲಿಯೇ ಹೆರಿಗೆಯಾಗಲಿ!" ಎಂದು ಚಂಪಾ ಹಟ ತೊಟ್ಟಳು.

ಅವರ ಮಗಳೀಗ ಪುಟ್ಟ ಹೆಜ್ಜೆಗಳನ್ನಿಡುತ್ತ, ತೊದಲು ಮಾತನಾಡುತ್ತಿದ್ದ ದಿಟ್ಟೆ. ಆಕೆಯನ್ನು ಪ್ರೀತಿಯಿಂದ ನೋಡುತ್ತ ಶಂಕರನಾರಾಯಣಯ್ಯ ಹೇಳಿದ:

"ಬರೋದೂ ಹೆಣ್ಣು ಮಗುವೇ ಆದರೆ ಎಷ್ಟು ಚೆಂದ!"

ಈ ಗಂಡಸಿನ ಆಳ ಕಂಡವರಿಲ್ಲ ಎಂಬಂತೆ ಚಂಪಾ ದುರುಗುಟ್ಟಿಕೊಂಡು ಆತನನ್ನೇ ನೋಡಿ ಅಂದಳು:

"ಏನೂ ಬೇಡಿ. ನಂಗೆ ಗಂಡು ಮಗೂನೇ ಬೇಕು."

"ಯಾಕೆ? ನಾನೆಲ್ಲಾದರೂ ಓಡಿಹೋದರೆ, ನಿನ್ನನ್ನು ಸಾಕೋಕ್ಕಾದರೂ ಇರ್ಲಿ ಅಂತಾನೊ?"

ಚಂಪಾ ತಾನು ಓದುತ್ತಿದ್ದ ಕಾದಂಬರಿಯನ್ನು ಕುಳಿತಲ್ಲಿಂದಲೇ ಆತನ ಎದೆಗೆ ಎಸೆದಳು. ಬಿದ್ದ ರಭಸಕ್ಕೆ ಹೊದಿಕೆ ಮಡಚಿಹೋದ ಆ ಪುಸ್ತಕವನ್ನೆತ್ತಿಕೊಂಡು ಆತನೆಂದ:

"ಚಂಪಾ ಕುಚೇಷ್ಟೆ ಮಾಡ್ದೇ ಸುಮ್ನಿರು. ಆಯಾಸ ಆಗುತ್ತೆ ಅನ್ನೋದಾದ್ರೂ ತಿಳೀಬೇಡ್ವೆ?"

ಆಕೆ ಸುಮ್ಮನಾದಳು. ಆತ ಆ ಪುಸ್ತಕವನ್ನು ನೋಡುತ್ತ ಹೇಳಿದ:

"ಹೀಗೆಲ್ಲಾ ನೀನು ಪುಸ್ತಕ ಎಸೆದ್ರೆ, ಮುಂದೆ ರಾಧಾ ತಂದುಕೊಡೋದೇ ಇಲ್ಲ, ನೋಡು."

ಚಂಪಾವತಿಗೆ ರಾಧೆಯ ನೆನಪಾಯಿತು. ತಾನು ಪ್ರಸ್ತಾಪಿಸಬೇಕಾಗಿದ್ದ ವಿಷಯವನ್ನು ಯೋಚಿಸಿ ಆಕೆ ಮುಗುಳ್ನಕ್ಕಳು. ಆ ಮುಗುಳು ನಗುವನ್ನು ನೋಡಿ ಶಂಕರನಾರಾಯಣಯ್ಯ ಅದರ ಹಿಂದೆ ಬರುತ್ತಲಿದ್ದ ಮಾತುಗಳನ್ನು ನಿರೀಕ್ಷಿಸಿದ.

"ನಿಮ್ಮ ಸ್ನೇಹಿತ ಚಂದ್ರಶೇಖರಯ್ಯನಿಗೆ ಇನ್ನೂ ಮದುವೆ ಇಲ್ಲ ಅಲ್ವೆ ?"

"ಇಲ್ಲ, ನಿನ್ನ ಮಗಳ್ನ ಕೊಡೋಣಾಂತಿದೀಯೇನು ?"

"ರಾಧಾ ಮನೆ ಪಕ್ಕದಲ್ಲೇ ಆತ ಇರೋದು."

"ಪಾಪ ! ಇವತ್ತು ಗೊತ್ತಾಯ್ತೇನೊ ?"

ಚಂಪಾ ಮಾತನಾಡಲಿಲ್ಲ. ಅಹಲ್ಯೆಗೆ ಆದ ಅನುಭವ ರಾಧೆಗೂ ಆಗಬಹುದೆಂದು ಆಕೆ ಹೆದರಿದಳು. ಹಾಗಾಗಬಾರದು, ಹಾಗಾಗದಿರಲಿ—ಎಂಬ ಹಾರೈಕೆ ಅವಳದು.

ಚಂಪಾ ತಲೆ ಎತ್ತಿ ಗಂಡನ ಮುಖವನ್ನೇ ದಿಟ್ಟಿಸಿದಳು.

ಶಂಕರನಾರಾಯಣಯ್ಯ ಮೃದುವಾದ ಸ್ವರದಲ್ಲಿ ಮಾತನಾಡಿದ :

"ಚಂಪಾ, ಸುಮ್ನೆ ಏನಾದರೂ ಯೋಚ್ನೆ ಮಾಡ್ಬೇಡ."

"ನಿಮ್ಮ ಸ್ನೇಹಿತ. ಯಾವತ್ತಾದರೂ ಮಾತನಾಡಿಸಿ ನೋಡಿ."

"ಹೂಂ."

ಚಂಪಾವತಿಗೆ ಸಮಾಧಾನವಾಯಿತು.

........ಆ ವಾರವೇ ಒಂದು ಸಂಜೆ ಚಂದ್ರಶೇಖರಯ್ಯ ಹೋಟೆಲಿನಲ್ಲಿ ಶಂಕರನಾರಾಯಣಯ್ಯನಿಗೆ ಕಾಣಲು ಸಿಕ್ಕಿದ. ಚಂಪಾವತಿ ಹೇಳಿದ್ದುದನ್ನು ನೆನಸಿಕೊಳ್ಳುತ್ತ ಶಂಕರನಾರಾಯಣಯ್ಯ ಮಾತು ಹೇಗೆ ಆರಂಭಿಸಬೇಕೆಂದು ಚಡಪಡಿಸಿದ. ಚಂದ್ರಶೇಖರಯ್ಯ ಏನೆಂದುಕೊಳ್ಳುವನೋ ಎಂದು ಸಂಕೋಚವೆನಿಸಿತು. ಹೆಸರು-ಹಲಿಗೆ ಬರೆದುಕೊಟ್ಟದ್ದಕ್ಕಾಗಿ ಚಂಪಾ "ನಿಮ್ಮ ಸ್ನೇಹಿತ" ಎಂದು ಹೇಳುತ್ತಿದ್ದಳಾದರೂ ಹೇಳಿಕೊಳ್ಳುವಂತಹ ಸ್ನೇಹವೇನೂ ಅವರ ನಡುವೆ ಬೆಳೆದಿರಲಿಲ್ಲ. ಹೆಚ್ಚಾಗಿ ಬೆರೆಯಲು ಬಿಡುವು ದೊರೆಯದೆ ಇರುತ್ತಿದ್ದುದೇ ಅದಕ್ಕೆ ಕಾರಣ.

ಚಂದ್ರಶೇಖರಯ್ಯ ಸಿಗರೇಟು ಕೊಟ್ಟ. ಶಂಕರನಾರಾಯಣಯ್ಯ ಕಡ್ಡಿ ಕೊರೆದು ಇಬ್ಬರದಕ್ಕೂ ಹಚ್ಚಿದ. ಹೋಟೆಲಿನ ಆ ಮೂಲೆಯಲ್ಲಿ ಅಷ್ಟಾಗಿ ಜನರೂ ಇರಲಿಲ್ಲ.

"ಇನ್ನೊಂದು ಒನ್-ಬೈ-ಟು ಕಾಫಿ ತಗೊಳೋಣ್ವೆ ?" ಎಂದು ಚಂದ್ರಶೇಖರಯ್ಯ ಕೇಳಿದ. ಶಂಕರನಾರಾಯಣಯ್ಯ ಸಮ್ಮತಿಸೂಚಕವಾಗಿ ತಲೆಯಾಡಿಸಿದ.

ಮಾತು ಆರಂಭಿಸಲು ವಾತಾವರಣ ಅನುಕೂಲವಾಗಿದ್ದಂತೆ ಕಂಡಿತು.

"ಚಂದ್ರಶೇಖರಯ್ಯ, ನಿಮ್ಮನ್ನು ಒಂದು ವಿಷಯ ಕೇಳ್ಬೇಕೂಂತ, ತಪ್ಪು ತಿಳ್ಕೊಳ್ಳೊಲ್ಲ ತಾನೆ ?"

"ಕೇಳಿ, ಅದಕ್ಕೇನು ?"

" ವಿಷಯ ವೈಯಕ್ತಿಕ."

"ಏನೂ ಪರವಾಗಿಲ್ಲ. ನಾನಂತೂ ನನ್ನ ವೃತ್ತೀಲಿ ಯಾವಾಗ಼್ೂ ವೈಯಕ್ತಿಕ ಪ್ರಶ್ನೆನೇ ಕೇಳೋದು."

ಶಂಕರನಾರಾಯಣಯ್ಯನಿಗೆ ನಗು ಬಂತು.

"ನೀವು ಯಾಕೆ ಮದುವೆ ಮಾಡ್ಕೊಬಾರದು ?"

ಮಾಡ್ಕೊಂಡರಾಯ್ತು. ಮದುವೆಯಾದೋರೆಲ್ಲಾ ವಠಾರದಲ್ಲಿ ಅನುಭವಿಸ್ತಿರೋ ಸುಖ ಕಾಣಿಸೋಲ್ವೆ ?"

" ಅದೇನೋ ನಿಜ ಅನ್ನಿ."

ಶಂಕರನಾರಾಯಣಯ್ಯನಿಗೆ ಗೊತ್ತಿತ್ತು. ಅದು ಪೂರ್ತಿ ನಿಜವಾಗಿರಲಿಲ್ಲ. ತಾನಿರಲಿಲ್ಲವೆ ? ತಾನು ದಾಂಪತ್ಯ ಜೀವನವನ್ನು ರೌರವ ನರಕವೆಂದು ಭಾವಿಸಿದ್ದನೆ? ಆದರೆ, ಸಂಸಾರ ಸುಖದ ವಿಷಯವಾಗಿ ತನ್ನ ಅಭಿಪ್ರಾಯ ಬೇರೆ ಎಂಬುವನ್ನು ಅಲ್ಲಿ ಬಹಿರಂಗವಾಗಿ ಹೇಳಲು ಆತ ಸಮರ್ಥನಾಗಿರಲಿಲ್ಲ.

ಬಲು ಹಿತಕರವಾಗಿದ್ದ ಆ ಸಂಭಾಷಣೆಯನ್ನು ದೀರ್ಘಗೊಳಿಸೋಣವೆಂದು ಚಂದ್ರಶೇಖರಯ್ಯ ಹಾಗೆ ಹೇಳಿದ್ದರೆ, ಆ ಶಂಕರನಾರಾಯಣಯ್ಯ ಮಾತನ್ನೇ ನಿಲ್ಲಿಸಿಬಿಟ್ಟಿದ್ದ ! ಆತನ ಬಾಯಿ ತೆರೆಸಲು ತಾನೇ ಮಾತನಾಡಬೇಕಾಯಿತು.

"ಆದರೆ, ಗಂಡಸಾಗಲಿ ಹೆಂಗಸಾಗಲಿ ಆಯುಷ್ಯವೆಲ್ಲ ಒಂಟಿಯಾಗೇ ಇರಬೇಕೂಂತ ನನ್ನ ಅಭಿಪ್ರಾಯವಲ್ಲ."

ಅಷ್ಟು ಹೇಳಿ, ಹುಡುಗ ಮೇಜಿನ ಮೇಲಿರಿಸಿ ಹೋದ ಕಾಫಿಯ ಗ್ಲಾಸನ್ನು ಚಂದ್ರಶೇಖರಯ್ಯ ಕೈಗೆತ್ತಿಕೊಂಡ.

ನಿರಾಶನಾಗಬೇಕಾದ್ದಿಲ್ಲ ಎಂದುಕೊಳ್ಳುತ್ತಾ ಶಂಕರನಾರಾಯಣಯ್ಯ ಹೇಳಿದ:

"ನೀವು ಮದುವೆ ಮಾಡ್ಕೊಳ್ಳೋ ಹಾಗಿದ್ದರೆ ನಮ್ಮ ಕಡೇದೊಂದು ಹುಡುಗಿ ಇದೆ."

ಚಂದ್ರಶೇಖರಯ್ಯನ ಮುಖ ಒಮ್ಮೆಲೆ ಗಂಭೀರವಾಯಿತು. ಇನ್ನು ಆ ಮಾತುಕತೆಯನ್ನು ಬರಿಯ ತಮಾಷೆಯಾಗಿ ಪರಿಗಣಿಸುವಂತಿರಲಿಲ್ಲ.

"ಕ್ಷಮಿಸಿ, ಶಂಕರನಾರಾಯಣಯ್ಯ, ನನಗೆ ಹುಡುಗಿ ಗೊತ್ತಾಗಿದೆ. ಇನ್ನು ನಾಲ್ಕು ತಿಂಗಳಲ್ಲೇ ಮದುವೆ."

"ಸಂತೋಷ !"

ಶಂಕರನಾರಾಯಣಯ್ಯ ನಕ್ಕರೂ ರಾಧೆಗಾಗಿ ಚಂಪಾವತಿಯನ್ನು ಸಂತೋಷಪಡಿಸುವುದಕ್ಕಾಗಿ ತಾನೇನನ್ನೂ ಮಾಡಲಾಗಲಿಲ್ಲವಲ್ಲಾ ಎಂದು ಆತನಿಗೆ ಸಂಕಟವಾಯಿತು. ಆ ದುಃಖವನ್ನು ನುಂಗುವಂತೆ ಗ್ಲಾಸಿನಲ್ಲಿದ್ದ ಕಾಫಿಯನ್ನು ಒಂದೇ ಗುಟುಕಿಗೆ ಕುಡಿದ. ಬಲವಾಗಿ ಒಂದು ದಮ್ ಸಿಗರೇಟನ್ನು ಸೇದಿದ.

೭

ಶಂಕರನಾರಾಯಣಯ್ಯನ ಕಡೆಯ ಹುಡುಗಿಯ ಬಗ್ಗೆ ಚಂದ್ರಶೇಖರಯ್ಯನಿಗೆ ಕನಿಕರವಾಯಿತು.

"ಸೋ ಸಾರಿ ಶಂಕರನಾರಾಯಣಯ್ಯ. ನನ್ನಿಂದೇನೂ ಆಗ್ಲಿಲ್ಲ ಆಗ್ಹೋಯ್ತು."

"ಏನೂ ಪರವಾಗಿಲ್ಲ. ನೀವು ಮದುವೆ ಮಾಡ್ಕೋಬೇಕೂಂತ ನಿರ್ಧಾರ ಮಾಡಿದೀರಲ್ಲ—ಅದೇ ಸಂತೋಷ."

"ನನ್ನ ಗೊತ್ತಿನಲ್ಲಿ ಯಾವುದಾದರೂ ಗಂಡು ಇದ್ದರೆ ಹೇಳ್ತೀನಿ."

"ಓ ಯೆಸ್, ದಯವಿಟ್ಟು ಹೇಳಿ. ಉಪಕಾರವಾಗುತ್ತೆ."

"ಹೊರಡೋಣ್ವೊ? ಮನೆ ಕಡೆ ತಾನೆ?"

"ಹೌದು. ನಡೀರಿ."

....ಮನೆ ಸೇರಿದ ಮೇಲೆ ಶಂಕರನಾರಾಯಣಯ್ಯ ಬೇಸರದ ಧ್ವನಿಯಲ್ಲಿ ಹೇಳಿದ:

"ಚಂದ್ರಶೇಖರಯ್ಯನಿಗೆ ಆಗ್ಲೇ ಮದುವೆ ಗೊತ್ತಾಗ್ಬಿಟ್ಟಿದೆ ಕಣೇ."

"ಆ ವಿಷಯ ನಿಮಗಿಂತ ಮುಂಚೆ ನನಗೇ ತಿಳೀತು."

ಸಂತೋಷದ ಧ್ವನಿ. ಅದು ಅರ್ಥವಾಗದೆ ಹೆಂಡತಿಯ ಮುಖವನ್ನು ಆತ ಮಿಕಿಮಿಕಿ ನೋಡಿದ. ಚಂಪಾ ಕೇಳಿದಳು:

"ಅದ್ಯಾಕೆ ಹಾಗೆ ನೋಡ್ತಿದೀರಾ?"

"ರಾಧೆ ವಿಷಯ ಆತನ ಜತೇಲಿ ಪ್ರಸ್ತಾಪಿಸ್ಬೇಕೂಂತ ನೀನು ಹೇಳಿದ್ದ ಹಾಗೆ ನೆನಪು."

"ಹೌದು. ಏನಾಯ್ತು?"

"ಏನು ಆಗೋದು? ನೀನು ಸಲಹೆ ಮಾಡಿದ್ದೇ ತಡವಾಯ್ತು. ಅಂತೂ ರಾಧೆಗೆ ಭಾಗ್ಯ ಇಲ್ಲ."

"ರಾಧೆಗೆ ಭಾಗ್ಯ ಇಲ್ಲ? ಅದೇನ್ರೀ ಹಾಗಂದ್ರೆ? ಅವಳೇ ಕಣ್ರೀ ಹುಡುಗಿ!"

"ಯಾರು–ಚಂದ್ರಶೇಖರಯ್ಯ...."

"ಮದುವೆ ಪ್ರಸ್ತಾಪ ಮಾಡೋಕೆ ಹೋದೋರು ಹುಡುಗಿ ಯಾರೂಂತ ಕೂಡಾ ಕೇಳ್ಲಿಲ್ವೆ ನೀವು?"

'ಬೇಸ್ತು ಬಿದ್ದ' ಗಂಡನನ್ನು ಕಂಡು ಚಂಪಾವತಿಗೆ ಮೋಜೆನಿಸಿತು. ಆಕೆ ಬಿದ್ದುಬಿದ್ದು ನಕ್ಕಳು. ಆದರೆ ನಗೆಯ ಸುಖವನ್ನು ಬೇಕಾದ ಹಾಗೆ ಅನುಭವಿಸಲು ಆಕೆಯ ದೇಹ ಸಿದ್ಧವಿರಲಿಲ್ಲ. ಉಸಿರಿಗಾಗಿ ಆಕೆ ಅರ್ಧದಲ್ಲೇ ತಡೆದು ನಿಂತಳು.

ಹೆಂಡತಿಯ ದೇಹಸ್ಥಿತಿಯನ್ನು ಗಮನಿಸುತ್ತ ಗಂಡನೆಂದ:

"ಅಂತೂ ನಿನ್ನ ಬಯಕೆ ಈಡೇರಿತೊ ಇಲ್ವೊ?"

"ಆದರೆ ಯಾರಿಗೂ ಹೇಳ್ಬೇಡಿ. ಇದು ರಹಸ್ಯ!"

ಹಿರಿಯರಿಗೆ ತಿಳಿಯದೆಯೇ ಏನಾದರೂ ಸಂಭವಿಸಿದೆಯೋ ಏನೋ ಅನ್ನಿಸಿತು ಶಂಕರನಾರಾಯಣಯ್ಯನಿಗೆ.

"ಹಾಗಂದ್ರೆ ?"

"ರಂಗಮ್ಮ ಬಂದು ಗುಟ್ಟಾಗಿ ಹೇಳಿದ್ರು. ಅವರದೇ ಅಂತೆ ರಾಯಭಾರ. ಆದರೆ ಇನ್ನೂ ಎರಡು ತಿಂಗಳು ಯಾರಿಗೂ ಹೇಳ್ಬಾರ್ದು ಅಂದ್ರು."

"ಹಾಗೋ ?"

"ಮೀನಾಕ್ಷಮ್ಮ, ಕಮಲಮ್ಮ, ಪದ್ಮಾವತಿ, ಕಾಮಾಕ್ಷಿ—ಪ್ರತಿಯೊಬ್ಬರ ಹತ್ರಾನೂ ಹಾಗೇನೇ ಗುಟ್ಟಾಗಿ ರಂಗಮ್ಮ ಹೇಳಿಹೋದ್ರು."

ಇದು ತನ್ನ ಸರದಿಯೆಂದು, ಶಂಕರನಾರಾಯಣಯ್ಯ ಬಿದ್ದುಬಿದ್ದು ನಕ್ಕ.

ಬನಶಂಕರಿ

೧

"ಅಮ್ಮಿ, ದೇವರ ಮನೆಗೆ ಹೋಗಿ ಹಣತೆ ಹಚ್ಚಿಕೊಂಡು ಬಾರೇ."

"ಹೂಂ ಅತ್ತೆ."

ಪ್ರೀತಿಯ ಮಗುವಿಗೆ ಹೇಳಿದ ಹಾಗಿತ್ತು ಅತ್ತೆಯ ಮಾತು. ಸೊಸೆಯೂ ಅಷ್ಟೆ. ಹೂವಿನಷ್ಟು ಕೋಮಲ ಆ ಮಾರುತ್ತರದ ಧ್ವನಿ.

ಮೊಗಸಾಲೆಯಲ್ಲಿ ಮಾವ ಕುಳಿತಿದ್ದರು. ಅವರೆದುರಿಂದ ಹಾದು ಹೋಗಿ ಆ ಹಣತೆಯನ್ನೆತ್ತಿಕೊಳ್ಳಬೇಕು. ಹನ್ನೆರಡು-ಹದಿಮೂರರ ಆ ಪುಟ್ಟ ಹುಡುಗಿ ಮೈತುಂಬ ಸೆರಗು ಹೊದೆದುಕೊಂಡು ವಿನೀತಳಾಗಿ ಮಾವನೆದುರು ನಡೆದು ಬಂದಳು.

ಶಾಂತವಾದ ಸ್ವರದಲ್ಲಿ ಅವರು ಕೇಳಿದರು:

"ಸಾಲು ದೀಪ ಹಚ್ತೀಯೇನಮ್ಮಣ್ಣಿ?"

"ಹೂಂ, ಮಾವಯ್ಯ."

"ಹೌದು, ಹಚ್ಚಿಡಿ. ಆಗ್ನಿಂದ ಪಟಾಕಿ ಸುಡೋಕೆ ಹುಡುಗುರು ಕಾಯ್ತಾ ಇದಾರೆ."

"ಹೂಂ...."

ಪಟಾಕಿಯ ಪದೋಚ್ಚಾರ ಅಮ್ಮಿ ಲಗುಬಗೆಯಿಂದ ನಡೆಯುವಂತೆ ಮಾಡಿತು. ಎಣ್ಣೆ ತುಂಬಿದ್ದ ಹಣತೆಯನ್ನೆತ್ತಿಕೊಂಡು ಅವಳು ದೇವರ ಮನೆಗೆ ಹೋದಳು. ಹೊಸತಾಗಿ ಹೊಸೆದಿದ್ದ ಅರಳಿಯ ಬತ್ತಿ ಸೊಗಸಾಗಿ ಆ ಹಣತೆಯಲ್ಲಿ ಎಣ್ಣೆಯೊಡನೆ ಬೆರೆತು ಒರಗಿಕೊಂಡಿತ್ತು. ಒಂದು ವಾರಕ್ಕೆ ಹಿಂದೆಯೇ ದೀಪಾವಳಿಯ ಹಬ್ಬಕೆಂದು ಅತ್ತೆಯೂ ಸೊಸೆಯೂ ಜತೆಯಾಗಿ ಕುಳಿತು ಬತ್ತಿ ಹೊಸೆದಿದ್ದರು—ಮೆಲುದನಿಯಲ್ಲಿ ದೇವರ ನಾಮ ಹೇಳುತ್ತ.

ಸಿಂಗರಿಸಿದ್ದ ದೇವರೆದುರು ದೀಪ ಉರಿಯುತ್ತಿತ್ತು. ಅದರಿಂದ ಹಣತೆಗೆ ಬೆಳಕು ಅಂಟಿಸಿಕೊಂಡಳು ಅಮ್ಮಿ. ಗಾಳಿಗೆ ಆರದಂತೆ ಸೆರಗಿನಿಂದ ಹಣತೆಯನ್ನು ಮರೆಮಾಡಿ, ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತ, ಅವಳು ಹೊರಬಂದಳು.

ಹೊರಗೆ ಹುಡುಗರಿಬ್ಬರು ಗಲಾಟೆ ಮಾಡುತ್ತಿದ್ದರು.

"ಅಪ್ಪಯ್ಯ—ನೋಡಪ್ಪಯ್ಯ, ಹೊಡೀತಾನೆ ರಂಗ."

"ನಾನಲ್ಲ ಅಪ್ಪಯ್ಯ, ಸುಳ್ಳು ಹೇಳ್ತಾನೆ ಅಣ್ಣ."

ಅಮ್ಮಿಯ ಮೈದುನಂದಿರು ಯಾವಾಗಲೂ ಹಾಗೆಯೇ. ಹತ್ತು ವರ್ಷ-ಆರು ವರ್ಷ ವಯಸ್ಸಿನ ಆ ಹುಡುಗರು ಹೊರಗೆ ಗದ್ದೆಗಳಿಗೋ ತೋಟಕ್ಕೋ ಹೋದರೆ ಮನೆ ಬಿಕೋ ಎನ್ನುತ್ತಿತ್ತು. ಅದು ಸಹಿಸಲಾಗದ ಮೌನ. ಅಮ್ಮಿ ಯಾವಾಗಲೂ ಅವರು ಹಿಂತಿರುಗಿ ಬರುವುದನ್ನೇ ಇದಿರು ನೋಡುತ್ತಿದ್ದಳು. ಅತ್ತೆಯೂ ಆಗಾಗ್ಗೆ ಕೇಳುತ್ತಿದ್ದರು: "ರಂಗ ಎಲ್ಲೀ? ನಾಣಿ ಎಲ್ಲೀ ಅಮ್ಮಿ?"

ಆ ಹುಡುಗರೋ ಮಹಾ ತುಂಟರು. ಅತ್ತಿಗೆ ಎಂದು ಒಂದು ದಿನವೂ ಅಮ್ಮಿಯನ್ನು ಗೌರವಿಸಿದವರಲ್ಲ. ಸಾಲದುದಕ್ಕೆ ಏಕವಚನದ ಸಂಬೋಧನೆ. ಅಮ್ಮಿ ಮಾತ್ರ ಅವರು ಇವರು ಎಂದು ಮನ್ನಣೆಕೊಟ್ಟು ಮಾತನಾಡಬೇಕು. ಉದ್ದನೆ ಲಂಗೋಟಿಯ ಕೆದರಿದ ಜುಟ್ಟಿನ ಆ ಹುಡುಗರು ಕೀಟಲೆ ಕೊಟ್ಟು ಅಮ್ಮಿ ಅಳುವಂತೆ ಮಾಡಿ ಓಡಿಹೋದರಂತೂ ಅವರನ್ನು ಹಿಡಿಯುವವರೇ ಇಲ್ಲ.

ಮೊದಲು ಮೊಗಸಾಲೆ ಬೆಳಗಿತ್ತು. ಬಳಿಕ ಬಾಗಿಲ ಹೊರಗಿನ ಸಾಲು ದೀಪ.

ಕೈಗಳಲ್ಲಿ ಪಟಾಕಿಯ ಸರಮಾಲೆ ಹಿಡಿದು ನಾಣಿ-ರಂಗರು ಅರಚಿದರು:

"ಬೇಗ! ಹೂಂ—ಬೇಗ!"

ಅವರ ತಂದೆಯ ಸ್ವರ ಮೃದುವಾಗಿ, ಆದರೆ ದೃಢವಾಗಿ, ಕೇಳಿಸಿತು:

"ಯಾಕೋ—ಗಲಾಟೆ? ಸುಮ್ನಿರ್ಬಾರ್ದೇನೋ ಒಂದ್ನಿಮಿಷ?"

ಒಂದು ರೀತಿಯ ಸಂತೋಷ ಅಮ್ಮಿಗೆ. ತಾನು ಅಂಗಳದ ಸಾಲುದೀಪ ಹಚ್ಚಿದ ಮೇಲಲ್ಲವೆ ಅವರು ಪಟಾಕಿ ಹಾರಿಸಬೇಕು? ತನ್ನ ಹಿರಿಮೆಯನ್ನು ಆ ಹುಡುಗರು ಈಗಲಾದರೂ ಒಪ್ಪುವರೆಂದು ಅಮ್ಮಿಗೆ ಸಮಾಧಾನ.

ಹೊಸ್ತಿಲು ದಾಟಿ ಅಂಗಳಕ್ಕಿಳಿದು ತುಳಸಿಕಟ್ಟೆಯ ಬಳಿ ಸಾರಿದಳು ಅಮ್ಮಿ, ಕುಲುಕುಲು ನಗುತ್ತ. ರಂಗ-ನಾಣಿಯರಿಬ್ಬರಿಗೂ ಆ ಅತ್ತಿಗೆಯನ್ನು ಚೆನ್ನಾಗಿ ಥಳಿಸಬೇಕು ಎನ್ನುವಷ್ಟು ಸಿಟ್ಟು. ಆದರೆ ಆಗ ಅವರು ಅಸಹಾಯರು. ಅಂಗಳದ ಸುತ್ತಲಿನ ಸಾಲು ದೀಪಗಳು ಹತ್ತಿಕೊಂಡ ಮೇಲೆಯೇ ಮೊದಲ ಪಟಾಕಿ ಹಾರ ಬೇಕು.

ಮನೆಯ ಸೊಸೆ ಬೇಕುಬೇಕೆಂದೇ ನಿಧಾನಿಸುತ್ತ ಕೆಲಸ ಮಾಡಿದಳು. ತನ್ನ ಕೈಯಲ್ಲೂ ಪಟಾಕಿ ಚಟ್ ಚಟ್ ಎನ್ನಬೇಕೆಂಬ ಆಸೆ ಅವಳಿಗೆ. ಆದರೆ ಅವಳೀಗ ಬರಿಯ ಹುಡುಗಿಯಲ್ಲ. ಆಕೆ ಪಟಾಕಿ ಕೈಗೆತ್ತಿಕೊಂಡರೆ ಅತ್ತೆ ಮಾವ ಏನೆಂದಾರು? ಈಗ ಹುಡುಗರ ಆಟವನ್ನು ನೋಡುತ್ತ ಗಂಭೀರವಾಗಿ ನಿಲ್ಲುವುದೇ ಅವಳಿಗೆ ಭೂಷಣ.

ಕೊನೆಯ ಹತ್ತು ಹಣತೆಗಳನ್ನು ಹಚ್ಚಿಟ್ಟು ಅಮ್ಮಿ ಮನೆಯೊಳಕ್ಕೆ ಓಡಬೇಕು. ಇಲ್ಲದೆ ಹೋದರೆ ಆ ಮೈದುನಂದಿರು ಪಟಾಕಿ ಹಚ್ಚಿ ತನ್ನ ಮೇಲೆ ಎಸೆಯುವುದು ಖಂಡಿತ. ಕೊನೆಯ ದೀಪವೂ ಬೆಳಗಿದ ಮೇಲೆ, ಕೈಯಲ್ಲಿದ್ದ ದೊಡ್ಡ ಹಣತೆಯನ್ನು ಅಮ್ಮಿ ತುಳಸಿಕಟ್ಟೆಯ ಮುಂದಿಟ್ಟಳು.

ಕಿರಿಯವನು-ರಂಗ-ಅತ್ತಿಗೆಯನ್ನು ಅಟ್ಟಿಸಿಕೊಂಡೇ ಬಂದ. ಆದರೆ ಅಮ್ಮಿ ಇನ್ನೂ ಸುರಕ್ಷಿತಳು. ತಂದೆಯ ಸಮ್ಮತಿ ದೊರೆತ ಮೇಲಲ್ಲವೆ ಹುಡುಗರು ಪಟಾಕಿ ಹಚ್ಚುವುದು ?

ಆದರೆ ಅಮ್ಮಿ, ಹೆದರಿಕೊಂಡವಳಂತೆ ನಟಿಸುತ್ತಾ, "ನೋಡಿ ಅತ್ತೇ" ಎಂದು ದೂರುತ್ತಾ ಮನೆಯೊಳಕ್ಕೆ ಧಾವಿಸಿದಳು.

ಹಿರಿಯವನು-ನಾಣಿ-ಅಂಗ್ಯೆಯ ಹಿಂಭಾಗದಿಂದ ಸಿಂಬಳ ಒರೆಸುತ್ತಾ ಅಸಹನೆಯ ಧ್ವನಿಯಿಂದ ಬಾರಿ ಬಾರಿಗೂ ಕೇಳಿದ :

"ಅಪ್ಪಯ್ಯ, ಪಚ್ಚಲಾ ಅಪ್ಪಯ್ಯ ? ಅಪ್ಪಯ್ಯ . . . "

ಮಧ್ಯ ವಯಸ್ಸಿನ ಆ ದಂಪತಿ ಬಾಗಿಲ ಹೊರಬಂದು ನಿಂತರು. ಅಮ್ಮಿ ಅತ್ತೆಯ ಸೆರಗು ಹಿಡಿದು ಹಿಂಬದಿಯಿಂದ ಇಣಿಕಿ ಇಣಿಕಿ ನೋಡಿದಳು.

''ಹುಷಾರಿ ರಂಗಾ, ಹುಷಾರಿ ನಾಣಿ, ಛಾವಣಿ ಹುಲ್ಲು ಹುಷಾರಿ. ಅಂಗಳದ ಕೊನೇಲಿ ನಿಂತ್ಕೊಂಡು ಹಾರಿಸಿ . . . . "

''ಹೂನಪ್ಪಯ್ಯಾ. ಹಂಗೇ ಮಾಡ್ತೀವಿ.

ರಂಗ ಮಾಲೆಯಿಂದ ಬಿಚ್ಚಿದೊಂದು ಪಟಾಕಿಯನ್ನು ಮೊದಲು ಹಾರಿಸಿದ. ಅದು ಆರಂಭ. ಆ ಬಳಿಕ ಹುಡುಗರ ಹುಚ್ಚು ಕುಣಿದಾಟದೊಡನೆ, ಹಿರಿಯರ ನಗೆ ಸಂತೋಷದೊಡನೆ, ಅಮ್ಮಿಯ ಆನಂದೋತ್ಸಾಹದೊಡನೆ, ಪಟಾಕಿಗಳು ಚಟ್ ಚಟಲೆಂದುವು. ಸುರು ಸುರು ಬಾಣಗಳು ಆಕಾಶಕ್ಕೆ ನೆಟ್ಟುವು. ನಕ್ಷತ್ರಕಡ್ಡಿಗಳು ಮೌನವಾಗಿ ಬಣ್ಣ ಬಣ್ಣವಾಗಿ ಉರಿದು ಸಾವಿರ ನಕ್ಷತ್ರಗಳನ್ನು ಉಗುಳಿದುವು.

ಆ ಬೆಳಕು ತಾರೆಗಳನ್ನೆಲ್ಲ ಅಂಗ್ಯೆಯಲ್ಲಿ, ಸೆರಗಿನಲ್ಲಿ, ಹಿಡಿಯಬೇಕೆಂಬ ಬಯಕೆ ಅಮ್ಮಿಗೆ. ಆದರೆ ಗೃಹಿಣಿಯಾದ ಆಕೆ ಹಾಗೆ ಮಾಡಲು ಸ್ವತಂತ್ರಳಲ್ಲ.

ಇಷ್ಟಿದ್ದರೂ ಒಂದು ವಿಷಯದಲ್ಲಿ ಮಾತ್ರ ಯಾರಿಗೂ ಇಲ್ಲದ ಹೆಮ್ಮೆ ಅವಳ ಆಸ್ತಿಯಾಗಿತ್ತು. ಪೇಟೆಯಿಂದ ತನ್ನ ಪತಿದೇವರು ಕಳುಹಿದ್ದರಿಂದಲ್ಲವೆ, ಈ ದಿನ ಪಟಾಕಿಯಾಟ ಸಾಧ್ಯವಾದುದು ?

ಆ ಮಧ್ಯಾಹ್ನ ಬಲು ಜಂಭದಿಂದ ನಾಣಿ ಹೇಳಿದ್ದ :

" ಏ ಅಮ್ಮಿ....ಇವತ್ತು ಸಾಯಂಕಾಲ ಎಂಥೆಂಥ ಪಟಾಕಿ ಹಾರಿಸ್ತೀವಿ ಗೊತ್ತಾ ? "

ರಂಗ ರಾಗವೆಳೆದಿದ್ದ :

''ಆನೆ ಪಟಾಕಿ....ಕುದುರೆ ಪಟಾಕಿ...."

ಅಮ್ಮಿಗೆ, ತನಗೆ ಆ ಭಾಗ್ಯವಿಲ್ಲವೆಂಬ ದುಃಖ ಒಂದೆಡೆ: ಪಟಾಕಿಗಳನ್ನು ಕಳುಹಿಸಿಕೊಟ್ಟುದು ತನ್ನ ಗಂಡನೆಂದು ಆ ಮೈದುನಂದಿರು ಹೇಳಲಿಲ್ಲವೆಂಬ ಸಿಟ್ಟು ಒಂದೆಡೆ. ಆ ಭಾವನೆಗಳಿಂದ ನೊಂದು ಅವಳ ಸುಂದರ ಮುಖ ಸಿಂಡರಿಸಿತು.

ನೋವಿನ ಧ್ವನಿಯಲ್ಲಿ ಒಂದು ಪ್ರಶ್ನೆ:

"ಆ ಪಟಾಕಿ ಎಲ್ಲಿಂದ್ಬಂತೋ ?"

"ಚಿಕ್ಕಮಗಳೂರಿಂದ."

"ಹುಂ, ಯಾರೊ ಕಳಿಸ್ಕೊಟ್ಟೋರು ?"

"ನಮ್ಮಣ್ಣ ಕಣೇ–ನಮ್ಮಣ್ಣ !"

ಮತ್ತೆ ಸೋಲು ಅಮ್ಮಿಗೆ. ರಾತ್ರೆ ಅಂಚೆಯವನ ಜತೆಗೂಡಿ ಅವರು ಬರುವರು ! ಆಗ ಸಮಯ ಸಾಧಿಸಿ ಗುಟ್ಟಾಗಿ ಅವರಿಗೆ, ತನಗಾದ ಅವಮಾನದ ವರದಿಯೊಪ್ಪಿಸ ಬೇಕು ಎಂದು ಅಮ್ಮಿ ಯೋಚಿಸಿದಳು.

ಹಾಗೆ ಎಷ್ಟೊಂದು ಸಾರಿ ಯೋಚಿಸಿರಲಿಲ್ಲ! ಆದರೆ ಗಂಡ ಬಂದಾಗ ಎಂದೂ ಅಂತಹ ಮಾತನ್ನು ಅಮ್ಮಿ ಆಡಿದವಳಲ್ಲ. ಅಷ್ಟೇಕೆ? ಕ್ಷಣ ಕಾಲ ಎಂದಾದರೊಮ್ಮೆ ಗೋಪ್ಯದಲ್ಲಿ ಸಂಧಿಸಿದಾಗ ಹ್ಞಾ—ಹ್ಞೂ ಹೊರತಾಗಿ ಹೆಚ್ಚು ಮಾತನ್ನೇ ಅವಳು ಆಡಿದವಳಲ್ಲ.

....ಅವರ ಆಗಮನ....ಸಾಲುದೀಪಗಳ ಬೆಳಕಿನ ಆವರಣದೊಳಗೆ ಆ ಹುಡುಗ ರಿಬ್ಬರು ಹುಚ್ಚೆದ್ದು ಕುಣಿಯುತ್ತಿದ್ದಾರೆ. ಕತ್ತಲು—ಬೆಳಕುಗಳ ನಡುವೆ ಕಣ್ಣು ಮುಚ್ಚಾಲೆಯಾಟ ನಡೆದಿದೆ. ಅದನ್ನು ಅಮ್ಮಿ ಬಾಗಿಲ ಬಳಿ ನಿಂತು ನೋಡುತ್ತಿ ದ್ದಾಳೆ. ಹಾಗೆ ನೋಡುತ್ತಿದ್ದರೂ ಅವಳ ದೃಷ್ಟಿ ಮುಂದಕ್ಕೆ ಹರಿದಿದೆ—ಮುರಿದಕ್ಕೆ. ದೂರ....ಗುಡ್ಡ ಬೆಟ್ಟಗಳನ್ನು ದಾಟಿ, ಹೊಲಗಳಾಚೆ, ದಟ್ಟನೆಯ ಮರಗಳ ನಡುವೆ, ಕಾಲುಹಾದಿ ಹಿಡಿದು ಅವರಿಬ್ಬರೂ ನಡೆದು ಬರುತ್ತಿರಬೇಕು—ಅಂಚೆಯವನು ಮತ್ತು ಅವರು....

ಸ್ವಲ್ಪ ಹೊತ್ತಿನಲ್ಲಿ ಪಟಾಕಿ ಸುಟ್ಟು ಮುಗಿಯಿತು. ಅತ್ತೆ ಅಡುಗೆ ಮನೆಗೆಂದು ಒಳ ಹೋದರು.

ಮಾವ ಎಳೆಯರನ್ನು ಉದ್ದೇಶಿಸಿ, "ಇನ್ನು ಸಾಕು. ಬನ್ನಿರೋ ಒಳಕ್ಕೆ," ಎಂದರು.

ಅಮ್ಮಿ ಅಂಗಳದ ಬಲಮೂಲೆಯಲ್ಲಿ ಬಿದಿರು ತಟಿಕೆಗಳು ಮರೆಮಾಡಿದ್ದ ಬಚ್ಚಲು ಮನೆಗೆ ಹೋದಳು. ಮುಂಜಾವದ ಹಬ್ಬದ ಸ್ನಾನಕ್ಕೆಂದು ನೀರು ಹೊತ್ತು ನಿಂತಿತ್ತು ದೊಡ್ಡ ಗುಡಾಣ. ಅತ್ತೆ ಅದರ ಸುತ್ತಲೂ ಚಿತ್ತಾರ ಬರೆದಿದ್ದರು. ಅಮ್ಮಿ ಅದರ ಕೊರಳಿಗೆ ಹೂವಿನ ಹಾರ ಕಟ್ಟಿದ್ದಳು.

....ಬೆಳಗು ಮುಂಜಾನೆ ಅತ್ತೆ ಎಲ್ಲರನ್ನೂ ಬೇಗ ಎಬ್ಬಿಸುವರು. ಆ ಬಳಿಕ ದೇವರ ದೀಪದ ಮುಂದೆ ಗಂಡನನ್ನು ಕುಳ್ಳಿರಿಸಿ, ಹಸಿ ಗರಿಕೆ ಹುಲ್ಲಿನ ಚಿಗುರಿನಿಂದ

ಅಮ್ಮಿ ಮೂರು ಬಾರಿ ಆತನ ಮೈಗೆ ಎಣ್ಣೆ ಇಳಿಸಬೇಕು. ಆಮೇಲೆ ಆತ ಬೇಡ ವೆನ್ನದೇ ಹೋದರೆ ಆ ಮೈ ಕೈಗಳಿಗೆ, ತಾನೇ ಎಣ್ಣೆ ತೀಡಬೇಕು.

ಆ ಯೋಚನೆಯಿಂದಲೇ, ಗುಡಾಣವನ್ನು ಮುಟ್ಟಿನಿಂತಿದ್ದ ಅಮ್ಮಿಯ ಮುಖ ಕೆಂಪಗಾಯಿತು. ಮದುವೆಯಾದೊಡನೆಯೇ ಮಾವನ ಮನೆಗೆ ಬಂದಿದ್ದಳು ಅಮ್ಮಿ—ತಾಯಿ ತಂದೆಯರಿಲ್ಲದ ತಬ್ಬಲಿ ಹುಡುಗಿ. ತವರಿನಲ್ಲಿ ಹಿಂದೆ ಉಳಿದವನೊಬ್ಬ ಸೇ-ವಯಸ್ಸಿನಲ್ಲಿ ನಾಲ್ಕು ವರ್ಷ ಹಿರಿಯವನಾದ ಆಕೆಯ ಅಣ್ಣ. ಗಂಡನ ಮನೆಗೆ ಬಂದ ಪಟಾಣಿ ಹುಡುಗಿ ಅಮ್ಮಿ ಗೃಹಲಕ್ಷ್ಮಿಯಾದಳು; ಮಾವ ಅತ್ತೆಯರ ಪ್ರೀತಿ ಪಾತ್ರಳಾದ ಮುದ್ದಿನ ಸೊಸೆಯಾದಳು.

ಇದು ಈ ಮನೆಯಲ್ಲಿ ಆಕೆಯ ಎರಡನೆಯ ದೀಪ ವಳಿ. ಕಳೆದ ಬಾರಿ ಗಂಡ ಊರಲ್ಲೇ ಇದ್ದ. ಹದಿನೇಳರ ಆ ಅಣ್ಣ, ತಾನು ಮದುವೆಯಾದ ಸದ್ಗೃಹಸ್ಥ ನೆಂಬುದನ್ನೂ ಮರೆತು, ತಮ್ಮಂದಿರ ಜತೆ ಸೇರಿ ಪಟಾಕಿ ಸುಟ್ಟಿದ್ದ. ಅದು, ಅವರ ತಂದೆ ಹಿಂದೆಯೇ ನಗರದಿಂದ ತಂದು ತೆಗೆದಿರಿಸಿದ್ದ ಪಟಾಕಿ....ಆ ಸಾರೆಯೂ ಗಂಡನಿಗೂ ಎಣ್ಣೆ ತೀಡೆಂದು ಅತ್ತೆ ತನಗೆ ಹೇಳಿದ್ದರು. ಆದರೆ ತನಗೆ ನಾಚಿಕೆ ಯಾಗಿತ್ತು, ಗಂಡನಿಗೂ ನಾಚಿಕೆಯಾಗಿತ್ತು. ಗರಿಕೆ ಹುಲ್ಲಿನ ಶಾಸ್ತ್ರ ಮುಗಿದೊಡನೆ ಆತ, ತಲೆತಗ್ಗಿಸಿ, ಕೇಳಿಯೂ ಕೇಳಿಸದ ಧ್ವನಿಯಲ್ಲಿ, "ನಾನೇ ಹಚ್ಕೋತೀನಿ," ಎಂದಿದ್ದ.

ಇಲ್ಲ, ಈ ಸಾರೆ ಹಾಗಾಗಬಾರದು.

ಅತ್ತೆಯ ಸ್ವರ ಒಳಗಿನಿಂದ ಬಂತು :

"ಅಮ್ಮೀ, ಎಲ್ಹೋದಿಯೇ?"

"ಬಂದೇ ಅತ್ತೆ...."

ಪಡಸಾಲೆಯಲ್ಲಿ ನಾಣಿ ಮತ್ತು ರಂಗ, 'ಹಾಗಲ್ಲ ಹೀಗೆ' ಎಂದು ಏರುದನಿ ಯಲ್ಲಿ ಏನೋ ಚರ್ಚೆ ನಡೆಸಿದ್ದರು.

ಅವರ ತಂದೆ ಬಂದು ಚಾಪೆಯ ಮೇಲೆ ಕುಳಿತೊಡನೆ ರಂಗ ಕೇಳಿದ :

"ಅಪ್ಪಯ್ಯ. ಕಥೆ ಹೇಳು ಅಪ್ಪಯ್ಯ."

"ಯಾವ ಕಥೇನೋ?"

"ನರಕಾಸುರ ವಧೆ ಕಥೆ ಅಪ್ಪಯ್ಯ."

ಅವರ ಜತೆಯಲ್ಲೇ ನಾಣಿಯ ಸ್ವರ :

"ಬಲೀದು, ಬಲಿ ಚಕ್ರವರ್ತೀದು ಅಪ್ಪಯ್ಯ...."

ಆ ಬಳಿಕ ಕಥೆಗಳು—

ಅಮ್ಮಿಗೂ ಅಲ್ಲೀ ಕುಳಿತು ಕೇಳುವ ಆಸೆ. ಆದರೆ ಆ ಪುಟ್ಟ ಗೃಹಿಣಿಗೆ ಕಥೆ ಕೇಳಲು ಬಿಡುವಿಲ್ಲ. ಒಳಗೆ ಅಡುಗೆಯ ಕೆಲಸದಲ್ಲಿ ಅತ್ತೆಗೆ ನೆರವಾಗಬೇಕು. ಅವರು ಬರುವ ಹೊತ್ತಿಗೆ—

"ಚಿಕ್ಕಮಗಳೂರಿನಿಂದ ಗಾಡಿ ಕಟ್ಟಿದ್ದೇ ತಡವಾಯ್ತೇನೊ...." ಎಂದು ತಮ್ಮಷ್ಟಕ್ಕೆ ಅತ್ತೆ ಆಡಿಕೊಂಡರು.

ಅಮ್ಮಿ ಚಿಕ್ಕಮಗಳೂರು ನೋಡಿದವಳಲ್ಲ. ಆದರೆ ಅತ್ತೆ ಬಾರಿಬಾರಿಗೂ ಆ ಊರಿನ ವರ್ಣನೆ ಮಾಡಿದ್ದರು. ಅಲ್ಲಿ ದೊಡ್ಡ ಸಾಹುಕಾರರೊಬ್ಬರ ಅಂಗಡಿಯಲ್ಲಿ ಅಮ್ಮಿಯ ಗಂಡ ಲೆಕ್ಕ ಬರೆಯುವ ಗುಮಾಸ್ತೆ. ಒಂದು ವರ್ಷದ ಅವಧಿಯಲ್ಲೆ ಬಲು ನಂಬಿಗಸ್ಥನೆನಿಸಿಕೊಂಡು ತಿಂಗಳಿಗೆ ಆತ ಹತ್ತು ರೂಪಾಯಿ ಸಂಬಳ ಪಡೆಯುತ್ತಿದ್ದ. ದೊಡ್ಡವನಾದ ಹಾಗೆ ಅವನಿಗೆ ದೊಡ್ಡ ದೊಡ್ಡ ಸರಕಾರಿ ಹುದ್ದೆಗಳು ಸಿಗುವುದೆಂದು ಅತ್ತೆ ಹೇಳುತ್ತಿದ್ದರು, ಮಾವನೂ ಹೇಳುತ್ತಿದ್ದರು.

ಚಿಕ್ಕಮಗಳೂರಿನಿಂದ ಹಳ್ಳಿಗೆ ಬರಬೇಕಾದರೆ ಎತ್ತಿನ ಗಾಡಿಯಲ್ಲಿ ಹನ್ನೆರಡು ಮೈಲು ದೂರ ಬರಬೇಕು. ಕಲ್ಲುಕೆಸರಿನ ಕೊರಕಲು ಹಾದಿ. ಆಮೇಲೆ ಕಾಲ್ನಡಿಗೆ ....ಹಾಗೆ ಹಳ್ಳಿ ಸೇರಬೇಕು.

ಅಡುಗೆಯ ಸಿದ್ಧತೆ ಎಲ್ಲವೂ ಮುಗಿದು ಅತ್ತೆ "ರಾಮಾ" ಎಂದು ಬೆನ್ನು ನಿಡಿದುಕೊಂಡರು.

ಹೊರಗೆ ಮಾವ ಕಥೆ ಹೇಳುತ್ತಿದ್ದುದೂ ನಿಂತಿತ್ತು.

"ಲಕ್ಷ್ಮೀ, ಲಕ್ಷ್ಮೀ...." ಎಂದು ಅವರು ಕರೆದರು.

"ಬಂದೆ."

"ಸುಳಿವೇ ಇಲ್ವಲ್ಲೇ ಇವರಿಬ್ಬರದೂ."

"ತಡವಾಗಿ ಗಾಡಿಕಟ್ಟಿದರೇನೊ ?"

ಅತ್ತೆಗೆ ಹೊಳೆಯುತ್ತಿದ್ದ ಕಾರಣ ಅದೊಂದೇ.

"ಹಬ್ಬದ ದಿವಸ. ಸ್ವಲ್ಪ ಬೇಗ್ನೆ ಹೊರಡ್ಬೇಕೂಂತ ಗ್ಯಾನ ಇರ್ಬೇಡ್ವೇನು ?"

"..............................."

"ಅಥ್ವಾ ಸಂತೆ ಬೀದೀಲಿ ಖರೀದಿ ಮಾಡ್ತಾ ತಡವಾಯ್ತೋ ಏನೊ ?"

"ಇದ್ದರೂ ಇದ್ದೀತು."

ಮಾವನ ಸಂದೇಹವೇ ಅಮ್ಮಿಯ ಸಂದೇಹ. ಖರೀದಿಗೆ ನಿಂತು ತಡವಾದುದೇ ಸರಿ. ತಾನು ಬೇರೆ, ಮೇಲೆ ಕನ್ನಡಿಯಿದ್ದ ಕುಂಕುಮದ ಪುಟ್ಟ ಕರಡಿಗೆಯೊಂದು ಇದ್ದರಾದೀತೆಂದು ಎಂದೋ ಒಮ್ಮೆ ಅತ್ತೆಗೆ ಹೇಳಿರಲಿಲ್ಲವೆ ?

ಹೊತ್ತು ಕಳೆಯಿತು ಬಲು ನಿಧಾನವಾಗಿ.

ಹೊಲಗಳ ನಡುವೆ ದೂರವಿದ್ದ ಮನೆಗಳಿಂದಲೂ ಆಗೊಮ್ಮೆ ಈಗೊಮ್ಮೆ ಪಟಾಕಿಗಳ ಸದ್ದು ಕೇಳಿಬರುತ್ತಿತ್ತು. ನಾಣಿ ಮತ್ತು ರಂಗ ಬಾಗಿಲ ಹೊರಗೆ ನಿಂತು, "ಅದು ಕಿಟ್ಟೀ ಮನೇದು, ಅದು ಮಾವನ ಮನೇದು" ಎಂದು ಲೆಕ್ಕ ಹಾಕುತ್ತಿದ್ದರು. ಹಳ್ಳಿಯ ಅಂಚಿನಲ್ಲಿ ಎತ್ತರದಲ್ಲಿ ಬೆಟ್ಟದ ತಪ್ಪಲಲ್ಲಿದ್ದ ಹೊಲೆಯರ ಕೇರಿಯಿಂದ ಢಮರು ಢಮಾ—ಡಿಕ್ಕಿ ಢಮಾ—ಡಿಕ್ಕಿ ಎಂದು ಪಲ್ಲವಿ ನುತಿಸುತ್ತಿತ್ತು.

ಸಮೀಪದಲ್ಲೇ ಯಾರೋ ಶಿವನ ಮಹಿಮೆಯನ್ನು ಕುರಿತು ಹಾಡುತ್ತಿದ್ದರು. ಕತ್ತಲೆಯನ್ನು ಭೇದಿಸುತ್ತ, ಭತ್ತದ ಸಸಿಗಳ ಮೇಲಿಂದ ಹಾದು, ಮಾವು ಹಲಸುಗಳ ರೆಂಬೆ ಕೊಂಬೆಗಳ ನಡುವೆ ತೂರಿಕೊಂಡು, ಇಂಪಾದ ಮೋಹಕವಾದ ಆ ಸ್ವರ ಗೊತ್ತು ಗುರಿ ಇಲ್ಲದೆ ಸಂಚಾರಮಾಡುತ್ತಿತ್ತು.

ಮಳೆ ನಿಂತ ಅನಂತರದ ಚಳಿಗಾಳಿ ಬಾಗಿಲು ಗವಾಕ್ಷಿಗಳ ಮೂಲಕ ಮನೆಯ ಒಳನುಗ್ಗಿ ಬರಿದು ಮೈಗಳಿಗೆ ಕಚಕುಳಿ ಇಟ್ಟಿತು ; ಸೊಡರುಗಳು ಅತ್ತಿತ್ತ ನರ್ತಿಸುವಂತೆ ಮಾಡಿತು.

ಹುಡುಗರಿಬ್ಬರೂ ತಾಯಿಗೆ ಸುತ್ತು ಸುತ್ತು ಬರುತ್ತ, "ಅಮ್ಮ, ಅಣ್ಣ ಬರಲಿಲ್ವಲ್ಲೇ....ಹಸಿವಾಗುತ್ತಲ್ಲೇ...." ಎಂದರು.

"ಹುಡುಗರಿಗೆ ಬಡಿಸು ಲಕ್ಷ್ಮಿ. ಬೆಳಗಿನಿಂದ ಕುಣೀತಾ ಇದ್ದಾರೆ. ನಿದ್ದೆ ಹೋಗಲಿ" ಎಂದರು ಮಾವ.

"ಹೂಂ, ನಾಳೆ ಬೆಳಿಗ್ಗೆ ಸ್ನಾನಕ್ಕೆ ಬೇರೆ ಬೇಗನೆ ಎಬ್ಬಿಸ್ಬೇಕು," ಎನ್ನುತ್ತ ಅತ್ತೆ ಹುಡುಗರನ್ನು ಒಳಕ್ಕೆ ಒಯ್ದರು.

ಅಮ್ಮಿಯೂ ಒಳಹೋಗಿ ಬಡಿಸಲು ನೆರವಾದಳು. ಇಷ್ಟು ಹೊತ್ತಿಗಾಗಲೇ ಅವರು ಬರಬೇಕಾಗಿತ್ತು. ಬಂದಿದ್ದರೆ, ಮಡಿಸ್ನಾನ ಮುಗಿಸಿ ಸಂಧ್ಯಾವಂದನೆ ಮಾಡಿ, ಅವರೂ ಊಟಕ್ಕೆ ಕೂಡುತ್ತಿದ್ದರು. ಮಾವ ಕೂಡಾ. ಆಗ ಎಲ್ಲರಿಗೂ ಅತ್ತೆ ಮತ್ತು ತಾನು ಬಡಿಸುತ್ತಿದ್ದೆವು....

ಹಾಗೆ ಯೋಚಿಸುತ್ತ ಯೋಚಿಸುತ್ತ ಅಮ್ಮಿ ಹುಡುಗರಿಗೆ ಒಂದು ಹೋಳಿಗೆ ಹೆಚ್ಚು ಬಡಿಸಿದಳು. ಇಲ್ಲವೆ ಒಂದು ಕಡಿಮೆ. ಪರಿಣಾಮವಾಗಿ ಜಗಳ, ಗದ್ದಲ, ನಗೆಮಾತು.

ಎಳೆಯರು ಉಂಡು ಮಲಗಿದ ಮೇಲೂ ಅತ್ತೆ ಮಾವ ಸೊಸೆ ಕಾದು ನಿಂತರು. ಅಮ್ಮಿ ಮನೆಯೊಳಗೂ ಹೊರಗೂ ಸೊಡರುಗಳನ್ನು ಒಂದೊಂದಾಗಿ ಸರಿಪಡಿಸಿದಳು. ಕ್ಷಣಕ್ಷಣವೂ ಅವಳ ದೃಷ್ಟಿ ದೂರ ಹರಿಯುತ್ತಿತ್ತು. ಆ ಕತ್ತಲಲ್ಲಿ ಚಲಿಸುವ ಕಂದೀಲನ್ನು ಅವಳು ಹುಡುಕಿದಳು. ಹಳ್ಳಿಗೆ ಬರುವ ಹಾದಿಯಿಂದ ಮಾತುಕತೆಯ ಧ್ವನಿಯೇನಾದರೂ ಕೇಳಿ ಬರುತ್ತಿದೆಯೇನೋ ಎಂದು ಕಿವಿ ನಿಗುರಿಸಿದಳು.

"ಅಮ್ಮೀ, ಒಳಕ್ಕೆ ಬಾಮ್ಮಾ. ಆ ಚಳೀಲಿ ಯಾಕೆ ಅಲ್ಲಿ ನಿಂತಿದ್ದೀಯಾ? ಬಾ ಒಳಕ್ಕೆ" ಎಂದರು ಮಾವ ಮೃದುವಾಗಿ.

—ಅಥವಾ ಈ ದಿನ ಬರುವುದೇ ಇಲ್ಲವೇನೋ—ನಾಳೆ ಬರುವರೇನೋ........

ಅಮ್ಮಿಯ ಕಣ್ಣಂಚಿನಲ್ಲಿ ನೀರು ತುಳುಕಾಡಿತು. ಒಲ್ಲದ ಕಾಲುಗಳನ್ನು ಎಳೆದುಕೊಂಡು ಅವಳು ಒಳಹೋದಳು.

ಹೊತ್ತು ಕಳೆಯಿತು, ಮತ್ತಷ್ಟು ನಿಧಾನವಾಗಿ.

ಅಮ್ಮಿಯ ಮಾವ ಒಂದು ಪುಸ್ತಕ ತೆರೆದು ಎರಡು ಪುಟ ಓದಿದರು. ಯಾವುದೋ ದಸ್ತಾವೇಜು ತೆರೆದು ನಾಲ್ಕಾರು ಪುಟ ಮಗುಚಿ ಹಾಕಿದರು. ಅದೂ

ಬೇಸರವಾಯಿತು. ಕನ್ನಡಕವನ್ನು ಮೂಗಿನ ಮೇಲಿಂದ ಇಳಿಸಿ ಮಡಚಿಟ್ಟು, ಅತ್ತಿತ್ತ ಶತಪಥ ತುಳಿದರು.

ಅಮ್ಮಿ ದೇವರ ಮನೆಗೆ ಹೋದಳು. ಅಲಂಕೃತ ಮಂಟಪದೊಳಗೆ ಮನೆದೇವರ ವಿಗ್ರಹ ನಿಶ್ಚಲವಾಗಿ ಕುಳಿತಿತ್ತು. ಅಲ್ಲೆ ಬಾಗಿಲಿಗೆ ಆತು, ಕಾಲುಕೆರೆಯುತ್ತ ಅಮ್ಮಿ ನಿಂತಳು. ಅವ್ಯಕ್ತ ಪ್ರಾರ್ಥನೆಯ ನುಡಿಗಳೆಂಬಂತೆ ತುಟಿಗಳು ಚಲಿಸುತ್ತಿದ್ದುವು.

ಹಿಂಬದಿಯಿಂದ ನಡೆದುಬಂದು ಅತ್ತೆ ಹೇಳಿದರು :

" ನೀನು ಊಟಮಾಡಿ ಮಲಕೋ ಅಮ್ಮಿ."

—ಎಲ್ಲಾದರೂ ಉಂಟೆ ? ಎಂತಹ ಮಾತು ?

" ನಾ ಒಲ್ಲೆ ಅತ್ತೆ, ನನಗೆ ಹಸಿವಿಲ್ಲ."

ಕಾಡು ಹಾದಿ....ಕತ್ತಲು....ಅಮ್ಮಿಯ ಗಂಡನನ್ನು ಬಸಿರಲ್ಲಿ ಹೊತ್ತು ಹೆತ್ತಿದ್ದ ಆ ತಾಯಿಗೆ ಯಾಕೋ ಒಂದು ರೀತಿಯ ಅಳುಕು. ಶೀತಲ ಗಾಳಿ ನರನಾಡಿಗಳನ್ನು ತಿವಿಯುವ ಹಾಗೆ, ಆ ಅಳುಕು ಹೃದಯವನ್ನು ಹಿಂಡುತ್ತಿತ್ತು. ತೂಕಡಿಸುತ್ತಿದ್ದ ಎಳೆಯ ಮಕ್ಕಳಿಬ್ಬರನ್ನು ಮಲಗಿಸಿದ್ದಾಯಿತು....ಆ ಬಳಿಕ ಯೋಚನೆಗಳನ್ನು ಓಡಿಸಲೆಂದು ದೇವರನಾಮ....'ಕಂಡು ಕಂಡು ನೀ ಎನ್ನ ಕೈಬಿಡುವರೇ....'

ಮಾವ ಅಂಗಳಕ್ಕೆ ಹೋಗಿ ನಿಂತರು, ಬಹಳ ಹೊತ್ತು.

ತನಗರಿಯದಂತೆಯೇ ಅಮ್ಮಿ ಅತ್ತೆಯ ಹತ್ತಿರ ಬಂದಿದ್ದಳು. ಅತ್ತೆಯ ಮಡಿಲಲ್ಲಿ ಮುಖವಿರಿಸಿ ಎಲ್ಲವನ್ನೂ ಮರೆಯ ಬಯಸಿದಳು ಅಮ್ಮಿ. ಹಿತಕರವಾಗಿ ಮುಂಗುರುಳು ನೇವರಿಸುತ್ತಿದ್ದ ಅತ್ತೆಯ ಬೆರಳುಗಳು....ಆ ಪಲ್ಲವಿ....'ಕಂಡು ಕಂಡು ನೀ ಎನ್ನ....' ಎಲ್ಲವನ್ನೂ ಮರೆಯುವ ಸಾಧ್ಯತೆ........ತಿಳಿದೂ ತಿಳಿಯದಂತೆ ಬಲೆ ಬೀಸಿದ ಕಳ್ಳನಿದ್ದೆ....

ಇರುವಿಕೆಯನ್ನು ಮರೆತ ಆ ಅವಸ್ಥೆಯೊಳಗೆ ಅಮ್ಮಿ ಅದೆಷ್ಟು ಹೊತ್ತು ಇದ್ದಳೊ !

ಯಾವುದೋ ಪಿಸುಮಾತು ಕೇಳಿಸಿತು ಅಮ್ಮಿಗೆ. ಇದು ಸ್ವಪ್ನವಿರಬೇಕು—ಎಂದುಕೊಂಡಳು ಆಕೆ. ಅವರು ಬಂದ ಹಾಗೆ....ಬಂದು ತನಗಾಗಿ ಅತ್ತಿತ್ತ ದೃಷ್ಟಿ ಹಾಯಿಸುತ್ತಿದ್ದ ಹಾಗೆ....ಅಮ್ಮಿ ನಿಧಾನವಾಗಿ ಕಣ್ಣು ತೆರೆದಳು. ಅತ್ತೆ ಮಾವ ಜತೆಯಾಗಿಯೇ ಬಾಗಿಲ ಬಳಿ ನಿಂತಿದ್ದರು. ಬೇರೆ ಯಾರೂ ಇರಲಿಲ್ಲ. ಸಾಲು ದೀಪಗಳಿನ್ನೂ ಉರಿಯುತ್ತಿದ್ದುವು. ಅಲ್ಲೊಂದು ಇಲ್ಲೊಂದು ಸೊಡರು ಕಣ್ಣು ಮುಚ್ಚಿತ್ತು, ಅಷ್ಟೆ. ಪಿಸುಮಾತಿನ ಸ್ವರ ಬಾಗಿಲ ಬಳಿಯಿಂದ ಬರುತ್ತಿತ್ತು.

ಅತ್ತೆ ಹೇಳುತ್ತಿದ್ದರು :

" ನೋಡಿ ಈಗ ಸ್ಪಷ್ಟವಾಗಿ ಕಾಣ್ತಿದೆ ಕಂದೀಲು, ಅಲ್ಲ ?"

"ಹೂಂ....ಹೌದು....ಬೇಗ ಬೇಗನೆ ಬರ್ತಿರೋ ಹಾಗಿದೆ."

ಅಮ್ಮಿ ಥಟ್ಟನೆ ಎದ್ದು ಕುಳಿತಳು. ತಾನೂ ಬಾಗಿಲ ಬಳಿಗೆ ಓಡಬೇಕೆಂದು ಅವಳಿಗೆ ಆಸೆಯಾಯಿತು. ಆದರೂ ಒಳಮನಸ್ಸು ಹೇಳುತ್ತಿತ್ತು : 'ಇಲ್ಲೇ ಕೂತಿರು ಈ ನಿರೀಕ್ಷೆ ಎಷ್ಟೊಂದು ಸುಂದರ ! ಇಲ್ಲೇ ಕೂತಿರು....'

ಆ ಸುಖಕ್ಕೆ ಭಂಗ ಬರಬಾರದೆಂದು ಅಮ್ಮಿ ಅಲ್ಲಿಯೇ ಚಾಪೆಯ ಮೇಲೆ ಕುಳಿತಳು. ಅವಳ ಹೃದಯದ ಬಡಿತ ತೀವ್ರವಾಯಿತು. ಕತ್ತಲಲ್ಲೂ ಆನಂದದ ಮುಗುಳುನಗು ಆ ಎಳೆಯ ತುಟಿಗಳ ಮೇಲೆ ಕುಣಿಯಿತು.

"..............."

"ಮೂಲೆ ಹೊಲದ ಸಮೀಪಕ್ಕೇ ಕಂದೀಲು ಬಂತು, ಅಲ್ಲ ?"

"..............."

"ಯಾಕೋ, ಒಬ್ಬನೇ ಇರೋ ಹಾಗಿದೇಂದ್ರೆ...."

"ಅಂಜಿಯವನು ಬಂದಿಲ್ವೇನೋ ಹಾಗಾದರೆ ?"

"ಅಥವಾ—"

ಅಮ್ಮಿ ಉಸಿರು ಹಿಡಿದು ಕುಳಿತಳು. ಮುಂದೆ—ಮುಂದೆ ಎಂತಹ ಮಾತುಗಳನ್ನು ಅವಳು ಕೇಳಬೇಕು ?

....ನಿಮಿಷಗಳು....ಒಂದು, ಎರಡು, ಮೂರು....ಹತ್ತು, ಇಪ್ಪತ್ತು....ನಿಮಿಷಗಳು ಯುಗಗಳಾಗುವುದೆಂದರೆ ಹಾಗೆಯೇ ಅಲ್ಲವೆ ?

"ಇಲ್ಲ ಲಕ್ಷ್ಮಿ, ರಾಮಚಂದ್ರ ಬರ‍್ಲಿಲ್ಲ....ಕೈ ಬೀಸಿ ಬೀಸಿ ನಡಿಯೋ ರೀತಿ ನೋಡು, ಮುನಿಯಪ್ಪನೇ ಇರಬೇಕು...."

ಅವರಲ್ಲ—ಮುನಿಯಪ್ಪ. ಅವರು ಚಿಕ್ಕಮಗಳೂರಲ್ಲೆ ಇದ್ದಾಗ ವಾರಕ್ಕೆರಡು ಬಾರಿ ಅಲ್ಲಿಗೆ ಹೋಗಿ ಬರುವ ಟಪಾಲಿನ ಮುನಿಯಪ್ಪನ ಆಗಮನವನ್ನು ಅಮ್ಮಿ ಇದಿರು ನೋಡುವುದಿತ್ತು. ಆದರೆ ಈ ದಿನ ಆತನ ಬದಲು ಅವರೇ ಬರಬಾರದಾಗಿತ್ತೆ?

ಅತ್ತೆಯ ಸ್ವರ ಅನುಮಾನಿಸುತ್ತ ಕೇಳಿತು :

"ರಾಮ ಯಾಕೆ ಬರಲಿಲ್ಲವೋ ?"

"ದೀಪಾವಳಿ ಲೆಕ್ಕಾಚಾರ....ಹೆಚ್ಚು ಕೆಲಸವಿತ್ತೋ ಏನೋ...."

ಲಾಟೀನು ಜಗಿದು ಜಗಿದು, ಅಂಚಿನಿಂದ ಒಮ್ಮೊಮ್ಮೆ ಕಾಲು ಜಾರಿ ಹೊಲಕ್ಕಿಳಿದರೂ ಮತ್ತೆ ಮೇಲಕ್ಕೇರಿ, ಮನೆಯತ್ತ ಬರುತ್ತಿತ್ತು.

"ಯಾಕೆ—ಇವನು ಓಡಿ ಬರ‍್ತಿದಾನಲ್ಲಾ !...."

ಸದಾ ಶಾಂತವಾಗಿರುತ್ತಿದ್ದ ಮಾವನ ಸ್ವರದಲ್ಲೂ ಕಾತರದ ಭಾವನೆ ಒಡೆದು ತೋರುತ್ತಿತ್ತು ಆಗ.

ಎದುರಿನ ತೋಡಿಗೆ ಅಡ್ಡವಾಗಿದ್ದ ಮರದ ಸೇತುವೆಯನ್ನು ದಾಟಿ ಕಂದೀಲು ಅಂಗಳದ ಬಳಿಗೆ ಬಂತು. ಆದರೆ ಮೆಟ್ಟಲೇರಿ ಮನೆಯನ್ನು ಸಮೀಪಿಸಲಿಲ್ಲ,

"ಮುನಿಯಪ್ಪಾ, ಮುನಿಯಪ್ಪಾ !"

"ಉತ್ತರ ಬರಲಿಲ್ಲ ಮುನಿಯಪ್ಪನಿಂದ.

ಅತ್ತೆ ಸ್ವಲ್ಪ ಕಸಿವಿಸಿಗೊಂಡೇ ಕೇಳಿದರು :

"ಪಾಪ, ಜಾರಿ ಬಿದ್ಬಿಟ್ಟನೋ ಏನೋ...."

"ಮುನಿಯಪ್ಪಾ, ಏ ಮುನಿಯಪ್ಪಾ !"

ಅಮ್ಮಿ ಎದ್ದು, ಗೋಡೆಗೊರಗಿ ನಿಂತಳು.

ಮಾವ ಹೊರಕ್ಕಿಳಿದು ಅಂಗಳದ ಅಂಚಿನತ್ತ ಧಾವಿಸಿದರು. ಅಲ್ಲಿ ಕಂದೀಲನ್ನು ನೆಲದ ಮೇಲಿಟ್ಟು, ಒಡೆದ ಕಲ್ಲೊಂದರ ಮೇಲೆ, ಎರಡೂ ಕೈಗಳಲ್ಲಿ ತಲೆ ಇರಿಸಿ, ಉಸಿರಿಗಾಗಿ ಏದುತ್ತ ಏದುತ್ತ ಮುನಿಯಪ್ಪ ಕುಳಿತಿದ್ದ.

"ಏನಾಯ್ತು ಮುನಿಯ, ಏನಾಯ್ತು ?"

ಅತ್ತೆಯೂ ಇಳಿದು ಬಂದು ಸ್ವಲ್ಪ ದೂರದಲ್ಲಿ ನಿಂತರು.

"ಏನಾಯ್ತೊಂದ್ರೆ....?"

ಅಮ್ಮಿ ಮೆಲ್ಲನೆ ನಡೆದು ಬಂದು ಬಾಗಿಲನ್ನು ಆಧರಿಸಿ ನಿಂತಳು. ಅವಳ ಮನಸ್ಸು ಕೇಳುತ್ತಿತ್ತು ಮೂಕವಾಗಿ :

"ಏನಾಯ್ತು ? ಅವರಿಗೇನಾಯ್ತು ? ನನ್ನ ದೇವರಿಗೇನಾಯ್ತು ?"

ಸ್ವರ ಹೊರಡಿಸಲೆತ್ನಿಸಿದ ಮುನಿಯ, ಮಾತಿನ ಬದಲು, ರೋದನದ ಧ್ವನಿ ತೆಗೆದ.

"ಅಯ್ಯೋ !" ಎಂದರು ಅತ್ತೆ, "ಏನಾಯ್ತು ? ಅಯ್ಯೋ ; ಏನಾಯ್ತು ?"

ಮಾವ ಗದರಿ ನುಡಿದರು :

"ಸುಮ್ನಿರು ಲಕ್ಷ್ಮಿ, ನೀನು ಸುಮ್ನಿರು !"

ಮತ್ತೂ ನಾಲ್ಕಾರು ನಿಮಿಷ ಮುನಿಯ ಮಾತನಾಡಲೇ ಇಲ್ಲ. ಮಡಿ-ಮೈಲಿಗೆಯನ್ನು ಗಣಿಸದೆ ಮಾವ, ಆತನ ಭುಜ ಹಿಡಿದು ಕುಲುಕಿದರು.

"ಹೇಳು ಮುನಿಯ ! ಹೇಳು ! ಏನಾಯ್ತು ಹೇಳು ! ಎಲ್ಲಿ ರಾಮಚಂದ್ರ ? ಬರ್ಲಿಲ್ವೇನು ?"

ಮುನಿಯ ಮಾವನ ಪಾದಗಳನ್ನು ಹಿಡಿದುಕೊಂಡ.

"ನಾನು ಪಾಪಿ ! ದ್ಯಾವ್ರೂ....ನಾನು ಕಡು ಪಾಪಿ !"

"ಏನಾಯ್ತು ಹೇಳ್ಬಾರ್ದೇನೋ ?...."

ಆ ಬಳಿಕ ಪಿಸು ಮಾತಿನಲ್ಲಿ ಆ ವಿಷಯ....

"ಚಿಕ್ಕ ಅಯ್ನೋರು ಇವತ್ತು ಚಂಜೆಗೇ ತೀರ್ಕೊಂಡ್ರು....ಅಯ್ಯೋ....!"

ಅಮ್ಮಿಗೆ ಕೇಳಿಸಿದುದು ಆ ಮಾತಲ್ಲ. ಅವಳ ಕಿವಿಯನ್ನಿರಿದುದು ಅತ್ತೆಯ ಕಠೋರ ರೋದನ. ತಲೆತಿರುಗಿ ಅತ್ತೆ ನೆಲದ ಮೇಲೆ ಕುಸಿದು ಬಿದ್ದುದನ್ನು ಅವಳು

ಕಂಡಳು. ಮಾವ ಸ್ತಂಭಿತರಾಗಿ ನಿಂತರು, ಕಲ್ಲು ಬೊಂಬೆಯ ಹಾಗೆ. ಕತ್ತಲೆಯನ್ನು ಭೇದಿಸಿಕೊಂಡು ಆಕಾಶಕ್ಕೆ ಅಡರಿದ ಆ ರೋದನವೊ; ಅಮ್ಮಿ ಅಧೀರಳಾದಾಗ ಯಾವಾಗಲೂ 'ಅಮ್ಮಾ' ಎನ್ನುತ್ತಿದ್ದಳು—ಗತಿಸಿದ ಅಮ್ಮನ ನೆನಪು. ಈಗಲೂ ಅತ್ತೆಯ ಬಳಿಗೆ ಓಡುತ್ತ ಓಡುತ್ತ ಅವಳು ಕೂಗಾಡಿದಳು : "ಅಮ್ಮಾ! ಅಮ್ಮಾ!...."

"ಅಯ್ಯೋ! ನನ್ನ ರಾಮಚಂದ್ರನ್ನ, ಮುದ್ದು ಕಂದನ್ನ, ಕೊಂದರಪ್ಪೋ! ಕೊಂದರು....ಅಯ್ಯೋ—ಅಯ್ಯೋ!"

ರಾಮ—ಚಂದ್ರ—....

ಅಮ್ಮಿ ಮಾವನ ಮುಖ ನೋಡಿದಳು, ಮುನಿಯನ ಮುಖ ನೋಡಿದಳು. ಆ್ಞ! ಹಾಗೂ ಅಯಿತೆ?

"ಅಮ್ಮಾ! ಅಮ್ಮಾ!...."

ಆ ಕೂಗಿನ ಜತೆಯಲ್ಲೇ, ಹೃದಯ ತಲ್ಲಣಿಸುವ ಹಾಗೆ ಬಿಕ್ಕಿಬಿಕ್ಕಿ ಬಂದ ಅಳು.

ಎಚ್ಚರಗೊಂಡ ಎಳೆಯ ಹುಡುಗರು ತಾಯಿ—ಅಮ್ಮಿಯರ ರೋದನ ಕೇಳುತ್ತಲೆ ತಾವೂ ಅಳುತ್ತ ಬಂದರು....

....ಚೇತರಿಸಿಕೊಂಡ ಮಾವ ಹೇಳುತ್ತಿದ್ದರು :

"ಅಳಬೇಡಿ, ಯಾರೂ ಅಳಬೇಡಿ! ಅಳಬಾರದು, ಯಾರೂ ಅಳಬಾರದು!"

ಹಾಗೆ ಹೇಳುತ್ತ ಅವರು ಮಾತ್ರ ಅಳುತ್ತಿದ್ದರು ಗೋಳೋ ಎಂದು.

ಮುನಿಯನೊಬ್ಬನೇ ಮಾತು ಬಂದವನಂತೆ ತಿರುತಿರುಗಿ ಹೇಳಿದ :

"ಮೂರೇ ದಿವಸದ ಜ್ವರ....ದಾಕ್ದಾರು ಬಂದ್ರು....ಎಲ್ಲಾ ಬಂದ್ರು........ ನಮ್ಮಪ್ಪ ಉಳೀಲಿಲ್ಲಪ್ಪೋ ಉಳೀಲಿಲ್ಲ....ಎಂಗ್ಮಾಡ್ದ ಆ ಪರಮಾತ್ಮ;...."

ಆ ಎಲ್ಲ ಕಂಠಗಳಿಂದ ರೋದನದ ಸ್ವರಗಳು ಹೊರಟು ಒಂದರಲ್ಲೊಂದು ಬೆರೆತು ಏಕಸ್ವರವಾಗಿ ಗಗನ ಭೇದಿಸುತ್ತ ಮೇಲೇರಿದುವು.

ನಗುತ್ತಲೇ ಇದ್ದುವು ಸಾಲು ದೀಪಗಳು. ಆ ಸೊಡರುಗಳೆಲ್ಲ ಕಿರುನಾಲಗೆಗಳನ್ನು ಅತ್ತಿತ್ತ ಚಾಚುತ್ತ ಅಳುವವರನ್ನು ಅಣಕಿಸುತ್ತಿದ್ದುವು.

ದೀಪಾವಳಿಯ ಸಂಭ್ರಮದಲ್ಲಿ ಮೈಮರೆತಿದ್ದ ಆ ಪುಟ್ಟಹಳ್ಳಿ ಅಯ್ಯನವರ ಮನೆಯ ರೋದನ ಕೇಳಿ ಗಾಬರಿಗೊಂಡಿತು. ಜನರು ಒಬ್ಬರ ಮೇಲೊಬ್ಬರಾಗಿ ನಾಲ್ಕು ಮೂಲೆಗಳಿಂದ ಅಲ್ಲಿಗೆ ಬಂದರು.

ಯಾರೋ ಎಲ್ಲಿಂದಲೋ ಎಸೆದ ಆಕಾಶ ಬಾಣವೊಂದು ಸುಯ್ ಎಂದು ಎತ್ತರಕ್ಕೆ ಹೋಗಿ, ತಿರಿ—ತಿ—ತ್ತಿರಿ—ತಿರಿ ಎಂದು ಸ್ವರ ಅಡಗಿ, ಬೆಳಕು ಅಳಿದು, ಕತ್ತಲೆಯೊಡನೆ ಲೀನವಾಯಿತು.

೧೯

ಮಳೆಗಾಲ ಕಳೆಯಿತು. ಆ ಬಳಿಕ ಬೆಂಗಳೂರಿನ ಡಿಸೆಂಬರ್ ಚಳಿ. ಅದಾದ ಮೇಲೆ ಬಿಸಿಲು ಮತ್ತೊಮ್ಮೆ ಮುಗುಳ್ನಕ್ಕಿತು.

ದಿನ ಕಳೆಯುತ್ತಿದ್ದರೂ ಅಮ್ಮಿಯ ದೇಹಸ್ಥಿತಿಯಲ್ಲಿ ಸುಧಾರಣೆಯಾಗಲಿಲ್ಲ.

ರಾಜಣ್ಣನ ಒತ್ತಾಯಕ್ಕೆ ಅಮ್ಮಿ ಇಂಗ್ಲಿಷ್ ಔಷಧಿಯನ್ನೂ ಸೇವಿಸಿದಳು. ಒಂದು ದಿನ ಎಷ್ಟೋ ಮೇಲು ಎನಿಸಿದರೆ, ಮರುದಿನ ಜಾಡ್ಯ ಆವರಿಸುತ್ತಿತ್ತು.

ರಾತ್ರೆ ಸರಿಯಾಗಿ ನಿದ್ದೆ ಬರುತ್ತಿರಲಿಲ್ಲ ಆಕೆಗೆ. ಕೆಟ್ಟ ಕನಸುಗಳು ಬೀಳುತ್ತಿದ್ದುವು. ಕನಸಿನಲ್ಲಿ ಯಾರೋ ತನ್ನನ್ನು ಅಣಕಿಸಿದ ಹಾಗೆ, ಮಾತನಾಡಿಸಿದ ಹಾಗೆ, ಯಾಕೆ ಇನ್ನೂ ಇಲ್ಲೇ ಇದ್ದೀಯಾ....ಎಂದು ಗದರಿಸಿದ ಹಾಗೆ ...

ಇದೆಲ್ಲವನ್ನೂ ಪ್ರತಿ ದಿನವೂ ಎಷ್ಟೆಂದು ಏನೆಂದು ರಾಜಣ್ಣನಿಗೆ ಹೇಳಬೇಕು? ಆತನ ದೊಡ್ಡ ಪರೀಕ್ಷೆ ಹತ್ತಿರ ಬರುತ್ತಿತ್ತು. ಪಾಪ ಆತ ಪರೀಕ್ಷೆಗೆ ಓದಬೇಕೆ ಅಥವಾ ಅರ್ಥವಾಗದ ತನ್ನ ಕಾಯಿಲೆಯ ಬಗ್ಗೆ ಚಿಂತಿಸುತ್ತ ಕುಳಿತಿರಬೇಕೆ?

ಒಮ್ಮೆ ನಿಷ್ಣಾತರಾದರೊಬ್ಬ ಡಾಕ್ಟರನ್ನು ರಾಜಣ್ಣ ಮನೆಗೆ ಕರೆದುಕೊಂಡುಬಂದ. ಅವರು ಅಮ್ಮಿಯನ್ನು ಪರೀಕ್ಷೆ ಮಾಡಿದರು. ಹಲವಾರು ಪ್ರಶ್ನೆ ಕೇಳಿದರು.

ಹಿಂತಿರುಗಿದಾಗ ಜತೆಯಲ್ಲಿ ರಾಜಣ್ಣನನ್ನೂ ಕರೆದೊಯ್ಯುತ್ತ ಅವರೆಂದರು :

"ನೀವು ಹೆದರ್ಬೇಕಾದ್ದಿಲ್ಲ........ಆದರೆ ನೀವೇನೂ ಮಗುವಲ್ಲ. ಜವಾಬ್ದಾರಿಯುಳ್ಳ ಯುವಕ. ಒಂದೆರಡು ವಿಷಯ ನಿಮಗೆ ಹೇಳ್ತೀನಿ."

"ಹೇಳಿ ಸಾರ್."

"ಯೌವನದಲ್ಲಿ ಆಕೆ ಒಳ್ಳೇ ದೃಢಕಾಯರಾಗಿದ್ರು ಅಲ್ವೆ?"

"ಇದ್ರಂತೆ ಸಾರ್."

"ನೀವೇ ಮೊದಲ್ನೆ ಹೆರಿಗೆಯೇನೊ?"

"ಹೌದು."

"ಸರಿ ಹಾಗಾದರೆ....ಮೊದಲನೇ ಹೆರಿಗೆಯಿಂದಾನೇ ಈ ಕಷ್ಟಗಳು ಹುಟ್ಟಿವೆ. ಮನೋವಿಕಾರಗಳು ನಾರ್ಮಲ್ ಆಗದೆ ಇದ್ದಾಗಿನ ಲೈಂಗಿಕ ಜೀವನದ ಪರಿಣಾಮ ಇದು. ಅವರ ಜೀವನದಲ್ಲಿ ಸಹಿಸೋಕಾಗದ ಘಟನೆಗಳೂ ಆಗಿವೆಯೇನೊ?"

"ಬೇಕಾದಷ್ಟು."

"ಮುಟ್ಟು ನಿಂತಾಗಲಂತೂ ನರನಾಡಿಗಳು ಹತೋಟಿ ತಪ್ಪಿವೆ....ಇದೆಲ್ಲದರ ಪರಿಣಾಮ ಮಾನಸಿಕ ಶಿಥಿಲತೆ. ಆದರೂ ನೀವು ಹೆದರ್ಬೇಕಾದ್ದಿಲ್ಲ. ಸಣ್ಣಪುಟ್ಟದಾಗಿ ಇಷ್ಟು ಮಾಡಿ....ಅವರ್ಗೇನಾದರೂ ಆಸೆ ಇದ್ರೆ, ಆಗೊಲ್ಲ ಅನ್ಬೇಡಿ. ಆದಷ್ಟು ಮಟ್ಟಿಗೆ ಈಡೇರ್ಸಿ. ಅವರ ಮನಸ್ಸು ನೋಯುವಂಥಾದ್ದು ಏನನ್ನೂ ಮಾಡ್ಬೇಡಿ, ಆಡ್ಬೇಡಿ...."

ಡಾಕ್ಟರರು ಹೋದಮೇಲೆ ರಾಜಣ್ಣನಿಗೆ ಅಮ್ಮಿಯ ದೇಹಸ್ಥಿತಿಯ ವಿಷಯದಲ್ಲಿ ಹೆದರಿಕೆಯೇನೂ ಆಗದೇ ಇದ್ದರೂ ತನ್ನ ಹೆತ್ತ ತಾಯಿ ಪಡುತ್ತಿದ್ದ ಸಂಕಟಕ್ಕಾಗಿ ಮನಸ್ಸು ಕರಗಿಹೋಯಿತು.

ಇಂತಹ ಸಂಕಷ್ಟಗಳೆಡೆಯಲ್ಲೂ ರಾಜಣ್ಣ ತನ್ನ ಕೊನೆಯ ಪರೀಕ್ಷೆಗೆ ಸಿದ್ಧತೆ ನಡಸಿದ.

ದಿನ ಕಳೆದಂತೆ ಅಮ್ಮಿಗೆ, ಹಳೆಯ ನೆನಪುಗಳ ಕಾಟ ಹೆಚ್ಚಿತು....ದೀಪಾವಳಿಯ ರಾತ್ರೆ....ಅಂಚೆಯ ಮುನಿಯಪ್ಪ....ದೇವರಂತಹ ಮಾವ....ಹಾವು—ಸಾವು....ಕಾವೇರಿ....ಸುಂದರಮ್ಮ....ಚಿಕ್ಕಿ....ನಾರಾಯಣರಾಯರ ಹೆಂಡತಿ ಕೊಟ್ಟಿದ್ದ ಶಾಪ....

ಒಮ್ಮೆಲೆ ಸುಶೀಲೆಯ ನೆನಪಾಗುತ್ತಿತ್ತು. ಮಗಳನ್ನು ನೋಡಬೇಕೆಂಬ ಆಸೆ. ಆದರೆ ಆಕೆ ಬರುವ ಸ್ಥಿತಿಯಲ್ಲಿರಲಿಲ್ಲ. ಬಹಳ ದಿನಗಳ ಮೇಲೆ ಗರ್ಭ ನಿಂತು, ಆಕೆ ಬಾಯ್ತನದ ಸ್ಥಾನವೇರುವ ಸಿದ್ಧತೆಯಲ್ಲಿದ್ದಳು....

ಅಮ್ಮಿ ನಿದ್ದೆ ಹೋಗುತ್ತಿದ್ದರೆ ಒಮ್ಮೊಂದೊಮ್ಮೆಲೆ ಅಮ್ಮಿಗೆ ರಮೆಯ ನೆನಪಾಗುತ್ತಿತ್ತು. ರಮಾ—ಒಳ್ಳೆಯ ಹುಡುಗಿ—ರಾಜಣ್ಣನಿಗೆ ತಕ್ಕವಳು....ಆದರೆ—ಆದರೆ—

ಹೊರ ಕೊಠಡಿಯಲ್ಲಿ ರಾಜಣ್ಣ ಓದುತ್ತ ಅಭ್ಯಾಸ ಮಾಡುತ್ತ ಕುಳಿತಿದ್ದರೆ, ಅಡುಗೆಮನೆಯಲ್ಲಿ ಚಾಪೆ ಮೇಲುರುಳುತ್ತಾ ಅಮ್ಮಿ ನಿದ್ದೆ ಹೋಗಲು, ರಾತ್ರೆ ಕಳೆದು ಬೆಳಗು ಮಾಡಲು, ಯತ್ನಿಸುತ್ತಿದ್ದಳು.

ರಾಜಣ್ಣನ ಪರೀಕ್ಷೆ ಒಂದು ತಿಂಗಳು ಇದೆ ಎನ್ನುವ ಹೊತ್ತಿಗೆ ಒಂದು ವಾರವೆಲ್ಲ ಇರುಳು ಅಮ್ಮಿ ಅಸಹನೀಯ ಸಂಕಟ ಅನುಭವಿಸಿದಳು. ಆಕೆಗೆ ಕೇಳಿಬರುತ್ತಿದ್ದುದೊಂದೆ ತನ್ನ ಹುಟ್ಟೂರಿನ ಕರೆ....

ನಿದ್ದೆ ಬಂದಾಗಲೂ ಅಮ್ಮಿ ಬಡಬಡಿಸುತ್ತಿದ್ದಳು :

"ಬಂದೆ ತಾಳಿ....ರಾಜಣ್ಣ ಹೋಗ್ಬರ್ತೀನಿ....ಅವರೆಲ್ಲಾ ಕರೀತಿದಾರೆ...."

ರಾಜಣ್ಣನಿಗೆ ಚಿಂತೆ. ತಾಯಿ ಜೀವನಹಳ್ಳಿಗೆ ಹೋಗಿ ಬರುವುದರ ಬಗೆಗೆ ತಾನೇ ಏನಾದರೂ ಸಲಹೆ ಮಾಡಬೇಕೆಂದು ಆತ ಯೋಚಿಸುತ್ತಿದ್ದಾಗಲೇ ಅಮ್ಮಿ ಕೇಳಿದಳು :

"ರಾಜ, ನಿನ್ನ ಪರೀಕ್ಷೆಗೆ ಇನ್ನೂ ಎಷ್ಟು ದಿನ ಇದೆಯಪ್ಪ?"

"ಸುರುವ ಗೋಕೆ ಇಪ್ಪತ್ತಾರು ದಿವಸ ಅಮ್ಮಿ, ಯಾಕಮ್ಮೀ?"

"ಇಲ್ಲ. ನೀನು ಬರೋಕಾಗಲ್ಲ..."

"ಎಲ್ಲಿಗಮ್ಮೀ ...!"

"ನಾನು ಜೀವನಹಳ್ಳಿಗೆ ಹೋಗ್ಬೇಕು ರಾಜ....ನಾನೀಗ ಹೋಗ್ತೀನಿ....ನೀನು ಪರೀಕ್ಷೆ ಆದ್ಮೇಲೆ ಬರ್ತೀಯಾ?"

ರಾಜಣ್ಣನಿಗೆ ಯೋಚನೆಗಿಟ್ಟುಕೊಂಡಿತು. ಬೇಡ—ಎನ್ನುವಂತಿಲ್ಲ. ಒಬ್ಬಳನ್ನೆ ಕಳುಹಿಸುವಂತಿಲ್ಲ.

ಅಮ್ಮಯಂತೂ ಹೊರಡುವ ನಿರ್ಧಾರ ಮಾಡಿಯೇ ಬಿಟ್ಟಳು. ರಾಜಣ್ಣ ತನಗೆ ಪರಿಚಯವಿದ್ದೊಬ್ಬ ಹದಿನಾಲ್ಕು ವರ್ಷ ವಯಸ್ಸಿನ ಹುಡುಗನನ್ನು ಅಮ್ಮಯ ಜತೆ ಹೋಗಲು ಗೊತ್ತು ಮಾಡಿದ.

"ಸುಶೀಲುನ್ನು ಚೊಚ್ಚಲ ಹೆರಿಗೆ. ಶಾಸ್ತ್ರ ಪ್ರಕಾರ ತವರ್‍ಮನೇಲೆ ಆಗ್ಬೇಕಲ್ವೆ?"

"ಪರವಾಗಿಲ್ಲಮ್ಮ....ಬಹುಶಃ ಮಾಧವ ಕಳಿಸ್ಕೊಡ್ದೆ ಅಲ್ಲೇ ಏರ್ಪಾಟು ಮಾಡ್ಬಹುದು. ಇಲ್ದೆ ಹೋದ್ರೆ ಈ ಊರಿಗೆ ಕರೆಸೋಣ. ಏನಂತೀಯಾ ?"

"ಈ ಊರಲ್ಲಾದ್ರೂ ಹ್ಯಾಗೆ ಮಾಡೋಕಾಗುತ್ತೆ ರಾಜ? ನಾನೂ ಹೊರಟ್ಹೋಗ್ತೀನಲ್ಲಾ...."

ಆ ವಿಷಯ ನಂಗೆ ಬಿಟ್ಬಿಡು. ನಾನು ಏನಾದರೂ ಒಳ್ಳೇ ವ್ಯವಸ್ಥೆ ಮಾಡಿಯೇ ಮಾಡ್ತೀನಿ."

"ಅಂತೂ ನಿನ್ನ ಓದಿಗೆ ತೊಂದ್ರೆ."

"ಏನೂ ಪರವಾಗಿಲ್ಲಮ್ಮ. ಇಷ್ಟರೊಳಗೇ ಚೆನ್ನಾಗಿ ಓದ್ಬಿಟ್ಟಿದೀನಿ."

"ಹುಂ, ಹಾಗಾದರೆ ಪರೀಕ್ಷೆ ಮುಗಿದ್ಮೇಲೆ ಬರ್‍ತೀಯಾ ?"

ಒಂದು ಮಾತಿಗೂ ಇನ್ನೊಂದಕ್ಕೂ ಸಂಬಂಧವಿರಲಿಲ್ಲ. ಒಮ್ಮೆ ಮಗಳನ್ನು ಬೆಂಗಳೂರಿಗೆ ಕರೆಸುವ ಯೋಚನೆ, ಮರುಕ್ಷಣವೇ ಮಗನನ್ನು ಜೀವನಹಳ್ಳಿಗೆ ಕರೆದೊಯ್ಯುವ ಯೋಚನೆ....

"ಆಗಲಮ್ಮೀ, ಪರೀಕ್ಷೆ ಶುರುವಾದ್ಮೇಲೆ ಎಲ್ಲಾ ಸೇರಿ ಎರಡು ವಾರ. ಬಂದ್ಬಿಡ್ತೀನಿ...."

"ಊಟಕ್ಕೇನ್ಮಾಡ್ತೀಯಾ ?"

"ನಾನೇ ಮಾಡ್ಕೋತೀನಮ್ಮ. ಬೇಜಾರಾದ್ರೆ ಹೋಟ್ಲಿಗೋಗ್ತೀನಿ."

'ಅಂಥಿಂಥವರ ಹೋಟ್ಲಿಗೆ ಹೋಗ್ಬೇಡ್ವಪ್ಪಾ...."

"ಹೂಸಮ್ಮೀ...."

"ನಿನ್ನ ನೀನೇ ನೋಡ್ಕೋಬೇಕಪ್ಪ...."

"ಹೂಂ...."

ಅಮ್ಮ ಹೊರಟು ನಿಂತಳು. ತಿರುಗಿ ಬೆಂಗಳೂರಿಗೆ ಬರುವ ಇಚ್ಛೆ ಅವಳಿಗಿರಲಿಲ್ಲ. ಆದರೆ ಮಗನ ಮನಸ್ಸು ನೋಯಬಾರದೆಂದು ತನ್ನ ಇಚ್ಛೆ ಏನೆಂದು ಆಕೆ ತಿಳಿಸಲಿಲ್ಲ.

ನಾಲ್ಕೇ ದಿನಗಳ ಹಿಂದೆ ಕ್ಷೌರಿಕ, ಅಲುಗೇ ಇಲ್ಲದ ಚಾಕು ಹಿಡಿದು, ಕೆರೆದು, ನೋಯಿಸಿದ್ದ ತಲೆ ಥಳಥಳಿಸುತ್ತಿತ್ತು. ಒಂದು ಕಾಲದಲ್ಲಿ ರೂಪರಾಶಿಯಾಗಿದ್ದ ಮುಖ ಬಾಡಿ ಸುಕ್ಕುಗಟ್ಟಿ ಕಳೆಗುಂದಿತ್ತು. ಎತ್ತರದ ನಿಲುವು ಮರೆಯಾಗಿ ದೇಹ

ಕುಗ್ಗಿತ್ತು. ಆತ್ಮವಿಶ್ವಾಸದ ನಡಿಗೆ ಮಾಯವಾಗಿ ಹೆಜ್ಜೆಗಳು ಅಸ್ಥಿರವಾಗಿದ್ದುವು. ಉಟ್ಟದ್ದು ಕೆಂಪು ಸೀರೆ. ಆದರ ಸೆರಗಿನಲ್ಲಿ ಚಿಲ್ಲರೆ ಖರ್ಚಿಗೆಂದು ಬಿಗಿದ ಒಂದಿಷ್ಟು ಹಣವಿತ್ತು. ಎಡಗೈಯಲ್ಲಿ ಬಟ್ಟೆಯ ಗಂಟೊಂದು ಅದರೊಳಗಿದ್ದುದು ಮಡಿಯುಟ್ಟು ಕೊಳ್ಳಲು ಇನ್ನೊಂದು ಸೀರೆ ಮತ್ತು ಹೊದ್ದುಕೊಳ್ಳಲು ಒಂದು ಕಂದು ಕಂಬಳಿ.

ಮೈಸೂರಿಗೆ ಹೊರಟು ನಿಂತಿದ್ದ ರೈಲುಗಾಡಿಯಲ್ಲಿ ಮೂರನೆಯ ತರಗತಿಯ ಒಂದು ಡಬ್ಬಿಯಲ್ಲಿ ಆ ರಾತ್ರೆ ಅಮ್ಮ ಮತ್ತು ಆ ಹುಡುಗ ಕುಳಿತರು. ಮಂಕು ಕವಿದವನ ಹಾಗೆ ರಾಜಣ್ಣ ಅವರನ್ನು ಬೀಳ್ಕೊಟ್ಟ.

ಗಾಡಿ ಹೊರಡುತ್ತಿದ್ದಂತೆ ಅಮ್ಮ ಹೇಳಿದಳು :

'ಸುಶೀಯನ್ನೂ ಜತೇಲಿ ಕರ್ಕೊಂಡು ಬಾರಪ್ಪ."

ಆ ಕತ್ತಲೆಯಲ್ಲಿ ಗಾಡಿ ಬೆಂಗಳೂರು ನಗರವನ್ನು ಬಿಟ್ಟು ಚಲಿಸಿತು. ಅಮ್ಮಯ ಬಾಳ್ವೆಯ ಪಯಣದಲ್ಲಿ ಆ ಊರೇ ಕೊನೆಯ ನಿಲ್ದಾಣ. ಅಲ್ಲಿಂದ ವಾಪಸು ಹಳ್ಳಿಗೆ....

ಬೆಳಗ್ಗೆ ಮೈಸೂರು ತಲುಪಿದ ಮೇಲೆ ಅಮ್ಮ ಮತ್ತು ಆ ಹುಡುಗ ಇನ್ನೊಂದು ಗಾಡಿಯಲ್ಲಿ ಕುಳಿತು ಮಧ್ಯಾಹ್ನದೊಳಗಾಗಿ ಹಾಸನ ಸೇರಿದರು.

ತನ್ನ ಮಕ್ಕಳು ಬೆಳೆದು ದೊಡ್ಡವರಾಗಿದ್ದ ಊರು—ಹಾಸನ.

ತಾನು ವಾಸವಾಗಿದ್ದ ಮನೆಯತ್ತ—ಕೇಶವಮೂರ್ತಿ ಮತ್ತು ಸಾವಿತ್ರಮ್ಮನ ಮನೆಯತ್ತ—ಅಮ್ಮ ಹೊರಟಳು....

ಆ ಮನೆಯಲ್ಲಿ ಯಾರೂ ಇರಲಿಲ್ಲ. ತಾನು ಮಕ್ಕಳೊಡನೆ ವಾಸವಾಗಿದ್ದ ಹಿಂಭಾಗದ ಮನೆಯಲ್ಲೂ ಯಾರೂ ಇರಲಿಲ್ಲ.

ಪಕ್ಕದ ಮನೆಯವರೆಂದರು :

"ಅವರೆಲ್ಲಿಯೋ ದೂರ ಮಧುಗಿರಿಯಾಚೆಗೆ ಹೊರಟುಹೋದರಪ್ಪಾ. ಅಲ್ಲಿ ಅವರ ಸಂಬಂಧಿಕರದು ಯಾವುದೋ ಸ್ವಲ್ಪ ಆಸ್ತಿ ಬಂತಂತೆ ಅವರಿಗೆ."

ಹಾಗೆ ಉತ್ತರ ಕೊಡುತ್ತಿದ್ದಾಗಲೆ ಆ ಹೆಂಗಸಿಗೆ ಅಮ್ಮಯ ಗುರುತು ಹಿಡಿಯಿತು.

"ಅಯ್ಯೋ, ಬನಶಂಕರಿ ಅಲ್ವೇನಮ್ಮ? ಇದೇನಮ್ಮ ಹೀಗಾಗ್ಬಿಟ್ಟಿದೀಯ ! ಬಾರೆ....ಕೊನೆಗೂ ಅವರು ಬರಲೇ ಇಲ್ವೇನೆ....ಪಾಪ !"

ಅಂತಹ ಸಹಾನುಭೂತಿಗೆಲ್ಲ ಅಳಲು ಅಮ್ಮಯ ಬತ್ತಿದ್ದ ಕಡಲಿನಲ್ಲಿ ಸಾಕಷ್ಟು ತೇವವಿರಲಿಲ್ಲ.

"ಮಕ್ಕಳಿಲ್ಲಮ್ಮಾ?"

"ಸುಶೀಗೆ ಮದುವೆ ಆಯ್ತು ಇವರೆ. ಬೊಂಬಾಯಿಗೆ ಕೊಟ್ಟಿದೆ. ರಾಜಣ್ಣ ಬೆಂಗಳೂರಲ್ಲಿ 'ಬಿ.ಸಿ.' ಓದ್ತಿದಾನೆ. ನನ್ಜತೇಲೆ ಅವನೂ ಬರ್ಬೇಕಾಗಿತ್ತು....ಆದರೆ ಈಗ ಪರೀಕ್ಷೆ....ಇಗೋ, ಯಾವನೋ ಈ ಹುಡುಗನ್ನ ನನ್ಜತೆ ಕಳಿಸಿದಾನೆ."

"ಅಂತೂ ಚೆನ್ನಾಗಿದೀಯಾ ಅನ್ನು."

ಅಮ್ಮಿ ಚೆನ್ನಾಗಿಯೇ ಇದ್ದಳು, ಅಲ್ಲವೆ ?

ಪಕ್ಕದ ಇನ್ನೊಂದು ಮನೆಯ ಹೆಂಗಸೆಂದಳು :

"ಇಲ್ಲಿಂದ ಎಲ್ಲಿಗಮ್ಮ ಪ್ರಯಾಣ ?"

"ಬಾಳೆಮಣ್ಣೂರಿಗೆ ಹೋಗ್ಬೇಕು."

"ಹಾಗೇನು ? ಸಾಯಂಕಾಲ ಒಂದು ಬಸ್ಸಿದೇಂತ ಕಾಣುತ್ತೆ. ಬೆಳಗ್ಗೆ ಅಲ್ಲಿಗೆ ಹೋಗಿ ಸೇರ್ತೀರ."

"ಅದೇ ಅನುಕೂಲ."

"ಊಟಕ್ಕೆ ನಮ್ಮಲ್ಲಿ ಇದ್ಬಿಡಿ."

"ಇಲ್ಲ, ಬಾಳೆಮಣ್ಣೂರು ಸೇರಿ ದೇವರ ದರ್ಶನ ಆಗೋ ತನಕ ನಾನೇನೂ ತಗೊಳೊಲ್ಲ. ಈ ಹುಡುಗ್ನಿಗೆ ಬಡಿಸಿ."

ಹುಡುಗ ಊಟ ಮಾಡಿದ. ಅಲ್ಲಿಂದ ಮೋಟಾರು ಪ್ರಯಾಣ. ಬೆಂಗಳೂರಿನಲ್ಲಿ ಜೀವನ ನಡಸಿದ್ದ ಅಮ್ಮಿಗೆ ಈ ಮೋಟಾರು ಬಸ್ಸುಗಳೇನೂ ವಿಚಿತ್ರವಾಗಿ ತೋರಲಿಲ್ಲ. ಆದರೆ ಈ ಮೋಟಾರುಗಳು ಮಾತ್ರ, ಕೊರಕಲು ಹಾದಿಯ ಮೇಲೆ ಅಲ್ಲಲ್ಲಿ ನಿಂತು ನಿದ್ದೆ ಮಾಡಿ, ಎಚ್ಚರವಾದೊಡನೆ ಹಾರಿ ಕುಪ್ಪಳಿಸಿ ಓಡಿಹೋಗುತ್ತಿದ್ದುವು.

ಮಧ್ಯಾಹ್ನದ ಅಡುಗೆಗೆ ಒಲೆ ಹಚ್ಚುವ ಹೊತ್ತಿಗೆ, ಮೋಟಾರು ಬಾಳೆ ಮಣ್ಣೂರು ಸೇರಿತು. ಅಮ್ಮಿಯ ಮೈಕೈಯೆಲ್ಲ ಪುಡಿಪುಡಿಯಾಗಿ ನೋಯುತ್ತಿತ್ತು. ಆ ಹುಡುಗನೂ ಸೊರಗಿ ಸುಣ್ಣವಾಗಿದ್ದ.

ಆ ಊರಲ್ಲಿ ಆಕೆ ಹೋಗಬಯಸಿದ್ದೊಂದೇ ಮನೆ—ರಾಮಾಶಾಸ್ತ್ರಿಯದು : ತನ್ನ ಅಕ್ಕನದು.

ಹುಡುಗನನ್ನೂ ಕರೆದುಕೊಂಡು ಮೆಲ್ಲನೆ ನಡೆಯುತ್ತ ಅಮ್ಮಿ ಅತ್ತ ಸಾಗಿದಳು.

ಆ ಮನೆಯ ಬಾಗಿಲು ತೆರೆದಿದ್ದುದು ದೂರದಿಂದಲೇ ಕಾಣಿಸುತ್ತಿತ್ತು. ಹಿಂದೆ ಎಷ್ಟೋ ಸಾರೆ ಕೂಗಿದ್ದ ಹಾಗೆಯೇ, "ಅಕ್ಕಾ ಅಕ್ಕಾ" ಎನ್ನುತ್ತ ಅಮ್ಮಿ ಆ ಮನೆಯ ಬಳಿ ಹೋದಳು.

ರೇಷ್ಮೆಯ ಸೀರೆಯುಟ್ಟು ಆಭರಣ ತೊಟ್ಟಿದ್ದ ಹೆಂಗಸೊಬ್ಬಳು ಒಳಗಿನಿಂದ ಬಂದು ಗಡಸು ಧ್ವನಿಯಲ್ಲಿ ಕೇಳಿದಳು :

"ಯಾರದು ?"

ಅಕ್ಕನನ್ನೆ ಇದಿರು ನೋಡುತ್ತಿದ್ದ ಅಮ್ಮಿಗೆ ಆ ನಿರಾಸೆ ಅಸಹನೀಯವಾಯಿತು.

"ಯಾರು ಬೇಕು ?"

"ಸುಂದರಮ್ಮ ಇಲ್ವಾ ?"

"ಯಾವ ಸುಂದರಮ್ಮ?"

"ಸುಂದರಮ್ಮ ಗೊತ್ತಿಲ್ವೆ ನಿಮ್ಗೆ? ನನ್ನ ಅಕ್ಕ—ರಾಮಾಶಾಸ್ತ್ರಿಗಳ ಹೆಂಡತಿ."

"ಓ—ಅವರಾ!"

"ಯಾಕೆ ಅವರಿಲ್ವೇನು?"

"ಬಹಳ ವರ್ಷದಿಂದ ನೀವು ಈ ಊರಲ್ಲಿ ಇಲ್ಲಿಲ್ಲಾಂತ ಕಾಣುತ್ತೆ."

"ಇರ್ಲಿಲ್ವಮ್ಮ—ಈಗ ತಾನೆ ಬಂದೆ. ಯಾಕೆ, ಏನಾಯಿತು?"

"ನಾವೂ ಊರಿಗೆ ಹೊಸಬ್ರೇನೇ....ಈ ಮನೆಗೆ ಬಂದು ಒಂದು ವರ್ಷ ವಾಯ್ತು."

"ಸುಂದರಮ್ಮ ಈ ಮನೆ ಬಿಟ್ಬಿಟ್ರೆ ಹಾಗಾದರೆ?"

"ಪಾಪ ನಿಮಗೊಂದೂ ತಿಳೀದು....ಸುಂದರಮ್ಮ ಸತ್ಹೋದ್ರು ಕಣ್ರೀ...."

"ಸತ್ಹೋದ್ರೆ?....ಏನಂದಿರಿ?"

"ಸತ್ಹೋದ್ರು ಅಂದೆ....ರಾಮಶಾಸ್ತ್ರಿ ಅದೆಲ್ಲೋ ಅವರ ಅಳಿಯನ್ಮನೇಲಿ ಇದಾರಂತೆ....ನೀವು ಯಾರು?"

"ನಾನು....ನಾನು ಬನಶಂಕರೀಂತ....ಈ ಮನೇಲೆ ಇದ್ದೆ ಹಿಂದೆ."

"ಓ ಹಾಗೊ...."

ಅಮ್ಮಿ ಅಲ್ಲಿಯ ಮನೆಯ ಮೆಟ್ಟುಗಲ್ಲಿನ ಮೇಲೆ ಕುಳಿತು, ಹಣೆಗೆ ಕೈಯಿಟ್ಟು, ಸರಾಗವಾಗಿ ಉಸಿರಾಡಲು ಯತ್ನಿಸಿದಳು.

ಆ ಹುಡುಗ ಹೇಳಿದ:

"ಹೋಗೋಣ ಅಜ್ಜಿ. ಇಲ್ಲಿ ಯಾರೂ ಇಲ್ಲ....ಹೋಗೋಣ."

ಮೆಲ್ಲನೆದ್ದು ಅಮ್ಮಿ ಆ ಹುಡುಗನ ಭುಜವನ್ನೆ ಆಧಾರವಾಗಿ ಮಾಡಿ ಬೀದಿಗಿಳಿದಳು.

ಅಕ್ಕನನ್ನು ಕಳೆದುಕೊಂಡ ತಬ್ಬಲಿ ತಾನು ಇನ್ನೆಲ್ಲಿಗೆ ಹೋಗಬೇಕು?

ತಾನು ತಾಯಿಯಾದ ಮನೆ. ಅಲ್ಲಿಗೆ ಹೋಗುವುದರಲ್ಲಿ ಅರ್ಥವಿರಲಿಲ್ಲ.

ಮಠ, ತನಗೆ ಬಹಿಷ್ಕಾರ ಹಾಕಿದ ಆ ಜನ!

ದೇವರ ದರ್ಶನ ಮಾಡಿ ಆ ಊರು ಬಿಡುವುದೇ ಮೇಲು.

ದರ್ಶನಕ್ಕೆ ಮುಂಚಿತವಾಗಿ ಭದ್ರಾನದಿಯಲ್ಲೊಂದಿಷ್ಟು ಸ್ನಾನ-ಮಡಿ ಬಟ್ಟೆ....

"ನಡೀ ಮಗು....ನದೀದಂಡೆಗೆ ಹೋಗೋಣ...."

"ಹಸಿವಾಗುತ್ತೆ...."

"ಸ್ನಾನಮಾಡಿ ಬಂದ್ಬಿಡೋಣ ಮಗು........ದೇವಸ್ಥಾನದಲ್ಲೇ ಪ್ರಸಾದ ಕೊಡ್ತಾರೆ...."

ನದಿಯ ಸ್ನಾನ....ಇಪ್ಪತ್ತೈದು ವರ್ಷಗಳಿಗೆ ಹಿಂದೆ, ಅಲ್ಲೆ ತನ್ನ ಜೀವನದ ದೋಣಿಗೆ ಚುಕ್ಕಾಣಿ ಹಾಕಿ ರಾಯರು ಅದರ ದಿಕ್ಕನ್ನು ಬದಲಿಸಿದ್ದರು....

....ರಾಯರಿಲ್ಲ ಈಗ....ತಾನು ವಿಧವೆ....

....ದೇವಸ್ಥಾನ ತಲುಪಿದಾಗ ಮಂಗಳಾರತಿಯ ಸಿದ್ಧತೆಯಾಗುತ್ತಿತ್ತು. ಅಲ್ಲಿ ಹೆಚ್ಚು ಜನ ಇರಲಿಲ್ಲ. ಅರ್ಚಕನಾಗಿದ್ದವನೊಬ್ಬ ಹುಡುಗ. ಅಮ್ಮಿ ಹಣ್ಣುಕಾಯಿ ಹಿಡಿದು ಹೊರ ಅಂಗಣದಲ್ಲೇ ನಿಂತಳು.

"ಒಳಗೆ ಬರಬಹುದು" ಎಂದರು ಯಾರೋ.

"ಇಲ್ಲ, ನಾನು—"

ಜಾತಿಬಾಹಿರಳಾದವಳು ಗರ್ಭಗುಡಿಯತ್ತ ಹೋಗುವುದೆ?

ಯಾರೋ ನಕ್ಕರು.

"ಈಗೇನು, ಹೊಲೆಯರೂ ಒಳಕ್ಕೆ ಹೋಗ್ತಾರಮ್ಮಾ!"

ಹೊಲೆಯರು! ದೇವರ ಎದುರೂ ಎಂತಹ ಮಾತುಗಳನ್ನಾಡುತ್ತಿದ್ದರು ಜನ, ಮೊದಲಿನ ಹಾಗೆಯೇ.

ಅಷ್ಟಾದರೂ ಅಮ್ಮಿ ಒಳಹೋಗಲಿಲ್ಲ. ಕಾಯಿಯ ಒಂದು ಭಾಗವೂ ಹಣ್ಣುಗಳೂ ಗಂಧವೂ ಆಕೆಗೆ ದೊರೆತುವು. ಆರತಿ ಅಲ್ಲಿಗೇ ಬಂತು.

"ಒಂದಿಷ್ಟು ಪ್ರಸಾದ ಆಗ್ಬೇಕಲ್ಲ. ಪರಊರಿನವರು ನಾವು."

"ಪ್ರಸಾದ! ಆ ಪದ್ಧತಿ ನಿಂತುಹೋಯ್ತಮ್ಮಾ....ದೇವಸ್ಥಾನದ ಮಗ್ಗುಲಲ್ಲಿ ಜೋಯಿಸರ ಮನೆಯಿದೆ. ಆರಾರಾಣೆ ಕೊಟ್ಟರೆ ಮಡಿ ಊಟ ಹಾಕ್ತಾರೆ. ನೀವು ಬ್ರಾಹ್ಮಣರು ತಾನೆ?"

ಅಮ್ಮಿ ಅಲ್ಲವೆಂದೋ ಹೌದೆಂದೋ ಏನೆಂಬುದೂ ಅರ್ಥವಾಗದ ಹಾಗೆ ತಲೆಯಾಡಿಸಿದಳು.

ಅಮ್ಮಿ ಹುಡುಗನೊಡನೆ ದೇವಸ್ಥಾನಕ್ಕೆ ಪ್ರದಕ್ಷಿಣೆ ಬಂದಳು........ತನ್ನನ್ನು ಶಪಿಸಿದ್ದ ರಾಯರ ಹೆಂಡತಿ ಎಲ್ಲಿರುವಳೋ ಈಗ?....ಅಂತೂ ಯಾರಾದರೂ ಗುರುತು ಹಿಡಿಯುವುದಕ್ಕೆ ಮುಂಚಿತವಾಗಿಯೇ ಈ ಊರು ಬಿಡಬೇಕು....

ಹೊರಗೆ ಆರಾಣೆಯ ಮಡಿ ಊಟಕ್ಕೆ ಕುಳಿತರು ಇಬ್ಬರೂ.

ಬಡಿಸುತ್ತಿದ್ದ ಜೋಯಿಸರ ವೃದ್ಧ ಹೆಂಡತಿ, ಅಮ್ಮಿಯನ್ನೆ ದಿಟ್ಟಿಸುತ್ತ, "ನಿಮ್ಮನ್ನೆಲ್ಲೋ ನೋಡಿದ ಹಾಗಿದೆಯಲ್ಲಾ" ಎಂದಳು.

ತುತ್ತು ಗಂಟಲಲ್ಲೆ ಸಿಲುಕಿತು ಅಮ್ಮಿಗೆ.

ಸುಧಾರಿಸಿಕೊಳ್ಳುತ್ತಾ, "ನಾವು ಬೆಂಗಳೂರ್ನೋರು—ಚಿಕ್ಕಮಗಳೂರಿಗೆ ಹೋಗ್ತಿದೀವಿ" ಎಂದಳು....

'ಚಿಕ್ಕಮಗಳೂರು'—'ಚಿಕ್ಕಮಗಳೂರು' ಎಂದು ಕಿರಿಚಿಕೊಳ್ಳುವ ಸದ್ದಿನೊಡನೆ ದೇವಸ್ಥಾನದ ಅಂಗಣಕ್ಕೇ ಬಸ್ಸು ಬಂತು. ಮತ್ತೊಮ್ಮೆ ಅಮ್ಮಿ ಮತ್ತು ಹುಡುಗ ಒಬ್ಬರಿಗೊಬ್ಬರು ಅಂಟಿಕೊಂಡು ಕುಳಿತರು.

ಕತ್ತಲಾಗುವ ಹೊತ್ತಿಗೆ ಬಸ್ಸು ಚಿಕ್ಕಮಗಳೂರು ಸೇರಿತು. ಅಲ್ಲಿಯೆ, ಬಸ್ ನಿಲ್ದಾಣದಲ್ಲಿಯೆ, ಅಮ್ಮಿ ಮತ್ತು ಆ ಹುಡುಗ ಕಂಬಳಿ ಹೊದ್ದುಕೊಂಡು ಮಲಗಿದರು

....ಅದೇ ಊರು....ಅಲ್ಲಿಯೇ ಗುಮಾಸ್ತೆಯಾಗಿದ್ದುದು ತನ್ನ ಪತಿರಾಯ.... ಅಲ್ಲಿಯೆ ಸಾವು....ಆಗಿನಿಂದ ಆರಂಭ ತನ್ನ ಬಸ್ನ ಭವಣೆ....ಓ ಶಿವನೆ!....

ಯೋಚನೆ ಮಾಡಿ ಆಯಾಸವಾಗಲು, ಬೆಳಗಾಗುವ ಹೊತ್ತಿಗೆ ಅಮ್ಮಿ ಸ್ವಲ್ಪ ನಿದ್ದೆ ಹೋದಳು.

ಬೆಳಗಾದ ಮೇಲೆ ಹುಡುಗ ಹೋಟೆಲಿಗೆ ಹೋಗಿ ತನ್ನ ಹೊಟ್ಟೆ ತುಂಬಿ ಕೊಂಡು ಬಂದ.

ರಾಜಣ್ಣ ಹೇಳಿದ್ದ ಹಾಗೆಯೇ ಚಿಕ್ಕಮಗಳೂರಿನಿಂದ ಹೊರಡುತ್ತಿದ್ದ ಬಸ್ಸು ರಾಯನಹಳ್ಳಿ ಜೀವನಹಳ್ಳಿಗಳಿಗೂ ಹೋಗುತ್ತಿತ್ತು.

ರಾಯನಹಳ್ಳಿಯಲ್ಲಿ ಬಸ್ ನಿಂತಾಗ ಅಮ್ಮಿಗೆ ದಿಗ್ಭ್ರಮೆಯಾಯಿತು. ತಾನಿಲ್ಲಿ ಇಳಿಯಬೇಕೇ ಬೇಡವೆ? ಅದೇನು ಹೊಸ ಅಶುಭ ಸಮಾಚಾರ ಇಲ್ಲಿ ತನಗಾಗಿ ಕಾದಿದೆಯೊ! ಆದರೆ ಆ ಹಳ್ಳಿಯಲ್ಲಿ ಎಂದೋ ನಡೆದ ಘಟನೆಗಿಂತ ಹೆಚ್ಚು ಅಶುಭ ವಾದುದು ಬೇರೊಂದು ಇರಲಾರದಲ್ಲವೆ?

ಕಂಡಕ್ಟರು ಹೇಳುತ್ತಿದ್ದ:

"ಇದೇ ರಾಯನಹಳ್ಳಿ. ನಿಮ್ಮ ಟಿಕೀಟು ಇಲ್ಲಿಗಾಯ್ತು. ಇಳೀರಿ ಅಜ್ಜಿ."

ಸುಶೀಲೆಗೆ ಹೆರಿಗೆಯಾಗುವುದಕ್ಕೆ ಮುಂಚೆಯೇ ತಾನು ಅಜ್ಜಿಯ ಪಟ್ಟಕ್ಕೇ ರಿದ್ದೆ. ವಯಸ್ಸು ಐವತ್ತೇ ಆದರೂ ತಾನು ಅಜ್ಜಿ....

ಹುಡುಗನೊಡನೆ ಆಕೆ ಕೆಳಕ್ಕಿಳಿದಳು....ಸುಮಾರು ನಾಲ್ಕು ದಶಕಗಳ ಹಿಂದೆ ತಾನು ಇಲ್ಲಿಗೆ ಬಂದಿದ್ದ ಹಳ್ಳಿ ಇದೇ ಏನು? ಗುರುತು ಸಿಗುವ ಹಾಗೆಯೇ ಇರಲಿಲ್ಲ. ಎಷ್ಟೊಂದು ಮಾರ್ಪಾಟು!

ಪೂರ್ವದ ಬೆಟ್ಟಗಳತ್ತ ಅಮ್ಮಿ ದೃಷ್ಟಿ ಹರಿಸಿದಳು. ಸುತ್ತಮುತ್ತಲಿನ ಕಾಡು ಗಳು ಮಾಯವಾಗಿದ್ದರೂ ಬೆಟ್ಟಗಳಿದ್ದುವು. ಅಲ್ಲೇ ಒಂದರ ಕೆಳಗೆ ಆ ಮೂಲೆ ಯಲ್ಲಿ, ಬಾಳ್ವೆಯ ಹಸುರು ಹುಲ್ಲಿನ ಬಣವಿಗೇ ಬೆಂಕಿ ಹಚ್ಚಿದ್ದರು ಆ ದಿನ.

ಮೋಟಾರು ಹಾದಿಯಾದ ಮೇಲೆ ಆ ಊರಿಗೆ ಬರುವವರೆಷ್ಟೋ ಹೋಗುವವ ರೆಷ್ಟೋ. ಆದುದರಿಂದಲೇ ಅಮ್ಮಿಯೂ ಆ ಹುಡುಗನೂ ಹಳ್ಳಿಯ ಕಾಲು ಹಾದಿ ಗಳಲ್ಲಿ ನಡೆದು ಹೋದಾಗ, ಯಾರೂ ಗಮನಿಸಲಿಲ್ಲ.

ಪ್ರಯಾಸಪಟ್ಟು ಹುಡುಕುತ್ತ ಆ ಅಂಗಳವನ್ನು ಅಮ್ಮಿ ತಲುಪಿದಳು. ಅದೇ ಅಂಗಳ....ದೀಪಾವಳಿಯ ಸಾಲು ದೀಪಗಳನ್ನು ತಾನು ಬೆಳಗಿದ್ದ ಅಂಗಳ....ಆದರೆ ಆ ಮನೆಗೀಗ ಮಂಗಳೂರು ಹೆಂಚು ಹೊದಿಸಿದ್ದರು....ಯಾರಿರುವರೊ ಒಳಗೆ?

ನಡೆಯುತ್ತ ಬಂದು ಮನೆಯ ಬಾಗಿಲ ಬಳಿ ನಿಂತ ಅಮ್ಮಿಯನ್ನೂ ಹುಡುಗ ನನ್ನೂ ಕಂಡು ಜಗಲಿಯ ಮೇಲೆ ಒಬ್ಬಳೇ ಪಗಡೆಯಾಡುತ್ತ ಕುಳಿತಿದ್ದ ಹುಡುಗಿ, "ಅಮ್ಮಾ, ಯಾರೋ ಬಂದಿದಾರೆ ನೋಡೆ" ಎಂದಳು.

ಯಾರು ಈ ಹುಡುಗಿ? ಆಕೆಯ ಅಮ್ಮನಾಗಿ ಹೊರಬರುವಾಕೆ ಯಾರು?

ಹೊರಬಂದು ಅಮ್ಮಿಯನ್ನು ನೋಡಿದವಳು ನಾಲ್ವತ್ತರೊಳಗೇ ಇದ್ದೊಬ್ಬ ಹೆಂಗಸು. ಆಕೆಯನ್ನು 'ಯಾರಮ್ಮ ನೀನು?' ಎಂದು ಕೇಳಬೇಕೆಂದು ಅಮ್ಮಿಗೆ ತೋರಿತು. ಅಷ್ಟರಲ್ಲಿ ಆಕೆಯೇ ಕೇಳಿದಳು:

"ಯಾರಮ್ಮ ನೀವು?"

"....ಮನೇಲಿ ಬೇರೆ ಯಾರೂ ಇಲ್ವೇನಮ್ಮ?"

ಆ ಪ್ರಶ್ನೆ ಕೇಳಿ, ಕಟ್ಟುಮಸ್ತಾದ ಗಂಡುಸೊಬ್ಬನು ಹೊರಬಂದ:

"ಯಾರು ಬೇಕಮ್ಮ?"

ಆತ ಏನೆಂದನೆಂಬುದು ಕೇಳಿಸಲಿಲ್ಲ ಅಮ್ಮಿಗೆ. ಆಕೆಯ ದೇಹವೆಲ್ಲ ದೃಷ್ಟಿಯಾಗಿ ಅವನನ್ನು ನೋಡುತ್ತಿತ್ತು. ಹಲವು ವರ್ಷಗಳ ಹಿಂದಿನ ಮಗುವಾಗಿ ಆತನನ್ನು ಮಾರ್ಪಡಿಸಿ ನೋಡುತ್ತಿತ್ತು.

"ನಾಣಿ! ನಾಣಿ ಅಲ್ವೇನಪ್ಪಾ....ನಾನು....ಗುರುತು ಸಿಗಲಿಲ್ವೇನು? ಅಮ್ಮಿ....ಅಮ್ಮಿ!"

ಆತನ ತೆರೆದ ಬಾಯಿ ಹಾಗೆಯೇ ನಿಂತಿತು, ಆಶ್ಚರ್ಯದಿಂದ.

"ಅಮ್ಮಿ! ಹೌದಲ್ಲಾ! ಬನ್ನಿ ಅಮ್ಮಿ....ಇದೇನು ಅಲ್ಲೇ ನಿಂತಿದೀರ?"

ಅದರ ಜತೆಯಲ್ಲೇ ಮೆಲುದನಿಯಲ್ಲಿ ಆತ ಹೆಂಡತಿಗೂ ಪರಿಚಯ ಮಾಡಿಸಿಕೊಟ್ಟ ಮಾತುಗಳು....

"ನಿಜವೇ?! ನಾನು ಯಾರೋಂತಿದ್ದೆ. ಬನ್ನೀಮ್ಮ ಒಳಕ್ಕೆ."

ಅಮ್ಮಿ ಕೈಕಾಲು ತೊಳೆದುಕೊಂಡಳು. ಮೊದಲ ಸಾರೆ ಬಂದಿದ್ದಾಗಲೂ ಹಾಗೆಯೇ—....

ಎಲ್ಲಿಲ್ಲದ ಗೌರವ ತನಗೆ....ನಾಣಿಯಿಂದಲೂ ಬಹುವಚನ....ರಂಗ ಎಲ್ಲಿದಾನೋ....ಅತ್ತೆ—ಮಾವ . . .

ಬಳಿಕ ಆ ಮೈದುನ ಯುಗಯುಗಗಳ ಹಿಂದಿನ ಸಲಿಗೆಯಿಂದಲೇ ಆತ್ಮೀಯತೆಯಿಂದಲೇ ಮಾತನಾಡಿದ:

"ಅಮ್ಮಿ, ನೀನು ನಮ್ಮನ್ನು ಮರೆತೇ ಬಿಟ್ಟೆ. ಆಮೇಲೆ....ಎಷ್ಟೊಂದು ಜ್ಞಾಪಿಸ್ಕೋತಿದ್ವೆವು ನಿನ್ನನ್ನು....ಅಮ್ಮ ತೀರ್ಕೊಂಡ್ರು....ಅಪ್ಪಯ್ಯನೂ....ಅದಾದ ಮೇಲೆ ಯಾರೋ ಬಂದು ನಿನ್ನ ವಿಷಯ ಏನೋ ಕಿಂವದಂತಿ ಹೇಳಿದ್ರು, ನಾವು ನಂಬ್ಲಿಲ್ಲ ಅಮ್ಮಿ...."

ಅವರು ನಂಬಿರಲಿಲ್ಲ, ಅವರು ಯಾರೂ ನಂಬಿರಲಿಲ್ಲ.

"ಈಗೆಲ್ಲಿಂದ ಬಂದೆ ಅಮ್ಮಿ?"

"ಬೆಂಗಳೂರಿಂದ ಬಂದೆ ಕಣಪ್ಪ. ನನ್ನ ಮಗ ಅಲ್ಲೇ ಇದಾನೆ ಕಾಲೇಜ್ನಲ್ಲಿ ಓದ್ತಿದಾನೆ....ಈಗ ಪರೀಕ್ಷೇಂತ ಪಕ್ಕದ್ಮನೆ ಈ ಹುಡುಗನ್ನ ಜತೆ ಕೊಟ್ಟು ಕಳಿಸಿದಾನೆ. ಪರೀಕ್ಷೆಮುಗಿಸಿ ಆತನೂ ಬಂದ್ಬಿಡ್ತಾನೆ....ಮಗಳ್ನ ಬೊಂಬಾಯಿಗೆ ಕೊಟ್ಟಿದೀನಿ ನಾಣಿ....ಈಗ ಬಸುರಿ....ಚೊಚ್ಚಲು...."

ಆ ಕಿಂವದಂತಿಗೆ ಆಧಾರವಿತ್ತು ಹಾಗಾದರೆ. ನಾಣಿ ಗಾಬರಿಯಿಂದ ಎಡಕ್ಕೂ ಬಲಕ್ಕೂ ನೋಡಿದ. ಬಂದವರಿಗಾಗಿ ಅಡುಗೆಯ ಏರ್ಪಾಡಿಗೆಂದು ಅವನ ಹೆಂಡತಿ ಒಳಹೋಗಿದ್ದಳು.

ನಾಣಿ ನಿಟ್ಟುಸಿರು ಬಿಟ್ಟರೂ ಸಂತೋಷವಾಗಿರಲು ಯತ್ನಿಸುತ್ತ "ಚೆನ್ನಾಗಿ ದೀಯಾ ಒಟ್ನಲ್ಲಿ?" ಎಂದ.

ಒಟ್ಟನಲ್ಲಿ—

"ನನ್ನ ನೋಡಿದರೆ ಹ್ಯಾಗನಿಸುತ್ತಪ್ಪಾ!"

ತನ್ನದು ತಪ್ಪಿಲ್ಲ. ತನಗೊಂದೂ ತಿಳಿಯದು, ಎಂಬಂತೆ ಆತ ತಲೆಯಾಡಿಸಿದ.

"ರಂಗಣ್ಣ ಎಲ್ಲಿ?"

"ಮರತೇ ಬಿಟ್ಟೆ ಹೇಳೋಕೆ....ಮದುವೆಯಾದ್ಮೇಲೆ ಈಗ ಹತ್ತು ವರ್ಷದಿಂದ ಇನ್ನೊಂದು ಹಳ್ಳೀಲಿದಾನೆ....ಇಬ್ಬರು ಮಕ್ಕಳು....ಅಲ್ಲೇ ಒಂದಿಷ್ಟು ಜಮೀನಿದೆ."

"ಪಾಲಾಯ್ತು ಅನ್ನು."

—'ಅವರು' ಇದ್ದಿದ್ದರೆ ಸೋದರರು ಮೂವರಾಗುತ್ತಿದ್ದರು, ಮೂರು ಪಾಲು.

"ಹೂಂ. ಹಾಗೇಂತ್ಲೆ ಅನ್ಬೇಕು. ಇಲ್ಲಿ ಆಡ್ತಾ ಇದ್ಲಲ್ಲ ಹುಡುಗಿ? ಆಕೆ ನನ್ಮಗಳು. ದೊಡ್ಡೋನು ಚಿಕ್ಕಮಗಳೂರಲ್ಲಿ ಹೈಸ್ಕೂಲ್ ಓದ್ತಾ ಇದಾನೆ...."

ದೇವರಂತಹ ಮಾವನಿರಲಿಲ್ಲ. ಪ್ರೀತಿಯ ಅತ್ತೆ ಇರಲಿಲ್ಲ. ಆದರೂ ಆ ಮನೆತನದ ಮಲ್ಲಿಗೆ ಬಳ್ಳಿ ಅಡರಿಕೊಂಡು ಚಪ್ಪರವೇರುತ್ತಿತ್ತು. ಹಿರಿಯ ಮಗನ ಹೆಂಡತಿಯಾಗಿ ತನ್ನದಾಗಬೇಕಾಗಿದ್ದ ಗೌರವ ಅದು. ತನಗೆ ಮಕ್ಕಳಿದ್ದಾರೆ, ಆದರೆ ಆ ಗೌರವವಿರಲಿಲ್ಲ.

ನಾಣಿ ಮನಸ್ಸಿನೊಳಗೂ ಹೊರಗೂ ಯಾವ ಭೇದಭಾವವನ್ನೂ ಕಲ್ಪಿಸದೆ, ಮಿಂದು ಮಡಿಯುಟ್ಟು ನಿಂತಿದ್ದ ಅಮ್ಮಿಯನ್ನು ಅಡುಗೆ ಮನೆಗೊಯ್ದ, ಊಟಕ್ಕೆಂದು.

....ತಾನು ಸೊಸೆಯಾಗಿ ಓಡಾಡಿದ್ದ ಅಡುಗೆ ಮನೆ.

ನೆನಪಿನ ಬುತ್ತಿ ಮುಗಿಯದೇ ಇದ್ದ ಆ ಹೊತ್ತಿನಲ್ಲಿ, ಎದುರಿಗಿದ್ದ ಸೊಗಸಾದ ಅನ್ನವನ್ನು ಗಂಟಲಿನೊಳಗೆ ತುರುಕುವುದು ಸಾಧ್ಯವಾಗಲಿಲ್ಲ.

"ಯಾಕಮ್ಮೀ, ಇಷ್ಟೇ ಉಣ್ತಿದೀಯಾ?"

"ನಂಗೆ ಹಸಿವಿಲ್ಲಪ್ಪ...."

"ಹೋಗಲಿ, ರಾತ್ರೆ ಬೇರೆನಾದ್ರೂ ಮಾಡಿಸೋಣವಂತೆ."

"ರಾತ್ರೆ! ರಾತ್ರೆಯೂ ಆ ಮನೆಯಲ್ಲಿ ತಾನಿರಬೇಕೆ?"

"ಇಲ್ಲ ನಾಣಿ....ಸಾಯಂಕಾಲ ಒಂದು ಮೋಟಾರಿದೆಯಂತಲ್ಲ. ಅದರಲ್ಲಿ ಜೀವನಹಳ್ಳಿಗೆ ಹೊಗ್ತೀನಿ..."

"ಎಲ್ಲಾದರೂ ಉಂಟೆ? ಇಲ್ಲೇ ಇದ್ಬಿಡು ಅಮ್ಮಿ. ಅಲ್ಲಿ ಯಾರಿದ್ದಾರೆ ನಿಂಗೆ?"

"ಯಾಕೆ, ನಾನು ಹುಟ್ಟಿದ ಹಳ್ಳಿ ಅಲ್ವೆ ಅದು ? ಕಾವೇರಿ ಇಲ್ವೆ ಅಲ್ಲಿ ?"

"ಬೇಕಿದ್ದರೆ ಹೋದರಾಯ್ತು. ಇಷ್ಟೇನು ಅವಸರ ? ಒಂದು ವಾರವಾದರೂ ಇದ್ಬಿಟ್ಟು ಹೋಗು."

ಸುಳ್ಳೆಂದು ತಿಳಿದೂ ಅಮ್ಮಿ ಅಂದಳು :

"ಒಂದು ವಾರವಾದ್ಮೇಲೆ ನಾನೇ ಬರ್‍ತೀನಪ್ಪ. ಒತ್ತಾಯ ಮಾಡ್ಬೇಡ. . . . ನಂಗೇನೊ ಆಗ್ತಿದೆ....ನಾನಿವತ್ತು ಜೀವನಹಳ್ಳಿಗೆ ಹೋಗ್ಲೆಬೇಕು....ಖಂಡಿತ ಹೋಗ್ಬೇಕು."

"ಆಗಲಿ ಅಮ್ಮಿ," ಎಂದ ನಾಣಿ ನಿರಾಶೆಯಿಂದ, ತಾನೂ ಅನ್ನ ಬಿಟ್ಟೆದ್ದು ಕೈ ತೊಳೆಯುತ್ತ, "ಒಂದು ವಾರ ಅಲ್ಲಿದ್ದು ನೀನು ಇಲ್ಲಿಗೇ ಬರಬೇಕು. ಇಲ್ಲಿಯೇ ಇರಬೇಕು. . . .ಬರದೇ ಇದ್ರೆ, ನಾನೇ ಅಲ್ಲಿಗೆ ಬಂದು ಕರಕೊಂಡು ಬರ್‍ತೀನಿ."

. . . .ಕತ್ತಲಾಗುವುದರೊಳಗಾಗಿ ನಾಲ್ವತ್ತು ಮೈಲಿ ದೂರ ಸಾಗಿ ಬಂದು ಜೀವನಹಳ್ಳಿ ಸೇರಿತು ಮೋಟಾರು. ಮೋಟಾರಿಂದ ಇಳಿದಾಗ ಅಮ್ಮಿಯ ಮೈಯಲ್ಲಿ ಹೊಸ ಶಕ್ತಿಯ ಸಂಚಾರವಾಯಿತು. ತಾನು ಹುಟ್ಟಿದ ಹಳ್ಳಿಯ ಶೀತಲ ಗಾಳಿ ಕುಡಿದು ಮತ್ತೆ ಆಕೆ ಹರೆಯದ ಹುಡುಗಿಯಾದಳು.

—ಹೇಗಿರುವಳೊ ಕಾವೇರಿ ? ದಪ್ಪಗೆ—ಎಂದಿರಲಿಲ್ಲವೆ ರಾಜಣ್ಣ ?

ಶಾನುಭೋಗರ ಮನೆಯ ಬಾಗಿಲು.

"ಕಾವೇರಿ ! ಕಾವೇರಿ ! ಕಾವೇರಿ ! "

ಅಸಹನೆ ತುಂಬಿದ ಸ್ವರದ ಕರೆ....ಆ ಮನೆಯ ಗೋಡೆಗಳ ನಡುವೆ ಎಲ್ಲಿಯೋ ಅವಿತಿದ್ದ ತನ್ನ ಬಾಲ್ಯದ ಗೆಳತಿಯನ್ನು ಕಾಣುವ ಆತುರ.

....ಆಕೆ ಬಂದಳು. ಆಕೆಗೆ ತನ್ನನ್ನು ಕರೆದ ಸ್ವರ ಪರಿಚಿತವಾಗಿ ತೋರಿತ್ತು.

' ಯಾರು ? ' ಎಂದಾಕೆ ಪ್ರಶ್ನಿಸಲಿಲ್ಲ.

"ಕಾವೇರಿ ! ಇಲ್ಲಿದೀನಿ. ನಾನು !"

"ಅಮ್ಮಿ ! ಬಂದೆಯೇನೇ ಅಂತೂ ?"

ಹೊರಗೇ ನಿಂತಿದ್ದಳು ಆ ಅಮ್ಮಿ....ಕಾವೇರಿ ಕೈ ಹಿಡಿದು ಒಳಕ್ಕೆ ಕರೆದು ತಂದಳು. ತನ್ನ ದೊಡ್ಡ ಮಗ, ಸೊಸೆ, ಯಜಮಾನರು, ಎಲ್ಲರಿಗೂ ಕೇಳಿಸುವ ಹಾಗೆ ಕಾವೇರಿ ಅಂದಳು :

"ಅಮ್ಮಿ ಬಂದಿದಾಳೆ. ಕೇಳಿಸ್ತೆ ? ಬೆಂಗಳೂರಿಂದ ಅಮ್ಮಿ ಬಂದಿದ್ದಾಳೆ."

ಆದರೆ ಒಳಗೆ ಬೆಳಕಿನಲ್ಲಿ ಆ ಗೆಳತಿಯರು ಪರಸ್ಪರರನ್ನು ನೋಡಿದಾಗ ?

ಹೇಗಾಗಿದ್ದಳು ಅಮ್ಮಿ ! ತನ್ನ ತಾಯಿಗೆ ಸೊಗಸಾದ ಗುಂಗುರು ಬೆಳ್ಳಿ ಕೂದಲಿದೆ ಎಂದಿದ್ದ ರಾಜಣ್ಣ ಆ ದಿನ, ಅಭಿಮಾನದಿಂದ. ಎಲ್ಲಿ ಆ ಕೂದಲು ? ಎಲ್ಲಿ ? ಗುರುತೆ ಸಿಗದ ಹಾಗೆ ಆಳಆಳಕ್ಕೆ ಬತ್ತಿಹೋಗಿದ್ದ ಆ ಮುಖವೊ ?........

"ಮೈ ಸರಿಯಾಗಿಲ್ವೆ ಅಮ್ಮಿ ?"

‘‘ಸರಿಯಾಗಿದೀನಮ್ಮಾ....ಸರಿಯಾಗಿಯೇ ಇದೀನಿ ಕಾವೇರಿ. ಇನ್ನೇನೂ ಭಯವಿಲ್ಲ. ಅಂತೂ ಬಂದೆನಲ್ಲ!”

‘‘ಎಷ್ಟೋ ವರ್ಷಗಳ ಮೇಲೆ ನೀನು ಬಂದಿದೀಯಾ ಅಮ್ಮಿ. ಇನ್ನೆಲ್ಲಿಗೂ ಹೋಗಬೇಡಮ್ಮ: ಸಾಕು ನೀನು ಅನುಭವಿಸಿದ್ದು. ಹತ್ತು ಜನ್ಮಕ್ಕೆ ಸಾಕಾಗು ವಷ್ಟಾಯಿತು....”

ಅವರಿಬ್ಬರೂ ನಡುವಯಸ್ಸಿನ ಹೆಂಗಸರಾಗಿರಲಿಲ್ಲ....ಆದೇ ಆಗ ಸೀರೆಯುಡಲು ಕಲಿತಿದ್ದ ಹುಡುಗಿಯರಾಗಿದ್ದರು....ಅಂತಹ ಹುಡುಗಿಯರಿಬ್ಬರ ಗೆಳೆತನ....ಮುಗಿಯ ದಷ್ಟು ಮಾತು....

೦ ೦ ೦ ೦ ೦

ಮರುದಿನ ಆ ಹುಡುಗ, ದೊಡ್ಡದೊಂದು ಭಾರ ಕಳೆಯಿತೆಂದು ಬೆಂಗಳೂರಿಗೆ ಹಿಂತಿರುಗಿ ಹೋದ.

ಅಮ್ಮಿ ಅಲ್ಲಿಯೇ ಉಳಿದಳು. ಅಣ್ಣನ ನೆನಪು....ಅಜ್ಜ ಮಾರಿದ ಹೊಲ.

ಅದು ಬೇಸಗೆ. ಹಸುರು ಕಂದು ಬಣ್ಣಕ್ಕೆ ಮಾರ್ಪಟ್ಟು ಗಿಡಮರಗಳು ಬಾಡಿದ್ದುವು. ನೆಲ ಒಣಗಿತ್ತು.

ಅಂಥದರಲ್ಲೂ ಅಮ್ಮಿ ಹಸನ್ಮುಖಿಯಾದಳು.

ದಿನಗಳು ಕ್ಷಣಗಳ ಹಾಗೆ ಕಳೆದ ಮತ್ತೊಂದು ಅಪೂರ್ವ ಅನುಭವ.

....ಆದರೆ ಸದಾ ಕಾಲವೂ ಆ ಅನುಭವ ತನ್ನ ಸೊತ್ತಾಗುವ ಭಾಗ್ಯವಿರಲಿಲ್ಲ ಅಮ್ಮಿಗೆ.

ಮತ್ತೆ ಯಾತನೆಗಳು ತಲೆದೋರಿದುವು—ಮನಸ್ಸಿನ, ದೇಹದ ಯಾತನೆ ಗಳು....ನಿದ್ದೆ ಬಾರದ ರಾತ್ರಿಗಳು....ಮಗನ–ಮಗಳ ನೆನಪು....ಯಾರೊ ಬೆದರಿಸಿದ ಹಾಗಾಗುತ್ತಿತ್ತು:

“ಮಕ್ಕಳ್ನ ಹಾಗೇ ಬಿಟ್ಟಿದೀಯಾ ? ಯಾರಾದರೂ ಆ ಒಡವೆ ಎತ್ತಿಕೊಂಡು ಹೋದರೆ ಯಾರು ಗತಿ ನಿಂಗೆ ?”

ಕನಸಿನಲ್ಲಿ ಅಮ್ಮಿ ‘ರಾಜಾ! ಸುಶೀ !’ ಎಂದು ಹೆಸರು ಹಿಡಿದು ಕೂಗುತ್ತಿದ್ದಳು.

ಕಾವೇರಿ ಏನೇನೋ ಔಷಧಿ ಮಾಡಿಸಿದಳು. ಪ್ರಯೋಜನವಾಗಲಿಲ್ಲ.

ಜ್ವರವೂ ಅಮ್ಮಿಯನ್ನು ಹುಡುಕಿ ಬಂದು ಕಾಡಿಸಿತು. ಮಲಗಿದ್ದಲ್ಲಿಂದ ಏಳಲಾಗಲಿಲ್ಲ ಆ ಜೀವಕ್ಕೆ.

‘‘ಅಂತೂ ನಿಮಗೆಲ್ಲಾ ತೊಂದರೆ ಕೊಡ್ತಿದೀನಿ ಕಾವೇರಿ.”

‘‘ಸುಮ್ನಿರು ಅಮ್ಮಿ....ಏನಾದರೂ ಅನ್ಬೇಡ....”

‘‘ರಾಜಣ್ಣಂಗೊಂದು ಕಾಗದ ಬರೆಸು ಕಾವೇರಿ....ಪರೀಕ್ಷೆ ಮುಗಿಸ್ಕೊಂಡು ತಂಗೀ ಜತೇಲಿ ಬೇಗ್ನೆ ಬಾಂತ.”

‘‘ಹೂಂ, ಬರೆಸ್ತೀನಿ........”

"ಮುಂದಿನ ವಾರವೇ ಆತನಿಗೆ ಪರೀಕ್ಷೆ....ನಾನು ಕಾಹಿಲೆ ಬಿದ್ದಿದೀನೀಂತ ಬರೀಬೇಡೀಪ್ಪಾ."

"ಇಲ್ಲ ಕಣೆ. ಅಷ್ಟೂ ಗೊತ್ತಾಗಲ್ವೆ ?"

ಜ್ವರ ಹೆಚ್ಚಿತು.....ಸ್ಮೃತಿ ತಪ್ಪುತ್ತಿತ್ತು ಒಮ್ಮೊಮ್ಮೆ....

ಎಚ್ಚರವಿದ್ದಾಗ ಅಮ್ಮ ಹೇಳುತ್ತಿದ್ದಳು :

"ಸುಶೀನ್ನೂ ಕರಕೊಂಡೇ ಬರ್ಲಿ....ಯಾಕೊ, ಈ ಸಾರೆ ನಾನು ಉಳಿಯೋಲ್ಲ, ಕಾವೇರಿ."

ಹಾಗನ್ಬಾರದೇ....ನಿಂಗೇನೂ ಆಗಲ್ಲ. ಹೆದರ್‍ಕೊಬೇಡ."

"ಹೆದರ್‍ಕೆ ಒಂದೂ ಇಲ್ಲ ಕಾವೇರಿ. ರಾಜಣ್ಣನ್ನೂ ಸುಶೀನ್ನೂ ನೋಡ್ಬೇಕೂಂತ ಆಸೆ....ಮಕ್ಕಳು ಪಕ್ದಲ್ಲೇ ಇದ್ದಾಗ....ಸಾಯೋದು....ಮುತ್ತೈದೆ ಸಾವಿನಷ್ಟೇ ಸುಖ ಅಲ್ಲ....?"

ಅಧೀರಳಾದರೂ ಕಾವೇರಿ ತಾನು ಅತ್ತು ಅಮ್ಮಯ ದುಃಖ ಹೆಚ್ಚಿಸಬಾರದೆಂದು, ತುಟಿ ಬಿಗಿಹಿಡಿದು ತನ್ನೊಳಗಿನ ನೋವಿಗೆಲ್ಲ ಬೀಗ ಹಾಕಿದಳು.

ಕಾವೇರಿಯ ಯಜಮಾನರು ಅವಸರದ ಕಾಗದ ಬರೆದರು :

"ಜೀವ ಉಳಿಯೋ ಪ್ರಶ್ನೆ........ಕಾಗದ ಕಂಡ ತಕ್ಷಣ ಹೊರಟು ಬಾ .... ಸುಶೀಲೇನೂ ಬರಬೇಕಂತೆ. ಬರುವುದು ಸಾಧ್ಯವೆ ? ನೋಡು....ನೀನಂತೂ ತಡ ಮಾಡ್ಬೇಡ:

ಎರಡು ದಿನ ಬಿಟ್ಟು ಚಿಕ್ಕಮಗಳೂರಿಗೆ ಜನ ಕಳುಹಿಸಿ, ಅಲ್ಲಿಂದ ಬೆಂಗಳೂರಿಗೆ ಅದೇ ಅರ್ಥದ ತಂತಿಯನ್ನೂ ಅವರು ಕೊಡಿಸಿದರು.

೨೦

ರಾಜಣ್ಣ ಪರೀಕ್ಷೆಗೆ ಓದುತ್ತ ಮನೆಯಲ್ಲೇ ಇದ್ದುದರಿಂದ ಕಾಗದ ತಂತಿಗಳೆರಡೂ ಸಕಾಲದಲ್ಲಿ ಏಕಕಾಲದಲ್ಲಿ ದೊರೆತುವು. ಅವುಗಳನ್ನೋದಿ ರಾಜಣ್ಣ ತಬ್ಬಿಬ್ಬಾದ. ಎರಡೇ ದಿನಗಳಿದ್ದುವು ಪರೀಕ್ಷೆಗೆ. ಪರೀಕ್ಷೆ ಮುಗಿಸಿ ಹೋಗುವುದೆಂದರೆ ಎರಡು ವಾರಗಳಾದರೂ ಆಗಬಹುದು : ಹೆಚ್ಚೂ ಆಗಬಹುದು. ಆದರೆ ಕಾಗದ—ತಂತಿಯ ಪ್ರತಿ ಪದದಲ್ಲೂ ಕಾತರ ತುಂಬಿತ್ತಲ್ಲ? ತನ್ನ ಅಮ್ಮ ಮರಣಶಯ್ಯೆಯಲ್ಲಿರುವಳೆಂದೇ ಆ ಸಂದೇಶದ ಅರ್ಥ.

ಆ ಕಂಗಾಲ ಪರಿಸ್ಥಿತಿಯಲ್ಲಿ ಸುಮ್ಮನೆ ಕುಳಿತು ರಾಜಣ್ಣ ಹೊತ್ತು ಕಳೆಯುವ ಹಾಗಿರಲಿಲ್ಲ. ಆಗಲೆ ಮಧ್ಯಾಹ್ನ ದಾಟಿತ್ತು.

ರಾಜಣ್ಣ ಬಿಸಿಯುಸಿರು ಬಿಟ್ಟು ತಾಯಿಯನ್ನು ನೋಡಲು ಹೊರಡುವ ತೀರ್ಮಾನ ಮಾಡಿದ.

ಪರೀಕ್ಷೆ ದೊಡ್ಡದಲ್ಲ. ಆಮೇಲೂ ಪಾಸಾಗಬಹುದು. ಈ ಭೂಮಿಯ ಮೇಲೆ ತನ್ನ ಇರುವಿಕೆಯನ್ನೇ ಸಾಧ್ಯಗೊಳಿಸಿದ ತಾಯಿಯ ಕೊನೇ ಘಳಿಗೆಯಲ್ಲಿ ಆಕೆಯ ಬಳಿಯಲ್ಲಿರದೆ, ಪರೀಕ್ಷೆಯ ಪ್ರಶ್ನೆಗಳನ್ನು ಉತ್ತರಿಸುವುದು ಸರಿಯಾಗಿರಲಿಲ್ಲ—ಸಾಧ್ಯವಿರಲಿಲ್ಲ.

ತಂಗಿಯನ್ನು ಕರೆದುಕೊಂಡು ಬರಬೇಕೆಂಬುದು ತಾಯಿಯ ಬಯಕೆಯಾಗಿತ್ತು. ತಂಗಿ ತುಂಬು ಗರ್ಭಿಣಿ. ಹಾಗೆಲ್ಲ ಹೊರಟು ಬರಲು ಮಾಧವನಿಗೆ ರಜವಾದರೂ ಎಲ್ಲಿ ದೊರೆಯಬೇಕು ?

ಹೊರಡುವ ಸಿದ್ಧತೆ ಮಾಡಿ, ರಮೆಗೆ ತಿಳಿಸಿ ಬರಬೇಕೆಂದು ರಾಜಣ್ಣ ಬಾಡಿಗೆಯ ಸೈಕಲ್ಲನ್ನೇರಿ ಅವರ ಮನೆಗೆ ಹೋದ.

ತನ್ನ ಪರೀಕ್ಷೆ ಮುಗಿಸಿದ್ದ ರಮಾ ಹೊತ್ತು ಕಳೆಯಲೆಂದು ಗಾತ್ರದ ಯಾವುದೋ ಪುಸ್ತಕ ಓದುತ್ತ ಕುಳಿತಿದ್ದಳು. ಓದುವುದನ್ನು ಬಿಟ್ಟು ಉರಿಬಿಸಿಲಲ್ಲಿ ಬಂದ ರಾಜಣ್ಣನನ್ನು ಕಂಡು ಆಕೆಗೆ ಆಶ್ಚರ್ಯವಾಯಿತು.

"ಬಾ ರಾಜ. ಬಿಸಿಲಲ್ಲಿ ಸೈಕಲ್ ಸವಾರಿ ತುಂಬ ಇಷ್ಟವೇನು ನಿಂಗೆ ?"

"ರಮಾ, ಅಮ್ಮಿಗೆ ಸಕತ್ ಕಾಯಿಲೆ, ಕಾಗದ ಬಂತು. ತಂತಿ ಬಂತು. ತುಂಬಾ ಸಿರಿಯಸ್ಸೇ ಆಗಿರ್ಬೇಕು."

"ಹೋಗ್ತೀಯೇನು ?"

"ಹಗಲೂ ರಾತ್ರಿ ನಮ್ಮ ಹೆಸರು ಹಿಡಿದು ಹಂಬಲಿಸ್ತಾಳಂತೆ. ರಾಜ–ಸುಶೀಂತ. ತಂಗಿಯಂತೂ ಬರೋಹಾಗಿಲ್ಲ. ನಾನಾದರೂ ಹೋಗ್ತೀನಿ, ಆಗ್ದೆ ?"

"ಈ ಸಾರೆ ಪರೀಕ್ಷೆ—"

"ಈ ಪರಿಸ್ಥಿತೀಲಿ ಕರ್ತವ್ಯ ಯಾವುದು ಹೇಳು ?"

"ತಾಯಿನ ನೋಡೋದು."

"ಹೌದು ರಮಾ, ಆಕೆಗೆ ಬೇರೆ ಯಾರಿದ್ದಾರೆ ಹೇಳು ?"

ರಮಾ, ಮುಖ ಬಾಗಿಸಿ ಕ್ಷಣಕಾಲ ಕುಳಿತವಳು ತಲೆ ಎತ್ತಿ ಹೇಳಿದಳು :

"ನಾನೂ ಬರಲೇ ರಾಜ ?"

"ನೀನು ?"

"ಹೂಂ....ನಂಗೆ ನಿಮ್ಮಮ್ಮನ ಆಶೀರ್ವಾದ ಬೇಕು."

ರಾಜಣ್ಣ ಒಂದು ಕ್ಷಣ ಹಿಂದುಮುಂದು ನೋಡಿದ.

"ಸರಿ, ರಮಾ, ಹೊರಡೋಣ. ನಿಮ್ಮ ತಾಯಿನೂ ಕೇಳು."

"ಒಳಗಿದಾಳೆ. ನಾನು ಕೇಳ್ತೀನಿ ಆ ಯೋಚ್ನೆ ಬೇಡ. ಹೊರಡೋದು ಎಷ್ಟು ಗಂಟೆಗೆ ?"

"ರಾತ್ರೆ ರೈಲು. ಕಡೂರ್ನಲ್ಲಿಳಿದು ಬಸ್ ಹತ್ತಿ ಹೋಗೋಣ....ಇಲ್ಲಿಗೆ ಎಂಟು ಗಂಟೆಗೆ ಬರ್ತೀನಿ."

"ದುಡ್ಡೆಷ್ಟು ಬೇಕು ?"

"ನನ್ಹತ್ರ ಇದೆ ಸಾಕಷ್ಟು...."

....ರೈಲು ಮೋಟಾರುಗಳು ರಾಜಣ್ಣನನ್ನೂ ರಮೆಯನ್ನೂ ಜೀವನಹಳ್ಳಿಗೆ ತಂದು ಮುಟ್ಟಿಸಿದುವು.

ಅವರು ಶಾನುಭೋಗರ ಮನೆ ತಲಪಿದ್ದು ಮರುದಿನ ಮಧ್ಯಾಹ್ನದ ಅನಂತರ. ರಾತ್ರೆಯೆಲ್ಲ ನಿದ್ದೆಯಿಲ್ಲದೆ ಸಂಕಟ ಪಡುತ್ತಿದ್ದ ಅಮ್ಮಿಗೆ ಆದೇ ಆಗ ಜೊಂಪು ಹತ್ತಿತ್ತು. ಒಂದು ಮಂಚದ ಮೇಲೆ ಮೆತ್ತನೆಯ ಹಾಸಿಗೆ ಹಾಸಿ ಮಲಗಿಸಿದ್ದರು ಆಕೆಯನ್ನು. ಕಾವೇರಮ್ಮ ಬದಿಯಲ್ಲಿ ಕುಳಿತು ಕೈಲಿ ಬೀಸಣಿಗೆ ಹಿಡಿದು ಗಾಳಿ ಬೀಸುತ್ತಿದ್ದಳು.

ರಾಜಣ್ಣನನ್ನು ನೋಡಿ ಕಾವೇರಮ್ಮನ ಮುಖ ಅರಳಿತು.

ತುದಿಗಾಲ ಮೇಲೆ ನಡೆಯುತ್ತ ಹೊರಬಂದು ಆಕೆಯೆಂದಳು:

"ಅಂತೂ ಬಂದೆಯಲ್ಲಪ್ಪ, ಬಾ....ಮೋಟಾರು ಶಬ್ದ ಕೇಳಿದಾಗಲೇ, ನೀನೀಗ ಬರಬಹುದೂಂತಿದ್ದೆ."

"ಹ್ಯಾಗಿದೆ ಈಗ ?"

"ಹಾಗೇ ಇದೆ ರಾಜಣ್ಣ. ನಿದ್ದೆ ಹೋಗಿದಾಳೆ."

ಕಾವೇರಿ ಕಲ್ಲುಬೊಂಬೆಯ ಹಾಗೆ ನಿಂತಿದ್ದ ರಮೆಯನ್ನು ನೋಡಿದಳು. ಯಾವುದೂ ಸ್ಪಷ್ಟವಾಗದೆ, "ಬೊಂಬಾಯಿಗೆ ಬರ್ದಿದ್ದೀಯೇನು ?" ಎಂದಳು.

"ಹೂನಮ್ಮಾ. ಈಗಿನ ಸ್ಥಿತೀಲಿ ಸುಶೀಲ ಪ್ರವಾಸ ಮಾಡ್ಬಾರ್ದು. ನಾನು ನೋಡ್ಕೋತೀನಿ. ಬರಬೇಡ, ಅಂತ ಬರ್ದಿದೀನಿ."

"ಒಳ್ಳೇದು ಮಾಡ್ದೆ" ಎಂದಳು ಕಾವೇರಮ್ಮ.

ಹಾಗೆ ಹೇಳಿ, ಮತ್ತೊಮ್ಮೆ ರಮೆಯನ್ನು ನೋಡಿದಳು.

"ಈಕೆ ನಮ್ಮ ಪಕ್ಕದ ಮನೆಯೋಳು. ಈಕೇಂದ್ರೆ ಅಮ್ಮಿಗೆ ತುಂಬಾ ಇಷ್ಟ."

ಪರಿಸ್ಥಿತಿಯನ್ನು ಸುಧಾರಿಸಲೆಂದು ರಾಜಣ್ಣ ಅನಿವಾರ್ಯವಾಗಿ ಸುಳ್ಳುಹೇಳಿದ.

ಕಾವೇರಮ್ಮನ ಯಜಮಾನರು ನಿದ್ದೆ ಹೋಗಿದ್ದರು. ಹಿರಿಯ ಮಗ ತೋಟಗಳನ್ನು ನೋಡಿ ಬರಲು ಹೊರ ಹೋಗಿದ್ದ. ಮನೆಯ ಸೊಸೆ ಮಗುವನ್ನೆತ್ತಿಕೊಂಡು ಒಳಬಾಗಿಲ ಬಳಿ ನಿಂತು ಇಣಿಕಿ ನೋಡಿದಳು, ಯಾರು ಬಂದರು ಎಂದು.

"ರಾಜಣ್ಣ ಬಂದಿದಾನೆ ನೋಡೆ. ಇವರಿಗೊಂದಿಷ್ಟು ಊಟ ಬಡಿಸ್ತೀಯೇನು?" ಎಂದು ಕಾವೇರಮ್ಮ ಪ್ರಶ್ನೆಯ ರೂಪದ ನಿರ್ದೇಶವನ್ನು ಸೊಸೆಗೆ ಕೊಟ್ಟಳು.

ಒಳಗೆ ಅಮ್ಮಿ ನರಳಿದ ಸದ್ದಾಯಿತು. ಆಕೆಗೆ ಎಚ್ಚರವಾಗಿತ್ತು.

ಕಾವೇರಮ್ಮನೂ ಹಿಂದಿನಿಂದ ರಾಜಣ್ಣ ರಮೆಯರೂ ಒಳಹೋದರು.

ಒಣಗಿದ ಕಡ್ಡಿಯಾಗಿ ಸೊರಗಿದ ತಾಯಿ ಅಲ್ಲಿ ಮಲಗಿದ್ದಳು. ಕಣ್ಣೆವೆಗಳು ಮುಚ್ಚಿದ್ದುವು. ಇಷ್ಟು ವರ್ಷ ಸೋತು ಸುಣ್ಣವಾದ ಮೇಲೆ ಈಗ ಕೊನೆಗಾಲದಲ್ಲಿ, ಮಲಗಲು, ಮೆತ್ತನೆಯ ಹಾಸಿಗೆ ದೊರೆತಿತ್ತಲ್ಲವೆ ಆಕೆಗೆ?

ಶ್ವಾಸೋಚ್ಛ್ವಾಸದ ಒತ್ತಡಕ್ಕೂ ಮಿಸುಕುತ್ತಿರಲಿಲ್ಲ ಆ ಜೀವದ ಪಂಜರ. ಚಲಿಸುತ್ತಿದ್ದ ಹುಬ್ಬು ತುಟಿಗಳಷ್ಟೇ ಅನುಭವಿಸುತ್ತಿದ್ದ ನೋವಿಗೆ ಸಾಕ್ಷ್ಯವಾಗಿದ್ದುವು.

ಬಲು ಮೃದುವಾಗಿ ಕಾವೇರಮ್ಮನೆಂದಳು :

" ಅಮ್ಮೀ."

ಕರೆದುದು ತನಗೆ ಕೇಳಿಸಿತೆನ್ನುವಂತೆ ಆಕೆಯ ಗಂಟಲಲ್ಲೇನೋ ಸಪ್ಪಳವಾಯಿತು :

" ಅಮ್ಮೀ, ಯಾರು ಬಂದಿದಾರೆ ನೋಡು...."

" ಆಂ...."

ಅಮ್ಮ ಕಣ್ಣು ತೆರೆದಳು....ಎತ್ತರದಿಂದ ಬಾಗಿ ತನ್ನನ್ನೆ ಎರಡು ಮುಖಗಳು ನೋಡುತ್ತಿದ್ದುವು. ಮುದ್ದು ಮುಖಗಳು. ಪರಿಚಿತ. ರಾಜಣ್ಣನಲ್ಲವೆ? ಸುಶೀಲೆಯಲ್ಲವೆ?

ಬಲು ಕ್ಷೀಣವಾಗಿ ಸ್ವರ ಹೊರಟಿತು.

" ರಾಜಾ....ಸುಶೀ...."

ರಾಜಣ್ಣ ಮತ್ತು ರಮಾ ಮಂಡಿಯೂರಿ ಕುಳಿತು ಮಂಚಕ್ಕೆ ಮುಖ ಆನಿಸಿದರು. ಅಮ್ಮಿಯ ಬಲಗೈ ಬೆರಳುಗಳು ಆ ಎಳೆಯರ ತಲೆಗಳನ್ನು ತಡವಿದುವು. ರಾಜಣ್ಣನ ಕ್ರಾಪು....ರಮೆಯ ತಲೆಗೂದಲು....ಕೈ ಅಲ್ಲೆ ತಡೆದು ನಿಂತಿತು:

" ಸುಶೀ....ಚೆನ್ನಾ....ಗಿದ್ದೀ....ಯಾ ?"

ದೃಢ ಹೃದಯದ ದಿಟ್ಟೆ ರಮೆ ಬಿಕ್ಕಿಬಿಕ್ಕಿ ಅತ್ತಳು.

ಅಮ್ಮ ನರಳಿದಳು....

ತಾನು ಕುಳಿತುಕೊಳ್ಳಲು ನೆರವಾಗಬೇಕೆಂದು ಆಕೆ ಸನ್ನೆ ಮಾಡಿದಳು.

ಕಾವೇರಮ್ಮ ಮತ್ತು ರಾಜಣ್ಣ ಬಲು ಮೆಲ್ಲನೆ ಆಕೆಯನ್ನೆಬ್ಬಿಸಿ, ಅಲ್ಲೆ ಮೇಲಕ್ಕೆ ಸರಿಸಿ, ಆ ಬೆನ್ನಿಗೆ ದಿಂಬಿನ ಮೆತ್ತೆ ಇಟ್ಟರು.

ಅಮ್ಮ ಮಗನನ್ನು ಕಣ್ತುಂಬ ನೋಡಿದಳು, ಆ ಬಳಿಕ ರಮೆಯನ್ನು.

" ಸುಶೀ....ಬರಲಿಲ್ಲ?....ಮಗಳು....ಬರಲಿಲ್ಲ ?"

" ಬರ್ತಾಳೆ ಅಮ್ಮ. ಬೇಗನೆ ಬರ್ತಾಳೆ...."

" ರಮಾ...."

ತಾಯಿ ಮರೆತಿರಲಿಲ್ಲ! ಹೆಸರೂ ನೆನಪಿತ್ತು ಅವಳಿಗೆ!

ಆ ಹುಡುಗಿ ಅಳುತ್ತಳುತ್ತ ಅಂದಳು :

" ನಾನು ನಿಮ್ಮ ಮಗಳೇ ಅಮ್ಮ. ನಾನೂ ಮಗಳೇ ಅಲ್ವಾ ?"

ರಾಜಣ್ಣ ಆಸೆಯಿಂದ ಆತುರದಿಂದ ಮಾತನಾಡಿದ :

" ಹೌದಮ್ಮೀ....ರಮಾಗೆ ಆಶೀರ್ವಾದ ಮಾಡಮ್ಮೀ....ನಿನ್ನ ನೋಡ್ಬೇಕೂಂತ ಓಡಿ ಬಂದಿದಾಳೆ...."

ಅಮ್ಮಿಯ ದೃಷ್ಟಿ ಇಳಿಮುಖವಾಯಿತು. ಆ ಮೆದುಳು ಕೊನೆಯ ಬಾರಿಗೆ ಯೋಚಿಸಲೆತ್ನಿಸಿತು—

....ಮುದ್ದು ಮಕ್ಕಳು....ಪರಸ್ಪರ ಎಷ್ಟೊಂದು ಪ್ರೇಮ, ಅನುನಯ !....ಆ ರಮಾ ಎಷ್ಟೊಂದು ಪ್ರೀತಿಸುತ್ತಾಳೆ!....ಒಂದು ಗಂಡು ಮತ್ತು ಹೆಣ್ಣು ಸುಖವಾಗಿ ರಲು ಇದಕ್ಕಿಂತ ಹೆಚ್ಚು ಬಿಗಿಯಾದ ಬಾಂಧವ್ಯದ ರಜ್ಜು ಬೇರೆಯುಂಟೆ ? ಜಾತಿ ಜಾತಕ ಧರ್ಮ ಆಚಾರ ಅಂತ ಎಷ್ಟು ಬಡಕೊಂಡರೇನು ? ತನ್ನ ಜೀವನದಲ್ಲೇ ಹಿಂದೆ ಅದನ್ನೆಲ್ಲ ಅನುಸರಿಸಿ ಏನಾಯಿತು ? ಎಂತಹ ಸುಖ ದೊರೆಯಿತು ?.... ಹಿಂದೆ ರಮೆಯನ್ನು ಮನೆಗೆ ಕರೆದು ತಂದಾಗ ತಾನು ಬಿರುನುಡಿಯನ್ನಾಡಿ ಮಗನ ಮನಸ್ಸು ನೋಯಿಸಿದೆ. ಆದರೂ ಅದನ್ನು ನುಂಗಿಕೊಂಡ, ಪಾಪ ! ಈಗ ತಾಯಿ ಕರೆದಳೆಂದು ಪರೀಕ್ಷೆ ಬಿಟ್ಟು ಓಡಿ ಬಂದಿದ್ದಾನೆ. ಎಳೇ ಮಗುವಿನ ಹಾಗಿರುವ ಹುಡುಗಿಯೂ ಬಂದಿದೆ ಜತೆಯಲ್ಲೆ....

ಯಾರೋ ತನ್ನ ಮೊಣಕಾಲನ್ನು ಹಿಡಿದ ಹಾಗಾಯಿತು ಅಮ್ಮಿಗೆ. ಅದರ ಮೇಲೆ ಮೃದುವಾದೊಂದು ಮುಖವಿತ್ತು. ತನ್ನ ಕೆಂಪು ಸೀರೆಯನ್ನು ಆ ಮುಖ ನೀರು ಹನಿಸಿ ತೋಯಿಸುತ್ತಿತ್ತು.

ಹಿಂದೆ........ಹಿಂದೊಮ್ಮೆ—ಅಲ್ಲಿ ? ಹಾಸನದಲ್ಲೇ ಇರಬೇಕು ಅಲ್ಲವೆ ?— ಹೌದು, ಅಲ್ಲಿ ಮಕ್ಕಳಿಗೆ ತನ್ನ ಜೀವನದ ಕತೆ ಹೇಳಿದಾಗ ಮಗಳು ಸುಶೀಲ ಹಾಗೆಯೇ ಮೊಣಕಾಲಿಗೆ ತೆಕ್ಕೆಬಿದ್ದು ಅತ್ತು ಸೀರೆ ತೋಯಿಸಿದ್ದಳು....

ಅಮ್ಮಿ ರಮೆಯ ನೆತ್ತಿಯ ಮೇಲೆ ಕೈಯಿಟ್ಟಳು. ಆ ತೊದಲಿನೊಡನೆ ಅವಳ ಕೈ ಬೆರಳುಗಳು ಆಟವಾಡಿದುವು. ನಗಬೇಕೆನಿಸಿತು ಅಮ್ಮಿಗೆ.

ತಾನು ನಿಷ್ಕರುಣಿ ಎಂದು ಆ ಎಳೆಯರು ಭಾವಿಸಿದ್ದಿರಬೇಕು. ಅಲ್ಲವೆ ? ಹುಚ್ಚು ಅವರಿಗೆ....

ಅಮ್ಮಿ ಕಣ್ಣಸನ್ನೆಯಿಂದ ರಾಜನನ್ನು ಹತ್ತಿರಕ್ಕೆ ಕರೆದಳು. ರಮೆಯ ಕೈ ಮತ್ತು ಆತನ ಕೈ....ನಿಶ್ಶಕ್ತಳಾದ ಅಮ್ಮಿ ಬಲು ಪ್ರಯಾಸದಿಂದ ಅವುಗಳನ್ನು ಒಂದುಗೂಡಿಸಿದಳು....

" ಗಂಡ....ಹೆಂಡತಿಯಾಗಿ....ಸುಖವಾಗಿ ಬಾಳಿ."

ಅದು ಅಮ್ಮಿ ಕೊಟ್ಟ ಆಶೀರ್ವಾದ.

" ರಾಜಣ್ಣ....ಶುದ್ಧ ಮಗು....ಸರಿಯಾಗಿ....ನೋಡ್ಕೊ ರಮಾ...."

ಅದು ರಮೆಗೆ ಹಿತವಚನ.

" ಉಳಿದಿದ್ದ ಕೊನೇ ಆಸೆಯೂ ಈಡೇರಿತು....ಕಾವೇರಿ...."

ಕಾವೇರಮ್ಮನಿಗೆ ಈ ಘಟನೆಯ ಹಿನ್ನೆಲೆ ತಿಳಿದಿರಲಿಲ್ಲ....ಆದರೂ ಆ ದೃಶ್ಯ ನೋಡುತ್ತ ಆಕೆ ಮೌನವಾಗಿ ಕಂಬನಿ ಮಿಡಿದಳು.

....ಸಂಜೆಯ ಹೊತ್ತಿಗೆ ಅಮ್ಮಿ ಬಹಳ ಸುಧಾರಿಸಿದಂತೆ ಕಂಡಿತು.

ಅದು ಬಿರುಗಾಳಿಗೆ ಪೂರ್ವದ ಶಾಂತಿ. ಕತ್ತಲಾಗುತ್ತಲೆ ಅಮ್ಮಿಯ ಸ್ವರ ಉಡುಗಿತು. ಆಯಾಸವಾಗದಿರಲೆಂದು ಅವಳನ್ನು ಮಲಗಿಸಿದರು.

ಭುಜಕ್ಕೆ ಭುಜ ತಗಲಿಸಿ ನಿಂತಿದ್ದ ರಾಜನನ್ನೂ ರಮೆಯನ್ನೂ ನೋಡುತ್ತಲೇ ಇದ್ದಳು ಅಮ್ಮಿ. ಎಷ್ಟೊಂದು ಅರ್ಥವಿತ್ತೋ ಆ ನೋಟದಲ್ಲಿ! ಎಷ್ಟೊಂದು ಸಂದೇಶಗಳಿದ್ದುವೊ!

ನಡುವಿರುಳಿನ ಹೊತ್ತಿಗೆ ಅಮ್ಮಿ ಒಂದು ಕ್ಷಣ ಚಡಪಡಿಸಿದಳು. ಹತ್ತಿರ ಬಂದುದೇನನ್ನೋ ಓಡಿಸುವಂತೆ ಕೈ ಬೀಸಿದಳು. ಅದು ಸಾವಿಗೆ ಆಕೆ ನೀಡಿದ ಕೊನೆಯ ಪ್ರತಿಭಟನೆ.

ಸೋತೆ—ಎನ್ನುವಂತೆ ತಲೆ ಒಂದು ಕಡೆಗೆ ವಾಲಿತು. ಕಣ್ಣುಗಳು ಮುಚ್ಚಿ ಕೊಂಡುವು. ಅಮ್ಮಿಯ ಅವಸಾನವಾಯಿತು.

o o o o o

ಮರುದಿನ ಬೆಳಿಗ್ಗೆ ಹಳ್ಳಿಯ ಜನರೆಲ್ಲ ಬಂದರು. ತಮ್ಮ ಮಣ್ಣಿನ ಕೂಸಾಗಿದ್ದ ಬನಶಂಕರಿಯನ್ನು ಅವರು ಒಯ್ದರು—ಮಸಣಕ್ಕೆ.

ಬದುಕಿದ್ದಾಗಲೇ ಸಾವಿರ ಸಾರೆ ಬೆಂದಿದ್ದ ಜೀವ, ಸತ್ತಾಗ ಒಣಗಿದ ತರಗೆಲೆಯ ಹಾಗೆ ಉರಿದುಹೋಯಿತು.

o o o o o

ಆ ಒಂದು ಸಂಜೆ-ರಾತ್ರೆ ಅಲ್ಲಿದ್ದು ಮಾರನೆಯ ದಿನ ರಾಜಣ್ಣನೂ ರಮೆಯೂ ಬೆಂಗಳೂರಿಗೆ ಹೊರಟರು.

ಹಾದಿಯಲ್ಲಿ, ರಮೆಯ ಅಂಗೈಯನ್ನು ಭದ್ರವಾಗಿ ಹಿಡಿಯುತ್ತ ರಾಜಣ್ಣ ಹೇಳಿದ:

"ಅಮ್ಮಿ ಕೊನೆಗೂ ಹೋಗಿಯೇ ಬಿಟ್ಟಳು ರಮಾ! ಅಂತೂ ಒಂದು ಕತೆ ಮುಗಿಯಿತು. ಎಂಥ ರುದ್ರ ಕತೆ!"

ವಾತ್ಸಲ್ಯಮಯಿಯಾಗಿ ರಮಾ ರಾಜಣ್ಣನನ್ನು ನೋಡಿದಳು.

"ದೇವಿ ಅಂತಾರೆ....ದೇವಿ ಅಂದರೇನೋ ನನಗೆ ತಿಳೀದು ರಮಾ....ಆದರೆ ಯಾವುದೇ ಭವ್ಯ ದೇವಿಯ ಕಲ್ಪನೆ ಈ ವಾಸ್ತವತೆಗಿಂತ ಯಾವತ್ತೂ ಹೆಚ್ಚಿನ ದಾಗದು"

"ಹೌದು ರಾಜ. ಆಕೆ ದೇವಿ."

೭

ಕಾಲ ಕಳೆಯಿತು. ಬೇಸಗೆ ಮುಗಿದು ಮಳೆ ಹನಿಯಿತು. ಮಾವಿನ ಹಣ್ಣು ಗಳು ಮಾಯವಾಗಿ ಓಟೆಗೊರಟುಗಳಷ್ಟೇ ಉಳಿದುವು. ಅವು ತೋಯ್ದು ಹಸಿ ಮಣ್ಣಿನೊಡನೆ ಚೆಲ್ಲಾಟವಾಡಿ ಮೊಳೆತವು. ಮಳೆಗಾಲದ ತೇಜಸ್ವಿನೀ ಮೈತುಂಬಿ ಸಂತೋಷದಿಂದ ಮೆರೆಯಿತು. ಸಣ್ಣಪುಟ್ಟ ದೋಣಿಗಳೆಲ್ಲ ಭಯಗೊಂಡು ಭೂಮಿಗೇರಿದುವು. ಸಾಹಸಿಗಳು ನದಿಯ ಮೇಲಿನಿಂದ ತೇಲಿಬಂದ ಮರದ ತೊಲೆ ಗಳನ್ನು ಹಿಡಿದರು.

ಅಪ್ಪು ಆ ರೀತಿಯ ಸಂಪಾದನೆಯಾಗಿ ಹತ್ತು ತೆಂಗಿನಕಾಯಿಗಳನ್ನು ತಡೆ ಹಿಡಿದು ಮನೆಗೆ ತಂದ

"ಪ್ರಾಣದ ಭಯ ಇಲ್ವೇನೋ ನಿಂಗೆ? ನಿನ್ನ ಮನೆ ಹಾಳಾಯ್ತು, ಈ ತೆಂಗಿನಕಾಯಿಯೂ ಬೇಡ ಏನೂ ಬೇಡ. ನಿನ್ನಪ್ಪನಿಗೆ ಹೇಳಿ ಪೂಜೆ ಮಾಡಿಸ್ತೇನೆ ಇವತ್ತು"—ಎಂದು ಆತನ ತಾಯಿ ಗೋಳಾಡುತ್ತ ಗದರಿಸಿದುದಷ್ಟೇ ಬಂತು. ಅಪ್ಪು ನಕ್ಕ. ಅವನೂ ಅಷ್ಟೇ—ಅವನ ಓರಗೆಯವರೂ ಅಷ್ಟೇ; ಅವರಿಗಿಂತ ಹಿರಿಯರಾದ ಯುವಕರೂ ಅಷ್ಟೇ.

ಆ ಅವಧಿಯಲ್ಲೇ ಮಾಸ್ತರು, ಸಂಜೆ ಶಾಲೆಯಲ್ಲಿ ಪತ್ರಿಕೆಯನ್ನೋದಿ ಹೇಳುವ ಪರಿಪಾಠವನ್ನು ಆರಂಭಿಸಿದರು. ಅದು ಚರ್ವತ್ತೂರು ರೈಲ್ವೇ ನಿಲ್ದಾಣದಿಂದ ಅವರು ದಿನವೂ ತರಿಸುತ್ತಿದ್ದ ಪತ್ರಿಕೆ. ಮೊದಮೊದಲು ಯಾರಿಗೂ ಆಸಕ್ತಿ ಇರಲಿಲ್ಲ. ಆದರೆ ನಡುನಡುವೆ ಯಾವುದೋ ಕತೆ–ಯಾವುದೋ ಹರಟೆ–ನುಸುಳಿಕೊಂಡು, ಪತ್ರಿಕೆಯ ವಾಚನ ಕಾಲಯಾಪನೆಗೊಂದು ಸಾಧನವಾಯಿತು. ಕೆಲಸವಿಲ್ಲದೇ ಇದ್ದಾಗ ರೈತರು ಬೀಡಿ ಸೇದುತ್ತಲೋ ಎಲೆ ಅಡಿಕೆ ಜಗಿಯುತ್ತಲೋ ಶಾಲೆಯ ಜಗಲಿಯಲ್ಲಿ ಕುಳಿತು ಮಾಸ್ತರರ ಮಾತುಗಳಿಗೆ ಕಿವಿಗೊಟ್ಟರು.

ಆ ಊರಿನ ಪ್ರಮುಖ ಜಮೀನ್ದಾರರು ಇಬ್ಬರು. ಒಬ್ಬಾತ ಮಹಾಬ್ರಾಹ್ಮಣನಾದ ನಂಬೂದಿರಿ. ಅವರ ಮನೆಯ ಹೆಂಗಸರು ಬಾಗಿಲಿನಿಂದ ಹೊರಕ್ಕೆ ಮುಖ ವಿಡುತ್ತಲೇ ಇರಲಿಲ್ಲ. ಇನ್ನೊಬ್ಬರು ನಂಬಿಯಾರ್. ಹೊಲೆಯರನ್ನಾದರೂ ಸರಿಯೆ,

ವ್ಯೆಮುಟ್ಟಿಯೋ ಜೆನ್ನು ತಟ್ಟಿಯೋ ಕೆನ್ನೆಗೆ ಏಟುಬಿಗಿದೋ ಮಾತನಾಡಿಸುವ ಸಮರ್ಥ. ವಯಸ್ಸಿನಲ್ಲಿ ಸಂಬೂದಿರಿಗಿಂತಲೂ ಯುವಕ. ಮಾಸ್ತರು ಅಲ್ಲಿಗೆ ಬರುವುದಕ್ಕೆ ಮುಂಚೆ ಆ ಊರಿಗೆ ಪತ್ರಿಕೆ ಬರುತ್ತಿದ್ದುದು ಅವರೊಬ್ಬರ ಮನೆಗೇ. ಪತ್ರಿಕೆ ತರಿಸುತ್ತಿದ್ದ ತಾವು ಆಧುನಿಕರೆಂಬುದು ಅವರ ಖಚಿತ ಅಭಿಪ್ರಾಯವಾಗಿತ್ತು.

ಮಾಸ್ತರು ಪತ್ರಿಕೆ ತರಿಸುತ್ತಿದ್ದರೆಂದು ತಿಳಿದಾಗ ನಂಬಿಯಾರರು ಭುಜ ಕುಪ್ಪಳಿಸಿದ್ದರು. 'ಹೋಗಲಿ. ವಿದ್ಯಾವಂತ. ಓದುವ ಚಟುವಾದರೂ ಮರೀಬಾರದಲ್ಲ. ಇಲ್ದಿದ್ರೆ ಹುಡುಗರಿಗೆ ಪಾಠ ಏನು ಹೇಳಿಕೊಡ್ತಾನೆ?' ಎಂದು ಸುಮ್ಮನಾಗಿದ್ದರು.

ಆದರೆ, ಶಾಲೆಯ ಜಗಲಿಯ ಮೇಲೆ ಸಂಜೆ ರೈತರೂ ಬಂದು ಕುಳಿತುಕೊಳ್ಳ ತೊಡಗಿದುದು ತಿಳಿದಾಗ, ನಂಬಿಯಾರರಿಗೆ ರೇಗಿತು. ಶಾಲೆಯ ವಿಶ್ವಸ್ಥ ಸಮಿತಿಯ ಮುಖ್ಯಸ್ಥರಾದ ಅವರು ಮಾಸ್ತರನ್ನು ಕರೆಕಳುಹಿದರು.

ಮಾಸ್ತರು ಜಮೀನ್ದಾರರೆದುರು ಬೀರಿದುದು ಸ್ವಾಭಾವಿಕವಾದ ಮುಗುಳುನಗೆ.

ಕೆತ್ತನೆಯ ಕುರ್ಚಿಯ ಮೇಲೆ ಮೆತ್ತನೆಯ ಗಾದಿಗೊರಗಿ ಕುಳಿತಿದ್ದ ನಂಬಿಯಾರರು ತಮ್ಮೆದುರು ದೂರದಲ್ಲಿದ್ದ ಬೆಂಚನ್ನು ತೋರಿಸುತ್ತ, ಸಿಗರೇಟಿಗೆ ಬೆಂಕಿಕಡ್ಡಿ ಅಂಟಿಸುತ್ತ, ಹೇಳಿದರು :

"ಕೂತ್ಕೊಳ್ಳಿ".

ಮಾಸ್ತರು ವಿನಯದಿಂದಲೆ ಕುಳಿತರು. ಅವರ ಕೈಯ್ಯಲ್ಲಿ ಆ ದಿನದ 'ಮಾತೃಭೂಮಿ' ಪತ್ರಿಕೆಯ ಸುರುಳಿ ಇತ್ತು. ನಂಬಿಯಾರರು ಅದನ್ನೊಮ್ಮೆ ಕಡೆಗಣ್ಣಿನಿಂದ ದಿಟ್ಟಿಸಿ ನೋಡಿ, ಹುಬ್ಬು ಮೇಲಕ್ಕೇರಿಸಿ, ಕೆಳಕ್ಕಿಳಿಸಿ, ಸಿಗರೇಟಿನ ಹೊಗೆಯುಗುಳಿ, ಒಂದು ಕ್ಷಣ ಮೌನವಾಗಿದ್ದು ಕೇಳಿದರು.

"ಶಾಲೆಯ ಕೆಲಸಕಾರ್ಯಗಳೆಲ್ಲ ಸರಿಯಾಗಿ ನಡಿತಾ ಇವೆಯೋ?"

"ಓಹೋ."

"ನೀವು ಸೊಗಸಾಗಿ ಪಾಠ ಹೇಳ್ತೀರಂತೆ. ನಮ್ಮ ಹುಡುಗ ದಿನಾಲೂ ನಿಮ್ಮ ವಿಷಯ ಹೇಳ್ತಾನೇ ಇರ್ತಾನೆ."

ಈ ಸೊಗಸು ಮಾತಿನ ಹಿಂದೆ, ಬೇರೇನೋ ಮುಖಮರೆಸಿಕೊಂಡಿದೆ—ಎಂದು ಮಾಸ್ತರು ತಿಳಿಯದಿರಲಿಲ್ಲ. ಅವರು ನಕ್ಕು ಹೇಳಿದರು :

"ಅದೇನು ಹೇಳ್ತೀನೋ....ಅಂತೂ ಹುಡುಗರು ತಪ್ಪಿಸ್ಕೊಳ್ಳೋದು ಬಹಳ ಕಡಿಮೆ."

ಇಷ್ಟು ಮೃದುವಾಗಿ ಈತನೊಡನೆ ಮಾತನಾಡುವ ಅಗತ್ಯವಾದರೂ ಏನು ಎಂದು ಜಮೀನ್ದಾರರು ತಮ್ಮ ವರ್ತನೆಯ ವಿಷಯದಲ್ಲಿ ತಾವೇ ಅಸಹನೆ ತೋರಿ, ಕತ್ತು ಕುಲುಕಿದರು. ಮನಸ್ಸಿನಲ್ಲಿದ್ದುದನ್ನು ನೇರವಾಗಿ ಹೇಳಬೇಕೆನಿಸಿತು. ಆದರೆ ಕಟುಮಾತು, ತಮ್ಮ ಉದ್ದೇಶ ಸಾಧನೆಗೆ ಪ್ರತಿಕೂಲವಾಗಬಹುದೆಂದು, ಸಿಟ್ಟು ನುಂಗಿಕೊಂಡು, ಮೌನವಾಗಿಯೆ ಇದ್ದು ಸಿಗರೇಟು ಸೇದಿದರು.

ಕರೆಕಳುಹಿದ ಕಾರಣವನ್ನು ಮಾಸ್ತರು ಆಗಲೇ ಊಹಿಸಿದ್ದರು. ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ಎಚ್ಚರದಿಂದಿರಲು ತೀರ್ಮಾನಿಸಿಯೇ ಅವರು ಬಂದಿದ್ದರು. ಆಡಬೇಕಾದ ಮಾತುಗಳನ್ನು ಮೊದಲೇ ತೂಗಿ ನೋಡಿ ಸಂವಾದ ಬೆಳೆಸಲು ಸಿದ್ಧರಾಗುತ್ತ ಅವರೆಂದರು :

"ಅದೇನೋ ಮಾತನಾಡಬೇಕು ಎಂದಿರಂತೆ."

ಆ ಮಾತಿನ ಧ್ವನಿಯಿಂದ ಮಾಸ್ತರರನ್ನು ಅಳೆಯಲೆತ್ನಿಸುತ್ತ ನಂಬಿಯಾರರೆಂದರು.

"ಅವಸರವೇನೂ ಇಲ್ಲವಷ್ಟೆ ?"

"ಛೆ ! ಛೆ ! ಎಂಥಾ ಅವಸರ ?"

"ಹುಡುಗರೆಲ್ಲ ಆಗಲೆ ಮನೆಗೆ ಹೋಗಿರಬೇಕು."

"ಹೌದು, ಹೌದು. ಆಟಗಳನ್ನೂ ಆಡಿಸಿ, ಕಳಿಸ್ಬಿಟ್ಟೆ."

"ಅಂದ ಮೇಲೆ ಬೇಕಾದಷ್ಟು ಬಿಡುವಿದೆ ಅಂತಾಯ್ತು."

ರೈತರಿಗೆ ಪತ್ರಿಕೆಯೋದಿ ಹೇಳುವ ಕೆಲಸವಿದೆಯೆಂದು ಮಾಸ್ತರ ಬಾಯಿಂದಲೇ ಹೊರಡಿಸಲು ನಂಬಿಯಾರರು ಯತ್ನಿಸಿದರು. ಆದರೆ ಆ ಮಾಸ್ತರು ಅಷ್ಟು ಸುಲಭವಾಗಿ ಬಲೆಯ ಬಳಿಗೆ ಸುಳಿಯುವ ಮೀನಾಗಿರಲಿಲ್ಲ. ಅವರೆಂದರು :

"ನೀವು ಸರಿಯಾಗೇ ಹೇಳಿದಿರಿ. ಹೊತ್ತು ಕಳೆಯೋದು ಕಷ್ಟ ಅಂತ ಪತ್ರಿಕೆ ತರಿಸ್ಕೊಂಡು ಓದ್ತಾ ಇರ್ತೇನೆ."

'ಎಲಾ !' ಎಂದರು ನಂಬಿಯಾರರು ಮನಸಿನೊಳಗೇ. 'ನನಗೇ ಇಟ್ಟನಲ್ಲ !'

ಬಹಿರಂಗವಾಗಿ ಗಾಂಭೀರ್ಯದ ಮುಖವಾಡ ಧರಿಸುತ್ತ, ಅವರು ಹೇಳಿದರು.

"ಆ ವಿಷಯವಾಗಿಯೇ ಮಾತಾಡೋಣಾಂತ ನಿಮ್ಮನ್ನ ಕರೆಸ್ದೆ. ರೈತರೆಲ್ಲ ಸಾಯಂಕಾಲದ ಹೊತ್ತು ಶಾಲೆ ಜಗಲೀಲಿ ಸೇರ್ತಾರಂತೆ. ಅವರಿಗೇನೂ ಬುದ್ಧಿ ಇಲ್ಲ. ಹೊಲಸು ಜನ. ನೀವು ಪಾಪ, ಏನೂ ತಿಳೀದೆ ಅವರ ಜತೇಲಿ ಮಾತಾಡ್ತಾ ಇರ್ತೀರಿ. ಅವರೆಂಥವರು ಅನ್ನೋದು ನಿಮಗೆ ಗೊತ್ತಿಲ್ಲ. ಬೆಟ್ಟು ಕೊಟ್ಟರೆ ಸಾಕು, ಕೈಯನ್ನೆ ನುಂಗೋ ಜಾತಿ."

ಮುಖ ಕೆಂಪೇರುವ ಹಾಗಾದರೂ ಮಾಸ್ತರು ತಾಳ್ಮೆಯಿಂದಿದ್ದು, ಸದ್ದಿಲ್ಲದೆ, ಜಮೀನ್ದಾರರ ಕಣ್ಣು ತಪ್ಪಿಸಿ, ಉಗುಳು ನುಂಗಿದರು.

"ಹಾಗೇನೂ ಇಲ್ಲ," ಎಂದು ಅವರ ನಾಲಿಗೆ ಮೆಲ್ಲನೆ ನುಡಿಯಿತು.

"ನಿಮಗೆ ತಿಳಿಯೋದಿಲ್ಲ ಮಾಸ್ತರೆ. ಈ ಜನ ಎಂಥವರು ಅನ್ನೋದು ನನಗೆ ಗೊತ್ತಿದೆ ! ನೀವು ಅವರನ್ನು ದೂರವಿಟ್ಟರೆ ಮಾತ್ರ ಅವರು ನಮ್ಮನ್ನು ಗೌರವಿಸ್ತಾರೆ. ವಿದ್ಯೆ ಇಲ್ಲದೋರು. ಸಂಸ್ಕೃತದಲ್ಲಿ ಅದೇನೋ ಗಾದೆ ಇದೆಯಲ್ಲ, ಹಾಗೆ—ಬರೇ ಮೃಗಗಳು. ಅವರನ್ನು ಮೃಗಗಳಾಗಿಯೇ ನೋಡ್ಬೇಕು. ಅವಕ್ಕೆ ಅರ್ಥವಾಗೋದು ಒಂದೇ ಭಾಷೆ, ಬಾರುಕೋಲಿನ ಭಾಷೆ. ಏನು ಹೇಳ್ತೀರಾ ?"

ಮಾಸ್ತರು ಏನನ್ನೂ ಹೇಳಲಿಲ್ಲ. ಅವರ ಮುಖ ಮತ್ತೂ ಕೆಂಪಗಾಯಿತು. ತುಟಿಗಳು ಸೂಕ್ಷ್ಮವಾಗಿ ಕಂಪಿಸಿದುವು. ಪತ್ರಿಕೆಯನ್ನು ಹಿಡಿದಿದ್ದ ಮುಷ್ಟಿ ಬಿಗಿಯಾಯಿತು. ದ್ವೇಷದಿಂದ ತಿರಸ್ಕಾರದಿಂದ, ಕಟುವಾಗಿ ಉತ್ತರ ಕೊಡುವಂತೆ ಪ್ರೇರೇಪಿಸುತ್ತಾ ಹೃದಯ ವೇಗವಾಗಿ ಬಡಿಯಿತು. ಆದರೂ ಮಾಸ್ತರು ಮನಸಿನೊಳಗೇ ಶಾಂತಿ ಮಂತ್ರ ಜಪಿಸಿದರು. 'ಮೈಮರೆತು ಮೂರ್ಖನಾಗಬೇಡ' ಎಂದು ತನಗೆ ತಾನೇ ವಿವೇಕ ಹೇಳಿದರು.

ಸುಮ್ಮನೆ ಕುಳಿತ ಮಾಸ್ತರನ್ನು ನಂಬಿಯಾರರ ದೃಷ್ಟಿ ಪರೀಕ್ಷಿಸಿ ನೋಡಿತು. ತಮ್ಮ ಮಾತಿನ ಪ್ರಭಾವಕ್ಕೆ ಒಳಗಾಗಿ ಬೆದರಿದ ಮಗುವಿನಂತೆ ಮಾಸ್ತರು ಕಂಡರೇ ಹೊರತು, ಬೇರೆ ಯಾವ ಸಂದೇಹವೂ ಅವರಲ್ಲಿ ಮೂಡಲಿಲ್ಲ. ತಾವು ಆಡಿದ ಮಾತುಗಳ ಬಗೆಗೆ ತಾವೇ ಹೆಮ್ಮೆ ಪಡುತ್ತ ಅವರು, ಕೊನೆಯಬಾರಿ ಸಿಗರೇಟಿನ ಉಸಿರೆಳೆದು ಹೊಗೆ ಬಿಟ್ಟರು. ಬಳಿಕ ಮುಗುಳುನಕ್ಕು ಅವರೆಂದರು :

ನಿಮಗೊಂದು ರಹಸ್ಯ ಹೇಳ್ತೇನಿ. ನನ್ನ ಮಾವ ಇದ್ದಷ್ಟು ಕಾಲವೂ ಇಲ್ಲಿ ಶಾಲೆ ತೆರೆಯೋದನ್ನು ವಿರೋಧಿಸಿದ್ರು. ಆಡುವವರ ಮಕ್ಕಳು ಆಡ್ಬೇಕು ; ಬೇಡುವವರ ಮಕ್ಕಳು ಬೇಡ್ಬೇಕು—ಅನ್ನೋದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಆದರೆ ಅವರ ಪೀಳಿಗೆಯೇ ಬೇರೆ, ನಮ್ಮ ಪೀಳಿಗೆಯೇ ಬೇರೆ. ನಾನು ಅದನ್ನೊಪ್ಲಿಲ್ಲ.

ಮೆಚ್ಚುಗೆ ಸೂಚಿಸಿ ಉಸಿರಾಡಲು ಒಂದು ಅವಕಾಶ ದೊರೆಯಿತೆಂದು ಮಾಸ್ತರರೆಂದರು :

"ನಿಮ್ಮ ವಿಚಾರ ಸರೀಂತ ಯಾರು ಬೇಕಾದರೂ ಹೇಳಿಯಾರು."

ನಂಬಿಯಾರರಿಗೆ ಆ ಪ್ರಶಂಸೆ ಕೇಳಿ ಸಂತೋಷವಾಯಿತು. ಆ ಸಂತೋಷದ ಭರದಲ್ಲಿ, ಗೋಪ್ಯವಾಗಿ ಮಾತನಾಡುವಂತೆ. ಸ್ವರ ತಗ್ಗಿಸಿ ಅವರೆಂದರು :

"ಆ ಸಂಬೂದಿರಿಗೂ ಶಾಲೆ ತೆರೆಯೋದು ಇಷ್ಟವಿರ್ಲಿಲ್ಲ. ನಾನು ಮತ್ತು ಆತ ಸ್ನೇಹಿತರಾದ್ರೂ ನಿಮ್ಮಲ್ಲಿ ಹೇಳೋದಕ್ಕೇನಂತೆ? ಅವನು ಮಹಾ ಖದೀಮ, ಶೂದ್ರರು ಯಾರಿಗೂ ವಿದ್ಯೆ ಅಗತ್ಯವಿಲ್ಲಾಂತ ಅವನ ಅಭಿಪ್ರಾಯ. ನನಗೆ ಗೊತ್ತಿಲ್ಲವಾ ಅದೆಲ್ಲ? ಹಟ ತೊಟ್ಟು ಶಾಲೆ ತೆಗೆಯೋ ಹಾಗೆ ಮಾಡ್ದೆ. ಹೊರಗಿನಿಂದ ಅಧಿಕಾರಿಗಳು ದೊಡ್ಡವರು ಯಾರಾದರೂ ಬಂದಾಗ ಶಾಲೇನೆಲ್ಲ ನೋಡಿ, ಕೊಂಡಾಡೋದು ಯಾರನ್ನು ಹೇಳಿ?"

ತುಟಿ ಪಿಟ್ಟೆನ್ನದಿದ್ದರೂ ನಂಬಿಯಾರರ ಮಾತನ್ನು ತಾನು ಕೇಳುತ್ತಿದ್ದೇನೆಂಬುದಕ್ಕೆ ಸೂಚನೆಯಾಗಿ ಮಾಸ್ತರು ತಲೆಯಾಡಿಸಿದರು. ಮೈಯೆಲ್ಲ ಬೆವತು ಬೇಯುತ್ತಿದ್ದಂತೆ ಕಂಡರೂ ಅವರು ಸ್ಥೈರ್ಯದಿಂದ ಕುಳಿತರು.

ಆದರೆ ಮಾಸ್ತರ ಇರುವಿಕೆಯನ್ನೇ ಅಣಕಿಸುವ ಹಾಗೆ ಇನ್ನೊಂದು ಮಾತು ಬಂತು :

"ಈ ರೀತಿ ಶಾಲೆಯ ಸ್ಥಾಪನೆಗೆ ನಾನೇ ಮೂಲ ಕಾರಣನಾದರೂ ರೈತರ ಮಕ್ಕಳಿಗೆಲ್ಲ ವಿದ್ಯೆ ಕೊಡೋ ವಿಷಯದಲ್ಲಿ ನನ್ನದೇ ಆದ ಅಭಿಪ್ರಾಯ ಉಂಟು. ಈ ಜನ ಯಾರೂ ಕಾಲೇಜಿಗೆ ಹೋಗಬೇಕಾಗಿಲ್ಲ; ಹೈಸ್ಕೂಲೂ ಇವರಿಗೆ ಅಗತ್ಯವಿಲ್ಲ. ರೈತರ ಮಕ್ಕಳು ಸಹಿ ಹಾಕೋದಕ್ಕೆ ಕಲಿತರೆ ಸಾಕು. ಇಷ್ಟು ವಿದ್ಯೆಯಾದರೂ ಯಾಕೆ ಗೊತ್ತೆ? ಬರೀ ಹೆಬ್ಬೆಟ್ಟಿನ ರುಜುವೇ ಇದ್ದರೆ, ಏನೂ ತಿಳೀದೋರಿಗೆ ಮೋಸ ಮಾಡ್ತಾ ಇದ್ದಾರೇಂತ ಇವರು ಬಡ್ಕೋಬಹುದು. ಮುಂದೆ ಹಾಗಲ್ಲ. ಕರಾರು ಪತ್ರ ಏನಿದ್ದರೂ ಬರೆದದ್ದು ಪೂರ್ತಿ ಅರ್ಥವಾಗಿದೇಂತ ಹೇಳಿ, ಅವರು ಅಕ್ಷರದಲ್ಲೇ ಸಹಿ ಹಾಕ್ಬಹುದು. ಏನು ಹೇಳ್ತೀರಾ?"

ಈ ಸಲವೂ ಏನನ್ನೂ ಹೇಳುವುದು ಮಾಸ್ತರಿಂದಾಗಲಿಲ್ಲ. ಅವರು ಅವಾಕ್ಕಾದರು. ಉಳ್ಳವರ ವಿಷಯ ಅವರೆಷ್ಟೋ ತಿಳಿದಿದ್ದರೂ ಈ ವಿಚಾರ ಸರಣಿಯ ವಿಶಿಷ್ಟತೆಯನ್ನು ಕಂಡು ಬೆರಗಾದರು. ಅವರ ಎದೆಯೊಳಗೆ ಸಂಕಟವಾಯಿತು. ಆತ್ಮಾಭಿಮಾನಿಯಾದ ಮನುಷ್ಯ. ಇಂಥ ಮಾತುಗಳನ್ನು ಕೇಳಲು ಇಷ್ಟವಿಲ್ಲದಿದ್ದರೆ ಎದ್ದು ಹೋಗಬಹುದು. 'ಬರ್ತೇನೆ, ಕೆಲಸವಿದೆ' ಎಂದು ಹೇಳಿ ಎದ್ದು ಹೋಗಲೇಬೇಕು, ಎನ್ನಿಸಿತು. ಆದರೆ ಹಾಗೆ ವಿರಸಕ್ಕೆ ಎಡೆ ಕೊಡುವುದರ ಪರಿಣಾಮವೇನೆಂದು ಊಹಿಸುವುದು ಕಷ್ಟವಾಗಿರಲಿಲ್ಲ. ಬಹಿರಂಗವಾಗಿ ನಂಬಿಯಾರರನ್ನು ಕೆಣಕುವುದೆಂದರೆ, ತನ್ನ ಕೆಲಸಕ್ಕೆ ತಾನೇ ಸಂಚಕಾರ ತಂದುಕೊಂಡ ಹಾಗೆ. ಉಪಾಧ್ಯಾಯ ವೃತ್ತಿಯಿಂದ ಹೊರಬಿದ್ದ ಬಳಿಕ, ರೈತರ ನಡುವಿನ ತನ್ನ ದುಡಿಮೆಯೂ ಕೊನೆಗೊಂಡ ಹಾಗೆ. ಇದು ಸ್ಪಷ್ಟವಾಗಿದ್ದ ಮಾಸ್ತರು, ಭಾವನೆಗಳನ್ನು ತನ್ನ ಹತೋಟಿಯೊಳಗಿಟ್ಟು ತಣ್ಣಗಿರಲು ಯತ್ನಿಸಿದರು. ನೇರವಾಗಿ ಕುಳಿತಿರಲಾರದೆ ಸ್ವಲ್ಪ ಕುಗ್ಗಿ, ಒಣಗಿ ಹೋಗಿದ್ದ ತುಟಿಗಳನ್ನು ನಾಲಿಗೆಯಿಂದ ಸವರಿದರು.

ಮಾಸ್ತರ ಮೌನವನ್ನು ಕಂಡ ಜಮೀನ್ದಾರರಿಗೆ, ತಮ್ಮ ಮಾತು ಪರಿಣಾಮಕಾರಿಯಾಯಿತೆಂಬ ಅಭಿಪ್ರಾಯ ಹೆಚ್ಚು ದೃಢವಾಯಿತು. ಅವರು ಊಳಿಗದವನನ್ನು ಕರೆದು ಚಾ ತರಲು ಹೇಳಿದರು. ಮಾಸ್ತರ ಸುಖದುಃಖ ವಿಚಾರಿಸುತ್ತ ಅವರೆಂದರು:

"ಶಾಲೆಯಲ್ಲಿ ನೀವು ಇರೋದಕ್ಕೆ ಎಲ್ಲಾ ಅನುಕೂಲವಾಗಿದೆಯೋ?"

"ಇದೆ" ಎಂದು ಮಾಸ್ತರು ಉತ್ತರ ಕೊಟ್ಟರು. ಸ್ವರ ಕ್ಷೀಣವಾಗಿತ್ತು.

"ಬೇಕಾದರೆ ಆ ಹಿತ್ತಿಲಲ್ಲೇ ಒಂದಿಷ್ಟು ತರಕಾರಿ ಬೆಳೆಸ್ಬಹುದು. ನಮ್ಮ ರೈತರಿಗೆ ಹೇಳ್ತೇನೆ. ಬಂದು ಕೆಲಸ ಮಾಡ್ತಾರೆ."

"ಅಯ್ಯೋ ಬೇಡಿ! ಒಬ್ಬನಿಗೆ ಎಷ್ಟು ಬೇಕು? ಈ ಊರಲ್ಲಿ ತರಕಾರಿಗೇನು ಕಡಿಮೆಯೇ? ಧಾರಾಳವಾಗಿ ಸಿಗ್ತದೆ."

ಸಾಮಾನ್ಯವಾಗಿ, ಮಾಸ್ತರಿಗೆ ಬೇಕಾದ ತರಕಾರಿಯನ್ನೆಲ್ಲ ವಿದ್ಯಾರ್ಥಿಗಳೇ ತಂದುಕೊಡುತ್ತಿದ್ದರು; ಮಾಸ್ತರು ಬೇಡವೆಂದರೂ ತಂದುಕೊಡುತ್ತಿದ್ದರು. ದುಡ್ಡು ಕೊಡಹೋದರೂ ತೆಗೆದುಕೊಳ್ಳುತ್ತಿರಲಿಲ್ಲ.

ತರಕಾರಿಯ ಅನಂತರ, ಅಕ್ಕಿಯ ವಿಷಯ ಜಮೀನ್ದಾರರು ಪ್ರಸ್ತಾಪಿಸಿದರು.

"ನಿಮಗೆ ಅಕ್ಕಿದ್ದೇನಾದರೂ ತೊಂದರೆ ಇದ್ರೆ ಹೇಳಿ. ಕಳಿಸ್ತೇನೆ. ಸಂಕೋಚ ಪಡ್ಬೇಡಿ."

"ಛೆ! ಛೆ! ಸಂಕೋಚ ಯಾತರದು? ಅಕ್ಕಿಯೂ ದಾಸ್ತಾನಿದೆ. ಬೇಕಾದ್ರೆ ಖಂಡಿತ ಬಂದು ಕೇಳ್ತೇನೆ."

ಅಷ್ಟರಲ್ಲೆ ಮನೆಯ ತಲೆಬಾಗಿಲಲ್ಲಿ ಜಮೀನ್ದಾರರ ಹುಡುಗ ಕಾಣಿಸಿಕೊಂಡು ಮಾಸ್ತರರನ್ನು ನೋಡಿ ಮುಗುಳ್ನಕ್ಕ. ಆತನ ತಾಯಿಯೋ ಮಲತಾಯಿಯೋ ಹಿರಿಯಕ್ಕನೋ—ಅಂತೂ ಕೆಲ ಹೆಂಗಸರೂ ಹುಡುಗನ ಹಿಂದೆ ಬಾಗಿಲ ಮರೆಯಲ್ಲಿ ನಿಂತು ಮಾಸ್ತರನ್ನು ನೋಡಿದರು. ಆ ದೃಷ್ಟಿಯ ಶಾಕ ತಗಲಿದಂತೆ ಮಾಸ್ತರು ಅತ್ತಿತ್ತ ಮಿಸುಕಿದರು.

ಈ ದೃಷ್ಟಿ ಸಂಚಾರವನ್ನು ಗಮನಿಸಿದ ಜಮೀನ್ದಾರರು ಕರೆದರು:

"ಕರುಣಾಕರ, ಇಲ್ಲಿ ಬಾ!"

ಹುಡುಗ ಶರಟಿನೊಂದು ಕೊನೆಯನ್ನು ಕಚ್ಚುತ್ತ, ಮುದ್ದಾದ ದೊಡ್ಡ ಕಣ್ಣುಗಳನ್ನು ಹೊರಳಿಸುತ್ತ, ನಡೆದು ಬಂದು ತಂದೆಯ ಪಕ್ಕದಲ್ಲಿ ನಿಂತ.

"ಮಾಸ್ತರಿಗೆ ನಮಸ್ಕಾರ ಮಾಡಿದೆಯಾ?" ಎಂದು ನಂಬಿಯಾರರು ಕೇಳಿದರು.

ಹುಡುಗ, "ನಮಸ್ಕಾರ ಸಾರ್," ಎಂದ.

"ನಮಸ್ಕಾರವಪ್ಪ" ಎಂದರು ಮಾಸ್ತರು ಮುಗುಳು ನಗುತ್ತ.

ನಂಬಿಯಾರರು ಅರ್ಥವಾಗದುದೇನನ್ನೊ ಗೊಣಗಿ, ಮಗನ ಶರಟಿನತ್ತ ಕೈಹಾಕಿ, ಕಚ್ಚಿಕೊಂಡಿದ್ದುದನ್ನು ತಪ್ಪಿಸಿ, ಶರಟನ್ನು ಬಿಡಿಸಿದರು. ಮಾಸ್ತರತ್ತ ನೋಡಿ ಅವರೆಂದರು:

"ಬಹಳ ದಿವಸದಿಂದ ನಿಮ್ಮನ್ನು ಕೇಳ್ಬೇಕೂಂತಿದ್ದೆ. ನಮ್ಮ ಕರುಣಾಕರನಿಗೆ ದಿನಾಲೂ ಸ್ವಲ್ಪ ಹೊತ್ತು ನೀವು ಹೆಚ್ಚಿಗೆ ಪಾಠ ಯಾಕೆ ಹೇಳಿಕೊಡ್ಬಾರ್ದು?"

ಬಿಕ್ಕಟ್ಟಿನಲ್ಲಿ ಸಿಲುಕಿದ ಹಾಗಾಯಿತು ಮಾಸ್ತರಿಗೆ. ಈ ಹೊಸ ಭಾರವನ್ನು ಹೊತ್ತುಕೊಳ್ಳುವುದು ಅವರಿಗೆ ಏನೇನೂ ಇಷ್ಟವಿರಲಿಲ್ಲ. ಅವರು ಒಮ್ಮೆಲೆ ಉತ್ತರ ಕೊಡಲಾರದೆ ಹೋದರು. ಆದರೆ ನಿರುತ್ತರವಾಗಿ ಸುಮ್ಮನಿರುವುದೂ ಸಾಧ್ಯವಿರಲಿಲ್ಲ. ಕಳೆದುಹೋಗಿದ್ದ ಸ್ವರವನ್ನು ಮರಳಿ ಹುಡುಕಿ ಪಡೆಯುತ್ತ ಅವರೆಂದರು:

"ಆಗಲಿ. ಅದಕ್ಕೇನಂತೆ?"

"ಹಾಗಾದರೆ ಸಾಯಂಕಾಲದ ಹೊತ್ತು ಯಾವಾಗಲೂ ಇಲ್ಲಿಗೆ ಬರ್ತಾ ಇರಿ. ಆಗದೆ?"

ಸಾಯಂಕಾಲವನ್ನೆಲ್ಲ ತಮ್ಮಿಂದ ಕಸಿದುಕೊಳ್ಳುವ ಯತ್ನ ಬಲು ಕ್ರೂರವಾಗಿ ಮಾಸ್ತರರಿಗೆ ತೋರಿತು. ಒಪ್ಪಿಗೆ ಸೂಚಿಸದೆ ಸುಮ್ಮನಿದ್ದ ಮಾಸ್ತರನ್ನು

ಜಮೀನ್ದಾರರು ಅರೆಕ್ಷಣ ಹುಬ್ಬು ಗಂಟಿಕ್ಕಿ ನೋಡಿ, ವೇಗವಾಗಿ ಮಾತನಾಡುತ್ತಾ ಅಂದರು :

"ನನಗೆ ಬ್ಯಾಡ್ಮಿಂಟನ್ ಅಂದರೆ ಇಷ್ಟ. ನಾನು ಹೈಸ್ಕೂಲ್ನಲ್ಲಿ ಓದ್ತಾ ಇದ್ದಾಗ ಬಹಳ ಪ್ರಸಿದ್ಧನಾಗಿದ್ದೆ. ಇಲ್ಲಿ ಯಾರೂ ಜತೆ ಇಲ್ಲದೆ ಬೇಜಾರಾಗಿತ್ತು. ಇಲ್ಲೇ ಎದುರಿಗೆ ಕೋರ್ಟು ಹಾಕಿಸ್ತೇನೆ. ನನಗೆ ಪುರುಸೊತ್ತು ಆದಾಗಲೆಲ್ಲ ಸಾಯಂಕಾಲ ಒಂದೊಂದು ಆಟವೂ ಆಡ್ಬಹುದು."

ತಮ್ಮ ಅಸಹಾಯಕತೆಯನ್ನು ಒಪ್ಪಿಕೊಳ್ಳಲಾರದ ಹಾಗೆ ಮಾಸ್ತರು ಉತ್ತರ ವಿತ್ತರು :

"ನನಗೆ ಬ್ಯಾಡ್ಮಿಂಟನ್ ಬರೋದಿಲ್ಲ."

"ಆಶ್ಚರ್ಯ! ಈಗಿನ ಕಾಲದ ನೀವೇ ಹೀಗಿರೋದು ಮಹದಾಶ್ಚರ್ಯ!"

"ಹೇಳೋದಕ್ಕೆ ನಾಚಿಕೆಯಾಗ್ತದೆ. ಪಂದ್ಯಾಟ ಅಂದರೆ ನನಗೆ ಅಷ್ಟಕ್ಕಷ್ಟೇ."

ಜಮೀನ್ದಾರರು ನಕ್ಕರು.

"ಹಾಗಾದರೆ, ಜೋಡು ನಳಿಗೆ ಬಂದೂಕೆತ್ತಿ ನೀವು ಬೇಟೆಯಾಡೋದೆಲ್ಲ ಅಷ್ಟರಲ್ಲೇ ಇದೆ!"

ಮಾಸ್ತರರು ನಗೆಯ ಉತ್ತರವಿತ್ತರು.

"ಹೋಗಲಿ, ಇಸ್ಪೀಟಾದರೂ ಆಡ್ತೀರೋ ?"

"ಅದೂ ಇಲ್ಲ."

"ಹಾಗಾದರೆ ನೀವು ಪುಸ್ತಕ ಕೀಟ ಅಂತ ತೋರ್ತ್ತದೆ."

ಆ ಮಾತನ್ನು ತಮ್ಮ ಉಪಯೋಗಕ್ಕೆ ತಿರುಗಿಸಿಕೊಂಡು ಮಾಸ್ತರರೆಂದರು :

"ನಿಜ ಹೇಳಿದ್ರಿ. ನಾನು ಮೊದಲಿನಿಂದಲೂ ಅಷ್ಟೆ. ಪುಸ್ತಕದ ಹುಚ್ಚು. ಈಗಲೂ ಸಹ ಬಿಡುವು ಸಿಕ್ಕಿದ್ರೆ ಸಾಕು—ಪುಸ್ತಕ ಹುಡುಕಿಕೊಂಡು ನೀಲೇಶ್ವರಕ್ಕೋ ಹೊಸದುರ್ಗಕ್ಕೋ ಓಡುತ್ತಿರ್ತೇನೆ."

ಈ ಓಡಾಟದ ಗೂಢಾರ್ಥವನ್ನು ತಿಳಿಯದ ಜಮೀನ್ದಾರರು ನಕ್ಕು ತಲೆಯಾಡಿಸಿ ಅಂದರು :

ಈ ಪುಸ್ತಕದ ವಿಷಯ ನನಗೆ ಎಣ್ಣೆ-ಸೀಗೆ ಇದ್ದಹಾಗೆ!"

ಆಳು ಚಹಾ ತಂದ. ಚೀಣೀ ಪಿಂಗಾಣಿಯ ಕಪ್ ಮತ್ತು ಸಾಸರು. ಹಳ್ಳಿಯ ಬಡ ಹೋಟೆಲಿನ ಗಾಜಿನ ಲೋಟವಲ್ಲ.

"ಒಳಗೆ ಓಡು," ಎಂದು ನಂಬಿಯಾರರು ಮಗನಿಗೆ ಆಜ್ಞೆ ಇತ್ತರು. ಮಾಸ್ತರರ ದೃಷ್ಟಿ, ಓಡುತ್ತಿದ್ದ ಹುಡುಗನನ್ನು ಹಿಂಬಾಲಿಸಿತು. ಬಾಗಿಲ ಬಳಿ ಈಗ ಹೆಂಗಸ ರಿರಲಿಲ್ಲ.

ಒಂದು ಸಿಗರೇಟು ಹಚ್ಚಿ ಜಮೀನ್ದಾರರು ಚಹಾವನ್ನೆತ್ತಿಕೊಂಡು, "ತಗೊಳ್ಳಿ" ಎಂದು ಮಾಸ್ತರರಿಗೂ ಹೇಳಿದರು.

ಕಪ್ಪಿನಷ್ಟೇ ಸೊಗಸಾಗಿತ್ತು ಪಾನೀಯ ಕೂಡಾ. ಶ್ರೀಮಂತ ಚಹಾ. ಮತ್ತೇರುವಷ್ಟು ರುಚಿಕರ.

ಒಂದು ಗುಟುಕನ್ನು ಹೀರಿದ ಬಳಿಕ ಜಮೀನ್ದಾರರೆಂದರು :

"ಕರುಣಾಕರನಿಗೆ ಮುಂದೆ ಕಾಲೇಜು ಓದಿಸ್ಬೇಕೊಂತ ನಿರ್ಧಾರ ಮಾಡಿದ್ದೇನೆ. ಮಾವನಕಡೆಯಿಂದ ಅವನಿಗೆ ಆಸ್ತಿಯೂ ಬರ್ತದೆ. ವಕೀಲನಾಗಿ ಆತ ರಾಜಕೀಯಕ್ಕೆ ಇಳೀಬೇಕೊಂತ ನನ್ನ ಅಪೇಕ್ಷೆ."

ಚಹಾ ಕುಡಿಯುತ್ತ ಮಾಸ್ತರು ತನ್ನ ಬಡ ವಿದ್ಯಾರ್ಥಿಗಳನ್ನು ಸ್ಮರಿಸಿಕೊಂಡರು. ಜಮೀನ್ದಾರರ ಮಗನಷ್ಟೇ ಅಂತಸ್ತು ಇದ್ದ ಬೇರೆ ಇಬ್ಬರು ಹುಡುಗರೆಂದರೆ ನಂಬೂದಿರಿಯ ಮಕ್ಕಳು—ತಾವು ಮಡಿ ಬ್ರಾಹ್ಮಣರೆಂದು ಯಾವಾಗಲೂ ಪ್ರತ್ಯೇಕವಾಗಿಯೇ ಕುಳಿತು, ಮನೆಗೆ ಹೋದೊಡನೆ ಸ್ನಾನ ಮಾಡಿ ಮೈಲಿಗೆ ಕಳೆಯುತ್ತಿದ್ದ ಎಳೆಯರು. ನಂಬಿಯಾರರ ಹಾಗೆಯೇ ಮಕ್ಕಳಿಗೆ ಕಾಲೇಜು ವಿದ್ಯಾಭ್ಯಾಸ ಕೊಡಿಸುವ ಮಾತನ್ನಾಡುವ ಸಾಮರ್ಥ್ಯ ಆ ಹಳ್ಳಿಯಲ್ಲಿ ಬೇರೆಯೂ ಒಬ್ಬ ವ್ಯಕ್ತಿಗಿದ್ದುದೆಂದರೆ ನಂಬೂದಿರಿಗೆ ಮಾತ್ರ. ಬೇರೆ ಯಾರೂ ಅಂಥಹ ಕನಸನ್ನೂ ಕಾಣುವ ಸ್ಥಿತಿಯಲ್ಲಿರಲಿಲ್ಲ.

ಚಹಾ ಕುಡಿದು ಮುಗಿಸಿದ ಮಾಸ್ತರೊಡನೆ ಜಮೀನ್ದಾರರು ರಾಜಕೀಯದ ಮಾತೆತ್ತಿದರು :

"ಗ್ರಾಮಗಳಲ್ಲಿ ಈಗ ಕೆಲವು ಕಡೆ ಪಂಚಾಯತಿ ಅಂತ ಮಾಡ್ತಾರಲ್ಲ. ಅದರ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ?"

ಮಾಸ್ತರು ತಂತಿಯ ಮೇಲಿನ ಕಸರತ್ತಿಗೆ ಆರಂಭ ಮಾಡಿದ್ರು :

ಗ್ರಾಮಪಂಚಾಯತಿಯಿಂದ ಒಳ್ಳೇದೂ ಆಗ್ಬಬಹುದು ; ಕೆಟ್ಟದ್ದೂ ಆಗ್ಬಹುದು. ಕೆಟ್ಟವರ ಕೈಗೆ ಅಧಿಕಾರ ಸಿಕ್ಕಿದ್ರೆ...."

ತೊಡೆ ತಟ್ಟಿ, ಮಾಸ್ತರರ ಮಾತು ತಡೆದು, " ಅದೇ ನಾನೂ ಹೇಳೋದು ! " ಎಂದು ನಂಬಿಯಾರರು ಉದ್ಗರಿಸಿದರು.

ಮಾಸ್ತರಿಗೆ ಒಂದು ಕ್ಷಣ ಏನೂ ಅರ್ಥವಾಗಲಿಲ್ಲ. ಅರೆತೆರೆದ ಬಾಯನ್ನು ಅವರು ಮುಚ್ಚಲಾರದೆ ಹೋದರು. ಮಾತನಾಡಲಾರದ ಅವರ ನೆರವಿಗೆ ಬಂದ ನಂಬಿಯಾರರೇ ಅಂದರು :

"ಈ ಸಣ್ಣಪುಟ್ಟ ರೈತರಲ್ಲಿ ಕೆಲವರು ತಲೆತಿರುಕರಿದ್ದಾರೆ. ಎಲ್ಲಿಯಾದರೂ ಅವರು ಗ್ರಾಮ ಪಂಚಾಯತಿಗೆ ಆರಿಸಿ ಬಂದರೊಂತಿಟ್ಕೊಳ್ಳಿ, ಅದೇನೋ ಗಾದೆ ಇದೆಯಲ್ಲ ಹಾಗೆ—ಅರ್ಧ ರಾತ್ರೀಲಿ ಕೊಡೆ ಹಿಡಿಸ್ಕೊಂಡು ಮೆರವಣಿಗೆ ಹೋದರೂ ಹೋದರೇ ! ಇನ್ನು ಹಳ್ಳಿಯ ಸ್ಥಿತಿಗತಿಯೋ—ರಾಮ, ರಾಮ !"

ಮಾಸ್ತರ ಗಂಟಲಲ್ಲಿ ಮತ್ತೆ ಉಗುಳು ಸಿಲುಕಿಕೊಂಡಿತು. ಮಾತು, ಅಸಹನೀಯ ವೇದನೆಯಿಂದ ಹೊಟ್ಟೆಯೊಳಗೇ ಹೊರಳಾಡಿತು.

ತಾವು ಚಿತ್ರಿಸಿದ ಭೀತಿಯೆಲ್ಲ ಬರಿಯ ಭ್ರಮೆ ಎನ್ನುವಂತೆ ಜಮೀನ್ದಾರರು ಮಾತು ಮುಂದುವರಿಸಿದರು :

"ತ್ರಿಕರಪುರದಲ್ಲಿ ಹಾಗೆ ಆಗಿಲ್ಲಾಂತಿಟ್ಕೊಳ್ಳಿ ಆದರೂ ಈ ಗ್ರಾಮ ಪಂಚಾಯಿತಿ ಅಗತ್ಯವೇ—ಅಂತ ನನ್ನ ಪ್ರಶ್ನೆ. ಈಗ ನಮ್ಮ ಹಳ್ಳೀನೇ ತಗೊಳ್ಳಿ, ಇದಕ್ಕೀಗ ಏನಾಗಿದೆ ?"

ಮಾಸ್ತರು ಗಟ್ಟಿಯಾಗಿ ನಕ್ಕರು. ಆ ನಗು ಅರ್ಥವಾಗದೆ ನಂಬಿಯಾರರು ಮಾಸ್ತರನ್ನೇ ದುರದುರನೆ ನೋಡಿದರು. ತಮ್ಮ ಮಾತಿಗೆ ಮೆಚ್ಚಿ ಆತ ನಕ್ಕಿರ ಬಹುದೆಂದು ಊಹಿಸಿಕೊಂಡು ತಾವೂ ಹಲ್ಲು ಕಿಸಿದರು. ಗ್ರಾಮ ಪಂಚಾಯಿತಿ ವ್ಯರ್ಥವೆಂಬುದೇ ಅವರ ಅಭಿಪ್ರಾಯವಾಗಿದ್ದರೂ ಹಳೆಯ ಕಾಲದವನಾಗಿರಲು ಇಚ್ಛಿಸದೆ ಅವರೆಂದರು :

"ಆದರೂ ನಾಗರೀಕತೆಯ ಈ ಕಾಲದಲ್ಲಿ ಗ್ರಾಮಪಂಚಾಯಿತಿ ಇರೋದು ಭೂಷಣವೆಂದಾದರೆ ನನ್ನ ವಿರೋಧವಿಲ್ಲ. ಮುಂದೆ ಅಗತ್ಯವಾಗಿ ಮಾಡೋಣ. ಇದು ನೂರರ ಜತೇಲಿ ನೂರೊಂದನೆಯ ಕೆಲಸ ಇದ್ದ ಹಾಗೆ. ಆದರೆ ಅದನ್ನ ಹತೋಟೀಲಿ ಇಟ್ಕೊಂಡು ನಡೆಸ್ಬೇಕು, ಅಷ್ಟೆ!"

ಮಾಸ್ತರು ಮತ್ತೊಮ್ಮೆ ಯಾವ ಅರ್ಥವೂ ಇಲ್ಲದೆ ನಕ್ಕರು.

ಅಷ್ಟರಲ್ಲೆ ಆಳೊಬ್ಬ ಬಂದು ವಿನೀತವಾಗಿ ಬಾಗಿ ಹೇಳಿದ :

"ಕೆಳಗಿನ ಮೂಲೆಯ ಇಬ್ಬರು ರೈತರು ಬಂದಿದಾರೆ ಒಡೆಯ."

ನಂಬಿಯಾರರು ಹುಬ್ಬು ಗಂಟಿಕ್ಕಿದರು :

"ಯಾರೊ ?"

"ಕೆಳಗಿನ ಮೂಲೆಯೋರು. ಬರಹೇಳಿದ್ರಿ. ನೀರು ಬಿಡೋ ವಿಷಯದಲ್ಲಿ—"

"ಓ ಅವರಾ ?"

ಒಂದು ನಿಮಿಷ ಸುಮ್ಮನಿದ್ದು ನಂಬಿಯಾರರು ಆಜ್ಞೆ ಇತ್ತರು :

"ಇವತ್ತು ಪುರಸೊತ್ತಿಲ್ಲ, ನಾಳೆ ಬರಬೇಕೂಂತ ಹೇಳು."

"ಹೂಂ ಒಡೆಯ. ಎಷ್ಟೊತ್ತಿಗೆ ಬರೋದಕ್ಕೆ ಹೇಳ್ಲಿ ?"

ಜಮೀನ್ದಾರರು ಸ್ವರವೇರಿಸಿದರು :

"ನಾಯಿ ಮಗನೆ ! ಅದೇನೋ ಹಾಗಂದರೆ ? ಎಷ್ಟೊತ್ತಿಗೆ–ಅಂತೆ ! ಭೇಟಿಗೆ ಸಮಯ ಗೊತ್ತು ಮಾಡೋದಕ್ಕೆ ಅವರು ಮಹಾರಾಜರೇನೋ ? ಹೋಗು.... ಬೆಳಗ್ಗೆನೇ ಬಂದು ಇಲ್ಲಿ ಕಾದಿರ್ಬೇಕೂಂತ ಹೇಳು !"

ಆಳು ಬಾಗಿ ಬಾಗಿ ಹೊರಟುಹೋದ. ನಂಬಿಯಾರರು ಠೀವಿಯಿಂದ ಮಾಸ್ತರತ್ತ ತಿರುಗಿ ಸ್ವರ ಬದಲಾಯಿಸಿ ಹೇಳಿದರು :

"ಸೂಳೇಮಕ್ಕಳು ಜಗಳಾಡ್ತಾರೆ. ಆಮೇಲೆ ರಾಜಿ ಮಾಡಿಸ್ಕೊಡೀಂತ ಇಲ್ಲಿಗೆ ಬರ್ತಾರೆ."

ಆಳನ್ನು ಉದ್ದೇಶಿಸಿ ಮಾತನಾಡಿದ ಧ್ವನಿಗಿಂತ ಆತ್ಮ ಪ್ರಶಂಸೆಯ ಈ ಧ್ವನಿ ಭಿನ್ನವಾಗಿತ್ತು. 'ಒಬ್ಬೊಬ್ಬರಿಗೋಸ್ಕರ ಒಂದೊಂದು ರೀತಿಯ ಸ್ವರ' ಎಂದು ಕೊಂಡರು ಮಾಸ್ತರು. ಮುಂದಕ್ಕೆ ಇನ್ನೂ ರಾಗವಾಗಿ ನಂಬಿಯಾರರೆಂದರು :

"ಜಮೀನ್ದಾರ ರೈತರಿಗೆಲ್ಲಾ ತಂದೆ ಇದ್ದ ಹಾಗೆ. ಜಗಳ ಆಡಿಕೊಂಡು ಇಲ್ಲಿಗಲ್ಲದೆ ಬೇರೆಲ್ಲಿಗೆ ಬರಬೇಕು ಹೇಳಿ ?"

....ಸಂದರ್ಶನವನ್ನು ಇನ್ನೂ ಉದ್ದ ಬೆಳೆಸುವುದರಲ್ಲಿ ಅರ್ಥವಿಲ್ಲವೆಂದು, ಮಾಸ್ತರು ಹೊರಡಲು ಸನ್ನದ್ಧರಾಗಿ ಅತ್ತಿತ್ತ ನೋಡಿದರು. ಮಾಸ್ತರ ಇಂಗಿತವನ್ನು ನಂಬಿಯಾರರು ಊಹಿಸದಿರಲಿಲ್ಲ. ಅವರು ಆಳನ್ನು ಕರೆದರು :

"ಏ ಇವನೇ, ಬಾ ಇಲ್ಲಿ !"

ಆಳು ಬಂದಾಗ ಅವರು ಆದೇಶವಿತ್ತರು :

"ಎರಡು ದೊಡ್ಡ ಪಪ್ಪಾಯಿ ಹಣ್ಣು ತಗೊಂಡು ಮಾಸ್ತರ ಜತೇಲಿ ಹೋಗು."

ಆದರೆ ಮಾಸ್ತರಿಗೆ ಮಾತುಕತೆಯಿಂದಲೇ ಹೊಟ್ಟೆ ತುಂಬಿತ್ತು. ಪಪ್ಪಾಯಿ ಹಣ್ಣುಗಳು ಅವಶ್ಯವೆನ್ನಿಸಲಿಲ್ಲ. ಉಡುಗೊರೆ ಇಲ್ಲದೆ, ಬಂದ ಹಾಗೆಯೇ ಹಿಂತಿರು ಗಲು ಅವರು ಯತ್ನಿಸಿದರು :

"ಬೇಡಿ. ಸುಮ್ಮನೆ ಯಾಕೆ ? ದಯವಿಟ್ಟು ಬೇಡಿ."

ನಂಬಿಯಾರರು ಎದ್ದು ನಿಂತು, 'ಸುಮ್ಮನಿರಿ' ಎನ್ನುವಂತೆ ಆತ್ಮೀಯತೆಯಿಂದ ಕೈಬೀಸಿ "ತಗೊಂಡು ಬಾರೋ. ಚೆನ್ನಾಗಿರೋದು ನೋಡಿ ಆರಿಸಿ ತಾ," ಎಂದರು.

ಹೊರಕ್ಕೆ ಹೊರಟ ಮಾಸ್ತರು ಒಳಬಾಗಿಲಿನತ್ತ ಒಮ್ಮೆ ದೃಷ್ಟಿ ಬೀರಿದರು. ಅಲ್ಲಿ ಹೆಂಗಸರಿರಲಿಲ್ಲ ; ಆದರೆ ಕರುಣಾಕರ ನಿಂತಿದ್ದ. ಆ ಹುಡುಗನಿಗೆ ಪಾಠ ಹೇಳಿ ಕೊಡಲು ಒಪ್ಪಿದುದು ನೆನಪಾಗಿ, ಮಾಸ್ತರ ಹೃದಯ ಭಾರವಾಯಿತು.

ಜಮೀನ್ದಾರರು ಮಗನನ್ನು ನೋಡದೆ ಇದ್ದರೂ ಮಾಸ್ತರರೊಡನೆ ಹೊರ ಬರುತ್ತ ಹೇಳಿದರು:

"ಅಂದ ಹಾಗೆ—ಕರುಣಾಕರನಿಗೆ ಪಾಠ ಹೇಳೋ ವಿಚಾರ, ನಾಳೆ ಸಾಯಂ ಕಾಲದಿಂದಲೇ ಬರ್ತೀರೇನು ?"

ಮಾಸ್ತರ ಮಿದುಳು ಒಂದು ನಿಮಿಷ ತೀವ್ರಗತಿಯಿಂದ ಚಲಿಸಿತು.

"ಶಾಲೆಯ ಪಾಠಗಳೆಲ್ಲ ಆದಮೇಲೆ ಹುಡುಗರಿಗೆ ಸಾಮಾನ್ಯವಾಗಿ ಆಯಾಸ ವಾಗ್ತದೆ. ಅಲ್ಲದೆ ಅದು ಆಟ ಆಡೋ ಹೊತ್ತು. ಬೆಳಗ್ಗೆ ಪಾಠ ಇಟ್ಕೊಳ್ಳೋದು ಮೇಲು. ಅದರಿಂದ ಪ್ರಯೋಜನ ಜಾಸ್ತಿ."

ನಂಬಿಯಾರರು "ಹಾಗೇ ಆಗಲಿ" ಎಂದರು. ಆದರೆ ಆ ಕ್ಷಣವೇ, ಸಂಜೆ ರೈತರಿಗೆ ಪತ್ರಿಕೆ ಓದಿ ಹೇಳಲು ತೊಂದರೆಯಾಗಬಾರದೆಂದು ಈ ಉಪಾಧ್ಯಾಯ ಆ ರೀತಿ ಹೇಳಿದನೇನೋ ಎಂಬ ಸಂದೇಹ ಅವರಿಗೆ ತಲೆದೋರಿತು. ಅಂತಹ ಓದಿಗೆ ಆಸ್ಪದವಿರಬಾರದೆಂದು ದೃಢವಾದ ಧ್ವನಿಯಲ್ಲಿ ಅವರೆಂದರು :

"ಆದರೆ ರೈತರನ್ನು ಮಾತ್ರ ಸಾಯಂಕಾಲದ ಹೊತ್ತು ಶಾಲೆ ಜಗಲಿಗೆ ಸೇರಿಸ್ಬೇಡಿ. ನಿಮಗೆ ಒಬ್ಬರೇ ಇದ್ದು ಬೇಸರವಾದ್ರೆ ಇಲ್ಲಿಗೆ ಬನ್ನಿ. ಆಟವಿಲ್ಲದೇ ಹೋದ್ರೆ ಹರಟೆಯಾದರೂ ಹೊಡೆಯೋಣ. ಬೇಕಾದರೆ ನಮ್ಮನೆ ಪೇಪರೇ ನೀವು ಉಪಯೋಗಿಸ್ಬಹುದು. ಪ್ರತ್ಯೇಕ ತರಿಸಬೇಕೂಂತ಼್ೇ ಇಲ್ಲ."

ಉತ್ತರವಾಗಿ, ನೋವಿನ ಹಲವು ಪದರಗಳ ಆಳದಿಂದ, 'ಹೂಂ' ಎಂಬ ಧ್ವನಿ ಬಂತು.

"ಬರ್‍ತೀನಿ, ನಮಸ್ಕಾರ" ಎಂದು ಮಾಸ್ತರು ನಡೆದರು. ಜಮಿನ್ದಾರರು ಉತ್ತರವಾಗಿ ತಲೆಯಾಡಿಸಿ ಮೌನ ನಮಸ್ಕಾರವಿತ್ತರು. ಅವರ ಆಳು, ದೊಡ್ಡ ಎರಡು ಪಪ್ಪಾಯಿ ಹಣ್ಣುಗಳನ್ನು ಬಾಳೆಯ ಹಗ್ಗದಲ್ಲಿ ಕಟ್ಟಿ ತಲೆಯ ಮೇಲಿರಿಸಿ ಕೊಂಡು, ಮಾಸ್ತರನ್ನು ಹಿಂಬಾಲಿಸಿದ.

ಮಾಸ್ತರಿಗೆ ಬೇಸರವಾಗಿತ್ತು. ಹಿಂಡಿಹೋಗಿದ್ದ ಪತ್ರಿಕೆಯನ್ನು ಕಂಕುಳಲ್ಲಿರಿಸಿ, ಉಟ್ಟಿದ್ದ ಅಡ್ಡ ಪಂಚೆಯನ್ನು ಅರ್ಧಕ್ಕೆ ಎತ್ತಿ ಕಟ್ಟಿ, ಅವರು ಮಾತಿಲ್ಲದೆ ಹಾದಿ ನಡೆದರು.

ಕತ್ತಲಾಗಲು ಇನ್ನೂ ಸ್ವಲ್ಪ ಹೊತ್ತಿತ್ತು. ರೈತರು ಕಾದು ನಿರಾಶರಾಗಿ ಹೊರಟು ಹೋಗಿದ್ದರೂ ಇರಬಹುದೆಂದು ಮಾಸ್ತರು ಅಂದುಕೊಂಡರು. ಸಮಾಜದ ವರ್ಗಶಕ್ತಿಯಾದ ನಂಬಿಯಾರರೆದುರಲ್ಲಿ ತಾನು ಬಡ ಮಾನವ ಪ್ರಾಣಿಯಾಗಿ ಇರಬೇಕಾಯಿತಲ್ಲ, ಯಾವ ಮಾತನ್ನೂ ನೇರವಾಗಿ ಆಡಲು ತನ್ನಿಂದ ಆಗದೆ ಹೋಯಿತಲ್ಲ—ಎಂದು ಅವರಿಗೆ ಕೆಡುಕೆನಿಸಿತು........

ಅವರು ಊಹಿಸಿದಂತೆಯೇ ಶಾಲೆಯ ಜಗಲಿಯಲ್ಲಿ ರೈತರು ಯಾರೂ ಇರಲಿಲ್ಲ. ಆದರೆ ದಿನವೂ ಸಂಜೆ ಬರುತ್ತಿದ್ದ ಅಪ್ಪು ಮತ್ತು ಚಿರುಕಂಡ ಜಗಲಿಯ ಆವರಣದ ಅಡ್ಡಗೋಡೆಯ ಮೇಲೆ ಕುಳಿತಿದ್ದರು. ಮಾಸ್ತರನ್ನು ಕಂಡೊಡನೆ ಅವರು ಎದ್ದು ನಿಂತರು. ಮಾಸ್ತರ ಪಾಲಿಗೆ ಈ ಶಿಷ್ಯರ ದರ್ಶನ ಹಿತಕರವಾಯಿತು. ಆದರೆ, ಪಪ್ಪಾಯಿ ಹಣ್ಣುಗಳನ್ನು ಹೊತ್ತು ತರುತ್ತಿದ್ದ ಜಮಿನ್ದಾರರ ಆಳನ್ನು ಕಂಡು ಹುಡುಗರು ಸುಮ್ಮನಾದರು. ಆತನನ್ನು ಬೇಗನೆ ಕಳುಹಿಸಿಬಿಡಬೇಕೆಂದು ಮಾಸ್ತರೆಂದರು :

"ಜಗಲೀಲೇ ಇಡು."

ಆತ ಕೆಳಕ್ಕಿರಿಸಿ, "ಹೊರಡ್ತೀನಿ" ಎಂದು ಕೈ ಜೋಡಿಸಿದ; ಮಾಸ್ತರರು "ಹೂಂ" ಎಂದೊಡನೆ ಹೊರಟು ಹೋದ.

ಶಾಲೆಯ ಬಾಗಿಲಿಗೆ ಹಾಕಿದ್ದ ಪುಟ್ಟ ಬೀಗವನ್ನು ತೆರೆದೊಡನೆ ಅಪ್ಪು ಮಾಸ್ತರ ಮುರುಕು ಕುರ್ಚಿಯನ್ನು ತಂದು ಹೊರಕ್ಕಿರಿಸಿದ. ಮಾಸ್ತರು ದಿನ ಪತ್ರಿಕೆಯನ್ನು ಚಿರುಕಂಡನಿಗೆ ಕೊಟ್ಟು ಕುರ್ಚಿಯ ಮೇಲೆ ಕುಳಿತರು.

ಪತ್ರಿಕೆಯಲ್ಲಿರುವುದಕ್ಕಿಂತಲೂ ವಿಶೇಷ ವಾರ್ತೆ ಬೇರೆ ಇದೆಯೆಂದು ಊಹಿಸಿದ ಚಿರುಕಂಡ, ಮಾಸ್ತರತ್ತ ನೋಡಿ ಕೇಳಿದ :

"ಜಮೀನ್ದಾರರ ಮನೆಗೆ ಹೋಗಿದ್ದಿರಾ ಸಾರ್ ?"

"ಹೂಂ ಕಣೊ."

"ಏನು ಸಾರ್ ವಿಶೇಷ?"

"ಇವತ್ತಿನಿಂದ ಇಲ್ಲಿ ಪತ್ರಿಕೆ ಓದಿ ಹೇಳೋದು ಬಂದ್ !"

"ಆಹಾ !" ಎಂದು ಕಣ್ಣರಳಿಸಿ ಅಪ್ಪು ಉದ್ಗಾರವೆತ್ತಿ, ಪಪ್ಪಾಯ ಹಣ್ಣಿನ ಬಳಿ ಹೋಗಿ ಕುಳಿತ.

ಚಿರುಕಂಡ ಸ್ವರ ತಗ್ಗಿಸಿ ಹೇಳಿದ :

"ಅವರಿಗೆ ನಿಮ್ಮ ಮೇಲೆ ಸಂಶಯ ಬಂದಿರ್ಬ್ಹೌದೆ ಸಾರ್ ?"

"ಇರಲಾರ್ದು" ಎಂದು ಮಾಸ್ತರು ಬೀಡಿ ಹಚ್ಚಿ ಸೇದುತ್ತ, ಸಾವಧಾನವಾಗಿ ಆದರೆ ಚುಟುಕಾಗಿ–ಜಮೀನ್ದಾರರ ಮನೆಯಲ್ಲಿ ನಡೆದ ಸಂವಾದದ ಮುಖ್ಯ ವಿಷಯ ಹೇಳಿದರು.

"ಇನ್ನು ಆ ಅರಸುಕುಮಾರನಿಗೆ ಹೆಚ್ಚಿನ ಪಾಠ ಬೇರೆ ಹೇಳಿಕೊಡ್ಬೇಕೇನು ಸರಿ ! ಸರಿ !"

—ಎಂದ ಚಿರುಕಂಡ.

ಆದರೆ ಮಾಸ್ತರು ಶಾಂತವಾಗಿದ್ದರು.

"ಆಗೋದಿಲ್ಲಾಂತ ಹೇಳೋದಕ್ಕಾಗುತ್ಯೆ ಅಪ್ಪು? ವಿಶ್ವಸ್ಥ ಸಮಿತಿ ಅನ್ನೋದೆಲ್ಲಾ ಹೆಸರಿಗೆ. ನಂಬಿಯಾರರಿಗೆ ಬೇಡ ಅನಿಸಿದ್ರೆ ನನ್ನನ್ನು ಕೆಲಸದಿಂದ ತೆಗೆದು ಹಾಕಲೂಬಹುದು."

ಹುಡುಗರು ಮಾತನಾಡಲಿಲ್ಲ.

ಚಿರುಕಂಡ ವರ ಕೇಳುವವನಂತೆ ಹೇಳಿದ :

"ನೀವು ದೀನಾ ಅಲ್ಲಿಗೆ ಹೋಗ್ಬೇಡಿ, ಸಾರ್. ಬೆಳಗ್ಗೆ ಬೇಗ್ನೆ ಇಲ್ಲಿಗೆ ಬಂದ್ಬಿಡೂಂತ ಹೇಳಿ."

ಮಾಸ್ತರು ಮುಗುಳು ನಕ್ಕರು. ಸ್ವಲ್ಪ ದಿನ ಹೋಗುತ್ತಿದ್ದು ಕ್ರಮೇಣ ಆ ಹುಡುಗನನ್ನು ಶಾಲೆಗೇ ಬೇಗನೆ ಕರೆಸಬೇಕೆಂಬುದು ಅವರ ಯೋಚನೆಯು ಆಗಿತ್ತು.

ಜಮೀನ್ದಾರರ ಮನೆಯಲ್ಲಿ ನಡೆದ ಮಾತುಕತೆಯಲ್ಲಿ ಅತ್ಯಂತ ಸ್ವಾರಸ್ಯಕರ ವಾಗಿದ್ದ ಅಂಶ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ್ದು. ಅದರ ವಿವರವನ್ನು ಹೇಳಿ ಮಾಸ್ತರರು ನಕ್ಕರು ; ಹುಡುಗರೂ ಕೇಳಿ ನಕ್ಕರು.

ಅಪ್ಪು ಉತ್ಸಾಹಗೊಂಡು ಹೇಳಿದ :

"ಕಯ್ಯೂರಿಗೆ ಬೇಗ್ನೆ ಗ್ರಾಮಪಂಚಾಯತಿ ಬರೋ ಹಾಗೆ ಮಾಡ್ಬೇಕು ಸಾರ್."

"ಅದಕ್ಕಿನ್ನೂ ರೈತರು ಸಿದ್ಧವಾಗ್ಬೇಕು."

"ಆಮೇಲೆ ಶಾಲೇನ ಪಂಚಾಯತಿಯವರೇ ನಡೆಸ್ಬಹುದು, ಅಲ್ವಾ?"

"ಹೌದು. ಆದರೆ ಅವರೆಲ್ಲಾ ಅಷ್ಟು ಸುಲಭವಾಗಿ ಕೆಟ್ಟವರ ಕೈಗೆ ಅಧಿಕಾರ ಕೊಡ್ತಾರಾ?"

ನಂಬಿಯಾರರ ಕೈಯಿಂದ ರೈತರು ಅಧಿಕಾರ ಪಡೆಯುವುದು ಸುಲಭವಲ್ಲ ವೆಂದು ಅಪ್ಪುವಿಗೆ ಚೆನ್ನಾಗಿ ಗೊತ್ತಿತ್ತು. ಆ ತಿಳಿವಳಿಕೆ ನೆನಪಾಗಿ ಆತನೆಂದ:

"ಹೂಂ. ಗ್ರಾಮಪಂಚಾಯತಿಯಿಂದೇನೂ ಪ್ರಯೋಜನವಿಲ್ಲ. ಹೋರಾಟ ವೊಂದೇ ಹಾದಿ."

ಅಪ್ಪುವಿನ ಮಾತಿನ ಸರಣಿಯನ್ನು ತಿದ್ದುವವನಂತೆ ಚಿರುಕಂಡ ಹೇಳಿದ:

"ಕೊನೇದಾಗಿ ಹೋರಾಟ ಆಗಿಯೇ ಆಗ್ತದೆ. ಆದರೆ ಗ್ರಾಮ ಪಂಚಾಯತಿ ಜನಜಾಗೃತಿಗೆ ಸಹಾಯಕ. ಅಲ್ವೆ ಸಾರ್?"

ಮಾಸ್ತರು 'ಹೌದು' ಎಂದು ತಲೆದೂಗಿದರು. ಅದು ಹೇಗೆ ಎಂಬುದು ಅಪ್ಪುವಿಗೆ ಸ್ಪಷ್ಟವಾಗಲಿಲ್ಲ. ಮಾಸ್ತರು ವಿವರಿಸಿದರು.

"ಗ್ರಾಮಪಂಚಾಯತಿ ಮಾಡಿದ ಮೇಲೂ ಜಮೀನ್ದಾರರದೇ ಅಧಿಕಾರವಾದಾಗ, ಈ ಪಂಚಾಯತಿಯಿಂದೇನೂ ಪ್ರಯೋಜನವಿಲ್ಲಾಂತ ಜನರಿಗೇ ಗೊತ್ತಾಗ್ತದೆ ನೋಡು. ಅನುಭವದಿಂದಲೇ ವಿಷಯ ಅವರಿಗೆ ಮನದಟ್ಟಾಗುತ್ತದೆ."

ಈಗ ಅಪ್ಪುವಿಗೆ ಅದು ಅರ್ಥವಾಯಿತು.

ಪಪ್ಪಾಯಿ ಹಣ್ಣುಗಳ ಮೇಲೆ ಅಪ್ಪು ಕೈ ಆಡಿಸುತ್ತಿದ್ದುದನ್ನು ಕಂಡು ಚಿರುಕಂಡ ಹೇಳಿದ:

"ಚೆನ್ನಾಗಿರೋ ಹಣ್ಣೇ ಕೊಟ್ಟಿದ್ದಾರೆ."

"ಏನು ಚೆನ್ನಾಗಿದೆಯೋ!" ಎಂದು ಅಪ್ಪು ಅವುಗಳನ್ನು ಸ್ವಲ್ಪ ಬದಿಗೆ ತಳ್ಳಿದ.

"ತಿನ್ನೋಣವೇನು?" ಎಂದು ಹುಡುಗರನ್ನು ನೋಡುತ್ತ ಮಾಸ್ತರೆಂದರು. ಎಳೆಯರ ಮನಸ್ಸಿನಲ್ಲಿರಬಹುದಾದ ಆಕ್ಷೇಪವನ್ನು ಊಹಿಸುತ್ತ ಅವರು ಹೇಳಿದರು: "ಜಮೀನ್ದಾರರ ಮನೇದೂಂತ ಯೋಚಿಸ್ಬೇಡಿ. ಯಾವನೋ ರೈತ ಬೆಳೆಸಿದ್ದು. ನಾವೇ ನ್ಯಾಯವಾದ ಹಕ್ಕುದಾರರು. ಅಲ್ವಾ ಅಪ್ಪು? ಒಳಗಿನಿಂದ ಚಾಕು ತಂದು ಒಂದನ್ನಾದರೂ ಕುಯ್ದುಬಿಡು."

ಅಪ್ಪು ನಗುತ್ತ, ಒಪ್ಪಿದ. ಹಳೆಯದೊಂದು ಪತ್ರಿಕೆಯನ್ನು ತಂದು ಹಾಸಿ ಒಂದು ಹಣ್ಣನ್ನು ಅದರ ಮೇಲಿಟ್ಟು ಕತ್ತರಿಸಿದ.

ಹುಡುಗರ ಜತೆಯಲ್ಲಿ ಹಣ್ಣಿನ ತುಂಡುಗಳನ್ನು ತಿನ್ನುತ್ತಿದ್ದಂತೆ, ನಂಬಿಯಾರ ರೊಡನೆ ನಡೆಸಿದ ಮಾತುಕತೆಯ ಒಂದಂಶ ನೆನಪಾಗಿ ಅದನ್ನು ವಿವರಿಸುತ್ತ ಮಾಸ್ತರೆಂದರು:

"ನಂಬಿಯಾರರು ಹೇಳಿದ್ರು—ಜಮೀನ್ದಾರರು ತಂದೆ ಇದ್ದ ಹಾಗೆ; ರೈತರು ಮಕ್ಕಳಿದ್ದ ಹಾಗೆ—ಅಂತ! ಅರ್ಥವಾಯಿತೇನ್ರೋ?"

"ಓಹೋ" ಎಂದು ಅಪ್ಪು ರಾಗವೆಳೆದ.

ಸ್ವಲ್ಪವೇ ಕಾಲದ ಹಿಂದೆ ತಮ್ಮ ಜಮೀನನ್ನು ಆ ತಂದೆಗೆ ಕಾಣಿಕೆಯಾಗಿ ಕೊಟ್ಟಿದ್ದ ಚಿರುಕಂಡ ನೋವಿನ ನಗೆ ನಕ್ಕ.

ಹಣ್ಣು ತಿಂದಾದ ಮೇಲೆ ಮೂವರೂ ಶಾಲೆಯ ಅಂಗಳಕ್ಕಿಳಿದು ನಿಂತರು. ಹಿತ್ತಿಲ ಎಡಬಲಗಳಲ್ಲಿ ನೆಟ್ಟಿದ್ದ ಮಾವಿನ ಗಿಡಗಳೆರಡು ಚಿಗುರಿಕೊಂಡು ಮೇಲೇಳು ತ್ತಿದ್ದುವು. ಮಾಸ್ತರು ಪ್ರೀತಿಯಿಂದ ಆ ಎಲೆಗಳನ್ನು ಮುಟ್ಟಿ ನೋಡಿದರು.

ಪತ್ರಕೆಯತ್ತ ದೃಷ್ಟಿ ಹರಿಸುತ್ತಿದ್ದ ಚಿರುಕಂಡ ಕೇಳಿದ :

"ಹಾಗಾದರೆ ಇನ್ನು ಪತ್ರಿಕೆ ಓದಿಹೇಳೋದಕ್ಕೆ ಏನು ಮಾಡೋಣ ಸಾರ್ ?"

ಮಾಸ್ತರು ಉತ್ತರವಿತ್ತರು :

"ತಾಳು. ಏನಾದರೂ ಮಾಡೋಣ."

ಮಾವಿನ ಗಿಡದಲ್ಲಿ ಆಸಕ್ತಿ ತೋರುತ್ತಿದ್ದ ಮಾಸ್ತರನ್ನು ಕಂಡು ಅಪ್ಪುವೆಂದ :

"ಅದೇನು ನೋಡ್ತಿದೀರಿ ಸಾರ್ ?"

"ಬೀಜ ಮೊಳೆತು ಪುಟ್ಟ ಗಿಡವಾಗಿದೆ. ಈ ಗಿಡ ಮರವಾಗಿ ಮಾವಿನಹಣ್ಣು ಕೊಡೋಕೆ ಎಷ್ಟು ಕಾಲವಾದೀತೂಂತ ಯೋಚಿಸ್ತಿದೀನಿ."

ಅಪ್ಪು ಮಾಸ್ತರ ಮುಖವನ್ನೇ ನೋಡಿದ. ಅವರು ಮುಂದುವರಿಸಿದರು :

"ಈ ಗಿಡ ಬೆಳೆದು ಫಲ ಸಿಗೋಕೆ ಬಹಳ ದಿನ ಬೇಕು, ಅಲ್ಲ ?"

ಅಪ್ಪು 'ಹೌದೆ'ಂದು ತಲೆಯಾಡಿಸಿದ. ಮಾಸ್ತರು ಮಾತನ್ನು ಪೂರ್ಣಗೊಳಿಸಿ ದರು :

"ಪ್ರತಿಯೊಂದೂ ಹಾಗೆಯೇ. ಬೀಜ ಮೊಳಿತು, ಗಿಡವಾಗಿ, ಮರವಾಗಿ ಫಲ ಬಿಡೋಕೆ ಸಮಯಬೇಕು. ತಾಳ್ಮೆಯಿಂದ ನಾವು ಕಾಯುತ್ತ ದುಡೀಬೇಕು. ಪ್ರತಿ ಯೊಂದು ಹಾಗೆಯೇ."

ಆ ಮಾತು ಅರ್ಥವಾಗಿ ಚಿರುಕಂಡ ತಿಳಿವಳಿಕೆಯ ನಗೆ ನಕ್ಕ. ಸ್ವಲ್ಪ ತಡೆಮ ಅಪ್ಪುವಿಗೂ ಅದು ಅರ್ಥವಾಗಿ, ಆತನೂ ನಕ್ಕ.

೯

ಅಮಾವಾಸ್ಯೆಯ ಅದೊಂದು ರಾತ್ರೆ ತರಗತಿ ಮುಗಿದು ಕೊನೆಯವಾಗಿ ಹೊರಬಿದ್ದವರು ಮಾಸ್ತರು, ಕಣ್ಣ ಮತ್ತು ಅಪ್ಪು. ಮಾಸ್ತರು ತಮ್ಮ ಶಾಲೆಯತ್ತ ತಿರುಗಿದ ಮೇಲೆ ಕಣ್ಣ–ಅಪ್ಪು ಇಬ್ಬರೇ ಹಾದಿ ನಡೆದರು.

"ನಮ್ಮನೆವರೆಗೂ ಬಾ ಅಪ್ಪು, ಅಮ್ಮ ಇವತ್ತು ಸಿಹಿಗಡುಬು ಮಾಡಿಟ್ಟಿ ದ್ದಾಳೆ. ತಿಂದು ಹೋಗುವಿಯಂತೆ," ಎಂದು ಕಣ್ಣ ಅಪ್ಪುವಿಗೆ ಆಹ್ವಾನ ನೀಡಿದ.

"ಬೇಡ ಕಣ್ಣ ತಡವಾಗ್ತದೆ. ಇನ್ನೊಂದ್ಸಲ ಯಾವತ್ತಾದರೂ ಬರ್‍ತೀನಿ." ಎಂದು ಹೇಳಿ ಅಪ್ಪು ತಪ್ಪಿಸಿಕೊಳ್ಳಲು ಯತ್ನಿಸಿದ.

"ನೀನು ಹೀಗೆ ಹೇಳ್ತಿರೋದು ಮೂರನೆ ಸಲ. ಊಹುಂ. ಇವತ್ತು ನೀನು ಬಂದೇ ತೀರ್‍ಬೇಕು. ಕಡುಬು ತಿಂದಾದ್ಮೇಲೆ ನಿನ್ನ ಮನೆವರೆಗೂ ಬಿಟ್ಟುಬರ್‍ತೀನಿ."

ಆ ಆಗ್ರಹದ ಕರೆಯನ್ನು ನಿರಾಕರಿಸಲಾರದೆ, ಅಪ್ಪು ಕಣ್ಣನನ್ನು ಹಿಂಬಾಲಿಸಿದ. ಆತನ ಗುಡಿಸಲು ಇದ್ದುದು ನದಿಯ ದಡದಲ್ಲಿ. ದೋಣಿ ನಡೆಸುತ್ತಿದ್ದ ತಂದೆ ನೀರುಪಾಲಾದಾಗ ಕಣ್ಣ ಎಳೆಮಗು. ತಂದೆ ಸತ್ತ ಆ ಮಗುವನ್ನು ಬಡ ತಾಯಿ ಬೆಳಸಿ ದೊಡ್ಡವನನ್ನಾಗಿ ಮಾಡಿದ್ದಳು. ಇದ್ದ ಇಷ್ಟಗಲ ಜಾಗದಲ್ಲಿ ತರಕಾರಿ ಬೆಳೆದು, ನೀಲೇಶ್ವರದ ಪೇಟೆಗೊಯ್ದು ಮಾರಿ ಮಗನ ಲಾಲನೆ ಪೋಷಣೆಯನ್ನು ಆಕೆ ನಡೆಸಿದ್ದಳು. ಮಗ ದೊಡ್ಡವನಾದ ಮೇಲೂ—ತರಕಾರಿ ತೋಟದ ಕೆಲಸವನ್ನೆಲ್ಲ ಒಬ್ಬನೆ ಮಾಡಲು ಸಮರ್ಥನಾದ ಮೇಲೂ—ಆ ತಾಯಿ ದುಡಿಯುವುದನ್ನು ಬಿಟ್ಟಿರಲಿಲ್ಲ. ನರೆಗೂದಲಿನ ಸುಕ್ಕು ಮುಖದ ಆ ಜೀವ ಕಣ್ಣನನ್ನು ಈಗಲೂ ಎಳೆಯ ಮಗುವಾಗಿಯೇ ಕಾಣುತ್ತಿತ್ತು.

....ಆ ಹೊಲದ ಈ ಕೊನೆಯಲ್ಲಿ ಹಾದಿಗಳು ಕವಲೊಡೆದಿದ್ದವು. ಎಡಕ್ಕೆ ತಿರುಗಿ ನಡೆದರೆ, ಕಣ್ಣನ ಗುಡಿಸಲು. ಆದರೆ ಕಣ್ಣ ತಿರುಗದೆ ತಡೆದು ನಿಂತು, ಬಲಕ್ಕೆ ನೋಡಿದ. ಅಲ್ಲೀ ಕೂಗಳತೆಯ ದೂರದಿಂದ ಒಂದು ಹೆಣ್ಣಿನ ಒಂದು ಗಂಡಿನ ಧ್ವನಿಗಳು ತೀವ್ರಗತಿಯಿಂದ ಕೇಳಿಸುತ್ತಿದ್ದುವು. ಕಣ್ಣ ಆಲಿಸಿದ. ಅಪ್ಪುವೂ ಕಿವಿ ನಿಗುರಿಸಿದ. ಉದ್ವೇಗ ಜಗಳದ ನುಡಿಗಳು....ಅಸಹಾಯಕತೆಯಿಂದ ಕಂಪಿಸುತ್ತಿದ್ದ ಹೆಣ್ಣು ಧ್ವನಿ. ಗಂಡಿನ ಕೆಣಕುತ್ತಿದ್ದ ಗಡಸು ಸ್ವರ.

ಕಣ್ಣ ಕಾತರಗೊಂಡು ಕೇಳಿದ:

"ಅಪ್ಪು, ಕೇಳಿಸ್ತಾ ?"

"ಹೂಂ. ಅದು ಯಾರ ಮನೆ ?"

"ದೇವಕೀದು."

"ದೇವಕಿ ?"

"ಹೂಂ. ಬಾ...."

ಕಣ್ಣ ವೇಗವಾಗಿ ಬಲಕ್ಕೆ ಹೊರಳಿ ನಡೆದ. ಅಪ್ಪುವೂ ಅಷ್ಟೇ ವೇಗವಾಗಿ ಅವನನ್ನು ಹಿಂಬಾಲಿಸಿದ. ಎದೆಯೊಡನೆ ಮಿದುಳೂ ಧಿಮಿಗುಡುತ್ತ ಯೋಚಿಸಿತು. ದೇವಕಿ—ಯಾರು ದೇವಕಿ ? ಕಳೆದ ವರ್ಷ ವಿಷಮಜ್ವರದಿಂದ ಸತ್ತ ಬಡರೈತನ ಹೆಂಡತಿ. ಎಳೆಯ ಮಗುವಿನ ತಾಯಿ. "ನಮ್ಮಮ್ಮನ ಜತೇಲಿ ದೇವಕೀಂತಲೂ ಒಬ್ಬಳು ಕಾಯಿಪಲ್ಯ ಮಾರೋಕೆ ಹೋಗ್ತಾಳೆ. ಪಾಪ! ಎಳೇ ಮಗೂನ ಬೆನ್ನಿಗೆ ಕಟ್ಕೊಂಡು ಹೋಗ್ತಾಳೆ...." ಹಾಗೆಂದು ಸ್ವಲ್ಪ ಕಾಲದ ಹಿಂದೆ ಕಣ್ಣನೇ ಅಪ್ಪುವಿಗೆ ಹೇಳಿದ್ದ. ಹಾಗಾದರೆ, ಆ ದೇವಕಿಯನ್ನು ಜರೆದು ನುಡಿಯುವ ಗಂಡಸು

ಯಾರಿರಬಹುದು ? ಒಮ್ಮೆಲೆ, ಪರಿಸ್ಥಿತಿ ಏನಿರಬೇಕೆಂಬುದರ ಅರಿವಾಗಿ ಅಪ್ಪುವಿನ ರಕ್ತ ತಣ್ಣಗಾಯಿತು. ಆದರೆ ಮರುಕ್ಷಣವೇ ರಕ್ತ, ಹಿಂದಿಗಿಂತಲೂ ಹೆಚ್ಚು ವೇಗದಿಂದ ಧಮುಧುಮಿಸಿ ಹರಿಯಿತು.

ಕಣ್ಣ ಆ ಕತ್ತಲೆಯಲ್ಲೂ ಹಾದಿಯನ್ನು ಗುರುತಿಟ್ಟು ಮೆಲ್ಲಮೆಲ್ಲನೆ ಓಡಿದ. ಅಪ್ಪು ಆತನನ್ನೆ ಹಿಂಬಾಲಿಸಿದ.

ಆ ಗುಡಿಸಲು ಮತ್ತು ಹಿತ್ತಿಲು ಸಮೀಪಿಸಿದೊಡನೆ, ಅವರು ತಡೆದು ನಿಂತರು. ಅಲ್ಲಿಗೆ ಮಾತುಗಳು ಸ್ಪಷ್ಟವಾಗಿ ಕೇಳಿಸಿದುವು.

ಕಣ್ಣ ಪಿಸುಮಾತನಾಡಿದ :

“ ಅವನು ನಂಬಿಯಾರರ ಚಾಕರ. ಸ್ವರ ಗುರುತು ಸಿಗ್ತಾ ?”

“ ಹೂಂ.”

“ ಕುಡಿದಿದ್ದಾನೆ.”

“ ಹೂಂ.”

ಕುಡಿದಿದ್ದ ಆ ಮನುಷ್ಯ, ಬಡಗುಡಿಸಲಿನ ಬಿದಿರುತಡಿಕೆಯ ಬಾಗಿಲಿಗೆ ಒದೆಯುತ್ತಿದ್ದ.

“ ಇದು ಮುರ್ದ್ಹೋದೇನೂ ದೊಡ್ಡ ವಿಷಯ ಅಲ್ಲ. ನೀನಾಗಿ ಕರಕೊಂಡ್ರೇ ಚಂದ–ಒಡೆಯ ಆಗ್ಲೇ ಏಳ್ಬಿಟ್ಟಿದಾರೆ. ಅವರ ಸೇವೆ ಮಾಡಾಕ್ಮುಂಚೆ.... ಹಿಕ್....”

ಒಳಗೆ, ತಾಯಿ ಎದೆಗವಚಿಕೊಂಡಿದ್ದ ಹಸುಳೆ ಅಳುತ್ತಿತ್ತು. ದೇವಕಿ ಗಟ್ಟಿಯಾಗಿ ಹೇಳುತ್ತಿದ್ದಳು :

“ ದೇವರು ನಿನಗೆ ಶಿಕ್ಷೆ ಕೊಡದೆ ಇರಲಾರ. ಪಾಪಿ !”

“ ಇಷ್ಟು ದಿವಸ....ನೀನಾಗಿಯೇ ಹಾದಿಗ್ಬರ್ತೀಂತ ತಡವದ್ದಾಯ್ತು....ಹಿಕ್ ....ಆದರೆ....ಎಷ್ಟು ಜಂಭ ನಿನಗೆ....ಹಿಕ್....ಅದ್ಹ್ಯಾಗೆ ಯಾರೂ ಇಲ್ದೆ ಒಬ್ಳೇ ಇರ್ತೀಯೆ ?”

“ ಇಂಥ ಮಾತಾಡಿ ನೀನು ನರಕಕ್ಕೆ ಹೋಗ್ತಿ ನೋಡು !”

“ ಹಿಕ್........ಒಮ್ಮೆ ಕರಕೋ. ಆಗ ಗೊತ್ತಾಗ್ತದೆ ಸ್ವರ್ಗವೋ ನರಕವೋ ಅಂತ.”

“ ದುರಾತ್ಮ !”

“ ಎಷ್ಟು ಹೊತ್ತೇ ? ತೆಗೀ ಕದ !”

“ ನಾನು ತೆಗೆಯೋದಿಲ್ಲ.”

ಮಾತನಾಡುತ್ತಿದ್ದ ಮನುಷ್ಯ ಗಟ್ಟಿಯಾಗಿ,ಗುಡಿಸಲೇ ಮುರಿದು ಬೀಳುವಂತೆ ಬಾಗಿಲಿಗೆ ಬಡೆಯತೊಡಗಿದ. ಹೆಂಗಸು ಒಳಗಿನಿಂದ, “ಅಯ್ಯೋ ದೇವರೇ ! ಅಯ್ಯೋ !” ಎಂದಳು.

ಮುಂದಕ್ಕೆ ನೆಗದ ಕಣ್ಣ. ಮಾತಿಲ್ಲದೆ ಹಿತ್ತಿಲ ಬೇಲಿಯಲ್ಲಿದ್ದ ಚೊಂಬನ್ನೆಳೆದು ಅಪ್ಪುವಿನ ಕೈಗೆ ಕೊಟ್ಟ. ಅರೆಕ್ಷಣದಲ್ಲೇ ಜಮೀನ್ದಾರರ ಚಾಕರನ ಬೆನ್ನಿನ ಮೇಲೆ ಗುದ್ದು ಬಿತ್ತು; ನಡುಮುರಿಯುವ ಹಾಗೆ ಒದೆ ಬಿತ್ತು. ಆತ ಹಿಂತಿರುಗಿ ನೋಡಿದಾಗ, ಚೇತರಿಸಿಕೊಳ್ಳುವುದಕ್ಕೂ ಅವಕಾಶವಿಲ್ಲದಹಾಗೆ, ಮುಸುಡಿನ ಮೇಲೆ ಮುಷ್ಟಿ ಪ್ರಹಾರ ನಡೆಯಿತು. "ಸತ್ತೆನೋ ಸತ್ತೆ" ಎನ್ನುತ್ತ ಆ ಮನುಷ್ಯ ಉರುಳಿದ. ಅಪ್ಪುವಿನ ಬೊಂಬು ಆತ ಉರುಳಿದುದೆಲ್ಲೆಂದು ಹುಡುಕಿ ನೋಡಿತು.

ಅಷ್ಟರಲ್ಲಿ ದೇವಕಿ ಬಾಗಿಲು ತೆರೆದಳು. ಆ ಕತ್ತಲಲ್ಲೂ ರಕ್ಷಣೆಗೆ ಬಂದವನು ಯಾರೆಂದು ಗುರುತಿಸುವುದು ಅವಳಿಗೆ ಕಷ್ಟವಾಗಲಿಲ್ಲ. ಅಳುತ್ತ ಕೃತಜ್ಞತೆ ತುಂಬಿದ ಧ್ವನಿಯಲ್ಲಿ ಅವಳೆಂದಳು :

"ನನ್ನಿಂದ ಎಷ್ಟೊಂದು ತೊಂದರೆ ನಿಮಗೆಲ್ಲಾ."

ಅಪ್ಪುವಿನ ಬೊಂಬು, ಬಿದ್ದಿದ್ದವನ ಬೆನ್ನನ್ನು ಮತ್ತೊಮ್ಮೆ ಮುಟ್ಟಿತು. ಆಗ ದೇವಕಿಯೆಂದಳು :

"ಆತನನ್ನ ಕೊಲ್ಬೇಡೀಪ್ಪಾ. ನಾಳೆ ನಮಗೆಲ್ಲಾ ಗಲ್ಲಾದೀತು !"

"ಥೂ !" ಎಂದು ಉಗಿದು ಕಣ್ಣ ಹೇಳಿದ: "ಆತನನ್ನ ಯಾರು ಕೊಲ್ತಾರೆ ? ಅದೊಂದು ಕೀಟ."

ಆದರೆ ಆ ಕೀಟ ಮಿಸುಕಾಡುವ ಚಿಹ್ನೆ ತೋರಲಿಲ್ಲ. ಕಣ್ಣ ಬಗ್ಗಿ ನೋಡಿದ."

"ನಾಯಿಗೆ ಪ್ರಜ್ಞೆ :ತಪ್ಪಿದೆ. ಒಳ್ಳೇದೇ ಆಯ್ತು. ಅಪ್ಪು, ಇವನನ್ನ ಹೊತ್ಕೊಂಡು ಸ್ವಲ್ಪ ದೂರ ಹೋಗಿ ಬಿಟ್ಬಿಡೋಣ.

"ಹೂಂ," ಎಂದ ಅಪ್ಪು.

"ದೇವಕಿ, ನೀನು ಬಾಗಿಲೆಳಕೊಂಡು ನಮ್ಮ ಗುಡಿಸಲಿಗೆ ಹೋಗ್ತೀಯಾ ? ಈಗ ಬರ್ತೀವೀಂತ ಅಮ್ಮನಿಗೆ ಹೇಳು."

ಆಕೆ ಅನಿಶ್ಚಯತೆಯಿಂದ ತಡವರಿಸಿದಂತೆ ತೋರಿತು.

"ಸುಮ್ನೆ ಯೋಚಿಸ್ಬೇಡ. ಈ ಲಫಂಗರ ಕಾಟ ಇದ್ದದ್ದೇ. ಮಗೂನ ಎತ್ಕೊಂಡು ಒಂಟಿಯಾಗಿ ಹೋಗೋದಕ್ಕೆ ಆಗ್ತದೇನು ? ಅಥವಾ ನಾವು ಬರುವ ವರೆಗೂ ಕಾದಿರ್ತೀಯೋ ?"

ಗುಡಿಸಲಿನೊಳಗೆ ತೂರಾಡುತ್ತಿದ್ದ ಸೀಮೆ ಎಣ್ಣೆಯ ದೀಪದ ಮಬ್ಬು ಬೆಳಕಿನಲ್ಲಿ ಸಹನೆಯ ಸಂಕಟದ ಪ್ರತಿಮೂರ್ತಿಯಾಗಿ ಆಕೆ ಅಪ್ಪುವಿಗೆ ತೋರಿದಳು. ಆತನ ಗಂಟಲಿನಿಂದಲೂ ಸ್ವರ ಹೊರಟು ಹೇಳಿತು :

"ಅಕ್ಕಾ ! ಇಲ್ಲಿರ್ಬೇಡಿ. ನೀವು ಕಣ್ಣನ ಮನೆಗೆ ಹೋಗಿ !"

ಸ್ವರ ಅಪರಿಚಿತವಾಗಿದ್ದರೂ ತನ್ನನ್ನು 'ಅಕ್ಕಾ' ಎಂದು ಕರೆದ ಹುಡುಗನನ್ನು ದೇವಕಿ ಆತ್ಮೀಯತೆಯಿಂದ ನೋಡಿದಳು.

ಕಣ್ಣನೂ ಅಪ್ಪುವೂ ಮುದುರಿಬಿದ್ದಿದ್ದ ಆ ಮನುಷ್ಯನನ್ನೆತ್ತಿ ನಡೆದರು. ದೇವಕಿ ಅಳು ನಿಲ್ಲಿಸಿದ ಮಗುವನ್ನೆತ್ತಿಕ್ಕೊಂಡು, ಕಣ್ಣನ ಮನೆಯತ್ತ ಹೊರಟಳು.

ಸ್ವಲ್ಪ ದೂರದಲ್ಲೇ ಜಮೀನ್ದಾರರ ತೆಂಗಿನ ತೋಟ ಆರಂಭವಾಗಿತ್ತು. ಅಲ್ಲೊಂದು ತೆಂಗಿನ ಮರದ ಬಳಿ ಆ ಮನುಷ್ಯನನ್ನು ಕಣ್ಣನೂ ಅಪ್ಪುವೂ ಇಳಿಯ ಬಿಟ್ಟರು. ಆತನ ಪಂಚೆಯನ್ನು ಬಿಚ್ಚಿ ಆ ದೇಹವನ್ನು ಮರದ ಕಾಂಡಕ್ಕೆ ಬಿಗಿದರು. ಆತ ಸತ್ತಿಲ್ಲವೆಂದು ಮತ್ತೊಮ್ಮೆ ಖಚಿತಮಾಡಿಕೊಂಡು ತಮ್ಮ ಹಾದಿ ಹಿಡಿದರು.

ಕಣ್ಣನ ಮನೆಯಲ್ಲೀಗ ಅಪ್ಪು ಕರಿಗಡುಬು ತಿನ್ನಲಿಲ್ಲ. ಅಲ್ಲಿ ಆತ ನಿಲ್ಲಲೇ ಇಲ್ಲ. ದೀಪದ ಬೆಳಕಿನಲ್ಲಿ ದೇವಕಿಯನ್ನೂ ಮಗುವನ್ನೂ ಮತ್ತೊಮ್ಮೆ ನೋಡಿ ದಾಗ, ಯಾವುದೋ ಭಾವಾವೇಶದಿಂದ ಅಪ್ಪುವಿನ ಕಣ್ಣುಗಳು ಹಸಿಗೂಡಿದುವು. ಆತ "ನಾಳೆ ಸಿಗ್ತೀನಿ ಕಣ್ಣ" ಎಂದು ಹೇಳಿ, ಕತ್ತಲಲ್ಲಿ ಒಬ್ಬನೇ ತನ್ನ ಮನೆಯತ್ತ ಹೊರಟು ಹೋದ.

ಮನೆಯಲ್ಲಿ ಊಟ ಮುಗಿಸಿ ಮಲಗುವ ಸಿದ್ಧತೆಯಲ್ಲಿದ್ದ ತಂದೆಯಿಂದ ಪ್ರಶ್ನೆ ಬಂತು:

"ಯಾಕೋ ಇಷ್ಟು ತಡ?"

ಅಪೂರ್ವವಾದೊಂದು ಅನುಭವದ ತೆರೆಗಳ ಮೇಲೆಯೇ ಇನ್ನೂ ತೇಲುತ್ತಿದ್ದ ಅಪ್ಪು ಉತ್ತರವೀಯಲಿಲ್ಲ.

"ಬೆಳಕಾದರೂ ಹಿಡಕೊಂಡು ಬರಬಾರ್ದೇನೊ? ರಾತ್ರೆ ದೆವ್ವದ ಹಾಗೆ ಒಬ್ನೆ ನಡೀತಿಯಲ್ಲ!"

ಈಗಲೂ ಮಗ ಮೌನವಾಗಿದ್ದುದನ್ನು ಕಂಡು, ಆತನಿಗೆ ಊಟಕ್ಕಿಡುತ್ತಿದ್ದ ತಾಯಿ ಹೇಳಿದಳು:

"ಹುಡುಗ ಒಂದು ಬ್ಯಾಟರಿ ತೆಗೆಸ್ಕೊಡೂಂತ ಹೋದ ವರ್ಷವೇ ಹೇಳಿದ್ದ."

"ಇವನೊಬ್ಬ ಬ್ಯಾಟರಿ ಹಿಡಕೊಂಡು ಬೇಟೆಗೆ ಹೊರಡೊ ದೊಡ್ಡ ಮನುಷ್ಯ. ತೆಗೆಸಿಕೊಡ್ಬೇಕಾಗಿತ್ತು."

ತಂದೆ ಹಾಗೆ ಆಡುತ್ತಿದ್ದರೂ ಆ ಹೃದಯ ಮೃದುವಾಗಿತ್ತೆಂದು ಅಪ್ಪು ಚೆನ್ನಾಗಿ ತಿಳಿದಿದ್ದ.

"ದುಡ್ಡಿರ್ಲಿಲ್ಲ" ಎಂದಳು ತಾಯಿ ಮೆಲ್ಲನೆ ನಕ್ಕು.

"ಹೂಂ–" ಎಂದು ತಂದೆ ಮಾತು ನಿಲ್ಲಿಸಿದ:

ಮಲಗಿಕೊಂಡು ಬಹಳ ಹೊತ್ತಾದರೂ ಅಪ್ಪುವಿಗೆ ನಿದ್ದೆ ಬರಲಿಲ್ಲ. ಆ ಪ್ರಾಣಿ ಎಲ್ಲಾದರೂ ಸತ್ತೇ ಹೋದರೆ? ನಾಳೆ ಗೊಂದಲವಾಗುವುದು ಖಂಡಿತ. ಆದರೆ, ಅವನು ಸತ್ತಹಾಗಿರಲಿಲ್ಲ. ಉಸಿರೂ ಸ್ವಲ್ಪ ಆಡುತ್ತಿತ್ತು....ಅಂತೂ ಬೆಳಗ್ಗೆ ಓಡಿಹೋಗಿ ಚಿರುಕಂಡನಿಗೆ ಈ ವಿಷಯ ಹೇಳಬೇಕು; ಇಬ್ಬರೂ ಹೋಗಿ ಮಾಸ್ತರರಿಗೂ ತಿಳಿಸ ಬೇಕು....ಆ ಕಣ್ಣ ಎಷ್ಟು ಒಳ್ಳೆಯವನು! ದೇವಕಿ ಕೂಡಾ–ಆ ಎಳೆಯಮಗುವೂ....

ಆ ರೀತಿಯ ಯೋಚನೆಯಲ್ಲೆ ಅಪ್ಪು ನಿದ್ರಿಸಿದ.

....ರಾತ್ರೆ ಕಳೆಯಿತು. ನಸುಕಿನಲ್ಲೆ ಎದ್ದು ಅಪ್ಪು, ಜಮೀನ್ದಾರರ ಚಾಕರನನ್ನು ತಾವು ಕಟ್ಟಿ ಹಾಕಿದ್ದ ದಿಕ್ಕಿಗೆ ಓಡಿ, ದೂರದಲ್ಲೆ ನಿಂತು, ಆ ಮರದತ್ತ ದೃಷ್ಟಿ ಹರಿಸಿದ. ಮರದ ಬುಡದಲ್ಲಿ ಏನೂ ಇರಲಿಲ್ಲ. ಆ ಮನುಷ್ಯ ಎದ್ದು ಹೋಗಿದ್ದನೆಂಬುದು ಸ್ಪಷ್ಟವಾಗಿತ್ತು. ಅಪ್ಪುವಿಗೆ ಹೃದಯ ಹಗುರವೆನಿಸಿತು. ಹಕ್ಕಿಯ ವೇಗದಲ್ಲಿ ಚಿರಕುಂಡನ ಮನೆಗೆ ಹೋಗಿ ಆತನನ್ನೆಬ್ಬಿಸಿದ.

ಉದ್ವೇಗ ತುಂಬಿದ ಧ್ವನಿಯಲ್ಲಿ ಅಪ್ಪು ಒಪ್ಪಿಸಿದ ವರದಿ ಕೇಳಿ, ಚಿರುಕಂಡನ ಮುಖ ಗಂಭೀರವಾಯಿತು. ಎತ್ತ ಹೋಗಬೇಕೆಂದು ಅವರು ಮಾತನಾಡದೇ ಇದ್ದರೂ ಇಬ್ಬರ ಕಾಲುಗಳೂ ಮಾಸ್ತರಲ್ಲಿಗೇ ನಡೆದುವು. ಗೆಳೆಯನ ಮೌನ ಕಂಡು ಒಂದು ರೀತಿಯ ದಿಗಿಲಾಗಿ ಹಾದಿಯಲ್ಲಿ ಅಪ್ಪು ಕೇಳಿದ:

"ನಾವು ಹಾಗೆ ಮಾಡಿದ್ದು ತಪ್ಪಾಯ್ತಾ ?"

ಚಿರುಕಂಡ ಯೋಚಿಸುತ್ತಿದ್ದುದೂ ಆ ವಿಷಯವನ್ನು ಕುರಿತೇ.

"ತಪ್ಪೇನೂ ಅಲ್ಲ. ಆದರೂ ಹೆಚ್ಚು ಕಡಿಮೆ ಆಗಿದ್ದರೆ, ಈ ಸಣ್ಣ ಕಾರಣದಿಂದ ನಮಗೆಲ್ಲರಿಗೂ ಸಂಚಕಾರ ಒದಗ್ತಿತ್ತು."

ಕ್ರಾಂತಿಕಾರಿ ಎಂದು ತಾನು ಭಾವಿಸಿದ್ದ ಈ ಚಿರುಕಂಡ ಅಂಜುಗುಳಿಯೇ— ಎಂಬ ಶಂಕೆ ಅಪ್ಪುವಿನ ಮನಸ್ಸನ್ನು ಹೊಕ್ಕು, ಕಣ್ಣುಗಳ ಕಾವು ಆರಿ, ಅವು ತಣ್ಣಗಾದುವು. ಆತ ಕೇಳಿದ:

"ಅಂದರೆ ?"

"ರಾತ್ರೆ ಶಾಲೆ ನಡೆಸೋದು ನಂಬಿಯಾರಿಗೆ ಏನೇನೂ ಇಷ್ಟವಿಲ್ಲ. ಏನಾದರೂ ನೆಪ ಸಿಕ್ಕಿದ್ರೂಕಡ್ಲೆ ಅವರು ಇದನ್ನ ನಿಲ್ಲಿಸ್ಬಹುದೂಂತ ಮಾಸ್ತರು ಹೇಳಿದ್ರು. ರಾತ್ರೆ ಕಣ್ಣನೂ ನೀನು ಸಿಕ್ಕಿಬಿದ್ದಿದ್ರೆ ನಂಬಿಯಾರಿಗೆ ಎಷ್ಟು ಸಂತೋಷವಾಗ್ತಿತ್ತೊ ! ಹೀಗೆ ಈ ಸಣ್ಣ ವಿಷಯಕ್ಕೇ ದೊಡ್ಡ ಹೊಡೆತ ಬಿದ್ದರೆ, ಬೇರೆ ಕೆಲಸಕ್ಕೆಲ್ಲ ಅಡ್ಡಿಯಾಗ್ತಿತ್ತು ಹೌದಾ ?"

ಅಪ್ಪುವಿನ ಕಣ್ಣುಗಳು ಮತ್ತೆ ಚಲಿಸಿದುವು: ಚಿರುಕಂಡ ಅಂಜುಗುಳಿಯಾಗುವುದು ಎಂದಿಗೂ ಸಾಧ್ಯವಿರಲಿಲ್ಲ. ಆತ ವಿಚಾರವಂತ, ದೂರಾಲೋಚನೆಯುಳ್ಳವನು. ಅದೊಂದು ವಿಷಯ ತನಗೆ ಹೊಳೆದೇ ಇರಲಿಲ್ಲ....

ಅಪ್ಪು ಹೇಳಿದ:

"ನೀನು ಹೇಳೋದು ನಿಜ. ಆದರೆ ಆತ ಬದುಕಿದ್ದಾನೆ. ಈಗೇನೂ ಆಗಲಾರದು, ಅಲ್ವಾ? ಅಲ್ದೆ, ನಾವು ಯಾರು ಅನ್ನೋದೂ ಅವನಿಗೆ ಗೊತ್ತಾಗಿರೋದಿಲ್ಲ."

"ಹೂಂ. ಈಗ ಅಪಾಯ ಕಡಮೆ. ಆದರೂ ನಂಬಿಯಾರಿಗೆ ಕಣ್ಣನ ಮೇಲೆ ಸಂಶಯ ಬಂದೇ ಬರ್‍ತದೆ. ಅವರು ಬೇಟೆಯಾಡೋಕೇಂತ ಗುರುತು ಹಾಕಿದ್ದ ಮಿಕ, ದೇವಕಿ. ಈಗ ಆಕೆ ಕೈಗೆ ಸಿಗೋದಿಲ್ಲಾಂತ ಆದ್ಮೇಲೆ, ಸುಮ್ನಿರ್‍ತಾರಾ ?"

ಚಿರುಕಂಡನ ಆ ಎಣಿಕೆಯೂ ಅಪ್ಪುವಿಗೆ ನಿಜವಾಗಿ ತೋರಿತು. ನೆಮ್ಮದಿ ನೀಡುವ ಉತ್ತರ ತೋರದೆ ಅವನ ಮನಸ್ಸು ಕಸಿವಿಸಿಗೊಂಡಿತು.

....ಶಾಲೆ ಸೇರಿ, ಅದರ ಹಿಂಭಾಗದಲ್ಲಿದ್ದ ಮಾಸ್ತರ ಕೊಠಡಿಯತ್ತ ಅವರು ನಡೆದರು. ಆದರೆ ಕಣ್ಣ ಆಗಲೆ ಅಲ್ಲಿಗೆ ಬಂದಿದ್ದ. ಹಾಸಿಗೆ ಇನ್ನೂ ಮಡಚಿಯೇ ಇರಲಿಲ್ಲ. ಅದರ ಮೇಲೆಯೇ ಕುಳಿತು ಬೀಡಿ ಸೇದುತ್ತ ಕಣ್ಣನ ಮಾತುಗಳಿಗೆ ಮಾಸ್ತರು ಕಿವಿಗೊಟ್ಟ ಹಾಗಿತ್ತು. ಹುಡುಗರು ಒಳಕ್ಕೆ ಬಂದಾಗ ಅವರತ್ತ ನೋಡಿ, ಅಪ್ಪುವನ್ನು ದಿಟ್ಟಿಸಿ, ಮಾಸ್ತರು ಮುಗುಳು ನಕ್ಕರು. ಗಾಬರಿ ತಾಂಡವಾಡದೆ ಮಾಸ್ತರ ತುಟಿಗಳಮೇಲೆ ನಗೆ ಕುಣಿದುದನ್ನು ಕಂಡು, ಅಪ್ಪುವಿಗೆ ಸಮಾಧಾನ ವಾಯಿತು. ಅವರಿಬ್ಬರೂ ಹಾಸಿಗೆಯ ಬಳಿ ನೆಲದ ಮೇಲೆ ಕುಳಿತರು. ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ.

"ಕಣ್ಣ, ನೀನೇನೂ ಚಿಂತಿಸ್ಬೇಡ. ಅವರಿಗೆ ಸಂಶಯ ಬಂದೇ ಬಂದೀತು. ಆದರೆ ನೀನು, ಏನೂ ಆಗೇ ಇಲ್ಲ ಅನ್ನೋಹಾಗೆ ಇದ್ದುಬಿಡು."

ಈ ಒಂದು ವಿಷಯ ಪ್ರಾಯಶಃ ಇವರಿಗೆ ತಿಳಿದಿರಲಾರದೆಂದು ಅಪ್ಪುವೆಂದ:

"ಅವನು ಅಲ್ಲಿಲ್ಲ. ಎದ್ದು ಹೋಗಿದ್ದಾನೆ."

"ಹೂಂ. ನಸುಕಿನಲ್ಲೇ ಹೋದ. ಕುಂಟಿಕೊಂಡು ಜಮೀನ್ದಾರರ ಮನೆ ಕಡೆ ಹೋದದ್ದನ್ನು ನಾನೇ ನೋಡ್ದೆ", ಎಂದ ಕಣ್ಣ.

ಮಾಸ್ತರು ಕಣ್ಣನ ಮುಖವನ್ನೇ ನೋಡುತ್ತ ಇನ್ನೊಂದು ಪ್ರಶ್ನೆ ಕೇಳಿದರು

"ದೇವಕಿ ಸ್ವಲ್ಪ ದಿವಸ ನಿಮ್ಮನೇಲೇ ಇರ್ಲಿ, ಆಗ್ದಾ ?"

ಕಣ್ಣನ ಮುಖ ಬಣ್ಣ ಬದಲಿಸಿತು. ಆತ ದೃಷ್ಟಿ ತಗ್ಗಿಸಿ ನೆಲವನ್ನು ನೋಡಿದ.

"ಆಗಲಿ. ಅಮ್ಮನಿಗೆ ಹೇಳ್ತೀನಿ."

"ಹಾಗೇ ಮಾಡು. ಇಲ್ಲದೇ ಹೋದರೆ ಅವಳು ಮರ್ಯಾದೆಯಿಂದ ಬದುಕೋಕೆ ಈ ಜನ ಖಂಡಿತ ಬಿಡೋದಿಲ್ಲ."

ಕಣ್ಣ ತಲೆಯೆತ್ತಿ ಮಾಸ್ತರನ್ನೆ ನೋಡಿದ. ತುಟಿಗಳು ಬಿಗಿದು ಅವನ ಮುಖ ಬೀಗಿತ್ತು. ಆತ ಎದ್ದು ನಿಂತು ಹೊರಕ್ಕೆ ಹೊಳಿದ. ನಡಿಗೆಯಲ್ಲಿ ಆತುರವಿಲ್ಲವಾದರೂ ಹೆಜ್ಜೆಗಳು ಭದ್ರವಾಗಿದ್ದುವು.

ಮಾಸ್ತರು ಎದ್ದು ಹಾಸಿಗೆ ಸುರುಳಿ ಸುತ್ತಿದರು. ಹುಡುಗರತ್ತ ನೋಡಿ ನಕ್ಕರು. ಬಾಗಿ, ಅಪ್ಪುವಿನ ಬೆನ್ನಿಗೆ ಮೆಲ್ಲನೆ ಗುದ್ದಿ ಅಂದರು.

"ಏನೋಂತಿದ್ದೆ. ಅಂತೂ ಪರವಾಗಿಲ್ಲ ನೀನು !"

ಒಳಗಿನ ಎದೆಗುದಿಯೆಲ್ಲವೂ ಮಾಯವಾಗಿ, ಅಪ್ಪು ಉಲ್ಲಾಸಗೊಂಡ. ಚಿರುಕಂಡನ ಮುಖದಲ್ಲೂ ಗೆಲವು ಮೂಡಿತು. ರಾತ್ರಿಯ ಘಟನೆಯನ್ನು ಮಾಸ್ತರಿಗೆ ವಿವರಿಸಿ ಹೇಳಬೇಕೆಂಬ ಆಸೆಯಿಂದ ಅಪ್ಪು ಕೇಳಿದ :

"ಕಣ್ಣ ಎಲ್ಲಾ ಹೇಳಿದನಾ ಸಾರ್ ?"

"ಹೂನಪ್ಪಾ ಆದರೇನು—ನೀನೂ ಒಂದ್ಸಲ ಹೇಳೀಯಂತೆ. ನಾನು ಮುಖ ತೊಳಿಯೋ ತನಕ ಕಾದಿರ್ಬೆಕು—ಅಷ್ಟೆ!"

ಶಿಷ್ಯನಲ್ಲಿ ಸ್ವಂತದ ಸಾಧನೆಗಳನ್ನು ಬಣ್ಣಿಸುವ ಚಪಲ ಹೇರಳವಾಗಿತ್ತೆಂಬುದು ಮಾಸ್ತರಿಗೆ ಚೆನ್ನಾಗಿ ಗೊತ್ತಿತ್ತು.

ಬಹುಶಃ ಚಿರುಕಂಡ ಊಹಿಸಿದಷ್ಟು ಪರಿಸ್ಥಿತಿ ಗಂಭೀರವಾಗಿರಲಾರ ದೆಂದು ಅಪ್ಪು ಭಾವಿಸಿದ. ಆದರೆ, ಆ ಭಾವನೆ ಬಲವಾಗುವುದಕ್ಕೆ ಮೊದಲೇ ಮಾಸ್ತರೆಂದರು.

"ಇಂಥಾದ್ದೆಲ್ಲ ನಾವು ನಿರೀಕ್ಷಿಸೋದಕ್ಕೆ ಮುಂಚೆಯೇ ಬರುತ್ತೆ. ಏನೂ ಮಾಡದೇ ಇರೋದು ಹೇಡಿತನ. ಮಾಡಿದ್ದೇನಾದರೂ ಅತಿಯಾದರೆ ಈವರೆಗಿನ ಕೆಲಸಕ್ಕೆಲ್ಲಾ ಧಕ್ಕೆ. ಇದೊಳ್ಳೆ ಸಂದಿಗ್ಧ."

ಮತ್ತೆ ಹೃದಯ ವೇಗವಾಗಿ ಹೊಡೆದುಕೊಳ್ಳತೊಡಗಿ ಅಪ್ಪು ಹೇಳಿದ:

"ಮುಂದೇನಾದೀತು ಸಾರ್?"

"ಈಗ್ಲೇ ಹ್ಯಾಗೆ ಹೇಳೋಣ? ಆದರೂ ಕಣ್ಣನನ್ನ ಅವರು ಸುಮ್ನೆ ಬಿಡೋ ದಿಲ್ಲ. ದೇವಕಿಗೆ ಆಶ್ರಯ ಕೊಟ್ಟದ್ದಕ್ಕೆ ಅವನಿಗೆ ಕಷ್ಟ ಒದಗಿಯೇ ಒದಗುತ್ತದೆ."

ಮಾಸ್ತರು ಹೊರಹೋಗಿ ಒಂದು ಮಾವಿನೆಲೆ ತಂದು, ಅದನ್ನು ಸೀಳಿ ಸುರುಳಿ ಸುತ್ತಿ ಹಲ್ಲುಜ್ಜಿದರು. ಅವರು ಹೇಳಿದುದೂ ಚಿರುಕಂಡ ಊಹಿಸಿದ್ದುದೂ ಹೆಚ್ಚು ಕಡಿಮೆ ಒಂದೇ ಆಗಿದ್ದುವು.

ಮಾಸ್ತರು ಮುಖ ತೊಳೆದು ಬಂದಾಗ ಘಟನೆಯ ವರದಿ ಕೊಡುವ ಉತ್ಸಾಹವೇ ಅಪ್ಪುವಿಗಿರಲಿಲ್ಲ. ಆತನ ಮುಖ ಬಾಡಿತ್ತು.

ಸ್ವಲ್ಪ ಹೊತ್ತು ಮಾಸ್ತರು ಸುಮ್ಮನಿದ್ದು ಹೇಳಿದರು:

"ಅನ್ಯಾಯವನ್ನ ಪ್ರತಿಭಟಿಸುವವರು ಈ ಹಳ್ಳಿಯಲ್ಲಿದ್ದಾರೆ ಅಂತ ಇನ್ನು ಜನಕ್ಕೆ ಗೊತ್ತಾಗ್ತದೆ. ನಿನ್ನೆ ನಡೆದ ವಿಷಯ ಬಹಿರಂಗವಾಗಿ ಯಾರೂ ಮಾತಾಡದೇ ಇರಬಹುದು. ಆದರೆ ಗುಟ್ಟಾಗಿ ಅದು, ಕಿವಿಯಿಂದ ಕಿವಿಗೆ ಸಂಚಾರ ಮಾಡಿಯೇ ಮಾಡೀತು. ಜನ, ಎದ್ದು ನಿಲ್ಲೋದೇ ಹೀಗೆ. ನಿನ್ನೇದು ವೈಯಕ್ತಿಕ ಪ್ರಶ್ನೆ. ಆದರೆ ಮುಂದೆ ಸಾಮೂಹಿಕ ಪ್ರಶ್ನೆ ಬಂದಾಗಲೂ ನಮ್ಮ ಜನ ಇಂಥದೇ ಧೈರ್ಯ ಸಾಹಸ ತೋರಿಸ್ಬೇಕು."

ಹಿಂದಿನ ರಾತ್ರೆ ನಡೆದುದರ ವಿಷಯವಾಗಿ, 'ಇದು ಹೀಗೆ' 'ಇದು ಹಾಗೆ' ಎಂದು ತೀರ್ಪುಕೊಟ್ಟು, ನಾಳೆ ನಡೆಯುವುದರ ಮುನ್ಸೂಚನೆಯನ್ನಿತ್ತ ಹಾಗಿತ್ತು, ಅವರ ಮಾತು.

ಮತ್ತೊಂದು ಬೀಡಿ ಸೇದುತ್ತ ಮಾಸ್ತರೆಂದರು:

ಇನ್ನು ಹೋಗಿ. ಜಮೀನ್ದಾರರ ಕಡೆಯೋರು ಯಾರಾದರೂ ಬಂದರೂ ಬರಬಹುದು. ನೀವಿಲ್ಲಿ ಸಪ್ಪೆಮೋರೆ ಹಾಕಿ ನಿಂತಿರೋದು ಸರಿಯಲ್ಲ. ಏನೂ ಆಗ್ದೆ

ಇರೋ ಹಾಗೆ, ಏನೂ ಗೊತ್ತಿಲ್ದೇ ಇರೋರ ಹಾಗೆ, ಇದ್ಬಿಡಿ. ಸ್ವಲ್ಪ ಹೊತ್ತಾದ್ಮೇಲೆ ಚಿರುಕಂಡ, ಹೋಟೆಲಿನ ಹತ್ತಿರ ಸುಮ್ನೆ ಹೋಗಿರು. ಜನ ಏನೇನು ಮಾತು ಆಡ್ತಾರೆ ಅನ್ನೋದು ಗೊತ್ತಾಗ್ತದೆ."

ಹುಡುಗರು ಹೊರಟು ಹೋದರು. ಸೂರ್ಯ ನೆತ್ತಿಗೇರಿದ. ಅಪ್ಪು ತೇಜಸ್ವಿನಿಯ ತಣುಪು ನೀರಿನಲ್ಲಿ ಮೈಮರೆಯಲು ಹೋದ ಮೇಲೆ ಚಿರುಕಂಡ ಜನರಾಡುವ ಮಾತು ಗಳಿಗೆ ಕಿವಿಗೊಡುತ್ತ ಸುತ್ತಾಡಿದ.

ನಂಬಿಯಾರರ ಆ ಚಾಕರ ದುರ್ನಡತೆಯವನೆಂದು ಕುಖ್ಯಾತನೇ ಆಗಿದ್ದ. ಹಿಂದಿನ ರಾತ್ರೆ ಯಾರ ಮನೆಗೋ ಹೋಗಿ ಆತ ಮಂಗಳಾರತಿ ಮಾಡಿಸಿಕೊಂಡ ನೆಂಬ ಸುದ್ದಿ ಹರಡಿತು. ಅದನ್ನು ಕೇಳುತ್ತ ಜನ ನಕ್ಕರು. ಆ ಮಾತುಕತೆಯಲ್ಲೆಲ್ಲ ನಂಬಿಯಾರರ ಪ್ರಸ್ತಾಪವೇ ಇರಲಿಲ್ಲ....

....ಮಾರನೆಯ ದಿನ ಅಲ್ಲಿ ಇಲ್ಲಿ ದೇವಕಿಯ ಹೆಸರು ಕೇಳಿ ಬಂತು. ನಗೆ ಮಾತು, ಪ್ರಶ್ನಾರ್ಥಕ ಚಿಹ್ನೆಯಾಗಿ ಗಂಟಿಕ್ಕಿದ್ದ ಹುಬ್ಬು, ಸಹಾನುಭೂತಿಯ ಧ್ವನಿ. ಬಳಿಕ, ಅವರ ಸಂಭಾಷಣೆಯೊಳಗೆ ನುಸುಳಿಕೊಂಡ ಕಣ್ಣ. ಅರ್ಥಪೂರ್ಣ ನೋಟಗಳು.

ಬೀಸಿದ್ದ ಬಿರುಗಾಳಿ ಶಮನವಾಗಿರಲಿಲ್ಲ. ಶಾಂತತೆ ನೆಲೆಸಿದ್ದಂತೆ ಕಂಡರೂ ಒಮ್ಮೆಲೆ ಗಾಳಿ ಗಿಡುಗನಂತೆ ಎರಗಿ ಬಂದು ತರಗೆಲೆಗಳನ್ನೆತ್ತಿಕೊಂಡು ಏರುವ ಹಾಗೆ ತೋರುತಿತ್ತು. ಹಾಗೆ ಅಲ್ಲಿ ಇಲ್ಲಿ ಮಾತುಗಳು ಕೇಳಿದುವು.

ಜಮೀನ್ದಾರರಿಂದ ಮಾಸ್ತರಿಗೆ ಕರೆ ಬಂತು. ದೇವಕಿಯ ಹೆಸರನ್ನೇ ಎತ್ತದೆ ಅವರು ಹೇಳಿದರು :

"ರಾತ್ರೆಹೊತ್ತು ನಮ್ಮ ಒಬ್ಬ ಆಳಿಗೆ ಕಣ್ಣ ಅಂತ ಯಾವನೋ ಹೊಡೆದನಂತೆ."

ಅದೇ ಮೊದಲ ಬಾರಿ ಆ ವಿಷಯ ಕೇಳಿದವರಂತೆ ಮಾಸ್ತರೆಂದರು :

"ಹಾಗೇನು ? ಕಣ್ಣನೆ ? ರಾತ್ರಿ ಶಾಲೆಗೆ ಕಣ್ಣ ಅಂತ ಒಬ್ಬ ಬರ್ತಿರ್ತಾನೆ ಯುವಕ."

ನಂಬಿಯಾರರು ಮಾಸ್ತರ ಪ್ರಮಾಣಿಕತೆಯನ್ನು ತೂಗುವಂತೆ ಸೂಕ್ಷ್ಮ ನೋಟದಿಂದ ನೋಡಿದರು :

"ಅವನೇ. ಈ ಕಯ್ಯೂರಿನಲ್ಲಿ ಬೇರೆ ಕಣ್ಣ ಯಾವನಿದ್ದಾನೆ ? ನನಗೆ ಗೊತ್ತಿಲ್ವಾ ?"

"ಏನು ವಿಷಯ ಅಂತ ವಿಚಾರಿಸ್ತೇನೆ."

"ನೀವೇನು ವಿಚಾರಿಸ್ತೀರಿ ಮಾಸ್ತರೆ ? ವಿಚಾರಣೆ ಮಾಡೋದೆಲ್ಲಾ ನನಗೆ ಬಿಟ್ಬಿಡಿ. ಏನು ಕ್ರಮ ತಗೋಬೇಕು ಅನ್ನೋದನೆಲ್ಲಾ ನಾನೇ ಇತ್ಯರ್ಥ ಮಾಡ್ತಿನಿ. ನಿಮ್ಮ ರಾತ್ರಿ ಶಾಲೆಗೆ ಆತ ಬರ್ತಾ ಇರ್ತಾನಲ್ಲ, ಅದಕ್ಕೋಸರ ಅವನ ವಿಷಯದಲ್ಲಿ ನಿಮಗಿಷ್ಟು ಎಚ್ಚರಿಕೆ ಹೇಳೋಣಾಂತ ಕರೆದೆ. ನೀವಿನ್ನು ಹೋಗ್ಬಹುದು."

ಸಂಭಾಷಣೆ ಚುಟುಕಾಗಿ ಮುಗಿದುದು ಅನಿರೀಕ್ಷಿತವಾಗಿತ್ತು. ಮಾಸ್ತರು ಎದ್ದು ನಿಂತರು.

ಅವರು ಹೊರಡುತ್ತಿದ್ದಂತೆ ನಂಬಿಯಾರರು ಕೊನೆಯ ಮಾತೆಂದರು :

"ಅವರೆಲ್ಲಾ ಪೋಲಿಗಳು. ಪೋಲಿಗಳ ಸಹವಾಸದಿಂದ ನಿಮಗೆ ತೊಂದರೆ ಯಾಗಬಾರ್ದು ಮಾಸ್ತರೆ. ನಿಮ್ಮ ಕೆಲಸಕ್ಕೆ ಅಡ್ಡಿಯಾಗಬಾರ್ದು ತಿಳೀತೆ?"

ಗಂಟಲು ಒಣಗಿದ್ದರೂ ಮಾಸ್ತರು ಪ್ರಯತ್ನಪಟ್ಟು, "ಹೂಂ ಬರ್ತೀನಿ. ನಮಸ್ಕಾರ" ಎಂದರು.

ಅನಂತರದ ನಾಲ್ಕಾರು ದಿನಗಳಲ್ಲೂ ಕಣ್ಣನಿಗೇನೂ ಆಗಲಿಲ್ಲ. ಅದೊಂದು ರೀತಿಯಲ್ಲಿ ಆಶ್ಚರ್ಯದ ವಿಷಯವಾಗಿತ್ತು. ತಮಗಾದ ಅವಮಾನವನ್ನು ನುಂಗಿ ಕೊಂಡು ನಂಬಿಯಾರರೆಂದೂ ಸುಮ್ಮನೆ ಕುಳಿತವರಲ್ಲ. ಈಗ ತಮಗೆ ಇದಿರಾದವನು ಒಬ್ಬ ವ್ಯಕ್ತಿ ಮಾತ್ರವಲ್ಲ ಎಂಬ ಅಸ್ಪಷ್ಟ ಬೀತಿಯೇ, ದುಡುಕದಂತೆ ಅವರನ್ನು ತಡೆಹಿಡಿದಿರಬೇಕೆಂದು, ಮಾಸ್ತರು ಯೋಚಿಸಿದರು. ಈಗ ಪ್ರತಿ ರಾತ್ರೆಯೂ ಅವರು ಕಾಣುತಿದ್ದುದು ನಿರುತ್ಸಾಹಿಯಾದ ಕಣ್ಣನನ್ನು. ಆತನ ಮುಖ ನಿಸ್ತೇಜವಾಗಿರು ತ್ತಿತ್ತು. ಆ ಹೃದಯದೊಳಗಿನ ಸಂಕಟವನ್ನು ಸ್ವಲ್ಪಮಟ್ಟಿಗೆ ಸರಿಯಾಗಿಯೇ ಮಾಸ್ತರು ಊಹಿಸಿದ್ದರು. ಆದರೆ, ಅದಕ್ಕೆ ಇಂತಹದೇ ಪರಿಹಾರವೆಂದು ಬಾಯಿ ತೆರೆದು ಸಲಹೆ ಮಾಡಲು ಅವರು ಹಿಂಜರಿದರು.

ಆ ಹೃದಯದ ಗೊಂದಲವೇನೆಂಬುದನ್ನೂ ಆ ಮೆದುಳಿನಲ್ಲಿ ಸುಳಿಯುತಿದ್ದ ವಿಚಾರಗಳನ್ನೂ ಮೊದಲು ತಿಳಿದವನು ಅಪ್ಪು. ಸ್ನಾನಕ್ಕೆಂದು ನದಿಗೆ ಹೋಗಿದ್ದ ಆತ, ಕಲ್ಲುಬಂಡೆಯ ಮೇಲೆ ಒಬ್ಬಂಟಿಗನಾಗಿಯೆ ಕುಳಿತಿದ್ದ ಕಣ್ಣನನ್ನು ಕಂಡ. ಇಬ್ಬರೂ ನೀರಿಗಿಳಿದು ಈಸಿದರೂ ಮಿಂದರು. ಆದರೆ ಮನದಣಿಯುವವರೆಗೂ ನೀರಲ್ಲಿ ರಲು ಇಬ್ಬರಿಗೂ ಆಸಕ್ತಿ ಇರಲಿಲ್ಲ. ದಡವನ್ನೇರಿ ಅವರು ಬಿಸಿಲಲ್ಲಿ ಮೈಕಾಯಿಸಿದರು.

ಕಣ್ಣನನ್ನೆ ದಿಟ್ಟಿಸಿ ಅಪ್ಪು ಕೇಳಿದ :

"ಯಾಕೊ ಸಪ್ಪಗಿದೀಯಲ್ಲಣ್ಣ ?"

ಆ ಪ್ರಶ್ನೆಗೆ ಉತ್ತರವಿರಲಿಲ್ಲ. ಆದರೆ ಸ್ವಲ್ಪ ಹೊತ್ತು ತಡೆದು ಕಣ್ಣ ಕೇಳಿದ :

"ಮಾಸ್ತರು ನನ್ನ ವಿಷಯ ಏನಾದರೂ ಹೇಳಿದರಾ ?"

"ಇಲ್ವಲ್ಲ !"

ಮತ್ತೂ ಮೌನ ಅಪ್ಪುವಿನ ಸಹನೆಯನ್ನು ಪರೀಕ್ಷಿಸಿತು.

"ನಾನೂ ಈ ಊರು ಬಿಟ್ಟು ಹೋಗ್ಬೇಕೂಂತ ಮಾಡಿದ್ದೀನಿ ಅಪ್ಪು."

ಅಪ್ಪು ಅನಿರೀಕ್ಷಿಸಿದುದಕ್ಕಿಂತಲೂ ಕೆಟ್ಟುದಾಗಿತ್ತು ಉತ್ತರ.

"ಯಾಕಣ್ಣ ?

ನಿನಗೆ ಗೊತ್ತಾಗಲ್ವಾ ? ಇಲ್ಲಿರೋದು ಕಷ್ಟವಾಗ್ತದೆ. ಜನ ಏನೇನು ಮಾತಾಡ್ತಿದಾರೆ ! ನನಗೆ ಕಿವಿ ಇಲ್ವೇನು ? ಕೇಳಿಸೊಲ್ವೇನು ?"

ಅದು ಕಣ್ಣ-ದೇವಕಿಯರಿಗೆ ಸಂಬಂಧಿಸಿದ ಮಾತುಕತೆ. ವಯಸ್ಸಿನಲ್ಲಿ ಕಿರಿಯವನಾದ ತಾನು ಈ ವಿಷಯ ಏನು ಹೇಳಬೇಕೆಂದು ತಿಳಿಯದೆ ಅಪ್ಪು ತಡವರಿಸಿದ. ಆದರೂ ಏನೂ ಹೇಳದೆ ಸುಮ್ಮನಿರುವುದು ಸರಿ ಎನಿಸದೆ ಆತನೆಂದ :

"ಅದನ್ನೆಲ್ಲಾ ನೀನು ಮನಸ್ಸಿಗೆ ಹಚ್ಕೋಬಾರ್ದು. ಜನ ಎಲ್ರೂ ಕೆಟ್ಟೋರೆ ಇರ್ತಾರ ?"

ಅದು ಮಾಸ್ತರಿಂದ ಅಪ್ಪು ಕಲಿತಿದ್ದ ಪಾಠ. ಎಲ್ಲ ಜನರೂ ಯಾವಾಗಲೂ ಕೆಟ್ಟವರಲ್ಲ. ಜನರಲ್ಲಿ ಒಳ್ಳೆಯವರು ಇರ್ತಾರೆ, ಕೆಟ್ಟವರೂ ಇರ್ತಾರೆ. ಅತಿ ಕೆಟ್ಟವರ ಸಂಖ್ಯೆಯಂತೂ ಬಹಳ ಕಡಿಮೆ....

"ದೇವಕಿ ಹೀಗೇ ಇರೋಕಾಗೋದಿಲ್ಲ ಅಪ್ಪು ಅವಳ್ನ ನಾನು ಮದುವೆ ಯಾಗ್ತೇನೆ."

ಆ ಉತ್ತರ ಕೇಳಿದಾಗ ಅಪ್ಪುವಿಗೆ ಅಪೂರ್ವ ಅನುಭವವಾಯಿತು. ತನಗೆ ತಿಳಿದ ರೀತಿಯಲ್ಲಿ ಆತನೂ ಆ ವಿಷಯ ಯೋಚಿಸಿದ್ದ. ದೇವಕಿಯನ್ನು ಕಣ್ಣ ಮದುವೆಯಾದರೆ ಈ ಸಮಸ್ಯೆ ಬಹಳಮಟ್ಟಿಗೆ ಬಗೆಹರಿಯುವುದೆಂದು ಆತನಿಗೆ ತೋರಿತ್ತು. ಆದರೆ ದೇವಕಿ ವಿಧವೆ, ಎಳೆಯ ಮಗುವಿನ ತಾಯಿ ಆದರೂ....

ಕಣ್ಣನೇ ಮಾತು ಮುಂದುವರಿಸಿದ :

"ಕಾಸರಗೋಡಿಗೊ ಕಣ್ಣಾನೂರಿಗೊ ಹೋಗಿ ಕೂಲಿಯಾಗ್ತೇನೆ. ಈ ಊರಿನ ನೀರಿನ ಋಣ ಮುಗೀತೂಂತ ತಿಳೀತೇನೆ."

ಆತನ ಕಂಠ ಗದ್ಗದಿತವಾಗಿ ಕಣ್ಣಿನ ಅಂಚಿನಲ್ಲಿ ನೀರು ತುಳುಕಾಡಿತು. ನೀರಿನ ಋಣ-ಎನ್ನುವ ಮಾತೆಲ್ಲ ಸಾಂಪ್ರದಾಯಿಕ. ಅಪ್ಪುವಿಗೆ ಅದು ಗೊತ್ತಿತ್ತು. ಆ ಮಾತಿನ ಹಿಂದಿನ ಭಾವನೆಯ ಆಳವೂ ಆತನಿಗೆ ಅರಿವಾಗುತ್ತಿತ್ತು.

"ಯಾಕೆ ಹಾಗೆ ಹೇಳ್ತೀಯಾ ? ಈ ಊರು ಬಿಟ್ಟು ಯಾಕೆ ಹೋಗ್ಬೇಕು ?"

"ಮತ್ತೆ ಇಲ್ಲಿ ಬದುಕೋಕೆ ಬಿಡ್ತಾರೆಂತ ತಿಳಿದ್ಯೇನು"?

ಆ ಅಸಹಾಯಕತೆಯ ಧ್ವನಿ ಅಪ್ಪುವಿಗೆ ಏನೇನೂ ಇಷ್ಟವಾಗಲಿಲ್ಲ.

"ನಾವು ಇಷ್ಟೊಂದು ಜನ ಇರುವಾಗ ನಿನಗೆ ಯಾವ ಭಯ ? ದುಡಿದು ಬದುಕುವ ಜನ ಯಾರಿಗೆ ಯಾಕೆ ಹೆದರ್ಬೇಕು ? ನಾವು ಒಗ್ಗಟ್ಟಾಗಿದ್ದರೆ—"

ಸಾವಿರ ಸಾರೆ ಕೇಳಿದ, ನೂರು ಸಾರೆ ತಾನೇ ಹೇಳಿದ್ದ, ಮಾತನ್ನೇ ಇಲ್ಲಿ ಪುನರುಚ್ಚರಿಸುತ್ತಿದ್ದೇನೆಂದು ಅಪ್ಪುವಿಗೆ ಮನವರಿಕೆಯಾಯಿತು. ಅದು ಮೂಲ ಮಂತ್ರ : ಒಗ್ಗಟ್ಟು,—ಜನರ ಐಕ್ಯ. ಆ ಮಾತುಗಳನ್ನು ಆಡಿದ್ದ ನಿಜ. ಆದರೆ ಕಣ್ಣನ ಮೇಲೆ ಅದು ಅಪೇಕ್ಷಿಸಿದಷ್ಟು ಪರಿಣಾಮ ಬೀರಿದಂತೆ ತೋರಲಿಲ್ಲ. ಒಡನೆಯೆ ಮಾಸ್ತರ ನೆನಪಾಗಿ ಆತ ಕೇಳಿದ :

"ಮಾಸ್ತರಿಗೆ ಹೇಳಿದ್ಯಾ ?"

"ಇಲ್ಲ."

"ಮತ್ತೆ ? ಹೇಳೋದು ಬೇಡವಾ ?"

"ಹೇಳೋದಕ್ಕೆ ಒಂದು ರೀತಿಯ ಸಂಕೋಚ ಅಪ್ಪು. ಅವರು ಏನು ಅಂದ್ಕೊಳ್ತಾರೋ ?"

"ಛೆ ! ಛೆ ! ಒಳ್ಳೇ ಹೇಳ್ದೇ ! ಇಂಥಾದ್ದೆಲ್ಲ ಅವರಿಗೆ ತಿಳಿಸದೆ ಇರೋಕಾಗ್ತದಾ?"

ಎರಡು ನಿಮಿಷ ಸುಮ್ಮನಿದ್ದು ಶಾಂತ ಸ್ವರದಲ್ಲಿ ಕಣ್ಣ ಹೇಳಿದ :

"ಮಾಸ್ತರ ಎದುರು ಕೂತಾಗ ನನಗೆ ಮಾತೇ ಬರೋದಿಲ್ಲ. ನೀನೊಂದು ಕೆಲಸ ಮಾಡ್ತಿಯಾ ಅಪ್ಪು ? ನನ್ನ ಮನಸ್ಸಿನಲ್ಲಿ ಏನಿದೆ ಅನ್ನೋದನ್ನ ಮಾಸ್ತರಿಗೆ ಹೇಳ್ತೀಯಾ ?"

"ಹೂಂ," ಎಂದ ಅಪ್ಪು ತನ್ನಲ್ಲಿ ವಿಶ್ವಾಸವಿಟ್ಟು ಕಣ್ಣ ಅಂತಹ ಕೆಲಸ ಒಪ್ಪಿಸಿದನೆಂದು ಆತನಿಗೆ ಸಂತೋಷವಾಯಿತು....

....ಮಾಸ್ತರಿಗೆ ಆಶ್ಚರ್ಯವಾಗಲಿಲ್ಲ. ಕಣ್ಣ ದೇವಕಿಯನ್ನು ಮದುವೆಯಾದರೆ ಒಳಿತಾಗುವುದೆಂದು ಅವರು ಆ ಮೊದಲೇ ಯೋಚಿದ್ದರು. ಆದರೆ ಕಣ್ಣ ಮತ್ತು ದೇವಕಿಯ ಮನಸ್ಸನ್ನು ತಿಳಿಯದೆ ಏನನ್ನೂ ಹೇಳುವದು ಸರಿಯಲ್ಲವೆಂಬುದು ಅವರ ಅಭಿಪ್ರಾಯವಾಗಿತ್ತು. ಮದುವೆಗೆ ಕರುಣೆ ಸಹಾನುಭೂತಿ ಮಾತ್ರ ಸಾಲದು. ಗಂಡು ಹೆಣ್ಣು ಪರಸ್ಪರ ನೀಡುವ ಒಲವೂ ಬೇಕು—ಎಂದು ನಂಬಿದ್ದ ಮಾಸ್ತರು, ಕಣ್ಣನಿಂದಲೇ ಈ ಪ್ರಸ್ತಾಪ ಬರುವವರೆಗೂ ತಾವು ಸುಮ್ಮನಿರಬೇಕು ಎಂದುಕೊಂಡಿದ್ದರು. ಈಗ ವಿಷಯ ಸ್ಪಷ್ಟವಾದುದಕ್ಕಾಗಿ ಅವರಿಗೆ ಸಮಾಧಾನವಾಯಿತು.

ಅಪ್ಪು, ತನ್ನ ಪಾಲಿಗೆ ವ್ಯಾಕುಲಕ್ಕೆ ಕಾರಣವಾಗಿದ್ದೊಂದು ಮಾತನ್ನು ಹೇಳಿದ :

"ಮದುವೆಯಾದ್ಮೇಲೆ ಊರು ಬಿಟ್ಟು ಹೋಗ್ತೇನೇಂತ ಕಣ್ಣ ಮಾತಾಡ್ತಿದ್ದ."

ಮಾಸ್ತರಿಗೆ ಅದು ಸೋಜಿಗವೆನಿಸಲಿಲ್ಲ.

"ವ್ಯಥೆಯಾದಾಗ ಹಾಗೆ ಮಾತಾಡೋದು ಸ್ವಾಭಾವಿಕ. ನಾನು ಅವನಿಗೆ ಹೇಳ್ತೇನೆ."

....ಆ ರಾತ್ರಿಯೆ ಮಾಸ್ತರು ಕಣ್ಣನನ್ನು ಕರೆದು ಪ್ರತ್ಯೇಕವಾಗಿ ಮಾತನಾಡಿದರು. ಪರಿಣಾಮವಾಗಿ ಕಣ್ಣ, ಬಹಳ ದಿನಗಳ ಬಳಿಕ ಮತ್ತೊಮ್ಮೆ ಹಸನ್ಮುಖಿಯಾದ. ತೋಯ್ದು ಕಣ್ಣುಗಳು ಮಿನುಗಿದುವು. ತುಟಿಗಳ ಮೇಲೆ ನಗೆ ಮತ್ತೆ ಕಾಣಿಸಿಕೊಂಡಿತು.

ರಾತ್ರಿ ಶಾಲೆಯ ತರಗತಿ ಮುಗಿಯುವ ಹೊತ್ತಿಗೆ ಅಲ್ಲಿದ್ದವರನ್ನು ಉದ್ದೇಶಿಸಿ ಮಾಸ್ತರು ಹೇಳಿದರು.

"ಈಗ ನಿಮಗೊಂದು ಸಂತೋಷದ ವಿಷಯ ಹೇಳ್ತೆನೆ. ನಮ್ಮ ಶಾಲೆಯ ವಿದ್ಯಾರ್ಥಿ ಕಣ್ಣ, ನಿಮಗೆಲ್ಲರಿಗೂ ಪರಿಚಿತಳೇ ಆಗಿರುವ ದೇವಕಿಯನ್ನು ಮದುವೆ

ಯಾಗಲಿದ್ದಾರೆ. ಈ ಶುಭಕಾರ್ಯ ಆದಷ್ಟು ಬೇಗನೆ ಜರಗಿ ನಮಗೆಲ್ಲರಿಗೂ ಭೂರಿ ಭೋಜನ ಸಿಗುವಂತಾಗಲಿ ಅನ್ನೋದೇ ನಮ್ಮ ಹಾರೈಕೆ. ಅಲ್ಲವೇನ್ರಪ್ಪಾ? ಬೇರೇನು ಹೇಳೋಣ?"

ಕುಳಿತವರಿಂದ, ಪಿಸುಪಿಸು ಗುಜುಗುಜು ಮಾತು ಮೆಚ್ಚುಗೆಯ ಉದ್ಗಾರಗಳು ಹೊರಟುವು....

....ಒಂದು ಕಾಲದಲ್ಲಿ ಎಳೆಯ ಮಗುವನ್ನೆತ್ತಿಕೊಂಡು ತಾನೂ ಸಂಕಟ ಅನುಭವಿಸಿದ್ದ ಕಣ್ಣನ ವಿಧವೆ ತಾಯಿ ಮದುವೆಗೆ ಆಕ್ಷೇಪಿಸಲಿಲ್ಲ. ಗುಣವತಿಯಾದ ರೂಪವತಿಯಾದ ದೇವಕಿ ತನ್ನ ಸೊಸೆಯಾಗುವಳೆಂದು ಮುದುಕಿಗೆ ಹೆಮ್ಮೆಯೇ ಆಯಿತು.

ಮದುವೆ ಹೆಚ್ಚಿನ ವೆಚ್ಚವಿಲ್ಲದೆ ನಡೆಯಿತು. ಆ ಸಮಯದಲ್ಲಿ ಹಿರಿಯನಾಗಿ ಹೆಚ್ಚು ಓಡಾಡಿದವನು ಚಿರುಕಂಡನ ತಂದೆ. ಒಂದು ಕಾಲದಲ್ಲಿ ಸಾಧುಪ್ರಾಣಿಯಾಗಿ ಮೂಕನಾಗಿರುತಿದ್ದ ಈತ, ಈಗ ಪುನರ್ಜನ್ಮ ಪಡೆದ ಹೊಸ ಮನುಷ್ಯನ ಹಾಗೆ ಓಡಾಡುತಿದ್ದುದು, ಬೆರಗುಗೊಳಿಸುವ ಸಂಗತಿಯಾಗಿತ್ತು. ಜಮೀನ್ದಾರರ ಕೆಂಗಣ್ಣು ಉರಿಯುತಿದ್ದಂತೆಯೇ, ಕಣ್ಣ–ದೇವಕಿ ಗಂಡ–ಹೆಂಡತಿಯಾದರು. ಮಾಸ್ತರು ಮದುವೆಯ ಸಮಯದಲ್ಲಿ ಅತ್ತ ಸುಳಿಯದೇ ಇದ್ದರೂ ರಾತ್ರಿ ಊಟಕ್ಕೆ ತಪ್ಪದೆ ಬಂದರು.

ಕಣ್ಣನ ಸೂಚನೆಯಂತೆ, ಮಾಸ್ತರರ ಒಪ್ಪಿಗೆ ಪಡೆದು ಕೋರ, ತನ್ನ ಹಟ್ಟಿಯನ್ನು ಬಿಟ್ಟು, ಈಗ ತೆರವಾಗಿದ್ದ ದೇವಕಿಯ ಗುಡಿಸಲಿಗೆ ಬಂದು ನೆಲೆಸಿದ. ರಾತ್ರಿ ಶಾಲೆಗೆ ಬರುತ್ತಿದ್ದ ರೈತರು ಅಲ್ಲಿ ಇಲ್ಲಿ ಆ ಗುಡಿಸಲನ್ನು ದುರಸ್ತಿಪಡಿಸಿ ಮತ್ತಷ್ಟು ಭದ್ರಗೊಳಿಸಿದರು.

ಕಣ್ಣ ಕಯ್ಯೂರಿನವನಾಗಿಯೇ ಉಳಿದ. ಕೇಳಿ ಕಲಿತ, ಓದಿ ಕಲಿತ, ಹಳೆಯ ಹೊಸ ಹಾಡುಗಳೆಲ್ಲವನ್ನೂ ಈಗಲೂ ಆತನ ಚೇತನಕಂಠ ಹಾಡಿತು.

ಹಳ್ಳಿಯ ಹುಡುಗಿಯರು ಯುವತಿಯರು ದೇವಕಿಯದಾದ ಆ ಒಡವೆಯನ್ನು ಇನ್ನೂ ನೋಡಿದರು. ಆದರೆ ಆ ನೋಟದಲ್ಲೀಗ ಆಕ್ರಮಣದ ಆಕಾಂಕ್ಷೆ ಇರಲಿಲ್ಲ, ಆಸೆ ಇರಲಿಲ್ಲ.

೬

ಅಪ್ಪುವಿಗೆ ಒಂದು ರಾತ್ರೆ ವಿಚಿತ್ರವಾದ ಕನಸು ಬಿತ್ತು ; ಕ್ರಾಂತಿಕಾರರ ಪಡೆ ಸೆರೆಮನೆಯ ಪ್ರಾಕಾರಗಳನ್ನು ಭೇದಿಸಿ ಒಳಗಿದ್ದವರ ಬೇಡಿಗಳನ್ನು ಕಳಚಿದ ಹಾಗೆ. ದೇಶದ ಉದ್ದಗಲಕ್ಕೂ ಬಂಧ ವಿಮೋಚನೆಯ ಜನಸೇನೆ ಚೈತ್ರಯಾತ್ರೆ ಮಾಡುತ್ತ, ಆಂಗ್ಲ ಅಧಿಕಾರಿಗಳನ್ನೂ ಅವರಿಗೆ ಆತ್ಮವನ್ನೂ ಮಾರಿದ್ದ ದೇಶೀಯ ಚಾಕರರನ್ನೂ ಆಳರಸರು–ಜಮೀನ್ದಾರರು—ಬಂಡವಾಳಗಾರರನ್ನೂ ಬಂಧಿಸಿದ ಹಾಗೆ....

ಕನಸನ್ನು ಚಿರುಕಂಡನಿಗೆ ಬಾಗಿಲ ಸರಳುಗಳೆಡೆಯಿಂದ ವಿವರಿಸುತ್ತ ಅಪ್ಪು ಹೇಳಿದ :

"ಹಾಗೆ ಬಂಧಿಸಿ ಸೆರೆಹಿಡಿದವರಲ್ಲಿ ನಂಬಿಯಾರ್ ಇದ್ದ ಕಣೋ. ಆತ ಗೋಳಾಡ್ತಾ 'ಅಪ್ಪು, ಹಿಂದೆ ರಾತ್ರಿ ಶಾಲೆ ನಡೆಸೋಕೆ ಸಮ್ಮತಿ ಕೊಟ್ಟಿರ್ಲಿಲ್ವಾ? ನನ್ನ ಬಿಡಿಸಪ್ಪಾ' ಅಂತಿದ್ದ, ಆದರೆ, ನಾನು, ನೀನು, ಕುಞಂಬು, ಅಬೂಬಕರ್ ನಾಲ್ಕು ಜನ ಭುಜದ ಮೇಲೆ ಬಂದೂಕು ಏರಿಸಿ ಕೈಕೈ ಹಿಡಿದು ಹಾಡ್ತಾ ನಗ್ತಾ ಮುಂದೆ ಹೋದೆವು. ಕಣ್ಣ ಎಲ್ಲರಿಗಿಂತ ಮುಂದೆ, ಸ್ವರ ಕೇಳಿಸದಷ್ಟು ದೂರ ಬಾವುಟ ಹಿಡಕೊಂಡಿದ್ದ. ಮಾಸ್ತರೂ ಪಂಡಿತರೂ ನಮಗಿಂತ ಬಹಳ ಹಿಂದಿದ್ರು. ಪಂಡಿತರು ಮೀಸೆ ಬಿಟ್ಟಿದ್ರು ಕಣೋ. ಮಾಸ್ತರು, 'ಓಡಬೇಡ್ರೋ.... ನಿಧಾನವಾಗಿ ಹೋಗ್ರೋ' ಅಂತ ಕೂಗಿ ಹೇಳ್ತಿದ್ರು....ಆದರೆ ಅಷ್ಟರಲ್ಲೆ ಎಚ್ಚರ ವಾಯ್ತು !"

ಸ್ವಾರಸ್ಯವಾಗಿದ್ದ ಆ ವಿವರಣೆಯನ್ನು ಚಿರುಕಂಡ ಆಸಕ್ತಿಯಿಂದ ಕೇಳಿ, "ಕನಸು ಅನ್ನೋದು ಯಾವಾಗ್ಲೂ ಮನಸಿನೊಳಗಿರೋ ಯಾವುದೋ ಆಸೆಯ ಇನ್ನೊಂದು ರೂಪ" ಎಂದ.

ಅಲ್ಲಿಂದ ಇನ್ನೊಂದು ಗೋಡೆಯಾಚೆಗೆ ಕುಞಂಬುವಿಗೆ ಆ ವಿವರ ಹೋಯಿತು. ಆತ ಅಬೂಬಕರ್‌ಗೆ ಅದನ್ನು ತಿಳಿಸಿದ. ಅದು ಬರೀ ಕನಸಿನ ವಿವರಣೆಯಾದರೂ ಎಲ್ಲರೂ ಉಲ್ಲಾಸಗೊಂಡರು.

ಅಬೂಬಕರ್ ಹೇಳಿದ :

"ನಾವು ನಾಲ್ಕು ಜನ ಇರದೇ ಹೋಗ್ಬಹುದು. ಆದರೆ ಒಂದು ದಿವಸ ಹಾಗಾಗೋದೂ ನಂಬಿಯಾರಿಗೆ ಆ ಸ್ಥಿತಿ ಒದಗೋದೂ ಖಂಡಿತ."

ಕುಞಂಬು, ಅಬೂಬಕರನ ಮಾತನ್ನು ಚಿರುಕಂಡನಿಗೆ ದಾಟಿಸಿದ. ಆತ ಅದನ್ನು ಅಪ್ಪುವಿಗೆ ಮುಟ್ಟಿಸಿದ.

ಹೀಗೆ ಸರಪಣಿ ನೇಯುತ್ತ ಆ ನಾಲ್ವರು ಮಾತುಕತೆಯಲ್ಲಿ ನಿರತರಾದರು.

ಆದರೆ, ಕನಸಿಗಿಂತ ದೂರವಾಗಿತ್ತು ವಾಸ್ತವತೆ. ಮಳೆ ನಿಂತಿತು. ಜನ ಪ್ರವಾಹ ಇಳಿದುಹೋಯಿತು. ಒಗ್ಗಟ್ಟಿಲ್ಲದ ನಾಯಕರಿಲ್ಲದ ಹೋರಾಟವನ್ನು ಸರಕಾರ ಮುರಿದಿಕ್ಕಿತು.

ಕಯ್ಯೂರಿನ ನಾಲ್ವರನ್ನು ಗಲ್ಲಿಗೇರಿಸಲು ಆಳುವವರು ದಿನ ಗೊತ್ತುಮಾಡಿದರು. ಅದು ಮತ್ತೆ ಮುಂದಕ್ಕೆ ಹೋಯಿತು. ದಿನ ಮೊದಲೇ ಜಾಹೀರುಮಾಡುವುದು ಮೂರ್ಖತನವಾದೀತೆಂದು, ಜನ ಕೆರಳಿ ಪರಿಸ್ಥಿತಿ ವಿಕೋಪಕ್ಕೆ ಹೋದೀತೆಂದು ಸರಕಾರ ಅಳುಕಿತು.

ಅಪ್ಪು ರೇಗಿ ನುಡಿದ :

"ಎಂಥ ಹಿಂಸೆ! ಒಂದೇ ಸಾರಿ ಮುಗಿಸಬಾರದೆ ?"

ಪೆಟ್ಟು ತಿಂದು ಮಲಗಿದ ಹೆಬ್ಬಾವಿನ ಹಾಗೆ ಮನಸ್ಸು ರೋಸಿದ್ದ ಆ ಸ್ಥಿತಿಯಲ್ಲೂ ದಿನವೂ ಮಾಸ್ತರು ಯಾವನಾದರೂ ಕಾವಲುಗಾರನನ್ನು ಆ ನಾಲ್ವರೆಡೆಗೆ ಕಳುಹಿಸಿ ಸುಖದುಃಖ ವಿಚಾರಿಸುತಿದ್ದರು.

ಕುಞಂಬುವಿನ ದೇಹಪ್ರಕೃತಿ ಅಷ್ಟೊಂದು ಚೆನ್ನಾಗಿರಲಿಲ್ಲ. ಆತ ಏಳುವುದು ತಡವಾದರೆ, ಎಡಬಲಗಳಿಂದ ಅಬೂಬಕರ್ ಮತ್ತು ಚಿರುಕಂಡ ಕಾತರಗೊಂಡು, "ಮೈ ಚೆನ್ನಾಗಿಲ್ವಾ ಕುಞಂಬು ?" ಎಂದು ಕೇಳುತ್ತಿದ್ದರು. ಚಿರುಕಂಡ ನಿದ್ದೆಯಲ್ಲಿ ನರಳಿದರೆ, ಅಪ್ಪು ಎಚ್ಚರಗೊಂಡು ಕರೆದು ಕೇಳುತ್ತಿದ್ದ "ಚಿರುಕಂಡ....ಯಾಕೆ ಹಾಗ್ಮಾಡ್ತೀಯಾ ?"

ಒಬ್ಬರಿಂದೊಬ್ಬರನ್ನು ಪ್ರತ್ಯೇಕಿಸಿದ ಗೋಡೆಗಳಿದ್ದರೂ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣಿಸದಿದ್ದರೂ ಸದಾ ಕಾಲವೂ ಅನ್ಯೋನ್ಯ ನೋಡುತ್ತ ಮಾತನಾಡುತ್ತ ಜತೆಯಲ್ಲೆ ಇರುವೆವೇನೋ ಎನ್ನುವ ಹಾಗೆ, ಅವರು ದಿನ ಕಳೆದರು.

ಗಲ್ಲಿಗೇರಿಸುವ ದಿನವನ್ನು ಕೊನೆಯವರೆಗೂ ಗೋಪ್ಯವಾಗಿಡುವರೆಂದೂ ತಿಂಗಳ ಕೊನೆಯಲ್ಲಿ ಮರಣದಂಡನೆ ಜಾರಿಯಾಗಬಹುದೆಂದೂ ಖಚಿತವಾರ್ತೆ ಅಧಿಕಾರಿಗಳ ಕಣ್ಣು ತಪ್ಪಿಸಿ ನುಸುಳಿಕೊಂಡು ಸೆರೆಮನೆಯೊಳಗೆ ಬಂತು.

ಅಪ್ಪು ಮತ್ತು ಆ ಮೂವರು ಸಂಗಾತಿಗಳ ಸಂಬಂಧಿಕರನ್ನು ಕೊನೆಯ ಭೇಟಿಗೆ ಕರೆಸುವ ವಿಷಯದಲ್ಲಿ ವಿಳಂಬವಾಗಬಾರದೆಂದು ಮಾಸ್ತರು ಕಾರ್ಯೋನ್ಮುಖರಾದರು.

....ಆ ನಾಲ್ವರು ಕಯ್ಯೂರು ಯೋಧರ ಸಂಬಂಧಿಕರು ಕಣ್ಣಾನೂರು ಸೇರಿ ಭೇಟಿಗೆಂದು ಬಂದುದು ಒಂದು ಮಧ್ಯಾಹ್ನ.

ಸೆಕೆಯ ಕಾರಣದಿಂದ ಅಪ್ಪುವಿಗೆ ಮಂಪರು ಬಂದಿತ್ತು. ಕಣ್ಣುಗಳು ಅರೆತೆರೆದು ಹಾಗೆಯೇ ಗೋಡೆಗೊರಗಿ ಕುಳಿತ ಸ್ಥಿತಿ. ಯಾರೋ ಮಸಕುಮಸಕಾಗಿ ಎದುರು ನಿಂತಂತೆ ಕಂಡಿತು. ಎಲ್ಲವೂ ಬಿಳಿ. ಹೆಂಗಸು, ಮಗು.

"ಜಾನಕಿ!" ಎನ್ನುತ್ತ ಅಪ್ಪು ಧಿಗ್ಗನೆದ್ದು ಕುಳಿತ.

ಅದು ಕನಸಾಗಿರಲಿಲ್ಲ. ಪುಟ್ಟ ಮಗನನ್ನು ಕೈಹಿಡಿದು ನಿಲ್ಲಿಸಿಕೊಂಡು ಜಾನಕಿಯೆ ಅಲ್ಲಿದ್ದಳು.

"ಅಪ್ಪಾ! ಅಮ್ಮಾ!"

ಮಗನ ಜತೆಯಲ್ಲಿ ಸೆರೆಮನೆಯ ಸುಖ ಅನುಭವಿಸಿ ಹಿಂತಿರುಗಿದ್ದ ತಂದೆ, ತಾಯಿಯೊಡನೆ ಬಂದಿದ್ದ.

ಎದ್ದು ನಿಂತು ಅಪ್ಪು ಬಾಗಿಲ ಬಳಿಗೆ ಬಂದ. ತೆಳುಮೀಸೆ, ಕೆನ್ನೆ ಗಲ್ಲಗಳನ್ನು ಆವರಿಸಿದ್ದ ತೆಳುಗಡ್ಡ.......

ಮಗನನ್ನು ನೋಡುತ್ತ ತಾಯಿ ಬಿಕ್ಕಿಬಿಕ್ಕಿ ಅತ್ತಳು.

"ಯಾಕಮ್ಮಾ ಅಳ್ತೀಯಾ ?"

ತಂದೆಯೆಂದ—ನಿನಗಿನ್ನೂ ಅನುಭವಸಾಲದು ಎನ್ನುವ ಧ್ವನಿಯಲ್ಲಿ :

"ನೀನು ಸುಮ್ನಿರು ಅಪ್ಪು. ಅಳಲಿ."

ಆ ತಾಯಿ ಅಂದಳು :

"ಹೆತ್ತ ತಾಯಿ ಹತ್ತಿರ ಯಾವತ್ತಾದರೂ ಕಣ್ಣೀರು ಕಡಿಮೆಯಾಗ್ತದಾ ಮಗಾ ?"

ಜಾನಕಿ ಮಗುವನ್ನೆತ್ತಿಕೊಂಡಳು. ಮೂರು ವರ್ಷದ ಪುಟ್ಟ ಹುಡುಗ ತಂದೆಯ ಮುಖ ನೋಡಿದ. ಪರಿಚಿತನಲ್ಲ. ಅಜ್ಜಿಯ ಅಜ್ಜನ ಮುಖ ನೋಡಿದ. ಆ ಮುಖಭಾವಗಳು ಇಷ್ಟವಾಗಲಿಲ್ಲ. ತಾಯಿಯನ್ನು ನೋಡಿದ. ಅಲ್ಲಿಯೂ ಕಣ್ಣುಗಳು ತುಂಬಿ ಬಂದಿದ್ದುವು. ಇದೊಂದನ್ನೂ ತಾನು ಸಹಿಸೆನೆಂಬಂತೆ ಆತ ಗಟ್ಟಿಯಾಗಿ ಅತ್ತ. ಅಪ್ಪುವಿಗೂ ಅಳುವ ಹಾಗಾಯಿತು.

ಅಲ್ಲಿಯೇ ದೂರದಲ್ಲಿ ಕುಳಿತಿದ್ದ ಜೇಲಿನೊಬ್ಬ ಅಧಿಕಾರಿಯನ್ನೂ ನಿಂತಿದ್ದ ಪಹರೆಯವನನ್ನೂ ಅಪ್ಪು ನೋಡಿದ. ತಾನು ಕ್ರಾಂತಿಕಾರನೆಂಬುದನ್ನು ನೆನಪಿಗೆ ತಂದುಕೊಳ್ಳುತ್ತ ಅಪ್ಪು ಮನಸ್ಸು ಬಿಗಿಹಿಡಿದು, ಹೆಂಡತಿಯನ್ನು ಕೇಳಿದ :

"ಮಗೂಗೆ ಏನು ಹೆಸರಿಡ್ಬೇಕೂಂತ ಕೊನೆಗೂ ತೀರ್ಮಾನ ಮಾಡಿದಿರಿ ಜಾನಕಿ ?"

ಅಪ್ಪು ಕುಟ್ಟಿ ಅಂತಲೇ."

"ನಿನ್ನ ಮಗೂಗೆ ಇನ್ನೇನು ಹೆಸರಪ್ಪಾ ಇಡೋದು ?" ಎಂದು ತಾಯಿ, ಕಂಬನಿಯೊರೆಸಿಕೊಳ್ಳುತ್ತಾ ಸೊಸೆಯ ಮಾತನ್ನು ಸಮರ್ಥಿಸಿ ಅಂದಳು.

ಅಪ್ಪು ನಕ್ಕ. ಆ ನಗುವನ್ನು ಕಂಡು ಅಪ್ಪುಕುಟ್ಟಿಯೂ ಅಳು ನಿಲ್ಲಿಸಿ ಹಲ್ಲು ಕಿರಿದು "ಇಹ್ಹಿ :" ಅಂದ.

ಇಂತಹ ಭೇಟಿಯಲ್ಲಿ ಸಮಯದ ಮಹತ್ವವೆಷ್ಟೆಂಬುದನ್ನು ತಿಳಿದಿದ್ದ ಅಪ್ಪುವಿನ ತಂದೆ ಹೇಳಿದ :

"ಸುಮ್ನೆ ನಿಂತಿರ್ಬೇಡಿ, ಮಾತಾಡಿ."

ಆದರೆ ಏನನ್ನು ?.....ಯಾವ ವಿಷಯ ? ಹಿರಿಯ ಹಾಗಂದರೂ ಅವರು ಮೌನವಾಗಿಯೇ ಇದ್ದರು.

ಬಳಿಕ ವಿಷಯಗಳಿಗಾಗಿ ತಡವರಿಸುತ್ತ ಅಪ್ಪು ನುಡಿದ :

"ಅಕ್ಕನನ್ನ ಇತ್ತೀಚೆಗೆ ನೋಡಿದ್ಯಾ ?"

"ಹೂಂ."

"ಮಗು ಚೆನ್ನಾಗಿದ್ಯಾ ?"

"ಹೂಂ. ಚೇತನಾಗೆ ಆಗಲೆ ಐದು ತುಂಬಿತು. ಮುಂದಿನ ಸಲ ಶಾಲೆಗೆ ಹಾಕ್ಬೇಕೂಂತಿದಾಳೆ ಅಕ್ಕ."

"ಒಳ್ಳೇದೇ !"

ಹಿಂದೆ ಕಯ್ಯೂರಿನಲ್ಲಿ ಹೆಣ್ಣುಮಕ್ಕಳು ಶಾಲೆಗೆ ಹೋಗುತ್ತಿರಲಿಲ್ಲ. ಈಗ ಹುಡುಗಿಯರನ್ನು ಕಳುಹಿಸುವ ಮಾತು ಕೇಳಿಸುತಿತ್ತು, ಒಳ್ಳೆಯದೇ.

ಅಮ್ಮನತ್ತ ನೋಡಿ ಅಪ್ಪು ಕೇಳಿದ :

"ಅಜ್ಜಿ ಆರೋಗ್ಯವಾಗಿದಾಳಾ ಅಮ್ಮಾ?"

"ಹೂಂ. ಕಣೋ."

"ತಮ್ಮ?"

"ಹೊಲದ ಎಲ್ಲ ಕೆಲಸ ಅವನೇ ಈಗ ನೋಡ್ಕೋತಾನೆ."

ಕಿರಿಯ ತಮ್ಮನ ನೆನಪು ಕಾಡುತ್ತಾ ಬಂದು ಅಪ್ಪು ಕೇಳಿದ :

"ಕುಟ್ಟಿ ಈಗ ದೊಡ್ಡೋನಾಗಿರ್ಬೇಕು ಅಲ್ವಾ? ಅವನನ್ನು ಚೆನ್ನಾಗಿ ನೋಡ್ಕೊ ಅಮ್ಮ. ಅವನಿಗೆ ತುಂಬಾ ಓದಿಸ್ಬೇಕು."

ಓದಿಸುವ ಮಾತು ಹಳೆಯದೊಂದು ನೆನಪನ್ನು ಕೆದಕಿತು.

"ಅಪ್ಪಾ, ನಾನು ಪೋಲಿ ಸಹವಾಸಕ್ಕೆ ಬೀಳ್ಬಹುದೂಂತ ಹಿಂದೆ ಭಾವಿಸಿದ್ದೆ. ಅಲ್ವ'ಅಪ್ಪಾ? ನಾನೂ ಪೋಲಿಯಾಗಲಿಲ್ಲ. ಆದರೆ ಹೆತ್ತವರಿಗೆ ಸುಖಾನೂಕೊಡಲಿಲ್ಲ."

"ಹಾಗೆಲ್ಲಾ ಆಡ್ಬಾರ್ದು ಅಪ್ಪು."

ಅಲ್ಲಿ ಇದ್ದ ಪಹರೆಯವನು ಗಟ್ಟಿಯಾಗಿ ಹೇಳಿದ :

"ಹೊತ್ತಾಯ್ತು ಹೊರಡಿ!"

ಆ ಸೂಚನೆ ಕೇಳಿ ಎಲ್ಲರ ಕಸಿವಿಸಿಯೂ ಹೆಚ್ಚಿತು. ಅವರೆಗಿನ ಗಾಂಭೀರ್ಯವೆಲ್ಲ ಕರಗಿ ಜಾನಕಿಯ ಕತ್ತಿನ ಸೆರೆಗಳು ಬಿಗಿದು ಬಂದುವು. ತುಟಿಗಳು ಕಂಪಿಸಿದುವು.

ಅಪ್ಪುವೆಂದ :

"ಪಕ್ಕದ ಕೊಠಡೀಲೇ ಚಿರುಕಂಡ ಇದಾನಮ್ಮಾ. ನಾವು ಚಿಕ್ಕೋರಾಗಿದ್ದಾಗ ನೀನು ನೇಂದ್ರಬಾಳೆಹಣ್ಣು ಕೊಟ್ಟಿದ್ದನ್ನ ಯಾವಾಗಲೂ ನೆನಸ್ಕೋತಾನೆ. ಮಾತಾಡಿಸಿ ಹೋಗಮ್ಮಾ."

ತಾಯಿಯೂ ತಂದೆಯೂ ಚಿರುಕಂಡನತ್ತ ಚಲಿಸಿದರು.

ಅಪ್ಪು ಎರಡೂ ಕೈಗಳನ್ನು ಹೊರಹಾಕಿ ಜಾನಕಿಯ ತೋಳುಗಳನ್ನು ಹಿಡಿದುಕೊಂಡ.

ಬಲು ಪ್ರಯಾಸಪಡುತ್ತ ಆಕೆ ಕೇಳಿದಳು :

"ಯಾವಾಗ?"

"ಗೊತ್ತಿಲ್ಲ ಜಾನೂ....ಭೇಟಿ ಪ್ರಾಯಶಃ ಇದೇ ಕೊನೇದು."

"ಅಯ್ಯೋ!"

"ಅಳಬೇಡ ಜಾನೂ."

ಆಕೆಯ ಕೈಗಳನ್ನು ಬಿಟ್ಟು ಮಗುವಿನ ಮುಖವನ್ನು ಬಳಿಸೆಳೆದು ಅಪ್ಪು ಮುದ್ದಿಸಿದ.

"ಮಗೂನ ನೋಡ್ಕೋ ಜಾನೂ."

"ಹೂಂ...."

ಹೇಳಬೇಕೆಂದಿದ್ದ ಒಂದು ವಿಷಯವನ್ನು ಹೇಳಲಾಗದೆ ಸಂಕಟಪಡುತ್ತ ಅಪ್ಪುವೆಂದ :

"ಒಂದು ವಿಷಯ ಜಾನೂ...."

ಪಹರೆಯವನ ಸ್ವರ ಮತ್ತೂ ಜೋರಾಗಿ ಕೇಳಿಸಿತು :

"ಹೊರಡ್ರಿ ಹೊತ್ತಾಯ್ತು ! ಬೇರೆಯವರ ಹತ್ತಿರ ಯಾಕ್ರೀ ಮಾತಾಡ್ತೀರಾ ಅಲ್ಲಿ ?"

ಜಾನಕಿಯೆಂದಳು :

"ಹೇಳಿ—ಹೇಳಿ !"

"ನೀನು ಮುಂದೆ ಬೇರೆಯಾರನ್ನಾದರೂ...."

ಜಾನಕಿ ತನ್ನ ಅಂಗೈಯಿಂದ ಆತನ ಬಾಯಿ ಮುಚ್ಚಿದಳು. ಉದ್ವೇಗದಿಂದ ಆತ ಅದನ್ನು ತೇವಗೊಳಿಸಿದ.

ತಂದೆ-ತಾಯಿ ಚಿರುಕಂಡನನ್ನು ಮಾತನಾಡಿಸಿ ಬಂದರು.

"ಅವನ ಮನೆಯವರೂ ಬಂದಿದಾರೆ, ಎಲ್ಲರೂ ಬಂದಿದಾರೆ. ಜತೆಯಾಗೇ ಬಂದ್ವಿ," ಎಂದ ಅಪ್ಪುವಿನ ತಂದೆ.

ಮತ್ತೆ ಅಳತೊಡಗಿದ ತಾಯನ್ನು ಕುರಿತು ಅಪ್ಪು ಹೇಳಿದ :

"ಅಮ್ಮಾ ! ಅಳಬೇಡಮ್ಮಾ ! ಮುಂದೆ ಒಂದು ದಿನ ನಮ್ಮ ರಾಜ್ಯ ಬರ್ತದೆ. ಆಗ, ಹಿರೇ ಮಗನ್ನ ಕಾಣಿಕೆಕೊಟ್ಟ ವೀರಮಾತೇಂತ ನಿನ್ನ ಪೂಜಿಸ್ತಾರೆ !

"ಅಯ್ಯೋ !"

ಮತ್ತೆ ಪಹರೆಯವನ ಧ್ವನಿ :

"ಬುದ್ಧಿ ಇಲ್ಲ ನಿಮಗೆ ?—ನಡೀರಿ !"

ತಂದೆಯ ಸ್ವರ :

"ಬರ್ತೀವಿ ಅಪ್ಪು...."

ಅವರು ಒಲ್ಲದ ಪಾದಗಳನ್ನೆಳೆದುಕೊಂಡು ಹೋದರು. ಬರಲಾರದ ದೃಷ್ಟಿಗಳನ್ನು ಕೀಳುತ್ತ ನಡೆದರು. ಅಪ್ಪು ನಿಂತಲ್ಲೆ ನಿಂತ....

....ಬೆನ್ನು ಬಾಗಿದ್ದ ಬೂಬಮ್ಮ "ಎಲ್ಲಿದ್ದೀಯೋ ?" ಎಂದು ಅಳುತ್ತ ಕರೆಯುತ್ತಲೆ ಕಿರಿಯ ಮಗನೊಡನೆ ಬಂದಳು. ಆಕೆ ಅಪ್ಪುವನ್ನು ನೋಡಿದಳು, ಮುಂದೆ ಚಿರುಕಂಡನನ್ನು ಬಳಿಕ ಕುಞಂಬುವನ್ನು.

"ಬಾ ಅಮ್ಮ ಬಾ" ಎಂದು ಅಬೂಬಕರ್ ಕರೆದ.

ರೋದಿಸುತ್ತಲೆ ಆಕೆ ಕಂಬಿಗಳೆಡೆಯಿಂದ ಕೈಹಾಕಿ ಮಗನ ಮೈದಡವಿದಳು. ಮುಖವನ್ನು, ಮೂಗನ್ನು, ತೋಳುಗಳನ್ನು ಮುಟ್ಟಿ ನೋಡಿದಳು.

"ನಿನ್ನ ತಂದೆ ಹಾಗೆ ಮಾಡ್ದಾಂತ ನೀನು ಒಳಗೆ ಮಾಡಿಟ್ಟು ಹೋಗ್ತೀಯಲ್ಲೊ."

"ಅಳಬೇಡಮ್ಮ. ಅಬ್ದುಲ್ಲ ನಿನ್ನ ಸಾಕ್ತಾನೆ"

ಒಮ್ಮೆಲೆ ಕಿರಿಯಮಗನತ್ತ ತಿರುಗಿ ಬೂಬಮ್ಮ ಅಂದಳು :

"ಅವನು ನನ್ನನ್ನೇನು ಸಾಕ್ತಾನೆ, ಮಣ್ಣು! ನನ್ನ ಮಾತು ಒಂದಾದರೂ ಕೇಳ್ತಾನಾ ಅಂತ ನೀನೆ ವಿಚಾರಿಸು!"

"ಯಾಕೆ ಅಬ್ದುಲ್ಲ? ಅಮ್ಮನ ಮಾತು ಕೇಳಲ್ವೇನೊ?"

ಆ ತಮ್ಮ ಒಲವು ತುಂಬಿದ ದೃಷ್ಟಿಯಿಂದ ಅಣ್ಣನನ್ನು ನೋಡುತ್ತ ರಾಗವೆಳೆದ:

"ಕೇಳ್ತೀನಣ್ಣ. ಆದರೆ ನಾನು ಪುಸ್ತಕ ಓದೋದು ನೋಡಿದ್ರೆ ಅಮ್ಮ ಬೈತಾಳೆ."

ಆ ಪರಿಸ್ಥಿತಿಯಲ್ಲೂ ಅಬೂಬಕರ್‌ಗೆ ನಗುಬಂತು.

"ಒಳ್ಳೇ ಅಮ್ಮ! ಓದಿದರೆ ಬಯ್ಬಹುದಾ?"

ತನಗೆ ಅವಮಾನವಾಯಿತೆಂದು ಬೂಬಮ್ಮನೆಂದಳು :

"ಓದಿದರೆ ಯಾಕೆ ಬಯ್ತೀನಿ ನಾನು? ಓದಿ ಓದಿ ಊರು ಬಿಡಬಾರ್ದೂಂತ ಹೊಟ್ಟೆ ಸಂಕಟಕ್ಕೆ ಏನಾದರೂ ಅನ್ತೀನೆ ಒಮ್ಮೊಮ್ಮೆ."

"ಅದೇನೋ ಸರೀನೆ ಅಮ್ಮ. ಅಬ್ದುಲ್ಲನಿಗೂ ಅಷ್ಟು ಗೊತ್ತಾಗಲ್ವೆ?"

ಬೂಬಮ್ಮ ಅಬ್ದುಲ್ಲನನ್ನು ಬರಸೆಳೆದು ಹಿರಿಯ ಮಗನತ್ತ ನೋಡಿ ಅಂದಳು :

"ನಿನಗೆ ತಿಂಡಿ ತಂದಿದ್ದೆ. ಆದರೆ ಅದನ್ನು ಒಳಗೆ ಬಿಡಲಿಲ್ಲ."

"ನೀನು ಬಂದಿಯಲ್ಲಮ್ಮ. ಅದೇ ಸಾಕು!"

ಆ ಮಾತು ಕೇಳಿದೊಡನೆಯೆ ತಾನು ಬಂದ ಸಂದರ್ಭ ನೆನಪಾಗಿ ಬೂಬಮ್ಮ, ಸಂಕಟ ತಡೆಯಲಾರದೆ ಅಳತೊಡಗಿ ಸರಕಾರವನ್ನು ಶಪಿಸಿದಳು.

ಅಬೂಬಕರ್ ತಾಯಿಯನ್ನು ಸಂತವಿಡುತ್ತ ಹೇಳಿದ :

"ನಾಳೆ ದಿನ ಯಾರಾದರೂ ನಿನ್ನ ದೊಡ್ಡ ಮಗ ಏನಾಗಿದ್ದಾಂತ ಕೇಳಿದರೆ ಏನ್ಹೇಳ್ತೀಯಾ?"

"ನನಗೆ ಗೊತ್ತಿಲ್ವಾ? ಬೀಡಿ ಕೆಲಸಗಾರನಾಗಿದ್ದಾಂತ ಹೇಳ್ತೀನೆ...."

ಹಾಗೆ ಅನ್ನುತ್ತಿದ್ದಂತೆಯೇ ಮಗ ಎಷ್ಟೋ ಸಾರೆ ಕೊಟ್ಟಿದ್ದ ನಿರ್ದೇಶನ ನೆನಪಾಗಿ ಆಕೆಯೆಂದಳು :

"ಸಂಘದ ದಳಕ್ಕೆ ನಾಯಕನಾಗಿದ್ದಾಂತಲೂ ಹೇಳ್ತೀನೆ."

"ಭೇಷ್ ಅಮ್ಮ! ಆಗ ನಿನಗೆ ಜನರು ಗೌರವ ಕೊಡ್ತಾರೆ."

ತಾಯಿ ಮಗನಿಗೊಂದು ಗುಟ್ಟು ಹೇಳಿದಳು :

"ಈಗಲೂ ಹಾಗೇ ಕಣೋ. ಮೊದಲು ಬೂಬಮ್ಮನ್ನ ಯಾರು ಮಾತಾಡಿಸ್ತಿದ್ರು? ಈಗ ಎಲ್ರೂ ಸುಖದುಃಖ ವಿಚಾರಿಸ್ತೋರೆ....ಆದರೂ ನೀನು ಅವರ ಕೈಗೆ ಸಿಗಬಾರ್ದಿತ್ತು ಮಗ...."

"ನಾನು ಯಾವಾಗಲೂ ನಿನ್ನ ಪಕ್ಕದಲ್ಲೇ ಇರ್‍ತೀನೀಂತ ಯೋಚಿಸ್ಕೋಮ್ಮ."

ಅಬ್ದುಲ್ಲ ಅಣ್ಣನಿಗೆ ಹೇಳಿದ :

"ಅಮ್ಮ ಎಷ್ಟೋ ಸಲ ನನ್ನನ್ನೇ ಅಬೂಬಕರ್ ಅಂತ ಕೂಗ್ತಾಳೆ."

"ಹೌದಾ ! ನೀನು ಜಾಣ. ಅಮ್ಮನ್ನ ಬಿಟ್ಟರ್ಬೇಡ."

"ಹೂಂ ಅಣ್ಣ."

ಮತ್ತೆ ಹೊತ್ತಾಯಿತೆಂಬ ಆಕ್ರೋಶ.

"ಹೋಗ್ತಾ ಅಪ್ಪು, ಕುಞಂಬು, ಚಿರುಕಂಡ ಎಲ್ಲರನ್ನೂ ಮಾತಾಡಿಸ್ಕೊಂಡು ಹೋಗಮ್ಮ."

"ಹೂಂ. ಅಂತೂ ನನಗೀ ಗತಿ ತಂದಿಟ್ಟೆಯಲ್ಲೋ !"

ಅಳುತ್ತ ಬೂಬಮ್ಮ ಕುಞಂಬುವನ್ನು ನೋಡಿದಳು. ಚಿರುಕಂಡನ ಗುರುತು ಹಿಡಿದಳು, ಅಪ್ಪುವಿನ ಬಳಿ ನಿಂತು ಅಂದಳು :

" ನನ್ನ ಮಗ ಇನ್ನೂ ಚಿಕ್ಕೋನು. ಅವನಿಗೇನೂ ತಿಳೀದು. ಅವನನ್ನ ಯಾವ ಹೊತ್ತಿನಲ್ಲೂ ಬಿಟ್ಟರ್ಬೇಡೀಪ್ಪಾ........"

ಆಕೆ ಹೋಗುತ್ತಿದ್ದಂತೆ ಕಂಪಿಸುತಿದ್ದ ಧ್ವನಿಯಲ್ಲಿ ಅಪ್ಪು ಚಿರುಕಂಡನಿಗೆ ಹೇಳಿದ:

" ಒಬ್ಬೊಬ್ಬರ್ನ್ನೆ ಬಿಡ್ತಾರೆ, ಸರ್ಕಸ್ನಲ್ಲಿ ಮಾಡೋಹಾಗೆ. ಒಂದೇ ಸಲ ಅವರ್ನೆಲ್ಲ ಕಳಿಸಿದ್ರೆ ಏನಾಗ್ತಿತ್ತೋ ?"

ಬರುತಿದ್ದವರು ಯಾರೆಂಬುದನ್ನು ನೋಡುತ್ತ ಚಿರುಕಂಡ ಹೇಳಿದ :

" ನನ್ನ ತಾಯಿಯನ್ನೊಮ್ಮೆ ಸಮಾಧಾನಪಡಿಸಿ ಕಳಿಸಿದರೆ ಸಾಕು. ಇವರು ಅಳೋದನ್ನ ನೋಡ್ತಿರೋದು ಎಂಥಾ ಹಿಂಸೆ !"

ಬಂದವರು ಕುಞಂಬುವಿನ ತಂದೆ-ತಾಯಿ ಮತ್ತು ಹೆಂಡತಿ ಶ್ರೀದೇವಿಯಮ್ಮ.

ಮತ್ತೆ ಅದೇ ರೋದನ—ಮೌನವಾಗಿ ಮತ್ತು ಗಟ್ಟಿಯಾಗಿ.

" ಅಣ್ಣ ಚೆನ್ನಾಗಿದಾನಾ ಅಪ್ಪಾ ?"

" ಹೂಂ ಕುಞಂಬು. ನಿನ್ನಣ್ಣ, ಬಂದ ಸ್ವಲ್ಪ ದಿವಸ ಸಪ್ಪಗಿದ್ದ. ಈಗ ಹುಷಾರಾಗಿದಾನೆ. ನಿನ್ನ ತಮ್ಮನಿಗೆ ಮುಂದಿನ ತಿಂಗಳು ಪರೀಕ್ಷೆ."

" ನಾರಾಯಣನನ್ನೂ ನೀಲೇಶ್ವರಕ್ಕೆ ಕಳಿಸ್ಬೇಕಪ್ಪ. ಅವನು ತುಂಬಾ ಚುರುಕು. ಅವನನ್ನ ಹೇಗಾದರೂ ಮಾಡಿ ಕಾಲೇಜಿನಲ್ಲೂ ಓದಿಸ್ಬೇಕು."

ಅಳುತ್ತಲಿದ್ದ ತಾಯಿ ಹೇಳಿದಳು :

" ನಿನ್ನ ಹೆಂಡತಿಗಿಷ್ಟು ಹೇಳಪ್ಪ, ಆಕೆ ಒಂದು ದಿನವಾದರೂ ಸರಿಯಾಗಿ ಊಟ ಮಾಡಿದ್ದರೆ...."

ಶ್ರೀದೇವಿ ಭೂಮಿ ನೋಡುತ್ತಾ ಕಾಲಿನ ಉಗುರಿನಿಂದ ನೆಲದಮೇಲೆ ಗೆರೆ ಎಳೆಯುತ್ತಾ ಸೆರಗು ಕಚ್ಚಿಕೊಂಡು ಮೌನವಾಗಿ ಅಳುತ್ತಿದ್ದಳು.

ಭಾವವಿಕಾರಗಳನ್ನೆಂದೂ ತೋರಗೊಡದಿದ್ದ ಕುಞಂಬು ಹೇಳಿದ :

೧೧

"ಅತ್ತೆ ಮನಸ್ಸು ನೋಯಿಸ್ಬೇಡ ಶ್ರೀದೇವಿ."

ಬೇರೇನೋ ಸಂಕಟ ಬಾಧಿಸುತಿದ್ದಂತೆ ತಂದೆ ಹೇಳಿದ :

"ಆಕೆ ಇನ್ನೂ ಚಿಕ್ಕವಳು....

ಹಾಗೆಯೇ ಅತ್ತಿಗೆ ಮತ್ತಿತರರಿಗೆ ಸಂಬಂಧಿಸಿದ ಮಾತುಗಳು, ಹೊಲದ ವಿಷಯ, ಹೋರಿಗಳ ವಿಷಯ.

....ಕಣ್ಣೀರೊರೆಸಿಕೊಂಡು ಹೊರಡುತ್ತ ಅವರೂ ಉಳಿದವರನ್ನು ಮಾತ ನಾಡಿಸಿಹೋದರು....

........ಕೊನೆಯದಾಗಿ ಬಂದುದು ಚಿರುಕಂಡನ ತಂದೆ-ತಾಯಿ ಮತ್ತು ಕೈಹಿಡಿದಾಕೆ.

ಆ ತಾಯಿ, ಮಗನ ಕೈಬೆರಳುಗಳನ್ನು ಬಿಗಿಹಿಡಿದಳು, ಕೂದಲ ಮೇಲೆ ಕೈಯಾಡಿಸಿದಳು, ತನ್ನದೇ ಆದ ಆ ಮಾಂಸದ ತುಣುಕನ್ನು ಮುಟ್ಟಿ ನೋಡಿದಳು. ಆಕೆಯ ಆಕ್ರಂದನವನ್ನು ಚಿರುಕಂಡನಿಗೇನು, ಬಳಿಯಲ್ಲಿದ್ದ ಅಪ್ಪು—ಕುಞಂಬು ಯಾರೂ ಸಹಿಸದೆ ಹೋದರು. ಆವರೆಗೂ ವಿಗ್ರಹದಂತೆ ಎತ್ತಲೋ ದೂರ ನೋಡುತ್ತ ಕುಳಿತಿದ್ದ ಅಧಿಕಾರಿಯೂ ಮಿಸುಕಾಡಿದ. ಪಹರೆಯವನು ಮುಖ ತಿರುಗಿಸಿಕೊಂಡ :

"ಅವರಿಗೆಲ್ಲಾ ಬೇರೆ ಮಕ್ಕಳಿದ್ದಾರೆ. ನನಗೆ ಯಾರಿದಾರೆ ಚಿರೂ ? ಅಯ್ಯೋ ! ನನಗೆ ಯಾರಿದಾರೆ ಇನ್ನು ?"

ವಂಶದ ಕುಡಿಯಾಗಿ ಉಳಿದಿದ್ದುದೊಂದೇ ತುಣುಕು. ಆ ಕುಡಿಯನ್ನೇ ಚಿವುಟಲು ದುಷ್ಟ ಕೈಗಳು ಮುಂದೆ ಬಂದಿದ್ದುವು.

"ಅಳಬೇಡ ಅಮ್ಮ. ನನ್ನ ಬದಲು, ಇನ್ನು ನೂರು ಜನ ನಿನಗೆ ಮಕ್ಕಳು ತೋರಿಸ್ಬೇಕಾದ ಪ್ರೀತೀನ ತೋರಿಸ್ತಾರೆ."

ಆ ಎರಡು ವರ್ಷಗಳ ಅವಧಿಯಲ್ಲಿ ತಲೆಯ ಕೂದಲೆಲ್ಲಾ ನರೆತಿದ್ದ ತಂದೆಯೂ ಸಂತೈಸುತ್ತ ಹೇಳಿದ :

"ಅಳಬಾರದು ಕಲ್ಯಾಣಿ. ಈ ಮಗುವನ್ನು ಕೂಡ ದೇವರು ಕೊಟ್ಟೇ ಇರ್ಲಿಲ್ಲಾಂತ ತಿಳ್ಕೊ."

"ಕಟುಕರು ! ಕಲ್ಲೆದೆಯವರು ! ಹೆತ್ತಕರುಳಿನ ಸಂಕಟ ಗಂಡಸರಿಗೆ ನಿವ್ಗೇನು ಗೊತ್ತಾದೀತು !"

"ಅಮ್ಮಾ...."

ವರುಷಗಳ ಹಿಂದೆ ತಾನು ಬರೆದ ಕರಪತ್ರಗಳನ್ನೋದುತ್ತಿದ್ದ ಹೆಣ್ಣು. 'ಅಪ್ಪು ಅಣ್ಣನ ಕೈಲಿ ಅವತ್ತು ಸೀರೆ ಕಳಿಸಿರ್ಲಿಲ್ವಾ ?' ತನ್ನ ಹೆಂಡತಿ ತನ್ನನ್ನೆ ನೋಡುತ್ತಿದ್ದ ಎರಡು ಕಣ್ಣುಗಳು.

ಆಕೆಯೆಂದಳು :

"ಅಣ್ಣ ನಿಮಗೆ ರಕ್ತನಮಸ್ಕಾರ ತಿಳಿಸಿದ್ದಾನೆ."

ಆಕೆಯೇ ಅಲ್ಲವೆ ಆ ಮಾತನ್ನಾಡಿದ್ದು? ತನ್ನ ಹೆಂಡತಿ ಬರೇ ಮುಗ್ಧೆ ಎಂದು ಒಂದೊಂದು ಸಾರೆ ಅಂದುಕೊಂಡಿದ್ದ ಚಿರುಕಂಡ....ಅದು ತಪ್ಪುಕಲ್ಪನೆ. ಇಲ್ಲಿ ಆಕೆಯನ್ನು ತಾನು ಸಮಾಧಾನಪಡಿಸುತ್ತಿರಲಿಲ್ಲ. ಅವಳು ತನಗೆ ಹೊಸ ಶಕ್ತಿ ನೀಡುತ್ತಿದ್ದಳು....

"ಚಂದು ಪುನಃ ಅಂಗಡಿ ಇಟ್ಟಿದಾನಾ?"

"ಹೂಂ. ಮೊದಲಿನ ಹಾಗೇ...."

ಮೊದಲಿನ ಹಾಗೆಯೆ! ಆ್ಹ! ತನ್ನಾಕೆ ಆಡಿದ ಮಾತು. ನಿಜವಾಗಿಯೂ ಈಕೆಯ ಜತೆಗಾರನಾಗುವ ಯೋಗ್ಯತೆ ತನಗಿತ್ತೆ? ಬದುಕಿನ ಉದ್ದಕ್ಕೂ ಇಂತಹ ಜತೆಗಾರ್ತಿಯನ್ನು ಪಡೆಯುವಾತ ಎಷ್ಟು ಸುಖಿ!

ತಾಯಿ ರೋದಿಸುತ್ತಲೇ ಇದ್ದಳು:

"ಅಯ್ಯೊ! ಅಯ್ಯೊ ಚಿರೂ! ಅಯ್ಯೋ ಕಂದಾ!"

"ಅಮ್ಮಾ, ಅಳಬಾರದು! ನನಗೆ ಸಂಕಟವಾಗ್ತದೆ. ನಾನೂ ಅಳ್ಲೇನು? ಇಕೋ, ಇವತ್ತಿನಿಂದ ಈಕೇನ ನಿನ್ನ ಮಗಳೂಂತ ಭಾವಿಸಿ ನೋಡ್ಕೋ....ಅವಳ ಸುಖವೇ ನನ್ನ ಸುಖ ಅಂತ—"

ಮಾತು ಕಡಿಯಿತು. ಎರಡು ವರ್ಷಗಳ ಕಾಲವೆಲ್ಲ 'ಹೀಗಾದರೆ' 'ಹಾಗಾದರೆ' ಎಂದು ಮನಸ್ಸನ್ನು ಕವಡಿದ್ದ ಯೋಚನೆ, ಏನು ಹೇಳಬೇಕೆಂದು ಮಾಡಿದ ನಿರ್ಧಾರ ಯೋಗ್ಯವಾಗಿಯೇ ಇದ್ದುವು. ಆದರೆ ಆಡಬೇಕಾದ ಹೊತ್ತಿನಲ್ಲಿ ಸ್ವರವೇ ಕೈ ಕೊಟ್ಟಿತು.

ತಂದೆ ಕೇಳಿದ:

"ದಿನ ಗೊತ್ತಾಯ್ತಾ?"

"ಇನ್ನೂ ಇಲ್ಲ."

"ಗೊತ್ತಾದ ತಕ್ಷಣ ಹೇಳಿ ಕಳಿಸು. ಇನ್ನೊಮ್ಮೆ ಬರ್ತೇವೆ."

ಇನ್ನು ಬರುವುದು ಬೇಡವೆನ್ನಬೇಕೆಂದಿದ್ದ ಚಿರುಕಂಡ. ಆದರೆ, ಹಾಗೆ ಹೇಳಿದರೆ ಅವರಿಗೆಲ್ಲ ನೋವಾಗಬಹುದೆಂದು, ಆತ ಸುಮ್ಮನಾದ.

ಕುಳಿತಿದ್ದ ಅಧಿಕಾರಿ ಎದ್ದು, ನೇರವಾಗಿ ಬೇರೆ ಕಡೆ ನೋಡಿದ. ಪಹರೆಯವನ ಅನುಜ್ಞೆ ಬಂತು:

"ಇನ್ನು ಹೊರಡಿ!"

ಕೈಯನ್ನು ಅದುಮಿದ ಅಂಗೈ. ತಾವರೆ ಹೂವಿನ ಮೇಲೆ ಬೆಳ್ಳಿನೀರು ನಿಂತ ಹಾಗೆ ಕಣ್ಣುಗಳಲ್ಲಿ ಕಂಬನಿ.

ಆ ತಾಯಿಗೋ—ಬವಳಿ ಬಂತು. ಆಕೆಯ ಆಜೀವ ಒಡನಾಡಿಯಾದ ಗಂಡನು ಆಧಾರವಾದ. ಸೊಸೆಯೂ ತೋಳಿಗೆ ಭುಜ ಕೊಟ್ಟಳು.

"ಬರ್ತೀವಿ ಚಿರೂ........ಬರ್ತೀವಿ ಅಪ್ಪೂ. ಕುಞಂಬು - ಅಬೂಬಕರ್ ಬರ್ತೀವಪ್ಪಾ."

ಕೊನೆಯ ಕೊಠಡಿಯಿಂದ, ಅಬೂಬಕರನ ಒಡೆದು ಬಿರುಕುಬಿಟ್ಟಿದ್ದ ಸ್ವರ :

ಕಯ್ಯೂರಿನವರಿಗೆಲ್ಲ ನಮ್ಮ ರಕ್ತನಮಸ್ಕಾರ ಹೇಳಿ ಸಂಗಾತಿ! ನಾವು ಬದುಕಿದ್ದು ಯಾಕೆ, ಸಾಯ್ತಿರೋದು ಯಾಕೇಂತ, ಯಾರೂ ಮರೀಬಾರದೂಂತ ಹೇಳಿ."

"ಹೇಳ್ತೀವಪ್ಪಾ—"

ಮತ್ತೆ ಚಿರುಕಂಡನಿಗೋಸ್ಕರವೇ ಕೊನೆಯ ನೋಟಗಳು....

....ಆ ಸಂದರ್ಶನವಾದ ಮೇಲೆ ನೆಲೆಸಿದ ಮೌನ ಕ್ರೂರವಾಗಿತ್ತು. ತಮ್ಮ ಸುತ್ತಲೂ ಕಾಲದ ಜೇಡ ಹೆಣೆಯುತ್ತಿದ್ದ ಕರಿಯ ಬಲೆಗಳನ್ನು ಆ ನಾಲ್ವರೂ ಒಂದಾಗಿ ಮತ್ತೆ ತೊಡೆದರು. ಒಂದೊಂದು ಕೊಠಡಿಯಿಂದಲೂ ಮಾತಿನ ಸ್ವರ ಹೊರಟಿತು.

....ಆ ದಿನ ಕಳೆದು ಒಂದು ವಾರವಾದಾಗ ಜೇಲಿನ ಅಧಿಕಾರಿಯಿಂದ ಅವರಿಗೆ ಸೂಚನೆ ಬಂತು :

ಮಾರ್ಚ್ ೨೯ರಂದು ಮರಣದಂಡನೆ....

"ಯಾವ ವಾರ ಇವತ್ತು ?"

"ಓ ! ಇನ್ನು ಎರಡೇ ದಿನ !"

"ಎರಡು ದಿನ ಎರಡು ನಿಮಿಷದ ಹಾಗೆ ಕಳೀಬಾರದೆ !"

"ನನ್ನ ಮನಸ್ಸಿಗೆ ಈಗ ಸಮಾಧಾನವಾಗಿದೆ !"

೧೦

ಸಂಜೆ ಸೂರ್ಯ ಮುಳುಗುತ್ತಿದ್ದ. ಆ ರಾತ್ರಿ ಕಳೆದು ಬೆಳಗಾದರಾಯಿತು. ಡಿಕ್-ಡಿಕ್-ಡಿಕ್-ಅದು ಜೇಲರನ ಬೂಟುಗಾಲಿನ ಸಪ್ಪಳ.

"ನಿಮ್ಮ ರಾತ್ರೆಯ ಊಟಕ್ಕೆ ಏನು ಬೇಕು ಹೇಳಿ ?"

"ರಾತ್ರೆಯ ಊಟಕ್ಕೆ ?"

"ನಿಮಗೆ ಏನೇನು ಇಷ್ಟವೋ ಅದನ್ನೆಲ್ಲಾ ಮಾಡಿಸ್ತೇವೆ."

"ನಮಗೇನೂ ಬೇಕಾಗಿಲ್ಲ."

"ನಿಮ್ಮ ಕೊನೆಯ ಆಸೆಯೇನು ? ನಡೆಸಿಕೊಡ್ತೇವೆ."

ಏನಪ್ಪು ? ಏನು ಕುಞಂಬು ? ಅಬೂಬಕರ್ ಹೇಳಿ. ನಮ್ಮ ಕೊನೇ ಆಸೆ ಹೇಳಿದರೆ ನಡೆಸಿಕೊಡ್ತಾರಂತೆ !"

ಅಬೂಬಕರ್‌ನ ನಗೆ. ವ್ಯಂಗ್ಯ ಧ್ವನಿ :

"ಸಾಮ್ರಾಜ್ಯಶಾಹಿ ನಾಶವಾಗೋದನ್ನ ನೋಡಿ ಸಾಯ್ಬೇಕೂಂತ ನಮ್ಮ ಆಸೆ. ನಡೆಸಿಕೊಡ್ತಾರಾ ಕೇಳು ಚಿರುಕಂಡ !"

"ಆಹ್ಹಾ !"

ಆದರೂ ಅಪ್ಪು ಚಿರುಕಂಡರನ್ನು ಒಂದು ವಿಷಯ ಕಾಡುತಿತ್ತು :

ಮಾಸ್ತರು........ಮಾಸ್ತರನ್ನು ಕಾಣುವುದು ಸಾಧ್ಯವಾದರೆ ?

ಇದೊಂದು ಆಸೆಯಿದೆ ಕುಞಂಬು. ಕೇಳೋಣವೇ ಅಬೂಬಕರ್ ?"

"ಕೇಳು ಸಂಗಾತಿ."

"ಜೇಲರೆ, ನಮಗೆಲ್ಲ ಇರುವುದೊಂದೇ ಆಸೆ. ನಮ್ಮ ಮಾಸ್ತರೊಡನೆ ಭೇಟಿ ಏರ್ಪಾಟು ಮಾಡಿ."

ಸೆರೆಮನೆಯ ನಿಯಮಗಳು....

"ಆತ ಕೈದಿ. ಅದು ಸಾಧ್ಯವಿದೆಯೋ ಇಲ್ಲವೋ....ಸೂಪರಿಂಟೆಂಡೆಂಟರನ್ನ ಕೇಳ್ತೀನೆ."

o o o o o

ಎರಡು ಜತೆ ಬೂಟುಗಳ ಸದ್ದು. ಮತ್ತೆ ಯಾರು ? ಸೂಪರಿಂಡೆಂಟರೆ ಬಂದರೆ ?

ಅವರು ಬಂದೂಕುಧಾರಿಗಳಾದ ಪಹರೆಯವರು. ನಡುವೆ ಮಾಸ್ತರು. ಒಂದೊಂದು ಕೈಗೂ ಒಂದೊಂದು ಸರಪಳಿ...:

ನಾಲ್ವರೂ ಎದ್ದು ನಿಂತರು ತರಗತಿಯ ವಿದ್ಯಾರ್ಥಿಗಳ ಹಾಗೆ.

ಜೇಲರು ಬಂದು ಹೇಳಿದ :

"ಭೇಟಿಗೆ ಸಮ್ಮತಿ ಕೊಟ್ಟಿದ್ದಾರೆ. ಆದರೆ ಹೆಚ್ಚು ತಡ ಮಾಡ್ಬೇಡಿ !"

ಕಂಪಿಸುತಿದ್ದ ಧ್ವನಿಯಲ್ಲಿ ಚಿರುಕಂಡನೆಂದ :

"ನೀವೆಲ್ಲಾ ಸ್ವಲ್ಪ ದೂರ ಹೋಗ್ತೀರಾ ?"

"ಸಾರಿ. ಭೇಟಿಯ ಸಮಯದಲ್ಲಿ ನಾವಿಲ್ಲೇ ಇರ್ಬೇಕೂಂತ ಆಜ್ಞೆಯಾಗಿದೆ."

ಅಬೂಬಕರ್ ಸಿಡಿದು ನುಡಿದ :

"ಗೋಪ್ಯವಾಗಿ ನಾವು ಇಷ್ಟರಲ್ಲೇ ಇನ್ನೊಂದು ಒಳಸಂಚು ನಡೆಸ್ಬಹುದೂಂತ ಭಯ, ಅಲ್ಲ ?"

"ಇರಲಿ ಬಿಡು ಅಬೂಬಕರ್...."

ಮಾಸ್ತರು ಆ ನಾಲ್ಕು ಕೊಠಡಿಗಳ ಎದುರು ನಿಂತು ಆ ನಾಲ್ವರನ್ನೂ ನೋಡಿದರು. ಮುಗುಳುನಗಲು ಯತ್ನಿಸಿದರು.

ಮಾತು – ಮಾತನಾಡಬೇಕು. ಭೇಟಿಯಿರುವುದು ಸಂಭಾಷಣೆಗೋಸ್ಕರ ಅದರಲ್ಲೂ ಕೊನೆಯ ಭೇಟಿ.

ಆದರೆ ನಿಮಿಷಗಳು ಸದ್ದಿಲ್ಲದೆಯೆ ಉರುಳಿದುವು.

ಮಾಸ್ತರ ಆಪ್ತಶಿಷ್ಯನಾಗಿದ್ದ ಚಿರುಕಂಡನೆಂದ :

"ನಾಳೆ ಬೆಳಗ್ಗೆ ನಾವೆಲ್ಲಾ ಹೋಗ್ತೀವಿ ಸಾರ್."

ಪ್ರಿಯಶಿಷ್ಯನಾದ ಅಪ್ಪುವೆಂದ :

" ನಮ್ಮನ್ನ ಮರಿಬೇಡಿ ಸಾರ್."

ಆ ಮಾತುಗಳಿಗೆ ಕಿವಿಗೊಡುವುದು ತಡೆಯಲಾಗದ ಸಂಕಟ. [ಯಾಕಾದರೂ ಈ ಹುಡುಗರು ಇಂತಹ ಭೇಟಿ ಬೇಕೆಂದರೊ? ಇನ್ನು ಆ ಕುಞಂಬು-ಅಬೂಬಕರ್ ....ಒಬ್ಬರ ಮುಖದಿಂದೊಬ್ಬರ ಮುಖವನ್ನು ಮಾಸ್ತರು ನೋಡುತ್ತಲೇ ನಿಂತರು.

ಇಲ್ಲ, ಮಾತನಾಡುವುದೇನೂ ಇರಲಿಲ್ಲ. ಮಾತು ಸಾಧ್ಯವಿರಲ್ಲ.

ಇನ್ನೂ ಒಂದು ನಿಮಿಷ ತಡವಾದರೆ ಅಳಲಿನ ಕಟ್ಟು ಒಡೆಯಬಹುದು. ಅದು ಸರಿಯಲ್ಲ, ಅಂತಹ ಬೀಳ್ಕೊಡುಗೆ ಸರಿಯಲ್ಲ.

ಏನನ್ನೋ ಆಡಬೇಕೆಂದು ಮಾಸ್ತರೆಂದರು :

"ಅಪ್ಪು—ಚಿರುಕಂಡ, ಎಲ್ಲಾ ಜತೇಲೇ ಇರೀ,..........ಕುಞಂಬು—ಅಬೂಬಕರ್."

"ಇರ್ತೇವೆ, ಜತೆಯಾಗೇ ಇರ್ತೇವೆ."

ಇನ್ನು ಅಲ್ಲಿಂದ ಹೊರಡುವುದೇ ಮೇಲೆಂದು ಸರಪಳಿ ಬಿಗಿದಿದ್ದ ಬಲಗೈಯ ನ್ನೆತ್ತಿ ಬಿಗಿ ಮುಷ್ಟಿಯ ವಂದನೆ ಕೊಡುತ್ತ ಮಾಸ್ತರೆಂದರು :

"ರಕ್ತನಮಸ್ಕಾರ ಬಾಂಧವರೇ !"

"ರಕ್ತನಮಸ್ಕಾರ ಸಾರ್ ! ರಕ್ತನಮಸ್ಕಾರ ಸಂಗಾತಿ !"

ಕೊನೆಯ ಆಸೆಯ ಭೇಟಿ ಹಾಗೆ ಮುಗಿಯಿತು.

o o o o o o

ಕಾರಿರುಳು. ಕೊಠಡಿಗಳ ಹೊರಗೆ ನಕ್ಷತ್ರರಾಶಿ ಬೀರಿದ ಮಬ್ಬು ಬೆಳಕು. ಆಗಾಗ್ಗೆ 'ಆಲ್-ಬೆಲ್' ಕೂಗು. ಪಹರಿ ಗಂಟೆ ಹೊಡೆಯುತಿದ್ದಾನೆ. ಎಂಟು, ಒಂಭತ್ತು, ಹತ್ತು....

ನಿದ್ದೆಗೆ ಆ ರಾತ್ರೆ ಅಲ್ಲಿ ಕೆಲಸವಿರಲಿಲ್ಲ. ಘಳಿಗೆ ಬಟ್ಟಲು ಸ್ವಲ್ಪ ಸ್ವಲ್ಪವಾಗಿಯೇ ಬರಿದಾಗುತ್ತಿದೆ. ಆದರೂ ಅವರ ವಿಚಾರಗಳು ಲೋಕ ಸಂಚಾರಮಾಡುತ್ತಿವೆ. ಕಯ್ಯೂರು-ಕಯ್ಯೂರಿನಿಂದ ಸ್ಟಾಲಿನ್‌ಗ್ರಾಡಿಗೆ; ಅಲ್ಲಿಂದ ಲಂಡನಿಗೆ,—ದಿಲ್ಲಿಗೆ....

"ಚಿರುಕಂಡ, ಕುಞಂಬು ಏನ್ಮಾಡ್ತಿದಾನೆ?ಮಾತಾಡು ಅನ್ನು ಅಬೂಬಕರ್‌ಗೆ"

"ಏನನ್ನ ಮಾತಾಡ್ಬೇಕಂತೆ ?"

"ಏನಾದರೂ...."

ಬಾಲ್ಯಕ್ಕೆ ಸಂಬಂಧಿಸಿದ ಯಾವುದೋ ವಿಷಯ, ಯಾವುದೋ ನೆನಪು.

ಚಿರುಕಂಡನ ಮನಸ್ಸು, ರೈತ ಸಮ್ಮೇಳನ ಏರ್ಪಡಿಸಲು ತಾವು ಸಿದ್ಧತೆ ಮಾಡುತಿದ್ದ ದಿನಗಳನ್ನು ಕುರಿತು ಯೋಚಿಸುತ್ತಿದೆ. ಆ ಸುಬ್ಬಯ್ಯ....ಆತನಿಗೂ ಹೆಂಡತಿ ಮಕ್ಕಳಿದ್ದವಂತೆ, ಆದರೆ ಆತ ಪರಕೀಯ ಸರಕಾರದ ಕಾವಲು ನಾಯಿ ಯಾಗಿದ್ದ. ನಾಯಿಯಂತೆ ಸತ್ತ. ತಾವು ಆತನನ್ನು ಕೊಲ್ಲಲಿಲ್ಲ. ಆದರೆ ಆ

ಸಾವಿನ ನೆಪ ಹೇಳಿ ತಮ್ಮ ಕೊಲೆಗೆ ಏರ್ಪಾಟಾಗಿದೆ ಕುಞಂಬು....ಸಂಘದ ಕಟ್ಟಡಕ್ಕೆ ಆತ ಹಿಂದೆ ಜಾಗ ಕೊಟ್ಟುದಕ್ಕೆ ಈಗ ತೆರಬೇಕಾಗಿ ಬಂದಿರುವ ಬೆಲೆ ಎಂಥದು! ಅಬೂಬಕರ್ ತನ್ನ ಸ್ವಂತದ ವಿಷಯ ಒಮ್ಮೆಯಾದರೂ ಆತ ಯೋಚಿಸಿದ್ದನೋ ಇಲ್ಲವೋ....

ನರಳುವ ಹಾಗೆ ಆಗುತ್ತಿದೆ ಅಪ್ಪುವಿಗೆ:

"ಯಾಕೆ ಅಪ್ಪು? ಏನಾಗ್ತಿದೆ ಅಪ್ಪು?"

"ಏನೂ ಇಲ್ಲ....ಏನೂ ಇಲ್ಲ....?"

ತಾವು ಯಾರೂ ಇನ್ನು ಸಪ್ಪೆ ಮುಖ ಹಾಕಬಾರದು. 'ವೀರರ ಹಾಗೆ ಗಲ್ಲಿಗೇರಿದರು ಎಂದು ನಾಳೆಯ ಇತಿಹಾಸಕಾರ ಬರೆಯಬೇಕು.

"ನನಗೊಂದು ಕೊರಗು ಚಿರುಕಂಡ."

"ಏನಪ್ಪು?"

ನಾವು ನಾಲ್ಕು ಜನರಲ್ಲಿ ಹಾಡೋರೂ ಒಬ್ಬರೂ ಇಲ್ಲ....ಇದ್ದಿದ್ದರೆ ಹಾಡು ಹೇಳ್ತಾ ಗಲ್ಲಿಗೇರಿಸುವಲ್ಲಿಗೆ ಹೋಗ್ಬಹುದಿತ್ತು...."

"ಈಗ ಜಯಘೋಷ ಮಾಡ್ತಾ ಹೋಗೋಣವಂತೆ."

ಕುಞಂಬುವಿಗೆ ಒಡಹುಟ್ಟಿದವರ ನೆನಪಾಗುತ್ತಿದೆ. ಬಳಿಕ ಸಹಸ್ರ ಸೋದರರ—ರಾಷ್ಟ್ರದ ಕೋಟಿ ಸೋದರರ ನೆನಪು. ಇನ್ನೊಮ್ಮೆ ಅವಕಾಶ ದೊರೆತರೆ ಇದನ್ನೇ ತಾವು ಮಾಡುವುದು; ಮತ್ತೂ ಇದೇ ಹಾದಿಯನ್ನೇ ತಾನು ತುಳಿಯುವುದು.

ಅಬೂಬಕರ್‌ಗೆ ಕುಟ್ಟಿಕೃಷ್ಣನ ಚಿತ್ರ ಕಣ್ಣೆದುರಿಗೆ ಕಟ್ಟುತ್ತಿದೆ. 'ಸಂಗಾತಿ' ಎನ್ನುವುದು ಸಾಲದೆಂದು 'ಅಣ್ಣಾ ಎಂದೂ ಆತ ತನ್ನನ್ನು ಕರೆಯುತ್ತಿದ್ದ....ನಾಳೆ ದೇಶ ಸ್ವತಂತ್ರವಾದಾಗ ಜನರಾಜ್ಯ ಬಂದಾಗ ಆತ ಬಿಡುಗಡೆ ಹೊಂದಿ ಕಯ್ಯೂರಿಗೆ ಮರಳುವ; ಬಾಲ ಸಂಘದ ಬದಲು ಸ್ವಯಂಸೇವಕಪಡೆಗೇ ಆತ ನಾಯಕನಾಗುವ.

"ಚಿರುಕಂಡ, ಮೀನು ಕಚ್ತದೇಂತ ನೀನು ನೀರಿಗಿಳೀದೆ ದಡದ ಮೇಲೇ ಕೂತಿರ್ತಿದ್ದೆ—ನೆನಪಿದೆಯಾ?"

"ಹೂಂ."

....ನಡುರಾತ್ರೆ ಕಳೆದಿದೆ. ಪಹರೆಯವರು ಅತ್ತಿತ್ತ ಕಂದೀಲು ಹಿಡಿದು ಹೋಗಿ ಬರುತಿದ್ದಾರೆ. ಸುಂಯ್‌ಗುಡುತ್ತಿದೆಯಲ್ಲ ಗಾಳಿ? ಯಾಕೆ, ಯಾರೂ ನಿದ್ರಿಸಿಲ್ಲವೆ? ಮಾಸ್ತರು ಕಣ್ಣ, ಯಾರೂ ನಿದ್ರಿಸಿಲ್ಲವೆ?

ಹಾಡು! ಅವರಿಗೆಲ್ಲ ಪ್ರಿಯವಾದ,ಹಾಡು! ಅವರಿಗೆಲ್ಲ ಪ್ರಿಯನಾದ ಕಣ್ಣ ಹಾಡುತಿದ್ದಾನೆ! ಗಾಳಿಯಲ್ಲಿ ತೇಲುತ್ತ ಬಂದು ಕೊಠಡಿಗಳೊಳಕ್ಕೆ ಅದು ನುಸುಳುತ್ತಿದೆ.

ಅಗೋ, ಬೇರೆ ಕಡೆಗಳಿಂದ! ಎಲ್ಲರೂ ಹಾಡುವವರೇ, ಯಾಕೆ, ಅದು ಕಳ್ಳಕಾಕರಿರುವ ಬರಾಕು ಅಲ್ಲವೆ? ಎಂತಹ ಕಳ್ಳಕಾಕರು? ಅವರಿಗೆ ಇದೊಂದೂ ಅರ್ಥವಾಗುತ್ತಿಲ್ಲವೆಂದೆ? ಅವರಿಗೇನು ಹಾಡಲು ಬರದೆಂದೆ?

ಅದು ಯಾರ ಸ್ವರವೋ ? ಅದು ಯಾರದೊ ? ಯಾರದೋ ಅದು ?

"ಅಪ್ಪು, ಕೇಳಿಸ್ತಿದೆಯಾ ? ಯಾರೂ ಮಲಗಿಲ್ಲ. ನಾವು ಹೊರಡುವ ಹೊತ್ತಿಗೆ ಮುಂಚೆ ಎಲ್ಲರೂ ಎಚ್ಚರವಿದ್ದು ವಿದಾಯ ಹೇಳ್ತಿದಾರೆ...."

"ಹೂಂ...."

ಕುಞಂಬುವಿಗೆ ಭಾವಾವೇಶದಿಂದ ಸಂಕಟವಾಗುತ್ತಿದೆ. ಆತ, ಕತ್ತಲನ್ನು ಬೆದರಿಸಿ ಗುಡುಗುತಿದ್ದಾನೆ :

"ದಲಿತಕೋಟಿಯ ಎಲುಬುಗೂಡಿನ ಮೇಲೆ ಕಟ್ಟಿದ ಈ ಸಾಮ್ರಾಜ್ಯ ಖಂಡಿತ ಪುಡಿಪುಡಿಯಾಗ್ತದೆ ! ಲೋಕದ ಎಲ್ಲಾ ದುಡಿಯುವ ಜನ ವಿಜಯ ಪತಾಕೆ ಹಾರಿಸಿಯೇ ಹಾರಿಸ್ತಾರೆ !"

ಗೊಗ್ಗರ ಸ್ವರದಲ್ಲಿ ಅದೇನನ್ನೋ ಅಬೂಬಕರ್ ಹಾಡತೊಡಗುತ್ತಾನೆ. ಅದು ಗದ್ಯವೊ ? ಪದ್ಯವೊ ? ಲೆಫ್ಟ್-ರೈಟ್ ನಿರ್ದೇಶವೊ ? ನಾಭಿಯಿಂದ ಹೊರಟು ಗಗನವೇರಿದ ಆಲಾಪನೆಯೋ ?

ತನ್ನ ಕೊಠಡಿಯೊಳಗಿಂದಲೆ ಯಾರೊ ಹಾಡಿದಂತಾಗುತ್ತಿದೆ ಅಪ್ಪುವಿಗೆ ಹೆಣ್ಣು ಧ್ವನಿ. ಮಂಜುಳ ಕಂಠ....

"ಓಮನ ಕಿಡಾವೆ...."

ತಾಯಿ !

"ಅಮ್ಮಾ—ಅಮ್ಮಾ...."

"ಅಪ್ಪು—ಏ ಅಪ್ಪು...."

....ಢಣ್, ಢಣ್, ಢಣ್, ಢಣ್....ಇನ್ನೆರಡು ಘಂಟೆ ಹೊತ್ತು.

ಎಚ್ಚತ್ತೇ ಇದೆ ಸೆರೆಮನೆ. ಕೋಳಿ ಕೂಗುತ್ತಿದೆ. ಸರಿಯಾದ ಹೊತ್ತು ಹೌದೋ ಅಲ್ಲವೋ ಆದರೂ ವಾತಾವರಣ ಪ್ರಭಾವಕ್ಕೊಳಗಾಗಿ ಪ್ರಾಕಾರದ ಆಚೆಗಿನ ಮರಗಳಿಂದ ಕಾಗೆಗಳು ಕಾಕಾ ಎನ್ನುತ್ತಿವೆ....

ಮತ್ತೆ ಅದೊಂದೂ ಕೇಳಿಸದ ಹಾಗೆ ಸಹಸ್ರ ಕಂಠಗಳಿಂದ ಹಾಡು ಎಂದೂ ಮುಗಿಯದ ಹಾಡು.

ತಣ್ಣನೆಯ ಗಾಳಿ. ಉಷೆ ಬರುತಿದ್ದಾಳೆ, ಅವರ ಪಾಲಿಗೆ, ಕೊನೆಯು ಬಾರಿಗೆ. ಆದರೆ ಅದೇಕೋ ಆಕೆ ಅವಕುಂಠನವತಿ ಈಗ. ಉಟ್ಟಿರುವುದು ಕರಿಯ ಸೀರೆ.

ಚಿರುಕಂಡ ಎದ್ದುನಿಂತು ಹೇಳಿದ :

"ಸಂಗಾತಿಗಳೇ ! ಏಳಿ ! ಬೆಳಗಾಯ್ತು....!"

ಸಶಸ್ತ್ರದಳ ಬೆಂಗಾವಲಿಗೆ, ಜೇಲರು, ಮೇಲಧಿಕಾರಿ, ಜಿಲ್ಲೆಯ ಕಲೆಕ್ಟರು....

"ಮಾರ್ಚ್ !"

ಆ ನಾಲ್ವರನ್ನು ಮುಂದಕ್ಕೆ ನಡೆಸಿದರು, ದೃಢವಾಗಿತ್ತು ಅವರೆಲ್ಲರ ನಡಿಗೆ.

"ಹಾಲ್ಟ್ !"

ಜೇಲಿನ ಅಧಿಕಾರಿ ಕೈಗಡಿಯಾರ ನೋಡಿದ ಇನ್ನೈದು ನಿಮಿಷ.

ಬೇಡಿಗಳನ್ನು ಬಿಚ್ಚಿದರು. ಕೆಳಗಿನಿಂದ ಅವರನ್ನು ವಧಸ್ಥಾನಕ್ಕೆ ಒಯ್ಯ ಬೇಕಿನ್ನು.

ಆಗ ಚಿರುಕಂಡ ನಿರ್ಭೀತವಾದ ಏಕಪ್ರಕಾರದ ಧ್ವನಿಯಲ್ಲಿ ಹೇಳಿದ :

"ಮೈ ಮುಟ್ಟಬೇಡಿ. ನ ವೇ ಮೇಲಕ್ಕೆ ಹೋಗ್ತೇವೆ !"

"ಹೋಗಲಿ ಬಿಡಿ", ಎಂದರು ಕಲೆಕ್ಟರು.

ಸಂದರ್ಭ ಬಂದರೆ ಸಿದ್ಧರಾಗುವುದೇ ಮೇಲೆಂದು ಸಶಸ್ತ್ರ ದಳದ ಒಂದು ಸಾಲಿನವರು ಬಂದೂಕು ಗುರಿ ಇಟ್ಟು ನಿಂತರು.

ಇನ್ನೂ ಎರಡು ನಿಮಿಷ.

ಸೆರೆಮನೆಯೊಳಗಿನ ಜನಯೋಧರ ಗೀತ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತ ಕೇಳಿಬಂತು.

೦ ೦ ೦ ೦

ಕಲೆಕ್ಟರು ಮುಖದ ಮೇಲೆ ಸಿಡುಕು ಭಾವ ತೋರಿದರು, ಅಧಿಕಾರಿ ಕೈಗಡಿಯಾರವನ್ನೇ ನೋಡಿದ.

ಕೆಳಗೆ ಕಂದಕ. ಅದಕ್ಕೆ ಆನಿಸಿ ನಾಲ್ಕು ಹಲಿಗೆಗಳು, ಮೇಲುಗಡೆ ತೂಗಾಡುತ್ತಿದ್ದ ಉರುಳುಗಳು.

"ಮುಖಗಳಿಗೆ ಮುಸುಕು ಹಾಕಿ !"

"ಇಲ್ಲ, ನಮಗೆ ಮುಸುಕು ಬೇಕಾಗಿಲ್ಲ !"

ಉರುಳು ಒಂದೊಂದು ಕೊರಳಿಗೂ ಆಭರಣವಾಯಿತು.

ಉಚ್ಚ ಕಂಠದಿಂದ ಚಿರುಕಂಡ ಕೂಗಿದ :

"ಇಂಕ್ವಿಲಾಬ್—"

ಅಪ್ಪು, ಕುಞಂಬು, ಅಬೂಬಕರ್ ಉತ್ತರವಿತ್ತರು :

"ಜಿಂದಾಬಾದ್ !"

"ಸಾಮ್ರಾಜ್ಯಶಾಹಿ—"

"ನಾಶವಾಗಲಿ !"

"ಕ್ರಾಂತಿಗೆ—"

"ಜಯವಾಗಲಿ !"

ಅಧಿಕಾರಿ ಸನ್ನೆ ಮಾಡಿದ. ಉರುಳುಗಳು ಕತ್ತನ್ನು ಹಿಸುಕಿದವು ; ಹೊರಡಲು ಸಿದ್ಧವಾಗಿದ್ದ ಸ್ವರಗಳನ್ನು ತಡೆದುವು. ಹಲಿಗೆಗಳನ್ನು ಅರೆ ಕ್ಷಣದಲ್ಲಿ ತಪ್ಪಿಸಿದ್ದಾಯಿತು. ಆ ನಾಲ್ಕು ದೇಹಗಳೂ ಕಂದಕದಲ್ಲಿ ತೂಗಾಡಿದುವು. ಉರುಳು ಮತ್ತಷ್ಟು ಮತ್ತಷ್ಟು ಬಿಗಿಯಾಯಿತು.

"ಸಾಯುವವರೆಗೂ ನೇಣು...."

ತೂಗಾಡುತಿದ್ದ ಜೀವಗಳಿಂದ ಸ್ವರ ಹೊರಡಲಿಲ್ಲ. ಆದರೆ ಸೆರೆಮನೆಗೆ ಸೆರೆಮನೆಯೇ ಘೋಷಗಳಿಂದ ಪ್ರತಿಧ್ವನಿಸಿತು.

ಬೆಳಗಾಗಿತ್ತು. ಸೂರ್ಯ ತೋರಿಸಿಕೊಳ್ಳಬೇಕಾದ ಹೊತ್ತು. ಆದರೂ ಯಾಕೋ ಅವನ ಸುಳಿವಿರಲಿಲ್ಲ.

ಅಧಿಕಾರಿ ಪಿಸುದನಿಯಲ್ಲಿ ಹೇಳಿದ :

"ವಾರಸುದಾರರು ಶವಗಳಿಗಾಗಿ ಕಾದಿದ್ದಾರೆ."

"ಅವರಿಗೆ ಹ್ಯಾಗೊ ತಿಳೀತು ?"

"ಹ್ಯಾಗೋ ಗೊತ್ತಿಲ್ಲ. ಬಂದಿದ್ದಾರೆ."

"ಏನ್ಮಾಡ್ತಾರಂತೆ ? ಮೆರವಣಿಗೇನೋ ?

"ಊರಿಗೆ ತಗೊಂಡು ಹೋಗ್ತೆವೀಂತ ಹೇಳ್ತಾರೆ."

ನಿರ್ಧಾರದ ಧ್ವನಿಯಲ್ಲಿ ಕಲೆಕ್ಟರರೆಂದರು :

"ಸಾಧ್ಯವಿಲ್ಲ. ಶವಗಳನ್ನು ಕೊಡಬೇಡಿ. ಇಲ್ಲೆ ದಫನ ಮಾಡಿ !"

....ಸೆರೆಮನೆಗೆ ಸ್ವಲ್ಪ ದೂರದಲ್ಲಿದ್ದ ಊರೆಲ್ಲ ಎಚ್ಚತ್ತಿತು. ಈಗ....ಕರಿಯ ಗೋಡೆಗಳನ್ನು ಏರಿ ಬಂದ ಜಯಘೋಷಗಳು ಶೋಕಗೀತದ ಕ್ರಾಂತಿ ಗೀತದ ಅಲೆಗಳು. ಜನ ಎಷ್ಟೋ ದಿನಗಳಿಂದ ನಿರೀಕ್ಷಿಸಿದ್ದ ಮರಣದ ಸುದ್ದಿಯನ್ನು ಕಯ್ಯೂರು ವೀರರ ಮರಣದ ಸುದ್ದಿಯನ್ನು ತಂದು ಮುಟ್ಟಿಸಿದುವು.

....

ಕಯ್ಯೂರಲ್ಲಿ ತಡವಾಗಿ ಊಟಮಾಡಿ ವಿರಮಿಸಿದ್ದ ಜಮಿನ್ದಾರ ನಂಬಿಯಾರರು ಏನು ಮಾಡಿದರೂ ನಿದ್ದೆ ಬರದೆ, ಬಹಳ ದಿನಗಳಿಂದ ಯೋಚಿಸಿದ್ದೊಂದು ಕೆಲಸ ಮುಗಿಸಲೆಂದು, ಕೊಡಲಿ ಹಿಡಿದ ಆಳುಗಳೊಡನೆ ಸಂಜೆಯ ಹೊತ್ತು ಶಾಲೆಯ ಬಳಿ ಬಂದರು.

ಅಲ್ಲಿ ಮಾಸ್ತರು ನೆಟ್ಟು ಹೋಗಿದ್ದ ಕಾಡುಮಾವಿನ ಎರಡು ಮರಗಳು ಇಪ್ಪತ್ತೈದರ ಜವ್ವನಿಗರಂತೆ ಸೆಟೆದು ನಿಂತು ಫಲ ಬಿಟ್ಟಿದ್ದುವು.

"ಇವನ್ನ ಕಡಿದು ಉರುಳಿಸಿ !" ಎಂದು ನಂಬಿಯಾರರು ಆಜ್ಞಾಪಿಸಿದರು.

ಅವು ಬಲಿಷ್ಠವಾಗಿದ್ದವು. ಎರಡಲ್ಲ ನಾಲ್ಕು ಮರಗಳ ಶಕ್ತಿ ಇದ್ದಂತೆ ತೋರಿದ ಆ ಮರಗಳನ್ನು, ಜಮಿನ್ದಾರರ ಊಳಿಗದ ಆಳುಗಳು ಪ್ರಯಾಸಪಟ್ಟು ಕಡಿದು ಕೆಡವಿದರು.

....

ಆ ಬಳಿಕ ಸ್ವಲ್ಪ ಹೊತ್ತಿನಲ್ಲೆ, ಕತ್ತಲಾಗುತ್ತಿದ್ದಂತೆ, ಕಣ್ಣಾನೂರಿನಿಂದ ಬೇಹುಗಾರರು ಸುದ್ದಿ ತಂದರು....

....ಮಳೆಯನ್ನು ಇದಿರುನೋಡಿ ಒಣಗಿ ಬಿಸಿಯಾಗಿದ್ದ ನೆಲ ತಣ್ಣಗಾಯಿತು. ಗಾಳಿ ಅತ್ತ ಸುಳಿಯಲು ನಿರಾಕರಿಸಿ ಮರಗಿಡಗಳು ಸ್ತಬ್ಧವಾದುವು. ನೀರವವಾಯಿತು ಪ್ರಕೃತಿ.

ಗುಡಿಸಲುಗಳಲ್ಲಿ ಸೊಡರು ಹಚ್ಚಲಾರದೆ ಕತ್ತಲಲ್ಲೆ ಕುಳಿತು ಅಳಿದ ಆ ನಾಲ್ವರನ್ನು ನೆನೆದು ಜನ ಅತ್ತರು.

"ಅಪ್ಪು ಕುಟ್ಟಿಯನ್ನೆತ್ತಿಕೊಂಡು ಜಾನಕಿ ಹೊರಗೆ ಅಂಗಳದಲ್ಲೇ ಕುಳಿತಳು. ಹುಡುಗ ಒಂದೇ ಸಮನೆ ಅಳುತಿದ್ದ. ಅವನನ್ನು ಸಂತೈಸಲಾಗದೆ ಸೋತು ಜಾನಕಿ ಆಕಾಶವನ್ನು ದಿಟ್ಟಿಸಿದಳು. ಅಲ್ಲಿ ಕೋಟಿ ಚಿಕ್ಕೆಗಳು ಮಿನುಗುತ್ತಿದ್ದುವು. ಪಶ್ಚಿಮ ದಲ್ಲೊಂದೆಡೆ ನಾಲ್ಕು ನಕ್ಷತ್ರಗಳು ಒಂದೇ ಸಮನಾದ ಪ್ರಭೆಯಿಂದ ಬೆಳಗುತಿದ್ದಂತೆ ಕಂಡಿತು.

ಜಾನಕಿ ಆ ನಾಲ್ಕರಲ್ಲಿ ಮೊದಲ ನಕ್ಷತ್ರದತ್ತ ಬೊಟ್ಟುಮಾಡಿ ಮಗುವಿಗೆ ಹೇಳಿದಳು :

"ಅಪ್ಪು ಕುಟ್ಟಿ, ಅಲ್ಲಿ ನೋಡಿದ್ಯಾ? ಅಪ್ಪ ಅಲ್ಲಿದ್ದಾರೆ, ನೀನು ಅಳಬಾರ್ದು. ಅತ್ತರೆ ಅವರಿಗೆ ನೋವಾಗ್ತದೆ—"

ಬಲು ದೀರ್ಘವಾಗಿತ್ತು ಕಯ್ಯೂರಿನಲ್ಲಿ ಆ ರಾತ್ರೆ.

ಹಾಗಿದ್ದರೂ ಇರುಳು ಕಳೆದು ಮೆಲ್ಲಮೆಲ್ಲನೆ ಬೆಳಗಾಯಿತು.

*   *   *   *   *   *

ಕೊನೆಯ ಅಧ್ಯಾಯದ ಬಳಿಕ

ಠಣಂ ಠಣಕ್ ಠಣಂ....

ಮಂಗಳ ಹಾಡುತ್ತಿದ್ದಾರೆ. 'ಕಯ್ಯೂರು ವೀರಗಾಥಾ' ಇಲ್ಲಿಗಾಯಿತು, ಬಾಂಧವ! ಜನ ಏಳುತ್ತಿದ್ದಾರೆ. ಏಳಿ ನೀವೂ....

ಆ ಹೆಂಗಸರು ಗಂಡಸರೆಲ್ಲರ ಮುಖಗಳನ್ನೇನು ನೋಡುತಿದ್ದೀರಿ? ಕಪೋಲ ಗಳು ತೋಯ್ದಿವೆಯೆಂದೆ? ಭಾರವಾದ ಹೃದಯಗಳನ್ನು ಹೊತ್ತು ಅವರು ನಿಂತಿರುವರೆಂದೆ?

ಇದೇನು? ನನ್ನನ್ನೂ ಯಾಕೆ ಹೀಗೆ ನೋಡುತ್ತಿದ್ದೀರಿ?

ತಿಳಿಯಿತು! ಎಲ್ಲಿ,—ಸ್ವಲ್ಪ ನಿಮ್ಮ ಕಪೋಲಗಳನ್ನೇ ನೀವು ಮುಟ್ಟಿಕೊಳ್ಳು ತ್ತೀರಾ?!

ನಾನು ಬಲ್ಲೆ. ಅದು ತಪ್ಪಲ್ಲ. ಹಾಗೆ ಮಿಡಿಯುವ ಮನಸ್ಸೇ ನಿರ್ಮಲ ಹೃದಯಕ್ಕೆ ಕನ್ನಡಿ. ಅಲ್ಲದೆ, ಈ ವೀರಕಥೆಯನ್ನು ಕೇಳಿ ಕರಗದ ಕಲ್ಲೆದೆಯಾದರೂ ಯಾವುದು?

ಜನ ಸಾಲುಕಟ್ಟಿನಿಂತು ಹುತಾತ್ಮರ ಸ್ಮಾರಕ ಸ್ತೂಪದೆದುರು ಶ್ರದ್ಧಾಂಜಲಿ ಅರ್ಪಿಸುತ್ತಿದ್ದಾರೆ. ಬನ್ನಿ. ನಾವೂ ನಿಂತು ನಮ್ಮ ಸರದಿಗಾಗಿ ಕಾಯೋಣ.

....ಆ ಅಮೃತಶಿಲೆಯ ಸ್ತೂಪ,....ಆ ವಾಚನಾಲಯ....

ದೇಶದಾದ್ಯಂತ ನಿಧಿ ಸಂಗ್ರಹಿಸಿ ಈ ಸ್ಮಾರಕದ ನಿರ್ಮಾಣ ಮಾಡಿದ್ದೇವೆ.

ಅಗೋ, ಸ್ವಯಂಸೇವಕರು ಕೆಂಪು ಗುಲಾಬಿ ಕೊಡುತ್ತಿದ್ದಾರೆ. ಬನ್ನಿ, ತೆಗೆದುಕೊಳ್ಳೋಣ.

ಈ ಚೆಂಗುಲಾಬಿ ಅಳಿದ ಹುತಾತ್ಮರ ನೆನಪಿಗೆ ಅರ್ಪಣೆ....

ಶಿಲೆಯ ಮೇಲೆ ರಕ್ತಾಕ್ಷರಗಳಲ್ಲಿ ಕೊರೆದುದನ್ನು ಓದಿದಿರಾ?

ಬದುಕನ್ನು ಪ್ರೀತಿಸಿದ ಈ ಬಾಂಧವರು ಒಳ್ಳೆಯ ಬದುಕಿಗೋಸ್ಕರ ದುಡಿದರು, ಮಡಿದರು.

ಅಗಲಿದ ಸೋದರರೇ! ಇಗೋ ನಮ್ಮ ವಿಪ್ಲವವಂದನೆ! ಇಗೋ ನಮ್ಮ ರಕ್ತ ನಮಸ್ಕಾರ!

ನಿಮ್ಮ ಕನಸೆಲ್ಲ ನನಸಾಗಿಲ್ಲ ಎಂದು ನಾವು ಬಲ್ಲೆವು. ನಮ್ಮ ನಾಡೇನೋ ಸ್ವತಂತ್ರವಾಗಿದೆ. ಆದರೆ ಇದಿನ್ನೂ ಸಮತೆಯ ಸೋದರತ್ವದ ಸುಖಶಾಂತಿಯ ಬೀಡಾಗಿಲ್ಲ. ಕಲ್ಲುಮುಳ್ಳಿನ ಹಾದಿ ನಡೆದು ಒಂದು ಘಟ್ಟವನ್ನೀಗ ನಾವು ತಲಪಿ ದ್ದೇವೆ. ಇಲ್ಲಿಂದ ಇನ್ನೊಂದು ಘಟ್ಟಕ್ಕೆ ಮುಂದಿನ ಪಯಣ. ಅದನ್ನೂ ಯಶಸ್ವಿ ಯಾಗಿಯೆ ಮುಗಿಸಿ ಗುರಿ ಸೇರುವ ವಿಷಯದಲ್ಲಿ ನಮಗೆ ಸಂದೇಹವಿಲ್ಲ. ವೀರ ಪರಂಪರೆಯುಳ್ಳ ನಿರ್ಮಲ ಚಾರಿತ್ರ್ಯವುಳ್ಳ ನಮ್ಮ ಜನತೆಗೆ ಆ ಶಕ್ತಿಯಿದೆ,— ಧಾರಾಳವಾಗಿದೆ.

ಭಾಷಣ....

ಈ ನಾಡಿನ ವೃದ್ಧ ರೈತನಾಯಕ ಮಾತನಾಡುತ್ತಿದ್ದಾರೆ:

"ದೇಶಬಾಂಧವರೇ! ಆ ವೀರ ಬದುಕಿನ ಅಮರ ಸಂದೇಶಕ್ಕಿಂತ ಹೆಚ್ಚಿನ ಯಾವ ಮಾತನ್ನು ತಾನೇ ನಾನು ಆಡಬಲ್ಲೆ? ಅವರ ಕನಸನ್ನು ಪೂರ್ತಿಯಾಗಿ ನೆನಸುಗೊಳಿಸುವ ಭಾರ ನಿಮ್ಮದು. ನಿಮ್ಮ ಸ್ಮೃತಿಪಟಲದಲ್ಲಿ ಕಯ್ಯೂರು ವೀರರ ಸ್ಮರಣೆ ಚಿರಕಾಲ ಹಸುರಾಗಿರಲಿ! ಬದುಕಿನ ಹಾದಿಯಲ್ಲಿ ಮುಂದಕ್ಕೆ ಸಾಗುವ ನಿಮಗೆಲ್ಲ ಆ ಸ್ಮರಣೆ ತಿಳಿವು ನೀಡುವ ಬೆಳಕಾಗಲಿ!"

ಕನ್ನಡನಾಡಿನ ಓ ಬಾಂಧವ! ಬನ್ನಿ! ಜನ ಜಯಘೋಷ ಮಾಡುತ್ತಿದ್ದಾರೆ. ನಾವೂ ಸ್ವರ ಸೇರಿಸೋಣ:

"ಕಯ್ಯೂರು ಹುತಾತ್ಮರ ವೀರಸ್ಮರಣೆಗೆ
—ರಕ್ತನಮಸ್ಕಾರ!"

"ಕಯ್ಯೂರು ವೀರಯೋಧರ ಚಿರಸ್ಮರಣೆಗೆ
—ರಕ್ತನಮಸ್ಕಾರ!"

ಮೃತ್ಯುಂಜಯ

೧೨

ರಾಜಧಾನಿಯ ಆಯಕಟ್ಟಿನ ಸ್ಥಳಗಳಲ್ಲಿ ನಿಂತು ಡಂಗುರದವನು ಸಾರಿದ:

"ಕೇಳಿರಿ! ಕೇಳಿರಿ! ದುಷ್ಟ ನಿಗ್ರಹ ಶಿಷ್ಟ ರಕ್ಷಕ ಪೆರೋ ಮಹಾಪ್ರಭುವಿನ ದೈವಿಕ ರಾಜ್ಯಭಾರದ ವಿರುದ್ಧ ಬಂಡಾಯವೆದ್ದ ನೀರಾನೆ ಪ್ರಾಂತದ ನಾಯಕನ ವಿಚಾರಣೆ ಈ ದಿನ ನ್ಯಾಯಮೂರ್ತಿ ಅಮಾತ್ಯರ ಸಮ್ಮುಖದಲ್ಲಿ ನಡೀತದೆ. ಕೇಳಿರಿ! ಕೇಳಿರಿ!"

ಸೆಡ್ ಉತ್ಸವದ ನಿದ್ದೆ ಇಲ್ಲದ ಇರುಳಿನ ಬಳಿಕ ರಾಜಧಾನಿಯ ನಾಗರಿಕರು ನಿಧಾನವಾಗಿ ಏಳುತ್ತಲಿದ್ದರು. ನಗರ ತುಂಬ ಇನ್ನೂ ಹಬ್ಬದ ವಾತಾವರಣವೇ. ನಿತ್ಯದ ದುಡಿಮೆಯಲ್ಲಿ ನಿರತರಾಗಲು ಯಾರಿಗೂ ಮನಸ್ಸಿಲ್ಲ. ನದಿಯಲ್ಲಿ ತೆಪ್ಪೋತ್ಸವ ನಡೆಯುತಿದ್ದಾಗ ರಾಜಧಾನಿಯ ಹಲವು ಮನೆಗಳಲ್ಲಿ ಕಳ್ಳತನವಾಗಿತ್ತು. "ನಮ್ಮ ಸರ್ವಸ್ವವೂ ಹೋಯಿತು," ಎಂದು ಆ ಮನೆಗಳಲ್ಲಿ ರೋದನ. ಸೆಡ್ ಸಮಾರಂಭದ ನಿಮಿತ್ತ ಪೆರೋ ಬಿಡುಗಡೆ ಮಾಡಿದರಲ್ಲ—ಆ ಕಳ್ಳರದೇ ಕಾಯಕ ಎಂದು ಕೆಲವರು ಇಳಿದನಿಯಲ್ಲಿ ಕೂಗಾಡಿದರು. ಬೇರೆ ಕೆಲವರು ಅಂದರು: "ಕಷ್ಟ ನಿಮಗೆ ಮಾತ್ರವಾ? ಜಜ್‌ಮಂಖನನ್ನೂ ಬಿಟ್ಟಿದ್ದಾರೆ. ಸತ್ತ ಶ್ರೀಮಂತರಿಗೆ, ರಾಜ ಬಂಧುಗಳಿಗೆ ಗೋರಿಗಳಲ್ಲಿ ಇನ್ನು ನಿದ್ದೆಯೇ ಇಲ್ಲ.

ಈಗ ಈ ಡಂಗುರ....ದೈವಿಕ ರಾಜ್ಯಭಾರದ ವಿರುದ್ಧ ಬಂಡಾಯ....ಮನೆ ಮುರುಕರು! ನಿದ್ದೆಗೇಡಿಗಳು!

ನಿನ್ನೆಯಿಂದ ಇವತ್ತಿಗೆ, ಇವತ್ತಿನಿಂದ ನಾಳೆಗೆ ಬಾಳು. ಅಷ್ಟಷ್ಟಕ್ಕೇ ನೆನಪಿನ ತುಣುಕುಗಳು. (ಮರಣಾನಂತರ ಮಾತ್ರ ಮೂರು ಸಾವಿರ ವರ್ಷಗಳ ಬದುಕು.) ಆದರೂ ಕೆಲವರಿದ್ದರು. ನೀರಾನೆ ಪ್ರಾಂತ ಎಂದಾಗ ಯೋಚನೆಗಳ ಪೆಟ್ಟಿಗೆಯನ್ನು

ತಟ್ಟಿದಂತಾಯಿತು. ಒಂದು ವರ್ಷದ ಹಿಂದೆ ಅಲ್ಲಿ ಅದೇನೋ ಆಯಿತಲ್ಲ? ವಿಚಾರಣೆ ಆ ಬಂಡಾಯ ನಾಯಕನದೇ ಏನು ? ಯಾಕಿಷ್ಟು ತಡ ? ಇಲ್ಲಿಗೆ ಕರೆಸಿದರಂತಲ್ಲ ? ಅತಿಥಿಗೃಹದಲ್ಲೋ ಕಾರಾಗೃಹದಲ್ಲೋ ಇಟ್ಟರಂತಲ್ಲ ? ಯಾರೋ ಅಂದಿದ್ದರು : "ಅವನು ಸಜ್ಜನ." ಹಾಗಾದರೆ ಸಜ್ಜನನ ವಿಚಾರಣೆ....

ಇನ್ನೂ ಕೆಲವರೆಂದರು "ನಾವು ಇವತ್ತು ದುಡಿಯದಿದ್ದರೂ ಅಮಾತ್ಯರು ದುಡೀತಾರೆ. ಅಧಿಕಾರಿಗಳು ಕೂಡಾ. ಆಳುವವರಿಗೆ ವಿಶ್ರಾಂತಿಯೇ ಇಲ್ಲ."

ಅರಮನೆಯ ಆವರಣದಲ್ಲಿ ಡಂಗುರದ ಸದ್ದಿಲ್ಲ. ಆದರೆ ಸೇವಕ ಸೇವಕಿಯರೆಲ್ಲ ಬಲ್ಲರು. ಅವರಿಗೆ ಮೆನೆಪ್‌ಟಾ "ಬಡಜನರ ದೊಡ್ಡ ನಾಯಕ." ನ್ಯಾಯಸ್ಥಾನ ದಲ್ಲಿ ಪ್ರೇಕ್ಷಕರಾಗುವ ಸ್ವಾತಂತ್ರ್ಯ ಅವರಿಗಿದೆ. ಜಜ್‌ಮುಂಖನ ವಿಚಾರಣೆಯಾ ದಾಗ ಸರದಿಯಲ್ಲಿ ತಂಡ ತಂಡಗಳಾಗಿ ಹೋಗಿ ನೋಡಿದ್ದರು. ಈ ದಿನವೂ ಹೋಗಬಹುದು. ಆದರೆ ಉತ್ಸವದ ಮೂರನೆಯ ದಿನ ಕೆಲಸವೇನು ಕಡಿಮೆಯೆ ? ತಿಕ್ಕುವ, ತೊಳೆಯುವ ದುಡಿಮೆ. ಸಹಸ್ರಾರು ಜನ ಇದ್ದರೂ ಸಾಲದು. ಸಾಧ್ಯ ವಾದರೆ ಅಪರಾಹ್ನ ಇಣಿಕಿ ನೋಡಿ ಬರಬೇಕು.

ನ್ಯಾಯಸ್ಥಾನದ ಏರ್ಪಾಟಿನ ಉಸ್ತುವಾರಿ ಹಿರಿಯ ಲಿಪಿಕಾರ ಸೆನೆಬ್‌ನದು. ಅಮಾತ್ಯ ನಿತ್ಯದ ಕಾರ್ಯನಿರ್ವಹಿಸುವ ಸಭಾಭವನ ನ್ಯಾಯದ ಆಸ್ಥಾನವಾಗಿ ಮಾರ್ಪಟ್ಟಿತು. ಈ ದಿನ ಅಮೆರಬ್‌ನದು ನ್ಯಾಯಮೂರ್ತಿಯ ಪಾತ್ರ. ಮಹಾ ಅರ್ಚಕ ನ್ಯಾಯಸ್ಥಾನಕ್ಕೆ ಬಂದು ಕುಳಿತುಕೊಳ್ಳುವರೆಂದು ಕೇಳಿ ಸೆನೆಬ್‌ಗೆ ಪರಮಾಶ್ಚರ್ಯ. ಅಂಥದು ಹಿಂದೆಂದೂ ನಡೆದಿರಲಿಲ್ಲ. ಅಮಾತ್ಯರಿಂದ ತುಸು ದೂರದಲ್ಲಿದ್ದ ಅವರಿಗೆ ವಿಶೇಷ ಪೀಠ ವ್ಯವಸ್ಥೆ. ಚಿರತೆಯ ತುಣುಕು ಚರ್ಮ ಅದಕ್ಕೆ....ಜಜ್‌ಮುಂಖ್‌ನ ವಿಚಾರಣೆಯಂದು ಪೆರೋ ಪರಿವಾರ ಬಂದಿತ್ತು. ಅವರು ದೂರದ ವೇದಿಕೆಯ ಮೇಲಿನಿಂದ ಪ್ರೇಕ್ಷಕರು. ಇವತ್ತೂ ಬಂದಾರು. ಪರದೆ ಇಳಿಬಿಡಲು ಸೆನೆಬ್ ಆಜ್ಞಾಪಿಸಿದೆ. ಪಾರದರ್ಶಕ. ಸಭಾಭವನದಲ್ಲಿ ಕುಳಿತಿದ್ದರೂ ಅವರು ಬೇರೆಯೇ ಎನ್ನುವ ಭಾವನೆ. ಔತಣದಲ್ಲಿ ಮೆನೆಪ್‌ಟಾಗೆ ಕೊಟ್ಟ ಉಡುಗೊರೆಯ ನೆನಪಾಗುತ್ತಿದೆ ಸೆನೆಬ್‌ಗೆ. ('ಛೆ ! ಛೆ ! ಈ ನೆನಪು ಸರಿಯಲ್ಲ. ನನಗೂ ಅದಕ್ಕೂ ಯಾವ ಸಂಬಂಧವೂ ಇಲ್ಲ.') "ಕಟಾಂಜನ ತಂದಿಡಿರೋ, ಮರದ ಕಟಾಂಜನ, ಮೂಲೆಯಲ್ಲಿ. ಅಪರಾಧಿಗಾಗಿ. ಅಲ್ಲ, ಆರೋಪಿಗಾಗಿ."

ಕಿರಿಯ ಲಿಪಿಕಾರರು ಬಂದರು. ಲಿಪಿಸುರುಳಿಗಳು, ಲೆಕ್ಕಣಿಕೆ—ಮಸಿಪಾತ್ರೆ ಗಳು ಸಿದ್ಧವಾದುವು. ಎರಡು ಪೆಟಾರಿ ತುಂಬ ನ್ಯಾಯಸಂಬಂಧದ ಥೋಥ್‌ನ ಆದೇಶಗಳು.

ಒಂದು ಬದಿಯಿಂದ ಇನ್ನೊಂದು ಬದಿಯವರೆಗೂ ಹಗ್ಗ ಕಟ್ಟಿದರು. ಅದ ರಾಚೆಗೆ ಸಾಮಾನ್ಯ ಪ್ರೇಕ್ಷಕರು. ಕಟಾಂಜನದ ಬಳಿಯಲ್ಲೂ ಇಲ್ಲೂ ಸಶಸ್ತ್ರ ಭಟರು. ಅಮಾತ್ಯರ ಒಂದು ಪಕ್ಕದಲ್ಲಿ ಸಾಲಾಗಿ ಸರುಸದಸ್ಯರು, ದಂಡನಾಯಕ, ಕಂದಾಯ

ಅಧಿಕಾರಿಗಳು, ಅವರ ಹಿಂದೆ ಪ್ರಾಂತಪಾಲರು. (ಉತ್ಸವಕ್ಕೆಂದು ಬಂದ ಪ್ರಾಂತ ಪಾಲರೆಲ್ಲ ರಾಜಧಾನಿಯಲ್ಲೇ ಇದ್ದಾರೆ. ಯಾವುದೇ ಒಂದು ವಿಚಾರಣೆಯಲ್ಲಿ ಎಲ್ಲ ಪ್ರಾಂತಪಾಲರು ಭಾಗವಹಿಸುವುದು ಕೂಡ ಅಪೂರ್ವ.) ತೆಹುಟಿಗೆ ಪ್ರತ್ಯೇಕ ಸ್ಥಾನ. ಸೀರಾನೆ ಪ್ರಾಂತದ ಭೂಮಾಲಿಕರಿಗೆ ಪೀಠಗಳು.(ಈ ಪೀಠಗಳಿಗಾಗಿ ಸುಟ್‌ಮೋಸಾದಿ ಗಳಿಂದ ದೊಡ್ಡ ಕಾಣಿಕೆ ಕೇಳಬೇಕು. ಇವರೆಲ್ಲ ಸೀರಾನೆ ಪ್ರಾಂತಕ್ಕೆ ಹೊರಟ ಮೇಲೆ ನನ್ನ ಒಂದು ಆದಾಯಮೂಲ ಬತ್ತುತ್ತದಲ್ಲ' ಎಂದುಕೊಂಡ ಸೆನೆಬ್. 'ಆ ಬಟಾ ಬರಲೇ ಇಲ್ಲ. ಆಶ್ಚರ್ಯ. ಅವರಿಂದ ಇನ್ನು ನನಗೇನಾದರೂ ಸಿಗುತ್ತದೆ ಎನ್ನುವುದು ಸುಳ್ಳು ಆ ಉಡುಗೊರೆ—')

ಅಮಾತ್ಯರ ಇನ್ನೊಂದು ಮಗ್ಗುಲಲ್ಲಿ ಮಹಾ ಅರ್ಚಕರ ಪರಿವಾರ. ('ಇನೇನಿ ಬರುತ್ತಾನೆ ಹೊಟ್ಟೆ ಆಡಿಸಿಕೊಂಡು.')

ಅರಮನೆ ಕಾವಲು ಭಟರ ದಳಪತಿ ಆಗಮಿಸಿದ

"ಲಿಪಿಕಾರಯ್ಯ, ನನ್ನಿಂದ ಆಗಬೇಕಾದ ಕೆಲಸ ಅಪ್ಪಣೆಯಾಗಲಿ."

"ಜಾಗಟೆ ಸದ್ದಾದ ತಕ್ಷಣ ನೀರಾನೆ ಕ್ರಿಮಿಯನ್ನು ಕರೆಕೊಂಡ್ಬಾ. ನಿನ್ನ ಯೋಧರ ಮೇಲ್ವಿಚಾರಣೆ ವಹಿಸ್ಕೊ. ಕಠಾರಿ ಫಳಫಳ ಅನ್ನಿದೆ. ಅಧಿಕಾರ ದಂಡ ವನ್ನೂ ಬೆಳಗಿದೀಯಾ...."

ಪರಿಹಾಸ್ಯದ ಆ ಮಾತು ಇಷ್ಟವೆನಿಸಿದರೂ ದಳಪತಿ ಅಂದ :

"ನಿಮಗೆ ನನ್ನನ್ನು ಕಂಡರೆ ಯಾವಾಗಲೂ ತಾತ್ಸಾರ."

ಹನಿಹನಿಯಾಗಿ ಜನ ಬರತೊಡಗಿ ಅಮಾತ್ಯ ಭವನದ ಹೊರಗಿನ ಉದ್ಯಾನ ಬೇಗನೆ ಕೆರೆಯಾಯಿತು.

ದಳಪತಿಯ ಕಡೆ ನೋಡಿ ಸೆನೆಬ್ ಅಂದ:

"ಒಂದು ಸಲಕ್ಕೆ ನೂರೇ ಜನ ಒಳಗ್ಬರ್ಲಿ. ಅವರು ನೋಡಿ ಆದಮೇಲೆ ಮತ್ತೆ ನೂರು ಜನ."

ದಳಪತಿ ತನ್ನ ಕೆಳಗಿನವರನ್ನು ಕರೆದು ಆದೇಶವಿತ್ತ :

"ಒಂದು ಸಲಕ್ಕೆ ನೂರೇ ಜನ ಒಳಗ್ಬರ್ಲಿ. ಅವರು ನೋಡಿ ಆದ ಮೇಲೆ ಮತ್ತೆ ನೂರು ಜನ."

ಹೊರಗೆ ಗದರುವ ಧ್ವನಿ ಕೇಳಿಸಿತು.

"ಅಮಾತ್ಯರು ! ದಾರಿ ಬಿಡಿ ! ದಾರಿ ಬಿಡಿ !"

ಪಲ್ಲಕಿಯಿಂದಿಳಿದ ನೀಳ ದೇಹದ ಅಮಾತ್ಯ ಕೈಯಲ್ಲಿ ಅಧಿಕಾರದ ಕೋಲನ್ನು ಹಿಡಿದುಕೊಂಡು ದೃಢ ಹೆಜ್ಜೆಗಳನ್ನಿಡುತ್ತ ಒಳಕ್ಕೆ ಬಂದ. ಅರ್ಧ ನರೆತ ತಲೆ ಗೂದಲನ್ನು ಈ ದಿನ ಹೆಚ್ಚು ಎಚ್ಚರದಿಂದ ಎಡಕ್ಕೂ ಬಲಕ್ಕೂ ಬಾಚಿದಂತಿತ್ತು. ಎದೆಪಟ್ಟಿಕೆ, ಹಾರಗಳು ಅಲಂಕರಿಸಿದ್ದ ವೃಕ್ಷಸ್ಥಲ. ಗರಿಗರಿಯಾದ ನಡುಪಟ್ಟಿ. ಮೃದು ತೊಗಲಿನ ಪಾದರಕ್ಷೆ. ಛಾವಣಿಯ ಬೆಳಕಿಂಡಿಯ ಕೆಳಗಿಂದ ಹಾದು ಅಮಾತ್ಯ ತನ್ನ ವೇದಿಕೆಯತ್ತ ನಡೆದಾಗ ಗೋದಿಗೆಂಪು ಮೈ ಹೊಳೆಯಿತು.

ನ್ಯಾಯಮೂರ್ತಿ ಆಸೀನನಾದೊಡನೆ ಕಂಚಿನ ಜಾಗಟೆ ಬಾರಿಸಿದರು. ಆ ಸದ್ದು ಅಲೆಯಾಗುತ್ತಿದ್ದಂತೆ ಅರಮನೆಯ ಆವರಣದಲ್ಲಿ ಆಗಲೇ ಸೇರತೊಡಗಿದ್ದ ಸರುಸದಸ್ಯರು, ಹಿರಿಯ ಅಧಿಕಾರಿಗಳು, ಪ್ರಾಂತಪಾಲರೆಲ್ಲ ಒಳಗೆ ಬಂದು ನ್ಯಾಯ ಮೂರ್ತಿಗೆ ನಮಿಸಿ ತಮ್ಮ ಪೀಠಗಳ ಮೇಲೆ ಕುಳಿತರು. ಟಿಪುಟಿಯ ಹಿಂದೆ ಬಕಿಲ ನಿಂತ.

ಅಮಾತ್ಯ ಪಲ್ಲಕಿಯಿಂದ ಇಳಿದೊಡನೆ ದಳಪತಿ ಕಾರಾಗೃಹದತ್ತ ಧಾವಿಸಿದ್ದ.

(ಹಿಂದಿನ ರಾತ್ರಿ ನಿರಾಕರಣೆಯ ಉತ್ತರದೊಡನೆ ಮೆನ್ನನನ್ನು ಕಳುಹಿದ ಮೇಲೆ ಮೆನೆಪ್ಟಾ ಒಂದರ್ಧ ರೊಟ್ಟಿಯನ್ನೂ ನಾಲ್ಕಾರು ಅಂಜೂರ ಹಣ್ಣು ಗಳನ್ನೂ ಸೇವಿಸಿದ. ಮನಸ್ಸಿಗಂತೂ ನೆಮ್ಮದಿ. ನಿದ್ದೆ ಬಂತು. ಕಣ್ಣು ತೆರೆದಾಗ ಹೊರಗೆ ಬೆಳಕು ಹರಿಯುತ್ತಿರಬೇಕು ಎನಿಸಿತು. ಮಂದಪ್ರಭೆ ತನ್ನ ಕೊಠಡಿಯಲ್ಲಿ ಪಸರಲು ಆರಂಭಿಸಿದೊಡನೆ ಮೆನೆಪ್ಟಾ ಎದ್ದ. ಯಾವ ತಾಕಲಾಟವೂ ಇಲ್ಲದೆ, ಮನಸ್ಸು ಶಾಂತವಾಗಿತ್ತು. ಮರಳಿನ, ನೀರಿನ ನೆರವಿನಿಂದ ದೇಹಬಾಧೆ ತೀರಿಸಿ ಕೊಂಡ. ಇನ್ನೂ ಒಂದಷ್ಟು ಕಾಲ ನೆಲಮಾಳಿಗೆಯಲ್ಲಿದ್ದರೆ ತಾನೂ ಬಂಧನದ ರಾತ್ರೆ ಕಂಡ ಜಜ್‌ಮಂಖನಂತೆ ಆಗುವುದು ಖಂಡಿತ—ಎನಿಸಿತು. ಗಾದೆ ನೆನಪಾ ಯಿತು—'ಸಂಜೆ ಕೊಲ್ಲುವ ಹಕ್ಕಿಗೆ ಬೆಳಿಗ್ಗೆ ಯಾರು ನೀರುಣಿಸುತ್ತಾರೆ?' ತಾನೂ ಒಂದು ರೀತಿಯ ಹಕ್ಕಿಯೇ. ಹಾರಲು ನಿರಾಕರಿಸಿದ ಹಕ್ಕಿ. ಆ ದಿನ ಅಮಾತ್ಯನನ್ನು ಕಂಡೆ, ಅತಿಥಿಯಾಗಿ; ಈ ದಿನ ನ್ಯಾಯಮೂರ್ತಿಯನ್ನು ಕಾಣುತ್ತೇನೆ ಬಂದಿ ಯಾಗಿ. ಆತನದು ದ್ವಿಪಾತ್ರ. ನನ್ನದು ಕೂಡಾ. ಕಟ್ಟಡಕ್ಕೂ ದ್ವಿಪಾತ್ರವೇ. ಅಂದಿನದು ಅಮಾತ್ಯನ ಸಭಾಭವನ; ಇಂದು ಅದು ನ್ಯಾಯಸ್ಥಾನ. ಕರೆದೊಯ್ಯಲು ಎಷ್ಟು ಹೊತ್ತಿಗೆ ಬರುವರೊ? 'ಈ ಹಣ್ಣುಗಳನ್ನು ತಿನ್ತೇನೆ. ನೀರಡಿಕೆಯ ತೊಂದರೆ ಇರೋದಿಲ್ಲ.'....'ಬಟಾಗೆ ನನ್ನ ಉತ್ತರದಿಂದ ಬೇಸರವಾಗಿದ್ದೀತು. ಆದರೆ ಮನ ವರಿಕೆಯಾದಾಗ, ಸಮಾಧಾನವೂ ಆಗಿರಬಹುದು. ಅವರು ಯಾರೂ ನ್ಯಾಯ ಸ್ಥಾನಕ್ಕೆ ಬರಬಾರದು; ಬರಲಾರರು. ರಾಮೆರಿ, ಪುಟ್ಟ ರಾಮೆರಿ....ಇಲ್ಲ. ಗೊತ್ತಿದ್ದೂ ಗೊತ್ತಿದ್ದೂ ಗಂಡಾಂತರಕ್ಕೆ ತಲೆ ಒಡ್ಡುವುದು ಸರಿಯಲ್ಲ. ನನ್ನ ಬಂಧು ಗಳು ದುಡುಕಿ ಏನನ್ನೂ ಮಾಡರು....')

ಬಾಗಿಲ ಸದ್ದು. ದಳಪತಿಯ ಸ್ವರ:

"ಅಪರಾಧಿ! ಹೊರಗೆ ಬಾ!"

('ಓಹೋ....ನಾನು ಅಪರಾಧಿ ಎನ್ನುವುದು ತೀರ್ಮಾನವಾಗಿಯೇ ಬಿಟ್ಟಿದೆ!')

ಹೊರಬಾಗಿಲ ಬಳಿ ಎಂಟು ಹತ್ತು ಜನ ಯೋಧರು. ಇಬ್ಬರ ಕೈಗಳಲ್ಲಿ ಸೆಣ ಬಿನ ಹುರಿಹಗ್ಗಗಳು. ಮೆನೆಪ್ಟಾನ ತೋಳುಗಳಿಗೆ.

('ಇದು ಅನಗತ್ಯ — ಎನ್ನಲೆ? ಊಹೂಂ. ಅವರಿಗಿಷ್ಟ ಬಂದಂತೆ ಮಾಡಲಿ.')

"ನಡೀರಿ ಆಚೆಗೆ !"

('ಇದು ನಾಯಕರಿಗೆ ದಾರಿಬಿಡಿ, ಅಲ್ಲ. ಇವರು ನನ್ನ ಪರಿಚಿತರು. ಮಾತ ನಾಡಿಸುವ ಬಯಕೆ ಅವರಿಗೆ—ಆದರೆ ಈ ದಿನ. ಮೂಕರು, ನಾನು ಮುಗುಳು ನಗಬೇಕು'....)

ಎಲ್ಲ ಕೆಲಸಗಳನ್ನೂ ಬಿಟ್ಟು ಬಂದಿದ್ದರು ಅರಮನೆಯ ಸೇವಕ ಸೇವಿಕೆಯರು

('ಅವರಲ್ಲೊಬ್ಬಳು ಮಹಾತಾಯಿ ಶೀಬಾ.')

ಅವಳೂ ಇದ್ದಳು. ಆಕೆಯ ಗಂಡನೂ ಇದ್ದ.

('ಮೆರವಣಿಗೆ.')

ಅಮಾತ್ಯ ಭವನ ಕಾಣಿಸಿದೊಡನೆ ಛಟಿಲ್ ಛಟಿಲ್ ಎಂದುವು ಯೋಧರ ಚಾವಟಿಗಳು.

"ನಡೀರಿ ನಿಮ್ಮ ನಿಮ್ಮ ಕೆಲಸಕ್ಕೆ !"

('ಏಟು ಅವರಿಗೆ, ನೋವು ನನಗೆ.')

ಪರಿಚಿತ ಮೆಟ್ಟಲುಗಳು. ಬರಿಗಾಲು. ('ಇದೇ ಸುಖ.') ('ಓ ! ಕಟಾಂಜನ. ಇಲ್ಲಿ ನಾನು ಆರೋಪಿ.')

ಕಟಾಂಜನದ ಹಿಂದೆ ಶಾಂತಮೂರ್ತಿ ಮೆನೆಪ್‌ಟಾ ನಿಂತ. ಎಡಬಲಗಳಲ್ಲಿ, ತೋಳುಗಳಿಗೆ ಬಿಗಿದ ಹಗ್ಗಗಳನ್ನು ಹಿಡಿದ ಯೋಧರು. ಮೆನೆಪ್‌ಟಾನ ದೃಷ್ಟಿ ಅಮೆರಬ್‌ನನ್ನು ಅರಸಿ ಅವನ ಮೇಲೆ ಒರಗಿತು. ('ಇವರೆಲ್ಲ ಪ್ರತಿಮೆಗಳು. ಉಸಿರಾಟವೂ ನಿಂತಿದೆಯೇನೊ.')

ಒಮ್ಮೆಲೆ ಸುಸ್ಪಷ್ಟ ಸ್ವರದಲ್ಲಿ ಆತನೆಂದ:

"ನ್ಯಾಯಸ್ಥಾನಕ್ಕೆ ನಮಿಸ್ತೇನೆ."

ಇದ್ದಕ್ಕಿದ್ದಂತೆ ಬಂದ ಆ ಧ್ವನಿ ಕೇಳಿ ಎಲ್ಲರೂ ಚಕಿತರಾದರು.

ನ್ಯಾಯಮೂರ್ತಿಯ ಹಿಂಬದಿಯಲ್ಲಿ ಎತ್ತರದ ವೇದಿಕೆಯನ್ನು ಬಿಳಿಯ ಪರದೆ ಮರೆ ಮಾಡಿತ್ತು. ಅಲ್ಲಿ ಯಾರೂ ಇರಲಿಲ್ಲ. ಅಮೆರಬ್‌ನ ಎಡ ಪಾರ್ಶ್ವದ ಪೀಠವೂ ಹಲವು ಪೀಠಗಳೂ ಬರಿದಾಗಿದ್ದುವು. ಬಲಗಡೆಯಲ್ಲಿ ಭಾರೀ ಗುಂಪು. ನಿರ್ವಿಕಾರ ಭಾವದಿಂದ ಅವರಲ್ಲಿ ಕೆಲವರನ್ನು ಮೆನೆಪ್‌ಟಾ ಗುರುತಿಸಿದ. ಹೆಪ್ಸೆಟ್ ('ಹೇಳು ಮಗು. ನಿಮ್ಮ ಬಂಡಾಯ ಇತ್ಯಾದಿ ಹೇಗೆ ಮಾಡಿದಿರಿ ಹೇಳು.') ಗೇಬು. (ಯಾವನಯ್ಯ ನೀನು ? ಏನು ಮಾತಾಡ್ದೆ ! ಏನು ಮಾತಾಡ್ದೆ ! ಅಬ್ಬುಗೆ ಹೋದ ವನು ಬುದ್ಧೀನ ಕಾಣಿಕೆ ಕೊಟ್ಟು ಬಂದೆಯಾ?) ಅವನ ಪಕ್ಕದಲ್ಲಿರುವಾತ ಯಾರೋ ಳಿಯದು. ಅಮೆನಮೊಪೆಟ್. (ಮೆನೆಪ್‌ಟಾಗೆ ಅಪರಿಚಿತ. 'ದಂಡನಾಯಕನ ಕೀವಿ ಇದೆ.') ಟಿಹುಟಿ. ('ಚುಟುಕು ! ಚುಟುಕು ! ಬಾಯಿಯಿಂದ ಹೊರಬಿದ್ದ ಮಾತು ಪಂಜರ ಬಿಟ್ಟು ಕುರುಡು ಹಕ್ಕಿಯ ಹಾಗೆ. ಯಾವುದಕ್ಕಾದರೂ ಬಡಿದು ಕೆಕ್ಕೆ ಮುರಿದೀತು. ಎಚ್ಚರ!) ಬಕಿಲ-ಆಹಾ ! ಬಕಿಲ....ಅತ್ತ ನಿಂತಿರುವ ಜನರೆಲ್ಲ

ಇಲ್ಲಿ ಪ್ರೇಕ್ಷಕರು. ಇವತ್ತು ಇವರಿಗೆ ದುಡಿಮೆ ಇಲ್ಲವೇನೋ. ಕುತೂಹಲ? ಕನಿಕರ? ಆ ಮೂಲೆಯಲ್ಲಿ ಯಾರೊ ಬಚ್ಚಿಟ್ಟು ಕೊಂಡಿರುವನಲ್ಲ? ತಲೆಗೆ ಸುತ್ತಿದ ಬಟ್ಟೆ. ತನ್ನನ್ನು ಕದ್ದು ನೋಡುತ್ತಿರುವಂತಿದೆ....ಆ—ಮೆನ್ನ—ದಿವ್ಯಜೀವ.... ಯಾರೂ ಗುರುತು ಹಿಡಿಯಬಾರದೆಂದು ಎಚ್ಚರ ವಹಿಸುತ್ತಿದ್ದಾನೆ. ಅವನ ಪಾಲಿನ ಹದ್ದು ಈಕಡೆಗಿದೆ. ಸನೆಬ್. (ಬಟಾ ಹೇಳಿದ್ದ : 'ಐಗುಪ್ತದ ಆಡಳಿತ ಭಾರವೆಲ್ಲ ಇವನ ಮೇಲೆಯೇ ಇದೆ ಅಂದ್ಕೋಬೇಕು ಯಾರಾದರೂ.') ಪಾರ್ಶ್ವದ್ವಾರದಿಂದ ಸೆನೆಬ್ ಓಡಿ ಬಂದು ಅಮಾತ್ಯನ ಕಿವಿಯಲ್ಲಿ ಏನನ್ನೋ ಉಸುರಿದ. ಅಮಾತ್ಯ ತಲೆ ಯಾಡಿಸಿದ. ಹಿಂಬದಿಯ ಬಾಗಿಲಿನಿಂದ ಪೆರೋ ಬರುತ್ತಿದ್ದಾರೆ ಎಂದೆ? ಬರುವುದು ತಡವಾಗುತ್ತದೆ ಎಂದೆ?

ತಡವಾಗಲಿಲ್ಲ. ಪಾರದರ್ಶಕ ಪರದೆಯೊಳಗಿಂದ ಕಿರೀಟಗಳ ಪ್ರಭೆ ಕಾಣಿಸಿತು. ಪೆರೋ, ಮಹಾರಾಣಿ ರಾಜಕುಮಾರ ಮತ್ತು ಗೇಬುವಿನ ಪತ್ನಿ ನೆಹನವೇಯ್ಟ್.

ಸಭಾಭವನದಲ್ಲಿ ಕುಳಿತಿದ್ದವರೆಲ್ಲ ಎದ್ದರು. ಅಮಾತ್ಯ ಹಿಂದಕ್ಕೆ ಹೊರಳಿ ನಮಿಸಿದ :

"ದೇವಸಮಾನ ಪೆರೋನ ಆಯುರಾರೋಗ್ಯ ವರ್ಧಿಸಲಿ!"

ಎದ್ದವರು ಮತ್ತೆ ಕುಳಿತರು. ('ನಾನು ಹೀಗೆ ಮಾಡಬೇಕಾಗಿಲ್ಲ. ನಿಂತೇ ಇರಬಹುದು. ಸುಲಭ.')

ಪರದೆಯೊಳಗಿನ ವೇದಿಕೆಯ ಮೇಲೆ ಸೇವಕರ ದರ್ಶನ. ದೊರೆಗೆ ಚಾಮರ ಸೇವೆ. ನವಯುವಕ ಪೆರೋಗೆ ಬಿಸಿಲೇರುವುದಕ್ಕೆ ಮೊದಲೇ ಸೆಖೆಯಾಗ್ತಿರಬೇಕು.')

ಅರಸ ತನ್ನ ಬಳಿಯ ಮುಗ್ಗಾಲು ಪೀಠದ ಮೇಲಿನ ಹೊಳೆಯುವ ತಟ್ಟೆಯಲ್ಲಿ ಏನನ್ನೋ ಇರಿಸಿದ. ('ಏನಿರಬಹುದು? ಆಂಖ್ ಲಾಂಛನ....')

ಯಾರ ದಾರಿ ನೋಡುತ್ತಿದ್ದಾರೆ? ಆರಂಭಿಸುತ್ತಿಲ್ಲವಲ್ಲ. ಇನೇನಿ ಬಂದ. ವಿನಯಪೂರ್ವಕವಾಗಿ ಎರಡು ಹೆಜ್ಜೆ ಇರಿಸಿ, ಓಡಿ ಬಂದ ಸೆನೆಬ್‌ಗೆ ಏನನ್ನೋ ಹೇಳಿ, ಪುನಃ ಉದ್ಯಾನಕ್ಕಿಳಿದ. ಸೆನೆಬ್ ನ್ಯಾಯಮೂರ್ತಿಯಲ್ಲಿಗೆ, ಅಲ್ಲಿಂದ ಪೆರೋ—ಮಹಾರಾಣಿಯರ ಸಮ್ಮುಖಕ್ಕೆ. ಮರಳಿ ನ್ಯಾಯಮೂರ್ತಿಯಲ್ಲಿಗೆ. ಆಡಿದ ತಲೆಗಳು.

ಆ ಪೀಠದ ಮೇಲಿನ ಚಿರತೆ ಚರ್ಮ....ಮಹಾ ಅರ್ಚಕರು ಬರುವರೇನು? ಐಗುಪ್ತದ ರಾಜಕೀಯ ಚೌಕಮಣೆ ಆಟದ ಪ್ರಧಾನ ಆಟಗಾರ. ಮಹಾ ಅರ್ಚಕರಿಂದ ಸಣ್ಣ ಮನುಷ್ಯನೊಬ್ಬನ ವಿಚಾರಣೆಯ ವೀಕ್ಷಣೆ? ಆಶ್ಚರ್ಯ! ಹಾಗಾದರೆ ಆ ಬರಿದು ಪೀಠಗಳು ಮಹಾ ಅರ್ಚಕರ ಪರಿವಾರದವರಿಗೆ?

ಪ್ರತಿಮೆಗಳು ಕುಳಿತಲ್ಲೇ ಮಿಸುಕುತ್ತಿವೆ. ಅಲ್ಲಲ್ಲಿ ತಲೆಗಳು ಪರಸ್ಪರ ಹತ್ತಿರಕ್ಕೆ ಬಂದು ಪಿಸುನುಡಿಯುತ್ತಿವೆ.

ಹೊರಗೆ ಕಲರವ. ಬಂದರೇನೋ?

ತಲೆಬಾಗಿಲ ಕಣ್ಣು ಹಾಯಿಸಿದ ದಳಪತಿ ನಿಂತಲ್ಲೆ ಕಂಬವಾದ.

ಮುಂದೆ ಸ್ಥೂಲಕಾಯ ಇನೇನಿ. ಹಿಂದಿನಿಂದ ಭವ್ಯತೆಯ ಸಾಕಾರಮೂರ್ತಿ ಮಹಾ ಅರ್ಚಕ ಹೇಪಾಟ್. ('ಅಬ್ಬ ಯಾತ್ರಿಕನಾಗಿ ಐಗುಪ್ತದ ಧರ್ಮಗುರುವಿಗೆ ನಮಿಸಿದ್ದೆ. ದೈವಿಕವಾದದ್ದು ಏನಿದೆ ಈ ವ್ಯಕ್ತಿಯಲ್ಲಿ? ಈತನೂ ಪ್ರತಿಷ್ಠೆ ಅಧಿಕಾರ ಗಳ ಘನರೂಪವಲ್ಲವೆ?')

ಅಮಾತ್ಯ ಮತ್ತಿತರ ಕೆಲವರಿಗೆ ಮಹಾ ಅರ್ಚಕನ ಹಿಂದಿನ ಇಬ್ಬರುಮೂವರ ಪರಿಚಯವಿತ್ತು. ಒಬ್ಬ ಮೆಂಫಿಸಿನ ಪ್‌ಟಾ ಮಂದಿರದ ಮುಖ್ಯ ಅರ್ಚಕ. ಇನ್ನೊಬ್ಬ ಉತ್ತರದ ಆನ್‌ನಗರಿಯ ರಾಮಂದಿರದ ಮುಖ್ಯ ಅರ್ಚಕ. ಮೂರನೆ ಯವನು ದಕ್ಷಿಣದ ವೆಸಿನಗರಿಯ ಅಮುನ್ ಮಂದಿರದ ಮುಖ್ಯ ಅರ್ಚಕ. ಅವರ ಹಿಂದೆ ನಾಲ್ವರು ದೇವಸೇವಕರು. ('ಪೆರೋನ ಪರಿಚಾರಕರಿಗೆ ಸಮನಲ್ಲವೆ ಇವರು?')

ಅಮೆರಬ್ ಮತ್ತಿತರರು ನಮಿಸಲು ಏಳುತ್ತಿದ್ದಂತೆ ಮಹಾ ಅರ್ಚಕ ನ್ಯಾಯ ಮೂರ್ತಿಯ ವೇದಿಕೆಯ ಮೆಟ್ಟಲುಗಳನ್ನೇರಿ, ತನ್ನ ದೃಷ್ಟಿಯಿಂದ ತೆಳುಪರದೆಯ ನ್ನಿರಿದು ನೋಡುತ್ತ, "ಪೆರೋನ ಆಯುರಾರೋಗ್ಯ ವರ್ಧಿಸಲಿ!" ಎಂದ.

ಪರದೆಗೆ ಬೆನ್ನುಹಾಕಿ ಅಲ್ಲಿದ್ದವರನ್ನು ದಿಟ್ಟಿಸಿ, ಕಟಾಂಜನದ ಹಿಂದಿದ್ದ ಮೆನೆಪ್‌ಟಾನನ್ನು ನೋಡಿ. ತನ್ನ ಪೀಠದಲ್ಲಿ ಮಹಾ ಅರ್ಚಕ ಆಸೀನನಾದ. ಮುಖ್ಯ ಅರ್ಚಕರು ಮೂವರು ಕೆಳಗೆ ಸಾಲಾಗಿದ್ದ ಪೀಠಗಳಲ್ಲಿ ಕುಳಿತರು. ಇನೇನಿ ಮಹಾಅರ್ಚಕನ ಹಿಂದೆ ತುಸು ದೂರದಲ್ಲಿ ನಿಂತ. ನ್ಯಾಯಮೂರ್ತಿಯ ಹಿಂದೆ ಸೆನೆಬ್. ಮುಖ್ಯ ಅರ್ಚಕನ ಹಿಂದೆ ಉಳಿದ ದೇವಸೇವಕರು ನಿಂತುಕೊಂಡರು.

'ಇವರೆಲ್ಲರ ಚೌಕಮಣಿ ಆಟದಲ್ಲಿ ನೀರಾನೆ ಪ್ರಾಂತ ಒಂದು ಕಾಯಿ ಅಲ್ಲವೆ? ನಾನೇ ಆ ಕಾಯಿ. ಆದರೆ ಉಸಿರಾಡುವ ಕಾಯಿ, ಮಾತನಾಡುವ ಕಾಯಿ. ನಾವೆಲ್ಲ ಗೆದ್ದೆವು ಎನ್ನುತ್ತಿರುವ ಆಟಗಾರರಿಗೆ ಈ ದಿನ ಕಾಯಿ ಸವಾಲು ಹಾಕ್ತದೆ.')

ಅಮೆರಬ್ ಹೇಪಾಟ್‌ನನ್ನು ಕೇಳುತ್ತಿದ್ದಾನೆ:

"ಇನ್ನು ಶುರು ಮಾಡೋಣ ಅಲ್ಲವೆ?"

ಸ್ನೇಹ, ವಿನಯ ಬೆರೆತ ಧ್ವನಿ:

ತಲೆಯಲುಗಿಸಿ ಒಪ್ಪಿಗೆ ಸೂಚನೆ.

ಎಲ್ಲರ ದೃಷ್ಟಿಗಳೂ ತನ್ನ ಮೇಲೆ ನೆಟ್ಟಿರುವುದನ್ನು ನ್ಯಾಯಮೂರ್ತಿ ಅಮೆರಬ್ ಗಮನಿಸಿದ. ಆತ್ಮವಿಶ್ವಾಸ, ಹಣುಪು ನೋಟ. ('ನಿಮ್ಮ ಸ್ಪರ್ಶದಿಂದ ಅವನು ಮಣ್ಣಾಗ್ತಾನೋ ಬಂಗಾರವಾಗ್ತಾನೋ ನೋಡೋಣ.' ಪೆರೋ ಆಡಿದ್ದ ಈ ಮಾತು ಅಮಾತ್ಯನಿಗೆ ನೆನಪಾಯಿತು. ಐಗುಪ್ತದ ಪ್ರಜೆಗಳ ಬದುಕನ್ನು ನಿಯಂತ್ರಿ ಸುವ ರೂಪಿಸುವ ವರಿಷ್ಠಾಧಿಕಾರಿ ತಾನು. ಎಲ್ಲರೂ ತನ್ನನ್ನೇ ನೋಡುತ್ತಿದ್ದಾರೆ. ಇನ್ನು ವಿಳಂಬ ಸರಿಯಲ್ಲ.)

"ದೇವಸಮಾನರಾದ ಪೆರೋ ಪೇಪಿಯವರ ದೈವಿಕ ಅಧಿಕಾರದ ವಿರುದ್ಧ ಬಂಡಾಯವೆದ್ದ ನೀರಾನೆ ಪ್ರಾಂತದ ನಾಯಕ ಮೆನೆಪ್‌ಟಾನ ವಿಚಾರಣೆಗಾಗಿ, ಹಿರಿಯ ನ್ಯಾಯಸ್ಥಾನದ ವಿಶೇಷ ಅಧಿವೇಶನ ಇಲ್ಲಿ ಸೇರಿದೆ. ಮಹಾಪ್ರಭು ಮತ್ತು ಮಹಾರಾಣಿ ವಿಚಾರಣೆಯ ವೀಕ್ಷಣೆಗಾಗಿ ಇಲ್ಲಿಯ ತನಕ ಪಾದ ಬೆಳೆಸಿದ್ದಾರೆ. ಮಹಾ ಅರ್ಚಕ ಹೇಪಾಟ್ ಧಾರ್ಮಿಕ ಮಹತ್ವವಿರುವ ಈ ವಿಚಾರಣೆಯಲ್ಲಿ ಆಸ್ಥೆ ವಹಿಸಿ ಇಲ್ಲಿಗೆ ಆಗಮಿಸಿದ್ದಾರೆ."

ಕಿರಿಯ ಲಿಪಿಕಾರರ ಕಡೆಗೊಮ್ಮೆ ದೃಷ್ಟಿಬೀರಿ ಅವರು ಬರೆದುಕೊಳ್ಳುತ್ತಿರುವುದನ್ನು ಗಮನಿಸಿ, ತೃಪ್ತನಾಗಿ, ಅಮೆರಬ್ ಮುಂದುವರಿದ :

"ಗುರುತರವಾದ ಆರೋಪ. ಆದರೆ ಅದನ್ನು ರುಜುವಾತುಪಡಿಸುವ ಪುರಾವೆಗಳು ಅಸಂಖ್ಯ. ಈ ಮನುಷ್ಯನ ವಿರುದ್ಧ ದೂರು ಇತ್ತಿರುವವರು ಪ್ರತಿಷ್ಠಿತರು. ಹಿರಿಯ ಕಂದಾಯ ಅಧಿಕಾರಿ ಟೆಹುಟಿ, ಪ್ರಾಂತಪಾಲ ಗೇಬು, ಹೆಸರಾಂತ ಭೂಮಾಲಿಕರಾದ ನುಟ್‌ನೋಸ್, ಸೆತೆಕ್‌ನಖ್ತ್, ನೆನ್‌ಉಸೆರ್ಟ್........ಎಸಗಿರುವ ಅಪರಾಧಕ್ಕಾಗಿ ವಿಚಾರಣೆ ಇಲ್ಲದೆಯೇ ಶಿಕ್ಷೆ ವಿಧಿಸಬಹುದು. ಅದು ಅಷ್ಟು ಘೋರವಾದದ್ದು. ಆದರೆ ನಮ್ಮದು ಧರ್ಮಪರಿಪಾಲನಾ ಸಮಾಜ. ಥೊಥ್ ದೇವತೆಯ ನ್ಯಾಯ ನಿಯಮಾವಳಿಯನ್ನು ಆಧರಿಸಿ ಐಗುಪ್ತ ನಿಂತಿದೆ. ಗೋರಿ ಅತಿಕ್ರಮಣ, ಕೊಲೆ, ಬಂಡಾಯ ಏನಿದ್ದರೂ ನಾವು ವಿಚಾರಣೆ ನಡೆಸ್ತೇವೆ. ತಪ್ಪು ಒಪ್ಪಿಕೊಳ್ಳುವುದಕ್ಕೆ ಅಥವಾ ಅಲ್ಲಗಳೆಯುವುದಕ್ಕೆ ಅಪರಾಧಿಗೆ ಅರ್ಥಾತ್ ಆರೋಪಿಗೆ ಅವಕಾಶ ಕೊಡ್ತೇವೆ...."

(ಪೆರೋ ಕುಳಿತಲ್ಲೇ ಪೀಠಕ್ಕೊರಗಿ ವಿಶ್ರಾಂತಿ ಪಡೆದ.)

ಮಹಾ ಅರ್ಚಕ ಕಡೆಗಣ್ಣಿನಿಂದ ಅಮಾತ್ಯನನ್ನು ದಿಟ್ಟಿಸಿದ. ಟೆಹುಟಿ ನ್ಯಾಯಸ್ಥಾನದಲ್ಲಿ ತಾನೇ ಪ್ರಧಾನ ವ್ಯಕ್ತಿ ಎನ್ನುವಂತೆ ಸುತ್ತಲೂ ನೋಡಿದ. ಗೇಬು ಎಡಕ್ಕೊಮ್ಮೆ ಬಲಕ್ಕೊಮ್ಮೆ ವಾಲಿದ. ಅಮಾತ್ಯ ಹೆಸರುಗಳನ್ನು ಹೇಳಿದಾಗ ನುಟ್‌ನೋಸ್ ಹಲ್ಲುಕಿರಿದು ತಲೆ ಬಾಗಿಸಿದ. ಸೆತೆಕ್‌ನಖ್ತ್ ಗಲ್ಲ ತುರಿಸಿದ ; ನೆನ್‌ಉಸೆರ್ಟ್ ತಲೆಯ ಮೇಲಿನ ಕೆಲವೇ ಕೂದಲನ್ನು ಅಂಗೈಯಿಂದ ಸವರಿದ.

ಮೆನೆಪ್‌ಟಾಗೆ ಅಮಾತ್ಯನ ಮಾತುಗಳು ನೀರಸವಾಗಿ ಕಂಡು, ಹಿಂದೆ ಎಲ್ಲೋ ಇದನ್ನು ತಾನು ಕೇಳಿರುವೆನಲ್ಲ, ಈ ದೃಶ್ಯ ಹಿಂದೆ ಎಂದೋ ನಡೆದುದರ ಪುನರಾವರ್ತನೆಯಂತಿದೆಯಲ್ಲ—ಎನಿಸಿತು.

ಸಾಮಾನ್ಯ ಜನ ನ್ಯಾಯಮೂರ್ತಿ ಹೇಳುತ್ತಿದ್ದುದನ್ನು ಅರ್ಥ ಮಾಡಿಕೊಳ್ಳಲು ಯತ್ನಿಸುತ್ತ, ಮೆನೆಪ್‌ಟಾನನ್ನು ನೋಡುತ್ತ ನಿಂತರು.

(ಹೊರಗೆ ಜನರ ಸದ್ದನ್ನು ನಿಲ್ಲಿಸಲು ಯೋಧರು ಶ್ರಮಿಸಬೇಕಾಯಿತು. ಮಗ್ಗುಲು ಬಾಗಿಲು—ಹೊರಕ್ಕೆ ಮತ್ತು ಒಳಕ್ಕೆ ದಾರಿ. ಅದನ್ನು ತೆರೆದರು. ಹೊರ ಹೋದಷ್ಟು ಜನ ಒಳಕ್ಕೆ ಬರಲು ಅವಕಾಶ.)

ಕ್ಷಣ ಮೌನದ ಬಳಿಕ ನ್ಯಾಯಮೂರ್ತಿ ಅಮಾತ್ಯನೆಂದ :

"ಟಿಹುಟಿ, ಗೇಬು ಮತ್ತು ಭೂಮಾಲಿಕರು ನ್ಯಾಯಸ್ಥಾನದ ತಿಳಿವಳಿಕೆಗಾಗಿ ಈಗ ದೂರು ಸಲ್ಲಿಸ್ತಾರೆ."

ತನ್ನ ಪೀಠದಿಂದ ಎದ್ದು ನಿಂತು. "ಪೆರೋನ ಆಯುರಾರೋಗ್ಯ ವರ್ಧಿಸಲಿ!" ಎಂದು ವಂದನೆ ಸಲ್ಲಿಸಿದ ಟಿಹುಟಿಯನ್ನು ಮೆನೆಪ್ಟಾ ದಿಟ್ಟಿಸಿದ. ತನ್ನೂರಿನ ರಾಜಗೃಹದಲ್ಲಿ ತಾನು ಈತನನ್ನು ಕಂಡಾಗ ಇನ್ನಷ್ಟು ದೃಢಕಾಯನಾಗಿದ್ದನೇನೋ. ಎದೆಯ ಮೇಲಿನ ಆಭರಣಗಳು ದಾರಿದ್ರ್ಯದ ದ್ಯೋತಕವಲ್ಲ. ಆದರೂ ಮುಖ ಭಂಗವಾಯಿತು ಪಾಪ! ಸುಮಾರು ಒಂದು ವರ್ಷದ ಅಜ್ಞಾತವಾಸ. ಬಹಳ ತಾಪದಾಯಕವಾಗಿರಬೇಕು. ಈಗೇನು ಹೇಳುವನೊ? ಮತ್ತೆ ಅಂದಿನ ಮಾತು ಗಳು? ಅದೇ ಕೂಗಾಟ?

"ಈ ದುರುಳನ ಅಕೃತ್ಯ ಇಡೀ ಐಗುಪ್ತಕ್ಕೇ ಗೊತ್ತಿದೆ. ಆದರೂ ನ್ಯಾಯ ಸ್ಥಾನಕ್ಕೆ ಮನವರಿಕೆಯಾಗಲೆಂದು ಮತ್ತೊಮ್ಮೆ ಸಾರಿ ಹೇಳ್ತೇನೆ. ಕಳೆದ ವರ್ಷ ಅಬ್ಬು ಉತ್ಸವದ ಮಾರನೆಯ ದಿನ ಕಂದಾಯ ವಸೂಲಿಯ ಕರ್ತವ್ಯಪಾಲನೆಗಾಗಿ ನಾನು ನೀರಾನೆ ಪ್ರಾಂತ್ಯದ ಮುಖ್ಯಪಟ್ಟಣಕ್ಕೆ ಹೋದೆ. ಆ ರಾತ್ರೆ ಈ ಅಪರಾ ಧಿಯೂ ಸಂಗಡಿಗರೂ ಅಬ್ಬುವಿನಿಂದ ವಾಪಸಾದರು. ಕಂದಾಯಸಂಗ್ರಹವನ್ನು ಇದಿರಿಸ್ಬೇಕು. ನನ್ನನ್ನು ಸಾಯಿಸಿ ನೀಲ ನದಿಗೆ ಎಸೀಬೇಕು ಅಂತ ಫಿತೂರಿ ನಡೆ ಸಿದ್ರು. ಬೆಳಗಾಗೋ ಹೊತ್ತಿಗೆ ಇಡೀ ಊರನ್ನೇ ನನ್ನ ವಿರುದ್ಧ ಎತ್ತಿಕಟ್ಟಿದ್ರು. ರಾಜಗೃಹದಲ್ಲಿ ನಾನು ಊರಿನ ಪ್ರಮುಖರ ಸಭೆ ಕರೆದಾಗ, ಮನವಿ ಸಲ್ಲಿಸೋ ನೆಪ ದಲ್ಲಿ ಈತ ರೈತರನ್ನೂ ಕುಶಲಕರ್ಮಿಗಳನ್ನೂ ಕರೆದುಕೊಂಡು ಆ ಸಭೆಗೆ ನುಗ್ಗಿದ. ಮಹಾಪ್ರಭು, ಮಹಾ ಅರ್ಚಕ ಮತ್ತು ಅಮಾತ್ಯವರ್ಯರನ್ನು ಧಿಕ್ಕರಿಸಿ ಮಾತ ನಾಡಿದ. ನನ್ನ ಮೇಲೆ ಕೈಮಾಡಿದ. ನನ್ನ ಭಟರ ಮುಖ್ಯಸ್ಥನ ಕಣ್ಣು ಕಿತ್ತ. ಶಾಂತಿ ಸ್ಥಾಪನೆಗಾಗಿ ನಾನು ಮಾಡಿದ ಪ್ರಯತ್ನವೆಲ್ಲ ವಿಫಲವಾಯ್ತು. ಪ್ರಯಾಸ ಪಟ್ಟು ಪ್ರಾಣ ಉಳಿಸಿಕೊಂಡೆ. ಪ್ರಾಂತಪಾಲನನ್ನೂ ಉಳಿಸಿದೆ. ಸೃಷ್ಟಿಕರ್ತ ರಾನ ಆಳ್ವಿಕೆಯಲ್ಲಿ ಕೆಲವು ಜನ ಸೆತ್‌ನ ಆರಾಧಕರಾದದ್ದು, ರಾ ಅವರನ್ನು ದಂಡಿಸಿದ್ದು ನಮಗೆ ಗೊತ್ತಿದೆ. ಆದರೆ ಇಡಿಯ ಸಮಾಜದ, ದೇಶದ ವಿರುದ್ಧ ಬಂಡಾಯ ನಡೆ ದಿರುವುದು ಐಗುಪ್ತದ ಸಾವಿರಾರು ವರ್ಷಗಳ ಇತಿಹಾಸದಲ್ಲಿ ಇದೇ ಮೊದಲು. ಐಗುಪ್ತದ ನಾಲ್ವತ್ತು ನೂರು ಸಹಸ್ರ ಜನಸಂಖ್ಯೆಯಲ್ಲಿ ನೂರರಲ್ಲಿ ಒಂದು ಭಾಗ ಜನ ಮಾತ್ರ ಬಂಡಾಯವೆದ್ದಿದ್ದಾರೇಂತ ಸುಮ್ಮನಿರೋಣವೆ? ಮರಳುಗಾಡಿನ ಈ ಕಿಡಿಯನ್ನು ಕಡೆಗಣಿಸಿದರೆ ನಾಳೆ ನೀಲನದಿಗೇ ಜ್ವಾಲೆ ಅಂಟೀತು; ಐಗುಪ್ತದ ನಾಗರಿಕತೆ ನಾಶವಾದೀತು; ಭೂಮಿಯ ಮೇಲೆ ರಾನ ಪ್ರಭುತ್ವ ಮುಕ್ತಾಯ ವಾದೀತು. ಇಷ್ಟೇ ನನ್ನ ದೂರು. ಇಷ್ಟೇ."

ಮಹಾ ಅರ್ಚಕ ಟಿಹುಟಿಯತ್ತ ನೋಡಿ ಕಂಡೂ ಕಾಣಿಸದಂತೆ ಮಂದಹಾಸ ಬೀರಿದ. ಟಿಹುಟಿ ಸಂತೃಪ್ತ. 'ಹೆಚ್ಚು ಎಚ್ಚರವಹಿಸದಿದ್ದರೆ ಟಿಹುಟಿಯೇ ನದಿಗೆ

ಉರಿಹಚ್ತಾನೆ' ಎಂದುಕೊಂಡ ಅಮಾತ್ಯ. (ಪೆರೋಗೆ ನಿದ್ದೆ. ಮಹಾರಾಣಿ ಯೋಚಿಸಿದಳು : 'ಸದ್ದಿಲ್ಲದ ನಿದ್ದೆಯೇ ಆದರೆ ಎಬ್ಬಿಸೋದು ಬೇಡ.' ಪಕ್ಕಕ್ಕೆ ಹೊರಳಿ ಅವಳೆಂದಳು : 'ನೆಹಸ, ಒಂದು ದಿವಸ ಈ ಟಿಹುಟಿ ಅಮಾತ್ಯನಾಗ್ತಾನೆ ಅಲ್ಲವಾ ?' ಉತ್ತರ ನಿರೀಕ್ಷಿಸದೆ ಅವಳೇ ಮುಂದುವರಿದಳು : 'ಇನ್ನು ನಿನ್ನ ಸೊಗಸು ಗಾರ ಗಂಡ ಮಾತಾಡ್ತಾನೊ ?')

ಮೆನೆಪ್‌ಟಾಗೆ ಗಟ್ಟಿಯಾಗಿ ನಗಬೇಕೆನಿಸಿತು. ಇದಲ್ಲವೆ ವಿಚಾರಣೆ? ಜನ ಹೊರಹೋಗುತ್ತಿದ್ದಾರೆ; ಹೊಸಬರು ಬರುತ್ತಿದ್ದಾರೆ. ಮೂಲೆಯಲ್ಲಿ ಸ್ಥೂಲ ಕಾಯನೊಬ್ಬನ ಮರೆಯಿಂದ ಎರಡು ಕಣ್ಣುಗಳು ತನ್ನೆಡೆಗೆ ನೋಡುತ್ತಿವೆ. ಮೆನ್ನ....

ನ್ಯಾಯಮೂರ್ತಿಯ ದೃಷ್ಟಿ ತನ್ನೆಡೆಗೆ ಹರಿಯಿತೆಂದು ಗೇಬು ಗಡಬಡಿಸಿ ಎದ್ದ ಬಡಬಡನೆ ಆತನೆಂದ :

"ಪೆರೋನ ಆಯುರಾರೋಗ್ಯ ವರ್ಧಿಸಲಿ! ಸಂಪೂರ್ಣ ಸತ್ಯ. ಟಿಹುಟಿ ಹೇಳಿದ್ದು ಆ ದಿವಸ ಅನಾಗರಿಕ ಮೃಗ ಬಲದ ಮುಂದೆ ದೇಶದ ಹಿರಿಯ ಕಂದಾಯ ಅಧಿಕಾರಿ ಟಿಹುಟಿಯೂ ಪ್ರಾಂತಪಾಲನಾದ ನಾನೂ ಹಿಮ್ಮೆಟ್ಟಬೇಕಾಯ್ತು. ನಮ್ಮ ಸಜೀವ ದಹನ ಈ ದಂಗೆಕೋರರ ಉದ್ದೇಶವಾಗಿತ್ತು. ನನ್ನ ಪತ್ನಿ ನೆಹಸವೇಯ್ಟ್ ಅವತ್ತು ಅಲ್ಲಿರಲಿಲ್ಲ. ಪತ್ನಿಯ ಮತ್ತು ಮಕ್ಕಳ ಆಭರಣಗಳನ್ನು ಲೂಟಿ ಮಾಡಿದ್ರು. ಅವರೂ ಇದ್ದಿದ್ದರೆ ಇಡೀ ಗೇಬು ಕುಟುಂಬವೇ ನಿರ್ನಾಮವಾಗ್ತಿತ್ತು....ಮಾಡಿದ ತಪ್ಪನ್ನು ಮಕ್ಕಳು ತಿದ್ದಿಕೊಳ್ಳಲೀಂತ ದಯಾಮಯ ಪೆರೋ ಕಾಲಾವಕಾಶ ಕೊಟ್ರು. ಏನೂ ಪ್ರಯೋಜನವಾಗಲಿಲ್ಲ. ಪೆರೋಗೆ ಕಾಣಿಕೆ ಅರ್ಪಿಸೋ ನೆಪದಲ್ಲಿ ಈ ಧೂರ್ತನಾಯಕ ಮೆಂಫಿಸಿಗೂ ಬಂದ. ಅರಮನೆಗೆ ಪ್ರವೇಶ ದೊರಕಿಸಿಕೊಂಡ. ಸರುಸದಸ್ಯರಿಗೆ ಮಹಾಪ್ರಭು ನೀಡಿದ ಔತಣಕ್ಕೆ ತಾನೂ ನುಸುಳಿ ಬಂದ. ಅರಮನೆಯ ಪರಿಚಾರಕರನ್ನು ದೇವರೂಪನ ವಿರುದ್ಧ ಎತ್ತಿ ಕಟ್ಟೋದಕ್ಕೆ ಯತ್ನಿಸಿದ. ಸುರೆ ಕುಡಿದ ಮಂಗನಂತೆ ಕುಣಿದ. ಇಂಥ ವ್ಯಕ್ತಿಗೆ ಎಂಥ ಕಠಿನ ಶಿಕ್ಷೆ ವಿಧಿಸಿದರೂ ಸಾಲದು."

ಇಷ್ಟನ್ನು ಹೇಳಿ, ಮಹತ್ಕಾರ್ಯ ಸಾಧಿಸಿದವನಂತೆ, ಗೇಬು ಅತ್ತಿತ್ತ ನೋಡುತ್ತ ಕುಳಿತ.

ಮೆನೆಪ್‌ಟಾಗೆ ವಿಚಿತ್ರ ಅನುಭವ. ಅನ್ಯಾಯದ ದಾರದಲ್ಲಿ ಅಸತ್ಯಗಳನ್ನು ಪೋಣಿಸಿ ಮಾಡಿದ ಮಾಲೆ. ನ್ಯಾಯಮೂರ್ತಿಗೆ ಅರ್ಪಣೆ. ನೆಲಮಾಳಿಗೆಗೆ ತನ್ನನ್ನು ತಳ್ಳಿದೊಡನೆಯೇ ಈ ಹೊಸ ನಾಟಕದ ರೂಪುರೇಷೆಗಳನ್ನು ನಿರ್ಧರಿಸ್ಬೇಕು. ತಾವು ಆಡಬೇಕಾದ ಮಾತುಗಳನ್ನು ಎಷ್ಟು ಚೆನ್ನಾಗಿ ಕಲಿತಿದ್ದಾರೆ !

....ಜನರ ನೂಕುನುಗ್ಗಲು. ಅರಮನೆ ಕಾವಲು ಭಟರ ದಳಪತಿಗೆ ಇವತ್ತು ಬೆವರಿಳಿಯುತ್ತದೆ. ಪಾರ್ಶ್ವದ್ವಾರದಿಂದ ಜನ ಹೊರಗೆ ಹೋಗುತ್ತಿದ್ದಾರೆ; ಒಳಗೆ ಬರುತ್ತಿದ್ದಾರೆ. ಇನ್ನು ಯಾರ ಸರದಿ? ಯಾರು ನಟರು, ನರ್ತಕರು? ನ್ಯಾಯ

ಸ್ಥಾನದ ಪ್ರತಿಷ್ಠಿತರ ಮುಖಗಳ ಮೇಲೆಲ್ಲ ಒಂದೇ ಭಾವ ಬಿಂಬಿತವಾಗಿದೆಯಲ್ಲ? ವಿಜಯದ ಉನ್ಮಾದದಿಂದ ಇವರ ಕಣ್ಣುಗಳು ಬೆಳಗುತ್ತಿವೆ. ತಾವು ಘಾಸಿಗೊಳಿಸಿದ ಮಿಕದ ಸುತ್ತಲೂ ನೆರೆದಿರುವ ಬೇಟೆಗಾರರು ಇವರು.

ನುಟ್‌ಮೋಸ್, ಪೆರೋನ ಪಲ್ಲಕ್ಕಿ ಹೊತ್ತ ಈ ಅದೃಷ್ಟಶಾಲಿ ಪ್ರತಿಷ್ಠೆಯ ಕಳೆಯಿಂದ ಬೆಳಗುತ್ತಿದ್ದಾನೆ. ಹೊಲಗಳನ್ನು ಕಳೆದುಕೊಂಡ ಭೂಮಾಲೀಕನಲ್ಲ. ರಾಜಧಾನಿಯ ನಾಗರಿಕತೆಯ ಲೇಪನದಿಂದ ಹೊಸ ಮನುಷ್ಯನಾದವನು. ಸೆತೆಕ್‌ನಖ್ತ್ ಸೆನ್‌ಉಸೆರ್ಟ್‌ರೂ ಏಳುತ್ತಿದ್ದಾರೆ. ಮೂರು ಕಂಠಗಳಿಂದ ಒಂದೇ ಹಾಡು? ಒಟ್ಟಿಗೆ ಹಾಡು?

(ಹರಿಯುತ್ತಿದ್ದ ಮಾತು ನಿಂತಿದೆ ಎಂದು ಪೆರೋಗೆ ಎಚ್ಚರ. ಈ ಆಸನ ಇಕ್ಕಟ್ಟು. ಮೈಕೈ ನೋವು. ಸುಪ್ಪತ್ತಿಗೆಯ ಮೇಲೆ ಮಲಗಬೇಕು....)

ಬಾಗಿ ಬಾಗಿ ನ್ಯಾಯಸ್ಥಾನಕ್ಕೆ ಪುನಃ ಪುನಃ ವಂದಿಸಿ ನುಟ್‌ಮೋಸ್ ಆರಂಭಿಸಿದ:

"ಪೆರೋನ ಆಯುರಾರೋಗ್ಯ ವರ್ಧಿಸಲಿ! ಇಲ್ಲಿ ನಿಂತಿರುವ ನಾವು ಶೋಷಣೆಗೆ ಒಳಗಾದವರು: ಅನ್ಯಾಯಕ್ಕೆ ಬಲಿಯಾದವರು. ನಮ್ಮೆಲ್ಲರ ಪರವಾಗಿ ನಾನು ಈ ದೂರು ಸಲ್ಲಿಸುತ್ತಿದ್ದೇನೆ. ನ್ಯಾಯಮೂರ್ತಿಯವರು ಪರಾಮರ್ಶಿಸಬೇಕೂಂತ ಪ್ರಾರ್ಥನೆ."

(ಪೆರೋನನ್ನು ಮತ್ತೆ ನಿದ್ರೆ ಆವರಿಸಿತು.)

ಗಂಟಲು ಸರಿಪಡಿಸಿಕೊಂಡು ನುಟ್‌ಮೋಸ್ ಮುಂದುವರಿಸಿದ:

"ನಾನು ನುಟ್‌ಮೋಸ್. ಮಹಾಪ್ರಭುವಿನ ಪಲ್ಲಕಿ ಹೊತ್ತಿರುವ ಪುಣ್ಯಶಾಲಿ. ನೀರಾನೆ ಪ್ರಾಂತದ ಬಂಡಾಯಕ್ಕೆ ಮುಂಚೆ ಅಲ್ಲಿನ ಅತಿ ದೊಡ್ಡ ಭೂಮಾಲಿಕನಾಗಿದ್ದವನು. ಪ್ರಾಂತಪಾಲರ ನೇಮಕಕ್ಕೆ ಮೊದಲು ಮಹಾ ಪ್ರಭುವಿನ ಪ್ರತಿನಿಧಿಯಾಗಿದ್ದವನು. ಈತ ಸೆತೆಕ್‌ನಖ್ತ್. ಆತ ಸೆನ್‌ಉಸರ್ಟ್—ಎಲ್ಲವನ್ನೂ ಕಳೆದುಕೊಂಡು ನನ್ನ ಹಾಗೆಯೇ ದೊರೆಯ ಕೃಪಾಶ್ರಯ ಪಡೆದವರು. ಮಹಾ ಅರ್ಚಕರ ಕರುಣೆ, ಅಮಾತ್ಯರ ಸಹಾನುಭೂತಿ ನಮ್ಮನ್ನು ಉಳಿಸಿವೆ. ಈ ದುಷ್ಟನಕೈಯಲ್ಲಿ ನಾವು ಪಟ್ಟ ಕಷ್ಟವನ್ನು ಏನೂಂತ ನಿವೇದಿಸಲಿ? ಒಬ್ಬ ಸಾಮಾನ್ಯ ಮನುಷ್ಯ ಜನರನ್ನು ಮರುಳು ಮಾಡಿ, ಅವರನ್ನು ಸಾಧನವಾಗಿ ಬಳಸಿ ಸಮಾಜವನ್ನು ಬುಡಮೇಲು ಮಾಡಬಹುದೂಂತ ಯಾರು ಭಾವಿಸಿದ್ದರು? ಬಂಡಾಯ ನಡೆದ ದಿವಸ ಮಹಾ ಪ್ರಭುವಿನ ಜತೆ, ಅಬ್ಬು ಯಾತ್ರೆ ಮುಗಿಸಿ ರಾಜಧಾನಿಗೆ ಪ್ರಯಾಣ ಬೆಳೆಸ್ತಾ ಇದ್ದೆ ....ಆ ಮೇಲೆ ನನಗೆ ತಿಳಿದು ಬಂದ ಪ್ರಕಾರ ಈತನೂ ಇವನ ಸಂಗಡಿಗರೂ ರಾಜಗೃಹದ ಪ್ರಾಕಾರವನ್ನು ಪುಡಿ ಮಾಡಿದ್ರು. ಎಲ್ಲ ಭೂಮಾಲಿಕರ ಹೊಲ ಕಸಕೊಂಡ್ರು. ತಮಗೆ ಬೇಕಾದವರಿಗೆಲ್ಲ. ಹೊಡೆದ್ರು ಬಡೆದ್ರು, ಹಿಂಸಾಚರಣೆ ಮಾಡಿದ್ರು. ಹೆಂಗಸರ ಮಾನಭಂಗ; ಅತ್ಯಾಚಾರ. ಅಯ್ಯೋ, ಅಯ್ಯೋ! ಏನು

ಹೇಳ್ಲಿ? ಪರಂಪರಾಗತವಾಗಿ ನಮ್ಮ ಜತೆ ಸುಖವಾಗಿದ್ದ ದಾಸದಾಸಿಯರನ್ನು ಬಿಡುಗಡೆ ಮಾಡಿದ್ರು. ಅವರು ಅನಾಥರಾದ್ರು. ತಮ್ಮ ಬಾಲಬಡಕ ಬಡವರ ಮಕ್ಕಳಿಗೆ ಶಾಲೆ! ಲಿಪಿ ಸುರುಳಿ ಪಾಠ! ನಮ್ಮ ಮಕ್ಕಳಿಗೆ ಜೀತ! ರಾಜಗೃಹದ ಪ್ರಾಕಾರ ದ್ವಾರವನ್ನು ಮುರಿದ ಮರದ ದಿಮ್ಮಿ ಇವರ ಸ್ಮಾರಕ ಕಂಬ. ಅದಕ್ಕೆ ಅಲಂಕಾರ. ತಾನೇ ಮಹಾರಾಣಿ ಅನ್ನುವ ಹಾಗೆ ಈತನ ಹೆಂಡತಿಯೇ ಮೆರೀತಿದಾಳೆ. ಇನ್ನೂ ಸ್ವಲ್ಪ ಸಮಯ ಹೀಗೆಯೇ ಬಿಟ್ಟರೆ ಸಮಾಜದ ಬೆನ್ನೆಲುವಾದ ಭೂಮಾಲಿಕ ಸಮುದಾಯವೇ ನಾಶವಾಗ್ತದೆ. ಒಂದು ಸಿಂಹವನ್ನು ಕೊಂದು ಅದರ ಒಂದು ಕಣ್ಣು ಕುಕ್ಕಿ ತೆಗೆದು, ಹೊಟ್ಟು ತುಂಬಿಸಿ ಹೊಲಿದು, ಅದಕ್ಕೆ ಬಕಿಲ ಅಂತ ಹೆಸರಿಟ್ರು, ನಮ್ಮ ಮಾನ್ಯ ಆ ಕಂದಾಯ ಅಧಿಕಾರಿ ಟೆಹುಟಿಯವರ ಯೋಧರ ಮುಖ್ಯಸ್ಥನನ್ನು ಈ ಜನ ಅವಮಾನಿಸಿದ್ದಾರೆ ಅಂತ ಕೇಳಿದ್ದೇನೆ. ಅಲ್ಲಿ ನಡೆದಿರುವ ಎಲ್ಲ ದೌರ್ಜನ್ಯಕ್ಕೂ ಈತನೇ ಮೂಲ. ಹೆಚ್ಚೇನು ಹೇಳಲಿ? ನ್ಯಾಯ ಮೂರ್ತಿಯವರಿಗೆ ಎಲ್ಲ ವಿಷಯ ತಿಳಿದೇ ಇದೆ."

ಮಾತು ಮುಗಿಯುತ್ತ ಬಂದಂತೆ ನುಟ್‌ಮೋಸನ ಕಂಠ ಗದ್ಗದವಾಯಿತು. ಕಣ್ಣುಗಳಲ್ಲಿ ಹನಿ ಆಡಿತು. ಆತ ಅಂಗೈಗಳಿಂದ ಮುಖ ಮುಚ್ಚಿಕೊಂಡು ಅತ್ತ. ಪೆತೆಕ್‌ನಖ್ತ್, ಸೆನ್‌ಉಸರ್ಟರೂ ಬೆರಳುಗಳಿಂದ ಕಣ್ಣೊರೆಸಿಕೊಂಡರು.

ಮೆನೆಪ್‌ಟಾನಿಗೆ ಮುಗುಳುನಗೆಯನ್ನು ಹತ್ತಿಕ್ಕಲು ಆಗಲಿಲ್ಲ.

ಕುಳಿತುಕೊಳ್ಳುವಂತೆ ಭೂಮಾಲಿಕರಿಗೆ ಸನ್ನೆ ಮಾಡಿ. ಅಮಾತ್ಯ ಮಹಾ ಅರ್ಚಕನ ಹತ್ತಿರ ವೇದಿಕೆಗೆ ಒತ್ತಿಕೊಂಡು ನಿಂತಿದ್ದ ಇನೇನಿಯತ್ತ ನೋಡಿದ. ಬಳಿಕ ತನ್ನ ಆಸನಕ್ಕೊರಗಿ ವಿರಮಿಸುತ್ತಿದ್ದ ಅಧಿಕಾರ ಕೋಲಿನ ಬುಡವನ್ನೆ ದಿಟ್ಟಿಸುತ್ತ ನುಡಿದ:

ಈ ವ್ಯಕ್ತಿಯ ವಿರುದ್ಧ ದೂರು ಕೊಟ್ಟಿರುವ ಇನ್ನೊಬ್ಬ ಪ್ರತಿಷ್ಠಿತ ಮನುಷ್ಯ —ನೀಲಾನೆ ಪ್ರಾಂತದ ದೇವಮಂದಿರದ ಅರ್ಚಕ ಅಪೆಪ್. ಮೂಲತಃ ಈ ದೂರು ಸಲ್ಲಿಸಿರೋದು ಮಹಾ ಅರ್ಚಕರ ಸನ್ನಿಧಿಗೆ. ಅದರ ಸಾರಾಂಶವನ್ನು ಅರಮನೆ ಮಂದಿರದ ಅರ್ಚಕ ಇನೇನಿ ಈಗ ನ್ಯಾಯಸ್ಥಾನಕ್ಕೆ ತಿಳಿಸ್ತಾರೆ."

ಮೆನೆಪ್‌ಟಾ ಕಣ್ಣುಗಳನ್ನು ಕಿರಿದುಗೊಳಿಸಿದ. ಸುಳ್ಳಿನಲ್ಲೂ ವಿಶಿಷ್ಟ ಸುಳ್ಳು ಅಪೆಪ್‌ಗೆ ಆಗಿರುವ ಅನ್ಯಾಯವೇನು? ಆತ ಮಹಾ ಅರ್ಚಕನಿಗೆ ದೂರು ಕಳುಹಿಸಿದ್ದು ಯಾವಾಗ? ಯಾರ ಮೂಲಕ?

ಮಹಾ ಅರ್ಚಕ ಕಣ್ಣೆವೆಗಳನ್ನು ಮುಚ್ಚಿ ಕುಳಿತ. ಇನೇನಿಯ ಗಂಟಲಿನಿಂದ "ಪೆರೋನ ಆಯುರಾರೋಗ್ಯ ವರ್ಧಿಸಲಿ" ಎಂಬ ಘೋಷ ಹೊರಬಿದ್ದೊಡನೆ, ಎವೆಗಳನ್ನು ತುಸು ತೆರೆದು, ಇನೇನಿ–ಮೆನೆಪ್‌ಟಾ–ಅಮಾತ್ಯರೆಲ್ಲರ ಮೇಲೆ ದೃಷ್ಟಿ ಹರಿಸಿದ.

ಪರದೆಯಾಚೆ, ಪೆರೋ ತನ್ನ ಪೀಠದಲ್ಲಿ ಮೈ ಸಡಿಲಬಿಟ್ಟು ಒರಗಿದ್ದುದು ಮೆನೆಪ್‌ಟಾಗೆ ಕಾಣಿಸಿತು. ಮಹಾ ಅರ್ಚಕನಿಗೂ ನಿದ್ದೆ?

ಇನೇನಿಯ ಏರುದನಿ ನ್ಯಾಯಸ್ಥಾನದ ಗೋಡೆಗೆ ಅಪ್ಪಳಿಸಿತು:

"ಇದು ಕೇಳುವ ಕಿವಿಗಳು ಕಿವುಡಾಗುವಷ್ಟು ಕೆಟ್ಟ ಸುದ್ದಿ; ಮಾಡಿದ ಕೈಗಳು ತಾವೇ ಕಡಿದು ಬೀಳುವಷ್ಟು ದುಷ್ಟ ಕೆಲಸ. ಬಂಡಾಯ ಹೂಡಿದ ಮಾರನೆಯ ದಿನವೇ ಈತ ತನ್ನ ಸಂಗಡಿಗರೊಡನೆ ದೇವಮಂದಿರಕ್ಕೆ ನುಗ್ಗಿ ದುಂಡಾವೃತ್ತಿ ನಡೆಸಿದ. ನೆರೆದ ಜನರ ಎದುರಲ್ಲಿ ಅರ್ಚಕ ಅಪೆಟ್‌ನನ್ನು ಥಳಿಸಿದ. ಇಲ್ಲಿರುವ ಮಾನ್ಯ ಭೂಮಾಲಿಕರು ಸೆತೆಕ್‌ನಖ್ತ್ ಮತ್ತು ಸೆನ್‌ಉಸರ್ಟ್ ಇದಕ್ಕೆ ಸಾಕ್ಷಿ. ಮಂದಿರದ ಮೂರ್ತಿ ದೇವರಲ್ಲ, ನಾನೇ ದೇವರು, ನನಗೇ ಪೂಜೆ ಸಲ್ಲಿಸಿ—ಎಂದ. ದೇವಮಂದಿರದ ಉಗ್ರಾಣವನ್ನು ಹೊಕ್ಕು ಭಕ್ತಾದಿಗಳು ನೀಡಿದ ದವಸಧಾನ್ಯ ಮತ್ತಿತರ ಕಾಣಿಕೆಗಳನ್ನು ವಶಪಡಿಸಿಕೊಂಡ. ಬಂಗಾರದ ತಟ್ಟೆಗಳನ್ನು ದೋಚಿದ ಶಿರಚ್ಛೇದನ ಮಾಡಿ ಸ್ಮಾರಕ ಕಂಬಕ್ಕೆ ತೂಗಹಾಕ್ತೇನೆ—ಅಂತ ಅಪೆಟ್‌ನನ್ನು ಹೆದರಿಸಿದ. ಮಹಾಪ್ರಭು—ಮಹಾ ಅರ್ಚಕರು—ಭೂಮಾಲಿಕರು ಒಟ್ಟಾಗಿ ಜಗುಪ್ತವನ್ನು ಹರಿದು ತಿನ್ತಿದ್ದಾರೆ—ಅಂತ ಕೂಗಾಡಿದ. ಇವನು ಮಾಡಿರುವುದು. ದೈವದ್ರೋಹ. ಈತ ಮನುಷ್ಯನಲ್ಲ—ಸಾರಿ ಸಾರಿ ಹೇಳ್ತೇನೆ ಇವನು ಸೆತ್! ಇವನು ಸೆತ್!"

ಮಹಾ ಅರ್ಚಕ ಮೆಚ್ಚುಗೆ ಸೂಚಿಸುವನೇನೋ ಎಂದು ಇನೇನಿ ಅತ್ತ ನೋಡಿದ. ಹೇಪಾಟ್‌ನ ತುಟಿಗಳು ಕಿರುನಗೆ ಬೀರಿದಂತೆ ಕಂಡಿತು.

(ಫೆರೋಗೆ ಪೂರ್ತಿ ಎಚ್ಚರ. ದಾಸಿಯರ ಚಾಮರ ಸೇವೆಗೈ ಆತ ಎಡೆಯೊಡ್ಡಿದ.)

ಹೊರಗೆ ಬಿಸಿಲು. ಗದ್ದಲ. ಇವತ್ತು ಅರಮನೆಯ ಮಹಾದ್ವಾರವನ್ನೂ ಪ್ರಾಕಾರದ ಪಾರ್ಶ್ವದ್ವಾರಗಳನ್ನೂ ತೆರೆಯಬಾರದಿತ್ತು ಎನಿಸಿತು ಅಮಾತ್ಯನಿಗೆ. ಇಷ್ಟು ಹೊತ್ತಿನಿಂದ ಕೇಳುತ್ತ ನಿಂತಿದ್ದಾನೆ. ತುಟಿ ಪಿಟ್ಟೆಂದಿಲ್ಲವಲ್ಲ. ಮುಖದ ಮೇಲೆ ಯಾವ ಭಾವನೆಯೂ ಇಲ್ಲ. ತನ್ನೊಡನೆ ಭೇಟಿ, ಫೆರೋದರ್ಶನ, ಬಳಿಕ ಸೆರೆತಣ—ಆಗ ಹೇಗಿದ್ದನೋ ಈಗಲೂ ಹಾಗೆಯೇ ಇರುವನಲ್ಲ. ವಿಚಿತ್ರ ಪ್ರಾಣಿ. ಅಥವಾ, ಇನ್ನು ಉಳಿಗಾಲವಿಲ್ಲ ಎಂದು ಮನವರಿಕೆಯಾಗಿ ತಣ್ಣಗಾಗಿರುವನೊ? ಇವನನ್ನೊಮ್ಮೆ ಪ್ರಶ್ನಿಸಿ ತೀರ್ಪು ಕೊಟ್ಟುಬಿಡಬಹುದು. ಆದರೆ ಒಂದು ವಾಕ್ಯದಲ್ಲಿ ಅದನ್ನು ಮುಗಿಸುವಂತಿಲ್ಲವಲ್ಲ....ಅದು ದೀರ್ಘವಾಗಿರಬೇಕು. ತೂಕದ ಪದಗಳಿಂದ ಕೂಡಿರಬೇಕು. ಗೋರಿ ದರೋಡೆಗಾರ ಜಜ್‌ಮಂಖನ ಬಗೆಗೆ ತೀರ್ಪನ್ನು ಫೆರೋನ ಎದುರಲ್ಲಿ ಒಂದೆ ನೀಡಿದ್ದೆ. ಈ ಸಲ ಮಹಾ ಅರ್ಚಕನೂ ಇದ್ದಾನೆ. ತನ್ನ ಸಾಮರ್ಥ್ಯಕ್ಕೆ ಆಹ್ವಾನವಾಗಿ ಬಂದಿರುವ ಘಟನೆ ಇದು. ಅಮೆರಬ್ ಇಂದು ನೀಡುವ ತೀರ್ಪು ಥೊಥ್‌ನ ಕಟ್ಟಳೆಯ ಹಾಗೆ ಶಾಶ್ವತವಾಗಬೇಕು. ಭೋಜನಕ್ಕಾಗಿ ವಿಶ್ರಾಂತಿಗಾಗಿ ಈಗ ಕೆಲಸ ನಿಲ್ಲಿಸಿ ಬಿಸಿಲು ಬಾಡಿದ ಮೇಲೆ ಮತ್ತೆ ಸೇರುವುದು ನಿಶ್ಚಿತ. ಇವರು ಏನೆನ್ನುವರೊ? ಅಮಾತ್ಯ ಸೆನೆಬ್‌ನನ್ನು ಕರೆದು "ವಿಚಾರಣೆ ಸಂಜೆಯವರೆಗೂ ನಡೆಯಬಹುದು. ವಿಶ್ರಾಂತಿಯ ಅನಂತರ ಸೇರುವುದು ಮೇಲು

ಅಂತ ತೋರ್ತದೆ. ಅನುಮತಿ ಬೇಕು ಅಂತ ಪೆರೋಗೆ ಬಿನ್ನವಿಸಿ ಬಾ." ಎಂದ. ಮಹಾ ಅರ್ಚಕನಿಗೆ ತಾನೇ ಆ ವಿಷಯವನ್ನು ತಿಳಿಸಿದ.

"ಸರಿ, ಸರಿ. ಅಪೂರ್ವ ವಿಚಾರಣೆ, ಅಪೂರ್ವ ತೀರ್ಪು," ಎಂದ ಹೇಪಾಟ್. ಪರಿಹಾಸ್ಯದ ನುಡಿ, ಚುಚ್ಚಿದರೂ ನೋವಾಗಿಲ್ಲ ಎನ್ನುವಂತೆ ಅಮೆರಬ್ ನಟಿಸಿದ.

(ಸೆನೆಬ್ ತಂದ ಬಿನ್ನಹವನ್ನು ಆಲಿಸಿದೊಡನೆ ಅಂಖ್ ಲಾಂಛನವನ್ನೆತ್ತಿಕೊಂಡು ಪೆರೋ ಎದ್ದ. ಪರಿಹಾರವೂ ಎದ್ದಿತು. ಹೊರಡುತ್ತ ಮಹಾರಾಣಿ ಅಂದಳು: "ಆ ಮೆನೆಪ್‌ಟಾ ಪ್ರಚಂಡ ಮಾತುಗಾರನಂತೆ. ಈ ನಹನ ಹೇಳ್ತಾಳೆ. ತೀರ್ಪಿಗೆ ಮುಂಚೆ ಅವನಿಗೆ ಅವಕಾಶ ಕೊಡಬೇಕೂಂತ ಅಮಾತ್ಯರಿಗೆ ತಿಳಿಸು."

"ಅಪ್ಪಣೆ" ಎಂದು ಹೇಳಿ ಸೆನೆಬ್ ನೆಲದವರೆಗೂ ಬಗ್ಗಿ ನಮಿಸಿದ.)

ಪೆರೋ ನಿರ್ಗಮಿಸಿದೊಡನೆ ಹೇಪಾಟ್ ಎದ್ದ. ತನ್ನ ಪರಿವಾರದೊಡನೆ ಮಹಾಮಂದಿರಕ್ಕೆ ತೆರಳಲೆಂದು ಹೊರಬಿದ್ದ. ಮಹಾರಾಣಿಯಿಂದ ತಂದ ಸಂದೇಶವನ್ನು ಕೇಳಿ, "ಅದಕ್ಕೇನು? ಅಗತ್ಯವಾಗಿ ಅವಕಾಶ ಕೊಡೋಣ," ಎಂದು ನುಡಿದು "ಬಿಸಿಲು ಬಾಡಿದಮೇಲೆ ನ್ಯಾಯಸ್ಥಾನ ಮತ್ತೆ ಸೇರ್ತದೆ" ಎಂದು ಘೋಷಿಸಿ, ತನ್ನ ನಿವಾಸಕ್ಕೆ ಹೊರಟ.

ಮೆನೆಪ್‌ಟಾ ನೋಡುತ್ತಲಿದ್ದಂತೆ ನ್ಯಾಯಸ್ಥಾನದಲ್ಲಿದ್ದ ಆಸಕ್ತ ಪ್ರತಿಷ್ಠಿತರೂ ಬರಿಯ ಪ್ರೇಕ್ಷಕರೂ ಚೆದರಿದರು. ('ಮೆನ್ನ ಇಲ್ಲ, ಯಾರ ಕಣ್ಣಿಗೂ ಬೀಳದಂತೆ ಹೊರಟಿರಬೇಕು. ಅವನು ಹೋಗಿ ಬಟಾನನ್ನು ಕಾಣ್ತಾನೆ. ಎಲ್ಲ ಬಂಧುಗಳಿಗೂ ಈವರೆಗೆ ನಡೆದ ವಿಚಾರಣೆಯ ಕಥೆ ಹೇಳ್ತಾನೆ. ಅವರು ಬಿದ್ದುಬಿದ್ದು ನಗ್ತಾರೆ. ಅಥವಾ ವಿಸ್ಮಿತರಾಗ್ತಾರೆ. ಅಥವಾ....')

ಅವನ ತೋಳುಗಳಿಗೆ ಬಿಗಿದಿದ್ದ ಹಗ್ಗಗಳನ್ನು ಎಡಬಲಗಳಲ್ಲಿ ಯೋಧರು ಹಿಡಿದೇ ಇದ್ದರು. ದಳಪತಿ "ಜತನ! ತಪ್ಪಿಸ್ಕೊಂಡಾನು!" ಎಂದು ಕೂಗುತ್ತ ಮತ್ತಷ್ಟು ಯೋಧರೊಡನೆ ಕಟಾಂಜನದ ಬಳಿಗೆ ಬಂದ. ಆ ಯೋಧರು ಕಟಾಂಜನವನ್ನು ಸುತ್ತುವರಿದು ನಿಂತರು. "ಸೈನ್ಯೆ ಗಡಿಯಿಂದ ಬಂದವರು ನಾಳೆ ದಂಡಯಾತ್ರೆಗೆ ಹೊರಡ್ತಾರಂತೆ. ಅದಕ್ಕೆ ಇವತ್ತು ವಿಶ್ರಾಂತಿಯಂತೆ—ನಾನೇನೋ ಹೇಳಿಬಿಟ್ಟೆ: ಸಾಯಂಕಾಲವೂ ಹೀಗೆಯೇ ಗದ್ದಲ ಇದ್ದರೆ ದೊಡ್ಡ ದಂಡು ಬರಲೇಬೇಕು." ಅಂತ ಎಂದು ದಳಪತಿ ಗೊಣಗಿದ. ಹೊರಗಿದ್ದವರು ಮೆನೆಪ್‌ಟಾನನ್ನು ನೋಡಿ ಹೋಗಲೆಂದು ಒಳಗೆ ಬರತೊಡಗಿದರು. "ಇದೇನು ಕುಣಿತದ ಬಯಲು ಕೆಟ್ಹೋಯ್ತಾ? ನಡೀರಿ!" ಎಂದು ದಳಪತಿ ಗದರಿದ. ಸಭಾಭವನದ ಎಲ್ಲ ಬಾಗಿಲುಗಳನ್ನೂ ಮುಚ್ಚಿಸಿದ.

ಯೋಧರು ಒಬ್ಬೊಬ್ಬರಾಗಿ ಊಟಕ್ಕೆ ಹೊರಟರು. ಅವರ ಸ್ಥಾನದಲ್ಲಿ ಹೊಸಬರು ಬಂದು ನಿಂತರು.

ಮೆನೆಪ್‌ಟಾಗೆ ಅನಿಸಿತು: 'ಈ ವಿರಾಮ ಇಲ್ಲದೆ ಒಮ್ಮೆಗೇ ಮುಗಿದಿದ್ದರೆ ಚೆನ್ನಾಗಿರ್ತಿತ್ತು....ಸಹನೆಯ ಪರೀಕ್ಷೆ....'

ಅವನು ಗೋಡೆಗೊರಗಿದ.

ಒಬ್ಬ ಭಟ ಮೆಲುದನಿಯಲ್ಲಿ "ಕೂತ್ಕೊಳ್ಳಿ ಬೇಕಾದರೆ" ಎಂದ. ಮೆನೆಪ್‌ಟಾ ನೆಲದ ಮೇಲೆ ಕುಳಿತುಕೊಂಡ. ವಿವಿಧ ಭಂಗಿಗಳಲ್ಲಿ ಭಟರೂ ಅವನ ಬಳಿ ಕುಳಿತರು.

ನಾಯಕ ಅಂದುಕೊಂಡ: 'ಇವರೆಲ್ಲ ಬಡವರು. ನನ್ನ ಮೇಲೆ ಇವರಿಗೆ ದ್ವೇಷವಿಲ್ಲ. ಹೊಟ್ಟೆಪಾಡಿಗಾಗಿ ಈ ಉದ್ಯೋಗ ಹಿಡಿದಿದ್ದಾರೆ.'

ಭಟರು ಹಿಂದಿನ ದಿನದ ಉತ್ಸವವನ್ನು ಕುರಿತು (ಆಟದ ಬಯಲಿನಲ್ಲಿ ನಡೆದ ವಿವಿಧ ವಿನೋದಾವಳಿ, ದೀಪಾಲಂಕಾರ, ಫೆರೋ ಪರಿವಾರದ ನೌಕಾ ವಿಹಾರ) ಮಾತು ಆರಂಭಿಸಿದರು. ಆ ಮಾತುಗಳಿಗೆ ಮೆನೆಪ್‌ಟಾ ಕಿವಿಗೊಟ್ಟ. 'ನಾನು ನೋಡದೇ ಇದ್ದ ಸೆಡ್ ಉತ್ಸವ.' ಈ ಹೊತ್ತಿನಲ್ಲಿ ಅವರಿಗೆಲ್ಲ ಅದು ನ್ಯಾಯಸ್ಥಾನ ವಲ್ಲ, ಹರಟೆಯ ಸ್ಥಳ. ಗೋಡೆಯ ತುಂಬ ಒಸೈರಿಸನ ನ್ಯಾಯಸ್ಥಾನದ ಚಿತ್ರ ಗಳು. ಸಾಲಾಗಿ ನಿಂತ ವಿದೇಶೀಯ ಕೈದಿಗಳು. ('ಇವತ್ತಿನ ನ್ಯಾಯಮೂರ್ತಿ ಒಸೈರಿಸನಲ್ಲ, ಅಮೆರಬ್. ನಾನು ವಿದೇಶೀಯನಲ್ಲ—ಇದೇ ಮಣ್ಣಿನ ಸಂತಾನ.' ಫೆರೋ ಒಬ್ಬನ ಶಿರಚ್ಛೇದನ ಮಾಡುತ್ತಿದ್ದಾನೆ. ನಡುಹಗಲಿನಲ್ಲಿ ಈ ಬಣ್ಣಗಳು ಜೀವ ತಳೆದಿವೆ. ಕರಗಿ ಹರಿಯುವಂತೆ ಕಾಣುತ್ತಿದೆಯಲ್ಲ ಆ ಕೆಂಪು? ಇಷ್ಟಿದ್ದರೂ ಈ ನ್ಯಾಯಸ್ಥಾನವೀಗ ಬರಿಯ ಪೀಠಗಳ, ನೆಲಹಾಸುಗಳ, ಪರದೆಯ ಸಭಾಭವನ.

ಊಟ ಮುಗಿಸಿ ಬಂದ ಒಬ್ಬ ಕಾವಲುಭಟನೆಂದ:

"ದಳಪತಿಗೆ ಭಯ. ಪ್ರಾಕಾರ ದ್ವಾರಗಳನ್ನೆಲ್ಲ ಈಗಲೇ ಮುಚ್ಚಿಸಿಬಿಟ್ರು. ಮಹಾದ್ವಾರಕ್ಕೆ ವಿಶೇಷ ಕಾವಲು ಹಾಕಿದ್ದಾರೆ!"

ಇನ್ನೊಬ್ಬ ಪಿಸುದನಿಯಲ್ಲಿ ಅಂದ:

"ಇವರು ತಪ್ಪಿಸ್ಕೊಂಡು ಹೋಗ್ಬೌದು ಅಂತಲಾ?"

"ಹೂಂ."

ಒಂದು ಮಗ್ಗುಲು ಬಾಗಿಲು ತುಸು ತೆರೆದುಕೊಂಡಿತು. ಅರಮನೆಯ ಪರಿಚಾರಿಕೆ ಶೀಬಾ ಒಳಬಂದಳು. ('ಪರಿಚಿತ ಮುಖ.')

"ಏನಕ್ಕ?" ಎಂದು ಕೇಳಿದ ಅವಳ ಪರಿಚಯವಿದ್ದ ಒಬ್ಬ ಯೋಧ.

ಅವಳು ಮಂದಹಾಸ ಬೀರಿದಳು.

"ನಿಮ್ಮದೆಲ್ಲ ಊಟ ಆಯ್ತಾ?"

"ಓಹೋ."

ಹತ್ತಿರ ಬಂದು ಮೆಲ್ಲನೆ ಕೇಳಿದಳು:

"ಇವರಿಗೇನಾದರೂ ಕೊಟ್ಟಿರಾ?"

ಆ ಯೋಚನೆ ಒಬ್ಬಿಬ್ಬರಿಗೆ ಬಂದಿತ್ತು. ಆದರೆ? ಆದರೆ? ಒಬ್ಬ ನುಡಿದ:

"ಹ್ಯಾಗಕ್ಕ ಕೊಡೋದು?"

"ಹೀಗೆ" ಎಂದಳು ಶೀಬಾ, ತನ್ನ ನಡುವಸ್ತ್ರ ಮಡಚಿದ್ದಲ್ಲಿಂದ ಬಾಡಿದ ಹಸುರು ಪೈಪೆರಸ್ ಎಲೆಗಳಲ್ಲಿ ಸುತ್ತಿದ್ದೊಂದು ಸುರುಳಿಯನ್ನು ಹೊರತೆಗೆದು. "ಒಂದೇ ರೊಟ್ಟಿ, ತಿಂದ್ಬಿಡಿ ಅಣ್ಣ. ನನ್ನ ಗುರುತು ಸಿಗಲಿಲ್ಲವಾ, ನಾನು ಮಹಾ ತಾಯಿ, ಅಣ್ಣ" ಎಂದು ಹೇಳಿ, "ಆ ಮೇಲೆ ಆ ಎಲೆಗಳನ್ನು ಹೊರಕ್ಕೆ ಎಸೆದ್ಬಿಡು," ಎಂದೊಬ್ಬ ಯೋಧನಿಗೆ ನಿರ್ದೇಶವಿತ್ತು, ಅವಳು ಹೊರಟುಹೋದಳು.

'ಮಹಾತಾಯಿ!' ಮೆನೆಪ್‌ಟಾಗೆ ಭಾವೋದ್ವೇಗ. ಈ ಜೀವಗಳಿಗೆ ತಾನು ಆಜೀವ ಋಣಿ. ಈ ಹಸುರೆಲೆ—ಓ! (ಈಗ ವಿಪರೀತ ಭಾವೋದ್ವೇಗ.) ಆಕೆ ನಿಜವಾಗಿಯೂ ನನ್ನ ಸಂಬಂಧಿಯೇ. ಈ ರೊಟ್ಟಿ ಬಟಾ ತಂದುದು. ನಮ್ಮೂರಿನ ಎಲೆಯಲ್ಲವೆ? 'ನಾನು ಅಸಹಾಯನಾದರೂ ಈ ಬಾಂಧವರು ಚಟುವಟಿಕೆ ಯಿಂದಿದ್ದಾರೆ'

ಒಬ್ಬ ಯೋಧ ಗಟ್ಟಿಯಾಗಿ ಅಂದ:

"ಶೀಬಾ ಬಹಳ ಧೈರ್ಯವಂತೆ."

ಇನ್ನೊಬ್ಬನೆಂದ:

"ಗಂಡ ಬಂದಿದ್ದಾನೆ. ಒಳ್ಳೆಯವನು."

"ಹೂಂ."

ಮೆನೆಪ್‌ಟಾನ ಬಲತೋಳಿನ ಹಗ್ಗವನ್ನು ಸಡಿಲಬಿಟ್ಟು ಆ ಯೋಧ ಹೇಳಿದ:

"ಬೇಗ ತಿಂದ್ಬಿಡಿ. ಆ ದಳಪತಿ ಬಂದು ಸುಮ್ಸುಮ್ನೆ ಗಲಾಟೆ ಮಾಡಾರು."

ಗಂಟಲು ಒತ್ತರಿಸಿದ ಅನುಭವ. ತನಗೆ ಹಸಿವಿಲ್ಲ. ಆದರೂ, ಬಟಾ ಕಳುಹಿಸಿರುವನೆಂದು, ಮಹಾತಾಯಿ ತಂದುಕೊಟ್ಟಳೆಂದು ತಾನು ತಿನ್ನಬೇಕು. ಸ್ಪರ್ಶ. 'ಓ!' ರುಚಿ, 'ಓ! ಓ!' ಕಣ್ಣಂಚಿನಲ್ಲಿ ನೀರು. ನೆಫಿಸ್ ತಟ್ಟಿದ ರೊಟ್ಟಿ. ಎರಡು ತುಣುಕು ಮೀನಿನ ಉಪ್ಪೇರಿ. ಇದು ಪರಮ ಸುಖ. 'ಓ ನೆಫಿಸ್! ಓ ನೆಫಿಸ್!' ನನಗೆ ಹಸಿವಾಗಿದೆ. (ತಿನ್ನತೊಡಗಿದ ಮೆನೆಪ್‌ಟಾ ತಲೆಬಾಗಿಲಿನಿಂದ ಒಳಬಂದವರಿಗೆ ಕಾಣಿಸದಿರಲೆಂದು, ಕಾವಲು ಭಟರು ಎದ್ದುನಿಂತು, ಸಾಲುಗಟ್ಟಿ ಅವನಿಗೆ ಅಡ್ಡ ವಾದರು.)

(ನಗರದ ಉದ್ಯಾನದಲ್ಲೋ ನದೀತಟದಲ್ಲೋ ಬಟಾ ಮತ್ತು ಸಂಗಡಿಗರು ಅವಿತಿಟ್ಟುಕೊಂಡು ಉಣ್ಣುತ್ತಿರಬೇಕು. ಅವರ ಮಧ್ಯೆ ರಾಮೆರಿಪ್‌ಟಾ. 'ಅವನನ್ನು ಇನ್ನು ನಾನು ನೋಡೋದು ಯಾವಾಗ? ಸ್ವತಂತ್ರನಾಗಿ ನ್ಯಾಯಸ್ಥಾನದಿಂದ ಹೊರ ಹೋಗೋದಕ್ಕೆ ನನ್ನನ್ನು ಇವರು ಬಿಡುತ್ತಾರಾ? ನೆಫಿಸ್ ಲೆಕ್ಕ ಹಾಕಿ ಹೇಳಿದ್ದಳು. ಕುಯಿಲಿಗೆ ಸರಿಯಾಗಿ ಹೆರಿಗೆ. ನಾನು ಹತ್ತಿರ ಇಲ್ಲ ಎಂದು ಮನಸ್ಸುಮುದುಡಿರಬೇಕು. ನಾನಿಲ್ಲದಿದ್ದರೂ ಏನು? ಇಷ್ಟೊಂದು ಬಂಧುಗಳ ಸವಿಸಾನ್ನಿಧ್ಯಇಲ್ಲವೆ?....)

ಒಬ್ಬ ಯೋಧ ಬಂದು ಪೆಪೈರಸ್ ಎಲೆಗಳನ್ನು ಬಾಚಿ, ಅಂಗೈಯಲ್ಲಿ ಮುದುಡಿ ಹಿಡಿದು, ಎಸೆಯಲೆಂದು ಹೊರಹೋದ.

ಹಗ್ಗ ಹಿಡಿದುಕೊಂಡಿದ್ದ ಒಬ್ಬ ಪಿಸುದನಿಯಲ್ಲಿ ಕೇಳಿದ:

"ಜಲಬಾಧೆ?"

('ಸಂಜೆಯ ವರೆಗೂ ಹೀಗೆಯೇ ಇರಬೇಕಲ್ಲಾ. ಹೋಗಿ ಬರೋದು ಮೇಲು.')

ಇನ್ನೊಬ್ಬನೆಂದ:

"ಬನ್ನಿ. ಅಮಾತ್ಯರಿಗೋಸ್ಕರ ಕಟ್ಟಿಸಿರೋದು ವೇದಿಕೆಯ ಆ ಬದಿಗಿದೆ."

ಮೂವರೂ ಎದ್ದರು. ಆ ಕೊಠಡಿಗೆ ಒಬ್ಬನನ್ನೇ ಬಿಟ್ಟು ಭಟರು ಬಾಗಿಲಲ್ಲಿ ನಿಂತರು. ಹರಿಯುವ ನೀರು. ಕೈಬಾಯಿ ಮುಖ ತೊಳೆದುಕೊಂಡ. ತಲೆಗೂದಲಿಗೂ ನೀರು ಹನಿಸಿ ಬೆರಳುಗಳಿಂದ ಹಿಂದಕ್ಕೆ ಬಾಚಿದ. ಮುಂಡವನ್ನು ತಣ್ಣೀರಿನಿಂದ ಒರೆಸಿದ. ಮಾಲಿನ್ಯ ಕಳೆದು, ಶುಚಿ ಎನಿಸಿದಾಗ, ಬೊಗಸೆ ನೀರು ಕುಡಿದಾಗ, ನೀಲನದಿಯಲ್ಲಿ ಈಸಿ ಮುಳುಗಿ ಎದ್ದು ಬಂದಷ್ಟು ಸಮಾಧಾನವಾಯಿತು.

ಮೆನೆಪ್ಟಾ ಜಲಬಾಧೆಗೆಂದು ಎದ್ದೊಡನೆ ಇಬ್ಬರು ಯೋಧರು ತಲೆವಾಗಿಲಿನತ್ತ ಧಾವಿಸಿದ್ದರು. ಅದನ್ನು ತುಸು ತೆರೆದು ಹೊರನೋಡುತ್ತ ನಿಂತಿದ್ದರು. ಅದು ಇದ್ದಕಿದ್ದಂತೆ ದಳಪತಿ ಬಂದು ಬಿಡದಂತೆ ಮುನ್ನೆಚರಿಕೆ. ಮೆನೆಪ್ಟಾ ಕಟಾಂಜನದತ್ತ ಮರಳಿದೊಡನೆ ಆ ಯೋಧರೂ ಹಿಂತಿರುಗಿದ್ದರು.

ಎಲ್ಲ ಸದ್ದುಗಳೂ ಸ್ವಲ್ಪ ಕಾಲ ಕುಗ್ಗುವಂತೆ ಮಾಡುವ ಪ್ರಖರತೆ ರಾಸಮು. ಆತ ಪಶ್ಚಿಮದತ್ತ ವಾಲಿದ ಮೇಲೆಯೇ ಬದುಕಿನ ಹತ್ತು ಸಪ್ಪಳ.

ರಾ ನಡು ನೆತ್ತಿಯ ಮೇಲೆಯೇ ನಿಂತನೇನೋ, ಇವತ್ತು ಹೊತ್ತು ಕ್ರಮಿಸುತ್ತಿಲ್ಲವೇನೋ—ಎನಿಸಿತು ಮೆನೆಪ್ಟಾಗೆ. ಹೊರಗಿನಿಂದ ಆ ಶಬ್ದ ಕೇಳಿ ಮತ್ತೂ ಸ್ವಲ್ಪ ಹೊತ್ತಾದ ಮೇಲೆ, ದಳಪತಿ ದಪ್ಪ ಹೆಜ್ಜೆಗಳನ್ನಿಡುತ್ತ ಬಂದ.

ಅವನೆಂದ:

"ಕೈದೀನ ಯಾಕೆ ಕೂತ್ಕೊಳ್ಳೋದಕ್ಕೆ ಬಿಟ್ಟಿರಿ? ಹಿಡಿದು ನಿಲ್ಲಿಸಿ. ಎಲ್ಲಿ ಇದ್ದೀರಿ ಎನ್ನುವ ಕಲ್ಪನೆ ಇಲ್ಲವಾ ನಿಮಗೆ? ಬಧ್ಧಿ ಇಲ್ಲದ ಕತ್ತೆಗಳು. ತಲೆಹೋದಾತು, ತಲೆ!"

ಹಾಗೆ ಹೇಳುತ್ತ ತನ್ನ ಎಡ ಅಂಗೈಯನ್ನು ಕೊರಳಿಗೆ ಅಡ್ಡವಾಗಿ ರಭಸದಿಂದ ತಂದು 'ಕ್ಲಕ್' ಎಂಬ ಸಪ್ಪಳವನ್ನೂ ಆತ ಮಾಡಿದ.

ಏರುದನಿಯಲ್ಲಿ ಅವನು ಮುಂದುವರಿದ:

"ಜನರಿಗೂ ಬುದ್ಧಿ ಇಲ್ಲ. ಕುರಿಗಳ ಹಾಗೆ ನುಗ್ತಾರೆ. ಕಟ್ಟುನಿಟ್ಟಾಗಿ ನೂರು ಜನರನ್ನು ಮಾತ್ರ ಒಳಗ್ಬಿಡಿ. ನೂರೇ ಜನ. ಉಳಿದವರೆಲ್ಲ ನ್ಯಾಯಮೂರ್ತಿ ತೀರ್ಪು ಕೊಟ್ಟಾದ ಮೇಲೆ ಬಂದು ನೋಡಿ ಹೋಗ್ಲಿ."

ಯೋಧನೊಬ್ಬ ಒಳಕ್ಕೆ ಧಾವಿಸಿ, "ಅಮಾತ್ಯರ ಪಲ್ಲಕಿ," ಎಂದು ತಿಳಿಸಿದ. ದಳಪತಿ ಅತ್ತ ಓಡಿದ.

ಅಮಾತ್ಯ ತನ್ನ ನಿವಾಸದಿಂದ ಹೊರಟ ಸುದ್ದಿ ಯಾಗಲೇ ದೇವಮಂದಿರಕ್ಕೂ ತಲಪಿತ್ತು. ನ್ಯಾಯಸ್ಥಾನ ಮತ್ತೆ ಸೇರುತ್ತದೆ ಎಂಬುದನ್ನು ಅರಮನೆಯ ವಿಸ್ತರಣಕ್ಕೆ

ಕಂಚಿನ ಜಾಗಟೆ ಸಾರಿತು. ಪೆರೋಗೆ ಆಯುರಾರೋಗ್ಯ ಕೋರಿ ನ್ಯಾಯಮೂರ್ತಿ ಆಸೀನನಾದೊಡನೆಯೇ, ಪ್ರತಿಷ್ಠಿತರು ಅವಸರ ಅವಸರವಾಗಿ,ಒಬ್ಬರ ಹಿಂದೊಬ್ಬರು, ಒಳಕ್ಕೆ ಬಂದರು.

ಆಮೆರಬ್ ಅಪ್ಪಿತಪ್ಪಿಯೂ ಕಟಾಂಜನದತ್ತ ದೃಷ್ಟಿ ಹರಿಸಲಿಲ್ಲ. ಮೆನೆಪ್‌ಟಾ ಮಾತ್ರ ಎದೆ ಅಗಲಿಸಿ ನಿಂತು ಅಮಾತ್ಯನನ್ನೇ ದಿಟ್ಟಿಸಿದ, ಅವನಿಗೆ 'ನಿಮ್ಮ ಕಷ್ಟ ನೋಡಲಾರೆ ಅಮಾತ್ಯವರ್ಯ' ಎಂದು ಗಟ್ಟಿಯಾಗಿ ಕೂಗಿ ಹೇಳಬೇಕೆನಿಸಿತು. ಮರುಕ್ಷಣವೆ, ಅಂಥ ವಿಚಾರ ಮೂಡಿತಲ್ಲ—ಎಂದು ನಗು ಬಂತು.

ಎಲ್ಲ ಪೂರ್ವಾಹ್ನದಂತೆಯೇ. ಅಲ್ಲಿ ಅವರು. ಇಲ್ಲಿ ಇವರು. ಪ್ರತಿಯೊಂದೂ.... ಊಹೂಂ. ಹಾಗೆ ಖಚಿತವಾಗಿ ಹೇಳುವಂತಿಲ್ಲ. ಒಂದು ಸಣ್ಣ ವ್ಯತ್ಯಾಸ. ಸಣ್ಣದೊ? ದೊಡ್ಡದೊ? ಏನು ಅಂದರೆ—

ಮೊದಲು ಮಹಾ ಅರ್ಚಕ ಮತ್ತು ಪರಿವಾರದ ಆಗಮನ. ಬಳಿಕ ಪೆರೋ ಮತ್ತು ಬಳಗ.

ಮೊದಲಾದರೇನು? ಅನಂತರವಾದರೇನು? ಈಗ ಇವರೆಲ್ಲ ಒಂದೇ. ಏಕ ಧ್ಯೇಯದಿಂದ ಪ್ರೇರಿತರು; ಸಮಾನ ಧರ್ಮದಿಂದ ಬಂಧಿತರು. ('ಅವರು ಆಟಗಾರರು, ಕುಳಿತಿದ್ದಾರೆ. ಇನ್ನು ಕಾಯಿಯ ಸರದಿ')

ನ್ಯಾಯಮೂರ್ತಿಯ ಧ್ವನಿ :

"ಘೋರ ಆರೋಪಗಳಿಗೆ ಗುರಿಯಾಗಿರುವ ಅಪರಾಧಿ ಮೆನೆಪ್‌ಟಾ! ನೀನು ಹೇಳುವಂಥದು ಏನಾದರೂ ಇದೆಯೋ? ಇದ್ದರೆ, ನ್ಯಾಯವನ್ನು ಆಧರಿಸಿರುವ ಈ ಆಸ್ಥಾನ ಅವಕಾಶ ನೀಡ್ತದೆ."

ಮುಗುಳುನಗೆ ಸೂಸಿ ಮೆನೆಪ್‌ಟಾ ಅಂದ :

"ಇದೆ ಸ್ವಾಮಿ. ಹೇಳಬೇಕಾದ್ದು ಬಹಳ ಇದೆ."

"ರಾ ಅಸ್ತಮಿಸುವ ಹೊತ್ತಿಗೆ ನ್ಯಾಯಾಸ್ಥಾನ ತನ್ನ ಕೆಲಸ ಮುಗಿಸ್ಬೇಕು ಅನ್ನೋದು ಗಮನದಲ್ಲಿರಲಿ. ಮುಖ್ಯಾಂಶಗಳನ್ನಷ್ಟೇ ಹೇಳು."

ಮೆನೆಪ್‌ಟಾ ಅಮಾತ್ಯನ ಹಾಗೂ ಮಹಾ ಅರ್ಚಕನ ಶೀತಲ ದೃಷ್ಟಿಗಳನ್ನು ಇದಿರಿಸಿದ. ಪರದೆಯೊಳಗಿದ್ದವರನ್ನೂ ನೋಡಿದ. ಉಚ್ಚ ಕಂಠದಲ್ಲಿ. ಸುಸ್ಪಷ್ಟವಾಗಿ ಅವನೆಂದ:

"ಕೈದಿಗೆ ಮಾತನಾಡುವ ಸ್ವಾತಂತ್ರ್ಯ ನೀಡಲಿಲ್ಲ ಅನ್ನೋ ಅಪವಾದಕ್ಕೆ ಗುರಿಯಾಗ್ತಿರಲ್ಲಾ ಸ್ವಾಮಿ. ಇದು ನ್ಯಾಯವನ್ನು ಆಧರಿಸಿರುವ ಆಸ್ಥಾನ!"

ಟೆಹುಟಿಗೆ ತೃಪ್ತಿ. ಹೀಗೆ ಮಾತಾಡಿದವನನ್ನು ತಾನು ದಂಡಿಸಿದ್ದು ತಪ್ಪು ಎಂದು ಯಾರು ಹೇಳುತ್ತಾರೆ. ಈಗ?

(ಪೆರೋ ಚಾಮರ ಬೀಸುತ್ತಿದ್ದ ದಾಸಿಯರಿಗೆ 'ಸಾಕು' ಎಂದು ಸನ್ನೆ ಮಾಡಿದ. ಅವನ ಕಿವಿ ಚುರುಕಾಯಿತು.)

ಸಿಟ್ಟನ್ನು ಅದುಮಿ ಹಿಡಿದು ಅಪೆರಿಜ್ ಅಂದ :

"ಇದು ನೀರಾನೆ ಪ್ರಾಂತದ ರೈತರ ಸಭೆಯಲ್ಲ. ಹುಷಾರಾಗಿ ಮಾತನಾಡು."

"ನಯ ನಾಜೂಕು ನನಗೆ ತಿಳೀದು. ಉತ್ತನೆ ಬಿತ್ತನೆ ಗೊತ್ತು. ಮಹಾ ಪೂರದ ಸಮಯದಲ್ಲಿ ಕಲ್ಲು ಸೀಳಿದ್ದೇನೆ, ಕಟ್ಟಿದ್ದೇನೆ; ಮಂದಿರದ ಗೋಡೆ ಕಟ್ಟಿದ್ದೇನೆ. ಎರಡರ್ಥದ ನವುರು ಮಾತು ಕಲೀಲಿಲ್ಲ. ಕಂಡದ್ದನ್ನು ಕಂಡ ಹಾಗೆ ಹೇಳೋದೆ ಅಭ್ಯಾಸ. ಅಮಾತ್ಯವರ್ಯರೆ, ನಿಮ್ಮನ್ನು ಒಂದು ಮಾತು ಕೇಳಲಿ ?"

"ಏನದು ?"

"ಕೋಪಿಸ್ಕೋಬೇಡಿ. ಶಿಷ್ಟಾಚಾರಕ್ಕೆ ಸಂಬಂಧಿಸಿದ್ದು. ಎಪ್ಪತ್ತು ದಿನಗಳಿಗೆ ಹಿಂದೆ ನಿಮ್ಮನ್ನು ನಾನು ಭೇಟಿಯಾದಾಗ, ಅತಿಥಿಗೃಹದಲ್ಲಿ ಎಲ್ಲ ಅನುಕೂಲವಾಗಿದೆಯಾ ?—ಅಂತ ಕೇಳಿದ್ದಿರಿ. ಕಾರಾಗೃಹದಲ್ಲಿ ಎಲ್ಲ ಅನುಕೂಲವಾಗಿದೆಯಾ ?—ಅಂತ ಇವತ್ತು ಕೇಳಲಿಲ್ಲವಲ್ಲ..."

"ಮುಂದುವರಿಸು !"

"ಸೆಡ್ ಉತ್ಸವಕ್ಕೆ ಹತ್ತು ದಿನ ಮುಂಚಿತವಾಗಿಯೇ ಬರಬೇಕೂಂತ ಎಲ್ಲ ಪ್ರಾಂತಪಾಲರಿಗೂ ಕರೆ ಕಳಿಸಿದೆ; ನೀರಾನೆ ಪ್ರಾಂತದ ನಾಯಕ ಕೂಡಾ ಈ ಉತ್ಸವದಲ್ಲಿ ಭಾಗವಹಿಸಬೇಕು — ಇದು ಮಹಾಪ್ರಭು ನನಗೆ ನೀಡಿದ ಆದೇಶ. ಅಮಾತ್ಯರ ಮೂಲಕ. ಓ ಅಲ್ಲಿ ನಿಂತಿರೋ ರಾಜದೂತ ತಂದ್ಕೊಟ್ಟ. ಹೊರಟು ಬಂದೆ. ಹತ್ತು ದಿವಸ ಅಲ್ಲ, ಎಪ್ಪತ್ತು ದಿವಸ ಕಾದೆ. ಉತ್ಸವ ಮುಗೀತು. ಇವತ್ತು ನಾನು ಊರಿಗೆ ಹೊರಡಬೇಕಾದ, ನೀರಾನೆ ಪ್ರಾಂತದ ನಾಯಕನಿಗೆ ನೀವು ವಿದಾಯ ನುಡಿಯಬೇಕಾದ, ದಿವಸ. ಯಾವ ಕಸಿವಿಸಿಯೂ ಇಲ್ಲದೆ ಬರಲಿ ಅಂತ ಅಮಾತ್ಯರಾಗಿ ತಿಳಿಸಿದ್ದಿರಿ. ಯಾವ ಕಸಿವಿಸಿಯೂ ಇಲ್ಲದೆ ಈ ಆಸ್ಥಾನದಲ್ಲಿ ನಾನೀಗ ನಿಂತಿದ್ದೇನೆ."

"ನಮ್ಮ ಮಾಟ್ ನಮ್ಮನ್ನು ಕಾಯ್ತದೆ ಅನ್ನೋ ನಂಬಿಕೆಯಿಂದ ನಾವು ಋಜುಮಾರ್ಗ ಹಿಡಿದೆವು. ನಮ್ಮ ಪ್ರಾಚೀನ ಕಟ್ಟಳೆ ಏನು ಹೇಳ್ತದೆ ? 'ಬಡವರು ಮತ್ತು ದೊಡ್ಡ ಮನುಷ್ಯರು ಇಬ್ಬರಿಗೂ ಹಕ್ಕು ಇರಲೆಂದೇ ಮಹಾ ಪ್ರವಾಹವನ್ನು ನಾನು ಸೃಷ್ಟಿಸಿದೆ' ಅಂತ ದೇವರು ಸಾರಿದ ಎಂದಲ್ಲವಾ ? ಲಿಪಿ ಸುರುಳಿ ಏನು ಬೋಧಿಸ್ತದೆ ? ಒಂದು ಮೊಳ ಭುವಿಗಾಗಿ ಆಸೆಬರುಕನಾಗದಿರು. ವಿಧವೆಯ ಹೊಲಕೆ ಅತಿಕ್ರಮಿಸಿ ನುಗ್ಗದಿರು. ಅತಿಕ್ರಮಣದಿಂದ ಗಳಿಸುವ ಐದುನೂರು ಬಳ್ಳಕ್ಕಿಂತ ದೇವರು ನಿನಗೀವ ಒಂದು ಬಳ್ಳವೇ ಮೇಲು, ಹೀಗಲ್ಲವಾ ? [ಮಹಾ ಅರ್ಚಕ ಇನೇನಿಯತ್ತ ನೋಡಿದ. ಆತ ಭಯ ಭಕ್ತಿಯಿಂದ ಹತ್ತಿರಕ್ಕೆ ಬಾಗಿದಾಗ ಏನನ್ನೋ ಉಸುರಿದ.] ಎಲ್ಲ ಕಡೆ ಬೋಧನೆಗೆ ಮಾತ್ರ ಮೀಸಲಾಗಿರುವ ಈ ತತ್ತ್ವಗಳನ್ನು ನೀರಾನೆ ಪ್ರಾಂತದಲ್ಲಿ ನಾವು ಅನುಷ್ಠಾನಕ್ಕೆ ತಂದಿದ್ದೇವೆ. ಅದು ತಪ್ಪೆ ಸ್ವಾಮಿ ?"

ಇನೇನಿ ಗಟ್ಟಿಯಾಗಿ ಅಂದ :

"ಮಹಾ ಅರ್ಚಕರು ಅಪ್ಪಣೆ ಕೊಡಿಸಿದ್ದಾರೆ: ತೀರಾ ಕೆಳಮಟ್ಟದ ಈ ಮನುಷ್ಯನಿಗೆ ಪವಿತ್ರ ಕಟ್ಟಳೆಗಳನ್ನು ಉಚ್ಚರಿಸುವ ಹಕ್ಕಿಲ್ಲ!

"ಮಹಾಪರಾಧವಾಯಿತಲ್ಲವಾ ನನ್ನಿಂದ? ತಿಳೀದೆ, ಅದಕ್ಕಿಂತಲೂ ದೊಡ್ಡ ಒಂದು ತಪ್ಪು ಮಾಡಿದ್ದೇನೆ. ನಮ್ಮ ನೇಕಾರ ಅನ್ಬು ಟೆಹುಟಿಯ ಯೋಧರ ಬಾಣಕ್ಕೆ ಬಲಿಯಾದ. ಅವನನ್ನು ಮಣ್ಣು ಮಾಡೋದಕ್ಕೆ ಮುಂಚೆ ನಮ್ಮೂರಿನ ಅರ್ಚಕ ಅಪೆಟ್ ಕೈಲಿ 'ಬೆಳಕಿಗೆ ಆಗಮನ' ಗ್ರಂಥ ಓದಿಸಿದ್ದೇನೆ."

"ಬಡ ನೇಕಾರನ ಶವಸಂಸ್ಕಾರಕ್ಕೆ 'ಬೆಳಕಿನ ಆಗಮನ' ಗ್ರಂಥ ವಾಚನ! ಇದು ದೈವದ್ರೋಹದ ಪರಮಾವಧಿ!"

"ದೊಡ್ಡವರೆಲ್ಲ ಸತ್ತ ಮೇಲೆ ಕತ್ತಲೆಯಿಂದ ಬೆಳಕಿಗೆ ಬರ್ತಾರೆ. ಹುತಾತ್ಮನಾದ ಬಡ ಅನ್ಬುವಿಗೂ ಆ ಭಾಗ್ಯ ಇರೋದು ನ್ಯಾಯಸಮ್ಮತ ಅಲ್ಲವಾ?"

"ಇದು ತಲೆಹರಟೆ!"

"ಈಗಲೇ ಕೇಳೋದು ಮೇಲು, ಅಯ್ಯ, ನಮ್ಮ ಅರ್ಚಕ ಅಪೆಟ್ ಸಲ್ಲಿಸಿದ ದೂರು ಅಂತ ಅದೇನೋ ಹೇಳಿದಿರಲ್ಲ? ಅದನ್ನು ಯಾರು ತಂದುಕೊಟ್ರು?"

"ಅದಕ್ಕೆಲ್ಲ ನಮ್ಮದೇ ವ್ಯವಸ್ಥೆ ಇದೆ."

"ಬಲ್ಲೆ. ಐಗುಪ್ತದಲ್ಲಿ ಗೂಢಚರ್ಯೆ ಅರ್ಚಕ ವೃತ್ತಿಯ ವೈಶಿಷ್ಟ್ಯ."

"ಅಪರಾಧಿಯ ಅಂಬೋಣವೇನು? ಈ ದೂರು ಸ್ಪಷ್ಟನೆ ಅಂತಲೊ?"

"ಹೀಗೆಯೇ ಹೇಳು ಅಂತ ಮಹಾ ಅರ್ಚಕರು ಆಜ್ಞಾಪಿಸಿದರೆ ಅದನ್ನು ಪಾಲಿಸುವ ಮನುಷ್ಯನೇ ಅಪೆಟ್. ಅದರಲ್ಲಿ ಸಂದೇಹವಿಲ್ಲ. ಆದರೆ ತಾವಾಗಿ ಅವರು ಆ ದೂರು ಕಳಿಸಿದ್ರು ಅನ್ನೋದನ್ನು ನಂಬಲಾರೆ. ಹೇಳಿ, ಈ ದೂರು ಯಾವಾಗ ಬಂತು?"

ಇನೇನಿಯ ಧ್ವನಿ ಮತ್ತಷ್ಟು ಏರಿತು :

"ನೀರಾನೆ ಪ್ರಾಂತಕ್ಕೆ ಹೋಗಿದ್ದ ರಾಜದೂತ ತಂದುಕೊಟ್ಟ."

ಮೆನೆಪ್ಟಾ ಸರಕ್ಕನೆ ಪ್ರತಿಷ್ಠಿತರ ಸಾಲಿನ ಹಿಂದೆ ನಿಂತಿದ್ದ ರಾಜದೂತನತ್ತ ನೋಡಿ ಕೇಳಿದ :

"ರಾಜದೂತರೆ, ತಂದುಕೊಟ್ಟದ್ದು ನಿಜವಾ?"

ರಾಜದೂತ ತಬ್ಬಿಬ್ಬಾದರೂ ತಕ್ಷಣವೆ ಸುಧಾರಿಸಿಕೊಂಡು, ಕಣ್ಣುಗಳನ್ನು ಮುಚ್ಚಿ ಗಟ್ಟಿಯಾಗಿ ಅಂದ:

"ಹೌದು."

"ಏನಪ್ಪ ಎಲ್ಲರೂ ಸುಳ್ಳು ಹೇಳ್ತಾರೆ ಅಂತ ನೀವು ಕೂಡಾ—? ಅವತ್ತು ನಮ್ಮ ದಳಪತಿ ಖೈಮ್‌ಹೊಟೆಪ್‌ನ ಮನೇಲಿ ಊಟ ಮಾಡಿದಿರಿ, ವಿಶ್ರಾಂತಿ ಪಡೆದಿರಿ, ಸಾಯಂಕಾಲ ದೋಣಿ ಹತ್ತಿ ಮರುಪ್ರಯಾಣ ಬೆಳೆಸಿದಿರಿ. ಅರ್ಚಕ ನಿಮ್ಮನ್ನು ಕಾಣಲಿಲ್ಲ. ಯಾವ ದೂರನ್ನೂ ಒಪ್ಪಿಸಲಿಲ್ಲ. ನಿಜವಾ?"

ರಾಜದೂತನ ಮುಖ ಕಪ್ಪಿಟ್ಟಿತು. ನ್ಯಾಯಮೂರ್ತಿ ಗದರಿದ:

"ಹೀಗೆಲ್ಲ ಪ್ರಶ್ನೆ ಕೇಳೊದಕ್ಕೆ ಅನುಮತಿ ಕೊಡೋದಿಲ್ಲ! ಮುಂದುವರಿಸು!"

"ನ್ಯಾಯಮೂರ್ತಿಗಳೇ, ನೀವು ಅಮಾತ್ಯ ಪಾತ್ರದಲ್ಲಿದ್ದಾಗ, ನೀರಾನೆ ಪ್ರಾಂತದಿಂದ ಬಂದ ನನ್ನನ್ನು ಭೇಟಿಗೆ ಕರೆದಿದ್ದಿರಿ. ಮಹಾ ಅರ್ಚಕರು ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡ್ತಿದಾರೆ ಅಂತ ಸೂಚ್ಯವಾಗಿ ನನಗೆ ತಿಳಿಸಿದಿರಿ. ಆಗ ನಾನು 'ನಮ್ಮೂರಿನ ಅರ್ಚಕ ಅಪೆಟ್ ತನ್ನ ಕೆಲಸ ಎಷ್ಟೋ ಅಷ್ಟ ಮಾಡ್ಕೊಂಡು ಹೋಗ್ತಾರೆ. ಮಂದಿರದ ಖರ್ಚು ವೆಚ್ಚ ನಾವು ನೋಡ್ಕೊಳ್ತೀವೆ' ಅಂದೆ. ನೀವು 'ಅಷ್ಟೇ ಸುಲಭವಾಗಿ ದೇಶದ ವ್ಯಾಪ್ತಿಯಲ್ಲೂ ಆ ಸಮಸ್ಯೇನ ಬಗೆಹರಿಸೋದು ಸಾಧ್ಯವಿದ್ದರೆ!' ಅಂತ ಉದ್ಗಾರ ತೆಗೆದಿರಿ. ಹೌದೆ?"

ಮಹಾ ಅರ್ಚಕ ಸುಟ್ಟುಬಿಡುವವನಂತೆ ಅಮಾತ್ಯನನ್ನು ದಿಟ್ಟಿಸಿದ. ಅಮೆರಬ್ ಹೇಪಾಟ್‌ನ ನೋಟವನ್ನು ಇದಿರಿಸಲು ಹೋಗಲಿಲ್ಲ. ಸಿಟ್ಟಾಗಿ ನುಡಿದ:

"ಏನು ನೀನು ಹೇಳ್ತಿರೋದು? ಕಲ್ಪನೆಯ ನಾವೆಯಲ್ಲಿ ವಿಹಾರ ಮಾಡ್ತಿದ್ದೀಯಾ?"

"ನಿಜವಾದ ದೋಣಿಯಲ್ಲಿ ಐದು ಹಗಲು ಐದು ಇರುಳು ಪ್ರವಾಸ ಮಾಡಿ ಇಲ್ಲಿಗೆ ಬಂದೆ. ಇಳಿಗೊಳ್ಳೋದಕ್ಕೆ ದೋಣಿಕಟ್ಟೆಗೆ, ನೀರಾನೆಪ್ರಾಂತದಿಂದ ಓಡಿ ಬಂದಿದ್ದ ಪ್ರಾಂತಪಾಲರನ್ನು ಅಮಾತ್ಯರು ಕಳಿಸಿದ್ರು. ರಾಜದ್ರೋಹಿಗೆ, ದೈವ ದ್ರೋಹಿಗೆ ಎಂಥ ಸ್ವಾಗತ! ಅವರು ನನ್ನ ಎರಡೂ ಕೈಹಿಡಿದು ತೊಟ್ಟಿಲಾಡಿಸಿದ್ರು, 'ನಾನು ನಿಮ್ಮ ಬಂಧು. ನನ್ನ ಹೆಸರು ಹಿಡಿದು ಗೇಬು ಅಂತ ಕರೀರಿ' ಅಂದ್ರು. 'ನಮ್ಮೂರು ಲಿಷ್ಟನಂಥ ಸುಂದರ ಪಟ್ಟಣ ಐಗುಪ್ತದಲ್ಲೇ ಬೇರೆ ಇಲ್ಲ. ಹುಣ್ಣಿಮೆ ರಾತ್ರೀಲಿ ನದೀಲಿದ್ಕೊಂಡು ಅದರ ಸೊಬಗು ನೋಡ್ಬೇಕು. ಮುಂದಿನ ಹುಣ್ಣಿಮೆಗೆ ಹೋಗ್ಗ ರೋಣ' ಅಂದ್ರು. (ಗೇಬುವಿನತ್ತ ಹೊರಳಿ) ಗೇಬು! ನಿಮ್ಮ ಸಂಸಾರದ ಎಲ್ಲ ಸಾಮಾನುಗಳನ್ನೂ ಎರಡು ದೊಡ್ಡ ಪೆಟಾರಿಗಳಲ್ಲಿ ಹಾಕಿ ಮುದ್ರೆ ಒತ್ತಿ, ಸುರಕ್ಷಿತವಾಗಿ ಇಟ್ಟಿದ್ದೇವೆ—ಅಂತ ನಾನು ಹೇಳಿದ್ದು ನೆನಪಿದೆಯಾ?"

ಅಮಾತ್ಯ: "ಇಂಥ ಅಡ್ಡಪ್ರಶ್ನೆಗಳಿಗೆ ಯಾರೂ ಉತ್ತರ ಕೊಡಬೇಕಾಗಿಲ್ಲ."

ಮೆನೆಪ್‌ಟಾ: "ಏನು ಉತ್ತರ ಕೊಟ್ಟಾರು ಪಾಪ! 'ಅಮಾತ್ಯರಿಗೆ ವಯಸ್ಸಾಯ್ತು, ಆಡಳಿತದ ಮೇಲಿನ ಬಿಗಿ ಸಡಿಲವಾಗಿದೆ ಅಂತ ಟಿಹುಟಿಯ ದೂರು; ಅಮೆರಬ್‌ರನ್ನು ಮನೆಗೆ ಕಳುಹಿಸಿ ತಾನೇ ಅಮಾತ್ಯನಾಗಬೇಕು ಅನ್ನೋ ಆಸೆ ಅವನಿಗೆ; ಆಗಲೇ ಗುಟ್ಟಾಗಿ ಮಹಾ ಅರ್ಚಕರ ಪಕ್ಷ ವಹಿಸಿದ್ದಾನೆ'— ಅಂತಲೂ ಹೇಳಿದ್ರು ನಮ್ಮ ಗೇಬು!... [ತುಸು ತಡೆದು] ಅಮಾತ್ಯರು ಮಾಡಿದ ಏರ್ಪಾಟಿನಂತೆ ಮಹಾಪ್ರಭುವನ್ನೂ ನಾನು ಕಂಡೆ."

ಅಮಾತ್ಯ: "ದೇವಸ್ವರೂಪನ ವಿಷಯ ನ್ಯಾಯಸ್ಥಾನದಲ್ಲಿ ಪ್ರಸ್ತಾಪಿಸಬಾರದು."

ಮೆನೆಪ್‌ಟಾ : "ಪೆರೋನ ಆಯುರಾರೋಗ್ಯ ವರ್ಧಿಸಲಿ! ರಾ ಪುತ್ರ ಅಪ್ಪಣೆ ಕೊಡಿಸಿದ್ರು : 'ತನ್ನ ಮುಂದೆಯ ಸುಖದುಃಖ ಮಹಾಕುಟುಂಬ ಚೆನ್ನಾಗಿ ಬಲ್ಲ. ದೊಡ್ಡ ಕುಟುಂಬ. ಸಣ್ಣಪುಟ್ಟ ವಿರಸ ಸ್ವಾಭಾವಿಕ. ಎಲ್ಲರ ತಂದೆಯ ಒಲವಿನ ಹೊನಲಿನಲ್ಲಿ ತಾಪಗಳು ಮಾಯವಾಗ್ತವೆ, ಗಾಯಗಳು ಮಾಯುತ್ತವೆ,' ಅಂತ. ಇನ್ನೂ ಒಂದು ಮಾತು ಅವರು ಹೇಳಿದ್ರು : 'ಜನರೊಡನೆ ಹೊಣೆಗೆಟ್ಟು ವರ್ತಿಸಿದವನು ದಂಡನೆಗೆ ಅರ್ಹ.' ಆ ವ್ಯಕ್ತಿ ಟೆಹುಟಿ ಅಂತ ನಾನು ತಿಳಿಕೊಂಡೆ."

ಅಮಾತ್ಯ: "ನಿಲ್ಲಿಸು! ಪೆರೋ ಆಡಿದ ಮಾತುಗಳ ಬಗ್ಗೆ ನ್ಯಾಯಾಸ್ಥಾನದಲ್ಲಿ ಚರ್ಚೆ, ಟೀಕೆ ನಿಷಿದ್ಧ..."

ಮೆನೆಪ್‌ಟಾ : "ಸರು ಸದಸ್ಯರಿಗೆ ಔತಣ ಕೊಟ್ಟರಿ. ನನ್ನನ್ನೂ ಕರೆದಿರಿ. ನಿಮ್ಮ ಹಿರಿಯ ಸದಸ್ಯ ಹೆಪ್ಟೆಟ್ 'ಬಿರುಕು ಬಿರುಕೇ. ಸಕಾಲದಲ್ಲಿ ಮುಚ್ಚೋದು ಜಾಣತನ. ಶಾಂತಿ ಮುಖ್ಯ ಶಾಂತಿ, ಅಂದ್ರು. ಒಂದು ಪಕ್ಕದಲ್ಲಿ ಹೆಪ್ಟೆಟ್, ಇನ್ನೊಂದು ಪಕ್ಕದಲ್ಲಿ ಗೇಬು. ಆಗ ನಾನು ನಿಮಗೆ ಬಹಳ ಸಮೀಪವಾಗಿದ್ದೆ. ಭಾರಿ ಔತಣ. ಸುರೆಯ ವಿಷಯದಲ್ಲಿ ಗೇಬು ಹೇಳಿದ್ರು : 'ಪೆರೋಗೆ ಅತ್ಯಂತ ಹಳೆಯ ಸುರೆಯೇ ಬೇಕು. ಪೂರ್ವಜರ ಕಾಲದ್ದು. ರಾ ಐಗುಪ್ತವನ್ನು ಆಳುತ್ತಿದ್ದಾಗಲೇ ಮಾಡಿದ ಸುರೆ! ಯಾವುದಕ್ಕೂ ಒಂದು ಮಿತಿ ಬೇಡವೆ?' ...."

ಅಮಾತ್ಯ: "ಇಲ್ಲ, ಇಲ್ಲ! ವೈಯಕ್ತಿಕವಾದದ್ದೇನೂ ಇಲ್ಲಿ ಮಾತಾಡಬಾರದು."

ಮೆನೆಪ್‌ಟಾ : "ನನ್ನ ಬಂಧು ಬಟಾನಿಗೆ ನಾನು ಹೇಳ್ದೆ : ವೈಯಕ್ತಿಕವಾಗಿ ನನಗೆ ಏನು ಆಗ್ತದೆ ಅನ್ನೋದು ಮಹತ್ವದ್ದಲ್ಲ. ನೀಲಾನೆ ಪ್ರಾಂತದ ಜನ ನೆಮ್ಮದಿಯಿಂದ ಬದುಕೋದು ಸಾಧ್ಯವಾಗ್ಬೇಕು. ಇದಕ್ಕೆ ರಾಜಧಾನಿ ಆಸ್ಪದ ಇತ್ತರೆ ಎಲ್ಲರಿಗೂ ಹಿತ'...."

ಅಮಾತ್ಯ : ಇದು ಬೆದರಿಕೆಯ ಮಾತು! ನಿಮಗಿಷ್ಟ ಬಂದಂತೆ ಬಾಳೋದಕ್ಕೆ ಆಸ್ಪದವೀಯದಿದ್ದರೆ ಅನಾಹುತವಾದೀತು ಅಂತಲೊ?"

ಮೆನೆಪ್‌ಟಾ : "ಸರಳವಾದ ಎರಡು ಪದಗಳಿಗೆ ನ್ಯಾಯಮೂರ್ತಿಯವರು ವಿಪರೀತಾರ್ಥ ಕಲ್ಪಿಸಿದ್ದಾರೆ."

ಅಮಾತ್ಯ : "ನ್ಯಾಯಸ್ಥಾನವನ್ನು ನಿಂದಿಸುವ ಎದೆಗಾರಿಕೆ! ಮೆನೆಪ್‌ಟಾ ನಿನ್ನದು ವಿಪರೀತ ಬುದ್ಧಿ. ಪ್ರಶ್ಚಾತ್ತಾಪ ಪಡಬೇಕಾದೀತು. ಜೋಕೆ!"

ಮೆನೆಪ್‌ಟಾ : "ಜೀವ ತೇದು ದುಡಿಯುವ ಜನರಿಗೆ ಅರೆಹೊಟ್ಟೆ, ಚಾಟಿ ಏಟು ; ಕೊಬ್ಬಿದ ಭೂಮಾಲಿಕರಿಗೆ ಅರಮನೆ ಪಲ್ಲಕ್ಕಿ! ದರಿದ್ರರ ಶವಗಳ ಮೇಲೆ ತುಣುಕು ಬಟ್ಟೆಯೂ ಇಲ್ಲ; ಆದರೆ ಮಂದಿರದ ಸೋಮಾರಿ ಬೆಕ್ಕು ಸತ್ತಾಗ ಅದಕ್ಕೆ ಶವಲೇಪನ! ಅರ್ಚಕ ವರ್ಗದ ಕಾಮ ತೃಷೆಗೆ ದೇವಸೇವಿಕೆಯರ ಬಲಿ ; ಮುದ್ದು ಮಕ್ಕಳ ತಾಯಂದಿರಾಗ ಬೇಕಾದ ಹೆಂಗಳೆಯರಿಗೆ ಮಂದಿರದ ಪವಿತ್ರಗೂಳಿ ಪವಿತ್ರ ಟಗರುಗಳ ಜತೆ ಕಡ್ಡಾಯ ಸಂಭೋಗ!"

ಅಮಾತ್ಯ : "ಅಶ್ಲೀಲ ಪದಗಳನ್ನು ಅಡ್ತಿಯಲ್ಲ. ತಲೆ ಕೆಟ್ಟಿದೆಯಾ?"

ಮೆನೆಪ್‌ಟಾ : "ಕಂಡುದನ್ನು ಕಂಡಂತೆ ಹೇಳೋದು ತಪ್ಪೆ?"

ಅಮಾತ್ಯ : "ಇದು ಖಂಡಿತವಾಗಿಯೂ ಹುಚ್ಚು ಚ್ಚಾರ..."

ಮೆನೆಪ್‌ಟಾ : "ನಿಮಗೆ ಬೇಡದವರಿಗೆ ಹುಚ್ಚ ಅನ್ನೋ ಬಿರುದು ಕೊಡ್ತೀರಿ!" ಬೆಳಕು ಕಡಿಮೆಯಾಗಿತ್ತು. ಇನ್ನು ಮುಚ್ಚಂಜೆ. ಅದಾದ ಮೇಲೆ ಇರುಳು. ಅಮೆರಬ್‌ಗೆ ಚಿಂತೆ, ಸಿಡುಕು. ಈತ ನಿಲ್ಲಿಸುವ ಲಕ್ಷಣಗಳೇ ಕಾಣುಸುತ್ತಿಲ್ಲವಲ್ಲ...

ಅಮಾತ್ಯ : "ಆಯಿತೊ, ಮಾತನಾಡಿ? ಮಹಾ ಅರ್ಚಕರಿಗೆ ಸಂಧ್ಯಾ ಪೂಜೆಗೆ ತಡವಾಗ್ತದೆ."

ಮೆನೆಪ್‌ಟಾ : "ಪೂಜೆಗೆ ಅಡ್ಡಿಯಾಗಲಾರೆ. ಅವರು ಹೋಗಿ ಬರಲಿ."

ಅಮಾತ್ಯ : "ನಿನ್ನಿಂದಾಗಿ ಮಹಾಪ್ರಭು ಮಹಾರಾಣಿ ಎಲ್ಲರಿಗೂ ತೊಂದರೆ."

ನ್ಯಾಯಾಸ್ಥಾನದಲ್ಲಿ ಗುಜುಗುಜು. ಸಾಮಾನ್ಯ ಪ್ರೇಕ್ಷಕರೂ ಜೀವ ತಳೆದು ತಮ್ಮೊಳಗೆ ಮಾತನಾಡತೊಡಗಿದರು. ಇಳಿದನಿಯಲ್ಲಿ ಅಮೆರಬ್–ಹೇಸಾಟ್ ವಿಚಾರವಿನಿಮಯ ಸೆನೆಬ್ ಅಜ್ಞಾಪ್ತನಾಗಿ ಅತ್ತಿತ್ತ ಓಡಿದ.

ಧ್ವನಿ ಏರಿಸಿ ಅಮೆರಬ್ ಅಂದ :

"ಸದ್ದು! ಸದ್ದು! ಎಲ್ಲರೂ ನ್ಯಾಯಾಸ್ಥಾನದ ಪಾವಿತ್ರ್ಯ ಕಾಪಾಡ್ಬೇಕು. ದೀಪಗಳನ್ನು ಬೆಳಗೋದಕ್ಕೆ ಅನುಜ್ಞೆ ನೀಡಿದ್ದೇವೆ. ಅಪರಾಧಿ ಮುಂದುವರಿಸಿ ಬೇಗನೆ ಮುಗಿಸಲಿ."

ಮೆನೆಪ್‌ಟಾ :

"ಉಪಕೃತನಾಗಿದ್ದೇನೆ. ಐಗುಪ್ತದ್ದು ಸಾಟಿ ಇಲ್ಲದ ಪ್ರಾಚೀನ ಸುಸಂಸ್ಕೃತ ನಾಗರಿಕತೆ. ನಮ್ಮ ಸಮಾಜ ವಿಸ್ತಾರ ಬುನಾದಿಯ ಮೇಲಿನ ಹತ್ತಾಳು ಎತ್ತರದ ಗೋರಿ. ಈ ಸೋಪಾನ ವ್ಯವಸ್ಥೆ ನಿಂತಿರೋದು ಸಹಸ್ರ ಸಹಸ್ರ ಶ್ರಮಜೀವಿಗಳ ಭುಜಗಳ ಮೇಲೆ. ಎತ್ತರಕ್ಕೆ ಹೋಗ್ತಾ ಅಗಲ ಕಿರಿದು. ದುಡಿಸುವ ಕಾಪೀದುಗಳು. ಭೂಮಾಲಿಕರು, ವರ್ತಕರು, ಸೈನ್ಯ, ಆಡಳಿತಗಾರರು—ಅರ್ಚಕರು. ಸುಲಿಗೆಯ ಸೂತ್ರ ಈ ವ್ಯವಸ್ಥೆಯನ್ನು ಬಿಗಿದು ಕಟ್ಟಿದೆ."

....ಕಂಚಿನ ದೀವಟಗೆಗಳು ಬರತೊಡಗಿದುವು. (ಹೊರಗೆ ಮಬ್ಬುಗತ್ತಲು.) ದೀವಟಿಗಗೆಳನ್ನು ಇರಿಸುವ ಕೆಲಸ ಪೂರ್ಣವಾಗಲೆಂದು, ಮೆನೆಪ್‌ಟಾ ಮಾತು ನಿಲ್ಲಿಸಿದ. ಎಷ್ಟೋ ವರ್ಷಗಳ ಹಿಂದೆ ಗಡಿಯಲ್ಲಿ ಯುದ್ಧವಾದಾಗ, ದೀಪಗಳ ಬೆಳಕಿನಲ್ಲಿ ಅಮಾತ್ಯ ಕಾರ್ಯನಿರತನಾಗಿದ್ದ. ಕೆಲವರಿಗೆ ಅದರ ನೆನಪಿತ್ತು. ಆದರೆ ನ್ಯಾಯಸ್ಥಾನ ಆ ರೀತಿ ಕಾರ್ಯಕಲಾಪ ನಡೆಸಿದ್ದು ಅದೇ ಮೊದಲು.

ಆ ಬೆಳಕಿನಲ್ಲಿ ಅಲ್ಲಿದ್ದವರನ್ನು ದಿಟ್ಟಿಸಿ, ಮುಂದುವರಿಸಲು ನ್ಯಾಯಮೂರ್ತಿ ಸೂಚನೆ ನೀಡುವುದಕ್ಕೆ ಮೊದಲೇ ಮೆನೆಪ್‌ಟಾ ಮುಗುಳುನಕ್ಕು ಮಾತನಾಡಿದ :

"ಸುಲಿಗೆಯ ಸೂತ್ರ ಈ ವ್ಯವಸ್ಥೆಯನ್ನು ಬಿಗಿದು ಕಟ್ಟಿದೆ, ಅಂದೆ. ನಮ್ಮ ಪ್ರಾಚೀನರ ಮಾತಿನಂತೆ, ಮುಂಗೈ ಜೋರಿನಿಂದ ಏನನ್ನೂ ಸಾಧಿಸಲು ಆಗುವುದಿಲ್ಲ. ಆದರೆ ನಮ್ಮ ನಡವಳಿಕೆ ಆ ಮಾತನ್ನು ಸುಳ್ಳು ಮಾಡಿದೆ! ಕಂದಾಯ ವಸೂಲಿ, ಗೋರಿ ನಿರ್ಮಾಣ, ಗಣಿ ಕೆಲಸ ಇವೆಲ್ಲ ಬಲಪ್ರಯೋಗದಿಂದಲೇ ನಡೀತವೆ. ದಾಸ ದಾಸಿಯರ ಬಲಾತ್ಕಾರದ ದುಡಿಮೆಯಿಂದ ನಮ್ಮಲ್ಲಿ ಸಂಪತ್ತು ಉತ್ಪನ್ನವಾಗ್ತದೆ. ಇದು ಸ್ವರ್ಣ ಪಿಶಾಚಿಗಳ ಸಮಾಜ. ಮನುಷ್ಯ ಜೀವಕ್ಕೆ ಇಲ್ಲಿ ಬೆಲೆ ಇಲ್ಲ. ಹೋರಾಟದಲ್ಲಿ ಸೆರೆ ಸಿಕ್ಕಿದವರು ನಮ್ಮ ವ್ಯವಸ್ಥೆಯ ಗುಲಾಮರಾಗ್ತಾರೆ. ಅವರನ್ನು ಕೆಡವಿದಾಗ ಅವರ ಬಲಗೈಯನ್ನೋ ಯೋನಿಯನ್ನೋ ಕತ್ತರಿಸಿ ತರ್‍ತಾರೆ ನಮ್ಮ ವೀರಯೋಧರು— ಅರಮನೆಯ ಲೆಕ್ಕಿಗನಿಗೆ ದಾಖಲೆ ಇಡಿಸೋದಕ್ಕೆ. ಆ ಸಾಧನೆಯ ಪ್ರಮಾಣಕ್ಕೆ ಅನುಸಾರವಾಗಿ ಬಹುಮಾನ! ಇದಲ್ಲವಾ ನಾಗರಿಕತೆ?...."

ಅಮಾತ್ಯ ಸಿಟ್ಟು ಬೆಂಕಿಯಾಗಿ ಗುಡುಗಿದ:

"ಸಾಕು ಮಾಡು! ನೀನು ಹೇಳೋದಕ್ಕೂ ಈ ವಿಚಾರಣೆಗೂ ಸಂಬಂಧವಿಲ್ಲ!" ಅದನ್ನು ಗಮನಿಸದೆ ಮೆನೆಪ್‌ಟಾ ಮುಂದುವರಿದ:

"ಅಂಥ ನಾಗರಿಕತೆಗೆ ರೋಸಿ, ಸುಲಿಗೆಗೆ ಒಪ್ಪದೆ, ನಾವು—ದಲಿತರು—ಸೆಟೆದು ನಿಂತಿದ್ದೇವೆ. ಎಲ್ಲರೂ ನೆಮ್ಮದಿಯಿಂದ ಬಾಳುವ ಹೊಸ ವ್ಯವಸ್ಥೆಯನ್ನು ರೂಪಿಸ್ತಿದ್ದೇವೆ. ಇಷ್ಟು ಕಾಲ, ಕುರಿಗಳಾಗಿ ಕಟುಕನ ಕತ್ತಿಗೆ ತಲೆಯೊಡ್ಡಿದ್ದು ಸಾಲದೆ? ಆಡಳಿತದ ಒರಳಿನ ಕೆಳಕ್ಕೆ ಪುಡಿಪುಡಿಯಾದದ್ದು ಸಾಲದೆ? ದೇವರ ಹೆಸರಿನಲ್ಲಿ ಅರ್ಚಕರ ಮುಷ್ಟಿಯೊಳಗೆ ಹಿಪ್ಪೆಯಾದದ್ದು ಸಾಲದೆ?"

ನ್ಯಾಯಮೂರ್ತಿ ಅರಚಿದ:

"ನಿಲ್ಲಿಸು! ನಿಲ್ಲಿಸು! ವೇಳೆಯಾಯ್ತು!"

ನ್ಯಾಯಸ್ಥಾನದಲ್ಲಿ ಕಲರವ.

ಮತ್ತೆ ಅಮೆರಬ್ ಕೂಗಿ ನುಡಿದ:

"ಸದ್ದು! ಸದ್ದು!"

ಮೆನೆಪ್‌ಟಾ (ಸ್ವರ ತಗ್ಗಿಸಿ, ನಿಧಾನವಾಗಿ): "ಆಯಿತು. ಕೊನೇ ಮಾತು. ಇಷ್ಟು ದಿನ ನಿಮ್ಮ ಚೌಕಮಣೆ ಆಟದಲ್ಲಿ ಕಾಯಿಯಾಗಿದ್ದೆ. ಈಗ ನೀವೆಲ್ಲ ಒಂದಾಗಿದ್ದೀರಿ. ಸದ್ಯಕ್ಕೆ ಆಟ ಮುಗಿದಿದೆ. ಕಾಯಿಯಾಗಿದ್ದ ನನ್ನ ಅಗತ್ಯ ನಿಮಗಿಲ್ಲ .. ಸ್ನೊಫ್ರು, ಸೆಬೆಕ್ಸು, ನಮ್ಮ ಪ್ರಾಂತದ ಹಿರಿಯ ಸಮಿತಿ ಸದಸ್ಯರು, ಖ್ನೆಮ್‌ಹೊಟೆಪ್—ಎಲ್ಲರ ದೃಷ್ಟಿಯಲ್ಲಿ ನಾನೊಬ್ಬ ಶಾಂತ ಸ್ವಭಾವದ ನಾಯಕ.... ಬಟಾ ಕೇಳಿದ ಒಂದು ಪ್ರಶ್ನೆ ಇದು—'ಅಣ್ಣ ನಿನಗೆ ಸಿಟ್ಟು ಬರೋದು ಯಾವತ್ತು?" (ಬಹಳ ಮೆಲ್ಲನೆ) ಯಾವತ್ತು? ಯಾವತ್ತು? (ಕ್ರಮೇಣ ಧ್ವನಿ ಏರಿಸುತ್ತ) ಮಹಾಪ್ರಭುಗಳೇ, ಮಹಾಅರ್ಚಕರೇ, ಅಮಾತ್ಯರೇ, ಪ್ರತಿಷ್ಠಿತರೇ! ಕಿವಿಕೊಟ್ಟು ಕೇಳಿ! ನಮಗೆ–ಜನರಿಗೆ–ಸಿಟ್ಟು ಬಂದಾಗ ಅದು ಮಹಾಪೂರವಾಗ್ತದೆ. ಅದರಲ್ಲಿ ನೀವೆಲ್ಲ

ಕೊಚ್ಚಿ ಹೋಗ್ತೀರಿ! ಮಹಾಪೂರ ಇಳಿದಾಗ ಕಂಡು ಬರೋ ಜಗತ್ತು ಹೊಸದು—ಹೊಚ್ಚ ಹೊಸದು! ಆ ನೂತನ ಸೃಷ್ಟಿ ನಿರಾತಂಕವಾಗಿ ಆಗಲಿ ಅಂತ—ಇಗೋ—ರಾನನ್ನು ಪ್ಟಾನನ್ನು ಅಮನ್‌ನನ್ನು ಅನನ್ಯ ಭಾವದಿಂದ ನಾನು ಪ್ರಾರ್ಥಿಸ್ತೇನೆ...."

ಮಾತು ಮುಗಿಸಿದ ಮೆನೆಪ್‌ಟಾ ಮಂಡಿಯೂರಿದ, ತಲೆ ಬಗ್ಗಿಸಿದ.

ನೀರವತೆ. ಗಾಳಿ ಆಡಲಿಲ್ಲ. ಪಂಜುಗಳು ಥಾಳಾಗಿ ಉರಿದುವು.

ದೀರ್ಘವೆನಿಸಿದ ಕ್ಷಣಗಳು. (ಪೆರೋ ಕುಳಿತಲ್ಲಿ ಹೊರಳಿದ.) ಮಹಾ ಅರ್ಚಕ ತನ್ನ ಅಧಿಕಾರ ದಂಡವನ್ನು ನೆಲದ ಮೇಲೆ ತುಸು ಮುಂದಕ್ಕೆ ಚಲಿಸಿದ. ಮುಖಗಳು ಕಪ್ಪಿಟ್ಟಿದ್ದರೂ ಅರ್ಚಕ ಪರಿವಾರ ಅಮಾತ್ಯನತ್ತ ನೋಡಿತು. ಕಳಾಹೀನರಾಗಿದ್ದ ಪ್ರತಿಷ್ಠಿತರು ತಮ್ಮೆದುರು ನೆಲದ ಮೇಲೆ ದೃಷ್ಟಿ ನೆಟ್ಟರು. ಪ್ರೇಕ್ಷಕರ ಮುಖಗಳು ಮಾತ್ರ ಏನೋ ಅರ್ಥವಾದಂತೆ ಬೆಳಗಿದುವು.

ಅಮೆರಬ್ ತನ್ನ ಶ್ವಾಸೋಚ್ಛ್ವಾಸವನ್ನು ಕ್ರಮಬದ್ಧಗೊಳಿಸುತ್ತ, ಈಗ ಅದುದೇನು ಎಂದು ಗ್ರಹಿಸಲು ಯತ್ನಿಸಿದ. ಈ ಮೆನೆಪ್‌ಟಾನೇ ತೀರ್ಪು ಕೊಟ್ಟಂತಾಯಿತಲ್ಲ. ಸದಾ ಕಾಲವೂ ಎಲ್ಲರೂ ನೆನಪಿಡುವಂಥ ದೀರ್ಘ ತೀರ್ಪನ್ನು ತಾನು ನೀಡಬೇಕು ಎಂದುಕೊಂಡಿದ್ದೆ. ಆದರೆ—ಆದರೆ....ಯೋಚಿಸಿದ್ದೆಲ್ಲ ನೆನಪಿನಿಂದ ಮರೆಯಾಗಿತ್ತು. (ಗಂಟಲು ಕಟ್ಟಿಕೊಂಡಿದೆ. ಮಾತು ಸರಿಯಾಗಿ ಹೊರಡದು. ಆದರೆ ಇನ್ನು ತಾನು ತಡಮಾಡಬಾರದು. ಮಹಾ ಅರ್ಚಕ ತನ್ನನ್ನೇ ನೋಡುತ್ತಿದ್ದಾನೆ....ಪೆರೋ....)

ಅಮೆರಬ್ ಆರಂಭಿಸಿದ :

"ಘೋರ ಅಪರಾಧಗಳನ್ನು...."

ಆಡಿದ ಪದಗಳು ಆತನಿಗೆ ಕೇಳಿಸಲಿಲ್ಲ. ತುಟಿಗಳನ್ನು ನಾಲಿಗೆಯಿಂದ ಸವರಿ, ಉಗುಳು ನುಂಗಿ ಮತ್ತೆ ಅದೇ ಪದಗಳನ್ನು ಉಚ್ಚರಿಸಿದ :

ಘೋರ ಅಪರಾಧಗಳನ್ನು....ಮಾಡಿದವರಿಗೆ ನ್ಯಾಯಸ್ಥಾನ ವಿಧಿಸುವ ಶಿಕ್ಷೆಯ ವಿವರಗಳು ಹೀಗಿವೆ...."

ಅಮೆರಬ್ ಮತ್ತೊಮ್ಮೆ ತುಟಿಗಳನ್ನು ನಾಲಿಗೆಯಿಂದ ಸವರುತ್ತ ಸೆನೆಬ್‌ನತ್ತ ನೋಡಿದ :

ಒರಿಯ ಲಿಪಿಕಾರ ತೆರೆದು ಸಿದ್ಧಗೊಳಿಸಿದ್ದ ಲಿಪಿಸುರುಳಿಯನ್ನೆತ್ತಿಕೊಂಡು, ಧ್ವನಿಯ ಕಂಪನವನ್ನು ಮರೆಮಾಚಲು ಯತ್ನಿಸುತ್ತ ಓದಿದ :

"ಮೂಗು, ಕಿವಿ, ಕೈ, ನಾಲಿಗೆ ಕತ್ತರಿಸಿ ಅಂಗಛೇದನ; ಖಡ್ಗದಿಂದ ಸೀಳುವುದು : ಶೂಲ ಪ್ರಯೋಗ; ಜೀವಂತ ದಹನ; ಶಿರಚ್ಛೇದನ; ಬದುಕಿರುವಾಗಲೇ 'ಶವಲೇಪನ; ಸ್ವಹಸ್ತದಿಂದ ಮರಣ...."

ಓದಿ ಮುಗಿಸಿ ಸೆನೆಬ್ ತುಸು ಹಿಂದಕ್ಕೆ ಸರಿದ.

ಆಮೆರಬ್ ಕರ್ಕಶವಾಗಿ ನುಡಿದ :

"ಅಪರಾಧಿ ಎದ್ದು ನಿಲ್ಲಲಿ !"

ಆ ಸ್ಥಾನದಿಂದ ಎಲ್ಲಿಂದಲೋ ಒಂದು ಧ್ವನಿ ಕೇಳಿಸಿತು :

"ಹೇಗೂ ಮಂಡಿಯೂರಿದ್ದಾನಲ್ಲ. ಹಾಗೆಯೇ ದಂಡನೆ ವಿಧಿಸಿ."

ಅಮಾತ್ಯನಿಗೆ ವಿಸ್ಮಯ. ಏನದು, ಸಮರ್ಥನೆಯೊ, ವಿಡಂಬನೆಯೊ ?

ಮೆನೆಪ್‌ಟಾ ಬಳಲಿದ್ದ. ಮಿದುಳು, ಮೈ ಎಲ್ಲವೂ ಭಾರ ಎಂಬ ಅನಿಸಿಕೆ. ಕಣ್ಣು ಮುಚ್ಚಿಯೇ ಇರೋಣ, ಹಾಗೆಯೇ ನಿದ್ದೆ ಬಂದರೆ ಚೆನ್ನು—ಎಂದುಕೊಂಡ. ಆದರೆ, 'ಅಪರಾಧಿ ಎದ್ದು ನಿಲ್ಲಲಿ !' ಇನ್ನೊಂದು ಧ್ವನಿ ಯಾರದೋ ತಿಳಿಯದು. ಪರಿಚಿತ ಎಂಬ ಭಾವನೆ, ಛೆ! ತಾನು ಏಳಬೇಕು. ತೋಳುಗಳ ಹಗ್ಗಗಳನ್ನು ಯಾರೋ ಜಗ್ಗುತ್ತಿರುವರಲ್ಲ ?

ಎದ್ದುನಿಂತ, ಮೆನೆಪ್‌ಟಾ, ತನ್ನ ಲವಲವಿಕೆ ಕಂಡು ಅವನಿಗೇ ಅಚ್ಚರಿ. 'ಒಳ್ಳೇದು' ಎಂದುಕೊಂಡ, ಉಸಿರೆಳೆದು ಎದೆ ಹಿಗ್ಗಿಸಿದ. ತಲೆ ಎತ್ತಿ ನ್ಯಾಯ ಮೂರ್ತಿ, ಮಹಾಅರ್ಚಕ, ಪೆರೋ ಎಲ್ಲರನ್ನೂ ದಿಟ್ಟಿಸಿದ. ಮುಖದಲ್ಲಿ ಪ್ರಭೆ. ತುಟಿಗಳಲ್ಲಿ ಮಂದಹಾಸ.

ಆಮೆರಬ್ : "ತಾನು ಎಸಗಿದ ಅಕೃತವನ್ನು ಪಾಪಿ ಮನಗಾಣುವಂತೆ ಮಾಡುವುದು ಭೀಕರವಾದದ್ದು. ಆದರೆ ಅನಿವಾರ್ಯವೆಂದು, ಅಗತ್ಯವೆಂದು ನ್ಯಾಯ ಸ್ಥಾನ ಆ ಕೆಲಸ ಮಾಡಿದೆ. ನೀರಾನೆ ಪ್ರಾಂತದ ಈ ಸಾಮಾನ್ಯ ರೈತ—ದುಡಿಮೆ ಗಾರ—ಮೆನೆಪ್‌ಟಾನಿಂದಾಗಿ, ರಾ ದೇವನ ಸೃಷ್ಟಿಯಾದ ಐಗುಪ್ತಕ್ಕೆ—ಅದರ ಹಿರಿಮೆಗೆ—ಕಳಂಕ ತಟ್ಟಿದೆ. ದೇವರೂಪನಾದ ಮಹಾಕುರುಬ ಅಪಾರ ದುಃಖಕ್ಕೆ ಗುರಿಯಾಗಿದ್ದಾರೆ. ಈ ದೈವದ್ರೋಹವನ್ನು ಕಂಡು, ಐಗುಪ್ತದ ಧರ್ಮವ್ಯವಹಾರ ಗಳ ರಕ್ಷಕರಾದ ಮಹಾ ಅರ್ಚಕರು ವ್ಯಥಿತರಾಗಿದ್ದಾರೆ...."

ಆಮೆರಬ್ ತಡವರಿಸಿದ. ಮುಂದೇನು ಹೇಳಬೇಕು ತಾನು? ಪದಗಳು ರೂಪುಗೊಳ್ಳುತ್ತಿಲ್ಲ. ಏನೂ ತೋಚುತ್ತಿಲ್ಲ. ಈ ಅಪರಾಧಿಯೊ? ತನ್ನೆಡೆಗೆ ನೋಡುತ್ತಿದ್ದಾನೆ. ತನ್ನ ತೊಳಲಾಟ ಕಂಡು ನಗುತ್ತಿದ್ದಾನೆ. ಆ ಪ್ರೇಕ್ಷಕರಲ್ಲಿ ಗುಸುಗುಸು.... ಪಂಜುಗಳ ಬೆಳಕಿನಲ್ಲಿ ಹೀಗಾಗುತ್ತಿದೆಯೇನೊ, ತಾನು ಮುಗಿಸ ಬೇಕು, ಬೇಗ ಮುಗಿಸಬೇಕು. ಅದೊಂದೇ ದಾರಿ....

ಅಧಿಕಾರ ದಂಡವನ್ನು ಆತ ಬಿಗಿಯಾಗಿ ಹಿಡಿದುಕೊಂಡ. ಈಗ ತುಸು ಮೇಲು ಎನಿಸಿತು.

ಆಮೆರಬ್ : ತಟ್ಟಿದ ಕಳಂಕವನ್ನು ಈ ನ್ಯಾಯಸ್ಥಾನ ತೊಡೆದು ಹಾಕ್ತದೆ ! ಈತ ಚಾಪೆಯ ಕೆಳಗಿನ ಹಾವು ! ಈ ಹಾವನ್ನು ಸಾಯಿಸಬೇಕು ! ನೀರಾನೆ ಪ್ರಾಂತದ ಬಂಡಾಯ ನಾಯಕ ಬಡ ರೈತ ಮೆನೆಪ್‌ಟಾಗೆ; ದೇವರೂಪ, ಪೆರೋ ಪೇಪಿಯ ಈ ನ್ಯಾಯ ಸ್ಥಾನ ಶಿರಚ್ಛೇದನದ ಶಿಕ್ಷೆ ವಿಧಿಸ್ತದೆ. ....ಒಡೆಯನ ವಿರುದ್ಧ

ಬಂಡಾಯವೆದ್ದವನಿಗೆ ಅಂತ್ಯ ಸಂಸ್ಕಾರವಿಲ್ಲ. ಪ್ರದರ್ಶನದ ಬಳಿಕ ಶವ ಮೊಸಳೆಗಳಿಗೆ ಆಹಾರವಾಗ್ತದೆ.... ಪೆರೋನ ಆಯುರಾರೋಗ್ಯ ವರ್ಧಿಸಲಿ !"

ಅಧಿಕಾರ ದಂಡದಿಂದ ವೇದಿಕೆಯ ನೆಲವನ್ನು ಕುಟ್ಟಿ ಅಮಾತ್ಯ ಎದ್ದ. ಪೆರೋ, ಪರಿವಾರ, ಮಹಾ ಅರ್ಚಕ ಹಾಗೂ ಬಳಗ, ಟೆಹುಟಿ, ಗೇಬು ಮತ್ತಿತರರು–ಎಲ್ಲರೂ ಎದ್ದರು.

ಪ್ರತಿಷ್ಠಿತರಿಂದ ಘೋಷ ಹೊರಟಿತು :

"ಪೆರೋನ ಆಯುರಾರೋಗ್ಯ ವರ್ಧಿಸಲಿ !"

ದಳಪತಿಯೂ ಮತ್ತಷ್ಟು ಭಟರೂ ಧಾವಿಸಿ ಬಂದರು. ಮರಣದಂಡನೆಗೆ ಗುರಿಯಾದವನನ್ನು ಸುತ್ತುವರಿಯಲು.

ಮೆನೆಪ್‌ಟಾನ ತುಟಿಗಳ ಮೇಲೆ ಮೂಡಿದ ಮಂದಹಾಸ ಕರಗಲೇ ಇಲ್ಲ. ಘೋಷವೊಳಗುತ್ತಿದೆ. ಶಿರಚ್ಛೇದನದ ಶಿಕ್ಷೆ ಎಂದನಲ್ಲ? ('ಚಾಪೆಯ ಕೆಳಗಿನ ಹಾವು— ಅವಸಹ್ಯಕರ ಹೋಲಿಕೆ.') ಶಿರಚ್ಛೇದನ.... ಈಗಲೊ ? ಮತ್ತೆಯೊ ? ಅಂತೂ ಮುಗಿಯಿತು.... ದೊಡ್ಡ ಕತೆ ಮುಗಿಯಿತು.... ಅವರೆಲ್ಲ ಹೊರಟರು. ಈ ಸಾಮಾನ್ಯ ಜನ ಹೋಗುತ್ತಿಲ್ಲ.... ('ಓ ಬಟಾ, ಓ ಬೆಕ್-ಔಟ, ರಾಮೆರಿ, ನೆಫಿಸ್') ಮೆನ್ನ ಆಗಲೇ ಹೊರಬಿದ್ದನೇನೋ.... ಬಂಧುಗಳಿಗೆ ಆತ ಸುದ್ದಿ ತಿಳಿಸಬೇಕು.... ಒಂದಿನ ರಾತ್ರೆ ತಪ್ಪಿಸಿಕೊಂಡು ಹೋಗಲು ಒಪ್ಪಿದರೆ—....'ಸಿಂಹವಾಗಿ ಬಂದವನು'.... ಋಜುಮಾರ್ಗ—ಕಡೆಯವರೆಗೂ ಆ ಮಾರ್ಗದಲ್ಲೇ ನಡೆದೆ....

ಅಮಾತ್ಯನ ಹಿಂದೆ ಹೋಗಿದ್ದ ಸೆನೆಬ್ ಮತ್ತೆ ವೇದಿಕೆಗೆ ಬಂದು ದಳಪತಿಯತ್ತ ನೋಡಿ ಕೂಗಿ ಹೇಳಿದ :

"ಡಂಗುರ ಸಾರಿಸ್ತೇನೆ ! ಜನರೆಲ್ಲ ಅರಮನೆಯ ಆಟದ ಬಯಲಿಗೆ ಬರಲಿ ದಂಡಿಗೆ ಕರೆ ಹೋಗಿದೆ. ವ್ಯವಸ್ಥೆ ನೋಡಿಕೊಳ್ಳೋದಕ್ಕೆ ಬಕಿಲ ನಿಯೋಜಿತನಾಗಿದ್ದಾನೆ. ಪೆರೋ, ಮಹಾ ಅರ್ಚಕರು, ಅಮಾತ್ಯರು ದಂಡನಾಯಕರು, ಸರುಸದಸ್ಯರು, ಪ್ರಾಂತಪಾಲರು—ಎಲ್ಲ ಮಹಾಮನೆಯ ಉಪ್ಪರಿಗೆಯಲ್ಲಿ ನಿಂತು ನೋಡ್ತಾರೆ. ಸ್ವಲ್ಪ ಹೊತ್ತಿನಲ್ಲೇ ಇವನನ್ನು ವಧಸ್ಥಾನಕ್ಕೆ ಎಳಕೊಂಡು ಬಾ."

ವಧಸ್ಥಾನಕ್ಕೆ.... ಸ್ವಲ್ಪ ಹೊತ್ತಿನಲ್ಲಿ ... ಅವನನ್ನು ...'ನಾಯಕರೆ' ಎನ್ನುತ್ತ ಕಪಟ ವಿನಯ ತೋರಿಸುತ್ತಿತ್ತು 'ಕಾಣಿಕೆ' ಬಯಸಿದ ಆ ನರ ಜಂತು.... ಒಂದು ರೀತಿಯಲ್ಲಿ ಇದು ಮೇಲು, ಈ ಕಾರಿರುಳಿನಲ್ಲೇ ಮುಗಿದು ಹೋಗುತ್ತದೆ. 'ರಾಮೆರಿ. ಬಟಾ, ಔಟ, ಬೆಕ್, ಅಹೂರಾ.... ನೀವೆಲ್ಲ ಸುರಕ್ಷಿತವಾಗಿ ಊರಿಗೆ ಮರಳಬೇಕು.' ಮೆನ್ನ—ಮೆನ್ನ —ಇಷ್ಟು ಹೊತ್ತಿಗೆ ಸುದ್ದಿ ತಿಳಿಸಿರ್ತಾನೆ ...

ಮೇಲ್ವಿಚಾರಣೆಗೆ ಬಕಿಲ ನಿಯೋಜಿತನಾಗಿದ್ದಾನೆಂದು ಅರಮನೆಯ ಕಾವಲು ಪಡೆಯ ಮುಖ್ಯಸ್ಥನಿಗೆ ಸಿಟ್ಟು. ಜತೆಗೆ, ಹೋಗಲಿ ಶ್ರಮ ತಪ್ಪಿತು-ಎಂಬ ಸ್ವಲ್ಪ ಸಮಾಧಾನ,

ಹೊರಹೋಗಲು ನಿರಾಕರಿಸಿ, ಮೆನೆಪ್‌ಟಾನನ್ನು ನೋಡುತ್ತ ನಿಂತ ಸಾಮಾನ್ಯ ಜನರೆಡೆಗೆ ಹೊರಳಿ ದಳಪತಿ ಗದರಿದ:

"ಹಿರಿಯ ಲಿಪಿಕಾರ ಹೇಳಿದ್ದು ಕೇಳಿಸ್ಲಿಲ್ಲವಾ ನಿಮಗೆ? ಇಲ್ಲೇನು ಕೋತಿ ಕುಣಿಸ್ತಿದೀವಾ? ನಡೀರಿ ಬಯಲಿಗೆ!"

ಹೊರಗೆ ಡಂಗುರ. ಅರಮನೆಯ ಆವರಣದಿಂದಲೇ ಸ್ವರ:

"ಕೇಳಿರಿ! ಕೇಳಿರಿ! ನೀರಾನೆ ಪ್ರಾಂತದ ಬಂಡಾಯಗಾರ ನಾಯಕ ಮರಣ ದಂಡನೆಗೆ ಗುರಿಯಾಗಿದ್ದಾನೆ. ಶಿರಚ್ಛೇದನ ನೋಡಲು ಜನರೆಲ್ಲ ಅರಮನೆಯ ಆಟದ ಬಯಲಿನಲ್ಲಿ ಈಗಲೇ ನೆರೆಯಬೇಕೂಂತ ಆದೇಶ ನೀಡಲಾಗಿದೆ. ಕೇಳಿರಿ! ಕೇಳಿರಿ!"

o o o o

ನ್ಯಾಯಸ್ಥಾನದ ಹೊರಗೆ ನಿಂತಿದ್ದ ಶೀಬಾ ಪಾರ್ಶ್ವದ್ವಾರದಿಂದ ಮೆನ್ನ ಆಗಲೇ ಹೊರಬಿದ್ದು ಓಡಿಹೋದುದನ್ನು ಕಂಡಿದ್ದಳು. ಕಪ್ಪಿಟ್ಟಿದ್ದ ಮುಖ. ಯಾಕೊ ಭಯವೆನಿಸಿತ್ತು.

ಪ್ರತಿಷ್ಠಿತರು ನ್ಯಾಯಸ್ಥಾನದಿಂದ ಹೊರಬರತೊಡಗಿದರು. (ಅಮಾತ್ಯರು ಮೊದಲಾದವರು ಇನ್ನೊಂದು ಬಾಗಿಲಿನಿಂದ ಅರಮನೆಯತ್ತ ಹೋದರು.)

ತೀರ್ಪು ಇಂಥದೇ ಇದ್ದೀತೆಂದು ಶೀಬಾ ಊಹಿಸಿಕೊಂಡಳು. ಕಣ್ಣು ಕತ್ತಲಿನ ಅನುಭವ.

ಅಷ್ಟರಲ್ಲೇ ಸುದ್ದಿಯ ಅಲೆ ರಭಸದಿಂದ ಬಂತು.

ಅವಳ 'ಅಯ್ಯೋ!' ಆರ್ತನಾದ ಗಂಟಲಲ್ಲೇ ಇಂಗಿತು. ಅವುಡುಗಚ್ಚಿ ಕಸಾಯಿ ಮನೆಯಾಚೆಗಿನ ತನ್ನ ಹಟ್ಟಿಯತ್ತ ಧಾವಿಸಿದಳು. ಹೋಗುತ್ತ ಕಾತರ ಭಾವದಿಂದ ತನ್ನೆಡೆಗೆ ನೋಡಿದ ಪರಿಚಾರಕ ಪರಿಚಾರಿಕೆಯರಿಗೆ, 'ಶಿರಚ್ಛೇದನ' ಎಂದು ಮೂಕ ಭಾಷೆಯಲ್ಲಿ ನುಡಿದಳು.

ಮಗ್ಗಲು ಹಟ್ಟಿಯ ಹುಡುಗಿ ಎತ್ತಿಕೊಂಡಿದ್ದ ಮಗು ತಾಯಿಯನ್ನು ಕಂಡೊಡನೆ ಇತ್ತ ಜಿಗಿಯಿತು. ಕತ್ತಲಲ್ಲಿ ಮೊಲೆಯೂಡಿಸತೊಡಗಿದಳು. ಕಣ್ಣೀರಿನ ಅಣೆಕಟ್ಟು ಬಿರಿಯಿತು! ಇದೇನು?—ಎಂದು ರಂಪ ಮಾಡಿತು ಮಗು, ಮೊಲೆ ಚೀಪಲು ನಿರಾಕರಿಸಿ.

ಹೊರಗೆ ಪ್ರಾಂಗಣದ ಬೆಳಕಿನಲ್ಲಿ ಈಟಿಮೊನೆ ಚಕಚಕಿಸಿತು. ಗಂಡ.

"ಶೀಬಾ."

"ಹ್ಞ...."

"ಗೊತ್ತಾಯ್ತಾ?"

"ಹ್ಞ."

"ನಾನು ಬಯಲಿಗೆ ಹೋಗ್ತೇನೆ."

"ನಾನೂ ಅಲ್ಲಿರ್‍ತೇನೆ. ಮಗು ಹಾಲು ಕುಡೀತಾ ಇಲ್ಲ. ಕುಡಿಸಿ ಹೊರಡ್ತೇನೆ."

"ಹೂಂ...."

"ಏನಾದರೂ ಮಾಡ್ತೀಯಾ ?"

"ಯಾವುದು ?"

"ಅವರಿಬ್ಬರು—ಔಟ, ಬೆಕ್...."

ಕ್ಷಣ ಮೌನದ ಬಳಿಕ ಆತ :

"ಸೇವಕರನ್ನು ಯಾರೂ ಕೊಲ್ಲೋದಿಲ್ಲ."

"ನಿನ್ನ ಗೆಳೆಯರಿಗೆ ಹೇಳು. ಅವರಿಬ್ಬರು ದೊಡ್ಡಮನೆಗೆ ಬಂದದ್ದನ್ನು ಲೆಕ್ಕ ಇಟ್ಟಿಲ್ಲ, ಬಿಡಿಸಿ ಇಲ್ಲಿಗೆ ಕಳಿಸು. ನಾನು ಹೊರಗೆ ದಾಟಿಸ್ತೇನೆ."

"ಹ್ಞ. ಶೀಬಾ."

ಆಳು ಇಲ್ಲ. ಮಾತು ಮಾತ್ರ ಎಂದು ಮಗು ಮೊಲೆ ಚೀಪಿತು. ಹಾಲು ಬಂತು ಕುಡಿಯಿತು....

....ಶೀಬಾಳ ಗಂಡ ಮಿತ್ರರಿಗೆ ತೀರ್ಪಿನ ಸುದ್ದಿ ತಿಳಿಸಿ, ನುಡಿದ :

"ಇವರ ಊರಿಂದ ಜನ ಬಂದಿದ್ದಾರೆ. ಹೋಗಲಿ, ಬಿಡು."

"ಪಾಪ ! ಆದರೆ ನಾಳೆ ಗಲಾಟೆ, ಗಿಲಾಟೆ...."

"ಒಂದೂ ಇಲ್ಲ. ಎಲ್ಲ ಭಾರೀ ಖುಷೀಲಿದ್ದಾರೆ. ಇವರ ನೆನಪು ಯಾರಿಗಿರ್‍ತದೆ ? ಇವರನ್ನು ಬಿಟ್ಟುಬಿಡಬೇಕೂಂತ ತೀರ್ಪಾಯ್ತಂತೆ, ಯಾರೋ ಹೇಳಿದ್ರು, ಅಂದರಾಯ್ತು."

"ಕರಕೊಂಡು ಹೋಗು. ಇಲ್ಲಿ ಬಾಗಿಲೆಳೆದುಕೊಂಡು ನಾವೂ ಬಯಲಿಗೆ ಬಂದ್ಬಿಡ್ತೇವೆ."

ಆದಿನ ವಿಚಾರಣೆ ಎಂಬುದನ್ನೂ ಬಟಾ ಬಂದುದನ್ನು ಪೂರ್ವಾಹ್ನವೇ ಔಟ ಮತ್ತು ಬೆಕ್ ಅರಿತಿದ್ದರು. ದ್ವಾರಪಾಲಕ ಬಾಗಿಲು ತೆರೆದು "ಇವನ ಹಿಂದೆ ಹೋಗಿ," ಎಂದಾಗ, 'ವಿಚಾರಣೆ ಮುಗಿಯಿತು ; ನಮ್ಮೆಲ್ಲರ ಬಿಡುಗಡೆಯಾಗಿದೆ,' ಎಂದುಕೊಂಡರು.

ಅಪರಿಚಿತ ಯೋಧನ ಹಿಂದೆ ನಡೆದು ಅವರು ಹೊಕ್ಕಿದ್ದು ಹಟ್ಟಿಯನ್ನು.

ಸಾಕಷ್ಟು ಹಾಲುಂಡು ತೃಪ್ತವಾಗಿದ್ದ ಮಗುವನ್ನೆತ್ತಿಕೊಂಡು ಶೀಬಾ ಅಲ್ಲಿ ನಿಂತಿದ್ದಳು. ಬೆಕ್ ಅವಳನ್ನು ನೋಡಿ ಹರ್ಷಿತನಾಗಿ "ತಂಗೀ !" ಎಂದು ಉದ್ಗರಿಸಿದ.

"ನಾನು ಹೊರಟೆ !" ಎಂದ ಯೋಧ.

"ನನ್ನ ಗಂಡ." ಎಂದಳು ಶೀಬಾ, ಬೆಕ್ ಔಟರ ಕುತೂಹಲದ ನೋಟಕ್ಕೆ ಉತ್ತರವಾಗಿ. (ಮನಸ್ಸಿನಲ್ಲಿ : 'ಇವರಿಗೆ ಗೊತ್ತಾಗಿಲ್ಲ ಇನ್ನೂ.')

ಔಟ ತಿಳಿಯ ಬಯಸಿದ :

"ತೀರ್ಪು ಕೊಟ್ಬಿರಾ ? ಅಣ್ಣ ಎಲ್ಲಿ ?"

ಶೀಬಾ ಮಾತನಾಡಲಿಲ್ಲ. ಮಗ್ಗುಲು ಹಟ್ಟಿಗೆ ಹೋಗಿ ಮಗುವನ್ನು ಬಿಟ್ಟು ಬಂದಳು.

ಕಾತರದ ಧ್ವನಿಯಲ್ಲಿ ಔಟನೆಂದ :

"ತಂಗಿ. ನಿಜ ಸಂಗತಿ ತಿಳಿಸು."

ಒಳಗಿನ ಯಾತನೆಯನ್ನು ಹತ್ತಿಕ್ಕಿ ಶೀಬಾ ತಡೆತಡೆದು ಮಾತನಾಡಿದಳು :

"ಬಟಾ ಅಣ್ಣ ಇನ್ನೂ ನಾಯಕರನ್ನು ನೋಡಿಲ್ಲ....ನಾವು ಆಟದ ಬಯಲಿಗೆ ಹೋಗ್ಬೇಕು....ಅಲ್ಲಿಗೆ ಅವರನ್ನು ತರ್ತಾರೆ...."

"ನಾಯಕರನ್ನು ಬಯಲಿಗೆ ?"

"ಹ್ಞ."

ಕಂಪಿಸುವ ಸ್ವರದಲ್ಲಿ ಬೆಕ್ ಅಂದ :

"ಅಲ್ಲಿಯೇ ಅಲ್ಲವಾ ವಧಸ್ಥಾನ ಇರೋದು ?"

ಉತ್ತರವೀಯುವ ಗೊಡವೆಗೆ ಹೋಗದೆ ಶೀಬಾ ನುಡಿದಳು :

"ಬಯಲಲ್ಲಿ ಕತ್ತಲೆ. ದೂರ ಇರೋಣ. ಮೆನ್ನಯ್ಯ ಬಟಾ ಅಣ್ಣನಿಗೆ ಸುದ್ದಿ ತಿಳಿಸೋದಕ್ಕೆ ಹೋಗಿದ್ದಾರೆ. ನೀವು ಅವರನ್ನು ಕಂಡು—"

ಔಟ ಅವಸರಪಡಿಸಿದ.

"ಹ್ಞ. ಹ್ಞ. ಹೋಗೋಣ."

"ಗುರುತು ಸಿಕ್ಕಿದರೆ ಅಪಾಯ. ನಾನು ಬಳಸುದಾರೀಲಿ ಕರಕೊಂಡು ಹೋಗ್ತೇನೆ. ನನ್ನ ಹಿಂದೆ ಹತ್ತು ಮಾರು ದೂರದಲ್ಲಿ ಒಬ್ಬೊಬ್ಬರಾಗಿ ಬನ್ನಿ."

o o o o

ನಗರೋದ್ಯಾನದ ಮೂರು ಮೂಲೆಗಳಲ್ಲಿ, ಪ್ರವೇಶದ್ವಾರಗಳಿಂದ ದೂರವಾಗಿ ಆಬ್ಬು ಯಾತ್ರಿಕರು ಮೂರು ಗುಂಪುಗಳಾಗಿ ಕುಳಿತಿದ್ದರು. ಬಟಾ ಇದ್ದ ತಾಣ ವನ್ನು ಮೆನ್ನ ಸಮೀಪಿಸಿದ ಮೇಲೆ ಉಳಿದವರೂ ಅಲ್ಲಿಗೆ ಬಂದರು.

ಬಟಾ ಒಬ್ಬನನ್ನೇ ಮೆನ್ನ ಸ್ವಲ್ಪ ದೂರ ಕರೆದೊಯ್ದು ಎಂದು ಇತರರಿಗೆ ಆತಂಕ. ಆದರೆ ಕೆಲವೇ ಕ್ಷಣಗಳಲ್ಲಿ ಅವರು ಮರಳಿದರು. ಬಟಾನ, ಮೆನ್ನನ ವಿವರ್ಣ ಮುಖಗಳನ್ನು ಕಂಡು ಆ ಜನರಿಗೆ ಗಾಬರಿ.

ಅಹೂರಾ ಕೇಳಿದಳು :

"ತೀರ್ಪು ಆಯ್ತಾ ? ಅಣ್ಣನನ್ನು ಬಿಟ್ಬರಾ ?"

(ಮೆನ್ನನೆಂದ : ನೀವು ಅಧೀರರಾಗಬಾರದು. ಅಧೀರರಾಗಬಾರದು. ಬಯಲಿಗೆ ಹೋಗೋಣ. ಏನಾದರೂ ಮಾಡೋಣ.')

ಬಟಾ ರಾಮೆರಿಪ್ಟಾನತ್ತ ಹೋಗಿ. ತನ್ನ ತೋಳಿನಿಂದ ಅವನನ್ನು ಬಳಸಿ, ಹೊರೆಹರಿಯಲೆತ್ನಿಸಿದ ದುಗುಡವನ್ನು ಬಲವಾಗಿ ತಡೆಹಿಡಿದು, ಮೆಲ್ಲಮೆಲ್ಲನೆ ಅಂದ :

"ಮೆನೆಪ್‌ಟಾ ಅಣ್ಣನನ್ನು ಅರಮನೆಯ ಆಟದ ಬಯಲಿಗೆ ಕರಕೊಂಡು ಹೋಗ್ತಾರೆ. ಅಲ್ಲಿ ಜನರ ಎದುರಲ್ಲಿ ಬಹಿರಂಗವ ಗಿ—"

(ರಾಮೆರಿಪ್‌ಟಾ ಕಣ್ಣರಳಿಸಿದ. ತನ್ನ ತಂದೆಯನ್ನು ಕಂಬಕ್ಕೆ ಬಿಗಿದು ಚಾಟಿಯಿಂದ?....ಇತರ ಹಲವರಿಗೂ ಸೀರಾನೆ ಪ್ರಾಂತದ ರಾಜಗೃಹದ ಘಟನೆಯ ನೆನಪು....)

ಬಟಾ ಅಂದ :

"ಮೆನ್ನಯ್ಯ ಹೇಳ್ತಾರೆ. ನಾವು ಅಧೀರರಾಗಬಾರದು. ಬಯಲಿಗೆ ಹೋಗೋಣ. ಏನಾದರೂ ಮಾಡೋಣ—ಅಂತ."

ಹಲವು ಸ್ವರಗಳು :

"ನಡೀರಿ ಮತ್ತೆ. ಯಾಕೆ ತಡ?"

ಮೆನ್ನ ತಿಳಿಯ ಹೇಳಿದ :

"ಜನರ ಜತೆ ಸೇರ್ಕೊಂಡು ಅರಮನೆಯ ಮಹಾದ್ವಾರದ ಮೂಲಕವೇ ಒಳಗೆ ಹೋಗ್ಬೇಕು. ನೂಕುನುಗ್ಗಲಿನಲ್ಲಿ ಅದು ಸುರಕ್ಷಿತ. ಅಲ್ಲದೆ, ಇವತ್ತು ದೀಪಾ ಲಂಕಾರವಿಲ್ಲ. ಬಯಲಲ್ಲಿ ಕತ್ತಲು. ನಾವೆಲ್ಲ ಹಿಂದೆ ನಿಂತ್ಕೊಂಡು, ಯೋಚಿಸಿ, ಏನಾದರೂ ತೀರ್ಮಾನಕ್ಕೆ ಬರೋಣ. ಏನಾದರೂ ಮಾಡೋಣ. ಬನ್ನಿ, ಬನ್ನಿ."

o o o o

ಅರ್ಧವೃತ್ತಾಕಾರದ ಬಯಲು. ನೇರ ಅಂಚಿನ ಒಂದು ಮೂಲೆಯಲ್ಲಿ ಅರಮನೆಯ ಉಪ್ಪರಿಗೆ. ಇನ್ನೊಂದು ಮೂಲೆಯಲ್ಲಿ ವಧಸ್ಥಾನ. ನಾಲ್ಕು ಕಡೆಗಳಿಂದಲೂ ಮೆಟ್ಟಲುಗಳು ಮೇಲಕ್ಕೆ ಸಾಗಿದ್ದವು. ಅಗಲ ಕಿರಿದಾಗುತ್ತ, ಎರಡಾಳೆತ್ತರದಲ್ಲಿ ನಾಲ್ಕು ಜನ ಸಿಲ್ಲುವಷ್ಟು ಸಮತಟ್ಟು ಸ್ಥಳ. ಅಲ್ಲಿ ಎರಡು ತುದಿಗಳಲ್ಲಿ ಕಲ್ಲನ್ನು ಎತ್ತರಿಸಿ, ಅಡ್ಡವಾಗಿ ಮರದ ದಿಮ್ಮಿ ಇರಿಸಿದ್ದರು. ಉಪ್ಪರಿಗೆಗೆ ಮುಖಮಾಡಿ.

ವಧಸ್ಥಾನದ ಬಳಿ ನೂರಾರು ಪಂಜುಗಳು ಉರಿಯುತ್ತಿದ್ದುವು. ಉಪ್ಪರಿಗೆಯ ಬಳಿಯಲ್ಲೂ ಬೇಕು. ನೇರ ಅಂಚಿನುದ್ದಕ್ಕೂ ಯೋಧರ ಸಾಲು. ಅದಕ್ಕೆ ಸಮಾನಾಂತರವಾಗಿ ಅರ್ಧವೃತ್ತವನ್ನು ಛೇದಿಸಿ ಇನ್ನೊಂದು ಸಾಲು. ಹೊಳೆಯುವ ಈಟಿಗಳು: ಇವರೆಲ್ಲ ಸೈನ್ಯ ಗಡಿಯಿಂದ ಬಂದವರು. ಅರಮನೆಯ ಕಾವಲು ಭಟರೂ ಅಲ್ಲಿದ್ದರು. ಬಯಲಿನಲ್ಲಿ ಸಹಸ್ರ ಸಂಖ್ಯೆಯನ್ನೂ ಮೀರಿ ನೆರೆಯತೊಡಗಿದ್ದ ಜನರೆಡೆಗೆ ಅವರು ಕೂಗಿ ನುಡಿಯುತ್ತಿದ್ದರು :

"ಸದ್ದು ಮಾಡ್ಬೇಡಿ! ಫೆರೋ ಬರುವ ಹೊತ್ತಾಯ್ತು!"

ವ್ಯೂಹ ರಚನೆ ಬಕಿಲನದು. ಟೊಂಕದಲ್ಲಿ ಕಠಾರಿ ತೂಗಹಾಕಿ, ಕೈಯಲ್ಲಿ ಈಟಿ ಹಿಡಿದು, ಆತ ಅತ್ತ ಇತ್ತ ನಡೆಯುತ್ತಿದ್ದ. ಅವನ ಏಕದೃಷ್ಟಿ ಬಯಲಿನ ಪ್ರವೇಶದ್ವಾರದ ಮೇಲೆ ನೆಟ್ಟಿತ್ತು. ಕಳೆದು ಹೋದ ಕಣ್ಣಿನ ಕೆಳಭಾಗದ ಕೆನ್ನೆ ಒಂದೇ ಸಮನೆ ಕಿಪಿಚುತ್ತಿತ್ತು.

(ದಂಡಿನ ನಾಲ್ವರು 'ಐವತ್ತರಶ್ರೇಷ್ಠ'ರಿಗೆ ಕೋಪ—ಇದ್ದಕ್ಕಿದ್ದಂತೆ ಬಕಿಲನನ್ನು ತಮ್ಮ ಮೇಲಣ ಅಧಿಕಾರಿಯಾಗಿ ಮಾಡಿದರಲ್ಲ ಎಂದು. ಇವತ್ತಿನ ಮಟ್ಟಿಗಷ್ಟೇ ಇದ್ದೀತು ಎಂಬ ಭಾವನೆ. ಅದರಿಂದ ಒಂದಿಷ್ಟು ಸಮಾಧಾನ. 'ನೀರಾನೆ ಪ್ರಾಂತಕ್ಕೆ ಹೋಗಿ ಕಣ್ಣು ಕಳಕೊಂಡು ಬಂದವನು. ಇದೊಂದು ಗೌರವ ಅಂತ ಹೀಗೆ ಮಾಡಿದ್ದಾರೆ.' ಮಾರನೆಯ ದಿನ ದಂಡಯಾತ್ರೆ.ಇವತ್ತು ಪೂರ್ತಿ ವಿರಾಮ ದೊರೆಯ ಬೇಕಿತ್ತು. ಬಂಡ ಯಗಾರ ನಾಯಕನ ಶಿರಚ್ಛೇದನ ಅಂತ ಈ ಹೆಚ್ಚಿನ ಕೆಲಸ.')

ಬಯಲಿನ ವರ್ತುಲ ಅಂಚಿನಲ್ಲಿ ದೂರ ನಿಂತರು ಅಬ್ಬು ಯಾತ್ರಿಕರು. ಬಕಿಲ ನನ್ನು ಮೊದಲು ಗುರುತಿಸಿದವರು ರಾಮೆರಿಪ್‌ಟ್. ಬಟಾ ಮತ್ತು ಮೆನ್ನ. ಮುಂದೆ ಉಳಿದವರೂ "ಹೌದು, ಅವನೇ," ಎಂದರು.

ರಾಮೆರಿಪ್‌ಟಾ ಅಂದುಕೊಂಡ: 'ಇಲ್ಲಿ ಕಂಬ ಇಲ್ಲ. ಎಲ್ಲಿ ನಿಲ್ಲಿಸ್ತಾರೆ ತಂದೇನ? ಆ ಕಟ್ಟೆಯ ಮೇಲೆ? ದಿಮ್ಮಿ? ವಿಚಿತ್ರವ ಗಿದೆಯಲ್ಲ?'

ಮೆನೆಪ್‌ಟಾನ ಹತ್ತಿರ ಬಂದು ಅಹೂರಾ ಕಾತರಳಾಗಿ ಅಂದಳು :

"ಅಣ್ಣ ! ಇದು ವಧಸ್ಥಾನ !"

"ಹೌದು ಅಹೂರಾ."

—ಗವಿಯಿಂದ ಬಂದ ಭಾರವಾದ ಸ್ವರ.

(ರಾಮೆರಿಪ್‌ಟಾಗೆ ಅರ್ಥವಾಯಿತು. ಒಂದು ವರ್ಷದ ಹಿಂದೆ ಈಸಲು ಹೋಗಿದ್ದಾಗ ನದಿಯ ಸುಳಿ ಅವನನ್ನು ಒಳಕ್ಕೆ ಎಳೆಯಿತು. ಈಗ ಅದೇ ಭಾವನೆ. ಅವನು ತಲೆ ಎತ್ತಿ ಬಟಾ, ಮೆನ್ನ, ಅಹೂರಾರ ಮುಖಗಳನ್ನು ನೋಡಿದ.)

ಗದ್ಗದಿತಳಾಗಿ ಅಹೂರಾ ಕೇಳಿದಳು :

"ಅಣ್ಣ, ಏನು ಮಾಡೋಣ ಈಗ? ಏನು ಮಾಡೋಣ?"

ಚೀರುವ ಮೆದುಳು. ಬವಳಿ. ಬಟಾನ ಒಳಗಿಂದ ಪ್ರಶ್ನೆ ತುಡಿಯುತ್ತಿತ್ತು :

'ಏನು ಮಾಡ್ಲಿ? ನಾನೇನು ಮಾಡ್ಲಿ?'

ಅಷ್ಟರಲ್ಲೇ ಬಯಲಿನಾಚೆಗಿನ ಕತ್ತಲಿನಿಂದ ಮೂರು ನಡುವಸ್ತ್ರಗಳ ಮಸಕು ಬಿಳಿ ಕಾಣಿಸಿತು. ಹತ್ತಿರ ಬರತೊಡಗಿದ ವ್ಯಕ್ತಿಗಳು.

ದಟ್ಟ ಕತ್ತಲೆಯಲ್ಲಿ ಒಂದೆರಡು ನಕ್ಷತ್ರ? ಅರ್ಥವಿಲ್ಲದಿದ್ದರೂ ಆಸೆ ಆಸೆಯೇ ಮೆನ್ನ ಅಂದ :

"ಔಟ, ಬೆಕ್. ಶೀಬಾ ಪಾರು ಮಾಡಿಸಿ ಇಲ್ಲಿಗೆ ಕರೆತಂದಿದ್ದಾಳೆ...."

ಬಟಾ, ಅಹೂರಾ ಮತ್ತಿತರರು ಬೆಳಕಿಗೆ ಬೆನ್ನು ಮಾಡಿ ಬಂದವರನ್ನು ಇದಿರ್ಗೊಂಡರು.

ಬಿಕ್ಕುತ್ತ ಔಟನೆಂದ :

"ನಾಯಕರ ರಕ್ಷಣೆ ನಮ್ಮಿಂದಾಗಲಿಲ್ಲ, ಬಟಾ ಅಣ್ಣ. ನಾಯಕರಿಗೆ ಏನಾ ದರೂ ಆದರೆ ನಾವು ನಮ್ಮ ಕೈಯಿಂದಲೇ ಪ್ರಾಣ ತಗೊಳ್ತೇವೆ."

(ಕತ್ತಲಲ್ಲಿ, ಅಹೂರಾಳ ಕಂಕುಳಲ್ಲಿದ್ದ ಮಗುವನ್ನೂ ರಾಮೆರಿಪ್‌ಟಾನನ್ನೂ ನೋಡುತ್ತ ನಿಂತಳು, ತಾಯಿ ಶೀಬಾ.)

ಬೆಕ್ ಉಮ್ಮಳವನ್ನು ಹತ್ತಿಕ್ಕುತ್ತ ಅಂದ:

"ಬಟಾ ಅಣ್ಣಾ, ಈಗ ನೀವೇ ಮುಖಂಡರು. ಹೇಳಿ ಕೊಲ್ಲು ಅಂದರೆ ಕೊಲ್ತೇನೆ. ಸಾಯು ಅಂದರೆ ಸಾಯ್ತೇನೆ."

"ನಾನೆಂಥ ಮುಖಂಡ? ಅಯ್ಯೋ...." ಎಂದ ಬಟಾ.

ಮೆನ್ನನ ಯೋಚನೆಗಳು ಧ್ವನಿಪಡೆದುವು.

"ಅವರದು ಸಂಘಟಿತ ಶಸ್ತ್ರಬಲ. ಆ ಬಲಕ್ಕೆದಿರು ನಾವು ನಾಲ್ವತ್ತು ಜನ. ಬಹುಮಟ್ಟಿಗೆ ನಿರಾಯುಧರು. ಈ ಜನ ಸಮೂಹದಲ್ಲಿ ನಮ್ಮ ಮಿತ್ರರೇನೋ ಕೆಲವರಿದ್ದಾರೆ. ಹೆಚ್ಚೆಂದರೆ ಅವರು ಸಹಾನುಭೂತಿ ತೋರಿಸಬಹುದು. ಉಳಿದವರಲ್ಲಿ ಕೆಲವರು ಪೆರೋ ಕಾಣಿಸಿದೊಡನೆ ಮಂಡಿಯೂರ್‍ತಾರೆ. ಬೇರೆ ಸ್ವಲ್ಪ ಜನ ಕ್ರೂರ ವಿನೋದ ನೋಡೋದಕ್ಕೇಂತ ಬಂದವರು: ಬೇಕಿದ್ದರೆ ನಮ್ಮನ್ನು ಹಿಡಿದು ಯೋಧರ ಕೈಗೆ ಒಪ್ಪಿಸೋದಕ್ಕೂ ಅವರು ಸಿದ್ಧ."

ಬಟಾ ಅಂದುಕೊಂಡ:

"ಖ್ನೆಮ್‌ಹೊಟೆಪ್ ಇರಬೇಕಾಗಿತ್ತು ಈಗ. ತಪ್ಪಾಯಿತು. ಎಲ್ಲ ತಪ್ಪಾಯಿತು ಮೆನೆಪ್‌ಟಾ ಅಣ್ಣ ನಿನ್ನೆ ರಾತ್ರೆ ತಪ್ಪಿಸಿಕೊಳ್ಳಲು ಒಪ್ಪಿದ್ದರೆ...."

ಮೆನ್ನನೆಂದ:

"ವಿಚಾರಣೆಯಾದದ್ದು ನಾಯಕರದಲ್ಲ; ಪೆರೋ-ಮಹಾಅರ್ಚಕ-ಅಮಾತ್ಯರದು. ತೀರ್ಪು ಕೊಟ್ಟದ್ದು ಮೆನೆಪ್‌ಟಾ ಅಣ್ಣ, ಅವರಲ್ಲ...."

ಬಟಾ "ಬಂದರು" ಎಂದ.

ಮೆನ್ನನ ಮಾತು ಅರ್ಧಕ್ಕೇ ನಿಂತಿತು.

ನೀರವತೆ. ಪಂಜುಗಳು ಮತ್ತು ಯೋಧರು. ನಡುವೆ ಮೆನೆಪ್‌ಟಾ. ತೋಳುಗಳಿಗೆ ಬಿಗಿದ ಹಗ್ಗ ಹಾಗೆಯೇ ಇತ್ತು. ಎತ್ತಿದ ತಲೆ. ನೇರ ನೋಟ. ಶಾಂತ ಮುಖಮುದ್ರೆ. ಅವಸರವಿಲ್ಲದ ಲಯಬದ್ಧ ಹೆಜ್ಜೆಗಳು. ವಧಸ್ಥಾನದತ್ತ ನಡಿಗೆ.

"ಅಗೋ ಮಾವ." ಎಂದಳು ಅಹೂರಾ ತನ್ನ ಮಗುವಿಗೆ.

ಆ ಮಗುವಿಗೆ ಅವ್ಯಕ್ತ ಭೀತಿ. ಅದು ಚಿಟ್ಟನೆ ಚೀರಿತು. ಜನಸಮುದಾಯದ ಮೌನದ ಕಟ್ಟೆಯೂ ಒಡೆಯಿತು.

ರಾಮೆರಿಪ್‌ಟಾ ತುಟಿ ಎರಡು ಮಾಡದೆ ಕಣ್ಣೆವೆಗಳನ್ನು ತೋಯಿಸದೆ ರೋದಿಸಿದ:

"ಅಪ್ಪಾ, ಅಪ್ಪಾ, ಅಪ್ಪಾ...."

ಬಟಾ ಕಣ್ಣುಗಳನ್ನು ಮುಚ್ಚಿಕೊಂಡು ಗಂಟಲಿನಿಂದ ಗೊಗ್ಗರ ಧ್ವನಿ ಹೊರಡಿಸಿದ.

ಬಿಕ್ಕುತ್ತ, ಎವೆ ಇಕ್ಕದೆ, ಔಟ ಮತ್ತು ಬೆಕ್ ನೋಡಿದರು. ಅವರ ತುಟಿಗಳು ಒಂದೇ ಸಮನೆ ಅದುರಿದುವು.

ಶೀಬಾ ಚಿಂತಿಸಿದಳು. ನೇರ ಗೆರೆಯಲ್ಲೇನೋ ದೂರದಲ್ಲಿ ಅವಳ ಗಂಡನಿದ್ದ ಜನರನ್ನು ತಿವಿಯಲಾರ. ಕೊಲ್ಲಲಾರ. ಈ ಪರಿಸ್ಥಿತಿಯಲ್ಲಿ ಬೇರೆ ಯಾವ ನೆರವು ಅವನಿಂದ ಸಾಧ್ಯ ?

ಕಟ್ಟೆಯ ಪೂರ್ವಭಾಗದಿಂದ ಇಬ್ಬರು ದೀವಟಿಗೆಯ ಭಟರು ಮೆಟ್ಟಲುಗಳನ್ನೇರಿದರು. ಒಂದು ಹೆಜ್ಜೆ ಕೆಳಗಿಂದ, ಅವರ ನಡುವೆ, ಮೆನೆಪ್‌ಟಾ.

(ಮೆನ್ನ : 'ಉದಿಸುತ್ತಿರುವ ರಾ—ಎದುರಿಗೆ ಸೆತ್ ಆರಾಧಕರು.'

ಶೀಬಾ : 'ಇವನು ಮನುಷ್ಯನಲ್ಲ. ದೇವರು.'

ಅಹೂರಾ : 'ಒಸೈರಿಸ್, ನಮ್ಮ ಒಸೈರಿಸ್.')

ಮೆನೆಪ್‌ಟಾನ ಬಳಿಕ ಹಗ್ಗ ಹಿಡಿದವರು, ಎರಡು ಪಕ್ಕಗಳಲ್ಲಿ, ನಾಲ್ಕು ಕಡೆ ಪ್ರತಿಯೊಂದು ಮೆಟ್ಟಲಿನ ಮೇಲೂ ಯೋಧವ್ಯೂಹ.

ಸಮತಟ್ಟು ಸ್ಥಳದ ಮೇಲೆ ದೀವಟಿಗೆಗಳ ಬೆಳಕಿನಲ್ಲಿ ಮೆನೆಪ್‌ಟಾ ನಿಂತ. ಅವನ ದೃಷ್ಟಿ ಎದುರು ದಿಕ್ಕಿನತ್ತ ಹರಿಯಿತು. ಬರಿದಾದ ಉಪ್ಪರಿಗೆಯ ಮುಖಮಂಟಪ. ಕಿಟಕಿಗಳಲ್ಲಷ್ಟೇ ಹಲವು ಹಲವು ತಲೆಗಳು. ಕೆಳಗೆ ಹೊಳೆಯುವ ಈಟಿ ಮೊನೆಗಳು, ಯೋಧಗಣ, ಇತ್ತ ಜನಜಂಗುಳಿ.

ಮೆನೆಪ್‌ಟಾನ ದೃಷ್ಟಿ ಮಬ್ಬು ಬೆಳಕನ್ನು ದಾಟುತ್ತ, ಕತ್ತಲನ್ನು ಇರಿಯುತ್ತ ಜನರ ನಡುವೆ ಅಲೆಯಿತು. ಬಕಿಲನನ್ನು ಆಗಲೇ ಆತ ಕಂಡಿದ್ದ. ಒಂದು ದನಿ ಮೆಲ್ಲನೆ ಒಳಗಿನಿಂದ ಹೇಳುತ್ತಿತ್ತು : 'ಎಚ್ಚರ ! ಎಚ್ಚರ ! ಬಾಂಧವರು ಯಾರು ಕಣ್ಣಿಗೆ ಬಿದ್ದರೂ ಗುರುತು ಸಿಕ್ಕಿತೆಂದು ತೋರಿಸಿಕೊಳ್ಳಬೇಡ ! ಅವರಿಗೆ ಅಪಾಯ! ಅವರಿಗೆ ಅಪಾಯ !'

ಇರುಳು....ಬಯಲಿಗೆ ಬಂದಿರ್ತಾರೆ....ತನಗೆ ಕಾಣಿಸುತ್ತಿಲ್ಲ.

ಬಟಾನಿಗೆ ಅನಿಸಿತು—'ಅಣ್ಣ ಹುಡುಕುತ್ತಿದ್ದಾನೆ. ತುಸು ಮುಂದಕ್ಕೆ ಸರಿಯಬೇಕು ನಾವು.'

ಒಬ್ಬರಿಗೊಬ್ಬರು ತಿಳಿಸದೆಯೇ ಅಬ್ಟು ಯಾತ್ರಿಕರು ಜನರೊಡನೆ ಬೆರೆಯುತ್ತ ಯೋಧರ ಇತ್ತಣ ಸಾಲಿನತ್ತ ಒತ್ತರಿಸಿದರು.

ರಾಮುರಿಪ್‌ಟಾಗೆ ಆತಂಕ : ತಾನು ಚಿಕ್ಕವನು. ಅಪ್ಪನಿಗೆ ಕಾಣಿಸದೇ ಹೋದರೆ ? ಆ ಕ್ಷಣವೆ, ಬಟಾನಿಗೂ ಆ ವಿಷಯ ಹೊಳೆಯಿತು. ಆತ ಬಗ್ಗಿ ಕುಳಿತು, ರಾಮೆರಿಯನ್ನು ಭುಜದ ಮೇಲೆ ಕೂಡಿಸಿಕೊಂಡು ಎದ್ದು ನಿಂತ.

—'ರಾಮೆರಿ !'

ಮೆನೆಪ್‌ಟಾಗೆ ಗುಂಡಿಗೆಯ ತೀವ್ರ ಬಡಿತ. ಕರೆಯಲಾರ. ಕೂಗಿ ಕರೆಯಲಾರ.

—'ಬಟಾ, ನನ್ನ ಬಟಾ........'

—‘ ಓ ಔಟ ! ಬೆಕ್ ! ಇಬ್ಬರೂ ಪಾರಾಗಿದ್ದಾರೆ.’

—‘ ಮಹಾತಾಯಿ ಶೀಬಾ !’

—‘ ಸೋದರಿ ಅಹೂರಾ—ಮಗು ?....’

—‘ದಿವ್ಯ ಜೀವ ಮೆನ್ನ....’

—‘ಅವರು—ಅವರೆಲ್ಲ....ನನ್ನ ಬಂಧುಗಳು !’

ಜಿನುಗಿ ಕಪೋಲಗಳನ್ನು ಒದ್ದೆಗೊಳಿಸಿದ ಹರ್ಷಾಶ್ರು ಬಿಂದುಗಳು....

ಉಪ್ಪರಿಗೆಗೆ ಜನ ಬಂದರು. ಪ್ರತಿಷ್ಠಿತರು.

ಅವರ ಗಂಟಲಿನಿಂದ :

“ ಫೆರೋನ ಆಯುರಾರೋಗ್ಯ ವರ್ಧಿಸಲಿ !”

ಆಗಮನ : ಮಹಾಪ್ರಭು, ಮಹಾರಾಣಿ (ಕೇಶಕವಚಗಳು, ಕಿರೀಟಗಳು) ಮಹಾ ಅರ್ಚಕ, ಅಮಾತ್ಯ....

ಬಟಾ ಗೊಣಗಿದ :

“ ಏನು ಮಾಡೋಣ ? ಏನ್ಮಾಡೋಣ ಈಗ ?”

ಬೆಕ್ ಬಟಾನನ್ನು ಕೇಳಿದ :

“ ಕಠಾರಿ ಇದೆಯಾ ?”

ಬಟಾ ನಡುವಸ್ತ್ರವನ್ನು ಮುಟ್ಟಿ ತೋರಿಸಿದ.

“ ಬಾಕು.”

ಬೆಕ್ ಅದನ್ನೆತ್ತಿಕೊಂಡ....

(ಅಲ್ಲಿ ಫೆರೋ, ಮಹಾ ಅರ್ಚಕ, ಅಮಾತ್ಯ—ಏನು ಮಾಡಬೇಕು ತಾನು ? ಎಸೆದರೆ ಆ ದೂರವನ್ನು ಸೇರದು.)

ವಧಸ್ಥಾನದಲ್ಲಿ ಮೆಟ್ಟಲುಗಳ ಮೇಲಿನ ಯೋಧರು ದಾರಿ ಬಿಟ್ಟರು. ಸ್ಥೂಲ ಶರೀರದ ಹಂತಕ ಗಾತ್ರದ ತನ್ನ ಕತ್ತಿಯೊಡನೆ ಮೇಲಕ್ಕೆ ಬಂದ. ಉಪ್ಪರಿಗೆಯತ್ತ ನೋಡಿ ನಮಿಸಿದ. (ಈ ಹಂತಕ ಅರಮನೆಯವನು. ಕಸಾಯಿ ವೃತ್ತಿಯವನು. ಪರಿಚಾರಕರು ಬಲ್ಲರು. ರಾಜಧಾನಿಯ ಜನ ಬಲ್ಲರು. ಆ ದಿನವಷ್ಟೇ ಹರಿತ ಗೊಳಿಸಿದ್ದ ಕತ್ತಿ.)

ಬಕಿಲನ ಗಮನ ಉಪ್ಪರಿಗೆಯತ್ತ.

ಕತ್ತಲಿನೊಡನೆ ಬೆರೆತು ಘನೀಭವಿಸಿದ ನೀರವತೆ.

ಮೆನೆಪ್‌ಟಾ ಈಗ ಮನೋವಿಹಾರಿ. ನೀರಾನೆ ಪ್ರಾಂತದ ಮುಖ್ಯ ಪಟ್ಟಣದ ತನ್ನ ಮನೆಯಲ್ಲಿ, ಮಡದಿ ನೆಫಿಸಳ ಬಳಿ ; ರಾಜಗೃಹದಲ್ಲಿ, ಹಿರಿಯರ ಸಮಿತಿ ಸಭೆ ಸಭೆಯಲ್ಲಿ.

—‘ ಬಟಾ ಆ ಹಾಡು ಬಾರಿಸು....

ನನ್ನ ನಲ್ಲೆಯ ಒಲವು ನಲಿದಿದೆ ನದಿಯ ತಟದಲ್ಲಿ

'ಕ್ರೂರ ಮೊಸಳೆಯು ಅವಿತು ಕುಳಿತಿದೆ ನೆರಳ ಮರೆಯಲ್ಲಿ'

—'ನೆಫಿಸ್ ಬೇಯಿಸಿ ಮಾಡಿದ ಮೀನಿನ ಉಪ್ಪೇರಿ ಬಹಳ ಇಷ್ಟ.'

—'ರಾಮೆರಿ, ತಾಯಿ ಹತ್ತಿರವೇ ಇರು. ಹೆತ್ತ ತಾಯಿ ನಿನಗಾಗಿ ಏನೇನು ಮಾಡಿರುವಳೆಂಬುದನ್ನು ಮರೆಯಬೇಡ.'

—'ದೋಣಿಕಟ್ಟೆಯಲ್ಲಿ ಖ್ನೆಮ್‌ಹೊಟೆಪ್ ಅಂದ: ಅಣ್ಣ ಏನಾದರೂ ಹೇಳಿ. ನಾನೆಂದೆ: ನಾನು ಮೆಂಫಿಸಿಗೆ ಹೋಗಿ ಬರ್ತೇನೆ."

—'ಬಟಾ ನೀನು ಕೇಳ್ದಿ: ನಿನಗೆ ಸಮೀಪವಾಗಿದವನಾಗಿ ನಾನು ದೊಡ್ಡವ ಅನಿಸಿಕೊಂಡಿಲ್ವಾ?....ಇಲ್ಲ ಬಟಾ, ನೀವೆಲ್ಲ ನನಗೆ ಸಮೀಪದವರಾದ್ದರಿಂದಲೇ ನಾನು ದೊಡ್ಡವ ಅನಿಸಿಕೊಂಡೆ.'

—'ದೇಶಕೆ ಪಾಪ ಹೊಡೆದಿದೆ. ನಾ ಬಾಗಿರುವೆ....ಮೆನ್ನ, ಓ ಮೆನ್ನ....

—'ಅಬ್ಬು ಯಾತ್ರೆಯಿಂದ ಮರಳುತ್ತ ದೋಣಿಯಲ್ಲಿ ಕಂಡ ಕನಸು: ಬಿಳಿ ಮೋಡಗಳ ಮೇಲೆ ತಾನು ಮಲಗಿದ್ದೆ. ಜೋಗುಳ ನುಡಿಯ ಆಲಾಪನೆ ಸ್ತ್ರೀಕಂಠ ದಿಂದ ಕೇಳಿಬರುತ್ತಿತ್ತು. ಓ ಒಸೈರಿಸ್. ಓ ಒಸೈರಿಸ್.'

"ಮಂಡಿಯೂರಿ ಕೂತ್ಕೊಳ್ಳಿ. ದಿಮ್ಮಿಯ ಮೇಲೆ ತಲೆ ಇಡಿ" ಎಂದ ಹಂತಕ, ಮೆಲ್ಲನೆ.

ಮೆನೆಪ್‌ಟಾ ಜನರತ್ತ ನೋಡಿದ. ಇನ್ನೊಮ್ಮೆ ತನ್ನವರನ್ನು ದಿಟ್ಟಿಸುವ ತವಕ, ಇಲ್ಲವಲ್ಲ? ಏನೂ ಕಾಣಿಸುತ್ತಿಲ್ಲವಲ್ಲ?

ಕಾಣಿಸದೆ ಏನು? ಈ ಸಮುದಾಯದ ಬಹುಜನ ತನ್ನವರೇ ಅಲ್ಲವೆ? ಮೆನೆಪ್‌ಟಾ ಅವರಿಗೆ ಬಾಗಿ ವಂದಿಸಿದ.

ಉಪ್ಪರಿಗೆಯತ್ತ ಹೊರಳಿ,ಕಟ್ಟೆಯ ಮೇಲೆ ಮಂಡಿಯೂರಿ ಕತ್ತನ್ನು ದಿಮ್ಮಿಯ ಮೇಲಿರಿಸಿದ.

ಸೆತ್ ಒಸೈರಿಸನನ್ನು ಕೊಂದು ಆದೆಷ್ಟು ಹೋಳು ಮಾಡಿದ? ಹದಿನಾಲ್ಕು?

'ಒಂದು, ಎರಡು, ಮೂರು, ನಾಲ್ಕು.'

(ಬೆಕ್‌ಗೆ ಕಸಿವಿಸಿ. ಬಾಕು ಕೈಯಲ್ಲಿದೆ. ಎಲ್ಲಿಗೆ ಎಸೆಯಲಿ? ಇನ್ನೂ ಮುಂದೆ ಹೋಗಬೇಕು—ಮುಂದೆ....)

ಉಪ್ಪರಿಗೆಯಿಂದ ಕೈ ತಟ್ಟಿದ ಸದ್ದು. "ಬಕಿಲ!" ಟಿಹುಟಿಯ ಧ್ವನಿ. ಎತ್ತರದ ಬಂಡೆಯಿಂದ ನೀಲನದಿಯ ಆಳಕ್ಕೆ ಧುಮುಕಿದಾಗ ಉಂಟಾಗುವ ಸಪ್ಪಳ ದಂತೆ ಕೆಳಕ್ಕೆ ಅಪ್ಪಳಿಸಿದ ಕರೆ.

(ಬಕಿಲ ಈಟಿಯನ್ನು ಮೇಲಕ್ಕೆತ್ತಿದ. ನಿರ್ದೇಶಕ, ಬಾಕು ಧಾವಿಸಿ ಹಂತಕನ ಪಾದವನ್ನು ಮುಟ್ಟಿತು.)

"ಆಯ್!"

ಇನ್ನೊಮ್ಮೆ ಎಣಿಸಬೇಕು—ಒಂದು, ಎರಡು, ಮೂರು, ನಾಲ್ಕು, ಐದು.... ಆಯಿತೆ?'

ಹಂತಕ ಎತ್ತಿದ್ದ ಕತ್ತಿ ಸರಕ್ಕನೆ ಕೆಳಕ್ಕೆ ಬಂತು.

'ಆಯಿತು........'

ರುಂಡ ಮುಂಡದಿಂದ ಬೇರ್ಪಟ್ಟಿತು.

ಮುಂಚುಕವಿದ ಸಹಸ್ರ ಕಣ್ಣುಗಳು ; ಹಿಡಿದಿದ್ದ ಸಂಕಟ....

ಜನಸಮೂಹದಿಂದ ಗಗನಕ್ಕೇರಿತು ರೋದನ.

ಘೋಷ :

"ಓ ಮೆನೆಪ್‌ಟಾ ! ಓ ಮೆನೆಪ್‌ಟಾ !"

ಧ್ವನಿಸಿ, ಪ್ರತಿಧ್ವನಿಸಿತು :

"ಓ ಮೆನೆಪ್‌ಟಾ ! ಓ ಮೆನೆಪ್‌ಟಾ !"

"ಹೊಡೆದಟ್ಟಿ ಹೊರಕ್ಕೆ !" ಎಂದು ಯೋಧರಿಗೆ ಬಕಿಲ ಅರಚಿ ಹೇಳುತ್ತಿದ್ದಂತೆ ಉಪ್ಪರಿಗೆಯಲ್ಲಿ ಪೆರೋನ ಮುಂದೆ ನಿಂತು ಅಮಾತ್ಯ ನುಡಿದ :

"ಓ ಪೆರೋ ! ವೈರಿ ಹತನಾಗಿದ್ದಾನೆ ; ನ್ಯಾಯ ನಿನ್ನೆದುರು ಸುಭದ್ರವಾಗಿ ನಿಂತಿದೆ."

ಉಪ್ಪರಿಗೆಯ ಮೇಲಿದ್ದವರು ಜಯಕಾರ ಮಾಡಿದರು :

"ಓ ಪೆರೋ ! ಓ ಪೆರೋ !"

"ಓ ದೇವರೂಪ ! ಓ ದೇವರೂಪ !"

ಯೋಧರು ಜನರ ಮೇಲೆ ಬಿದ್ದರು.

ಬಯಲಿನಿಂದ ಘೋಷ :

"ಓ ಮೆನೆಪ್‌ಟಾ ! ಓ ಮೆನೆಪ್‌ಟಾ !"

(ಮೆನ್ನ ಬಟಾನಿಗೆಂದ : "ಓಡೋಣ-ಓಡೋಣ-ಉದ್ಯಾನದಲ್ಲಿ ಸೇರೋಣ.")

ಯೋಧರು ಈಟಿಗಳಿಂದ ಚುಚ್ಚಿದರೆಂದು ಎದುರು ಇದ್ದವರು ಚೀರಿದರು. ಚೀರುತ್ತ ಓಡಿದರು. ನೂಕುನುಗ್ಗಲಲ್ಲಿ ಕೆಲವರು ಬಿದ್ದರು. ಉಳಿದವರು ಅವರನ್ನು ತುಳಿದು ತಮ್ಮ ಜೀವದ ರಕ್ಷಣೆಗಾಗಿ ಪಲಾಯನ ಮಾಡಿದರು.

ಅಮಾತ್ಯನ ಅನುಜ್ಞೆಯನ್ನು ಟೆಹುಟಿ ಬಕಿಲನಿಗೆ ತಿಳಿಸಿದ.

"ಅರಮನೆಯ ಪ್ರವೇಶದ್ವಾರದ ಬಳಿ ಪ್ರಾಕಾರದ ಮೇಲಿನಿಂದ ತೂಗುಹಾಕು"

ಮೆನೆಪ್‌ಟಾನ ದೇಹಾಂತವಾದೊಡನೆಯೇ ಮಹಾ ಅರ್ಚಕ ಉಪ್ಪರಿಗೆಯಿಂದ ಕೆಳಕ್ಕಿಳಿದ. ವೈರಿ ಹತನಾಗಿ ನ್ಯಾಯ ಸುಭದ್ರವಾಗಿ ನಿಂತಿದೆ ಎಂದು ಅಮಾತ್ಯ ವಿದ್ಯುಕ್ತನಾಗಿ ತಿಳಿಸಿದ ಮೇಲೆ ಅರಸನೂ ಅರಸಿಯೂ ಕೆಳಕ್ಕಿಳಿದರು. ಅವರನ್ನು ಅಮಾತ್ಯ ಹಿಂಬಾಲಿಸಿದ. ಅವನ ಹಿಂದಿನಿಂದ ಇತರರು ಬಂದರು.

ಆದರೆ, ಜನರನ್ನು ಚೆದುರಿಸುವ ಕೆಲಸ ಇನ್ನೂ ನಡೆದಿತ್ತು. ತಮ್ಮ ತಮ್ಮ ನಿವಾಸಗಳಿಗೆ ತೆರಳಬೇಕಾಗಿದ್ದವರು. ಮಹಾದ್ವಾರದ ಮೂಲಕ ಪಲ್ಲಕ್ಕಿಗಳು ಹಾದು ಹೋಗಲು ಅವಕಾಶವಿಲ್ಲದೆ ಸ್ವಲ್ಪ ಹೊತ್ತು ಕಾಯಬೇಕಾಯಿತು.

ಹಂತಕನ ಪಾದಕ್ಕೆ ಆಗಿದ್ದುದು ಗೀರುಗಾಯ ಮಾತ್ರ. ಟಣ್ಣನೆ ಕೆಳಕ್ಕೆ ಬಿದ್ದ ಚಾಕುವನ್ನು ಒಬ್ಬ ಯೋಧ ಎತ್ತಿಕೊಂಡು ತನ್ನ ನಡುವಸ್ತ್ರದೊಳಕ್ಕೆ ಸೇರಿಸಿದ್ದ.

ಮೆನೆಪ್ಟಾನ ರುಂಡ ಮುಂಡಗಳನ್ನು ಯೋಧರು ಕಟ್ಟೆಯಿಂದ ಕೆಳಕ್ಕೆ ಎಳೆದರು.

ಹಂತಕ ಇಳಿದು ಬಂದು ಬಕಿಲನೊಡನೆ ದೂರಿದ :

" ಯಾರೋ ನನ್ನ ಕಡೆಗೆ ಏನೋ ಎಸೆದರಲ್ಲ ?"

ಬಕಿಲನೆಂದ :

" ನಿನ್ನ ಕಡೆಗೆ ? ಛೆ ! ಛೆ ! ಆ ನೀರಾನೆಗೆ ತಗಲ್ಬೇಕೂಂತ ಯಾರಾದರೂ ಏನಾದರೂ ಎಸೆದಿರಬಹುದು. ಹೋಗು ಮನೆಗೆ."

೪

ನಾಟಕ

○ ಯಕ್ಷಗಾನ ಬಯಲಾಟಗಳ ನೆಲದಲ್ಲಿ ಹುಟ್ಟಿದವನು. ಕಂಪನಿ ನಾಟಕ ನೋಡಿದವನು. ಆಧುನಿಕ ರಂಗಭೂಮಿಯ ಸೋಂಕು ತಟ್ಟಿದವನು. ಕಿಶೋರಾವಸ್ಥೆಯಲ್ಲಿ ಸುಳ್ಯದಲ್ಲಿ ತುಳುವಿನಲ್ಲೊಂದು ಪುಟ್ಟ ನಾಟಕ ಬರೆದೆ. ಬಳಿಕ ಒಂದು ನಾಟಕದ ರಂಗತಾಲೀಮನ್ನೇ ವಸ್ತುವಾಗಿಟ್ಟುಕೊಂಡು ಬರೆದದ್ದು, 'ನಾಟಕವೆಂಬ ನಾಟಕ.' ಆ ವಸ್ತುವನ್ನು ಸೂಚಿಸಿದ್ದ ಸುಬ್ಬಣ್ಣ ಮಾಸ್ತ್ರಿಗೆ ಹಸ್ತಪ್ರತಿ ಕೊಟ್ಟೆ. ಜನತಾ ರಂಗಭೂಮಿಯ ಆಶೋತ್ತರಗಳನ್ನು ಮೈಗೂಡಿಸಿಕೊಂಡ ಮೇಲೆ, ೧೯೪೪ರಲ್ಲಿ, ಬರೆದು ಮಂಗಳೂರಿನ ಬಯಲಿನಲ್ಲಿ ಅಭಿನಯಿಸಿದ್ದು 'ನಾವೂ ಮನುಷ್ಯರು!'

ಸ್ಪೇನಿನಲ್ಲಿ ಫ್ಯಾಸಿಸ್ಟ್ ವಿರೋಧಿ ಪ್ರತಿಭಟನೆಯಲ್ಲಿ ಪಾಲ್ಗೊಂಡು ಸಾವನ್ನಪ್ಪಿದ ಯುವ ಆಂಗ್ಲ ಲೇಖಕ, ರಾಲ್ಫ್ ಫಾಕ್ಸ್, ಕೆಲ ಕಾಲದ ಬಳಿಕ ಗತಿಸಿದವನ ಬಗೆಗೊಂದು ಸ್ಮರಣ ಗ್ರಂಥ ಬಂತು. ಅದರಲ್ಲಿ ತೈಮೂರಲೇನನನ್ನು ಕುರಿತು ಫಾಕ್ಸ್ ಬರೆದ ಕೆಲ ಪುಟಗಳಿದ್ದವು. ಅಲ್ಲಿ ಸ್ವಾರಸ್ಯಕರವಾದೊಂದು ಕಥಾ ತುಣುಕು ಹುದುಗಿತ್ತು. ಹತ್ತು ಹದಿನೈದು ವರ್ಷ ಬೀಜೋಪಚಾರ ಮಾಡಿದ ಬಳಿಕ, ಬೆಂಗಳೂರಿನಲ್ಲಿ ನಾಟಕ ಬರೆದೆ : 'ಸಮ್ರಾಜ್ಞಿ'. ಮೊದಲು ಬಾನುಲಿಗೆಂದು, ಬಳಿಕ ರಂಗಪ್ರಯೋಗಕ್ಕೆಂದು ಅಣಿಗೊಳಿಸಿದ ನೆನಪು (ಬಾನುಲಿ ರೂಪ ದೊರೆತಿಲ್ಲ).

'ಸಮ್ರಾಜ್ಞಿ' ಮೈಸೂರು ವಿಶ್ವವಿದ್ಯಾನಿಲಯದ ಪದವಿ ತರಗತಿಗಳಿಗೆ ಉಪಪಠ್ಯವಾಯಿತು (೧೯೬೨). ಒಂದಷ್ಟು ಹಣ ಬಂತು. ಮನೆಕಟ್ಟಲು ಮಾಡಿದ್ದ ಸಾಲದ ಮರು ಸಂದಾಯವನ್ನು ಪೂರ್ತಿಗೊಳಿಸಿದೆ.

ಇಲ್ಲಿರುವುದು 'ಸಮ್ರಾಜ್ಞಿ'ಯ ಎರಡನೆಯ ದೃಶ್ಯ. ಪೂರ್ತಿ ನಾಟಕ 'ನಿರಂಜನ : ಮೂವತ್ತು ಸಂಪುಟಗಳಲ್ಲಿ' ಸರಣಿಯ ೧೯ನೆಯ ಸಂಪುಟದಲ್ಲಿ ಲಭ್ಯ.

ಸಮ್ರಾಜ್ಞಿ

ದೃಶ್ಯ ೧

[ಸಮರ್ಕಂದದಲ್ಲಿ ಅಂತಃಪುರ. ಪ್ರೇಕ್ಷಕರಿಗೆ ಪರಿಚಿತವಾದ ರಂಗಸಜ್ಜಿಕೆ. ತೆರೆ ಸರಿದಾಗ ಸಮ್ರಾಜ್ಞಿ ಹಾನಿಮ್ ಅಗಲ ಪೀಠದ ಮೇಲೆ ತುಸು ಮೈ ಮುದುಡಿಕೊಂಡು ಮ್ಲಾನವದನೆಯಾಗಿ ಕುಳಿತ್ತಿದ್ದಾಳೆ. ಸರಿದ ತೆರೆಯೊಡನೆ ಹಿನ್ನಲೆಯಿಂದ ಉತ್ಸಾಹೀ ಜನಸಮುದಾಯದ ಕಲರವ, ಕೊಂಬು ತಮಟೆಗಳ ಸದ್ದು ಕೇಳಿ ಬರುತ್ತಿವೆ. ಅದು ಹಿಂದೂಸ್ಥಾನದ ಮೇಲಣ ದಂಡೆಯಾತ್ರೆಯಿಂದ ಮರಳಿ ಬರುತ್ತಿರುವ ತೈಮೂರನಿಗೂ ಷಾರುಖ್‌ನಿಗೂ ಸಮರ್ಕಂದ ನೀಡುತ್ತಿರುವ ಸ್ವಾಗತ. ಜನತೆ ಜಯಘೋಷ ಮಾಡುತ್ತಿದೆ: "ಮಂಗೋಲ ಮಹಾಪ್ರಭು ತೈಮೂರಖಾನ್ ಜಿಂದಾಬಾದ್!" "ಹಿಂದೂಸ್ಥಾನ ವಿಜೇತ ತೈಮೂರಖಾನ್ ಜಿಂದಾಬಾದ್!" ಮಂಗೋಲ ಯುವರಾಜ ಷಾರುಖ್–ಜಿಂದಾಬಾದ್!"

ಅಮೀನಾ ಬಿಳಿಯ ಪಾರಿವಾಳವನ್ನು ಹಿಡಿದುಕೊಂಡು ಜಾಲಂದ್ರದ ಬಳಿ ಹೊರಕ್ಕೆ ನೋಡುತ್ತ ನಿಂತಿದ್ದಾಳೆ,]

ಅಮೀನಾ

ಕೇಳಿದಿರಾ, ಸಮ್ರಾಜ್ಞಿ? ಪ್ರಜೆಗಳು ರಾಜಕುಮಾರರಿಗೂ ಜಯಕಾರ ಮಾಡುತ್ತಿದ್ದಾರೆ.

ಹಾನಿಮ್

ಹುಂ.

ಅಮೀನಾ

ಈ ಸಲದ್ದು ಅಭೂತಪೂರ್ವ ಸ್ವಾಗತ!

ಹಾನಿಮ್

ಮೆರವಣಿಗೆ ಕಾಣಿಸುತ್ತಿದೆಯೆ?

ಅಮೀನಾ

ಹ್ಞ! ಸಮ್ರಾಜ್ಞಿ. ಅರಮನೆಯ ಬೀದಿಗೆ ಬಂತು. ಅವ್ವಯ್ಯಾ! ಸಂಭ್ರಮ–ಸಡಗರ–ಎಂದರೆ ಇದು! (ಈಗ ಮತ್ತಷ್ಟು ಸ್ಪಷ್ಟವಾದ ಕಲರವ.) ಶ್ವೇತಾಶ್ವದ

ಮೇಲೆ ಸಾಮ್ರಾಟರು ! ಕಂದು ಕುದುರೆಯ ಮೇಲೆ ಷಾ ರುಖ್ ! ಸೇನಾನಿಗಳು–ಸೈನಿಕರು–ಹೆಜ್ಜೆ ಹೆಜ್ಜೆಗೂ ಮುಜುರೆ ಸಲ್ಲಿಸುತ್ತಿರುವ ಪ್ರಜಾಕೋಟಿ ! ಎಷ್ಟೊಂದು ಬಣ್ಣಗಳು ! ಎಂಥೆಂಥ ಉಡುಪುಗಳು !

ಹಾನಿಮ್

ಸಾಕು, ಅಮಿೂನಾ. ಪ್ರತಿ ಸಲವೂ ಒಂದೇ ಹಾಡು ನಿನ್ನದು.

ಅಮಿೂನಾ

ಸಮ್ರಾಟರು ಬರುತ್ತ ದಾರಿಯಲ್ಲೇ ಕೀರ್ತಿಮಂದಿರವನ್ನು ಕಂಡಿರಬೇಕು. ಸಂತುಷ್ಟರಾಗಿರಬೇಕು....ಆ ಕಡೆಗೂ ಈ ಕಡೆಗೂ ಅದೆಂಥ ಠೀವಿಯಿಂದ ಕತ್ತು ಕೊಂಕಿಸುತ್ತ ಪ್ರಜೆಗಳ ವಂದನೆಗಳನ್ನು ಸ್ವೀಕರಿಸುತ್ತಿದ್ದಾರೆ ! ಬಂದು ನೋಡುವುದಿಲ್ಲವೆ, ಸಾಮ್ರಾಜ್ಞಿ ?

ಹಾನಿಮ್

ಯಾವ ಮುಖದಿಂದ ನೋಡಲಿ ?

ಅಮಿೂನಾ

(ದುಗುಡದಿಂದ) ರಾಜಕುಮಾರ ಮೊದಲ ಬಾರಿ ಜೈತ್ರಯಾತ್ರೆಯಿಂದ ಬರುತಿದಾರೆ. ಅವರನ್ನು ನೋಡುವುದಕ್ಕಾದರೂ ಬನ್ನಿ.

ಹಾನಿಮ್

ಹೇಗೂ ಇಲ್ಲಿಗೆ ಬರುತಾನಲ್ಲ. ಅಮಿೂನಾ,

ಅಮಿೂನ

ನಿಮ್ಮಿಷ್ಟ. ಸಮ್ರಾಟರೂ ರಾಜಕುಮಾರರೂ ಕುದುರೆಗಳಿಂದ ಇಳಿಯುತಿದಾರೆ, ಪಾರಿವಾಳವನ್ನು ಹಾರಿಸಿಬಿಡಲೆ ?

ಹಾನಿಮ್

ಹುಂ.

ಅಮಿೂನಾ

(ಅಳುತಳುತ, ಹಕ್ಕಿಗೆ) ಕುಟುರ್ ಕುಟುರ್, ಹಾರಿ ಹೋಗಿ ಸಮ್ರಾಟರಿಗೂ ರಾಜಕುಮಾರರಿಗೂ ಉಮ್ಮ ಕೊಡು. (ಪಾರಿವಾಳ ರೆಕ್ಕೆ ಬಡೆಯುತ್ತ ಜಾಲಂದ್ರದಿಂದ ಹೊರಹೋಗುವುದು.)

ಹಾನಿಮ್

(ನೋವು ಅನುಭವಿಸುತ್ತ ನರಳುವಂತೆ) ಯಾ ಅಲ್ಲಾ.....

ಅಮಿೂನಾ

(ಸಮ್ರಾಜ್ಞಿಯ ಬಳಿಗೆ ಧಾವಿಸಿ. ನೆಲದ ಮೇಲೆ ಆಕೆಯ ಪಾದಗಳ ಬಳಿ ಕುಸಿಕುಳಿತು ಯಾಚಿಸುವ ಧ್ವನಿಯಲ್ಲಿ) ಒಡತಿ (ಗದ್ಗದ ಕಂಠದಿಂದ) ನನ್ನದೊಂದು ಮಾತು ನಡೆಸಿಕೊಡಿ........ಖುದಾನ ಆಣೆ ! ಹೀಗಿರಬೇಡಿ ! ಒಂದಿಷ್ಟು ಲವಲವಿಕೆ

ತೋರಿಸಿ! ಕಣ್ಣುಗಳಲ್ಲಿ ಕಾಂತಿ ತುಂಬಿಕೊಳ್ಳಿ! ಇಷ್ಟು ದಿನಗಳಿಂದ ನಾನು ಹೇಳುತ್ತ ಬಂದಿಲ್ಲವೆ, ಸಾಮ್ರಾಜ್ಞಿ? ಇಲ್ಲಿ ಏನೂ ನಡೆದಿಲ್ಲ! ಅದೊಂದು ಕನಸು. ಕೆಟ್ಟಕನಸು. ಅಷ್ಟೇ! ಎಲ್ಲಿ, ಇಲ್ಲಿ ನೋಡಿ!

ಹಾನಿಮ್

ಅಮಿನಾ, ಸಾವು ಬರಬಾರದಿತ್ತೆ ನನಗೆ?

ಅಮಿನಾ

ಆಡಬಾರದು ಅಂಥ ಮಾತು. ....ಮರೆಯಬೇಡಿ, ಒಡತಿ. ಸಮ್ರಾಟರು ಇಲ್ಲದ ವೇಳೆಯಲ್ಲಿ, ನಿಜವಾದ ಸಮ್ರಾಜ್ಞಿಯಂತೆ ನೀವು ನಡೆದುಕೊಂಡಿರಿ. ಗುರುತರ ಹೊಣೆಯನ್ನು ನಿರ್ವಹಿಸಿದಿರಿ. ಜಗತ್ತಿನಲ್ಲಿ ಬೇರೆಲ್ಲೂ ಕಾಣಸಿಗದ ಅಪ್ರತಿಮವಾದ ಕೀರ್ತಿಮಂದಿರವನ್ನು ಕಟ್ಟಿಸಿ ಪೂರೈಸಿದಿರಿ. ಸಮ್ರಾಟರು ಸಂಪ್ರೀತರಾಗುತ್ತಾರೆ. ನಿಮ್ಮ ಬದುಕಿನಲ್ಲಿ ಇಂಥ ಸುದಿನ ಬೇರೊಂದು ಬರಲಾರದು.

ಹಾನಿಮ್

(ಅಳುತ್ತ) ನನ್ನ ಬದುಕಿನಲ್ಲಿ ಇಂಥ ದುರ್ದಿನ ಬೇರೊಂದು ಬರುವುದಿಲ್ಲ. ಅಮಿನಾ!

ಅಮಿನಾ

ಅಯ್ಯೋ! ಎಂಥ ಮಾತಾಡುತೀರಿ!

(ಕೊಂಬು ತಮಟೆಗಳ ಸದ್ದು ಒಂದು ಕ್ಷಣ ತೀವ್ರಗೊಂಡು, ನಿಂತು ಹೋಗುತ್ತದೆ. ಜನರ ಗುಜು ಗುಜು ಕಡಮೆಯಾಗುತ್ತ ನೀರವತೆ ನೆಲೆಸುತ್ತದೆ.)

(ಅಮಿನಾ ಗಡಬಡಿಸಿ ಏಳುವಳು. ತನ್ನ ಉಡುಪಿನ ಅಂಚಿನಿಂದ ಸಮ್ರಾಜ್ಞಿಯ ಕಣ್ಣುಗಳನ್ನು ಒರೆಸುವಳು.)

ಹಾನಿಮ್

ಹೊರಟು ಹೋಗಬೇಡ. ಅಮಿನಾ. ಇಲ್ಲೇ ಇರು.

ಅಮಿನಾ

ಹೂಂ, ಒಡತಿ. (ನೇಪಥ್ಯದಲ್ಲಿ ಸ್ತುತಿಪಾಠಕರ ಧ್ವನಿ ಕೇಳಿಸುವುದು.)

ಏಳಿ ಸಮ್ರಾಜ್ಞಿ, ಇನ್ನು ಏಳಿ.

(ಹಾನಿಮ್ ಮೆಲ್ಲನೆ ಎದ್ದು ನಿಲ್ಲುವಳು. ಮೂಲೆಗೆ ಸರಿದು ನಿಂತ ಅಮಿನಾಳನ್ನು ಆರ್ತನೋಟದಿಂದ ನೋಡುವಳು. ಸ್ತುತಿಪಠನ ಕೇಳ ತೊಡಗಿದಂತೆ, ಸುಧಾರಿಸಿ ಕೊಳ್ಳಲು ಯತ್ನಿಸುತ್ತ ದೃಷ್ಟಿಯನ್ನು ನೇಪಥ್ಯದತ್ತ ಹೊರಳಿಸುವಳು.)

ಸ್ತುತಿಪಾಠಕರು

(ನೇಪಥ್ಯದಲ್ಲಿ) ದಿಲ್ಲಿಯ ಸುಲ್ತಾನನನ್ನು ಸದೆ ಬಡಿದು ಹಿಂದೂಸ್ಥಾನವನ್ನು ಗೆದ್ದ ವೀರಾಧಿವೀರ! ರಣಕೇಸರಿ ಚೆಂಗೀಸಖಾನರ ವಂಶಜ! ಮಂಗೋಲ ಸಮ್ರಾಟ! ವೈರಿಕುಲ ಕುಠಾರ! ಬಾದಶಹ ತೈಮೂರಖಾನರು ಯುವ

ರಾಜರೊಡಗೂಡಿ ಅಂತಃಪುರಕ್ಕೆ ದಯಮಾಡಿಸುತ್ತಿದ್ದಾರೆ–ಹೋಷಿಯಾರ್ ! ಹೋಷಿಯಾರ್ !

(ಅಮೀನಾ, ಎದೆಯ ಮೇಲೆ ಅಂಗೈಗಳನ್ನಿಟ್ಟುಕೊಂಡು ನಿಂತವಳು ಕೈಗಳನ್ನು ಕೆಳಕ್ಕೆ ಬಿಡುವಳು.)

(ಕುಂಟ ತೈಮೂರನ ಕ್ಲಾಂಗ್ ನಡಿಗೆ. ರಂಗಸ್ಥಲವನ್ನು ಪ್ರವೇಶಿಸಿ ಬಾಗಿಲ ಬಳಿಯಲ್ಲೆ ನಿಲ್ಲುವನು. ಆತನ ಹಿಂದೆ ಷಾರುಖ್.)

ತೈಮೂರ

(ಎರಡೂ ಕೈಗಳನ್ನು ಮುಂದಕ್ಕೆ ಚಾಚಿ ತುಸು ಮೇಲಕ್ಕೆ ಎತ್ತಿ, ಹರ್ಷ ವಿಸ್ಮಯಗಳ ಧ್ವನಿಯಲ್ಲಿ) ಏನದ್ಭುತ ! ಮನುಷ್ಯ ಮಾತ್ರನಿಂದ ಇಂತಹ ಸುಂದರ ಮಂದಿರದ ನಿರ್ಮಾಣ ಸಾಧ್ಯ ಎಂದರೇನು ? ನಮ್ಮ ವಿಜಯಗಳ ಸ್ಮಾರಕವಾಗಿ ಒಬ್ಬ ಶಿಲ್ಪಿ ಅದನ್ನು ಕಟ್ಟಿದ ಅಂದರೇನು ? (ಸಮ್ರಾಜ್ಞಿಯತ್ತ ಒಮ್ಮೆ ನೋಡಿ) ಬೇಗಂ ಸಾಹೀಬಾ ! ಬೀಬಿ ಹಾನಿಮ್ ! ನೀವೆಂಥ ಜಾದೂ ಮಾಡಿಬಿಟ್ಟಿರಿ ! ಲೋಕದ ಸೊಬಗನ್ನೆಲ್ಲ ತಂದು ಹಿಂಡಿಮಾಡಿದ ರಸಘಟ್ಟಿ ! ಮೈನವಿರೆಬ್ಬಿಸುವ ಆ ಕಮಾನು ಸ್ತಂಭಗಳೊ–ಗಗನಚುಂಬಿ, ಗಗನಚುಂಬಿ ! (ಮಾತಿನ ಓಘದಲ್ಲಿ ಮೈಮರೆತವನು ಒಮ್ಮೆಲೆ ಪತ್ನಿಯನ್ನು ದಿಟ್ಟಿಸಿ, ಎಚ್ಚೆತ್ತು) ನಮಗೂ ಗಗನವನ್ನೇ ತಬ್ಬಿಕೊಂಡು ಚುಂಬಿಸಬೇಕು. ಎನಿಸುತಿದೆ ! ಅರೇ ! ಈ ಸಲವೂ ಕಣ್ಣೀರು ! ಹ್ಞ. (ನೆನಪಾದವನಂತೆ) ಆನಂದಾಶ್ರು– ಆನಂದಾಶ್ರು ! ಅಲ್ಲ ? (ಹಾನಿಮ್ ಮಾತನಾಡಲೆಂದು ತುಟಿಗಳನ್ನು ಅರೆ ತೆರೆಯುವಳು. ಮಾತು ಹೊರಡುವುದಿಲ್ಲ, ಮುಖ ಬಿಳಿಚಿಕೊಳ್ಳುವುದು. ಶರೀರ ಕಂಪಿಸುವುದು. ಬವಳಿ ಬಂದಂತೆ ಅನಿಸಿದರೂ ಪ್ರಯತ್ನಪೂರ್ವಕವಾಗಿ ನಿಂತೇ ಇರುವಳು.) (ಅರ್ಧ ತನ್ನಷ್ಟಕ್ಕೆ) ಇದು ಹೊಸದು, ಯಾವತ್ತೂ ಹೀಗೆ ಇದ್ದವರಲ್ಲ, ಬೇಗಂ.

ಅಮೀನಾ

(ಮೂಲೆಯಿಂದ ಧಾವಿಸಿ ಬಂದು, ತೈಮೂರನೆದುರು ಅವಸರವಾಗಿ ಕುರ್ನಿಸು ಮಾಡುವಳು. 'ನೀನು ಇಲ್ಲಿ ಯಾಕಿದ್ದೀಯಾ ?' ಎನ್ನುವಂತೆ ತೈಮೂರ ಅಸಹನೆಯಿಂದ ಆಕೆಯನ್ನು ನೋಡುವನು.) ಸಮ್ರಾಜ್ಞಿಯವರಿಗೆ ದೇಹಾಲಸ್ಯ ಬಾದಶಹ. (ಹಿಂದಕ್ಕೆ ಸರಿದು ನಿಲ್ಲುವಳು.)

ತೈಮೂರ

(ಎರಡು ಹೆಜ್ಜೆ ಮುಂದುವರಿದು) ದೇಹಾಲಸ್ಯ ? ಅದೆಂಥ ಕಾಯಿಲೆ ?

ಅಮೀನಾ

ಇಂಥದೇ ಎಂದು ಹೇಳುವಹಾಗಿಲ್ಲ.

ತೈಮೂರ

(ನಿಷ್ಠುರವಾಗಿ) ಅರಮನೆಯ ವೈದ್ಯರು ಏನೆಂದರು ?

ಅಮಿನಾ

(ಭಯಪಡುತ್ತ) ಅವರಿಗಿನ್ನೂ ತೋರಿಸಿಲ್ಲ.

ತೈಮೂರ

(ಹಾನಿಮಳ ಬಳಿ ಸಾರಿ, ಅವಳೆದುರು ನಿಂತು, ಧ್ವನಿಯನ್ನು ಮೃದುಗೊಳಿಸಲು ಯತ್ನಿಸುತ್ತ) ಮಾತನಾಡಲು ಆಗುವುದಿಲ್ಲವೆ. ಸಮ್ರಾಜ್ಞಿ ?

(ಹಾನಿಮ್ ತಲೆ ತಗ್ಗಿಸಿ ನಿಲ್ಲುವಳು.)

ಅಮಿನಾ

ಗಂಟಲು ನೋವು.

ತೈಮೂರ

(ಅಮಿನಾ ಹೇಳಿದುದನ್ನು ಗಣನೆಗೆ ತೆಗೆದುಕೊಳ್ಳದೆ, ಹಾನಿಮಳ ಗಲ್ಲವನ್ನು ತನ್ನ ಬೆರಳುಗಳಿಂದ ಹಿಡಿದು, ಮೇಲಕ್ಕೆತ್ತಿ) ಎಲ್ಲಿ ನನ್ನನ್ನು ನೋಡಿ........ (ಕ್ಷಣ ಮೌನ) ಯಾವುದೂ ಮೊದಲಿನಂತೆ ಇಲ್ಲವೇ ಇಲ್ಲ. ಕಣ್ಣು, ಮೂಗು, ಕೆನ್ನೆ........ (ವಿಸ್ಮಯದಿಂದ) ಏನು ಈ ಗುರುತು ? (ತಗ್ಗಿದ ಧ್ವನಿಯಲ್ಲಿ) ಈ....ಗು–ರು–ತು.... (ಒಂದು ಕ್ಷಣ ಸ್ಮಶಾನ ಮೌನ. ಒಮ್ಮೆಲೆ ಗಾಯಗೊಂಡ ಕಾಡು ಪ್ರಾಣಿಯಂತೆ ತೈಮೂರ ಚೀರುವನು.) ಆ್ಹ ! ! ! (ಮತ್ತೆ ಮೌನ) (ರೋಷಾವೇಶದಿಂದ ಕಂಪಿಸುವ ಧ್ವನಿ) ನನ್ನ ವಿಜಯಗಳ ಸ್ಮಾರಕನಾಗಿ ಆ ಮಂದಿರವನ್ನು ಆತ ನಿರ್ಮಿಸಲಿಲ್ಲ ! ನನ್ನ ಕೀರ್ತಿಗೆ ಕನ್ನಡಿಯಾಗಿ ಅದನ್ನು ಆತ ಕಟ್ಟಲಿಲ್ಲ !

(ಷಾ ರುಖ್ ಹಿಂಬದಿಗೆ ಮೂಲೆಗೆ ಸರಿದು, ತಲೆ ತಗ್ಗಿಸಿ ನಿಲ್ಲುವನು.)

ಹಾನಿಮ್

(ಪ್ರಯಾಸದಿಂದ ಧ್ವನಿ ಹೊರಡಿಸಿ, ಬಿಕ್ಕುತ್ತ) ಜಹಾಪನ, ನಾನು ನಿರಪರಾಧಿ !

ತೈಮೂರ

(ಆಕೆ ಮಾತನಾಡಿದುದೇ ಅನಿರೀಕ್ಷಿತವಾಗಿತ್ತು ಎಂಬಂತೆ ಬೆಚ್ಚಿ ಬಿದ್ದು) ಮುಚ್ಚು ಬಾಯಿ ! ಕುಲಟೆ ! (ವ್ಯಂಗ್ಯವಾಗಿ) ನಿನಗೆ ಗಂಟಲು ನೋವು, ಮಾತಾಡ ಬಾರದು. (ಧ್ವನಿ ಏರಿಸಿ) ಮತ್ತೆ ತುಟಿ ತೆರೆದೆಯೋ, ಖಡ್ಗದಿಂದ ನಾಲಿಗೆ ಸೀಳೇನು ! (ಧ್ವನಿ ತಗ್ಗಿಸಿ) ನನ್ನ ವಿಜಯಗಳ ಸ್ಮಾರಕವಾಗಿ ಅದನ್ನು ಆತ ರಚಿಸಲಿಲ್ಲ. (ಬಿಕ್ಕುವ ಸಂಕಟದ ಧ್ವನಿ) ನನ್ನ ವಿಜಯಗಳ ಸ್ಮಾರಕವಾಗಿ ಅದನ್ನು ಆತ ರಚಿಸಲಿಲ್ಲ.... (ಚೀತ್ಕಾರ) ಆ್ಹ ! ! ! ಎಲ್ಲಿ ನನ್ನ ಕುದುರೆ ? (ಕುಂಟುತ್ತ ನೇಪಥ್ಯದತ್ತ ಓಡತೊಡಗುತ್ತ) ಎಲ್ಲಿ ಆತ ? ಆತ ಎಲ್ಲಿ ? (ಕೂಗಿ ಕರೆಯುತ್ತ) ಶಿಲ್ಪಿ ದಾವೂದ್ ! ಶಿಲ್ಪಿ ದಾವೂದ್ ! (ನಿರ್ಗಮನ)

ಹಾನಿಮ್

ಅಮಿನಾ ! (ಕೆಳಕ್ಕುರುಳುವಳು)

ಅವಿಮಾನಾ

(ಸಮ್ರಾಜ್ಞಿಯ ಬಳಿಗೆ ಧಾವಿಸುತ್ತ) ಒಡತೀ ! ಒಡತೀ !........

ಷಾ ರುಖ್

(ಸಿಂತಲ್ಲಿಂದ ತಾಯಿಯ ಬಳಿಗೆ ಓಡಿ ಬರುತ್ತ, ಶೋಕ ಧ್ವನಿಯಲ್ಲಿ) ಅಮ್ಮಾ ಜಾನ್ ! ಅಮ್ಮಾಜಾನ್ !

(ತೆರೆ)

ದೃಶ್ಯ ೩

[ತೆರೆ ಸರಿದಾಗ, ಹಿನ್ನೆಲೆಯ ಪರದೆ ತೋರಿಸುವುದು ದೂರದಲ್ಲಿ ಭವ್ಯವಾಗಿ ನಿಂತಿರುವ ಪ್ರಾರ್ಥನಾ ಮಂದಿರ ಹಾಗೂ ಕಮಾನು ಕಂಬಗಳನ್ನು.

ರಂಗಸ್ಥಲದ ಹಿಂಭಾಗದ ಅಂಚಿನಲ್ಲಿ ಪ್ರಾರ್ಥನಾ ಮಂದಿರದತ್ತ ಮುಖ ಮಾಡಿ ಕುಳಿತು ಶಿಲ್ಪಿ ದಾವೂದ್ ಪ್ರಾರ್ಥಿಸುತ್ತಿದ್ದಾನೆ. ಪ್ರಾರ್ಥನೆಯ ಕೊನೆಯ ಹಂತ.

ಎದ್ದವನೇ ಅತ್ತಿತ್ತ ತಿರುಗಿ, ಪ್ರೇಕ್ಷಕರ ಕಡೆಗೂ ಒಮ್ಮೆ ನೋಡಿ, ನೇಪಥ್ಯದತ್ತ ಹೊರಳಿ, ಸಹಾಯಕರಿಬ್ಬರನ್ನು ಹೆಸರು ಹಿಡಿದು ಕರೆಯುವನು.]

ಶಿಲ್ಪಿ ದಾವೂದ್

ಯಾಕೂಬ್ ! ರಫೀಖ್ !....ಯಾ–ಕೂಬ್ ! ರ–ಫೀಖ್ !

(ಇಬ್ಬರು ಸಹಾಯಕ ಶಿಲ್ಪಿಗಳೂ ಪ್ರವೇಶಿಸುವರು, ಯಾಕೂಬ್ ವೃದ್ಧ, ರಫೀಖ್ ಯುವಕ.)

ರಫೀಖ್

ಕರೆದಿರಾ, ಶಿಲ್ಪಿವರ್ಯ ?

ಶಿಲ್ಪಿ ದಾವೂದ್

ಹ್ಞ, ರಫೀಖ್, ಇಲ್ಲಿ ಇನ್ನು ನನಗೆ ಕೆಲಸವಿಲ್ಲ. ನಾನು ನನ್ನ ತಾಯ್ನಾಡಿಗೆ ಹೊರಡುತ್ತೇನೆ.

ರಫೀಖ್

ನಾನೂ ಬರಬಹುದೆ, ಶಿಲ್ಪಿವರ್ಯ ?

ಶಿಲ್ಪಿ ದಾವೂದ್

ಬರುತೀಯಾ ? ಯಾಕಾಗಬಾರದು ? ನಿನಗಿಷ್ಟವಿರುವವರೆಗೆ ಈ ಒಂಟಿ ಜೀವಕ್ಕೆ ನೀನೊಬ್ಬ ಸಂಗಡಿಗನಾಗು.

ಯಾಕೂಬ್

ಹುಚ್ಚು ! ಬರೇ ಹುಚ್ಚು ! ರಫೀಖನಿಗೆ ಮದುವೆ ಗೊತ್ತು ಮಾಡಿದಾರೆ. ಅದಕ್ಕೇ ಓಡಿಹೋಗಲು ಯೋಚಿಸುತಿದಾನೆ.

ರಫೀಖ್

(ಮುನಿಸು) ಹೋಗು, ಮಾವ.

ಶಿಲ್ಪಿ ದಾವೂದ್

ಮದುವೆ ! ಹಹ್ಹಹ್ಹ !

ಯಾಕೂಬ್

(ರಮಿಸುವ ಧ್ವನಿಯಲ್ಲಿ) ಶಿಲ್ಪಿವರ್ಯ ! ವಯಸ್ಸಿನಲ್ಲಿ ದೊಡ್ಡವನಾದ ನಾನು ನಿಮಗೂ ಒಂದು ಮಾತು ಹೇಳುತೇನೆ, ಊರಿಗೆ ಹೋದಮೇಲೆ ನೀವೂ—

ಶಿಲ್ಪಿ ದಾವೂದ್

ಯಾಕೂಬ್ ! ನಿನಗೆ ಮುಪ್ಪು ಬಂತು ; ಬುದ್ಧಿ ಬರಲಿಲ್ಲ....ಇರಲಿ, ನಿಮ್ಮ ಜತೆ ಚಕ್ಕಂದ ಆಡಲು ನನಗೆ ಸಮಯವಿಲ್ಲ. (ರಫೀಖನಿಗೆ) ನನ್ನ ಉಪಕರಣಗಳನ್ನಿಷ್ಟು ಕಟ್ಟಿಕೊಡುತೀಯಾ. ಮದುವೆಯ ಗಂಡೆ ?

ರಫೀಖ್

ಕಟ್ಟಿ ತರುತೇನೆ, ಶಿಲ್ಪಿವರ್ಯ. (ನಿಷ್ಕ್ರಮಣ)

ಯಾಕೂಬ್

ಹುಚ್ಚು ! ಹುಚ್ಚು ಅಂದೆ ! ಸಮ್ರಾಟರು ಹಿಂದೂಸ್ಥಾನದಿಂದ ಮರಳಿಬರುತ್ತ ಪ್ರಾರ್ಥನಾ ಮಂದಿರವನ್ನು ದೂರದಿಂದಲೇ ನೋಡಿ ಹೋಗಲಿಲ್ಲ? ಇನ್ನು ಸ್ವಲ್ಪ ಹೊತ್ತಿನಲ್ಲೇ ನಿಮಗೆ ಅರಮನೆಯಿಂದ ಕರೆ ಬರುತ್ತದೆ. ಬಿಳಿಯ ಕುದುರೆಯ ಮೇಲೆ ನಿಮ್ಮ ಸವಾರಿ ಆಗುತ್ತದೆ, ರಾಜಧಾನಿಯಲ್ಲಿ ನಿಮ್ಮನ್ನು ಮೆರವಣಿಗೆ ಮಾಡಿಸುತಾರೆ. ತಿಳಿಯಿತೆ, ಶಿಲ್ಪಿವರ್ಯ ? ಈ ತನಕ ಯಾರಿಗೂ ನೀಡದ ಭಾರೀ ಉಡುಗೊರೆಗಳನ್ನು ನಿಮಗೆ ಕೊಡುತಾರೆ, ಒಬ್ಬಳು ಮಂಗೋಲ ಹೆಣ್ಣನ್ನು ಕೊಟ್ಟರೂ ಕೊಟ್ಟರೇ....

ಶಿಲ್ಪಿ ದಾವೂದ್

ಇಲ್ಲ ! ನನ್ನ ಕಲೆ, ಕೊಳ್ಳುವ ಸರಕಲ್ಲ ! ಹೊನ್ನಿನ ಆಸೆಗಾಗಿ ನಾನಿದನ್ನು ಕಟ್ಟಲಿಲ್ಲ !

ಯಾಕೂಬ್

ಇದೂ ಹುಚ್ಚು ! ಶಿಲ್ಪಿವರ್ಯ, ನಿಮ್ಮ ಜತೆ ದುಡಿದು ಐದು ಸಹಸ್ರ ಜನ ಸಮ್ರಾಟರಿಂದ ತಮಗೇನಾದರೂ ದೊರೆತೀತು. ನೀವು ಕೊಡಿಸುತೀರಿ, ಎಂದು ನಂಬಿದಾರೆ—ಬಲ್ಲಿರಾ ?

ಶಿಲ್ಪಿ ದಾವೂದ್

ಮೂರ್ಖರು, ಅಲ್ಪರು ! ಇಂಥವರ ಮಧ್ಯೆ ನಾನು ಇರಬಾರದು.

ರಫೀಖ್

(ಧಾವಿಸಿ ಬರುವನು) ಶಿಲ್ಪಿವರ್ಯ! ಸಮ್ರಾಟರು ಬರುತಿರುವ ಹಾಗಿದೆ!

ಯಾಕೂಬ್

ಆಗಲೆ ಹೇಳಲಿಲ್ಲವೆ ನಾನು? ಕರೆ ಕಳುಹಿಸುವುದರ ಬದಲು ಆದರಿಸುವುದಕ್ಕೆ ಸ್ವತಃ ತಾವೇ ಬರುತಿದಾರೆ! ಯಾ ಪರವರದಿಗಾರ್! ನೀನು ದೊಡ್ಡವನು! ನಮ್ಮ ಭಾಗ್ಯದ ಬಾಗಿಲು ತೆರೆಯಿತು. ಕೃಪೆಯ ಕಣ್ಣಿನಿಂದ ಸಮ್ರಾಟರು ಒಮ್ಮೆ ನಮ್ಮನ್ನು ನೋಡುವಂತೆ ಮಾಡು.

ಶಿಲ್ಪಿ ದಾವೂದ್

(ಅಸಹನೆಯಿಂದ ಅತ್ತಿತ್ತ ಚಲಿಸತೊಡಗುತ್ತ) ನಿಲ್ಲಿಸು! ಸಾಕು! ನನಗೆ ಇದು ಇಷ್ಟವಿಲ್ಲ. ನಾನು ಆ ಮೃಗಮಾನವನ ಆತಿಥ್ಯ ಸ್ವೀಕರಿಸಲಾರೆ. ಇಲ್ಲಿಂದ ನಾನು ಹೊರಡಬೇಕು! ರಫೀಖ್, ನನ್ನ ಉಪಕರಣಗಳು—

ರಫೀಖ್

(ನೇಪಥ್ಯದತ್ತ ನೋಡುತ್ತಲೇ ಇದ್ದು) ಸಮ್ರಾಟರು, ಸೇನಾನಿ ಪೀರ್ ಮುಹಮ್ಮದರು, ಸಹಸ್ರಾರು ಯೋಧರು! ಎಲ್ಲರೂ ದಿನ್ನೆಯಾಚೆಗೆ ಕುದುರೆಗಳಿಂದ ಇಳಿದು ಇತ್ತ ಬರುತಿದಾರೆ. (ದೂರದಿಂದ ಸಮ್ರಾಟನ ಕರ್ಕಶ ಗಂಟಲು ಕೇಳಿಸುವುದು: 'ಶಿಲ್ಪಿ ದಾವೂದ್!' 'ಶಿಲ್ಪಿ ದಾವೂದ್!' ಸೈನಿಕರ ಗುಜುಗುಜು ಸದ್ದು ಕೇಳಿಸುವುದು. ಪೀರ್ ಮುಹಮ್ಮದನ ಕಂಠ 'ಓಡಿ ಮುಂದೆ! ಹಿಡಿಯಿರಿ ಆ ಶಿಲ್ಪಿಯನ್ನು!') ಅಯ್ಯೋ! ಇದೇನು?

ಯಾಕೂಬ್

ಯಾ ಅಲ್ಲಾ! ಏನು ಮಾಡಿಬಿಟ್ಟೆ?

ರಫೀಖ್

ಸಮ್ರಾಟರು ರೋಷಾವೇಶದಿಂದ ಜಿಗಿಜಿಗಿದು ಬರುತಿದಾರೆ. ಏನು ತಪ್ಪಾಯಿತು ನಮ್ಮಿಂದ? ಮಾವ! ಈಗೇನು ಮಾಡೋಣ? ಶಿಲ್ಪಿವರ್ಯ!

ಶಿಲ್ಪಿ ದಾವೂದ್

(ಸ್ವಗತ) ತಪ್ಪಿಸಿಕೊಳ್ಳಲೆ? ಹೇಗೆ? ಒಂಟಿಯಾಗಿರುವ ನನ್ನನ್ನು—ಕಾಲ್ನಡಿಗೆಯವನನ್ನು—ಅವರು ಸುಲಭವಾಗಿ ಹಿಡಿಯುವರಲ್ಲ? ನಿಂತು ಆತನನ್ನು ಇದಿರಿಸಿಯೇ ಹೋಗಲೆ? ಛ! ಹೀಗೂ ಆಯಿತೆ ಇಷ್ಟು ಬೇಗ?

ರಫೀಖ್

(ಈ ಪಕ್ಕಕ್ಕೆ ಬಂದು ಯಾಕೂಬನತ್ತ ಸೇರಿಕೊಳ್ಳುತ್ತ) ಮಾವ! ಮಾವ!

ಯಾಕೂಬ್

ನೀನೊಬ್ಬ ಅಳುಬುರುಕ. ಹೆದರಬೇಡ, ರಫೀಖ್! ಏನೋ ತಪ್ಪು ಗ್ರಹಿಕೆಯಾಗಿರಬೇಕು, ಸರಿಹೋಗುತ್ತದೆ.

ಶಿಲ್ಪಿ ದಾವೂದ್

(ನೇಪಥ್ಯದಲ್ಲಿ ಧ್ವನಿಗಳು ಸಮೀಪಿಸಿದಂತೆ) ಇದೂ ಒಂದು ಉಳಿದಿದ್ದಿತೇನೊ ? ಆಗಲಿ, ಆಗಲಿ....

(ಅರ್ಧವೃತ್ತಾಕಾರವಾಗಿ ಸೈನಿಕರು ನುಗ್ಗುವರು. ಅವರ ಮಧ್ಯೆ ಒರೆಹಿರಿದ ತೈಮೂರ. ಆತನ ಹಿಂದೆ ಪೀರ್ ಮುಹಮುದ್.)

ತೈಮೂರ

(ಏದುಸಿರು ಬಿಡುತ್ತ) ಸೈನಿಕರೇ! ಆ ಶಿಲ್ಪಿಯನ್ನು ಬಂಧಿಸಿ! (ನಾಲ್ವರು ಸೈನಿಕರು ಶಿಲ್ಪಿಯನ್ನು ಸುತ್ತುವರಿದು, ಆತನ ಹಿಂದೆ ಅರ್ಧವೃತ್ತಾಕಾರವಾಗಿ ನಿಲ್ಲುವರು) ಹಿಂದೂಸ್ಥಾನದಿಂದ ಈ ಸಮ್ರಾಟ ಮರಳಿ ಬರುವುದಿಲ್ಲ ಎಂದುಕೊಂಡೆಯೇನೋ, ನರಾಧಮ ? (ಶಿಲ್ಪಿದಾವೂದ್ ನಿರುತ್ತರ) ಮಾತನಾಡು ! ಗಂಟಲು ನೋವೇ ನಿನಗೆ ? ದೇಹಾಲಸ್ಯವೆ ? ನನ್ನಲ್ಲಿದೆ ಔಷಧಿ ! ಕತ್ತರಿಸಿ ಕತ್ತರಿಸಿ ನಿನ್ನನ್ನು ಕಂದಕದಾಚೆ ಎಸೆಯುತ್ತೇನೆ! ಹದ್ದುಗಳಿಗೆ ಔತಣ ಮಾಡಿಸುತ್ತೇನೆ. ಜೊತೆಯಲ್ಲೇ ನಿನ್ನ ಪ್ರೇಯಸಿಯನ್ನೂ ಕೆಳಕ್ಕೆ ತಳ್ಳುತ್ತೇನೆ. ಮಂಗೋಲ ಪ್ರಭುತ್ವದ ಸಮ್ರಾಜ್ಞಿಯ ಮೈಮುಟ್ಟಿದೆಯೇನೊ ನೀಚ ? (ಈವರೆಗೂ ಸಮ್ರಾಟರ ಕ್ರೋಧದ ಕಾರಣ ತಿಳಿಯದ ಸೇನಾನಿ–ಸೈನಿಕರು ಎಲ್ಲರ ಬಾಯಿಗಳಿಂದಲೂ 'ಹಾ' ! ಎಂಬ ಧ್ವನಿ ಹೊರಡುವುದು.) (ವ್ಯಂಗ್ಯವಾಗಿ) ನನ್ನ ದಿಗ್ವಿಜಯಗಳಿಗೆ ಚಿರಸ್ಮಾರಕವಾಗಿ ಕಟ್ಟಿದೆಯಲ್ಲವೆ ಈ ಕೀರ್ತಿ ಮಂದಿರವನ್ನು ? ಬೊಗಳಯ್ಯ !

ಶಿಲ್ಪಿ ದಾವೂದ್

ಮನುಷ್ಯ ರುಂಡಗಳ ಪಿರಮಿಡ್ಡು ಕಟ್ಟುವ ಶಿಲ್ಪಿಯೊಡನೆ ಮಾತನಾಡುವುದು ನಮಗೆ ಕುಂದು !

ಸೈನಿಕರು ಒಬ್ಬಿಬ್ಬರು

(ಒಟ್ಟಾಗಿ) ಏಯ್, ಹುಷಾರ್ !

ತೈಮೂರ

ಅಧಮ ! ಇನ್ನೊಂದು ಕ್ಷಣದಲ್ಲಿ ನಿನ್ನ ನಾಲಗೆಯನ್ನು ಕತ್ತರಿಸುತ್ತೇನೆ. ಅದಕ್ಕೂ ಮೊದಲು ಈ ಒಂದು ಪ್ರಶ್ನೆಗೆ ಉತ್ತರ ಕೊಡು : ಈ ಮಂದಿರವನ್ನು ಯಾರಿಗೋಸ್ಕರ ಕಟ್ಟಿದೆ ?

ಶಿಲ್ಪಿ ದಾವೂದ್

ಲೋಕದ ಗಂಡ ಅನ್ನಿಸಿಕೊಳ್ಳುವ ನಿನಗೆ ಅಷ್ಟೂ ಹೊಳೆಯಬೇಡವೇ ?— ಇದು ಸೌಂದರ್ಯದ ಅಧಿದೇವತೆಗೆ ಶಿಲ್ಪಿ ದಾವೂದನ ಕಾಣ್ಕೆ !

ತೈಮೂರ

(ಚೀತ್ಕರಿಸುತ್ತ) ಆ್ಹ ! ಸೌಂದರ್ಯದ ಅಧಿದೇವತೆಗೆ ಕಾಣ್ಕೆ ! (ಹಿರಿದ ಖಡ್ಗದೊಡನೆ ದಾವೂದನತ್ತ ಕುಂಟುತ್ತ ಧಾವಿಸುವನು. ಶಿಲ್ಪಿ ಒಮ್ಮೆಲೆ ಸೈನಿಕಡೆಯಿಂದರೆ

ಸುರುಳಿ ಪ್ರಾರ್ಥನಾ ಮಂದಿರದತ್ತ ಓಡುವನು. ತೈಮೂರ ತಾನೂ ಎದ್ದು ಹೆಜ್ಜೆ ಕುಂಟುತ್ತ ಓಡಲು ಯತ್ನಿಸಿ, ಸೋತು) ಹಿಡಿದು ತನ್ನಿ, ಆ ನರಪ್ರಾಣಿಯನ್ನು! (ಸೈನಿಕರು ಓಡುವರು ಓಡಿಯಾರಿ! 'ಹಿಡಿಯಿರಿ' ಪೀರ್ ಮುಹಮ್ಮದ್ ನಂಗಾಗಿ ತಲೆತಗ್ಗಿಸಿ ನಿಲ್ಲುವನು. ತೈಮೂರ ಗಾಯಗೊಂಡ ಹುಲಿಯಂತೆ ಅತ್ತಿತ್ತ ಜಿಗಿಯುತ್ತ ಉಸಿರು ಬಿಡುವನು.) ಪೀರ್ ಮುಹಮ್ಮದ್ ನಿಂತೇಬಿಟ್ಟಿರಲ್ಲ, ಸೇನಾನಿಗಳೇ!

ಪೀರ್ ಮುಹಮದ್

(ಗದ್ಗದ ಕಂಠದಿಂದ) ಆ ನೀಚ ಸ್ತಂಭವನ್ನೇರಿ ಮೇಲು ಮೇಲುಕ್ಕೆ ಹೋಗುತಿದಾನೆ, ಬಾದಶಹ. ಅದು ಪಂಜರ. ತಪ್ಪಿಸಿಕೊಳ್ಳಲಾರ. ಸೈನಿಕರು ಹಿಡಿದು ತರುತಾರೆ.

ತೈಮೂರ

(ಮೇಲೆ ನೋಡಿ) ಇಳಿಯೋ! ಇಳಿ ಕೆಳಕ್ಕೆ! (ರಂಗಸ್ಥಲದಲ್ಲೂ ನೇಪಥ್ಯದಲ್ಲೂ ಇರುವ ಸೈನಿಕರ ಗುಜುಗುಜು)

ಪೀರ್ ಮುಹಮದ್

ಸೈನಿಕರೆ! ಹತ್ತಿರಿ ಮೇಲಕ್ಕೆ! ಆ ಶಿಲ್ಪಿಯನ್ನು ಹಿಡಿದು ತನ್ನಿ!

(ಯಾಕೂಬ್-ರಫೀಖ್ ಹಿಂದೆ ಹಿಂದಕ್ಕೆ ಸರಿದು ನಿಷ್ಕ್ರಮಣ)

ತೈಮೂರ

(ದುಃಖಿ; ಗದ್ಗದ ಧ್ವನಿಯಲ್ಲಿ ಅರ್ಥ ತನ್ನಷ್ಟಕ್ಕೆ) ನಾನು ಹೆಳವ. ವಯಸ್ಸಾಯಿತು ಬೇರೆ. ಓಡಲಾರೆ....ಹತ್ತಲಾರೆ........(ಜನರ ಗುಜುಗುಜು)

ಪೀರ್ ಮುಹಮ್ಮದ್

ಹತ್ತಿರಿ! ಹತ್ತಿರಿ! ಅಲ್ಲೇ ಇದ್ದಾನೆ!

(ಜನ ಸಂದಣಿಯಿಂದ ಒಬ್ಬ : 'ಅಪ್ಪಯ್ಯಾ! ಧುಮುಕಿದ!')

ತೈಮೂರ

ಧುಮುಕಿದನೆ! ತಪ್ಪಿಸಿಕೊಂಡನೆ?

ಸಂದಣಿಯಲ್ಲಿ ಇನ್ನೊಬ್ಬ

'ಎಲ್ಲಿ? ಎಲ್ಲಿ!

ಮೊದಲನೆಯವನು

ಅಗೋ! ಕಂಬದ ತುದಿಯ ಕಿಂಡಿಯಿಂದ ಕೆಳಕ್ಕೆ ಹಾರಿದ! ಆಚೆಗೆ!

ಎರಡನೆಯವನು

ಆಳವರಿಯದ ಕಂದಕಕ್ಕೆ? ಅಬ್ಬ! ಅಬ್ಬ!

ಮೊದಲನೆಯವನು

ನೆಲ ಮುಟ್ಟುವ ದೇಹ ಛಿದ್ರ ಛಿದ್ರವಾಗಿ ಹೋಗುತದೆ.

ಎರಡನೆಯವನು

ಇಲ್ಲ, ನಂಬಲಾರೆ. ಅಗೋ ಆ ಪಾಪಿಷ್ಠ. ಆ ಮಾಯಾವಿ ಪಕ್ಷಿಯಾಗಿ ರೂಪಾಂತರ ಹೊಂದಿ ಹಾರಿ ಹೋಗುತಿದ್ದಾನೆ.

ಷೀರ್ ಮುಹಮುದ್

ಸೈತಾನ ನಾಶವಾಗಿ ಹೋದ !

ತೈಮೂರ

ತಪ್ಪಿಸಿಕೊಂಡ (ಭಾವೋದ್ವೇಗ) ತೈಮೂರನಿಗೆ ಸೋಲಾಯಿತು. ಷೀರ್ ಮುಹಮ್ಮದ್ ! ಮಂಗೋಲ ಸಮ್ರಾಟ ತೈಮೂರನಿಗೆ ಸೋಲಾಯಿತು ! ಓಹ್ ! ಓಹ್ ! (ಬಿಕ್ಕಿ ಬಿಕ್ಕಿ ನೋವನ್ನು ನುಂಗಿಕೊಂಡು ಧೃಢ ನಿರ್ಧಾರವನ್ನು ತೋರಿ ಭೈರಾಗಿಯ ಮಾತನ್ನು ನಿಧಾನವಾಗಿ ಜ್ಞಾಪಿಸಿಕೊಳ್ಳುತ್ತ) ನೀವು ಬಿಟ್ಟು ಬಂದಿರುವ ಸಮರ್ಕಂದದಲ್ಲಿ ಶಿಲೆ ಬೆಂಕಿ ಕಾರುತದೆ. ಪರ್ವತ ಸಿಡಿಯುತದೆ. ಅಲ್ಲೋಲ ಕಲ್ಲೋಲವಾಗುತದೆ. (ನಿರ್ವಿಕಾರ ಧ್ವನಿಯಲ್ಲಿ) ಸೇನಾನಿಗಳೇ, ಈ ಮಸೀದಿಯನ್ನೂ ಕಮಾನು ಕಂಬಗಳನ್ನೂ ಕೆಡವಿ ಬಿಡಿ. ಈ ಕ್ಷಣ. ಹಿಂದೂಸ್ಥಾನಕ್ಕೆ ನಾವು ಹೊರಟುದಕ್ಕೆ ಮುನ್ನ ಹೇಗಿದ್ದಿತೋ ಹಾಗೆಯೇ ಇರಬೇಕು ಈ ಸ್ಥಳ.

ಷೀರ್ ಮುಹಮ್ಮದ್

ಅಪ್ಪಣೆ, ಬಾದಶಹ ! ಸೈನಿಕರಿಗೆ ಆದೇಶ ನೀಡುತ್ತೇನೆ.

ತೈಮೂರ

(ಒಡೆದ ಗಂಟಲಲ್ಲಿ) ಇನ್ನೂ ಒಂದು ಅನುಜ್ಞೆಯಿದೆ, ಸೇನಾನಿಗಳೇ.

ಷೀರ್ ಮುಹಮ್ಮದ್

ಹೇಳೋಣಾಗಲಿ.

ತೈಮೂರ

ಸಮ್ರಾಜ್ಞಿಯನ್ನೂ ಆಕೆಯ ಪರಿಚಾರಿಕೆಯನ್ನೂ ಸೆರೆಯಲ್ಲಿಡಿರಿ ! (ಷೀರ್ ಮುಹಮ್ಮದ್ ಮೌನವಾಗಿರಲು ತುಸು ಧ್ವನಿ ಏರಿಸಿ) ಕೇಳಿಸಿತೆ ?

ಷೀರ್ ಮುಹಮುದ್

(ವಿಷಣ್ಣನಾಗಿ) ಹ್ಞು, ಜಹಾಪನ.

ತೈಮೂರ

ನಾವು ಅರಮನೆಗೆ ಹಿಂತಿರುಗುವುದಿಲ್ಲ. ಬಯಲುಗಾವಲಿನಲ್ಲಿ ಶಿಬಿರ ಏರ್ಪಡಿಸಿ !

ಷೀರ್ ಮುಹಮುದ್

ಹಾಗೆಯೇ ಮಾಡುತೇನೆ.

ತೈಮೂರ

(ಅತ್ತಿತ್ತ ನೋಡುತ್ತ) ಷಾ ರುಖ್ ! ಷಾ ರುಖ್ !

ಷೀರ್ ಮುಹಮುದ್

ಯುವರಾಜರನ್ನು ಕರೆಸಲೆ ?

ತೈಮೂರ

ಇನ್ನು ರಾಜಕುಮಾರ ಸದಾ ನಮ್ಮ ಬಳಿಯಲ್ಲೇ ಇರಬೇಕು, ಕರೆದು ತನ್ನಿ.

ಷೇರ್ ಮಹಮ್ಮದ್

ಅಪ್ಪಣೆ (ನೇಪಥ್ಯದತ್ತ ನೋಡುತ್ತ, ದುಗುಡ ಬೆರೆತ ಸ್ವರದಲ್ಲಿ ಆದೇಶಗಳನ್ನು ನೀಡುವನು) ಸೈನಿಕರೇ! ಮಂಗೋಲ ಯುವರಾಜರನ್ನು ಕರೆದು ತನ್ನಿ! ಈ ಪ್ರಾರ್ಥನಾ ಮಂದಿರವನ್ನೂ ಕಮಾನು ಕಂಬಗಳನ್ನೂ ಒಡೆದು, ಕೆಡವಿ. ಪುಡಿಗೂಡಿಸಿರಿ! ನೆಲಸಮ ಮಾಡಿರಿ!

ತೈಮೂರ

(ಕಿರಿಚಿಕೊಳ್ಳುತ್ತ) ಈಗ! ಈಗಲೇ!

(ತೈಮೂರ ಖಡ್ಗವನ್ನು ಝಳಪಿಸುತ್ತಿರುವಂತೆಯೇ ತೆರೆ.)

೨

ಬಾನುಲಿ ನಾಟಕ-ರೂಪಕ

○ ಸ್ವಾತಂತ್ರ್ಯ ಬರುವುದಕ್ಕೆ ಮುನ್ನವೇ ಭಾರತದಲ್ಲಿ ರೇಡಿಯೋ ವಿರಾಜಮಾನವಾಗಿತ್ತು. ಬಹಳ ಜನರನ್ನು ಏಕಕಾಲದಲ್ಲೇ ತಟ್ಟುವ, ಅವರನ್ನು ಮುಟ್ಟುವ ಪ್ರಬಲ ಮಾಧ್ಯಮ ಬಾನುಲಿ. ಆಳುತ್ತಿದ್ದ ಇಂಗ್ಲಿಷರ ಕೈಯಲ್ಲಿ ಅದು ಪರಿಣಾಮಕಾರಿಯಾದ ಅಸ್ತ್ರವಾಗಿತ್ತು (ಟಿ. ವಿ.—ದೂರದರ್ಶನ ಆಗ ಇರಲಿಲ್ಲ.)

ಸ್ವಾತಂತ್ರ್ಯ ಬಂದಮೇಲೆ ರೇಡಿಯೋ ಪ್ರಸಾರ ಹೊಸ ವ್ಯಕ್ತಿತ್ವವನ್ನು ಪಡೆಯಿತು. ವಾರ್ತೆ, ಭಾಷಣ, ವಿಚಾರವಿನಿಮಯಗಳ ಜತೆ ಸಾಹಿತ್ಯ ಸಂಗೀತಗಳೂ ಆಕಾಶವಾಣಿ ನಿಲಯಗಳಲ್ಲಿ ಮನೆ ಮಾಡಿದುವು.

ರಂಗಭೂಮಿಯ ಮೇಲೆ ಸಾಧ್ಯವಿರದಿದ್ದ ವೈಶಿಷ್ಟ್ಯ ಪ್ರಸಾರ ನಾಟಕದಲ್ಲಿ ಸುಲಭವಾಯಿತು. ದೇಶೀಯ ಭಾಷೆಗಳಲ್ಲಿ ಪಶ್ಚಿಮದ ಮುಂದುವರಿದ ಪ್ರಸಾರ ಮಾಧ್ಯಮನ್ನು ನಾಚಿಸುವಂಥ ಪ್ರಸಾರ ಕೃತಿಗಳು ರಚಿತವಾದುವು. ಕವಿತಾ ವಾಚನ, ಗಮಕ, ಗಾಯನಗಳೊಡನೆ ಭುಜ ಒರೆಸಿತು ಶಬ್ದ ಚಿತ್ರ (ನುಡಿಚಿತ್ರ ಅಥವಾ ರೂಪಕ). ಗದ್ಯದ ನಡುವೆ ಹಾಡಿನ ಪಲ್ಲವಿಯೇ? ಗೆಜ್ಜೆಯ ಸಪ್ಪಳವೆ? ಮಿತಿಯೇ ಇಲ್ಲದ ಸಾಧ್ಯತೆ!

ಬಾನುಲಿಗೋಸ್ಕರ ನಾನು ಬರೆಯತೊಡಗಿದ್ದು ೧೯೫೦ರ ವರ್ಷಗಳಲ್ಲಿ. ಹೆಚ್ಚಿನವು ಪ್ರಸಾರ ನಾಟಕಗಳು–ರೂಪಕಗಳು. ಅವುಗಳಲ್ಲಿ ದೃಷ್ಟಾಂತಕ್ಕೆಂದು ನಾಲ್ಕನ್ನು ಆರಿಸಿ ಇಲ್ಲಿ ಕೊಟ್ಟಿದ್ದೇನೆ. ಇಂಥವು ಇನ್ನೂ ಹಲವು 'ನಿರಂಜನ: ಮೂವತ್ತು ಸಂಪುಟಗಳಲ್ಲಿ' ಸರಣಿಯ ೨೦ನೆಯ ಸಂಪುಟದಲ್ಲಿವೆ.

ನದಿಯ ಮಕ್ಕಳು

['ನದಿಯ ಮಕ್ಕಳು' ಮುಖ್ಯತಃ ಕನ್ನಡ ಕಾವ್ಯಕೃತಿಗಳ ಆಧಾರದ ಮೇಲೆಯೇ ರಚಿತವಾದ ಕೃತಿ. ಬೆಂಗಳೂರು ಆಕಾಶವಾಣಿಯವರಿಂದ ಸಂಗೀತ ರೂಪಕವಾಗಿ ಇದು ಪ್ರಸಾರಗೊಂಡಿತು.

ನದಿಯ ಮಕ್ಕಳು ! ನಾವು
ನದಿಯ ಮಕ್ಕಳು ! ನಾವು ಇಳೆಯ ಒಕ್ಕಲು....
ಗಂಗೆ ಯಮುನೆ ಗೋಮತಿ, ತುಂಗೆ ಕೃಷ್ಣೆ ತಾಪತಿ
ನರ್ಮದಾ ಶರಾವತಿ, ಧರ್ಮದಾ ಸರಸ್ವತಿ
ನಮ್ಮ ನಾಡ ಹಾಲುದೊರೆ, ಹರಿಯುತಿಹುದು ಎಲ್ಲೆಡೆ !
ನದಿಯ ಮಕ್ಕಳು ! ನಾವು
ನದಿಯ ಮಕ್ಕಳು !....

[ಇರಾ]

ಇದು ನದಿಯ ಕಥೆ; ನದಿಯ ಮಕ್ಕಳ ಕಥೆ. ಎಲ್ಲಿಯೋ ಒಂದೆಡೆ ಚಿಮ್ಮಿ ಎಳೆತನದ ತುಂಟ ಆಟಗಳನ್ನಾಡುತ್ತ, ಬೆಟ್ಟದಿಂದ ಕೆಳಕ್ಕೆ ಧುಮುಕಿ, ಕಲ್ಲು ಬಂಡೆಗಳೊಡನೆ ಕಣ್ಣುಮುಚ್ಚಾಲೆಯಾಡಿ, ತಪ್ಪಲುಗಳಲ್ಲಿ ಹರಿದು, ಕಾಡುಮೇಡು ಗಳನ್ನು ದಾಟಿ, ಯೌವನ ಕಳೆದು ಬಯಲಿಗಿಳಿದು, ಮುಪ್ಪಿನ ಗಾಂಭೀರ್ಯದಿಂದ ಸಾಗರ ಸೇರುವ ನದಿ, ಹಾದಿಯುದ್ದಕ್ಕೂ ಬದುಕನ್ನು ಬಂಗಾರಗೊಳಿಸುವ ಮಹಾಶಕ್ತಿ. ಆ ನೀರಿನ ನೆರವಿನಿಂದ ನೆಲವನ್ನು ಹಸುರುಗೊಳಿಸುವ ಬೇಸಾಯಗಾರರಿಗೆ, ಕುಡಿಯಲೆಂದು ಆ ನೀರನ್ನೇ ಆಶ್ರಯಿಸುವ ಜನಸಮುದಾಯಕ್ಕೆ, ಸರಕುಗಳನ್ನು ಮೇಲಕ್ಕೂ ಕೆಳಕ್ಕೂ ಒಯ್ಯುವ ವ್ಯಾಪಾರಿಗಳಿಗೆ, ದೋಣಿ ದಾಟಿಸುವ ಅಂಬಿಗರಿಗೆ, ನದೀಪಾತ್ರದಲ್ಲಿ ಉಪ್ಪು ತಯಾರಿಸುವ ಆಗೇರರಿಗೆ, ಮೀನು ಹಿಡಿಯುವ ಮೊಗವೀರರಿಗೆ– ನದಿ ತಾಯಿಗೆ ಸಮಾನ. ಭಾವುಕರಿಗೆ, ರಸಿಕರಿಗೆ, ಕ್ರೀಡಾಪಟುಗಳಿಗೆ, ನದಿಯ ಸಾಮೀಪ್ಯ ಒಂದು ಸುಖಸಾಧನ.

ತನ್ನ ಶಕ್ತಿ ಸಾಮರ್ಥ್ಯವನ್ನೂ ಹಿರಿಮೆ ಹೆಗ್ಗಳಿಕೆಯನ್ನೂ ಚೆನ್ನಾಗಿ ಬಲ್ಲ ನದಿಯ ಈ ಹಾಡು ಕೇಳಿ :

ಹೆಳವ ಮಲೆಯ ಚಲನದಾಸೆ
ಮೂಗಿ ಬನದ ಗೀತದಾಸೆ
ಸೃಷ್ಟಿ ಹೊರೆಯ ಹೊತ್ತ ತಿರೆಯ
ನಗುವಿನಾಸೆ ನಾ

ಬಾಳ್ವಿಗೆಲ್ಲ ನಾನೆ ನಚ್ಚು
ಲೋಕಕೆಲ್ಲ ನಾನೆ ಮೆಚ್ಚು
ನಾನೆ ನಾನೆ ಮುಗಿಲ ಹುಚ್ಚು
ಹೊನಲ ರಾಣಿ ನಾ....

ಬೆಳ್ಳಿ ನೊರೆಯ ನಗೆ ನಗುತ್ತ
ತೆರೆಯ ನಿರಿಯ ಚಿಮುಕಿಸುತ್ತ
ಕಡಲ ವರಿಸೆ ತವಕಿಸುತ್ತ
ನಡೆವ ವಧುವೆ ನಾ

ದಡದ ಗಿಡಕೆ ಪುಷ್ಪ ಹಾಸ
ಸನಿಯದಿಳೆಗೆ ಸಸ್ಯ ಹಾಸ
ಹಾಸಪೂರ್ಣ ಹಾಸಕೀರ್ಣ—
ನೆನ್ನ ಜೀವನಾ

ಅಚರ ಜಗದ ಚಲನದಾಸೆ
ಮೂಕ ಜಗದ ಗೀತದಾಸೆ
ನಿಯತಿ ನಿಯಮ ನಿಯತ ಜಗದ
ನಗುವಿನಾಸೆ ನಾ

ವನವಿನೋದ ಮಲೆಯ ಮೋದ
ಕಡಲ ಕೂರ್ಮೆ ನಾಡ ನಲ್ಮೆ
ನಾನೆ ನಾನೆ ಮುಗಿಲ ಮೇಲ್ಮೆ
ಪೊನಲ ರಾಣಿ ನಾ.

[ಘ. ತಿ. ನ.]

ಮೆರೆಯುವ ರಾಣಿ ಎಂತೋ ಅಂತೆಯೇ ಹರಸುವ ತಾಯಿ ಕೂಡಾ. ಪರಮ ಪಾವನೆಯೆಂದು ಸೂಚಿಸಲ್ಪಡುವ ಗಂಗೆಯನ್ನು ಕುರಿತು ಕವಿ ಹೀಗೆ ಹಾಡಿದ್ದಾನೆ:

ಭರತಭೂಮಿಯಲೊಮ್ಮೆ ತುಂಬಿಕೊಂಡಿರುತಿದ್ದ ಚಿನ್ನ ಬಂಗಾರ ಹೊಗೆಯು
ನಿನ್ನ ಬೆಳವೊಲ ದಂಡೆಯಲ್ಲಿ ಕಳೆಗೊಂಡಿರುವ ಹಣ್ಣು ಸಗೆಮೊಗದ ಬಗೆಯು!
ತಾಯ ತೊಡೆಯಲ್ಲಾಡಿ ಬೆಳೆಯುದಿಹ ಕೂಸುಗಳು ಇಳೆಯೊಳೆಲ್ಲಾದರುಂಟೆ?
ನಮ್ಮ ಸ್ವಾರಾಜ್ಯ ಸಾಮ್ರಾಜ್ಯಗಳ ಕ್ರೀಡೆಯದು ಈ ನಿನ್ನ ದಂಡೆಗುಂಟೇ!
ಭೂಮಿತಾಯಿಯ ಕಾಟಕಾಗಿ ಇಳೆಗಿಳಿದಂಥ ಚಿತ್ರಾವ ತಾರ ಮಾಲೆ
ಸಮಯಕ್ಕೆ ಬಂದರೂ ಅವಸರದಿ ತೆರಳಿತ್ತು. ಜಗ ಮತ್ತೆ ಕಾಡು ಪಾಲೇ!
ನೆವಕೆ ಬಂದರು, ಈಗು ನಿಂತಿರುವೆ ನೀನು ನಿಜನಿತ್ಯ ಸಂಸಾರಪಾರ!
ಹತ್ತು ಅವತಾರಕ್ಕು ಹಿರಿದೆಂಬೆ ಹಡೆದವ್ವ ನಿನ್ನ ಗಂಗಾವತಾರ.
ಎಲ್ಲಿಹುದಯೋಧ್ಯೆ? ಎಲ್ಲಿಹುದು ದ್ವಾರಾವತಿಯು? ಎಲ್ಲಿ ಗೋಕುಲವದೀಗ?
ರಾಮಕೃಷ್ಣರ ಕೀರ್ತಿ ನಾಮಶೇಷವು ತಾನೆ, ಕಾಲವಶವೆಲ್ಲ ಬೇಗ?
ನೆಲಮುಗಿಲುಗಳು ಇರುವವರೆಗೆ ಗಂಗೆಯು ಉಂಟು, ಉಂಟವಳ
ಧವಲಮೂರ್ತಿ
ಶ್ರೀ ಭಗೀರಥ ಸಾರ್ವಭೌಮ ನಿನ್ನದು ಒಂದೆ ನಿಜವಾದ ಅಮರ ಕೀರ್ತಿ
[ಬೇಂದ್ರೆ]

ಸ್ವರ್ಗಕ್ಕೇರಲು ಗಂಗೋದಕ, ಹಾಗೆಯೇ ಭೂಮಿಯ ಮೇಲೆ ಸ್ವರ್ಗ ರಚಿಸುವುದಕ್ಕೂ ಬೇಕು ಅದೇ ಉದಕ. ಉತ್ತರ ಭಾರತದ ವಿಸ್ತಾರ ಭೂಮಿಯನ್ನೆ ಫಲವತ್ತಾಗಿ ಮಾಡಿರುವ ಪುಣ್ಯತೀರ್ಥ ಗಂಗಾನದಿ.

ಗಂಗೆಯ ಒಡಹುಟ್ಟಿದ ಯಮುನೆಯೇನು ಕಡಮೆಯೆ? ಭಾರತೀಯ ಸಾಹಿತ್ಯದ ಶ್ರೇಷ್ಠವಾದೊಂದು ಪ್ರೇಮಪ್ರಸಂಗಕ್ಕೆ ನೆಲೆಯಾದವಳು ಆಕೆ.

ಧೀರೆ ಸಮೀರೇ ಯಮುನಾ ತೀರೆ
ವಸತಿ ವನೇ ವನಮಾಲೀ........ [ಜಯದೇವ]

ಮಹಾ ಭಾರತದ ಅರ್ಜುನ, ಕೃಷ್ಣ ನೊಡಗೂಡಿ, ಜಲಕ್ರೀಡೆಗೆಂದು ಯಮುನಾ ತಟಕ್ಕೆ ಬಂದ ಸನ್ನಿವೇಶವನ್ನು ನಾಡೋಜನಾದ ಪಂಪ ಬಣ್ಣಿಸಿದ ಬಗೆ ಇಂತಿದೆ:

ಯಮುನಾ ನದೀ ತರಂಗಮ
ನಮುಂಕಿ ವನಲತೆಯ ಮನೆಗಳಂ ಸೋಂಕಿ ವನ-
ಭ್ರಮಣ ಪರಿಶ್ರಮಮಂ ಮು-
ನ್ನಮೆ ಕಳೆದುದು ಬಂದದೊಂದು ಮಂದಶ್ವಸನಂ
ತಡಿವಿಡಿದು, ಪೂತಲತೆಗಳನು
ಒಡನೊಡನೆ ಎಲರಲೆಯ ಬಿಡದೆ ಸುರಿವ ಅಲರ್ಗಳನು
ಅಂದು ಎಡೆಗುಡದೆ ನೂಂಕಿ ಮೆಲ್ಲನೆ
ತಡಿಯಂ ಸಾರ್ಚಿದಪುವಿದರ ಬಂಬಲ್ದೆರೆಗಳ್ [ಪಂಪ]

ದೇಶದ ದಕ್ಷಿಣದಲ್ಲೂ ಘಟ್ಟಗಳಲ್ಲಿ ಹುಟ್ಟಿ ಪೂರ್ವಕ್ಕೋ ಪಶ್ಚಿಮಕ್ಕೋ ಹರಿದು ಕಡಲು ಸೇರುವ ನದಿಗಳು ಹಲವಾರು.

ಕಾವೇರಿಯಿಂದಮಾ ಗೋದಾವರಿವರಮಿರ್ಪನಾಡದಾ

ಕನ್ನಡದೊಳ್ ಭಾವಿಸಿದ ಜನಪದಂ—ಎಂದು ನೃಪತುಂಗ ಕನ್ನಡ ದೇಶದ ವಿಸ್ತಾರವನ್ನು ಬಲು ಹಿಂದೆಯೇ ಸೂಚಿಸಿದ. ಆ ವಿಸ್ತಾರ ಎಷ್ಟೋ ಸಾರೆ ಕುಗ್ಗಿತು, ಹಿಗ್ಗಿತು. ನಾಡಿನ ಎಲ್ಲೆಗಳು ಬದಲಾದುವು. ಆದರೆ ಆ ನದಿಗಳು ಮಾತ್ರ ಇಂದಿಗೂ ಪ್ರವಹಿಸುತ್ತಲೇ ಇವೆ.

ಮುನ್ನೂರು ವರ್ಷಗಳಿಗೆ ಹಿಂದೆ ಶ್ರೀರಂಗಪಟ್ಟಣದ ನಿವಾಸಿ ಚಾರಣಕವಿ ಗೋವಿಂದ ವೈದ್ಯ ಕಾವೇರಿಯನ್ನು ಕುರಿತು ಹಾಡಿದ:

ಅಲಗ ಝಳಪಿಪಂತೆ ಸೂರ್ಯನ ಕಿರಣವು
ಸಲೆ ಕಿರುತೆರೆಯ ಮಧ್ಯದಲಿ
ಹೊಳೆದಾಡುತಿಹುದಾ ಕಾವೇರಿಯ ಬಲು
ಚೆಲುವನದೇನ ಬಣ್ಣಿಸುವೆ.

"ನದಿಯ ಉಭಯ ತಟಗಳೂ ಸ್ನಾನ, ಸಂಧ್ಯಾವಂದನೆ, ಜಪ, ತಪ ಇವುಗಳನ್ನೆಲ್ಲ ಮೌನದೆ ಮಾಡುವ ಜ್ಞಾನಾಧಿಕರಿಂದ ಪರಿಶೋಭಿಸುತ್ತಿದ್ದುವು. 'ಚಾರು ವಸನ ಪೊಂಬಟ್ಟೆ, ಬಿಳಿಯ ವಸ್ತ್ರ, ಸಾರಪೊಪ್ಪಳಿ ಮೊದಲಾದ ಸೀರೆ ಸಹಿತ' ಸ್ನಾನವನ್ನು ಮಾಡುವ ಬ್ರಾಹ್ಮಣ ಸ್ತ್ರೀಯರು ಇತ್ತಟಗಳಲ್ಲಿಯೂ ಕಾಣಿಸುತ್ತಿದ್ದರು.... ಅಲ್ಲಲ್ಲಿ ಅನೇಕ ಜನ ಐದೆಯರು, ಪೂಜಾದ್ರವ್ಯಗಳಿಂದ ಕಾವೇರಿಯನ್ನು ಪೂಜಿಸುತ್ತಿದ್ದರು. ಎಷ್ಟೋ ಕಡೆಗಳಲ್ಲಿ ಅಂಗನೆಯರು 'ಕಚಗಳ ಸಿಕ್ಕ ಬಿಡಿಸುತ ಎಣೆಗಂಟಿಕ್ಕಿ, ಕುಚಮಧ್ಯದಲ್ಲಿ ಹಾರವಿಡುತ, ವಿಚಲಿತ ನೇತ್ರಗಳಿಗೆ ಕಜ್ಜಲವನು ರಚಿಸುತ' ಒಪ್ಪುತಿದ್ದರು."

ಲಿಂಗಕ್ಕೆ ಮಜ್ಜನವೆರೆದು ವಿಭೂತಿಯ
ನಂಗಕ್ಕೆ ಲೇಪಿಸಿಕೊಂಬ
ಹಿಂಗದ ಶಿವಭಕ್ತರ ಮೇಳದಿಂ ನೆರೆ
ಕಂಗೊಳಿಪುದು ನದಿ ತಟವು

ಹರಭಕ್ತರಂತೆಯೇ ಹರಿಭಕ್ತರು ಕೂಡಾ,

ಹರಿದಾಸರುಗಳೈದಿ ಹರಿವ ಜಲದೊಳಾಗ
ಹರಿದು ಮಜ್ಜನವನು ಮಾಡಿ
ತಿರುನಾಮ ತಿರುಚೂರ್ಣಗಳ ಪಣೆಯೊಳಗಿಟ್ಟು
ತಿರಿಗಿ ಹರಿಯ ಧ್ಯಾನಿಪರು

ಕಾವೇರಿಯ ವಕ್ಷದ ಚಾರುಹಾರುವೆಂಬಂತೆ ಅನೇಕ ಪರಿ ಕಾಲುವೆಗಳು ಊರನ್ನು ಬಳಸಿಕೊಂಡು ಹರಿಯುತಿದ್ದುವು. ಹೊಳೆಯ ದಂಡೆಯ ಬತ್ತದ ಗದ್ದೆಗಳಲ್ಲಿ 'ಮುಗುಳುಹೊಡೆ, ಅರೆ ಹೊಡೆ, ಮೇಲಕ್ಕೆ ನಿಗುರುವ ಹೊಡೆ, ಪಸುರ್ಪೊಡೆ, ಹಾಲುದುಂಬುದೆನೆ' ಇವೆಲ್ಲಪ್ರಗಳಿಂದ ಕೂಡಿದ ಬತ್ತದ ಬೆಳೆಗಳಿದ್ದುವು. ಕಾವೇರಿಯ ನೀರುಂಡು ಆ ಮಣ್ಣಿನಲ್ಲಿ ಬೆಳೆದ ಬತ್ತಗಳ ವೈವಿಧ್ಯವಾದರೂ ಎಂತಹುದು! ಕಣಿವೆಯ ಸಣ್ಣ, ಸತ್ಯಾಗಾಲದ ಸಣ್ಣ, ಗೋವೆಯ ಸಣ್ಣ, ಪುಣಗು ವಾಸನೆಯಸಾಂತಿಹ ಸಣ್ಣ—ಪಿರಿಯ ರಾಜಾನ್ನ, ಜೀರಿಗೆ ರಾಜಾನ್ನ, ಸೊಗಸು ರಾಜಾನ್ನ, ಕಸ್ತೂರಿ ರಾಜಾನ್ನ, ಸೋಮಶಾಲಿ, ಬಿಳುಮಲ್ಲಿಗೆ, ಕೆಂಬೂತಿ, ಹೇಮವರ್ಣದ ಕೊನೆವಾಳೆ, ಪುಷ್ಪಮಂಜರಿ, ಕೊಡಗು, ಮಳಲಕಂತೆ, ಹರಹಿನ, ಡುಣ್ಣಗ, ಬೈರಾವಳಿ, ಚಂದ್ರೋದಯ, ಕೆಂದಳಗ, ಕಸ್ತೂರಿವರ್ಣ—ಇವೇ ಮೊದಲಾದ ಬತ್ತದ ಸಸಿಗಳು ಆಗ ಅಲ್ಲಿದ್ದುವು.

ಪುರಲಕ್ಷ್ಮಿಯ ಮೊಗದಾವರೆಯನು ನೆರೆ
ಪರಿವೇಷ್ಟಿಸಿಕೊಂಡಿರ್ಪ
ಪಿರಿದು ಪಚ್ಚೆಯ ಪತ್ರವೆನಲು ನಂದನವನ
ಮೆರೆದುವು ನಾಲ್ದೆಸೆಗಳಲಿ [ಗೋ. ವೈದ್ಯ.]

ಅದೇ ಕಾವೇರಿಯ ಉಗಮದ ಬೀಡಿಗೆ ಈಗಿನ ಕವಿ ಸಾಗಿದಾಗ ಗೀತ ಹೀಗೆ ರೂಪುಗೊಂಡಿತು.

ವಿಶ್ವಶಿಲ್ಪಿಯ ಚಿತ್ರಚಾತುರಿಯ ಬಗೆಗೊಳಿಪ
ವಿವಿಧ ವರ್ಣಾಕಾರ ಪಟಲದಿಂದಂ
ಸ್ವಾತಂತ್ರ್ಯ ಸಾಮ್ರಾಜ್ಯ ಗರ್ವಚೇಷ್ಟಿತಮೆನಿಪ
ಶಾಖೋಪಶಾಖಾ ಪ್ರತಾನದಿಂದಂ

ಮಂದ ಪರಿಮಳಿತ ಶೀತಲ ವಾತ ಸಂಚಲಿತ
ಕುಸುಮ ಕಿಸಲಯ ಫಲಪ್ರಕರದಿಂದಂ
ಶಬ್ದ ಸರ್ವಸ್ವಾವತಾರಮೆಂದೆನಿಪ ಮೃಗ
ವಿಹಗಕೀಟಕ ಕೋಟಿನಾದದಿಂದಂ.

ಸೊಗಯಿಪಾ ತರುಗುಲ್ಮಲತೆಗಳಿಂ ನಿಬಿಡಮಾಗಿ
ರವಿಯನವಗಡಿಸಿ ಯೋಜನ ಶತವನಿಂಬುಗೊಳಿಸಿ
ಸೃಷ್ಟಿಮಹಾತ್ಮ್ಯಶ್ರೀ ಸಂಸ್ಫೂರ್ತಿ ಪ್ರಕೀರ್ತಿಯೆನಿಸಿ
ಮಾತ ಮೂದಲಿಸುತಿಹುದೀ ಮಹಾರಣ್ಯಸರಣಿ. [ಡಿ.ವಿ.ಜಿ.

ಒಂದೂರಲ್ಲಿ ಹುಟ್ಟಿ, ಇನ್ನೊಂದೂರಲ್ಲಿ ಬೆಳೆದು, ಮತ್ತೊಂದೂರಿಗೆ ಸಾಗುವ ಕಾವೇರಿ, ಲಕ್ಷಾಂತರ ಜನರ ಪಾಲಿಗೆ ಪುಣ್ಯ ನದಿಯೂ ಹೌದು ; ಹಾದಿಯುದ್ದಕ್ಕೂ ನೆಲಕ್ಕೆ ಮೊಲೆಹಾಲೂಡುತ್ತಿರುವ ತಾಯಿಯೂ ಹೌದು. ಕನ್ನಂಬಾಡಿಯಲ್ಲಂತು ಆಧುನಿಕ ಮಾನವ, ತಾಯಿಯ ಕೈಗಳನ್ನು ಕಟ್ಟಿ ನಿಲ್ಲಿಸಿ ಚಿನ್ನಾಟವಾಡಿದ ಮನುಷ್ಯಕೃತ ಕಾಲುವೆಗಳು ದೂರದೂರಕ್ಕೆ ನೀರನ್ನೊಯ್ದುವು. ಪರಿಣಾಮ-ಬರಿದು ಬೋಳಾಗಿದ್ದ ನೆಲದಲ್ಲಿ ಚಿಗುರಿದ ಹಸುರು. ಬಣ್ಣದ ಕಾರಂಜಿಗಳ ಬೃಂದಾವನದಲ್ಲಿ ನಾವು ಕಾಣುವುದಂತೂ ಕೈಕುಸುರಿನ ಕಲಾಕೌಶಲ.

ಕಾವೇರಿಯಂಥವಳೆ ತುಂಗೆ. ಇದೋ ಇಲ್ಲದೆ, ಆಕೆಯನ್ನು ಕುರಿತು ಕವಿಯ ಹೃದಯವೀಣೆ ಮಿಡಿದ ವೈಖರಿ :

ಓ ನನ್ನ ತುಂಗೆ,
ಸಹ್ಯಪರ್ವತ ತೀರ್ಥಪೋಷಿತ ತರಂಗೆ,
ನಿಬಿಡ ವನಮಾಲಿನಿಯೆ, ಪುಣ್ಯಶಾಲಿನಿಯೆ,
ನೋಡಿದನಿತುಂ ನಿನ್ನ ನೋಡಿ ನಾತಣಿಯೆ.
ನಿನ್ನ ಜನಶೂನ್ಯ ಸೈಕತರಂಗದಲಿ ಅಂದು
ಗೋಧೂಳಿ ಸಮಯದಲಿ, ಸಂಜೆಗೆಂಪೊಳುಮಿಂದು
ರವಹೀನವಾಗಿರಲು ಶ್ಯಾಮಲ ಸುಷುಪ್ತಿಯಲಿ;

ದಡದ ಬನಗಳ ಮಾಲೆ; ನಿಬಿಡ ಕಿಸಲಯ ಶಾಲೆ
ನಗುತಲಿರೆ ಸಂಧ್ಯೆಯಾ ಸ್ವರ್ಣ ಪ್ರದೀಪ್ತಿಯಲಿ;
ಜಲಶರೀರದಿನರ್ತಿಸೆ ತರಂಗಮಯ ಲೀಲೆ,
ನಿನ್ನ ಮಂಜುಲವಾಣಿಗೆನ್ನ ಕೊರಲನು ಕೂಡಿ
ಮೈಮರೆತೆ ಮಳಲಾಟ ನೀರಾಟಗಳನಾಡಿ-
ಅಂತು ಆ ಬಾಲ್ಯದಲಿ, ಓ ನನ್ನ ತುಂಗೆ,
ಸಹ್ಯ ಪರ್ವತತೀರ್ಥ ಪೋಷಿತ ತರಂಗೆ !

[ಕುವೆಂಪು]

ಮುಂದೆ ಭದ್ರೆಯೂ ಸೇರಿ ರೂಪಿತವಾಗುವಾಕೆ ತುಂಗಭದ್ರಾ. ಅಕ್ಕತಂಗಿಯ ರೊಂದುಗೂಡಿ ರೂಪುಗೊಂಡ ನದಿ ಹರಿಯುತ್ತದೆ, ಮಂದಗಾಮಿನಿಯಾಗಿ. ಶತಮಾನಗಳಿಂದ, ಹಾಳುಹಂಪೆಯ ಕಲ್ಲಿನ ಕಾವ್ಯಗಳಿಗೆ ಕಿಲಕಿಲ ಹಿಮ್ಮೇಳ ಒದಗಿಸುತ್ತ ಬಂದಿರುವ ತುಂಗಭದ್ರಾ, ಈಗ ಹಿರಿದಾದ ಅಣೆಕಟ್ಟಿನ ನೆರವಿನಿಂದ ಪೈರುಪಚ್ಚೆಗೆ ಆಸರೆ.

ಶರಾವತಿ, ದುಗುಡದಿಂದ ಧುಮುಕುತ್ತಾಳೆ ಎತ್ತರದಿಂದ ಕೆಳಕ್ಕೆ :

ಕ್ಷೀರಾಸೇಚನ ಧಾರೆಯಂತೆ ಸುರಿವಾನೀರ ಪ್ರವಾಹಂಗಳುಂ
ಸ್ಫಾರಸ್ಮಾಕ್ತಿಕ ವೃಷ್ಟಿಯಂತೆ ಪೊಳೆವಾ ಬಿಂದುಪ್ರವರ್ಷಂಗಳುಂ
ಧಾರಾಭೃನ್ನಿಕರಂಬೊಲಾಡಿ ಸುಳಿವಾಫೇನಪ್ರಕಾಸಂಗಳುಂ
ತೋರುತ್ತಿರ್ಪುವದೊಂದು ಚಿತ್ರವಜಸಕ್ಕಾಚೆಲ್ವನಾರ್ ಬಣ್ಣಿಪರ್
ಅತಿಗಾಂಭೀರ್ಯದಿ ಸಾರ್ವುದೇಂ ಮಗುಳೆನೀನೌದ್ಧತ್ಯದಿಂ ಪಾರ್ವುದೇಂ
ಲತೆಯಂತಾಡಿ ವಿಲಾಸದಿಂ ಸರಿವುದೇಂ ಶೈಲಾಗ್ರದಿಂ ಬೀಳ್ವುದೇಂ
ಕ್ಷಿತಿಯಿಂದೇಳುತೆ ನಾಟ್ಯದಿಂಸಲಿವುದೇಂ ಪಾತಾಳಮಂಸೇರ್ವವೋಲ್
ಖತಿಗೊಂಡೋಡುವುದೇಂ ಶರಾವತಿಯಿದೇಂ ನಿನ್ನಾಯಮಂ ಬಲ್ಲರಾರ್.

[ಡಿ. ವಿ. ಜಿ.]

ಅಥವಾ ಲಾವಣಿಕಾರ ಹಾಡಿದಂತೆ :

ಮಾನವನಾಗಿ ಹುಟ್ಟಿದ್ಮೇಲೆ ಏನೇನ್ಕಂಡೆ ?...............
...........ಜೋಗದ್ಗುಂಡಿ !

[ಮಲ್ಲೇಶಪ್ಪ]

ಕಣ್ಣು ಮನಸ್ಸುಗಳಿಗೆ ಉಣಿಸನ್ನೂ ತಣಿಪನ್ನೂ ನೀಡುವ ಜಲಪಾತವೇ ವಿದ್ಯುಚ್ಛಕ್ತಿಯ ಉತ್ಪಾದನಕ್ಕೂ ಮೂಲ. ಕನ್ನಡ ದೇಶದ ಕೈಗಾರಿಕೋದ್ಯಮಗಳಿಗೆ ಚಾಲನಶಕ್ತಿ ದೊರೆಯುತ್ತಿರುವುದು ಅಲ್ಲಿಂದಲೇ.

ಕೆಲವೆಡೆ ಊರಿಂದೂರಿಗೆ ಸರಕು ಸಾಗಿಸುವ ಹೆದ್ದಾರಿಗಳಾಗಿವೆ ನದಿ-ಕಾಲುವೆಗಳು. ಕಡಲ ತಡಿಯಿಂದ ಗಾಳಿ ಬೀಸಿದಾಗ ಪ್ರವಾಹಕ್ಕೆದಿರಾಗಿ ದೋಣಿಯ ಪ್ರಯಾಣ. ಉಬ್ಬರ ಮುಗಿದು ಇಳಿತ ಬಂದಾಗ ದಂಡೆಯಲ್ಲಿ ತಂಗುವ ಏರ್ಪಾಟು. ಅದೊಂದು ರೀತಿಯ ನೀರಮೇಲಿನ ಬದುಕು. ನಿರಲ್ಲೇ ನಿಂತ ನಾವೆಯಿಂದ ಅಡುಗೆಯ ಹೊಗೆ ಹೊರಟು ಸುರುಳಿ ಸುರುಳಿಯಾಗಿ ಆಕಾಶಕ್ಕೇರುವ ದೃಶ್ಯ ನೋಡಿ ಆನಂದಿಸಬೇಕಾದ್ದು.

ಬಲವಾದ ಬಾಹುಗಳ ಕಟ್ಟಾಳುಗಳೆ ಅಂಬಿಗರು. ದುಡಿಮೆಯ ಜತೆಯಲ್ಲೆ ಸೃಷ್ಟಿಯಾಗುವ ಅವರ ಗಾನದಲ್ಲಿ ತುಂಬಿರುತ್ತದೆ, ತಲೆತಲಾಂತರಗಳಿಂದ ಹಾದು ಬಂದಿರುವ ಮಾಧುರ್ಯ.

ಓ ಬೇಲಿಲೇಸೋ | ಓ ಬೇಲಿಲೇಸೋ !
ಓ ಮಾಲಿಲೇಸೋ | ಗಂಗಾಮಾಯಿಲೇಸೋ !

[ಎಕ್ಕುಂಡಿ]

ನದೀಮುಖದಲ್ಲಂತೂ ನೀರ ಮೇಲಿನ ದೋಣಿಗಳಾಟ ಬಹುಮುಖವಾದದ್ದು. ಒಂದೆಡೆ ಭೋರ್ಗರೆಯುವ ಕಡಲು, ಇನ್ನೊಂದೆಡೆ ತುಂಬುಜೀವನದ ಪ್ರತೀಕವಾದ ನದಿ. ಉಗಿ ಹಡಗುಗಳು ಒಳಬಂದರೂ ಬಂದುವೇ. ಸಣ್ಣಪುಟ್ಟ ಹಾಯಿಯ ಹರಿಗೋಲುಗಳಿಗಂತೂ ಲೆಕ್ಕವಿಲ್ಲ. ಮೀನು ಹಿಡಿಯಲು ದೂರ ಕಡಲ ಕಡೆಗೆ ಸಾಗುವ ಬೆಸ್ತರ ಸಂಖ್ಯೆಯೋ—ಸಹಸ್ರ ಸಹಸ್ರ.

ಏ! ಲೇಲಾಲಿ ಲೇಸೋ! ಲೇಲಾಲಿಲೋ
ಕಡಲೀನ ನಡಿಗೆಗೆ ಹಾಡುವೆನೋ
ತೆರೆಗಳ ಲೀಲೆಯ ನೋಡುವೆನೋ
ಗಾಳೀಯ ಛಂದಕೆ ತೂಗುವೆನೋ
ಮುಂದಕೆ ಮುಂದಕೆ ನೂಗುವೆನೋ
ಏ! ಲೇಲಾಲಿ............ [ಬೇಂದ್ರೆ]

ತೆರೆಯಪ್ಪಳಿಸಿಯೇ ದೋಣಿಗಳನ್ನು ಮಗುಚುವ ದುರ್ಭರ ಸನ್ನಿವೇಶಗಳೂ ಒದಗುವುದುಂಟು ಒಮ್ಮೊಮ್ಮೆ. ಪ್ರವಹಿಸುವ ದಿಕ್ಕನ್ನೇ ಬದಲಾಯಿಸಿ ಊರೂರುಗಳನ್ನೇ ಕೊಚ್ಚಿ ಕೊಂಡೊಯ್ಯುವ ಬ್ರಹ್ಮಪುತ್ರಾ ನದಿ ಒಂದು ತೆರನಾದದ್ದು. ಮಳೆಗಾಲದಲ್ಲಿ ಆಗಾಗ್ಗೆ ಎಷ್ಟೋ ನಡುಕ ಹುಟ್ಟಿಸುವಷ್ಟರಮಟ್ಟಿಗೆ ಮಾತ್ರ ಬರುವ ಮಹಾಪೂರ ಇನ್ನೊಂದು ತೆರನಾದದ್ದು. ಅಂತಹ 'ನೀರನೆರೆ'ಯೆಲ್ಲ, ಬೇಸಗೆಯಲ್ಲಿ ನೀರು ಬತ್ತಿದುದಕ್ಕೆ ಬದಲಾಗಿ ತೆರುವ ಭೂರಿಕಾಣಿಕೆ. ಆಗ ಮರಗಳು ತೇಲಿ ಬರುತ್ತವೆ, ತೆಂಗಿನಕಾಯಿಗಳು, ಸಣ್ಣ ದೊಡ್ಡ ಸಾಮಗ್ರಿಗಳು. ಅವುಗಳೆಲ್ಲಾ ನೀರಿಗೆ ಧುಮುಕಿ ಹಿಡಿದುಕೊಳ್ಳುವವರ ಸ್ವತ್ತು. ಆದರೆ, ನಿತ್ಯದ ಈಸಾಟದಂತಲ್ಲ ಆ ಧುಮುಕಾಟ. ಅದು ಸಾವಿನೊಡನೆ ಸರಸ. ಹಿಡಿಯ ಬಯಸಿದ ವಸ್ತುವಿನೊಡನೆ ಹಿಡಿಯಲು ಹೋದ ಜೀವ ತೇಲಿದರೂ ತೇಲಿತೇ. ಅಂತಹ ಮಹಾಪೂರವೆಲ್ಲ ತನ್ನ ಮಕ್ಕಳ ಮೇಲೆ ನದಿ ಮುನಿದುಕೊಳ್ಳುವ ರೀತಿ.

ಸಣ್ಣಪುಟ್ಟ ಸೇತುವೆಗಳ ಕಿರುಕುಳವನ್ನೇನೋ ನದಿ ಸಹಿಸಿದ್ದುಂಟು ಹಿಂದೆ. ಆದರೆ ಹೆಚ್ಚಾಗಿ, ಕಾಲದ ಕಟ್ಟುಪಾಡುಗಳನ್ನೆಲ್ಲಾ ಲೆಕ್ಕಿಸದೆಯೆ ಸಾಗಿದ ಇತಿಹಾಸ ಅದರದು.

ಆದರೆ ಈಗ, ಸ್ವತಂತ್ರ ಭಾರತದ ಪ್ರಜೆ, 'ನನ್ನ ಯೋಜನೆಗಳಿಗೆ ನೀನೂ ಒಳಗು' ಎಂದು ನದಿಗೆ ಹೇಳುತ್ತಿದ್ದಾನೆ. ಭಕ್ರಾನಂಗಲ್, ನಾಗಾರ್ಜುನ ಕೊಂಡ, ಒಂದಾದ ಮೇಲೊಂದು.... "ಹಿಂದೆ ಪುಣ್ಯಕ್ಷೇತ್ರಗಳಿಗೆ ಜನರು ಪ್ರವಾಸ ಹೋಗುತ್ತಿದ್ದರು. ಈಗ ಇಂತಹ ಹಿರಿಯ ಅಣೆಕಟ್ಟುಗಳೂ ಪವಿತ್ರ ಯಾತ್ರಾಸ್ಥಳಗಳಾಗಬೇಕು," ಎಂದು ರಾಷ್ಟ್ರಪ್ರಧಾನಿ ಜವಾಹರರು ಆಡಿರುವ ನುಡಿ ಅರ್ಥಪೂರ್ಣವಾದದ್ದು.

ನಿಸರ್ಗದ ಮೇಲೆ ಮಾನವ ಪ್ರಭುತ್ವ ಸ್ಥಾಪಿಸಬಯಸುವ ಕಾಲಾವಧಿ ಇಂಥದೆಂಬುದು ನಿಜ. ಎಂದ ಮಾತ್ರಕ್ಕೆ ನದಿಯ ತಾಯ್ತನಕ್ಕೆ ಚ್ಯುತಿ ಬಂತೆಂದು ಅರ್ಥವಲ್ಲ. ತಾಯಿ, ತಾನು ಪೋಷಿಸಿದ ಮಕ್ಕಳ ಮಾತಿಗೆ ಕಿವಿಗೊಡುವುದು ಎಂದೂ ತಪ್ಪಲ್ಲ. ಮಕ್ಕಳ ಸಾಧನೆಯಿಂದ ತಾಯ್ತನದ ಹಿರಿಮೆ ಹೆಚ್ಚೇ ಆಗುವುದು. ಬಂಜರು ಭೂಮಿಯಲ್ಲೂ ನೆಲ ನೆನೆಯುವುದು. ಮಕ್ಕಳು ಬಿತ್ತಿದ ಬೀಜ ಮೊಳಕೆ ಯೊಡೆದು ಗಿಡವಾಗುವುದು. ಹಸುರು ಹೆಚ್ಚಿ ಕಣ್ಣಿಗೆ ಹಬ್ಬವಾಗುವುದು. ಅನ್ನ ದೇವರಿಗೆ ದೀಪಾರಾಧನೆಯಾಗುವುದು, ಜನ ಸುಖಿಗಳಾಗುವರು.

ನದಿಯ ಮಕ್ಕಳು ! ನಾವು
ನದಿಯ ಮಕ್ಕಳು ! ನಾವು ಇಳೆಯ ಒಕ್ಕಲು....
ಗಂಗೆ ಯಮುನೆ ಗೋಮತಿ, ತುಂಗೆ ಕೃಷ್ಣೆ ತಾಪತಿ
ನರ್ಮದಾ ಶರಾವತಿ, ಧರ್ಮದಾ ಸರಸ್ವತಿ
ನಮ್ಮ ನಾಡ ಹಾಲುದೊರೆ, ಹರಿಯುತಿಹುದು ಎಲ್ಲೆಡೆ
ನದಿಯ ಮಕ್ಕಳು ! ನಾವು
ನದಿಯ ಮಕ್ಕಳು....

ಕಣ್ಣಿದ್ದವರಿಗೂ ನೀನೆ ಶಿವಾ!

ಕುರುಡ : (ಹತ್ತಿರ ಬರುತ್ತಿರುವ ಧ್ವನಿ)

ಕಣ್ಣಿಲ್ಲದವರಿಗೆ ನೀನೆ ಸಿವಾ
ಕುಂಟ ಕುಡ್ಡರಿಗೆ ನೀನೆ ಸಿವಾ....
ಯಪ್ಪಾ, ಕುಡ್ಡ....ಬಿಕ್ಸಾ ನೀಡ್ರಿಯಪ್ಪಾ....

ಕುರುಡನ ಮಗಳು : (ಕೀರಲು ಕಂಠದಲ್ಲಿ)

ಕಣ್ಣಿಲ್ಲದವರಿಗೆ ನೀನೆ ಸಿವಾ
ಕುಂಟಕುಡ್ಡರಿಗೆ ನೀನೆ ಸಿವಾ
ಯಪ್ಪಾ, ಕುಡ್ಡಗೆ ಬಿಕ್ಸಾ ನೀಡ್ರಿಯಪ್ಪಾ

ಕುರುಡ : (ಹತ್ತಿರದಿಂದ)

ಕಣ್ಣಿಲ್ಲದವರಿಗೆ ನೀನೆ ಸಿವಾ....

ಸ್ತ್ರೀ ಕಂಠ (ನರ್ಸ್) : ಮುಂದಕ್ಕೋಗಪ್ಪಾ. ಇದು ಮನಿ ಅಲ್ಲsss

ಕುರುಡ : ಯವ್ವಾ, ಹೊಟ್ಟಿಗಿಲ್ದೆ ಮೂರು ದಿನಾತು....ಒಂದೀಟು ರೊಟ್ಟಿ ನೀಡ್ರಿ ಯವ್ವಾ....

ಸ್ತ್ರೀ ಕಂಠ (ನರ್ಸ್) : ಕಾಣ್ಸುದಿಲ್ಲೇನು ? ಇದು ದವಾಖಾನೆ—ಕಣ್ಣಿನ ದವಾಖಾನೆ.

ಕುರುಡನ ಮಗಳು : (ಅಂಗಲಾಚುತ್ತ) ಒಂದು ಯಾಡು ಬಿಲ್ಲಿ ಕೊಡ್ರೆವ್ವಾ ನಮ್ಮಪ್ಪಗ—ಕುಡ್ಡss....

ಸ್ತ್ರೀ ಕಂಠ (ನರ್ಸ್) : (ಸೇವಕನನ್ನು ಉದ್ದೇಶಿಸಿ) ಏ ಸಿಪಾಯಿ ! ಚುಟ್ಟಾ ಸೇದ್ಕೊಂಡು ನೋಡ್ತಾ ನಿಂತೀಯಲ್ಲೋ ಓಡಿಸು ಅವರನ್ನ.

ಸಿಪಾಯಿ : (ಕೆಮ್ಮಿ, ಗಂಟಲು ಸರಿಪಡಿಸಿ) ಓಗ್ರಪ್ಪಾ....

ನರ್ಸ್ : (ಬೇಡುವವರತ್ತ ಹೊರಳಿ) ಹೋಗ್ರಿ, ಹೋಗ್ರಿ....

(ಕಾರು ಬಂದ ಸದ್ದು. ನರ್ಸ್, ಅವಸರದ ಧ್ವನಿಯಲ್ಲಿ) ಅಕಾ; ಡಾಕ್ಟರು ಬಂದ್ರು!
(ಕಾರು ನಿಂತು ಒಳಗಿನವರಿಳಿದು ಕದ ಹಾಕಿದ ಸಪ್ಪಳ)
(ಬೂಟುಗಾಲುಗಳು ಹತ್ತಿರ ಬರುತ್ತವೆ)

ನರ್ಸ್ : ಗುಡ್‌ಮಾರ್ನಿಂಗ್ ಡಾಕ್ಟರ್.

ಸಿಪಾಯಿ : ಸಲಾಂ ಸಾಬ್ !

ಕುರುಡ : (ಯಾಚಿಸುತ್ತ) ಸಾಹೇಬರ—ಸಾಹೇಬರ....ನಾನು ಕುಡ್ಡ....

ಡಾಕ್ಟರ್ : (ನಡೆಯುತ್ತಿದ್ದವರು, ನಿಂತು) ಎರಡೂ ಕಣ್ಣು....

(ಕುರುಡನ ಬಳಿ ಸಾರಿ, ಕಣ್ಣುಗಳನ್ನು ಪರೀಕ್ಷಿಸುತ್ತ, ಅರ್ಧ ಸ್ವಗತ) Perforating wound of the lens capsule....opaque and swollen lens.... Blow on the cornea....ಆ! Concussion cataract. ಸಂದೇಹವೇ ಇಲ್ಲ. Typical, typical ! (ಧ್ವನಿ ಬದಲಿಸಿ) ಹೊಡೆತ ಬಿತ್ತೇನಪ್ಪ ?

ಕುರುಡ : (ತುಸು ಕಂಪಿಸುವ ಕಂಠ) ಹೂನ್ರಿ ಡಾಕ್ಟರ್ ಸಾಹೇಬರ....

ಡಾಕ್ಟರ್ : ಹ್ಯಾಂಗಾತು ? ಎಷ್ಟು ವರ್ಷಾತು ?

ಕುರುಡ : ಐದು ವರ್ಸಾತ್ರಿ ಡಾಕ್ಟರ್ ಸಾಹೇಬರ....ರೈಲ್ವೇಸನ್‌ದಾಗ ಹಮಾಲಿ ಮಾಡ್ತಿದ್ದಿನ್ರಿ....ಗುಡಸ್‌ನಾಗ ತಂತಿ ಕಂಬ-ಕಂಬಿಲ್ರಿ ?—ಅವು ಬಂದಿತ್ತ.... ಇಲೆಟ್ರಿ ಕಂಪ್ನಿ ಟರಕ್ನಾಗ ಹೇರಿದ್ವಿ. ಹೊರಡೂ ಮುಂದ ಡಾಯ್ವರ ಟರಕ್ ಹಿಂತಕೊಡ್ನಿರಿ........ನಾನು ಅಲ್ಲೆ ನಿಂತಿದ್ನಿ, ಗ್ಯಾಡಿಗೆ ಬೆನ್ಹಾಕಿ. ಕುಂತು ತಪ್ಸಾಕನ್ವಾಡಿದ್ನಿ. ಆದರೂ ನನ್ನ ಖೊಟ್ಟಿ ನಸೀಬ—ಯಾಡು ಕಂಬ ಮಾರಿಗೇ ಬಡೀತ್ರಿ. ಯಾಡೂ ಕಣ್ಣೂ ಅವತ್ನಿಂದೇ ಹ್ವಾಗೇಬಿಟ್ವು ಸಾಹೇಬರ....

ಡಾಕ್ಟರ್ : ಎಷ್ಟು ವಯಸ್ಸು ನಿನಗ ?

ಕುರುಡ : ವಯಸ್ಸ? ಎಷ್ಟಿದ್ದೀತ್ರಿ? ಯಾಡಿಪ್ಪತ್ತು ಆಗಿ ನಾಲ್ಕಾರು ವರ್ಸ ಆಗಿರಬೇಕ್ರಿ ಸಾಹೇಬರ.

ಡಾಕ್ಟರ್ : (ಅರ್ಧ ಸ್ವಗತ) ಆಕ್ಸಿಡೆಂಟಾದಾಗಲೇ ಸ್ವಲ್ಪ ಚಿಕಿತ್ಸೆ ಮಾಡಿದ್ದರ ಇಷ್ಟರೊಳಗೆ ದೃಷ್ಟಿ ತಾನೇ ಬರ್ತಿತ್ತು....neglected case....(ಧ್ವನಿ ಬದಲಿಸಿ) ನಿರಾಶೆಗೇನೂ ಕಾರಣೆಲ್ಲ....ನಿನಗ ದೃಷ್ಟಿ ಮತ್ತ ಬರ್ತಾವ.

ಕುರುಡ : (ಉದ್ವೇಗದಿಂದ) ಬರ್ತಾವಂದಿರ ಸಾಹೇಬರ........? ಬರ್ತಾವ ? ನಾನು ಮತ್ತ ನೋಡೂ ಹಂಗಾಗ್ತದೇನ್ರಿ ಸಾಹೇಬರ? ಖರೇವೇನ್ರಿ ಡಾಕ್ಟರ್ ಸಾಹೇಬರ ? ನಾನು—ಕುಡ್ಡ—

ಡಾಕ್ಟರ್ : (ಕುರುಡನ ಮಾತು ಕೇಳಿಸದವರಂತೆ ನಿರ್ವಿಕಾರ ಧ್ವನಿಯಲ್ಲಿ) ಅಡ್ಮಿಟ್ ಮಾಡ್ಕೊಳ್ಳಿ, ಸಿಸ್ಟರ್.

ನರ್ಸ್ : ಯೆಸ್ಸರ್.

(ಮೆಟ್ಟಲುಗಳನ್ನೇರಿ ಡಾಕ್ಟರು ಒಳಹೋಗುವರು. ದೂರದಿಂದ 'ನಮಸ್ಕಾರ ಡಾಕ್ಟರೆ' 'Good morning ಡಾಕ್ಟರ್ ಸಾಬ್' ಮತ್ತು ಪ್ರತಿವಂದನೆಯಾಗಿ ಡಾಕ್ಟರರ 'ಹಲೋ' 'ಹಲೋ' ಅಸ್ಪಷ್ಟವಾಗಿ ಕೇಳಿಬರುವುವು.)

ನರ್ಸ್ : (ನಿಟ್ಟುಸಿರು ಬಿಟ್ಟು) ಹೂಂ, ಬಾರಪ್ಪ....ಹತ್ತಿ ಬಾ.... ಸಿಪಾಯಿ, ಸ್ವಲ್ಪ ಕೈಹಿಡಿ.

ಸಿಪಾಯಿ : ಬಾ ಅಜ್ಜ.

ಕುರುಡ : (ಅನುಮಾನಿಸುತ್ತ) ಬರಬೇಕ್ರಿ? ಒಳಗ್ಬರಬೇಕ್ರಿ? ಕರಕೊಂಡ್ಬಾ ಅಂದರೇನ್ರಿ ಡಾಕ್ಟರ್ ಸಾಹೇಬರು ?

ನರ್ಸ್ : ಹೂಂ....ಡಾಕ್ಟರು ನಿನಗೆ ಆಪರೇಷನ್ ಮಾಡ್ತಾರಂತ

ಕುರುಡ : (ಗಾಬರಿಗೊಂಡು) ಆಪರೇಷಣ್ರಿ? ಆಪ್ರೇಷಣಾ ? (ಮಗಳನ್ನು ಉದ್ದೇಶಿಸಿ ಗಡಿಬಿಡಿಯಿಂದ) ನಡಿಯವ್ವಾ ತೆಂಗಿ, ನಡಿ ಮಗಳ....

ನರ್ಸ್ : ಏ! ಕಣ್ಣು ಕಾಣಿಸ್ವಲ್ದು ಅಂದರ ಕಿವೀನೂ ಹೋಗ್ಯಾವೇನು? ಆಪರೇಷನಂತ ಯಾರಂದ್ರೆಪಾ? ಅವುಸದಿ ಕೊಡ್ತಾರ ಅಂದೆ.

ಕುರುಡ : ಹಂಗಾ? ಅವುಸದಿ ಕೊಡ್ತಾರಾ?....ಬಾಳ ತಡ ಆಗ್ತದೇನ್ರಿ ಡಾಕ್ಟರ್ ಬಾಯರ ?

ನರ್ಸ್ : ನಾನು ಡಾಕ್ಟರ್ ಬಾಯಿ, ಅಲ್ಲ; ನರ್ಸ್.

ಕುರುಡ : ಹೂನ್ರಿ, ನರಸ್ ಬಾಯರ....ಬೇಡಾಕ ಇನ್ನೂ ಒಂದ್ನಾಕು ರಸ್ತೆ ಉಳದಾವು....ಅದಕ್ಕ ಅಂದ್ನಿ....

ನರ್ಸ್ : (ನಕ್ಕು) ಬಾ, ನೀಯೇನೂ ಕಾಳಜಿ ಮಾಡಬ್ಯಾಡ.

ಕುರುಡ : ಇನ್ನೂ (ಅನುಮಾನಿಸುತ್ತ) ಬರಬೇಕೇನ್ರಿ ಹಂಗಾರ? (ಮಗಳೊಡನೆ) ಒಳಗ ಹೋಗೂಣೇನವ್ವ ತೆಂಗಿ ?

ಮಗಳು : ನಡಿಯಪ್ಪ. ಡಾಕ್ಟರ್ ಸಾಹೇಬರು ನಿನ್ನ ಯಾಡೂ ಕಣ್ಣು ಬರೋಬರ್ ಮಾಡ್ತಾರಂತ....

ಕುರುಡ : ನನಗ ಅಂಜಿಕಿ ಆಗ್ತದ.

ನರ್ಸ್ : ಕುರುಡಗೆ ಯಾತರದೋ ಅಂಜಿಕೆ? ಬಾ ಒಳಗ....

ಸಿಪಾಯಿ : ನಡಿ, ಅಜ್ಜ. ನಿನ್ನ ಬಡಿಗಿ ಇಕಡೆ ತಾ.

ಕುರುಡ : ಬಡಿಗಿ! ಬ್ಯಾಡ್ರಿ ನಮ್ಮಪ್ಪ. ಅದಿಲ್ದೆ ನಾನು ಕುಡ್ಡ ಏನ್ಮಾಡೋ ಹಂಗೈತಿ? ಅದನ್ನ ಕಸಕೋ ಬ್ಯಾಡ್ರಿಯಪ್ಪ.

ಸಿಪಾಯಿ : ಹೊಳ್ಳಿ ಹೋಗೂ ಮುಂದ ನಿನಗ ಬಡಿಗಿ ಬೇಕಾಗೂದುಲ್ಲ, ಅದಕ್ಕಂದ್ನಿ. ಇಟಕೋ. ನಿನ್ನ ಆಸ್ತಿ ನಾಯಾಕ ಕಸಕೊಳ್ಳಿ? ನ್ಯಾಕ್ನಡಿ, ಪಾವಟಗೆ ಅದಾವು.

ಕುರುಡ : ನಡೀರಿ....ಬಾ, ಮಗಳ....ಅವುಸದಿ ಕೊಡತಾರಂತ. ನನ್ನ ಕೈ ಹಿಡಕ.

[ಟಕಟಕ ಸದ್ದಿನೊಡನೆ ಪ್ರಯಾಸದ ಆರೋಹಣ]

ನರ್ಸ್ : (ಕುರ್ಚಿ ಎಳೆದು) ಕುರ್ಚಿ ಮ್ಯಾಗ್ಕೂಡು.

ಕುರುಡ : ನಾ ನಿಂತೇ ಇರ್ತೀನ್ರಿ, ನರಸ್‌ಬಾಯರ.

ಸಿಪಾಯಿ : ಏ, ಅಜ್ಜ ! ಇಲ್ಲಿ ಹೇಳ್ದಂಗ ಮಾಡ್ಬೇಕಾಗ್ತೇತಿ. ತಿಳೀತಿಲ್ಲೊ ಕೂಡು.

[ಕುರುಡ ಕುಳಿತುಕೊಳ್ಳುವನು, ಗೋಡೆಗೊರಗಿಸಿದ ಊರುಗೋಲು ನೆಲಕ್ಕೆ ಬೀಳುವುದು.]

ಕುರುಡ : ಹಾಂ! ನನ್ನ ಬಡಿಗಿ !

ಮಗಳು : ಇರಲೇಳು ನಾ ಹಿಡ್ಕೊಂತೀನಿ.

ನರ್ಸ್ : ನಿನ್ನ ಹೆಸರೇನಪಾ ?

ಕುರುಡ : ಗದಿಗೆಪ್ಪರಿ.

ನರ್ಸ್ : ಅಡ್ಡ ಹೆಸರು ?

ಕುರುಡ : ಬರ್ಕೊಳ್ಳಾಕ್ಹತ್ತೀರೇನ್ರಿ ? ಮಲ್ಲಾಪುರ್–ರಿ....

ನರ್ಸ್ : ವಯಸ್ಸು ?

ಕುರುಡ : ಡಾಕ್ಟರ್ ಸಾಹೇಬರು ಆಗಳೇ—....

ನರ್ಸ್ : ನಾಲ್ವತ್ತೈದೂಂತ ಬರೀಲ್ಯಾ ?

ಕುರುಡ : ಹೂನ್ರಿ.

ನರ್ಸ್ : ನಿನ್ನ ಹತ್ತಕಡೆಯವರು ಯಾರದಾರು ?

ಕುರಡ : ಹತ್ತ ಕಡೆಯವರ್‍ರಿ ?

ನರ್ಸ್ : ಕಳ್ಳು–ಕಕ್ಕುಲಾತಿ....

ಕುರುಡ : ನನಗ—

ನರ್ಸ್ : ಹೆಣ್ತಿ ಅದಾಳು ?

ಕುರುಡ : ಆಕೀದು ತಗೊಂಡೇನ್ಮಾಡ್ತೀರಿ ಬಿಡ್ರಿ.

ನರ್ಸ್ : ಹಂಗಲ್ಲಪ್ಪ. ನಿನ್ನ ಹತ್ತಿರದ ಮಂದಿ ಯಾರ್ಯಾರದಾರು ಬರ್ಕೊಬೇಕಾಗ್ತೇತಿ.

ಕುರುಡ : ಆಕಿ ಅವಳವ್ವನ ಮನಿಗ್ಹೋಗ್ಯಾಳ.

ನರ್ಸ್ : ಹೊಟ್ಟ್ಯಾಗದಾಳೇನು ?

ಕುರುಡ : ಗೊತ್ತಿಲ್ರಿ. ಕಣ್ಣು ಹ್ವಾದ್ಮ್ಯಾಗ ಆಕಿ ನನ್ನ ಬಿಟ್ಟಾಳ್ರಿ.

ನರ್ಸ್ : [ನಗೆ ಹತ್ತಿಕ್ಕಿ] ಹುಡುಗರು ?

ಕುರುಡ : ಗಂಡುಮಗ ಒಬ್ಬ. ಈಕಿಗಿಂತ ಎರಡು ವರ್ಸ ದೊಡ್ಡವ. ಓಡ್ಹೋಗ್ಯಾನ. ಆತು–ಇವರೇ ಇಬ್ಬರು.

ನರ್ಸ್ : ವಿಳಾಸ ?

ಕುರುಡ : ವಿಳಾಸರಿ ?

ನರ್ಸ್ : ಪತ್ತಾ—ಈಗನೀ ಎಲ್ಲಿರ್ತಿದೀ ?

ಕುರುಡ : ಪತ್ತಾನ ?....ಮಗಳ, ನಾವೀಗ ಎಲ್ಲಿರ್ತಿದೀವಿ ?

ಮಗಳು : ಕಣ್ಣಿನ ದವಾಖಾನೆಯಾಗ

ನರ್ಸ್ [ನಕ್ಕು, ಸಿಟ್ಟುಗೊಂಡು] ನಿಮ್ಮಲಿ! ಎಂಥಾವು ಗಂಟು ಬಿದ್ದುವಪ್ಪಾ. ನಿಮ್ಮ ಮನಿ ಎಲ್ಲದ ಅಂದೆ.

ಕುರುಡ : ತಪ್ಪಾತ್ರಿ ನರಸ್‌ಬಾಯರ. ಮಳ್ಳ ಹುಡುಗಿ. ಅದಕ್ಕೇನ ತಿಳೀಬೇಕರಿ.... [ಮಗಳೊಡನೆ] ತಂಗಿ, ನಮ್ಮ ಜೋಪಡಿ—ಅದೇ, ಮನಿ—ಎಲ್ಲೈತಿ ?

ಮಗಳು : ಹಾಳುಭಾಂವಿ ಓಣಿಯಾಗ, ಅಲ್ಲೇನಪ್ಪ ?

ಕುರುಡ : ಹ್ಞಾ—ಹೌದು. ಬರಕೋರಿ ನರಸ್‌ಬಾಯರ.

ನರ್ಸ್ : ಹೂಂ....ನಿನ್ನ ಉತ್ಪನ್ನ ?

ಕುರುಡ : ಪನ್ನಾ—ರೀ ?

ನರ್ಸ್ : ತಿಂಗಳ ನೀ ಎಷ್ಟ್ ಕಮಾಯಿಸ್ತಿ ?

ಕುರುಡ : ಜ್ಯಾಷ್ಟಿ ಮಾಡ್ತೀರೆನ್ರಿ ಬಾಯರ....ಹಹ್ಹ....

ನರ್ಸ್ : [ತಾನು ಕೇಳಿದ ಪ್ರಶ್ನೆ ಅನಗತ್ಯವಾಗಿತ್ತೆಂಬುದನ್ನು ಮನಗಂಡು] ನೀ ಭಿಕ್ಷಾಧೀಶ, ಅಲ್ಲೇನೆಪ್ಪಾ ?

ಕುರುಡ : ಹ ಹ್ಹ....ಬೇಕಾದ್ದು ಅನವಲ್ರಿಯಾಕ....

ನರ್ಸ್ : ದವಾಖಾನೀದು ಖರ್ಚು ವಗೈರೆ ಕೊಡಬೇಕಾಗ್ತೇತಿ....ಎಷ್ಟದಾವು ನಿನ್ನಕಡಿ ?

ಕುರುಡ : ರೊಕ್ಕರಿ? ರೊಕ್ಕರಿ? ನಾ ಬಡವ....ಬೇಡಿ ಬದುಕೂ ಮನಿಸ್ಯಾ—

ನರ್ಸ್ : [ಬೇಸರಗೊಂಡು] ನಿನ್ನಂಥ ಪೇಶಂಟ ವಾರಕ್ಕೊಬ್ಬ ಬಂದರ ಸಾಕು—ನಮ್ಮ ಡಾಕ್ಟರ ಸಾಹೇಬರು ಲಗೂ ದಿವಾಳಿ ತೆಗೀತಾರ....

ಕುರುಡ : ಯಂಥ ಮಾತು ಹೇಳ್ತೀರಿ ನರಸ್‌ಬಾಯರ....ಡಾಕ್ಟರು ಪುಣ್ಯಾತ್ಮರು....

ನರ್ಸ್ : ನಿನ್ನ ದೃಷ್ಟಿ ಚಲೋ ಆಗಿ ನೀ ನೌಕರಿ ಹಿಡಿದ್ಮ್ಯಾಲೆ ದವಾಖಾನೆ ಬಿಲ್ಲು-ರೊಕ್ಕ-ಮುಟ್ಟಸ್ತಿ ಅನ್ನು.

ಕುರುಡ : ನೌಕರೀರಿ ? ನೌಕರೀರಿ? ಹಂಗಂದ್ರಿ? ಆಗವಲ್ದ್ಯಾಕ-ಆಗವಲ್ದ್ಯಾಕ?

ನರ್ಸ್ : ಸಹಿ ಹಾಕಾಕ ಬರ್ತದೇನು ?

ಕುರುಡ : ಇಲ್ರಿ, ಅಂಥ ಕೆಲ್ಸ ನಾ ಎಂದೂ ಮಾಡಿದಾಂವ ಅಲ್ಲ.

ನರ್ಸ್ : [ಬೇಸತ್ತು] ಉಶ್!....ಒಳ್ಳೇದು. ಇನ್ನು ವಾರ್ಡಿಗೆ ನಡಿ. ನಿನ್ನ ಶರೀರ ಪರೀಕ್ಷೆ ಮಾಡೂದದ. ಬೇರೆ ಬ್ಯಾನೆ ಏನಾದರೂ ಅದಾವೇನೊ ನೋಡಾಕ ಬೇಕು.

ಕುರುಡ : ಅವುಸದಿರಿ ?

ನರ್ಸ್ : ಕೊಡ್ತೀವು. ನೀ ಇಲ್ಲೇ ಇರಬೇಕಾಗ್ತದ, ಸ್ವಲ್ಪ ದಿವಸ.

ಕುರುಡ : ಬ್ಯಾಡ್ರಿ ನರಸ್‌ಬಾಯರ. ನಿಮ್ಮ ಪಾದಕ್ಕೆ ಬೀಳ್ತೇನ್ರಿ. ಅವುಸದಿ ಕೊಟ್ಟು ಕಳಿಸಿ ಬಿಡ್ರಿ.

ನರ್ಸ್ : ನಿನಗ ಗುಣ ಆಗೂ ಮಟ ಕಳಿಸಂಗಿಲ್ಲ. ಏಳು.

ಕುರುಡ : ಇದೇನಾತು ಶಿವನೆ!....ಬಾಯರ, ನರಸ್‌ಬಾಯರ, ಊಟ್ರ? ಊಟ?

ನರ್ಸ್ : ಎಲ್ಲಾ ಕೊಡತೀವು. ಏಳೀಳು.

ಕುರುಡ : [ತಡವರಿಸಿ ಏಳುತ್ತ] ಈ ಹುಡುಗೀನ ಬಿಟ್ಟು ನಾ ಇರಂಗಿಲ್ರಿ ನರಸ್ ಬಾಯರ....ಈಕೀನೂ ಇಲ್ಲೇ ಇರಾಕ ಪರವಾನಿಗಿ ಕೊಡ್ರಿ. ಕೈಮುಗಿತೇನ್ರಿ....

ನರ್ಸ್ : [ಅಸಹನೆಯಿಂದ] ಹೂಂ, ಹೂಂ. ಇರ್ರಿ, ಇಬ್ರೂ ಇರ್ರಿ....[ಸ್ವರ ತಗ್ಗಿಸಿ] ಮುಸಾಫಿರ್‌ಖಾನೇನೇ ಆತು ಈ ದವಾಖಾನೆ. ಯಾರು ಹೇಳಬೇಕು ಡಾಕ್ಟರ್ ಸಾಹೇಬರಿಗೆ? ಉಶ್!....

o o o o o

ಕುರುಡ : [ವಾರ್ಡಿನ ಹಾಸಿಗೆಯ ಮೇಲಿಂದ] ಮಗಳ, ಏನ್ಮಾಡಾಕ್ಹತ್ತಿದೀ?

ಮಗಳು : ಇಲ್ಲೇ ನಿಂತೀನಿ.

ಕುರುಡ : ಡಾಕ್ಟರ್ ಸಾಹೇಬರು ಇನ್ನೂ ಬಂದಂಗಿಲ್ಲ—ಅಲ್ಲ?

ಮಗಳು : ಆಗಳೇ ಮೋಟಾರು ಬಂತು. ಖೋಲಿಗೆ ಹೋಗ್ಯಾರಂತ ಕಾಣಸ್ತೇತಿ.

ಕುರುಡ : ಅವುಸದೀನೂ ಇಸ ಇರ್ಲಿಲ್ಲ.

ಮಗಳು : [ತವಕಗೊಂಡು] ಅಕಾ, ಡಾಕ್ಟರ್ ಸಾಹೇಬರು ಬರಾಕ್ಹತ್ಯಾರ. ನರಸ್‌ಬಾಯಿನೂ ಅದಾರು.

ಕುರುಡ : ಕೈಹಿಡಿ ಮಗಳ—ಎದ್ದು ಕೂಡತೀನಿ.

ಮಗಳು : ಬ್ಯಾಡಪ್ಪ. ನರಸ್‌ಬಾಯರು ಹೇಳಿಲ್ಲ? ಮಕ್ಕೊಂಡಿರು.

[ಕ್ಷಣದ ಮೌನ. ದೂರದಲ್ಲಿ ಬೇರೆ ರೋಗಿಗಳೊಡನೆ ಡಾಕ್ಟರು ಮಾತನಾಡುತ್ತಿದ್ದಾರೆ.]

೧ನೇ ರೋಗಿ : "ನಮಸ್ಕಾರ ಡಾಕ್ಟರೇ"

ಡಾ : "ನಮಸ್ಕಾರ. ರಾತ್ರಿ ನಿದ್ರಿ ಹತ್ತಿತಿಲ್ಲೊ?"

೧ನೇ ರೋಗಿ : "ಹೂಂ ಡಾಕ್ಟರೆ. ಇನ್ನು ಎಷ್ಟು ದಿವಸ...."

ಡಾ : "ನಾಲ್ಕು ದಿವಸ. ಬಲಗಣ್ಣಿನ ಬ್ಯಾಂಡೇಜು ಇವತ್ತು ತೆಗೀರಿ, ಸಿಸ್ಟರ್. "Give him goggles."

ನರ್ಸ್ : "Yes, Sir." [ಹತ್ತಿರ ಬರುವ ಧ್ವನಿಗಳು]

ಡಾ : "Good morning. Had your breakfast, Madam?"

೨ನೇ ರೋಗಿ : "Good morning Doctor. Yes, thank you."

ಡಾಕ್ಟರ್ : "How do you feel now?"

೨ನೇ ರೋಗಿ : "Much better. Thank you Doctor. [ಮತ್ತಷ್ಟು ಹತ್ತಿರದಲ್ಲಿ]

ಡಾಕ್ಟರ್ : ನಮ್ಮ ಜನರಲ್ ವಾರ್ಡ್! ಹಂ....ಯಾರು ಈ ಪೇಶಂಟ್?

ನರ್ಸ್ : ಗದಿಗೆಪ್ಪ

ಡಾಕ್ಟರ್ : ಗದಿಗೆಪ್ಪ?
ನರ್ಸ್ : ನಿನ್ನೆ ಅಡ್ಮಿಟ್ ಮಾಡ್ಕೊ ಅಂದಿರಿ, ಸರ್.
ಡಾಕ್ಟರ್ : ಆಹ್ಹಾ—concussion cataract !
ಕುರುಡ : (ಏಳಲೆತ್ನಿಸುತ್ತ) ನಮಸ್ಕಾರ್ರಿ ಡಾಕ್ಟರ್ ಸಾಹೇಬರ.
ಡಾಕ್ಟರ್ : ಮಲಕೋ-ಏಳಬ್ಯಾಡ....ಹಂ....How is he?
ನರ್ಸ್ : Urine clear—ಸಾಮಾನ್ಯ ಪ್ರಕೃತಿ ನೆಟ್ಟಗದ. ಆದರೆ ಬಹಳ fussy....scared of the knife.
ಡಾಕ್ಟರ್ : I see....ಜನರಲ್ ಅನಿಸ್ತೀಸಿಯಾನೇ ಇರಲಿ. ಡಾಕ್ಟರ್ ಗುಂಡಿಗಿ ಅವರಿಗೆ ಫೋನ್ ಮಾಡ್ರಿ.
ನರ್ಸ್ : Yes, Sir.
ಕುರುಡ : ಡಾಕ್ಟರ್ ಸಾಹೇಬರss....ನನಗ....
ಡಾಕ್ಟರ್ : (ದೂರ ಸರಿಯುತ್ತ) ಇವತ್ತೇ ಮಾಡೂಣಂತ. ಮಲಕೋ. ಎಲ್ಲಾ ಚಲೋ ಆಗ್ತದ.
(ಮತ್ತಿಷ್ಟು ದೂರದಿಂದ ಡಾಕ್ಟರರ ಧ್ವನಿ 'ಹ್ಯಾಂಗದೀರಪ್ಪss')

o o o o o

[ನಾಲ್ಕು ಗಾಲಿಗಳ ಮಂಚ ಉರುಳುತ್ತಿರುವ ಕಿರ್‌ಕಿರ್‌ಕಿರ್ರ್ ಸದ್ದು. ಅದರ ಹಿನ್ನೆಲೆಯಲ್ಲಿ....]
ಕುರುಡ : ಯಪ್ಪಾ, ಇದೇನ್ಮಾಡಾಕ್ಹತ್ತೀರಿ? ಎಲ್ಲಿಗೆ ಒಯ್ತೀರಿ ನನ್ನ ಯಪ್ಪಾ....
ಸಿಪಾಯಿ : ಒದರಬ್ಯಾಡ !
ಮಗಳು : ಡಾಕ್ಟರ ಖೋಲಿಗೆ ಒಯ್ಯಾಕ್ಹತ್ತಾರು ಅಪ್ಪ.
ಸಿಪಾಯಿ : ಏ ತಂಗಿ! ನೀ ಇಲ್ಲೇ ನಿಂದ್ರು. ಒಳಗ ಬರಬ್ಯಾಡ.
ಕುರುಡ : ಮಳ್ಳಹುಡಿಗಿ....ಆಕಿಗೇನೂ ತಿಳಿವಲ್ದು....ಸಿಟ್ಟುಮಾಡಿಕೋಬ್ಯಾಡ್ರಪ್ಪಾ ....ಬಾರವ್ವ ಮಗಳ....
ಸಿಪಾಯಿ : ಏಯ್ ! ನಿಂದ್ರು ಅಲ್ಲೇ !
ಮಗಳು : ನಾ ಇಲ್ಲೇ ಇರ್ತೀನಿ ಅಪ್ಪ....
[ಕಿರ್‌ಕಿರ್ ಸದ್ದು ನಿಲ್ಲುವುದು. ಉರುಳು ಮಂಚದಿಂದೆತ್ತಿ ಶಸ್ತ್ರ ಕ್ರಿಯೆಯ ಮೇಜಿನ ಮೇಲೆ ಮಲಗಿಸುತ್ತಿದ್ದಂತೆ ಕುರುಡ ಒದರಾಡುವನು.]
ಕುರುಡ : ಯಪ್ಪಾ, ನನ್ನ ಏನ್ಮಾಡಾಕ್ಹತ್ತೀರಿ? ಯಪ್ಪಾ.
ನರ್ಸ್ : ಶ್ ! ಸುಮ್ಮಿರು !
ಕುರುಡ : ನರಸ್‌ಬಾಯಿ, ಡಾಕ್ಟರ್ ಸಾಹೇಬರss
ಡಾಕ್ಟರ್ : ಡಾಕ್ಟರ್ ಗುಂಡಿಗಿ—
ಡಾ|| ಗುಂಡಿಗಿ : Yes Sir
ಡಾಕ್ಟರ್ : Let's begin

೧೭

ನರ್ಸ್ : ಸಿಪಾಯಿ, ಕೈ ಹಿಡ್ಕೊ.

ಕುರುಡ : ಅಯ್ಯಯ್ಯಪ್ಪೋ ನಾ ಏನೂ ಮಾಡಲ್ರೀ........ಉಸಿರು ಉಸಿರು ! ವಾಸ್ನಿರಪ್ಪೋ ತೆಗೀರಪ್ಪೋ....ಯಪ್ಪಾ—ಯಪ್ಪಾ ಸತ್ತೋ ಸತ್ತೆ....

ಡಾ|| ಗುಂಡಿಗಿ : ನಿಂಗೇನೂ ಮಾಡೂದಿಲ್ಲ....ಒಂದು, ಎರಡು, ಮೂರು ಎಣಿಸು.

ಕುರುಡ : ಕೊಲ್ತಾರಪ್ಪೋ—ಏ ಶಿವನಾ....

ಡಾ|| ಗುಂಡಿಗಿ : (ಗದರಿಸುತ್ತ) ಎಣಿಸೋ. ಒಂದು–ಎರಡು–ಮೂರು....

ಕುರುಡ : ಎಣಿಸ್ತೀನ್ರಪಾ, ಎಣಿಸ್ತೀನಿ....ನೀವಂದದ್ದು ಮಾಡ್ತೀನಿ....ಶಿವನೇ....

ಡಾ|| ಗುಂಡಿಗಿ : ಹುಂ—!

ಕುರುಡ : ವಂದು, ಯಾ–ಡು, (ನಿಧಾನವಾಗಿ) ಮೂ–ರು—(ತಗ್ಗಿ, ಇಂಗಿ ಹೋಗುವ ಸ್ವರದಲ್ಲಿ) ನಾ–ಲಕ್....

ಡಾ|| ಗುಂಡಿಗಿ : He is under.

(ಮೌನ. ಇಲ್ಲಿಂದ ಈ ದೃಶ್ಯದ ಕೊನೆಯವರೆಗೂ ಮೇಲ್ಗಡೆಯ Fanನ ಗರ್‌ಗರ್ ಸಪ್ಪಳದ ಹಿಮ್ಮೇಳ)

ಡಾಕ್ಟರ್ : ಸಿಸ್ಟರ್, ಸ್ಪೆಕ್ಯುಲಮ್ (ತಡೆದು ಉಪಕರಣ ಕೆಳಗಿಡುವ ಟಕ್ ಸಪ್ಪಳ) ಗ್ರಾಯಾಫಾ ನೈಫ್ (ತಡೆದು. ಟಕ್‌ಸಪ್ಪಳ), ಕ್ಯಾಟರಾಕ್ಟ್ ನೈಫ್ (ತಡೆದು, ಟಕ್ ಸಪ್ಪಳ),ಫಾರ್‌ಸೆಪ್ಸ್ (ತಡೆದು ಟಕ್ ಸಪ್ಪಳ), ಲೆನ್ಸ್ ಸ್ಪೂನ್ (ತಡೆದು ಟಕ್ ಸಪ್ಪಳ), Yes. ಅಟ್ರೋಪಿನ್, ಸಿಸ್ಟರ್. ಲಿನನ್ (ತಡೆದು) ಪ್ಯಾಡ್ (ತಡೆದು) ಬ್ಯಾಂಡೇಜ್ ; ಕಮಾನ್, ಇನ್ನು ಎಡಗಣ್ಣು....ಸ್ಪೆಕ್ಯುಲಮ್....

[ಎಡಗಣ್ಣಿನ ಶಸ್ತ್ರಕ್ರಿಯೆ ನಡೆಯುತ್ತದೆ. ಎರಡು ಕ್ಷಣ ಫ್ಯಾನ್‌ನ ಗರ್‌ಗರ್ ಸಪ್ಪಳ ಮಾತ್ರ.]

ಡಾಕ್ಟರ್ : ಮುಗೀತು ಡಾ|| ಗುಂಡಿಗಿ. It is a good job done.

ಕುರುಡ : (ಪ್ರಜ್ಞೆ ಮರಳಿದಂತೆ, ನರಳುತ್ತ) ಆ–ಅಕಾ....ಊಟ....ಆ—ಆ....

ಡಾ|| ಗುಂಡಿಗಿ : He is coming back.

o o o o o

ಕುರುಡ : (ಮಾರ್ದವಗೊಂಡ ಧ್ವನಿಯಲ್ಲಿ) ಮಗಳ........ಕಣ್ಣಿನ ಪಟ್ಟಿ ಇವತ್ತ ಅಲ್ಲ ಬಿಚ್ಚೂದು ?

ಮಗಳು : ಎಷ್ಟ ಸರೆ ಅದನ್ನs ಕೇಳ್ತಿ ಅಪ್ಪ ? ಇವತ್ತ ಬಿಚ್ತಾರ........ನಾ ಲೆಕ್ಕ ಮಾಡೇನಿ. ಪತ್ತು ಮತ್ತು ಯಾಡು ದಿವಸ ಆತು ಇವತ್ತಿಗ....

ಕುರುಡ : ಅದಕ್ಕ ಅಂದ್ನಿ....ಇ ಕಡೆ ಯಾರೂ—

ಮಗಳು : (ತಂದೆಯ ಮಾತನ್ನು ತಡೆದು) ಅಕಾ ಸರಸ್‌ಬಾಯಿ ಬರಾಕ್ಹತ್ಯಾರ........ ಸಿಪಾಯಿನೂ ಅದಾನ....

ಕುರುಡ : ಪಟ್ಟಿ ಬಿಚ್ಚತಾರಂತಾತು. ಮಗಳ, ಯಾಕೋ ಅಂಜಿಕಿ ಆಗಾಕ್ಹತ್ತೇತಿ.

ಮಗಳು : ನೀ ಬಿಡ !

ಕುರುಡ : ಮತ್ತ ಉಸಿರು ಕಟ್ಟಿಸ್ತಾರೋ ಯಾನೋ....ಆ ಘಾಟ—

ನರ್ಸ್ : (ಹತ್ತಿರ ಬರುತ್ತ) ಘಾಟೂ ಇಲ್ಲ ಪಾಟೂ ಇಲ್ಲ. ಎಲ್ಲಿ—ಇಕಡೆ ಕೂಡು ಹಂ—ಹಂಗ....ಇದ್ಯಾಕ ಹಿಂಗ ನಡಗ್ತೀ ?....

ಕುರುಡ : ಯಾಕೂ ಇಲ್ಲರಿ ನರಸ್‌ಬಾಯರ.

ನರ್ಸ್ : ಈಗ ಬಿಚ್ತೇನಿ ನೋಡು........ಹಂಗೇ ಕೂಡ್ರು....ಹಂ—ಹಂಗ....ಉ.... ಹ್ಣಾ—....ತೆಗೆದೆ....ಕಣ್ಣು ಬಿಡು.

ಮಗಳು : (ಆತುರದಿಂದ) ಕಾಣಾಕ್ಹತ್ತೇತೇನಪ್ಪ ?

ಕುರುಡ : (ಕಂಪಿಸುವ ಸ್ವರದಲ್ಲಿ) ಇ—ಲ್ಲ— ಇಲ್ಲ....ಏನೂ ಕಾಣಿಸವಲ್ದು........ (ಅಳತೊಡಗುತ್ತ) ನಾನು ಕುಡ್ಡ—ಕುಡ್ಡ....

ನರ್ಸ್ : (ನಿರ್ವಿಕಾರ ಧ್ವನಿಯಲ್ಲಿ) ಸಾವಕಾಶ ನೋಡು....ನೆಟ್ಟಗೆ....ಹಂಗೇ........ ಏನಾದರೂ ಕಾಣಸ್ತದೇನು ?

ಮಗಳು : (ಉದ್ವಿಗ್ನಗೊಳ್ಳುತ್ತ) ಕಾಣಸ್ತದೇನಪ್ಪ ?

ಕುರುಡ : ಊ....ಆ....ಅಕಾ....ಬೆಳ್ಳಗೆ....(ಗಾಬರಿಯಿಂದ) ಬೆಳ್ಳಗೆ ! ಇದೇನ ?.... ಬಿಳೇ ಕಾಲು ಕರೇ ಕೈ....ಮಾರಿ....ಅಯ್ಯೋ ! ಇದು ಯಾರ ?

ನರ್ಸ್ : ಸಾಕು ಬಿಡು ! ಅದು ನಾನು. ಕಾಣ್ಸುದುಲ್ಲ ?

ಕುರುಡ : (ಆನಂದೋದ್ವೇಗದಿಂದ) ಕಾಣಸ್ತೇತಿ ! ಕಾಣಸ್ತೇತಿ !........ನೀವಾ ! ನೀವಾ ನರಸ್‌ಬಾಯರ ! ಸರಣ್ರಿ....ನನ್ನ ಹಡೆದವ್ವ ! ನನ್ನ ಹಡೆದವ್ವ !

ಮಗಳು : (ನೊಂದು) ಅಪ್ಪ ನಾ ಕಾಣ್ಸುದುಲ್ಲ ?

ಕುರುಡ : (ಅತ್ತ ತಿರುಗಿ) ಆ—ಆ....ನೀ ನನ್ನ ಮಗಳ ಅಲ್ಲ....? (ಗದ್ಗದಿತನಾಗಿ) ಬಾರವ್ವಾ....ಎಷ್ಟು ದೊಡ್ಡೋಳಾಗಿ ತಂಗಿ........(ಆನಂದಾಶ್ರು ಸುರಿಸುತ್ತ) ನನ್ನ ಮಗಳ....ನೀಯಾಕ ಅಳಾಕ್ಹತ್ತೀ ? ನೀಯಾಕ ಅಳಾಕ್ಹತ್ತೀ ?....

ಮಗಳು : (ಒಡೆದ ಗಂಟಲಲ್ಲಿ) ಇಲ್ಲಪ್ಪ....ಅಳೂದುಲ್ಲ....

ಸಿಪಾಯಿ : (ಪರಿಹಾಸ್ಯ ಧ್ವನಿಯಲ್ಲಿ) ನಸ್ನೂ ಇಷ್ಟು ನೋಡೋ ಗದಿಗೆಪ್ಪ....

ಕುರುಡ : ನೀವೂ ಕಾಣಾಕ್ಹತ್ತೀರಿ ಸಿಪಾಯಿ ಸಾಹೇಬರ....ಅಹ್ಹಾ....ಈ ಮಂಚ —ಕುರ್ಚಿ—ಗ್ವಾಡಿ—ಲಾಯಿಟ....ನೀವು—ನೀವು—ನರಸ್‌ಬಾಯರ—

ನರ್ಸ್ : ಕೈಬಿಡು. ಯಾಕ ಮುಟ್ಟತಿ ?

ಕುರುಡ : ಇಲ್ರಿ, ಇಲ್ರಿ ನಮ್ಮವ್ವ....ಹಡೆದವ್ವ (ಬೂಟಿನ ಟಕ್ ಟಕ್ ಸದ್ದು)

ಸಿಪಾಯಿ : (ಬದಿಗೆ ಸರಿಯುತ್ತ) ಡಾಕ್ಟರ್ ಸಾಹೇಬರು ಬಂದ್ರು.

ಕುರುಡ : (ಕುಳಿತಲ್ಲಿಂದೆದ್ದು ಮುಂದೆ ಧಾವಿಸುತ್ತ) ಸರಣ್ರಿ ನಮ್ಮಪ್ಪ, ಸರಣ್ರಿ ಡಾಕ್ಟರ್ ಸಾಹೇಬರ....

ಡಾಕ್ಟರು : ಏಳು—ಬೂಟು ಮುಟ್ಟಬಾರ್ದು....

ಕುರುಡ : ತಪ್ಪಾತ್ರಿ ...ತಪ್ಪಾತು ಶಿವನೆ.
ಡಾಕ್ಟರ್ : ಇವನನ್ನ ಡಿಸ್‌ಚಾರ್ಜ್ ಮಾಡ್ರಿ ಸಿಸ್ಟರ್.
ನರ್ಸ್ : Yes, Sir (ದೂರ ಸಾಗುವ ಬೂಟು ಸಪ್ಪಳ)
ಕುರುಡ : ಶಿವ ಪ್ರತ್ಯಕ್ಷ ಆದ—ಕೈಜೋಡಿಸಾಕೂ ಮೊದಲಾ ಹ್ವಾಗೇ ಬಿಟ್ಟ.
ನರ್ಸ್ : ನಿನ್ನ ಹಳೀ ಅರಿವೆ ಕೊಡ್ತೀವು. ನಮ್ಮದು ಬಿಚ್ಚಾಕಿ ಅದನ್ನ ತೊಟ್ಕೊಂಡು ಮನಿಗೆ ಹೋಗು.
ಕುರುಡ : ಹೋಗ್ಬೇಕ್ರಾ ? ನಾ ಇನ್ನು ಹೋಗ್ಬೇಕ್ರಾ ?
ಸಿಪಾಯಿ : ಹೋಗು. ಒಂದು ಸಿನಿಮಾ ನೋಡು.
ಕುರುಡ : ಮಗಳ, ಬಾ—ಕೈಹಿಡಿ.... (ನಕ್ಕು) ನಾ ಒಬ್ಬ ಹುಚ್ಗೊಟ್ಟಿ. ಕೈಯಾಕ ಹಿಡೀಬೇಕಿನ್ನ ? ನಡಿಯವ್ವ....
ಸಿಪಾಯಿ : ನಿನ್ನ ಬಡಿಗಿ ಕೊಡಲ್ಯಾ ? ಆವತ್ತು ಅಷ್ಟೊಂದು ಬಡಕೊಂಡಿ ...
ಕುರುಡ : ಹೆಹ್ಹೆ....ಜ್ಯಾಸ್ತಿ ಮಾಡ್ತೀರೇನ್ರಿ ಸಿಪಾಯಿ ಸಾಹೇಬರ ? ಇನ್ಯಾಕ ಆ ಬಡಿಗಿ ? ಪಿರುತಿಯಿಂದ ನಿಮಗ ಕೊಡ್ತೇನಿ....ಇಟಕೋರಿ—ಇಟಕೋರಿ.

೦ ೦ ೦ ೦

ಕುರುಡ : ಸರಣ್ರೀ—ಸರಣ್ರೀ....
ನರ್ಸ್ : ಹೋಗೋ—ಆ ಕಡೆ ಹೋಗು ಅಲ್ಯಾಕ ನಿಂತಿದೀ....ಏ ಅಜ್ಜ—ಏ ಹುಡುಗಿ—ನಡೀರಿ ಆಚೆಗೆ.
ಕುರುಡ : ನರಸ್‌ಬಾಯರ, ನರಸ್‌ಬಾಯರ....
ನರ್ಸ್ : ಸಿಪಾಯಿ ! ಒಳಗ್ಯಾಕ್ಬಿಡ್ತೀ ಅವರ್ನ....ಚುಟ್ಟಾ ಸೇದ್ಕೊಂಡು ನಿಂತೇ ಬಿಟ್ಟೆಯಲ್ಲ....
ಸಿಪಾಯಿ : (ಕೆಮ್ಮಿ, ಗಂಟಲು ಸರಿಪಡಿಸಿಕೊಳ್ಳುತ್ತ) ಹೋಗ್ರಪಾ, ಮುಂದ್ಹೋಗ್ರಿ.
ಕುರುಡ : ನನ್ನ ಗುರುತು ಹತ್ತಲಿಲ್ಲೇನ್ರಿ ಸಿಪಾಯಿ ಸಾಹೇಬರ ? ನಾನು ಗದಿಗೆಪ್ಪರೀ....
ನರ್ಸ್ : (ಅಚ್ಚರಿಯಿಂದ) ಗದಿಗೆಪ್ಪ ?
ಕುರುಡ : ಯಾಡೂ ತಿಂಗಳ ಹಿಂದ್ಹ ನಾ ಇಲ್ಲಿ ಇದ್ನಲ್ಲ ನರಸ್‌ಬಾಯರ....
ನರ್ಸ್ : ನೆಪ್ಪೈತಿ ಬಿಡು.... ಎಲಾ ನಿನ ! ಇದೇನೀ ದಾಡಿ-ಹೊಲಸು ಅರಿವೀ !
ಕುರುಡ : ಹಯ್ಯೋ....
ಮಗಳು : ನನ್ದೂ ನೆಪ್ಪೈತಿ-ಅಲ್ರೀ ನರಸ್‌ಬಾಯರ ?
ನರ್ಸ್ : ಐತಿ ತೆಂಗಿ, ಐತಿ. ನಿಮ್ಮನ್ನ ಮರಿಯೋದಾದರೂ ಹ್ಯಾಂಗ ? ಹಂ- ....ಎಲ್ಲಿ ನೌಕರಿ ಹಿಡಿದಿಯಪ್ಪಾ ಗದಿಗೆಪ್ಪ ?
ಕುರುಡ : [ಅಳುತ್ತಾ] ಇಲ್ಲ ನರಸ್‌ಬಾಯರ...ಪಾಪಿ ಹ್ವಾದಲ್ಲಿ ಮೊಣಕಾಲ್ನೀರು ನನಗ ಎಲ್ಲ್ಯೂ ನೌಕರಿ ಸಿಗವಲ್ದು.... (ಕಾರು ಬರುತ್ತಿರುವ ಸದ್ದು)

ನರ್ಸ್ : ಡಾಕ್ಟರು ಬಂದ್ರು !

ಸಿಪಾಯಿ : ಬದಿಗೆ ಸರೀರಪ್ಪ ಒಂದೀಟು. (ಡಾಕ್ಟರು ಕಾರಿನಿಂದಿಳಿದು, ಬಾಗಿಲು ಹಾಕುವರು)

ಕುರುಡ : ಸರಣ್ರೀ ಟಾಕ್ಟರ್ ಸಾಹೇಬರ–ಸರಣು–ನಾನು ಗದಿಗೆಪ್ಪರೀ.

ನರ್ಸ್ : Good Morning Sir

ಸಿಪಾಯಿ : ಸಲಾಂ ಸಾಬ್

ಡಾಕ್ಟರ್ : ಸಿಸ್ಟರ್ ಯಾರಿಂವಾ ?

ನರ್ಸ್ : ಎರಡು ತಿಂಗಳ ಹಿಂದ್ಕ ಇಲ್ಲೇ ಆಪರೇಶನ್ ಆಗಿತ್ತು, ಸರ್.

ಡಾಕ್ಟರ್ : ಹಾಂ–Yes· Concussion cataract. ಈಗ ಆರಾಮ ಅಲ್ಲೇನಪ್ಪ ?

ಕುರುಡ : ಎಲ್ಲಾ ಬರ್‌ಬಾದಾಗಿ ಹೋಗ್ರಿ ಡಾಕ್ಟರ್ ಸಾಹೇಬರ....

ಡಾಕ್ಟರ್ : (ಅವನ ಮಾತು ಅರ್ಥವಾಗದೆ) The eyes are perfectly alright

ಕುರುಡ : (ರೋದನ ಮುಂದುವರಿಸುತ್ತ) ಟೇಸನ್‌ಗೆ ಹ್ವಾದೆ. ಅಲ್ಲಿ ನಾ ಈಗ ಹಮಾಲಿ ಮಾಡಾಕ ಬರೂದುಲ್ಲಂತ. ಅದು ಬೇಕಾಯದೇಶಿರ ಆಗ್ತದಂತ. ಮೋಟಾರ್ ಸ್ಟ್ಯಾಂಡಿಗೆ ಹ್ವಾದೆ. ಅಲ್ಲಿ ಎಲ್ಲಾ ಹಮಾಲರು ಸೇರಿ ನನ್ನ ಓಡಿಸೇ ಬಿಟ್ರು. ಕಿರಾಣಿ ಅಂಗಡಿ, ಚಾದಂಗಡಿ, ಆಫೀಸುಗಳು–ಎಲ್ಲಾ ಸುತ್ತ್ಯಾಡಿದೆ. ಯಾರೂ ನೌಕರಿ ಕೊಡಲಿಲ್ರ. ನನ್ನ ಹಣೆಯಾಗ ನೌಕರಿ ಬರೆದಿಲ್ಲಾಂತ ಮತ್ತ ಬಿಕ್ಸಕ್ಕೆ ಹ್ವಾದೆ—ಈ ಹುಡುಗಿನ್ನ ಕರಕೊಂಡು. ಬಿಕ್ಸ ಯಾರೂ ನೀಡವಲ್ರು, ಸಾಹೇಬರ. ಎಲ್ಲಾರೂ ಅನ್ನೋದು ಒಂದೇ ಮಾತ. ನಿನಗೇನಾಗೈತಿ ಧಾಡಿ? ಕೈಕಾಲು ನೆಟ್ಟಗದಾವು, ಕಣ್ಣು ನೆಟ್ಟಗದಾವು, ನಿನಗ್ಯಾಕರೆ ನೀಡಬೇಕು ? ಹೇಳ್ರಿ ಸಾಹೇಬರ, ಯಾಕರೆ ರೊಟ್ಟಿ ನೀಡಬೇಕು ನನಗ, ಹೇಳ್ರಿ ? ಹಸಿವು, ನೀರಡಿಕಿ ಏನಾದರೂ ನನಗ ಅದಾವ? ನಾ ಏನು ಮನಿಸ್ಯಾನ? (ಬಿಕ್ಕುತ್ತ) ಕುಡ್ಡ ಅಂತ ಮೊದಲ ನೀಡತಿದ್ರು. ಈಗ ಯಾಕ ನೀಡುತಾರು ? (ಗಟ್ಟಿಯಾಗಿ ರೋಧಿಸುತ್ತ) ಹೋಹೋಹೋ....ಹೋ....ಎಂಥಾ ದುರ್ಗತಿ ಬಂತು ನನಗ....ಅಯ್ಯೋ ಹಯ್ಯೋ...ಡಾಕ್ಟರ್ ಸಾಹೇಬರ ನೀವು ಧರ್ಮಾತ್ತಮರು ನನ್ನ ತಂದೆ....ನನ್ನ ದೇವರು........ಒಂದೇ ಒಂದು ಪ್ರಾರ್ಥನೆ....ನನ್ನ ಮತ್ತ ಕುರುಡನ ಮಾಡ್ರಿಯಪ್ಪಾ—ಮತ್ತ ಕುರುಡನ ಮಾಡ್ರಿ ತಂದೇ........ಇಹ್ ಇಹ್....ಇಹ್.... (ದೀರ್ಘರೋದನ)

ಡಾಕ್ಟರ್ : (ದಿಗ್ಭ್ರಮೆಗೊಂಡಿದ್ದವರು ಚೇತರಿಸಿಕೊಳ್ಳುತ್ತ) Its terrible : (ಮೆಟ್ಟಲುಗಳನ್ನೇರುವರು)

ಕುರುಡ : ಡಾಕ್ಟರ್ ಸಾಹೇಬರ – ಸಾಹೇಬರ – ಹೋಗಬ್ಯಾಡ್ರಿಯಪ್ಪಾ........ ಹಯ್ಯೋ !....ನನ್ನ ಕುರುಡನ ಮಾಡ್ರಿ ತಂದೇ........

ಡಾಕ್ಟರ್ : ಸಿಸ್ಟರ್ ಈ ಐದು ರೂಪಾಯಿ ಅವನಿಗೆ ಕೊಟ್ಟು ಕಳಿಸ್ಬಿಡ್ರಿ. I con't stand the sight ಉಫ್ ! .

ಕುರುಡ : ಅಯ್ಯೋ ಶಿವನೇ....

ಡಾಕ್ಟರ್ : (ಮೇಲಣ ಮೆಟ್ಟಲಿನಿಂದ ನೋವು ತುಂಬಿದ ಅಸಹಾಯತೆಯ ಸ್ಪಷ್ಟ ಧ್ವನಿಯಲ್ಲಿ) ನಾನು ಡಾಕ್ಟರ. ಮನುಷ್ಯಗೆ ಕಣ್ಣು ಕೊಟ್ಟೇನು ? ಆದರೆ ಸಮಾಜದ ಕುರುಡಿಗೆ ನಾ ಏನು ಚಿಕಿತ್ಸಾ ಮಾಡೇನು ? (ನಿಟ್ಟುಸಿರು ಬಿಡುವರು) (ಕುರುಡನ ಕ್ಷೀಣ ರೋದನ)

ಮಾತಾಯಿ ಮಡಿಲೋ, ಯಾತಾರ ಭಯವೋ.....

ಅಂಬಿಗರ ಸಂಗ್ಯಾ : ಮಾತಾಯಿ ಮಡಿಲೋ
ಯಾತಾರ ಭಯವೋ....
ನೀಲಿ ನೀಲಿ ಆಕಾಸ
ಚಂದುಳ್ಳ ಚಪ್ಪಾರ
ಸಾವೀರ ನಕ್ಷತ್ರ....

ಸಂಗ್ಯಾ ಮತ್ತು ಕೈತಾನ್ : ಮಾತಾಯಿ ಮಡಿಲೋ
ಯಾತಾರ ಭಯವೋ

ಆತ : (ವಿಹಾರ ನೌಕೆಯ ಮೇಲ್ಪಾವಣಿಯಿಂದ ಕೆಳಕ್ಕೆ ಬರುವ ಧ್ವನಿ) ಸಂಗ್ಯಾ, ಎಲ್ರೂ ಬಂದ್ರೇನೋ ?

ಸಂಗ್ಯಾ : (ಕೆಳಗಡೆಯಿಂದ ಮೇಲಕ್ಕೆ ಧ್ವನಿ) ಬಂದವ್ರೆ ನನ್ನೊಡ್ಯಾ. ಕೈತಾನ್, ಬಚನ್, ಉಸ್ಮಾನ್ ಎಲ್ಲಾರೂ ಬಂದವ್ರೆ.

ಆತ : (ಮೇಲಿಂದ) ಹೊರಡೋಣ್ವೇನು ? ಆಗಲೇ ಏಳು ಘಂಟೆ. ಕತ್ತಲಾಯ್ತು.

ಸಂಗ್ಯಾ : (ಕೆಳಗಿನಿಂದ) ಆಗ್ಲಿ, ನನ್ನೊಡ್ಯಾ.

ಉಸ್ಮಾನ್ : ಅಮ್ಮಾವ್ರಿಗೆಲ್ಲಾ ಅನುಕೂಲಾಗ್ಯೆತಾ ಸಾಬ್ ?

ಆತ : ಹ್ಞ, ಉಸ್ಮಾನ್.

ಕೈತಾನ್ : ಇನ್ನೇನಾರಾ ಬೇಕೆ ಸಾರ್ ?

ಆತ : ಏನೂ ಬೇಡ ಕೈತಾನ್....ಅಂದ್ಹಾಗೆ, ಯಾವ ಕಡೆಗೆ ನಾವೀಗ ಮೊದಲು ಹೋಗೋದು ?

ಸಂಗ್ಯಾ : ಮೂಡು ದಿಕ್ಕಿಗೆ ಒಡೆಯಾ....ಗೊಂಡಾರಣ್ಯದ ಗುಂಟೆ ಹೋಗಿ ಪುಸ್ಪ ಕಾಸೀನ ದಾಟ, ನಡುಗಡ್ಡೇನ ಬಳಸ್ಕೊಂಡು, ಮುಂದಕ್ಕೆ ಈಶಾನ್ಯ ದಿಕ್ಕಿಗೆ ಒಡೆಯಾ. ಅಲ್ಲಿಂದ ಪಶ್ಚಿಮಕ್ಕೆ ಬಂದು ವಾಯುವ್ಯ ಮೂಲೆಯಲ್ಲಿ ದಡ ಸೇರೋದು.

ಆಕೆ : (ಪಿಸುದನಿಯಲ್ಲಿ ಗಂಡನೊಡನೆ) ಅಲ್ಲೇನಾ ವಿಶ್ರಾಂತಿ ಗೃಹ ಇರೋದು ?

ಆತ: (ಬಲವಿನಿಂದ) ಹ್ಞ. (ಕೆಳಕ್ಕೆ ಕೇಳಿಸುವಂತೆ) ಚಂದ್ರೋದಯದ ಹೊತ್ತಿಗೆ ನಾವೆಲ್ಲಿರ್ತಿವಪ್ಪಾ ಸಂಗ್ಯಾ?

ಸಂಗ್ಯಾ: ನಡುಗಡ್ಡೆ ಅತ್ರ ಸರ್ನ್ನೊಡ್ಯಾ. ಬೆಳ್ಳಿ ಮೂಡೋ ವ್ಯಾಳೆಗೆ ಯಾನ ಮುಗಿದ್ಹೋಗ್ತೈತೆ.

ಆತ: ಸರಿ. ಹೊರಡೋಣ ಹಾಗಾದ್ರೆ....

ಸಂಗ್ಯಾ: ಊಂ ಒಡ್ಯಾ. ಬಚ್ಚನ್! ಲಂಗರು ಎತ್ತು! ಕೈತಾನ್! ಹಾಯಿ ಬಿಚ್ಚು! ಉಸ್ಮಾನ್! ಕಂದೀಲು ಮೂಡು ದಿಕ್ಕಿಗೆ ತಿರುಗಿಸು! ಹ್ಞ–ಹಾಗೆ ಇನ್ನು ಹುಟ್ಟು ಹಾಕು! ಚುಕ್ಕಾಣಿ ಇಲ್ಲಿ ತತ್ತ ಬಚನ್!

[ದೋಣಿ ನೀರನ್ನು ಸೀಳುವ ಸಪ್ಪಳ, ಹಿನ್ನೆಲೆಯಲ್ಲಿ]

ಉಸ್ಮಾನ್ ಮತ್ತು ಸಂಗ್ಯಾ:

ಹೀಹೊ ಹೀಹೊ ಹೀಹೊ ಹೀಹೊ
ಗಂಗಾ ಮಾಯಿ ಲೇಸೋ
ಕಾವೇರಿ ಲೇಸೋ
ಗೋದಾವರಿ ಲೇಸೋ
ಬ್ರಹ್ಮಪುತ್ರ ಲೇಸೋ
ಹೀಹೊ ಹೀಹೊ ಹೀಹೊ ಹೀಹೊ

[ಅಸ್ತಮಿಸುವ ಪಲ್ಲವಿ]

ಆಕೆ: (ತನ್ಮಯಿತೆಯಿಂದ) ಅಲ್ಲಾ, ಈ ಸರೋವರ ಎಷ್ಟೊಂದು ವಿಸ್ತಾರವಾಗಿ ದೇಂತ ಮುಂದುಗಡೆ ನೋಡಿ. ದಡದ ಸುಳಿವೇ ಇಲ್ಲ.

ಆತ: ಉತ್ತರದಲ್ಲಿ ಹಿಮವತ್ಪರ್ವತ. ದಕ್ಷಿಣದಲ್ಲಿ ಹಿಂದೂ ಮಹಾಸಾಗರ. ಪೂರ್ವ ಪಶ್ಚಿಮಗಳಲ್ಲಿ ನೀಲಗಡಲು. ನಡುವೆ ಇದೊಂದು ಪವಿತ್ರ ಪುಷ್ಕರಿಣಿ. ಸಾಗರವೇ ಎನ್ನಿಸುವಂತಹ ಸರೋವರ....

ಆಕೆ: ಮಬ್ಬುಗತ್ತಲೆಯಲ್ಲಿ ಈ ನೋಟ ಎಷ್ಟೊಂದು ರಮಣೀಯ! ಮೋಡಗಳ ಮೇಲೆ ತೇಲ್ತಿದೇವೇನೋ ಅನಿಸುತ್ತೆ. ಯಾವುದೋ ಬೇರೆ ಲೋಕದಲ್ಲಿರೋ ಹಾಗೆ ಭಾಸವಾಗುತ್ತೆ.

ಆತ: ಇದು ಸ್ವಾತಂತ್ರ್ಯದ ಸುಖಾನುಭವ, ಚಿನ್ನ.

ಆಕೆ: ಸದಾ ಕಾಲವೂ ಹೀಗೆಯೇ ಇದ್ದರೆ ಎಷ್ಟು ಚೆನ್ನ.

ಆತ: ಆಕಾಶ ತುಂಬ ಪಾರಿದೀಪಗಳು, ಕೋಟಿ ನಕ್ಷತ್ರಗಳು!

ಆಕೆ: ಅವೆಲ್ಲಾ ನಮ್ಮ ಪೂರ್ವಜರು ಅಲ್ಲವೇ?

ಆತ: ಅದೊಂದು ಕಲ್ಪನೆ

ಆಕೆ: ಅಂಥ ಕಲ್ಪನೆ ನನಗಿಷ್ಟ. ಅವರೆಲ್ಲಾ ನಮ್ಮನ್ನೀಗ ದಿಟ್ಟಿಸ್ತಿದಾರೆ.

ಆತ : ಪರದೆ ಸರಿಸ್ಲೇನು ? ಯಾರಾದರೂ ನೋಡ್ತಿದಾರೆ ಅಂದ್ರೆ ಒಂದು ಥರಾ ಅನಿಸುತ್ತೆ.

ಆಕೆ : ಹೋಗ್ರಿ, ಹೋಗ್ರಿ....

ಆತ : ಮುಂದಕ್ಕೆ ಕೆಳಗಡೆ ನೋಡು. ಕಿರುತೆರೆಗಳ ಮೇಲೆ ಕಂದೀಲಿನ ಬೆಳಕು ಹೇಗೆ ನರ್ತಿಸ್ತಿದೆ !

ಆಕೆ : ಆ್ಹ—ಎಷ್ಟು ಸುಂದರ !

[ಕೆಳಗಡೆಯಿಂದ 'ಹೀಹೋ' ಪಲ್ಲವಿ. ಆದರ ಹಿನ್ನೆಲೆಯಲ್ಲಿ ಜೀರುಂಡೆಗಳ ಧ್ವನಿ. ಕಾಡು]

ಆಕೆ : ಅದೇನೂಂದ್ರೆ ?

ಆತ : ಜೀರುಂಡೆಗಳು. ಅಡವಿ, ಚಿನ್ನ-ಗೊಂಡಾರಣ್ಯ (ಸಿಂಹ ಹುಲಿಗಳ ಘರ್ಜನೆ)

ಆಕೆ : ಅಬ್ಬ ! ಇದಂತೂ ಜೀರುಂಡೆ ಅಲ್ವಲ್ಲಾ !

ಆತ : ಅದರಿಂದೇನೀಗ ? ಸರೋವರದೊಳಗಿರುವ ನಾವು ಸುರಕ್ಷಿತವಾಗಿದ್ದೇವೆ. ಅಲ್ಲಿ ಕಾಡಿನ ಕಾನೂನು. ಇಲ್ಲಿ ನಾಗರಿಕತೆ. ನಮ್ಮ ಪಾಡಿಗೆ ನಾವು. ಅವರ ಪಾಡಿಗೆ ಅವರು. ಇದು ಸಹಬಾಳ್ವೆ, ಚಿನ್ನ !

ಆಕೆ : ಆದರೂ ಹುಷಾರಾಗಿರಬೇಕಪ್ಪಾ.

ಆತ : (ನಕ್ಕು) ಕೈ ಬಂದೂಕನ್ನ ಹೊರಗೆ ತೆಗೆದು ಕೆಳಗೆ ಇಟ್ಟರ್‍ಲೇನು ?

ಆಕೆ : ಬೇಡಿ, ಬೇಡಿ ! ಬಂದೂಕಿಗೆ ಆತುಕೊಂಡು ಹಾಯಾಗಿ ಇರೋಕಾಗುತ್ತೆ ?

ಆತ : ಅದೇನೋ ನಿಜವೇ ! ಹ್ಞಾ—ಎಲ್ಲಿ—ಕೈಕೊಡು.

ಆಕೆ : ಯಾಕೆ ?

ಆತ : ಕೊಡು ಸುಮ್ನೆ.

ಆಕೆ : ಕೊಠಡಿಯ ಮಬ್ಬು ಬೆಳಕಿನಲ್ಲೇ ಆಗ್ಬೇಕೇನು ಹಸ್ತಸಾಮುದ್ರಿಕಾ ಪರೀಕ್ಷೆ ?

ಆತ : ನಾನು ಹಿಡಿದ ಕೈ ಎಂಥದೂಂತ ಆಗಾಗ್ಗೆ ನೋಡ್ತೀರೋ ಆಸೆ.

ಆಕೆ : ಹೇಳಿ, ಇದು ತಾನೇ ಆಯಸ್ಸಿನ ರೇಖೆ ?

ಆತ : ಹ್ಞಾ. ದೀರ್ಘಾಯುಷ್ಯ.

ಆಕೆ : ಭಾಗ್ಯ ?

ಆತ : ದೊಡ್ಡದು. ಪರಿಶ್ರಮದ ಕೆಲ ವರ್ಷಗಳನ್ನ ದಾಟಿದ್ಮೇಲೆ ಸಂಪತ್ಸಮೃದ್ಧಿ.

ಆಕೆ : ಇದೇನು ? ಹೊರಳಿಸಿ ಹೊರಳಿಸಿ ನೋಡ್ತಿದೀರಲ್ಲಾ....

ಆತ : ಸಂತಾನ ಯೋಜನೆ ! ಒಂದು, ಎರಡು, ಮೂರು, ನಾಲ್ಕು....ಐದು....

ಆಕೆ : ಸಾಕ್ರೀ....ಸಾಕ್ರೀ....

ಆತ : ಸಾಕೋದಕ್ಕೇನೇ ! ಮುಂದೆಯೂ ಇದೆ. ಆ ಗೆರೆಗಳೆಲ್ಲಾ ಇನ್ನೂ ಸ್ಪಷ್ಟವಾಗಿ ಮೂಡಿಲ್ಲ.

ಆಕೆ : ಮೂಡಿರುವಷ್ಟು ಸಾಲ್ದೇನೊ ?

ಆತ : ಒಂದರಿಂದ ಇನ್ನೊಂದಕ್ಕೆ ಸಾಕಷ್ಟು ಅಂತರ ಬೇರೆ.
ಆಕೆ : ಎಷ್ಟು?
ಆತ : ಐದ್ಯೆದು ವರ್ಷ.
ಆಕೆ : ಓಹೋ ಎಲ್ಲಾ ಪಂಚವಾರ್ಷಿಕ ಸೃಷ್ಟೀನೋ?
ಆತ : ಹೊಸ ಸೃಷ್ಟಿಯ ಕಾರ್ಯ ರೋಮಾಂಚಕಾರಿ ಚಿನ್ನಾ....
ಆಕೆ : ತಾಯ್ತನದ ಸುಖವೇ ಶ್ರೇಷ್ಠತಮ ಅಂತಾರೆ....
ಆತ : ತಂದೆತನದ ಸುಖವೂ ಅದಕ್ಕೆ ಕಡಮೆ ಇರಲಾರದು ಅಂತೀನಿ!
ಆಕೆ : (ಕ್ಷಣ ತಡೆದು) ಯಾಕೋ ಚಳಿ ಚಳಿ ಅನ್ನಿಸ್ತಿದೆ ಅಂದ್ರೆ.
ಆತ : ಸರೋವರದ ಮೇಲೆ ಬೀಸೋ ಗಾಳಿಗೆ ಹಾಗಾಗುತ್ತೆ (ಕೆಳಗೆ ಮಾತಿನ ಸದ್ದು).
ಧ್ವನಿಗಳು : ಇರಾಕಿಲ್ಲಪ್ಪಾ.... —ಯೋಳೋಕಾಗಲ್ಲ.... —ತಿಳಿಸ್ಬಿಡು.
ಸಂಗ್ಯಾ : (ಕೆಳಗಿನಿಂದ) ಒಡ್ಯಾ!
ಆತ : ಏನು ಸಂಗ್ಯಾ?
ಸಂಗ್ಯಾ : ಅರಣ್ಯ ದಾಟ್ತು. ಇನ್ನು ಪುಷ್ಪಕಾಸಿ ಬತ್ತದೆ.
ಆತ : ಹ್ಞ.
ಆಕೆ : ಏನಂತೆ?
ಆತ : ಇನ್ನು ಪುಷ್ಪಕಾಶಿ ಬರುತ್ತೆ ಅಂತಾನೆ.
ಆಕೆ : ಓ! ಹೌದೇ?
ಸಂಗ್ಯಾ : ಒಡೆಯಾ!
ಆತ : ಏನಪ್ಪಾ?
ಸಂಗ್ಯಾ (ನಿಧಾನವಾಗಿ) ಗಾಳಿ ಬೀಸೋ ಅಂಗೈತೆ.
ಆತ : ಅಂದರೆ?
ಸಂಗ್ಯಾ : ಪಚ್ಚಿಮಕ್ಕೆ ಆಕಾಸ ಮುಚ್ಕೊಂಡದೆ.
ಆತ : ಗಾಳಿ ಮಳೆ ಬರಬೌದು, ಅಂತೀಯಾ?
ಸಂಗ್ಯಾ : ಬಂದ್ರೂ ಬರಬೈದು. ಇನ್ನಾ ಒಂದೆರಡು ಗಳಿಗೆ ಇರಾಕಿಲ್ಲ. ಏನೂ ಯೇಚ್ನೆ ಮಾಡಬಾರದ್ರಿ....ಎಲ್ಲಾ ಬದ್ರವಾಗೈತೆ.
ಆತ : ಸರಿ, ಸಂಗ್ಯಾ.
ಆಕೆ : ಏನಂದ ಅಂದ್ರೆ? ಮಳೆ ಬರುತ್ತಂತಾ?
ಆತ : ಬಂದ್ರೂ ಬರಬಹುದು ಅಂತಾನೆ.
ಆಕೆ : ಅಯ್ಯೋ! ಇನ್ನೇನು ಗತಿ!
ಆತ : ಹುಚ್ಚಿ! ಏನಂತೆ ಮಳೆ ಬಂದ್ರೆ? ನೀನು ನೋಡಿಲ್ವ? ಅಂಗೈ ಅಗಲದ ಮೋಡ ಕಾಣಿಸ್ಕೊಳ್ಳುತ್ತೆ. ಸ್ವಲ್ಪ ಹೊತ್ತಲ್ಲೇ ಆಕಾಶವನ್ನೆಲ್ಲ ಆವರಿಸುತ್ತೆ. ಧೋ ಅಂತ ಮಳೆ ಸುರಿದು, ಮುಂದೆ ಶಾಂತವಾಗುತ್ತೆ, ಅಷ್ಟೆ.

ಆಕೆ : ಆದ್ರೆ, ನಾವು ದೋಣಿಲಿದೀವಲ್ಲಾ.

ಆತ : ಏನಾಯ್ತು ? ಸಂಗ್ಯಾ, ಕೈತಾನ್, ಬಚನ್, ಉಸ್ಮಾನ–ಇವರು ಸಾಮಾನ್ಯ ಅಂಬಿಗರು ಅಂದ್ಕೊಂಡ್ಯಾ ಇಂಥ ಗಾಳಿ ಮಳಿ ಇವರಿಗೆ ಯಾವ ಲೆಕ್ಕ.

ಆಕೆ : ಗಾಳಿನೋ, ಬಿರುಗಾಳಿನೋ ?

ಆತ : ಕೆಟ್ಟದ್ದನ್ನ ಚಿಂತಿಸ್ಕೊಂಡು ಸುಮ್ನೆ ಗಾಬರಿಯಾಗ್ಬಾರ್ದು. ಇಷ್ಟಕ್ಕೇ ನಾವು ಕಂಗಾಲಾದ್ರೆ ನಾಳೆಯ ನಮ್ಮ ಕನಸು ಕೈಗೂಡೋದುಂಟೆ ?

ಆಕೆ : ಇಲ್ಲ ದೊರೆ, ನಾನು ಅಧೀರಳಾಗೋದಿಲ್ಲ.

[ಮೂಡಿ ಬರುವ 'ಹೀಹೋ ಹೀಹೋ' ಪಲ್ಲವಿ. ಅಸ್ತಮಿಸಿದಂತೆ]

ಎಲ್ಲಿ ಸರಿಯಾಗಿ ಕೂತ್ಕೋ. ಶಾಲು ಹೊದಿಸ್ತೀನಿ.

ಆಕೆ : ಎಷ್ಟೊಂದು ಉಪಚಾರ ಮಾಡ್ತಿದೀರಿ ?

ಆತ : ಈ ಉಪಚಾರ ನಿನಗೊಬ್ಬಳಿಗೋಸ್ಕರ ಅಲ್ಲ, ಚಿನ್ನ !

ಆಕೆ : ಮತ್ತೆ ?

ಆತ : ಮುಂದೆ ಬರೋ ನಮ್ಮ ಕಂದಮ್ಮನ ಮರೆತೆಯೇನು ?

ಆಕೆ : ಹೋಗೀಂದ್ರೆ....ನೀವೊಬ್ರು....

ಆತ : (ನೀಳವಾಗಿ ಉಸಿರೆಳೆದು) ಆ್ಹ ! ಎಂಥಾ ಸುವಾಸನೆ !

ಆಕೆ : ಹೌದು ! ಓಹ್ ! ಜಾಜಿ, ಸಂಪಿಗೆ, ಮಲ್ಲಿಗೆ, ಸೇವಂತಿ, ಗುಲಾಬಿ, ಪಾರಿಜಾತಗಳೆಲ್ಲ ಒಟ್ಟಾಗಿ ಮಾತನಾಡಿಸ್ತಿವೆ !

ಆತ : ಇದು ನಮ್ಮ ಪುಷ್ಪಕಾಶಿಯಿಂದ. ದಡದಿಂದ ನಾವೆಷ್ಟೋ ದೂರ ಇದೀವಿ. ಆದರೂ ಮಾರುತನ ಕೃಪೆಯಿಂದ ಸುವಾಸನೆಯ ಸುಖ ನಮಗೆ ಲಭ್ಯ.

ಆಕೆ : (ಸ್ವಗತ) ಇವನೇ ಚಂಡಮಾರತನಾದರೊ ?

ಆತ : ಚಂದ್ರೋದಯವೂ ಆಗಿದ್ಬಿದ್ದರೆ ಪುಷ್ಪಕಾಶಿಯ ರಮ್ಯ ನೋಟ ಇಲ್ಲಿಗೆ ಕಾಣಿಸ್ತಿತ್ತು.

ಆಕೆ : (ಸ್ವಗತ) ಕರೀಮೋಡ ಕವಿದಿರುವಾಗ ಶಶಿಬಿಂಬದ ದರ್ಶನ ಎಲ್ಲೀದು ?

ಆತ : ಹ್ಞೆ ? ಏನಾದರೂ ಅಂದಿಯಾ ?

ಆಕೆ ನಿಸರ್ಗದ ರುದ್ರನಾಟ್ಯದ ಮುಂದೆ ಮಾನವ ಏನುತಾನೆ ಮಾಡಬಲ್ಲ ?

ಆತ : ಇದು ರೌದ್ರರೂಪವಲ್ಲ ಒಡತಿ. ಮನುಷ್ಯನ ಅನುಪಮ ಸೃಷ್ಟಿಯಾದ ಪುಷ್ಪೋದ್ಯಾನದ ಸೌಂದರ್ಯ. [ಮಾತು ಮುಗಿಯುತ್ತಿದ್ದಂತೆ ಮಿಂಚು-ಗುಡುಗು]

ಆತ : ಓ ! ಅಂತೂ ಬಂತು !

ಆಕೆ : ಅಬ್ಬ !

ಆತ : ಹೆದರಬೇಡ, ಚಿನ್ನ.

ಆಕೆ : ಆ ದೋಣಿ ಕಂದೀಲಿನ ತೂರಾಟ ನೋಡಲಾರೆ ! ಕಿಟಕಿ ಮುಚ್ಚಿ !

ಆತ: ಹ್ಞ.

(ಕಿಟಕಿ ಮುಚ್ಚಿದ ಸದ್ದು. ಕೆಳಗಿನಿಂದ ಸಂಗ್ಯಾನ ಆದೇಶಗಳು. 'ಕೈತಾನ್ ! ಹಾಯಿ ಸುತ್ತು !' 'ಬಚನ್ ! ನೀನು ಬಲಮಗ್ಗುಲಿಗೆ ! ಉಸ್ಮಾನ್ ಎಡಮಗ್ಗುಲಿಗೆ' 'ಕೈತಾನ್) ಹತ್ತು ಮೇಲಕ್ಕೆ ಬಿರ್ರನೆ']

ಆಕೆ: ಅಯ್ಯೋ, ಹೀಗೂ ಆಗ್ಬೋಯ್ತಲ್ಲ....

ಆತ: ಧೈರ್ಯವಾಗಿರು. ಗಂಡಾಂತರ ಒದಗಿ ನಾವು ಪಾರಾದಾಗಲೇ ಬದುಕು ಅರ್ಥಪೂರ್ಣವಾಗುತ್ತೆ. (ಭೋರೆಂದು ಗಾಳಿ. ಮೊದಲು ಮೆಲ್ಲಗೆ, ಬಳಿಕ ಬಿರುಸಾಗಿ)

ಸಂಗ್ಯಾ: (ಕೆಳಗಿನಿಂದ) ಒಡೆಯಾ !

ಆತ: ಏನು ಸಂಗ್ಯಾ ?

ಸಂಗ್ಯಾ: ಕಿಟಕಿ ಗಿಟಕಿ ಮುಚ್ಕೊಂಬಿಡಿ. ಮಳೆ, ಗಾಳಿ....

ಆತ: ನಾವೂ ಕೆಳಗೆ ಬರಬೇಕೇನು ?

ಸಂಗ್ಯಾ: ಬ್ಯಾಡಿ....ನೋಡಾನ....

ಆತ: ಹ್ಞ. ಅಗತ್ಯ ಬಿದ್ರೆ ಹೇಳು. ನಾವೂ ಬರ್ತೀವಿ.

ಸಂಗ್ಯಾ: (ತುಸು ಕಂಪನ) ಆಗ್ಲಿ ಒಡೆಯಾ.... (ಮಳೆ ಸುರಿಯುತ್ತದೆ)

ಆಕೆ: ಮಳೆ ಬಂದೇಬಿಡ್ತು ! ಉಫ್ ! ಈ ದೋಣಿ ಎಷ್ಟು ಅಲುಗಾಡ್ತಿದೆ !

ಆತ: ಇನ್ನು ಸ್ವಲ್ಪ ಹೊತ್ತು. ಮಳೆ ನಿಂತ್ಮೇಲೆ....

ಆಕೆ: ಗೊತ್ತು. ಮಳೆ ನಿಂತಮೇಲೆ ಶಾಂತವಾಗಿರುತ್ತೆ.

ಆತ: ನನ್ನ ಕೈ ಹಿಡ್ಕೋ ಚಿನ್ನಾ....

[ಗಾಳಿ ಮಳೆ ಗುಡುಗು ಕೆಳಗಿನಿಂದ ಸದ್ದುಗಳು: "ನೀರೆತ್ತಿಹಾಕು" "ಬಚನ್ ! ಹುಷಾರಿ !" "ಉಸ್ಮಾನ್ ಈ ಕಡೆಬಾ !"]

ಆಕೆ: ಏನಿದು ಈ ದೋಣಿ ಇಷ್ಟೊಂದು ತುಯ್ದಾಡ್ತಾ ಇದೆ !

ಆತ: ಈ ಕಂಬ ಹಿಡಕೋ. (ಕೆಳಗಿನಿಂದ)

ಬಚನ್: ದಿಕ್ಕು ತಪ್ಪಿ ಓಗ್ತಿದೆ ಕಣಪೋ.

ಸಂಗ್ಯಾ: ಕಂದೀಲು ಎತ್ಕೊ ! ಈಚೆಗೆ ಹಿಡಿ ದೇವರಿದಾನೆ.

ಕೈತಾನ್: ದಯಾಮಯನಾದ ಏಸು, ನಮ್ಮನ್ನು ಕಾಪಾಡು.

ಉಸ್ಮಾನ್: ಯಾ ಅಲ್ಲಾ ಪರವರದಿಗಾರ್ !

ಬಚನ್: ಸತ್‌ಅಕಲ್ !

ಸಂಗ್ಯಾ: ಒಡೆಯಾ ! ಇಬ್ಬರೂ ಕೆಳಕ್ಕೆ ಬಂದ್ಬುಡಿ."

ಆತ: (ಉದ್ವಿಗ್ನನಾಗಿ) ಹ್ಞಾ....ಹ್ಞಾ........(ಆಕೆಯೊಡನೆ) ಏಳು ಚಿನ್ನಾ. ನನ್ನ ಹಿಂದೆಯೇ ಬಾ....

ಆಕೆ: (ಕ್ಷೀಣವಾದ, ಆದರೆ ಶಾಂತ ಧ್ವನಿಯಲ್ಲಿ) ಬಂದೆ, ನಡೀರಿ. ನಿಮ್ಮ ಬಂದೂಕು ?

ಆತ : ತಗೊಂಡಿದೀನಿ.

(ಕೆಳಗಿಳಿಯುವ ಸಪ್ಪಳ. . ಮಳೆಯ ಭೋರ್ಗರೆತ)

ಸಂಗ್ಯಾ : (ಕೆಳಗಡೆ) ಹೀಗೆ ನಿಂತ್ಕೊಳ್ಳಿ. ಅವ್ಮಾವರಿಗೆ ತೊಂದರೆಯಾಯ್ತು.

ಆಕೆ : ಇರಲಿ ಬಿಡಪ್ಪ.

ಆತ : ನಾವೂ ನೀರೆತ್ತುತೀವಿ ಸಂಗ್ಯಾ.

ಆಕೆ : ನನಗೂ ಒಂದು ತಂಬಿಗೇನೋ ಪಾತ್ರೇನೋ ಕೊಡಿ ಅಂದ್ರೆ.....

(ಮಳೆ ತೆರೆತೆರೆಯಾಗಿ ಮುಖದ ಮೇಲೆ ಎರಗಿದಂತೆ) ಆಯ್, ಉಹ್, ಓ.

ಆತ : ಸ್ಥೈರಿಸ್ಕೊ.

ಬಚನ್ : ಹೋಶಿಯಾರ್, ಬಿರುಗಾಳಿ ದೋಣೀನ ನಡುಗಡ್ಡೇಗೆ ತಳ್ತಿದೆ.

ಕೈತಾನ್ : (ಸ್ವಗತ) ಬಂಡೆಗಳು....ಬಂಡೆಗಳು.... (ಗಾಜು ಒಡೆದ ಸದ್ದು)

ಉಸ್ಮಾನ್ : ಯಾ ಅಲ್ಲಾ, ಕಂದೀಲು ಆರ್ಹೋಯ್ತು.

ಆತ : ಲೈಫ್ ಬೆಲ್ಟೆಲ್ಲಿ ? ಎಲ್ಲಿ ?

ಸಂಗ್ಯಾ : (ಕಿರಿಚುತ್ತಾ) ಎತ್ಕೊಳ್ಳಿ ಒಡಿಯ.

[ದೋಣಿ ದಡಕ್ಕೆ–ಬಂಡೆಗೆ–ಅಪ್ಪಳಿಸಿದ ಸದ್ದು. ಆಕ್ರಂದನ, ಆರ್ತನಾದ. ಅರ್ಧನಿಮಿಷ ಮಳೆ ಬಿರುಗಾಳಿಯ ವಿಕಟಾಟ್ಟಹಾಸ. ಆ ಧ್ವನಿ ಅಸ್ತಮಿಸಿದ ಬಳಿಕ ಕೆಲಕ್ಷಣ ನೀರವತೆ]

ಸಂಗ್ಯಾ : (ಪ್ರಜ್ಞೆ ತಪ್ಪಿದವರನ್ನು ಎಚ್ಚರಿಸುತ್ತ) ಒಡೆಯಾ, ತಾಯೀ.........

(ಉತ್ತರ ಬರದಿಂಲು ಗಟ್ಟಿಯಾಗಿ) ಒಡೆಯಾ........

ಆತ : (ಎಚ್ಚರಗೊಳ್ಳುತ್ತ) ಹಾಂ....ಯಾರು ?

ಸಂಗ್ಯಾ : ನಾನು ಸಂಗ್ಯಾ....

ಆತ : ಅವಳೆಲ್ಲಿ ?

ಸಂಗ್ಯಾ : ಇನ್ನೂ ಗ್ಯಾನ ಬಂದಿಲ್ಲ, ಒಡೆಯಾ....

ಆತ : ಚಿನ್ನಾ, ಚಿನ್ನಾ, ಏಳು ! ಇಲ್ನೋಡು !

ಆಕೆ : (ನಿಧಾನವಾಗಿ) ಹ್ಞಾ....ಯಾರು ?

ಆತ : ನಾನು ಚಿನ್ನಾ, ನಾನು !

ಆಕೆ : ಆ್ಹಂ....ನಾವಿನ್ನೂ ಬದುಕಿದೀವಾ ?

ಸಂಗ್ಯಾ : ನಾವೆಲ್ರೂ ಬದುಕಿದೀವಿ ತಾಯಿ.

ಆಕೆ : ದೋಣಿ.

ಸಂಗ್ಯಾ : ದೋಣಿ ಇಲ್ರಾ. ದೋಣಿ ಒಡೆದ್ಹೋಯ್ತು. ಆದ್ರೂ ಬಗ್ವಂತ ಎಲ್ಲಾರ್ನೂ ಪಾರುಮಾಡವ್ನೆ ಅಕಾ, ಬಚನ್–ಕೈತಾನ್–ಉಸ್ಮಾನ್ ಎಲ್ರೂ ಬರ್ತಾ ಅವರೆ.

ಕೈತಾನ್ : ಸಾರ್....

ಉಸ್ಮಾನ್ : ಸಾಬ್....

ಆತ : ಹ್ಞಹ್ಞ....ಇದೊಂದು ದುರ್ಘಟನೆ. ಉಶ್! ನಾವೀಗ ಎಲ್ಲಿದೀವಿ ಸಂಗ್ಯಾ?

ಸಂಗ್ಯಾ : ನಡುಗಡ್ಡೇಲಿ.

ಆತ : ನೋಡು ಚಿನ್ನ, ಚಂದ್ರೋದಯವಾಗಿದೆ. ಇದು ದ್ವೀಪ.

ಆಕೆ : ಹುಲಿ ಸಿಂಹ ಇಲ್ಲವಾ ಇಲ್ಲಿ ?

ಸಂಗ್ಯಾ : ಇಲ್ಲ ತಾಯಿ, ಆದರೆ....

ಆತ : ಏನು ?

ಸಂಗ್ಯಾ : ಜಲಕನ್ನೇರು ಇಲ್ಲಿ ವಾಸವಾಗಿರ್ತಾರೆ ಅಂತ ಕೇಳಿವ್ನಿ.

ಆಕೆ : ಜಲ ಕನ್ಯೆಯರು ! ಓ ! ನೋಡೋಕೆ ಸಿಗ್ತಾರೆ, ಅಲ್ವೆ ?

ಸಂಗ್ಯಾ : ತಿಳೀದು ತಾಯಿ. ಈ ತನಕ ಯಾರೂ ಇಲ್ಲಿಗೆ ಬಂದಿಲ್ಲ-ಕಂಡಿಲ್ಲ.

ಅಕೆ : ಓ. ಅದೃಷ್ಟ ಇದ್ರೆ ನಾವು ಕಂಡೇ ಕಾಣ್ತೀವಿ, ಅಲ್ಲವಾ ?

ಆತ : ಹ್ಞೂ ಚಿನ್ನ. ಬೆಳಗಾಗೋವರಗೂ ನಾವು ಇಲ್ಲಿರಬೇಕು. ಅಷ್ಟರೊಳಗೆ ಜಲಕನ್ಯೆಯರ ದರ್ಶನವಾಯಿತು.

[ಮೊಸಳೆಯ ಕೂಗು. ಕೈತಾನ್ : ಹಾ ! ಸಂಗ್ಯಾ : ಮೊಸಳೆ ! ಓಡಿ ಬಾ, ಬಚನ್ !]

ಆಕೆ : (ಗಾಬರಿಯಿಂದ) ಮೊಸಳೆ ! ?

ಆತ : ಎಲ್ಲಿ ನನ್ನ ಕೈಬಂದೂಕು ?

ಸಂಗ್ಯಾ : ಅ ಕಾ, ಮಗ್ಗುಲಾಗೆ.

ಬಚನ್ : ಸತ್ತಿತು !

ಆಕೆ : ಮೊಸಳೆ ! ಇಲ್ಲಿ ಜಲಕನ್ಯೆಯರು ಇರ್ತಾರೆ ಅಂದಿರಲ್ಲ !

ಸಂಗ್ಯಾ : ನನ್ನ ತಿಳ್ವಳ್ಕೆ ತಪ್ಪು ತಾಯಿ. ಇಲ್ಲಿರೋದು ಜಲಕನ್ನೇರಲ್ಲ- ಮೊಸಳೆಗ್ಳು. ಮುಕ್ಕ ಜನ ಇದನ್ನೇ ಜಲಕನ್ನೇರು ಅಂದ್ಕಂಡಿರ್ಬೈದು.

ಆತ : ಸದ್ಯಃ ಪೀಡೆ ತೊಲಗಿತಲ್ಲ !

ಆಕೆ : ಇನ್ನು ಮೊಸಳೆ ಇರೊಲ್ಲ ಅಂತೀರಾ ?

ಸಂಗ್ಯಾ : (ದುಗುಡವನ್ನು ಮುಚ್ಚಿಡಲಾಗದೆ) ಇರ್ತವೆ ತಾಯಿ ಇರ್ತವೆ ನನ್ನೊಡ್ಯಾ !

ಆಕೆ : ಅಯ್ಯೋ ದೇವರೇ !

ಆತ : ಇಷ್ಟರಲ್ಲೇ ಅವೆಲ್ಲಾ ಬರಬೌದು ಅಂತೀಯೇನು ?

ಸಂಗ್ಯಾ : (ಕಹಿಸತ್ಯವನ್ನು ಪ್ರಯಾಸದಿಂದ ನುಡಿಯುತ್ತಾ) ಇನ್ನು ಕೊಂಚ ಹೊತ್ನಲ್ಲಿ ಬಂದೇ ಬರ್ತವೆ.

ಆಕೆ : ನೆಲದ ಮೇಲಿದ್ದರೆ ಭಯವಿಲ್ಲ, ಅಲ್ವಾ ?

ಸಂಗ್ಯಾ : ಇವು ಕ್ರೂರ ಮೊಸಳೆಗ್ಳು ತಾಯಿ. ನೋಡಿ ಹೆಂಗದೆ ! ನೀರಲ್ಲಿ ಈಸಾಟ ನೆಲದಮೇಲೆ ಹರಿದಾಟ. ಅಲ್ಲಿ ಮೊಸಳೆ, ಇಲ್ಲಿ ಹೆಬ್ಬಾವು.

ಆತ : ಸಂಗ್ಯಾ ಈಗೇನು ಮಾಡೋಣ ?

ಸಂಗ್ಯಾ : ಆ ಪ್ರಾಣಿಗಳು ಬರೋಕ್ಮುಂಚೆ ಇಲ್ಲಿಂದ ನೇರ ಉತ್ತರಕ್ಕೆ ಹೊರಟರೆ ದಡ ಸೇರ್ಬೈದು. ಶಾನೆ ದೂರವಿಲ್ಲ.

ಆತ : ಒಂದು ಕಿಲೋಮೀಟರ್ ಇದ್ದೀತಾ ?

ಸಂಗ್ಯಾ : ಇದ್ದಾತು.

ಆಕೆ : ಹೇಗೇಂದ್ರೆ ಹೋಗೋದು ? ದೋಣಿ ಇಲ್ವಲ್ಲಾ.

ಸಂಗ್ಯಾ : ಈಸಬೇಕು ತಾಯಿ.

ಆಕೆ : ನನಗೆ ಈಸು ತಿಳೀದಲ್ಲ.

ಸಂಗ್ಯಾ : ನೀರಿಗಿಳಿದ್ಮ್ಯಾಕೆ ತಾನೇ ಈಸು ಬರುತ್ತವ್ಮ್ಮಣ್ಣಿ.

ಆತ : ನನ್ನ ಬೆನ್ನಮೇಲಿಂದ ಕತ್ತಿಗೆ ಆತುಕೋ ಚಿನ್ನಾ.

ಬಚನ್ : ಕೈ ಬಂದೂಕು ನನಗೆ ಕೊಡಿ. ನೀವೆಲ್ಲಾ ಮೊದಲು ಈಸಿ. ನಿಮ್ಮ ಹಿಂದೆ ನಾನಿರ್‍ತೀನಿ, ಮೊಸಳೆಗ್ಳು ಅಟ್ಟಿಸ್ಕೊಂಡು ಬಂದರೆ ಅವನ್ನ ಬಲಿ ತಗೋತೀನಿ.

ಆತ : ಮದ್ದು ತೀರಿದಾಗ ?

ಬಚನ್ : ಇಗೋ ಈ ಕೃಪಾಣ್

ಸಂಗ್ಯಾ : (ಅವಸರ ಪಡಿಸುತ್ತ) ನಡೀರಿ ಬಿರ್ರನೆ ಓಗ್ಬಿಡಾನಾ ನೀರಿಗಿಳಿದಾಗ ಸದ್ದಾಗಬಾರದು.

ಆತ : ಬಾ ಚಿನ್ನ

[ನೀರಿನ ಸಳಸಳ ಸಪ್ಪಳ ಈಸಾಟದ ಕ್ಷೀಣ ಧ್ವನಿ]

ಆತ : ಎಲ್ರೂ ಒಟ್ಟಾಗಿರೋಣ. ಸಂಗ್ಯಾ, ನೀನು ಒಂದಡಿ ಮುಂದೆ. ಸರಿಯಾದ ದಿಕ್ಕಿಗೆ ಸಾಗೋಣ.

[ದೂರದಿಂನ ಸುಂಟರಗಾಳಿ ಬಂದಂತೆ ಸದ್ದು]

ಆಕೆ : ಮತ್ತೆ ಬಿರುಗಾಳಿ ಬರೋಹಾಗಿದೆಯಲ್ಲ !

ಸಂಗ್ಯಾ : ನಡುಗಡ್ಡೆಯ ಆಚೆಯಿಂದ ಮೊಸಳೆಗ್ಳು ಬರ್ತಿರ್ಬೇಕು. ಬಿರ್ರನೆ ಈಸಿ....

ಆತ : ಬಚನ್ ಹುಷಾರಿ !

ಬಚನ್ : ಜೀ ಹ್ಞಾ....ಸಿದ್ಧವಾಗಿದೀನಿ !

[ಈಸಾಟ, ಮೊಸಳೆಗಳ ಕೂಗು. ಬಚನ್ ಬಾ ! ಬಾ ! ಬನ್ನಿ ಪಿಶಾಚಿಗಳೇ ! ಗುಂಡಿನ ಸಪ್ಪಳ. ಒಂದು ಎರಡು ಮೂರು....ಈಸಾಟ. ಗುಂಡು ತೀರಿದ ಬಂದೂಕಿನ ಸದ್ದು.]

ಬಚನ್ : ಗುಂಡು ಮುಗೀತು. ಈ ಬಂದೂಕು ಜಲದೇವಿಗೆ ಅರ್ಪಿತ ಇನ್ನು ಕೃಪಾಣ.

[ಮೊಸಳೆಗಳನ್ನು ಕಡಿಯುತ್ತ ಕತ್ತರಿಸುತ್ತ "ಉ್ಞ ! ಒಹ್ ! ಅಹ್ !"]

[ಮೊಸಳೆಗಳ ಚೀತ್ಕಾರ. ಅಸ್ತಮಿಸುವ ಸದ್ದು.]

ಸಂಗ್ಯಾ : ಬಚನ್ ಶೂರಶೇನ ! ಸತ್ತು ಉಳಿದ ಮೊಸಳೆ ಪಡೆ ಓಡ್ಹೋಗ್ತಾ ಅದೆ.

ಬಚನ್ : (ಸಹಾಯವನ್ನಪೇಕ್ಷಿಸುವ ಧ್ವನಿಯಲ್ಲಿ) ಸಂಗ್ಯಾ ಉಸ್ಮಾನ್ !....

ಸಂಗ್ಯಾ : ಬಚನ್‌ಗೆ ಗಾಯವಾಗ್ಯೆತೆ.

ಆತ : ಕೈತಾನ್ ! ಉಸ್ಮಾನ್ ! ಬಚನ್ನನ ಸಹಾಯಕ್ಕೆ ಹೋಗಿ

ಕೈತಾನ್ : ಉಸ್ಮಾನ್ ! ಹ್ಞಾ ಹಾಗೆ....ಹ್ಞ.... (ನೀರ ಸಪ್ಪಳ. ಕ್ಷಣಕಾಲದ ಬಳಿಕ)

ಸಂಗ್ಯಾ : ಬಚನ್‌ನನ್ನು ಎತ್ಕೊಂಡು ಈಸಿ ಬರ್ತ್ತವರೆ !

ಆಕೆ : ಬಹಾದ್ದೂರ್ ಬಚನ್ ! (ಈಸಾಟ)

ಆತ : ಅಕೋ, ದಡ ಬಂತು. (ಸರೋವರದಿಂದ ಮೇಲೆದ್ದು ದಂಡೆಯನ್ನೇರುತ್ತಾರೆ)

ಆಕೆ : ಉಶ್ಯಪ್ಪ !

ಆತ : ಬಚನ್ ! ಹೇಗಿದಿಯೋ ! ಬಹಳ ಗಾಯವೆ ?

ಬಚನ್ : ಏನೂ ಪರವಾಯಿಲ್ಲ. ಒಂದು ಮೊಸಳೆ ನನ್ನ ಕಾಲನ್ನು ಕಚ್ತು. ಅದರ ಮೂತಿಯನ್ನೇ ಕತ್ತರಿಸ್ದೆ.

ಆಕೆ : ಸೆರಗು ಹರಿದುಕೊಡ್ತೀನಿ. ಗಾಯಕ್ಕೆ ಪಟ್ಟಿಕಟ್ಬೋಣ.

ಸಂಗ್ಯಾ : ಹ್ಞಾ ತಾಯಿ....

ಆತ : (ನೀಳವಾಗಿ ಉಸಿರೆಳೆದು) ಇದೀಗ ಅನುಭವ !

ಸಂಗ್ಯಾ : ದಡದಗುಂಟ ಪಚ್ಚಿಮಕ್ಕೆ ಸ್ವಲ್ಪ ದೂರ—

ಆತ : ಒಂದು ಕಿಲೋಮೀಟರ್ ?

ಸಂಗ್ಯಾ : ಹ್ಞಾ. ಅಷ್ಟು ದೂರ ಹೋದರೆ ಇಸ್ರಾಂತಿ ಗೃಹ ಸಿಕ್ತೇತೆ.

ಆಕೆ : (ಸಡಗರದಿಂದ) ಹೌದಾ ? ಹಾಗಾದರೆ ಸೂರ್ಯೋದಯಕ್ಕೆ ಮುಂಚೆ ನಾವು ಅಲ್ಲಿರ್ತೀವಿ !

ಸಂಗ್ಯಾ : ಬೆಳ್ಳಿ ಮೂಡೋದರೊಳಗೆ ಗುರಿ ತಲಪ್ತೀವಿ, ತಾಯಿ !

ಆತ : ಬಚನ್ ! ನನ್ನ ಭುಜದಮೇಲೆ ನೀನು ಕೂತ್ಕೊ ! ನಿನ್ನನ್ನು ಹೊತ್ತುಕೊಳ್ಳೋ ಗೌರವಕ್ಕೆ ನಾನು ಪಾತ್ರನಾಗ್ತಿನಿ....

ಬಚನ್ : (ಗದ್ಗದಿತನಾಗಿ) ನಿಮ್ಮೆಲ್ಲರ ಪ್ರೀತಿಗೆ ಪ್ರತಿಯಾಗಿ ನಾನೇನು ಕೊಟ್ಟೇನು?

ಆತ : ಸಂಗ್ಯಾ ಮುಂದಾಗು ! ಸ್ವತಂತ್ರ ವಾತಾವರಣದಲ್ಲಿ ಉಸಿರಾಡ್ತಾ ಎದೆ ಉಬ್ಬಿಸಿಕೊಂಡು ದಾರಿ ನಡೆಯೋಣ.

ಸಂಗ್ಯಾ : ಹ್ಞ, ಒಡೆಯಾ. (ನಡೆಯುತ್ತಾ, ಹಾಡುತ್ತಾ)

ಮಾತಾಯಿ ಮಡಿಲೋ
ಯಾತಾರ ಭಯವೋ
ನೀಲಿ ನೀಲಿ ಆಕಾಸ
ಚಂದುಳ್ಳ ಚಪ್ಪಾರ
ಸಾವೀರ ನಕ್ಸತ್ರ—

ಆತ, ಆಕೆ, ಕೈತಾನ್, ಉಸ್ಮಾನ್, ಬಚನ್ :

ಮಾತಾಯಿ ಮಡಿಲೋ
ಯಾತಾರ ಭಯವೋ........

ಕರ್ನಾಟಕ ಸ್ವಾತಂತ್ರ್ಯ ಚೇತನ

ನಿವೇದಕ : ಕರ್ನಾಟಕ ಸಾತಂತ್ರ್ಯ ಪ್ರಿಯರ ಸ್ವಾಭಿಮಾನಿಗಳ ನಾಡೆಂಬುದು ಐತಿಹಾಸಿಕ ಸತ್ಯ. ಪರಾಕ್ರಮಶಾಲಿಗಳೆಂದು ಕನ್ನಡ ಜನ ಪ್ರಸಿದ್ಧರು. ಕ್ರಿ. ಪೂ. ೨೦೦ರಿಂದ ಕ್ರಿ. ಶ. ೩೦೦ರ ತನಕ ಕರ್ನಾಟಕ ರಾಜ್ಯವನ್ನಾಳಿದ ಶಾತವಾಹನರು, ಅನಂತರದ ಪ್ರಭುಗಳಾದ ಕದಂಬರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಭಾರತದ ವಿಸ್ತಾರ ಭೂ ಭಾಗಗಳನ್ನು ತಮ್ಮ ಬೆಳ್ಗೊಡೆಯ ಅಧೀನಕ್ಕೆ ತಂದ ಧೀರರು. ಇಮ್ಮಡಿ ಪುಲಿಕೇಶಿಯೂ ಕೃಷ್ಣದೇವರಾಯನೂ ಭಾರತದ ಮಹಾನ್ ವ್ಯಕ್ತಿಗಳ ಹಾರಕ್ಕೆ ಕರ್ನಾಟಕ ನೀಡಿರುವ ರತ್ನಗಳು.

ಗೀತ : "ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯನ್
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್, ಮಾಧವನೀತನ್ ಪೆರನಲ್ಲ...."

ನಿವೇದಕ : ಏಳನೆಯ ಶತಮಾನದ ಈ ಶಿಲಾಲೇಖ, ಕನ್ನಡ ಅರಸನೊಬ್ಬನ ಬಣ್ಣನೆ; ಕರ್ನಾಟಕದ ಧೀರೋದಾತ್ತ ಪರಂಪರೆಗೆ ಸಾಕ್ಷಿ. ಕರ್ನಾಟಕ ಹದಿನೆಂಟನೆಯ ಶತಮಾನದಲ್ಲಿ ಹೈದರಾಲಿಯ ನೇತೃತ್ವದಲ್ಲಿ ಮತ್ತೊಮ್ಮೆ ಕೀರ್ತಿಯ ಪರಾಕಾಷ್ಠೆಯನ್ನು ಮುಟ್ಟಿದಾಗ, ಪಾಶ್ಚಾತ್ಯ ಆಕ್ರಮಣಕಾರರ ಕರಿನೆರಳು ಅದರ ಮೇಲೆ ಬಿದ್ದಿತು. ಅವರು ಇಲ್ಲಿಂದ ಕಾಲ್ದೆಗೆಯುವಂತೆ ಮಾಡಲು ತನ್ನ ಆಯುಸ್ಸಿನುದ್ದಕ್ಕೂ ಹೈದರಾಲಿ ಹೋರಾಡಿದ.

ಹೈದರ್ : "ಇಂಗ್ಲಿಷರು ಇಲ್ಲಿಗೆ ಬಂದಿರುವುದು ತಮ್ಮ ಸರಕುಗಳ ವಿನಿಮಯಕ್ಕಾಗಿ. ಹಾಗೆ ಬಂದವರು ಈ ದೇಶದ ಸಂಪತ್ತನ್ನು ಸೂರೆಮಾಡುತ್ತಿದ್ದಾರೆ. ಇಲ್ಲಿನ ನಿವಾಸಿಗಳನ್ನೂ ಈ ದೇಶದ ಸಮೃದ್ಧಿಯನ್ನೂ ಇದರ ಕೀರ್ತಿಯನ್ನೂ ನಾಶಮಾಡುತ್ತಿದ್ದಾರೆ. ಹಿಂದೂಸ್ಥಾನದ ಐಶ್ವರ್ಯಕ್ಕೆ ಬದಲಾಗಿ ಅವರು ಇಲ್ಲಿಗೆ ತಂದುಕೊಡುತ್ತಿರುವುದು ತಮ್ಮ ದುಷ್ಟ ಚೇಷ್ಟೆಗಳನ್ನು, ರೋಗರುಜಿನಗಳನ್ನು ! ಹಿಂದೂಸ್ಥಾನದ ಅರಸರು ಎಚ್ಚೆತ್ತು ಒಗ್ಗಟ್ಟಾಗದೇ ಹೋದರೆ ಈ ದೇಶಕ್ಕೆ ಉಳಿಗಾಲವಿಲ್ಲ !"

ನಿವೇದಕ : ರಾಷ್ಟ್ರೀಯ ಐಕ್ಯದ ಹಾಗೂ ಸಂಘಟಿತ ಹೋರಾಟದ ಅಗತ್ಯವನ್ನು ಹೈದರ್ ಮನಗಂಡ. ಆ ಗುರಿ ಸಾಧನೆಗಾಗಿ ಆಯುಸ್ಸಿನುದ್ದಕ್ಕೂ ದುಡಿದ.

ಹೈದರ್ : (ಬಳಲಿದ ಧ್ವನಿಯಲ್ಲಿ, "ಕುಮಾರ ಟೀಪೂ, ನನ್ನ ಪೂರ್ವಜರಿಂದ ನಾನು ಪಡೆಯದ ಒಂದು ಸಾಮ್ರಾಜ್ಯವನ್ನು ನಿನಗೆ ಬಿಟ್ಟು ಹೋಗುತ್ತಿದ್ದೇನೆ.... ಔರಂಗಜೇಬನ ಮರಣಾನಂತರ ಹಿಂದೂಸ್ಥಾನ, ಏಷ್ಯಾಖಂಡದ ಸಾಮ್ರಾಜ್ಯಗಳ ಶ್ರೇಣಿಯಲ್ಲಿ ತನಗಿದ್ದ ಸ್ಥಾನವನ್ನು ಕಳೆದುಕೊಂಡಿದೆ. ಈ ಸುಂದರ ಭೂಮಿಯು ಪ್ರಾಂತ ಪ್ರಾಂತಗಳಾಗಿ ತುಂಡರಿಸಲ್ಪಟ್ಟಿದೆ. ಈ ಪ್ರಾಂತಗಳು ಪರಸ್ಪರರ ಮೇಲೆ ಯುದ್ಧ ಮಾಡುತ್ತಿವೆ. ಅಸಂಖ್ಯ ಗುಂಪುಗಳಾಗಿ ವಿಂಗಡಿಸಲ್ಪಟ್ಟಿರುವ ಜನತೆಯ ರಾಷ್ಟ್ರಪ್ರೇಮ ನಶಿಸಿಹೋಗಿದೆ....ನೀನು ನಿವಾರಿಸಬೇಕಾದ ಅತಿದೊಡ್ಡ ಆತಂಕವೆಂದರೆ, ಐರೋಪ್ಯರ ಅಸೂಯೆ. ಈ ದಿನ ಹಿಂದೂಸ್ಥಾನದಲ್ಲಿ ಇಂಗ್ಲಿಷರು ಸರ್ವಶಕ್ತರಾಗಿದ್ದಾರೆ. ಯುದ್ಧಮಾಡಿ ಅವರನ್ನು ದುರ್ಬಲ ಪಡಿಸುವುದು ಅಗತ್ಯವಾಗಿದೆ. ಸಮರ ತಂತ್ರದಲ್ಲಿ ಐರೋಪ್ಯರು ಕುಶಲರು. ಅವರಿಗಿದಿರಾಗಿ ಅವರ ಅಸ್ತ್ರಗಳನ್ನೇ ಬಳಸು ... ನಿನ್ನಲ್ಲಿ ಪರಾಕ್ರಮವನ್ನು ನಾನು ಪ್ರಚೋದಿಸಬೇಕಾಗಿಲ್ಲ. ನನ್ನ ಮಗ್ಗುಲಲ್ಲಿ ನೀನು ಹೋರಾಡಿರುವುದನ್ನು ಅನೇಕ ಸಲ ಕಂಡಿದ್ದೇನೆ. ನೀನು ನನ್ನ ಕೀರ್ತಿಯ ವಾರಸುದಾರನಾಗುವೆ."

ನಿವೇದಕ : ತಂದೆಯ ಧೀರ ಪರಂಪರೆಯನ್ನು ಮಗ ಟೀಪೂ ಮುಂದುವರಿಸಿದ. ಮೂವತ್ತರ ಹರೆಯದಲ್ಲಿ ಅಧಿಕಾರಕ್ಕೆ ಬಂದ ಈ ರಣಾಗ್ರೇಸರ, ಸಾಮ್ರಾಜ್ಯವಾದಿಗಳಿಗೆ ಸಿಂಹಸ್ವಪ್ನನಾದ. ಹಿಂದೂಸ್ಥಾನದ ಇತರ ಅರಸರೊಡನೆ ಐಕ್ಯವನ್ನು ಬೆಸೆಯಲು ಆತ ಪ್ರಯತ್ನಿಸಿದ. ಹಾಯಿ ದೋಣಿಗಳಲ್ಲಿ ರಾಯಭಾರಿಗಳನ್ನು ದೂರದ ಫ್ರಾನ್ಸ್ ದೇಶಕ್ಕೆ ಕಳುಹಿಸಿಕೊಟ್ಟ. ಮಹಾಸೇನಾನಿ ನೆಪೋಲಿಯನ್ನನೊಡನೆ ಸಖ್ಯ ಬೆಳೆಸಿದ. ತುರ್ಕಿ, ಅಫ್‌ಘಾನಿಸ್ತಾನಗಳ ಜತೆ ಪತ್ರವ್ಯವಹಾರ ನಡೆಸಿದ. ಭಾರತದ ಸ್ವಾತಂತ್ರ್ಯ ಅವನ ಜೀವನದ ಉಸಿರಾಯಿತು.

ಟೀಪೂ : "ಎರಡು ನೂರು ವರ್ಷ ಕುರಿಯಾಗಿ ಬಾಳುವುದಕ್ಕಿಂತ ಎರಡು ದಿನ ಹುಲಿಯಾಗಿ ಬಾಳುವುದು ಮೇಲು....ಇಂಗ್ಲಿಷರು ತಮ್ಮ ದುಷ್ಟ ಹಂಚಿಕೆಯ ಸಾಧನೆಗಾಗಿ ಹಟತೊಟ್ಟುದೇ ಆದರೆ, ಈದ್ ಹಬ್ಬದಲ್ಲಿ ಕುರಿಗಳನ್ನು ಕತ್ತರಿಸುವಂತೆ ಅವರನ್ನು ನಿರ್ನಾಮ ಮಾಡಲಾಗುವುದು. ಅವರ ನಿರೀಕ್ಷೆಗಳ ಹಡಗು ವಿನಾಶದ ಕಡಲಿನಲ್ಲಿ ಮುಳುಗಿ ಹೋಗುವುದು. ಶಸ್ತ್ರಬಲದಿಂದ ಈ ರಾಜ್ಯವನ್ನು ನಾಶಪಡಿಸಲು ಅವರು ಯೋಚಿಸುತ್ತಿದ್ದಾರೆ. ಆದರೆ ಅವರೇ ಭೂಮಿಯ ಮೇಲಿಂದ ಸಂಪೂರ್ಣವಾಗಿ ಅಳಿಸಿ ಹೋಗುವರು."

ನಿವೇದಕ : ಹಿಂದೂಸ್ಥಾನದ ಪ್ರಮುಖ ರಾಜರಿಗೆ ತಮ್ಮ ಸ್ವಾರ್ಥವೇ ಮುಖ್ಯವಾಗಿತ್ತು. ಟೀಪೂ ಏಕಾಕಿಯಾಗಿ ಹೋರಾಡಿದ.

ಟೀಪೂ : "ಹಾಸಿಗೆಯ ಮೇಲೆ ಪವಡಿಸುವುದನ್ನು ನಾನು ಬಿಟ್ಟುಕೊಟ್ಟಿದ್ದೇನೆ. ಇಂಗ್ಲಿಷರನ್ನು ಈ ದೇಶದಿಂದ ಹೊರಕ್ಕೋಡಿಸುವವರೆಗೂ ಹಾಸಿಗೆಯ ಮೇಲೆ ನಾನಿನ್ನು ಮಲಗಲಾರೆ !"

(ರಣಕೋಲಾಹಲದ ಕ್ಷೀಣ ಹಿನ್ನೆಲೆ–ತೋಪುಗಳ ಗರ್ಜನೆ, ಲಾವಣಿ Fade in)

ಲಾವಣಿಕಾರ :

ಮಾಡಿದರ್ ಮೋಸ || ಮರಾಟ ರಾಜ || ಹೈದರಾಬಾದ್ ನವಾಬರು
ಒಂದಾಗಿ || ಕೊಡಗಿನ ರಾಜನು ಕೊಟ್ಟನು ದಾರಿಯ
ಇಂಗ್ಲಿಷ್ ಫವುಜಿಗೆ ಗುರಿಯಾಗಿ ||
ಉಂಡಮನೆಗೆ ಎರಡೆಣಿಸಿದರು ಸೇರಿ ಟೀಪುವಿನ
ದವಲತ್ ಹಾಳಾಗೆ || ಮೀರ್‌ಸಾದಕ್ ಮಾತು ಮುಂದಾಗಿ ||
ಕಂಡರ್ ವೈರಿಯ ಖಂಡಿತ ಕಡಿಯುವ || ಮಂತ್ರಿಗಳೆಲ್ಲರು
ಮರೆಯಾಗಿ ! ದಂಡುದಾಳಿ ಮರೆಮಾಚಿದರ್ ಶಿವಶಿವ
ಪಟ್ಣವೆಲ್ಲ ಬರಿಬಯಲಾಗಿ....
ಅಜಬ್ ತಮಾಷ ಈಸ್ಟ್ ಇಂಡಿಯಾ ಕಂಪನಿ
ಇಂಗ್ಲಿಷರ ನೆಲೆ ಆದೀತು || ಸುತ್ತ ಕಾವೇರಿ || ನಡುವೆ
ಶ್ರೀರಂಗಪಟ್ಣ ಸುಲ್ತಾನ್ ದವಲತ್ತು ಹೋದೀತು. ...
ಅಜಬ್ ತಮಾಷ ಈಸ್ಟ್ ಇಂಡಿಯ........" (Fade out)

ನಿವೇದಕ : ಮರಾಟರೂ ನಿಜಾಮನೂ ಇಂಗ್ಲಿಷರೊಡನೆ ಸಹಕರಿಸಿ ಟೀಪೂವಿನ ಪರಾಭವಕ್ಕೆ ಕಾರಣರಾದರು. ಆದರೆ ಟೀಪೂ ಮಾಡಿದ ಸುದ್ದಿ ನಾನಾಫಡ ನವೀಸನಿಗೆ ತಲುಪಿದಾಗ ಆತ ತಲ್ಲಣಿಸಿ ಹೋದ.

ನಾನಾಫಡನವೀಸ್ : "ಟೀಪೂವಿನ ಕತೆ ಮುಗಿಯಿತು. ಬ್ರಿಟಿಷರ ಶಕ್ತಿ ಹೆಚ್ಚಿದೆ. ಇಡಿಯ ಪೂರ್ವ ಅವರದಾಗಿದೆ. ಪುಣೆಯೇ ಅವರ ಮುಂದಿನ ಮಿಕ. ದುರ್ದಿನ ಗಳು ಬರುತ್ತಿರುವಂತೆ ಭಾಸವಾಗುತ್ತಿದೆ. ವಿಧಿಯಿಂದ ತಪ್ಪಿಸಿಕೊಳ್ಳಲಾರೆ ವೆಂದು ತೋರುತ್ತಿದೆ."

ನಿವೇದಕ : ಎಂದು, ನಾನಾ ಉದ್ಗಾರವೆತ್ತಿದ. ಮೈಸೂರು ಹುಲಿಗೆ ವೀರಮರಣ ಪ್ರಾಪ್ತವಾದದ್ದು ಸಾವಿರದ ಏಳುನೂರ ತೊಂಭತ್ತೊಂಭತ್ತನೆಯ ಇಸವಿಯಲ್ಲಿ. ಮೂರನೆಯ ವರ್ಷ ಮತ್ತೊಬ್ಬ ವೀರ ಮಳೆಗಾಲದ ಮಿಂಚಿನಂತೆ ಕಾಣಿಸಿ ಕೊಂಡ. ಆತ ಚನ್ನಗಿರಿಯ ಧೊಂಡಿಯಾವಾಘ್. ಅವನ ಸಮರ ನೈಪುಣ್ಯದ ಇದಿರು ಆಂಗ್ಲರು ತತ್ತರಿಸುವಂತಾಯಿತು.

ವೆಲ್ಲೆಸ್ಲಿ : ಧೊಂಡಿಯಾನನ್ನು ನಾನು ಸೆರೆಹಿಡಿಯುವೇನೋ ಇಲ್ಲವೋ ದೇವರೇ ಬಲ್ಲ.

ನಿವೇದಕ : —ಎಂದು, ಕರ್ನಲ್ ಪೆಲ್ಲಿಕ್ಸಿ ಪರಿತಪಿಸಿದ. ಕೊನೆಯಲ್ಲಿ ಧೊಂಡಿಯಾನಿಗೆ ಸೋಲಾಯಿತು... ಮುಂದೆ ಸಾವಿರದ ಎಂಟುನೂರ ಹತ್ತೊಂಭತ್ತರಲ್ಲಿ ಕೊಪ್ಪಳದ ವೀರಪ್ಪ ಬಂಡಾಯದ ಬಾವುಟಪೆತ್ತಿದ. ಇಪ್ಪತ್ತರಲ್ಲಿ ಬೀದರದ ಜನ ಶಿವಲಿಂಗಪ್ಪ-ತಿರುಮಲರಾಯ-ಮೇಘಶ್ಯಾಮರ ನೇತೃತ್ವದಲ್ಲಿ ಸಂಕೋಲೆಗಳನ್ನು ತೊಡೆದುಹಾಕುವ ಪ್ರಯತ್ನ ಮಾಡಿದರು ; ವಿಫಲರಾದರು...ಅನಂತರ ನಾಲ್ಕು ವರ್ಷಗಳಾದ ಮೇಲೆ, ಭಾರತ ಸ್ವಾತಂತ್ರ್ಯದ ಬೆಳ್ಳಿ ಚಿಕ್ಕೆ ಕಿತ್ತೂರಿನಲ್ಲಿ ಕಂಡು ಬಂತು. ದತ್ತಕ ಸ್ವೀಕಾರಕ್ಕೆ ಅಡ್ಡಿಯಾಗಿ ಕಿತ್ತೂರನ್ನು ಕಬಳಿಸಲು ಬಂದ ಆಂಗ್ಲರನ್ನು ರಾಣಿ ಚೆನ್ನಮ್ಮ ಪ್ರತಿಭಟಿಸಿದಳು.

ಲಾವಣಿಕಾರ : (Fade in)

ಕಿತ್ತೂರ ಚೆನ್ನಮ್ಮ ಸುತ್ತೂರ ಬಿಡಿತ್ಯಾಗಿ
ಕತ್ತಿ ಕವಚಗಳ ಉಡುಪುಟ್ಟೋ
ಕತ್ತಿ ಕವಚಗಳ ಉಡುಪುಟ್ಟೋ—ಅಬ್ಬರದಿ
ಬತ್ತಲಗುದರಿಯ ಜಿಗಿದೇರೋ....
ಗಂಡನ್ನ ಕಳಕೊಂಡು ಬೆಂಡಾದ ಚೆನ್ನಮ್ಮ
ಗಂಡಾಗಿ ರಣಕ ಇಳಿದಾಳೊ
ಗಂಡಾಗಿ ರಣಕ ಇಳಿದಾಳೊ—ನಾಡ್ನೆನ್ನ
ಫುಂಡ ಬಂಡಾಯ ಹಿಂಡಾಕೋ ....(Fade out)

ನಿವೇದಕ : ಧಾರವಾಡದ ಅಸಿಸ್ಟೆಂಟ್ ಕಲೆಕ್ಟರ್ ವಾಕರ್‌ಫುಲ್ಲರ್‌ಟನ್ ಮೇಲಿನವರಿಗೆ ಮೊರೆಯಿಟ್ಟ.

ಫುಲ್ಲರ್‌ಟನ್ : " Ride-Ride
Army Officer whatever at Belgaum
Speed, all speed
For God's sake send a force immediately
without delay to Kittur

The artillery are cut to pieces. Mr. Thackeray supposed to be killed—Capt. Black killed and cut to pieces—Sewell expected to die—Dighton killed and Thackeray's two assistants, Elliot and Stevenson not heard of – For God's sake send immediately."

ನಿವೇದಕ : ಮುಂಬಯಿ, ಸೋಲಾಪುರ, ಮದರಾಸು, ಮೈಸೂರುಗಳಿಂದ ಆಂಗ್ಲರ ದಂಡುಗಳು ಬಂದು ಕಿತ್ತೂರನ್ನು ಮುತ್ತಿದುವು.

ಲಾವಣಿಕಾರ : (Fade in) ಕೆಂಪು ಮೂರಿಯ ದಂಡು ಸಿಂಪಾಗಿ ಸಿಡಿದೀತೊ !
ರಪ್ಪರಪ್ಪೆಂದು ಓಡೀತು
ರಪ್ಪರಪ್ಪೆಂದು ಓಡೀತು
ರಪ್ಪರಪ್ಪೆಂದು ಓಡೀತು ...(Fade out)

ನಿವೇದಕ : ಚೆನ್ನಮ್ಮ ವೀರಾವೇಶದಿಂದ ಕಾದಿದಳು. ಆದರೆ ಕೋಟೆಯೊಳಗಿನ ದ್ರೋಹಿಗಳು ಸಿಡಿಮದ್ದನ್ನು ಹಾಳುಗೆಡವಿ ಕಿತ್ತೂರಿನ ಸೇನೆಯ ಬೆನ್ನಲ್ಲಿ ತಿವಿದರು. ಕೋಟೆ ಆಂಗ್ಲರ ಕೈವಶವಾಯಿತು. ರಾಣಿ ಸೆರೆ ಸಿಕ್ಕಳು. ಸೆರೆ ಮನೆಯಲ್ಲೀ ಐದು ವರ್ಷಗಳ ಬಳಿಕ ಆಕೆ ಮರಣ ಹೊಂದಿದಳು. ಆ ಐದಾರು ವರ್ಷಗಳ ಅವಧಿಯಲ್ಲಿ ಸಾಮಾನ್ಯನೊಬ್ಬ ಸೇನಾನಿಯಾಗಿ ಮಾರ್ಪಟ್ಟ. ಆತನೇ ಆಂಗ್ಲರ ಆಳ್ವಿಕೆಗೆ ಕುಠಾರಪ್ರಾಯನಾದ ಸಂಗೊಳ್ಳಿ ರಾಯಣ್ಣ.

ಗಾಯಕ : (Fade in) "ಅಡಿಯ ಮುಂದಿಡೆ ಸ್ವರ್ಗ | ಅಡಿಯ ಹಿಂದಿಡೆ ನರಕ |
ಅಡಿಗಶ್ವಮೇಧಫಲ | ಸ್ವಾಮಿಕಾರ್ಯಕ್ಕೆ
ಮಡಿಯಲೇಬೇಕು | ಸರ್ವಜ್ಞ || (Fade out)

ನಿವೇದಕ : ಸಂಗೊಳ್ಳಿಯ ರಾಯನಾಯಕ ಸರಕಾರೀ ಖಜಾನೆಗಳನ್ನು ಕೊಳ್ಳೆ ಹೊಡೆದ. ಠಾಣಾಗಳನ್ನು ತಡೆಹಿಡಿದ. ಸಾರಿಗೆ ಸಂಪರ್ಕಗಳನ್ನು ಕಡಿದ. ಆಂಗ್ಲ ತುಕಡಿಗಳ ಚಲನವಲನಕ್ಕೆ ಅಡ್ಡಿಯಾದ. ಅವನು ನಡೆಸಿದ್ದು ಬುಡಮೇಲು ಮಾಡುವ ಚಳುವಳಿ, ಗೆರಿಲ್ಲಾ ಯುದ್ಧ. ಅಂಥವನನ್ನು ಮೋಸದಿಂದ ಹಿಡಿದರು ; ಹಿಡಿದು ಗಲ್ಲಿಗೇರಿಸಿದರು. ಇದಾದ ಆರು ವರ್ಷಗಳ ಮೇಲೆ ಕೊಡಗರ ಇಂಗದ ಸಾಮ್ರಾಜ್ಯ ದಾಹಕ್ಕೆ ಕೊಡಗು ತುತ್ತಾಯಿತು. ಯುವಕ ದೊರೆ ಚಿಕವೀರರಾಜನನ್ನು ರಾಜ್ಯದಿಂದ ಹೊರಕ್ಕಟ್ಟಿದರು. ಅಪರಂಪಾರಸ್ವಾಮಿ ಕಲ್ಯಾಣಪ್ಪರ ನಾಯಕತ್ವದಲ್ಲಿ ನಡೆದ ಬಂಡಾಯ ಗಳನ್ನು ಹತ್ತಿಕ್ಕಿದರು....ಮುಂದಿನ ವರ್ಷಗಳಲ್ಲಿ ಬಾದಾಮಿಯಲ್ಲಿ ಬಂಡಾಯದ ಭೇರಿ ಮೊಳಗಿತು ; ವೀರ ಬೇಡರ ಹಲಗಲಿಯಲ್ಲಿ ದಂಗೆ ಕೆನ್ನಾಲಿಗೆ ಚಾಚಿತು....

ಸಾವಿರದ ಎಂಟುನೂರ ಐವತ್ತೇಳು. ಇಂಗ್ಲಿಷರ ಕ್ರೂರ ಹಿಡಿತದಿಂದ ಪಾರಾಗಲು ಭಾರತದ ಆದ್ಯಂತ ರಾಜರೂ ಪ್ರಜೆಗಳೂ ಸಿಡಿದೆದ್ದರು. ಆ

ಸ್ವಾತಂತ್ರ್ಯ ಸಂಗ್ರಾಮದ ಅಧ್ವರ್ಯುಗಳಾದರು. ಝಾನ್ಸಿಯ ರಾಣಿ ಲಕ್ಷ್ಮೀಬಾಯಿ, ನಾನಾ ಸಾಹೇಬ, ತಾಂತ್ಯಾಟೋಪಿ....ಭಾರತೀಯ ಹೂಂಕಾರ ಠೇಂಕಾರಗಳು ಕನ್ನಡ ನಾಡಿನಲ್ಲೂ ಪ್ರತಿಧ್ವನಿಸಿದುವು. ಶೂರ ಬೇಡರ ರಾಜ್ಯ, ಶೂರಪುರ—ಸುರಪುರ. ಯುವಕರಾಜ ವೆಂಕಟಪ್ಪನಾಯಕನನ್ನು ಬಂಡಾಯಗಾರನೆಂದು ಇಂಗ್ಲಿಷರು ಸೆರೆ ಹಿಡಿದರು.

ವೆಂಕಟಪ್ಪನಾಯಕ: "ಸೆರೆ ಸಿಕ್ಕ ಮೇಲೆ ನಿಕೃಷ್ಟ ಬೇಡನೂ ಜೀವಿಸಿರಲಾರ. ರಾಜನಾದ ನಾನು ಜೀವಿಸುವುದುಂಟೆ?"

ನಿವೇದಕ: —ಎಂದ, ಆ ಮಹಾನುಭಾವ ದಾಸನಾಗಿರಲಾರೆ ಎಂದು ಸಾವನ್ನು ಆತ ಅಪ್ಪಿಕೊಂಡ. ಅದಾದಮೇಲೆ ಉತ್ತರ ಕರ್ನಾಟಕದ ನರಗುಂದ ಪ್ರತಿಭಟಿಸಿತು. ಅರಸು ಭಾಸ್ಕರರಾವ್ ಬಾಬಾ ಸಾಹೇಬ ಹೋರಾಡಿದ, ಹತನಾದ. ಅವನ ತಾಯಿ ಯಮುನಾಬಾಯಿ, ಪತ್ನಿ ಸಾವಿತ್ರಿಬಾಯಿ ಮಲಪ್ರಭಾ ನದಿಗೆ ಹಾರಿ ಜೀವತ್ಯಾಗ ಮಾಡಿದರು. ಆ ಕಾಲದಲ್ಲಿ ಅಮರಕೀರ್ತಿಯನ್ನು ಗಳಿಸಿದ ಇನ್ನೊಬ್ಬ ಕನ್ನಡ ಕೇಸರಿ ಮುಂಡರಗಿ ಭೀಮರಾಯ. ಉಜ್ವಲ ರಾಷ್ಟ್ರಾಭಿಮಾನಿಯಾದ ಮಧ್ಯಮ ವರ್ಗದ ಈ ವೀರ, ಆಂಗ್ಲರ ವಿರುದ್ಧ ದಂಡು ಕಟ್ಟಿದ. ಕೊಪ್ಪಳದ ಕೋಟೆಯನ್ನು ಕೈವಶಪಡಿಸಿಕೊಂಡ. ಕೊಪ್ಪಳವನ್ನು ಮತ್ತೆ ವಶಪಡಿಸಿಕೊಳ್ಳಲು ಹೆಚ್ಚು ಸಂಖ್ಯೆಯಲ್ಲಿ ಇಂಗ್ಲಿಷರ ಸೇನೆ ಬಂದಾಗ, ಅಸಹಾಯ ಶೂರನಾಗಿ ಕಾದಿ, ಪರಾಭವದ ಘಳಿಗೆಯಲ್ಲಿ ತನಗೆ ತಾನೇ ಗುಂಡಿಟ್ಟುಕೊಂಡ. ಐವತ್ತೇಳು-ಐವತ್ತೆಂಟರ ಘಟನೆಗಳ ಅನಂತರ ಹಿಂದೂಸ್ಥಾನದಲ್ಲಿ ಸಾಮ್ರಾಜ್ಯಶಾಹಿ ಕೇಕೆ ಹಾಕಿ ನಕ್ಕಿತು.

[**ವಿಷಾದ—ಶೋಕ ಸೂಚಕ ವಾದನ**]

ನಿವೇದಕ: ವಿಪ್ಲವಕಾರಿಯಾದ ಹತ್ತೊಂಭತ್ತನೆಯ ಶತಮಾನ ಕಳೆದು ಇಪ್ಪತ್ತನೆಯದು ಆರಂಭವಾಯಿತು. ಎರಡು ದಶಕಗಳು ದಾಟುವ ವೇಳೆಗೆ ಸ್ವಾತಂತ್ರ್ಯ ಸಂಗ್ರಾಮದ ಶಂಖಧ್ವನಿ ಮತ್ತೆ ಕೇಳಿ ಬಂತು.

ತಿಲಕ: "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು!"

ನಿವೇದಕ: ಲೋಕಮಾನ್ಯ ತಿಲಕರು.

ಗಾಂಧಿಜಿ: "ಸತ್ಯ ಅಹಿಂಸೆ ನಮ್ಮ ಅಸ್ತ್ರಗಳು; ಸಾಮೂಹಿಕ ಸತ್ಯಾಗ್ರಹ ನಮ್ಮ ಸಮರವಿಧಾನ."

ನಿವೇದಕ: ಮಹಾತ್ಮ ಗಾಂಧಿಯವರು....ಮಾರಕ ಅಸ್ತ್ರಗಳಿದ್ದರು ನಿಸ್ಸಹಾಯಕರಾದ ಭಾರತೀಯ ಜನತೆಯ ಕೈಯಲ್ಲಿ ಶ್ರೇಷ್ಠತಮ ಶಸ್ತ್ರವಾಯಿತು ಸತ್ಯಾಗ್ರಹ. ನಿಶ್ಚೇಷ್ಟಿತವಾಗಿ ಬಿದ್ದಿದ್ದ ಜನಕೋಟಿಯ ಮೈಯಲ್ಲಿ ನವ ಚೇತನದ ಸಂಚಾರವಾಯಿತು.

ಗಾಯಕ : (Fade in) "ನಡೆಮುಂದೆ, ನಡೆಮುಂದೆ
ನುಗ್ಗಿ ನಡೆ ಮುಂದೆ
ಜಗ್ಗದೆಯೆ, ಕುಗ್ಗದೆಯೆ
ನುಗ್ಗಿ ನಡೆಮುಂದೆ...." (Fade out)

ನಿವೇದಕ : ಬಾಯಲ್ಲಿ ಸ್ವಾತಂತ್ರ್ಯ ಮಂತ್ರ, ಕೈಯಲ್ಲಿ ತ್ರಿವರ್ಣ ಧ್ವಜ. 'ಸ್ವರಾಜ್ಯ', 'ಸ್ವದೇಶೀ', 'ವಿದೇಶೀ ವಸ್ತುಗಳಿಗೆ ಬಹಿಷ್ಕಾರ ; 'ರಾಷ್ಟ್ರೀಯ ಶಿಕ್ಷಣ', 'ಹರಿಜನೋದ್ಧಾರ'—ಇದು ಗಾಂಧೀಯುಗದ ಸಂದೇಶ. ದೇಶ ಪಾಂಡೆ ಗಂಗಾಧರರಾಯರು, ಹರ್ಡೇಕರ್ ಮಂಜಪ್ಪನವರು, ಕಾರ್ನಾಡ್ ಸದಾಶಿವರಾಯರು, ಮೈಸೂರಿನ ಯುವಕರನೇಕರು ಈ ನಾಡಿನಲ್ಲಿ ಸ್ವಾತಂತ್ರ್ಯ ಜ್ಯೋತಿಯನ್ನು ಹೊತ್ತಿಸಿದರು. ಜನತೆ ಜೀವತೈಲವನ್ನೆರೆದು ಆ ಜ್ಯೋತಿಯನ್ನು ನಂದಾದೀಪವಾಗಿ ಮಾಡಿತು. ಸಾವಿರದ ಒಂಭೈನೂರ ಇಪ್ಪತ್ತನಾಲ್ಕರಲ್ಲಾದ ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನ, ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದ ಅದ್ಭುತವಾದೊಂದು ಅಧ್ಯಾಯಕ್ಕೆ ನಾಂದಿ ಯಾಯಿತು. ಸಾವಿರದ ಒಂಭೈನೂರ ಮೂವತ್ತರಲ್ಲಿ ದಂಡೀಯಾತ್ರೆ ಕೈಗೊಂಡ ಗಾಂಧಿಜೀಯ ಕರೆಗೆ ಓಗೊಟ್ಟಿತು ಕರ್ನಾಟಕ. ಅಂಕೋಲೆಯಲ್ಲಿ ಉಪ್ಪಿನ ಸತ್ಯಾಗ್ರಹವಾಯಿತು. ಆಳುತ್ತಿದ್ದವರು ಲಾಠಿಗಳಿಂದ ತಲೆಯೊಡೆದರು. ಕಾರಾಗೃಹಗಳು ತುಂಬಿದುವು. ಸತ್ಯಾಗ್ರಹಿಗಳು ಮಾತ್ರವಲ್ಲ, ಅವರಿಗೆ ಅನ್ನ ನೀರಿತ್ತು ನೆರವಾದವರ ಮೇಲೂ ಸರಕಾರ ಕೈಮಾಡಿತು. ಅಂಥವರಲ್ಲೊಬ್ಬರು ಅಂಕೋಲೆಯ ಶಾಮರಾವ್ ಕೃಷ್ಣ ಶೆಣೈ. ಅವರ ದಸ್ತಗಿರಿಯಾದಾಗ ಪತ್ನಿ ಅವರಿಗೆ ಆರತಿ ಬೆಳಗಿದರು. ಅವರ ತಾಯಿ,

ತಾಯಿ : "ಮಗನೇ! ಈ ಗೌರವ ನಿನಗೆ ಸಂದಿದೆ ಅಂತ ನನಗೆ ಸಂತೋಷವಾಗಿದೆ, ನಿಜವಾಗಿಯೂ ತುಂಬಾ ಸಂತೋಷವಾಗಿದೆ. ನೀನು ಸಾಧಿಸಲು ಪ್ರಯತ್ನಿಸುತ್ತಿರುವ ಮಹಾ ಧ್ಯೇಯಕ್ಕೆ ಜಯವಾಗಲಿ !"

ನಿವೇದಕ : —ಎಂದು ಆಶೀರ್ವದಿಸಿದರು. ಶಿರಸಿ ಸಿದ್ದಾಪುರಗಳಲ್ಲಿ ಕರನಿರಾಕರಣೆಯ ಘೋಷ ಮೊಳಗಿತು. ಅರಣ್ಯ ಸತ್ಯಾಗ್ರಹ ನಡೆಯಿತು. ಬನವಾಸಿಯ ರಾಮಕೃಷ್ಣ ತಿಪ್ಪಾಶಾಸ್ತ್ರಿ ಮರ ಕಡಿದಾಗ ಬಂಧಿತರಾದರು. ಆಗ ಅವರ ಮಡದಿ,

ಸ್ತ್ರೀ : "ನನ್ನ ಯಜಮಾನರು ಶ್ರೀಕೃಷ್ಣಪರಮಾತ್ಮನು ಹುಟ್ಟಿದ ಪವಿತ್ರ ಸ್ಥಳಕ್ಕೆ ಹೋಗುತ್ತಿದ್ದಾರೆ. ಆ ಸ್ಥಳಕ್ಕೆ ಅವರನ್ನು ಹಿಂಬಾಲಿಸುವಂತೆ ನನಗೆ ಶಕ್ತಿ ಸಾಮರ್ಥ್ಯಗಳನ್ನು ಕೊಡು ಅಂತ ಶ್ರೀಕೃಷ್ಣನನ್ನು ನಾನು ಪ್ರಾರ್ಥಿಸುತ್ತೇನೆ"

ನಿವೇದಕ: —ಎಂದು ನೆರೆದ ಜನಸ್ತೋಮ ಮಿಡಿದರು ನುಡಿದರು. ಇಂತಹ ಮಕ್ಕಳನ್ನು ಹೆತ್ತ ಹೊತ್ತ ನಾಡು ಸ್ವಾಭಿಮಾನದಿಂದ ಮೆರೆಯಿತು. ನವೋತ್ಸಾಹ ತುಂಬಿದ ವಾತಾವರಣದಲ್ಲಿ ಜನ ಉಸಿರಾಡಿದರು....ಆದರೆ ಸದಾಕಾಲವೂ ಏಕಪ್ರಕಾರವಾಗಿ ಬಿರುಸಿನ ಹೋರಾಟ ನಡೆಯಿತು ಎಂದಲ್ಲ. ಇಳಿತ ಭರತಗಳಿದ್ದುವು. ಇಂಥದರಲ್ಲಿ ಬಂತೊಂದು ದಿನ—ಸಾವಿರದ ಒಂಭೈನೂರ ನಾಲ್ವತ್ತೆರಡರ ಆಗಸ್ಟ್ ಒಂಭತ್ತು.

ಧ್ವನಿ ೧: "ಮಾಡಿರಿ ಇಲ್ಲವೇ ಮಡಿಯಿರಿ !"

ಧ್ವನಿ ೨: "ಭಾರತದಿಂದ ತೊಲಗಿ !"

ಧ್ವನಿ ೩: "ಇಂಕ್ವಿಲಾಬ್ ಜಿಂದಾಬಾದ್ !"

ಧ್ವನಿ ೪: "ಜಯ್ ಹಿಂದ್ !"

ನಿವೇದಕ: ಆಳುತ್ತಿದ್ದ ಪರಕೀಯ ಸರಕಾರದ ಜಂಘಾಬಲ ಉಡುಗಿತು. ಆದರೂ ಬ್ರಿಟಿಷ್ ಪ್ರಧಾನಿ ಮೊಂಡು ಹಟ ಬಿಡಲಿಲ್ಲ.

ಚರ್ಚಿಲ್: "We mean to hold our own I have not become His Majesty's First Minister to preside over the liquidation of the British Empire.

ನಿವೇದಕ: ಭಾರತೀಯ ಜನಕೋಟಿ ತಮ್ಮ ಛಲ ಬಿಡಲಿಲ್ಲ. ಕನ್ನಡಿಗರು ಬೇರೆ ಯಾರಿಗೂ ಕಡಮೆ ಇಲ್ಲದಂತೆ ಹೋರಾಡಿದರು. ಹುಬ್ಬಳ್ಳಿಯ ಹುಡುಗ ನಾರಾಯಣ ದೋಣಿಗೆ ಗುಂಡಿನೇಟು ತಗಲಿ ಪ್ರಾಣೋತ್ಕ್ರಮಣವಾಗುವ ವೇಳೆ ಡಾಕ್ಟರು ಕೇಳಿದರು:

ಡಾಕ್ಟರು: "ನಿನಗೆ ಏನಾದರೂ ಬೇಕೆ ಮಗೂ ?"

ನಿವೇದಕ: ಆ ಪ್ರಶ್ನೆಗೆ ಹುಡುಗ ಉತ್ತರಿಸಿದ:

ಹುಡುಗ: "ಬೇಕು. ಸ್ವಾ–ತಂ–ತ್ರ್ಯ...."

ನಿವೇದಕ: ಉತ್ತರ ಕರ್ನಾಟಕದ ಯುವಕ ಸತ್ಯಾಗ್ರಹಿ ಮೈಲಾರ ಮಹದೇವಪ್ಪ ತನ್ನ ಸಂಗಡಿಗರೊಡನೆ ಬ್ರಿಟಿಷ್ ಆಡಳಿತ ಯಂತ್ರವನ್ನು ಸ್ಥಗಿತಗೊಳಿಸಲು ದುಡಿದ. ಆ ಹೋರಾಟದ ನಡುವೆ ವೈರಿಯ ಗುಂಡೊಂದು ಅವನನ್ನು ಬಲಿ ತೆಗೆದುಕೊಂಡಿತು. ಮಹದೇವಪ್ಪ ಹುತಾತ್ಮನಾದ.

[ಕ್ಷೀಣವಾಗಿ ಹಿನ್ನೆಲೆಯಲ್ಲಿ 'ವಂದೇಮಾತರಂ ಸುಜಲಾಂ ಸುಫಲಾಂ ಆಮು ಕ್ರಮೇಣ ಬಲಗೊಳ್ಳುವಂತೆ]

ಭಾರತದಾದ್ಯಂತ ನಡೆದ ಅಸಂಖ್ಯ ಬಲಿದಾನದ ಫಲವೇ ಸಾವಿರದ ಒಂಭೈನೂರ ನಾಲ್ವತ್ತೇಳನೆಯ ಆಗಸ್ಟ್ ಹದಿನೈದರಂದು ಈ ರಾಷ್ಟ್ರದಲ್ಲಾದ ಸ್ವಾತಂತ್ರ್ಯ ಸೂರ್ಯೋದಯ ! ಆ ಅಮೃತಘಳಿಗೆಗಾಗಿ ಎರಡು ಶತಮಾನ ಕಾಲ ದುಡಿದ ಪ್ರಬಲ ಶಕ್ತಿಗಳಲ್ಲಿ ಒಂದು, ಕರ್ನಾಟಕ ಸ್ವಾತಂತ್ರ್ಯಚೇತನ !

[ವಂದೇಮಾತರಂ ಗೀತದ ಮುಕ್ತಾಯ]

೬

ಬಿಡಿ ಬರೆಹ

○ ಪುಟ್ಟ ಲೇಖನಕ್ಕೆ ಒಂದು ಪುಟ ಸಾಕು ; ವಸ್ತುವಿನ ವಿಕಾಸ ಅರ್ಥಪೂರ್ಣವಾಗಿ ಆಗಬೇಕಾದರೆ ಐದಾರು ಪುಟಗಳಾದರೂ ಬೇಕು ; ಹತ್ತು ಹನ್ನೆರಡು ಪುಟಗಳ ವ್ಯಾಪ್ತಿ ದೊರೆತರೆ ಆ ಬರೆಹ ಸಮಗ್ರವಾಗುತ್ತದೆ. ಒಮ್ಮೊಮ್ಮೆ ಹತ್ತು–ಹದಿನಾಲ್ಕು ಮಿನಿಟುಗಳು ಆಕಾಶವಾಣಿ ಭಾಷಣಕ್ಕೂ ಲೇಖನದ ಅಚ್ಚುಕಟ್ಟು ಸಾಧ್ಯವಾಗಬಹುದು. ಈ ಪ್ರಕಾರಕ್ಕೂ ಪ್ರಬಂಧಕ್ಕೂ ಹತ್ತಿರದ ನಂಟು.

ವಿಷಯ ವಿವಾದಾತ್ಮಕವಾದರೆ ಓದುಗರ ಸಂಖ್ಯೆ ಹೆಚ್ಚುತ್ತದೆ, ಸ್ವಾಭಾವಿಕವಾಗಿ.

ನನ್ನ ಬಿಡಿ ಬರೆಹಗಳಿಂದ ಈ ವಿಭಾಗಕ್ಕಾಗಿ ಆರಿಸಿಕೊಂಡಿರುವ ಬರೆಹಗಳು ಆರು. ಇವು ಮತ್ತು ಇಂಥವು ಇನ್ನೂ ಹಲವು ' ನಿರಂಜನ : ಮೂವತ್ತು ಸಂಪುಟಗಳಲ್ಲಿ ' ಸರಣಿಯ ೧೬ನೆಯ ಸಂಪುಟದಲ್ಲಿವೆ.

ಬಿಡುಗಡೆಯ ಬೆಲೆ

ನಾವು ಇಂದು ಕ್ರಾಂತಿಯುಗದಲ್ಲಿ ಜೀವಿಸುತ್ತಿದ್ದೇವೆ. ಕ್ರಾಂತಿಯ ಸೌರಭವನ್ನು ಹೊತ್ತಿರುವ ವಾಯುವಿನಲ್ಲೇ ಉಸಿರಾಡುತ್ತಿದ್ದೇವೆ. ಹಲವು ಉಪನದಿಗಳೊಂದಾಗಿ, ಹಿರಿಯ ಪ್ರವಾಹವಾಗಿ ರೂಪುಗೊಂಡು, ನಿಶ್ಚಿತಗುರಿಯತ್ತ ಬಲು ರಭಸದಿಂದ ಧಾವಿಸುವಂತೆ, ವಿಭಿನ್ನ ಮತ–ಧೋರಣೆಗಳೂ ವಿವಿಧ ಮನೋಭಿಪ್ರಾಯಗಳೂ ಸಮ್ಮಿಲಿತವಾಗಿ ಜನಜೀವನದ ಉತ್ಕೃಷ್ಟ ದೆಸೆಯತ್ತ ವೇಗದಿಂದ ಸಾಗುತ್ತಿವೆ. ಈ ಮಹಾಸಂಭವಕ್ಕೆ ಜ್ಞಾನಿಗಳೂ ಚಿಂತಕರೂ ಅವರ ಅಸಂಖ್ಯ ಅನುಯಾಯಿಗಳೂ ಕಾರಣಕರ್ತರು. ಗುರಿಯು ಸಾಧಿಸಲ್ಪಟ್ಟ ಬಳಿಕ ಮುಂದಿನ ಇತಿಹಾಸಕಾರರು ಈ ಕಾರಣಕರ್ತರನ್ನು ಕುರಿತು ಗೌರವದ ನುಡಿಗಳನ್ನಾಡುವರು; ಮೆಚ್ಚುಗೆಯ ಮಾತನ್ನು ಬರೆಯುವರು.

ಸಾಹಿತಿಗಳು ಜ್ಞಾನಿಗಳ ಮತ್ತು ಚಿಂತಕರ ಪಂಗಡದಿಂದ ಹೊರಗಾದವರಲ್ಲ. ಹಾಗೆಂದೇ ಮುಂದಿನ ಚರಿತ್ರೆಗಳು ಅವರ ಸ್ಮರಣೆಯನ್ನು ಮಾಡುವುವು. ಶಕ್ತಿಯಲ್ಲೂ ಪ್ರಭಾವದಲ್ಲೂ ಕತ್ತಿಗಿಂತ ತಾನು ಹಿಂದಿಲ್ಲವೆಂಬುದನ್ನು ಹಲವೊಮ್ಮೆ ಲೆಕ್ಕಣಿಕೆ ತೋರಿಸಿ ಕೊಟ್ಟಿದೆ. ಸಾಹಿತ್ಯ ಜನಜೀವನದ ನಿಲುವುಗನ್ನಡಿಯಾಗಿ ನಿಂತಿದೆ. ಜನತೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದೆ; ಅವಕ್ಕೆ ರೂಪುಗೊಟ್ಟಿದೆ. ರಷ್ಯದಲ್ಲೊಬ್ಬ ಟಾಲ್‌ಸ್ಟಯ್–ಒಬ್ಬ ಗಾರ್ಕಿ, ಇಂಗ್ಲೆಂಡಿನಲ್ಲೊಬ್ಬ ಡಿಕೆನ್ಸ್, ಫ್ರಾನ್ಸಿನಲ್ಲೊಬ್ಬ ವಾಲ್ಟೇರ್. ಜರ್ಮನಿಯಲ್ಲಿ ಅರ್ನೆಸ್ಟ್ ಟಾಲರ್ ಇವರು ಆಗಿ ಹೋದರು: ತಮ್ಮ ಸೇವೆಯನ್ನು ಮಾಡಿ, ಅಮರ ಕೃತಿಗಳನ್ನು ಹಿಂದೆ ಬಿಟ್ಟು ನಡೆದರು.

ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಜೀವನಸಾಹಿತ್ಯ ಇಂದು ಕಂಡುಬರುತ್ತಿದೆ ತರುಣ ಸಾಹಿತಿಗಳ ಒಲವು ಆ ಕಡೆಗೆ ಬಾಗಿದ್ದು ಆ ಕಾರ್ಯರಂಗದಲ್ಲಿ ಅವರು ದುಡಿಯುತ್ತಿರುವರು. ಭಾರತದಲ್ಲಿ ಜೀವನಸಾಹಿತ್ಯ ಹೆಚ್ಚನ್ನು ಸಾಧಿಸಿಲ್ಲ. ಜನತೆಯ ಮನಸ್ಸನ್ನು ಅದರೆಡೆಗೆ ಸೆಳೆಯುವುದು ಸುಲಭವಾದರೂ ಆ ಯತ್ನ ಬಿರುಸಾಗಿ ನಡೆದಿಲ್ಲ. ಕನ್ನಡ ಸಾಹಿತ್ಯವನ್ನಷ್ಟನ್ನೇ ತೆಗೆದು ನೋಡಿದರೆ ಜೀವನ ಸಾಹಿತ್ಯದ ಬೆಳವಣಿಗೆಯನ್ನು ಕಂಡು ಹಿಗ್ಗುವಂತೇನೂ ಇಲ್ಲ. ಅಭಿವೃದ್ಧಿಯೇ ಆದುದಿಲ್ಲ

ಎಂದರೂ ತಪ್ಪಾಗಲಾರದು. ಆದರೆ ಬರಿಯ ಇಪ್ಪತ್ತು-ಇಪ್ಪತ್ತೈದು ವರ್ಷಗಳಲ್ಲಿನ ಕನ್ನಡ ಕಿರುಗತೆಗಳ ವಿಸ್ತೃತ ಕಾರ್ಯಕ್ಷೇತ್ರವನ್ನು ನೋಡಿದ ಬಳಿಕ ಜೀವನ ಸಾಹಿತ್ಯದ ಭವಿತವ್ಯದ ಕುರಿತು ಚಿಂತಿಸಬೇಕಾದ ಪ್ರಮೇಯವೊದಗುವುದಿಲ್ಲ. ಐತಿಹಾಸಿಕ, ಪೌರಾಣಿಕ ಮತ್ತು ಪತ್ತೇದಾರಿ ಕಾದಂಬರಿಗಳ ಉತ್ಕರ್ಷೆಯ ಕಾಲ ಕಳೆದುಹೋಗಿ ಬಹಳ ಸಮಯವಾಯಿತು. ಸಮಾಜದ-ಧರ್ಮದ ತೆರೆಯ ಮರೆಯಲ್ಲಿನ ಆಗು-ಹೋಗುಗಳನ್ನು ಬೈಲಿಗೆಳೆದು ಚಿತ್ರಿಸುವ ಕೃತಿಗಳನ್ನು ಕೆಲವು 'ನಿರ್ದಯ' ಲೆಕ್ಕಣಿಕೆಗಳು ಬರೆದಿವೆ. ಸಮಾಜದ ಬುಡಕಟ್ಟನ್ನೇ ಅಡಿಮೇಲಾಗಿಸುವ 'ಸಾಹಸಿಗಳು' ಸಾಹಿತ್ಯ ಕ್ಷೇತ್ರದಲ್ಲಿ ಕಂಡುಬರುತ್ತಿದ್ದಾರೆ. ರಾಜಕೀಯ ಇತ್ತೀಚೆಗೆ ಸಾಹಿತ್ಯ ಕ್ಷೇತ್ರವಲ್ಲಿ ಸೇರಿಕೊಂಡು, ರಾಜಕಾರಣ ಮತ್ತು ಸಾಹಿತ್ಯಗಳ ಕಡುಮಿಶ್ರಣವನ್ನೀಗ ಆತುರದಿಂದ ವಾಚಕವರ್ಗ ಆಸ್ವಾದಿಸುತ್ತಿದೆ.

ಇಂತಹ ಕೆಲವು ಕೃತಿಗಳಲ್ಲಿ ಶ್ರೀ ವಡಗೇನಹಳ್ಳಿ ಅಶ್ವಥನಾರಾಯಣರಾಯರ 'ಬಿಡುಗಡೆಯ ಬೆಲೆ' ಎಂಬ ಗ್ರಂಥಕ್ಕೆ (ಮನೋಹರ ಗ್ರಂಥಮಾಲೆಯ ಸಪ್ತತ್ತರನೆಯ ಕುಸುಮ) ಒಂದು ವಿಶಿಷ್ಟ ಸ್ಥಾನವಿದೆ.

ಮಾತೃಭೂಮಿಯ ಸೇವೆಗಾಗಿ

ತನ್ನ ತಾಯ್ನಾಡಿನ ಬಂಧವಿಮೋಚನೆಗಾಗಿ ತ್ಯಾಗಿಯಂತೆ ದುಡಿದ ಅನಾಮಧೇಯನಾದ ಅಹಿಂಸಾತ್ಮಕ ಯೋಧನೊಬ್ಬನ ಆತ್ಮವೃತ್ತವು 'ಬಿಡುಗಡೆಯ ಬೆಲೆ'ಯ ವಸ್ತು. 'ಕಾವ್ಯದಲ್ಲಿ ಹೇಳಬೇಕಾದುದನ್ನು ಕವಿ-ಕಲೋಪಾಸಕ ತಾಪತ್ರಯಗಳಲ್ಲಿ ಕಲಿಯುತ್ತಾನೆ' ಎಂದು ಷೆಲ್ಲಿ ಕವಿ ನುಡಿದುದನ್ನು ಪ್ರೊ|| ಗೋಕಾಕರು ತಮ್ಮ ಮುನ್ನುಡಿಯಲ್ಲಿ ಎತ್ತಿ ಬರೆದಿರುವರು. ಹೌದು; ಶ್ರೀ ಅಶ್ವಥನಾರಾಯಣರು ಅನುಭವಿಸಿದ್ದಾರೆ. ತಮ್ಮ ಅನುಭವವನ್ನು ಬಿಚ್ಚಿ ಬರೆದಿದ್ದಾರೆ.

ಬರಿಯ ಕಲ್ಪನಾ ಸಮ್ರಾಜ್ಯದಲ್ಲಿ ಅವರು ವಿಹರಿಸಿಲ್ಲ. ಸತ್ಯಗಳನ್ನು—ನಂಬಲಿಕ್ಕಾಗದ ಸತ್ಯಗಳನ್ನು—ಅವರು ಹೇಳಿದ್ದಾರೆ; ಸ್ವಯಂಸೇವಕನ ದಿನಚರಿಯ ರೂಪದಲ್ಲಿ ಉಜ್ವಲ ಕೃತಿಯೊಂದನ್ನು ರಾಯರು ಬರೆದಿದ್ದಾರೆ.

'ಬಿಡುಗಡೆಯ ಬೆಲೆ'ಯಲ್ಲಿ ವಸ್ತುವಿಗೆ ಪ್ರಾಧಾನ್ಯವಿದೆ. ಮಹಾತ್ಮಾ ಗಾಂಧಿಯವರ ಆತ್ಮಕಥೆಯಾದ 'ಸತ್ಯಶೋಧನೆ'ಯನ್ನು ಅವರ ಭಕ್ತರು ಗೀತೆಯಂತೆ ಪಠಿಸಬಹುದು. ಪಂ. ಜವಾಹರರ ಆತ್ಮವೃತ್ತವನ್ನೆತ್ತಿಕೊಂಡು ಉತ್ಸಾಹಿ ತರುಣರು "ಭಾರತದ ಏಕಮಾತ್ರ ಅನಭಿಷಿಕ್ತ ಸಾಮ್ರಾಟನ ಆತ್ಮಕಥೆ! ನಮ್ಮ ಬೈಬಲ್!" ಎನ್ನಬಹುದು; ಇಲ್ಲವೆ, ಹಾಲಿವುಡ್ಡಿನ ಚಲಚ್ಚಿತ್ರ ನಿರ್ಮಾಪಕರು, "ಪಾಲ್ ಮುನಿ, ನೆಹರುವಿನ ಪ್ರತಿಮೂರ್ತಿಯಾಗಿದ್ದಾನೆ. ಆ ಆತ್ಮಕಥೆಯನ್ನು ಚಿತ್ರಿಸೋಣ!" ಎನ್ನಬಹುದು. ಆದರೆ ದೇಶಸೇವೆ ಮಾಡುವುದೆಲ್ಲ ಮಹಾತ್ಮ-ನೆಹರೂರಂತೆ ಪ್ರಖ್ಯಾತರಾಗಿ, ಜನರ ಹೃದಯಾಧಿದೇವತೆಗಳಾಗಿ ರಾರಾಜಿಸುವುದರಲ್ಲಿ ಪರ್ಯವಸಾನ

ಗೊಳ್ಳುವುದಿಲ್ಲ ಎಂಬುದನ್ನು ಅರಿಯದವರೆಷ್ಟು ಮಂದಿ? ಅನಾಮಧೇಯ ಸೇವಕ ರಾಗಿ, ನಿಃಸ್ವಾರ್ಥಿಯಾಗಿ, ತ್ಯಾಗಿಗಳಾಗಿ, ದೇಶದ ಸೇವೆಯಲ್ಲಿ ಅವರ್ಣನೀಯ ಯಾತನೆಗಳನ್ನನುಭವಿಸಿ, ತಮ್ಮ ಸಮಾಧಿಯ ಮೇಲೆ ಕೀರ್ತಿಯ ಗುಡಿಯೊಂದನ್ನೂ ಕಟ್ಟಿಸದೆ-ಹಾರಿಸದೆ, ಬಂಧು-ಬಳಗವನ್ನು ಸಂಕಟದ ಮಡುವಿನಲ್ಲದ್ದಿ ಮೃತರಾದವ ರೆಷ್ಟು ಮಂದಿ? 'ಅ' ವರ್ಗದಲ್ಲಿ ಸೆರೆಮನೆಯ ಸುಖವನ್ನನುಭವಿಸಿ, ತಿಂಗಳಿಗೆ ಮೂವತ್ತು-ಐವತ್ತು ರೂ.ಗಳಿಗೆ ಕಡಿಮೆಯಿಲ್ಲದೆ ಮನೆಯಿಂದ ಹಣ ತರಿಸಿ ವೆಚ್ಚ ಮಾಡಿ ದೇಶಸೇವೆ ಮಾಡುವುದು ತ್ಯಾಗವೇನೋ ನಿಜ, ಆದರೆ ಮನೆಯಲ್ಲಿ ಹೆಂಡತಿ-ಮಕ್ಕಳು-ತಾಯಂದಿರನ್ನು ಉಪವಾಸ ಬೀಳಿಸಿ-ಗೋಳಾಡಿಸಿ-ತುರಂಗದ 'ಬುರಾ' 'ಬುರಾಕಿ'ನಲ್ಲಿ ಕುಳಿತು, 'ತಿಕ್ಕಿ-ಛಿಕ್ಕಿ'ಗಳನ್ನು ತಿಂದು, ರೋಗಪೀಡಿತರಾಗುವುದಕ್ಕೂ ತ್ಯಾಗವೆಂಬ ಹೆಸರು ಕೊಡಬಹುದೇನು? ಅಂತಹರ ಬಿಡುಗಡೆಯ ಬೆಲೆಯೇನು? 'ಕ' ವರ್ಗದ ಸತ್ಯಾಗ್ರಹಿಯೊಬ್ಬನ ಮಾರ್ಮಿಕ-ಹೃದಯ ಭೇದಕ ಜೀವನ ಚಿತ್ರ ವೊಂದು 'ಬಿಡುಗಡೆಯ ಬೆಲೆ'ಯಲ್ಲಿದೆ.

ಭಾವುಕ ಬರೆಹಗಾರ

ಶ್ರೀ ಅಶ್ವಥನಾರಾಯಣರಾಯರು ತತ್ವವಾದಿ; ಭಾವುಕರೂ ಹೌದು. ಅವರು ಕವಿಯಾಗಿ ಕಲ್ಪನ ಸಾಮ್ರಾಜ್ಯದಲ್ಲಿ ಮನಬಂದಂತೆ ವಿಹರಿಸಬಲ್ಲರು. ಆದರೆ ತಮ್ಮ ಕವಿತಾಶಕ್ತಿಯನ್ನು, ಪಂಡಿತವೃಂದಕ್ಕಾಗಿಯೇ ಬರೆಯಲ್ಪಡುವ ಬೃಹತ್ ಕಾವ್ಯದ ರಚನೆಗೆ ಉಪಯೋಗಿಸಿಲ್ಲ. ಜನಸಾಮಾನ್ಯರಿಗೆ ತಾವು ಹೇಳುತ್ತಿರುವುದು ನೇರವಾಗಿ ಹೋಗಿ ನಾಟುವಂತೆ ಮಾಡುವುದಕ್ಕಾಗಿ, ಭಾವುಕನ ಕನಸುಗಳನ್ನು ಯಥಾರ್ಥತೆಯ ಮತ್ತು ಪರಿಷ್ಕಾರದ ಹೊದಿಕೆಯಲ್ಲಿ ಮುಚ್ಚಿ ತೋರಿಸುವುದಕ್ಕಾಗಿ, ತಮ್ಮ ಪ್ರತಿಭೆಯ ಸಹಾಯವನ್ನು ಲೇಖಕರು ಪಡೆದಿದ್ದಾರೆ.

...."ಇಪ್ಪತ್ತು ಶತಮಾನಗಳು ಕಳೆದು ಹೋಗುತ್ತಿವೆ. ಇದಾರು ಇಲ್ಲಿ ಈ ಮೂರ್ತಿ? ಮೋರೆಯಲ್ಲಿ ದೃಢ ನಿರ್ಧಾರ ತೋರುತ್ತ ಮೈಯಲ್ಲಿ ವಯಸ್ಸಿನ ಭಾರವನ್ನು ಹೊರುತ್ತ ಕೈಯಲ್ಲಿ ದಂಡವನ್ನು ಹಿಡಿದು ನಮ್ಮ ಮುಂದೆ ಸಾಗಿ ಹೋಗುತ್ತಿರುವ ಈ ದುರ್ಬಲ ಮರ್ತ್ಯಮೂರ್ತಿ ಇದಾರು? ಹಿಂದೆ ಅನುಸರಿಸಿ ಬರುತ್ತಿರುವ ಧವಳ ವಸ್ತ್ರಧಾರಿಗಳಾದ ಈ ವೀರಭಟರೊಡನೆ ಈತ ಎಲ್ಲಿ ಹೋಗು ತ್ತಿದ್ದಾನೆ? ಈತನ ನಾರುಡೆಯನ್ನು ನೋಡಿಯೂ ಗುಂಪುಗುಂಪಾಗಿ ಸುತ್ತುವರಿದು ಹಾದಿಯುದ್ದಕ್ಕೂ ಅಪಾರವಾದ ಗೌರವ ಪುರಸ್ಕಾರಗಳನ್ನು ಜನರು ಏಕೆ ತೋರುತ್ತಿದ್ದಾರೆ....?"

ಸಾಮಾನ್ಯಮಂದಿ ಇದನ್ನು ಓದಿ ನೋಡಲಿ; ಓದಿಸಿ ಕೇಳಲಿ; ಅದರ ಮಾಧುರ್ಯವನ್ನು ಸವಿಯುವುದಕ್ಕೆ ಅವರಿಗೆ ಹೆಚ್ಚು ಹೊತ್ತು ಬೇಕಿಲ್ಲ. ಆ ಮಾತು ಗಳು ಅವರಿಗೆ ನಾಟಕದ ನಾಯಕ ಆತ್ಮಗತ ನುಡಿದುಕೊಂಡಂತೆ.

ಗೊಮ್ಮಟೇಶ್ವರನ ಮುಖಮುದ್ರೆಯನ್ನು ನೋಡುತ್ತ, "ಸಂಜೆ ಶಾಂತಿ ಪ್ರಸಾದಗಳ ಮೂರ್ತಿಯಾಗಿದ್ದ; ಈಗ ಆನಂದೋದ್ರೇಕವು ಕಣ್ಣಲ್ಲಿ ತುಂಬಿ ಸೂಸುತ್ತಿದೆ" ಎನ್ನುತ್ತಾರೆ.

ಈ ಭಾವುಕ ಜೀವಿ ತಾವು ಎಂದೆಂದಿಗೂ ನೆನಪಿನಲ್ಲಿಡುವ ಚಿತ್ರವನ್ನು ನೋಡಿದ್ದು, ನಮಗದನ್ನು ನುಡಿಗಳಲ್ಲಿ ಚಿತ್ರಿಸಿ, ನಾವೂ ಅದನ್ನು ಆಜನ್ಮ ಮರೆಯದಂತೆ ಮಾಡುತ್ತಾರೆ. "ಬಾಡಿ ಬಾಗಿದ ನಿರಾಡಂಬರ ಜೀವಿಗಳು—ಗಂಡಸರು ಹೆಂಗಸರು—ತಮ್ಮ ತಲೆ ಭುಜಗಳ ಮೇಲೆ ಕೊಂಬೆ ಟೊಂಗೆಗಳನ್ನು ಹೊತ್ತು ಈ ಪವಿತ್ರ ಶಾಂತಿಯುದ್ಧದಲ್ಲಿ ಗೆದ್ದು ವಿಜಯಪತಾಕೆಗಳನ್ನು ಹಾರಿಸಿದಂತೆ ಬರುವ ಚಿತ್ರ...." ಎಂದು ಅವರು ನೋಡುತ್ತಾರೆ; ನಮ್ಮನ್ನು ಕರೆಕರೆದು, ಆಗ್ರಹದ ಆಹ್ವಾನವಿತ್ತು ನೋಡ ಹೇಳುತ್ತಾರೆ.

ಸ್ವಯಂಸೇವಕರು ದುಡಿಯುವುದು ಆಶೆಯನ್ನು ಜೀವನದ ಉಸಿರಾಗಿಟ್ಟು ಕೊಂಡು; ಶುಭಪ್ರತೀಕ್ಷೆಯನ್ನು ಮಾಡಿಕೊಂಡು; ಆದರೆ ತಾವು ಉತ್ತ ಹೊಲದಲ್ಲಿ ಬೆಳೆಯಾಗಲಿಲ್ಲವೆಂದರೆ ಯಾರಿಗೆ ದುಃಖವಾಗಬೇಡ! ಸ್ವಯಂಸೇವಕರು ಸೆರೆಮನೆ ಸೇರುವುದಕ್ಕೆ ಮೊದಲು ದುಡಿದದ್ದೊಂದು ಕಾರ್ಯಕ್ಷೇತ್ರದಲ್ಲಿ, ಮರಳಿಬಂದಾಗ ಅಲ್ಲಿನ ಜನತೆ ಜೀವಂತವಿರುವ ಒಂದು ಲಕ್ಷಣವೂ ತೋರದೆ ಹೋದರೆ, ಅವರಿಗೆ ಎಂಥಹ ವ್ಯಥೆಯಾಗಬೇಡ! ಗ್ರಂಥದ ಕೊನೆಯಲ್ಲಿ ಭಾವುಕನ ಅದೊಂದು ಭಾವನೆ ಮೂರ್ತಿವೆತ್ತು ನಿಂದಿದೆ.

ಆದರ್ಶ ಸ್ವಯಂಸೇವಕ

ಇಲ್ಲೀಗ ಯಾರ ಅನುಭವಗಳ ಪರಿಚಯವಾಗುತ್ತಿದೆ? ಶ್ರೀ ಅಶ್ವಥನಾರಾಯಣ ರಾಯರದೆ? ಇಲ್ಲವೆ ತಾಯ್ನಾಡಿನ ಸ್ವಾತಂತ್ರ್ಯವೊಂದಲ್ಲದೆ ಬೇರಾವ ಪ್ರತಿಫಲಾಪೇಕ್ಷೆಯನ್ನು ಬಯಸದೆ ದುಡಿದ ಸ್ವಯಂಸೇವಕನದೆ? ಅದರಲ್ಲಿ ವಿವಾದ ಬೇಕಾಗಿಲ್ಲ. ಲೇಖಕರ ಖ್ಯಾತಿಯಿಂದಾಗಿ ಅವರ ಅನುಭವಗಳಿಗೂ ಈ ಪುಸ್ತಕಕ್ಕೂ ಪ್ರಾಧಾನ್ಯ ದೊರಕುವಂತಾಗಿದ್ದರೆ, ಬಿಡುಗಡೆಯ ಬೆಲೆ ನನ್ನ ಮೆಚ್ಚಿನ ಗ್ರಂಥವಾಗುವುದು ಅಸಂಭವವಿತ್ತು. ಆದರೆ ಸ್ವಾತಂತ್ರ್ಯಾಭಿಲಾಷಿಗಳಾಗಿರುವ ಕೋಟಿಜನ ಭಾರತೀಯರಿಗೆ ಇಂದು ಬೇಕಾಗಿರುವುದು ಆದರ್ಶ ಸ್ವಯಂಸೇವಕನೊಬ್ಬನ ಜೀವಿತ, ಶಿಸ್ತು ಮೊದಲಾದುವು. ಅದನ್ನು ಲೇಖಕರು ಒದಗಿಸಿಕೊಟ್ಟಿದ್ದಾರೆ. ಕಾಮ್ರೇಡ್ P.... ಇಲ್ಲವೆ ಪ....ಮತ್ತು ಲೇಖಕರೊಳಗೆ ತಾದಾತ್ಮ್ಯ ಕಂಡುಬಂದರೆ ಅದರಿಂದ ಆಶ್ಚರ್ಯ ಪಡಬೇಕಾದುದೂ ಇಲ್ಲ.

೧೯೩೦ರ ಕ್ರಾಂತಿವರ್ಷದಲ್ಲಿ ಒಬ್ಬರ ಬಳಿಕೊಬ್ಬರಾಗಿ ಖಾದಿಯ ಬಟ್ಟೆಬರೆಗಳನ್ನು ತೊಟ್ಟುಕೊಂಡರು. ಆಗ ಸ್ವಯಂಸೇವಕ ತನ್ನಲ್ಲಿ ತಾನೇ ಗುಣಗುಣಿಸಿ ಕೊಳ್ಳುತ್ತಿದ್ದಾನೆ, 'ಇದು ಕಾಲದ ಮಹಿಮೆ: ಹೀಗೇ ಸಾಗಿದರೆ ಸಾಕು ಮುಂದೆ.'

ಆತ ಒಮ್ಮೆಲೆ ಹೊಸತೊಂದು ಸೃಷ್ಟಿಗಾಗಿ ಹಾತೊರೆಯುವುದಿಲ್ಲ....ಆದರೆ ಆ ಆಶಯ ಪೂರ್ಣವಾಗುವುದು, ಕಾರ್ಯಸಾಧನೆಯಾಗುವುದು ಎಂಬುದನ್ನು ಆತ ನಂಬಿದ್ದಾರೆ.

ತನ್ನ ಸೇವೆಯ ಫಲವಾಗಿ ಹೇಳತೀರದ ಸಂಕಷ್ಟಗಳನ್ನು ಅನುಭವಿಸಿದ ಮೇಲೂ–ಜೀವನವನ್ನು ನಿರಾಶೆಯ ಅಂಧಕಾರ ಕವಿದಾಗಲೂ–ಅವನು ಹೇಳುತ್ತಾನೆ: "ನಾನಿನ್ನೂ ತರುಣ; ಬಾಳಿನ ಹೊಸಲಮೇಲೆ ಇದೇನೆ, ಹೃದಯದಲ್ಲಿ ಹುದುಗ ಲಾರದ ಸಾವಿರ ಆಶೆಗಳಿವೆ. ಅವೆಲ್ಲ ರೂಪಗೊಂಡು ತೃಪ್ತವಾಗಲು ಕಾತರವಾಗಿವೆ. ಇಡೀ ಆಯುಷ್ಯದ ಪೂರ್ಣ ಭವಿಷ್ಯವೇ ನನ್ನನ್ನು ನಿರಾಶೆಯ ಶೂನ್ಯದೃಷ್ಟಿಯಿಂದ ದಿಟ್ಟಿಸಿ ನೋಡುತ್ತಿದೆ...." ಆದರೂ ತನ್ನ ಸೋಲನ್ನೊಪ್ಪಿಕೊಳ್ಳಲು ಆತ ಸಿದ್ಧನಿಲ್ಲ.

"ತಾಯಿನಾಡಾದ ಭರತಭೂಮಿಯ ಸೇವೆ ಮಾಡುವುದು ಪ್ರತಿಯೊಬ್ಬ ಭಾರತೀಯನಿಗೂ ಈ ಸಮಯದಲ್ಲಿ ಪವಿತ್ರ ಕರ್ತವ್ಯ; ಕರ್ತವ್ಯದ ಮಾತಿರಲಿ, ದೊಡ್ಡ ಗೌರವ" ಎಂದು ಸ್ವಯಂಸೇವಕ ಮುಂದುವರಿಸುತ್ತಾನೆ: "ನಿಮ್ಮ ತಂದೆ ಈ ಮಾತಿಗೆ ಒಪ್ಪದೆ ಹೋಗಬಹುದು. ನಿಮ್ಮ ತಾಯಿ ಚೆಲುವಿಯಾದ ಸೊಸೆ ಮನೆಯೊಳಗೆ ಕಾಲಿಟ್ಟು ಸ್ವಲ್ಪ ಸುಖ–ಸಂತೋಷ ತರಲಿ ಎಂದು ಲೆಕ್ಕಹಾಕುತ್ತಿರ ಬಹುದು. ಇಂಥ ಇನ್ನೂ ಸಾವಿರ ಕಾರಣ ನಿಮ್ಮ ಕಣ್ಣು ಕುಕ್ಕುತ್ತಿರಬಹುದು. ....ಆದರೆ, ನಮಗಿಂತ ಮೊದಲು ಹೋಗಿರುವ ನೂರಾರು ಜನರ ಗತಿಯೇನು....?" ಇಂಗ್ಲೆಂಡಿನ ಧನಿಕ ಸ್ತ್ರೀಯೊಬ್ಬಳು ಯುದ್ಧರಂಗದಲ್ಲಿ ತನ್ನ ನಾಲ್ವರು ಮಕ್ಕಳನ್ನು ಕಳೆದುಕೊಂಡು ಪ್ರತೀಕಾರದ ಪ್ರತಿಜ್ಞೆ ಸ್ವೀಕರಿಸುತ್ತಾಳೆ. ತನ್ನ ಸ್ವಂತ ಖರ್ಚಿನಿಂದ ನಾಲ್ಕು ವಿಮಾನಗಳನ್ನು ಕೊಂಡು ಕೊಟ್ಟು, ಒಂದೊಂದಕ್ಕೂ ಒಬ್ಬ ಮಗನ ಹೆಸರಿಟ್ಟು, "ಹೋಗಲಿ ಅವು! ಜರ್ಮನರ ಮೇಲೆ ಬಾಂಬು ಸುರಿಸಲಿ!" ಎಂದು ಹೂಂಕರಿಸುತ್ತಾಳೆ; ಮರುಕ್ಷಣದಲ್ಲೇ, "ನಾನು ಮುದುಕಿಯಾಗಿ ಬಿಟ್ಟೆ! ಇಲ್ಲದಿದ್ದರೆ ನಾನೇ ಒಬ್ಬ ವೈಮಾನಿಕಳಾಗುತ್ತಿದ್ದೆನಲ್ಲ!" ಎಂದು ರೋದಿಸುತ್ತಾಳೆ. ರಂಗದ ರಣಕಣದಲ್ಲಿ ದೇಹವಿಟ್ಟ ಗೆಳೆಯರಿಗಾಗಿ ಹಿಂದುಳಿದ ಸೈನಿಕ ತವಕಪಡುತ್ತಾನೆ. ಮರಣವು ಸಿದ್ಧ ಎಂದು ತಿಳಿದಿದ್ದೂ ಆತ ಮುಂದಕ್ಕೋಡುತ್ತಾನೆ. ಈ ಸತ್ಯಾಗ್ರಹಿ ಅನ್ನುತ್ತಿರುವುದೂ ಅದನ್ನೇ! "ನಮಗಿಂತ ಮೊದಲು ಹೋಗಿರುವ ನೂರಾರು ಜನರ ಗತಿಯೇನು?" ಜನರು ಹಿಂದೆ ಹೋದ ವೀರರನ್ನು ಮರೆಯದಿರುವುದಕ್ಕೆ, ನಮ್ಮ ಅಪೂರ್ಣ ಧ್ಯೇಯವನ್ನು ಸ್ಮರಿಸುತ್ತಿರುವುದಕ್ಕೆ ಈ ಕತೆಯನ್ನು ಲೇಖಕರು ಕೊಡುತ್ತಾರೆ.

ಏನನ್ನು ಬರೆಯುವುದಕ್ಕೂ ಸಂಪೂರ್ಣ ಸ್ವಾತಂತ್ರ್ಯವಿರುವ ತನ್ನ ದಿನಚರಿ ಯಲ್ಲಿ ಈತ ಏನು ಬರೆಯುತ್ತಾನೆ?—"ಲೇಖನ ವ್ಯವಸಾಯದಲ್ಲಿ ನನಗೊಳ್ಳೇ ಹುರುಪು. ಸಂಪಾದಕೀಯ ಲೇಖನಗಳಂತೂ ಬಹಳ ಸರಸವಾಗಿಯೂ ಗಂಭೀರ ವಾಗಿಯೂ ಬರುತ್ತಿವೆ." ಶ್ರೀ. ಪ....ಅವರ ಸೌಜನ್ಯದ ಮೇರೆ ನಿಜವಾಗಿಯೂ ಬಹು ವಿಸ್ತೃತವಾದುದು. 'ಆ ಲೇಖನಗಳನ್ನು ನಾನು ಬರೆದೆ' ಎನ್ನುವುದಕ್ಕೆ

ಅವರಿಗೆ ಇಷ್ಟವಿಲ್ಲ. 'ನಿನ್ನೆ, ಜನತೆಯನ್ನು ಸರಿಯಾದ ಹಾದಿಗೆ ಹಚ್ಚುವಂಥ, ವಿದ್ವತ್ಪೂರ್ಣ ಅಗ್ರಲೇಖನ ಬರೆದೆ' ಎನ್ನುವುದಿಲ್ಲ.

ಒಂದು ಕಾರ್ಯಕ್ಷೇತ್ರದಲ್ಲಿ ದುಡಿಯುತ್ತಿದ್ದಾಗ ಗೆಳೆಯರು ಇಡೀ ಒಂದು ಕೊಠಡಿಯನ್ನೆ,—ಅವರಿದ್ದುದು ಅತಿ ಚಿಕ್ಕ ಮನೆಯಲ್ಲಿ-ಪ. ....ಅವರಿಗೆ ಕೊಟ್ಟರು. ಅವರು ಕೇಳದೆ ಕೊಟ್ಟುದನ್ನು ಇವರು ಸ್ವೀಕರಿಸಿದರು. ಕಾರಣ ಕೇಳುವುದೂ ಇವರಿಗೆ ಬೇಕಿಲ್ಲ. "ಬಹುಶಃ ನನ್ನ ಆರೋಗ್ಯದ ಸೂಕ್ಷ್ಮಸ್ಥಿತಿ ನೋಡಿ ಹೀಗೆ ಮಾಡಿದ್ದಾರು" ಎಂದು ಸಮಾಧಾನ ಮಾಡಿಕೊಳ್ಳುವರು !

ಸತ್ಯಾಗ್ರಹಿಯೊಬ್ಬನು ಮಾಡಬಹುದಾದ ತ್ಯಾಗಗಳಿಗಾದರೂ ಕೊನೆಯಿದೆಯೆ? ಇಲ್ಲಿನ ಸ್ವಯಂಸೇವಕನ ಜೀವನದ ದಾರುಣ ಚಿತ್ರವೊಂದೇ ಅದನ್ನು ಪ್ರತಿಬಿಂಬಿಸದು. ಆತ ವಾಚಕರಿಗೆ ಪರಿಚಯ ಮಾಡಿಕೊಡುವ, ಐಶ್ವರ್ಯವನ್ನೆಲ್ಲಾ ದೇಶಸೇವೆಗಾಗಿ ವಿನಿಯೋಗಿಸಿ ಲಕ್ಷಾಧಿಪತಿಯ ಸ್ಥಾನದಿಂದ ಭಿಕ್ಷಾಧಿಪತಿಯದಕ್ಕೆ ಇಳಿದ ಶ್ರೀಮಂತ, ಲಾಠೀ ಏಟು ತಿಂದವರನ್ನು ಉಪಚರಿಸಲಿಕ್ಕೆಂದು ಹೋಗಿ ತಾನೇ ಶಿಕ್ಷಿಸಲ್ಪಟ್ಟು ವೈದ್ಯಕೀಯ ಸಹಾಯವಿಲ್ಲದೆ ಡಾಕ್ಟರ್, ಸತ್ಯಾಗ್ರಹದ ಫಲವಾಗಿ ತೀರ ಹುಚ್ಚನಾಗಿದ್ದ ಲೇಖಕರ ಒಬ್ಬ ಸಹೋದ್ಯೋಗಿ, ಇವರಂತಹರೆಷ್ಟು ಮಂದಿ ಈ ದೇಶದಲ್ಲಿಲ್ಲ ?

"ದೇಶಸೇವಕ ಪ್ರತಿಯೊಬ್ಬನೂ ತನ್ನ ಪಾಲಿನ ಕೆಲಸವನ್ನು ಸ್ವಲ್ಪವೂ ಗೊಣಗದೆ ನಗುನಗುತ್ತ ಮಾಡುತ್ತಾನೆ. ಈ ಸೇವೆಗೆ ಸಿಗುವ ಪ್ರತಿಫಲವೋ—ದಿನಕ್ಕೆರಡು ಹೊತ್ತು ಒರಟೊರಟು ತಿಂಡಿ, ಈ ಗಳಿಗೆಗೋ ಆ ಗಳಿಗೆಗೋ ಕಾದಿರುವ 'ವಾರಂಟು'!" ಹಾಗೆಂದು ಯಾರೂ ನಮ್ಮ ಕರ್ತವ್ಯವನ್ನು ಮಾಡದೆ ಹಿಂದುಳಿಯುವುದಿಲ್ಲ.

ತನ್ನ ಅಭಿಪ್ರಾಯಗಳನ್ನು

ಶಕ್ತಿಪೂರ್ಣ ಭಾಷೆಯಲ್ಲಿ ಅಲ್ಲಲ್ಲಿ ಹೇಳುವ ಕಲೆ ಬಹು ಚೆನ್ನಾಗಿ ಈ ಸ್ವಯಂ ಸೇವಕನಿಗೆ ಸಾಧಿಸಿದೆ. ಕೆಳಗೆ ನೆಲದ ಉಡಿಯಲ್ಲಿ ಕೆಲಸ ಮಾಡುತ್ತಿದ್ದ ಪಠಾಣರನ್ನು ಕಂಡಾಗ ಈತನಿಗೆ ಹೊಳೆಯುತ್ತದೆ: "ಇದೇ ಜನ ಪಟ್ಟಣಗಳಲ್ಲಿ ಸೇರಿ ಸಾಹುಕಾರಿಕೆಯ ನಕ್ಷತ್ರಿಕ ವೃತ್ತಿಯನ್ನು ನಡೆಸಿ ಜನರನ್ನು ಸುಲಿಯುತ್ತಾರೆ; ಇನ್ನೊಂದು ಕಡೆ ಹೀಗೆ. ಇವರಿಗೆ ಅಲ್ಲೇ ಅನ್ನ ಸಿಗಬಾರದೇಕೆ ಅವರ ಮನೆಯಲ್ಲಿ ?" ನಾಡಿನ ಹಣ ನಾಡಿನ ಮಂದಿಗಾಗಿಯೇ ವಿನಿಯೋಗವಾಗಬೇಕೆಂದು ಅವರ ಆಶೆ ಅದರಲ್ಲಿ "ಹಿಂದೀಯರನ್ನು ಹೊರಕ್ಕಟ್ಟಿರಿ !" ಎಂದು ಘೀಳಿಡುವ ಬರ್ಮೀಯರ ಇಲ್ಲವೆ ಸಿಂಹಳೀಯರ ಅವಿಸ್ತೃತ ಬುದ್ಧಿಕೋನ ಕಂಡುಬರುವುದಿಲ್ಲ.

"ಹಳ್ಳಿಗಳಲ್ಲಿ ಪಟೇಲ ತಲಾಟಿಗಳೇ ಅಧಿಕಾರಿಗಳ ಅಧಿಕೃತ ಪ್ರತಿನಿಧಿಗಳು. ಅವರ ಅಣ್ಣ ತಮ್ಮಂದಿರನ್ನು ಪೀಡಿಸಿ ಹಿಂಡಲಿಕ್ಕೆ ಇವರೇ ಏಜಂಟರು" ಈ ವಾಕ್ಯ

ಗಳನ್ನು ಬರೆದ ವ್ಯಕ್ತಿಯ ಮನೋಭಾವನೆಯನ್ನರಿಯುವುದು ಹೆಚ್ಚು ಕಷ್ಟದ ಕೆಲಸವೇನೂ ಅಲ್ಲ.

೧೯೪೦ರಲ್ಲಿ ಮಹಾತ್ಮರು ಸತ್ಯಾಗ್ರಹವನ್ನಾರಂಭಿಸಿದಾಗ, "ಪ್ರತಿಯೊಬ್ಬ ಸತ್ಯಾಗ್ರಹಿಯೂ ತನ್ನ ಪ್ರತಿಜ್ಞೆ ಪೂರೈಸುವ ತನಕ ಸತ್ಯಾಗ್ರಹ ಮಾಡುತ್ತಲೇ ನಡೆಯಬೇಕು ; ಒಮ್ಮೆಯೂ ಮನೆಗೆ ಹಿಂದಿರುಗಬಾರದು " ಎಂದು ಅಜ್ಞಾಪಿಸಿದರು. ೧೯೩೦ರಲ್ಲಿ ಅಂಥ ಆಜ್ಞೆಯಿರಲಿಲ್ಲವಾದರೂ ಯಾವ ಸತ್ಯಾಗ್ರಹಿಯೂ ತನ್ನ ಕಾರ್ಯ ರಂಗದಿಂದ ದೂರ ನಡೆದು ಮನೆಗೆ ಹೋಗಿ ಬರುವ ಆಸೆ ತೋರಿಸುತ್ತಿರಲಿಲ್ಲ. ಆದರೆ ತನ್ನ ಊರು ಸಮೀಪಕ್ಕೆ ಬಂದಾಗಲೊಮ್ಮೆ, "ಹಾಗೆಯೇ ಒಂದು ಹೊತ್ತು ನಮ್ಮ ತಾಯಿಯನ್ನು ನೋಡಿಕೊಂಡು ಮತ್ತೆ ಹಾರಿ ಹೋದರಾಯಿತಲ್ಲ. ನನ್ನನ್ನು ನೋಡಿ ಆಕೆ ಎಷ್ಟು ಸಂತೋಷಪಟ್ಟಾಳು !" ಎಂದು ಮಗ ಪುಳಕಿತನಾಗುತ್ತಾನೆ. ತನ್ನ ಆಶಯವನ್ನು ಸಮರ್ಥಿಸಿಕೊಳ್ಳುತ್ತ, 'ನಮ್ಮ ಮನೆಯಲ್ಲಿ ಒಂದು ವಾರ ನಿಂತರೆ ನಮ್ಮನ್ನೇನು ಗುಂಡಿಗೆ ಕೊಡುವುದಿಲ್ಲವಲ್ಲ' ಎಂದು ಸಮಾಧಾನ ಹೇಳಿ ಕೊಳ್ಳುತ್ತಾನೆ.

ತಾವು ವಾಸಿಸಿದ ಆಶ್ರಮದ ಬಳಿಯಲ್ಲಿನ ಕೊಳವನ್ನು ಕಂಡು ಲೇಖಕರು ಯೋಚಿಸುತ್ತಾರೆ: "ನಮ್ಮ ನಾಡು ತೀರ ಬಡನಾಡು, ಇಲ್ಲದಿದ್ದರೆ ಇಲ್ಲಿನ ಜನ ಮಹಾವೈಭವದಿಂದ ದೋಣಿಯಾಟಕ್ಕೆ ಅನುಕೂಲಮಾಡಿಕೊಳ್ಳದೆ ಬಿಡುತ್ತಿದ್ದರೆ ?" ನಮ್ಮ ನಾಡು ಎಲ್ಲದರಲ್ಲೂ ಹೀಗೆಯೇ. ಖನಿಜೋತ್ಪತ್ತಿಗಳಿಂದ ತುಂಬಿದೆ ; ಆದರೆ ಅವುಗಳ ಸದುಪಯೋಗವಾಗುತ್ತಿಲ್ಲ ! ಧಾರಾಳ ಮಳೆಯಿದೆ ; ಆದರೆ ಬೆಳೆ ಸಮೃದ್ಧ ವಾಗಿ ಬೆಳೆಯುವುದಿಲ್ಲ !

ಗಾಂಧೀಜಿ ಕಳೆದ ಸತ್ಯಾಗ್ರಹವನ್ನು ಸ್ವಾತಂತ್ರ್ಯ ಸಂಪಾದನೆಗೆ ಉಪಯೋಗಿ ಸದೆ ಉಪ್ಪಿನ ಕರ ತೆಗೆಸುವುದಕ್ಕಾಗಿಯೇ ನಡೆಸಿದರು ಎಂದು ಟೀಕಿಸುವವರು ಹಲವರಿದ್ದಾರೆ. ತಮ್ಮ ಗುರುಗಳ ಮೇಲಿನ ಟೀಕೆಯನ್ನು ಉತ್ತರಿಸುವುದಕ್ಕೆ ಯತ್ನಿಸುತ್ತಿದ್ದಾರೆಯೊ ಅನ್ನುವಂತೆ "ಜೈಲಿನಲ್ಲಿ....ಪಲ್ಯಕ್ಕೆ ಉಪ್ಪು ತೋರಿಸಿಯೇ ಇರಲಿಲ್ಲ ; ತೋರಿಸಿದ್ದರೂ ತೋರಿಸಿರಬಹುದು. ಆದರೆ ನಾಲಿಗೆಗೇನು ಅದರ ರುಚಿಯೇ ಗೊತ್ತಾಗುವುದಿಲ್ಲ. 'ಉಪ್ಪಿಗಿಂತಲೂ ರುಚಿಯಿಲ್ಲ'ವಲ್ಲವೆ ? ನಮಗೆ ಈ ಉಪ್ಪಿನ ಒಂದು ಚುಟುಕು ಇಲ್ಲದ್ದು ಹೇಗೋ, ಹಾಗೇ ಬಡವರಿಗೆ ಉಪ್ಪಿನ ಒಂದು ಚುಟುಕು ಎಷ್ಟೋ ಬೆಲೆಯಲ್ಲದ್ದವೇ ?" ಎಂದು ಪ್ರಶ್ನಿಸುತ್ತಿದ್ದಾರೆ.

ಅವರ ಅಭಿಪ್ರಾಯದಂತೆ ಮನುಷ್ಯ ನಿಜವಾಗಿ ವಿಚಿತ್ರ ಪ್ರಾಣಿ! ಗಾಳಿ ಬಂದತ್ತ ತಿರುಗುವ ದೋಣಿಯಿದ್ದಂತೆ. ಪರಿಸ್ಥಿತಿ ಹೇಗೆ ಬಂದರೆ ಹಾಗೆ ಹೋಗಬೇಕು.

ಜೈಲು ಸಂದರ್ಶಿಸುವುದಕ್ಕೆಂದು ಒಮ್ಮೆ ಯಾರೋ ಬಂದಿದ್ದವರಲ್ಲಿ ಒಬ್ಬ ಆಂಗ್ಲ ಸ್ತ್ರೀ ಕಲ್ಲುಕಡಿಯುತ್ತಿದ್ದ ತರುಣ ಕೈದಿಯೊಬ್ಬನ ಮೇಲೆ ಕನಿಕರಗೊಂಡು ಎರಡು ಸಂತೈಸುವ ನುಡಿಗಳನ್ನಾಡಿದಳು. ಆಗ ಅವಳ ಗಂಡ ಅಧಿಕಾರಿ ಅದನ್ನು

ನೋಡಿದ, ನೋಡಿ ಹಿಂದಿರುಗಿ ಬಂದು ಅಲ್ಲಿಂದ ಆಕೆಯನ್ನು ಎಳೆದುಕೊಂಡು ಹೋದ. ಆಕೆಯ ಸೌಜನ್ಯವನ್ನು ನಿಂದಿಸಿದ: "ಖೈದಿಗಳಿಗೆ ದಯೆತೋರಿಸಿದವರುಂಟೆ? ನಾಯಿಗಳು!—ಸಾಯಲಿ, ಅವರಿಗೆ ಹೀಗೆ ಆಗಬೇಕು" ಎಂದ. ಇದನ್ನೆಲ್ಲ ನೋಡುತ್ತಲಿದ್ದ ಸ್ವಯಂಸೇವಕ ತಪ್ತನಾಗಿದ್ದಾನೆ. "ವಿಲಾಯತಿಯಲ್ಲಿ—ತನ್ನ ಸ್ವದೇಶದಲ್ಲಿ—ಈ ಅಧಿಕಾರಿ ಹೀಗೆ ಮಾಡಿದರೆ ಅವನಿಗೆ 'ಮೂರ್ಖಶಿಖಾಮಣಿ ಎಂಬ ಬಿರುದು ಬರಬಹುದಾಗಿತ್ತು. ಸ್ವಲ್ಪವಾದರೂ ಸೌಶೀಲ್ಯವಿಲ್ಲ. ಅವನ ಕೆನ್ನೆಗೆ ಎರಡು ಎಳೆದುಬಿಡಲೇ ಅನ್ನಿಸುತ್ತದೆ. ಆದರೆ ನಾವು ಅಹಿಂಸಾವಾದಿಗಳಲ್ಲವೆ!" ಎನ್ನುತ್ತಾನೆ. ಈ ಧ್ವನಿಯಲ್ಲಿ ಕಟು ಟೀಕೆಯಿದ್ದಂತೆ, ತನ್ನ ಅಸಹಾಯತೆಯನ್ನು ತಾನೇ ಕಂಡು ನಾಚಿದಂತೆ, ಭಾಸವಾಗುತ್ತದೆ. ಅಹಿಂಸೆಯ ವಿಚಾರದಲ್ಲಿ ಯಾರು ಏನೇ ಹೇಳಲಿ; ಲೇಖಕರ ತತ್ವನಿಷ್ಠೆಯನ್ನು ದೂರುವ ಹಾಗಿಲ್ಲ.

ಗ್ರಂಥದಲ್ಲಿ, ಸ್ವಯಂಸೇವಕನಿಗೆ ವಿಪ್ಲವಭೈರವನ ಪರಿಚಯವಾದ ವಿಭಾಗ ಬಂದೊಡನೆಯೇ ಅತಿ ಕುತೂಹಲಪೂರ್ಣ ವಾಚನಕ್ಕೆ ಮೊದಲಾಗುವುದು. 'ಬಾಂಬಿನ ಬಂಗಾಳಿ ಬಾಬು'ವನ್ನು ಕಂಡು 'ಕ್ರಾಂತಿ ಪೂಜಾರಿ' ಎಂದು ಕಡೆಗಣಿಸುವುದರ ಬದಲಿಗೆ, ಆತನ ಬಳಿಸಾರಿ, ಸಹಾನುಭೂತಿ ತೋರಿಸಿ, ಸ್ವಯಂಸೇವಕ ಗೆಳೆತನ ಸಂಪಾದಿಸುತ್ತಾನೆ. ಎಲ್ಲಿಯೂ ತನ್ನ ಅಂಧವಿಶ್ವಾಸವನ್ನು ಪ್ರದರ್ಶಿಸುವುದಕ್ಕೆ ಆತನಿಗೆ ಆಸುವು ದೊರಕಿಲ್ಲ, ಕಾರಣ–ಆತನು ಅಂಧವಿಶ್ವಾಸಿಯೇ ಅಲ್ಲ.

ಹೊಸತೊಂದು ಗುರಿ ವಿಧಾನ

ಈ ಗ್ರಂಥವನ್ನು ಬರೆಯುವುದರಲ್ಲಿ ಶ್ರೀ ರಾಯರು ತಮ್ಮ ಗುರಿಯನ್ನು ಸಾಧಿಸಿದ್ದಾರೆ. 'ಹೆಸರಾಂತ ಲೇಖಕನಾಗುವುದು' ಅವರ ಗುರಿಯಾಗಿತ್ತೆ? ಎಂಬ ಪ್ರಶ್ನೆಗೆ, "ಅಂಥ ಆಸೆಯನ್ನು ಅವರು ಕಟ್ಟಿಕೊಳ್ಳದಿದ್ದರೂ ಖ್ಯಾತಿ ಅವರನ್ನು ಅರಸಿಕೊಂಡೇ ಬಂದಿದೆ" ಎಂಬ ಉತ್ತರ ಸಿಗುವುದು. ತಾವು ಮಾಡಿದುದು ಏನನ್ನೆಲ್ಲ? ಜೈಲಿಗೆ ಹೋದುದು ಎಷ್ಟು ಬಾರಿ? ಸಾಧಿಸಿದ ಮಹತ್ಕಾರ್ಯಗಳು ಯಾವುವು? ಎಂಬ ವಿಷಯಗಳ ಪಟ್ಟಿಯನ್ನು ಬರೆದು ಪ್ರಕಟಿಸಿದರೂ ಪತ್ರಿಕೆಗಳು ಕೀರ್ತಿ ತರುವುವು. ಆದರೆ ಅವರ ಗುರಿ ಇದೆಲ್ಲದಕ್ಕಿಂತ ಹಿರಿದಾಗಿತ್ತೆಂದು ಊಹಿಸಬೇಕಾಗಿದೆ. ಬಿಡುಗಡೆಯ ಬೆಲೆಯ ಬರಿಯ ಪಠನಮಾತ್ರದಿಂದ ಆದರ್ಶ ಸ್ವಯಂಸೇವಕರಾದ ಮಂದಿಯೆಷ್ಟು? ರಾಜಕಾರಣದಲ್ಲಿ ಅಭಿರುಚಿ ತೋರಿಸಿದ ಸಾಹಿತಿಗಳೆಷ್ಟು ಮಂದಿ? ಸಾಹಿತ್ಯದ ಸವಿಯನ್ನುಂಡ ರಾಜಕಾರಣಿಗಳು, ದೇಶಸೇವಕ–ಸೇವಿಕೆಯರು ಎಷ್ಟು ಮಂದಿ?

ರಾಯರ ಶೈಲಿ ವಿಶಿಷ್ಟವಾದುದು. ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರ ಸಾವೀನ್ಯವು ಅದರಲ್ಲಿದೆ. ಶ್ರೀ ಅಶ್ವಥನಾರಾಯಣರಾಯರ ಮನಮೋಹಕ ಶೈಲಿಯನ್ನು ಗ್ರಂಥದಿಂದ ಬೇರ್ಪಡಿಸಲು ಬರುವುದಿಲ್ಲ. ಆ ಶೈಲಿ ಶಕ್ತಿಪೂರ್ಣವಾಗಿದೆ.

೧೮

ಅದನ್ನು ಬರೆದ ಲೆಕ್ಕಣಿಕೆ ಬಿರುಸಾದುದಿರಬೇಕು; ಕೈ-ತೋಳು ಹಲವೊಂದು ಜೀವನ ಸಮರಗಳಲ್ಲಿ ಹೋರಾಡಿ ಪಳಗಿದುದಿರಬೇಕು.

"ಅರೆಬತ್ತಲೆಯಾದ ಅರೆಹೊಟ್ಟೆಯಾದ ವಿದ್ಯಾಗಂಧವಿಲ್ಲದ ರೈತರು ಸಾವಿರಾರು ಜನ ಹೀಗೆ ಬಂದು ನಿಂತು ಯುಗಯುಗಾಂತರದಿಂದ ತಮ್ಮ ಪಾಲಿಗೆ ಬಂದ ದೌರ್ಜನ್ಯವನ್ನು ತಿರಸ್ಕರಿಸುವುದನ್ನು ನೋಡಿ ಕನಿಕರ ಸಹಾನುಭೂತಿಗಳಿಂದ ನಮ್ಮ ಎದೆ ಕರಗಿದರೆ, ಬಿರಿದರೆ ಏನಚ್ಚರಿ?" ಯಥಾರ್ಥತೆಯನ್ನು ಮುಖದೆದುರು ಎತ್ತಿ ಹಿಡಿದಾಗಲೂ ಕಣ್ಣು ಮುಚ್ಚಿ, "ಇಲ್ಲ! ಇದು ಯಥಾರ್ಥತೆಯೆಂದು ನಾನು ಒಪ್ಪಿಕೊಳ್ಳುವುದಿಲ್ಲ!" ಎನ್ನುವ ಮಂದಿ ಮೇಲಿನ ಸಾಲುಗಳನ್ನೋದಬೇಕು; ಓದಿ ತಿಳಿಯಬೇಕು...."ಪ್ರತಿವಾದವೇನಾದರೂ ಉಂಟೋ?" ಅಧಿಕಾರಿಗಳ ಪ್ರಶ್ನೆ.

ಸ್ವಯಂಸೇವಕ ಸತ್ಯಾಗ್ರಹಿ ಉತ್ತರವೀಯುತ್ತಾರೆ: "ಇಲ್ಲ ಇಲ್ಲ. ಶುದ್ಧಾಂಗವಾಗಿ ಇಲ್ಲ. ನಿಮ್ಮ ಕೈಯಲ್ಲಿ ಕೋರಾ ಕಾಗದಕ್ಕೆ ಸಹಿ ಹಾಕಿಕೊಟ್ಟಿದ್ದೇವೆ. ನಿಸ್ಸಂಕೋಚವಾಗಿ ನಮಗೆ ಶಿಕ್ಷೆ ಕೊಡಬಹುದು."

"ಆರು ವಾರ ಕಠಿಣ ಶಿಕ್ಷೆ."

"ಇಷ್ಟೆಯೆ?"

ಹಿರಿಯ ದೇಶ ಸೇವಕರು, ನ್ಯಾಯಾಧೀಶರ ತೀರ್ಮಾನದ ಬಳಿಕ ತಮ್ಮ ಆಸನದಿಂದೆದ್ದು, ನಗುಮೊಗರಾಗಿ "Thank you!" ಅಂದರೆ, ಇವರು ಕೇಳುತ್ತಿದ್ದಾರೆ: "ಇಷ್ಟೆಯೆ?" ಲೋಕದ ಅತಿ ಬಲಿಷ್ಠ ಸಾಮ್ರಾಜ್ಯಶಾಹಿ ರಾಷ್ಟ್ರವೊಂದನ್ನು ಎದುರಿಸುತ್ತಿರುವ ವೀರಯೋಧನೀತ. ಅವನಿಗೆ ಅಂಜಿಕೆ ಎಂಬುದು ಅರಿಯದು. ಮಹತ್ಕಾರ್ಯ ಸಾಧನೆಯಲ್ಲಿ ತನ್ನ ಅಸುವನ್ನರ್ಪಿಸುವುದಕ್ಕೂ ಸಿದ್ಧನಾಗಿ ಬಂದಿದ್ದಾನೆ. ಹಾಗೆಂದೇ ಹಸಿದ ಕೇಸರಿಯ ಮೀಸೆಯನ್ನು ಕುಲುಕಿಸುತ್ತಾ ಆತ ಕೇಳುತ್ತಿದ್ದಾನೆ. "ಇಷ್ಟೆಯೆ?"

ತನ್ನ ತಾಯಿಯ ಹಿರಿಯಾಸೆಗಳೆಲ್ಲ ಬರಿಯಾಸೆಗಳಾಗುತ್ತಿರುವಾಗ, ನೆನಸೆಲ್ಲ ಕನಸಾಗುತ್ತಿರುವಾಗ ಮಗ ದುಃಖಿಯಾಗಿದ್ದರೂ ಕೆಚ್ಚೆದೆಯ ಮಾತುಗಳನ್ನಾಡುತ್ತಾನೆ.

"ಏನಮ್ಮಾ! ಏನಂದೆ? ನಾನು ತಮಾಷೆ ಮಾಡುತ್ತಿರುವೆನೆಂದೆ? ಇಲ್ಲ, ಇಲ್ಲ. ನಿಜವಾಗಿಯೂ ಹೇಳುತ್ತಿದ್ದೇನೆ. ಮಾತೃಭೂಮಿಗಾಗಿ ಸಾವಿರಾರು ಜನ ಗಂಡು-ಹೆಣ್ಣು ಮಾಡಿದ ತ್ಯಾಗ, ಸಹಿಸಿದ ಕಷ್ಟ ಬರೀ ಕನಸಾದೀತೇ? ಬೇಗನೆ ನಮಗೆ ಸ್ವಾತಂತ್ರ್ಯ ಲಭಿಸಿ, ಜಗತ್ತು ಮೆಚ್ಚಿ ತಲೆದೂಗುತ್ತಿರಲು ನಮ್ಮ ಬಾವುಟ ಹಾರಾಡೀತು ಎಂದು ನಾನು ನಂಬಿದ ಹಾಗೆ ನೀನು ನಂಬಿಲ್ಲವೇ ತಾಯಿ? ಗತಕಾಲದ ವೈಭವ ಪ್ರಭಾವಗಳಿಂದ ಭಾರತವರ್ಷ ಮತ್ತೆ ಬೆಳಗೀತೆಂದು ನಿನಗನಿಸದೇ ತಾಯಿ?" ಅಂದರೆ ತಾಯಿ ಅಳುವುದರ ಹೊರತು ಬೇರೇನು ಮಾಡಬಲ್ಲಳು?

ಅರ್ಥಪೂರ್ಣ ಲಘುಹಾಸ್ಯ

ರಾಜಕೀಯ ಹೋರಾಟವೆಸಗಿದ ಸತ್ಯಾಗ್ರಹಿ ಸ್ವಯಂಸೇವಕನ ದಿನಚರಿಯಲ್ಲೂ ಹಾಸ್ಯಕ್ಕೆ ಎಡೆಯುಂಟೆ ? ಬಿಡುಗಡೆಯ ಬೆಲೆಯನ್ನೋದುತ್ತಿರುವಂತೆ ಹಲವೊಮ್ಮೆ ಮೈನವಿರೇಳುವುದು ; ನರನಾಡಿಗಳಲ್ಲಿ ಬಿಸಿ ರಕುತದ ತೀವ್ರ ಸಂಚಾರವಾಗುವುದು ; ಕಣ್ಣುಗಳಲ್ಲಿ ಕಂಬನಿದುಂಬುವುದು ; ಅಟ್ಟಹಾಸ ಮಾಡುವ ಬ್ರಿಟಿಷ್ ಸಾಮ್ರಾಜ್ಯ ಸಿಂಹ ನಮ್ಮೆದುರು ಬಂದು ನಿಂತಂತೆ,–ನಮ್ಮನ್ನು ಸಮರಕ್ಕಾಹ್ವಾನಿಸುವಂತೆ, ಭಾಸವಾಗುವುದು. ಆದರೆ ಇದೆಲ್ಲದಕ್ಕೂ ಮಿಗಿಲಾಗಿ ತಿಳಿಹಾಸ್ಯದ ಸವಿಯೂಟ ನಮಗೆ ಸಿಗುವುದು. ಈ ವಿಚಾರದಲ್ಲಿ ಲೇಖಕರು 'ಕಕಾ' ಮಾಲೆಯ ಕಸ್ತೂರಿ, ಕಾರಂತ, ಕೈಲಾಸಂರನ್ನು ನೆನಪು ಮಾಡಿಕೊಡುವರು.

ಧುರೀಣರೊಬ್ಬರನ್ನು ಬಂಧಿಸಿದುದಕ್ಕಾಗಿ ಊರಲ್ಲೆಲ್ಲ ಹರತಾಳವಾಚರಿಸಿದ್ದಾರೆ. ಆ ಹರತಾಳವು ಯಶಸ್ವಿಯಾಗುವಂತೆ ಮಾಡಲು ಸ್ವಯಂಸೇವಕ ಯತ್ನಿಸಿದ್ದಾನೆ. ಆದರೂ ಕೊನೆಗೆ, "ಈ ಉತ್ಸಾಹದ ಫಲವಾಗಿ ನನಗೆ ಆ ದಿನ ಮುಂಜಾನೆ ಫಲಹಾರವಾಗಲಿಲ್ಲ. ಕೇಳಿದಷ್ಟು ಹಣ ಕೊಡುತ್ತೇನೆಂದರೂ ಹೋಟಲಿನವನೇನು ಜುಮ್ಮೆನ್ನುವ ಹಾಗಿಲ್ಲ" ಇದನ್ನೋದಿದವರು "ಅಯ್ಯೋ! ಪಾಪ!" ಎಂದು ಸಹಾನುಭೂತಿ ತೋರಿಸುವರೆಂಬ ಆಸೆಯೇನೋ ಲೇಖಕರಿಗೆ!

ಆದಷ್ಟು ಬೇಗನೆ ಸಮರಕಣವನ್ನು ಪ್ರವೇಶಿಸಬೇಕೆಂಬ ತವಕ ಈ ಸತ್ಯಾಗ್ರಹಿಗೆ. "ಯಾರು ಬಲ್ಲರು ? ಮುಂದೆ ಹೋದವರಲ್ಲಿ ಯಾರು ಯಾರಿಗೆ ಆಗಲೇ ಬಹುಮಾನ ಸಿಕ್ಕಿದಿಯೋ!" ಎನ್ನುತ್ತಾರೆ. ಹೋರಾಡಿ ಸೆರೆಮನೆ ಸೇರುವುದು ನಾನ್ನೂರು ಗಜ ಓಟದಲ್ಲಿ ಮೊದಲು ಓಡಿ ಬಹುಮಾನ ಪಡೆದಂತೆ ಇವನಿಗೆ!

ಕೆಲಸ ಬಿಟ್ಟ ಪಟೇಲರನ್ನು ಗೌರವಿಸುವುದಕ್ಕಾಗಿ ಸಭೆ ಸೇರಿತು. "ಪ್ರಾರಂಭದಲ್ಲಿ ಪಟ್ಟಣಿಗರು ಕೆಲವರು, ನಾಡ ಸೇವೆಗಾಗಿ ಹಳ್ಳಿಗರು ಇಂಥ ದಿಟ್ಟತನದ ಹೆಜ್ಜೆ ಹಾಕಿದುದಕ್ಕಾಗಿ ಅವರನ್ನು ಹೊಗಳಿದರು. ಇದು ಚಿಲ್ಲರೆ ಕಾರ್ಯಸಾಧನೆಯಲ್ಲ!" ಯಾವುದು—? ನಾಡಸೇವೆಗಾಗಿ ಹಳ್ಳಿಗರು ದಿಟ್ಟತನದ ಹೆಜ್ಜೆ ಹಾಕಿದುದೆ?! ಇಲ್ಲವೆ ಪಟ್ಟಣಿಗರು ಕೆಲವರು ಅವರನ್ನು ಹೊಗಳಿದುದೆ?!

ಶ್ರೀ ಕೃಷ್ಣಶರ್ಮರ ವರ್ಧಾಯಾತ್ರೆಯ 'ಗೆಟಾಟ್' ಅಧ್ಯಾಯದಲ್ಲಿ ನಾವು ಹೊಟ್ಟೆ ತುಂಬ ನಕ್ಕು ಆನಂದಿಸುವುದು ಕೊನೆಗೆ ;—'ಗೆಟಾಟ್' ಎಂದರೆ 'ಗೆಸ್ಟ್ ಹೌಸ್' ಎಂದು ತಿಳಿದಾಗ! ಅಂತಹ ಕೌಶಲ್ಯಗಳನ್ನೇ ಶ್ರೀ ಅಶ್ವಥನಾರಾಯಣರಾಯರೂ ತೋರಿಸದೇ ಇಲ್ಲ. ಸತ್ಯಾಗ್ರಹಿ ತನ್ನ ಗೆಳೆಯನ ಕುರಿತು ಆ ತನಕ ಏನೂ ಪರಿಚಯ ಮಾಡಿಕೊಡದೆ ಫಕ್ಕನೆ "ನನ್ನ ಗೆಳೆಯ ಜನರಿಗೆ ತಿಳಿಯುವಂತೆ ಚೆನ್ನಾಗಿ ಮಾತನಾಡಿದ. ಅವನ ಮಾಸ್ತರರ ಕೆಲಸ ಈಗ ಒಳ್ಳೇ ಉಪಕಾರ ಮಾಡಿತು" ಎಂದು ಬರೆದು, ಓದುಗರು ನಸುನಕ್ಕು ತಲೆದೂಗುವಂತೆ ಮಾಡುತ್ತಾರೆ.

ಗ್ರಾಮದ ಜನರಿಗೆ ಸ್ವಯಂಸೇವಕರು ಮಾಡಿಕೊಂಡ ಹತ್ತು ವಾಕ್ಯಗಳ ಭಿನ್ನವು ಕಿರಸ್ತಾನರ ಬೈಬಲ್ಲಿನ ಹತ್ತು ಮಹಾಸೂತ್ರಗಳಾದುವು!

ತುರಂಗದ ದ್ವಾರದ ಬಳಿ ಬಂದಾಗ ಜಮಾದಾರ ಝಡತಿ ಮಾಡಿದ. ಪ್ರಾಣ ರಕ್ಷಣೆಗಾಗಲೀ ಪ್ರಾಣಹಿಂಸೆಗಾಗಲೀ ಆಯುಧಗಳಿರಬಾರದಷ್ಟೇ! ಕಡೆಗೆ ಕತ್ತಿನಲ್ಲಿ ಜನಿವಾರವೂ ಇರಬಾರದು, ಆದರೆ "ನನಗೆ ಈ ವಿಸರ್ಜನ ನಾಟಕದ ಅಗತ್ಯ ಬೀಳ ಲಿಲ್ಲ; ಆಶ್ರಮದ ಕೊಳದಲ್ಲಿ ಪವಿತ್ರ ಜಾಹ್ನವಿಗೆ ಸಾನೇ ಮೊದಲು ಒಪ್ಪಿಸಿದ್ದೆ. ಈಸುವಾಗ ಅದರಿಂದ ಬಹಳ ತೊಂದರೆಯಾಗುತ್ತಿತ್ತು!" ಒಳ್ಳೆಯ ಬ್ರಾಹ್ಮಣ! ಗುರು ಗಾಂಧೀಜಿ ಯಜ್ಞೋಪವೀತವನ್ನು ಬಿಟ್ಟು ಇರುವವರಲ್ಲ; ಈ ಶಿಷ್ಯ ಬಿಡದೆ ಇರುವವರಲ್ಲ!

ಸಂಜೆಯಾಗುತ್ತಲೆ ಇಹದ ಜ್ಞಾನವಾಯಿತಂತೆ! "ಹೊಟ್ಟೆಯಲ್ಲಿ ಡೊಂಬರು ಆಡುತ್ತಿದ್ದಾರೆ. ಊಟದ ಗತಿಯೇನು?" ಎಂದು ಗೆಳೆಯರನ್ನು ಕೇಳಬೇಕಾಯಿತು. ಆದರೆ ತಡವಾಗಿ ಜೈಲು ಸೇರಿದವರಿಗೆ ಊಟ ಹಾಕಬೇಕೆಂಬ ನಿಯಮವಿರಲಿಲ್ಲ! ಜೈಲು ಜೀವನದ ಸರಸ ಭಾಗವನ್ನು ಓದಿ ಮರೆಯುವಂತಿಲ್ಲ. 'ಆಲ್‌ಬೇಲ್' ಕೂಗು, 'ಬುರಾಕು', 'ತಿಕ್ಕಿ-ಫಿಕ್ಕಿ'ಗಳು ಶಾಶ್ವತವಾಗಿ ಉಳಿಯುವಂತೆ ಶ್ರೀ ರಾಯರು ಮಾಡಿದ್ದಾರೆ. "ಹೊಲೆಯನೊಬ್ಬನು ಮಾಡಿದ ಅಡಿಗೆಯನ್ನು ಹೊಲಸು ನಾರುವ ಸವರ್ಣನೊಬ್ಬ ಬಡಿಸಿದ್ದು, ತಿನ್ನಬೇಕಾಗಿದೆ," ಅಂತೆ. ಹೊಲೆಯನೇ ಬಡಿಸುತ್ತಿದ್ದರೆ ಹೊಲಸು ನಾರುವ ಸವರ್ಣ ಅದರಲ್ಲಿ ಕೈ ಇಕ್ಕಿದುದರಿಂದ ಅದು ಒಗ್ಗದೆ ಹೋಯಿತು! ಎಂತಹ ಕ್ರೂರ ಸತ್ಯ; ಶ್ರೇಷ್ಠ ವಿಡಂಬನ! 'ಬಾಬಿನ ಜಾತಿಗೆ ಸೇರಿದವನಾದ' ಬಂಗಾಳಿ ಬಾಬು ಜೈಲಧಿಕಾರಿಗಳ ಒತ್ತಾಯಕ್ಕೆ 'ಬಾಂಬು ಮಾಡಿ ತೋರಿಸುವೆ'ನೆಂದು ಹೇಳಿ, ಮಂಜಿನಗಡ್ಡೆ, ಸಕ್ಕರೆ, ಹಾಲು ತರಿಸಿ, ಐಸ್‌ಕ್ರೀಂ ಮಾಡಿ ಕುಡಿದ ಕಥೆ, ರಸಿಕಜೀವಿಗಳನ್ನು ಸೆರೆಮನೆಗೆ ಆಕರ್ಷಿಸುವಷ್ಟು ಶಕ್ತವಾಗಿದೆ.

ಜೈಲಿನಲ್ಲಿ ಸಂಗಡಿಗರೊಂದಿಗೆ ಹರಟೆ ಹೊಡೆಯುತ್ತಿದ್ದಾಗ ಒಬ್ಬರು ಹೇಳಿದರು: "ನೀನೇ ಕಣಯ್ಯ ಹಿಂದೂಸ್ಥಾನದ ಪ್ರಜಾಪ್ರಭುತ್ವದ ಮೊದಲನೇ ಅಧ್ಯಕ್ಷ" ಎಂದು. ಸತ್ಯಾಗ್ರಹಿ ಸ್ವಯಂಸೇವಕ ಉತ್ತರವಿತ್ತ: "ಸದ್ಯಃ ನನ್ನ ಆಮಶೌಚ ನಿಲ್ಲಲಿ ಆಮೇಲೆ ನೋಡೋಣ!"

ಮ್ಯಾಕ್ಸಿಂ ಗಾರ್ಕಿಯ "ತಾಯಿ"

ರಷ್ಯನ್ ಸಾಹಿತ್ಯದಲ್ಲಿ—ಏಕೆ? ಜಗತ್ತಿನ ಸಾಹಿತ್ಯದಲ್ಲೇ—ಮ್ಯಾಕ್ಸಿಂ ಗಾರ್ಕಿಯ 'Mother' ಕಾದಂಬರಿಗೆ ಒಂದು ಹಿರಿಯ ಸ್ಥಾನವಿದೆ. ಝಾರ್ ಅರಸರ ದಬ್ಬಾಳಿಕೆಯ ಕಾಲದಲ್ಲಿ ಕ್ರಾಂತಿಕಾರಿಯಾಗಿದ್ದ ಯುವಕನೊಬ್ಬನ ತಾಯಿಯ—ಆದರ್ಶ-ತಾಯಿಯ ಜೀವಿತದ ಸೊಗಸಾದ ಚಿತ್ರ ಅದು. ದೇವರಲ್ಲಿ ವಿಶ್ವಾಸವುಳ್ಳ—ಅರಸನಲ್ಲಿ ಭಕ್ತಿಯುಳ್ಳ-ಆ ತಾಯಿ ಕೊನೆಗೂ ಮಗನ ಹಾದಿಗೇ ಬರುವ ಮಾರ್ಮಿಕ

ಕತೆ. ಬಿಡುಗಡೆಯ ಬೆಲೆಯಲ್ಲಿ ಕಂಡುಬರುವ ತಾಯಿಗೂ ಗಾರ್ಕಿಯ ತಾಯಿಗೂ ಅಜಗಜಾಂತರವಿದೆ. ಆದರೆ ಈ ಎರಡೂ ಕೃತಿಗಳಲ್ಲೂ ತಾಯಿಯ–ಹೆತ್ತ ತಾಯಿಯ –ಎರಡು ಸಹಜ ಚಿತ್ರಗಳಿವೆ.

'ಬಿಡುಗಡೆಯ ಬೆಲೆ'ಯಲ್ಲಿರುವ ತಾಯಿಗೆ ಮಗನ ಕಾರ್ಯಸಾಧನೆಯ ಕುರಿತು ಆತುರವಿಲ್ಲ. ಮಗನು 'ಒಳ್ಳೆಯವ'ನಾಗಿ ಬದುಕಿ ಬಾಳಬೇಕೆಂಬುದು ಅವಳ ಆಸೆ. ಹಲವೊಮ್ಮೆ ಹೆತ್ತ ಕರುಳು ಮಗನಿಗಾಗಿ ಮಿಡಿದುಕೊಳ್ಳುತ್ತದೆ. "ಎಂಥ ಪೋಲಿ ಘಟಿಂಗನಾದರೂ ಸರಿಯೆ, ಮಗನನ್ನು ಮಡಿಲಲ್ಲಿ ಹಾಕಿಕೊಳ್ಳುತ್ತಾಳೆ" ಎಂದಿರುವರು. ಲೇಖಕರು ಸೆರೆಮನೆಯಿಂದ ಬಿಡುಗಡೆಯಾಗಿ ರೋಗಪೀಡಿತನಾಗಿ ಬದುಕಿ ಉಳಿದ ಬಳಿಕ, ನಿರುದ್ಯೋಗಿಯಾಗಿ ಅಲೆಯಬೇಕಾದಾಗ, ತಾಯಿ ಕೇಳು ತ್ತಾಳೆ: "ನಿನಗೆ ಸ್ವಾತಂತ್ರ್ಯ ಸಿಕ್ಕಂತಾಯಿತೆ ಮಗೂ?" ಅದು ಕೂರಂಬಾಗಿ ತೋರಬಹುದು, ಆದರೆ ಹಾಗೆ ಹೇಳದೆ ಆಕೆ ಬೇರೇನು ಮಾಡಬಲ್ಲಳು?

ತಾಯಿಯ ಅನುಜ್ಞೆಯಿಲ್ಲದೆ ಸತ್ಯಾಗ್ರಹಕ್ಕೆಂದು ಓಡಿಹೋದುದಕ್ಕೆ ಅವಳು ಹೇಳುತ್ತಾಳೆ: "ನೀನು ಸತ್ಯಾಗ್ರಹಿ ಅಲ್ಲವೇನಪ್ಪ? ನಿನ್ನ ತಾಯಿಗೆ ಸುಳ್ಳು ಹೇಳಿ ಮೋಸಮಾಡಿ ಹೇಡಿಯ ಹಾಗೆ ಓಡಿಹೋಗುತ್ತಾರೆಯೆ? ಇದೆಯೇ ನಿನ್ನ ಸತ್ಯದ ಆಗ್ರಹ? ನಿನ್ನ ಸತ್ಯದ ಮಾತಿಗೂ ಈ ನಡತೆಗೂ ಎಷ್ಟು ವ್ಯತ್ಯಾಸ ನೋಡು!" ಇದನ್ನು ಕೇಳಿದಾಗ ಈ ಭೂಗರ್ಭದಲ್ಲಿ ಇಳಿದು ಹೋಗೋಣ ಎನ್ನಿಸಬಹುದು. ತಾಯಿ ಜತೆಯಲ್ಲಿ ಕಣ್ಣೀರನ್ನೂ ಸುರಿಸಿದಳೆಂದರೆ, ಆಕೆಯ ಸೆರಗಿನಲ್ಲಿ ಮುಖವನ್ನು ಮರೆಮಾಡಿ ಅಳಬೇಕಾಗಬಹುದು.

ತಾಯಿಯನ್ನು ಅತಿ ನಿಕೃಷ್ಟ ಸ್ಥಿತಿಯಲ್ಲಿ ಬಿಟ್ಟು ಮಗ ಜೈಲಿಗೆ ಹೋಗಿ ದ್ದಾನೆ. ಜೈಲಿನಿಂದ ಜ್ವರ-ಕಾಯಿಲೆಗಳೊಡನೆ ಹಿಂದಕ್ಕೆ ಬಂದು, "ಉಸ್ಸಾ! ಈ ಮನೆಯಲ್ಲಿ ಇರಲಾರೆ; ಒಳ್ಳೆ ಮನೆ ಬೇಕು" ಎನ್ನುತ್ತಾನೆ.

ಆಕೆ ಕೇಳುತ್ತಾಳೆ: ಅಷ್ಟು ಹೆಚ್ಚು ಬಾಡಿಗೆ ಹೇಗೆ ಕೊಡಬೇಕಪ್ಪಾ ಈ ಕಾಲ ದಲ್ಲಿ?"

"ಹಾಗಾದರೇನು, ನಾನು ಸಾಯಲಿ ಎಂದು ನಿನ್ನ ಅಭಿಪ್ರಾಯವೇನು?" ಎಂದು ಮಗನ ವಿಕಟ ಪ್ರಶ್ನೆ. ಹೌದು: ಎಂಥ ವಿಕಟ ಪ್ರಶ್ನೆ! ಆದರೆ ತಾಯಿಯ ಹೃದಯ ಬಹು ವಿಶಾಲವಾದುದು: ಏನು ಮಾಡುವುದಕ್ಕೂ ಅದು ಹಿಂಜರಿಯದು.

ಮಗನ ಬೆಂಬಲವಾಗಿ ನಿಂತ ತಾಯಿಯ ಚಿತ್ರವನ್ನು ಗಾರ್ಕಿ ತನ್ನ ಕೀರ್ತಿ ವೆತ್ತ ಕುಂಚದಿಂದ ಚಿತ್ರಿಸಿದ್ದಾನೆ. ಅಂತಹ ತಾಯಂದಿರು ಭಾರತದಲ್ಲೂ ಇಲ್ಲದೆ ಇಲ್ಲ. ಆದರೆ ತಾಯಿಯ ಇನ್ನೊಂದು ಚಿತ್ರವನ್ನು ಶ್ರೀ ಅಶ್ವಥನಾರಾಯಣ ರಾಯರು ಅಳುಕಿಲ್ಲದೆ ಬರೆದಿದ್ದಾರೆ, ಚೆನ್ನಾಗಿ ಬರೆದಿದ್ದಾರೆ.

'ಬಿಡುಗಡೆಯ ಬೆಲೆ'ಯು ಕನ್ನಡ ಸಾಹಿತ್ಯದಲ್ಲೊಂದು ಹೊಸ ಯತ್ನ. ಆ ಯತ್ನ ಸಫಲವಾಗಿದೆ; ಎಣಿಕೆಯನ್ನು ಮೀರಿ ಸಫಲವಾಗಿದೆ. ಪರದಾಸ್ಯದಲ್ಲಿರುವ

ಭಾರತೀಯ ಬಂಧುವಿಮೋಚನೆಗೆ ಅದು ಕರೆ ಕೊಡುತ್ತಿದೆ. ಅದೊಂದು ಉಜ್ವಲ ಕೃತಿ, ಅಮರ ಗ್ರಂಥ, ಜತೆಯಲ್ಲೆ ಒಂದು ಒಳ್ಳೆಯ ಜೀವನ ಸಾಹಿತ್ಯ.

○ ಮನೋಹರ ಗ್ರಂಥಮಾಲೆ ತನ್ನ ಪ್ರಕಟಣೆಗಳನ್ನು ಕುರಿತು ಏರ್ಪಡಿಸಿದ್ದ 'ನನಗೆ ಮೆಚ್ಚುಗೆಯಾದ ಗ್ರಂಥ' ಪ್ರಬಂಧ ಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಪ್ರಬಂಧ. ಅಚ್ಚಾದದ್ದು ೧೯೪೨ರ ಜುಲೈ ತಿಂಗಳ 'ಜೀವನ'ದಲ್ಲಿ.

ಕನ್ನಡ ಸಾಹಿತ್ಯದ ಪ್ರಗತಿಶೀಲರು ಎತ್ತ ಸಾಗಿದ್ದಾರೆ?

ಕನ್ನಡ ಸಾಹಿತ್ಯದಲ್ಲಿ ೧೯೪೩–೪೪ರ ಅವಧಿಯಲ್ಲಿ ಒಂದು ರೀತಿಯ ಕೋಲಾಹಲವನ್ನೇ ಉಂಟುಮಾಡಿದ ಪ್ರಗತಿಶೀಲ ಲೇಖಕರ ಚಳವಳಿ, ಕ್ರಮೇಣ ಕ್ಷೀಣವಾಗಿ ಹೋಯಿತು. ಆ ಚಳವಳಿಯ ಗುರಿ–ಧ್ಯೇಯಗಳ ಬಗ್ಗೆ ನಿರ್ದಿಷ್ಟ ಅಭಿಪ್ರಾಯಗಳೇ ಇರದಿದ್ದ, ತಪ್ಪು ಕಲ್ಪನೆಯಿದ್ದ, ಕೆಲವರ ಸ್ವಯಂ ಪ್ರತಿಷ್ಠೆಯ ಬಂಡೆಗಲ್ಲಿಗೆ ಬಡೆದು ಪ್ರಗತಿಶೀಲರ ಆಂದೋಲನ ಕುಂಠಿತವಾಯಿತು.

ಕನ್ನಡ ನಾಡಿನ ಪ್ರಗತಿಶೀಲರನ್ನೆಲ್ಲ ಒಂದುಗೂಡಿಸಿ ಚಳವಳಿಯನ್ನು ಪುನರುದ್ದೀಪನಗೊಳಿಸಲು, ಅದಕೋಸ್ಕರ ಸಮ್ಮೇಳನವನ್ನು ಕರೆಯಲು ಮಾಡಿದ ಯಾವ ಯತ್ನವೂ ಆಗ ಫಲಕಾರಿಯಾಗಲಿಲ್ಲ.

ಸಂಘಟನೆಯ ಸ್ವರೂಪ ಸಾಧ್ಯವಾಗದೆ ಹೋದರೂ ಹಲವಾರು ಲೇಖಕರೇನೋ ಆ ಚಳವಳಿಯ ಉದಾತ್ತ ಧ್ಯೇಯಗಳ ಪ್ರಭಾವಕ್ಕೆ ಒಳಗಾದರು. ಅವರ ಕೃತಿಗಳ ವಸ್ತುವಿನ ವ್ಯಾಪ್ತಿ ಬೆಳೆಯಿತು.

....ಈಗ ಹಲವು ವರ್ಷಗಳ ಮೇಲೆ ಮತ್ತೊಮ್ಮೆ ಕನ್ನಡ ಪ್ರಗತಿಶೀಲ ಸಾಹಿತಿಗಳ ಸಮ್ಮೇಳನದ–ಸಂಘಟನೆಯ ಮಾತು ಕೇಳಿಸುತ್ತಿದೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಜೂನ್ ೪ ರಿಂದ ೭ ರವರೆಗೆ ಜರುಗಿದ ಸಮ್ಮೇಳನವೊಂದು ಪ್ರಗತಿಶೀಲತೆಯ ವಿವಾದಕ್ಕೆ ಮತ್ತೆ ಪ್ರಾಮುಖ್ಯತೆಯನ್ನು ತಂದಿದೆ.

ಯಾರ ಸಮ್ಮೇಳನ?

ಹಿರಿಯೂರಿನಲ್ಲಿ ನಡೆದ ಸಮಾರಂಭದ ಹೆಸರು ಪ್ರಗತಿಶೀಲ ಸಾಹಿತಿಗಳ ಪ್ರಥಮ ಸಮ್ಮೇಳನ ಎಂದು. ಹಿರಿಯೂರಿನ ಪ್ರಗತಿಶೀಲರ ಸಾಹಿತಿಗಳ ಸಮ್ಮೇಳನವೆ? ಚಿತ್ರದುರ್ಗ ಜಿಲ್ಲೆಯದೆ? ಮೈಸೂರು ಸಂಸ್ಥಾನದ್ದೆ? ಅಖಿಲ ಕರ್ನಾಟಕದ್ದೆ?–ಏನೆಂಬುದು ಆಹ್ವಾನ ಪತ್ರಿಕೆಯಿಂದ ಸ್ಪಷ್ಟವಾಗಲಿಲ್ಲ. ಹಿರಿಯೂರಿನ 'ವಿಜಯ ಕಲಾವಿದರು' ಈ ಸಮ್ಮೇಳನವನ್ನು ಕರೆದಿರುವರೆಂದು ಹೇಳಲಾಯಿತು. ಈ ವಿಷಯ ಜಾಹೀರಾದುದು ಸಮ್ಮೇಳನಕ್ಕೆ ನಾಲ್ಕಾರು ದಿನಗಳ ಅವಕಾಶ ಇದ್ದಾಗ ಮಾತ್ರ.

ಒಂಭತ್ತು ವರ್ಷಗಳ ಹಿಂದೆ ಪ್ರಗತಿಶೀಲ ಲೇಖಕರ ಚಳವಳಿ ಆರಂಭವಾದಾಗಿನಿಂದ ಅದರಲ್ಲಿ ದುಡಿದಿರುವ ಹಲವಾರು ಲೇಖಕರಿದ್ದಾರೆ. ಅವರಲ್ಲಿ ಯಾರನ್ನೂ ಕೇಳದೆ, ಅವರ ಸಿದ್ಧತಾ ಸಮಿತಿಯೊಂದನ್ನು ರಚಿಸದೆ, ಯಾವುದೋ ವ್ಯಕ್ತಿಯೊಬ್ಬರ ನಿರ್ದೇಶದಂತೆ ವಿಜಯ ಕಲಾವಿದರು ಸಮ್ಮೇಳನ ಕರೆದರು.

ಅದರ ಅಧ್ಯಕ್ಷರಾಗಿ ನಿಯೋಜಿತರಾದ (ವಿಜಯ ಕಲಾವಿದರಿಂದ?) ವೈದ್ಯಗುರು ದ.ಕೃ.ಭಾರದ್ವಾಜರು. "ಈ ಸಮ್ಮೇಳನವನ್ನು ಮೈಸೂರು ಸಂಸ್ಥಾನದ ಪ್ರಗತಿಶೀಲ ಲೇಖಕರ ಸಮ್ಮೇಳನವೆಂದು ಕರೆಯಬಹುದು" ಎಂದರು. ಆದರೆ ಸಮ್ಮೇಳನದ ಸೂತ್ರಚಾಲಕರಾಗಿದ್ದ ಅ.ನ.ಕೃ. ಮೂರನೇ ದಿನ ಅದನ್ನು ಕನ್ನಡ ನಾಡಿನ ಪ್ರಗತಿಶೀಲ ಸಾಹಿತಿಗಳ ಪ್ರಥಮ ಸಮ್ಮೇಳನವೆಂದು ಕರೆದರು. ದ್ವಿತೀಯ ಸಮ್ಮೇಳನ ಡಿಸೆಂಬರ್ ತಿಂಗಳಲ್ಲಿ ಬಳ್ಳಾರಿಯಲ್ಲಿ ಜರುಗುವುದೆಂದರು; ಆ ಸಮ್ಮೇಳನದ ಸ್ವಾಗತಾಧ್ಯಕ್ಷರನ್ನೂ ಅಲ್ಲೇ ನಿಯೋಜಿಸಿದರು ; ಪ್ರಾಂತಿಕ ಪ್ರಗತಿಶೀಲ ಲೇಖಕರದೊಂದು ಸ್ಥಾಯಿ ಸಮಿತಿಯನ್ನೂ ಪ್ರತ್ಯೇಕವಾಗಿ ರಚಿಸಿಕೊಂಡರು.

ಅಂತೂ ಪ್ರಗತಿಶೀಲ ಲೇಖಕರ ಸಮ್ಮೇಳನವೊಂದು ಜರಗಿತು.

ತೀರ ಅಪ್ರಾತಿನಿಧಿಕ

ಯಾವ ದೃಷ್ಟಿಯಲ್ಲೂ ಸಮ್ಮೇಳನ ಪ್ರಾತಿನಿಧಿಕವಾಗಿರಲಿಲ್ಲ. ನಿಯೋಜಿತ ಅಧ್ಯಕ್ಷರಲ್ಲದೆ, ಸಮ್ಮೇಳನಕ್ಕೆ ಬಂದವರಲ್ಲಿ ಚಳವಳಿಯ ಸಂಘಟನೆಗೆ ಸಂಬಂಧಿಸಿದ ಪ್ರಮುಖರೆಂದರೆ ಅ. ನ. ಕೃ. ಮತ್ತು ನಾಡಿಗೇರ್ ಮಾತ್ರ. ನಿರಂಜನ ಎರಡನೇ ದಿನ ಬಂದರು. ಭಾಷಣಕಾರರಾಗಿ ವಿಶೇಷ ಆಹ್ವಾನದ ಮೇರೆಗೆ ಮೈಸೂರಿನಿಂದ ಬಂದಿದ್ದ ಚದುರಂಗ–ಅಡಿಗರು ಪ್ರತಿನಿಧಿಗಳಾದವರಲ್ಲಿ ಪ್ರಮುಖರು. ಚಳವಳಿಗೆ ಇದೇ ಮೊದಲ ಬಾರಿಗೆ ಬಂದ ಹೊಸಬರೆಂದರೆ, ದೇವುಡು ಮತ್ತು ಆಸ್ಥಾನ ವಿದ್ವಾನ್ ನಂಜುಂಡಾರಾಧ್ಯರು. ಇವರಲ್ಲದೆ ಇನ್ನೂ ಮೂರು–ನಾಲ್ಕು ಮಂದಿ ಲೇಖಕರನ್ನು ಎಣಿಸಬಹುದಾಗಿತ್ತು. ಹೀಗೆ ಒಟ್ಟು ಲೇಖಕ–ಪ್ರತಿನಿಧಿಗಳು ಹನ್ನೆರಡು ಮಂದಿ; ಸ್ವಾಗತ ಸಮಿತಿಯವರ ಸಂಖ್ಯೆ ಹದಿನಾರು (ಇವರಲ್ಲಿ ಬಹಳ ಜನ ಲೇಖಕರಲ್ಲದವರು). ಕಾರ್ಯ ಕಲಾಪಗಳನ್ನೆಲ್ಲ ನೋಡಲು ಬರುತ್ತಿದ್ದ ಊರವರ ಸಂಖ್ಯೆ ಇದ್ದಾಗ ಐವತ್ತು, ಹೆಚ್ಚಿದ್ದಾಗ ನೂರು.

ಹಾಗಾದರೆ, ಯೋಚಿಸುವುದಕ್ಕೂ ಅವಕಾಶ ದೊರೆಯದಷ್ಟು ಆತುರ–ಅವಸರವಾಗಿ ಈ ಸಮ್ಮೇಳನವನ್ನು ಕರೆದು, ತೀರ ಅಪ್ರಾತಿನಿಧಿಕವಾದ ರೀತಿಯಲ್ಲಿ, ಅದನ್ನು ಜರಗಿಸುವ ಉದ್ದೇಶವೇನಿತ್ತು?

ಎಂಥ ಪ್ರಗತಿಶೀಲತೆ?

ಈ ಸಮ್ಮೇಳನದ ಉದ್ಘಾಟನೆಗೆ ಬಂದವರು ಬಳ್ಳಾರಿಯ ಭಾಸ್ಕರಾಚಾರ್ಯ ರಾಮಚಂದ್ರ ಶರ್ಮ ಸ್ವಾಮಿ ಎಂಬವರು. ಇವರು ಸುಪ್ರಸಿದ್ಧ ವೈದ್ಯರೆಂದೂ

ದೇವಿಯ ಆರಾಧಕರೆಂದೂ ತೆಲುಗು ಭಾಷೆಯ ಕವಿಯೆಂದೂ ಅಲ್ಲಿದ್ದವರಿಗೆ ಪರಿಚಯ ಮಾಡಿಕೊಡಲಾಯಿತು.

ಅಧ್ಯಕ್ಷರು ಅಚ್ಚುಮಾಡಿದ್ದ ಭಾಷಣವನ್ನೇ ತಂದಿದ್ದರು. ಅದರಲ್ಲಿ ಅವರು ಆದರ್ಶವಾದ ಮತ್ತು ಅಧ್ಯಾತ್ಮವಾದದ ಪ್ರಚಾರ ನಡೆಸಿದರು.

ಭಾರತೀಯ ಪ್ರಗತಿಶೀಲ ಲೇಖಕರ ಚಳವಳಿಯ ಘೋಷಣೆಯಲ್ಲಿ ಹೇಳಿರುವುದೇನು ?

ಪುರಾಣ ಸಾಹಿತ್ಯ ಕುಸಿದು ಬಿದ್ದಮೇಲೆ ತಲೆಯೆತ್ತಿದ ಭಾರತೀಯ ಸಾಹಿತ್ಯ ಜೀವನದ ಸಹಜತೆಯಿಂದ ದೂರ ಸರಿಯುವ ಮನೋಭಾವವನ್ನು ವ್ಯಕ್ತಪಡಿಸುತ್ತಿದೆ. ಅದು ಸಹಜತೆಯಿಂದ ದೂರವಾಗಿ ಅಧ್ಯಾತ್ಮವಾದದಲ್ಲಿಯೂ ಆದರ್ಶವಾದದಲ್ಲಿಯೂ ಆಶ್ರಯ ಪಡೆಯಲೆತ್ನಿಸುತ್ತಿದೆ. ಪರಿಣಾಮವಾಗಿ ಅದು ಕ್ಷಯಿಸಿ, ಮಾನಸಿಕ, ದೈಹಿಕ ದೌರ್ಬಲ್ಯಗಳನ್ನು ತೋರಿಸಿ, ಒಂದು ಬಗೆಯ ಕಠೋರ ಸಂಪ್ರದಾಯ ಪ್ರಿಯತೆಯನ್ನೂ ವಿಕೃತ ಆದರ್ಶವನ್ನೂ ನಿರ್ಣಯಮಾಡಿದೆ.

ಭಾರದ್ವಾಜರು ಪ್ರಗತಿಶೀಲತೆಯ ಹೆಸರಲ್ಲಿ ಈಗ ಪ್ರತಿಪಾದಿಸುತ್ತಿರುವುದೇನು?

"....ವೈಜ್ಞಾನಿಕ ವಿಧಾನದ ಚಿಂತನೆಯಿಂದ ನಮ್ಮ ಭೌತಿಕ ಜ್ಞಾನವು ಬೆಳೆಯುವುದು, ನಮ್ಮಲ್ಲಿ ತಾರ್ಕಿಕ ಬುದ್ಧಿಯು ಹೆಚ್ಚುವುದು, ಆದರೆ ಅದು ನಮಗೆ ಜೀವನದ ಮರ್ಮವನ್ನು ತಿಳಿಸಿ, ನಮ್ಮ ಆತ್ಮವಿಕಾಸಗೊಳ್ಳಲು ಸಹಾಯ ಮಾಡಲಾರದು."

"....ಇಂದು ವಿಜ್ಞಾನದ ಪ್ರಭಾವಕ್ಕೊಳಗಾಗಿರುವ ಅನನುಭವಿಗಳಾದ ನಮ್ಮ ತರುಣ ತರುಣಿಯರು ಪ್ರತಿಯೊಂದು ಕೃತಿಯನ್ನು ತಾವು ಕಲಿತಿರುವ ವಿಜ್ಞಾನದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವ ಚಟವು ಅವರಿಗೆ ಇಂದಿನ ವಿದ್ಯಾಭ್ಯಾಸ ಕ್ರಮದಿಂದ ಬಂದುಬಿಟ್ಟಿದೆ. ಈ ವ್ಯಾಧಿಯು ನಮ್ಮ ದೇಶದಲ್ಲಿ ಮಾತ್ರವಲ್ಲ, ಎಲ್ಲ ದೇಶಗಳಲ್ಲಿಯೂ ವ್ಯಾಪಿಸಿಕೊಂಡಿದೆ...."

ಭಾರದ್ವಾಜರ ಪ್ರಕಾರ ಪ್ರಗತಿಶೀಲ ಕಲಾವಿದನ ಕರ್ತವ್ಯವೇನು ? ಲೇಖಕನ ಗುರಿಯೇನು ?

"....ಸೃಷ್ಟ್ಯಾತ್ಮಕ ಭಾವವುಳ್ಳ ಕಲಾವಂತನು ಮಾನವ ಜೀವನಕ್ಕೆ ಸಂಬಂಧಿಸಿದ ಒಂದು ವಿಷಯವನ್ನು ಆರಿಸಿ, ಅದರಲ್ಲಿ ತನ್ನ ಅದ್ವಿತೀಯವಾದ ಅನುಭಾವ ವಿಭಾವಗಳ ದೃಷ್ಟಿಗಳನ್ನು ಬೆರೆಸಿ ತಾನು ಕಂಡ ಸೌಂದರ್ಯವನ್ನು—ಸತ್ಯವನ್ನು ಬೇರೆಯವರ ಹೃದಯವೂ ಅರಿತು ಶಾಂತಿಯನ್ನೂ ಆನಂದವನ್ನೂ ಅನುಭವಿಸುವಂತೆ ಮಾಡುವನು."

....ಸಾಹಿತ್ಯದಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳಡಗಿದ್ದರೆ, ಆತ್ಮವನ್ನು ಜಾಗೃತಗೊಳಿಸಿ ವಿಕಾಸಗೊಳಿಸುವುದೆ ಅದರ ಮುಖ್ಯ ಕೆಲಸ....ನಮ್ಮಲ್ಲಿರುವ ಆತ್ಮವನ್ನು ಜಾಗೃತಗೊಳಿಸುವುದೇ ಅದರ ಗುರಿ....

"ಸಾಹಿತ್ಯವು ಯಾವುದನ್ನೂ ಧರ್ಮಾಂತರಗೊಳಿಸುವುದಿಲ್ಲ. ಅಥವಾ ಅದು ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡುವುದಿಲ್ಲ. ಅದು ನಮ್ಮ ಮನಸ್ಸನ್ನು ಬದಲಾಯಿಸಿ, ನಮ್ಮ ಹೃದಯವನ್ನು ಮಿಡಿದು ನಮ್ಮ ಆತ್ಮವು ಶಾಂತಿ ಸುಖವನ್ನು ಅನುಭವಿಸುವಂತೆ ಮಾಡುವುದು...."

ಇದೀಗ ಅವರ ಕಲ್ಪನೆಯ ಪ್ರಗತಿಶೀಲತೆ! ರಾಯಲಸೀಮೆ–ಕೋಲಾರಗಳ ಕ್ಷಾಮ ; ಸ್ವಾತಂತ್ರ್ಯ ನೀಡದೇಹೋದ ಸುಖ ; ಕೋಟಿ ಜನತೆಯ ಸಂಕಟದ ನಿಟ್ಟುಸಿರು ; ಬಾಳ್ವೆಗಾಗಿ, ಭವಿಷ್ಯತ್ತಿಗಾಗಿ ಮಾನವನ ಹೋರಾಟ–ಇವೆಲ್ಲದರ ವಾಸ್ತವಿಕ ಚಿತ್ರಣ ಸಾಹಿತ್ಯದಲ್ಲಾಗಬೇಕೆಂದು, ಸಮಾಜದ ಪುನರ್ವ್ಯವಸ್ಥೆಯ ಕಾರ್ಯದಲ್ಲಿ ಪ್ರಗತಿಶೀಲ ಸಾಹಿತಿಗಳು ಮುಂದಾಗಬೇಕೆಂದು, ಭಾರದ್ವಾಜರು ಹೇಳಲಿಲ್ಲ. ಹಾಗೆ ಹೇಳುವ ಅವಶ್ಯಕತೆ ಅವರಿಗೆ ತೋರಲಿಲ್ಲ !

ಆ 'ಪ್ರಗತಿಶೀಲ' ಭಾಷಣದ ಇತರ ಮುಖ್ಯ ಅಂಶಗಳೆಂದರೆ, ರಷ್ಯಾದ ಕುರಿತಾದ ನಿಂದನೆ ; "ಇಂದು ಜಗತ್ತಿನ ಅನೇಕ ವಿಜ್ಞಾನಿಗಳು, ಡಾಕ್ಟರುಗಳು, ತಂತಮ್ಮ ಕ್ಷೇತ್ರದಲ್ಲಿ ೨೦–೩೦ ವರುಷ ಸತ್ಯಾನ್ವೇಷಣೆಯ ದೃಷ್ಟಿಯಿಂದ ದುಡಿದು ಬೇಸತ್ತು ಕೊನೆಗೆ ಭಾರತೀಯ ಆಧ್ಯಾತ್ಮಿಕ ಶಾಸ್ತ್ರಕ್ಕೆ ಶರಣು ಹೋಗುತ್ತಿರುವರು" ಎಂಬ ಪ್ರತಿಪಾದನೆ ; "ಈಗಿನಿಂದ ನಿಮಗೆ ೪೦ ವರುಷ ವಯಸ್ಸಾಗುವವರೆಗೆ ಚಿಕ್ಕ ಪುಟ್ಟ ಕಥೆಗಳು ಪ್ರಬಂಧಗಳು ಹರಟೆಗಳು ಮೊದಲಾದ ಲಘು ಸಾಹಿತ್ಯವನ್ನು ರಚಿಸುತ್ತ ಹೋಗಿ", ಮುಂದೆ ದೊಡ್ಡ ಕೃತಿಗಳನ್ನು ನಿರ್ಮಿಸಿ–ಎಂದು ತರುಣ ಸಾಹಿತಿಗಳಿಗೆ ಅವರ ಮನವಿ !

ಇವಿಷ್ಟೇ ಅಲ್ಲದೆ....

–ಕಾಮ ಪ್ರಚೋದಕ ಚಲಚ್ಚಿತ್ರಗಳಿಗೆ ಸರಕಾರ ಅವಕಾಶ ಕೊಡದಂತೆ ನಿಷೇಧ ಪ್ರದರ್ಶನ ಮಾಡಬೇಕು, ಎಂದರು;....ಕರ್ನಾಟಕ ಏಕೀಕರಣ ಏರ್ಪಡಬೇಕೆಂದರು.

–ಟೈಪ್‌ರೈಟರು ನಿರ್ಮಾಣ ವಿಷಯದಲ್ಲಿ ಸರ್ಕಾರ ನಡೆದುಕೊಂಡ ರೀತಿಯನ್ನು ಖಂಡಿಸಿದರು.

ಹೀಗೆ ಭಾರಧ್ವಾಜರ ಭಾಷಣ ತೀರ ಮಾಮೂಲಿನ 'ಅಧ್ಯಕ್ಷ–ಉಪನ್ಯಾಸ'ವಾಯಿತು.

ಪ್ರಗತಿ ಮತ್ತು ಕಾಮ ಪ್ರಚೋದನೆ

ಕಾಳಿದಾಸ, ನಗುವಿನ ಮೀಮಾಂಸೆ, ಕಾವ್ಯ, ಕಾದಂಬರಿಗಳ ಮೇಲೆ ಭಾಷಣಗಳಿದ್ದುವು, ಯಾವುದಾದರೂ ಕನ್ನಡ ಸಾಹಿತ್ಯೋತ್ಸವದಲ್ಲಿರುವ ಭಾಷಣಗಳ ಹಾಗೆ.

ಪ್ರಗತಿಶೀಲ ಲೇಖಕರ ಚಳವಳಿ ಹುಟ್ಟಿದಂದಿನಿಂದ ಈವರೆಗಿನ ಸುಮಾರು ಒಂದು ದಶಕದ—ಕನ್ನಡ ಸಾಹಿತ್ಯ ಪ್ರಗತಿಯ ಬಗ್ಗೆ ಒಂದೇ ಒಂದು ಅಭ್ಯಾಸ ಪೂರ್ಣ ಉಪನ್ಯಾಸವಾಗಲೀ ನಿಬಂಧ ವಾಚನವಾಗಲೀ ಇರಲಿಲ್ಲ. ಆಧುನಿಕ ಕನ್ನಡ ಸಾಹಿತ್ಯದಲ್ಲಿರುವ ನಿಸರ್ಗವಾದ, ವಾಸ್ತವವಾದ, ಆದರ್ಶವಾದ ಈ ಪ್ರವೃತ್ತಿಗಳ ಬಗ್ಗೆ ಯಾವುದೇ ರೀತಿಯ ಚರ್ಚೆಯಾಗಲೀ ವಿಚಾರ ವಿನಿಮಯವಾಗಲೀ ಇರಲಿಲ್ಲ.

ಅ.ನ.ಕೃ. ದೃಷ್ಟಿಯಲ್ಲಿ 'ಅಕ್ಷರ ವ್ಯಭಿಚಾರಿ'ಗಳೂ ಗಂಡಸರೂ ದುಂಡಾ ಪ್ರವೃತ್ತಿಯವರೂ ಆದ ಕನ್ನಡ ವಿಮರ್ಶಕರಿಗೆ ಉತ್ತರವೆಂದು ಬರೆಯಲಾದ "ಸಾಹಿತ್ಯದಲ್ಲಿ ಕಾಮಪ್ರಚೋದನೆ" ಎಂಬ ಪುಸ್ತಕದ ಬಿಡುಗಡೆ, ಸಮ್ಮೇಳನದ ಒಂದು ಮುಖ್ಯ ಕಾರ್ಯಕ್ರಮವಾಗಿತ್ತು.

ಬಿಡುಗಡೆ ಮಾಡಿದ ಭಾಸ್ಕರಾಚಾರ್ಯರು ತಾವಿನ್ನೂ ಪುಸ್ತಕವನ್ನು ಓದಿಲ್ಲವೆಂದರು. ಕಾಮ, ಜೀವನದಲ್ಲಿ ಎಷ್ಟು ಮುಖ್ಯವೆಂದೂ ಆರೋಗ್ಯಕ್ಕೆ ಎಷ್ಟು ಹಿತಕರವೆಂದೂ ವಿವರಿಸಿ, ಅದು ಉತ್ಪನ್ನವಾಗುವ ಬಗೆಯನ್ನು ವರ್ಣಿಸಿದರು. "ಈ ವಿಷಯವಾಗಿ ಬರೆಯಲಾಗಿರುವ ಈ ಮಹಾ ಗ್ರಂಥವನ್ನು ಉದ್ಘಾಟಿಸಲು ಹೆಮ್ಮೆಪಡುತ್ತೇನೆ," ಎಂದರು.

ಗ್ರಂಥ ಪರಿಚಯ ಮಾಡಿಕೊಡಲು ಎದ್ದು ನಿಂತ ಆಸ್ಥಾನ ವಿದ್ವಾನ್ ಆರಾಧ್ಯರು ತಾವೂ ಪುಸ್ತಕವನ್ನು ಪೂರ್ಣವಾಗಿ ಓದಿಲ್ಲವೆಂದರು. ಆದರೂ ಆ ಪುಸ್ತಕದ ಹುಟ್ಟಿಗೆ ಕಾರಣರಾದ ವಿಮರ್ಶಕರ 'ಕಟುಕವೃತ್ತಿ'ಯನ್ನು ಖಂಡಿಸಿ ಬುದ್ಧಿವಾದದ ಮಾತುಗಳನ್ನಾಡಿದರು. ಕಾಮಪ್ರಚೋದನೆಯು ಯಾವಾಗಲೂ ಒಳ್ಳೆಯದೇ ಎಂದರು.

ಸ್ವತಃ ಗ್ರಂಥಕರ್ತೃವೇ ಮಾತನಾಡಿ "ನೂರು ಡಾಕ್ಟರೇಟ್ ಪದವಿ ಪಡೆಯಲು ಬೇಕಾದಷ್ಟು ವಿಷಯ ಇಲ್ಲಿ ಸಂಗ್ರಹಿಸಿದ್ದೇನೆ. ಬೇಕಾದರೆ ಇನ್ನೊಂದು ವರ್ಷದಲ್ಲಿ ಇಂಥಾ ಇನ್ನಿಪ್ಪತ್ತು ಪುಸ್ತಕ ಬರೆಯಬಲ್ಲೆ," ಎಂದರು. ಬೆಂಗಳೂರಿನಲ್ಲಿ ಜರಗಿದ ಕತೆಗಾರ-ಕಾದಂಬರಿಕಾರರ ಸಮ್ಮೇಳನವು ಅಪ್ರಾತಿನಿಧಿಕವೆಂದರು. ಕಾಮ ಪ್ರಚೋದಕ ಸಾಹಿತ್ಯವನ್ನು ಟೀಕಿಸಿ "ಅಲ್ಲಿ ಅವಿವೇಕಿಗಳು ಮಾಡಿದ" ನಿರ್ಣಯವನ್ನು ಖಂಡಿಸಿದರು. ಕಮ್ಯೂನಿಸ್ಟ್ ಸಾಹಿತಿಗಳಿಗೂ ಪುರೋಗಾಮಿ ಸಾಹಿತಿಗಳಿಗೂ "ಎಚ್ಚರದಿಂದಿರಿ !" ಎಂದರು. ರಷ್ಯದ ಆಜ್ಞೆ ಪ್ರಕಾರ ತಾವು ಪುಸ್ತಕ ಬರೆಯಲು ಸಿದ್ಧವಿಲ್ಲವೆಂದೂ ಕಾಮಪ್ರಚೋದನೆಯು ಅಪ್ಪಟ ಸ್ವದೇಶಿಯೆಂದೂ ಆದಿಕಾಲದಿಂದಲೂ ಓತಪ್ರೋತವಾಗಿ ಆ ಪ್ರವೃತ್ತಿ ಹರಿದು ಬಂದಿದೆಯೆಂದೂ ಹೇಳಿದರು.

"ಈ ಬಿಡುಗಡೆ ಸಮಾರಂಭವು ಕಾರ್ಯಕ್ರಮದಲ್ಲಿ ಇದ್ದುದೇ ನಮಗೆ ತಿಳಿದಿರಲಿಲ್ಲವಲ್ಲ" ಎಂದು ಒಬ್ಬರು ಉದ್ಗಾರವೆತ್ತಿದಾಗ ಅಧ್ಯಕ್ಷರು, "ಇಲ್ಲಿಗೆ ಬರುವವರೆಗೆ ನನಗೂ ತಿಳಿದಿರಲಿಲ್ಲ," ಎಂದರು ! ಆದರೆ ಸಮ್ಮೇಳನದ ಮುಖ್ಯ

ಸಂಘಟಕರಾದ ಚಿತ್ರದುರ್ಗದ ಶ್ರೀಧರಮೂರ್ತಿಯವರು (ಪತ್ರಿಕೋದ್ಯೋಗಿ ಮತ್ತು ಅ.ನ.ಕೃ. ಆತ್ಮಚರಿತ್ರೆಯ ಪ್ರಕಾಶಕರು) "ಆ ಕಾರ್ಯಕ್ರಮ ಮೊದಲೇ ನಿರ್ಧಾರ ವಾಗಿತ್ತು" ಎಂದು ಉತ್ತರವಿತ್ತರು !

ಸ್ವಚ್ಛಂದತೆಗೆ ಲೈಸೆನ್ಸ್

ಈಗಿನ ಪತ್ರಿಕಾ ಶಾಸನವನ್ನು ಖಂಡಿಸುವ ಸ್ಥಾನಬದ್ಧತೆಯ ಶಾಸನ ವಾಪಸಾಗಬೇಕೆನ್ನುವ, ಕ್ರಿಮಿಯುದ್ಧವನ್ನು ಖಂಡಿಸುವ, ಕೆಲವು ನಿರ್ಣಯ ಗಳಾದುವು. ಇವು ಮಹತ್ವದ ನಿರ್ಣಯಗಳಾದರೂ ಅವುಗಳ ಬಗ್ಗೆ ಉದ್ದುದ್ದ ಭಾಷಣಗಳಿರಲಿಲ್ಲ. ಎಲ್ಲವೂ ಚುಟುಕಾಗಿದ್ದುವು !

ಆದರೆ ಸಮ್ಮೇಳನದ ಮುಖ್ಯ ನಿರ್ಣಯವಿದ್ದುದು ಬೇರೆಯೇ !

ಅದು ಕಾಮಪ್ರಚೋದಕ ಸಾಹಿತ್ಯಕ್ಕೆ ಸಂಬಂಧಿಸಿದ್ದು. ಫೆಬ್ರವರಿ ಆದಿ ಯಲ್ಲಿ ಬೆಂಗಳೂರಲ್ಲಿ ಜರಗಿದ ಕನ್ನಡ ಕತೆಗಾರ-ಕಾದಂಬರಿಕಾರರ ಸಮ್ಮೇಳನದಲ್ಲಿ, ಕಾಮಪ್ರಚೋದಕ ಸಾಹಿತ್ಯವನ್ನು ರಚಿಸಬಾರದೆಂದು ಲೇಖಕರಿಗೆ ಮನವಿ ಮಾಡಿ ಕೊಂಡ ನಿರ್ಣಯದ ಖಂಡನೆ ; ಅಂಥ ನಿರ್ಣಯಗಳಿಂದ ಲೇಖಕನ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಿದೆ ಎಂಬ ಆಪಾದನೆ ; ಅಂಥ ನಿರ್ಣಯಗಳನ್ನು ಸಂಘ ಸಂಸ್ಥೆಗಳು ಮಾಡುವುದರಿಂದ ಸಾಹಿತ್ಯಕ್ಕೆ ಹಾನಿಯಾಗುವುದೆಂಬ ಎಚ್ಚರಿಕೆ ಈ ಅಂಶಗಳು ಆ ಖಂಡನಾ-ನಿರ್ಣಯದಲ್ಲಿದ್ದುವು.

ನಿರಂಜನರು ಆ ಖಂಡನಾ ನಿರ್ಣಯವನ್ನು ವಿರೋಧಿಸಿದರು : "ಒಂದೆ ಚಳವಳಿ ಹುಟ್ಟಿದಾಗ ಕೆಲ ಸಂಪ್ರದಾಯವಾದಿ ಸಾಹಿತಿಗಳು ಲೇಖಕನ ಸ್ವಾತಂತ್ರ್ಯಕ್ಕೆ ಚ್ಯುತಿ ಬಂತೆಂದು ಆಕ್ರೋಶ ಮಾಡಿದರು. ಶ್ರಮಜೀವಿಗಳ ಜೀವನ ಚಿತ್ರಿಸಿ ಎಂದೆಲ್ಲ ಹೇಳಲು ನೀವು ಯಾರು-ಎಂದರು. ಈಗ, ಕಾಮಪ್ರಚೋದಕ ಸಾಹಿತ್ಯ ರಚನೆ ಸಲ್ಲದು-ಎಂದಾಗ, ಕೆಲ ಪ್ರಗತಿಶೀಲರೇ ಲೇಖಕನ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲಿ ತೆನ್ನುತ್ತಾರೆ! ಜೀವನದ ಒಂದಂಶವಾಗಿ ಕಾಮದ ಚಿತ್ರಣ ಸಾಹಿತ್ಯದಲ್ಲಿ ಅನಿವಾರ್ಯ. ಆದರೆ ಮಾನವನ ನೈಸರ್ಗಿಕ ದೌರ್ಬಲ್ಯಗಳ ಲಾಭ ಪಡೆದು ಕೇವಲ ಕಾಮೋ ದ್ದೀಪನೆಯನ್ನೇ ಉದ್ದೇಶವಾಗುಳ್ಳ ಕ್ಷುದ್ರ ಸಾಹಿತ್ಯ ರಚಿಸುವುದು ಹೇಯಕರ ವಾದದ್ದು. ಮದ್ರಾಸಿನ ಕೆಲ ಬಂಡವಾಳಗಾರರು ಕನ್ನಡ ಭಾಷೆಯಲ್ಲಿ ಇಂಥ ಕೆಲ ಪತ್ರಿಕೆಗಳನ್ನು ಮುದ್ರಿಸಿ ಈ ನಾಡಿಗೆ ಕಳಿಸುತ್ತಿದ್ದಾರೆ. ಇದನ್ನು ವಿಚಾರಿಗಳಾದ ಓದುಗರು ಖಂಡಿಸಬಾರದೆ? ಜನ ಹಿತೈಷಿಗಳಾದ ಪ್ರಗತಿಶೀಲರು ಖಂಡಿಸುವುದು ಬೇಡವೆ ? ದಿನ ನಿತ್ಯದ ಜೀವನ ಸಮಸ್ಯೆ-ಹೋರಾಟಗಳಿಂದ ಮಾನವನ ಗಮನ ವನ್ನು ದೂರ ಸೆಳೆದು, ಅವನ ಕರ್ತೃತ್ವ ಶಕ್ತಿಯನ್ನು ಕುಂಠಿತಗೊಳಿಸಿ, ಅವನನ್ನು ನಿರ್ವೀರ್ಯನಾಗಿಯೂ ನಿಶ್ಚೇಷ್ಟಿತನಾಗಿಯೂ ಮಾಡುವ ಕ್ಷುದ್ರ ಸಾಹಿತ್ಯ ರಚಿಸುವು ದೆಂದರೆ ಪ್ರಗತಿಗೆ ದ್ರೋಹ ಬಗೆದಂತೆಯೇ ಸರಿ. ಪ್ರಗತಿಶೀಲ ಲೇಖಕರ ಚಳವಳಿ

ಆರಂಭವಾದಾಗ ಇರಿಸಿಕೊಂಡ ಉದಾತ್ತ ಧ್ಯೇಯ-ಗುರಿಗಳು ಈಗೆಲ್ಲಿಗೆ ಹೋದುವು? ಕಾಮ-ಶೃಂಗಾರ ಮಾತ್ರದಿಂದಲೇ ಪ್ರಗತಿ ಎನ್ನುವಂತೆ ಇಲ್ಲಿ ಮಾತಾಡುತ್ತಿರುವುದು ತುಂಬ ವಿಷಾದಕರವಾಗಿದೆ"-ಎಂದು ತಮ್ಮ ಭಾಷಣದಲ್ಲಿ ಅವರು ಹೇಳಿದರು. ಏನೇನೂ ಪ್ರಾತಿನಿಧಿಕವಲ್ಲದ ಆ ಸಮ್ಮೇಳನದಲ್ಲಿ ಅಂಥ ನಿರ್ಣಯವನ್ನು ಚರ್ಚಿಸದೆ, ನಿಜವಾಗಿಯೂ ಪ್ರಾತಿನಿಧಿಕವಾದ ಇಡಿಯ ಕನ್ನಡ ನಾಡಿಗೇ ಅನ್ವಯಿಸುವಂಥ ಇನ್ನೊಂದು ಸಮ್ಮೇಳನಕ್ಕೆ ಆ ಚರ್ಚೆಯನ್ನು ಮುಂದುವರಿಸಬೇಕೆಂದು ಸಲಹೆ ಇತ್ತರು.

ಆದರೆ ಅಧ್ಯಕ್ಷರು ಅದಕ್ಕೆ ಸಮ್ಮತಿ ಕೊಡಲಿಲ್ಲ. "ಕಾಮಪ್ರಚೋದಕ ಚಲಚ್ಚಿತ್ರಗಳಿಗೆ ಸರಕಾರ ಅವಕಾಶಕೊಡದಂತೆ ನಿಷೇಧ ಪ್ರದರ್ಶನ ಮಾಡಬೇಕು" ಎಂದು ಅಧ್ಯಕ್ಷ ಭಾಷಣದಲ್ಲಿ ಕರೆಕೊಟ್ಟ ಭಾರದ್ವಾಜರು, "ನಮ್ಮ ಸಾಹಿತ್ಯವನ್ನು ಟೀಕಿಸುವುದರಿಂದ ಪೋಲೀಸರಿಗೂ ಸರಕಾರಕ್ಕೂ ಕೈಹಾಕಲು ನೆಪಮಾಡಿಕೊಟ್ಟ ಹಾಗಾಗುತ್ತದೆ" ಎಂದರು. ಅಷ್ಟೇ ಅಲ್ಲ; ಕಾಮಪ್ರಚೋದಕ ಚಲಚಿತ್ರಗಳಿವೆ ಎಂದವರು, ಸಾಹಿತ್ಯದಲ್ಲಿ ಮಾತ್ರ ಪ್ರಚೋದಕ ಸಾಹಿತ್ಯವಿಲ್ಲ-ಎಂದರು !

ದೇವುಡುರವರು ಮಾತನಾಡುತ್ತಾ, "ನಿರಂಜನರಿಗೆ ಮದುವೆಯಾಗಿ ಮಕ್ಕಳಾಗಿದ್ದರೆ ಕಾಮದ ಅರ್ಥ ತಿಳಿಯುತ್ತಿತ್ತು. ಕೈಲಾಗದವನಿಗೆ ಒಂದು ಹೆಂಗಸನ್ನು ಆಳುವುದೇ ಕಷ್ಟವಾಗಬಹುದು. ಆದರೆ ಛಾತಿ ಇರುವ ನನ್ನಂಥ ಗಂಡಸು ನಾಲ್ಕು ಹೆಂಡಿರುಬೇಕೆಂದರೆ ತಪ್ಪೇನು ? ಅಂಥ ಸಾಹಿತ್ಯ ಯಾಕೆ ರಚಿಸಬಾರದು ?" ಎಂದು ಕೇಳಿದರು.

ಇದು 'ಪ್ರಗತಿಶೀಲ' ಸಾಹಿತಿಗಳ ಸಮ್ಮೇಳನವಾದ್ದರಿಂದ ಪ್ರತಿನಿಧಿಗಳು ಮಾತ್ರ ಮತಕೊಡಲು ಅವಕಾಶವಿರಬೇಕೆಂದೂ ಅದು ಪ್ರಜಾಪ್ರಭುತ್ವದ ರೀತಿಯೆಂದೂ ಕೇಳಲಾಯಿತು. ಆದರೆ ಅಧ್ಯಕ್ಷರು, ಅಲ್ಲಿ ನೆರೆದಿದ್ದ ಹಿರಿಯೂರಿನ ಜನರನ್ನು ಒಳಗೊಂಡು ಯಾರು ಬೇಕಾದರೂ ಮತ ಕೊಡಬಹುದೆಂದರು. !

ನಿರ್ಣಯವನ್ನು ವಿರೋಧಿಸಿದವರನ್ನು ಒಳಗೊಂಡು ಎಂಟು ಜನ ವಿರೋಧ ಮತ ಕೊಟ್ಟರು. ಅಧ್ಯಕ್ಷರು, ಅ. ನ. ಕೃ. ಮತ್ತಿತರರನ್ನು ಒಳಗೊಂಡು ಮೂವತ್ತು ಜನ ಪರವಾಗಿ ಮತಕೊಟ್ಟರು. ಹಲವರು ತಟಸ್ಥರಾಗಿ ಉಳಿದರು. ಹೀಗೆ ಸಾಹಿತಿಗಳಿಗೆ, ಪರೋಕ್ಷವಾಗಿ ಸ್ವಚ್ಛಂದತೆಯ ಲೈಸೆನ್ಸ್ ಕೊಡುವ ನಿರ್ಣಯ ಬಹುಮತದಿಂದ ಸ್ವೀಕೃತವಾಯಿತು.

ಕಮ್ಯೂನಿಸ್ಟ್ ವಿರೋಧ

ಕಿವಿಯೊಡೆಯುವ ಹಾಗೆ ಸಮ್ಮೇಳನದಲ್ಲಿ ತಿಳಿಸುತ್ತಿದ್ದ ಇನ್ನೊಂದು ಆಕ್ರೋಶವೆಂದರೆ, ಕಮ್ಯೂನಿಸ್ಟ್ ವಿರೋಧದ ಬೊಬ್ಬಾಟ. ಅ. ನ. ಕೃ. ತಮ್ಮ ಪ್ರತಿಯೊಂದು ಭಾಷಣದಲ್ಲೂ ಈ ಕಾರ್ಯಕ್ರಮವನ್ನಿಟ್ಟುಕೊಂಡಿದ್ದರು.

ಪ್ರಗತಿಶೀಲ ಸಾಹಿತಿಗಳೆಲ್ಲ ಕಮ್ಯೂನಿಸ್ಟರು ಎಂಬ ಆರೋಪ ಹಿಂದೆಯೂ ಇತ್ತು. ಅದಕ್ಕೆ ಯೋಗ್ಯ ಉತ್ತರವನ್ನೂ ಆಗಲೇ ಕೊಡಲಾಗಿತ್ತು. ಅ.ನ. ಕೃಷ್ಣ ರಾಯರು ಸಂಪಾದಕರಾಗಿದ್ದ 'ಪ್ರಗತಿಶೀಲ ಸಾಹಿತ್ಯ' ಎಂಬ ಪುಸ್ತಕದಲ್ಲೇ ಆ ಬಗ್ಗೆ ಹೀಗೆ ಕಮ್ಯೂನಿಸ್ಟರಲ್ಲದ ಒಬ್ಬ ಲೇಖಕರು ಬರೆದುದುಂಟು.

"ಪ್ರಗತಿ ವಿರೋಧಕರು, ಸಾಮ್ರಾಜ್ಯವಾದಿಗಳು, ಫ್ಯಾಸಿಸ್ಟರು ಮತ್ತು ಬಂಡವಾಳಗಾರರು ಜನತೆಯನ್ನು ಸಂದೇಹದಲ್ಲಿ ಕೆಡವಲು ಸದಾ ಈ 'ಕೆಂಪು' (ಕಮ್ಯೂನಿಸ್ಟ್) ಬಣ್ಣವನ್ನು ಉಪಯೋಗಿಸಿದ್ದಾರೆ. ಜಿನೋವೀವ್ ಫೋರ್ಜರಿ ಪತ್ರ, ಸಾಕೋವಾನ್ ಜೆತ್ತಿ ಪ್ರಕರಣ, ಮಿಾರತ್ ಖಟ್ಲೆ ಹಾಗೂ ಇಂತಹದೇ ಆದ ನೂರಾರು ನೀತಿಗಳು ಪ್ರತಿಯೊಂದು ದೇಶದಲ್ಲೂ ಆಗಾಗ ಆಚರಿಸಲ್ಪಟ್ಟಿವೆ. ಭಾರತದಲ್ಲೇ ಬಂಡವಲಿಗ, ಧರ್ಮಾಧಿಕಾರಿ ಹಾಗೂ ಸರಕಾರಗಳು ಮತ್ತು ಇವರೆಲ್ಲರ ದಾಸರು ತಮಗೆ ಕಹಿಯಾದ ಪುರೋಗಾಮಿ ಚಳವಳಿಗಳನ್ನೆಲ್ಲ 'ಕಮ್ಯೂನಿಸ್ಟ್' ಎಂದು ಕರೆದು, ಜನತೆಯ ಬೆಂಬಲವನ್ನು ಪಡೆಯದಂತೆ ಮಾಡಲು ಯತ್ನಿಸಿದ್ದಾರೆ.

ಆ ಕೆಲಸವನ್ನು ಪ್ರಗತಿಶೀಲರೆಂದು ಕರೆದುಕೊಳ್ಳುವ ಅ. ನ. ಕೃಷ್ಣರಾಯರೇ ಮಾಡುತ್ತಿರುವುದು ದುರಂತವೇ ಸರಿ! ತಮ್ಮ ಸ್ವಚ್ಛಂದತೆಯ ಬಗ್ಗೆ ಸವಾಲು ಹಾಕಿರುವವರನ್ನೆಲ್ಲ ಕಮ್ಯೂನಿಸ್ಟ್ ಸಾಹಿತಿಗಳು-ಪ್ರತಿಗಾಮಿಗಳು ಎಂದು ಕರೆಯಲು ಅವರು ಯತ್ನಿಸುವುದು ನಿಜಕ್ಕೂ ಹಾಸ್ಯಾಸ್ಪದವಾಗಿದೆ.

ಇತರ ಕಾರ್ಯಕ್ರಮಗಳು

ಅನಂತ ಸುಬ್ಬರಾಯರ ಟೈಪ್‌ರೈಟರ್ ಪ್ರದರ್ಶನ, ಚಿತ್ರದುರ್ಗದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇತಿಹಾಸ ಸಂಶೋಧಕ ಹುಲ್ಲೂರು ಶ್ರೀನಿವಾಸ ಜೋಯಿಸ, ಗವಾಯಿ ಬಸವರಾಜ ಮನ್ಸೂರ್, ದ. ಕೃ. ಭಾರದ್ವಾಜರಿಗೆ ಮಾನಪತ್ರ ಸಮರ್ಪಣ, ಈ ಕಾರ್ಯಕ್ರಮಗಳೂ ಜರುಗಿದುವು.

ಏಕೀಕರಣಕ್ಕೆ ಸಂಬಂಧಿಸಿದ ನಿರ್ಣಯಕ್ಕೆ ಹಿರಿಯೂರಿನ ಕೆಲವರು ವಿರೋಧ ತೋರಿಸಿದ್ದರಿಂದ ಆ ನಿರ್ಣಯವನ್ನೇ ವಾಪಸು ತೆಗೆದುಕೊಳ್ಳಲಾಯಿತು.

ಅಂತೂ ಹೀಗೆ ಸಮ್ಮೇಳನ ಮುಗಿಯಿತು.

ಅದೇ ರಾತ್ರಿ ಅಖಿಲ ಕರ್ನಾಟಕ ಪ್ರಗತಿಶೀಲ ಲೇಖಕರ ಚಳವಳಿಯ ಸ್ಥಾಯೀ ಸಮಿತಿಯೊಂದು ನೇಮಕವಾಯಿತು. ಬೆಳಗಾಂವಿಯ ಬಸವರಾಜ ಕಟ್ಟೀಮನಿ, ಧಾರವಾಡದ ದ. ಬಾ. ಕುಲಕರ್ಣಿ, ಬಳ್ಳಾರಿಯ ಕೋ. ಚೆನ್ನಬಸಪ್ಪ, ಮಂಗಳೂರಿನ ಬಿ. ಶಂಕರ್‌ಭಟ್, ಬೆಂಗಳೂರಿನ ನಿರಂಜನ ಇವರು ಯಾರನ್ನೂ ಸ್ಥಾಯಿ ಸಮಿತಿಗೆ ಅಲ್ಲಿ ಸೇರಿಸಿಕೊಳ್ಳುವ ಔದಾರ್ಯವನ್ನು ಸಮ್ಮೇಳನದ ಪ್ರಮುಖರು ತೋರಿಸಲಿಲ್ಲ! ಈ ಸ್ಥಾಯೀ ಸಮಿತಿಗೆ ಚಿತ್ರದುರ್ಗದ ಶ್ರೀಧರಮೂರ್ತಿ ಕಾರ್ಯದರ್ಶಿ, ಅದರ ಕಚೇರಿ ಇರುವುದು ಚಿತ್ರದುರ್ಗದಲ್ಲೇ.

ಅಂತೂ ಇಂದಿನ ಸಂದಿಗ್ಧ ಪರಿಸ್ಥಿಯಲ್ಲಿ ನೂರೊಂದು ಹೊಸ ಸಮಸ್ಯೆಗಳು ಜನರ ಮುಂದಿರುವಾಗ, ಸಾಂಸ್ಕೃತಿಕ ಜೀವನದಲ್ಲೇ ನವಚೇತನವನ್ನು ತುಂಬುವಂಥ ಹೊಸ ಪರಿಸ್ಥಿತಿಗೆ ನಾಡಿನ ಪ್ರಗತಿಶೀಲ ಲೇಖಕರು ಕಾರಣರಾಗುವುದರ ಬದಲು ಈ ರೀತಿಯಲ್ಲಿ ಇದೊಂದು ಸಮ್ಮೇಳನದ ಮುಕ್ತಾಯವಾಯಿತು.

ಸ್ವಾಗತಾಧ್ಯಕ್ಷ ಅವಧಾನಿ ಮತ್ತು ಗೆಳೆಯರು ಊಟ ಉಪಚಾರಗಳಲ್ಲಿ ಮಿಗಿಲಾದ ಕೈ ಎನಿಸಿ ದುಡಿದರು. ಹೊಟ್ಟೆ ತಣಿಯಿತು, ಮನಸ್ಸಲ್ಲ.

ಕೆಲವರ ಯತ್ನದಿಂದಾಗಿ ಪ್ರಗತಿಶೀಲ ಸಾಹಿತ್ಯ ಚಳವಳಿ ಗೊತ್ತು ಗುರಿ ಇಲ್ಲದೆ ಅಡ್ಡದಾರಿ ಹಿಡಿಯುತ್ತಿದೆ. ಕನ್ನಡ ಲೇಖಕರು ಈ ಬಗ್ಗೆ ತುಂಬ ಯೋಚಿಸಿ ಚರ್ಚಿಸಿ ನಿರ್ಧಿಷ್ಟ ಅಭಿಪ್ರಾಯಗಳನ್ನು ರೂಪಿಸದ ಹೊರತು, ನಿಜವಾದ ಪ್ರಗತಿಶೀಲ ಚಳವಳಿಗೆ ಉಳಿಗಾಲವೇ ಇಲ್ಲ.

—೧೯೫೮

ಕನ್ನಡ ಕಾದಂಬರಿಯು ಹಿರಿಯ ಪರಂಪರೆ

ಈ ವಿಷಯ, ವಿಮರ್ಶೆಯ ಒಂದು ಉದ್ಗ್ರಂಥಕ್ಕೆ ವಸ್ತುವಾದೀತು. ಏಕೆಂದರೆ ಕನ್ನಡ ಕಾದಂಬರಿಗಳ ಬೆಳವಣಿಗೆ ಅಷ್ಟು ವ್ಯಾಪಕವಾಗಿದೆ, ಕನ್ನಡ ಕಾದಂಬರಿಗಳ ಇತಿಹಾಸ ಅರ್ಧ ಶತಮಾನದ್ದು. ಅದರಲ್ಲಿ ಇತ್ತೀಚಿನ ಎರಡು ದಶಕಗಳಲ್ಲಿ ಕನ್ನಡ ಕಾದಂಬರಿಗಳು ನಾನಾ ಮುಖವಾಗಿ ಚಿಗುರಿ ಬಲಿತು ಸರ್ವವ್ಯಾಪಕವಾದುದು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಈ ದಿನ ಅತ್ಯಂತ ಜನಪ್ರಿಯವಾಗಿರುವುದು ಕಾದಂಬರಿಯ ಪ್ರಕಾರ. ಕನ್ನಡ ಸಾಹಿತ್ಯದಲ್ಲಿ ಅತಿ ಹೆಚ್ಚು ಜನಪ್ರಿಯವಾದ ಸಾಹಿತ್ಯ ಪ್ರಕಾರಗಳನ್ನು ಈ ರೀತಿಯಾಗಿ ವಿಂಗಡಿಸಬಹುದು.

೧. ಹಳೆಗನ್ನಡ ಸಾಹಿತ್ಯದ ಮಹಾಕಾವ್ಯಗಳು.

೨. ಆ ಬಳಿಕ ಈ ಶತಮಾನದ ಆರಂಭದಲ್ಲಿ, ಕನ್ನಡ ನವೋದಯದ ಅವಧಿಯಲ್ಲಿ, ಸಣ್ಣ ಕತೆ.

೩. ಸಣ್ಣ ಕತೆಯ ಬಳಿಕ ಕಾದಂಬರಿ.

ಈ ಶತಮಾನದಲ್ಲಿ, ಈಗ, ನಮ್ಮ ಪ್ರಾಚೀನ ಕಾವ್ಯಗಳು ಅಧ್ಯಯನದ ವಸ್ತುಗಳಾಗಿ ಮಾತ್ರ ಉಳಿದಿವೆ ಎನ್ನುವುದರಲ್ಲಿ ಅತಿಶಯೋಕ್ತಿ ಇಲ್ಲ. ಪಾಶ್ಚಾತ್ಯ ಸಾಹಿತ್ಯ ಸ್ವರೂಪಗಳಿಂದಲೂ ಮುಂದುವರಿದ ಬಂಗಾಳಿ ಭಾಷೆಯಿಂದಲೂ ಸ್ಫೂರ್ತಿ ಪಡೆದ ಸಣ್ಣಕತೆ ಒಂದು ಕಾಲದಲ್ಲಿ ಕನ್ನಡದಲ್ಲಿ ಅತ್ಯಂತ ಮೆಚ್ಚುಗೆಯ ಪ್ರಕಾರವಾಗಿತ್ತು. ಆಗ ಬರೆಹಗಾರರು ಸಣ್ಣ ಕತೆಗಳ ಸೃಷ್ಟಿಯಲ್ಲಿ ಆಸಕ್ತಿವಹಿಸುತ್ತಿದ್ದರು. ಆದರೆ ಈಗ ಆ ಪರಿಸ್ಥಿತಿಯಲ್ಲಿ, ಸಣ್ಣಕತೆಗಳನ್ನು ಮೆಟ್ಟಿಕುಕ್ಕಿ ಕಾದಂಬರಿ ತಲೆ ಎತ್ತಿದೆ.

ಈಗಿನ ಪ್ರಮುಖ ಕಾದಂಬರಿಕಾರರೆಲ್ಲ ಹತ್ತಿಪ್ಪತ್ತು ವರ್ಷಗಳಿಗೆ ಹಿಂದೆ ಸಣ್ಣ ಕತೆಗಾರರಾಗಿದ್ದವರು. ಆ ವಿಭಾಗದಲ್ಲಿ ಕೈಮಾಡಿಸಿ ಸಿದ್ಧ ಹಸ್ತರೆನ್ನಿಸಿಕೊಂಡವರು. ಇವರೆಲ್ಲಾ ಸಣ್ಣ ಕತೆಗಳ ಮೆಟ್ಟಲು ತುಳಿದೇ ಅಂಗಳಕ್ಕಿಳಿದವರು.

ಪ್ರಬುದ್ಧತೆಗೆ ಅಳತೆಗೋಲು

ಕನ್ನಡ ಕಾದಂಬರಿಯ ಪ್ರಕಾರವೂ ಸ್ಫೂರ್ತಿ ಪಡೆದಿರುವುದು ಪಾಶ್ಚಾತ್ಯ ಸಾಹಿತ್ಯದಿಂದ. ಸಂಸ್ಕೃತ ಸಾಹಿತ್ಯದಲ್ಲೇ ಆಗಲಿ, ಪ್ರಾಚೀನ ಕನ್ನಡ ಸಾಹಿತ್ಯದಲ್ಲೇ

ಆಗಲಿ, ಕಾದಂಬರಿಯ ಪ್ರಕಾರ ಬೀಜರೂಪದಲ್ಲಿ ಕಾಣಸಿಗಬಹುದು, ಹಾಗೆಂದು ಹೇಳುವುದರಿಂದ ನಮಗೆ ಆತ್ಮಸಂತೋಷವೇನೋ ಆದೀತು. ಆದರೆ ನಿರ್ವಿಕಾರ ಚಿತ್ತದಿಂದ ವಸ್ತುಸ್ಥಿತಿಯನ್ನು ನಾವು ಗಣನೆಗೆ ತೆಗೆದುಕೊಂಡರೆ ಕಾದಂಬರಿಯ ಪ್ರಕಾರಕ್ಕೆ ಸಂಬಂಧಿಸಿ, ನಮ್ಮ ದೇಶದಲ್ಲಿ ಪ್ರಚಲಿತವಿರುವ ಸಹಸ್ರಾರು ಪಾಶ್ಚಾತ್ಯ ಕಾದಂಬರಿಗಳಿಗೆ ನಾವು ಋಣಿಗಳಾಗಿರುವುದು ಸ್ಪಷ್ಟವಾದೀತು.

ಇದರಲ್ಲಿ ಲಜ್ಜೆಪಡಬೇಕಾದ ವಿಷಯವೇನೂ ಇಲ್ಲ. ಪಾಶ್ಚಾತ್ಯ ಸಾಹಿತ್ಯದಲ್ಲಿ ನಾವು ಗಮನಿಸಿದ್ದು ಅಭ್ಯಾಸ ಮಾಡಿದ್ದು ಸ್ವರೂಪವನ್ನು, ತಂತ್ರವನ್ನು, ಪ್ರಕಾರವನ್ನು ಕಾವ್ಯ ಮಾರ್ಗದಲ್ಲಿ ಹೇಗೆಯೋ ಗದ್ಯ ಮಾರ್ಗದಲ್ಲೂ ಅಷ್ಟೇ. ಆದಿರೆ ನಮ್ಮ ಬರೆಹಗಾರರು ಆ ಚೌಕಟ್ಟಿನೊಳಗೆ ತುರುಕಿದ ತಿರುಳು ನಮ್ಮದು. ಅವರು ಕಂಡುದು ನಮ್ಮ ಜೀವನ, ಚಿತ್ರಿಸಿದ್ದೂ ಅದನ್ನೇ.

ನಮ್ಮ ಬರೆಹಗಾರರು ಜೀವನದ ವಿಸ್ತಾರ ಹಿನ್ನೆಲೆಯನ್ನು ರಚಿಸಿಕೊಂಡು ವರ್ಣರಂಜಿತ ಚಿತ್ರವನ್ನು ರೂಪಿಸುತ್ತ ಕಾದಂಬರಿಗಳನ್ನು ಸೃಷ್ಟಿಸಲು ಸಮರ್ಥರಾದರೆಂಬುದು ಹೆಮ್ಮೆಯ ವಿಷಯ. ನಮ್ಮ ಸಾಹಿತ್ಯ ಶಕ್ತಿ ಪ್ರಬುದ್ಧವಾಯಿತೆನ್ನುವುದಕ್ಕೆ ಅದು ನಿದರ್ಶನ. ಕಾದಂಬರಿ ಎನ್ನುವುದು ಲಲಿತವಾದ ಮನೋರಂಜಕವಾದ ನಿಷ್ಪ್ರಯೋಜಕವಾದ ವಸ್ತು ಎಂದು ಪರಿಗಣಿಸಲ್ಪಡದೆ, ಸಂಶೋಧನೆಯ ವಿಮರ್ಶೆಯ ಗ್ರಂಥಗಳಷ್ಟೇ ಕಾವ್ಯಗಳಷ್ಟೇ ಅದಕ್ಕೂ ಮನ್ನಣೆ ದೊರೆಯುತ್ತಿರುವುದು ಸಮಾಧಾನದ ವಿಷಯ.

ಮೊದಲ ಕಾದಂಬರಿಗಳು

ಬಂಗಾಳಿಯಿಂದಲೂ ಮರಾಠಿಯಿಂದಲೂ ಕಾದಂಬರಿಗಳು ಅನುವಾದಿತವಾಗಿ ಕನ್ನಡ ರೂಪ ತಳೆದು ಜನಮನವನ್ನು ಸೆಳೆದವೆಂಬುದು ಒಪ್ಪಿಕೊಳ್ಳಬೇಕಾದ ಅಂಶ. ಆದರೆ ಅದೇ ಹೊತ್ತಿಗೆ ಕನ್ನಡದ ಸ್ವತಂತ್ರ ಕಾದಂಬರಿಗಳೂ ಹುಟ್ಟಿದ್ದುವೆಂಬುದನ್ನು ಪ್ರಕಟವಾಗುತ್ತಿದ್ದುವೆಂಬುದನ್ನು ದುರ್ಲಕ್ಷಿಸುವ ಹಾಗಿಲ್ಲ.

ಕನ್ನಡದ ಆರಂಭದ ಕಾದಂಬರಿಗಳನ್ನು ಗುರುತಿಸೋಣ.

ಈಗ ತಿಳಿದಿರುವ ಹಾಗೆ ಕನ್ನಡದ ಮೊದಲ ಕಾದಂಬರಿ–ಸ್ವತಂತ್ರ ಸಾಮಾಜಿಕ ಕಾದಂಬರಿ–೧೮೯೯ರಲ್ಲಿ ಪ್ರಕಟವಾಯಿತು. ಅದರ ಹೆಸರು 'ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯವು.' ೨೫೦ ಪುಟಗಳ ಆ ಕೃತಿಯನ್ನು ಬರೆದವರು ಗುಲವಾಡಿ ವೆಂಕಟರಾಯರು.

ಎರಡನೆಯ ಕಾದಂಬರಿಯ ಹೆಸರು 'ವಾಗ್ದೇವಿ.' ಬರೆದವರು ಬೋಳಾರ ಬಾಬುರಾಯರು, ಪ್ರಕಟವಾದುದು ೧೯೦೫ರಲ್ಲಿ.

ಮೂರನೆಯದು 'ರೋಹಿಣಿ' (೧೯೦೭) ಬರೆದವರು ಗುಲವಾಡಿ ಅಣ್ಣಾಜಿ ರಾಯರು.

ನಾಲ್ಕನೆಯದು, ಕೆರೂರ ವಾಸುದೇವಾಚಾರ್ಯ ವಿರಚಿತ 'ಇಂದಿರೆ' (೧೯೦೮).

ಐದನೆಯದು, ಎಂ.ಎಸ್. ಪುಟ್ಟಣ್ಣನವರ ಕಾದಂಬರಿ 'ಮಾಡಿದ್ದುಣ್ಣೋ ಮಹಾರಾಯ" (೧೯೧೫).

ಆದರೆ ಈ ಕಾದಂಬರಿಯ ಪರಂಪರೆ ಅಖಂಡವಾಗಿ ಬೆಳೆಯಲಿಲ್ಲ. ನಡುವೆ ಸ್ವಲ್ಪ ಕಾಲ ನೆಲ ಬರಡಾಯಿತು. ಆಧುನಿಕ ಸಾಹಿತ್ಯದ ಮೊದಲ ಬರೆಹಗಾರರು ಕನ್ನಡ ಚಳವಳಿಯ ಆರಂಭದಲ್ಲಿ ನಮ್ಮ ಸಾಹಿತ್ಯ ಹೊಲದಲ್ಲಿ ಬೇರೆ ಬೀಜಗಳನ್ನು ಬಿತ್ತಿ ಕೃಷಿ ಮಾಡಿದರು.

ಮತ್ತೊಮ್ಮೆ ಪ್ರವಾಹ

ಹೀಗಿದ್ದರೂ ಕಾದಂಬರಿ ಮತ್ತೊಮ್ಮೆ ಮುಖ ತೋರಿಸದೆ ಇರಲಿಲ್ಲ. ಸಣ್ಣ ಕತೆಗಳ ಕ್ಷೇತ್ರದಲ್ಲಿ ಕೈಯಾಡಿಸಿ ನುರಿತವರಾಗಿದ್ದ ಮಾಸ್ತಿ, ಪುಟ್ಟಪ್ಪ, ಕಾರಂತ ಮತ್ತು ಅ.ನ.ಕೃ. ಕನ್ನಡದಲ್ಲಿ ಒಳ್ಳೆಯ ಕಾದಂಬರಿಗಳನ್ನು ಕೊಡತೊಡಗಿದರು. ಆಗ ಜನ ಆ ಗಾತ್ರದ ಪುಸ್ತಕಗಳ ಒಳಗೆ ಏನಿತ್ತೆಂದು ವಿಚಾರಿಸಲಿಲ್ಲ. ಇದು ಕನ್ನಡದ ಗಾತ್ರದ ಪುಸ್ತಕ. ಕನ್ನಡದ ಕಾದಂಬರಿ ಎಂಬ ಮಾನದಿಂದ ಆಗಿನ ಪ್ರತಿಯೊಂದು ಕೃತಿಯನ್ನೂ ಅವರು ಎತ್ತಿಕೊಂಡರು.

ಅಲ್ಲಿಂದೀಚೆಗೆ ಕಾದಂಬರಿಯ ಪ್ರವಾಹ ಓತಪ್ರೋತವಾಗಿ ಹರಿದು ಬಂದಿದೆ. ಹಲವಾರು ಬರೆಹಗಾರರು ಕಾದಂಬರಿಯ ಪ್ರಕಾರವನ್ನು ಕರಗತಮಾಡಿಕೊಂಡು ಕನ್ನಡ ಕಾದಂಬರಿಗಳ ವಿಪುಲ ರಾಶಿಗೆ ತಮ್ಮ ಕೊಡುಗೆಗಳನ್ನು ಕೊಟ್ಟಿದ್ದಾರೆ.

ಪುಟಗಳ ದೃಷ್ಟಿಯಿಂದ ನೋಡೋಣವೆ? ನಮ್ಮಲ್ಲಿ ಸಾವಿರದ ಎಲ್ಲೆಯನ್ನು ದಾಟಿರುವ 'ನಟ ಸಾರ್ವಭೌಮ'ವಿದೆ; 'ಸಮರಸವೇ ಜೀವನ'ವಿದೆ.

ತಂತ್ರ-ಕುಶಲತೆಗಳ ದೃಷ್ಟಿಯಿಂದ ನೋಡೋಣವೆ? ನಾವು ಖಂಡಿತವಾಗಿಯೂ ಆಧುನಿಕ ಐರೋಪ್ಯ ಸಾಹಿತ್ಯದ ತಂತ್ರ-ಕುಶಲತೆಗಳ ಮಟ್ಟದಿಂದ ಬಹಳ ಹಿಂದಿಲ್ಲ.

ಆದರೆ ಸಾಹಿತ್ಯವೆನ್ನುವುದು ಬರಿಯ ಶೈಲಿ ಮತ್ತು ತಂತ್ರ ಮಾತ್ರವಲ್ಲ. ಬರೆದುದು ಸಾಹಿತ್ಯವಾಗಬೇಕಾದರೆ, ಅದರಲ್ಲಿ ಅಡಕವಾಗಿರುವ ತಿರುಳು ಅತಿ ಮಹತ್ವದ ಒಂದಂಶ.

ಆಧುನಿಕ ಕನ್ನಡ ಕಾದಂಬರಿಗಳತ್ತ ದೃಷ್ಟಿಹರಿಸಿ ಕೆಲವು ಮುಖ್ಯ ಮೈಲುಗಲ್ಲುಗಳನ್ನು ಗುರುತಿಸೋಣ.

ನಿರ್ದಿಷ್ಟ ಪ್ರದೇಶದ, ನಿರ್ದಿಷ್ಟ ಕಾಲಾವಧಿಯ ಜನಜೀವನ ನಮಗೆ ಬೇಕೆ? 'ಕಾನೂರು ಸುಬ್ಬಮ್ಮ ಹೆಗ್ಗಡತಿ', 'ಮರಳಿ ಮಣ್ಣಿಗೆ'ಗಳಿವೆ.

ಕಲಾವಿದರ ಜೀವನವನ್ನು—ವಾಸ್ತವಿಕ ಕಾಲ್ಪನಿಕ ಏನಾದರೂ ಸರಿಯೇ—ಕಲಾತ್ಮಕವಾಗಿ ಚಿತ್ರಿಸುವ ಪುಟ್ಟ ಕೃತಿಗಳೂ ಬೇಕೆ? 'ಸುಬ್ಬಣ್ಣ', 'ಸಂಧ್ಯಾರಾಗ'ಗಳಿವೆ.

ರಾಷ್ಟ್ರೀಯ ಹೋರಾಟದ ಪ್ರತ್ಯಕ್ಷ ಹಿನ್ನೆಲೆಯುಳ್ಳ ಕಾದಂಬರಿ ಬೇಕೆ? ಪ್ರಾಯಶಃ 'ಪುರುಷಾರ್ಥ'ವನ್ನು ಮೀರಿಸುವ ಕೃತಿ ಇನ್ನೊಂದು ಈಗ ಇರಲಾರದು.

ವಿಷಮ ದಾಂಪತ್ಯದ ದುರಂತ ಚಿತ್ರಗಳು ಬೇಕೇ? ಐದು ವರ್ಷಗಳ ಅಂತರದಲ್ಲಿ ಕಳೆದ ದಶಕದಲ್ಲಿ ಬಂದ ಎರಡು ಕೃತಿಗಳಿವೆ. 'ನಿಸರ್ಗ' ಮತ್ತು 'ಸರ್ವಮಂಗಳಾ'.

ನಮ್ಮ ಸಾಂಸ್ಕೃತಿಕ ಜೀವನದ ಮೂಲ ಇಟ್ಟಿಗೆಗಳಾಗಿರುವ ಉಪಾಧ್ಯಾಯರ ಬಾಳುವೆಯ ಚಿತ್ರಣವಾದರೆ 'ಮುಗಿದ ಯುದ್ಧ', 'ರಾಮಣ್ಣ ಮಾಸ್ತರು','ಬೆಂಕಿಯ ಬಲೆ'ಗಳಿವೆ.

ಪರಿಸ್ಥಿತಿಯ ಕೂಸುಗಳಾದ ಹೆಣ್ಣುಗಂಡಿನ ಸಮಸ್ಯೆಯ ಸೂಕ್ಷ್ಮ ಚಿತ್ರಣ ವಾದರೆ 'ಅನುರಕ್ತೆ' ಇದೆ.

ವೇಶ್ಯಾ ಸಮಸ್ಯೆಯ ನಿಮಿತ್ತದಿಂದ ಬಂದ ಕೃತಿಗಳಿಗಂತೂ ಬರಗಾಲವಿಲ್ಲ. ಬಹುಮಟ್ಟಿಗೆ ಆ ಸಮಸ್ಯೆಯ ನಿಜವಾದ ಚಿತ್ರಣ ಎನ್ನುವ ದೃಷ್ಟಿಯಿಂದ 'ಬೀದಿಯಲ್ಲಿ ಬಿದ್ದವಳು' ಮತ್ತು 'ಮಸಣದ ಹೂ'ಗಳಿವೆ.

ವಯಸ್ಸು ಐದೇ ಆದರೂ ಮಹಾ ಪ್ರತಿಭಾಶಾಲಿ, ಮೈಮೇಲೆ ಮುತ್ತೈದೆಯರು ಬರುವ ಸ್ತ್ರೀರತ್ನಗಳು, ಮುಟ್ಟಿದ್ದೆಲ್ಲಾ ದಿವ್ಯೌಷಧವಾಗುವ ಶ್ರೀವನಿತೆಯರು, ನಾಲಿಗೆ ಕಡಿದರೂ ಹಾಡುವ ಕಲಾವಿದರು, ಮೂಢ ನಂಬಿಕೆಗಳು ಬಲಿಯುವಂತೆ ಮಾಡುವ ಚಿತ್ರಣಗಳೂ ಇವೆ. ಸಮಾಜದ ಕೆಳಗಿನ ಹಂತವನ್ನು ಚಿತ್ರಿಸಿರುವ 'ಪರದೇಶಿ' ಯಂಥ ಕೃತಿಗಳು ಪ್ರಕಟವಾಗಿವೆ.

ನಮ್ಮ ಹಳೆಯ ಇತಿಹಾಸ, ಯೋಗ್ಯರೀತಿಯಲ್ಲೂ ಯುಕ್ತಾಯುಕ್ತತೆಯ ವಿವೇಚನೆ ಇಲ್ಲದೆಯೂ ಕಾದಂಬರಿಗಳಿಗೆ ವಸ್ತುವಾಗಿದೆ.

'ಜೋಮನದುಡಿ'ಯಿಂದ ಹಿಡಿದು 'ಜ್ವಾಲಾಮುಖಿಯ'ವರೆಗೆ ಸಾಗಿ ಬರೆದಿರುವ ವರ್ಗಹೋರಾಟದ ಕಥನಗಳಿವೆ.

ಪಾಳೆಯಗಾರ ಸಂಸ್ಕೃತಿಯ ಕುರುಹುಗಳಾದ ಮಠಾಧಿಪರು ಕೆಲವರ ಸ್ವೇಚ್ಛಾ ಚಾರವನ್ನು ಬಯಲಿಗೆಳೆಯುವ ಕೃತಿಗಳು 'ವಾಗ್ದೇವಿ' ೧೯೦೫ರಲ್ಲಿ ಪ್ರಕಟವಾದರೆ 'ಮೋಹದ ಬಲೆಯಲ್ಲಿ' ೧೯೫೧ರಲ್ಲಿ ಪ್ರಕಟವಾಗಿದೆ.

ಇದೀಗ, ವಿಪುಲವಾಗಿ ತೋರುವ ನಮ್ಮ ಕಾದಂಬರಿ ಸೃಷ್ಟಿ.

ಸೃಷ್ಟಿಯ ದೃಷ್ಟಿ

೧೯೪೭ರ ಬಳಿಕ ಪ್ರಗತಿಶೀಲತೆಯ ಕರೆ ನಮ್ಮ ನಾಡಿನಲ್ಲಿ ಕೇಳಿಸಿತು. ಅಂದಿನಿಂದ ಅದು ಹೊಸತಾಗಿ ಬಂದಿತೆಂದು ಅರ್ಥವಲ್ಲ. ಆ ಒಳ್ಳೆಯ ಭಾವನೆಗಳಿಗೆ ನಿರ್ದಿಷ್ಟ ರೂಪಕೊಟ್ಟು ಅದು ಇಂಥದೇ ಎಂದು ಗುರುತಿಸುವ ಯತ್ನ ಆಗ ನಡೆಯಿತು.

ಅದರ ಫಲವಾಗಿಯೂ ಯುದ್ಧ ಹಾಗೂ ಯುದ್ಧಾನಂತರ ನೂತನ ಬಣ್ಣ ತಳೆದು ರೂಪುಗೊಳ್ಳತೊಡಗಿದ ನಮ್ಮ ಸಾಮಾಜಿಕ ವಾತಾವರಣದ ಫಲವಾಗಿಯೂ

ಕಾದಂಬರಿಗಳ ವಸ್ತುಗಳಲ್ಲಿ ಹೊಸತನ ತೋರಿತು. ಪ್ರಮುಖ ಲೇಖಕರು ಕೆಲವರು ಬದುಕನ್ನು ನೋಡುವ ದೃಷ್ಟಿ ಬದಲಾಯಿತು. ಅವರ ಸಮಾಜ ಪ್ರಜ್ಞೆ ಸ್ಫುಟಗೊಂಡಿತು.

ಒಂದು ಕಾಲದಲ್ಲಿ ಕನ್ನಡ ಕಾದಂಬರಿಗಳ ಮೇಲೆ ಇಡೀ ಸಾಹಿತ್ಯದ ಮೇಲೆಯೇ —ಪ್ರಭುತ್ವ ಸ್ಥಾಪಿಸಿದ್ದ ಪ್ರವೃತ್ತಿ–ಆದರ್ಶವಾದ.

ಆ ಸ್ಥಾನವನ್ನಿಂದು ವಾಸ್ತವವಾದ ಆಕ್ರಮಿಸಿಕೊಳ್ಳುತ್ತಿದೆ.

ವಾಸ್ತವವಾದದ ಪ್ರವೃತ್ತಿ ಇಬ್ಬದಿಗಳಲ್ಲೂ ತೀಕ್ಷ್ಣ ಧಾರೆಯುಳ್ಳ ಅಲಗು. ಅದು ಅರ್ಥಹೀನ ರೂಪಗ್ರಹಣವಾಗಬಹುದು; ಸದುದ್ದೇಶವಿಲ್ಲದೆ ಹೋದಾಗ ವಾಸ್ತವವಾದ ಒರಟು 'ನೈಸರ್ಗಿಕವಾದ'ವಾಗಿ ಕೊನೆಗಾಣಬಹುದು. ಸದುದ್ದೇಶವುಳ್ಳ ಸಮಾಜ ಪ್ರಜ್ಞೆಯುಳ್ಳ ಮಾನವವಾದಿಯ ಕೈಯಲ್ಲಿ ವಾಸ್ತವವಾದ ಹಿರಿಯ ಶಕ್ತಿಯಾಗಿ ಪರಿಣಮಿಸಬಹುದು.

ಇಂದಿನ ಕಾದಂಬರಿಗಳು ಆ ಎರಡೂ ಪ್ರವೃತ್ತಿಗಳನ್ನು ತೋರಿಸಿಕೊಟ್ಟಿವೆ.

ನಮ್ಮ ಕಾದಂಬರಿಕಾರರು ಕನ್ನಡದ ಮೊದಲನೆಯ ಕಾದಂಬರಿಗಳಾದ 'ಇಂದಿರಾಬಾಯಿ' ಮತ್ತು 'ವಾಗ್ದೇವಿ'ಗಳನ್ನು ಮರೆಯುವುದು ಸಾಧ್ಯವಿಲ್ಲ. 'ಇಂದಿರಾಬಾಯಿ' ಆಗಿನ ಸಾರಸ್ವತ ಸಮಾಜವನ್ನು ಚಿತ್ರಿಸುವ ಆ ಸಮಾಜದ ಲೋಪದೋಷಗಳನ್ನು ಬಯಲಿಗೆಳೆಯುವ ಕೃತಿ. 'ವಾಗ್ದೇವಿ', ಮಠಾಧೀಶರ ಸೋಗಿನಲ್ಲಿ ನಡೆಯುವ ಅತ್ಯಾಚಾರಗಳನ್ನು ಬಯಲಿಗೆಳೆಯುವ ಕಠೋರಕೃತಿ. ಇವು ಎರಡರಲ್ಲೂ ನಾವು ಪ್ರಗತಿಶೀಲ ಧ್ಯೇಯ ಧೋರಣೆಗಳನ್ನೇ ಕಾಣುತ್ತೇವೆ.

ನಮ್ಮ ಮೊದಲ ಕಾದಂಬರಿಗಳೇ ಇಂತಹ ಹಿರಿಯ ಪರಂಪರೆಯನ್ನು ಹಾಕಿಕೊಟ್ಟಿರುವುದು ಹೆಮ್ಮೆಯ ವಿಷಯ.

ಆ ಪರಂಪರೆಯನ್ನು ಎತ್ತಿಹಿಡಿದು ಪ್ರಗತಿಯ ಹಾದಿಯಲ್ಲಿ ನಮ್ಮ ಕಾದಂಬರಿಗಳು ಸೃಷ್ಟಿಯಾಗಲೆಂದು ಹಾರೈಸುವುದು ಹೆಚ್ಚಾಗಲಾರದು.

—೧೯೫೩

ಬೆಲಿನ್ಸ್ಕಿಯ ಕಾವ್ಯ ಮೀಮಾಂಸೆ

"ನಮ್ಮ ಕಾಲದ ಕಲೆ ಎಂತಹದು ? ಅದು, ಸಮಾಜವನ್ನು ಕುರಿತಾದ ತೀರ್ಪು, ಪೃಥಕ್ಕರಣ; ಪರಿಣಾಮವಾಗಿ ಸಮಾಜದ ವಿಮರ್ಶೆ. ಈಗ ವಿಚಾರದ ಅಂಶ ಕಲೆಯ ಅಂಶದೊಡನೆ ಬೆರೆತಿದೆ. ನಮ್ಮ ಕಾಲದಲ್ಲಿ ಕಲಾಕೃತಿಯು, ಯುಗ ಧರ್ಮದ ಮಹತ್ತರವಾದ ಅಂತಃಸ್ಫೂರ್ತಿಯಿಂದ ಹುಟ್ಟದೆ, ಚಿತ್ರಿಸಬೇಕು ಎನ್ನುವ ಒಂದೇ ಉದ್ದೇಶಕ್ಕೋಸ್ಕರ ಬದುಕನ್ನು ಚಿತ್ರಿಸಿದರೆ, ಅದು ಸಂಕಟದ ಕೂಗು ಇಲ್ಲವೆ ಮಹದಾನಂದದ ಅಮರಗಾನವಾಗದೆ ಇದ್ದರೆ, ಒಂದು ಪ್ರಶ್ನೆಯಾಗದೆ ಅಥವಾ ಪ್ರಶ್ನೆಗೆ ಉತ್ತರವಾಗದೆ ಇದ್ದರೆ, ಆ ಕೃತಿ ನಿರ್ಜೀವವೆನ್ನಿಸಿಕೊಳ್ಳುವುದು."

—ಇದು, ಒಂದು ಶತಮಾನದ ಹಿಂದೆ, ರಷ್ಯಾ ದೇಶದ ಮಹಾವಿಮರ್ಶಕ ನೊಬ್ಬನು ಆಡಿದ ಮಾತು. ಆತನ ಹೆಸರು ಬೆಲಿನ್ಸ್ಕಿ.

ವಿಸಾರಿಯನ್ ಗ್ರಿಗರಿವಿಶ್ ಬೆಲಿನ್ಸ್ಕಿ ಹುಟ್ಟಿದುದು ೧೮೧೧ರಲ್ಲಿ; ಪ್ರಭಾವ ಶಾಲಿಯಾದ ಅವಿಶ್ರಾಂತವಾದ ಬದುಕನ್ನು ಬಾಳಿ ಸತ್ತುದು ೧೮೪೮ರಲ್ಲಿ.

ಬದುಕಿದ್ದಾಗ ಆತ, ಹತ್ತೊಂಭತ್ತನೆಯ ಶತಮಾನದ ಐರೋಪ್ಯ ಸಾಹಿತ್ಯದ ಮಹಾಪ್ರಭೃತಿಗಳ ಅಗ್ರಪಂಕ್ತಿಯಲ್ಲಿ ವಿರಾಜಮಾನನಾಗಿದ್ದ. ಸತ್ತಮೇಲೆ, ವಿಶ್ವ ಸಾಹಿತ್ಯದ ಸೌಂದರ್ಯಮೀಮಾಂಸೆಯ ಪ್ರಾಂಗಣದಲ್ಲಿ ಭವ್ಯವಾದ ಸ್ಥಿರವಾದ ಸ್ಥಾನವನ್ನು ಪಡೆದು ಅಮರನಾದ.

ವಿಮರ್ಶಕ–ಮೀಮಾಂಸಕ ಬೆಲಿನ್ಸ್ಕಿಯ ಕಾರ್ಯಕ್ಷೇತ್ರ ವಿಸ್ತಾರವಾಗಿತ್ತು. ತತ್ತ್ವಜ್ಞಾನ, ಸಮಾಜಶಾಸ್ತ್ರ, ಇತಿಹಾಸ, ನಿರಂಕುಶ ಸರಕಾರಕ್ಕೆದಿರು ಹೋರಾಟ; ಇವುಗಳ ಜತೆಯಲ್ಲಿ, ಇವುಗಳಿಗೆ ಪೂರಕವಾಗಿ ಹಾಗೂ ಸಾಧಕವಾಗಿ, ಸಾಹಿತ್ಯ ವಿಮರ್ಶೆ—ಸೌಂದರ್ಯಮೀಮಾಂಸೆ. ಈ ಎಲ್ಲ ಕಾರಣಗಳಿಗಾಗಿಯೂ ಆತ ಪ್ರಖ್ಯಾತನೇ.

ಎಳೆಯ ಬೆಲಿನ್ಸ್ಕಿ ೧೮೨೯ರಲ್ಲಿ ಮಾಸ್ಕೋ ವಿಶ್ವವಿದ್ಯಾಲಯವನ್ನು ಪ್ರವೇಶ ಮಾಡಿದ. ಆದರೆ, ಅಲ್ಲಿ ವಿದ್ಯಾಭ್ಯಾಸ ಮುಕ್ತಾಯವಾಗುವುದಕ್ಕೆ ಮುಂಚೆಯೇ ವಿಶ್ವವಿದ್ಯಾಲಯದ ಅಧಿಕಾರಿಗಳು ಆತನನ್ನು ಹೊರಹಾಕಿದರು. 'ಆ ವಿದ್ಯಾರ್ಥಿ ಅನಾರೋಗ್ಯ ಪ್ರಕೃತಿಯವನೂ ಸ್ವಲ್ಪಮಟ್ಟಿಗೆ ದಡ್ಡನೂ' ಆಗಿದ್ದನೆಂಬುದು

ಅಧಿಕಾರಿಗಳು ತೋರಿಸಿದ ಕಾರಣ. ಆದರೆ ವಸ್ತುಸ್ಥಿತಿ ಬೇರೆಯೇ ಇತ್ತು. ವಿದ್ಯಾರ್ಥಿ ಬೆಲಿನ್ಸ್ಕಿ 'ದ್ಮಿತ್ರಿ ಕಾಲಿಸಿನ್' ಎಂಬೊಂದು ನಾಟಕವನ್ನು ಬರೆದಿದ್ದ. ಗುಲಾಮ ಪದ್ಧತಿಯನ್ನು ವಿರೋಧಿಸಿ ಭೂಮಾಲಿಕರ ದೌರ್ಜನ್ಯವನ್ನು ಚಿತ್ರಿಸಿತ್ತು ಆ ನಾಟಕ. ಅಂತಹ ಅಪಾಯಕಾರಿ ವ್ಯಕ್ತಿಯನ್ನು ವಿಶ್ವವಿದ್ಯಾಲಯದಲ್ಲಿ ಇರಗೊಡುವುದು ಸಾಧ್ಯವಿರಲಿಲ್ಲ. ಹೀಗಾಗಿ ಅಧಿಕಾರಿಗಳು ಸಂಶೋಧನೆ ನಡೆಸಿ, ವಿದ್ಯಾರ್ಥಿ ಬೆಲಿನ್ಸ್ಕಿ ಅನಾರೋಗ್ಯ ಪ್ರಕೃತಿಯವನೆಂದೂ ಸ್ವಲ್ಪಮಟ್ಟಿಗೆ ದಡ್ಡನೆಂದೂ ಕಂಡುಹಿಡಿದರು!

ಈ ರೀತಿ ವಿದ್ಯಾಭ್ಯಾಸವನ್ನು ಮುಕ್ತಾಯಗೊಳಿಸಿದ ಬೆಲಿನ್ಸ್ಕಿ, ಬರೆಹಗಾರ ನಾಗಿ ರಷ್ಯದ ಸಾಹಿತ್ಯ ಕ್ಷೇತ್ರಕ್ಕೆ ಪದಾರ್ಪಣ ಮಾಡಿದ.

ಆ ಕ್ಷೇತ್ರದಲ್ಲಿ ಆತ ನಡೆಸಿದುದು, ಸಾಯುವವರೆಗೂ–ಅಂದರೆ ಹದಿನೈದು ವರ್ಷಗಳ ಕಾಲ–ನಿರಂತರವಾದ ಸಾಹಿತ್ಯ ಚಟುವಟಿಕೆ. ಆ ಚಟುವಟಿಕೆಗೆ, ಹೊಗೆ ಯಾಡುತ್ತಿದ್ದ ರಷ್ಯಾ ಹಿನ್ನೆಲೆಯಾಗಿತ್ತು. ಹತ್ತೊಂಭತ್ತನೆಯ ಶತಮಾನದ ಆರಂಭದಲ್ಲಿ ಕ್ರಾಂತಿಕಾರಕ ಭಾವನೆಗಳು, ರಷ್ಯದ ಶ್ರೀಮಂತವರ್ಗದ ಕೆಲವರಲ್ಲಿ ಮಾತ್ರ ಮನೆಮಾಡಿದ್ದುವು. ಕ್ರಮೇಣ ಪ್ರಜಾಪ್ರಭುತ್ವ ಚಳವಳಿ ವಿಸ್ತಾರಗೊಂಡು ಬಂಡಾಯದ ಭಾವನೆ ಜನಸಾಮಾನ್ಯರನ್ನೂ ಆವರಿಸಿತು. ಬೆಲಿನ್ಸ್ಕಿ ಆ ಎರಡು ಘಟ್ಟಗಳ ನಡುವಿನ ಸೇತುವೆಯಾಗಿದ್ದ. ಮುಂದುವರೆದ ಇತರ ಪಾಶ್ಚಾತ್ಯ ರಾಷ್ಟ್ರ ಗಳ ಪ್ರಮುಖ ವಿಚಾರಧಾರೆಗಳನ್ನು ಸ್ವಾಭಾವಿಕವಾಗಿಯೇ ಬೆಲಿನ್ಸ್ಕಿ ಮನನ ಮಾಡಿದ. ಆದರೆ ಅವುಗಳನ್ನೆಂದೂ ಆತ ಕುರುಡುನಂಬಿಕೆಯಿಂದ ಪೂಜಿಸಲಿಲ್ಲ. ಬದಲು, ರಷ್ಯಾದ ವಿಶಿಷ್ಟ ಪರಿಸ್ಥಿತಿಯನ್ನೇ ಸದಾ ಗಮನದಲ್ಲಿಟ್ಟು, ಸ್ವತಂತ್ರ ವಿಚಾರ ಸರಣಿಯನ್ನು ಬೆಲಿನ್ಸ್ಕಿ ರೂಪಿಸಿಕೊಂಡ. ಆರಂಭದಲ್ಲಿ, ಜರ್ಮನಿಯ ತತ್ತ್ವವೇತ್ತರ ಪ್ರಭಾವ ಆತನ ಮೇಲೆ ಬಲವಾಗಿತ್ತು. ಆದರೆ ವಸ್ತುಸ್ಥಿತಿಯ ಉರಿಬೆಳಕಿನೆದುರು ಭಾವವಾದದ ಮಂಜು ಕರಗಿಹೋಯಿತು.

ಜನಸಮುದಾಯದ ಯಾವುದೇ ಚಳವಳಿಗೆ ಬೆಲಿನ್ಸ್ಕಿ ನೇರವಾದ ನಾಯಕ ನಾಗಲಿಲ್ಲ. ಬದಲು, ನೂತನ ವಿಚಾರಧಾರೆ ಸಾಹಿತ್ಯಕ್ಷೇತ್ರದಲ್ಲಿ ಆತನನ್ನು ನಾಯಕ ಮಣಿಯನ್ನಾಗಿ–ಹೊಸ ಪಂಥದ ಮಾರ್ಗದರ್ಶಕನನ್ನಾಗಿ ಮಾಡಿತು.

ವಾಸ್ತವವಾದದ ಹೆದ್ದಾರಿ

ಬೆಲಿನ್ಸ್ಕಿ ಹಾಕಿಕೊಟ್ಟುದು ವಾಸ್ತವವಾದದ ಹೆದ್ದಾರಿ. ಆತನದು ಜನವಾದಿಯಾದ ವಾಸ್ತವತೆ. ಕ್ರಾಂತಿಕಾರನ ದೃಷ್ಟಿಯಿಂದ ಆತ ಬದುಕನ್ನು ನೋಡಿದ. ಹೀಗಾಗಿ ಬೆಲಿನ್ಸ್ಕಿಯ ವಾಸ್ತವತೆ ವಿಶಿಷ್ಟ ರೂಪ ತಳೆಯಿತು.

ಒಂದೆಡೆ ಆತ ಬರೆದ:

"ವಾಸ್ತವತೆ–ಇದೀಗ ಆಧುನಿಕ ಜಗತ್ತಿನ ಘೋಷ ಮತ್ತು ಕೊನೆ ಮಾತು! ....ವಾಸ್ತವತೆ ಮಣ್ಣಿನಿಂದ ಚಿಮ್ಮುತ್ತದೆ; ಮತ್ತು ಎಲ್ಲಾ ವಾಸ್ತವತೆಯ ಮಾತೃಕೆಯಾದ ಮಣ್ಣೇ ಸಮಾಜ."

ಬೆಲಿನ್‌ಸ್ಕಿಯ ಸೌಂದರ್ಯಮೀಮಾಂಸೆಯ ಪ್ರವಾಹ ಹರಿಯುವುದು ಈ ಮೂಲದಿಂದ. ವಾಸ್ತವತೆ, ಕಲಾತ್ಮಕ ಪರಿಪೂರ್ಣತೆ ಮತ್ತು ವಾಸ್ತವತೆಯ ಆಂತರಿಕವಾದ ಕ್ರಿಯಾತ್ಮಕ ಅಂಶ—ಇವು ಮೂರು, ಬೆಲಿನ್‌ಸ್ಕಿಯ ಪ್ರತಿಪಾದನೆಯ ಮೂಲಭೂತ ಅಂಗಗಳಾಗಿವೆ.

ಬೆಲಿನ್‌ಸ್ಕಿಯ ಅಭಿಪ್ರಾಯದಂತೆ, ಕಲಾತ್ಮಕ ಸೃಷ್ಟಿಯು ಬದುಕಿನ ಸತ್ಯದಿಂದಲೇ ತನ್ನ ಸೊಗಸುಗಾರಿಕೆಯನ್ನೂ ಯಥಾರ್ಥ ಸ್ವರೂಪವನ್ನೂ ಉದಾತ್ತ ಮಹತ್ವವನ್ನೂ ಪಡೆಯುತ್ತದೆ. ಪ್ರಾಮಾಣಿಕನಾದ ಕಲಾವಿದನಿಗೆ 'ವಾಸ್ತವತೆಯ ತಿಳಿವು' ಇದ್ದರಾಯಿತು. ಬದುಕಿನ ಯಾವುದೋ ಒಂದಂಶವನ್ನು ಮಾತ್ರ ಸರಿಯಾಗಿ ಕಾಣದೆ, ಸಮಗ್ರ ಸ್ವರೂಪವನ್ನೇ ವಾಸ್ತವವಾಗಿ ಕಾಣುವುದರಿಂದ ಕೃತಿ ಉತ್ತಮಗೊಳ್ಳುತ್ತದೆ.

ವಾಸ್ತವತೆಯ ಹಿರಿಮೆಯನ್ನು ಕುರಿತು ಬೆಲಿನ್‌ಸ್ಕಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಗಮನಾರ್ಹವಾಗಿವೆ. ಹಿರಿದಾದ ಕಲೆ ಮಾತನಾಡುವುದು ಬದುಕಿನ ಭಾಷೆಯನ್ನು, ಪ್ರಾಮಾಣಿಕನಾದ ಹಿರಿಯ ಕಲಾವಿದ ವಾಸ್ತವವಾದಿಯಾದ ಕೃತಿ ರಚಿಸುವಾಗ, ಆತನ ಸ್ವಂತ ಅಭಿಪ್ರಾಯಗಳೇನೇ ಇರಲಿ, ವಾಸ್ತವತೆಗೇ ಜಯವಾಗುತ್ತದೆ. ಹಾಗೆಯೇ ಉದ್ದೇಶವು ಸಾಧುವಾಗಿದ್ದರೂ ವಾಸ್ತವತೆಯ ಮನೋರಾಗವಿಲ್ಲದವನ ಕೃತಿ ಸಪ್ಪಗಾಗುತ್ತದೆ.

ಈ ದೃಷ್ಟಿಕೋನವನ್ನು ಬೆಲಿನ್‌ಸ್ಕಿ, ಆತನ ಸಮಕಾಲೀನನಾಗಿದ್ದ ಪ್ರಖ್ಯಾತ ಸಾಹಿತಿ ಗೊಗೋಲನ ಕೃತಿವಿಮರ್ಶೆಯ ಮೂಲಕ ಸ್ಪಷ್ಟಪಡಿಸಿದ. ಗೊಗೋಲ್ ಹಿರಿಯ ಕಲಾವಿದನಾಗಿದ್ದ. ಅವನ ಕೃತಿಗಳು ರಷ್ಯದ ಜನಜೀವಕ್ಕೆ ಕನ್ನಡಿ ಹಿಡಿಯುತ್ತಿದ್ದುವು. ಪ್ರಜಾಪ್ರಭುತ್ವ ಮನೋವೃತ್ತಿ ಜನರಲ್ಲಿ ಬೆಳೆಯಲು ಆ ಸಾಹಿತ್ಯ ಕೃತಿಗಳು ಸಹಾಯಕವಾದುವು. ಆದರೆ ವೈಯಕ್ತಿಕವಾಗಿ ಗೊಗೋಲ್‌ನಲ್ಲಿ ಪ್ರತಿಗಾಮಿ ಪ್ರವೃತ್ತಿಗಳಿದ್ದುವು. ದಿನಕಳೆದಂತೆ ಆ ಪ್ರವೃತ್ತಿಗಳು ಬಲಗೊಂಡುವು. ಹೀಗಿದ್ದರೂ ತನ್ನ ಪ್ರಾಮಾಣಿಕತೆಯ ಕುಂಚವನ್ನು ಯಥಾರ್ಥತೆಯ ಬಣ್ಣಗಳಲ್ಲಷ್ಟೇ ಆತ ಅದ್ದುತಿದ್ದುದರಿಂದ ಆತನ ಕೃತಿಗಳು ಭವ್ಯವಾಗಿಯೇ ಉಳಿದುವು.

ಒಂದು ಲೇಖನದಲ್ಲಿ ಬೆಲಿನ್‌ಸ್ಕಿ ಹೀಗೆ ಬರೆದಿದ್ದಾನೆ :

"ನಮ್ಮ ಸಾಹಿತ್ಯ ಯಾವಾಗಲೂ ಆಲಂಕಾರಿಕ ಸ್ವರೂಪವನ್ನು ದಾಟಿ ಸ್ವಾಭಾವಿಕವಾಗಲು ಯತ್ನಿಸಿದೆ. ಯಶಸ್ವಿಯಾಗುತ್ತ ಬಂದಿರುವ ಈ ಯತ್ನದಲ್ಲೇ ನಮ್ಮ ಸಾಹಿತ್ಯಚರಿತ್ರೆಯ ಅರ್ಥವೂ ಸ್ಫೂರ್ತಿಯೂ ಅಡಕವಾಗಿವೆ. ಈ ದಿಕ್ಕಿನಲ್ಲಿ ಗೊಗೋಲ್‌ನಷ್ಟು ಯಶಸ್ವಿಯಾದ ಬರೆಹಗಾರ ಬೇರೆ ಇಲ್ಲವೆನ್ನುವುದು ತಪ್ಪಾಗಲಾರದು. ಇತರ ಭಾವಗಳೇನೇ ಇರಲಿ, ಕಲೆಯು ವಾಸ್ತವತೆಗೆ ಅಂಟಿಕೊಂಡಿರುವುದರಿಂದಲೇ ಇದು ಸಾಧ್ಯವಾಗಿದೆ. ಇದು ಗೊಗೋಲ್ ಮಾಡಿರುವ ಮಹಾಸೇವೆ. ಆ ಮೂಲಕ, ಕಲೆಯ ವಿಷಯದಲ್ಲಿ ಜನರಿಗಿರುವ ಅಭಿಪ್ರಾಯವನ್ನೇ ಆತ

ಸಂಪೂರ್ಣವಾಗಿ ಬದಲಾಯಿಸಿದ್ದಾನೆ........ಎಲ್ಲಾ ಬಣ್ಣಗಳಲ್ಲಿ ವಾಸ್ತವತೆಯ ಪ್ರತ್ಯುತ್ಪಾದನೆಯೇ ಗೊಗೋಲನ ಕಲೆ."

ಸಾಹಿತ್ಯಕೃತಿಯು ಅಥವಾ ಕಲಾಕೃತಿಯು ವಾಸ್ತವತೆಯ ಪ್ರತ್ಯುತ್ಪಾದನೆಯಾಗಬೇಕೆಂದು ಹೇಳುವಾಗ ಬೆಲಿನ್ಸ್ಕಿ, ಕಲೆಯು ವಾಸ್ತವತೆಯ ಛಾಯಾಗ್ರಹಣವಾಗಲೆಂದು ಎಂದಿಗೂ ಅಭಿಪ್ರಾಯಪಡುವುದಿಲ್ಲ. ಕಲಾವಿದ ವಾಸ್ತವತೆಯನ್ನು ತನ್ನ ಕೃತಿಯಲ್ಲಿ ಒಡಮೂಡಿಸುವಾಗ, ತಾನು ಕಂಡುದಕ್ಕೊಂದು ಅರ್ಥವನ್ನು ಕೊಡಬೇಕು. ಸಮಾಜದ ಪ್ರಾಗತಿಕ ಶಕ್ತಿಗಳ ನೆಲೆಯಲ್ಲಿ ನಿಂತು ಆತ, ತಾನು ಚಿತ್ರಿಸಿರುವ ವಾಸ್ತವತೆಯನ್ನು ಕುರಿತು ತೀರ್ಪನ್ನೀಯಬೇಕು.

ಸೃಷ್ಟಿಯಾದ ಪ್ರತಿಬಿಂಬವನ್ನು ಮೂಲದೊಡನೆ ಹೋಲಿಸಿ ನೋಡುವುದೇ ಬೆಲಿನ್ಸ್ಕಿ ಅನುಸರಿಸಿದ ವಿಮರ್ಶೆಯ ವಿಧಾನ. ಈ ರೀತಿಯಾಗಿ ಕೃತಿಯ ಕಲಾತ್ಮಕ ಸ್ವರೂಪವನ್ನು ಆತ ಗೊತ್ತು ಮಾಡುತ್ತಿದ್ದ. ಕಲಾತ್ಮಕ ಸ್ವರೂಪವೆಂದರೆ ವಾಸ್ತವತೆಯ ಸಮಗ್ರತೆ. ಈ ದೃಷಿಯಿಂದ ಆಗುವ ಕಲಾತ್ಮಕ ಸೃಷ್ಟಿಯಲ್ಲಿ ಸುಳ್ಳಿಗೆ–ಕೃತ್ರಿಮವಾದುದಕ್ಕೆ–ಎಡೆಯಿಲ್ಲ. ಮಿಥ್ಯವೆಂದಿಗೂ ಕಲಾತ್ಮಕವಾಗುವುದಿಲ್ಲ. ಒಂದೇ, ತನ್ನ ಸ್ವಂತ ಅಭಿಪ್ರಾಯವೇನೇ ಇದ್ದರೂ ಕಲಾವಿದ ವಾಸ್ತವತೆಗೆ ವಿಧೇಯನಾಗಿರುತ್ತಾನೆ ; ಇಲ್ಲವೆ, ಒಳ್ಳೆಯ ಕೃತಿಯನ್ನು ಸೃಷ್ಟಿಸಲಾರದೆ ವಿಫಲನಾಗಿದ್ದಷ್ಟೂ ಕೃತಿ ಹೆಚ್ಚು ಕಲಾತ್ಮಕವಾಗುತ್ತದೆ. ವಾಸ್ತವತೆಯೇ ಪ್ರತಿಯೊಂದು ಕಲಾಕೃತಿಯ ಹಿಂದಿನ ಮಹಾ ಪ್ರೇರಕ ಶಕ್ತಿ.

ಈ ರೀತಿ ಮೀಮಾಂಸೆಯನ್ನು ಮಾಡಿದ ಬೆಲಿನ್ಸ್ಕಿ, "ಕ್ರಿಯಾತ್ಮಕ ಸೌಂದರ್ಯ ಮೀಮಾಂಸೆಯೇ ವಿಮರ್ಶೆ" ಎಂದು ಕರೆದ.

ಕಾವ್ಯ ಎಂದರೇನು ?

ಬೆಲಿನ್ಸ್ಕಿಯ ಅಭಿಪ್ರಾಯದಂತೆ, "ವಾಸ್ತವ ಮತ್ತು ನೈಜ ವಿಚಾರಗಳ ಕಲೆಯೇ ಕಾವ್ಯ, ಸಲ್ಲದ ಭಾವ ವೈಪರೀತ್ಯವಲ್ಲ." ಇದು, "ಪ್ರತಿಮಾರೂಪವಾದ ಸತ್ಯ" ; "ಸಾಧ್ಯತೆಯ ರೂಪದಲ್ಲಿ ವಾಸ್ತವತೆಯ ಸೃಷ್ಟ್ಯಾತ್ಮಕ ಪ್ರತ್ಯುತ್ಪಾದನೆ."

"ಕಾವ್ಯ ಎಂದರೇನು ? ಅದೇನನ್ನು ಒಳಗೊಂಡಿದೆ ?—ಇದೀಗ ಪ್ರಶ್ನೆ. ಸಾಮಾನ್ಯ ಬರೆಹಗಾರರು, ಅದು ಕಲ್ಪನೆಯ ಸೃಷ್ಟಿ ಎಂದು ಭಾವಿಸುತ್ತಾರೆ. ನಿದ್ದೆಹೋದ ಮನುಷ್ಯನ ಕನಸುಗಳೂ ಮತಿಗೆಟ್ಟ ಮನುಷ್ಯನ ಕಿರಿಚಾಟಗಳೂ ಕಲ್ಪನೆಯ ಸೃಷ್ಟಿಗಳೇ. ಆದರೆ ಅವು ಕಾವ್ಯವಲ್ಲ. ಕಾವ್ಯಸೃಷ್ಟಿಗೆ, ಬೇರೆ ರೀತಿಯ ಸೃಷ್ಟಿಯಿಂದ ಅದನ್ನು ಪ್ರತ್ಯೇಕಿಸಿ ತೋರಿಸುವಂತಹ ಯಾವುದಾದರೂ ನಿರ್ದಿಷ್ಟ ಗುಣವಿರಬೇಕು. ಸಾಧ್ಯತೆಯ ರೂಪದಲ್ಲಿ ವಾಸ್ತವತೆಯ ಸೃಷ್ಟ್ಯಾತ್ಮಕ ಪ್ರತ್ಯುತ್ಪಾದನೆಯೇ ಕಾವ್ಯ. ಆದುದರಿಂದ ವಾಸ್ತವತೆಯಲ್ಲಿ ಇಲ್ಲದುದು ಕಾವ್ಯದಲ್ಲೂ

ಮಿಥ್ಯವೇ. ಬೇರೆ ಮಾತಿನಲ್ಲಿ ಹೇಳುವುದಾದರೆ, ವಾಸ್ತವತೆಯಲ್ಲಿ ಇಲ್ಲದುದು ಕಾವ್ಯವಾಗಲಾರದು."

ಬೇರೊಂದೆಡೆ ಬೆಲಿನ್‌ಸ್ಕಿ ವಿವರವಾಗಿ ಹೀಗೆ ಹೇಳಿದ್ದಾನೆ :

"ಪ್ರತಿಯೊಂದು ಕಾವ್ಯ ಸೃಷ್ಟಿಯೂ ಕವಿಯ ಮನಸ್ಸಿನಲ್ಲಿ ಬೇರೂರಿರುವ ಬಲಶಾಲಿಯಾದ ಭಾವದ ಫಲ. ಆ ಭಾವವು, ಆತನ ಬರೀ ಮಾನಸಿಕ ಚಟುವಟಿಕೆಯ ಪರಿಣಾಮ ಮಾತ್ರ ಎಂದು ಭಾವಿಸಿದರೆ, ಕಲೆಯನ್ನು ಮಾತ್ರವಲ್ಲ, ಕಲೆಯ ಸಾಧ್ಯತೆಯನ್ನೂ ನಾವು ಅಳಿಸಿಬಿಡುತ್ತೇವೆ. ಯಾವುದೋ ಭಾವವನ್ನು ಯೋಚಿಸಿ ಸರಿಯಾದ ಚೌಕಟ್ಟಿನಲ್ಲಿ ಅದನ್ನು ತುರುಕಿಸುವುದಷ್ಟೇ ಕಾವ್ಯವೆಂದಾದರೆ,ಸಂಪಾದನೆ ಇಲ್ಲದೆ ಸಂಕಟಪಡುವಾಗ ಅಥವಾ ಲಾಭದ ಆಸೆಯಿಂದ ಬಾಯಲ್ಲಿ ನೀರೂರುವಾಗ ಇಲ್ಲವೆ ಏನೋ ಖುಷಿಯಾದಾಗ ನಾವೂ ಯಾಕೆ ಕವಿಗಳಾಗಬಾರದು? ಇಲ್ಲ, ಸ್ವಾಭಾವಿಕವಾಗಿಯೇ ಸ್ವಯಂಪ್ರೇರಣೆಯಿಂದಲೇ ಕವಿಗಳಾದವರು ಹಾಗೆ ಮಾಡುವುದಿಲ್ಲ! ಸ್ವಾಭಾವತಃ ಕವಿಯಲ್ಲದವನು ಯಾವುದಾದರೂ ಗಹನವಾದ ಸತ್ಯವಾದ ಪರಿಶುದ್ಧವೇ ಆದ ಭಾವವನ್ನು ಯೋಚಿಸಬಹುದು. ಆದರೆ ಆತ ಬರೆಯುವುದು ಮಾತ್ರ ಅಲ್ಪವಾಗಿ ಕಪಟದ್ದಾಗಿ ಅಪ್ರಾಮಾಣಿಕವಾಗುವುದು; ಅಸಹ್ಯವಾಗಿ ನಿರ್ಜೀವವಾಗುವುದು. ಆದ್ದರಿಂದ ಯಾರಿಗೂ ಸಮಾಧಾನವಾಗದು. ಆ ಕವಿತೆ ಒಳಗೊಂಡ ಭಾವ ಎಷ್ಟೇ ಸತ್ಯವಾದರೂ ಎಲ್ಲರಿಗೂ ನಿರಾಶೆಯಾಗುವುದು. ಜನರು ಕಲೆಯನ್ನು ತಿಳಿದುಕೊಳ್ಳುವ ರೀತಿ ಇದು; ಕವಿಗಳಿಂದ ಅವರು ಕೇಳುವುದು ಇಂತಹದನ್ನು ; ವಿರಾಮವಿದ್ದಾಗ ಜನರಿಗೋಸ್ಕರ ನೀವು ಸೊಗಸಾದ ಒಂದು ಭಾವವನ್ನು ಯೋಚಿಸಿ, ಬಂಗಾರದ ಕಟ್ಟಿನೊಳಗಿಡುವ ವಜ್ರದ ಹಾಗೆ ಅದನ್ನೊಂದು ಚೌಕಟ್ಟಿನಲ್ಲಿ ಇರಿಸಿ! ಆಹಾ, ಸಿದ್ಧವಾಯಿತು ಕಾವ್ಯ!....ಇಲ್ಲ, ಅಂತಹ ಭಾವಗಳು ಕವಿಯ ಮನಸ್ಸನ್ನು ಆವರಿಸುವುದಿಲ್ಲ. ಜೀವಂತ ಸೃಷ್ಟಿಯ ಜೀವಂತ ಬೀಜ ಹಾಗೆ ಮೊಳೆಯುವುದಿಲ್ಲ. ಕಲೆಯು ಅಸ್ಪಷ್ಟ ತಾತ್ತ್ವಿಕ ಭಾವಗಳನ್ನಾಗಲೀ ವಿವೇಚನಾಪೂರ್ಣ ಭಾವಗಳನ್ನಾಗಲೀ ಸಹಿಸುವುದಿಲ್ಲ. ಅದು ಸಹಿಸುವುದು ಕಾವ್ಯಭಾವಗಳನ್ನು ಮಾತ್ರ. ಕಾವ್ಯಭಾವವು ಯುಕ್ತಿಸರಣಿಯಲ್ಲ, ಜಡತತ್ತ್ವವಲ್ಲ, ಯಾವುದೇ ನಿಯಮವಲ್ಲ. ಅದು ಮಿಡಿಯುತ್ತಿರುವ ಉದ್ವಿಗ್ನ ಹೃದಯ, ಅದು ಮನೋರಾಗ.... ಮನೋರಾಗವೆಂದರೇನು? ಕಲಾಸೃಷ್ಟಿಯು ಯಾವುದೇ ತಮಾಷೆಯಲ್ಲ. ಕಲಾಕೃತಿಯು ವಿರಾಮದ ಇಲ್ಲವೆ 'ಶೋಕಿ'ಯ ಫಲವಲ್ಲ. ಕಲಾವಿದ ಶ್ರಮಪಡುವುದರಿಂದಲೇ ಆ ಸೃಷ್ಟಿ ಸಾಧ್ಯವಾಗುತ್ತದೆ. ತನ್ನ ಆತ್ಮದಲ್ಲಿ ಹೊಸತೊಂದು ಕೃತಿಯ ಬೀಜದ ಬಿತ್ತನೆ ಹೇಗೆ ಆಯಿತೆಂಬುದು ಆತನಿಗೇ ತಿಳಿದಿರುವುದಿಲ್ಲ. ತಾಯಿ ತನ್ನ ಗರ್ಭದಲ್ಲಿ ಶಿಶುವನ್ನು ಹೊತ್ತ ಹಾಗೆ ಕಾವ್ಯಭಾವದ ಬೀಜವನ್ನು ತನ್ನೊಳಗೆ ಆತ ಹೊರುತ್ತಾನೆ. ಕಾವ್ಯ ಸೃಷ್ಟಿಯ ಕ್ರಿಯೆಯು ಮಗುವಿನ ಜನನದ ಕ್ರಿಯೆಗೆ ಸಮಾನವಾಗಿದೆ. ದೈಹಿಕ ಶ್ರಮದೊಡನೆ ಕಂಡುಬರುವ ವೇದನೆಯೂ ಅಂತಹದೇ.

ಇದು ಆತ್ಮಕ್ಕೆ ಸಂಬಂಧಿಸಿದ ಮಾನಸಿಕವಾದ ವೇದನೆಯೂ ಅಂತಹದೇ. ಇದು ಆತ್ಮಕ್ಕೆ ಸಂಬಂಧಿಸಿದ ಮಾನಸಿಕವಾದ ವೇದನೆ, ಅಷ್ಟೆ. ಆದುದರಿಂದ, ಕವಿಯು ಸೃಷ್ಟಿಯ ಯತ್ನಕ್ಕೂ ಸಾಹಸಕ್ಕೂ ಕೈ ಇಕ್ಕಿದರೆ, ಯಾವುದೋ ಬಲಶಾಲಿಯಾದ ಶಕ್ತಿಯಿಂದ ಅಜೇಯವಾದ ಉದ್ವೇಗದಿಂದ ಆತ ಪ್ರೇರಿತನಾಗಿದ್ದಾನೆ ಎಂಬುದು ಸ್ಪಷ್ಟ. ಆ ಶಕ್ತಿಯೇ ಉದ್ವೇಗವೇ ಮನೋರಾಗ."

ಹೀಗೆ, ವಾಸ್ತವತೆಯ ಮನೋರಾಗದಿಂದ ಸ್ಫೂರ್ತಿಗೊಂಡು ಹುಟ್ಟಿದ ಕಾವ್ಯ ಪ್ರಭಾವಶಾಲಿಯಾಗುತ್ತದೆಂದು, ಅದೇ ನಿಜವಾದ ಕಾವ್ಯವಾಗುತ್ತದೆಂದು, ಬೆಲಿನ್ಸ್ಕಿ ಹೇಳಿದ.

ಬದುಕಿಗಾಗಿ ಕಲೆ

ಈ ರೀತಿ ಹೊಸ ವಿಚಾರಗಳನ್ನು ಪ್ರತಿಪಾದಿಸಲು ಹೊರಟ ಬೆಲಿನ್ಸ್ಕಿ, ಪ್ರತಿಗಾಮಿಯಾದ ಹಳೆಯ ವಿಚಾರಗಳಿಗಿದಿರು ಎಡೆಬಿಡದೆ ಹೋರಾಡಬೇಕಾಯಿತು. ಆಳುವ ವರ್ಗದ ಆರಾಧಕರು ಬಳಸುತ್ತಿದ್ದುದು 'ಕಲೆಗಾಗಿ ಕಲೆ' ಎನ್ನುವ ಮೋಹಕ ಘೋಷ. ಹೀಗೆ ಕಲಾಸೃಷ್ಟಿಯನ್ನೆಲ್ಲ ನಿರ್ಜೀವಗೊಳಿಸಲು ಅವರು ಯತ್ನಿಸುತ್ತಿದ್ದರು. ಆ ಘೋಷದ ಹಿಂದಿನ ದುರುದ್ದೇಶವನ್ನು ಬೆಲಿನ್ಸ್ಕಿ ಬಾರಿಬಾರಿಗೂ ಬಯಲಿಗೆಳೆದ.

ಒಮ್ಮೆ ಆತ ಹೀಗೆ ಬರೆದ :

"ಪ್ರಾಸಗಳ ಕುಣಿತದ ಕಾಲ ಕಳೆಯಿತು. ಅದು ಇನ್ನೆಂದೂ ಮರಳಿ ಬರದು. ಕ್ಷುಲ್ಲಕವಾದ ಭಾವವೈಪರಿತ್ಯಗಳಿಗೂ ಹೃದಯವಿಕಾರಗಳಿಗೂ ಈಗ ಬೆಲೆಯಿಲ್ಲ. ಆಳವಾದ ಭಾವನೆಗಳನ್ನೂ ವಿಚಾರಗಳನ್ನೂ ಕಲಾತ್ಮಕ ರೂಪದಲ್ಲಿ ವ್ಯಕ್ತಗೊಳಿಸುವುದೇ ಈಗ ಬೇಕಾದ್ದು. ಅದಕ್ಕೆ ಪ್ರಾಸವಿದ್ದರೂ ಸರಿಯೇ ಇಲ್ಲದಿದ್ದರೂ ಸರಿಯೆ. ಈ ದಿನ ಕಾವ್ಯದಲ್ಲಿ ಯಶಸ್ಸು ಗಳಿಸಲು ಪ್ರತಿಭೆಯೊಂದೇ ಸಾಲದು. ಕಾಲಧರ್ಮವನ್ನು ಕುರಿತು ಆತ ಶಿಕ್ಷಣಪಡೆದಿರಬೇಕು. ಕನಸಿನ ಜಗತ್ತಿನಲ್ಲಿ ಕವಿ ಇನ್ನು ಬದುಕುವುದು ಸಾಧ್ಯವಿಲ್ಲ. ಆತ ಈಗಾಗಲೇ ಈ ಕಾಲದ ವಾಸ್ತವತೆಯ ರಾಜ್ಯದ ನಾಗರಿಕನಾಗಿದ್ದಾನೆ. ಆತ ಸಂತೋಷಪಡಿಸುವ ಬರಿಯ ಭಟ್ಟಂಗಿಯಾಗಬೇಕೆಂದು ಸಮಾಜ ಈಗ ಅಪೇಕ್ಷಿಸುವುದಿಲ್ಲ. ಬದಲು ಆತ, ತನ್ನ ಅಂತಃಸ್ಫೂರ್ತಿಯ ಧ್ಯೇಯವಾದಿಯಾದ ಬದುಕಿನ ಪ್ರತಿನಿಧಿಯಾಗಬೇಕೆಂದು, ಅತ್ಯಂತ ಕಠಿಣ ಪ್ರಶ್ನೆಗಳಿಗೂ ಉತ್ತರವೀಯುವ ಪ್ರವಾದಿಯಾಗಬೇಕೆಂದು, ಇತರರಲ್ಲಿನ ನೋವು ಸಂಕಟಗಳನ್ನು ಕಾಣುವುದಕ್ಕಿಂತ ಮುಂಚಿತವಾಗಿ ತನ್ನಲ್ಲೇ ಸಮಾನವಾದ ನೋವು ಸಂಕಟಗಳನ್ನು ಕಂಡು, ಕಾವ್ಯ ಸ್ವರೂಪದಲ್ಲಿ ಅವುಗಳನ್ನು ಒಡಮೂಡಿಸಿ, ಗುಣಪಡಿಸುವ ವೈದ್ಯನಾಗಬೇಕೆಂದು ಸಮಾಜ ಬಯಸುತ್ತದೆ."

ಬದುಕಿಗೋಸ್ಕರ ಕಲೆ ಇರಬೇಕೆಂದು ಪ್ರತಿಪಾದಿಸಿದ ಬೆಲಿನ್ಸ್‌ಕಿ, ಕಲೆಯ ಅಂಶದ ಮಹತ್ವವನ್ನೆಂದೂ ಕಡೆಗಣಿಸಲಿಲ್ಲ. ಸಾಮಾಜಿಕ ಸಮಸ್ಯೆಗಳನ್ನು ಸಾಹಿತ್ಯದಲ್ಲಿ ಒಡಮೂಡಿಸುವ ಆತುರದಲ್ಲಿ ಕಲೆಯ ಅಂಶದ ಬಗೆಗೆ ಅಲಕ್ಷ್ಯ ತೋರಿದ ಕವಿಗಳನ್ನೂ ಬರೆಹಗಾರರನ್ನೂ ಆತ ಕಟುವಾಗಿ ಟೀಕಿಸಿದ. ಪ್ರತಿಭೆ ಇಲ್ಲದೆ ಹೋದರೆ ಎಷ್ಟು ಒಳ್ಳೆಯ ಪ್ರವೃತ್ತಿ ಇದ್ದೇನು ಫಲ? ಎಂದು ಆತ ಕೇಳಿದ. ಪ್ರತಿಭೆ ಇಲ್ಲದವರು ಸಾಹಿತ್ಯ ಸೃಷ್ಟಿಗೆ ಕೈ ಇಕ್ಕಿದರೆ, ಯಾವ ಪ್ರತಿಮೆಗಳನ್ನೂ ಅವರು ಕಲ್ಪಿಸಲಾರದೆ ವಿಫಲರಾಗುತ್ತಾರೆ. ಗುಲಾಮಗಿರಿಯಲ್ಲಿದ್ದ ಒಂದು ಕಾದಂಬರಿಯನ್ನೋದಿ ಒಮ್ಮೆ ಬೆಲಿನ್ಸ್‌ಕಿ ಹೀಗೆ ಹೇಳಿದ: "ಗ್ರಂಥಕರ್ತರು ಕಾದಂಬರಿ ಬರೆಯುವ ಯತ್ನಕ್ಕೆ ಕೈಹಾಕದೆ, ಅದರ ತಿರುಳನ್ನು ನಿರೀಕ್ಷಕನೊಬ್ಬನ ಟಿಪ್ಪಣಿಯಾಗಿ ಸಿದ್ಧಗೊಳಿಸಿದ್ದರೆ ಅವರ ಸುದುದ್ದೇಶದ ಸಾಧನೆ ಹೆಚ್ಚು ಯಶಸ್ವಿಯಾಗುತ್ತಿತು...."

ಆಯಾ ಕಾಲದ ಸಾಮಾಜಿಕ ಪ್ರವೃತ್ತಿಗಳಿಗೂ ಕಲೆಗೂ ಇರುವ ಸಂಬಂಧವನ್ನು ಕುರಿತು ಬೆಲಿನ್ಸ್‌ಕಿ ಈ ರೀತಿ ಬರೆದ:

"ಹಲವರು ಈಗ 'ಪ್ರವೃತ್ತಿ' ಎಂಬ ಪದದಿಂದ ಆಕರ್ಷಿತರಾಗಿದ್ದಾರೆ. ಆ ಪದದಲ್ಲೇ ಎಲ್ಲವೂ ಅಡಕವಾಗಿದೆ ಎಂದು ಅವರ ಭಾವನೆ. ಆದರೆ ನಿಜ ಸಂಗತಿ ಏನು? ಮೊದಲಿನದಾಗಿ, ಕಲೆಯ ಕ್ಷೇತ್ರದಲ್ಲಿ ಪ್ರತಿಭೆ ಇಲ್ಲದೆ ಹೋದರೆ ಪ್ರವೃತ್ತಿಗೆ ಚಿಕ್ಕಾಸಿನ ಬೆಲೆಯೂ ಇಲ್ಲ. ಎರಡನೆಯದಾಗಿ, ಪ್ರವೃತ್ತಿಯು ಬರೆಹಗಾರನ ಮನಸ್ಸಿನೊಳಗೆ ಮಾತ್ರವಲ್ಲ, ಮುಖ್ಯವಾಗಿ ಆತನ ಹೃದಯದಲ್ಲೂ ರಕ್ತದಲ್ಲೂ ಇರಬೇಕು. ಎಲ್ಲದಕ್ಕಿಂತ ಹೆಚ್ಚಾಗಿ, ಅದು ಒಳಗಿನಿಂದಲೇ ಉದಿಸುವ ಸ್ಫುರಿಸುವ ಭಾವನೆಯಾಗಬೇಕು; ಕಲೆಗೋಸ್ಕರ ತಾನು ಇರುವಷ್ಟೇ ಆ ಪ್ರವೃತ್ತಿಗೊಸ್ಕರವೂ ಇರುವೆನೆಂಬ ಬೋಧೆ ಆತನಲ್ಲಿರಬೇಕು. ಪುಸ್ತಕ ಓದಿ ಒಂದು ಭಾವವನ್ನು ಆಯ್ದುಕೊಳ್ಳಬಹುದು ಅಥವಾ ಬೇರೆಯವರಿಂದ ಕೇಳಿ ತಿಳಿಯಬಹುದು. ಸರಿಯಾದ ರೀತಿಯಲ್ಲಿ ಅದನ್ನು ಅರ್ಥಮಾಡಿಕೊಳ್ಳಲೂಬಹುದು. ಆದರೆ ಬರೆಹಗಾರ ಸಂಪೂರ್ಣವಾಗಿ ಅದನ್ನು ಅರಗಿಸಿಕೊಂಡು ಅದರ ಮೇಲೆ ತನ್ನ ಸ್ವಂತ ವ್ಯಕ್ತಿತ್ವದ ಮುದ್ರೆಯನ್ನೊತ್ತದೇ ಹೋದರೆ, ಕವಿತಾರಚನೆಯಲ್ಲಿ ಮಾತ್ರವಲ್ಲ, ಎಲ್ಲ ರೀತಿಯ ಸಾಹಿತ್ಯ ಚಟುವಟಿಕೆಯಲ್ಲೂ ಅದು ನಿಷ್ಪ್ರಯೋಜಕವಾಗುವುದು. ಎಷ್ಟು ಬೇಕಿದ್ದರೂ ನಿಸರ್ಗವನ್ನು ಪ್ರತಿಬಿಂಬಿಸಿ; ಸಿದ್ಧಗೊಳಿಸಿದ ಭಾವಗಳನ್ನೂ ಸುಪ್ರಸಿದ್ಧ ಪ್ರವೃತ್ತಿಗಳನ್ನೂ ಮನಸ್ವಿಯಾಗಿ ನಿಮ್ಮ ಹಸ್ತಪ್ರತಿಯೊಳಗೆ ತುರುಕಿಸಿ; ಆದರೆ ನಿಮ್ಮಲ್ಲಿ ಕಾವ್ಯ ಪ್ರತಿಭೆ ಇಲ್ಲದಿದ್ದರೆ, ನಿಮ್ಮ ಬರೆವಣಿಗೆ ಯಾವುದನ್ನು ಪ್ರತಿಬಿಂಬಿಸುತ್ತಿದೆ ಎಂಬುದು ಯಾರಿಗೂ ಅರ್ಥವಾಗದು. ಅದರೊಳಗಿರುವ ಭಾವಗಳೂ ಪ್ರವೃತ್ತಿಗಳೂ ಸಾಮಾನ್ಯವಾದ ಅಲಂಕಾರಿಕ ಅಂಶಗಳಾಗಿ ಉಳಿಯುವುವು."

—ಹೀಗೆ, ಸಾಹಿತ್ಯ ಸೃಷ್ಟಿಯಲ್ಲಿ ಆಂತರಿಕವಾದ ಕ್ರಿಯಾತ್ಮಕ ಅಂಶವೂ ಬಲು ಮುಖ್ಯವೆಂಬುದನ್ನು ಬೆಲಿನ್ಸ್‌ಕಿ ಸಾರಿದ.

ಸಾಮಾಜಿಕ ಹಿತಗಳಿಗೆ ಸಂಬಂಧವೇ ಇಲ್ಲದ 'ಶುದ್ಧ' ಕಲೆ ಎಂದಾದರೂ ಇತ್ತೆ? ಬೆಲಿನ್ಸ್ಕಿ ಹೇಳಿರುವಂತೆ "ಶುದ್ಧವಾದ ಅಸ್ಪಷ್ಟವಾದ ನಿಶ್ಯರತವಾದ ಅಥವಾ ತತ್ತ್ವಜ್ಞಾನಿಗಳು ಹೇಳುವಂತೆ ಪರಿಪೂರ್ಣವಾದ ಕಲೆ ಎಂದೂ ಎಲ್ಲಿಯೂ ಇರಲಿಲ್ಲ."

"ಮೊದಲಿನದಾಗಿ ಕವಿಯು ಒಬ್ಬ ಮನುಷ್ಯ, ಬಳಿಕ ಆತ ರಾಷ್ಟ್ರದ ಪ್ರಜೆ, ಅನಂತರ ತನ್ನ ಕಾಲದ ಕೂಸು........ಆದುದರಿಂದಲೇ ಕಾವ್ಯವನ್ನೂ ಕವಿಯನ್ನೂ ವಾತಾವರಣದಿಂದ ಪ್ರತ್ಯೇಕಿಸಿ ಸೌಂದರ್ಯ ಮೀಮಾಂಸೆಯನ್ನು ಮಾಡುವುದು ಈಗ ಸಾಧ್ಯವಿಲ್ಲ."

ಕಲೆ ಮತ್ತು ವಿಜ್ಞಾನ

ವಾಸ್ತವತೆಯ ತಳಹದಿಯ ಮೇಲೆ ಕಲೆ ಸೃಷ್ಟಿಯಾಗಬೇಕೆಂಬ ಅಂಶದಿಂದ, ಕಲೆಯ ಸಾಮಾಜಿಕ ಮೌಲ್ಯವೂ ಮಹತ್ವವೂ ಹೆಚ್ಚುತ್ತದೆ. ಪ್ರಾಮಾಣಿಕನಾದ ಕಲಾವಿದನ ಕೃತಿಯನ್ನೋದಿ ಅಲ್ಲಿ ಪ್ರತಿಬಿಂಬಿತವಾಗಿರುವ ಸಾಮಾಜಿಕ ಬದುಕಿನ ಅಭ್ಯಾಸದಿಂದ, ಆ ಸಮಾಜದೊಳಗಿನ ವಿವಿಧ ಭಾಗಗಳ ವರ್ಗಗಳ ಪರಸ್ಪರ ಸಂಬಂಧವನ್ನೂ ವರ್ಗಹಿತಗಳ ಬೆಳವಣಿಗೆಯನ್ನೂ ನಾವು ತಿಳಿಯಬಹುದು. ಬರೆದವನ ವೈಯಕ್ತಿಕ ಅಭಿಪ್ರಾಯಕ್ಕಿಂತಲೂ ಅಲ್ಲಿ ಚಿತ್ರಿಸಿರುವ ಬದುಕಿನ ಸತ್ಯತೆಯೆ ಮುಖ್ಯವಾದುದರಿಂದ ಆ ಕೃತಿಯ ಸಹಾಯದಿಂದ ನಮ್ಮ ಸಾಮಾಜಿಕ ಜ್ಞಾನವನ್ನು ಹೆಚ್ಚಿಸಬಹುದು. ಇಂತಹ ತಿಳಿವಳಿಕೆಯ ಸಾಧನೆಯಲ್ಲಿ ವಿಜ್ಞಾನದಂತೆಯೇ ಕಲೆಯೂ ಸಹಕಾರಿ.

ಈ ಸಂಬಂಧವಾಗಿ ಬೆಲಿನ್ಸ್ಕಿ ಹೀಗೆ ಬರೆದಿದ್ದಾನೆ:

"....ಕಲೆಯೂ ವಿಜ್ಞಾನವೂ ಒಂದೇ ಅಲ್ಲವೆಂಬುದನ್ನು ಜನರು ಬಲ್ಲರು. ಆದರೆ, ತಿರುಳಿಗೆ ಸಂಬಂಧಿಸಿ ವ್ಯತ್ಯಾಸವಿಲ್ಲ; ವ್ಯತ್ಯಾಸವಿರುವುದು ವಸ್ತುವನ್ನು ವಿಸ್ತರಿಸುವ ವಿಧಾನದಲ್ಲಿ ಮಾತ್ರ—ಎಂಬುದು ಅವರಿಗೆ ತಿಳಿಯದು. ತತ್ತ್ವಜ್ಞಾನಿ ಯುಕ್ತಿಸರಣಿಯಲ್ಲಿ ಮಾತನಾಡುತ್ತಾನೆ; ಕವಿ ಪ್ರತಿಮೆಗಳು ಮತ್ತು ಚಿತ್ರಗಳ ರೂಪದಲ್ಲಿ ಮಾತನಾಡುತ್ತಾನೆ. ಆದರೆ, ಇಬ್ಬರೂ ಹೇಳುವ ವಿಷಯ ಮಾತ್ರ ಒಂದೇ. ರಾಜಕೀಯ ಅರ್ಥಶಾಸ್ತ್ರಜ್ಞ ಅಂಕೆ ಸಂಖ್ಯೆಗಳೊಡನೆ ಸನ್ನದ್ಧನಾಗಿ, ಸಮಾಜದಲ್ಲಿ ಇಂತಿಂತಹ ವರ್ಗದ ಸ್ಥಿತಿಗತಿ ಇಂತಿಂತಹ ಕಾರಣಗಳಿಗಾಗಿ ಸುಧಾರಿಸಿದೆಯೆಂದೋ ಕೆಟ್ಟದೆಯೆಂದೋ ಸಿದ್ಧಪಡಿಸಿ ತೋರಿಸುತ್ತಾನೆ. ಕವಿ, ಬದುಕಿನ ಮುಖ್ಯವಾದ, ಕಣ್ಣಿಗೆ ಕಟ್ಟುವ, ವರ್ಣನೆಯಿಂದ ಪ್ರಾಮಾಣಿಕವಾದ ಚಿತ್ರವನ್ನು ಕೊಟ್ಟು ಓದುಗರ ಮನಸ್ಸನ್ನು ಪ್ರಚೋದಿಸಿ, ಆ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡಿಸುತ್ತಾನೆ. ಒಬ್ಬಾತ ಸಿದ್ಧಪಡಿಸಿಕೊಟ್ಟರೆ, ಇನ್ನೊಬ್ಬ ತೋರಿಸಿಕೊಡುತ್ತಾನೆ. ಆದರೆ ಇಬ್ಬರೂ ಸತ್ಯವನ್ನೇ ಮನಗಾಣಿಸಿ ಕೊಡುತ್ತಾರೆ. ಒಬ್ಬ ತರ್ಕಬದ್ಧವಾದ ಲೆಕ್ಕಾಚಾರದಿಂದ, ಇನ್ನೊಬ್ಬ ಚಿತ್ರಗಳ ಮೂಲಕ. ಮೊದಲಿನದನ್ನು ತಿಳಿದುಕೊಳ್ಳುವವರ ಸಂಖ್ಯೆ ಮಾತ್ರ ಬಲು ಸ್ವಲ್ಪ. ಎರಡನೆಯದು

ಎಲ್ಲರಿಗೂ ಅರ್ಥವಾಗುತ್ತದೆ. ಸಮಾಜವು ಅತಿ ಹೆಚ್ಚು ಹಾಗೂ ಅತ್ಯಂತ ಪವಿತ್ರ ಆಸಕ್ತಿಯನ್ನು ವಹಿಸುವುದು ತನ್ನ ಸ್ವಂತದ ಕಲ್ಯಾಣದಲ್ಲಿ. ಸಮಾಜದ ಸದಸ್ಯರೆಲ್ಲರೂ ಆ ಆಸಕ್ತಿಯನ್ನು ತೋರುತ್ತಾರೆ. ಆ ಕಲ್ಯಾಣ ಸಾಧನೆಯ ಹಾದಿಯು ತಿಳಿವಳಿಕೆ. ಕಲೆಯು ವಿಜ್ಞಾನದಷ್ಟೇ ಚೆನ್ನಾಗಿ ಆ ತಿಳಿವಳಿಕೆಯನ್ನು ಹೆಚ್ಚಿಸಬಲ್ಲುದು. ಇಲ್ಲಿ ವಿಜ್ಞಾನ ಮತ್ತು ಕಲೆ ಎರಡೂ ಏಕಪ್ರಕಾರವಾಗಿ ಅವಶ್ಯವಾಗಿವೆ. ಕಲೆಗಿಂತ ವಿಜ್ಞಾನ ಹೆಚ್ಚು ಮಹತ್ವದ್ದಾಗುವುದು, ಇಲ್ಲವೆ ವಿಜ್ಞಾನಕ್ಕಿಂತ ಕಲೆ ಹೆಚ್ಚು ಮಹತ್ವದ್ದಾಗುವುದು ಸಾಧ್ಯವಿಲ್ಲ."

ಈ ರೀತಿ ಬರೆದು ಬೆಲಿನ್‌ಸ್ಕಿ ಸಾಹಿತಿಯನ್ನು, ತತ್ತ್ವಜ್ಞಾನಿಯ, ರಾಜಕೀಯ ಅರ್ಥಶಾಸ್ತ್ರಜ್ಞನ, ವಿಜ್ಞಾನಿಯ ಸಾಲಿನಲ್ಲಿ ಹಿರಿಯ ಸ್ಥಾನಕ್ಕೇರಿಸಿದ.

ಕತ್ತಿಯಾದ ಲೇಖನಿ

ಹೀಗೆ ಸೌಂದರ್ಯಮೀಮಾಂಸೆಯ ಕ್ಷೇತ್ರದಲ್ಲಿ ಬೆಲಿನ್‌ಸ್ಕಿ ಕಟ್ಟಿದುದು ಮೂರು ಪ್ರಾಕಾರಗಳ ಅಭೇದ್ಯ ದುರ್ಗ:

ಒಂದು, ವಾಸ್ತವತೆ;

ಎರಡು, ಕಲಾತ್ಮಕ ಪರಿಪೂರ್ಣತೆ;

ಮೂರು, ಆಂತರಿಕವಾದ ಕ್ರಿಯಾತ್ಮಕ ಅಂಶ.

ಇಂತಹ ದುರ್ಗದಲ್ಲಿ ಬೆಲಿನ್‌ಸ್ಕಿ, ಒಂದು ಶತಮಾನದ ಹಿಂದೆ, ಒಂದೇ ಸಮನೆ ಎಲ್ಲ ಕಾಲಗಳಲ್ಲೂ ಬೆಳಕು ನೀಡುವಂತಹ ದೀಪಸ್ತಂಭವನ್ನು ನೆಟ್ಟ.

ಆ ಕೆಲಸ ಸುಲಭವಾಗಿರಲಿಲ್ಲ. ಅದನ್ನು ಕುರಿತು ಆತನ ಸಂಗಡಿಗನಾದ ಚೆರ್ನಿಶೆವ್‌ಸ್ಕಿ ಹೀಗೆ ಹೇಳಿದ್ದಾನೆ:

"ಬೆಲಿನ್‌ಸ್ಕಿ ಅತಿಯಾದ ಆಗ್ರಹಗಳನ್ನೇನೂ ವ್ಯಕ್ತಪಡಿಸಲಿಲ್ಲ. ಆದರೆ ಆತ ಕೇಳಿದುದೆಲ್ಲವೂ ದೃಢವಾಗಿದ್ದುವು, ಸುಸಂಬದ್ಧವಾಗಿದ್ದುವು. ಒಂದೇ ಸಮನೆ ಕೆಚ್ಚಿನಿಂದ ಆತ ಅವುಗಳನ್ನು ವ್ಯಕ್ತಗೊಳಿಸುತ್ತಿದ್ದ. ಅತ್ಯಂತ ಕ್ರೂರವಾದ ತೀರ್ಪನ್ನೂ ಮೃದುಮಾತುಗಳಲ್ಲಿ ಹೇಳುವುದು ಸಾಧ್ಯ. ಆದರೆ ಧೀರ ಪ್ರಕೃತಿಯವನೂ ನಿರ್ಧಾರ ಮನಸ್ಕನೂ ಆದ ಬೆಲಿನ್‌ಸ್ಕಿ, ಅಂತಹ ತಂತ್ರವನ್ನು ತುಚ್ಛೀಕರಿಸಿದ. ತಾನು ಯೋಚಿಸಿದುದನ್ನಷ್ಟೇ ಆತ ಬರೆದ. ಸತ್ಯಕ್ಕೆ ಅಪಚಾರವಾಗಬಾರದೆಂಬುದಷ್ಟೇ ಆತ ತೋರಿದ ಕಾತರ. ಬರೆವಣಿಗೆಯಲ್ಲಿ, ತನ್ನ ವಿಚಾರಗಳನ್ನು ಅತ್ಯಂತ ಸಮರ್ಪಕವಾಗಿ ವ್ಯಕ್ತಗೊಳಿಸಲು ಬೇಕಾದ ನಿರ್ದಿಷ್ಟ ಪದಗಳನ್ನಷ್ಟೇ ಆತ ಬಳಸುತ್ತಿದ್ದ. ಕೆಟ್ಟುದನ್ನು ನೇರವಾದ ಮಾತಿನಲ್ಲಿ ಕೆಟ್ಟುದೆಂದೇ ಆತ ಕರೆದ. ತನ್ನ ತೀರ್ಪನ್ನು ಸಂದೇಹಕ್ಕೆ ಎಡೆಕೊಡುವಂತಹ ಸೂಚ್ಯಪದಗಳಲ್ಲಾಗಲೀ ರಾಜತಾಂತ್ರಿಕ ಭಾಷೆಯಲ್ಲಾಗಲೀ ಮುಚ್ಚಿಟ್ಟು ಹೇಳಲಿಲ್ಲ. ಆದರೆ ಕೆಲವರಿಗೆ, ಸತ್ಯದ ಪ್ರತಿಯೊಂದು ಪದವೂ—ಅದೆಷ್ಟೇ ಮಿತವಾಗಿರಲಿ—ಕ್ರೂರವಾಗಿ ತೋರುತ್ತದೆ.

ಅಂತಹ ಜನರು ಬೆಲಿನ್ಸ್ಕಿಯ ಅಭಿಪ್ರಾಯಗಳನ್ನು ಕ್ರೂರವೆಂದೇ ಕರೆದರು. ಇದಕ್ಕೆ ಏನು ಮಾಡುವುದು ಸಾಧ್ಯ? ನೇರವಾದ ವರ್ತನೆಯನ್ನು ಕ್ರೂರವಾಗಿಯೇ ಯಾವಾಗಲೂ ಕಾಣುವ ಹಲವರು ಇದ್ದೇ ಇರುತ್ತಾರೆ. ಆದರೆ, ಓದಿ ಅರ್ಥಮಾಡಿ ಕೊಳ್ಳುವ ಸಾಮರ್ಥ್ಯವಿರುವವರು, ಬೆಲಿನ್ಸ್ಕಿಯ ಅಪೇಕ್ಷೆಗಳೂ ಆಸೆಗಳೂ ಬಲು ಮಿತವಾದುವೆಂಬುದನ್ನು ಬಲ್ಲರು. ಪ್ರಬುದ್ಧವಾದ ಮನಸ್ಸಿರುವ ಪ್ರತಿಯೊಬ್ಬ ಮನುಷ್ಯನಿಗೂ ಅಗತ್ಯವಾದುದಕ್ಕಿಂತ ಹೆಚ್ಚಿನದನ್ನು ನಮ್ಮ ಬರಹಗಾರರಿಂದ–ಕಲಾವಿದರಿಂದ–ಬೆಲಿನ್ಸ್ಕಿ ಕೇಳಲಿಲ್ಲ.

"ವಿರೋಧಿಗಳೊಡನೆ ವಿವಾದದಲ್ಲಿ ಬೆಲಿನ್ಸ್ಕಿ ಎಂದೂ ಸೋಲುತ್ತಿರಲಿಲ್ಲ. ಪ್ರತಿಯೊಂದು ಸಾರಿಯೂ ಎದುರಾಳಿಗೆ ಎಲ್ಲ ಅಂಶಗಳಲ್ಲೂ ಸಂಪೂರ್ಣ ಸೋಲಾಗುತ್ತಿತ್ತು. ಪ್ರತಿಯೊಂದು ಸಾಹಿತ್ಯಿಕ ವಿವಾದ ನಡೆದಾಗಲೂ ಬೆಲಿನ್ಸ್ಕಿಯನ್ನು ವಿರೋಧಿಸಿದವನು ಜನಸಮುದಾಯದಲ್ಲಿ ಹೆಚ್ಚಿನಂಶ ತನ್ನ ಗೌರವವನ್ನು ಕಳೆದು ಕೊಳ್ಳುತ್ತಿದ್ದ, ಏಕೆ? ಹೀಗೆ ಆಗುತ್ತಿದ್ದುದಕ್ಕೆ ಬೆಲಿನ್ಸ್ಕಿ ವಿರೋಧಿಸುತ್ತಿದ್ದ ಅಭಿಪ್ರಾಯಗಳ ಸ್ವರೂಪವೇ ಕಾರಣ. ಖಂಡಿತವಾಗಿಯೂ ಅಪಾಯ ಕಾರಿಯಾದ ತೀರಾ ತಪ್ಪಾದ ಅಭಿಪ್ರಾಯಗಳನ್ನು ಮಾತ್ರವೇ ಬೆಲಿನ್ಸ್ಕಿ ಖಂಡಿಸುತ್ತಿದ್ದ...."

ಆಧುನಿಕ ಐರೋಪ್ಯ ಸಾಹಿತ್ಯದ ಪ್ರಮುಖ ವಿಮರ್ಶಕ ಪ್ರಭೃತಿಗಳಲ್ಲಿ ಒಬ್ಬನಾದ ಜಾರ್ಜ್ ಲುಕಾಸ್ ಇದೇ ವಿಷಯವಾಗಿ ಹೀಗೆ ಬರೆದಿದ್ದಾನೆ:

"....ಬೆಲಿನ್ಸ್ಕಿಯ ಹಲವಾರು ಸಮಕಾಲೀನರು, ವಿಮರ್ಶಕರು ಹಾಗೂ ಕವಿಗಳು, ಆತ ಪ್ರತಿಯೊಂದನ್ನೂ ಪುಡಿಗೂಡಿಸುತ್ತಿದ್ದನೆಂದೂ ಪ್ರತಿಯಾಗಿ ಬೇರೇನನ್ನೂ ನಿರ್ಮಿಸುತ್ತಿರಲಿಲ್ಲವೆಂದೂ ದೂರುತ್ತಿದ್ದರು. ಬೆಲಿನ್ಸ್ಕಿ ತನ್ನ ವಿಮರ್ಶಾತ್ಮಕ ಪೃಥಕ್ಕರಣದಿಂದ ಹಲವಾರು ಸಮಕಾಲೀನರ ಸಾಹಿತ್ಯ ಜೀವನವನ್ನು ಮಣ್ಣುಗೂಡಿಸಿದನೆಂಬುದು ನಿಜ. ಆದರೆ ಈ ವಿವಾದಗಳಲ್ಲೆಲ್ಲ ಭವಿಷ್ಯತ್ತು ಬೆಲಿನ್ಸ್ಕಿಯ ತೀರ್ಪಿಗೇ ಬೆಂಬಲಕೊಟ್ಟಿದೆ. ಆ ಮಹಾ ವಿಮರ್ಶಕನ ಅತ್ಯುಗ್ರದಾಳಿಗೆ ಒಳಗಾದ ಯಾವ ಗ್ರಂಥಕರ್ತನೂ ಅಂತಹ ಚಿಕಿತ್ಸೆಗೆ ಅರ್ಹನಾಗಿರಲಿಲ್ಲವೆಂದು ಮುಂದೆ ಕಂಡು ಬಂದುದಿಲ್ಲ. ಬೆಲಿನ್ಸ್ಕಿಯ ವಿಮರ್ಶೆಯೆಲ್ಲ ರಷ್ಯದ ಸಾಹಿತ್ಯಾಕಾಶವನ್ನು ಶುಭ್ರಗೊಳಿಸಿದ ಗುಡುಗು–ಗಾಳಿ....ಬೆಲಿನ್ಸ್ಕಿ, ತಾನು ಬದುಕಿದ್ದಾಗಲೇ, ವಾಸ್ತವವಾದಿ ಪೀಳಿಕೆಯ ಮೊದಲ ಕೃತಿಗಳು ಪ್ರಕಟವಾದುದನ್ನು ನೋಡಿದ. ಆಗ ಈ ಅವಿಶ್ರಾಂತ ವಿಮರ್ಶಕ ಮೃದು ಹೃದಯದ ತಿಳಿವಳಿಕೆಯುಳ್ಳ ವ್ಯಕ್ತಿಯಾದ; ಹೊಸ ಪ್ರತಿಭೆಯ ಉತ್ಸಾಹಿ ಶೋಧಕನಾದ. ತುರ್ಗೆನೀವ್, ಗೊಂಚರೊವ್, ದಾಸ್ತೊಯೇವ್‌ಸ್ಕಿ, ಇವರೆಲ್ಲರ ಆಗಮನವನ್ನು ಆತ ಆತ್ಮೀಯತೆಯಿಂದ ಘೋಷಿಸಿದ. ಈ ಮಹಾ ವಾಸ್ತವವಾದಿ ಬರಹಗಾರರೆಲ್ಲ ರಷ್ಯದ ಸಾಹಿತ್ಯದಲ್ಲಿ ಯೋಗ್ಯಸ್ಥಾನವನ್ನು ಆಕ್ರಮಿಸುವಂತೆ ಬೆಲಿನ್ಸ್ಕಿ ನೆರವಾದ."

ಬೆಲಿನ್ಸ್ಕಿಯ ಕೃತಿಗಳಲ್ಲಿ ಮುಖ್ಯವಾದುವು: ಹತ್ತೊಂಭತ್ತನೆಯ ಶತಮಾನದ ರಷ್ಯದ ರಾಷ್ಟ್ರಕವಿ ಪುಷ್ಕಿನ್‌ನ ಕೃತಿಗಳನ್ನು ಕುರಿತು ಬರೆದ ವಿಮರ್ಶಾ ಲೇಖನ; 'ರಷ್ಯದ ಸಾಹಿತ್ಯವನ್ನು ಕುರಿತು ಯೋಚನೆಗಳು ಮತ್ತು ಟಿಪ್ಪಣಿಗಳು;' ೧೮೪೫ರಲ್ಲೂ ೧೮೪೭ರಲ್ಲೂ ರಷ್ಯದ ಸಾಹಿತ್ಯವನ್ನು ಕುರಿತು ಬರೆದ ಸಿಂಹಾವಲೋಕನಗಳು; ಅಸಂಖ್ಯವಾದ ಸಾಹಿತ್ಯ ನಿಬಂಧಗಳು, ಪ್ರಬಂಧಗಳು, ಪುಸ್ತಕವಿಮರ್ಶೆಗಳು; ಕೊನೆಯದಾಗಿ, ಸಾಯುವುದಕ್ಕೆ ಮುಂಚೆ ಆತ ಬರೆದ 'ಗೊಗೋಲ್‌ಗೆ ಕಾಗದ.'

ಪ್ರಭಾವಶಾಲಿಯಾದ ಈ ಲೇಖನಿಯ ಎದುರು ಸಾಹಿತ್ಯಕ್ಷೇತ್ರದ ಹಾರತುರಾಯಿಗಳು ಮಾತ್ರವಲ್ಲ, ಆಳುತ್ತಿದ್ದ ನಿರಂಕುಶಶಾಹಿಯೂ ನಡುಗಿತು. ಗುಪ್ತ ಪೋಲೀಸ ದಳಕ್ಕೆ ನೆರವಾಗುತ್ತಿದ್ದ ಕೆಲ ಬರೆಹಗಾರರು, ಬಂಡಾಯಗಾರ ಬೆಲಿನ್ಸ್ಕಿಯನ್ನು ಕುರಿತು ಸರಕಾರಕ್ಕೆ ಒಂದೇ ಸಮನೆ ವರದಿಗಳನ್ನು ಕಳುಹಿದರು. "ಸಾರ್ವಜನಿಕವಾಗಿ ರಾಜದ್ರೋಹದ ಬೀಜ ಬಿತ್ತಲು ಅವಕಾಶವಿಲ್ಲದೆ" ಪತ್ರಿಕೆಗಳ ಅಂಕಣದ ಮೂಲಕ ಬೆಲಿನ್ಸ್ಕಿ ಆ ಕೆಲಸ ಮಾಡುತ್ತಿದ್ದನೆಂದು ದೂರು ಕೊಟ್ಟರು. ಸರಕಾರದ ವಿಜ್ಞಾನ ಪರಿಷತ್ತಿನ ಸದಸ್ಯನೊಬ್ಬ, ಬೆಲಿನ್ಸ್ಕಿಯ ಮತ್ತಿತರ ಲೇಖನಗಳನ್ನು ಸಂಗ್ರಹಿಸಿ ವಿಂಗಡಿಸಿ ಏಳು ಬುಟ್ಟಿಗಳಲ್ಲಿ ತುಂಬಿ, 'ದೇವರಿಗಿದಿರಾಗಿ' 'ಸರಕಾರಕ್ಕಿದಿರಾಗಿ' 'ನೀತಿಗಿದಿರಾಗಿ' ಇತ್ಯಾದಿ ಹಣೆಪಟ್ಟಿಗಳನ್ನು ಅಂಟಿಸಿ, ಗುಪ್ತಪೋಲೀಸರ ಶಾಖೆಗೆ ಕಳುಹಿಸಿಕೊಟ್ಟ.

ಜಾರ್ ಚಕ್ರವರ್ತಿಯ ಹಿರಿಯ ಅಧಿಕಾರಿಗಳಲ್ಲೊಬ್ಬ ಒಮ್ಮೆ ಬೆಲಿನ್ಸ್ಕಿಯೊಡನೆ ಸೆಂಟ್ ಪೀಟರ್ ಮತ್ತು ಪಾಲ್‌ದುರ್ಗದ ಕಾರಾಗಾರದಲ್ಲಿ, "ಬೆಚ್ಚಗಿನ ಒಂದು ಪುಟ್ಟ ಕೊಠಡಿ ನಿನಗಾಗಿ ಸಿದ್ಧವಾಗಿದೆ" ಎಂದು ಹೇಳಿದ. ಬೆಲಿನ್ಸ್ಕಿ ಹೋದಲ್ಲೆಲ್ಲ ಸರಕಾರದ ಗೂಢಚಾರರು ಅವನನ್ನು ಹಿಂಬಾಲಿಸಿದರು. ಆತನ ಕಾಗದ ಪತ್ರಗಳನ್ನು ಒಡೆದು ನೋಡಿದರು. ಕಿರುಕುಳ ಕೊಟ್ಟರು.

ಬೆಲಿನ್ಸ್ಕಿಯನ್ನು ಕಾಡುತ್ತಿದ್ದ ಇನ್ನೊಂದು ದೊಡ್ಡ ದುಷ್ಟ ಶಕ್ತಿಯಿತ್ತು—ಬಡತನ; ಅದರ ಬೆಂಗಾವಲಿಗಿದ್ದುದು ಉಪವಾಸ. ಯೌವನ ಪ್ರಾಪ್ತವಾದಾಗಲೇ ಅನಾರೋಗ್ಯದ ಸರಸ ಆತನಿಗೆ ಲಭಿಸಿತ್ತು. ಕ್ರಮೇಣ ಆ ಅಸ್ವಾಸ್ಥ್ಯ ಕ್ಷಯವಾಗಿ ಮಾರ್ಪಟ್ಟು ದೇಹವನ್ನು ದಹಿಸಿತು. ಚಿಕಿತ್ಸೆಗೆಂದು ಬೆಲಿನ್ಸ್ಕಿ ಫ್ರಾನ್ಸ್–ಜರ್ಮನಿಗಳಿಗೆ ಹೋದ. ಪ್ರಯೋಜನವಾಗಲಿಲ್ಲ. ಹಾಗೇ ವಿದೇಶದಲ್ಲಿದ್ದಾಗಲೇ ಆತ 'ಗೊಗೋಲ್‌ಗೆ ಕಾಗದ'ವನ್ನು ಬರೆದ. ಅದು ಹಲವಾರು ಪೀಳಿಗೆಗಳಿಗೇ ಆತ ಬಳುವಳಿಯಾಗಿ ಬಿಟ್ಟುಹೋದ ಬರವಣಿಗೆ–ಆತನ ಚರಮ ಕೃತಿ.

೧೮೪೮ರ ಮೇ ೨೬ರಂದು ಬೆಲಿನ್ಸ್ಕಿ ಗತಿಸಿದ. ಆತನ ಅವಶೇಷಗಳನ್ನು ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಸಮಾಧಿ ಮಾಡಿದರು.

ಆತ ಸತ್ತರೂ ಆಳುತ್ತಿದ್ದವರ ತಲೆನೋವು ಕಡಿಮೆಯಾಗಲಿಲ್ಲ. ಆತನ 'ಗೊಗೋಲ್‌ಗೆ ಕಾಗದ'ದ ಪ್ರಕಟಣೆಯನ್ನು ಸರಕಾರ ನಿಷೇಧಿಸಿತು. ಅದನ್ನು ಓದಿದ

ಪ್ರತಿಮಾಡಿದ ತಪ್ಪಿಗಾಗಿ ಹಲವರ ಬಂಧನವಾಯಿತು. "ಆತ ಬದುಕಿ ಇದ್ದಿದ್ದರೆ ದುರ್ಗದಲ್ಲಿ ಕೊಳೆಹಾಕುತ್ತಿದ್ದೆವು" ಎಂದು ಗುಪ್ತಪೋಲೀಸರ ಮುಖ್ಯಸ್ಥ ಆಕ್ರೋಶ ಮಾಡಿದ.

ಬೆಲಿನ್ಸ್‌ಕಿಯ ಹೆಸರನ್ನೇ ಪ್ರಸ್ತಾಪಿಸಬಾರದೆಂದು ರಷ್ಯದ ಪತ್ರಿಕೆಗಳ ಮೇಲೆಲ್ಲ ನಿಷೇದಾಜ್ಞೆ ಹೊರಿಸಲಾಯಿತು. 'ಗೊಗೋಲ್‌ಗೆ ಕಾಗದ'ವಂತೂ ಬೆಲಿನ್ಸ್‌ಕಿ ಸತ್ತು ಐವತ್ತೇಳು ವರ್ಷಗಳವರಗೆ ೧೯೦೫ರ ವರೆಗೆ ಪ್ರಕಟಗೊಳ್ಳುವುದು ಸಾಧ್ಯವಾಗ ಲಿಲ್ಲ.

ಹೀಗಿದ್ದರೂ ಬೆಲಿನ್ಸ್‌ಕಿಯ ಕೀರ್ತಿ ರಷ್ಯದ ಆದ್ಯಂತ ಹರಡಿತು. ಆತನ ಕೃತಿಗಳ ಪ್ರಭಾವ ರಷ್ಯದ ಆಚೆಗೆ ಇತರ ದೇಶಗಳಿಗೂ ಹಬ್ಬಿತು. ಬೆಲಿನ್ಸ್‌ಕಿಯ ಸಂಗಡಿಗರು ಮುಖ್ಯವಾಗಿ ಚೆರ್‌ನಿಷೆವ್‌ಸ್ಕಿ ಮತ್ತು ದೊಬ್ರೂಲ್ಯುಬೋವ್ ಬೆಲಿನ್ಸ್‌ಕಿಯ ಸಾಹಿತ್ಯ ಚಟುವಟಿಕೆಗಳನ್ನು ಮುಂದುವರಿಸಿ ಮುಂದಿನ ಅಧ್ಯಾಯಗಳನ್ನು ಬರೆದರು. ಆತ ಆರಂಭಿಸಿದ ಕ್ರಾಂತಿಕಾರಿ ಜನವಾದಿ ಕಾವ್ಯಮೀಮಾಂಸೆಯ ಮಾರ್ಗ ಭವ್ಯವಾದೊಂದು ಪರಂಪರೆಯಾಯಿತು. ಆತನ ಜನವಾದಿ ವಾಸ್ತವವಾದದೇ ಮುಂದೆ ಇಪ್ಪತ್ತನೆಯ ಶತಮಾನದಲ್ಲಿ ಮ್ಯಾಕ್ಸಿಂ ಗಾರ್ಕಿ ಮೊದಲು ಮಾಡಿದ ಸಮಾಜವಾದಿ ವಾಸ್ತವವಾದಕ್ಕೆ ಮಾತೃಕೆಯಾಯಿತು.

ಪ್ರಥಮ ಪ್ರಕಟಣೆ ಪ್ರಬುದ್ಧ ಕರ್ನಾಟಕ–೧೯೫೫.

ಉತ್ತಮ ಬದುಕಿನ ಎತ್ತರಕ್ಕೆ ಸಾಹಿತ್ಯದ ಏಣಿ

"ಮಾಡುವುದಕ್ಕೆ ಬೇರೇನೂ ಕೆಲಸ ಇಲ್ಲದಿದ್ದರೆ ಕಥೆ ಪುಸ್ತಕ ಓದು"— ಇದು ಒಂದು ಧೋರಣೆ. ಹೀಗೆ ಹೇಳುವವರು ಎಲ್ಲ ಕಡೆ ಸಿಗುತ್ತಾರೆ.

ವಿಜ್ಞಾನ, ತಾಂತ್ರಿಕ ಜ್ಞಾನ, ತತ್ವಜ್ಞಾನ ಈ ಸಂಬಂಧದ ಸಾಹಿತ್ಯವನ್ನಷ್ಟೆ ಓದಿದರೆ ಸಾಕೆ? ಒಂದು ಸಮಗ್ರ ವ್ಯಕ್ತಿತ್ವದ ನಿರ್ಮಾಣಕ್ಕೆ ಲಲಿತವಾದದ್ದೂ ಬಹಳಬೇಕು, ಆದರೆ ಒಪ್ಪಿಕೊಳ್ಳುತ್ತೇನೆ—ಇಂಥ ಸಾಹಿತ್ಯ ತೀರಾ ಲಘುವಾಗಿರು ಬಾರದು.

ಉತ್ತಮ ಲಲಿತ ಸಾಹಿತ್ಯದಲ್ಲಿ ವೈಚಾರಿಕತೆ ಇದ್ದೇ ಇರುತ್ತದೆ. ಓದುಗರ ವಿಚಾರಸರಣಿಯ ಮೇಲೆ ಪ್ರಭಾವ ಬೀರಬಲ್ಲ ಕತೆ, ಕಾದಂಬರಿ, ಕಾವ್ಯ, ನಾಟಕಗಳನ್ನು ಮನುಷ್ಯ ಸೃಷ್ಟಿಸಿದ್ದಾನೆ. ಇವು ಕಲೆ—ವಿಚಾರಗಳ ಸಾಮರಸ್ಯ ಸಾಧ್ಯವಾಗಿರುವ ಕೃತಿಗಳು, ಓದಿದ ಮೇಲೆ ಮರೆತುಹೋಗುವುದಿಲ್ಲ. ಮತ್ತೆ ಮತ್ತೆ ನಮ್ಮ ಎದುರಿಗೆ ಬಂದು ನವಿಲುಗರಿಗಳನ್ನು ಅರಳಿಸುತ್ತವೆ. ಇವುಗಳ ನೆನಪು ಬೇಸಗೆಯಲ್ಲಿ ತಂಗಾಳಿ, ಚಳಿಗಾಲದಲ್ಲಿ ಹೊಂಬಿಸಲು.

ಅಕ್ಷರದಿಂದ ಧ್ವನಿ

ಪ್ರಾಥಮಿಕ ಶಾಲೆಯಲ್ಲಿ ನಾನು ವಿದ್ಯಾರ್ಥಿಯಾಗಿದ್ದ ಕಾಲ. ಶಾಲೆಯ ಆವರಣದ ಹೊರಗೆ ಸಿಕ್ಕಿದ ಪುಸ್ತಕಗಳನ್ನೆಲ್ಲ ಓದುವ ಹುಚ್ಚು. ಅಳಸಿಂಗರಾಚಾರ್ಯರ 'ರಾಮಾಯಣ', 'ಮಹಾಭಾರತ' ಸಂಪುಟಗಳು ಸಿಕ್ಕಿದುವು. ಅದು ಧಾರ್ಮಿಕ ನೆಲೆಗಟ್ಟಿನ ವಾಚನವಲ್ಲ. ಮೂರು ಸಾವಿರ ವರ್ಷ ಹಳೆಯ ವೈದಿಕ ವಿಚಾರಗಳನ್ನು ಬಾಚಿ ರುಂಡಮುಂಡಗಳಿಗೆ ಮೆತ್ತಿಕೊಳ್ಳುವ ಪ್ರಯತ್ನವೂ ಅಲ್ಲ........

ಅದಕ್ಕೆ ಮುನ್ನ ಅ ಆ ಇ ಈ ಬಾಲ ಶಿಕ್ಷೆ ಪುಸ್ತಕ ಎಂಟುಸಲ ಕೊಂಡಿದ್ದೆ. ಹೆಸರೇ ಬಾಲ ಶಿಕ್ಷೆ! (ಒಂದು ಪ್ರತಿಗೆ ಎರಡಾಣೆ.) ಅಕ್ಷರ ಶತ್ರುವಾಗಿದ್ದೆನೇನೊ. ಪಾಠ ತಲೆಗೆ ಹೋಗುತ್ತಿರಲಿಲ್ಲ. ಪುಸ್ತಕ ಚಿಂದಿಯಾಗುತ್ತಿತ್ತು, ಉಪಾಧ್ಯಾಯರು ಔಷಧಿ ಕೊಟ್ಟರು. (ಶಿಕ್ಷಕರಲ್ಲವೆ?) ಗಾತ್ರದ ರೂಲರಿನಿಂದ ತಲೆಬುರುಡೆಗೆ ಪೆಟ್ಟು. ಬೊಬ್ಬೆ ಕುಟ್ಟಿದೆ. ಹಣೆಯಲ್ಲಿ ಬಾವು ಎದ್ದಿತು. "ನರಕಕ್ಕೆ ಹೋಗ್ತೀ" ಅಂತ

ಅವರು ಎಚ್ಚರಿಕೆ ಕೊಟ್ಟ ಹಾಗೆ ನೆನಪು. ಆಗ ನನ್ನ ದೃಷ್ಟಿಯಲ್ಲಿ ಆ ಶಾಲೆಯೇ ನರಕ, ಸ್ವರ್ಗ ಇದ್ದದ್ದು ಹೊರಗೆ—ಗುಡ್ಡಗಳ ತಪ್ಪಲಲ್ಲಿ, ದನ ಎಮ್ಮೆಗಳನ್ನು ಮೇಯಿಸುವುದರಲ್ಲಿ, ಮೇಯಿಸುವ ಹುಡುಗರ ಸಂಗದಲ್ಲಿ.

ಆದರೆ ಆಶ್ಚರ್ಯ! ಒಂದೇ ವರ್ಷದಲ್ಲಿ ನಾನಿದ್ದ ನರಕವನ್ನೇ ಸ್ವರ್ಗ ಮಾಡಿಕೊಂಡೆ. ತರಗತಿಯ ಹಿರೇಮಣಿಯಾದೆ. ಅಕ್ಷರಗಳು ಬರಿಯ ಅಕ್ಷರಗಳಾಗಿಯೇ ಇದ್ದಷ್ಟು ದಿವಸ ಸುಖವಿರಲಿಲ್ಲ. ಒಂದಕ್ಕೊಂದು ಜೋಡಿಸಿ ಶಬ್ದವಾದಾಗ, ಅವು ಶಬ್ದಿಸಿದಾಗ, ಹಿಗ್ಗೋ ಹಿಗ್ಗು. ಮುಂದೆ ಒಂದೆರಡೇ ವರ್ಷಗಳಲ್ಲಿ, ಅಳಸಿಂಗರಾಚಾರ್ಯರ ಕನ್ನಡ ಸೃಷ್ಟಿಯಲ್ಲಿ ರಾಮಾಯಣ ಮಹಾಭಾರತಗಳ ಅದ್ಭುತ ಜಗತ್ತಿನ ಯಾತ್ರಿಕನಾದೆ. ಅಯೋಧ್ಯೆಯಲ್ಲಿದ್ದೆ, ವಿಂಧ್ಯವನ್ನು ದಾಟಿದೆ, ದಂಡಕಾರಣ್ಯವನ್ನು ನುಗ್ಗಿದೆ, ಕಿಷ್ಕಿಂಧೆಗೆ ಬಂದೆ, ಲಂಕೆಗೆ ಹೋದೆ. ಹಾಗೆಯೇ ಹಸ್ತಿನಾವತಿ, ವಿರಾಟ ನಗರ, ದ್ವಾರಕೆ, ಕುರುಕ್ಷೇತ್ರ, ಎಂಥೆಂಥ ಅನುಭವಗಳು! ಒಂದು ಸಲ ಓದಿದೆ; ಎರಡು ಸಲ ಓದಿದೆ. ಏನು ಸಿಕ್ಕಿತು ನನಗೆ? ಆನಂದ—ಮೇರೆ ಅರಿಯದ ಆನಂದ. ನಿಜ ಹೇಳುತ್ತೇನೆ. ಈಗ ಆ ಸಂಪುಟಗಳನ್ನೆಲ್ಲ ಮತ್ತೊಮ್ಮೆ ಓದಬೇಕು ಎಂದು ಆಸೆಯಾಗುತ್ತಿದೆ ...

"ನಾಗರ ಹಾವೆ, ಹಾವೊಳು ಹೂವೆ
ಬಾಗಿಲ ಬಿಲದಲಿ ನಿನ್ನಯ ಠಾವೆ...."

—ಪಂಜೆ ಮಂಗೇಶರಾಯರ ಅಭಿನಯ ಗೀತ.

ಹಾವು! ಕಾತರ, ಭಯ. ಆದರೆ ಕೊನೆಯಲ್ಲಿ, "ಹಾಲನ್ನೀವೆ ಪೋಪೋಪೋ" ಎಂದಾಗ, ಅದು ಹೊರಟೇ ಹೋಯಿತು ಎನ್ನುವಷ್ಟು ಸಮಾಧಾನ, ಸಂತಸ.

ಹೀಗೆ ಅಕ್ಷರಗಳು ಧ್ವನಿಗೊಂಡು ಎಳೆಯನ ಒಳಗನ್ನು ಮುಟ್ಟಿ ಎಬ್ಬಿಸಿದ ಭಾವಗಳೆಷ್ಟು! ಆಗ ಅರಳಿದ ಪಕಳೆಗಳೆಷ್ಟು!

ದಯೆಯಿಲ್ಲದ ಲೆಕ್ಕಣಿಕೆ

ಶಿವರಾಮ ಕಾರಂತರ 'ಕನ್ಯಾಬಲಿ' ಅಥವಾ 'ಸೂಳೆಯ ಸಂಸಾರ' ಎನ್ನುವ ಕಾದಂಬರಿ (ಕಥೆ ಪುಸ್ತಕ) ನನಗೆ ಸಿಕ್ಕಿತು. ಮುನ್ನುಡಿಯಿಂದ ಮೊದಲು ಮಾಡಿ ಓದಿದೆ. ಗ್ರಂಥಕರ್ತರು 'ಈ ಲೆಕ್ಕಣಿಕೆಗೆ ದಯೆಯಿಲ್ಲ' ಎಂದು ಬರೆದಿದ್ದರು, ವಿಚಿತ್ರವೆನಿಸಿದ ಪದಪುಂಜ. ಆ ಸಂಜೆ ಮನೆಯಲ್ಲಿ ಕಾಪಿ ಪುಸ್ತಕದ ಮೇಲಿನ ಸಾಲಿಗೆ ಆ ವಾಕ್ಯವನ್ನು ಬಳಸಿದೆ. ಈ ಲೆಕ್ಕಣಿಕೆಗೆ ದಯೆಯಿಲ್ಲ ಎಂದು ಪುಟ ತುಂಬ ಸಾರಿದೆ. ಮಾರನೆಯ ದಿವಸ ತರಗತಿಯಲ್ಲಿ ಅಧ್ಯಾಪಕರು ನನ್ನ ಕಾಪಿ ಪುಸ್ತಕ ನೋಡಿ, ಸಣ್ಣನೆ ಹುಬ್ಬು ಗಂಟಿಕ್ಕಿ, "ಏನಿದು?" ಎಂದು ಕೇಳಿದರು.

"ಕಾರಂತರ ಪುಸ್ತಕದಲ್ಲಿತ್ತು," ಅಂದೆ.

"ಯಾವ ಪುಸ್ತಕ?"

ನನ್ನ ಧೈರ್ಯವೇ ಧೈರ್ಯ. ಊರಿನ ವಾಚನಾಲಯದಿಂದ ಪಡೆದಿದ್ದ 'ಕನ್ಯಾಬಲಿ'ಯನ್ನು ತರಗತಿಗೆ ತೆಗೆದುಕೊಂಡು ಹೋಗಿದ್ದೆ, ತೋರಿಸಿದೆ.

"ಹೀಗೆಲ್ಲಾ ಬರೀಬೇಡ" ಎಂದರು, 'ಕಾಪಿ'ಯ ಮಟ್ಟಿಗೆ.

"ಇಂಥ ಪುಸ್ತಕ ಓದಬೇಡ" ಎನ್ನಲಿಲ್ಲ!

ನನಗೆ ನೆನಪಿದೆ. ಅದನ್ನು ಓದಬೇಡ, ಇದನ್ನು ಓದಬೇಡ—ಅಂತ ಯಾರೂ ನನಗೆ ಹೇಳಿಲ್ಲ. ಬಾಲ್ಯದಲ್ಲಿ ಎಷ್ಟು 'ಬೇಡ'ಗಳಿಗೆ 'ನಿಷೇಧ'ಗಳಿಗೆ ಗುರಿಯಾಗುತ್ತೇವೆ! ಆದರೆ ಓದುವ ವಿಷಯದಲ್ಲಿ ನಾನು ಪೂರಾ ಸ್ವತಂತ್ರನಾಗಿದ್ದೆ. ಅಕ್ಷರ ಸಾಗರದಲ್ಲಿ ಈಸಿದ್ದೇ ಈಸಿದ್ದು, ಆಟವಾಡಿದ್ದೇ ಆಡಿದ್ದು (ನಿಜವಾದ ಸಮುದ್ರಕ್ಕೆ –ಸಣ್ಣ ನದಿಯೂ ಸಾಕು–ತಳ್ಳಿದರೆ ನಾನು ಮುಳುಗಿಹೋಗುತ್ತೇನೆ; ಈಜು ಬರದು ಆಟದ ಬಯಲಿನಲ್ಲಿ ನಾನು ಆಸಕ್ತ ಪ್ರೇಕ್ಷಕ ಮಾತ್ರ).

ಮೆಚ್ಚುಗೆ: GOOD

ನಾಲ್ಕನೆಯ ತರಗತಿಯಲ್ಲಿದ್ದಾಗ ಒಂದು ದಿನ ಅಧ್ಯಾಪಕರು ವಿಷಯ ಕೊಟ್ಟು "ಪ್ರಬಂಧ ಬರೆಯಿರಿ" ಎಂದರು. ಸ್ಥಳದಲ್ಲಿ ಬರವಣಿಗೆ, ನನ್ನ ಪ್ರಬಂಧ ಓದಿ ಮಾರ್ಜಿನ್‌ನಲ್ಲಿ ಕೆಂಪು ಮಸಿಯಲ್ಲಿ Good ಅಂತ ಬರೆದು ಸಹಿ ಹಾಕಿದರು. ಹರ್ಷ? ಖಂಡಿತವಾಗಿ. ಆದರೆ ಅದಕ್ಕಿಂತಲೂ ಮುಖ್ಯವಾದದ್ದು ನನ್ನಲ್ಲಿ ಹುಟ್ಟಿದ ಆತ್ಮ ವಿಶ್ವಾಸ.

'ಬರೆದೇ ಬದುಕುತ್ತೇನೆ' ಎನ್ನುವ ನಿರ್ಧಾರವನ್ನು ಏಳು ವರ್ಷಗಳ ಅನಂತರ ನಾನು ಕೈಗೊಂಡದ್ದಕ್ಕೆ ಪ್ರಾಥಮಿಕಾವಸ್ಥೆಯ ಗ್ರಂಥ ಘಟನೆಗಳೇ ಕಾರಣ.

ಮೊದಲ ಕಿರುಗತೆ

ನನ್ನ ಪಠ್ಯೇತರ ವಾಚನದಲ್ಲಿ ಸಾಪ್ತಾಹಿಕಗಳೂ ಸ್ಥಾನ ಪಡೆದುವು. ಮುಖ್ಯ ಆಕರ್ಷಣೆ ವಾರದ ಕತೆ. (ರಾಷ್ಟ್ರೀಯ ವಲಯದ ಲಾಠೀ ಪ್ರಹಾರ, ಗೋಳೀಬಾರ್ ಸುದ್ದಿಗಳೂ ಗಮನ ಸೆಳೆಯುತ್ತಿದ್ದುವು.) ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಸಣ್ಣ ಕತೆಗಳಿಗೆ 'ವಾರದ ಕತ್ತೆ' ಎಂಬ ಅಡ್ಡ ಹೆಸರೂ ಇತ್ತು! ಹದಿಮೂರನೆಯ ವರ್ಷ, ನಾನ್ನೊಂದು ಕತೆ ಬರೆದೆ. ಯಾರಿಗೂ ತೋರಿಸಲಿಲ್ಲ. ಸಾಹಿತಿಗಳು ಎನಿಸಿಕೊಂಡವರು ಯಾರೂ ಹತ್ತಿರ ಇರಲಿಲ್ಲ. ಅಧ್ಯಾಪಕರಿಗೆ ತೋರಿಸಲು ಮನಸ್ಸಾಗಲಿಲ್ಲ. ಶಾಲೆಯ ಬದುಕು ಬೇರೆ, ಹೊರಗಿನದು ಬೇರೆ ಎಂದು ಆಗಲೇ ನನಗೆ ಅನಿಸಿತ್ತು. ಬರೆದು ಮುಗಿಸಿದಾಗ ಆದ ಅನುಭವವೇನು? ವಿಸ್ಮಯವೊ? ಕೌತುಕವೊ? ಸಂತೋಷವೊ? ನೆನಪಿಲ್ಲ. ಮಂಗಳೂರಿನ 'ರಾಷ್ಟ್ರಬಂಧು' ಪತ್ರಿಕೆಯ ವಿಳಾಸವನ್ನು ಲಕೋಟೆಯ ಮೇಲೆ ಪ್ರತಿಮಾಡಿ ಅಂಚೆಗೆ ಸೇರಿಸಿದೆ. ಸಂಪಾದಕ ಕಡೆಂಗೋಡ್ಲು ಶಂಕರಭಟ್ಟರ ಆ ಬಾಲಬರೆಹದಲ್ಲಿ ಏನು ಕಂಡರೋ? ಮೂರು ವಾರಗಳಾದ ಮೇಲೆ ಅದು ಅಚ್ಚಾಯಿತು. ನನ್ನ ಕತೆಯನ್ನು ಅದಕ್ಕಿಂತಲೂ ಹೆಚ್ಚಾಗಿ ನನ್ನ

ಹೆಸರನ್ನು—ಅಚ್ಚಿನಲ್ಲಿ ಕಂಡು, ಒಂದಂಗುಲ ಎತ್ತರ ಬೆಳೆದೆ, ಆಡುತ್ತ ಆಡುತ್ತ ನಾನೊಂದು ಏಣಿ ನಿರ್ಮಿಸಿದ್ದೆ. ಅದನ್ನು ಅಕ್ಷರಗಳ ಮುಗಿಲಿಗೆ ಆನಿಸಿ, ಏರಿನಿಂತು ಅತ್ತಿತ್ತ ನೋಡಿ 'ಅರಾರೆ ಎನ್ನಯ ಸಮಾನರ್ಯಾರು?' ಎನ್ನುವ ಹಾಗಾಯಿತು. ಶುದ್ಧ ಹುಚ್ಚು!

ಆಮೇಲಿನದು ಊರ ಮುಂದಿನ ತಿರುಕನ ಕಥೆ. "ಸಾಹಿತ್ಯವೇ ನನ್ನ ಜೀವನದ ಉಸಿರಾಯಿತು" ಎನ್ನುವುದಿಲ್ಲವೆ? ಹಾಗೆ—ಓದುವುದು, ಬದುಕಿಗೆ ಅದನ್ನು ಹೋಲಿಸುವುದು, ಓದಿದ್ದಕ್ಕೆ ಸ್ಪಂದಿಸುವುದು, ನೋಡಿದ್ದಕ್ಕೆ ಅರಳುವುದು. ಜತೆ ಜತೆಗೆ ಬರೆಯುವುದು ವಿದ್ಯಾಭ್ಯಾಸದ ಕಸರತ್ತೂ ಇತ್ತು.

'ಗೋರಾ' 'ತಾಯಿ' 'ಕ್ರಿಸ್ಟಫಿ'

ಹೈಸ್ಕೂಲು ಸೇರಿದಾಗ ಟಾಗೋರರ 'ಗೋರಾ' ದೊರೆಯಿತು. ಬಂಗಾಳಿ ಮೂಲದ ಆಂಗ್ಲ ಅನುವಾದ (ಆ ವೇಳೆಗೆ, ನನ್ನ ಪಾಲಿಗೆ ಇಂಗ್ಲಿಷ್ ಅಕ್ಷರಗಳೂ ಪದಗಳಾಗಿ ಪುಟಿಯತೊಡಗಿದ್ದುವು) 'ಗೋರಾ' ನನ್ನನ್ನು ಕುಲುಕಿತು. ಓದುವುದಕ್ಕೆ ಮುನ್ನ ಇದ್ದುದಕ್ಕಿಂತ ಭಿನ್ನ ವ್ಯಕ್ತಿಯಾದೆ ಓದಿದ ಮೇಲೆ.

ಇಂಗ್ಲಿಷಿನಲ್ಲಿ ಜಗತ್ತಿನ ಶ್ರೇಷ್ಠ ಸಾಹಿತ್ಯವೆಲ್ಲ ಲಭ್ಯ. ಭಾರತದ ಬಂಗಾಳ ದಿಂದ ಇಂಗ್ಲೆಂಡಿಗೆ ಹೋದೆ, ಅಲ್ಲಿಂದ ರಷ್ಯಕ್ಕೆ, ರಷ್ಯದಿಂದ ಫ್ರಾನ್ಸಿಗೆ, ಫ್ರಾನ್ಸಿನಿಂದ ಅಮೆರಿಕಕ್ಕೆ, ಅಮೆರಿಕದಿಂದ ಚೀನಕ್ಕೆ, ರೈಲು ಹಡಗುಗಳಿಲ್ಲದೆ ಮನೋವೇಗದ ಪ್ರಯಾಣ.

ಆ ಅವಧಿಯಲ್ಲಿ ನನ್ನ ಮೇಲೆ ಪ್ರಭಾವ ಬೀರಿದ ಕಾದಂಬರಿಗಳು ಎರಡು: ರಷ್ಯದ ಮ್ಯಾಕ್ಸಿಂ ಗಾರ್ಕಿಯ 'ತಾಯಿ', ಫ್ರಾನ್ಸಿನ ರೊಮೆ ರೊಲಾನ 'ಜಾನ್ ಕ್ರಿಸ್ಟಫಿ'. ಒಂದು ಬದುಕಿನ ಜ್ವಾಲಾಮುಖಿ; ಇನ್ನೊಂದು ಬಾಳ್ವೆಯ ಕಡಲು. ನನ್ನದು ಸಾಹಿತ್ಯ ವಿಮರ್ಶೆ-ಚರ್ಚೆಗಳ ನೆರವಿಲ್ಲದೆ ನಡೆಸಿದ ಮೌಲ್ಯಮಾಪನ. ಈ ಕೃತಿಗಳು ನನ್ನ ಯೋಚನಾ ಸಾಮರ್ಥ್ಯವನ್ನು ಹೊಸ ಸ್ತರಕ್ಕೆ ಒಯ್ದುವು. ಮಾನಸಿಕ ಬೌದ್ಧಿಕ ತಾಕಲಾಟಗಳಿಗೆ ನನ್ನನ್ನು ಅಣಿಗೊಳಿಸಿದುವು. ವಿಶ್ವಕುಟುಂಬವನ್ನು ಕುರಿತ ನನ್ನ ಅಸ್ಪಷ್ಟ ಕಲ್ಪನೆಗಳು ನಿಚ್ಚಳವಾದುವು.

ಒಂದು ವಿಷಯದಲ್ಲಿ ನನಗೆ ಯಾವ ಸಂದೇಹವೂ ಉಳಿಯಲಿಲ್ಲ. ಅದು ಲೇಖನಿಯ ಸಾಮರ್ಥ್ಯ. ಮುಗಿಲಿಗೆ ಏಣಿ ಇಟ್ಟವನು, ಅಲ್ಲಿ ನಿಂತು ಲೇಖನಿಯನ್ನು ಝುಳಪಿಸಿ, "ಆ್ಹ! ಮಿಂಚು!" ಅಂದುಕೊಂಡೆ.

ಬದುಕು-ಸಾಹಿತ್ಯ

'ರಾಷ್ಟ್ರಬಂಧು' ಪ್ರಕಟಿಸಿದ ನನ್ನ ಮೊದಲ ಸಣ್ಣಕತೆಯ ವಸ್ತು ಏನು ಗೊತ್ತೆ? (ಹೇಳಲೊ? ಬೇಡವೊ?) ಹುಡುಗ-ಹುಡುಗಿ ಪ್ರೇಮ (ಅಜರ, ಅಮರ ಅಲ್ಲವೆ ಈ ವಸ್ತು?).

ಆದರೆ ಬದುಕಿನಲ್ಲಿರುವುದು ಇದೊಂದೇ ಪ್ರೇಮ ಅಲ್ಲ ಎನ್ನುವುದು ಬೇಗನೆ ಗೊತ್ತಾಯಿತು. ಪರಿಣಾಮವಾಗಿ, ಬರೆಹಗಾರನಾದ ನನ್ನೆದುರು, ವಸ್ತುವಿನ ಆಯ್ಕೆಯ ಕ್ಷೇತ್ರ ವಿಸ್ತಾರವಾಯಿತು ; ಬರೆವಣಿಗೆಯಲ್ಲಿ ವೈವಿಧ್ಯ ಮೂಡಿತು.

ಒಮ್ಮೆ ಏನಾಯಿತೆಂದರೆ....

ನನಗಾಗ ಹದಿನೆಂಟು. ನನ್ನ ಮೊದಲ ಕತೆಯನ್ನು ಪ್ರಕಟಿಸಿದ ಪತ್ರಿಕೆಯಲ್ಲೇ ಉಪಸಂಪಾದಕನಾಗಿದ್ದೆ. ಸಂಪಾದಕರಿಗೆ ನನ್ನಲ್ಲಿ ವಿಶ್ವಾಸ. ನಾನು ಬರೆದ ಕಥೆಯನ್ನು ಅವರಿಗೆ ತೋರಿಸಬೇಕಾದ ಅಗತ್ಯವಿರಲಿಲ್ಲ. ಹಾಗೆಯೇ ಅಚ್ಚಿಗೆ ಹೋಗುತ್ತಿತ್ತು. ಯುದ್ಧಕಾಲ, ಆಳುತ್ತಿದ್ದ ಪರಕೀಯರೂ ಸ್ಥಳೀಯ ಲಾಭಬಡಕರೂ ಜನರನ್ನು ಸುಲಿಯುತ್ತಿದ್ದರು. ದುರ್ಲಭವಾಗಿದ್ದ ಸೀಮೆಎಣ್ಣೆಗೆ ಮಹತ್ವನೀಡಿ ಒಂದು ಕತೆ ಬರೆದೆ, ಚಿಕ್ಕದು. ಅಚ್ಚಾಯಿತು. ಪತ್ರಿಕೆ ಹೊರಬಂದ ಮೇಲೆ ಸಂಪಾದಕರೂ ಆ ಕತೆಯನ್ನು ಓದಿ ಮೆಚ್ಚಿರಬೇಕು ಎಂದು ಊಹೆ. ಆದರೆ ಸರಕಾರದವರು ಮೆಚ್ಚಲಿಲ್ಲ. (ಅದು ೧೯೪೨, ಜುಲೈ) ಐ.ಸಿ.ಎಸ್. ಕಲೆಕ್ಟರಿಂದ ಕರೆಬಂತು—ಸಂಪಾದಕರಿಗೆ, ಹೋದರು. ಕತೆಯ ಇಂಗ್ಲಿಷ್ ಭಾಷಾಂತರ ಸಾಹೇಬರ ಮುಂದಿತ್ತು. ಆ ಕತೆ ಹೇಗೆ ಅಪಾಯಕಾರಿ ಎಂಬುದನ್ನು ಸರಕಾರದ ಆ ವಕ್ತಾರ ಅಧಿಕಾರದ ಭಾಷೆಯಲ್ಲಿ ತಿಳಿಸಿದರು. ಅದು ಎಚ್ಚರಿಕೆ. ಆದರೆ ಕಡೆಂಗೋಡ್ಲು ರಾಷ್ಟ್ರೀಯವಾದಿ. ಅವರದು ಬೆದರಿಕೆಗಾಗಲೀ ಆಮಿಷಕ್ಕಾಗಲೀ ಮಣಿಯದ ವ್ಯಕ್ತಿತ್ವ. ಕಲೆಕ್ಟರರ ಕಚೇರಿಯಿಂದ ಹೊರಟುಬಂದರು, "ಇಂಥದನ್ನು ಇನ್ನು ಬರೀಬೇಡಿ," ಎಂದು ನನಗೆ ಹೇಳಲಿಲ್ಲ.

ನನ್ನ ಮೊದಲ ಕತೆ ಅಚ್ಚಾದದ್ದನ್ನು ಕಂಡು, ಮುಗಿಲಿಗೆ ಏಣಿ ತಗಲಿಸಿದ್ದೆನಲ್ಲ? ಅಚ್ಚಾದ ನನ್ನ ಈ ಕತೆ ಉಂಟುಮಾಡಿದ 'ಗಲಭೆ' ಕಂಡು "ನಕ್ಷತ್ರಗಳಿಗೇ ನಾನಿನ್ನು ಕೈಚಾಚಬಹುದು " ಎನಿಸಿತು !

ಸಾಹಿತ್ಯ ಶಕ್ತಿ

ಬದುಕು ಎಷ್ಟೋ ಪಾಠಗಳನ್ನು ಕಲಿಸುತ್ತದೆ. ಬದುಕಿನಿಂದ ಪ್ರೇರಿತವಾಗಿರುವ ಸಾಹಿತ್ಯ ಕೂಡ. ಒಂದು ಕಾಲದ ಹುಚ್ಚು ಆದರ್ಶಗಳು ಬಾಳ್ವೆಯ ಮೂಸೆಯಲ್ಲಿ ಕರಕಾಗುತ್ತವೆ. ವಾಸ್ತವತೆಯೊಂದೇ ನಿತ್ಯ ಸವಾಲಾಗುತ್ತದೆ.

ಸಾಹಿತ್ಯ ಓದುವ ಬೇನೆ ತಗಲಿ ಸುಮಾರು ನಾಲ್ಕು ದಶಕ ಆಗುತ್ತ ಬಂತು. ಬರಿಯ ಲಲಿತ ಸಾಹಿತ್ಯವಲ್ಲ. ತತ್ವಜ್ಞಾನವೂ ವಿವಿಧ ವಿಜ್ಞಾನಗಳೂ ಬೆರೆತ ಸಮ್ಮಿಶ್ರ ಸಾಹಿತ್ಯ. ಈಗಲೂ ಓದುತ್ತೇನೆ. ಸಾಯಬಹುದು. ಆದರೆ ಸಾಹಿತ್ಯ ಓದುವುದು ಮುಕ್ತಾಯವಾಗುತ್ತದಲ್ಲ ಎಂಬ ಚಿಂತೆ. ಬದುಕು ಇಲ್ಲವಾದಾಗ ಮುಂದೆ ಅದರ ಬಗೆಗೆ ಬರೆಯುವಂತಿಲ್ಲವಲ್ಲ ಎಂಬ ಖೇದ.

ಬಾಲ್ಯದ ಹುಚ್ಚು ಆವೇಶ ಈಗ ಇಲ್ಲ. ಆದರೆ ಆಸೆ ಆಗಿನದೇ. ಈಗಲೂ ಹೇಳುತ್ತೇನೆ: ಬದುಕನ್ನು ಒಳ್ಳಿತಿಗೆ ಬದಲಾಯಿಸಲು ಸಾಹಿತ್ಯ ನೆರವಾಗಬೇಕು.

ನಮ್ಮ ಸುತ್ತುಮುತ್ತನ್ನೇ ನೋಡೋಣ. ಸಾಕ್ಷರರೆಷ್ಟು? ಅದರಲ್ಲಿ ಸಾಹಿತ್ಯ ಓದುವವರೆಷ್ಟು? ಆದರೂ ಬಯಕೆ-ನಾವು ಬರೆದದ್ದು ಜನರಿಗೆ ಮುಟ್ಟಬೇಕು; ಅವರು ಮೆಚ್ಚಬೇಕು; ಅವರಿಗೆ ಅದರಿಂದ ಉಪಯೋಗವಾಗಬೇಕು. ಬಹ್ವಂಶ ಬರೆಹಗಾರರ ಅಪೇಕ್ಷೆ ಇದೇ.

ಸಾವಿರ ಎಳೆಗಳಿಂದ ಬರೆಹಗಾರ ಬದುಕಿಗೆ ಬಂಧಿತ, ಕಾಡಿನ ಸ್ಥಿತಿಯಿಂದ ನಾಡಿನವನಾಗಲು ಮನುಷ್ಯ ಬಹಳ ಕಷ್ಟಪಟ್ಟಿದ್ದಾನೆ. ಅದು ಇನ್ನೂ ನಡೆಯುತ್ತಲೇ ಇರುವ ಹೋರಾಟ. ಸಾಹಿತಿಗಳೂ ಮನುಕುಲಕ್ಕೆ ಸೇರಿದವರು, ಸಮಾಜದ ಸದಸ್ಯರು. ಆ ಕಾರಣದಿಂದಲೇ, ಸಮೃದ್ಧ ಬದುಕಿಗಾಗಿ ಮಾನವ ನಡೆಸುವ ಸಮರದಲ್ಲಿ ಅವರು ಭಾಗಿಗಳು. ಜನರ ನೋವು ನಲಿವು ದುಃಖ ಸುಖ ಯಾವುದರಿಂದಲೂ ಅವರು ಹೊರತಲ್ಲ.

ಪ್ರಜ್ಞಾವಂತ ಬರೆಹಗಾರ-ಕಾಲ, ಇತಿಹಾಸ, ಸಮಾಜ, ಪ್ರಗತಿಗಳ ಪ್ರಜ್ಞೆ ಇರುವ ಬರೆಹಗಾರ-ಅರ್ಥಪೂರ್ಣ ಸಾಹಿತ್ಯವನ್ನು ನಿರ್ಮಿಸಲು ಶಕ್ತ. ಅಂಥ ಸಾಹಿತ್ಯದಿಂದ ಬದುಕು ಹಸನಾಗುತ್ತದೆ, ಮಾನವ ಉನ್ನತಿಯತ್ತ ಸಾಗುತ್ತಾನೆ.

○ 'ಸಾಹಿತ್ಯದಿಂದ ನಾನು ಏನನ್ನು ಬಯಸುವೆ?' ಎಂಬ ಆಕಾಶವಾಣಿ ಮಾಲಿಕೆಯಲ್ಲಿ ಪ್ರಸಾರವಾದ ನನ್ನ ಭಾಷಣದ ಲೇಖನ ರೂಪ ಇದು. —೧೯೭೬

ಸಾಹಿತ್ಯ ಪ್ರೇರಣೆಯ ಮೊದಲ ಹೆಜ್ಜೆಗಳು

ಒಪ್ಪಿಕೊಂಡದ್ದನ್ನು ಆದಷ್ಟು ಒಪ್ಪವಾಗಿ ಮಾಡುವ ಜಾಯಮಾನ ನನ್ನದು. ಆದರೆ ಈ ಸಲ ಧ್ವನಿಮುದ್ರಣದ ದಿನ ಹತ್ತಿರಬಂದರೂ ಬರೆವಣಿಗೆ ಸಿದ್ಧವಾಗಿಲ್ಲ. ಒಂದು ರಾತ್ರಿ, ಒಂದರ್ಧ ಹಗಲು. ಬರೆಯದೇ ಇದ್ದರೆ ಅವಮಾನ. ಬುದ್ಧಿ-ಭಾವ-ಕ್ರಿಯೆಗಳ ಪೀಠವಾದ ಮೆದುಳು ಸವಾಲು ಹಾಕುತ್ತಿದೆ: "ಮಂಕೇ, ಹೆಜ್ಜೆ ಗುರುತುಗಳು ಮಾಸಿ ಹೋಗಿವೆಯಲ್ಲೋ! ಏನು ಗುರುತಿಸ್ತೀಯಾ ನೀನು?" ಅಂದರೇನು? ಬುರುಡೆ ಬಿಡಬೇಕಾದೀತು ಎಂಬ ಎಚ್ಚರಿಕೆಯೆ? ಇದ್ದೀತು. ಪ್ರಾಮಿಸ್-ಆ ಕೆಲಸ ನಾನು ಮಾಡಲಾರೆ. ಸಾಚಾತನ ಉಳಿಸಿಕೊಳ್ಳಲೇಬೇಕು. ಕಡೆಯವರೆಗೂ.

ಸಾಹಿತ್ಯವನ್ನು ಕುರಿತು ತುಸುವಾದರೂ ಗಂಭೀರವಾಗಿ ನಾನು ಆಲೋಚಿಸ ತೊಡಗಿದ್ದು ನನ್ನ ಹದಿನೆಂಟನೆಯ ವಯಸ್ಸಿನಲ್ಲಿ. ಆದರೆ ಆ ವೇಳೆಗಾಗಲೇ ನನಗೆ ಸಾಹಿತ್ಯಪ್ರೇರಣೆಯಾಗಿ ಐದು ವರ್ಷ ಕಳೆದಿದ್ದುವು. ಇಪ್ಪತ್ತು ಮೂವತ್ತರಷ್ಟು ಕತೆ ಇತ್ಯಾದಿ ಬರೆದು ಹೆಬ್ಬೆರಳು ತೋರುಬೆರಳು ನಡುಬೆರಳು ಮಸಿಯಿಂದ ತೋಯ್ದಿದ್ದುವು; ಎಷ್ಟು ತೊಳೆದರೂ ಅಳಿಸಲಾಗದ ಕಲೆ ಉಳಿದಿತ್ತು.

ಆ ಅವಸ್ಥೆ ಆರಂಭವಾದದ್ದು ೧೯೩೭ರಲ್ಲಿ, ನನ್ನ ಹದಿಮೂರನೆಯ ವರ್ಷದಲ್ಲಿ ಪೂರ್ವಾರ್ಧದಲ್ಲಿ, ಇದ್ದಕ್ಕಿದ್ದಂತೆ, ತುಳು ಭಾಷಾ ಲೇಖಕನಾದೆ. ಉತ್ತರಾರ್ಧದಲ್ಲಿ, ಅಷ್ಟೇ ಅನಿರೀಕ್ಷಿತವಾಗಿ, ಕನ್ನಡದ ಕತೆಗಾರನಾದೆ. ಅಚ್ಚಿನಲ್ಲಿ ಹೆಸರು ಕಂಡ ಈ ಸಂಭವದ ಹಿನ್ನೆಲೆ ಏನು? ಏನಿದ್ದೀತು?

ಸ್ಮೃತಿಕೋಶಿಕೆಗಳಲ್ಲಿನ ದಾಖಲೆ ಮೊದಲಾಗುವುದು ಐದನೆಯ ವರ್ಷದಿಂದ ಎನ್ನುವ ಸಾಮಾನ್ಯ ತಿಳಿವಳಿಕೆಗೆ ನಾನು ಅಪವಾದವಲ್ಲ. ಆದರೆ ಆರು ತಿಂಗಳ ಮಗುವನ್ನೆತ್ತಿಕೊಂಡು, ಮೂವತ್ತು ದಾಟದ ತಾಯಿ ಹಳ್ಳಿ ಬಿಟ್ಟು ಕಾವು ಎಂಬ ಊರಿಗೆ ಬಂದದ್ದು ನೆನಪಿದೆಯಲ್ಲ? ಊಹುಂ. ಅದು ನನ್ನ ನೆನಪಲ್ಲ. ಕಿರಿಯವ ನಾಗಿದ್ದಾಗ ಹೆತ್ತವಳು ಭೈರಿಗೆ ಕೊರೆದು ಮೆದುಳಿಗೆ ತುಂಬಿಸಿದ್ದು. ಸಾಲೆಯಲ್ಲಿ, ನಾನೇ ಪ್ರಮುಖ, ಅಕ್ಷರ ಶತ್ರುಗಳಲ್ಲಿ! ಮರಳ ಮೇಲೆ ಬೆರಳು ಹಿಡಿದು ಲಿಪಿ ರೂಪಿಸಿದ್ದ ಗುರುವಿಗೆ ಎಂಥ ಅವಮಾನ! ಅವರು ತಾಳ್ಮೆಗೆಟ್ಟು ಬೈದರೆ, ಕೈ ಎತ್ತಿ

ದರೆ, ನನಗೆ ಖುಷಿ. ಒಂದು ದಿನ ಕರಿಮರದ ಗಾತ್ರದ ರೂಲರಿನಿಂದ ನನ್ನ ಮುಂತಲೆಗೆ ಏಟು ಕೊಟ್ಟರು. ಅವರ ಪುಣ್ಯ—ಅದು ಬಿರುಕು ಬಿಡಲಿಲ್ಲ. ಬಾವು ಬಂತು. ಒಳಗೆ ಕೋಶಿಕೆಗಳು ಕುಲುಕಿ ಚುರುಕಾದುವೇನೋ! ಬೇಗನೆ ಅಕ್ಷರಸ್ಥ ನಾದೆ. ಓದುವ ಹುಚ್ಚು ಅಂಟಿತು.

ಆ ಮುಂದಿನ ವರ್ಷಗಳಲ್ಲಿ ಅಳಸಿಂಗರಾಚಾರ್ಯರ ಕನ್ನಡ 'ರಾಮಾಯಣ' ದಿಂದ ಮೊದಲ್ಗೊಂಡು ಕೋಶಿ ಕಾರಂತರ ಪತ್ತೇದಾರಿ ಕಾದಂಬರಿ 'ವಿಚಿತ್ರಕೂಟ', ಭಿ.ಪ. ಕಾಳೆಯವರ-ಡಿಟ್ಟೋ—'ಭಯಂಕರ ಕೊಲೆ', ವೆಂಕಟಾಚಾರ್ಯರು ಅನುವಾದಿಸಿದ ಬಂಕಿಮರ 'ಆನಂದ ಮಠ' ಎಲ್ಲ ನನಗೆ ಗ್ರಾಸವಾದುವು.

ಸುಳ್ಯದ ಹಯರ್ ಎಲಿಮೆಂಟರಿ ಶಾಲೆಗೆ ಬಂದಾಗ, ನನ್ನ ಹುಡುಗಾಟದ-ಹುಡುಕಾಟದ-ಬಯಲು ವಿಸ್ತಾರವಾಯಿತು. ಆಗ ನಾನು ಪಡೆದದ್ದರಲ್ಲಿ ವೈವಿಧ್ಯ ವಿತ್ತು; ನೋವು, ಅವಮಾನ, ಹೆಗ್ಗಳಿಕೆ, ಅನುಕಂಪ, ವಾತ್ಸಲ್ಯ, ಸ್ನೇಹ........ ಸಿಕ್ಕಿದ್ದನ್ನೆಲ್ಲ ಓದಿದೆ. ಪತ್ರಿಕೆಗಳನ್ನು ಸಹ. ಪುಟ್ಟ ಲೋಕಾನುಭವಿ.

ಆದರೆ ಕಲ್ಪನಾಲೋಕಕ್ಕಿಂತ ಭಿನ್ನವಾಗಿತ್ತು, ವಾಸ್ತವ ಜಗತ್ತು. ಗಾಂಧಿ-ನೆಹರು ಹಾದು ಹೋದರು. 'ಭಾರತಮಾತಾಕಿ ಜೈ!' ಮೆದುಳು ಧಿಮಿ ಧಿಮಿ. ನಾಡಿಗಳಲ್ಲಿ ರಿಂಗಣಗುಣಿತ. ದೇಶವೇ ತಾಯಿ. ಪರಕೀಯರ ಕೈಯಲ್ಲಿ ಬನ್ನ ಪಡುತ್ತಿದ್ದಾಳೆ, ಅವಳಿಗೆ ಬಿಡುಗಡೆ ಬೇಕು. ಸಮಾನ ಧರ್ಮಿಯರಾದ ನಾವು ಮೂವರೋ ನಾಲ್ವರೋ ಪ್ರಭಾತಫೇರಿ ಹೊರಡಿಸುತ್ತಿದ್ದೆವು. ಒಂದೇ ಹಾಡು: 'ಝಂಡಾ ಊಂಚಾ ರಹೇ ಹಮಾರಾ....' ಕೋಳಿ ಕೂಗಿತೇಳು ಕಂದ....ಎದ್ದೆವು. ಕಾಗೆಗಳು ಕಾ ಎಂದುವು. ನಸುಕಿನ ಸುಖನಿದ್ರೆಗೆ ಭಂಗತಂದ ಎಳೆಯರ ಮೇಲೆ ಹಲವರಿಗೆ ಸಿಟ್ಟು. ಎರಡು ತಂಡ ಅಲ್ಲವೆ? 'ಸ್ವಾತಂತ್ರ್ಯ ಬೇಕು' ಎನ್ನುವವರು 'ಬೇಡ' ಎನ್ನುವವರು....

ಆಗ ಕಣ್ಣಿಗೆ ಬಿತ್ತು ಪಣಿಯಾಡಿಯವರ 'ತುಳುನಾಡ್' ಪತ್ರಿಕೆ. ಕನ್ನಡ ಲಿಪಿ, ಸುತ್ತುಮುತ್ತ ಜನ ಆಡುವ ತುಳು ಭಾಷೆ. ಅದರಲ್ಲಿ ಪ್ರಕಟವಾಗುತ್ತಿದ್ದುವು. ಎಂ. ವಿ. ಹೆಗ್ಡೆಯವರ ಗೀತೆಗಳು. ಓದಿ ಪುಲಕಗೊಳ್ಳುತ್ತಿದ್ದೆ. ಮನೆಯಲ್ಲಿ ತಾಯಿ ನನ್ನೊಡನೆ ಆಡುತ್ತಿದ್ದದ್ದು ಅವಳ ವಿಶಿಷ್ಟ ತುಳು ಭಾಷೆ. ನನ್ನ ಮಟ್ಟಿಗೆ ಆ ಭಾಷೆಯ ಬಳಕೆ ಮಣ್ಣುಗೋಡೆಯ ಮುಳಿಹುಲ್ಲು ಛಾವಣಿಯ ನಮ್ಮ ಸಣ್ಣ ಮನೆ ಯೊಳಗೆ ಮಾತ್ರ. ಶಾಲೆಯಲ್ಲಿ ಕನ್ನಡ. ಆಡಳಿತದಲ್ಲೂ ಕನ್ನಡ. ಆದರೆ ಹೊರಗೆ ಸರ್ವಮಾನ್ಯ ತುಳು ಮೆರೆಯುತ್ತಿತ್ತು. ಎಲ್ಲ ಧರ್ಮಗಳ ಎಲ್ಲ ಪಂಗಡಗಳ ಜನರೂ ಪರಸ್ಪರರೊಡನೆ ವ್ಯವಹಾರಕ್ಕಾಗಿ ಬಳಸುತ್ತಿದ್ದ ಭಾಷೆ. ಆ ಸರ್ವಮಾನ್ಯ ತುಳು ಭಾಷೆಯಲ್ಲಿ ನಾನು ಕವಿತೆಗಳನ್ನೂ ಕತೆಗಳನ್ನೂ ಬರೆದೆ. ಅವೆಲ್ಲ ಅಜ್ಞಾತವಾದುವು.....

ತುಳುವಿನಲ್ಲಿ ಬರೆದರೂ ನನ್ನ ಪಾಲಿಗೆ ಲೋಹಚುಂಬಕವಾಗಿದ್ದುದು ಕನ್ನಡವೇ. ಕೆಲವೇ ಮಿನಿಟುಗಳ ಈ ಭಾಷಣದಲ್ಲಿ ನನ್ನ ಪಠ್ಯೇತರ ಚಟುವಟಿಕೆ

ಗಳಿಗೆ ಆಸರೆಯಾಗಿದ್ದ ಅಧ್ಯಾಪಕರೆಲ್ಲರ ವಿದ್ಯಾರ್ಥಿ ಒಡನಾಡಿಗಳೆಲ್ಲರ ಬಗೆಗೆ ಬರೆಯಲು ವೇಳೆ ಸಾಲದು. ಜಿಲ್ಲೆಯದೇ ಸಂಗೀತನಾಟಕ ಮಂಡಲಿಯೊಂದು ಬಂದು ಕೆಲವು ನಾಟಕಗಳನ್ನು ಅಭಿನಯಿಸಿತು. ಮುಂದೆ ಊರಿನ ಪ್ರತಿಷ್ಠಿತರು ಹವ್ಯಾಸಿಗಳಾಗಿ, ಒಂದೆರಡು ನಾಟಕಗಳನ್ನು ಆಡಿ ತೋರಿಸಿದರು. ಒಂದರಲ್ಲಿ ನಾನು ಮೊಘಲ್ ಸಾಮ್ರಾಜ್ಞಿ ಉದಯಪುರಿಯ ಪಾತ್ರವಹಿಸಿ, ವಿನೋದಕ್ಕೆ ಕಾರಣನಾದೆ. ಶಾಲೆಯಲ್ಲಿ ನಡೆಯುತ್ತಿದ್ದ ತಿಂಗಳ ಹಬ್ಬದಲ್ಲಿ ನಾನೇ ರೂಪಿಸಿದ 'ವಿಲಿಯಂ ಟೆಲ್' ನಾಟಕದಲ್ಲಿ ದೇಶಪ್ರೇಮಿ ಟೆಲ್‌ನ ಪಾತ್ರ ನಿರ್ವಹಿಸಿ, ಉದಯಪುರಿಯನ್ನು ಇತಿಹಾಸದ ಪುಟಗಳಿಗೆ ಮರಳಿ ತಳ್ಳಿದೆ. ವರ್ಷದ ಜಾತ್ರೆ, ರಥೋತ್ಸವ....ಹಗ್ಗವನ್ನು ನಾನೂ ಬಿಗಿಯಾಗಿ ಹಿಡಿದು, ನಾನೇ ಜಗ್ಗಿದೆ ಎನ್ನುವಷ್ಟು ಹಿಗ್ಗಿದೆ. ಮಣಿ ಸರಕಿನ ಅಂಗಡಿಗಳ ಥಳಕುಫಳಕಿಗೆ ಬೆರಗಾದೆ. ಕೊಳ್ಳಲು ಮಾತ್ರ ಕಾಸಿರಲಿಲ್ಲ. ಮೂಗಿಲ್ಲದ ಮಾತ್ರಕ್ಕೆ ಶ್ವಾನರಾಯರು ಸಂತೆಗೆ ಹೋಗಲೇಬಾರದು ಎಂದಿಲ್ಲವಲ್ಲ?

ಒಮ್ಮೆ ಧಾರವಾಡದ ಕಡೆಯ ಒಬ್ಬ ಯುವಕ ಬಂದಿಳಿದರು, ಬಸ್ ನಿಲ್ದಾಣದಲ್ಲಿ. ರಸ್ತೆಯ ಧೂಳು ಆವರಿಸಿ ಕಾವಿಯಾಗಿದ್ದ ಖಾದಿ ಉಡುಗೆ. ಭುಜದ ಮೇಲೊಂದು ಬಟ್ಟೆಗಂಟು. ಸೀರೆ, ಧೋತ್ರ? ಅಲ್ಲ. ಅದರಲ್ಲಿದ್ದುವು ಆಧುನಿಕ ಸಾಹಿತ್ಯದ ಪುಸ್ತಕಗಳು. ನಾಗರಿಕರು ಪುಸ್ತಕ ಕೊಳ್ಳುವುದನ್ನು ನಾನೆಂದೂ ನೋಡಿರಲಿಲ್ಲ. ನಮ್ಮೂರಲ್ಲಿ ಗ್ರಂಥ ಭಂಡಾರದ ಹೊರತಾಗಿ ಗಿರಾಕಿಯಾಗುವ ಅರ್ಹತೆ ಇದ್ದವರು ಮುಖ್ಯೋಪಾಧ್ಯಾಯರು ಒಬ್ಬರೇ. ಬಂದ ವ್ಯಕ್ತಿ ಮಿತಭಾಷಿ. ಸಮೀಪಿಸಿ ಹೆಸರು ಕೇಳಿದೆ. "ಮೇವುಂಡಿ ಮಲ್ಲಾರಿ" ಎಂದರು. ರಾತ್ರಿ ಮುಖ್ಯೋಪಾಧ್ಯಾಯರಲ್ಲಿ ಅವರ ವಾಸ್ತವ್ಯ. ಮರುದಿನ ಮುಂದಕ್ಕೆ ಪಯಣ. ಹೆಡ್‌ಮಾಸ್ಟರ ಮನೆಗೆ ಮಾರನೆಯ ದಿನ ಹೋದೆ. ಪುಸ್ತಕಗಳನ್ನು ಅಲ್ಲಿ ಕೊಂಡಿರಲಿಲ್ಲ. ಆಗ ಅನಿಸಿತು : ಹೆಚ್ಚು ಕಾಸು ಸುಲಭ ಲಭ್ಯವಲ್ಲ.

ಕಾಸು ಗಳಿಸಲು ಯತ್ನಿಸಿದೆ, ಬಸ್ ನಿಲ್ದಾಣದಲ್ಲಿ ಬೀಡಾ ಮಾರಾಟದಿಂದ. ಮುಂದೆ ದಾರಿಹೋಕರಿಗೆ "ಕಾಫಿ ನೀರು ಬೇಕೆ?" ಎಂದು ಕೇಳಿದೆ. 'ನತದೃಷ್ಟ.' ಒಂಟಿದರ್ಜಿಯೊಬ್ಬರಲ್ಲಿ ಶಿಷ್ಯನಾದೆ. ಒಂದು ದಿನವಿಡೀ ಕಾಜಾ ಹಾಕಿ ಬೆರಳು ಚುಚ್ಚಿಸಿಕೊಂಡಿದ್ದೇ ಬಂತು. ಸಂಜೆ ದರ್ಜಿ ಖುಲಾಸೆಯ ತೀರ್ಪು ಕೊಟ್ಟರು. "ಈ ಕೆಲಸ ನಿನಗೆ ಹೇಳಿದ್ದಲ್ಲ." ಶಾಲೆಯಲ್ಲಿ ವೃತ್ತಿಶಿಕ್ಷಣವಿತ್ತು. ಬುಕ್ ಬೈಂಡಿಂಗ್ ಹೇಳಿಕೊಟ್ಟಿದ್ದರು. ಅದರದೇ ಗುಡಿಕೈಗಾರಿಕೆ ಆರಂಭಿಸಿದೆ. ತಯಾರಿ ಮಾಲು ಚೆನ್ನಾಗಿತ್ತು. ಆದರೆ ಕೊಳ್ಳುವವರಿರಲಿಲ್ಲ. ಬಹಳ ಚೆನ್ನಾಗಿ ಕಂಡ ಒಂದು ಡಯರಿಯಲ್ಲಿ ರತ್ನನ ಪದಗಳನ್ನು ಪ್ರತಿಮಾಡಿದೆ. 'ಮಡಿಕೇರಿಲಿ ಮಂಜು'........ ಪೂವಮ್ಮಾ, ಪೂವಮ್ಮಾ....ಆ ಪದ್ಯಗಳನ್ನು ಮತ್ತೆಮತ್ತೆ ಓದುವುದರಲ್ಲಿ ಸಂತೋಷ ಸಿಕ್ಕಿತು. ಬೈಂಡಿಂಗ್ ಕೆಲಸಕ್ಕೆ ವಿದಾಯ ನುಡಿದೆ. ಕಾರಂತರು ನಡೆಸುತ್ತಿದ್ದ ಮಕ್ಕಳ ಕೂಟಕ್ಕೆ ವಿಟ್ಲವೋ ಕನ್ಯಾನವೋ ಹೋದೆ. ಪ್ರಾಯ ಮೀರಿ ಪ್ರಬುದ್ಧ

ನಾದವನು—ಆ ಚಿಲಿಪಿಲಿ ಆಟ ಇಷ್ಟವಾಗಲಿಲ್ಲ. ಆದರೆ ಪುತ್ತೂರಿನ ನಾಡಹಬ್ಬ ಬೇರೆ ಸಂಗತಿ. ಅಲ್ಲಿತ್ತು ಅಡೆತಡೆಯಿಲ್ಲದ ವಾಕ್‌ಪ್ರವಾಹ, ಹೇರಳ ಮನರಂಜನೆ. ಗೊರೂರು, ತೀ.ನಂ.ಶ್ರೀ., ಅ.ನ.ಕೃ., ಕಸ್ತೂರಿ, ವಿ.ಸೀ., ದಿನಕರ ದೇಸಾಯಿ, ಕಾರಂತ ದಂಪತಿ. ಹನ್ನೊಂದು ಹನ್ನೆರಡರ ನಾನು—ಹೊಸಗನ್ನಡ ಸಾಹಿತ್ಯ ಗಾಳಿಯಿಂದ ಪುಪ್ಪುಸಗಳನ್ನು ತುಂಬಿಕೊಂಡೆ.

....ಶಾಲೆಗೆ ಮಂಗಳೂರಿನಿಂದ 'ರಾಷ್ಟ್ರಬಂಧು' ವಾರಪತ್ರಿಕೆ ಬರುತ್ತಿತ್ತು. ಪ್ರತಿ ಸೋಮವಾರ. ತಿಂಗಳಿಗೊಮ್ಮೆ ಸಾಹಿತ್ಯ ಸಂಚಿಕೆ ಇರುತ್ತಿತ್ತು. ಅದರಲ್ಲಿ 'ವಾರದ ಕಥೆ' ತಪ್ಪದೆ ಕಾಣಿಸುತ್ತಿದ್ದ ಶೀರ್ಷಿಕೆ. ಅದರ ಕೆಳಗೆ ಒಂದು ಕತೆ. ಒಂದು ಇಡೀ ಪುಟ. ಅಥವಾ ಅದಕ್ಕಿಂತ ತುಸು ಕಿರಿದು. ಬೆಂಗಳೂರು, ಮೈಸೂರು, ಧಾರವಾಡ, ಕಾರವಾರ, ಕಾಣದ ಆ ಊರುಗಳೆಲ್ಲ ಪ್ರದೇಶಗಳೆಲ್ಲ ಮಾನಸಿಕವಾಗಿ ನನಗೆ ಹತ್ತಿರವಾಗಿದ್ದುವು. ಕನ್ನಡದ ಭಾಷಾ ಪ್ರಭೇದಗಳನ್ನು ಗುರುತಿಸಿದ್ದೆ. ಆ ವಿಶಾಲ ಪ್ರದೇಶದ ಜನಸಮುದಾಯವೆಲ್ಲ ನನ್ನ ಬಂಧುಬಳಗ. ಅಲ್ಲಿಂದ ಬರುತ್ತಿದ್ದ ಪತ್ರಿಕೆ ಪುಸ್ತಕಗಳೆಲ್ಲ ನನ್ನ ವ್ಯಾಪ್ತಿಗೆ ಒಳಪಟ್ಟ ಸಾಹಿತ್ಯ—ಎಂಬ ಭಾವನೆಯಿಂದ ನಾನು ವಿಶಾಲವಾದ ಬಾನಿನಲ್ಲಿ ಹಾರಾಡುವ ಹಕ್ಕಿಯಾದೆ.

ಅಂಥದರಲ್ಲಿ ಒಂದು ರಾತ್ರಿ ಇದ್ದಕ್ಕಿದ್ದಂತೆ—

ಸೀಮೆ ಎಣ್ಣೆಯ ಬುಡ್ಡಿ ದೀಪದ ಮುಂದೆ ನೆಲದಮೇಲೆ ಕುಳಿತೆ. ನೀಡುತ್ತಿದ್ದ ಬೆಳಕಿಗಿಂತಲೂ ಅದು ಉಗುಳುತ್ತಿದ್ದ ಹೊಗೆಯೇ ಜಾಸ್ತಿ. ಅಯ್ಯೋ ಪಾಪ—ಎನ್ನಬೇಕಾದ್ದಿಲ್ಲ. ಇರುಳಿನಲ್ಲಿ ಅದಕ್ಕಿಂತ ಬೇರೆಯಾದ ಬೆಳಕು ನನಗೆ ದೊರೆಯಬೇಕೆಂಬ ಹಟವಿರಲಿಲ್ಲ; ಸಿಕ್ಕೀತೆನ್ನುವ ಆಸೆಯೂ ಇರಲಿಲ್ಲ. ಪಕ್ಕದಲ್ಲಿದ್ದ ಎಕ್ಸರ್‌ಸೈಜ್ ಪುಸ್ತಕದಿಂದ ಖಾಲಿ ಹಾಳೆಗಳನ್ನು ಹರಿದೆ. ಮೊದಲ ಪುಟದ ಮೇಲ್ಗಡೆ 'ಓಂ' ಇಲ್ಲ, 'ಶ್ರೀ' ಇಲ್ಲ. ಮಸಿದವತಿಗೆ (ಕಪ್ಪೊ ? ನೀಲಿಯೊ ?) ನೀಳ ಲೇಖನಿ ಅದ್ದಿ ಬರೆಯತೊಡಗಿದೆ. ವಾಕ್ಯರಚನೆಗೆ ತೊಡಗುವ ಮುನ್ನ ಬುದ್ಧಿ ಭಾವಗಳು ಮೇಳೈಸಿದ್ದುವೆ? ವಸ್ತು ಖಚಿತವಾಗಿತ್ತೆ ? ತಂತ್ರದ ಬಗೆಗೆ ನಿರ್ಧರಿಸಿದ್ದೇನೆ? ನನಗೆ ನೆನಪಾಗುತ್ತಿಲ್ಲ....ಓದಿದ್ದ ಎಷ್ಟೋ ಕತೆಗಳು ನನ್ನ ಆಳವನ್ನು ಹೊಕ್ಕು ಸ್ವಾಸ್ಥ್ಯವನ್ನು ಕೆಡಿಸಿರಬಹುದು. ಅಸ್ಪಷ್ಟವಾದೊಂದು ವಸ್ತು ರೂಪುಗೊಂಡಿರಬೇಕು....ವಿವಾಹಿತ ಕಾಲೇಜು ವಿದ್ಯಾರ್ಥಿ. ಊರಿನಲ್ಲಿ ಆತನ ಒಲವು ದೊರೆಯದೇ ಕಾದಿರುವ ಎಳೆಯ ಹೆಂಡತಿ. ಸಿರಿವಂತ ಸಹಪಾಠಿನಿಯಲ್ಲಿ ಅವನು ಅನುರಕ್ತ. ಮೋಹ ಅವಳ ಮೇಲಲ್ಲ, ಅವಳ ಹಣದ ಮೇಲೆ ಎನ್ನುವ ಸಂದೇಹದ ಧ್ವನಿ ಒಂದೆಡೆ. ಕಸಿವಿಸಿಗೆ ಒಳಗಾದ ಹುಡುಗನ ತಂದೆ ಆಯಾ ಊರುಗಳಿಂದ ಪತ್ರ-ಉತ್ತರ........ ನಡುನಡುವೆ ಒಂದೊಂದು 'ವಯರ್'-ತಂತಿ-ಹುಡುಗ ತನ್ನ ಗೆಳತಿಯ ಹಣ ದೋಚುತ್ತಾನೆ. ಆ ಅಪರಾಧಕ್ಕಾಗಿ ನ್ಯಾಯಾಧೀಶರು ಆತನಿಗೆ ಶಿಕ್ಷೆ ವಿಧಿಸಿದರೆಂದು 'ಲೋಕಮತ' ಪತ್ರಿಕೆಯಲ್ಲಿ ಸುದ್ದಿ, (ಕದ್ದದ್ದು ಒಂದೂವರೆ ಸಾವಿರ. ಶಿಕ್ಷೆ

ಒಂದೂವರೆ ವರ್ಷ!) ಕತೆಗೆ ಇಟ್ಟ ಹೆಸರು 'ಮೋಹಜಾಲ.' ಬರೆದವರು: 'ಕಿಶೋರ' (ನನ್ನ ಮೂಲ ನಾಮಧೇಯದ ಮೂರು ಪದಗಳ ಮೊದಲ ಅಕ್ಷರಗಳನ್ನೆತ್ತಿಕೊಂಡು ನಾನೇ ಟಂಕಿಸಿದ ಕಾವ್ಯನಾಮ). ಸಂಪಾದಕರ ಮೇಲೆ ಮೋಡಿ ಬೀಸಲೆಂದು, 'ಕಿಶೋರ' ಹೆಸರಿನ ಮುಂದೆ ಸೇರಿಸಿದೆ: 'ಬಾಲವೃಂದ' ಸುಳ್ಳು. ಬರೆದುದನ್ನು ತಿರುಗಿ ಓದಲಿಲ್ಲ. ಇನ್ನು ತಿದ್ದುವ ಮಾತೆಲ್ಲಿಯದು?

ನಿದ್ದೆ, ಎಚ್ಚರ. ಕತೆಯ ವಿಲೇವಾರಿಯಾಗಬೇಕಲ್ಲ? ಯಾರಿಗೂ 'ಕತೆ'ಯ ವಿಷಯ ಹೇಳಲಿಲ್ಲ. 'ತುಳುನಾಡ್' ಪತ್ರಿಕೆಗೆ ಹಸ್ತಪ್ರತಿ ರವಾನಿಸಿ ಅನುಭವ ಇದ್ದವನು 'ಮೋಹಜಾಲ'ವನ್ನು ಮಂಗಳೂರಿನ 'ರಾಷ್ಟ್ರಬಂಧು' ಸಂಪಾದಕರಿಗೆ ಸಾಗಹಾಕಿ ನಿಶ್ಚಿಂತನಾದೆ.

ಅಷ್ಟುಮಾಡಿ ಆ ವಿಷಯ ಮರೆತೇಬಿಟ್ಟೆ ಎಂದು ತೋರುತ್ತದೆ.

ಮೇಲಣ ಸೋಮವಾರವೂ ಅನಂತರದ ಸೋಮವಾರವೂ ಎಂದಿನಂತೆ ಇತರರ ಜತೆಗೂಡಿಯೇ 'ರಾಷ್ಟ್ರಬಂಧು'ವನ್ನು ನೋಡಿದೆ. ವಾರದ ಕತೆಗಳನ್ನೂ ಓದಿದೆ. ನಂಬುವುದು ಕಷ್ಟವಾದೀತು. ಆದರೂ ವಾಸ್ತವ ಸಂಗತಿ ಇದು: ನಾನೊಂದು ಕನ್ನಡ ಕತೆ ಬರೆದಿದ್ದರ ನೆನಪು ನನ್ನನ್ನು ಕಾಡಲಿಲ್ಲ.

ಆಮೇಲೂ ಒಂದೆರಡು ವಾರಗಳು ಕಳೆದಿರಬೇಕು.

ಒಂದು ಸೋಮವಾರ.

ಮಧ್ಯಾಹ್ನದ ಬಿಡುವು ಮುಗಿದೊಡನೆ, ರಸ್ತೆಯಾಚೆಗಿನ ಶಾಲೆಯ ಇನ್ನೊಂದು ಕಟ್ಟಡದತ್ತ ಹೋದವನು ಓಡುತ್ತ ಕುಪ್ಪಳಿಸುತ್ತ ನನ್ನ ತರಗತಿಯ ಕಡೆಗೆ ಮಾಮೂಲಿನಂತೆ ಜಗಲಿಯಲ್ಲಿ, ಅದೇ ಆಗ ಬಂದಿದ್ದ 'ರಾಷ್ಟ್ರಬಂಧು'ವನ್ನು ತೆರೆದು ಮೂವರು ನಾಲ್ವರು ಸಹಪಾಠಿಗಳು ಗುಂಪುಕಟ್ಟಿ ನೋಡುತ್ತಿದ್ದರು. ವಾರದ ಕತೆ ಯಾವಾಗಲೂ ಇರುವ ಎರಡನೆಯ ಪುಟ. ಇಣಿಕಿ ಕತೆಯ ಹೆಸರನ್ನು ಗಟ್ಟಿಯಾಗಿ ಉಚ್ಚರಿಸಿ, ಆಮೇಲೆ ಓದಿದರಾಯಿತೆಂದು ಮುಂದೆ ಸಾಗಿದೆ.

ಹತ್ತು ಹೆಜ್ಜೆ ಹೋಗಿದ್ದೆನೋ ಇಲ್ಲವೋ, ಒಮ್ಮೆಲೆ ನಿಂತೆ. ಎದೆಗುಂಡಿಗೆಯ ಬಡಿತ ಕ್ರಮ ತಪ್ಪಿದಂತೆ ಅನಿಸಿತು. ಸರಕ್ಕನೆ ತಿರುಗಿ ಗುಂಪಿನೆಡೆಗೆ ಮರಳಿದೆ. ಪತ್ರಿಕೆಯ ಪುಟವನ್ನು ಮತ್ತೆ ನೋಡಿದೆ.

'ಮೋಹಜಾಲ'—ನನ್ನ ಕಥೆ!

ಅಲ್ಲಿದ್ದವರು ಬೆರಗಾಗಿ ಅದನ್ನು ನೋಡುತ್ತಿದ್ದರು, ಓದುತ್ತಿದ್ದರು. ವಿಸ್ಮಯದ, ಕುತೂಹಲದ—ಪ್ರಾಯಶಃ ಅಸೂಯೆಯ—ನೋಟಗಳು ನನ್ನನ್ನು ಮುತ್ತಿದುವು.

ನನಗೆ ತಿಳಿಯುವುದಕ್ಕೆ ಮುನ್ನವೇ ನಾನು ಕತೆಗಾರನಾಗಿಬಿಟ್ಟಿದ್ದೆ.

ಸಂಪಾದಕ ಕಡೆಂಗೋಡ್ಲು ನನ್ನ ಬರೆವಣಿಗೆಯಲ್ಲಿ ಏನು ಕಂಡರೋ! ನಾನು ಒಂದರಮೇಲೊಂದಾಗಿ ಬರೆದ ಕತೆಗಳೆಲ್ಲ 'ರಾಷ್ಟ್ರಬಂಧು'ವಿನಲ್ಲಿ ಅಚ್ಚಾದುವು. 'ಬಾಲವೃಂದ'ದ ಕಟ್ಟುಕತೆ ಆವಿಯಾಯಿತು. ಒಂಟಿ 'ಕಿಶೋರ'ನಾದೆ. 'ಕತೆಗಾರ'

ಎಂಬ ಕಾವ್ಯನಾಮವನ್ನೂ ಬಳಸಿದೆ. ಒಂದು ಹಂತ ಮುಟ್ಟಿದಾಗ, ಇನ್ನು ನಿಜ ನಾಮಧೇಯವೇ ಸಾಲದೆ? ಎನಿಸಿತು.

ಬರೆದು ನಾಲ್ಕು ವರ್ಷ ಆದಮೇಲೆ ಇತರ ಕತೆಗಳೊಂದಿಗೆ ನನ್ನ ಮೊದಲ ಕತೆಯೂ ಕಳೆದುಹೋಯಿತು. 'ಮೋಹಜಾಲ'ವಂತೂ ಕಳಪೆ ಎಂಬ ಸಿದ್ಧಾಂತಕ್ಕೆ ನಾನೇ ಬಂದಿದ್ದೆ. ಅವನ್ನೆಲ್ಲಿ ಓದಬೇಕು ಎಂಬ ತೀವ್ರ ಆಸೆ ಉದಿಸಿದ್ದು ಈಚೆಗೆ. ನಸೀಬ ಖೊಟ್ಟಿಯಾಗಿರಲಿಲ್ಲ. ಸಂಪುಟಗಳು ದೊರೆತುವು. ಆತ್ಮೀಯರ ಶ್ರಮದಿಂದ ಸುಮಾರು ಅರುವತ್ತು ಕತೆ–ಲೇಖನಗಳು ನನ್ನಲ್ಲಿಗೆ ಮರಳಿದುವು.

'ಮೋಹಜಾಲ'ದ ಮೊದಲ ಓಲೆಯನ್ನು ಓದಲೆ? ತಮಾಷೆಗೆ.

ರಾಯ್ಪುರ

ಪ್ರಿಯಾ, ದಿನಾಂಕ............

ನೀವು ಇನ್ನೂ ಮನೆಗೆ ಏಕೆ ಬರುವುದಿಲ್ಲ? ಪರೀಕ್ಷೆಯ ಫಲಿತಾಂಶವನ್ನಂತೂ ತಿಳಿಸಿಯೇ ಇಲ್ಲ. ನಾನು ನಿಮ್ಮನ್ನು ಕಂಡುದೆಂದರೆ, ಅಂದು ಮದುವೆಯ ದಿವಸ ಕದ್ದು ಕಂಡುದೇ ಸರಿ. ಕಳೆದ ವರುಷ ಸೆಕೆಗಾಲದ ರಜೆಯಲ್ಲಂತೂ ನೀವು ಮನೆಗೆ ಬರಲೇ ಇಲ್ಲ. ಬಿ.ಎ.ಗೆ ಕುಳಿತುಕೊಳ್ಳಲು ಸನ್ನಾಹವೆಂದಿರಿ. ಈ ಸಲ ರಜೆ ಸಿಕ್ಕಿ ೨–೩ ದಿನಗಳಾದುವು. ನನಗೆ, ನನ್ನ ಅತ್ತೆ ಮಾವಂದಿರಿಗಾಗುವ ದುಃಖಕ್ಕಿಂತಲೂ ಅಧಿಕ ದುಃಖವಾಗುತ್ತದೆ. ನೀವು, ನನ್ನ ತಂದೆಯವರು ಬರೆದ ಕಾಗದಕ್ಕೆ ಉತ್ತರವನ್ನೆ ಕೊಡುವುದಿಲ್ಲವೇಕೆ? ನನಗಂತೂ ನೀವು, ಈ ಇಡೀ ವರುಷದಲ್ಲಿ, ಒಮ್ಮೆಯೂ ಸರಿಯಾಗಿ ಪತ್ರವನ್ನು ಬರೆದುದಿಲ್ಲ ನೀವು ಹೀಗೆ ಮಾಡುವುದಾದರೂ ಏತಕ್ಕೆ?

ನನ್ನ ಮನಸ್ಸು ನಿಮ್ಮನ್ನು ಕಾಣದೆ ತಳಮಳಗೊಳ್ಳುತ್ತಿದೆ. ಈ ಕಾಗದ ತಲುಪಿದ ಕೂಡಲೇ ಹೊರಟುಬನ್ನಿರಿ. ಖರ್ಚಿಗೆ ನಿಮ್ಮ ಮಾವ ಹತ್ತು ರೂಪಾಯಿ ಕಳುಹಿಸುತ್ತಾರಂತೆ; ಪರೀಕ್ಷೆಯ ಫಲಿತಾಂಶವನ್ನು ತಂತಿ ಮೂಲಕ ತಿಳಿಸಿರಿ.

ಇಲ್ಲಿ ತೋರುವ ಮಟ್ಟಿಗೆ ಎಲ್ಲರೂ ಸೌಖ್ಯದಿಂದಿದ್ದಾರೆ. ಅಜ್ಜಿಗೆ ಶೀತ. ಅಕ್ಕನ ಮಗ ಕೇಶೂಗೆ ಪುಡಿಗಜ್ಜಿ ಎದ್ದಿದೆ.

ಇತೀ, ನಿಮ್ಮ ಹೆಂ–ಡ–ತಿ

ಸರಳಾ

........ನನ್ನ ಸಾಹಿತ್ಯ ಪ್ರೇರಣೆಯ ಸೂದಲ ಹೆಜ್ಜೆಗಳನ್ನು ಗುರುತಿಸಲು ಪ್ರಾಮಾಣಿಕ ಪ್ರಯತ್ನವನ್ನೇನೋ ಮಾಡಿದ್ದೇನೆ. ಪರಿಣಾಮ ನನಗೆ ತೃಪ್ತಿ ತಂದಿಲ್ಲ. ಇಂಥ ಹೊಣೆಯನ್ನು ಒಂದು ಕಂಪ್ಯೂಟರಿಗೆ ವಹಿಸುವ ದಿನ ಬೇಗನೆ ಬರಬಾರದೆ?

○ ಏಪ್ರಿಲ್ ೧೪ರ ರಾತ್ರಿ ಪ್ರಸಾರವಾದ ಬಾನುಲಿ ಭಾಷಣ. —೧೯೮೪

೮

ಈ ಪುಸ್ತಕ ಓದಿದ್ದೀರಾ ?

○ ನಾನು ವಿಮರ್ಶಕ ಎಂದು ಭಾವಿಸಿದ್ದ ಕಾಲ ಒಂದಿತ್ತು. ವಿಮರ್ಶಾ ದೃಷ್ಟಿ ಇದ್ದ ಮಾತ್ರಕ್ಕೆ ಯಾರೂ ವಿಮರ್ಶಕನಾಗುವುದಿಲ್ಲ. ಕಳೆದ ದಶಕದಲ್ಲಿ ವಿಮರ್ಶೆ ಕನ್ನಡದಲ್ಲಿ ಒಂದು ಪ್ರಮುಖ ಸಾಹಿತ್ಯ ಪ್ರಕಾರವಾಗಿ ಬೆಳೆದಿದೆ.

ವೈಜ್ಞಾನಿಕ ಅಡಿಗಟ್ಟಿನ ಮೇಲೆ ವಿಮರ್ಶೆಯ ಲಾಸ್ಯ ಎನ್ನಬಹುದೆ? ಬರೆಯುವವರ ಸಾಮರ್ಥ್ಯವನ್ನವಲಂಬಿಸಿ ಅದು ಕಲಾತ್ಮಕವಾಗಲೂ ಬಹುದು.

೧೯೫೦ರ ವರ್ಷಗಳ ತನಕ ಕನ್ನಡದಲ್ಲಿ ವಿಮರ್ಶೆ ಒಂದು ಕೃತಿಯ ಪರಿಚಯ ಎನ್ನುವಷ್ಟಕ್ಕೆ ಸೀಮಿತವಾಗಿತ್ತು? ಆ ದೃಷ್ಟಿಯಲ್ಲಿ ನಾನೂ ವಿಮರ್ಶಕ ಎನ್ನಿಸಿ ಕೊಂಡಿದ್ದೆ. ಆಗ ಬರೆದದ್ದರಲ್ಲಿ ಐದು ಇಲ್ಲಿವೆ.

ಇನ್ನೂ ಒಂದಷ್ಟಿವೆ. ಎಲ್ಲವನ್ನೂ 'ನಿರಂಜನ: ಮೂವತ್ತು ಸಂಪುಟಗಳಲ್ಲಿ' ಸರಣಿಯ ೧೫ನೆಯ ಸಂಪುಟದಲ್ಲಿ ಕಾಣುವಿರಿ.

ಮಾಲತಿಬಾಯಿಯವರ ಕೃತಿ 'ಜೋಕಾಲಿಯ ಮೇಲೆ'

ಗಂಡಸರಂತೆಯೇ ಕಥನ ನೈಪುಣ್ಯವನ್ನು ಸ್ತ್ರೀ ಲೇಖಿಕೆಯರು ಸಾಧಿಸುವುದೂ ಅದೇ ಶೈಲಿ ವಸ್ತುಗಳನ್ನು ಬಳಸುವುದೂ ಕಷ್ಟದ ಕೆಲಸವಲ್ಲ. ಆದರೆ ಸಮಾಜದ ಅರ್ಧ ಭಾಗವಾದ ಸ್ತ್ರೀಯರ ಬಾಳು-ಬದುಕಿನ ಕುರಿತು ಸ್ತ್ರೀಯೇ ಹೆಚ್ಚು ಸುಂದರವಾಗಿ ಪರಿಣಾಮಕಾರಿಯಾಗಿ ಬರೆಯಬಲ್ಲಳು. ಸ್ತ್ರೀಯರ ಸವಾಲು-ಆಹ್ವಾನವನ್ನು ಸ್ತ್ರೀ ಲೇಖಿಕೆಯೇ ಹೆಚ್ಚು ಸಮರ್ಥವಾಗಿ ಪ್ರತಿಬಿಂಬಿಸಬಲ್ಲಳು; ಪ್ರತಿಪಾದಿಸಬಲ್ಲಳು.

ಅಂಥ ಸಾಹಿತ್ಯ ಕನ್ನಡದಲ್ಲಿ ಸ್ತ್ರೀ ಲೇಖಿಕೆಯರಿಂದ ಬಂದಿರುವುದು ಬಲು ಕಡಿಮೆ. ಇತರ ಕೆಲವು ಭಾಷೆಗಳಲ್ಲಿ ಅಂಥ ಅಭಾವವಿಲ್ಲ; ತಮ್ಮದೇ ಆದ ವೈಶಿಷ್ಟ್ಯದಿಂದ ಲೇಖನಿ ಹಿರಿಯುವ ಲೇಖಿಕೆಯರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಮಹಾರಾಷ್ಟ್ರದಲ್ಲಿ ಮಾಲತಿಬಾಯಿ ಅಂಥ ಉದ್ದಾಮ ಸ್ತ್ರೀ ಸಾಹಿತಿ. ಅವರು ೧೯೩೩ರಲ್ಲಿ ಬರೆದ 'ಮೊಗ್ಗೆಗಳ ನಿಟ್ಟುಸಿರು', ೩೪ರಲ್ಲಿ ಬರೆದ 'ಜೋಕಾಲಿಯ ಮೇಲೆ', ೩೫ರಲ್ಲಿ ಬರೆದ 'ಕಾಣದ ಕನಸುಗಳು', ಈ ಕೃತಿಗಳೆಲ್ಲ, ಮರಾಠಿ ಸಾಹಿತ್ಯದಲ್ಲಿಯೇ ಹೊಸ ಅಧ್ಯಾಯ ತೆರೆದುವು. ಮಹಾರಾಷ್ಟ್ರದ ಸ್ತ್ರೀಯರ ಚಳವಳಿಯಲ್ಲೇ ಹೊಸ ಸ್ವರ ನುತಿಸಿದುವು.

'ಜೋಕಾಲಿಯ ಮೇಲೆ', ವಿಭಾವರೀ ಎಂಬ ಕಾವ್ಯನಾಮದಿಂದ ಪ್ರಖ್ಯಾತರಾಗಿರುವ ಮಾಲತಿಬಾಯಿಯವರ ಕಾದಂಬರಿಯ ಅನುವಾದ. ಓದಲು ತುಂಬ ತೊಡಕುತೊಡಕಾಗಿ ತೋರುವ ಕನ್ನಡ, ಮೂಲಗ್ರಂಥದ ಸೌಂದರ್ಯಕ್ಕೂ ಉದ್ದೇಶಕ್ಕೂ ಸ್ವಲ್ಪಮಟ್ಟಿಗೆ ಹಾನಿಯನ್ನುಂಟುಮಾಡಿದೆ. ಆದರೂ ಶ್ರಮಪಟ್ಟು ಓದಿದಾಗ, ನಮ್ಮ ಓದುಗರು, ಕಾದಂಬರಿಯ ವಸ್ತುವಿನ ಹೊಸತನಕ್ಕಾಗಿ ತಲೆದೂಗಬಹುದು.

ನಮ್ಮ ಸ್ತ್ರೀಯರೆಲ್ಲ ಸಾವಿತ್ರಿ ದಮಯಂತಿಯರಂತೆ ಬಾಳಬೇಕೆಂದು ಬೋಧಿಸುವುದು ಸುಲಭ. ಆದರೆ ಪಾಳೆಯಗಾರ ಸಮಾಜ ವ್ಯವಸ್ಥೆಯ ಕ್ರೂರ ವಾಸ್ತವತೆ ನಮ್ಮಿಂದ ಅಪೇಕ್ಷಿಸುತ್ತಿರುವ ಸತ್ವಪರೀಕ್ಷೆ ಯಾವುದು?

ಮಧ್ಯಮವರ್ಗದ ಅಚಲಾ ಮದುವೆಯಾದ ಮೇಲೆ, ರೌರವನರಕ ಅನುಭವಿಸಿದಳು. ಗಂಡ ಕುಡುಕನಾಗಿ, ವ್ಯಭಿಚಾರಿಯಾಗಿ, ಮೋಸಗಾರನಾಗಿ ತಲೆಮರೆಸಿಕೊಂಡು ಹೋದ; ಸೆರೆಮನೆ ಸೇರಿದ. ಎಲ್ಲ ಆಸೆಗಳೂ ಕಮರಿದ ದುಃಖಿನಿಯಾದಳು

ಅಚಲಾ. ಕೊನೆಗೆ ವಿದ್ಯಾಭ್ಯಾಸ ಮುಂದುವರಿಸಿ ಕಾಲೇಜಿನಿಂದ ಹೊರಬಿದ್ದಳು. ಉಪಾಧ್ಯಾಯಿನಿಯಾದಳು. ಆ ಹೊಸ ಜೀವನ ಆಕೆಯ ಮನಸ್ಸಿಗೆ ಸ್ವಲ್ಪ ನೆಮ್ಮದಿ ತಂದಿತು. ಆದರೆ ಜೀವನದಲ್ಲೇನೋ ಕೊರತೆ ಇದ್ದಂತೆ ಕಾಣುತಿತ್ತು ಆಕೆಗೆ. ಮನಸ್ಸು-ದೇಹ ಏನನ್ನೋ ಬಯಸುತ್ತಿದ್ದುವು....ಮಾನಸಿಕ ಹೊಯ್ದಾಟಗಳು.... ಸಮಸ್ಯೆ ಸವಾಲುಗಳು ಕೊನೆಗೆ ಪರಿಚಿತ ತರುಣ ವಕೀಲ ವಿರಾಗನಲ್ಲಿ ಆಕೆ ಅನುರಕ್ತಳಾಗುತ್ತಾಳೆ. ಅಂತೂ 'ಉಯ್ಯಾಲೆ' (ಜೋಕಾಲಿ) ಮೇಲೆ ತೂಗಾಡುತಿದ್ದ ಮನಸ್ಸು ಕೊನೆಯ ನಿರ್ಧಾರ ಮಾಡುತ್ತದೆ. 'ಸಮಾಜ'ದ ದೂಷಣೆಗೆ ಬೆದರದೆ ವಿವಾಹ ಬಾಹಿರವಾಗಿ ವಿರಾಗನೊಡನಿರಲು ಅಚಲಾ ನಿರ್ಧರಿಸುತ್ತಾಳೆ.

"ಮೂಲಭೂತ ಕಾಮ ಪ್ರವೃತ್ತಿಯೇ ಜೀವನದ ಚೈತನ್ಯದ ಮೂಲಸ್ವರೂಪ" ಎಂಬ ಫ್ರಾಯಿಡ್ ಬೋಧನೆ ಒಂದು ಕಾಲದಲ್ಲಿ ಪಾಶ್ಚಾತ್ಯ ಸಾಹಿತ್ಯದ ಮೇಲೆ ತುಂಬ ಪ್ರಭಾವ ಬೀರಿತು. ಹಾಗೆ ಪ್ರಭಾವಕ್ಕೊಳಗಾದ ಆಂಗ್ಲ ಲೇಖಿಕೆಯರಲ್ಲಿ ಎಥಿಲ್ ಮ್ಯಾನಿನ್ ಒಬ್ಬರು.ಈ ಸ್ತ್ರೀ ಸಾಹಿತಿಯ ವರ್ಚಸ್ಸು ಮಾಲತಿಯವರ ಮೇಲೆ ತುಂಬಾ ಬಿದ್ದಿರುವಂತೆ ಕಾಣುತ್ತಿದೆ. ಆದರೆ ಕಾಲದ ಮತ್ತು ವಿಚಾರದ ವಿಮರ್ಶೆಗೊಳಗಾದಾಗ ಫ್ರಾಯಿಡ್ ಬೋಧನೆಗಳ ಬಗೆಗೇ ವಿಧವಿಧದ ಶಂಕೆ ಉತ್ಪನ್ನವಾಗಿರುವುದನ್ನು ಕಂಡಿದ್ದೇವೆ. ಜೀವನ ಸಂಗಾತಿಯ ಹಂಬಲಕ್ಕೆ 'ಮೂಲಭೂತ ಕಾಮ ಪ್ರವೃತ್ತಿ'ಯೇ ಕಾರಣವೆನ್ನುವುದು ತಪ್ಪಾದೀತು. ಅಚಲೆ ತಾಯಿಯಾಗುವ ಹಂಬಲಕ್ಕಾಗಿಯೇ ವಿರಾಗನ ಸಂಬಂಧ ಬೆಳೆಸಿದಳೆನ್ನುವ ವಾದ ಅಪಹಾಸ್ಯಕ್ಕೀಡಾಗುವುದು.

ಇದು ಹೀಗಿದ್ದರೂ ಪತಿಯಿಂದ ಪರಿತ್ಯಕ್ತಳಾದ, ಅಚಲೆ ಅಂತರ್ಮುಖಿಯಾಗಿ ಆತ್ಮವಂಚನೆ ಮಾಡಿಕೊಳ್ಳದೆ, ಜೀವನದ ಜತೆಗಾರನಿಗಾಗಿ ಹಂಬಲಿಸಿದ್ದು ನ್ಯಾಯವಾಗಿದೆ. ಸಮಾಜದ ಪ್ರಗತಿಯನ್ನಪೇಕ್ಷಿಸುವವರು ಯಾರೂ ಅಚಲೆಯ ಆ ಹಕ್ಕನ್ನು ಅಲ್ಲಗಳೆಯಲಾರರು.

ಕಾದಂಬರಿ ಹೀಗೆ ಕೊನೆಗಾಣುತ್ತದೆ :

"ವಿರಾಗ ನಿಮ್ಮದು-ನನ್ನದು ಯಾರದೂ ಏನೂ ತಪ್ಪಿಲ್ಲ. ಆದರೇನು ಮಾಡಲಿ? ಈ ನನ್ನ ದೇಹಕೋಶದಲ್ಲಿ ತಲೆತಲಾಂತರದಿಂದ ಇಳಿದಿರುವ ಸಂಸ್ಕಾರಗಳೇ ನನ್ನನ್ನು ಕಟ್ಟಿಹಾಕಿ, ದಿಗ್ಮೂಢಳನ್ನಾಗಿಸಿ ಕೈಕಾಲುಗೆಡಿಸಿವೆ."

"ಅದರೊಳಗಿಂದ ಹೊರಗೆ ಬಾ."

"ಅದಕ್ಕಾಗಿಯೇ ಧಡಪಡಿಸುತ್ತಲಿದ್ದೇನೆ."

"ಇಂಥ ಬಿರುಗಾಳಿ-ಭೂಕಂಪಗಳ ಹೊಯ್ದಾಟದಲ್ಲಿ ಅಳುಕದೆ ಸಾಗಿ ನಡೆಯುವದೇ ಜೀವನ!"

....ಇದು ಕೆಚ್ಚು-ಎದೆಗಾರಿಕೆಯ ತತ್ವಬೋಧನೆಯೇ ಸರಿ.

ಹದಿನೆಂಟು ವರ್ಷಗಳ ಹಿಂದೆಯೇ ಮಹಾರಾಷ್ಟ್ರದಲ್ಲಿ ಈ ಪುಸ್ತಕ ಪ್ರಕಟವಾಯಿತೆಂಬ ಮಾತು, ಕನ್ನಡಿಗರನ್ನು ಸೋಜಿಗಕ್ಕೆ ಗುರಿ ಮಾಡಬಹುದು. ಆಗ

ಮಹಾರಾಷ್ಟ್ರದಲ್ಲಿ ‘ಜೋಕಾಲಿಯ ಮೇಲೆ’ ಕೋಲಾಹಲವನ್ನೇ ಉಂಟುಮಾಡಿತು. ಲೇಖಿಕೆ ‘ವಿಭಾವರಿ’ ಕಟುವಾದ ಖಂಡನೆಗೂ ಅತೀವ ಆದರಕ್ಕೂ ಪಾತ್ರರಾದರು. ಅವರ ಕೃತಿಗಳ ಕುರಿತು ಮುಂದೆ ಹಲವು ವರ್ಷ ನಡೆದ ಚರ್ಚೆಯ ಸಾಹಿತ್ಯ ೨,೦೦೦ ಪುಟಗಳನ್ನೂ ಮೀರುತ್ತದೆಂದಮೇಲೆ, ಮಹಾರಾಷ್ಟ್ರದ ಜನಜೀವನದಲ್ಲಿ ಆ ಸ್ತ್ರೀ ಲೇಖಿಕೆಗಿರುವ ಪ್ರಭಾವದ ಕಲ್ಪನೆಯಾದೀತು.

ಇಂಥ ವಿವಾದ ಯೋಗ್ಯವಾದ ಸಾಹಿತ್ಯದ ಕೃತಿಗಳು ಒಂದು ನಾಡಿನಾದ್ಯಂತ ಚರ್ಚೆಯಾಗದ ಹೊರತು, ಆ ನಾಡಿನ ಸಾಹಿತ್ಯ ಅಭಿವೃದ್ಧಿ ಹೊಂದದು.

ಅನುವಾದಕರಾದ ಡಿ.ಎಸ್. ಕುಲಕರ್ಣಿಯವರು ೨೬ ಪುಟಗಳ ಮುನ್ನುಡಿ ಬರೆದು, ಸಾಹಿತ್ಯ ಮತ್ತು ಜನಜೀವನದ ಬಗ್ಗೆ ತಾತ್ವಿಕ ಚರ್ಚೆ ನಡೆಸಿದ್ದಾರೆ. ಆದರೆ ಅವರ ಕನ್ನಡವನ್ನು ಅರ್ಥಮಾಡಿಕೊಳ್ಳುವುದೂ ಕಷ್ಟದ್ದಾಗಿದೆ. ತಾವೇ ಸ್ವತಂತ್ರವಾಗಿ ಬರೆದ ಆ ಅಂಶವನ್ನಾದರೂ ಸರಳವಾಗಿ ಬರೆದಿದ್ದರೆ, ನಾಲ್ಕು ಜನ ಅದನ್ನೋದಿ ಚರ್ಚೆ ನಡೆಸುವುದು ಸಾಧ್ಯವಾಗುತ್ತಿತ್ತು.

ನಮ್ಮ ಸಾಮಾಜಿಕ ಜೀವನದಲ್ಲೂ ಕೂಡಾ, ಅಲ್ಪಪ್ರಮಾಣದಲ್ಲಾದರೂ ವಿಚಾರಕ್ರಾಂತಿಯಾಗುತ್ತಿರುವ ಈ ಅವಧಿಯಲ್ಲಿ, ಇಂಥ ಕೃತಿಯೊಂದನ್ನು ಕನ್ನಡದಲ್ಲಿ ಅಚ್ಚುಹಾಕಿಸಿದ ಪ್ರಕಾಶಕರು ಅಭಿನಂದನೀಯರಾಗಿದ್ದಾರೆ.

ಜೋಕಾಲಿಯ ಮೇಲೆ

ಬರೆದವರು: ಶ್ರೀಮತಿ ಮಾಲತಿಬಾಯಿ ಬೇಡೇಕರ್; ಅನುವಾದಕರು: ಡಿ. ಎಸ್. ಕುಲಕರ್ಣಿ. ಪ್ರಕಾಶಕರು: ಉಷಾ ಸಾಹಿತ್ಯ ಮಾಲೆ, ಮೈಸೂರು. ಪು. ೧೮೧, ಬೆಲೆ: ರೂ. ૩-೮-೦,

—೧೧ ಮೇ, ೧೯೫೨

ಕನ್ನಡ ಕಾವ್ಯ 'ನಡೆದು ಬಂದ ದಾರಿ'

'ನಡೆದು ಬಂದ ದಾರಿ' ಎಂಬ ಪುಸ್ತಕವೊಂದು ಇತ್ತೀಚೆಗೆ ಪ್ರಕಟವಾಗಿದೆ. ಇದು ತರುಣ ಕವಿಯಾದ ಎಂ. ಗೋಪಾಲಕೃಷ್ಣ ಅಡಿಗರ ೪೭ ಕವನಗಳ ಸಂಗ್ರಹ.

'ಭಾವತರಂಗ'ದಿಂದ ಆರಂಭವಾಗಿ, ಅದರಿಂದ ಚೇತರಿಸಿಕೊಂಡದ್ದು, 'ಕಟ್ಟು ವೆವು ನಾವ್ !' ಎಂದು ಘೋಷಿಸಿದ ಅಡಿಗರು, ಕಳೆದ ಒಂದು ದಶಕದಲ್ಲಿ ಒಳ್ಳೆಯ ಹಲವು ಕವಿತೆಗಳನ್ನು ಬರೆದ, ಹೊಸ ಪೀಳಿಗೆಯ ಅಗ್ರಶ್ರೇಣಿಯ ಕೆಲವೇ ಯುವಕವಿ ಗಳಲ್ಲಿ ಒಬ್ಬರು.

ಈ ಸಂಗ್ರಹಕ್ಕೆ ಒಂದು ಮಹತ್ವದ ಮುನ್ನುಡಿಯನ್ನು ಕವಿ ಬರೆದಿದ್ದಾರೆ. ಪ್ರಗತಿಶೀಲ ಲೇಖಕರ ಚಳವಳಿ ಆರಂಭವಾದಂದಿನಿಂದ ಕನ್ನಡ ಕಾವ್ಯದ ಬಗ್ಗೆ ಕೇಳಿ ಬಂದ ಧ್ವನಿಗೆ ರೂಪುಗೊಡಲು ಅವರು ಯತ್ನಿಸಿದ್ದಾರೆ.

ಅವರು ಹೇಳಿರುವಂತೆ—'ಆಧುನಿಕ ಕನ್ನಡ ಕಾವ್ಯದಲ್ಲಿ ಒಂದು ಘಟ್ಟ ಕಳೆದು ಈಗ ಇನ್ನೊಂದು ಘಟ್ಟ ಮೊದಲಾಗುತ್ತಿದೆ....ಸ್ವಾತಂತ್ರ್ಯ ಸಂಗ್ರಾಮದ ಉತ್ಸಾಹ ಉದ್ವೇಗ ಆದರ್ಶಪರವಶತೆಯ ಹಾರಾಟ ಮುಗಿದು ಈಗ ನಮ್ಮ ಮನಸ್ಸು ಮತ್ತೆ ನೆಲಕ್ಕಿಳಿದಿದೆ....ಹೊಸ ಆದರ್ಶಕ್ಕಾಗಿ ಹೊಸ ಕನಸಿಗಾಗಿ ದೇಶದ ಮನಸ್ಸು ಹಸಿದು ಹಾಯುತ್ತಿದೆ....ಗಾಂಧಿಯುಗದಲ್ಲಿ ಬರೆದ ರೀತಿಯಲ್ಲೇ ಇನ್ನೂ ಬರೆದರೆ ಬಹುಶಃ ಅದು ಕಾವ್ಯಾಭಾಸವಾಗುತ್ತದೆ, ಇಲ್ಲವೆ ಸತ್ವಹೀನ ಕಾವ್ಯವಾಗುತ್ತದೆ : ಚರ್ವಿತ ಚರ್ವಣವಾಗುತ್ತದೆ........

"....ಆಂಗ್ಲ ರೊಮಾಂಟಿಕ್ ಕವಿಗಳಿಂದ ಪ್ರೇರಿತವಾದ ನಮ್ಮ ಆಧುನಿಕ ಕಾವ್ಯ ಆ ಸಂಪ್ರದಾಯದಲ್ಲಿ ತಾನು ಮಾಡಬಹುದಾದಷ್ಟು ಕೆಲಸವನ್ನು ಮಾಡಿಮುಗಿಸಿದೆ.... ಕಾವ್ಯಕ್ಕೆ ಮತ್ತೆ ವಾಸ್ತವದ ರಕ್ತದಾನ ನಡೆಯಬೇಕು. ಕಾವ್ಯದಲ್ಲಿ ಮತ್ತೆ ಮಣ್ಣಿನ ವಾಸನೆ ಹೊಡೆಯಬೇಕು"

ಈ ಮಾತುಗಳು ತುಂಬ ಗಮನಾರ್ಹವಾಗಿವೆ.

ಆದರೆ, "ಆಧುನಿಕ ಇಂಗ್ಲಿಷ್ ಕಾವ್ಯದ ಪ್ರಸಿದ್ಧ ಕವಿಗಳಾದ ಈಲಿಯಟ್, ಆಡೆನ್ ಮುಂತಾದವರಿಂದ ನಾವು ಇನ್ನುಮುಂದೆ ಸ್ಫೂರ್ತಿಪಡೆಯಬೇಕಾದ್ದು

ಅಗತ್ಯ", ಎಂಬ ಅವರ ಹೇಳಿಕೆ ಮಾತ್ರ ಹಲವರಿಗೆ ಸೋಜಿಗದ್ದಾಗಿ ತೋರದೆ ಇರಲಾರದು.

ಈಲಿಯಟ್ ಶಕ್ಕು-ಮಾನವೀಯವಾದಿ. ಮಧ್ಯಯುಗೀನ ಮೂಢ ಧಾರ್ಮಿಕತೆಗೆ ಜನರನ್ನೆಳೆಯುವುದೇ ಅವನ ಗುರಿ. ಆಂಗ್ಲ ಅರಸೊತ್ತಿಗೆಯ ಸಮರ್ಥಕ ಆತ. ಶ್ರೀಮಂತ ಕುಟುಂಬಗಳಿಂದಲೇ ಸಂಸ್ಕೃತಿ ತೊಟ್ಟಿಕ್ಕುತ್ತದೆಂದು ಅವನ ಅಭಿಪ್ರಾಯ. ರಾಜಕೀಯದಲ್ಲಿ ಫ್ಯಾಸಿಸಂ ಕೂಡಾ ಅವನಿಗೆ ಆಕರ್ಷಕವಾಗಿತ್ತು. ಪ್ರಜಾಪ್ರಭುತ್ವದ ನಿಜವಾದ ರೂಪದ ಬಗ್ಗೆ ಈಗಲೂ ಅವನಿಗೆ ತಾತ್ಸಾರವಿದೆ. ಇದು ಅವನ ಜೀವನ ತತ್ವಜ್ಞಾನ. ಆಡೆನ್ ಕೂಡ ಅದೇ ಮತದವನು. ಇಂಥವರಿಂದ ಪ್ರಗತಿಶೀಲರೆನ್ನಿಸಿಕೊಳ್ಳುವರು ಏನು ಸ್ಫೂರ್ತಿ ಪಡೆಯುವರು? ಈಲಿಯಟ್‌ನ ನವೀನ ತಂತ್ರಕೌಶಲ್ಯದ ಬಗೆಗೆ ಮಾತ್ರ ಈ ಮಾತಾದರೆ, ಆ ಹೊಗಳಿಕೆಯನ್ನು ಅರ್ಥಮಾಡಿಕೊಳ್ಳಬಹುದು.

ಆದರೂ "ನಮ್ಮ ಹೊಸ ಕವಿತೆ ಆ ಇಂಗ್ಲಿಷ್ ಕವಿಗಳ ಕಾವ್ಯದಂತೆಯೇ ರೂಪುಗೊಳ್ಳಲಾರದು. ಆ ಕವಿಗಳ ಅಂಧಾನುಕರಣೆಯಿಂದ ಹೊಸತನ ಬಂದೀತು, ಆದರೆ ಅದು ಕಾವ್ಯವಾಗಲಾರದು. ನಮ್ಮ ಹೊಸ ಕಾವ್ಯ ನಮ್ಮ ನಾಡಿನ ಹೊಸ ವಾತಾವರಣಕ್ಕೂ ನಮ್ಮ ಜನಜೀವನಕ್ಕೂ ನಮ್ಮ ಹೊಸ ಭಾಷೆಯ ಪರಿಪಾಕದ ಪರಿಮಿತಿಗೂ ಒಳಪಟ್ಟದೆ ಎಂಬುದನ್ನು ನಾವು ಎಂದೂ ಮರೆಯತಕ್ಕದಲ್ಲ" ಎಂದು ಅಡಿಗರೇ ಕೊಟ್ಟರುವ ಎಚ್ಚರಿಕೆಯಿಂದ ಸ್ವಲ್ಪ ಸಮಾಧಾನಪಟ್ಟುಕೊಳ್ಳಬಹುದು.

ಇಂತಹ ಮುನ್ನುಡಿಯಿರುವ ಸಂಗ್ರಹದಲ್ಲಿ, ಆ ಹೊಸ ಪ್ರತಿಪಾದನೆಯ ಕೃತಿಗಳನ್ನೇ ಓದುಗರು ಅಪೇಕ್ಷಿಸುವುದು ತಪ್ಪಲ್ಲ. ಆದರೆ ಸಂಗ್ರಹ ಓದುಗರಿಗೆ ನಿರಾಸೆಯನ್ನುಂಟುಮಾಡುತ್ತದೆ. ಇತರ ಯುವಕ ಕವಿಗಳ ಜತೆಯಲ್ಲಿ ಅಡಿಗರು ಮೊಳಗಿಸಿರುವುದು ಹಾದಿಕವಲೊಡೆಯುವ ಘೋಷ, ಅದನ್ನು ಸೂಚಿಸುವ ಶಿರೋನಾಮೆಯೂ ಅದನ್ನು ಸಾರುವ ಕವಿತೆಗಳೂ ಸಂಗ್ರಹದಲ್ಲಿರುತ್ತಿದ್ದರೆ, ಕನ್ನಡದ ಆಧುನಿಕ ಸಾಹಿತ್ಯ ಸೃಷ್ಟಿಗೆ ಅಡಿಗರು ದೊಡ್ಡ ಕಾಣಿಕೆ ಕೊಟ್ಟಂತಾಗುತ್ತಿತ್ತು.

ಈಗಿರುವ ಸಂಗ್ರಹದಲ್ಲಿ ಅಡಿಗರು ಹೆಚ್ಚಿನಂಶ ತೋರಿರುವುದು ತಾವು ನಡೆದು ಬಂದ ದಾರಿಯನ್ನು. ೧೩ರಿಂದ ೩೨ರ ವರೆಗಿನ ಕವಿತೆಗಳೆಲ್ಲ ಪ್ರಣಯಕ್ಕೆ ಸಂಬಂಧಪಟ್ಟವೆ. ಅಡಿಗರೇ ಒಪ್ಪಿರುವಂತೆ ಅವು ಹಳೆಯ ಕವಿತೆಗಳು. ಅದನ್ನು ನೆನಪಿಟ್ಟು, "ಅವುಗಳಲ್ಲಿ ಕಾಣಬಹುದಾದ ಅಪ್ರಬುದ್ಧ ಭಾವಾತಿರೇಕವನ್ನು ವಿವೇಚಿಸಬೇಕು" ಎಂದು ಅಡಿಗರೇ ವಿನಂತಿ ಮಾಡಿದ್ದಾರೆ. "ಇಲ್ಲಿನ ಕವನಗಳಲ್ಲಿ ಹೆಚ್ಚಿನವು ಹಳೆಯ ಕಾವ್ಯಮಾರ್ಗದಲ್ಲೇ ಬರುವಂಥವು" ಎಂದೂ ಅವರು ಹೇಳಿದ್ದಾರೆ.

'ಓ ನನ್ನ ಜನವೇ' ಮತ್ತಿತರ ಕೆಲ ಹಾಡುಗಳು ಹೊಸ ಕಹಳೆಯನ್ನೂದಿವೆ, ಪುಷ್ಪ ಕವಿಯ ಪರಾಕು, ಕವಿತೆಯಲ್ಲಿ ಒಂದು ಪರಂಪರೆಗೆದುರು ಬಂಡಾಯವೇಳುವ ಬಿಸುಸುಯ್ಲು ಕೇಳಿಸಿದ್ದರೆ ಅದಕ್ಕೆ ಘನತೆ ಬರುತ್ತಿತ್ತು. ಈಗ ಅದು ಹಗುರವಾದ ಅಣಕ ಗೀತವಾಗಿದೆ. ಮೂರು ಭಾಗಗಳಲ್ಲಿರುವ 'ಇಂದು ನಮ್ಮೀ ನಾಡು', ಅಡಿಗರ

ಇತ್ತೀಚೆಗಿನ ಕವನಗಳಲ್ಲಿ ಬಲುಮುಖ್ಯವಾದದು. ಇಲ್ಲಿ ರೂಪಕಗಳನ್ನಿರಿಸಿಕೊಂಡು ಹೊಸ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ.

ಈ ತಂತ್ರವನ್ನೇ ಇನ್ನೂ ಬಿಗಿಯಾಗಿ ಬಳಸಿದರೆ ಅಡಿಗರ ಕವಿತೆಗಳು ಜನ ಸಾಮಾನ್ಯರಿಗೆ ಅರ್ಥವಾಗದೇ ಹೋಗುವ ಸಂಭವವುಂಟು. ಒಂದು ಕಾವ್ಯವನ್ನು ಹತ್ತುಬಾರಿ ನೂರುಬಾರಿ ಓದಿ ಶ್ರಮಪಟ್ಟು ಅರ್ಥಮಾಡಿಕೊಳ್ಳಬೇಕೆಂಬ ಆಗ್ರಹ ವನ್ನು ಕಂಡು ಜನರು ಬೇಸರ ಪಡುವುದು ಸ್ವಾಭಾವಿಕ.

'ಇಂದು ನಮ್ಮ ನಾಡು' ಕವಿತೆಯ ಮೂರನೆಯ ಭಾಗವನ್ನು ಕಳೆದ ಚುನಾ ವಣೆಯಲ್ಲಿ ಕರ್ನಾಟಕದ ಒಂದು ಭಾಗದಲ್ಲಿ ಕೆ.ಎಂ.ಪಿ. ಪಕ್ಷದವರು ಸಾವಿರ ಸಾವಿರ ವಾಗಿ ಮುದ್ರಿಸಿ, ಕಾಂಗ್ರೆಸ್ಸಿಗೆದಿರಾದ ಪ್ರಚಾರವೆಂದು ಹಂಚಿದರು. ಅದರಲ್ಲಿ ಕವಿ, ಸರಳ ತಂತ್ರವನ್ನು ಬಳಸಿರುತ್ತಿದ್ದರೆ, ಶಸ್ತ್ರದಷ್ಟೇ ತೀಕ್ಷ್ಣವಾದ ಪರಿಣಾಮಕಾರಿ ಯಾದ ಸಾಧನವಾಗುತ್ತಿತ್ತು ಆ ಕವಿತೆ.

ಹೊಸ ತಂತ್ರಗಳನ್ನು ಹುಡುಕುವ ಯತ್ನದಲ್ಲಿ, ನಮ್ಮ ನೆಲಕ್ಕೆ ಮಣ್ಣಿಗೆ ಜನತೆಗೆ ಬಲು ಪ್ರಿಯವಾದ ಜನಪದ ಗೀತೆಗಳ ಧಾಟಿ ತಂತ್ರಗಳನ್ನು ಯಾವನೂ ಕಡೆಗಣಿಸುವುದು ಸಾಧ್ಯವಿಲ್ಲ. ನಾವು ಬೆಳೆಸಿಕೊಂಡು ಬಂದಿರುವ ಅಮೂಲ್ಯವಾದ ಆ ಸಾಹಿತ್ಯ ಸಂಪತ್ತಿಯನ್ನು ಬಿಟ್ಟು ಪೂರ್ಣ ಭಿನ್ನವಾದ ಅಧ್ಯಾಯವನ್ನು ಬರೆಯ ಹೊರಡುವುದು ಯಶಸ್ವಿಯಾಗಲಾರದು.

ನವೋದಯ ಕಾಲಾವಧಿಯ ಕನ್ನಡ ಕವಿತೆಗಳು ಸ್ವರೂಪ-ಭಾಷೆ-ತಂತ್ರ ವಿಧಾನಗಳಿಗೆ ಸಂಬಂಧಿಸಿ ಎಷ್ಟೋ ಸಂಪತ್ತನ್ನು ನಮಗೆ ಒದಗಿಸಿಕೊಟ್ಟಿದೆ. ಹೊಸ ಪೀಳಿಗೆಯ ಕನ್ನಡ ಕವಿಗಳು ಆ ಸಂಪತ್ತಿಗೂ ನಿಜವಾದ ವಾರಸುದಾರರು. ಹೀಗೆ ಶ್ರೀಮಂತರಾಗಿರುವ ನಮ್ಮ ಕವಿಗಳು ಹೊಸ ವಿಚಾರಗಳ ಹೊನಲನ್ನು ಹರಿಸುವ ಶುಭ ಚಿಹ್ನೆಗಳು ಈಗ ಹೆಚ್ಚು ಹೆಚ್ಚಾಗಿ ಕಾಣುತ್ತಿವೆ.

ಕನ್ನಡ ಓದುಗರಿಂದ ಮುಖ್ಯವಾಗಿ ಲೇಖಕರಿಂದ-ಕವಿಗಳಿಂದ, 'ನಡೆದು ಬಂದ ದಾರಿ'ಯ ಬಗ್ಗೆ ಪ್ರಯೋಜನಕಾರಿಯಾದ ಚರ್ಚೆ ನಡೆಯಲೆಂಬುದೇ ನಮ್ಮ ಹಾರೈಕೆ.

ನಡೆದು ಬಂದ ದಾರಿ ಕವನ ಸಂಕಲನ

ಕರ್ತೃ: ಎಂ. ಗೋಪಾಲಕೃಷ್ಣ ಅಡಿಗ, ಪ್ರಕಾಶಕರು: ಉಷಾ ಸಾಹಿತ್ಯ ಮಾಲೆ, ಮೈಸೂರು, ಪುಟ: ೧೦೫, ಬೆಲೆ: ರೂ. ೧-೫೦.

೨೨ ಜೂನ್, ೧೯೫೨

ಕಟ್ಟೀಮನಿಯವರ 'ಮಣ್ಣು ಮತ್ತು ಹೆಣ್ಣು'

ಬಸವರಾಜ ಕಟ್ಟೀಮನಿಯವರ ಸಮರ್ಥ ಲೇಖನಿಯಿಂದ ಹೊರಬಿದ್ದಿರುವ ಇನ್ನೊಂದು ಕಾದಂಬರಿಯಾದ 'ಮಣ್ಣು ಮತ್ತು ಹೆಣ್ಣು' ಹಲವು ಕಾರಣಗಳಿಗಾಗಿ ಕನ್ನಡ ಕಾದಂಬರಿಗಳ ಪ್ರಥಮ ಸಾಲಿನಲ್ಲಿ ಸ್ಥಾನ ಪಡೆಯಲು ಅರ್ಹವಾಗಿದೆ.

ಈ ಕಾದಂಬರಿಯಲ್ಲಿ ಚಿತ್ರಿತವಾಗಿರುವುದು ಉತ್ತರ ಕರ್ನಾಟಕದ ಹಳ್ಳಿಗಾಡಿನ ಜೀವನ. ಆದರೆ ಈ ಕತೆ ಯಾವುದೇ ನಿರ್ದಿಷ್ಟ ಹಳ್ಳಿಗೆ ಸಂಬಂಧಿಸಿದ್ದಲ್ಲ. ಇದು ಭಾರತದ ಹಿಂದುಳಿದಿರುವ ಎಲ್ಲ ಹಳ್ಳಿಗಳಿಗೂ ಅನ್ವಯಿಸುವ ಕತೆ. ಈ ಸರ್ವ ವ್ಯಾಪಕ ಸ್ವರೂಪವೇ ಕಾದಂಬರಿಯ ಮುಖ್ಯ ಗುಣಗಳಲ್ಲೊಂದು.

ಭೀಮಪ್ಪ ಹೊಲ ಕಳೆದುಕೊಂಡು ಹೆಂಡತಿಯನ್ನು ಸಾಯಸಿ ಅವಳ ಹಣ ದೋಚುತ್ತಾನೆ. ವಿರೂಪಗೊಂಡ ಅವನ ಮನಸ್ಸು ಪ್ರತೀಕಾರ ಮಾಡಲು ಅತ್ತಿತ್ತ ನುಗ್ಗುತ್ತದೆ. ಆ ಹಳ್ಳಿಗಳಲ್ಲಿ ಎರಡು ಬಣಗಳಿವೆ. ಹೆಚ್ಚಿನ ಹಳ್ಳಿಗಳಲ್ಲಿ ಇರುವ ಹಾಗೆ. ಆ ಎರಡು ಬಣಗಳಲ್ಲೂ ಪೈಲ್ವಾನರಿದ್ದಾರೆ. ಭೀಮಪ್ಪ ಕಾಮಣ್ಣನ ಬಣದವನು. ಕಳ್ಳಬಟ್ಟಿ ಇಳಿಸಿ ಸೆರೆ ತಯಾರಿಸುವ ಕೊಳ್ಳದ ಪ್ರಮುಖನಾದ ಕಾಮಣ್ಣ ಭೀಮಪ್ಪನ ಕೈಗೆ ಬಂದ ಮೂರು ಸಾವಿರ ರೂಪಾಯಿ ಸುಲಿಯಲು ಯತ್ನಿಸುತ್ತಾನೆ. ಇನ್ನೊಂದು ಬಣದ ಪ್ರಮುಖರು ದೇವತೆಗಳೇನೂ ಅಲ್ಲ. ಭೀಮಪ್ಪನಿಂದ ಧರ್ಮಣ್ಣ ವಶಪಡಿಸಿಕೊಂಡ ಹೊಲದಲ್ಲಿ ದುಡಿಯಲು ಬಂದ ಗಿರಿಯು, ಆ ಬಣದ ಮುಖ್ಯಸ್ಥರ ಸುಲಿಗೆಗೆ ಒಳಗಾಗುತ್ತಾನೆ. ಹೊಡೆತ – ಬಡೆತ – ಕ್ರಿಮಿನಲ್ ವಕೀಲರು – ನಷ್ಟ ಸಂಕಷ್ಟ ಎಲ್ಲವೂ ಆದಮೇಲೆ ಆ ಕತೆಗೆ ಮುಕ್ತಾಯ ದೊರೆಯುವ :

"ತಲೆಯ ಮೇಲೆ ಬುಟ್ಟಿಗಳನ್ನಿಟ್ಟುಕೊಂಡು, ಹೆಗಲ ಮೇಲೆ ಕೌದಿ ಕಂಬಳಿಗಳನ್ನು ಹಾಕಿಕೊಂಡು, ಕೈಗಳಲ್ಲಿ ಕೋಲು ಹಿಡಿದುಕೊಂಡು ಹೊರಟಿದ್ದ ಆ ಎರಡು ವ್ಯಕ್ತಿಗಳ ಆಕೃತಿಗಳು ನಿಧಾನವಾಗಿ ಮುಂದೆ ಮುಂದೆ ಸಾಗಿ ಕತ್ತಲೆಯಲ್ಲಿ ಕರಗಿ ಹೋದುವು...."

ಹಾಗೆ ಹಳ್ಳಿಬಿಟ್ಟು ಪರದೇಶಿಗಳಾಗಿ ಹೋದವರು ವಯಸ್ಸಾದ ಭೀಮಪ್ಪ ಮತ್ತು ಅವನ ವಯಸ್ಸಾದ ಹೆಂಡತಿ ಸಿದ್ದಿ.

ವಾಸ್ತವವಾಗಿ ಇದು ಮಣ್ಣಿನ-ಹೊಲದ-ಕತೆ. ಆದರೆ ಹೆಣ್ಣು ಬಾಲಿ ಈ ಜೀವನದಲ್ಲಿ ಮೈವೆತ್ತು ಎದ್ದು, ಕಾದಂಬರಿಯನ್ನು ರಸಮಯಗೊಳಿಸಿದ್ದಾಳೆ.

ತನ್ನನ್ನು ಪ್ರೀತಿಸಿದ ಗಂಡನನ್ನು ಬಿಟ್ಟು ಚಾಲಿ ಸ್ವಲ್ಪಕಾಲ ಬೇರೆ ಗಂಡಸನೊಡನೆ ಮಲಗಿದಳು. ಅವಳ ತಾಯಿಗೆ ಆ ಬದುಕೇ ಬೇಕಾಗಿತ್ತು. ಆದರೂ ಚಾಲಿ ದುಡಿದು ಸಂಪಾದಿಸಿ ಸ್ವತಂತ್ರಳಾಗಲು, ತಾನು ಮೆಚ್ಚಿದ ಗಿರಿಯನನ್ನು ಉಡುಕಿ ಮಾಡಿ ಕೊಳ್ಳಲು ಬಯಸಿದಳು. ಒಳ್ಳೆಯ ಮಾನವಳಾಗಲು ಯತ್ನಿಸಿದಳು.

ಹೀಗೆ ಹಿಂದುಳಿದ ಹಳ್ಳಿಗಾಡಿನ ಗೋಳು ನರಳಾಟಗಳ ಆಸೆ ಹೋರಾಟಗಳ ವರ್ಣರಂಜಿತ ಚಿತ್ರ ಇಲ್ಲಿದೆ. ಆದರೆ ಇದು ಹಿಂದುಳಿದ ಹಳ್ಳಿಗಾಡಿನ ಚಿತ್ರ. ಕಟ್ಟೀಮನಿಯವರ ಇತರ ಕೆಲವು ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ 'ಜನಪಥ'ದ ಸಂಪಾದಕ ಹರಿಹರ—

"ನಿಮ್ಮ ಕಾಲ ಮೇಲೆ ನೀವು ನಿಲ್ಲಲು ಕಲಿಯಬೇಕಪ್ಪ. ತಾ ಬಲ, ಜಗ ಬಲ. ನೀವು ರೈತರು, ಬಡವರು ಎಲ್ಲಾ ಒಂದಾಗಬೇಕು; ಸಂಘ ಕಟ್ಟಿಕೊಳ್ಳಬೇಕು. ನಿಮ್ಮನ್ನು ಸುಲಿಯುವವರನ್ನು ಎದುರಿಸಿ ನಿಂತು ಹೋರಾಡಬೇಕು."

—ಎನ್ನುತ್ತಾನಾದರೂ ಈ ಕಾದಂಬರಿಯಲ್ಲಿ ರೈತ ವ್ಯಕ್ತಿಗಳೆಲ್ಲ ವಿಷಚಕ್ರ ದೊಳಗೇ ಸುತ್ತಾಡುವವರು. ತಾವು ಯಾಕೆ ಹೀಗಿದ್ದೇವೆಂದು ತಿಳಿದವರಲ್ಲ. ಮುಂದಿನ ಹಾದಿ ಅವರಿಗೆ ಕಾಣಿಸದು. ಕತ್ತಲೆಯಲ್ಲಿ ಕರಗಿ ಹೋಗುವುದೇ ಅವರ ಭವಿತವ್ಯ.

ಈಗಿನ ಅಸಹನೀಯ ಬಾಳ್ವೆಯ ಬಗ್ಗೆ ಬೇರೆ ಬೇರೆ ವ್ಯಕ್ತಿಗಳಿಂದ ಉದ್ಗಾರ ಗಳು ಹೊರಬೀಳುತ್ತವೆ. ಕಟ್ಟೀಮನಿಯವರ ಅಮರ ಸೃಷ್ಟಿಯಾದ 'ಯಸನೋವಪ್ಪ' (ಎಸ್-ನೋ ಎಂದಷ್ಟೇ ಇಂಗ್ಲಿಷ್ ಮಾತಾಡಬಲ್ಲವನು, ಮಿಲಿಟರಿಯಿಂದ ಡಿಬಾರ್ ಆದವನು) ಕಳ್ಳಸೆರೆ ತಯಾರಿಗೆ ತೊಡಗುತ್ತಾನೆ. ಬಂಧಿತನಾದಾಗ ಅಧಿಕಾರಿಯ ಪ್ರಶ್ನೆಗೆ ಆತ ಉತ್ತರವೀಯುತ್ತಾನೆ:

"ಎಲ್ಲದಾವ ಉದ್ಯೋಗ? ಏನು ಮಾಡೂದು? ಮಿಲಿಟರಿಯೊಳಗ ದುಡಿದು ದುಡಿದು ಏನೋ ಹೆಂಗೋ ಬದುಕಿ ಬಂದೀವಿ ನಾವು. ನಮಗಾಗಿ ಏನು ಮಾಡೀರಿ ನೀವು?....ಹೊಲ ಅಂತ! ದುಡಿಯಾಕೆ ಹೊಲ ಎಲ್ಲೈತಿ? ಹಳ್ಳಿಯೊಳಗ ಎಂಥಾ ಪರಸಂಗ ಐತಿ ಅನ್ನೋದು ಪಟ್ಟಣದಾಗ ಇರುವ ನಿಮಗ ಹೆಂಗ ತಿಳಿದೀತು ಸಾಹೇಬರ!"

—ಸ್ವಾತಂತ್ರ್ಯ ಪ್ರಜಾಪ್ರಭುತ್ವವೆಂದೆಲ್ಲ ಮಾತನಾಡುತ್ತ ಪಟ್ಟಣಗಳಲ್ಲಿ ಕಾಲ ಕಳೆಯುವವರನ್ನೆಲ್ಲ ಉದ್ದೇಶಿಸಿ ಯಸನೋವಪ್ಪ ಹೀಗೆ ಮಾತನಾಡಿದನೇನೋ ಎನಿಸುತ್ತದೆ.

ಈಗಿನ ಭೂವ್ಯವಸ್ಥೆ ತಿರುವುಮುರುವಾಗಿ ಏರ್ಪಾಟಾಗಿರುವ ಮದ್ಯಪಾನ ನಿಷೇಧ, ವಿಷಮದಾಂಪತ್ಯ, ಅದೆಲ್ಲವನ್ನೂ ಈ ಕೃತಿ ಒಳಗೊಂಡಿದೆ. ಪಾತ್ರಗಳು ಕ್ರಮಕ್ರಮವಾಗಿ ಬೆಳೆದು ಪುಷ್ಟವಾಗಿ ರೂಪುಗೊಂಡು, ಕತೆಯ ಘಟನೆಗಳನ್ನು ಜೀವಂತಗೊಳಿಸುತ್ತವೆ. ಹಳ್ಳಿಗರೊಳಗಿನ ಜಗಳದಿಂದಲೇ ಬದುಕುವ ಲಾಯರು

ಗಳು ಇಲ್ಲಿದ್ದಾರೆ. ಈ ಸಂಬಂಧದಲ್ಲಿ ಯಾರನ್ನಾದರೂ ಚಿತ್ರಿಸಲು ಕಾದಂಬರಿಕಾರರು ಮರೆತಿದ್ದರೆ, ಆತ ಸಾಲ ಕೊಡುವ ದಳ್ಳಾಳಿ ಮಾತ್ರ. ಹಾಗೆಯೇ ವಿಧಿವಾದದಲ್ಲಿ ರೈತರಿಗಿರುವ ಅಚಲ ನಂಬುಗೆಯೂ ಸ್ಪಷ್ಟವಾಗಿ ಇಲ್ಲಿ ಚಿತ್ರಿತವಾಗಿಲ್ಲ.

'ಹೆಣ್ಣು ಮತ್ತು ಮಣ್ಣು' ವಾಸ್ತವವಾದದ ಪರಂಪರೆಯನ್ನು ಅನುಸರಿಸಿರುವ ಕಾದಂಬರಿ. ಆದರೆ ಜೀವನದ ಮುನ್ನಡೆಗೆ ಸಾಹಿತ್ಯದಲ್ಲಿ ಅವಶ್ಯವಾದ ವಾಸ್ತವವಾದಕ್ಕೂ ವಾಸ್ತವತೆಯನ್ನು ವಿಕೃತಗೊಳಿಸಬಲ್ಲ ನಿಸರ್ಗವಾದಕ್ಕೂ ಹೆಚ್ಚಿನ ಅಂತರವಿಲ್ಲ. ದೃಷ್ಟಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಸಾಕು, ನಿಸರ್ಗವಾದ ಆಕರ್ಷಣೀಯವಾದ ರೀತಿಯಲ್ಲಿ ಹೆಡೆಯಾಡಿಸುತ್ತ ಬರುವುದು. ರೂಢಮೂಲವಾಗಿದ್ದ ಕೆಲವು ಅರ್ಥಹೀನ ಸಂಪ್ರದಾಯಗಳಿಗೆ ಇದಿರಾಗಿ ನಿಸರ್ಗವಾದವು ಬಂಡಾಯವೆಂದು ತೋರಿಬಂದರೂ ನಿಜವಾಗಿ ಅದು ಒಳ್ಳೆಯ ಪ್ರವೃತ್ತಿಯಲ್ಲವೆಂದು ಮಾನವವಾದಿಗಳೆಲ್ಲ ಒಪ್ಪಿದ್ದಾರೆ. ಸ್ವತಃ ಮಾನವವಾದಿಯಾದ ಕಟ್ಟೀಮನಿಯವರು ಕೃತಿಯ ಹೆಚ್ಚಿನ ಭಾಗಗಳಲ್ಲಿ ಹಿರಿಯ ಮಟ್ಟವನ್ನು ಇರಿಸಿಕೊಂಡಿದ್ದರೂ ಅಲ್ಲೊಮ್ಮೆ ಇಲ್ಲೊಮ್ಮೆ ಅವರ ದೃಷ್ಟಿಯ ತಕ್ಕಡಿ ತೂಕ ತಪ್ಪಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ.

ಅದು ಹಾಗಿದ್ದರೂ ಸಮಗ್ರವಾಗಿ ನೋಡಿದಾಗ ಈ ಕಾದಂಬರಿ, ವಾಸ್ತವವಾದಿಯಾದ ಕತೆಗಾರ ಮಾನವೀಯ ದೃಷ್ಟಿಗಾಗಿ, ಸಜೀವ ಸಂಭಾಷಣೆಗಳಿಗಾಗಿ ಕಲಾತ್ಮಕ ಸ್ವರೂಪಕ್ಕಾಗಿ, ಜನರ ಸ್ವಾಗತಕ್ಕೆ ಅರ್ಹವಾಗುವುದರಲ್ಲಿ ಸಂದೇಹವಿಲ್ಲ.

ಮಣ್ಣು ಮತ್ತು ಹೆಣ್ಣು ಕಾದಂಬರಿ

ಲೇ: ಬಸವರಾಜ ಕಟ್ಟೀಮನಿ, ಪ್ರ: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಪು. ೨೧೨
ಬೆಲೆ: ೨-೮-೦.

—೨೨ ನವೆಂಬರ್, ೧೯೫೩

ಶ್ರೀರಂಗ ಸೃಷ್ಟಿಯಾದ ಭವ್ಯ ಕಾದಂಬರಿ 'ಅನಾದಿ'

ಆರು ವರ್ಷಗಳಿಗೆ ಹಿಂದೆ ಕನ್ನಡ ಕಾದಂಬರಿ ಲೋಕಕ್ಕೆ 'ಪುರುಷಾರ್ಥ' ಎಂಬ ಅದ್ವಿತೀಯ ಕೃತಿಯನ್ನು ಕಾಣಿಕೆಯಾಗಿ ಕೊಟ್ಟ ಶ್ರೀರಂಗರ ಇನ್ನೊಂದು ಕಾದಂಬರಿಯಾದ 'ಅನಾದಿ' ಇದೀಗ ಹೊರಬಿದ್ದಿದೆ.

ರಾಮಣ್ಣ ಒಬ್ಬ ಬರೆಹಗಾರ ಅಂದರೆ ಸಾಹಿತಿ. ಸರಲ ಆತ ಪ್ರೀತಿಸಿದ ಹೆಂಡತಿ. ಆಕೆ ಸತ್ತು ಇಂದಿಗೆ ನಾಲ್ಕು ತಿಂಗಳಾಗಿವೆ. ಸತ್ತ ಮೇಲೂ ಸರಲ ಆ ಮನೆಯಲ್ಲಿ ನೆನಪಿನ ಸಹಸ್ರ ತೆರೆಗಳನ್ನು ಹೊಡೆದೆಬ್ಬಿಸುತ್ತ ಪ್ರಭಾವಶಾಲಿಯಾಗಿದ್ದಾಳೆ.

ಆರು ಆರೂವರೆ ವರ್ಷಗಳಿಗೆ ಹಿಂದೆ ಸರಲ, ಅಣ್ಣನ ಮನೆಯಿಂದೊಮ್ಮೆ ಹಿಂತಿರುಗಿ ಬಂದಾಗ ಹನ್ನೆರಡು ವರ್ಷ ವಯಸ್ಸಿನ ಹುಡುಗಿಯೊಬ್ಬಳೊಡನೆ ಬಂದಳು. "ಅಬಚಿ ಸತ್ತಳು ಎಂಬ ನಾಂದಿಯಿಂದಲೆ ಕುಮುದಳ ಪ್ರವೇಶವಾಗಿತ್ತು." ಇಬ್ಬರದೇ ಆಗಿದ್ದ ಜೀವನದಲ್ಲಿ ಮೂರನೆಯ ವ್ಯಕ್ತಿಯೊಂದರ ಪ್ರವೇಶ....

ದಿನಗಳು ಕಳೆದುವು. ಈಗ್ಗೆ ಎರಡು ಎರಡೂವರೆ ವರ್ಷಗಳಿಗೆ ಹಿಂದೆ ಸರಲ ಕಾಹಿಲೆ ಬಿದ್ದಳು. ಹಾಸಿಗೆಯಿಂದ ಏಳಲಾಗದೆ ಆಕೆ ದೀರ್ಘಕಾಲ ನರಳಬೇಕಾಯಿತು. ಆ ಕಾಹಿಲೆಯ ಹಿನ್ನೆಲೆಯಲ್ಲಿ ರಾಮಣ್ಣ ಮತ್ತು ಕುಮುದ ಪರಸ್ಪರ ಸಮೀಪಕ್ಕೆ ಬರುತ್ತಾರೆ.

ಧರ್ಮವೋ ಅಧರ್ಮವೋ ಹದಿನೈದು ಹದಿನಾರರ ಹುಡುಗಿ ಕುಮುದೆಗೆ ಅದು ತಿಳಿಯದು. "ಅನಾಥೆಯಾದ ತನ್ನನ್ನು ತಂದಿಟ್ಟುಕೊಂಡು ಬದುಕಿಸಿ ಬೆಳೆಯಿಸುವ ಸರಲಕ್ಕ ತನ್ನ ಮೇಲೆ ಸಿಟ್ಟಾದರೆ ಹೇಗೆ?" ಎಂಬುದಷ್ಟೇ ಅವಳಿಗಿದ್ದ ಭಯ. ರಾಮಣ್ಣ ಕುಮುದೆಯರ ಸಂಬಂಧದಲ್ಲಿ ಪ್ರೀತಿ ಇತ್ತೆ? ಕುಮುದೆಯ ಕೊಠಡಿಯಿಂದ ತಾನು ಹೊರ ಬಂದಾಗಲೆಲ್ಲ ರಾಮಣ್ಣನಿಗೆ ಮಾನಸಿಕ ಯಾತನೆಗಳ ಅನುಭವವಾಗಿತ್ತು. ಆ ಸುಸಂಸ್ಕೃತ ಬುದ್ಧಿಜೀವಿ ತನ್ನ ವರ್ತನೆಗಾಗಿ ಪರಿತಪಿಸುತ್ತಿದ್ದ. ಆದರೆ ಆ ಪರಿತಾಪ ಮತ್ತೊಂದು ರಾತ್ರೆವರೆಗೆ ಮಾತ್ರ.

ಹಾಗಾದರೆ "ಪ್ರೇಮ ಬೇರೆ, ವ್ಯಭಿಚಾರ ಬೇರೆ"ಯೇ? ರಾಮಣ್ಣ ಕೊನೆಯವರೆಗೂ ಸರಲೆಯನ್ನು ಪ್ರೀತಿಸಿದ. "ಸರಲೆ ಸ್ಫೂರ್ತಿಯ ಹೆಣ್ಣು," ಕುಮುದ

ಸಂಭೋಗದ ಹೆಣ್ಣು." ಆದರೆ, ರಾಮಣ್ಣ ತನ್ನನ್ನು ಪ್ರೀತಿಸದೆ ಇದ್ದುದನ್ನು ಕಂಡಾಗ ಕುಮುದಳಿಗೆ ಅವಮಾನವಾಗುತ್ತಿತ್ತು. ರಾಮಣ್ಣನಿಗೆ ಕಟೂಕ್ತಿಗಳ ಸವಿಯನ್ನುಣ್ಣಿಸುವುದಕ್ಕೂ ಆಕೆ ಹಿಂಜರಿಯಲಿಲ್ಲ. ಆದರೆ ಅವಳ ದೇಹ ಮಾತ್ರ ಆತನನ್ನು ಬಯಸಿತು.

ಸಾಯುತ್ತ ಮಲಗಿದ್ದ ಸರಲ ಕೊನೆಯವರೆಗೂ ಕೇಳಿದ್ದೊಂದೇ : ತನ್ನ ಗಂಡ ಮದುವೆಯಾಗಬೇಕು, ಕುಮುದಳ ಕೂಡ ; ಮನೆಯಲ್ಲಿ ಮಕ್ಕಳಾಗಬೇಕು. ತನ್ನ ಗಂಡನನ್ನು ಚೆನ್ನಾಗಿ ಬಲ್ಲವಳು ಆ ಹೆಂಡತಿ.

ಆದರೆ ರಾಮಣ್ಣನಿಗೆ ಅದು ಒಪ್ಪಿಗೆ ಇಲ್ಲ. ತಾನು ಪ್ರೀತಿಸಿದ ಸರಲೆಯ ಬದಲು ಬೇರೆ ಯಾರನ್ನು ಮದುವೆಯಾಗುವುದೂ ಆತನಿಗೆ ಒಪ್ಪಿಗೆ ಇಲ್ಲ....

ಸರಲ ಸತ್ತು ನಾಲ್ಕು ತಿಂಗಳ ಅನಂತರದ ಒಂದು ಸಂಜೆ....ರಾತ್ರೆಯೂಟ ಮುಗಿಸಿ, ಕುಮುದಳ ಸಹವಾಸವನ್ನು ಅಪೇಕ್ಷಿಸದೆ, ರಾಮಣ್ಣ ತನ್ನ ಕೋಣೆಗೆ ಹೋಗಿದ್ದಾನೆ. ಸರಲೆಯ ಭಾವಚಿತ್ರ ಗೋಡೆಯ ಮೇಲಿದೆ. ಆ ಸತೀಮಣಿಯ ದೃಷ್ಟಿ ರಾಮಣ್ಣನನ್ನೇ ನೋಡುತ್ತ ಆತನ ನೆನಪಿನ ಅಣೆಕಟ್ಟನ್ನು ಬಿರಿಯುತ್ತದೆ. ಹೃದಯದ ವೇದನೆ ಸಹಿಸಲಾರದೆ ಪತ್ನಿಯ ಭಾವಚಿತ್ರವನ್ನುದ್ದೇಶಿಸಿ "ತಿಳಿತೇನು ? ನೀ ಒಂದ್ಮಾಡಿದರ ಉಳೀತಿತ್ತು," ಎನ್ನುತ್ತಾನೆ ರಾಮಣ್ಣ. "ಇದೆಲ್ಲ ತಪ್ಪು ನಿನ್ದೆ–" ಎಂದು ಮಗುವಿನಂತೆ ಗೋಳಿಡುತ್ತಾನೆ.

ಆತ ಹಾಗಿದ್ದರೆ, ಅದೇ ಹೊತ್ತಿಗೆ ತನ್ನ ಕೊಠಡಿಯಲ್ಲಿ ಕುಳಿತು ಕುಮುದ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟಿದ್ದಾಳೆ. ರಾಮಣ್ಣನನ್ನು ಕಂಡಾಗ ಅಸಹ್ಯವೆನಿಸುತ್ತದೆ ಆಕೆಗೆ. ಆದರೆ, ರಾಮಣ್ಣನಿಗೆ ನೋವನ್ನು ಕೊಡಬೇಕೆಂದು ತಾನು ಬಯಸುವುದು ಈ ಜನ್ಮದಲ್ಲಿ ಸಾಧ್ಯವಿಲ್ಲ.

ಇಬ್ಬರ ಪಾಲಿಗೂ ಅದು ನಿದ್ದೆ ಇಲ್ಲದ ರಾತ್ರೆ. ಇಬ್ಬರು ಆಡಿದ್ದೂ ನೆನಪುಗಳ ಜತೆಯಲ್ಲಿ ನೋವಿನ ಸರಸ. ಕುಮುದಳನ್ನು ಮನೆಯಿಂದ ಹೊರಕಳುಹಿಸಬೇಕೆಂಬ ನಿರ್ಧಾರದೊಡನೆ ರಾಮಣ್ಣ ಬೆಳಗು ಮುಂಜಾನೆ ಕೊಠಡಿಯಿಂದ ಹೊರಗೆ ಕಾಲಿಡುತ್ತಾನೆ. ಮಕ್ಕಳಿಗಾಗಿಯಾದರೂ ತಾನು ಮದುವೆಯಾಗಬೇಕೆಂದು ಸರಲ ಹೇಳುತ್ತಿದ್ದುದು ಆತನಿಗೆ ನೆನಪಾಗುತ್ತದೆ. "ರಾಮಣ್ಣ ಒಮ್ಮೆಲೆ ತಡೆದ. ಯಾವುದೊ ವಿಚಾರದಿಂದ ಜೀವ ಬಂದಂತಾಯಿತೇನೊ ಎನ್ನುವಂತೆ ಸಮಾಧಾನದ ಉಸಿರನ್ನು ಬಿಟ್ಟ."

ಅದೇ ಹೊತ್ತಿಗೆ ಕಮುದ ತನ್ನ ಕೊಠಡಿಯಿಂದ ಹೊರಬಂದು ಹೇಳುತ್ತಾಳೆ.

"ನಾನೀಗ ತಾಯಿಯಾಗುವಾಕೆ"

"ಮುಂದೆ ಎರಡು ತಿಂಗಳೊಳಗೆ ಕುಮುದ–ರಾಮಣ್ಣರ ಕೊನೆಯ ಮದುವೆಯಾಯಿತು. ಅಕ್ಕನ ಮಾತು ನಡೆಸಲಿಕ್ಕೆ ಕುಮುದ, ಹೆಂಡತಿಯ ಬೇಡಿಕೆಯನ್ನು ನಡೆಸಲು ರಾಮಣ್ಣ, ಮದುವೆಯಾಗಲು ಒಪ್ಪಿದರು ಎಂದು ಜನರು [ರಾಮಣ್ಣ–

ಕುಮುದೆಯರ ಬಗೆಗೆ ಆಗಲಿ ಆಡಿಕೊಳ್ಳಲು ಆರಂಭಿಸಿದ್ದರು—ನಿ.] ಅವರಿಬ್ಬರ ನಿಷ್ಠೆಯನ್ನು ಪ್ರಶಂಸಿಸಿದರು. ಗಂಡ-ಹೆಂಡರಿಗೆ ಸುಖ-ದೀರ್ಘಾಯು ದೊರೆಯಲಿ, ಮನೆ ತುಂಬಾ ಮಕ್ಕಳಾಗಲಿ, ಎಂದು ಮನಃಪೂರ್ವಕವಾಗಿ ಬಯಸದವರು ಯಾರೂ ಇರಲಿಲ್ಲ !"

ಈ ಮೇಲಿನ ಉಲ್ಲೇಖದೊಡನೆ ಮುಕ್ತಾಯವಾಗುವ ಕಾದಂಬರಿಯಲ್ಲಿ ಚಿತ್ರಿತವಾಗಿರುವುದು ಮಾನವ ಜೀವನದಲ್ಲಿ ಬಹು ಮಹತ್ವದ್ದಾದ ಪ್ರೇಮಕಾಮಗಳ ಸೂಕ್ಷ್ಮ ಸಮಸ್ಯೆಯೊಂದು.

ಶ್ರೀರಂಗರೇ ಹೇಳಿರುವಂತೆ ಇದು ಅವರ ಮೊದಲ ಪ್ರೇಮಕಥೆ. "ಸುಮಾರು ಇಪ್ಪತ್ತು ವರ್ಷಗಳವರೆಗೆ ಸಾಹಿತ್ಯ ನಿರ್ಮಾಣದಲ್ಲಿ ತೊಡಗಿದವನು ಅನಂತರ ಮೊದಲ ಪ್ರೇಮಕಥೆಯನ್ನು ಬರೆಯುವುದೆಂದರೆ ಇದೊಂದು ವಿಪರೀತ ಅನುಭವವಲ್ಲವೆ ? ಯಾವ ಸಾಹಿತಿಯಾದರೂ ಪ್ರೇಮದ ವಿಷಯದಿಂದಲೆ ಸಾಮಾನ್ಯವಾಗಿ ಸಾಹಿತ್ಯ ನಿರ್ಮಾಣಕ್ಕೆ ತೊಡಗುತ್ತಾನೆ. ನನಗೆ ಇಷ್ಟೊಂದು ವಿಲಂಬವಾದುದರ ಕಾರಣವು ಮರ್ಮಜ್ಞರಾದ ವಾಚಕರಿಗೆ ಈ ಕಾದಂಬರಿಯಲ್ಲಿ ದೊರೆಯಬಹುದಾಗಿದೆ.

ಅರ್ಧಶತಮಾನದಷ್ಟು ಕಾಲ ಬದುಕನ್ನು ಕಂಡಿರುವ ಅನುಭವಿಸಿರುವ ಶ್ರೀರಂಗರು, ಈ ಕಥೆಯನ್ನು ಬರೆಯಲು ಇಷ್ಟು ತಡಮಾಡಿದ್ದು ಒಳಿತಾಯಿತೆನ್ನಬೇಕು. ಹಾಗೆ ತಡವಾದುದರ ಫಲವಾಗಿಯೆ ಪ್ರೇಮ-ಕಾಮಗಳಿಗೆ ಸಂಬಂಧಿಸಿದ ಪ್ರೌಢವಾದ ಪ್ರಬುದ್ಧವಾದ ಕೃತಿಯೊಂದು ಕನ್ನಡದಲ್ಲಿ ಸೃಷ್ಟಿಯಾಗುವಂತಾಯಿತು!

ಶ್ರೀರಂಗರು ಈ ಕೃತಿಯನ್ನು 'ಅನಾದಿ' ಎಂದು ಕರೆದಿದ್ದಾರೆ. ಈ ಶಿರೋನಾಮೆ ಯೋಗ್ಯವೆ ಅಲ್ಲವೆ ಎಂಬುದನ್ನು ಕುರಿತು ದೀರ್ಘ ಚರ್ಚೆಗೆ ಅವಕಾಶವಿದೆ. ರಾಮಣ್ಣ ಮತ್ತು ಕುಮುದ, ನಮ್ಮ ಮಧ್ಯಮ ವರ್ಗದ್ದೊಂದು ವಿಶಿಷ್ಟ ವಾತಾವರಣದಲ್ಲಿ ಉಸಿರಾಡುತ್ತಿರುವ ವ್ಯಕ್ತಿಗಳು. ಹುಡುಗಿ ಕುಮುದ ಮನೆಯ ನಾಲ್ಕು ಗೋಡೆಗಳ ನಡುವೆ ಇರದೆ, ಓರಗೆಯ ಹುಡುಗರೊಡನೆ ಬೆರೆಯಲು ಅವಕಾಶವಿರುತ್ತಿದ್ದರೆ, ಆಕೆ ವಿದ್ಯಾರ್ಥಿನಿಯಾದರೂ ಆಗಿರುತ್ತಿದ್ದರೆ, ಕತೆಯ ಬೆಳವಣಿಗೆ ಬದಲಾಗುತ್ತಿತ್ತು. ಆಗ ರಾಮಣ್ಣನ ಜೀವನದಲ್ಲೂ ಕುಮುದಳ ಜೀವನದಲ್ಲೂ ಕಾಮ-ಪ್ರೇಮದ ವಿಷಯ ಬೇರೆ ಜಾಡು ಹಿಡಿಯುವುದು ಸಾಧ್ಯವಿತ್ತು, ಅಷ್ಟೆ. ಹೀಗಾಗಿ, ರಾಮಣ್ಣ-ಸರಲ-ಕುಮುದೆಯರ ವಿಶಿಷ್ಟ ಕತೆಗೆ ಮಾತ್ರ 'ಅನಾದಿ' ಎಂಬ ಹೆಸರೆಂದು ತಿಳಿಯುವುದರ ಬದಲು, ಇದು ಮಾನವ ಜೀವನದಲ್ಲೇ ಅನಾದಿಯಿಂದ ಬಂದಿರುವ ಸಮಸ್ಯೆ ಎಂದು ಭಾವಿಸಬೇಕಾಗಿದೆ.

ಆದಿಯಲ್ಲಿ ಮಾನವರು ಕಾಡು ಮಾನವರಾಗಿದ್ದಾಗ, ಕಾಮ-ಪ್ರೇಮಗಳ ವ್ಯತ್ಯಾಸ ಅವರಿಗಿರಲಿಲ್ಲವೆನ್ನುವುದೂ ಗಮನಿಸತಕ್ಕ ವಿಷಯ.

ಕಾದಂಬರಿಯ ಈ ತಿರುಳನ್ನು ಪರಿಣಾಮಕಾರಿಯಾಗಿ ಚಿತ್ರಿಸಲೆಂದು ಶ್ರೀರಂಗರು ವಿಶಿಷ್ಟವಾದ ತಂತ್ರವನ್ನು ಬಳಸಿದ್ದಾರೆ. ಕಾದಂಬರಿ ಆರಂಭವಾಗುವುದು

ಸರಲ ಸತ್ತು ನಾಲ್ಕು ತಿಂಗಳ ಮೇಲೊಂದು ಸಂಜೆ, ಊಟವಾದ ಬಳಿಕ, ರಾಮಣ್ಣ–ಕುಮುದೆಯರ ಸಂವಾದದೊಡನೆ. ಕಾದಂಬರಿ ಮುಕ್ತಾಯವಾಗುವುದು ಮರು ದಿನ ಮುಂಜಾನೆ, ಮತ್ತೆ ಅವರಿಬ್ಬರ ಸಂವಾದದೊಡನೆ. ಕೊನೆಯಲ್ಲಿರುವುದು ಮುಂದೇ ನಾಯಿತೆಂದು ತಿಳಿಸುವ ಮೂರು ವಾಕ್ಯಗಳು, ಕಾದಂಬರಿಯಲ್ಲಿ ಹದಿನೇಳು ಅಧ್ಯಾಯಗಳಿವೆ. ಒಂದೊಂದು ಅಧ್ಯಾಯವೂ ಅನುಕ್ರಮವಾಗಿ ರಾಮಣ್ಣ–ಕುಮುದೆಯರಲ್ಲಿ ಒಬ್ಬರಿಗೆ ಮೀಸಲು. ಇಂದಿನ ಸ್ಥಿತಿಯಲ್ಲಿ ರಾಮಣ್ಣನ ಮನಸ್ಸಿನಲ್ಲಿ ಮೂಡುವ ಹಳೆಯ ನೆನಪುಗಳನ್ನೂ ಈಗಿನ ಯಾತನೆಯನ್ನೂ ಒಂದು ಅಧ್ಯಾಯ ಚಿತ್ರಿಸಿದರೆ, ಇನ್ನೊಂದು ಅದೇ ಅಂಶವನ್ನು ಕುಮುದೆಯ ದೃಷ್ಟಿಯಿಂದ ಚಿತ್ರಿಸುತ್ತದೆ. ಹೀಗೆ ಒಬ್ಬರ ಬಳಿಕ ಒಬ್ಬರಾಗಿ ಅವರ ಯೋಚನೆಗಳ ಮೂಲಕವೇ ಕತೆ ಓಡುತ್ತದೆ.

ಇದಲ್ಲದೆ,ಇಲ್ಲಿ ಪ್ರಧಾನವಾಗಿರುವುದು ಮನೋವಿಶ್ಲೇಷಣೆ. ಆ ಕಾರ್ಯಕ್ಕಂತೂ ಶ್ರೀರಂಗರು ಬಳಸಿರುವ ತಂತ್ರ ಹೆಚ್ಚು ಪ್ರಯೋಜನಕಾರಿಯಾಗಿದೆ.

ಈ ಕೃತಿಯ ಕಥೆಯು ಬೆಳವಣಿಗೆಯಲ್ಲಿ ಕಾಣುವ ಕೊರತೆಯೊಂದಿದೆ. ಅದು ಕೊನೆಯ ಅಧ್ಯಾಯದಲ್ಲಿ ಕಂಡುಬಂದಿರುವ ಅತ್ಯವಸರ. ಇನ್ನೂ ಹತ್ತು ಪುಟಗಳಷ್ಟು ಹೆಚ್ಚು ಚಿತ್ರಣವಿರುತ್ತಿದ್ದರೆ ಆ 'ನಾಟಕೀಯತೆ'ಯನ್ನು ತಪ್ಪಿಸುವುದು ಸಾಧ್ಯವಿತ್ತು.

ಶ್ರೀರಂಗರು ಪುಟ ಸಾರ್ವಭೌಮರಲ್ಲ. ಸಾಮಾನ್ಯವಾಗಿ ಹಾದರದ ಕತೆಯೆಂದು ಹೆಸರು ತಳೆದು ಮುನ್ನೂರು ನಾಲ್ಕುನೂರು ಪುಟಗಳನ್ನು ಆಕ್ರಮಿಸಬಹುದಾದ ವಸ್ತು ಇಲ್ಲಿ ಬಲು ಕಡಿಮೆ ಪುಟಗಳಲ್ಲಿ. ಅಯ್ಯೋ ಮುಗಿದೇ ಹೋಯಿತೆ ಎನ್ನುವ ರೀತಿಯಲ್ಲಿ, ಚಿತ್ರಿತವಾಗಿದೆ. ಸೂಚ್ಯವಾದ ಮೊನಚಾದ ಶ್ರೀರಂಗ–ಶೈಲಿ ಕತೆಯ ವಸ್ತುವಿನ ಗಂಭೀರತೆಯನ್ನು ಹೆಚ್ಚಿಸಿದೆ.

ಹೇಳಿ ಕೇಳಿ ಇದು ಪ್ರೇಮ–ಕಾಮದ ಕತೆ. For adualts only ಎನ್ನುವಂತಹ ಸನ್ನಿವೇಶಗಳು ಬಂದೂ ಇವೆ ! ಆದರೂ ಶ್ರೀರಂಗರ ಕೈಯಲ್ಲಿ ಈ ವಸ್ತು ಹಳಸಿ ಹೇಸಿಯೆನಿಸುವಂತೆ ಆಗಿಲ್ಲವಲ್ಲಾ ಎಂದು ಸಮಾಧಾನಪಡಬಹುದು.

....ಹಿಂದೆ ಸರಲ ತನಗೆ ಹೇಳಿದ್ದ ಮಾತೊಂದು ಬರೆಹಗಾರ ರಾಮಣ್ಣನಿಗೆ ನೆನಪಾಗುತ್ತದೆ.

"ಮತ್ತೆ ನಾಟಕ ಮಾಡಿದರೆ ಎಷ್ಟೋ ತೋರಿಸಲಿಕ್ಕೆ, ತಿಳಿಸಲಿಕ್ಕೆ ಬರೋದಿಲ್ಲ ಅಂದಿದ್ದಿರಿ. ಅದಕ್ಕ ಕಾದಂಬರಿ ಬರೀತಿರೇನು ಅಂತ ಕೇಳಿದೆ."

ಅದು ತಮ್ಮ ಅಭಿಪ್ರಾಯವೇ ಎನ್ನುವಂತೆ ನಾಟಕಕಾರ ಶ್ರೀರಂಗರು ಕಾದಂಬರಿಯನ್ನು ಬರೆದಿದ್ದಾರೆ. ನಾಟಕವು ಸಾಹಿತ್ಯದ ತಂತ್ರ ಹಿರಿಯ ಪ್ರಕಾರವಾಗಿದ್ದರೂ ನಮ್ಮಲ್ಲಿ ಈ ದಿನ ಹೆಚ್ಚು ಬಳಕೆಯಲ್ಲಿರುವ ಪ್ರಕಾರವಾದ ಕಾದಂಬರಿಯ ಕ್ಷೇತ್ರದಲ್ಲಿ ತಮ್ಮ ಪ್ರಭುತ್ವವನ್ನು ಶ್ರೀರಂಗರು ಸ್ಥಾಪಿಸಿದ್ದಾರೆ. ಶ್ರೀರಂಗರ

ಭವ್ಯ ಕೃತಿಗಳಾದ 'ಪುರುಷಾರ್ಥ', 'ಅನಾದಿ'ಗಳನ್ನೋದಿದ ಮೇಲೆ ಅವರ ಲೇಖನಿಯಿಂದ ಇನ್ನಷ್ಟು ಕಾದಂಬರಿಗಳನ್ನು ಕನ್ನಡಿಗರು ಅಪೇಕ್ಷಿಸುವುದು ನಿರೀಕ್ಷಿಸುವುದು ನ್ಯಾಯವಾಗಿದೆ.

೧೦ ಜನವರಿ, ೧೯೫೪

ಅನಾದಿ

ಕಾದಂಬರಿಕಾರರು : ಶ್ರೀರಂಗ, ಲಲಿತ ಸಾಹಿತ್ಯಮಾಲೆಯ ಕುಡಿ, ಮಾರಾಟಗಾರರು : ಮನೋಹರ ಗ್ರಂಥ ಭಂಡಾರ, ಧಾರವಾಡ. ಪುಟ : ೧೩೪, ಬೆಲೆ : ರೂ. ೧-೮-೦.

ರೇಡಿಯೋ ನಾಟಕ-ರೂಪಕ ಶಿವಸ್ವಾಮಿಯವರ ಕೃತಿಗಳು

ಶ್ರೋತೃಗಳಿಲ್ಲದ ಸಂಗೀತ ಕಚೇರಿ, ಪ್ರೇಕ್ಷಕರಿಲ್ಲದ ನಾಟಕ, ರೇಡಿಯೋ ಅವತರಿಸುವುದಕ್ಕೆ ಮುಂಚೆ ಊಹೆಗೂ ನಿಲುಕುವಂತಿರಲಿಲ್ಲ. ಆದರೆ ಈ ದಿನ, ಆಕಾಶವಾಣಿಯ ಧ್ವನಿವಾಹಕದೆದುರು ನಿಲ್ಲುವ ಹಾಡುಗಾರ, ನಟ ಇಲ್ಲವೆ ಕವಿ, ಕಣ್ಣಿಗೆ ಕಾಣಿಸದ ಹಲವು ಸಹಸ್ರ ಶ್ರೋತೃಗಳನ್ನೂ ಪ್ರೇಕ್ಷಕರನ್ನೂ ಕಲ್ಪಿಸಿಕೊಳ್ಳಲು ಸಮರ್ಥನಾಗಿದ್ದಾನೆ.

ಸಾಹಿತ್ಯಕ್ಕೆ ಸಂಬಂಧಿಸಿ ಹೇಳುವುದಾದರೆ, ಕಳೆದ ಮೂರು ದಶಕಗಳಲ್ಲಿ ಈ ದೇಶದಲ್ಲಿ ಬೆಳೆದು ಬಂದಿರುವ ರೇಡಿಯೋ, ಬರೆವಣಿಗೆಯ ವೈಖರಿಯ ಮೇಲೆ ತನ್ನ ಪ್ರಭಾವವನ್ನು ನಿರ್ವಿವಾದವಾಗಿ ಬೀರಿದೆ; ವಿವಿಧ ಪ್ರಕಾರಗಳಲ್ಲಿನ ಹೊಸ ಹೊಸ ಪ್ರಯೋಗಗಳಿಗೆ ಕಾರಣವಾಗಿದೆ.

ಬರೆಯುವ ಪ್ರಬಂಧಕ್ಕೂ ಆಕಾಶವಾಣಿಯ ಮೂಲಕ ಬಿತ್ತರಿಸುವ ಭಾಷಣಕ್ಕೂ ಸೂಕ್ಷ್ಮ ವ್ಯತ್ಯಾಸವಿದ್ದೇ ಇದೆ. ಪ್ರಸಾರಕ್ಕೆಂದು ಬರೆಯುವ ಕಥೆಗೂ ಮುದ್ರಣವನ್ನಷ್ಟೆ ಗಮನಿಸಿ ರಚಿಸುವ ಕಥೆಗೂ ಅಂತರ ಸ್ವಲ್ಪಮಟ್ಟಿಗಾದರೂ ಇದೆ. ಈ ಭಿನ್ನತೆ ಒಡೆದು ತೋರುವುದು ನಾಟಕದ ಕ್ಷೇತ್ರದಲ್ಲಿ. ರಂಗಭೂಮಿಗಾಗಿ ನಾಟಕ ಬರೆಯುವುದಕ್ಕಿಂತ ಕಷ್ಟತರವಾದದ್ದು ರೇಡಿಯೋಗೋಸ್ಕರ ನಾಟಕ ಬರೆಯುವ ಕೆಲಸ. ರಂಗಭೂಮಿಯನ್ನು ಪೂರ್ತಿಯಾಗಿ ಮರೆತು ರೇಡಿಯೋಗೆಂದೇ ನಾಟಕ ಬರೆಯುವುದು ಈ ದಿನ ಸ್ವತಂತ್ರ ಕಲೆ ಎನ್ನಿಸಿದೆ.

ಈ ಸ್ವತಂತ್ರ ಕಲೆಯ ಉತ್ತಮ ಉದಾಹರಣೆಯಾಗಿದೆ, ಎಸ್.ಎನ್.ಶಿವಸ್ವಾಮಿಯವರ ಐದು ಪ್ರಸಾರ ನಾಟಕಗಳ, ಸಂಕಲನವಾದ 'ಹೃದಯಾಂತರಾಳ'. ಮಾತು ಸಂಗೀತ, ಸದ್ದು, ನೀರವತೆಗಳೆಲ್ಲ ಎರಕಗೊಂಡು, ಕಾಲದ ಅಂತರವನ್ನು ಲೀಲಾಜಾಲವಾಗಿ ತಿಳಿಸುವ, ಭ್ರಮೆಯನ್ನೇ ವಸ್ತುಸ್ಥಿತಿಯೆಂದು ನಂಬಿಸುವ, ರಂಗಭೂಮಿಯ ಮೇಲೆ, ಚಲನಚಿತ್ರದಲ್ಲೂ ಕೂಡ, ಅಸಾಧ್ಯವಾದುದನ್ನು ಮಾಡಿ ತೋರಿಸುವ, ರೇಡಿಯೋದ ಮುಂದೆ ಕುಳಿತು ಕಳೆಯುವ ಘಳಿಗೆಗಳನ್ನು ಕ್ಷಣಗಳಾಗಿ ಮಾರ್ಪಡಿಸುವ ಶಕ್ತಿ ಈ ಕೃತಿಗಳಿಗಿದೆ.

ಮಗನ ದೇಹವನ್ನು ಹೊಕ್ಕು, ರಕ್ತದ ಕಣದ ಮೇಲೆ ಕುಳಿತು, ರಕ್ತದ ಚಲನೆಯ ಜತೆ ತಾವೂ ಹರಿದಾಡಿ, ಮಗನ ಹೃದಯದ ಅಂತರಾಳದಲ್ಲಿ ಏನಿದೆ ಎಂಬುದನ್ನು ತಿಳಿಯುವ ತಾಯ್ತಂದೆಯರ (ಕನಸಿನ) ಯತ್ನ; ಮಾರ್ಫಿಯಾ ಬಂಧನದಿಂದ ರಾಜಾರಾಂ ಬಿಡುಗಡೆ ಹೊಂದಿದ ಸ್ವಾರಸ್ಯಪೂರ್ಣ ಕಥೆ ಶ್ರೋತೃಗಳ ಉಸಿರು

ಬಿಗಿ ಹಿಡಿಸುವ 'ಟಿ. ಎನ್. ಟಿ.' ಮಾತನಾಡುವ ಮೊಲದ 'ಕಡೆಯ ಪ್ರಯೋಗ' ಇವೆಲ್ಲವೂ ಯಶಸ್ವೀ ಪ್ರಸಾರ ನಾಟಕಗಳು.

ಈ ಸಂಕಲನದಲ್ಲಿರುವ 'ಹಂಪೆ' ನಾಟಕವಲ್ಲ, ಶಬ್ದ ಚಿತ್ರ. ಪ್ರಸಾರ ನಾಟಕದ ತಂತ್ರಗಳನ್ನೂ ಧಾರಾಳವಾಗಿ ಬಳಸುವ ಈ ಫೀಚರ್ ಪ್ರಕಾರ, ನೀರಸವೆನಿಸಬಹುದಾದ ವಿವರವನ್ನು ಸ್ವಾರಸ್ಯಪೂರ್ಣವಾಗಿ ತಿಳಿಸಲು ಅತ್ಯಂತ ಸಮರ್ಥವಾಗಿದೆ.

ಆ 'ಹಂಪೆ'ಯನ್ನೇ ವಿಸ್ತೃತಗೊಳಿಸಿ ಶಿವಸ್ವಾಮಿಯವರು 'ಮಹಾ ಸಾಮ್ರಾಜ್ಯ'ವನ್ನು ರಚಿಸಿದ್ದಾರೆ. ಕಳೆದ ವಿಜಯದಶಮಿಯ ದಿನ ಪ್ರಸಾರವಾದ ಈ ಶಬ್ದ ಚಿತ್ರ, ಉನ್ನತ ರೇಡಿಯೋ ಕಲೆಗೊಂದು ಯೋಗ್ಯ ನಿದರ್ಶನ. ಬರೆಹಗಾರನ ದರ್ಶನವೂ ಇಲ್ಲಿ ಒಡಮೂಡಿ,ಕೃತಿ ಮೈತುಂಬಿದೆ. ನಾಳೆಯನ್ನು ಇದಿರು ನೋಡುತ್ತ, ನಿನ್ನೆಯ ಕತೆಯನ್ನು ಈ ದಿನದ ಜನರಿಗಾಗಿ ಇಲ್ಲಿ ಹೇಳಿದ್ದಾರೆ. ವಸ್ತುವಿಗೆ ತಕ್ಕಂತೆ ಶೈಲಿ ಕಾವ್ಯಮಯವಾಗಿದೆ. ಕಥನವನ್ನು ಹಿಂಬಾಲಿಸುವ ವಾದ್ಯಸಂಗೀತ, ಕೃತಿಯ ಉದ್ದಕ್ಕೂ ಭಾವಪರಿಪೋಷಣೆಗೆ ಸಹಾಯಕವಾಗಿದೆ. ಐತಿಹಾಸಿಕ ಸ್ವರೂಪದ ಯಾವುದೇ ಕೃತಿಯಲ್ಲಿ ಮುಖ್ಯವಾಗಿ ಸಾಧಿಸಬೇಕಾದುದು ಆ ಕಾಲದ ಬದುಕಿನ ಪುನರ್ ಸೃಷ್ಟಿ. ಇಲ್ಲಿ ಆ ಗುರಿ, ಪ್ರಶಂಸಾರ್ಹವಾದ ರೀತಿಯಲ್ಲಿ ಈಡೇರಿದೆ.

'ಮಹಾ ಸಾಮ್ರಾಜ್ಯ'ಕ್ಕೊಂದು ಮುನ್ನುಡಿ ಬರೆಯುತ್ತಾ ಶ್ರೀರಂಗರು, "ಒಳ್ಳೆಯ ಶಬ್ದ ಚಿತ್ರವನ್ನು ಬರೆಯುವುದು ಒಳ್ಳೆಯ ರೇಡಿಯೋ ನಾಟಕವನ್ನು ಬರೆಯುವುದಕ್ಕಿಂತಲೂ ಕಠಿಣವಾದ ಕೆಲಸ" ಎಂದಿದ್ದಾರೆ. "ಅಭ್ಯಾಸ ಅನುಭವ ಎರಡೂ ಇಲ್ಲಿದೆ. ನಾಟಕಗಳನ್ನು ರೇಡಿಯೋಕ್ಕಾಗಿ ಬರೆಯುವವರು ನಮ್ಮಲ್ಲಿ ಅನೇಕರಿದ್ದಾರೆ. ಆದರೆ ರೂಪಕಗಳನ್ನು ಬರೆಯಲು ಅಭ್ಯಾಸ ಅತ್ಯಗತ್ಯವಾಗಿದೆ. ಶ್ರೀ ಶಿವಸ್ವಾಮಿಯವರ ಅನುಭವ ಪ್ರೇರಿತವಾದ ಈ ಕೃತಿಯು ತರುಣ ಲೇಖಕರನ್ನು ಸಮರ್ಪಕವಾಗಿ ಪ್ರೇರಿಸಲಿ", ಎಂದು ಹಾರೈಸಿದ್ದಾರೆ.

'ಹೃದಯಾಂತರಾಳ'ದ ಮೊದಲಲ್ಲಿ ಬರೆಯುತ್ತಾ ಶಿವಸ್ವಾಮಿಯವರು, ಶ್ರಾವಕರಿಗೆ ಅವನ್ನು ಮುಟ್ಟಿಸಲು ಸಹಾಯ ಮಾಡಿದ ಕೆಲವು ನಿರ್ದೇಶನ ಸೂಚಿಕೆಗಳನ್ನು ಹಾಗೆಯೇ ಉದ್ದಕ್ಕೂ ಉಳಿಸಿಕೊಂಡು ಮುದ್ರಿಸಿದರೆ, ಇವು ಓದುವುದಕ್ಕೂ ಅರ್ಹವಾಗಬಹುದೇನೋ ಎಂಬ ಆಸೆಯಿಂದ ಇವನ್ನು ಪುಸ್ತಕ ರೂಪದಲ್ಲಿ ಸಂಗ್ರಹಿಸಲಾಗಿದೆ," ಎಂದು ತಿಳಿಸಿದ್ದಾರೆ. ಶಿವಸ್ವಾಮಿಯವರ ಈ ಸಾಹಿತ್ಯ ಕೃತಿಗಳು ಓದಲು ನಿಸ್ಸಂದೇಹವಾಗಿಯೂ ಅರ್ಹವಾಗಿವೆ: ಅಷ್ಟೇ ಅಲ್ಲ, ರೇಡಿಯೋಗೋಸ್ಕರ ಬರೆಯ ಬಯಸುವ ಹೊಸಬರಿಗೆಲ್ಲಾ ಮಾದರಿ ಪಾಠಗಳಾಗಿವೆ. ೨೧-೭-೧೯೫೭

ಹೃದಯಾಂತರಾಳ—ಲೇ: ಎಸ್. ಎನ್. ಶಿವಸ್ವಾಮಿ, ಪ್ರ: ಶಾರದ ಪ್ರಕಟಣಾಲಯ, ಬೆಂಗಳೂರು-೨, ಪು: ೧೧೨, ಬೆಲೆ: ಒಂದೂ ಕಾಲು ರೂಪಾಯಿ.

ಮಹಾಸಾಮ್ರಾಜ್ಯ—ಲೇ: ಎಸ್. ಎನ್. ಶಿವಸ್ವಾಮಿ, ಪ್ರ: ಸಾಧನಾ ಪ್ರಕಾಶನ, ರಾಯಚೂರು, ಪು: ೩೨. ಬೆಲೆ: ?

೯

ವ್ಯಕ್ತಿಚಿತ್ರ

○ ಒಬ್ಬ ವ್ಯಕ್ತಿಯನ್ನು ಕುರಿತು ಸ್ಥೂಲ ಪರಿಚಯ ನೀಡುವ ಬರೆವಣಿಗೆ, ವ್ಯಕ್ತಿಚಿತ್ರ. ಚಿತ್ರಿಸುವ ಸಂದರ್ಭ: ಹುಟ್ಟು ಹಬ್ಬ, ಪ್ರಶಸ್ತಿ ಸಂಪಾದನೆ, ಸಾರ್ವಜನಿಕ ಸನ್ಮಾನ, ಸಂಭಾವನಾಗ್ರಂಥ ಅರ್ಪಣ ಅಥವಾ ಸಾವು.

ಈ ನಿಟ್ಟನಲ್ಲಿ ಹಲವು ಗಿರಾಕಿಗಳನ್ನು ಪಡೆದಿರುವ 'ಚಿತ್ರಕಾರ' ನಾನು. 'ವಸ್ತು'ವಿಗೂ ನನಗೂ ಇರುವ ಸಂಬಂಧಕ್ಕೆ ಅನುಗುಣವಾಗಿರುತ್ತದೆ, ನನ್ನ ಬರೆಹದ ಗುಣಮಟ್ಟ. ಪ್ರತ್ಯೇಕ ಅಸ್ತಿತ್ವ ಪಡೆಯದೆ ಅಂಕಣದ ಚೌಕಟ್ಟನಲ್ಲಿ ಈ ಚಿತ್ರಗಳು ಅಡಕವಾಗುವುದೂ ಇದೆ.

ಇಲ್ಲಿ ನಾಲ್ಕು ಆಯ್ಕೆಯಾಗಿವೆ, ಮಾದರಿಗೆ. ಮೂಲ: 'ನಿರಂಜನ ಮೂವತ್ತು ಸಂಪುಟಗಳಲ್ಲಿ' ಸರಣಿಯ ೧೫ನೇ ಸಂಪುಟ.

ಶ್ರೀಶತಕ

೧

ಮುದ್ದಣ–ಮನೋರಮೆಯರ ಸಂವಾದದ ಚಿಲಿಪಿಲಿಯಿಂದ ಎಚ್ಚರಗೊಂಡ ಕನ್ನಡದ ಇಪ್ಪತ್ತನೆಯ ಶತಮಾನ ಮುಗಿಯುತ್ತ ಬಂದಿದೆ. ನಮ್ಮ ಪಾಲಿಗೆ ಈ ಶತಮಾನದ ಮುಖ್ಯ ಘಟನೆಗಳು ಎರಡು: ಭಾರತ ಸ್ವಾತಂತ್ರ್ಯ ಪಡೆದದ್ದು ಮತ್ತು ಕನ್ನಡನಾಡು ಒಗ್ಗೂಡಿದ್ದು.

ಕೆಲವೊಮ್ಮೆ ಕಾಲ ನಿಧಾನವಾಗಿ ಪರದಾಡುತ್ತದೆ. ಸುತ್ತೆಲ್ಲ ಬರಡು. ಏನೂ ಮೊಳೆಯುದಿಲ್ಲ; ಏನೂ ಬೆಳೆಯುವುದಿಲ್ಲ. ಕೆಲವೊಮ್ಮೆ ಸಮಯದ್ದು ನಾಗಾಲೋಟ. ಕ್ಷಿಪ್ರಾವಧಿಯಲ್ಲಿ ಮಹಾಸಂಭವಗಳು ಒಂದರ ಹಿಂದೆ ಒಂದು ದೌಡಾಯಿಸಿ ಬರುತ್ತವೆ. ಕತ್ತಲೆ ಸರಿದು ಬೆಳಕಿನ ಹಬ್ಬ ಮೆರೆಯುತ್ತದೆ.

ಹಿಂದಿನ ಕೆಲ ಶತಮಾನಗಳಲ್ಲಿ ಕನ್ನಡದಲ್ಲಿ ಆಗದೇ ಇದ್ದ ಸಾಧನೆ ಇದೊಂದೇ ಶತಮಾನದಲ್ಲಿ ಆಯಿತು ಎನ್ನಬಹುದು.

ಇಪ್ಪತ್ತನೆಯ ಶತಕದ ಶ್ರೇಷ್ಠತಮ ಕನ್ನಡ ಸಾಹಿತ್ಯ ಕೃತಿ ಯಾವುದು? ಉತ್ತರಿಸಲು ಯತ್ನಿಸುವುದು ಹುಚ್ಚು ಕೆಲಸ. ಪ್ರಾಯಶಃ ಯಾರೂ ಅದನ್ನು ಮಾಡಲಾರರು. ಇದು ಇನ್ನೂ ನೂರು ವರ್ಷ ಅಥವಾ ಇನ್ನೂರು ವರ್ಷ ಕಳೆದ ಮೇಲೆ ಆಗಬೇಕಾದ ತೀರ್ಮಾನ. ತಮ್ಮ ಹಿರಿಮೆಯನ್ನು ತಾವೇ ಸಾಬೀತು ಮಾಡಲು ಹೊರಟವರನ್ನು ಕಂಡಾಗಲಂತೂ ನನಗೆ ನಗುಬರುತ್ತದೆ. ದಂಡು, ಮಠ, ಪೀಠ– ಇವು ಬರೀ ಕಸ.... ದಿಗ್ಗಜಗಳನ್ನು ಇಲ್ಲಿ ಹೆಸರಿಸುವ ಸಾಹಸವೊ? ಅಪಾಯಕಾರಿ. ಬೇಕಿದ್ದರೆ ಈ ಒಂದು ಪಟ್ಟಿಯನ್ನು ನಾನು ಮಾಡಬಲ್ಲೆ: ಆ ರಾಷ್ಟ್ರಕವಿ, ಈ ರಾಷ್ಟ್ರ ಕವಿ, ವರಕವಿ, ಕಥಾಪಿತಾಮಹ, ಪ್ರಹಸನ ಪ್ರಪಿತಾಮಹ, ಕಾದಂಬರೀ ನಟ–ವಿಟ, ಆದ್ಯ ಪ್ರವರ್ತಕ, ತಿರುವುಕಾರ ಇತ್ಯಾದಿ, ಇತ್ಯಾದಿ.

ಈ ತುತ್ತೂರಿ ಮೊಳಗಿನಲ್ಲಿ ಬಿ.ಎಂ.ಶ್ರೀ.ಯವರನ್ನು ಕಂಡಿರಾ? ಇಲ್ಲ, ಅಲ್ಲವೇ?

ನಿಜ. ಆ ಮಹಾನುಭಾವನ ಸ್ಥಾನವೇ ಬೇರೆ.

೨

ಸಹ್ಯಾದ್ರಿಯ ಪಶ್ಚಿಮ ತಪ್ಪಲಲ್ಲಿದ್ದ ಹನ್ನೆರಡರ ಎಳೆಯನಿಗೆ 'ಪ್ರಬುದ್ಧ ಕರ್ನಾಟಕದ'ದ ಒಂದು ಸಂಚಿಕೆ ನೋಡಲು ದೊರೆಯಿತು. ನನ್ನ ಪಾಲಿಗೆ ಅದು

ಬೇರೆಯೇ ಲೋಕದಿಂದ ಇಳಿದುಬಂದಿದ್ದ 'ಹಾರುವ ತಟ್ಟೆ' ತ್ರೈಮಾಸಿಕ. ಒಳಗಿನ ಪ್ರಕಟಣೆ ಹೇಳಿತು: 'ವಿದ್ಯಾರ್ಥಿಗಳಿಗೆ ವಾರ್ಷಿಕ ವರ್ಗಣಿ ಎರಡು ರೂಪಾಯಿ'. ಅಷ್ಟನ್ನು ಹೊಂದಿಸಿದೆ. ನಾನು ವಿದ್ಯಾರ್ಥಿ ಎಂದು ಮುಖ್ಯೋಪಾಧ್ಯಾಯರು ಪ್ರಮಾಣಪತ್ರ ನೀಡಿದರು. ಮನಿಯಾರ್ಡರು ನನಗೂ ಮೈಸೂರು ವಿಶ್ವವಿದ್ಯಾನಿಲಯಕ್ಕೂ ಕೊಂಡಿ ಹೊಸೆಯಿತು. ಒಂದು ವರ್ಷದ ಮಟ್ಟಿಗೆ (೧೯೩೬ ಎಂದು ನೆನಪು).

ಅಂಚೆ ಹೊತ್ತು ತಂದ ಸಂಚಿಕೆಯಲ್ಲಿ 'ಶ್ರೀ'ಯವರ ಪದ್ಯ ನೋಡಿದೆ.

"....ಚಿನ್ನದ ನಾಡಿದು
            ಮೈಸೂರು
ನಾಲ್ಮಡಿ ಕೃಷ್ಣನ
            ಮೈಸೂರು...."

ಆ ಸರಳತೆಗೆ ನಾನು ಸೋತೆ. ಪದಗಳು ಹೊಮ್ಮಿಸಿದ ನಾದಮಾಧುರ್ಯಕ್ಕೆ ಮರುಳಾದೆ. (ನಾಡಹಬ್ಬದ ವೇಳೆ ಪುತ್ತೂರಿಗೆ ಹೋಗಿ, ಭಾಷಣಕಾರರಾಗಿ ಬಂದಿದ್ದ ವಿ.ಸೀ., ತೀ.ನಂ.ಶ್ರೀ., ಕಸ್ತೂರಿ, ಗೊರೂರು, ಅ.ನ.ಕೃ.ರನ್ನು ಕಂಡೆ.)

ನನ್ನ ಕನಸಿನ ಮೈಸೂರಿಗಿಂತ ಭಿನ್ನವಾದ್ದೊಂದು ಬೇಗನೆ ಕಾಣಿಸಿಕೊಂಡಿತು, ತಿ. ತಾ. ಶರ್ಮರ ಗದ್ಯದ ಮೂಲಕ. ಅದು 'ಸೆರೆಮನೆಯಿಂದ ಅರಮನೆಗೆ' ಎಂಬ ಲೇಖನ ಮಾಲಿಕೆ. ಓದಿದ್ದು 'ವಿಶ್ವಕರ್ನಾಟಕ' ಪತ್ರಿಕೆಯಲ್ಲಿ. ಇದು ಬೆಂಗಳೂರಿನ ಸಂಬಂಧ.

ಹೀಗೆ ಎಂದು ಗೊತ್ತಾಗುವುದಕ್ಕೆ ಮೊದಲೇ ಸಾಹಿತ್ಯ ಮತ್ತು ರಾಜಕಾರಣ ಎರಡೂ ನನ್ನ ಮೇಲೆ ಮೋಡಿ ಬೀಸಿದ್ದುವು.

ಪ್ರತ್ಯಪ್ರತ್ಯೇಕವೆಂದು ಕಂಡರೂ ಒಟ್ಟನಲ್ಲಿ ನಡೆಯುತ್ತಿದ್ದುದು ಪುನರುದಯ ಆಂದೋಲನ. ಅದಾಗಲೇ ಹಬ್ಬಿತ್ತು, ಕಾವೇರಿಯಿಂದ ಕೃಷ್ಣೆಯವರೆಗೆ. ನಾನು ಅದರಲ್ಲಿ ಮೈತೋಯಿಸಿಕೊಂಡೆ. ಆಗಿನ ಸುಖಯಾತನೆ ಕ್ರಮೇಣ ಅಭಿವ್ಯಕ್ತಿಗೊಂಡದ್ದು ಬರೆವಣಿಗೆಯಲ್ಲಿ.

೧೯೪೪ರಲ್ಲಿ, ಲೇಖನಿ ಬಳಸಿ ದುಡಿಯಲೆಂದು ಮಂಗಳೂರು ತಲಪಿದೆ. ಆಗತಾನೇ ಪ್ರಕಟವಾಗಿದ್ದ 'ಸಂಭಾವನೆ' ಗ್ರಂಥ ಅಲ್ಲಿ ದೊರೆಯಿತು. ನನ್ನ ಕನಸಿನ ಆಚಾರ್ಯರು. ಒಳಗೆ ಪುಟವೆಲ್ಲ ಹರಡಿತ್ತು ಅವರ ಭಾವಚಿತ್ರ. ಅದರ ಮೇಲೊಂದು ಪಾರದರ್ಶಕ ಹಾಳೆ. ಅದನ್ನು ಮೆಲ್ಲನೆ ಎತ್ತಿ ಚಿತ್ರವನ್ನೆ ದಿಟ್ಟಿಸಿದ್ದು ಅದೆಷ್ಟು ಸಲವೊ! ರಾಜಸೇವಾಸಕ್ತ? ಕೊರಳಲ್ಲಿ ತೂಗುತ್ತಿದ್ದ ಪದಕ? ಜರಿಯಂಚಿನ ರುಮಾಲು? ನಾನು ದೃಷ್ಟಿ ನೆಟ್ಟದ್ದು ಜಾಣನಾದ ಶಿಲ್ಪಿ ಕಡೆದಂತಿದ್ದ ನಗು ಮೊಗದ ಮೇಲೆಯೇ. ಗ್ರಂಥ ಓದಿ ಅವರ ಕೃತಿಗಳ–ಸಾಧನೆಗಳ ಪರಿಚಯ ಮಾಡಿ

ಕೊಂಡೆ. ಅವರ ಬಗೆಗೆ ಸಾಕಷ್ಟು ವಿವರವಾಗಿ ಅರಿತೆ. ಬಿ.ಎಂ.ಶ್ರೀ. ಕನ್ನಡದ ಕಣ್ವನಾಗಿದ್ದರು; ಋಷಿಯಾಗಿದ್ದರು ಆಚಾರ್ಯರು.

ಆ ಋಷಿಯನ್ನು ನಾನು ಕಂಡುದು ೧೯೪೪ರಲ್ಲಿ ರಬಕವಿಯಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ಪರಿಷತ್ತಿನ ಸಕಲ ಸದಸ್ಯರ ಸಭೆಯಲ್ಲಿ. ನಾವು ಪ್ರಗತಿಶೀಲತೆಯ ಗುಂಗಿನಲ್ಲಿದ್ದೆ. ಸಾಹಿತ್ಯ ಪರಿಷತ್ತನ್ನು ಶ್ರೀಸಾಮಾನ್ಯರ ಬಳಿಗೆ ತರಬೇಕು. ಹೇಗೆ? ಅಂಗರಚನೆಗೆ ತಿದ್ದುಪಡಿ ಸೂಚಿಸಿದೆ: "ಸದಸ್ಯತ್ವದ ವಾರ್ಷಿಕ ವರ್ಗಣಿಯನ್ನು ಒಂದು ರೂಪಾಯಿಗೆ ಇಳಿಸಬೇಕು." ಅನುಮೋದಿಸುವವರು? ಹತ್ತಿರದಿಂದಲೆ ಧ್ವನಿ ಕೇಳಿಸಿತು. ಹೊರಳಿ ನೋಡಿದೆ. ವಿ. ಕೃ. ಗೋಕಾಕರೆನ್ನುತ್ತಿದ್ದರು: "ಇದಕ್ಕೆ ನನ್ನ ವೋಟ್ ಅದೆ."

ಥಟ್ಟನೆ, ವೇದಿಕೆಯ ಮೇಲೆ ಕುಳಿತಿದ್ದ ಒಬ್ಬರು ಎದ್ದುನಿಂತರು. ಉಟ್ಟಿದ್ದದು ಅಡ್ಡಪಂಚೆ; ತೊಟ್ಟಿದ್ದುದು ಅರೆತೋಳಿನ ಬನಿಯನ್. ಬರಿಯ ತಲೆ (ತೆಳು ಬಿಳಿ ಕೂದಲು?) ಬಿ.ಎಂ.ಶ್ರೀ.! ಏರುದನಿಯಲ್ಲಿ ಉದ್ವಿಗ್ನರಾಗಿ ಅವರು ಮಾತನಾಡ ತೊಡಗಿದರು. ಗೋಕಾಕರು ಅನುಮೋದಿಸಿದರೆಂದು ಸಿಟ್ಟು ಬೆಂಕಿಯಾಗಿರಬೇಕು. ಈ ಸೂಚನೆ ಸ್ವೀಕೃತವಾದರೆ ಪರಿಷತ್ತಿನ ಕಥೆ ಮುಗೀತದೆ ಎಂಬುದನ್ನು ಮನಗಾಣಿಸುವಂತೆ ವಾದಿಸಿದರು. ಎಷ್ಟು ಶೋಭಾಯಮಾನವಾಗಿತ್ತು ಕೆಂಪಡರಿದ ಆ ಮುಖ! ಶ್ರೀಯವರ ಮಾತಿಗೆ ಪಲ್ಲವಿಯಾಗಿ ಮಗ್ಗುಲಲ್ಲಿ ಎದ್ದುನಿಂತು ಕೂಗಾಡಿದವರು ನನ್ನ ಪ್ರೀತಿಯ 'ಅಂತಿಗೊನೆ'ಯ ಕ. ವೆಂ. ರಾಘವಾಚಾರ್ಯರು. ಸೂಚನೆ ಬಿದ್ದು ಹೋಯಿತು. ತಾವು ಕಟ್ಟಿದ ಇತರ ಮಿತ್ರರ ಜತೆಗೂಡಿ ಕಟ್ಟಿದ-ಪರಿಷತ್ತಿನ ರಕ್ಷಣೆಗಾಗಿ ಹೋರಾಡಿದ್ದರು ಶ್ರೀ! ನಾನು ವಿಸ್ಮಯದಿಂದ ಮೂಕನಾಗಿದ್ದೆ. ಶ್ರೀಯವರ ಮಾತಿನುದ್ದಕ್ಕೂ ನಿಂತಿದ್ದವನು, ಮೆಲ್ಲನೆ ಕುಳಿತೆ.

ವಾಸ್ತವ ಸಂಗತಿ ಎಂದರೆ ಶ್ರೀಯವರೇ ಶ್ರೀಸಾಮಾನ್ಯನಾಗಿದ್ದರು. ಕನ್ನಡದ ಆಡಂಬರ ಬಾಹ್ಯಜಗತ್ತಿನಲ್ಲಿ; ಮನೆಯ-ಕುಟುಂಬದ-ಸದಸ್ಯರ ನಡುವೆ ಎಲ್ಲಿಲ್ಲದ ಸರಳತೆ-ಎಂದುಕೊಂಡೆ. ಇದು ಪೂರ್ಣ ನಿಜವಲ್ಲ. ಈ ಸರಳತೆ ಅವರ ಬದುಕಿನ ಅವಿಭಾಜ್ಯ ಅಂಶವಾಗಿತ್ತು ಎಂಬುದನ್ನು 'ಶ್ರೀ ಸಾಹಿತ್ಯ'ಕ್ಕೆ ವಿ.ಸೀ. ಬರೆದಿರುವ 'ಪರಿಚಯ-ಕಾಣಿಕೆ'ಯಿಂದ ಈಗಷ್ಟೇ ಅರಿತಿದ್ದೇನೆ.

೩

ಸಿರಿಗನ್ನಡಂ ಗೆಲ್ಗೆ! ಎಂದ 'ಶ್ರೀ' ಭವ್ಯ ಕರ್ನಾಟಕದ ಕನಸನ್ನು ಕಂಡಿದ್ದರು. ಕನ್ನಡದ ಬಾವುಟವನ್ನು ('ಬೀವುಟ' ಅನ್ನಬೇಕಾದರೆ) ಎತ್ತಿಹಿಡಿದರು. ಅದರ ಕಾವಲುಗಾರನಾದರು.

"ಕನ್ನಡದ ದೇಸಿ, ರೂಢಿ, ಜಾಯಮಾನ ಪ್ರಕಾಶವಾಗುವಂತೆ ಅಕ್ಷರವರಿಯದವರಿಗೂ ಹೆಚ್ಚಾಗಿ ಓದದವರಿಗೂ ಹೆಂಗಸರು, ಮಕ್ಕಳಿಗೂ ಅರ್ಥವಾಗುವಂತೆ ಕನ್ನಡದಲ್ಲಿ ಸಾಹಿತ್ಯ ನಿರ್ಮಾಣವಾಗಬೇಕು."

—ಹೀಗೆ ಹೇಳಿದ ಶ್ರೀಯವರನ್ನು ಸಂಸ್ಕೃತದ ದ್ವೇಷಿ ಎಂದವರುಂಟು.
ಆಗ ಅವರ ಉತ್ತರ ಕಟುವಾಗಿರುತ್ತಿತ್ತು :
"ಸಂಸ್ಕೃತದ ಹೆಂಡತಿ ಸಂಸ್ಕೃತಿ (ಅಂತ ಮಾತ್ರ) ಅನ್ನಬೇಡಿ!"

೪

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪರೋಕ್ಷ ಪ್ರೇರಣೆಯಿಂದ ದೇಶದ ಹಲವು ಭಾಷೆಗಳು ಪುನರುದಯದ ಭಾಗ್ಯ ಪಡೆದುವು. ಅದನ್ನು ಅರ್ಥ ಮಾಡಿಕೊಳ್ಳಲಾಗದವರು 'ಕಥೆ ಕವಿತೆಗಳಿಂದೇನು ಪ್ರಯೋಜನ?' ಎಂದು ಟೀಕಿಸಿದ್ದು ಸ್ವಾಭಾವಿಕ.

ಅಂಥವರಿಗೆ ಉತ್ತರ ಎನ್ನುವಂತೆ ಬೆಳಗಾವಿಯಲ್ಲಿ ಮಾಡಿದ ಒಂದು ಭಾಷಣದಲ್ಲಿ ಶ್ರೀ ಅಂದರು :

"ಕವಿಯಾದವನು ರಾಷ್ಟ್ರಕನೂ ಹೌದು. ಆಯುಧ ಹಿಡಿದು ಯುದ್ಧ ಮಾಡುವ ಸೈನಿಕನು ಮಾತ್ರ ರಾಷ್ಟ್ರಕನಲ್ಲ. ಕವಿಯ ನಿಲುವು, ಸ್ಥಾನ, ಮಾರ್ಗ, ಕಾರ್ಯ ಬೇರೆ; ಆದರೆ, ಏತಕ್ಕೂ (ಆತ) ಮನಸ್ಸನ್ನು ರೂಪಿಸಬಲ್ಲ, ಸ್ಫೂರ್ತಿ ಮೂಲವಾಗಬಲ್ಲ."

೫

ಕಲಬುರ್ಗಿಯಲ್ಲಿ ೧೯೨೮ರಲ್ಲಿ ಜರುಗಿದ ಹದಿನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಶ್ರೀ ನುಡಿದರು :

"ನಾವು ಕನ್ನಡಿಗರು, ಇಂದು, ಸತ್ತವರನ್ನು ಎಬ್ಬಿಸುವುದೇ ಅಲ್ಲ; ಬದುಕಿರುವವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು. ಹಿಂದಿನ ಸಾಹಿತ್ಯವನ್ನು ಪ್ರಯೋಜನಕಾರಿ ಮಾಡುವುದಕ್ಕೇ ಅಲ್ಲ; ಹೊಸ ಉತ್ತಮ ಸಾಹಿತ್ಯವೊಂದನ್ನು ಸೃಷ್ಟಿಮಾಡುವುದಕ್ಕೆ ಹೊರಟಿರುವೆವು. ಹೊರಟವರು ವಿಲಾಸವತಿಯ ಕೊರಳಿನ ಪುಷ್ಪಮಾಲಿಕೆಯೇ ಅಲ್ಲ ಸಾಹಿತ್ಯ, ಮಾನವ ಜೀವನದ ಪುನರ್ನಿರ್ಮಾಣ ಕಾರ್ಯದಲ್ಲಿ ಬದ್ಧಕಂಕಣವಾಗಿರುವ ವೀರನ ಕೈಯಿನ ಖಡ್ಗವೂ ಅಹುದೆಂದು ತಿಳಿದಿರುವೆವು."

ಇದು ಕನ್ನಡ ಪುನರುದಯದ ಶಂಖಧ್ವನಿ. ಅಂದಿಗೂ ಸಮಂಜಸ, ಇಂದಿಗೂ ಸಮಂಜಸ.

೬

ಹಳೆಯ ಮೈಸೂರಿನಲ್ಲಿ ಶಂಖ ಊದಿದರು, ಅಲ್ಲಿಯೇ ಪುಷ್ಪೋದ್ಯಾನ ನಿರ್ಮಿಸಿದರು ಎನ್ನಬಹುದಲ್ಲ? ತಪ್ಪು. ಸಾರಿಗೆ ಸೌಕರ್ಯಗಳಿರದಿದ್ದ ಆ ಕಾಲದಲ್ಲೇ ಅವರು ನಾಡನ್ನು ಸುತ್ತಿದರು, ಕನ್ನಡದ ಕುಂಭಕರ್ಣರನ್ನು ಎಚ್ಚರಗೊಳಿಸಿದರು.

ಇದರ ತರ್ಕಬದ್ಧ ಬೆಳವಣಿಗೆ, ಮುಪ್ಪು ನಗುತ್ತಿದ್ದರೂ ಧಾರವಾಡದಲ್ಲಿ ಹೊಸ ಕಾಲೇಜಿನ ಪ್ರಿನ್ಸಿಪಾಲರಾಗಲು ಅವರು ಒಪ್ಪಿದ್ದು. ಆಗ ಅವರು ಹಳೆಯ ಮೈಸೂರಿಗನಲ್ಲ. ಹೊಸ ಕನ್ನಡಿಗ. ತುಂಗಭದ್ರೆಯ ಆಚೆ ಹೋಗಲು ಮಾನವ ಸೇತುವೆಯಾದ ಆ ಮಹಾನುಭಾವ ಉತ್ತರ ಕರ್ನಾಟಕದ ನೆಲದಲ್ಲಿ ೧೯೪೬ರಲ್ಲಿ, ಅರುವತ್ತೆರಡನೆಯ ವಯಸ್ಸಿನಲ್ಲಿ ದೇಹವಿಟ್ಟರು. ತ್ರಿವರ್ಣ ಧ್ವಜ (ಮೂರು ಬಣ್ಣಗಳ ಬಾವುಟ) ಅವರ ಪಾರ್ಥಿವ ಶರೀರಕ್ಕೆ ಹೊದಿಕೆಯಾಯಿತು. ಇದು ಬಹಳ ಅರ್ಥಗರ್ಭಿತ.

ಇಪ್ಪತ್ತನೆಯ ಶತಮಾನದ ಬೆಳಕಿನ ಹಬ್ಬದಲ್ಲಿ ಹುದ್ದರಿಗಳ ಮೆರವಣಿಗೆ ಸಾಗಿದೆ. ಬಾವುಟದ ವೇದಿಕೆಯ ಮೇಲೆ ನಿಂತಿರುವ ಭವ್ಯ ವ್ಯಕ್ತಿಗೆ (ಅಡ್ಡಪಂಚೆ, ಅರೆತೋಳಿನ ಬನಿಯನ್) ಆ ಹುದ್ದರಿಗಳೆಲ್ಲ ನಮಿಸುತ್ತಿದ್ದಾರೆ.

ಆ ಹಿರಿಯರು ಬಿ.ಎಂ.ಶ್ರೀ.

ಈ ಶತಮಾನ 'ಶ್ರೀ ಶತಕ' ಎನಿಸಿಕೊಳ್ಳುವುದು ಅವರಿಂದಾಗಿಯೇ.

—೧೯೮೩

ಹಿರಿಯಣ್ಣ ಮಾಸ್ತಿ

ಕನ್ನಡದ ಹಿರಿಯ ಬರೆಹಗಾರ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಗೆ ಯಾವ ವಿಶೇಷಣ ಒಪ್ಪುತ್ತದೆ? ಪೂಜ್ಯ? ರಾಜ ಸೇವಾ ಪ್ರಸಕ್ತ? ಅಕಾಡಮಿ ಪ್ರಶಸ್ತಿ ವಿಜೇತ? ಡಾಕ್ಟರ್? ಅಣ್ಣ? ಒಂದೊಂದೂ ಒಪ್ಪವಿಡುವ ಗುಣವಾಚಕವೇ. ಮಾಸ್ತಿ ಮತ್ತು ಶ್ರೀನಿವಾಸ. ಆಶ್ಚರ್ಯ! ಬರಿಯ ಶ್ರೀನಿವಾಸ ಎಂದರೆ ಚಿತ್ರ ಪೂರ್ಣವಾಗುವುದಿಲ್ಲ. 'ಮಾಸ್ತಿಯವರು' ಎನ್ನಬೇಕು. ಸಾಹಿತಿ ಶ್ರೀನಿವಾಸರಿಗಿಂತ ಮಾನವ ಮಾಸ್ತಿ ದೊಡ್ಡವರು ಎಂದೆ? ಛೆ! ಛೆ! ಇದು ಅರ್ಥವಿಲ್ಲದ ತಾರತಮ್ಯ. ಮಾಸ್ತಿ ಎಂಬುದೇ ಬಹುಜನಸಮ್ಮತವಾದ ಶುಭನಾಮ. ಎರಡು ಎರಡೂವರೆ ಕೋಟಿ ಕನ್ನಡಿಗರ ಪ್ರೀತ್ಯಾದರಗಳಿಗೆ ಪಾತ್ರರಾದ ರಸಋಷಿಯನ್ನು ಮಾಸ್ತಿ ಎಂಬ ಎರಡೇ ಅಕ್ಷರಗಳಿಂದ ಕರೆಯುವುದಾದರೂ ಹೇಗೆ? ಸಲ್ಲದು. ಹಿರಿಯಣ್ಣ ಮಾಸ್ತಿ ಎನ್ನಬೇಕು. ಅದೇ ಸೊಗಸು.

ಜೂನ್ ೬ರ ವೇಳೆಗೆ ಹಿರಿಯಣ್ಣ ಮಾಸ್ತಿಯವರಿಗೆ ೮೧ ತುಂಬಿತು. ನಂಬುವುದು ಕಷ್ಟ. ತಮ್ಮ ಹೊಸ ಕೃತಿ 'ಭಾವ'ದ ಪ್ರಕಟಣೆಯ ಏರ್ಪಾಟು ಮಾಡಲು ತಾವೇ ಮುದ್ರಣಾಲಯಕ್ಕೆ ಬಂದಿದ್ದರಂತೆ. ದಿನವೂ ಸಂಜೆ ತಪ್ಪದೆ ಗಾಂಧಿಬಜಾರಿನ ದಾರಿಯಾಗಿ ಬಸವನಗುಡಿಯ ಕ್ಲಬ್ಬಿಗೆ ಅವರು ಬರುವರೆಂಬುದಕ್ಕೆ ಸಾಕ್ಷ್ಯ ನುಡಿಯಬಲ್ಲವರು ಸಹಸ್ರಾರು ಜನ. ಈಗಲೂ ನೇರನಡಿಗೆ, ಚಿಕಿತ್ಸಕ ನೋಟ, ಮೋಹಕ ನಗೆ, ಏನೇನೂ ಬಳಲಿಕೆ ತೋರದ ಗಂಟಲು. ೮೧ ಎಂದರೆ ನಂಬುವುದು ಹೇಗೆ? ಆದರೂ ದಾಖಲೆ, "ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಖರಸಂವತ್ಸರದ ಜ್ಯೇಷ್ಠಶುದ್ಧ ದ್ವಿತೀಯೆಯಂದು (೬-೬-೧೮೯೧) ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿಯಲ್ಲಿ ಜನ್ಮವೆತ್ತಿದರು," ಎನ್ನುತ್ತದೆ. ಇದ್ದೀತು, ಇದ್ದೀತು....

ವಾಸ್ತವವಾಗಿ ವಯಸ್ಸಿನ ಗೊಂದಲಕ್ಕೆ ಕೈಹಾಕಬೇಕಾದುದೇ ಇಲ್ಲ. ಯಾಕೆಂದರೆ ಹಿರಿಯಣ್ಣ ಮಾಸ್ತಿಯವರು ಕಾಲದ ಪರೀಕ್ಷೆಯಲ್ಲಿ ಎಂದೋ ಉತ್ತೀರ್ಣರಾಗಿ ಅಜರರು, ಅಮರರು ಎನಿಸಿದ್ದಾರೆ. ನಿನ್ನೆ, ಇಂದು, ನಾಳೆ ಈ ಮೂರು ಅವಸ್ಥೆಗಳಲ್ಲೂ ಅವರು ವಂದ್ಯರು.

ಯಾಕೆ? ಸಹಸ್ರಾರು ವರ್ಷ ಕಳೆದ ಮೇಲೂ ಜಕಣಾಚಾರಿಯನ್ನು ನಾವು ನೆನಸಿಟ್ಟಿರುವುದಾದರೂ ಯಾಕೆ? ಆಧುನಿಕ ಕನ್ನಡದ ಸಾಹಿತ್ಯದ ಮಹಾಸೌಧದ ಶಿಲ್ಪಿಶ್ರೇಷ್ಠರಲ್ಲವೆ ಶ್ರೀನಿವಾಸರು? ಮಾರ್ಗಪ್ರವರ್ತಕರಲ್ಲವೆ? ಅವರ ಹೆಜ್ಜೆ ಪಾಡನ್ನೇ ಅಲ್ಲವೆ ದೊಡ್ಡವರ ದಾರಿ ಎಂದು ಗುರುತಿಸಬೇಕಾದದ್ದು?

ಅಧ್ಯಯನದಲ್ಲಿ ಮಾಸ್ತಿಯವರು ಮೊದಲ ಪರೀಕ್ಷೆಯಿಂದ ಕೊನೆಯವರೆಗೂ ಪ್ರಪ್ರಥಮ ಸ್ಥಾನವನ್ನು ಯಾರಿಗೂ ಬಿಟ್ಟುಕೊಡಲಿಲ್ಲವಂತೆ. ಎಲ್ಲರಿಂದಲೂ ಸಲಾಂ ಸಂಪಾದಿಸಿದ ವಸ್ತಾದಿಯೇ ಸರಿ! ಸಾಹಿತ್ಯದಲ್ಲಿ ಅವರಿಗೆ ಪ್ರಾಪ್ತವಾದದ್ದೂ ಪ್ರಪ್ರಥಮ ಸ್ಥಾನವೇ ಅಲ್ಲವೇ? ಅವರು ಸರಕಾರೀ ಉದ್ಯೋಗದಲ್ಲಿದ್ದುದು, ಜಮಾಬಂದಿಗೆ ಹೋಗುತ್ತಿದ್ದುದು, ನಿಷ್ಠೆ ನಿಸ್ಪೃಹತೆಗಳಿಗಾಗಿ ಪ್ರಖ್ಯಾತರಾದುದು, ಆಡಳಿತದ ಏಣಿಯಲ್ಲಿ ಮೇಲಕ್ಕೆ ಏರಿದ ಅವರಿಗೆ ಮಂತ್ರಿ ಪದವಿ ಲಭಿಸಬೇಕಾಗಿದ್ದುದು ಇದೊಂದೂ ಇಂದಿಗಾಗಲೀ, ನಾಳೆಗಾಗಲೀ ಮುಖ್ಯವಲ್ಲ. ಇದು ಮಸಕಾಗಿ ಮರೆಯಾಗುವ ಮುಖ. ಜಾಜ್ವಲ್ಯಮಾನವಾದದ್ದು, ವೈಭವದಿಂದ ಕೂಡಿದ್ದು, ಉನ್ನತ ಪೀಠದಲ್ಲಿ ವಿರಾಜಮಾನವಾಗಿರುವ ಅವರ ಸಾಹಿತ್ಯಬಿಂಬ. ಅದರೆದುರು ಅಕ್ಕರಪ್ರಿಯರು ಸ್ತುತಿಪಾಠಕರಾಗಬಹುದು; ಎಲ್ಲ ವಿಶೇಷಣಗಳ ಮಾಲೆ ಕೋದು ಪರಾಕು ನುಡಿಯಬಹುದು. ಅಂತಹ ಹಿರಿಮೆಯನ್ನು ಗಳಿಸಿದ್ದಾರೆ ಮಾಸ್ತಿಯವರು ತಮ್ಮ ಕಲಾಸೃಷ್ಟಿಗಳಿಂದ, ಸ್ಫೂಜನ-ಚಿಂತನಗಳಿಂದ, ಅಖಂಡ ತಪಸ್ಸಿನಿಂದ.

೧೯೧೦ರಲ್ಲಿ ಬರೆದ ಮೊದಲ ಕಥೆಯಾದ 'ರಂಗಪ್ಪನ ಮದುವೆ'ಯಿಂದ ಇತ್ತೀಚೆಗೆ ಪ್ರಕಟವಾದ 'ವಿಚಾರ'ದ ತನಕ, ಅರುವತ್ತು ವರ್ಷಗಳ ಕಾಲ ಅವರು ಸೃಷ್ಟಿಸಿರುವ ಸಾಹಿತ್ಯದ ಹರವು ತಲೆದೂಗಿಸುವಂಥಾದ್ದು; ಲೋಕ ವೇದಿಕೆಯ ಕೀರ್ತಿಶಾಲಿ ಬರೆಹಗಾರರಿಗೆ ಸರಿ ದೊರೆಯಾಗುವಂಥಾದ್ದು.

ಪಂಪ ಹೇಗೋ ಹಾಗೆ:

ಕನ್ನಡ ಕಾವ್ಯ ಪ್ರಪಂಚದಲ್ಲಿ ಆದಿಕವಿ ಪಂಪ ಹೇಗೊ, ಕನ್ನಡ ಕಥಾಕ್ಷೇತ್ರದಲ್ಲಿ ಶ್ರೀನಿವಾಸರು ಹಾಗೆ!

ಕನ್ನಡ ಸಾಹಿತ್ಯೇತಿಹಾಸದಲ್ಲಿ ಮಾಸ್ತಿಯವರಿಗಿರುವ ಸ್ಥಾನವನ್ನು ಮೇಲಿನ ದೇಜಗೌ ನುಡಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಗುರುತಿಸುವುದು ಆಗದ ಮಾತು. ಈ ಕಥಾಕ್ಷೇತ್ರದ ವಿಸ್ತಾರದಲ್ಲಿಯೇ ಶಿಖರಪ್ರಾಯದ ಎರಡು ಕಾದಂಬರಿಗಳನ್ನೂ ಮಾಸ್ತಿಯವರು ರಚಿಸಿದರು: 'ಚೆನ್ನಬಸವನಾಯಕ' ಹಾಗೂ 'ಚಿಕವೀರ ರಾಜೇಂದ್ರ', ಕಾದಂಬರಿಯ ಶ್ರೇಷ್ಠ ಗುಣಗಳು ಈ ಕೃತಿಗಳಲ್ಲಿರುವುದರಿಂದಲೇ ನೂರು ಟೀಕಾಸ್ತ್ರಗಳಿಂದ ನೈಕುಗ್ಗಿಸಿಕೊಂಡರೂ ಇವು ಇಂದಿಗೂ ಶೋಭಾಯಮಾನವಾಗಿವೆ.

'ಇಂದಿರೆಯೊ, ಅಲ್ಲವೊ', 'ಮೊಸರಿನ ಮಂಗಮ್ಮ', 'ವೆಂಕಟಶಾಮಿಯ ಪ್ರಣಯ', 'ಹೇಮಕೂಟದಿಂದ ಬಂದ ಮೇಲೆ' ಮತ್ತಿತ್ತರ ಹಲವಾರು ಸಣ್ಣ ಕತೆ

ಗಳು, ಕನ್ನಡ ಮಾತ್ರವಲ್ಲ ಇಡಿಯ ಭಾರತೀಯ ಸಾಹಿತ್ಯಕ್ಕೆ, ಆ ಮೂಲಕ ಲೋಕ ಸಾಹಿತ್ಯಕ್ಕೆ, ಮಾಸ್ತಿಯವರು ನೀಡಿರುವ ಕಾಣಿಕೆ, ಅವರ 'ಸುಬ್ಬಣ್ಣ' ನೀಳ್ಗತೆ ಮೂರು ತಲೆಮಾರಿನ ಓದುಗರ ಮನಸ್ಸನ್ನು ಸೂರೆಗೊಂಡಿದೆ ಎಂದರೆ ಅದೇನು ಕಡಮೆಯಾಯಿತೆ?

ಪ್ರಗತಿಶೀಲತೆಯ ಬಿರುಗಾಳಿ ಬೀಸಿದಾಗ,'ಉಳ್ಳವರ ಸುಖಸಂತೋಷಗಳನ್ನಷ್ಟೆ ಶ್ರೀನಿವಾಸರು ಚಿತ್ರಿಸುತ್ತಾರೆ' ಎಂಬ ಟೀಕೆ ಕೇಳಿಬಂತು. ದೆಷ್ಟು ಹಾಸ್ಯಾಸ್ಪದವೆಂಬು ದಕ್ಕೆ ಶ್ರೀನಿವಾಸರು ಚಿತ್ರಿಸಿದ ಪಾತ್ರಗಳ ಕುಲಗೋತ್ರಗಳ ಪಟ್ಟಿಯೊಂದೇ ಸಾಕು.

ಮಾಸ್ತಿಯವರ ಪ್ರಾಮಾಣಿಕತೆಗೆ ಎದುರು ಮಾತಿಲ್ಲ. ಕಲಾವಿದನ ಹಿರಿಮೆಗೆ ಇದಕ್ಕಿಂತ ಬೇರೆ ಒರೆಗಲ್ಲು ಬೇಕೆ? ಅವರು ಚಿತ್ರಿಸಿದ್ದು ಬದುಕಿನ ಸುಖದುಃಖ ಗಳನ್ನು. ಚಿತ್ರಣದುದ್ದಕ್ಕೂ ಮಾನವೀಯತೆಯ ನಸುಬೆಳಕು, ಅನುಕಂಪದ ಬೆಳದಿಂಗಳು. ಸಾಹಿತ್ಯ ಅಮೂಲ್ಯವೆನ್ನಿಸುವುದಕ್ಕೆ ಈ ದರ್ಶನ ಸಾಲದೆ?

ತಮ್ಮ ಅಭಿವ್ಯಕ್ತಿಗೆ ನಾಟಕದ ಪ್ರಕಾರವನ್ನೂ ಮಾಸ್ತಿ ಬಳಸಿದರು. 'ಯಶೋಧರಾ', 'ತಿರುಪಾಣಿ', 'ಕಾಕನಕೋಟೆ', 'ಶಿವಛತ್ರಪತಿ', 'ಮಾಸತಿ' ಮತ್ತಿತರ ನಾಟಕಗಳು ಮಾಸ್ತಿಯವರ ರಸಸೃಷ್ಟಿಗಳು.

ಅದರಂತೆಯೇ, ಕಾವ್ಯ ಪ್ರಪಂಚದಲ್ಲಿ ಅವರ ದುಡಿಮೆಯ ಫಲ: ಅನೇಕ ಸುನೀತಗಳು, ಖಂಡಕಾವ್ಯಗಳಾದ 'ಮೂಕನ ಮಕ್ಕಳು', 'ಗೌಡರ ಮಲ್ಲಿ' ಬೇರೆ ಕಥನಕವನಗಳು ಇವು ಮಾಸ್ತಿಯವರ ಹುಲುಸಾದ ಕಾವ್ಯ ಕೃತಿಗೆ ದೃಷ್ಟಾಂತಗಳು.

ಅವರು ಹಾಗೂ ಅವರ ಸಂಗಡಿಗರು ದುಡಿದ ಪುನರುದಯದ ಕಾಲದಲ್ಲಿ 'ಪರಸ್ಪರ ಪ್ರಶಂಸೆ'ಯೇ 'ವಿಮರ್ಶೆ' ಎನಿಸಿಕೊಂಡಿತ್ತು. ಅಂತಹ ಉನ್ಮಾದದ ವೇಳೆಯಲ್ಲಿ ವಿವೇಚನಾಪರರಾಗಿ ಮಾಸ್ತಿಯವರು ಹಲವು ವಿಮರ್ಶಾತ್ಮಕ ಲೇಖನ ಗಳನ್ನು ಬರೆದುದೊಂದು ಹೆಚ್ಚುಗಾರಿಕೆ.

ಕಾಲದ ಬೆಲೆ ಏನು? ಒಂದು 'ವಸ್ತು' ಕುಲಿಮೆಯಲ್ಲಿ ಕುದಿದು ದ್ರವವಾಗಲು ಹಿಡಿಯುವ ವೇಳೆ ಎಷ್ಟು?

ತಮ್ಮ 'ಚೆನ್ನಬಸವನಾಯಕ' ಕೃತಿಯನ್ನು ಕುರಿತು ಶ್ರೀನಿವಾಸರೇ ಆಡಿರುವ ಕೆಲವು ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು.

"ಈ ಕತೆಯನ್ನು ಬರೆಯುವ ಯೋಚನೆ ನನಗೆ ೧೯೨೦–೨೧ರಲ್ಲಿ, ಚಿಕ್ಕ ಮಗಳೂರಿನಲ್ಲಿ ಸಬ್‌ಡಿವಿಷನ್ ಆಫೀಸರ್ ಆಗಿದ್ದಾಗ ಬಂದಿತು....ಆಗಲೇ ನಾನಿ ದನ್ನು ಬರೆಯಬೇಕು; ಅವಕಾಶವಿರಲಿಲ್ಲ. ಬೆಂಗಳೂರಿಗೆ ಬಂದಮೇಲೆ ೧೯೨೨ರಲ್ಲಿ ನಾನು ಇದರ ಒಂದು ಪರಿಜನ್ನು ಹಾಕಿಕೊಂಡೆನು; ೧೯೨೪ರಲ್ಲಿ ಅರುವತ್ತು ಪುಟ ಗಳನ್ನು ಬರೆದೆನು. ಆದರೆ ಒಟ್ಟಿಗೆ ಇದಕ್ಕಾಗಿಯೇ ಕುಳಿತುಕೊಳ್ಳದೆ ಕೆಲಸ ಮುಂಬರಿಯುವಂತಿರಲಿಲ್ಲ; ಆದ್ದರಿಂದ ಅದು ಅಲ್ಲಿಗೆ ನಿಂತಿತ್ತು.

ಆ ಮೇಲೆ ದಿನ ಕಳೆದಂತೆ ಸರ್ಕಾರದ ಕೆಲಸ ಹೆಚ್ಚು ಹೆಚ್ಚಿನ ಪ್ರಮಾಣದಲ್ಲಿ ನನ್ನ ಶಕ್ತಿಯನ್ನೂ ತೆಗೆದುಕೊಂಡಿತು. ಹತ್ತೊಂಬತ್ತು ವರುಷ ಕಳೆದು ಸರ್ಕಾರದ ಕೆಲಸ ಮುಗಿದಾಗ ಪರಿಷತ್ತಿನ ಕೆಲಸ ಐದು ವರುಷದ ದಿನ ನನ್ನ ಜೀವನವನ್ನು ಆಕ್ರಮಿಸಿತು.

ಅದೂ ಬಿಟ್ಟಮೇಲೆ ಕತೆ ಮುಂದುವರಿಯುವುದು ಸಾಧ್ಯವಾಯಿತು....

ನಾಡನ್ನು ಕಟ್ಟಬೇಕು, ಕನ್ನಡದ ಜನಪದವನ್ನು ಒಂದಾಗಿ ಬೆಸೆಯಬೇಕು, ಸಾಹಿತ್ಯ ಪರಿಷತ್ತನ್ನು ಬಲಪಡಿಸಿ ಕನ್ನಡಕುಲದ ವಾಣಿಯಾಗಿ ಮಾಡಬೇಕು ಎಂದು ಕರ್ನಾಟಕ ಉದ್ದಗಲದಲ್ಲಿ, ಧರ್ಮೋಪದೇಶಕನ ಉತ್ಸಾಹದಿಂದ ಮಾಸ್ತಿ ಓಡಾಡಿದರು. ಆದರೆ, ಬಾಹ್ಯ ಚಟುವಟಿಕೆಗಳ ಕೇಂದ್ರವಾಗಿದ್ದಾಗಲೂ ಕತೆಯೊಂದು ಒಳಮನಸ್ಸಿನಲ್ಲಿ 'ನೆನೆಯು'ತ್ತಲಿತ್ತು....

ಮಾಸ್ತಿಯವರ ಚಿಂತನಪರತೆ ಅವರನ್ನು ಕ್ರಿಯಾಶೀಲರನ್ನಾಗಿ ಮಾಡಿದುದು ಕನ್ನಡದೊಂದು ಭಾಗ್ಯ. ಸಾಹಿತ್ಯಕವಲ್ಲದ ಅವರ ಚಟುವಟಿಕೆಗಳಿಗೆ ಪದರಗಳು ಎರಡು : ಒಂದು, ಜನತೆಯ ನಿತ್ಯಜೀವನದಲ್ಲಿ ತಾಯ್ನುಡಿಗಿರಬೇಕಾದ ಪ್ರಾಶಸ್ತ್ಯಕ್ಕೆ ಸಂಬಂಧಿಸಿದ್ದು ; ಇನ್ನೊಂದು, ರಾಷ್ಟ್ರಜೀವನದಲ್ಲಿ ಪ್ರತಿಯೊಬ್ಬ ಪ್ರಜೆಯೂ ವಹಿಸಬೇಕಾದ ಪಾತ್ರವನ್ನು ಕುರಿತದ್ದು.

ಸ್ವತಃ ಕನ್ನಡದ ಶ್ರೇಷ್ಠ ಗದ್ಯಲೇಖಕರಾದ ಮಾಸ್ತಿಯವರು ಕನ್ನಡ ಭಾಷೆಯ ಶಕ್ತಿ ಸಾಮರ್ಥ್ಯಗಳನ್ನು ಚೆನ್ನಾಗಿ ಬಲ್ಲರು. ಜನಸಮುದಾಯದ ಬದುಕು ಹಸನಾಗಬೇಕಾದರೆ ರಾಜ್ಯದ ಆಡಳಿತ ಭಾಷೆ ಕನ್ನಡವಾಗಬೇಕು. ನಾಳೆಯ ವೇಳೆಗೆ ಹೆಚ್ಚು ಧೀಮಂತವಾಗಬೇಕಾದರೆ ಅದಕ್ಕೆ ಶಿಕ್ಷಣ ಮಾತೃಭಾಷೆಯಲ್ಲಿ ದೊರೆಯಬೇಕು. ಹರಿಹಂಚಿಹೋದ ಕನ್ನಡನಾಡು ಒಂದಾಗಬೇಕೆಂದು ಹಿಂದೆ ಎಷ್ಟೊಂದು ಪರಿಣಾಮಕಾರಿಯಾಗಿ ಹೋರಾಡಿದರೋ ಭಾಷೆಗೆ ಸಂಬಂಧಿಸಿಯೂ ಅವರದು ಅಷ್ಟೇ ಬಲವಾದ ಆಗ್ರಹ.

ಲೋಕದ ಕಾರ್ಯರಂಗದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುವ ಭಾರತದಲ್ಲಿ ನಿರ್ವಹಿಸಬೇಕಾದ ಪಾತ್ರ ಯಾವುದು? ಈ ಬಗೆಗೆ ಮಾಸ್ತಿಯವರದು ಸ್ಫುಟವಿಚಾರ:

"ಭರತವರ್ಷದ ಮಕ್ಕಳು ಮೊದಲಾಗಿ, ಮುಖ್ಯವಾಗಿ, ತಮ್ಮ ದೇಶದ ದೃಷ್ಟಿ ಯಾವುದು ಎಂದು ಯೋಚನೆ ಮಾಡಬೇಕು. ಬೇರೆ ದೇಶಗಳ ಸಂಸ್ಕೃತಿ ಅನುಭವಗಳಿಂದ ಈ ದೃಷ್ಟಿಯನ್ನು ತಿದ್ದಿಕೊಳ್ಳುವುದು ಅವಶ್ಯಕವೆನಿಸಬಹುದು. ಹಾಗೆ ಕಂಡಾಗ ಅದನ್ನು ತಿದ್ದಿಕೊಳ್ಳಬೇಕು ; ಹಿಂತೆಗೆಯಬಾರದು. ಆದರೆ, ಮೂಲತಃ ದೃಷ್ಟಿ ಭರತವರ್ಷದ್ದಾಗಬೇಕು, ಇದು ಸಿದ್ಧಿಸಬೇಕಾದರೆ ನಾವೆಲ್ಲ ನಮ್ಮ ಪೂರ್ವಾರ್ಜಿತ ಸಂಸ್ಕೃತಿಯ ಸ್ವರೂಪವನ್ನು ಮನದಟ್ಟು ಮಾಡಿಕೊಳ್ಳಬೇಕು."

ಈ ರೀತಿಯ ಪ್ರತಿಪಾದನೆಯನ್ನು ಮಾಸ್ತಿಯವರು ಲೇಖನಗಳ ಮೂಲಕ ಉಪನ್ಯಾಸಗಳ ಮೂಲಕ ಪರಿಣಾಮಕಾರಿಯಾಗಿ ಮಾಡುತ್ತಾರೆ. ಇಂತಹ ಕಾರ್ಯ

ಶೀಲತೆ ಸಾಹಿತ್ಯಸೃಷ್ಟಿಗೆ ಅಡ್ಡಿಯಾಗುವುದಿಲ್ಲ. ಉದಾಹರಣೆಗೆ, ದೀರ್ಘಕಾಲ ಅವರು ನಡೆಸಿಕೊಂಡು ಬಂದ 'ಜೀವನ' ಮಾಸಪತ್ರಿಕೆ. ಇಲ್ಲಿ ಸಂಪಾದಕ ಮಾಸ್ತಿಯವರು ರಾಷ್ಟ್ರದ ಆಗುಹೋಗುಗಳಿಗೆ ಸಂಬಂಧಿಸಿ ನಿರ್ಭೀತಿಯಿಂದ ಬರೆದರು. ಕುಸುರುತನದ ಜೊತೆಗೆ ಕೂರಲಗಿನ ತೀಕ್ಷ್ಣತೆಯೂ ಅವರ ಲೇಖನಿಯಲ್ಲಿ ಕಂಡು ಬಂದುದು ಈ ಸಂಪಾದಕೀಯ ಬರವಣಿಗೆಯಲ್ಲೇ.

ಮಾಸ್ತಿಯವರದು ಹಿರಿಯ ಸಂಸಾರ. ಅವರ ಪ್ರೋತ್ಸಾಹ ನೆರವುಗಳಿಂದ ಸಾಹಿತ್ಯಕೃಷಿ ಮಾಡಿದವರು ಅನೇಕ. ಅವರನ್ನು ಗುರುಭಕ್ತಿಯಿಂದ ಪೂಜ್ಯರೆಂಬ ಆದರಭಾವದಿಂದ, ನೋಡುವವರ ಸಂಖ್ಯೆ ದೊಡ್ಡದು.

ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ, ಅಖಿಲ ಭಾರತ ಲೇಖಕರ ಸಮ್ಮೇಳನದ ಅಧ್ಯಕ್ಷತೆ, ಇಂತಹ ಗೌರವಗಳನ್ನು ಪಡೆದ ಮಾಸ್ತಿಯವರಿಗೆ ಕೇಂದ್ರ ಸಾಹಿತ್ಯ ಅಕಾಡಮಿಯ ಪಾರಿತೋಷಕ ದೊರೆಯಲಿಲ್ಲ ಎಂಬ ಕೊರಗು ಕನ್ನಡದ ಅನೇಕರನ್ನು ಕಾಡಿತು. ತಡವಾಗಿಯಾದರೂ ಆದೊಂದು ಲೋಪವನ್ನು ಅಕಾಡಮಿ ಸರಿಪಡಿಸಿತು. ಶ್ರೀನಿವಾಸರ ಸಣ್ಣಕತೆಗಳ ಸಂಕಲನಕ್ಕೇ ಪಾರಿತೋಷಕ ದೊರೆತು, ಅವರ ಕತೆಗಾರಿಕೆಯ ಮೇಲ್ಮೆಗೆ ಪೂಜೆ ಸಂದಂತಾಯಿತು.

ಅರುವತ್ತಕ್ಕೆ ಅರಳು ಮರಳು ಎನ್ನುತ್ತಾರೆ. ಸಾಮಾನ್ಯ ಜನರ ವಿಷಯದಲ್ಲಿ ಹಾಗಿರಬಹುದು. ಮಾಸ್ತಿಯವರಿಗಾದರೋ ಅರುವತ್ತು ಪ್ರಬುದ್ಧಾವಸ್ಥೆ. ಹೆಚ್ಚೆಂದರೆ ಈಗಿನದು ಇಳಿಮುಖವಾಗುತ್ತಿರುವ ಯೌವನಾವಸ್ಥೆ. ಮಧ್ಯವಯಸ್ಸು ಬರಲು ಇನ್ನೂ ಬಹಳದಿನ ಕಾಯಬೇಕು.

ಮೊದಲೊಮ್ಮೆ ಹೇಳಿದಂತೆ ಮಾಸ್ತಿಯವರ ವಿಷಯದಲ್ಲಿ ವಯಸ್ಸಿನ ಗೋಜು ಅರ್ಥವಿಲ್ಲದ್ದು. ಅವರು ಕಾಲದ ಪರೀಕ್ಷೆಗೆ, ಎಂದೋ ಅಣಿಯಾಗಿ ನಿಂತ ಹಿರಿಯಣ್ಣ.

—೧೯೬೨

ಒಂಟಿ ಪಯಣಿಗ

೧

೧೯೬೩ರ ಬೇಸಗೆಯಲ್ಲಿ ಕಾರವಾರದಲ್ಲಿ ನಲವತ್ತೈದನೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರಗಿತು. ಅದರ ಅಧ್ಯಕ್ಷತೆ ವಹಿಸಿದ್ದವರು ಕಡೆಂಗೋಡ್ಲು ಶಂಕರಭಟ್ಟರು ಆ ಸಂದರ್ಭದಲ್ಲಿ ಅವರನ್ನು ಕುರಿತು 'ಸಂಯುಕ್ತ ಕರ್ನಾಟಕ' ಸಾಪ್ತಾಹಿಕ ಮಂಜರಿಗಾಗಿ ನಾನು ಬರೆದ ಲೇಖನ ಹೀಗಿದೆ :

'ರಾಷ್ಟ್ರಬಂಧು' ಪತ್ರಿಕೆಯನ್ನು ಶಾಲೆಗೆ ತರಿಸುತ್ತಿದ್ದರು. 'ಹಯರ್ ಎಲಿಮೆಂಟರಿ' ಶಾಲೆಯ ವಾಚನಾಲಯಕ್ಕೆ. ಅಂಚೆ ಆ ಊರಿಗೆ ಬರುತ್ತಿದ್ದುದು ಮಧ್ಯಾಹ್ನದ ವೇಳೆ. ಪತ್ರಿಕೆ ಬಂದೊಡನೆಯೇ ಹಿರಿಯ ತರಗತಿಯ ಕೆಲ ಹುಡುಗರು ಒಡೆದು ತೆರೆದು ಓದುತ್ತಿದ್ದರು. ತರಗತಿಗಳು ಆರಂಭವಾಗುವತನಕ ಈ ವಾಚನ.

ಅಂತಹ ಒಂದು ಮಧ್ಯಾಹ್ನ, ಆ ಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದ ಈ ಲೇಖಕ ಜಗಲಿಯುದ್ದಕ್ಕೂ ಕುಣಿಯುತ್ತ, ಕುಪ್ಪಳಿಸುತ್ತ ತನ್ನ ತರಗತಿಯ ಕಡೆಗೆ ಬಂದ. ಹುಡುಗರ ಗುಂಪೊಂದು ಪತ್ರಿಕೆ ಓದುತ್ತಿತ್ತು. ಈತ ಹಣಿಕಿ ನೋಡಿದ. ಎರಡನೆಯ ಪುಟ. ವಾರದ ಕತೆ. 'ಮೋಹಜಾಲ.'

ಮೋಹಜಾಲ ಎಂಬ ಪದಗಳನ್ನು ಗಟ್ಟಿಯಾಗಿ ಉಚ್ಚರಿಸಿ, ಗಂಟೆ ಬಾರಿಸಲು ಇನ್ನೂ ಸ್ವಲ್ಪ ಹೊತ್ತಿದೆ ಎಂಬ ನಂಬಿಕೆಯಿಂದ, ಹುಡುಗ ಇನ್ನೊಂದು ದಿಕ್ಕಿಗೆ ನಡೆದ.

ಸ್ವಲ್ಪ ದೂರ ಹೋಗುತ್ತಲೇ ಕತೆಯ ಶೀರ್ಷಿಕೆಯ ಪದಗಳು ಕಣ್ಣೆದುರು ಕಟ್ಟಿ ಆತ ನಿಂತ ! ಎಲಾ ! ನಿಜವೇ ? ಅಲ್ಲಿಂದ ಹೊರಳಿ, ಪುನಃ ಆತ ಪತ್ರಿಕೆಯತ್ತ ಧಾವಿಸಿದ.

ನಿಜ. ಸಂದೇಹವೇ ಇರಲಿಲ್ಲ.

ಸಂಗತಿ ಇದು : ನಾಲ್ಕು ವಾರಗಳಿಗೋ ಆರು ವಾರಗಳಿಗೋ ಹಿಂದೆ ಆ ವಿದ್ಯಾರ್ಥಿ ತಮಾಷೆಗೆಂದು 'ಮೋಹಜಾಲ' ಎಂಬ ಕತೆ ಬರೆದಿದ್ದ. ತಮಾಷೆ ಅಂತಲೇ 'ರಾಷ್ಟ್ರಬಂಧು' ಸಂಪಾದಕರ ವಿಳಾಸ ಬರೆದು ಅಂಚೆಗೆ ಸೇರಿಸಿದ್ದ. ಅಷ್ಟು ಮಾಡಿ, ಅದರ ವಿಷಯ ಮರೆತುಬಿಟ್ಟಿದ್ದ.

'ರಾಷ್ಟ್ರಬಂಧು' ಸಂಪಾದಕರು ಆ ಕತೆ ಪ್ರಕಟಣೆಗೆ ಯೋಗ್ಯವಾಗಿದೆ ಎಂದು ಭಾವಿಸಿ (ಏನು ಕಂಡರೋ ಅದರಲ್ಲಿ!) ಅಚ್ಚು ಹಾಕಿದ್ದರು. ಇತರ ಹುಡುಗರು ಬೆರಗಾಗಿ (ಅಲ್ಲದೆ ಇನ್ನೇನು) ಅದನ್ನು ಓದುತ್ತಿದ್ದರು.

ಲೇಖಕ ಎಷ್ಟು ಹಿಗ್ಗಿದನೆಂದರೆ, ಕೆಲಕಾಲ 'ಕತೆಗಾರ' ಎಂಬ ಕಾವ್ಯನಾಮ ದಿಂದಲೇ ತನ್ನ ಕೃತಿಗಳನ್ನು ಪತ್ರಿಕೆಗಳಿಗೆ ಕೊಟ್ಟ.

ಹಾಗೆ ಒಬ್ಬ ಬರೆಹಗಾರನನ್ನು ಬೆಳಕಿಗೆ ತಂದವರು 'ರಾಷ್ಟ್ರಬಂಧು'ವಿನ ಸಂಪಾದಕರಾಗಿದ್ದ ಕಡೆಂಗೋಡ್ಲು ಶಂಕರಭಟ್ಟರು.

ಮೇಲಿನದು ಒಂದು ದೃಷ್ಟಾಂತ ಮಾತ್ರ. ಈ ರೀತಿ, ಅಂಬೆಗಾಲಿಡುವ ಎಷ್ಟೋ ಮಕ್ಕಳನ್ನು ಕಂಡು, ನಗೆಯಾಡಿ, ತುಸು ಆಡಿಸಿ, ಅವು ಎದ್ದು ನಿಂತು ಓಡಿಯಾಡುವುದನ್ನು ಕಂಡವರು ಶಂಕರಭಟ್ಟರು.

ಹುಡುಗಿಯರ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ; ಉಳಿದ ವೇಳೆಯಲ್ಲಿ ಪತ್ರಿಕಾ ವ್ಯವಸಾಯ; ಮತ್ತೂ ವೇಳೆ ಉಳಿದರೆ ಸಾಹಿತ್ಯ ಸೃಷ್ಟಿ. ಇಷ್ಟನ್ನೂ ಅವರು ಮಾಡುತ್ತಿದ್ದುದು ಸಂಸಾರವಂದಿಗನಾಗಿ, ಸದ್ಗೃಹಸ್ಥನಾಗಿ.

ಇಪ್ಪತ್ತೈದರ ಯುವಕ 'ರಾಷ್ಟ್ರಬಂಧು'ವಿನ ಸಂಪಾದಕರಾದರು. ಇಪ್ಪತ್ತೈದು ವರ್ಷಗಳ ಕಾಲ ಆ ಸ್ಥಾನದಲ್ಲಿದ್ದರು. ಪತ್ರಿಕೆಯ ರಜತಮಹೋತ್ಸವ ಸಂಚಿಕೆ ಹೊರಬಿದ್ದ ಮೇಲೆ ಪತ್ರಿಕೆಯ ಒಡೆಯರಿಗೆ ವಂದಿಸಿ ಸ್ವತಂತ್ರರಾದರು.

ಅನಂತರ 'ರಾಷ್ಟ್ರಮತ' ಹುಟ್ಟಿಕೊಂಡಿತು. ಅಲ್ಲಿಯೂ ಕಳೆದ ಹನ್ನೊಂದು ಹನ್ನೆರಡು ವರ್ಷಗಳಿಂದ ಅವರು ಸಂಪಾದಕರು.

ಈ ರೀತಿ ಬಹುಮುಖ ಜೀವನವಿದ್ದರೂ ಕಡೆಂಗೋಡ್ಲು ಏಕಾಂತಪ್ರಿಯರು. ಚಿಂತನೆ ಇಷ್ಟ. ಅಂತರ್ಮುಖಿ.

ಕನ್ನಡ ಪತ್ರಿಕಾವೃತ್ತಿಯಲ್ಲಿ ಭೀಷ್ಮ ಎನಿಸಿಕೊಳ್ಳುವಷ್ಟು ಅವರು ದುಡಿದಿರುವ ರಾದರೂ ಆ ಪತ್ರಿಕೆಗಳು ದಕ್ಷಿಣ ಕನ್ನಡಕ್ಕೆ ಸೀಮಿತವಾದುದರಿಂದ ಅವರ ಅಗ್ರ ಲೇಖನಗಳು ಎರಡು ಕೋಟಿ ಕನ್ನಡಿಗರಿಗೆ ದಾರಿ ದೀಪವಾಗಲಿಲ್ಲ.

ಆದರೆ ಕವಿ ಕಡೆಂಗೋಡ್ಲು ಹಾಗಲ್ಲ. 'ನಲ್ಮೆ'ಯ ಕರ್ತೃ. ಕರ್ನಾಟಕದ ಆದ್ಯಂತ ಕವಿಕಾವ್ಯ ಪಕ್ಷಪಾತಿಗಳ ಮನ್ನಣೆಗೆ ಪಾತ್ರರಾದರು. ಕವಿಯಾಗಿ, ಕತೆ ಗಾರರಾಗಿ, ಕಾದಂಬರಿಕಾರರಾಗಿ, ನಾಟಕಕಾರರೂ ಆಗಿ, ಎಲ್ಲೆಡೆಗಳಿಂದ ಆದರ ಗಳಿಸಿದರು.

ಹೆಜ್ಜೆಹೆಜ್ಜೆಗೂ ಹೊಸತನ್ನು ಸಹೃದಯತೆಯಿಂದ ಅರ್ಥಮಾಡಿಕೊಂಡು ಮೈಗೂಡಿಸಿಕೊಳ್ಳುವ ಅಪೂರ್ವ ಪಾಂಡಿತ್ಯ; ಹೊರಗೆ ಕ್ಷೋಭೆ ಎದ್ದು ಒಳಗೆ ಅಲ್ಲೋಲಕಲ್ಲೋಲವಾದಾಗಲೂ ಮನಸ್ಸನ್ನು ಸಮತೋಲ ಸ್ಥಿತಿಯಲ್ಲಿ ಇರಿಸಿಕೊಳ್ಳ ಬಲ್ಲ ಅದ್ಭುತ ಸಾಮರ್ಥ್ಯ, ನುಡಿನಡೆಗಳ ಸಾಮರಸ್ಯ ಇವು ಶಂಕರಭಟ್ಟರನ್ನು ಹಿರಿಯ ಜೀವವನ್ನಾಗಿ, ತುಂಬಿದ ಕೊಡವನ್ನಾಗಿ ಮಾಡಿವೆ.

ಅದೆಷ್ಟೋ ವರ್ಷಗಳ ಕಾಲ ತಪ್ಪದೆ ಪ್ರತಿ ಸಂಜೆಯೂ (ಗುಡುಗು ಮಿಂ
ಗಳೊಡನೆ ಪ್ರಕೃತಿ ಮುನಿದ ಕಾರ್ಗಾಲದ ಕೆಲದಿನಗಳನ್ನು ಬಿಟ್ಟು) ಕಡೆಂಗೋ
ಶಂಕರಭಟ್ಟರು ಕದ್ರಿಯ ತಮ್ಮಮನೆಯಿಂದ ಹಂಪನಕಟ್ಟೆಗೆ ನಡೆದು ಹೋಗು
ದ್ದರು. ಶುಭ್ರವಾದ ಕಚ್ಚೆಪಂಚೆ, ಶರಟು, ಕೋಟು, ಕೈಯಲ್ಲೊಂದು ಕೊ
ಯಾವಾಗಲೂ ಒಬ್ಬರೇ. ಎಂದೂ ರಸ್ತೆಗಿಳಿಯುತ್ತಿರಲಿಲ್ಲ. ದಂಡೆಯ ಮೇಲಿ
ಮಾರ್ಗಕ್ರಮಣ.

ಹಂಪನಕಟ್ಟೆಯ ಮೈದಾನದಲ್ಲಿ ಸಂಜೆಯ ಜನಸಂದಣಿ. ಶಂಕರಭಟ್ಟರು
ಸಂದಣಿಯಲ್ಲಿ ಒಬ್ಬರಾಗುತ್ತಿರಲಿಲ್ಲ. ದಂಡೆಯುದ್ದಕ್ಕೂ ನಡೆದವರು ಮುಚ್ಚಿಂ
ಯಾದಂತೆ ಮರಳುತ್ತಿದ್ದರು, ಮನೆಗೋಡೆಗಳ ಮರೆಗೆ.

ಸಾಹಿತ್ಯಲೋಕದ ವಂದಿಮಾಗಧರು, ಪಾಳೆಯಗಾರರು, ಭಕ್ತಾದಿಗಳ
ತಂಡ ಗುಂಪುಗಳು ಯಾರೊಡನೆಯೂ ಸಂಬಂಧವಿಲ್ಲ ಶಂಕರಭಟ್ಟರಿಗೆ. ಆ ಕಾರ
ದಿಂದಲೇ ಅಗ್ಗದ ಪ್ರಚಾರ ಅವರಿಗೆ ಲಭ್ಯವಾಗಿಲ್ಲ.

ಬದುಕಿನಲ್ಲಿ ಸುಖದುಃಖಗಳನ್ನು ಸಮಾನವಾಗಿ ಸ್ವೀಕರಿಸಿದ ಮಹಾನುಭಾ
ಶಂಕರಭಟ್ಟರು. ಪ್ರಾಧ್ಯಾಪಕತನದಿಂದ ನಿವೃತ್ತಿಹೊಂದಿ, ನಗರದ ಕಲಸವದಿಂ
ದೂರ ಹಳ್ಳಿಗಾಡಿನ ಮಡಿಲಲ್ಲಿ ಇರತೊಡಗಿ, ರಂಗದಿಂದ ಕ್ರಮಶಃ ಮರೆಯಾಗಲಿಚ್ಛಿ
ಸಿದ ಇವರನ್ನು ಸಮ್ಮೇಳನಾಧ್ಯಕ್ಷತೆಯ ಬಾಜಾಬಜಂತ್ರಿ ಮೂರುದಿನಗಳ ಗದ್ದ
ಕ್ಕಾಗಿ ನಿದ್ದೆಗೆಡಿಸಿವೆ.

ಒಂಟಿ ಪಯಣಿಗ ಕಡೆಂಗೋಡ್ಲು ಶಂಕರಭಟ್ಟರು ಈ ಸಂಭ್ರಮದಲ್ಲಿ
ಪಾಲ್ಗೊಂಡು ಸಾಹಿತ್ಯಯಾತ್ರೆಯ ಮುಂದಿನ ದಾರಿಯಲ್ಲಿ ಮತ್ತೆ ಮೊದಲಿನಂತೆಯೆ
ಸಾಗುತ್ತಾರೆ....

೨

ಕಾರವಾರ ಸಾಹಿತ್ಯ ಸಮ್ಮೇಳನಕ್ಕೆ ಕಡೆಂಗೋಡ್ಲು ಅಧ್ಯಕ್ಷರಾದರೆಂಬ ಹಿಗ್ಗಿ
ನಿಂದ 'ಮೋಹಜಾಲ'ದ ಕತೆಗಾರ ಬರೆದ ಲೇಖನ ಮೇಲಿನದು. ಸಂತೆಗಾಗಿ ನೆಯ್ದ
ಒಂದು ಮೊಳ. ನೆಯ್ದುದಕ್ಕೆ ಅಂಚು ಕಟ್ಟಬೇಕಲ್ಲ? ಅದಕ್ಕೋಸ್ಕರ ಕೊನೆಯ
ಪ್ಯಾರಾ–ಕೊನೆಯ ವಾಕ್ಯ. ಅರ್ಥವಿಲ್ಲದ್ದು.

....ಸಾಗಬಹುದಾಗಿತ್ತು; ಅವರ ಸಾಹಿತ್ಯಯಾತ್ರೆ ಸುದೀರ್ಘವಾಗಬಹು
ದಾಗಿತ್ತು. ಆದರೆ ಇದ್ದಕ್ಕಿದ್ದಂತೆ ಅವರು ಕಣ್ಣುಮುಚ್ಚಿದರು.

ಕಠಿನ ಸಂಯಮದ ಬದುಕು ನೂರುವರ್ಷಗಳ ಆಯುಸ್ಸನ್ನು ಸೂಚಿಸುತ್ತಿತ್ತು
ಒಳಗಿನ ಹೃದಯ ಮಾತ್ರ ಅರುವತ್ತು ಚಿಲ್ಲರೆ ವಯಸ್ಸಿನಲ್ಲೇ ಹೊರೆ ಇಳಿಸಿತು.

....'ಮೋಹಜಾಲ' ಹೆಣೆದವನು ಮೂರು ನಾಲ್ಕು ವರ್ಷಗಳ ಬಳಿಕ ಶಂಕ
ಭಟ್ಟರ ಉಪಸಂಪಾದಕನಾದೆ. ಬರೆದು ಬದುಕುವ ಹುಚ್ಚು.

ಆಗಲೇ ನನ್ನ ರಾಜಕೀಯ ಒಲವು ಎಡನಿಟ್ಟಿಗೆ. ಸಾಹಿತ್ಯ ಕ್ಷೇತ್ರದಲ್ಲಿ 'ಪ್ರಗತಿಶೀಲ'. "ಯಾಕೆ?" ಎಂದು ಕಡೆಂಗೋಡ್ಲು ಒಮ್ಮೆಯೂ ಕೇಳಿದವರಲ್ಲ.

ನಾನು ಬರೆದ ಒಂದು ಕತೆಯನ್ನೋದಿ ಸರಕಾರ ಸಿಟ್ಟಾಯಿತು. ಸಂಪಾದಕರಿಗೆ ಕರೆಬಂತು, ಜಿಲ್ಲಾ ಕಲೆಕ್ಟರರಿಂದ. ಜಾನ್‌ಬುಲ್ ಸರಕಾರದ ಪ್ರತಿನಿಧಿ ಆತ. ಶಂಕರಭಟ್ಟರು ಹೋಗಿಬಂದರು. ಪರಿಸ್ಥಿತಿ ವಿಕೋಪಕ್ಕೆ ಹೋಗಲಿಲ್ಲ. ಕತೆಯನ್ನು ನಾನು ಬರೆದಿದ್ದರೂ ಪ್ರಕಟಿಸಿದ ಸಂಪಾದಕರದಲ್ಲವೆ ಹೊಣೆಗಾರಿಕೆ? 'ಕರಕರೆ' ಯಾಗಿರಬೇಕು. ನನ್ನೆದುರು ಮಾತ್ರ ಅದನ್ನು ತೋರ್ಪಡಿಸಲಿಲ್ಲ.

ಉಪಸಂಪಾದಕ ನಿಗಿನಿಗಿ ಕೆಂಡವಾದರೆ ಸಂಪಾದಕನಿಗೆ ಆತಂಕವಾಗಲೇಬೇಕು. ಆ ಪರಿಸ್ಥಿತಿಯಲ್ಲಿ ಈ ಘಟನೆ:

ಕೊನೆಯ ಹೋರಾಟಕ್ಕೆ ಭಾರತ ಸಿದ್ಧವಾಗುತ್ತಿದ್ದ ಕಾಲಾವಧಿ. ಕೇರಳದ ತೀವ್ರಗಾಮಿ ನಾಯಕ ಕೆ.ಪಿ.ಆರ್. ಗೋಪಾಲನ್‌ರಿಗೆ ಸರಕಾರ ಮರಣದಂಡನೆ ವಿಧಿಸಿತು. ಅವರನ್ನು ಗಲ್ಲಿಗೇರಿಸಬಾರದು ಎಂಬ ಕರೆ ಹತ್ತೂ ಕಡೆ ಕೇಳಿ ಬಂತು.

ಒಂದು ಬೆಳಗ್ಗೆ ಸಂಪಾದಕರೆಂದರು:

"ಶಿವರಾಯರೆ, ಗೋಪಾಲನ್ ವಿಷಯ ಒಂದು ಉಪಸಂಪಾದಕೀಯ ಬರೆದುಬಿಡಿ."

ಬರೆದೆ. ಬರೆದು ಒಪ್ಪಿಸಿದೆ. (ಅಳುಕು, ಕುತೂಹಲ.)

ಕೆಲವೇ ನಿಮಿಷಗಳಲ್ಲಿ ಓದಿ ತಂದುಕೊಟ್ಟರು. (ಮೇಜುಗಳ ಬಳಿಗೆ ತಾವೇ ಬರುವುದು ಅವರ ಪದ್ಧತಿ.)

"ಸರಿ" ಎಂದರು.

ಎಲ್ಲೋ ಒಂದೆಡೆ ಕೆಂಪು ಮಸಿ ಮೂಡಿತ್ತು. ಓದಿದೆ. ಅಲ್ಪಪ್ರಾಣಕ್ಕೆ ಮಹಾಪ್ರಾಣ ತುಂಬಿದ್ದರು, ಅಷ್ಟೆ!

ಪ್ರಾಧ್ಯಾಪಕ–ಸಂಪಾದಕರ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೆ. ಮೊದಲೇ ಎಣೆಯಿಲ್ಲದ ಆತ್ಮವಿಶ್ವಾಸ. ಅದು ಹಲವುಪಟ್ಟು ಹೆಚ್ಚಿ, ನಾನು ಬೀಗಿರಬೇಕು.

ಕಡೆಂಗೋಡ್ಲು ಆವರಣದಲ್ಲಿ ನಾನಿದ್ದುದು ಎರಡು ವರ್ಷ. ಆ ಕಾಲದಲ್ಲಿ ನನ್ನ ಪುಕ್ಕ ಬಲಿಯಿತು. ಇಪ್ಪತ್ತನೆಯ ವಯಸ್ಸಿನಲ್ಲಿ ಹೊರಕ್ಕೆ ಹಾರಿದೆ; ಮುಂದೆ ಮೇಲಕ್ಕೆ ನೆಗೆದು ಪಶ್ಚಿಮ ಘಟ್ಟಗಳ ಎತ್ತರವನ್ನು ದಾಟಿದೆ.

ಹತ್ತು ವರ್ಷಗಳಾದ ಮೇಲೆ ನನ್ನ ಬಲಗೈ ಮುರಿಯಿತು. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಜನರಲ್ ವಾರ್ಡಿನಲ್ಲಿ ಮಲಗಿದ್ದ ನನ್ನನ್ನು ಹುಡುಕಿಕೊಂಡು ಕಡೆಂಗೋಡ್ಲು ಕಾಗದ ಬಂತು, ಅದರಲ್ಲಿ 'ಬರಹಾನ್ನ'ದ ಬನ್ನದ ಪ್ರಸ್ತಾಪವಿತ್ತು. ನನ್ನ ಸ್ಥೈರ್ಯಕ್ಕೆ ಪೋಷಕವಾಗುವ ಒಂದೆರಡು ಮಾತು....

....ಮುಂದೆ ಹತ್ತು ವರ್ಷಗಳ ಬಳಿಕ ಕಾರವಾರದ ಸಾಹಿತ್ಯ ಸಮ್ಮೇಳನ....

* * * *

ಪತ್ರಿಕೆಗಳಲ್ಲಿ ಸುದ್ದಿ ಬಂತು.

'ರಾಷ್ಟ್ರಮತ' ಸಾಪ್ತಾಹಿಕದ ಸಂಪಾದನೆಗೆ ಸಂಬಂಧಿಸಿ ವಾರಕ್ಕೊಮ್ಮೆ ಮಂಗಳೂರಿಗೆ ಪಯಣ, ತಮ್ಮ ಹಳ್ಳಿಯಿಂದ. ಅಂಥದೊಂದು ಪ್ರಯಾಣದಲ್ಲಿ ಕಡೆಂಗೋಡ್ಲು ಶಂಕರಭಟ್ಟರು ಬಸ್ಸಿನಲ್ಲಿಯೇ ಹೃದಯಾಘಾತಕ್ಕೆ ಎರವಾದರು.

"ಶಿವರಾಯರೆ, ಒಂದು 'ಶ್ರದ್ಧಾಂಜಲಿ' ಬರೆದುಬಿಡಿ" ಎಂದು ಅವರು ಹೇಳಲಿಲ್ಲ; ಯಾರೂ ಹೇಳಲಿಲ್ಲ.

ಬರೆಯಬಹುದು ಕಸುವಿನಿಂದ, ಉಸಿರು ತುಂಬಿಕೊಂಡು.

ಆದರೆ, "ಸರಿ" ಎನ್ನುವವರು ?

—೧೯೬೮

ಡಾ|| ಅ. ನ. ಕೃ.

ಮಾನಸಗಂಗೋತ್ರಿಯ ರಮಣೀಯ ಆವರಣ. ವಿಶ್ವವಿದ್ಯಾನಿಲಯದ ಐವತ್ತನೆಯ ಘಟಿಕೋತ್ಸವ.

ಬಯಲು ಮಂಟಪದಲ್ಲಿ ಕಿಕ್ಕಿರಿದ ಜನಸ್ತೋಮದ ಮುಂದೆ ಕನ್ನಡದ ಹಿರಿಯ ವ್ಯಕ್ತಿಗಳು ಐವರಿಗೆ ಗೌರವ ಪದವಿ ಪ್ರದಾನ.

ಎಸ್. ವಿ. ರಂಗಣ್ಣ

ಅ. ನ. ಕೃ.

ಗುಬ್ಬಿ ವೀರಣ್ಣ

ಗೋಪಾಲ ಅಯ್ಯಂಗಾರ್

ಡಿ. ಎಲ್. ನರಸಿಂಹಾಚಾರ್

ವಿಜ್ಞಾನಿ ಅಯ್ಯಂಗಾರ್ಯರು ಪಡೆದಿರುವ ಪದವಿಗಳು ಮೂರುದ್ದ. ಆದರೂ ಒಂದು ಕಾಲದಲ್ಲಿ ತನ್ನಲ್ಲೇ ವಿದ್ಯಾರ್ಥಿಯಾಗಿದ್ದ ವ್ಯಕ್ತಿಗೆ ವಿಶ್ವವಿದ್ಯಾನಿಲಯದ ವಿಶೇಷ ಗೌರವ. ರಂಗಣ್ಣನವರು, ಡಿ. ಎಲ್. ಎನ್.? ತಾವೇ ಅದೆಷ್ಟೋ 'ಡಾಕ್ಟರು'ಗಳನ್ನು ಅಣಿಗೊಳಿಸಿದ ಹಿರಿಯರು. ಶಿಕ್ಷಣ ಕ್ಷೇತ್ರದ ಗೌರವಾನ್ವಿತರು. ನಾಟಕರತ್ನ ವೀರಣ್ಣನವರು ಸಮಾಜದ ವೈದ್ಯರು. ಈಗ ಡಾಕ್ಟರ್ ಪಾತ್ರ. ಸೇವೆಗೆ ಸಂದ ಮನ್ನಣೆ. ಅ. ನ. ಕೃ. ವಿಷಯದಲ್ಲಂತೂ ಪ್ರಶಸ್ತಿ ನೀಡಿಕೆ ಅತ್ಯಂತ ವೈಶಿಷ್ಟ್ಯಪೂರ್ಣ.

ಮೈಸೂರಿನಿಂದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಡಾ|| ಮಾನಪ್ಪ ನಾಯಕರು ಬಂದಿದ್ದರು. ಅವರೂ ನಾನು ವಿಶ್ವೇಶ್ವರಪುರಕ್ಕೆ ಹೊರಟೆವು.

ಬಾಗಿಲಿಗೆ ಬಂದವರು ಸನಾತನ ಕಲಾಕ್ಷೇತ್ರದ ಕೌಶಿಕ್. ಅವರ ಬೆನ್ನಲ್ಲೆ ಕಾಣಿಸಿಕೊಂಡರು ಅ. ನ. ಕೃ.

"ಬನ್ನಿ, ಮಾನಪ್ಪ."

ಆತ್ಮೀಯ ಕಣ್ಣೋಟದಿಂದ ನನಗೂ ಕರೆ.

ಔಪಚಾರಿಕ ಅಭಿನಂದನೆ ಬಲುಕಷ್ಟವೆನಿಸಿದ ಸನ್ನಿವೇಶ.

ಲೆಕ್ಕಕ್ಕೆ ಸಿಗದಷ್ಟು. ಲಕ್ಷಗಟ್ಟಲೆ. ಪದಗಳು ಸೃಷ್ಟಿಯಾದ ಕೊಠಡಿ. ಅನಕೃ ಬಂಧುಗಳಾಗಿ ಅಲ್ಲಿಗೆ ಬಂದವರ ಸಂಖ್ಯೆ ಅದೆಷ್ಟು ಸಹಸ್ರವೊ !

ತಮ್ಮ ವಿದ್ಯಾರ್ಥಿ ದಿಸೆಯಲ್ಲಿ ಅನ್ನಪೂರ್ಣ ಗೃಹದ ಆತಿಥ್ಯದ ಸವಿ ಉಂಡವರು ನಾಯಕ. ಆಗಿನ ನೆನಪುಗಳು ಅವರನ್ನು ಕಾಡಬೇಕು. ನನಗೂ ಅಷ್ಟೆ. ಇಪ್ಪತ್ತೈದು ವರ್ಷಗಳಿಗೆ ಹಿಂದೆ ಅದೇ ಕೊಠಡಿಯಲ್ಲಿ ಅ. ನ. ಕೃ. ಜತೆ ಕುಳಿತು ಎಷ್ಟೋ ವಿಷಯ ಮಾತನಾಡಿದ್ದೆ. ಮತ್ತೆ ಅನುಭವ ಆಗದೆ ಇದ್ದರೂ ಆ ನೆನಪು ನಿತ್ಯ ಹಸುರು.

ಆ ಬೆಳಗ್ಗೆ ದಿನಪತ್ರಿಕೆಗಳು ದಪ್ಪಕ್ಷರಗಳಲ್ಲಿ ಅಚ್ಚು ಹಾಕಿದ್ದುವು; ಅ.ನ.ಕೃ. ಡಾಕ್ಟರ ಗಲಿರುವ ಸುದ್ದಿಯನ್ನು ಸಾರಿದ್ದುವು. ನಾಯಕರಿಗೆ ಕಳುಹಲೆಂದು ಶಿಷ್ಟಾಚಾರದ ತಂತಿಯನ್ನು ಬರೆದು ಇಟ್ಟಿದ್ದರು ಅ. ನ. ಕೃ. ಆ ಹಾಳೆಯನ್ನು ನಾಯಕರ ಕೈಗೆ ಕೊಟ್ಟರು.

ಅನಾರೋಗ್ಯ ಕಾಡಬಹುದು, ಯೌವನ ಅಣಕಿಸಬಹುದು. ಆದರೆ ಬರವಣಿಗೆ ನೇರ. ಅಕ್ಷರಗಳಲ್ಲಿ ಅದೇ ಕಸುವು, ಅದೇ ಮೋಡಿ.

ತಾನು ಜನ್ಮವೆತ್ತಿದ ನಾಡಿಗೆ ಒಬ್ಬ ಸಾಹಿತಿ, ಕಲಾವಿದ, ಶ್ರೀಸಾಮಾನ್ಯ ಕೂಡಾ ಸಲ್ಲಿಸಬೇಕಾದ ಸೇವೆಯುಂಟು. ಋಣ ತೀರಿಕೆ ಎನ್ನಬಹುದು ಬೇಕಾದರೆ. ಅದನ್ನು ಎಷ್ಟು ಘನತರವಾಗಿ ಮಾಡಿದ್ದಾರೆ ಅ. ನ. ಕೃ. ! ಒಬ್ಬ ಕೃಷ್ಣರಾಯರು ಸಲ್ಲಿಸಿರುವುದು ನೂರು ಸಾಹಿತಿಗಳ, ನೂರು ಕಲಾವಿದರ, ನೂರು ಜನ ನಾಡುಕಟ್ಟುವವರ ಸಾಲವನ್ನು ಒಂದು ಜೀವಮಾನದಲ್ಲೇ ಮಾಡಿರುವುದು ಹಲವು ಜನ್ಮಗಳ ಕೆಲಸ.

ಅ. ನ. ಕೃಷ್ಣರಾಯರ ಹಲವು ಸಾಧನೆಗಳಲ್ಲಿ ಅತ್ಯಂತ ಶ್ರೇಷ್ಠವಾದುದು ಯಾವುದು? ತನ್ನತನದ ಅರಿವನ್ನು ಕನ್ನಡ ಜನಪದದಲ್ಲಿ ಮೂಡಿಸಿದ್ದು. ಸತ್ತವರಂತೆ ಬಿದ್ದಿದ್ದ ಕನ್ನಡ ಜನ ಅ. ನ. ಕೃ. ವಾಣಿಯನ್ನು ಕೇಳಿ ಚೇತರಿಸಿಕೊಂಡರು. ಹಲವು ಆಡಳಿತಗಳಲ್ಲಿ ನಾಡು ಹಂಚಿಹೋಗಿದ್ದ ವೇಳೆಯಲ್ಲೂ ಕನ್ನಡಿಗರೆಲ್ಲ ಒಂದೇ ನೆಲದ ಮಕ್ಕಳೆಂಬ ಭಾವನೆಯನ್ನು ರೂಪಿಸಿದರು. ವಾಚನಾಭಿರುಚಿಯನ್ನು ಕನ್ನಡ ಜನರಲ್ಲಿ ಉಂಟುಮಾಡಿದ ವೆಂಕಟಾಚಾರ್ಯ, ಗಳಗನಾಥರ ಸಾಲಿನಲ್ಲಿ ನಿಲ್ಲುವ ಹೆಸರು ಅ. ನ. ಕೃ. ಅವರು ಕಣ್ಣಾಡಿಸಿದ ಲೇಖನಿ, ಸಂದರ್ಶಿಸಿದ ಕುಂಚ ಹೊಸ ಸೃಷ್ಟಿಗೆ ಕಾರಣವಾದವು. ಅವರ ಭುಜವನ್ನೇರಿ 'ಇನ್ನೂ ದೂರ ಕಾಣಿಸುತ್ತಿದೆ' ಎಂದು ನುಡಿದವರು ಎಷ್ಟು ಜನ! ಸರಸ್ವತಿಯ ಅನುಗ್ರಹದ ಬೆಲೆ ಅವರ ಒಂದು ಪ್ರೋತ್ಸಾಹದ ನುಡಿಗೆ.

ನವೋದಯದ ತಂಗಾಳಿ ಹೂಬಿಸಿಲುಗಳಲ್ಲಿ ಗರಿಗೆದರಿದ ನಡಿನ ಹತ್ತು ಮೂಲೆಗಳ ನೂರು ಹಕ್ಕಿಗಳಿಗೆ 'ಅನುಭವ ಮಂಟಪ'ವಾಯಿತು ಅ. ನ. ಕೃ. ಮನೆ.

ವಿಮರ್ಶಕರು ನುಡಿಯಬಹುದು :

"ಅ. ನ. ಕೃ. ಬರೆದುದೆಲ್ಲ ಶ್ರೇಷ್ಠ ಸಾಹಿತ್ಯವಲ್ಲ."

ನಿಜವಾದ ಮಾತೇ. ಆದರೆ, ಬರೆದುದೆಲ್ಲವೂ ಶ್ರೇಷ್ಠವಾಗಿರುವ ಸಾಹಿತಿ ಈ ಲೋಕದಲ್ಲಿ ಯಾರಿದ್ದಾರೆ? ಒಂದು ಕೃತಿ ಇರಬಹುದು, ಹತ್ತು ಇರಬಹುದು. ಶ್ರೇಷ್ಠ ಸಾಹಿತ್ಯವನ್ನು ಲೇಖಕನೊಬ್ಬ ರಚಿಸಿದ್ದಾನೆ ಎನ್ನುವುದೇ ಹೆಗ್ಗಳಿಕೆಯ ಅಂಶ.

ವಾಸ್ತವ ಸಂಗತಿಯೆಂದರೆ, ಅ. ನ. ಕೃ. ಹಿರಿಮೆಗೆ ಕಾರಣ ಅವರ ಬರೆವಣಿಗೆ ಮಾತ್ರವಲ್ಲ. ಅದು ಅವರ ಒಟ್ಟು ಕಾಯಕ; ಮೇರೆ ತೂಕಗಳನ್ನು ಖಚಿತಪಡಿಸಲಾರದಂಥ ಸಾಧನೆ.

ಅ. ನ. ಕೃ.ರಿಂದ ಸಾಹಿತ್ಯ ಜನಪ್ರಿಯವಾಯಿತು. ಅವರ ಕಣ್ಕಾಪಿನಲ್ಲಿ ಹಲವಾರು ಯುವಕ ಲೇಖಕರು ಉತ್ತಮ ಕತೆಗಾರರಾದರು, ಕಾದಂಬರಿಕಾರರಾದರು. ಕಲಾವಿದರು, ಚಿತ್ರಕಾರರು, ಸಂಗೀತಗಾರರು, ನಟರು ಬೆಳಕಿಗೆ ಬಂದರು. ಜಾತಿಯ ಕೋಟೆಗಳು ಪಾಳುಬಿದ್ದುವು. ಕುರುಡು ಸಂಪ್ರದಾಯಗಳು ಬಿಲ ಸೇರಿದುವು. ಏಕೀಕೃತ ನಾಡಿನ ಚಿತ್ರ ಸ್ಫುಟವಾಯಿತು.

ಆಶ್ಚರ್ಯದ ಸಂಗತಿಯೆಂದರೆ ನವಕರ್ನಾಟಕದ ಈ ಶಿಲ್ಪಿಪ್ರಮುಖನಿಗೆ ಯೋಗ್ಯ ಗೌರವ ಈವರೆಗೂ ಸಂದುದಿಲ್ಲ. ಸಮಾಜದ ಕಟ್ಟುಕಟ್ಟಳೆಗಳನ್ನು ನಿಷ್ಠೆಯಿಂದ ಪಾಲಿಸದಿರುವುದು ಕೆಲವರ ದೃಷ್ಟಿಯಲ್ಲಿ 'ಅಪರಾಧ'ವಾಗಿ ಕಾಣಿಸಬಹುದು. ಆದರೆ, ಅದೇ ಹಿಮಾಲಯ ಎನ್ನುವುದು ಎಷ್ಟರಮಟ್ಟಿಗೆ ಸರಿ ? ಈ ಮಡಿವಂತಿಕೆಯ ಅರ್ಥವಾದರೂ ಏನು ? ಸಾಹಿತ್ಯ ಅಕಾಡೆಮಿಯ ಪಾರಿತೋಷಕವೂ ಅ. ನ. ಕೃ.ಗೆ ಇಲ್ಲ ಎಂದರೆ, ನಾಡಿನ ಹೊರಗೂ ಅವರನ್ನು ಬಲ್ಲ ಅಸಂಖ್ಯ ಭಾರತೀಯರಿಗೆ ಏನು ಸಮಾಧಾನ ತಾನೆ ಹೇಳಬಹುದು ?

ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗುಣಗ್ರಾಹಿಯಾಯಿತೆನ್ನುವುದು ಸಂತೋಷದ ಸಂಗತಿ. ಇದಕ್ಕಾಗಿ, ಗುಣಶೋಧನೆಯೇ ಹಿರಿಯ ಗುಣವಾಗುಳ್ಳ ದೇಜಗೌ ಉಪಕುಲಪತಿಯಾಗುವುದನ್ನೇ ವಿಶ್ವವಿದ್ಯಾನಿಲಯವೂ ಕಾಯುತ್ತಿತ್ತೇನೊ.

ಕನ್ನಡ ಮನ–ಮನೆಗಳಲ್ಲಿ ಅ. ನ. ಕೃ. ಮೂರಕ್ಷರ ಚಿರಸ್ಥಾನ ಗಳಿಸಿ ಬಹಳ ಕಾಲವಾಯಿತು. ಇನ್ನು ನಾಲ್ಕಕ್ಷರಗಳಿಗೆ ಅಲ್ಲಿ ನೆಲೆ. ಡಾ|| ಅ.ನ.ಕೃ.

—೧೯೭೦

೯

ಅಂಕಣ

○ ‘ಸರೂ, ಕೇಳಿದೆಯೊ?’ ಸ್ಥಿರಶೀರ್ಷಿಕೆಯೊಂದಿಗೆ ನನ್ನ ಅಂಕಣ ಬರೆವಣಿಗೆ ಆರಂಭ, ೧೯೪೫ರಲ್ಲಿ, ‘ಪ್ರಜಾಮತ’ ಸಾಪ್ತಾಹಿಕದಲ್ಲಿ. ಅಂಕಣದ ಸ್ವರೂಪವೇ ಅಂಥದು. ಅದು ಪ್ರತಿ ಸಂಚಿಕೆಯಲ್ಲೂ ಇರಬೇಕು.

ನೇರವಾಗಿ, ಸರಳವಾಗಿ, ಸೊಗಸಾಗಿ, ಚುಟುಕಾಗಿ ಬರೆದರೆ ಅಂಕಣದ ಬೆಲೆ ಹೆಚ್ಚುತ್ತದೆ. ಶೈಲಿ? ಒಬ್ಬೊಬ್ಬ ಅಂಕಣಕಾರನದು ಒಂದೊಂದು ಶೈಲಿ. ಲೇಖನದ ವ್ಯಾಪ್ತಿ ಮಾತ್ರ ಅಂಕಣಕ್ಕೆ ಸಲ್ಲ. ಇದನ್ನು ನೆನಪಿಡುವುದು ಅಗತ್ಯ.

ನನ್ನ ಅಂಕಣ ಬರೆವಣಿಗೆಯಲ್ಲಿ ವಿವಿಧ ಪ್ರಯೋಗಗಳನ್ನು ಮಾಡಿದ್ದೇನೆ. ನಮೂನೆಗೆ ಕೆಲವನ್ನು ಇಲ್ಲಿ ಪೋಣಿಸಿದೆ. ಮೂಲ—‘ನಿರಂಜನ: ಮೂವತ್ತು ಸಂಪುಟಗಳಲ್ಲಿ’ ಸರಣಿಯ ೨೨–೨೩–೨೪ನೆಯ ಸಂಪುಟಗಳು.

ಸಾಧನ ಸಂಚಯ

೧

ಬೆಂಗಳೂರು
....ಡಿಸೆಂಬರ್ ೧೯೫೦

ಜೀವನ ಸಂಗಾತಿ,

ವಾಸ್ತವತೆ ಮತ್ತೊಮ್ಮೆ ನನ್ನನ್ನು ಇದಿರಿಸಿ ಆಹ್ವಾನವೀಯುತ್ತಿದೆ. ಒಂದು ಅಧ್ಯಾಯವನ್ನು ಮುಕ್ತಾಯಗೊಳಿಸಿ ಇನ್ನೊಂದನ್ನು ತೆರೆಯುತ್ತಿದ್ದೇನೆ. ಹೊಸ ಹಾಳೆ, ಹೊಸ ಪುಟ.

ನಡೆದು ಬಂದ ದಾರಿಯತ್ತ ಕಣ್ಣು ಹೊರಳಿಸಿದಾಗ, ಕ್ಷಣಕಾಲ ಕಣ್ಣಿಗೆ ಕತ್ತಲು ಕವಿಯುತ್ತದೆ. ಇದು ನಿಜವೆ? ನಿಜವಾಗಿಯೂ ನಾನು ಈ ಹಾದಿಯಲ್ಲಿ ನಡೆದು ಬಂದೆನೆ?

ಕೆಲವೊಮ್ಮೆ ಎಡವಿಬಿದ್ದರೂ ಪಯಣದಲ್ಲಿ ಹಿಂದುಳಿಯದೆ, ನಾನು ಇಷ್ಟು ದೂರ ಬಂದಿರುವುದು ನಿಜ.

ಆಯಾಸ ಕಳೆದು ಹೊಸ ಶಕ್ತಿ ಬಂದಾಗ, ಮತ್ತೊಮ್ಮೆ ಸ್ಪಷ್ಟವಾಗಿ ಈಗ ಮುಂದಿನ ಹಾದಿ ಕಾಣಿಸುತ್ತಿದೆ. ದೂರದ ಗುರಿಯತ್ತ ದೃಷ್ಟಿಯಿಟ್ಟು ನೇರವಾದ ದಾರಿಯಲ್ಲಿ ಇನ್ನು ಮುಂದೆ ಸಾಗಬೇಕು—ಇನ್ನೂ ಮುಂದೆ ಸಾಗಬೇಕು.

ಕಾಲು ಸೋತು ಕುಸಿ ಕುಳಿತಾಗ, ಶಂಕೆಯ ಸರ್ಪ ಹೆಡೆಯಾಡಿಸಲು ಯತ್ನಿಸಿದ್ದುಂಟು; ಶೂನ್ಯ ತನ್ನ ಕಪ್ಪು ಮೋರೆಯನ್ನು ತೋರಿಸಲು ಇಚ್ಛಿಸಿದ್ದುಂಟು. ಆದರೆ ಶತಮಾನದ ತಿಳಿ ಬೆಳಕಿನ ದೀವಟಿಗೆಯ ಎದುರಲ್ಲಿ ಹಾದಿ ತಪ್ಪಲಿಲ್ಲ—ಕತ್ತಲಾಗಲಿಲ್ಲ.

ಭವಿಷ್ಯತ್ತಿನಲ್ಲಿ ನಂಬುಗೆಯಿಟ್ಟು, ಬದುಕಿನಲ್ಲಿ ವಿಶ್ವಾಸವಿಟ್ಟು, ಮುಂದೆ ಸಾಗುವ ಜನರೇ ಹಾಗೆ.

ಇಷ್ಟು ದಿನಗಳ ಮೇಲೆ ನಿನಗೆ ಇದನ್ನು ಬರೆಯಬೇಕೆನ್ನಿಸಿದೆ. ನಿನ್ನನ್ನು ಸ್ಮರಿಸುತ್ತ ಸ್ಮರಿಸುತ್ತ ಈಗ ವರ್ಣರಂಜಿತ ಬಾಳ್ವೆಯ ವಿವಿಧ ಮುಖಗಳನ್ನು ನಾನು ಕಾಣುತ್ತಿದ್ದೇನೆ.

ಯುಗ ಯುಗಗಳಿಂದ ಗಂಡು ಹೆಣ್ಣುಗಳು ಒಡನಾಟ ಬಯಸಿವೆ. ಅದು, ಎರಡು ಜೀವಗಳೊಂದಾಗಿ ಬಾಹುಗಳಿಗೆ ಭೀಮ ಬಲ ಬರುವ ಹಿರಿಯ ಪರಂಪರೆ. ಅದಕ್ಕೆ ಅಪವಾದವಿಲ್ಲ. ಅದು ಅಪರಾಧವಲ್ಲ.

ಆದರೂ ಜನ ಸಮುದಾಯದ ಸಂಸ್ಕಾರ—ಸಂಪ್ರದಾಯಗಳು ಎಳೆಯ ಜೀವಗಳನ್ನು ಹಿಂಡಿ ಹಿಸುಕಲು ಆಗಾಗ್ಗೆ ಯತ್ನಿಸಿದ್ದುಂಟು. ಆ ಯತ್ನ ವಿಫಲವಾದಾಗಲೆಲ್ಲ ಬಾಳ್ವೆ ಮುಗುಳ್ನಕ್ಕದ್ದುಂಟು.

ಗೆಳತಿ, ಈ ಕಾಗದದಲ್ಲಿ ಹೃದಯದ ಹೋಯ್ದಾಟಗಳಿಗೆ ಮಾತಿನ ರೂಪುಕೊಡಲಾರದೆ ನಾನು ಚಡಪಡಿಸುತ್ತಿರುವೆನೇನೊ. ಆತ್ಮೀಯವಾಗಿ ಓಲೆ ಬರೆಯುವುದನ್ನೇ ಮರೆತಿರುವ ಲೇಖನಿಯನ್ನು ಕಂಡು ಅಣಕಿಸಬೇಡ.

....ತಿಂಗಳ ಕೊನೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಬೊಂಬಾಯಿಯಲ್ಲಿ ಜರಗುವ ವಿಷಯ ನೀನು ಬಲ್ಲೆ. ಅಲ್ಲಿಗೆ ಹೋಗಿ ಬರಲೆ? ನಿನ್ನ ಸಮ್ಮತಿ ಯಾಚಿಸಿ ಈ ಅರ್ಜಿ ಬರೆಯುತ್ತಿದ್ದೇನೆ. ಉತ್ತರ ಬರೆ.

'ನೀನೂ ಬಾ' ಎಂದು ಇಲ್ಲಿ ಬರೆಯುತ್ತಲಿಲ್ಲ—ಕರೆಯುತ್ತಲಿಲ್ಲ. ಅಂತಹ ಪ್ರವಾಸ ಈಗ ಈಡೇರಲಾರದ ಬಯಕೆ ಎಂಬುದನ್ನು ನಾವಿಬ್ಬರೂ ಬಲ್ಲೆವು. ಅಂದಮೇಲೆ—

ಹೊಸ ಹಾಳೆಯ ಮೇಲಿನ ಹೊಸ ಓಲೆ ಈ ಸಾರೆಗೆ ಇಷ್ಟು ಸಾಕು.

ಒಲವಿನೊಡನೆ

ನಿರಂಜನ

೨

ಮುಂಬಯಿ

ವರ್ಷಾರಂಭ, ೧೯೫೧

ಗೆಳತಿ ಸಾಧನಾ,

ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಆರಂಭವಿದು. ಬದುಕಿನ ಹೋರಾಟ ಸಾಗುತ್ತಲೇ ಇದೆ ಎಂಬುದಕ್ಕೆ ಸಾಕ್ಷ್ಯವಾಗಿ ಉಸಿರಾಡುತ್ತಲೇ ಇದ್ದೇವೆ ಇನ್ನೂ.

ಸಾಹಿತ್ಯ ಸಮ್ಮೇಳನದ ಮರುಳು. ಜಾತ್ರೆಯಿಂದ ಬದುಕಿ ಉಳಿದು, ಆಯಾಸ ಪರಿಹಾರಕ್ಕೆಂದು ಬೊಂಬಾಯಿಯಲ್ಲಿ ಎರಡು ದಿನ 'ವಸತಿ ಮಾಡಿದ್ದೇನೆ'.

ಮೈಸೂರು, ಧಾರವಾಡ, ಮಂಗಳೂರುಗಳ ಕನ್ನಡಿಗರೆಲ್ಲ ಇರುವ ನಗರ ಮುಂಬಯಿ. ಆದರೂ ಈ ಮಹಾಗಾಣದಿಂದ ನಮ್ಮ ಕುಸುರೆಳ್ಳನ್ನು ಗುರುತಿಸಿ ಎತ್ತಿಕೊಳ್ಳುವುದು ಸುಲಭದ ಕೆಲಸವಲ್ಲ.

ಸಂಜೆ ವ್ಯಾಸರಾಯ ಬಲ್ಲಾಳರಲ್ಲಿಗೆ ಹೋದೆ. ಅವರಿರುವುದು ಕುರ್ಲಾದಲ್ಲಿ. 'ನುಡಿ' ವಾರಪತ್ರಿಕೆಯಲ್ಲಿ ರಾಜಕೀಯದ ಕತ್ತಿ ಮಸೆಯುತ್ತಿದ್ದವರು ಇದೇ ವ್ಯಾಸ ರಾಯರೆ ?—ಎನಿಸುವುದು ಒಮ್ಮೊಮ್ಮೆ....ಅವರ ಸೌಮ್ಯತೆಯೇ ಒಂದು ರೀತಿಯ ಸೊಗಸು. 'ನುಡಿ'ಯೇನೋ ಅನ್ಯಾಯವಾಗಿ ನಿಂತುಹೋಯಿತು. ಅದು, ಲಾಭದ ಆಸೆಯಿಲ್ಲದೆ ಕೆಲವರು ನಿಃಸ್ವಾರ್ಥಿ ಯುವಕರು ನಡೆಸುತ್ತಿದ್ದ ಪತ್ರಿಕೆ. ಈಗಿನ ಸಮಾಜದ ಪದ್ಧತಿಯಲ್ಲಿ ಪ್ರಾಮಾಣಿಕರಾದ ಆದರ್ಶ ಜೀವಿಗಳು ತುಳಿಯುವ ಹಾದಿ ಪುಷ್ಪೋದ್ಯಾನದ ಕಾಲುದಾರಿ ಹೇಗಾದೀತು ?....ಬಲ್ಲಾಳರ ಕಥಾ ಸಂಗ್ರಹ 'ಬದುಕಿನ ಆದರ್ಶ'ವನ್ನೋದಿ ಮೆಚ್ಚಿಕೊಂಡಿರುವ ನಿನಗೆ ಅವರು ಅಪರಿಚಿತರೇನೂ ಅಲ್ಲ. ಹೊಸ ಸಂಸಾರ ಹೂಡಿದ್ದಾರೆ. ಪುಟ್ಟ ಮಗುವಿನ ಹೆಸರು ಪೂರ್ಣಿಮಾ. ಇಲ್ಲಿ ಈ ಕನ್ನಡ ಹುಡುಗಿ ಇನ್ನು 'ಮುಂಬಯಿವಾಲಿ'ಯಾಗುತ್ತಾಳೆ !

ಅಲ್ಲಿಂದ ವಾಪಸು ಬರುತ್ತ ಶ್ರೀನಿವಾಸ ಐರಣಿಯವರನ್ನು ಕಂಡೆ. ಒಳಗೆ ಹೋದಾಗ ಬೇಂದ್ರೆಯವರ 'ಹೊಸ ಸಂಸಾರ' ನಾಟಕವನ್ನೋದುತ್ತ ಅವರು ಕುಳಿತಿದ್ದರು ! ಗುಬ್ಬಚ್ಚಿಗೂಡಿನಂತಹ ಮನೆ. ಅಡುಗೆ ಮನೆಗೆ 'ಪ್ರೈವೇಟ್' ಎಂದು ಬೋರ್ಡ್ ತಗಲಿಸಿದ್ದರು. ಅವರಾಕೆ ಶಕುಂತಲಾ ಇನ್ನೂ ಬಂದಿರಲಿಲ್ಲ. ಆಲ್ ಇಂಡಿಯಾ ರೇಡಿಯೋದ ಬೊಂಬಾಯಿ ಕೇಂದ್ರದಲ್ಲಿ ಆಕೆ ಕನ್ನಡ ಎನೌನ್ಸರ್. ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನ ವರುಣ ಕುಂಜದ ಗರಡಿಯಲ್ಲಿ ಸಾಧಕರಾಗಿ ಹೊರಬಿದ್ದವರು ಐರಣಿ. 'ಅವರು ಮತ್ತು ದೇವಕ್ಕ' ಪುಸ್ತಕದ ಈ ಕರ್ತೃ ಊರಿನಿಂದ ಉತ್ತರಕ್ಕೆ ಬಂದರು....ಅದು ಬಲು ಕಷ್ಟಕರವಾಗಿದ್ದ ಉದ್ಯೋಗದ ಭೇಟಿ.... ಈ ಕಷ್ಟದ ಕತೆ—ಇದನ್ನು ನಾವು ಬಾರಿ ಬಾರಿಗೂ ಕೇಳಿದ್ದೇವಲ್ಲವೆ ?

ಸಾಧನಾ, ಹೀಗೆಲ್ಲ ಪರಿಚಿತರನ್ನು ಕಂಡು ಹಿಂತಿರುಗುವಾಗ ಇಲ್ಲದ ನೋವೊಂದು ನನ್ನನ್ನು ಕಾಡುತ್ತದೆ—ನೀನಿಲ್ಲದ ನೋವು. ಈ ಬೀದಿಗಳಲ್ಲಿ ಸಹಸ್ರ ಸಹಸ್ರ ಜನ ಓಡಾಡುತ್ತಿದ್ದಾರೆ ನಿಜ. ಆದರೆ ನನ್ನ ಪಾಲಿಗೆ ಇವು ನಿರ್ಜನವಾಗಿವೆ.

ನಿನ್ನೆ ಬೆಳಿಗ್ಗೆ ಏನಾಯಿತು ಗೊತ್ತೆ ? ಬಸ್ಸಿಗಾಗಿ ಕಾದಿದ್ದೆ. ಕ್ಯೂ ಇರಲಿಲ್ಲ. ಬೀದಿಯ ದಂಡೆಯ ತನಕವೂ ಕಡಲಿನ ತೆರೆ ಬರುತ್ತಿತ್ತು. ತಂಪಾಗಿ ಬೀಸುತ್ತಿತ್ತು ಗಾಳಿ. ಸೂರ್ಯಕಿರಣ ಮೆಲ್ಲಮೆಲ್ಲನೆ ನಸುನಗುತಿತ್ತು....ಆಗ ದೂರದಿಂದ ನಡೆದು ಬರುತ್ತಿದ್ದ ಅವಳನ್ನು ಕಂಡೆ....ಅದೊಂದು ದಿನ ಬೆಳಿಗ್ಗೆ ಆ ಹೊತ್ತಿನಲ್ಲೆ ನಮ್ಮೂರಲ್ಲಿ....ಎರಡನೆಯ ಸಾರಿ ನಾನು ನಿನ್ನನ್ನು ಕಂಡುದು. ಬಡಾವಣೆಯ ಬಳಿಯಲ್ಲಿ ಗೆಳತಿಯೊಬ್ಬಳ ಮನೆಗೆ ನೀನು ನಡೆದುಹೋಗುತಿದ್ದೆ. ಎದುರು ಬದಿಯಿಂದ ಏನನೋ ಯೋಚಿಸುತ್ತ ಬರುತಿದ್ದ ನಾನು ಎಚ್ಚರಗೊಂಡುದು ತೀರ ಸಮೀಪಕ್ಕೆ ಬಂದಾಗಲೇ. ಮೂರು ದಿನಗಳಿಂದ ಸಣ್ಣನೆ ಬರುತಿದ್ದ ಜ್ವರದಿಂದ ನಾನು ಕ್ಷೀಣನಾಗಿದ್ದೆ. ನಿನ್ನನ್ನು ಕಂಡಾಗ ಕಾಲುಗಳು ಮುಂದೆ ಹೋಗಲಿಲ್ಲ; ನೀನೂ ನಿಂತೆ. ನಾನೆಂದೆ: "ಏನ್ರೀ ಗುರುತು ಸಿಗ್ತೆ ?". "ಸಿಗದೆ !" ಎಂದು ಮುಗುಳ್ನಕ್ಕೆ ನೀನು. ಆಮೇಲೆ

ಮೌನ. ಹೊರಡುವ ಹೊತ್ತಾಯಿತೆಂದು ನೀನು 'ನಮಸ್ಕಾರ'ವೆಂದೆ; ನಾನು ತಲೆಯಾಡಿಸಿದೆ.

ಆ ನೆನಪು. ಆಕೆ ಹಾದು ಹೋಗಿದ್ದಳು. ಬಸ್ಸು ಬಂತು. ಬಿ.ಬಿ.ಸಿ.ಐ. ಸ್ಟೇಷನ್ನು ಬರುವವರೆಗೂ ಮುಗುಳು ನಗು ನನ್ನ ಮುಖದ ಮೇಲೆ ಮನೆ ಮಾಡಿತ್ತು.

....ಇನ್ನು ನಿದ್ದೆ ಹೋಗಲೆ? ಮರಳಿ ಬರುವವರೆಗೂ ವಂದನೆ....

ನಿನ್ನ

ನಿರಂಜನ

೩

ಬೆಂಗಳೂರು

....ಫೆಬ್ರವರಿ, ೧೯೫೧

ಸಾಹಿತ್ಯ ಪ್ರಿಯೆ,

ನಿನ್ನೆ ರಾತ್ರಿ ಅ. ನ. ಕೃ. ಮನೆಗೆ ಹೋಗಿದ್ದೆ.

ಅದು ಬಹಳ ದಿನಗಳ ಮೇಲಿನ ಭೇಟಿ. ೧೯೪೭ರಲ್ಲಿ ಜರುಗಿದ ಧಾರವಾಡ ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಬಳಿಕ ಇಷ್ಟು ವರ್ಷ ಅವರ ಮುಖ ನೋಡಿರಲಿಲ್ಲ. ಹಳೆಯ ಒಂದು ಕಾಲದಲ್ಲಿ ಅವರನ್ನು ನಾನು ತುಂಬ ಗೌರವಿಸುತಿದ್ದೆ. ಆದರೆ, ಧಾರವಾಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಾಡಿದ ಅಧ್ಯಕ್ಷೀಯ ಭಾಷಣ, ಅದೇ ಕಾಲಾವಧಿಯಲ್ಲಿ ಅವರು ಬರೆದ 'ಅಗ್ನಿಕನ್ಯೆ' ಕಥೆ, ನನ್ನನ್ನು ಚಿಂತಾಕ್ರಾಂತನನ್ನಾಗಿ ಮಾಡಿದ್ದುವು. ಇವರ ಈ ವಿಚಾರಧಾರೆಯ ಗುರಿ ಯಾವುದು?—ಎಂದು ಆಗ ಕಾತುರನಾಗಿದ್ದೆ. ಈ ಧೀಮಂತ ಸಾಹಿತಿಯ ವಿದ್ವತ್ತು ಪ್ರತಿಭೆ ನೂರಕ್ಕೆ ನೂರರಷ್ಟು ಜನಸಮುದಾಯಕ್ಕೆ ಮೀಸಲಿಲ್ಲವೆ?—ಎಂದು ಪ್ರಶ್ನಿಸಿಕೊಂಡಿದ್ದೆ.

ಅವರ ಚಂಚಲತೆಯನ್ನು, ಮನಸ್ಸಿನ ಓಲಾಟವನ್ನು, ಕಂಡು ಕನಿಕರವಾಗುವುದುಂಟು ಒಮ್ಮೊಮ್ಮೆ....ಮನೋದೃಢತೆ, ಕ್ರಮಬದ್ಧತೆ, ಅ.ನ.ಕೃ.ರ ಪಾಲಿಗೆ ಎರವಾಗಬೇಕೇ ಎಂಬ ಚಿಂತೆ ನನಗೆ.

ಕೆಲವು ಭಾಷಣಗಳಲ್ಲಿ ಅರಸೊತ್ತಿಗೆಯನ್ನು ಹೊಗಳಿ ಅವರು ಮಾತನಾಡಿದ್ದಾರೆ. ಬೇರೆ ಕೆಲವೆಡೆ ಖಡಾಖಂಡಿತವಾಗಿ ತೆಗಳಿದ್ದಾರೆ; ಕಟು ಅಪಹಾಸ್ಯಕ್ಕೆ ಗುರಿಮಾಡಿದ್ದಾರೆ!

ಅವರ ಇಂಥ ದೃಷ್ಟಿಕೋನದ ಚಿತ್ರ ವಿಚಿತ್ರತೆ ನನ್ನನ್ನು ಹಲವು ಸಲ ಆಶ್ಚರ್ಯಕ್ಕೆ ಈಡು ಮಾಡಿದೆ.

ಇಷ್ಟಿದ್ದರೂ ರಾಯರು ರಾಯರೇ! ಅವರ ಸಹೃದಯತೆಯ ಪರಿಚಯವಾಗ ಬೇಕಾದರೆ, ಅವರ ರಸಿಕತೆಯ ಅರಿವಾಗಬೇಕಾದರೆ, ಮುಖತಃ ಅವರನ್ನು ಕಾಣ ಬೇಕು; ಕಂಡು ಮಾತನಾಡಬೇಕು.

ಕೆಲವು ವರ್ಷಗಳ ಹಿಂದೆಯೇ ನನಗೆ ಪರಿಚಿತವಾಗಿದ್ದ ಅದೇ ಮನೆ 'ಅನ್ನ ಪೂರ್ಣ', ಅದೇ ಮುಗುಳ್ನಗುವಿನ 'ಬನ್ನಿ' ಎನ್ನುವ ರಾಯರು.

ಒಂದೂವರೆ ಗಂಟೆಗಳ ಕಾಲ ಎಡಬಿಡದೆ ಮಾತುಕತೆ ನಡೆಯಿತು. ಒಂದು ವಿಷಯಕ್ಕಿನ್ನೊಂದು ಹೊಂದಿಕೆಯಾಗುವ ಹಾಗೆ ನೂರು ಅಂಕುಡೊಂಕುಗಳಲ್ಲಿ ಮಾತಿನ ಚುಕ್ಕಾಣಿ ತಿರುವಿದ್ದಾಯಿತು. ಮುಂಬಯಿಯ ಸಾಹಿತ್ಯ ಸಮ್ಮೇಳನದಿಂದ ಹಿಡಿದು ಡೈಸನ್ ಕಾರ್ಟರ್ ಬರೆದಿರುವ 'ಪಾಪ ಮತ್ತು ವಿಜ್ಞಾನ' ಪುಸ್ತಕದವರೆಗೆ ಹಲವಾರು ದೇಶಗಳನ್ನು ಭಾಷೆಗಳನ್ನು ದಾಟಿ ಸಂಭಾಷಣೆ ನಡೆಯಿತು.

ನಮ್ಮ ನಾಡಿನ ಪುರೋಗಾಮಿ ಸಾಂಸ್ಕೃತಿಯ ಚಳವಳಿಯ ಮುನ್ನಡೆಯ ಬಗ್ಗೆ ಹೊಸ ಆಸೆ ಚಿಗುರಿಸಿಕೊಂಡು, ನಾನು ಹೊರಟು ಬಂದೆ.

ಕೃಷ್ಣರಾಯರುದು ಅವರದೇ ಆದ ವೈಶಿಷ್ಟ್ಯ.ಕನ್ನಡದಲ್ಲಿ ಅಂಥವರೇ ಇನ್ನೊಬ್ಬರು ಸಿಗಲಾರರು. ಸಾಹಿತ್ಯದ ಗಾಳಿ ಬೀಸಿರುವ ಪ್ರತಿಯೊಂದು ಕನ್ನಡ ಮನೆಯಲ್ಲೂ ಪರಿಚಿತವಾದ ಹೆಸರು ರಾಯರದು. ಅವರು ಈಗ ಏನು ಬರೆದರೂ ಜನ ಓದುತ್ತಾರೆ. ಎಂತಲೇ ಇಷ್ಟು ಕಾತರ—ಅವರು ಬರೆಯುವುದೆಲ್ಲವೂ ತೂಗಿ ತೂಗಿ ಬರಲಿ, ಗಂಭೀರವಾಗಿ ಬರಲಿ, ಪರಿಣಾಮಕಾರಿಯಾಗಿ ಬರಲಿ, ಎಂಬ ಅಪೇಕ್ಷೆ.

'ಅನ್ನಪೂರ್ಣ'ದಿಂದ ಹೊರಟು, ಮಾವಳ್ಳಿ ಸರ್ಕಲ್ಲನ್ನು ಹಾದು, ಪುರಭವನದ ಕಡೆಗೆ ಬಂದೆ. ರಾತ್ರೆಯ ಗಾಳಿ ತಣ್ಣನೆ ಮೈಕೊರೆಯುತ್ತ ಬೀಸುತಿತ್ತು. ವಿಚಾರವೋ ಕೃಷ್ಣರಾಯರ ಸುತ್ತು ಅವರ ಜೀವನ ಕೃತಿಗಳ ಸುತ್ತು, ಸುತ್ತಾಡುತಿತ್ತು.

ಮಹಾ ಸಂಭವಗಳ ಈ ಶತಮಾನದಲ್ಲಿ ನಾವು ಬಾಳಿ ಬದುಕಿರುವುದೊಂದು ದೊಡ್ಡ ವಿಷಯ. ಹೊಸ ಇತಿಹಾಸ ಬರೆಯಲ್ಪಡುತ್ತಿರುವಾಗ ಅದನ್ನು ಕಾಣದೊರೆತಿರುವುದು ಅಭಿಮಾನದ ಸಂಗತಿ. ಆ ಇತಿಹಾಸ ಬರೆಯುವುದರಲ್ಲಿ ಸ್ವತಃ ನಾವು ಭಾಗಿಯಾಗಿರುವುದಂತೂ ನಮ್ಮ ಸೌಭಾಗ್ಯ.

ಎಂತಲೇ, ಈ ಕಾಲಾವಧಿಯ ಲೇಖಕರು ಕಲಾವಿದರು ಬುದ್ಧಿಜೀವಿಗಳ ಮೇಲೆಲ್ಲ ಎಂಥ ಜವಾಬ್ದಾರಿ—ಎಂಥ ಹೂಣೆ!

....'ನಗ್ನ ಸತ್ಯ' ಓದಿಯಾಯಿತೆ? ನಾನೂ ಓದಬೇಕು. ಅಂಚೆಯ ಮೂಲಕ ಕಳುಹಿಕೊಡು. ಕಾಗದ ಬರೆ. ಅದರಲ್ಲಿ ಆ ಪುಸ್ತಕದ ಬಗೆಗೆ ನಿನ್ನ ಅಭಿಪ್ರಾಯಗಳನ್ನೂ ಬರೆ.

ಎಂದು
ನಿರಂಜನ

೪

ಬೆಂಗಳೂರು
ಫೆಬ್ರವರಿ, ೧೯೫೫

ಯೋಧೆ ಸಾಧನಾ,

ಅಣು ವಿಜ್ಞಾನಿ ರಾಯರು ಊಟಕ್ಕೆ ಕರೆದಿದ್ದರು, ಇಬ್ಬರನ್ನೂ. ನಮ್ಮಿಬ್ಬರ ಪ್ರತಿನಿಧಿಯಾಗಿ ನಾನೊಬ್ಬನೇ ಹೋಗಿ ಬಂದೆ.

ಅವರ ಪುಟ್ಟ ಕೂಸು ದುಂಡು ದುಂಡಗೆ ಬೆಳೆಯುತ್ತಿದ್ದಾಳೆ. ಎರಡು ಹೆಸರುಗಳಿವೆ ಆ ಮಗುವಿಗೆ—ನಳಿನಾ ಮತ್ತು ವೃಂದಾ. ಮಗುವನ್ನೆತ್ತಿಕೊಳ್ಳುತ್ತಿದ್ದಾಗ ಒಂದು ಮಾತು ಬಂತು.

"ನಳಿನಾ ದೊಡ್ಡವಳಾಗುವ ಹೊತ್ತಿಗೆ ಈಗಿನ ಕಷ್ಟ ಸಂಕಷ್ಟ ಯಾವುದೂ ಇರೋದಿಲ್ಲ."

"ಏನು, ಅಷ್ಟೂ ವರ್ಷ ಬೇಕೆ ?"

"ಯಾಕೆ ? ಅಷ್ಟೂ ಬೇಡವೆ ?"

ಹೌದು, ಇನ್ನೊಂದು ಹತ್ತು ವರ್ಷಗಳ ಮೇಲೆ ನಳಿನಾ ನಗು ನಗುತ್ತಾ ಅರಳುಮಲ್ಲಿಗೆಯಾಗಿ ದಿಟ್ಟೆಯಾಗಿ ಹೊಸ ಸಮಾಜದಲ್ಲೇ ಬೆಳೆಯುವಾಕೆ.

ಭವಿಷ್ಯತ್ತಿನ ಪ್ರಶ್ನೆ. ಆ ವಿಷಯ ಯೋಚಿಸಿದಾಗ, ಪ್ರಸ್ತುತದ ಕಾಲಾವಧಿಯ ಕ್ರೂರ ಚಿತ್ರ ಕಣ್ಣ ಮುಂದೆ ನಿಲ್ಲುತ್ತದೆ. ಅದರ ಹಿಂಬದಿಯಲ್ಲಿ, ಕಳೆದು ಹೋದ ಅಂಧಕಾರಮಯ ದಶಕಗಳು, ಶತಕಗಳು.

....ಆದರೆ, ಒಮ್ಮೆ ವಸಾಹತು ದಾಸ್ಯದ ನೊಗ ಕಳಚಿತೆಂದರೆ, ಬಾಗಿದ ಬೆನ್ನು ನೇರವಾಯಿತೆಂದರೆ, ಅಜ್ಞಾನದ 'ಕಬ್ಬಿಣದ ತೆರೆ' ಹರಿದುಬಿತ್ತೆಂದರೆ, ಬಾಳು ಬೆಳಗುವುದನ್ನು ನಾವು ಕಂಡಿಲ್ಲವೆ ? ನಮ್ಮ ಜನರ ಸಾಧನ ಸಾಮರ್ಥ್ಯದ ಬಗ್ಗೆ ನಮಗೆ ಅರಿವಿಲ್ಲವೆ, ವಿಶ್ವಾಸವಿಲ್ಲವೆ ?

....ಬಡವನಾಗಿ ಹುಟ್ಟಿದ ಅಪರಾಧಕ್ಕಾಗಿ ವಿದ್ಯಾಭ್ಯಾಸಕ್ಕೆ ಅನರ್ಹನಾಗುವುದು ; ವರ್ಗ ಮೂಲದ ಮೇಲ್ಮೆ ಇಲ್ಲದೆ ಹೋಗಿ, ಹೆಚ್ಚಿನ ಅವಕಾಶಗಳಿಗೆ ಎರವಾಗುವುದು ; ಪುರುಷ, ದುಡಿಮೆ ಯಂತ್ರದ ಕೀಲಿಯಾಗುವುದು ; ಸ್ತ್ರೀ, ಅಡುಗೆ ಮನೆಯ ತೊತ್ತಾಗುವುದು ; ಹಣಕಾಸಿನ ಒಂದೇ ಅಭಾವಕ್ಕಾಗಿ ರೋಗ ಗುಣವಾಗದೆ ಸಾವಿಗೆ ಗುರಿಯಾಗುವುದು—ಈ ಸರಮಾಲೆ ಕೊನೆಗಾಣದೆ ಇರುವುದುಂಟೆ ?

ಬೆಳುದಿಂಗಳ ಚಂದ್ರನನ್ನು ಅನ್ಯಾಯವಾಗಿ ಕಾರ್ಮುಗಿಲು ಕವಿದ ರಾತ್ರಿಗಳು ....ಈಡೇರದ ಹಂಬಲಗಳು....ಒಡೆದ ಕನಸುಗಳು....

ಇಷ್ಟಾದರೂ ನಾವು ಮುಂದಕ್ಕೆ ಹೆಜ್ಜೆ ಇಟ್ಟಿರುವ ಯೋಧ ಯೋಧೆಯರು. ಎಷ್ಟು ವರ್ಷಗಳಾದರೇನಂತೆ ? ನಂಬಿದ್ದನ್ನು ಸಾಧಿಸುವ ಸಾಮರ್ಥ್ಯ ನಮ್ಮಲ್ಲಿದೆ ಅಲ್ಲವೆ ?

ಎಂದು ಸಹಸೈನಿಕ
ನಿರಂಜನ

೫

ಬೆಂಗಳೂರು
....ಜುಲೈ, ೧೯೫೧

ಅರಗಿಣಿ,

ಕಳೆದ ತಿಂಗಳು ಎಷ್ಟೊಳ್ಳೆಯ ಅವಕಾಶವಿತ್ತು ನೀನು ಬೆಂಗಳೂರಿಗೆ ಬರಲು, ಬಲ್ಲೆಯಾ? ಮಾಸ್ತಿಯವರ ಅರುವತ್ತನೆ ಹುಟ್ಟು ಹಬ್ಬದ ಸನ್ಮಾನ ಸಮಾರಂಭ ಕ್ಕೋಸ್ಕರ ಪ್ರಯಾಣ—ಎಂದರೆ, ಯಾರು ಬೇಡವೆನ್ನುತ್ತಿದ್ದರು? ಆದರೂ ಒಳ್ಳೆಯವಳಲ್ಲದ ನೀನು ಬರಲಿಲ್ಲ!

ಜೂನ್ ತಿಂಗಳ ೧೮ ಮತ್ತು ೧೯; ಆ ಎರಡು ಸಂಜೆ ಕವಿದು ಬರುತಿದ್ದ ಕರಿಯ ಮೋಡಗಳನ್ನೂ ಗಮನಿಸದೆ, ಪರಿಷನ್ಮಂದಿರ ತುಂಬಿತುಳುಕುತ್ತಿದ್ದ ಆ ದೃಶ್ಯವೋ! ಕನ್ನಡದ ಪ್ರಮುಖ ಸಾಹಿತಿಯೊಬ್ಬನನ್ನು ಸನ್ಮಾನಿಸಲೆಂದು ನೆರೆದ ಆ ಜನ ಸಂದಣಿಯೋ! ಕಣ್ಣು ತಣಿಯುವ ಹಾಗಿತ್ತು—ಮನ ದಣಿಯುವಹಾಗಿತ್ತು.

ಮಾಸ್ತಿ....

ಕನ್ನಡ ಸಾಹಿತ್ಯದಲ್ಲಿ ಅಭಿರುಚಿಯುಳ್ಳವರಲ್ಲಿ ಆ ಹೆಸರು ಕೇಳದವರು ಯಾರು? 'ಸಣ್ಣ ಕತೆ'ಗಳ 'ಸುಬ್ಬಣ್ಣ' ಕಿರುಕಾದಂಬರಿಯ 'ಶ್ರೀನಿವಾಸ'ರನ್ನು ಪ್ರೀತಿಸದವರು ಯಾರು?

ಮಾಸ್ತಿ ಎಂದರೆ ಒಬ್ಬ ವ್ಯಕ್ತಿ ಮಾತ್ರವಲ್ಲ. ಅವರದೊಂದು ವಿಚಾರಸರಣಿ ಯಿದೆ. ಅದನ್ನೊಪ್ಪುವ ಇತರ ಪ್ರಮುಖ ಸಾಹಿತಿಗಳಿದ್ದಾರೆ. ಅವರ ಸುತ್ತಲೂ ಒಂದು ಬಳಗವಿದೆ. ಅವರೊಂದು ಶಕ್ತಿ.

ಆದರೆ ಅದು ವಿರೋಧಿಸಬೇಕಾದ ಶಕ್ತಿಯೇ? ಜತೆಗೂಡಬೇಕಾದ ಶಕ್ತಿಯೇ?

ಅದನ್ನು ಉತ್ತರಿಸುವುದೆಂದರೆ, ಮಾಸ್ತಿಯವರ ಚಟುವಟಿಕೆಯ ಜೀವನದ ನಿರ್ದಿಷ್ಟ ರೂಪುರೇಖೆಗಳನ್ನು ಎತ್ತಿ ತೋರಿಸುವುದು. ಅದರ ಪೃಥಕ್ಕರಣದಲ್ಲಿ ನಿನಗೆ ಆಸಕ್ತಿ ಇದೆ ಎಂದೇ ಈ ನಾಲ್ಕು ಸಾಲು ಬರೆಯುತ್ತಿದ್ದೇನೆ....

೧೯೨೦-೩೦ರ ನಮ್ಮ ದೇಶದ ಕಾಲಾವಧಿಯನ್ನು ನೋಡೋಣ. ರಾಜಕೀಯ ವಾಗಿ ಪರಾಧೀನತೆ; ಆರ್ಥಿಕವಾಗಿ ವಸಾಹತು—ಪಾಳೆಯಗಾರ ಪದ್ಧತಿ. ಅದಕ್ಕಿದಿ ರಾಗಿ ನಡೆದುದು ಸ್ವಾತಂತ್ರ್ಯಸಮರ. ಅದನ್ನು ಪ್ರತಿಬಿಂಬಿಸಿದ್ದು, ಪ್ರತಿಯಾಗಿ ಅದರ ಮೇಲೆ ಪ್ರಭಾವ ಬೀರಿದ್ದು, ಆಗಿನ ಸಾಂಸ್ಕೃತಿಕ ಚಳವಳಿ. ಟಾಗೋರ್, ಇಕ್ಬಲ್, ಪ್ರೇಮಚಂದ್, ಭಾರತಿ....ಒಂದೊಂದೂ ಮಹಾಮೇರುವಿನ ಹಾಗೆ ಚಿರಸ್ಥಾಯಿಯಾಗಿ ನಿಲ್ಲುವ ಹೆಸರು.

ಆ ಕಾಲಾವಧಿಯಲ್ಲಿ ಕರ್ನಾಟಕ, ಅಂಥ ಹೊಸ ಪ್ರವಾಹವನ್ನು ಕಾಣಲಿಲ್ಲ. ಆದರೆ ವೆಂಕಟಾಚಾರ್ಯರ, ಗಳಗನಾಥರ ಅನುವಾದಿತ ಕಾದಂಬರಿಗಳು ಹೊಸ ಹಸಿವನ್ನು ನಮ್ಮ ಜನರಲ್ಲಿ ಹುಟ್ಟಿಸಿದುವು.

ಆಗ ಜನನಾಯಕರೆನ್ನಿಸಿಕೊಂಡಿದ್ದವರು ಸಾಂಸ್ಕೃತಿಕ ಚಳವಳಿಯ ಹಿರಿಮೆಯನ್ನು ಕಾಣದೇ ಹೋದುದು ದೊಡ್ಡದೊಂದು ದುರ್ದೈವ. ಬರೆಯುವ ಸಾಮರ್ಥ್ಯವಿದ್ದ ಕೆಲವರು ಬರಿಯ ಕಾಂಗ್ರೆಸ್ ಮುಖಂಡರಾಗಿಯೇ ಮಾರ್ಪಾಟಾದರು. ಅಧಿಕಾರದ ಹುದ್ದೆಗಳಲ್ಲಿದ್ದ ಲೇಖಕರು ಜನತೆಯಿಂದ ದೂರ ನಿಂತರು. ಕೆಲವರು, ಶಾಸಕವರ್ಗದ, ಸೂತ್ರದ ಗೊಂಬೆಗಳಾಗಿ ವಿರೋಧ ತೋರಿದರು.

ಒಂದೆಡೆ ಹೈದರಾಬಾದ್ ಪಾಳೆಯಗಾರಿಕೆಯ ಕೆಳಗೆ, ಇನ್ನೊಂದೆಡೆ ಮೈಸೂರು ಸಂಸ್ಥಾನವಾಗಿ, ಉಳಿದುವು ಚೆಲ್ಲಾಪಿಲ್ಲಿಯಾಗಿ, ಉತ್ತರವೆಂದು—ದಕ್ಷಿಣವೆಂದು, ಪಶ್ಚಿಮವೆಂದು—ಪೂರ್ವವೆಂದು, ಹರಿದುಹೋದ ಕರ್ನಾಟಕ ನಮ್ಮದು. ಅಲ್ಲಿ ಹಿರಿಯ ಸಾಹಿತ್ಯ ಶಕ್ತಿಗಳು ರೂಪುಗೊಳ್ಳಲಿಲ್ಲ. ಆದರೆ ರಾಷ್ಟ್ರೀಯ ಹೋರಾಟ, ಇನ್ನೊಂದು ರೂಪದಲ್ಲಿ ನಾಡಿನಲ್ಲಿ ಪುನರುದ್ದೀಪನ ಚಳವಳಿಯನ್ನು ಉರಿಸಿತು. ಅದು ಜನರ ಭಾಷೆಯಾದ ಕನ್ನಡದ ಬಗ್ಗೆ ಅಭಿಮಾನ ಮತ್ತು ನಾಡು ಏಕೀಕೃತವಾಗಬೇಕೆಂಬ ಹಂಬಲ.

ನಮ್ಮ ದುರ್ದೈವದಿಂದ ಇಲ್ಲಿಯೂ ಶಕ್ತಿ ಇಬ್ಭಾಗವಾಯಿತು. ರಾಷ್ಟ್ರೀಯ ಚಳವಳಿಯಲ್ಲಿದ್ದವರು ಮುಖ್ಯತಃ ಏಕೀಕರಣದ ಮಾತಾಡಿದರು. ಆಲೂರು, ಮುದವೀಡು—ಎಂಥೆಂಥ ಹೆಸರುಗಳು! ಕನ್ನಡ ಭಾಷೆ ಸಾಹಿತ್ಯವೆಂದಿಷ್ಟೇ ಮಾತಾಡಿದರು ಇನ್ನು ಕೆಲವರು,—'ಶ್ರೀ'ಯವರಿಂದ ಮೊದಲ್ಗೊಂಡು........

ಅಂತೂ ಪುನರುದ್ದೀಪನದ ಕ್ಷೀಣ ಜ್ಯೋತಿ ನಾಡನ್ನೂ ಜನಮನವನ್ನೂ ಒಂದಲ್ಲ ಒಂದು ರೀತಿಯಲ್ಲಿ ಬೆಳಗತೊಡಗಿತು.

ಈ ಶತಮಾನದ ಮೂರು ನಾಲ್ಕನೆಯ ದಶಕಗಳು ನಮ್ಮ ಪಾಲಿಗೆ ಸಂಭವಪೂರ್ಣ ವರ್ಷಗಳಾದುವು. ಕನ್ನಡ, ಸಾಂಸ್ಕೃತಿಕ ಚಳವಳಿಯ ಒಂದಂಗವಾಗಿ ಸಾಹಿತ್ಯ ಸೃಷ್ಟಿಯ ಬಾವುಟವೇರಿತು.

ಅಂಥ ಆರಂಭ ಪುರುಷರಲ್ಲೇ ಮಾಸ್ತಿ—ಪಂಜೆಯವರನ್ನು ಕಾಣಬಹುದು.

ಪಂಜೆಯವರು ಈ ಶತಮಾನದ ಆರಂಭದಲ್ಲಿ ಸಣ್ಣ ಕತೆಗಳನ್ನು ಬರೆದುದು ನಿಜ. ಆದರೆ ನಿಜವಾಗಿ ಶಕ್ತಿಮತ್ತಾಗಿ ಕನ್ನಡ ಸಾಹಿತ್ಯದಲ್ಲಿ ಸಣ್ಣ ಕತೆಗಳಿಗೆ ಸ್ಥಾನ ದೊರಕಿಸಿದವರು ಮಾಸ್ತಿ. ಸರಕಾರಿ ಹುದ್ದೆಯಲ್ಲಿದ್ದ ಈ ಅಸಿಸ್ಟೆಂಟ್ ಕಮಿಷನರ್, ರಾಷ್ಟ್ರೀಯ ವಿಮೋಚನೆಯ ಚಳವಳಿಯನ್ನು ಸೇರಲಿಲ್ಲ. ಹಾಗೆಂದೇ ಅವರ ಕಲಾತ್ಮಕ ಕೃತಿಗಳು ಜನತೆಯ, ಜನರಿಗಿರಬೇಕಾದ, ಆಸೆ ಆಕಾಂಕ್ಷೆಗಳನ್ನು ಅವರ ಹೋರಾಟಗಳನ್ನು ಪ್ರತಿಬಿಂಬಿಸಲಿಲ್ಲ. ತಮ್ಮ ಸುತ್ತಲಿನ ವಾತಾವರಣದ ಕೈದಿಯಾದ ಅವರು, ಉತ್ತಮ ಸಾಹಿತ್ಯವನ್ನೇನೋ ನಿರ್ಮಿಸಿದರು. ಆ ಕಾಲಘಟ್ಟದ ಸಾಂಸ್ಕೃತಿಕ ಪುನರುದ್ದೀಪನ ಕಾರ್ಯಕ್ಕೆ ಅದು ಸಹಾಯಕವಾಯಿತು.

ಬಿರುದು ಬಾವಲಿಗಳನ್ನು ಕಿತ್ತೊಗೆದ ಟಾಗೋರ್ ಪರಂಪರೆ, ಪ್ರಗತಿಶೀಲವಾದ ಪರಂಪರೆ.

ಆದರೆ ನಮ್ಮ ದೌರ್ಭಾಗ್ಯದಿಂದ ಅಂಥ ಪರಂಪರೆಯಿಲ್ಲ ನಮಗೆ. 'ರಾಷ್ಟ್ರೀಯ ಹೋರಾಟ' ಆ ತೆರನಾಗಿ ನಮ್ಮನ್ನು ಕಲಕಲಿಲ್ಲ.

........ಸರಕಾರಿ ಹುದ್ದೆಯಲ್ಲಿದ್ದಾಗಲೇ ಸಾಹಿತಿಯಾದ ಮಾಸ್ತಿ, ಅದರಿಂದ ನಿವೃತ್ತರಾದ ಮೇಲಂತೂ ಕನ್ನಡದ ದೀಕ್ಷೆ ವಹಿಸಿದರು.

ಮಾತಾಡಬಂದವರನ್ನು ಮಂತ್ರಮುಗ್ಧಗೊಳಿಸುವ ಅವರ ನಯ–ವಿನಯ ಅನೇಕ ಮಿತ್ರರನ್ನು ಅವರಿಗೆ ದೊರಕಿಸಿತು.

ನಮ್ಮ ನಾಡಿನ ಲೇಖಕರ ಕಷ್ಟಕಾರ್ಪಣ್ಯಗಳ ಬಗ್ಗೆ ಅವರು ಕನಿಕರಿಸುತ್ತಾರೆ. ಆದರೆ ಮೂಲಕ್ಕೆ ಹೋಗಿ ರೋಗ ನಿದಾನ ಮಾಡುವುದಿಲ್ಲ. ಈಗಿನ ಸಮಾಜ ಪದ್ಧತಿಗೂ ಆ ದುಸ್ಥಿತಿಗೂ ಸಂಬಂಧವಿದೆ ಎಂದು ಅವರು ಒಪ್ಪುವುದಿಲ್ಲ. ತಮ್ಮ ಕೈಲಾದಷ್ಟುಮಟ್ಟಿಗೆ ಹತ್ತಾರು ಜನರಿಗೆ, ತಮ್ಮ ವೈಯಕ್ತಿಕ ಕಷ್ಟಗಳನ್ನೂ ಗಣಿಸದೆ, ಅವರು ನೆರವಾಗುತ್ತಾರೆ. ನೆರವು ಪಡೆದವರ ಆಜನ್ಮ ಕೃತಜ್ಞತೆಗೆ ಪಾತ್ರರಾಗುತ್ತಾರೆ.

ಸಮಾಜದ ಸಂಪ್ರದಾಯಗಳನ್ನೆಲ್ಲ ಅವರು ಎತ್ತಿಹಿಡಿಯುವವರು. ಎರಡು ದಶಕಗಳಿಗೆ ಹಿಂದೆ ಸಾಹಿತ್ಯರಚನೆಯ ಸ್ವರೂಪಗಳಲ್ಲಿ ನವೀನತೆಯನ್ನು 'ಶ್ರೀ' ಯವರು, ಮಾಸ್ತಿಯವರು, ಪಂಜೆಯವರು ಮತ್ತಿತರರು ತಂದು ಪುರೋಗಾಮಿಗಳಾಗಲಿಲ್ಲವೆ ? ಈಗ ಸ್ವರೂಪದಲ್ಲಷ್ಟೇ ಅಲ್ಲ, ತಿರುಳಿನಲ್ಲೂ ವಸ್ತುವಿನಲ್ಲೂ ನವೀನತೆ ತರುತ್ತಿದ್ದೇವೆ—ಎಂದು ಪ್ರಗತಿಶೀಲರು ಹೇಳುವಾಗ ಅವರು ಒಪ್ಪುವುದಿಲ್ಲ.

ಈ ಕೆಲವು ವರ್ಷಗಳ ಅವಧಿ ಸ್ವಲ್ಪಮಟ್ಟಿಗೆ ಮಾಸ್ತಿಯವರನ್ನು ಬದಲಿಸಿದೆ. —ಸ್ವಲ್ಪಮಟ್ಟಿಗೆ ಮಾತ್ರ. ಜನರು ಕಷ್ಟಪಡುವುದನ್ನು ಕಂಡಾಗ ಅವರು ಕಾಂಗ್ರೆಸನ್ನು ಒಮ್ಮೊಮ್ಮೆ ಟೀಕಿಸುತ್ತಾರೆ. "ಇದೆಂಥ ಪ್ರಜಾಪ್ರಭುತ್ವ ?" ಎಂದು ಕೇಳುತ್ತಾರೆ. ಸಾಹಿತಿಯೊಬ್ಬರ ರಾಜಕೀಯ ವಾದವೈಖರಿಯನ್ನು ನೋಡಬೇಕಾದರೆ ಮಾಸ್ತಿಯವರು ಸಂಪಾದಿಸುತ್ತಿರುವ "ಜೀವನ"ದ ಸಂಪಾದಕೀಯ ಟಿಪ್ಪಣಿಗಳನ್ನು ಓದಬೇಕು !

ಮೈಸೂರು ಪ್ರಜಾಪ್ರಭುತ್ವದ ಬಗ್ಗೆ ಅವರೊಡನೆ ಮಾತೆತ್ತುವಂತೆಯೇ ಇಲ್ಲ. ಆದರೆ, ಏಕೀಕರಣದ ವಿರೋಧಿಗಳನ್ನು ಅವರು ಟೀಕಿಸುತ್ತಾರೆ; ಕೇಂದ್ರದ ಆಡಳಿತವನ್ನು ಖಂಡಿಸುತ್ತಾರೆ.

ಕನ್ನಡ ಮಾಧ್ಯಮ ಬೇಕೆಂದು ಅವರು ಪ್ರತಿಪಾದಿಸುತ್ತಾರೆ. ಹಿಂದಿಯನ್ನು ಒತ್ತಾಯದಿಂದ ಹೊರಿಸಲಿಚ್ಛಿಸುವವರನ್ನು ಇದಿರಿಸುತ್ತಾರೆ.

ಇದಿರಿಸುವ ರೀತಿಯಾದರೂ ಎಂಥದು ! ಮಾಸ್ತಿ 'ಕೆರಳು'ವುದನ್ನು ನೋಡಬೇಕು—ಅದೊಂದು ದೃಶ್ಯ !

ಮೊನ್ನೆ ಮುಂಬಯಿ ಸಾಹಿತ್ಯ ಸಮ್ಮೇಳನದಲ್ಲಿ ಆದುದೊಂದನ್ನು ನಿನಗೆ ನಾನು ಹೇಳಿರಬೇಕು. ಆರಂಭದ ದಿನ ಹಿಂದೀ ಭಾಷೆಯ ಪ್ರಚಾರಕರಂತೆ ಉದ್ಘಾಟಕ

(ಮಾನ್ಯ ಮಂತ್ರಿ) ದಿವಾಕರರು ಮಾತಾಡಿದಾಗ, ಇನ್ನು ಯಾರೋ ಹಿಂದೀ ಸಂಪಾದಕರು ಮಾತಾಡಿದಾಗ, ಮಾಸ್ತಿ ಕೊಟ್ಟ ಉತ್ತರ ನೋಡಿ ವಾಮಪಕ್ಷದ ವಿಚಾರಸರಣಿಯ ನಾನೇ ಬೆರಗಾದೆ. ಹತ್ತಿರ ಕುಳಿತಿದ್ದ ಗೋಕಾಕರು "ಹೊಸ ಪಾತ್ರದಲ್ಲಿ ಮಾಸ್ತಿ" ಎಂದರು. ನಾನು, "ಹೌದು, ಪ್ರಕ್ಷೋಭೆಕಾರಕ ಮಾಸ್ತಿ. ಸ್ಥಾನಬದ್ಧತೆಯ ಶಾಸನವಿದೆ" ಎಂದೆ.

ಇಷ್ಟಿದ್ದರೂ ಅವರ ಮೂಲ ನಂಬಿಕೆ, ನಿರೂಪಣೆ, ತಾತ್ವಿಕ ಪ್ರಚಾರ—ಇವನ್ನು ಮರೆಯುವಂತಿಲ್ಲ. ಇವುಗಳ ತಿಳಿವಳಿಕೆಯೇ ಮುಖ್ಯ.

ಇಂಥ ಮಾಸ್ತಿಯನ್ನು, ಕತೆಗಾರ—ಕಾದಂಬರಿಕಾರ—ಕವಿ—ಸಂಘಟಕ—ಯೋಧ—'ಸೇನಾನಿ'—ವಾಗ್ಮಿ—ಬೋಧಕ ಮಾಸ್ತಿಯನ್ನು ನಿನ್ನೆ ಮೊನ್ನೆ ಗೌರವಿಸಲಾಯಿತು.

ಅವರ ಅರುವತ್ತನೆಯ ಹುಟ್ಟು ಹಬ್ಬ! ಕನ್ನಡ ಚಳವಳಿಯಲ್ಲಿ ಅದೊಂದು ಮೈಲುಗಲ್ಲೇ ಸರಿ. ಮೂರು ಘಂಟೆ ಕಾಲ—ನಾಲ್ಕು ಘಂಟೆ ಕಾಲ ನಿರರ್ಗಳವಾಗಿ ನಡೆದ ಭಾಷಣಗಳು, ಮಾನಪತ್ರ ಸಮರ್ಪಣೆ, ಮಾಸ್ತಿಯವರ ಕೊನೆಯ ಎರಡು ಮಾತು, ಎಲ್ಲವೂ ಚೊಕ್ಕಟವಾಗಿದ್ದುವು.

....ವರದಿ ಮುಗಿಸಲೇ ಸಾಧನಾ? ಮಾಸ್ತಿಯವರ ಹೊಸ ಕಾದಂಬರಿ 'ಚೆನ್ನ ಬಸವನಾಯಕ' ಮತ್ತಿತರ ಕೆಲವು ಪುಸ್ತಕಗಳನ್ನು ಆದಿನ ನೀನು ಒಯ್ದಿದ್ದೆ. ಓದಿರಬೇಕಲ್ಲವೆ? ಈ ಸಮಾರಂಭದ ಸ್ಮರಣೆಯ ನಿಮಿತ್ತದಿಂದ ಅಷ್ಟನ್ನೂ ವಾಪಸು ಮಾಡು.

ಹೃದಯ ಕದಿಯುವರನ್ನಾದರೂ ಸಹಿಸಿಕೊಳ್ಳಬಹುದು. ಆದರೆ ಪುಸ್ತಕ ಕಳ್ಳರನ್ನು ಒಂದು ಹರದಾರಿ ದೂರವಿಡಬೇಕು!

ದೂರದ
ನಿರಂಜನ

೧೦

ಧಾರವಾಡ
....ನವೆಂಬರ್, ೧೯೫೧

ಪ್ರಿಯೆ ಸಾಧನಾಮಣಿ,

ಬೆಳಗಾಗಿದೆ. ಧಾರವಾಡದ ಸೂರ್ಯ ಇದೀಗ ಮೇಲೇರಿ ಬರುತಿದ್ದಾನೆ. ಕನ್ನಡದ ಹತ್ತಾರು ಕವಿಗಳ-ಸಾಹಿತಿಗಳ ಪ್ರೀತಿಯ ಕೇರಿಯಲ್ಲೆಲ್ಲ ಸುತ್ತಾಡಿ ಬಂದೆ. ಈ ಮುಂಜಾನೆ—ಆ ಕೆಂಪುಧೂಳಿನ ಕಾಲು ಹಾದಿಗಳ ಮೇಲೆ, ಹಸುರೆಲೆಯ ಕಾಡು ಮರಗಳ ತಣ್ಣನ ಕೆಳಗೆ, ಕನ್ನಡದ ಕೋಲಾಹಲಕಾರಕ ಯುವಕ ಕವಿಯೊಬ್ಬರ ಜತೆಗೂಡಿ.

ಆ ಕೇರಿಯು ಸಾಧನಾಕೇರಿ ಎಂದು ತಿಳಿದುಕೊಂಡಿಯೇನೋ. ಯಾಕೋ ಎಲ್ಲರಿಗೂ ಮೆಚ್ಚುಗೆ ಈ ಸಾಧನಾ ಎನ್ನುವ ಹೆಸರು !

ಇನ್ನು ಆ ಕೋಲಾಹಲಕಾರಕ ಕವಿ ? ಊಹಿಸಿಕೋ ನೋಡೋಣ. ಸಹಾಯಕ್ಕಾಗಿ ಇನ್ನೂ ಸ್ವಲ್ಪ ಬರೆಯಲೆ ?

ಅವರು ಬರೆದ 'ಆತ್ಮಶೋಧನೆ' ಎಂಬ ಕವಿತೆಯ ನಾಲ್ಕು ಸಾಲು ಇಲ್ಲಿವೆ :

ಹುಡುಕಿದೆ ಹಗಲೆಲ್ಲಾ
ಎಲ್ಲೂ ಸಿಗಲಿಲ್ಲ
ಹಳಬರು ಹೇಳಿದ ಆತ್ಮವು ನನಗೆ
ಎಲ್ಲೂ ಸಿಗಲಿಲ್ಲ........

ಗಂಗೆಗೆ ಇಳಿದು ಬಾ ತಾಯೆ ಎಂದು, ಕನ್ನಡದ ಪ್ರಮುಖ ಕವಿ ಕರೆಕೊಟ್ಟುದು ನಿನಗೆ ಗೊತ್ತೇ ಇದೆ. ಆದರೆ ಈ ಕವಿ 'ಆಕಾಶಗಂಗೆ'ಗೆ ಹೀಗೆನ್ನುತ್ತಾರೆ :

ಕವಿಗಳ ಹಿಂದೇ ಕರೆದಿದೆ ನಿನ್ನನು
ಭೂಮಿಗೆ ಓ ಗಂಗೆ
ಇಳೆಗಿಳೆಯುವ ಹುಲುಯೋಚನೆಗಳ ಬಿಡು
ಮಾಡಿದರೂ ದಂಗೆ

ಹಾಗೆ ಹೇಳಿ ಕಾರಣಗಳನ್ನು ಮುಂದಿಡುತ್ತಾರೆ. ಭೂಮಿಯ ಮೇಲಿನ ದುರವಸ್ಥೆಗಾಗಿ ದುಃಖಿಸಿ, ಗಂಗೆ ಇಲ್ಲಿಗೆ ಬಂದರೆ 'ಭಂಗಿನಿ'ಯ [ಕಕ್ಕಸು ತೊಳೆಯುವವಳ] ಕೆಲಸ ಮಾಡಬೇಕಾಗುವುದಲ್ಲಾ—ಎಂದು ಹಲುಬಿದ್ದಾರೆ !

ಇನ್ನೊಂದು ಕವಿತೆಯಿದೆ ಅವರದು. ಹೆಸರು—'ಮಗಳನ್ನು ಗಂಡನ ಮನೆಗೆ ನೂಕುವಾಗ,; ಹೀಗಿವೆ ಅದರಲ್ಲಿನ ನಾಲ್ಕು ಸಾಲುಗಳು :

ತಂದೆ :

ಇದು ಮಹತ್ವದ ವಿಷಯ, ನಿನ್ನ ತಾಯಿಯ ಹಾಗೆ
ಹೆರಬೇಡ ಪ್ರತಿವರುಷ ಬಿಡದೆ ನೀನು
ಇನ್ನು ವರುವರುಷವೂ ದೇವರೇ ಕಳಿಸಿದರೆ
ಹೇಳಿರುವೆ ಮೊನ್ನೆ....ನೆನಪಿಟ್ಟಿಯೇನು ?

ಮಗಳು :

ಅಳಬೇಡ ತಂದೆ ನಾ ಹೋಗಿಬರುವೆ

ತಂದೆ :

ಹೋಗಿ ಬಾ ಮರೆಯದಿರು ನನ್ನ ಕರುವೆ.

ಆ ಮಗಳು ಹೋದಮೇಲೆ ತಂದೆ ಹೇಳುವುದೇನು ಗೊತ್ತೆ?

ನಾಲ್ಕೈದರಲ್ಲೊಂದು ಪೀಡೆ ಕಳೆಯಿತು ಇಂದು
ಇಪ್ಪತ್ತು ವರುಷ ಈ ಜೀವ ತಿಂದು
ಅಪ್ಪಪ್ಪ ಗೆದ್ದೆ! ಸತ್ತವಳ ಮಗಳೂ ಹೋಯ್ತು
ಉಳಿದ ಕೆಲಸವು 'ಅವಳ' ಕರೆದು ತಂದು.

ಇನ್ನೊಂದೆಡೆ ಈ ಕವಿ ತನ್ನ ಕಾವ್ಯ ಗೆಳತಿಗೆ ಹೀಗೆಂದು ಹೇಳಿದ್ದಾರೆ:

ನೀನು ಖಾದಿಯ ನೂತು
ಅರಿವೆಯನು ಗಳಿಸಿ
ನಾನು ತಗಣೆಯ ಕೊಂದು
ನೆತ್ತರವನುಳಿಸಿ
ಅರವಿಂದ ಕಂಪನಿಯ
ವಿಮೆಯನೂ ಇಳಿಸಿ
ಆದರ್ಶರೆನಿಸೋಣ
ಈ ನಗರದಲ್ಲೇ........

ಈ ಕವಿತೆ ಅಚ್ಚಾದಾಗ ಗೊಂದಲವಾಯಿತಂತೆ ಒಮ್ಮೆ. 'ಅರವಿಂದ ಕಂಪೆನಿ' ಎನ್ನುವುದಿದೆ?! ಹಾಗೆ ಹೇಳಿದ ಕವಿಯನ್ನೇ ಅವಹೇಳನ ಮಾಡಿ ಬೇರೊಂದು ಕವಿತೆ ಬಂತು. ಆದರೆ ಈ ಕವಿ ನಿಶ್ಚಲರಾಗಿ ಹೇಳಿದರು: "ಒಂದು ಇನ್‌ಷೂರೆನ್ಸ್ ಕಂಪೆನಿಗೆ ಅರವಿಂದ ಕಂಪೆನಿ ಎಂತ ಒಳ್ಳೆಯ ಹೆಸರಿಡುವ ಸ್ವಾತಂತ್ರ್ಯವಾದರೂ ಇರಬಾರದೇ?"!

'ಪ್ರೀತಿ ಸಾಲದು' ಎಂಬ ಕವಿತೆಯಲ್ಲಿ ಕೈಹಿಡಿದಾಕೆಗೆ ಕವಿ ಹೀಗೆ ಹೇಳಿದ್ದಾರೆ:

ನಾವು ಕೂಡಿದೀ ಜೀವನ ಸಾಗಲು ಸಾಲದು ಸಖಿ ಬರಿ·ಪ್ರೀತಿ
ಬದುಕಿನ ಉಸಿರೇ ಇದು ಎನಲಾರೆನು—ಅಸ್ತಿತ್ವದ ಘನ ನೀತಿ
....
ಒಂದು ಖಂಡಿ ನಿಜ ಪ್ರೀತಿಯ ಕೊಟ್ಟರೆ ಸಿಗುವುದೆ ವಾರದ 'ಸೀದಾ'?
[ರೇಶನ್]
....
ಅನ್ನ ಬೇಯಿಸಲು ನಮ್ಮೆದೆ ಬೆಂಕಿಯ ಸಾಲದು ಕಟ್ಟಿಗೆ ಬೇಕು.

—ಹೀಗೇ ಇನ್ನೆಷ್ಟೋ. ಸ್ಪಷ್ಟವಾಯಿತೆ? ಹೌದಮ್ಮ—ಗಡಸುಗಾರ ವಿ.ಜಿ.ಯ ['ವಿಜಯ'] ಬಗೆಗೇ ನಾನು ಬರೆಯುತ್ತಿರುವುದು. ಅವರೇ ವಿಷ್ಣು ಗೋವಿಂದ ಭಟ್ [ಎಂ. ಎ.].

೧೯೪೬ರಲ್ಲೇ ಪ್ರಕಟವಾದ ಅವರ 'ಪಲಾಯನ' ಮತ್ತು 'ರಕ್ತಾಂಜಲಿ' ಕವನ ಸಂಗ್ರಹಗಳಿಂದ ಈ ಸಾಲುಗಳನ್ನು ಆಯ್ದು ಕೊಟ್ಟಿಲ್ಲ. ಈಗ್ಗೆ ಸರಿಯಾಗಿ;ಒಂದು ತಿಂಗಳ ಹಿಂದೆ ಪ್ರಕಟವಾದ ಅವರ 'ಕಾವ್ಯವೇದನೆ' ಸಂಗ್ರಹದಿಂದ ಕೊಟ್ಟಿದ್ದೇನೆ.

ಕಾವ್ಯವೇದನೆ—ಎಂಬ ಹೆಸರು ! ಸಾಮಾನ್ಯವಾಗಿ ಕಾವ್ಯ ನಿವೇದನೆ ಎನ್ನುತ್ತಾರೆ. ಧಾರವಾಡದ ಆಕಾಶವಾಣಿಯವರದೂ 'ಕಾವ್ಯನಿವೇದನೆ' ಎಂಬ ಕವಿತೆಯೋದುವ [ಹಾಡುವ ?] ಕಾರ್ಯಕ್ರಮವಿದೆ. ಆದರೆ ವಿ. ಜಿ. ಬರೆದಿರುವುದು ಕಾವ್ಯವೇದನೆ.

ಇನ್ನು ಆ ವೇದನೆಯ ಕಥೆಯೋ !

ಪ್ರಕಟವಾದ ಎರಡು ದಿನಗಳಲ್ಲಿ ವಿ. ಜಿ. ಒಂದು ಪ್ರತಿಯನ್ನು ಧಾರವಾಡದ ಆಕಾಶವಾಣಿ ಕೇಂದ್ರಕ್ಕೆ ಕಳಿಸಿಕೊಟ್ಟರು—ವಿಮರ್ಶೆಯ ಕೃಪೆಗಾಗಿ.

ಹಾಗೆ ಕಳಿಸಿದ ಎರಡು ದಿನಗಳ ಅನಂತರ ಒಂದು ರಾತ್ರೆಯಲ್ಲಿ ಬೆಚ್ಚಗೆ ಕುಳಿತಿದ್ದಾರೆ. ಮನೆಯೆದುರು ಒಂದು ಮೋಟಾರ್‌ಕಾರು ಬಂದು ನಿಂತಿತು—ಆಕಾಶವಾಣಿ ವ್ಯಾನ್. ತಮ್ಮ ಲೇಡಿ ಅಸಿಸ್ಟೆಂಟರೊಡನೆ ಆಕಾಶವಾಣಿಯ ಹುದ್ದೇದಾರರೊಬ್ಬರು ಇಳಿದು ಭಟ್ಟರ ಮನೆಗೆ ಬಂದರು. ಅವರ ಹೆಸರು ಮಿಸ್ಟರ್ ಗುತ್ತಲ್—ದಿಲ್ಲಿ ಕೇಂದ್ರದ ಮಾನ್ಯ ದಿವಾಕರರ ಸಮೀಪ ಸಂಬಂಧಿ ಇವರು, ಅವರ ಅಳಿಯ.

ಬಂದವರೇ, ಒಂದೂವರೆ ಅಡಿ ಉದ್ದ, ಆರು ಇಂಚು ಅಗಲದ ದೊಡ್ಡ ಲಕೋಟೆಯನ್ನು ಭಟ್ಟರಿಗೆ ಕೊಟ್ಟರು. ಆದರೊಳಗೆ, ಅವರು ವಿಮರ್ಶೆಗೆಂದು ಕಳಿಸಿದ್ದ 'ಕಾವ್ಯವೇದನೆ' ವಾಪಸು ಬಂದಿತ್ತು.

'ಏನಿದು ?' ಎಂದರು ಧಾಂಡಿಗ ದೇಹದ ಯುವಕ ಭಟ್ಟರು, ಕನ್ನಡಕದೊಳಗಿಂದ ನೋಡುತ್ತಾ.

"ಇದರ ವಿಮರ್ಶೆ ನಾವು ಮಾಡುವುದಿಲ್ಲ"

"ಇದು ವಿಮರ್ಶೆಗೆ ಯೋಗ್ಯವಲ್ಲ ಎಂತ ಯಾವ ವಿಮರ್ಶಕ ಹೇಳಿದ ?"

"ಯಾರೂ ಇಲ್ಲರೀ ....''

"ಸ್ವತಃ ವಿಮರ್ಶೆ ಮಾಡಲಿಕ್ಕೆ ಬರುತ್ತದೇನು ನಿಮಗೆ ?"

"ಹಾಗಲ್ಲರೀ...."

"ಹ್ಯಾಗೆ ಮತ್ತೆ ? ಸಾಮಾನ್ಯವಾಗಿ ಮೂರು ಜನ ವಿಮರ್ಶಕರು ಓದಿದ ಮೇಲಲ್ಲ ತೀರ್ಮಾನಿಸೋದು ?...."

"ಸಿಟ್ಟಾಗಬಾರದು ಭಟ್ಟರೆ...."

"ಓ....! ಯಾವ ಕಾರಣದಿಂದ ಇದು ವಿಮರ್ಶೆಗೆ ಯೋಗ್ಯವಲ್ಲ ಸ್ವಲ್ಪ ಹೇಳಿ"

"ಇದರ ತುಂಬೆಲ್ಲ ಪ್ರೇಮ ಗೀತಗಳೇ ಇವೆ."

"ಓಹೋ....ಹಾಗಾದರೆ ನೀವೆಲ್ಲ ಧರ್ಮ ಗುರುಗಳೋ ? ನಿಮ್ಮ ಆಕಾಶವಾಣಿಯೊಂದು ಇಗರ್ಜಿಯೋ ? ನಿಮ್ಮದೊಂದು ಸ್ತ್ರೀ ಪಾದ್ರಿ [ಮಾದ್ರಿ] ಗಳ ಮಠವೋ?"

ಮಿಸ್ಟರ್ ಗುತ್ತಲ್ ಬೆವರೊರೆಸಿಕೊಂಡರು! ಇಂಗ್ಲಿಷಿನ ಬದಲು ಕನ್ನಡದಲ್ಲೇ ಮಾತು ಶುರು ಮಾಡಿದರು.

ಮುಂದೇನು ಅವಾಂತಾರವಾಗಲಿಲ್ಲವೆನ್ನಿ. ನಿಜಕ್ಕೂ ಶ್ಲಾಘನೀಯವೇ—ವಿಜಯ ತಾಳ್ಮೆ! ಬಂದವರು ತಲೆ ಕೆಳಹಾಕಿ ಹೊರಟುಹೋದರು.

ಇದೀಗ 'ಕಾವ್ಯವೇದನೆ' ಧಾರವಾಡದಲ್ಲಿ ಆರಂಭಿಸಿದ ಗೊಂದಲ.

ಆದರೆ ಈ ಪುಸ್ತಕದ ಬಗ್ಗೆ ಕೆಲ ಪ್ರಮುಖ ಸಾಹಿತಿಗಳ ಅಭಿಪ್ರಾಯವೇನು ಗೊತ್ತೆ?

"ಕೆಲವು ಜನ ಸಹೃದಯರೆನಿಸಿಕೊಳ್ಳುವವರಿಗೆ ನಿಮ್ಮ ಈ 'ವಿಚಾರ ಗೀತ'ಗಳ ರೀತಿ ಒಪ್ಪಿಗೆಯಾಗಲಿಕ್ಕಿಲ್ಲ....ಹೊಸ ಕನ್ನಡ ಸಾಹಿತ್ಯದ ನೂತನ ನಿರ್ಮಿತಿಯಲ್ಲಿ 'ರತ್ನನ ಪದ'ದ ತರುವಾಯ ಒಂದು ವೈಶಿಷ್ಟ್ಯವನ್ನು ತುಂಬಿಕೊಂಡು ಬಂದಿರುವ ಇನ್ನೊಂದು ಸಂಕಲನ ತಮ್ಮ 'ಕಾವ್ಯವೇದನೆ'" ಎಂದಿದ್ದಾರೆ ಬೆಟಗೇರಿ ಕೃಷ್ಣ ಶರ್ಮರು.

ಕನ್ನಡದಲ್ಲೊಬ್ಬ ಒಳ್ಳೆಯ ಕವಿಯಾದ ಪಾಂಡೇಶ್ವರ ಗಣಪತಿರಾಯರು, "ನಮ್ಮಿಂದಿನ ಕನ್ನಡದಲ್ಲಿ ಇವರನ್ನು ಸರಿಗಟ್ಟುವ ಸರಸ ಶೈಲಿಯ ವಿಡಂಬನ ಕವಿಗಳು ಬೇರೊಬ್ಬರಿಲ್ಲವೆಂಬ ಬಗ್ಗೆ ಭಿನ್ನಾಭಿಪ್ರಾಯವಿರದು....ಇಂತಹ ವಿಡಂಬನ ಕವಿಗೆ ನಾಡಿಗೆ ನಾಡೇ ಮಣಿಯಬೇಕು. ಹಾಗೂ ಆತನ ಅನನ್ಯ ಅಸಾಧಾರಣವಾದ ಕೂರ್ನೋಟದಿಂದ ಆಗಬಹುದಾದ ವೈಯಕ್ತಿಕ—ಸಾಮೂಹಿಕ ಸಮಾಜ ಸೇವೆ ಸುಧಾರಣೆಗಳನ್ನು ಮೆಚ್ಚಿಕೊಳ್ಳಬೇಕು ಎಂದು ಹೇಳಿದ್ದಾರೆ.

ಶಂ. ಬಾ. ಜೋಶಿಯವರು, "....ಈ ಭಟ್ಟರ ವೇದನೆಯು ವ್ಯಕ್ತಿಗತ ನೋವಾಗಿರದೆ ಅನೇಕರ ಪ್ರಾತಿನಿಧಿಕ ಮನೋಭಾವವಾಗಿದೆಯೆಂದು ಸಿದ್ಧಪಡಿಸಬೇಕಾಗಿಲ್ಲ.....ಈಗಾಗಲೇ ರಸಸಿದ್ಧರೆಂದು ಖ್ಯಾತನಾಮರಾದವರಿಂದ ಹೀಯಾಳಿಸಿಕೊಳ್ಳಬೇಕಾದೀತೆಂಬ ಅಂಜಿಕೆ ಅಳುಕುಗಳಿಗೆ ಒಳಗಾಗದೆ ಈ ಪದ್ಯಗಳನ್ನು ಪ್ರಕಟಿಸಿದ್ದುದರಲ್ಲಿ ಅವರ ನೈತಿಕ ಧೈರ್ಯವು ಕಂಡು ಬರುತ್ತದೆ," ಎಂದು ಅಭಿಪ್ರಾಯ ಕೊಟ್ಟಿದ್ದಾರೆ.

ಹೀಗೆ ಇನ್ನೂ ಕೆಲವು.

ಬೇಂದ್ರೆ ಮತ್ತು ಗೋಕಾಕರು ಮಾತ್ರ, ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ, ಅಸಮ್ಮತಿ ವ್ಯಕ್ತಪಡಿಸಿದ್ದಾರೆ.

ವಿಮರ್ಶೆ ಎಂದರೆ ಹೊಗಳಿಕೆಯಲ್ಲವಲ್ಲ. ಅಂದಮೇಲೆ ಧಾರವಾಡದ ಆಕಾಶವಾಣಿಯವರು ತಮಗೆ ಬೇಕಾದ ರೀತಿಯಲ್ಲಿ ವಿಮರ್ಶಿಸಬಹುದಾಗಿತ್ತು. ಆದರೆ ಅವರು ಅದನ್ನು ನಿರಾಕರಿಸಿದ ಬಗೆಯೊ! ವಾಪಸು ಒಪ್ಪಿಸಿದ ರೀತಿಯೊ!

ವಿ. ಜಿ. ಈ ಮೂರು ವರ್ಷಗಳ ಬಿಕ್ಕಟ್ಟಿನ ಕಾಲಾವಧಿಯಲ್ಲಿ ತುಂಬ ವಿಚಾರಗಳ ಪೀಕಲಾಟಕ್ಕೆ ಗುರಿಯಾಗಿದ್ದಾರೆ. ಅನ್ಯಾಯವನ್ನು ಇದಿರಿಸುವ ಅವರ ದೃಷ್ಟಿ

ಬಲಗೊಳ್ಳುತ್ತಲೇ ನಡೆದಿದೆ. ಅವರ ಮಾತಿನ ತೀಕ್ಷ್ಣತೆ ಹೆಚ್ಚುತ್ತಲೇ ಬಂದಿದೆ. ಯಾವ ರಾಜಕೀಯ ಪಂಥದವರೂ ಅವರಲ್ಲ. ಆದರೆ ಅವರದೊಂದು ಪಕ್ಷವಿದೆ. ಅದು ಬಳಲಿಕೆಗೆ ಒಳಗಾದವರ, ಸಂಕಟ ಅನುಭವಿಸುವವರ, ಪಕ್ಷ. ಆ ಪಕ್ಷದಲ್ಲಿ ಅವರೊಬ್ಬ ಭಟ.

....ಕಾಗದದ ಜತೆಯಲ್ಲೇ ಈ ದಿನ 'ಕಾವ್ಯವೇದನೆ'ಯನ್ನು ಕಳಿಸಿದ್ದೇನೆ. ಅವರ 'ತುಂಟನ ಪದಗಳು' ಕೂಡಾ ಬಂದಿದೆ ಹೆಚ್ಚಿನವು ನಮಗಿಬ್ಬರಿಗೂ ಹಿಡಿಸುವಂಥವು; ಕೆಲವು ಅಷ್ಟಕ್ಕಷ್ಟೆ. ನನ್ನ ಸಾಧನಾ ಒಳ್ಳೆಯ ವಿಮರ್ಶಕಳೆಂದು ಅವರ ಮನೆಯಲ್ಲಿ ಪ್ರಚಾರ ಮಾಡಿ ಬಂದಿದ್ದೇನೆ. ನಿನ್ನ ವಿಮರ್ಶೆಯನ್ನು ವಿ. ಜಿ. ಗೇ ಬರೆದು ಕಳಿಸು. [ಸೈದಾಪುರ, ಧಾರವಾಡ]. "ಎಲಾ ಹೆಣ್ಣೆ!" ಎಂದು ನಿನ್ನ ಮೇಲೊಂದು ಕವಿತೆ ಬರೆದರೂ ಬರೆಯಬಹುದು ಆ ಕವಿ.

ಅಂತೂ ಕಾಗದದ ತುಂಬ ಸಾಹಿತ್ಯ ಬರೆದೆ. ಎಲ್ಲವೂ ಅವರಿವರ ಉಲ್ಲೇಖವೇ. ನಮ್ಮ ನಮ್ಮ ವಿಚಾರವೇ ಇಲ್ಲ. ದಯವಿಟ್ಟು ನೀನಾದರೂ ಬರೆ. ಒಳ್ಳೆಯವಳು ನೀನು. ನಿನ್ನ ಬಾಯಿಗೆ ಸಕ್ಕರೆ ಬೀಳಲಿ.

'ಒಂದು ಖಂಡಿ ಪ್ರೀತಿ'ಯೊಡನೆ
ನಿರಂಜನ

೨೭

ಮೈಸೂರು
....ಸೆಪ್ಟಂಬರ್, ೧೯೫೨

ಬಾಳ ಒಡತಿ,

ನಿನ್ನೆ ಮೈಸೂರಿಗೆ ಬಂದೆ. ಹೇಳದೆ ಕೇಳದೆ ಎಂಥ ಪ್ರವಾಸ?—ಎಂದು ಗದರಿಸಬೇಡ ಸದ್ಯಃ. ಸಾಹಿತ್ಯ ಜೀವಿ ಅಲೆಯುತ್ತಲೆ ಇರಬೇಕಾಗುತ್ತದೆಂಬುದನ್ನು ತಿಳಿಯದವಳಲ್ಲ ನೀನು.

ಊರು ಬಿಟ್ಟ ದಿನ ಅಂಚೆಯಿಂದ ಒಂದು ಪುಸ್ತಕ ಬಂದಿತ್ತು. ಹೆಸರು "ನವಿಲೂರ ಮನೆಯಿಂದ" ಬಹಳ ದಿನಗಳಿಂದ ನಾನು ಇದಿರು ನೋಡುತ್ತಲಿದ್ದ ಪುಸ್ತಕ, ಬರುತ್ತ ಹಿಡಿದುಕೊಂಡು ಬಂದೆ, ದಾರಿಯ ಬುತ್ತಿಯಾಗಲೆಂದು. ಎಂಥ ಬುತ್ತಿ!

ನನ್ನೆದುರಿಗೆ ಆ ಪುಸ್ತಕ, ತೆರೆದು ಕುಳಿತಿದೆ. ಆರಂಭದ ಪುಟದಿಂದಲೇ ನನ್ನ ಆತ್ಮೀಯರಾಗಿದ್ದ ವ್ಯಕ್ತಿಯೊಬ್ಬರ ಚಿತ್ರ, ಅವರ ನೂರು ಭಾವನೆಗಳಿಗೆ ಕೈಗನ್ನಡಿಯಾಗಿ ನನ್ನನ್ನೇ ನೋಡುತ್ತಿದ್ದೆ. ಈತ ಶಿವೇಶ್ವರ.

ಸಾಧನಾ, ನಾನು ನಿನಗೆ ಬರೆದ ಮೊದಲ ಕಾಗದವನ್ನು ಜ್ಞಾಪಿಸಿಕೊ. ಆದರಲ್ಲಿ ಶಿವೇಶ್ವರನ ವಿಷಯ ಬರೆದಿದ್ದೆನಲ್ಲವೆ? ಆ ಮೇಲೆಯೂ ಸಂಜೆಯ ವಾದ ವಿವಾದಗಳಲ್ಲಿ ಹಲವೊಮ್ಮೆ ಶಿವೇಶ್ವರ ಸುಳಿದು ಹೋಗಿದ್ದನಲ್ಲವೆ?

ಅವನ ಕೃತಿಗಳ ಸುಂದರ ಸಂಕಲನವೇ ಈ ಪುಸ್ತಕ. ಗೆಳೆಯರಾದ ಬಸವರಾಜ ಕಟ್ಟೀಮನಿ ಮತ್ತು ಚೆನ್ನವೀರ ಕಣವಿ ಅದನ್ನು ಸಂಪಾದಿಸಿದ್ದಾರೆ. ಇನ್ನೊಬ್ಬ ಕವಿಯಾದ ಸಿದ್ದಣ್ಣ ಮಸಳಿ ಅದನ್ನು ಪ್ರಕಟಿಸಿದ್ದಾರೆ.

ಪುಸ್ತಕವನ್ನು ನೋಡುತ್ತ ಕುಳಿತರೆ, ಮನಸ್ಸು ಮಂಕಾಗುತ್ತದೆ. ನೆನಪುಗಳ ಇರುವೆ ಸಾಲು ಕಣ್ಣೆದುರು ಕಟ್ಟುತ್ತದೆ. ೧೯೪೬, ೪೭, ೪೮ರ ದಿನಗಳು ಮತ್ತೆ ಮೈವೆತ್ತು ಉರುಳುತ್ತವೆ. ನನಗರಿಯದೆಯೇ ಭಾರವಾಗುತ್ತದೆ ಹೃದಯ: ತೇವ ವಾಗುತ್ತದೆ ಕಣ್ಣು. ನಾನು, ಶಿವೇಶ್ವರನ ಬಗೆಗೆ ಎಂಥೆಂಥದೋ ಭವ್ಯ ಕನಸುಗಳನ್ನು ಕಂಡಿದ್ದೆ. ಜನಯುಗದ ಹರಿಕಾರನಾಗಿ ಆತ ಹಾಡುವುದನ್ನು ಕಲ್ಪಿಸಿಕೊಂಡಿದ್ದೆ....

ಶಿವೇಶ್ವರ ದೊಡ್ಡಮನಿ ಬಹಳ ಕಾಲ ಬದುಕಲಿಲ್ಲ. ಇಪ್ಪತ್ತೈದು ವರ್ಷದ ತಾರುಣ್ಯವೆ ಅವರ ಪಾಲಿಗೆ ಮುಪ್ಪಾಯಿತು. ದೈಹಿಕ ಅನಾರೋಗ್ಯ ಮಾನಸಿಕ ಅಶಾಂತಿಯನ್ನು ಇಮ್ಮಡಿ ಮಾಡಿತು. ಕುರುಡು ಬೇನೆ ಅವರ ಕಣ್ಣ ಬೆಳಕನ್ನೆ ಕಸಿದುಕೊಳ್ಳಲೆತ್ನಿಸಿ, ಅವರೆದುರು ಶೂನ್ಯದ ವೃತ್ತವನ್ನು ಬರೆಯಿತು.

ಹೆಸರು ದೊಡ್ಡಮನಿ. ಹಿಂದೆ ದೊಡ್ಡ ಮನೆಯೇ ಆಗಿತ್ತು ಅವರ ಕುಟುಂಬ. ಆದರೆ ಶಿವೇಶ್ವರನಿಗೆ ಚೆನ್ನಾಗಿ ತಿಳಿವಳಿಕೆ ಬಂದಾಗ ಅವರು ಬಡ ನೇಕಾರ ಕುಟುಂಬ ದವರಾಗಿದ್ದರು. ಅಷ್ಟಾದ ಮೇಲೆ ತಿಳಿದೇ ಇದೆಯಲ್ಲ....ಬಡತನ....ಹೆಚ್ಚಿನ ವಿದ್ಯಾ ಭ್ಯಾಸಕ್ಕೆ ತೊಂದರೆ, ಸಂಪಾದನೆಯ, ಕುಟುಂಬ ಪೋಷಣೆಯ ಪ್ರಶ್ನೆ. ಶಿವೇಶ್ವರ ತೀರ ಸಾಮಾನ್ಯನಾಗಿದ್ದರೆ ಕೋಟಿ ಗಾಣದೆತ್ತುಗಳಲ್ಲಿ ಒಬ್ಬರಾಗುತ್ತಿದ್ದರು. ಆದರೆ ಅವರು ಕವಿಯಾಗಿದ್ದುದರಿಂದ, ಸಾಹಿತಿಯಾಗಿದ್ದುದರಿಂದ, ಅವರಿಗಾದ ಅನ್ಯಾಯ ಹೆಚ್ಚು ಒಡಮೂಡಿ ಕಾಣುತ್ತಿದೆ.

....'ನವಿಲೂರ ಮನೆಯಿಂದ' ಸಂಗ್ರಹದ ಪ್ರಕಟಣೆ ಸುಲಭವಾಗಲಿಲ್ಲ. ಶಿವೇಶ್ವರನ ಸ್ನೇಹಿತರಿಂದ, ಪರಿಚಿತರಿಂದ, ಆ ಹೆಸರನ್ನು ಕೇಳಿ ಗೌರವ ಭಾವನೆ ತಳೆದಿದ್ದವರಿಂದ, ಮುದ್ರಣ ವೆಚ್ಚಕ್ಕೆಂದು ಸಹಾಯ ಧನ ಕೂಡಿಸಬೇಕಾಯಿತು.... ಸಂಗ್ರಹದಲ್ಲಿ ಮೂವತ್ತು ಪುಟಗಳಷ್ಟು ಶಿವೇಶ್ವರರ ಸ್ವಂತ ಕೃತಿಗಳು; ಇಪ್ಪತ್ತೈದು ಪುಟಗಳಷ್ಟು ಅವರ ಜನಪದ ಗೀತೆಗಳು. ಇದರಲ್ಲಿ 'ಚರಮ ಗೀತೆ' ಯೊಂದಿದೆ. ಅದನ್ನು ಬರೆದವರು ಶಿವೇಶ್ವರರ ಆತ್ಮೀಯರಾಗಿದ್ದ ಕವಿ, ಚೆನ್ನವೀರ ಕಣವಿ—

"ನಾಡ ತಿರುಗಿದನಂದು ಗುಡುಗಾಡಿದನು ಕವಿ ಸರ್ವಜ್ಞನು
ಕರದಿ ಕಪ್ಪರವಿಡಿದು ಕಂಬಳಿ ಹೊದೆದು ಜೀವವ ತೇಯ್ದನು;
'ಭವತಿ ಭಿಕ್ಷಾಂದೇಹಿ' ಕವಿಗಳ ಮಂತ್ರವೆಂದನು ಮುದ್ದಣ
ಅಶ್ವಮೇಧವೆ, ವಿಶ್ವಮೇಧವೆ ಕವಿಗೆ ಕಂಬನಿ ಕಂಕಣ!"

—ಎಂಬ, ಕಣ್ಣನ್ನು ಹಿಂಡಿ ಕಂಬನಿ ಹೊರಡಿಸುವ ಸಾಲುಗಳಿವೆ ಆ ಗೀತದಲ್ಲಿ ಪುಸ್ತಕದ ಆರಂಭದಲ್ಲಿರುವ ಲೇಖನ: 'ಶಿವೇಶ್ವರನ ಸಾವು.' ಬರೆದವರು ಬಸವರಾಜ

ಕಟ್ಟೀಮನಿ. ತಮ್ಮ ಗಡಸು ಶೈಲಿಯಲ್ಲಿ ಕಟುವಾದ ಕೆಲವು ಅಂಶಗಳನ್ನು ಅವರು ಹೊರಗೆಡವಿದ್ದಾರೆ. ಅವರ ಮಾತುಗಳು ಹೀಗಿವೆ :

"ಶಿವೇಶ್ವರ ದೊಡ್ಡಮನಿ ಉದಯೋನ್ಮುಖ ಕವಿಯೆಂಬ ವಿಚಾರ ನಿಮಗೆ ಗೊತ್ತಿದ್ದಿತು. ಆತನ ಭವಿತವ್ಯದ ಬಗೆಗೆ ನಿಮ್ಮಲ್ಲಿ ಹಲವರಾದರೂ ಏನೇನೋ ಆಸೆಯಿಟ್ಟುಕೊಂಡಿದ್ದಿರಲು ಸಾಕು. ಎರಡು ವರ್ಷಗಳ ಹಿಂದೆ ಆತ ಹಠಾತ್ತನೆ ಸಾವಿಗೀಡಾದ. ಇಪ್ಪತ್ತೈದರ ಪ್ರಾಯದಲ್ಲೇ ಹೇಗೆ ಸತ್ತ ಶಿವೇಶ್ವರ ? ಆತನಿಗೇನಾಗಿತ್ತು ? ಎಂದು ಕೆಲವರು ಕೇಳಿದರು. 'ವಿಷಮ ಜ್ವರದಿಂದ ಸತ್ತ' ಎಂದು ಹೇಳಿ ಸುಮ್ಮನಾದರು ಅವನ ಬಂಧುಗಳು....ಆತ ಹೇಗೆ ಸತ್ತನೆಂಬುದನ್ನು ನಾನು ಚೆನ್ನಾಗಿ ಬಲ್ಲೆ. ಇಪ್ಪತ್ತೈದರ ಪ್ರಾಯದಲ್ಲಿ ಸಾಮಾನ್ಯವಾಗಿ ಎಲ್ಲರೂ ಸಾಯುವುದಿಲ್ಲ. ಆತನ ಸಾವಿಗೆ ಕಾರಣವಾದುದು ವಿಷಮ ಜ್ವರ ಎಂಬುದೇನೋ ನಿಜ. ಆದರೆ ಜನರು ತಿಳಿದುಕೊಂಡ ವಿಷಮ ಜ್ವರವಲ್ಲ. **ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ, ಸಾಂಸ್ಕೃತಿಕ ವಿಷಮತೆಯ ಜ್ವರ ಅದು.**

"ದೊಡ್ಡಮನಿಯನ್ನು ಯಾರು ಕೊಂದರು ? ಈ ಸಂಕುಚಿತ ಮನಸ್ಸಿನ ನೀಚ ಸ್ವಾರ್ಥದ, ಭೀಕರ ವಿಷಮತೆಯ ಪಾಪಿ ಸಮಾಜ ಆತನನ್ನು ಕೊಂದಿತು. 'ದೇವರು ಆತನನ್ನು ಕರೆದೊಯ್ದ'ನೆಂದು ಹೇಳುವುದೊಂದು ದೊಡ್ಡ ಸುಳ್ಳು. ಸಮಾಜದ ದೆವ್ವಗಳು ಆತನನ್ನು ಕೆಣಕಿ, ಕೆರಳಿಸಿ ಅವಮಾನಗೊಳಿಸಿ ಆತನ ಶಕ್ತಿಯನ್ನೆಲ್ಲ ಹೀರಿಕೊಂಡು ಮೃತ್ಯುವಿನ ದವಡೆಗೆ ದೂಡಿದುವು.

"....ನೇಕಾರ ಕುಟುಂಬವೊಂದರಲ್ಲಿ ಹುಟ್ಟಿದ ಆ ಜೀವ ಹಳ್ಳಿಯ ಸರಲ ಸುಂದರ ವಾತಾವರಣದಲ್ಲಿ ಬೆಳೆದು, ಜಾನಪದ ಗೀತೆಗಳ ಸವಿಯನ್ನುಂಡು ಸಾಹಿತ್ಯದ ಕಡೆ ಆಕರ್ಷಿತವಾಯಿತು. ಮ್ಯಾಟ್ರಿಕ್ ಮುಗಿದ ಬಳಿಕ ಕಾಲೇಜಿಗೆ ಹೋಗಿ ವ್ಯಾಸಂಗ ಮಾಡುವ ಇಷ್ಟವಿದ್ದರೂ ಫೀಜಿಗೆ ಹಣವಿಲ್ಲದ್ದರಿಂದ ವಿದ್ಯಾಭ್ಯಾಸಕ್ಕೆ ಶರಣು ಹೊಡೆಯಬೇಕಾಯಿತು. ಹುಟ್ಟು ಪ್ರತಿಭಾಶಾಲಿಯಾದ ಶಿವೇಶ್ವರ ಎಂ.ಎ.ವರೆಗೂ ಓದಿ ಯಾವುದಾದರೊಂದು ಕಾಲೇಜಿನಲ್ಲಿ ಲೆಕ್ಚರರ್ ಕೆಲಸಕ್ಕೆ ಸೇರಿದ್ದಲ್ಲಿ ಆತನೂ ಇನ್ನೊಬ್ಬ ಬೇಂದ್ರೆಯೊ ಕುವೆಂಪುವೊ ಆಗಬಹುದಾಗಿತ್ತು, ಆದರೆ....

"ಜನಪದ ಗೀತಗಳನ್ನು ಸಂಗ್ರಹಿಸುತ್ತ, ಜತೆಯಲ್ಲೇ ಸ್ವತಂತ್ರವಾಗಿ ಕವಿತೆಗಳನ್ನುರಚಿಸಿ ಪ್ರಕಟಿಸುತ್ತ, ಕನ್ನಡ ಸಾಹಿತ್ಯದಲ್ಲಿ ಹೊಸಶಕ್ತಿ ಹುಟ್ಟಿಸಬೇಕೆಂಬುದು ಆತನ ಆಶಯವಾಗಿದ್ದಿತು. ಆತನ ಆಸೆಯ ಬಳ್ಳಿ ಅಸಡ್ಡೆಯ ಉಸಿರಿಗೆ ಸಿಕ್ಕಿ ಕಮರಿಹೋಯಿತು...."

—ಹೀಗೆ ಕಟ್ಟೀಮನಿ, ಶಿವೇಶ್ವರನ ಜೀವನ ಕಥೆಯನ್ನು ಬರೆದಿದ್ದಾರೆ. ಹೋರಾಟ ಜೀವಿಯಾದ ಶಿವೇಶ್ವರ, ಜನ ಸಾಮಾನ್ಯರ ಚಳವಳಿಯ ಕಡೆಗೆ, ಕೆಂಪು ಬಾವುಟದ ಕಡೆಗೆ, ಆಕರ್ಷಿತನಾದುದರಲ್ಲಿ ಆಶ್ಚರ್ಯವಿಲ್ಲ. ಅವರು 'ಜನಶಕ್ತಿ'ಯ ಸಂಪಾದಕ ಮಂಡಲವನ್ನು ಸೇರಿದ್ದೂ ಅಷ್ಟೇ ಸ್ವಾಭಾವಿಕವಾಗಿತ್ತು. ಜೀವನದ

ಆ ಹೊಸ ಅಧ್ಯಾಯಗಳಿಂದ ಅವರ ದೃಷ್ಟಿ ವಿಶಾಲವಾಯಿತೆಂಬುದೂ ನಿಜ. ಆದರೆ ಸರ್ಕಾರ ನಡೆಸಿದ ದಬ್ಬಾಳಿಕೆ, 'ಜನಶಕ್ತಿ' ನಿಂತುಹೋದುದು—ಈ ಎಲ್ಲ ಘಟನೆಗಳ ಫಲವಾಗಿ ಮತ್ತೆ ಶಿವೇಶ್ವರನ ಜೀವನದಲ್ಲಿ ಹಲವು ಮಾರ್ಪಾಟುಗಳಾದವು.

೧೯೪೯ರಲ್ಲೊಂದು ಸಂಜೆ ಕಟ್ಟೀಮನಿ ಮತ್ತು ಶಿವೇಶ್ವರ ಧಾರವಾಡದ ಸಾಧನ ಕೇರಿಯಲ್ಲಿ ಹೊರಟಿದ್ದಾಗ, ಶಿವೇಶ್ವರ ಹೀಗೆ ಹೇಳಿದರಂತೆ:

"ನಾನಿನ್ನು ಬಹಳದಿನ ಬದುಕುವುದಿಲ್ಲ ಅನ್ನಿಸುತ್ತದೆ. ನನ್ನ ಮೈಯಲ್ಲಿ ಏನೂ ಜೀವ ಉಳಿದಿಲ್ಲ. ನನ್ನ ಘೋರ ಹೋರಾಟದಲ್ಲಿ ನನ್ನ ಶಕ್ತಿಯೆಲ್ಲ ಹನಿ ಹನಿಯಾಗಿ ಹೊರಟು ಹೋಯಿತು. ಸಾಯುವುದಕ್ಕೆ ಮೊದಲೊಮ್ಮೆ ಈ ಸಮಾಜದ ರಾಕ್ಷಸ ಸ್ವರೂಪವನ್ನು ಸ್ಪಷ್ಟ ಶಬ್ದಗಳಲ್ಲಿ ಬಯಲಿಗೆಳೆಯುವ ಇಚ್ಛೆಯಿದೆ. ನಾನೇನೋ ಸಾಯಬಹುದು. ಆದರೆ ನನ್ನಂತೆ ಇನ್ನಿತರರೂ ಸಾಯಬಾರದು."

....ಹೀಗಾಗಲು ಹೊಣೆ ಯಾರು ? ಈ ಸಮಾಜದ ಸದಸ್ಯರಾದ ನಾವು ಪ್ರತಿಯೊಬ್ಬರೂ ಈ ವಿಷಯದಲ್ಲಿ ತಪ್ಪು ಮಾಡಿಲ್ಲವೆ ?

ಜೀವನದ ಸಂಗಾತಿ ಸಾಧನಾ,—ಶಿವೇಶ್ವರನನ್ನು ನಾನು ಹೋರಾಟದ ಸಂಗಾತಿಯೆಂದು ಸಂಬೋಧಿಸುತಿದ್ದೆ. ಸಹೋದ್ಯೋಗ ಪರಸ್ಪರ ಬೆಸುಗೆಯಿಂದ ನಮ್ಮನ್ನು ಬಂಧಿಸಿತು. ಇಂದು ಆತನಿಲ್ಲ. ಕುಟುಂಬವನ್ನು, ಗೆಳೆಯ ವೃಂದವನ್ನು, ಬರಡಾಗಿ ಮಾಡಿ ಆತ ಹೊರಟುಹೋಗಿ ಎರಡು ವರ್ಷಗಳಾಗಿವೆ.

ಅಂಥ ಜೀವಕ್ಕೆ ನಾವು ಕೊಡುವ ಗೌರವ, ಈ ಸ್ಮಾರಕ ಗ್ರಂಥ ಮಾತ್ರವೆ?–ಎಂದು ಎಷ್ಟೋ ವೇಳೆ ದುಃಖವಾಗುತ್ತಿದೆ.

ಆದರೂ ಆಶಾವಾದಿಯಾದ ನನಗೆ ಭವಿಷ್ಯತ್ತಿನಲ್ಲಿ ದೃಢವಾದ ನಂಬುಗೆಯಿದೆ. ಜನಜಾಗೃತಿ ಹೆಚ್ಚಿದಂತೆ, ಶಿವೇಶ್ವರರ ವಿಚಾರಧಾರೆಯ ಪೀಳಿಗೆ ಬೆಳೆದಂತೆ, ನಮ್ಮ ನಾಡಿನ ಇತಿಹಾಸದಲ್ಲಿ ಸಂಗಾತಿ ದೊಡ್ಡಮನಿಯ ಸ್ಥಾನ ಭದ್ರವಾಗುವುದು ; ಸ್ಥಿರವಾಗುವುದು.

ಮುಂದಿನ ಸ್ಥಾನಮಾನದ ಮಾತು ಸರಿ. ಆದರೆ ಬದುಕಿದ್ದಾಗ ಶಿವೇಶ್ವರನಿಗೋಸ್ಕರ ನಾಡು ಏನನ್ನೂ ಮಾಡಲಾರದೆ ಹೋಯಿತಲ್ಲಾ ಎಂಬ ದುಃಖ ಬಾಧಿಸುತ್ತಲೇ ಇರುತ್ತದೆ. ಹೌದು ; ನರಳಿ ನರಳಿ ಸಾವನ್ನಪ್ಪಿದ ಕವಿಗಳ ಪರಂಪರೆಯಲ್ಲೇ ಶಿವೇಶ್ವರ ಬೆಳೆದು ಅಳಿದ.

....ಪುಸ್ತಕದ ಬಗೆಗೆ, ಸಂಕಲನದ ರೀತಿ– ವಿಧಾನಗಳ ಬಗೆಗೆ, ನಾನೇನೂ ಬರೆದೇ ಇಲ್ಲ....ನೆನಪುಗಳ ಬಾಧೆಗೆ ತುತ್ತಾದಾಗ ತುಲನೆಯ ನಿಶ್ಚಲ ದೃಷ್ಟಿ ಈಗ ಸಾಧ್ಯವಾಗದು. ಪುಸ್ತಕವನ್ನೆ ಬರುತ್ತ ತರುವೆ. ಓದಿ ನೋಡು.

ಪುಸ್ತಕದ ಆರಂಭದಲ್ಲೆ ಮಗ್ಗುಲು ಪುಟದಲ್ಲಿ ಮುದ್ರಿಸಿದ್ದಾರೆ. ಈ ಪುಸ್ತಕದ ಒಡೆತನ ಶ್ರೀಮತಿ ದೊಡ್ಡಮನಿಯವರೆಂದು. ಶಿವೇಶ್ವರನನ್ನು ಕಳೆದುಕೊಂಡ

ಅವರ ಕೈ ಹಿಡಿದಾಕೆಯ, ಎಳೆಯ ಕಂದಮ್ಮಗಳ, ನೆನಪಾಗಿ ಮತ್ತೆ ಮನ ದುಗುಡ ಕ್ಕೊಳಗಾಗುತ್ತಿದೆ....

ಭವಿಷ್ಯತ್ತಾದರೂ ಆ ಪುಟ್ಟ ಕೂಸುಗಳಿಗೆ ಹರ್ಷ ತರಲಿ. ತಂದೆ ಅನುಭವಿಸಿದ ಕಷ್ಟಗಳು ಮಕ್ಕಳಿಗೂ ಬರದೆ ಹೋಗಲಿ.

ಸಾಕಿಷ್ಟು ನಾಳೆ ಇಲ್ಲಿಂದ ಹೊರಡುವೆ — ನಿನ್ನೂರಿಗೆ. ಮಾರ್ಕೆಟ್ಟಿಗೆ ಹೋಗುವಷ್ಟು ಪುರುಸತ್ತು ದೊರೆತರೆ ಮೈಸೂರು ಮಲ್ಲಿಗೆಯನ್ನೂ ಜತೆಯಲ್ಲೇ ತಂದೇನು.

ಎಂದು ಕೈಹಿಡಿದ
ನಿರಂಜನ

ಪುಷ್ಪಹಾರ

ಪ್ರಚಂಡ ಆಕಾಶ ಬಾಣ!

ಸಾಮಾನ್ಯೆ

ಪ್ರಚಂಡ ಆಕಾಶಬಾಣದ ಕಥೆ ಹೇಳಬೇಕು ನಿನಗೆ ಈ ಸಾರಿ. ಇದೇ ಈಗ ಅದನ್ನೋದಿ ಮೈಮನ ಹಿಗ್ಗಿಸಿಕೊಂಡಿದ್ದೇನೆ.

ನೀನು ಇಲ್ಲೇ ಇದ್ದಿದ್ದರೆ, ಜೋಗುಳವೆಂದು ನಿನಗೆ, ಈ ಕತೆ ಹೇಳಬಹುದಿತ್ತು. ನೀನು ಹೂಂ–ಹೂಂ–ಎನ್ನುತಿದ್ದೆ–ನನ್ನ ಮುಖವನ್ನೆ ನೋಡುತ್ತಾ, ಆದರೆ ಕತೆ ಮುಗಿದಾಗ ನಿನಗೆ ನಿದ್ದೆ ಬರುತಿತ್ತೋ ಇಲ್ಲವೋ ಆ ಮಾತು ಬೇರೆ!

ಇದು ಆರಂಭವಾಗುವುದು ರಾಜಕುಮಾರ ರಾಜಕುಮಾರಿಯರ ವಿವಾಹದ ದೃಶ್ಯದೊಡನೆ. ರಾಜಕುಮಾರಿ ಆರು ಹಿಮಸಾರಂಗಗಳನ್ನು ಕಟ್ಟಿದ ಸಾರೋಟಿನಲ್ಲಿ ಬಂದಿಳಿದಾಗ—

“ನಿನ್ನ ಭಾವಚಿತ್ರ ಮುದ್ದಾಗಿತ್ತು. ಆದರೆ ಅದಕ್ಕಿಂತ ನೀನು ಚೆನ್ನಿರುವೆ,” ಎಂದು ರಾಜಕುಮಾರ ಅವಳ ಕಿವಿಯಲ್ಲಿ ಉಸುರಿದ. ಆ ಮುದ್ದಾದ ರಾಜಕುವರಿ ಲಜ್ಜೆಯಿಂದ ನಸುಗೆಂಪಾದಳು.

“ಮೊದಲಿಗೆ ಅವಳು ಬಿಳಿಯ ಗುಲಾಬಿಯಂತೆ ಇದ್ದಳು. ಆದರೆ ಈಗ ಕೆಂಪು ಗುಲಾಬಿಯಂತೆ ಕಾಣುತ್ತಾಳೆ,” ಎಂದು ಒಬ್ಬ ಪುಟ್ಟ ಸೇವಕ ತನ್ನ ನೆರೆಯವನೊಡನೆ ಹೇಳಿದ.

ಮುಂದಿನ ಮೂರು ದಿವಸಗಳು ಪ್ರತಿಯೊಬ್ಬರೂ “ಬಿಳಿಯ ಗುಲಾಬಿ, ಕೆಂಪು ಗುಲಾಬಿ, ಕೆಂಪು ಗುಲಾಬಿ, ಬಿಳಿಯ ಗುಲಾಬಿ” ಎಂದು ಹೇಳತೊಡಗಿದರು. ರಾಜ ಸಂತೋಷಗೊಂಡು ಸೇವಕನ ಸಂಬಳವನ್ನು ಇಮ್ಮಡಿಸುವಂತೆ ಆಜ್ಞೆಯಿತ್ತ. ಆದರೆ ಸೇವಕನಿಗೆ ಸಂಬಳವೇ ಇಲ್ಲದಿದ್ದುದರಿಂದ ಅವನಿಗೆ ರಾಜಾಜ್ಞೆಯಿಂದ ಹೆಚ್ಚಿನದೇನೂ ಪ್ರಯೋಜನ ಆಗಲಿಲ್ಲ. ಆದರೂ ಅದೊಂದು ದೊಡ್ಡ ಸನ್ಮಾನವೆಂದು ಪರಿಗಣಿತವಾಗಿ ಸಕಾಲದಲ್ಲಿ ರಾಜಾಸ್ಥಾನದ ಗೆಜೆಟ್‌ನಲ್ಲಿ ಪ್ರಕಟವಾಯಿತು.

ಆ ಸೇವಕ ಬುದ್ಧಿವಂತಿಕೆಯ ಇನ್ನೊಂದು ಮಾತನ್ನಾಡಿದ.

ರಾಜ ಸಂತೋಷಗೊಂಡು ಅವನ ಸಂಬಳವನ್ನು ಮತ್ತೊಮ್ಮೆ ಇಮ್ಮಡಿಸಿದ

ಆ ಬಳಿಕ ಗುಲಾಬಿ ನೃತ್ಯವಾಯಿತು. ರಾಜ ತಾನೇ ವೇಣುಗಾನ ಮಾಡುವುದಾಗಿ ಮಾತು ಕೊಟ್ಟಿದ್ದ. ಅವನು ಬಹಳ ಕೀಳಾಗಿ ನುಡಿಸಿದ. ಆದರೆ ಹಾಗೆಂದು ಯಾರೂ ಅವನಿಗೆ ಹೇಳುವ ಧೈರ್ಯ ತೋರಲಿಲ್ಲ. ಯಾಕೆಂದರೆ ಅವನು ರಾಜ! ಅವನಿಗೆ ತಿಳಿದಿದ್ದುದು ಎರಡೇ ರಾಗಗಳು; ಅದರಲ್ಲಿ ಯಾವ ರಾಗವನ್ನು ನುಡಿಸುತಿದ್ದನೆಂಬುದು ಅವನಿಗೇ ಗೊತ್ತಿರಲಿಲ್ಲ. ಆದರೂ ಅದರಿಂದೇನೂ ಚಿಂತೆ ಇರಲಿಲ್ಲ. ಯಾಕೆಂದರೆ, ಅವನು ಏನೇ ಮಾಡಲಿ, "ಆಹಾ! ಮನೋರಂಜಕ! ಮನೋರಂಜಕವಾಗಿದೆ!" ಎಂದು ಎಲ್ಲರೂ ಕೂಗುತಿದ್ದರು.

ಬಾಣ ಬಿರುಸು ಹಾರಿಸುವ ಏರ್ಪಾಟಾಯಿತು.

"ಬಾಣ ಬಿರುಸುಗಳು ಹೇಗಿರುತ್ತವೆ?" ಎಂದಳು ರಾಜಕುಮಾರಿ.

"ನನ್ನ ವೇಣುಗಾನದಷ್ಟೆ ಅವು ಮನೋರಂಜಕವಾಗಿರುತ್ತವೆ," ಎಂದು ರಾಜಕುಮಾರ ಅಭಿಮಾನದಿಂದ ಹೇಳಿದ.

ಇತ್ತ ಚಿನಕುಳ್ಳಿ, ಪಟಾಸು, ವಿಷ್ಣುಚಕ್ರಗಳು ತಮ್ಮ ತಮ್ಮೊಳಗೆ ಮಾತನಾಡತೊಡಗಿದುವು.

ಇದ್ದಕ್ಕಿದ್ದಂತೆ ತೀಕ್ಷ್ಣವಾದ ಒಣ ಕೆಮ್ಮೊಂದು ಕೇಳಿಬಂತು; ಅವುಗಳೆಲ್ಲ ಸುತ್ತ ನೋಡಿದುವು. ಆ ಕೆಮ್ಮು ಬಂದುದು ಸೊಕ್ಕಿನಂತೆ ಕಾಣುತ್ತಿದ್ದ, ಕಾಷವೊಂದಕ್ಕೆ ಕಟ್ಟಿದ್ದ, ಉದ್ದನೆಯದೊಂದು ಆಕಾಶಬಾಣದಿಂದ. ಆ ಆಕಾಶ ಬಾಣ ಯಾವಾಗಲೂ ಮಾತನಾಡುವ ಮುನ್ನ ಎಲ್ಲರ ಗಮನವನ್ನೂ ಸೆಳೆಯುವ ಸಲುವಾಗಿ ಕೆಮ್ಮುವ ಪದ್ಧತಿ ಇಟ್ಟಿತ್ತು.

"ಅಹೆಂ! ಅಹೆಂ!" ಎಂದಿತು ಆಕಾಶಬಾಣ.

"ಶಿಸ್ತು! ಶಿಸ್ತು!" ಎಂದು ಕೂಗಿತು ಪಟಾಕಿಯೊಂದು. ಅದು ಸ್ವಲ್ಪಮಟ್ಟಿಗೆ ರಾಜನೀತಿಯನ್ನು ತಿಳಿದಿತ್ತು.

"ಎಂತಹ ಅದೃಷ್ಟವಂತ ರಾಜಕುಮಾರ! ನಾನು ಮುಕ್ತನಾಗುವ ದಿನವೆ ಅವನ ವಿವಾಹ!" ಎಂದಿತು ಆಕಾಶಬಾಣ.

"ನಾನೊಬ್ಬ ಬಹಳ ಪ್ರಖ್ಯಾತನಾದ ಪ್ರಚಂಡ ಆಕಾಶಬಾಣ. ಅಲ್ಲದೆ ಪ್ರಖ್ಯಾತವಾದ ಸಂತತಿಗೆ ಸೇರಿದ್ದೇನೆ."

ಅದರ ಮಾತಗಳ ನಡುವೆ ಪಟಾಕಿ ನಗುವಿನಿಂದ ಹಾರಿಬಿಡುವುದರಲ್ಲಿತ್ತು.

"ನೀನೇಕಪ್ಪ ನಗುತ್ತಿರುವುದು?" ಎಂದು ಆಕಾಶಬಾಣ ವಿಚಾರಿಸಿತು; ನಾನೇನೂ ನಗುತ್ತಿಲ್ಲವಲ್ಲ.

"ನಾನು ಸುಖದಿಂದಿರುವುದರಿಂದ ನಗುತ್ತಿದ್ದೇನೆ,?" ಎಂದು ಪಟಾಕಿ ಉತ್ತರ ಕೊಟ್ಟಿತು.

"ಅದು ಬಹಳ ಸ್ವಾರ್ಥಕಾರಣ," ಎಂದು ಆಕಾಶಬಾಣ ಕೋಪದಲ್ಲಿ ಹೇಳಿತು. "ನಿನಗೆ ಸುಖವಾಗಿರುವ ಹಕ್ಕಾದರೂ ಎಲ್ಲಿದೆ? ನೀನು ಇತರರ ವಿಷಯ ಯೋಚಿ

ಸುತ್ತ ಇರಬೇಕು. ಸರಿಯಾಗಿ ವಿಚಾರ ಮಾಡಿದಲ್ಲಿ ನೀನು ನನ್ನ ವಿಷಯ ಯೋಚಿಸುತ್ತಿರಬೇಕು. ನಾನು ಸದಾಕಾಲ ನನ್ನ [!] ವಿಷಯವನ್ನೇ ಯೋಚಿಸುತ್ತಿರುತ್ತೇನೆ. ಅಲ್ಲದೆ ಉಳಿದವರೂ ಕೂಡ ಅದೇ ರೀತಿ ಮಾಡಬೇಕೆಂದು ನಿರೀಕ್ಷಿಸುತ್ತೇನೆ...."

ಮುಂದುವರಿಸುತ್ತ ಆಕಾಶಬಾಣವೆಂದಿತು :

"ರಾಜಕುಮಾರನ ವಿಷಯವಾಗಿ ನನಗಿರುವ ಸ್ನೇಹದ ಆಳವನ್ನು ಅರಿಯುವ ಯೋಗ್ಯತೆ ನಿಮಗಿಲ್ಲ."

"ಅಷ್ಟೇಕೆ, ನಿನಗೆ ರಾಜಕುಮಾರನ ಪರಿಚಯವೂ ನೆಟ್ಟಗಿಲ್ಲ," ಎಂದು ಪಟಾಸು ಗುರುಟ್ಟಿತು.

"ನನಗೆ ಅವನ ಪರಿಚಯ ಇದೆ ಎಂದು ನಾನು ಎಂದಿಗೂ ಹೇಳಲಿಲ್ಲ. ಅವನ ಪರಿಚಯ ನನಗೆ ಇದ್ದಿದ್ದರೆ ನಾನು ಅವನಿಗೆ ಸ್ನೇಹಿತನಾಗುತ್ತಲೆ ಇರಲಿಲ್ಲ. ಸ್ನೇಹಿತರನ್ನು ತಿಳಿಯುವುದು ಯಾವಾಗಲೂ ಬಹಳ ಅಪಾಯಕರ."

....ಮಧ್ಯ ರಾತ್ರೆಯಾದ ಮೇಲೆ ಬಿರುಸು ಬಾಣ ಶುರುವಾಯಿತು.

ವ್ಹಿಚ್ ! ವ್ಹಿಜ್ ! ಎಂದು ಶಬ್ದ ಮಾಡುತ್ತ ವಿಷ್ಣು ಚಕ್ರ ಅನೇಕಸಲ ಸುತ್ತಿತು. ಢಂ ! ಢಂ ! ಢಮಾರ್ ! ಎಂದು ಆರ್ಭಟಿಸುತ್ತಾ ಪಟಾಸು ಹಾರಿತು. ಅನಂತರ ಚಿನಕುಳ್ಳಿಗಳು ಚಿಟಗುಟ್ಟುತ್ತಾ ಆ ಜಾಗದಲ್ಲೆಲ್ಲಾ ನರ್ತಿಸಿದುವು. ಮತಾಪುಗಳು ಆ ಜಾಗವೆಲ್ಲಾ ಕಡು ಕೆಂಪಾಗಿ ಕಾಣುವಂತೆ ಮಾಡಿದವು. ಸಣ್ಣ ಪುಟ್ಟ ನೀಲಿ ಕಿಡಿಗಳನ್ನು ಉದುರಿಸುತ್ತಾ ಗಗನಕ್ಕೆ ಏರುತ್ತಿದ್ದ ಆಕಾಶಬುಟ್ಟಿ "ನಮಸ್ಕಾರ" ಎಂದು ಕೂಗಿತು. ಪಟ್, ಪಟ್, ಪಟಾರ್ ಎಂದು ಪಟಾಕಿಗಳು ಬಹಳವಾಗಿ ಆನಂದಿಸುತ್ತ ಹಾರಿದುವು. ಪ್ರಚಂಡ ಆಕಾಶ ಬಾಣವೊಂದನ್ನು ಬಿಟ್ಟು ಉಳಿದೆಲ್ಲ ಬಾಣ ಬಿರುಸುಗಳೂ ಜಯಮುಖವಾಗಿ ಹಾರಿದುವು.

ಆಕಾಶಬಾಣ ಅಳುವಿನಿಂದ ಒದ್ದೆಯಾಗಿದ್ದುದರಿಂದ ಹಾರುವುದಾಗಲೇ ಇಲ್ಲ !

"ನನ್ನನ್ನು ಯಾವುದೋ ಒಂದು ವಿಶೇಷ ಸಂದರ್ಭಕ್ಕೋಸ್ಕರ ಉಳಿಸಿಕೊಂಡಿದ್ದಾರೆಂದು ಭಾವಿಸುತ್ತೇನೆ," ಎಂದಿತು ಆಕಾಶಬಾಣ.

ಮಾರನೆಯದಿನ ಅರಮನೆಯ ಸೇವಕರು ಎಲ್ಲವನ್ನೂ ಅಚ್ಚುಕಟ್ಟಾಗಿ ಅಣಿ ಮಾಡಲು ಬಂದರು. ಅವರು ರಾಜಾಸ್ಥಾನದಿಂದ ತನಗಾಗಿ ಬಂದ ಪ್ರತಿನಿಧಿಗಳೆಂದು ತಿಳಿದು, ಅತಿ ಮುಖ್ಯವಾದ ವಿಷಯವೊಂದನ್ನು ಯೋಚಿಸುತ್ತಿರುವಂತೆ ಹುಬ್ಬು ಗಂಟಿಕ್ಕಲು ಅದು ಮೊದಲು ಮಾಡಿತು. ಆದರೆ ಒಬ್ಬ ದೂತ, "ಎಂಥ ಕನಿಷ್ಠ ಆಕಾಶಬಾಣ !" ಎನ್ನುತ್ತಾ ಅದನ್ನು ಗೋಡೆಯಾಚೆ ಹಳ್ಳಕ್ಕೆಸೆದುಬಿಟ್ಟ.

"ಛೆ ! ಛೆ ! ಎಂದಿಗೂ ಇಲ್ಲ ! ಅವನು ಹೇಳಿದ್ದು ಶ್ರೇಷ್ಠ ಆಕಾಶಬಾಣವೆಂದು. ಕನಿಷ್ಠ ಶ್ರೇಷ್ಠ ಹೆಚ್ಚು ಕಡಮೆ ಒಂದೇ ರೀತಿ ಕೇಳುತ್ತವೆ. ಅಲ್ಲದೆ ಅವೆರಡೂ ಅನೇಕ ಸಲ ಒಂದೇ ಆಗಿರುತ್ತವೆ !" ಎನ್ನುತ್ತಾ ಆಕಾಶಬಾಣ ಕೆಸರಿನಲ್ಲಿ ಬಿದ್ದಿತು.

"ಇಲ್ಲಿ ಅಷ್ಟೇನೂ ಸುಖವಿಲ್ಲ. ಆದರೂ ಇದೊಂದು ಸೊಗಸಾದ ನೀರಿನ ಸಮೀಪವಿರುವ ಜಾಗ," ಎಂದಿತು.

ಪುಟ್ಟ ಕಪ್ಪೆ ಬಂದಾಗ, "ಅಹೆಂ ! ಅಹೆಂ !" ಎಂದಿತು ಆಕಾಶಬಾಣ.

"ನೀನು ಎಷ್ಟು ಇಂಪಾದ ದನಿಯನ್ನು ಹೊಂದಿರುವೆ ! ನಿಜವಾಗಿಯೂ ಅದು ನಮ್ಮ ಕೂಗಿನಂತೆಯೇ ಇದೆ," ಎಂದಿತು ಕಪ್ಪೆ. ಆಕಾಶಬಾಣಕ್ಕೆ ಮಾತನಾಡಲು ಅವಕಾಶವನ್ನೇ ಕೊಡದೆ, ಅಲ್ಲಿಂದ ಅದು ಹೊರಟಿತು.

"ಕಪ್ಪೆಯನ್ನು ಕುರಿತು ಮಾತನಾಡುವುದು ವ್ಯರ್ಥ, ಬರೀ ವ್ಯರ್ಥ. ಯಾಕೆಂದರೆ ಅದು ಹೊರಟುಹೋಗಿದೆ," ಎಂದಿತೊಂದು ಹಾರುಹುಳು.

ಆಕಾಶಬಾಣವೆಂದಿತು :

"ಚಿಂತೆಯಿಲ್ಲ. ನಷ್ಟ ಅದಕ್ಕೆ ಹೊರತು ನನಗಲ್ಲ. ಅದು ನನ್ನ ಮಾತುಗಳನ್ನು ಆಲಿಸದ ಮಾತ್ರಕ್ಕೆ ನಾನು ಮಾತನಾಡುವುದನ್ನು ನಿಲ್ಲಿಸುದಿಲ್ಲ ಎಷ್ಟೋ ಬಾರಿ ನಾನೊಬ್ಬನೇ ಒಂಟಿಯಾಗಿ ಬಹಳ ಹೊತ್ತು ಸಂಭಾಷಣೆ ನಡೆಸಿದ್ದೇನೇ. ನನ್ನ ಬುದ್ಧಿ ಚಮತ್ಕಾರ ಎಷ್ಟರ ಮಟ್ಟಿನದೆಂದರೆ, ಒಂದೊಂದು ಸಲ ನಾನಾಡುವ ಮಾತುಗಳ ಒಂದಕ್ಷರವೂ ನನಗೇ ಅರ್ಥವಾಗುದಿಲ್ಲ."

"ಹಾಗಿದ್ದ ಪಕ್ಷದಲ್ಲಿ ನೀನು ಖಂಡಿತವಾಗಿಯೂ ವೇದಾಂತದ ವಿಷಯವಾಗಿ ಉಪನ್ಯಾಸಮಾಡಬೇಕು," ಎಂದು ಹಾರಿಹೋಯಿತು ಆ ಹುಳು.

ಬಾತು ಬಂದು ಕೇಳಿತು :

"....ನೀನು ಇಲ್ಲೇ ಮನೆಮಾಡಿ ವಾಸಿಸುತ್ತೀಯಷ್ಟೆ ?"

"ಎಲ್ಲಿ ಬಂತು! ನಾನು ಕೇವಲ ಸಂದರ್ಶನಕ್ಕೆ ಬಂದಿರುವ ಗಣ್ಯವ್ಯಕ್ತಿಮಾತ್ರ."

ಇಬ್ಬರು ಹುಡುಗರು ಬಂದರು. ರಾಜಪ್ರತಿನಿಧಿಗಳು ಬಂದರೆಂದುಕೊಂಡಿತು ಆಕಾಶಬಾಣ.

"ಈ ಹಳೇ ಕೋಲನು ನೋಡು ! ಇದು ಇಲ್ಲಿ ಹೇಗೆ ಬಂತೋ ಆಶ್ಚರ್ಯ, !" ಎನ್ನುತ್ತ ಒಬ್ಬ, ಹಳ್ಳದಿಂದ ಆಕಾಶಬಾಣವನ್ನು ಹೊರತೆಗೆದ.

"ಹಳೆಯ ಕೋಲು !" ಕಳವಳಿಸಿತು ಆಕಾಶಬಾಣ; "ಎಂದಿಗೂ ಇಲ್ಲ. ಹೊನ್ನಿನ ಕೋಲೆಂದು ಅವನು ಹೇಳಿದ್ದು."

"ಅದನ್ನು ಬೆಂಕಿಗೆ ಹಾಕೋಣ," ಎನ್ನುತ್ತ ಮತ್ತೊಬ್ಬ ಹುಡುಗ ಆ ಕೆಲಸ ಮಾಡಿದ.

ಬೆಂಕಿ ಹತ್ತಿಕೊಳ್ಳಲು ಬಹಳ ಕಾಲ ಹಿಡಿಯಿತು.

"ಈಗ ನಾನು ಹಾರಿಬಿಡುತ್ತೇನೆ. ನಕ್ಷತ್ರ ಚಂದ್ರ ಸೂರ್ಯರಿಗಿಂತ ಮೇಲೆ ಹೋಗುವುದು ಖಂಡಿತ" ಎಂದಿತು ಆಕಾಶಬಾಣ.

ಪುಸ್, ಪುಸ್, ಪುಸ್ ಎಂದು ನೇರವಾಗಿ ಅದು ಗಾಳಿಯಲ್ಲಿ ಹಾರಿತು.

"ರಮಣೀಯವಾಗಿದೆ !" ಎಂದುಕೊಂಡಿತು ಆಕಾಶಣಬಾಣ.

ಬಳಿಕ ಢಂ, ಢಂ, ಢಂ ಎಂದು ಮದ್ದೇನೊ ಹಾರಿತು. ಆದರೆ ಸದ್ದು ಯಾರಿಗು
ಕೇಳಿಸಲಿಲ್ಲ !

ಆಮೇಲೆ ಉಳಿದುದು ಕಾಷ್ಠಮಾತ್ರ. ಹಳ್ಳದ ಪಕ್ಕದಲ್ಲಿ ಗಾಳಿಸಂಚಾ
ಮಾಡುತಿದ್ದ ಗ್ರಾಮ ಹಂಸವೊಂದರ ಬೆನ್ನಿನ ಮೇಲೆ ಅದು ಬಿತ್ತು.

"ಅಯ್ಯೋ ದೇವರೆ!" ಎಂದು ಗ್ರಾಮಹಂಸ ಕೂಗಿತು; "ಕಾಷ್ಠಗಳ
ಮಳೆಯೇ ಆಗುವಂತಿದೆ." ಕೂಡಲೆ ಅದು ಸರಸರ ನೀರೊಳಗೆ ನುಗ್ಗಿತು.

"ನಾನು ಒಂದು ದೊಡ್ಡ ಕೌತುಕದ ಉದ್ವೇಗವನ್ನೇ ಎಬ್ಬಿಸುವವನಿದ್ದೇನೆಂದು
ಮೊದಲೇ ತಿಳಿದಿದ್ದೆ," ಎಂದು ಆಕಾಶಬಾಣ ಮೇಲುಸಿರು ಬಿಡುತ್ತಾ ಹೇಳಿ ಆರಿ
ಹೋಯಿತು.

....ಇಲ್ಲಿಗಾಯಿತು ಪ್ರಚಂಡ ಆಕಾಶಬಾಣದ ಕತೆ. ನಾನಲ್ಲ ಈ ಕತೆಯನ್ನು
ಕಟ್ಟಿದ್ದು. ಬರೆದ ಮಹಾನುಭಾವ ಗತಿಸಿದ ಅಸ್ಕಾರ್ ವೈಲ್ಡ್. ಕನ್ನಡದಲ್ಲಿ
ರೂಪಿಸಿದವರು ಡಿ. ವಿ. ಕೆ. ಮೂರ್ತಿ.

ವೈಲ್ಡ್ ಪ್ರತಿಭಾಶಾಲಿ. ಪ್ರಚಂಡ ಆಕಾಶಬಾಣದ ಈ ಕತೆಯ ಮೂಲಕ
ಆತ ಬದುಕಿದ್ದ ಸಮಾಜದ ವ್ಯಂಗ್ಯ ಚಿತ್ರಣವನ್ನು ಸೂಚ್ಯವಾಗಿ–ಆದರೂ ರಮ್ಯ
ವಾಗಿ–ಹೇಗೆ ಸಾಧಿಸಿದ್ದಾನೆ! ಈ ಪ್ರಚಂಡ ಆಕಾಶಬಾಣಗಳು! ನಮ್ಮ ಸಮಾಜ
ದಲ್ಲೂ ಇಂತಹ ಪ್ರಚಂಡರು ಎಷ್ಟೊಂದು ಜನರಿಲ್ಲ!

ನಾನೀಗ ಹೇಳಿರುವುದು ಮನೋರಂಜನೆಯ ರಮ್ಯಕತೆಯೇ? ಹೌದು; ಅಲ್ಲ
ವೆನ್ನುವ ಹಾಗಿಲ್ಲ. ವಿಚಾರ ಪ್ರಚೋದನೆಯೂ ಇದರಿಂದ ಆಗುತ್ತದೆಯೇ? ಹೌದು;
ಇಲ್ಲವೆನ್ನುವ ಹಾಗಿಲ್ಲ. ಶ್ರೇಷ್ಠ ಸಾಹಿತ್ಯದ ಮುಖ್ಯ ಲಕ್ಷಣ, ಇಲ್ಲಿ ಪುಟ್ಟ ಪುಟಾಣಿ
ಪುಸ್ತಕದಲ್ಲಿದೆ.

ಆ ಕಿರು ಹೊತ್ತಗೆಯನ್ನು ನಾನು ಓದಿದ್ದಾಯಿತು. ಆ ವಿಷಯ ನಿನಗೆ
ಬರೆದುದೂ ಆಯಿತು.

ಆದರೂ ಆ ಪ್ರಚಂಡ ಆಕಾಶ ಬಾಣದ ಕತೆ ನೆನಪಾದಾಗಲೆಲ್ಲ ನನಗೆ ನಗು
ಬರುತ್ತದೆ. ದಿನ ದಿನವೂ ಆಗಾಗ್ಗೆ ನಮಗೆ ಇದಿರಾಗುವ ಜೀವಂತ ಪ್ರಚಂಡರನ್ನು
ಕಂಡಾಗ ಆ ಕತೆಯ ಆಕಾಶಬಾಣ ಕಣ್ಣಿಗೆ ಕಟ್ಟುತ್ತದೆ.

ಸದ್ಯಃ ನೀನು ಸಾಮಾನ್ಯಳು, ನಾನೂ ಅಷ್ಟೆ. ಪ್ರಚಂಡ ಜಾತಿಗೂ ನಮಗೂ
ಬಲು ದೂರ.

ಅಬ್ಬ! ಅದೆಷ್ಟು ಸಮಾಧಾನದ ವಿಷಯ!

ಬೇವು-ಬೆಲ್ಲ
ವೊಲೆ ಸೊಯಿಂಕಾ

'ಆಧುನಿಕ ಆಫ್ರಿಕದ ಸಾಹಿತ್ಯ ಮತ್ತು ವಿಚಾರ.' ಬರೆದವರು ಒಬ್ಬ ಫ್ರೆಂಚ್ ಬರೆಹಗಾರ : ಕ್ಲಾಡ್ ವಾಥಿಯರ್.

ನಿನ್ನೆ ಮೊನ್ನೆಯವರೆಗೂ ಲೋಕ ಇತಿಹಾಸದಲ್ಲಿ ಇರುಳಿನ ಭೂಖಂಡವಾಗಿತ್ತಲ್ಲ ಆಫ್ರಿಕ? ಇಂದು ಹಾಗಲ್ಲ. ಅಲ್ಲಿ ಸಹಸ್ರ ದೀಪಗಳು ಬೆಳಗುತ್ತಿವೆ. ನೆಲದ ಬಸಿರಿನ ಬಡಬಾಗ್ನಿ ಅಲ್ಲಿ ಹೊರಕ್ಕೆ ಹೊಮ್ಮುತ್ತಿದೆ. ಈ ಜನ, ಶತಮಾನಗಳ ನಿದ್ರೆಯಿಂದ ಎಚ್ಚತ್ತವರು. ದಾಸ್ಯದ ಸಂಕೋಲೆಗಳನ್ನು ತಮ್ಮ ಮುಷ್ಟಿಯಿಂದಲೇ ಗುದ್ದಿ, ಹಲ್ಲುಗಳಿಂದಲೇ ಕಚ್ಚಿ, ಪುಡಿಗೂಡಿಸಿದವರು. ಗದ್ದಲ? ಆಕ್ರೋಶ? ಚೀರಾಟ? ಅಂತಃಕಲಹ? ಇದೆಲ್ಲವೂ ಅನಿವಾರ್ಯವೆನ್ನಿಸುವಂತಹ ಘಟ್ಟ.

ಗ್ರಂಥವನ್ನು ಓದುತ್ತ ಅನಿಸುತ್ತದೆ : ಯಾಕೆ ಈ ಕ್ರೌರ್ಯ? ಯಾಕೆ ಈ ಅಸಹನೆ?

ಒಂದೆರಡು ವರ್ಷಗಳ ಹಿಂದಿನವರೆಗೂ ನಾನು ಅನ್ನುತ್ತಿದ್ದೆ :

"ಈ ಜಗತ್ತಿನಲ್ಲಿ ಸಾಹಿತ್ಯ ಸ್ವತಂತ್ರವಾಗಿರುವುದು ಆಫ್ರಿಕದಲ್ಲಿ ಮಾತ್ರ; ಯಾಕೆಂದರೆ ಅಲ್ಲಿ ಸಾಹಿತ್ಯವೇ ಇಲ್ಲ."

ಈಗ ಅರ್ಥವಿಲ್ಲದ ಮಾತು. ನಿಸ್ಸಂಕೋಚವಾಗಿ ಇತಿಹಾಸದ ಕಸದ ಬುಟ್ಟಿಗೆ ಅದನ್ನೆಸೆಯಬಹುದು. ಆಫ್ರಿಕದಲ್ಲೂ ಈಗ ಸಾಹಿತ್ಯವಿದೆ. ಕ್ಷಣಗಳ ಅವಧಿಯಲ್ಲೇ ಶೈಶವವನ್ನೂ ದಾಟಿ, ಕೌಮಾರ್ಯಭಂಗವನ್ನೂ ಮಾಡಿಸಿಕೊಂಡಿದೆ. ಅಲ್ಲಿ ಇಲ್ಲಿ 'ಪಾವಿತ್ರ್ಯರಕ್ಷಣೆ'ಗಾಗಿ ಹೋರಾಟವನ್ನೂ ನಡೆಸಿದೆ. ಉಡಿಗೆ ಕೈಹಾಕಿದವರಿಗೆ ಕಚ್ಚಿದೆ.

*　　*　　*　　*　　*

ಭಾವ ವಿಕಾರಕ್ಕೊಂದು ದೃಷ್ಟಾಂತ ಸೆನೆಗಲಿನ ಕವಿ ಡೇವಿಡ್ ಡಿಯೋಪನ ಒಂದು ಕವಿತೆಯ ಸಾಲುಗಳು :

"ನೀನು ಕರಿಯ !
ಕರಿಯ ! ಕೊಳಕು ಕರಿಯ !
ನಿನ್ನ ಹೃದಯ ಒಂದು ಸ್ಪಾಂಜ್

ದುರುಳತನದ ವಿಷ ಬೆರೆತ ಮದಿರೆಯನ್ನು
ಅದು ಹೀರುತದೆ, ಬಿರುಸಾಗಿ ಹೀರುತದೆ
ನಿನ್ನ ಬಣ್ಣ, ನಿನ್ನ ರಕುತವ ನಿರಂತರ ದಾಸ್ಯದಲಿ ಬಿಗಿಯುತದೆ
ಶಾಸನದ ಕಡುಗೆಂಪು ಕಬ್ಬಿಣದ ಬರೆ ನಿನ್ನ ಮೇಲೆ,
ನಿನ್ನ ವಿಷಯಾಸಕ್ತ ಮಾಂಸದ ಮೇಲೆ
ಹಿಡಿದಿರುವೆ ಅವಹೇಳನದ
ಕಡು ಹಿಂಸೆಯ ದಾರಿ.
ಓ ಹಾಳೂರ ದೈತ್ಯ,
ದುರವಸ್ಥೆಯ ಈ ದಿನವೇ ನಿನ್ನಯ ನಾಳೆ."

....ಇದು ನಿನ್ನೆಯ ಗೀತೆ. ಈಗಲೋ, ಯುಗವೇ ದಿನವಾಗಿ ಕಳೆದಿದೆ. ಇಡಿಯ ಆಫ್ರಿಕದಲ್ಲಿ ನೂರಐವತ್ತಕ್ಕೂ ಮಿಕ್ಕಿದ ಕವಿಗಳು, ಕಾದಂಬರಿಕಾರರು, ನಾಟಕಕಾರರು ಹೊಸ ಉದಯದ ಕಹಳೆಯೂದಿದ್ದಾರೆ, ಭೇರಿ ಬಾರಿಸಿದ್ದಾರೆ: ಲಿಯೊ ಪಾಲ್ಡ್ ಸೆಡೊನ್ ಸೆಂಘರ್, ಕಾಮರಾ ಲಾಯೆ, ಫೆರ್ಡಿನಾಂಡ್ ಒಯೊನೊ–ಎಂಥೆಂಥ ಹೆಸರುಗಳು !

ವೈಚಿತ್ರವೊ ? ದುರದೃಷ್ಟವೊ ?

* * * * *

ನಿನ್ನೆ ಗುಲಾಮರಾಗಿದ್ದವರು ಈಗ ಸ್ವತಂತ್ರರಾದರು. ಸ್ವತಂತ್ರರಾದೊಡನೆಯೇ ತಮ್ಮ ತಮ್ಮಲ್ಲೇ ಕಡಿದಾಡತೊಡಗಿದರು. ಮೂಕರಾಗಿದ್ದವರಿಗೆ ಮಾತು ಬಂದಿತ್ತು. ಆದರೆ ಆ ಮಾತು ಕರ್ಕಶವಾಯಿತು, ಕರ್ಣಕಠೋರವಾಯಿತು.

ಡೆನಿಸ್ ಒಸಾದೆಬೇ ಒಬ್ಬ ಶ್ರೇಷ್ಠ ಕವಿ, ನೈಜೀರಿಯಾದವನು. ಅವನ ರಾಷ್ಟ್ರ ಸ್ವತಂತ್ರವಾದಾಗ ಆತನೇ ಅದರ ಅಧ್ಯಕ್ಷನಾದ. ಇಂಥದು, ಕಾಲದ ಸುದೀರ್ಘ ಪಯಣದಲ್ಲಿ ಎಂದೋ ಒಮ್ಮೆ ನಡೆಯುವ ಪ್ರಸಂಗ, ರಾಜಕೀಯದ ಮಾರಿಗೆ ಇದೆಲ್ಲಿ ಸಹ್ಯವಾಗಬೇಕು ? ನೈಜೀರಿಯಾದಲ್ಲಿ ಮಿಲಿಟರಿ ಕ್ರಾಂತಿಯಾಯಿತು. ಒಸಾದೆಬೇ ಪದಚ್ಯುತನಾದ. ಅಧಿಕಾರಕ್ಕೆ ಬಂದವನು ದಂಡನಾಯಕ.

ನೈಜೀರಿಯಾ ಒಂದೇ ಅಲ್ಲ. ಆಫ್ರಿಕದ ಅನೇಕ ಸ್ವತಂತ್ರ ರಾಷ್ಟ್ರಗಳಲ್ಲಿ ಇಂಥ 'ಕ್ರಾಂತಿ'ಗಳಾಗಿವೆ. ಕೆಲವೆಡೆ ಜನ ಇಂಥ ಬದಲಾವಣೆಯನ್ನು ಸ್ವಾಗತಿಸಿದ್ದೂ ಉಂಟು. ಹೊಸ ಪ್ರಭುಗಳ ಮರ್ಕಟ ಮುಷ್ಟಿ ಬಿಗಿಯಾದಾಗ ಗೋಳಾಡಿದ್ದೂ ಉಂಟು.

ಈ ಯಾದವೀ ಕಲಹದಲ್ಲಿ ಕವಿಗಳು ಬೆಂದರು. ಮಾಲಿಯ ಫಿಲಿ ಡಾಬೊಸಿಸ್ಸೊಕೊ, ಘಾನಾದ ಡಾನ್‌ಖಾ ಸೆರೆಮನೆಗಳಲ್ಲಿ ಸತ್ತರು. ಇನ್ನೂ ಬೇರೆ ಬೇರೆ ಕಾರಾಗೃಹಗಳಲ್ಲಿರುವ ಬರೆಹಗಾರರೆಂದರೆ, ಮಮಾದೊವ್ ದೊವಾ, ನಾದ ಬಾನಿಂಗಿ ಸಿಥೋಲೆ, ವೊಲೆ ಸೊಯಿಂಕಾ....

ದಿನಪತ್ರಿಕೆಯೊಂದು ಕೊನೆಯವನನ್ನು ಕುರಿತು ಕರುಳು ಹಿಂಡುವಂಥ ಸುದ್ದಿ ತಂದಿದೆ.

ನೈಜೀರಿಯದ ಕವಿ, ನಾಟಕಕಾರ ವೊಲೆ ಸೊಯಿಂಕಾ. ಅವನ ಕೃತಿಗಳು : 'ಅರಣ್ಯ ನೃತ್ಯ', 'ಸಿಂಹ ಮತ್ತು ಒಡವೆ', 'ಮೂರು ನಾಟಕಗಳು', 'ದುಭಾಷಿಗಳು.' ಮೂವತ್ತೈದರ ಕಿರಿವಯಸ್ಸು.

ಸೆರೆಮನೆಯ ಕತ್ತಲು ಕೋಣೆಯಲ್ಲಿ ಅವನನ್ನು ಒಂಟಿಯಾಗಿ ಬಂಧಿಸಿಟ್ಟು ಹದಿನೆಂಟು ತಿಂಗಳಿಗೆ ಮೇಲಾಯಿತು. ಆತ ಬಂಡಾಯಗಾರರ ಪಕ್ಷಪಾತಿ ಎನ್ನುವುದು ಸರ್ವಾಧಿಕಾರಿ ಮೇಜರ್-ಜನರಲ್ ಯಾಕುಬು ಗೊವೊನ್ ಹೊರಿಸುವ ಆರೋಪ.

ಈ ಕವಿ ಮಾಡಿದ ತಪ್ಪಾದರೂ ಏನು ? ಬಯಾಫ್ರನಾಯಕ ಒಜುಕ್ವುವನ್ನು ಭೇಟಿಯಾಗಲು ಸೊಯಿಂಕಾ ಒಮ್ಮೆ ಹೋದ. ಉದ್ದೇಶ : ಅಂತರ್ಯುದ್ಧವನ್ನು ನಿಲ್ಲಿಸುವಂತೆ ಆ ಮುಖಂಡನಿಗೆ ವಿನಂತಿ ಮಾಡುವುದು. ಪರಿಣಾಮ, ಮರಳಿದೊಡನೆಯೇ 'ರಾಜಾತಿಥ್ಯ.'

ಬಹಿರ್ದೆಶೆ ಕೊಠಡಿಯ ತೆಳುಕಾಗದದ ಮೇಲೆ ಆತ ಬರೆದು ಹೊರಗೆ ಕಳುಹಿದ ಒಂದು ಕಾಗದ ಈಗ ಲೋಕದ ಕಣ್ಣಿಗೆ ಬಿದ್ದಿದೆ. ಅದರಲ್ಲಿ ಸೊಯಿಂಕಾ ಹೇಳಿರುವುದಿದು :

"ಕಹಿಯನ್ನು ಕೊನೆಯ ಗುಟುಕಿನವರೆಗೂ ಕುಡಿದುದಾಯಿತು. ಮಾನಸಿಕ ವಾಕರಿಕೆಯ ಘಟ್ಟವನ್ನು ದಾಟಿದ್ದೇನೆ. ಸತ್ಯದ ಐಸಿರಿಗೆ ಎಂದು ಬಿಡುವಾಗುತ್ತದೋ ಆ ತನಕ ಕಾದಿರಲು ಸಿದ್ಧ. ನಾನು ಮಾಡಿದ ತಪ್ಪೇನೆಂದು ಹೇಳಲಿ ? ಒಂದು ಅಕೃತ್ಯವನ್ನು ಮರೆಮಾಚಲು ಸಾವಿರ ಅಕೃತ್ಯಗಳನ್ನು ಮಾಡಬೇಡಿ ಎಂದು ಸಾರಿದ್ದು.

"ನಾನು ಬರಿಮಾತಿನ ಆದರ್ಶವಾದಿಯಲ್ಲ. ಆ ಕಾರಣದಿಂದ ಅಂತರ್ಯುದ್ಧವನ್ನು ಕೊನೆಗಾಣಿಸಲು ಯಾವ ಯಾವ ಪ್ರಯತ್ನಗಳನ್ನು ಇಲ್ಲೂ ವಿದೇಶಗಳಲ್ಲೂ ಮಾಡಬೇಕೊ, ಅದನ್ನು ನಾನು ಮಾಡಿದೆ."

ಸರ್ವಾಧಿಕಾರಿಯನ್ನು ಉದ್ದೇಶಿಸಿ ಸೊಯಿಂಕಾ ಬರೆದ :

"ಯಜಮಾನನೇ, ಇದೋ ನಿನಗೊಂದು ಸಂದೇಶ. ದೇವರ ಪ್ರೀತಿಪಾತ್ರ ವಾದ್ಯಗಳನ್ನು ಕೆಲವೊಮ್ಮೆ ಅಪವಿತ್ರ ಬೆರಳುಗಳೂ ನುಡಿಸುತ್ತವೆ. ಇದು ಇತಿಹಾಸದಲ್ಲಿ ನಡೆಯುವ ಸಂಗತಿ."

ಸೊಯಿಂಕಾ ರಕ್ತದ ಹೆಚ್ಚಿನ ಒತ್ತಡದಿಂದ ನರಳುತ್ತಿದ್ದಾನೆ. ಚಿಕಿತ್ಸೆ ಇಲ್ಲ. ಬಿಡುಗಡೆಯುಂಟೆ ?

ಸ್ವತಂತ್ರ ನೈಜೀರಿಯಾದ ಕವಿ ವೊಲೆ ಸೊಯಿಂಕಾಗೆ ವಿಮೋಚನೆಯುಂಟೆ ?

೬ ಜುಲೈ, ೧೯೬೯

ಬೇವು-ಬೆಲ್ಲ

ರಾಶಿ : 'ನಗೆಗನ್ನಡಂ ಗೆಲ್ಗೆ !'

ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿರುವ ಒಬ್ಬ ಹುಡುಗ. ಶ್ರೀಮಂತನಲ್ಲ. ಸಿರಿವಂತಿಕೆಯ ಪ್ರಸ್ತಾಪ ಯಾಕೆ ? ಬಡವನೇ. ಫೀಸು ತುಂಬಿರಲಿಲ್ಲ ಎಂದು ತರಗತಿಯಿಂದ ಹೊರಕ್ಕೆ ಕಳುಹಿದರು. ಹುಡುಗಿಯರ ಮುಂದೆ ಹುಡುಗರ ಮುಂದೆ ಎಂಥ ಅವಮಾನ ! ತಾನು ಬಡವ ಎಂಬುದು ಇತರರಿಗೆ ಗೊತ್ತಾಗಬೇಕೆ ?

ವಿದ್ಯಾರ್ಥಿ ಮಾರನೆಯ ದಿನ ಅಳುಕುತ್ತ ಪ್ರಿನ್ಸಿಪಾಲರ ಮನೆಗೆ ಹೋಗಿ ಜಗಲಿಯಲ್ಲಿ ನಿಂತ. ಶುಲ್ಕ ಸಂದಾಯಮಾಡಲು ಸ್ವಲ್ಪ ಕಾಲಾವಧಿ ಕೇಳುವ ಬಯಕೆ. ಹೊರಗೆ ಬಂದ ಪ್ರಿನ್ಸಿಪಾಲರು "ಏನು ?" ಎಂದರು. "ಸರ್, ಫೀಸು-" ಪ್ರಿನ್ಸಿಪಾಲರು ಹುಡುಗನ ಮಾತನ್ನು ಅಷ್ಟಕ್ಕೇ ತಡೆದು, "ಫಸ್ಟಿಗೆ ಬಾ. ಐದು ರೂಪಾಯಿ ಕೊಡ್ತೀನಿ," ಎಂದರು. ಅಷ್ಟು ಹೇಳಿ ಅವರು ಮಾತಿಗೆ ನಿಲ್ಲದೆ ಪುನಃ ಮನೆಯೊಳಕ್ಕೆ ಹೋಗಿಯೇ ಬಿಟ್ಟರು.

ಆ ವಿದ್ಯಾರ್ಥಿ ಭಿಕ್ಷೆ ಕೇಳಲು ಬಂದಿರಲಿಲ್ಲ. ಒಂದನ್ನು ಮಾಡಲು ಹೋಗಿ ಇನ್ನೊಂದಾಯಿತು. ಸ್ವಾಭಿಮಾನಿಗೆ ಎಲ್ಲಿಲ್ಲದ ಸಂಕಟ. ಲಾಲ್‌ಬಾಗ್ ಕೆರೆ ಹತ್ತಿರದಲ್ಲಿತ್ತು. "ಜತೆಯಲ್ಲೊಬ್ಬ ಹುಡುಗ ಇದ್ದ. ವಾಚಾಮಗೋಚರವಾಗಿ ಯಾರು ಯಾರನ್ನೋ ಉದ್ದೇಶಿಸಿ ಏನೇನು ಬಯ್ದೆನೋ ತಿಳೀದು. ಮನಸ್ಸಿನಲ್ಲಿ ಅನಿಸಿದ್ದೊಂದೇ-ಕೆರೆಗೆ ಹಾರಿ ಸತ್ತುಬಿಡಬೇಕು, ಅಂತ. ಆ ಹುಡುಗ ಜತೆಗೆ ಇರದೇ ಇದ್ದಿದ್ದರೆ ಆತ್ಮಹತ್ಯೆಮಾಡಿಕೊಂಡೇ ಬಿಡುತ್ತಿದ್ದೆ."

ಸಹಸ್ರ ಸಹಸ್ರ ಜನರ ಅದೃಷ್ಟ ಒಳ್ಳೆಯದು. ವಿದ್ಯಾರ್ಥಿ ನೀರಿಗೆ ಬೀಳಲಿಲ್ಲ.

ಆತ ಮುಂದೆ ಪ್ರಖ್ಯಾತ ಡಾಕ್ಟರಾದ. ಆ ಪ್ರಿನ್ಸಿಪಾಲರಿಗೆ ಅಚ್ಚುಮೆಚ್ಚಿನವನಾದ. ಅವರು ನಿವೃತ್ತರಾದ ಮೇಲೂ ಗುರು-ಶಿಷ್ಯರ ಸ್ನೇಹ ಬೆಳೆಯಿತು. ಸುಮಾರು ಕಾಲು ಶತಮಾನ ದಾಟಿದ ಮೇಲೆ ಆ ಇಬ್ಬರೂ ಜೊತೆಯಲ್ಲಿ ದುಡಿದು ಒಂದು ಮೆಡಿಕಲ್ ಕಾಲೇಜನ್ನೆ ಕಟ್ಟಿದರು.

* * * * *

ಖ್ಯಾತ ಸಾಹಿತಿ ಹಾಗೂ ವ್ಯಾಯಾಮ ಪಟು ಕೆ. ವಿ. ಅಯ್ಯರ್, "ಕಿವಿ ಮುಚ್ಚಿಕೊಳ್ಳಿ" ಎಂದು ಮಗ್ಗುಲಲ್ಲಿದ್ದ ಡಾ. ಶಿವರಾಮ್ ಅವರಿಗೆ ತಿಳಿಸಿ, ಈ

ಕೆಳಗಿನ ಒಂದು ಸಂಗತಿ ಹೇಳಿದರು. ಕಿಕ್ಕಿರಿದು ತುಂಬಿದ್ದ ಪುರಭವನದಲ್ಲಿ ಪೀಠಗಳಿಗೆ ಅಂಟಿ ಕುಳಿತಿದ್ದ ಸಭಿಕರು ಕಿವಿಗೊಟ್ಟು ಕೇಳಿದರು.

ಅದೆಷ್ಟೊ ವರ್ಷಗಳ ಹಿಂದೆ (ಮೂವತ್ತೋ ಇನ್ನೆಷ್ಟೋ). ಡಾ. ಶಿವರಾಮ್ ಪ್ರಾಕ್ಟೀಸು ಆರಂಭಿಸಿದ್ದ ಸಮಯ, ಕೆ. ವಿ. ಅಯ್ಯರ್ ಅವರ ಔಷಧಾಲಯ (ಚಿಕಿತ್ಸಾಲಯ)ಕ್ಕೆ ಹೋಗಿದ್ದರು. ತಮ್ಮ ಸಹೋದ್ಯೋಗಿಗಳಿಗೆ ಶಿವರಾಮ್ ಹೇಳುವುದು ಕೇಳಿಸಿತು :

"ಸುಬ್ಬರಾವ್, ಆ ಪೇಷಂಟಿಂದು ನಾಲ್ಕಾಣೆ ಇಸ್ಕೊಂಡ್ರಾ ?"

"ಹೂಂ."

"ಆ ಮಾರವಾಡಿದ್ದು ಆರಾಣೆ...."

"ನಾಳೆ ಕೊಡ್ತಾನೆ."

ಅಯ್ಯರ್‌ಗೆ ಏನೋ ಒಂದು ವಿಧವಾಯಿತು. ಇಷ್ಟು ಚಿಲ್ಲರೆ ಹಣದ ವಿಷಯದಲ್ಲೂ ಇಷ್ಟೊಂದು ಎಚ್ಚರ ವಹಿಸುತ್ತಾರಲ್ಲ ಇವರು ?....

ಅದಾಗಿ ಕೆಲ ವರ್ಷಗಳ ಅನಂತರದ ಮಾತು. ಒಬ್ಬ ಹುಡುಗ ವೈದ್ಯಕೀಯ ಶಿಕ್ಷಣಕ್ಕೆಂದು ಕಲ್ಕತ್ತೆಗೆ ಹೋದ. ಅವನ ಎಲ್ಲ ವೆಚ್ಚಗಳನ್ನೂ ನೋಡಿಕೊಳ್ಳುವ ಭರವಸೆ ನೀಡಿದ್ದ ಸ್ನೇಹಿತರೊಬ್ಬರು ಅಲ್ಲಿದ್ದರು. ಹುಡುಗ ಅವರಲ್ಲಿಗೆ ಹೋಗುವ ವೇಳೆಗೆ ಈ ಮಹನೀಯರ ಶವ ಮನೆಗೆ ಬಂತು. ರೈಲು ಅಪಘಡದಲ್ಲಿ ಅವರು ನಿಧನರಾಗಿದ್ದರು. ಹುಡುಗ ಅನಿರೀಕ್ಷಿತವಾಗಿ ತಬ್ಬಲಿಯಾಗಿದ್ದ. ತಂತಿ ಕೆ. ವಿ. ಅಯ್ಯರ್‌ರನ್ನು ಹುಡುಕಿಕೊಂಡು ಬಂತು.

ಏನಾದರೂ ಮಾಡಬೇಕೆಂದು ನಾಲ್ಕು ಕಡೆ ಸಹಾಯ ಕೇಳಲು ಅಯ್ಯರ್ ಹೊರಟರು. ಒಂದಿಷ್ಟು ಅಲೆದರು. ಐದು ರೂಪಾಯಿ ಹುಟ್ಟಿತು. ಶಿವರಾಮ್ ಅವರಲ್ಲಿಗೆ ಬಂದರು. ಸಮಾಚಾರ ತಿಳಿದಾಗ ಡಾಕ್ಟರು ಕೇಳಿದರು :

"ಎಷ್ಟು ಹಣ ಇಡೀ ವರ್ಷಕ್ಕೆ ಬೇಕಾಗುತ್ತೆ ?"

"ಐನೂರು ರೂಪಾಯಿ."

ಡಾಕ್ಟರು ಬೇರೆ ಮಾತು ಆಡದೆ ಐನೂರು ರೂಪಾಯಿಗೆ ಚೆಕ್ ಬರೆದು ಕೊಟ್ಟರು.

"ತನಗೋಸ್ಕರ ನೀವು ಭಿಕ್ಷೆ ಬೇಡಿದಿರಿ ಅನ್ನೋ ಭಾವನೆ ಹುಡುಗನಿಗೆ ಬರದೇ ಇರಲಿ. ಅವನ ಇಡೀ ಶಿಕ್ಷಣದ ವೆಚ್ಚ ನನ್ನ ಜವಾಬ್ದಾರಿ."

"ಇದನ್ನು ತಿರಿಸೋ ಬಗೆ ?"

"ಮುಂದೆ ಅವನು ಸಂಪಾದನೆಗೆ ಶುರುಮಾಡಿದ್ಮೇಲೆ ನಿಧಾನವಾಗಿ ಕೊಡ್ಲಿ."

ಅಯ್ಯರ್‌ಗೆ ಗದ್ಗದ ಕಂಠ. ಆ ನಾಲ್ಕಾಣೆ–ಆರಾಣೆಗಳ ನೆನಪೂ ಆಗಿರಹುದು.

ಆದಷ್ಟು ನಿರ್ವಿಕಾರವಾಗಿ ಆ ಬಗೆಗೆ ಹೇಳಿದುದಕ್ಕೆ ಮುನ್ನ ಕುಬೇರನ ಕಥೆಯನ್ನು ಅಯ್ಯರ್ ಜ್ಞಾಪಿಸಿಕೊಂಡರು. ಸಹಾಯ ಕೇಳಲು ಕುಬೇರನಲ್ಲಿಗೆ ಬಂದಾಗ ಆತ ಬಿದ್ದಿದ್ದ ಒಂದೊಂದೇ ಕಾಳು ಆರಿಸುತ್ತಿದ್ದನಂತೆ. ಬಂದ ಕಾರಣ ಕೇಳಿದೊಡನೆ "ಒಂದು ಸಹಸ್ರ ಗಾಡಿಗೆ ತುಂಬಿ ಕಳುಹಿಸಿ", ಎಂದು ಭೃತ್ಯರಿಗೆ ನುಡಿದನಂತೆ. ಬತ್ತಿದ ನದಿಯಲ್ಲಿ ಗಾಡಿಗಳು ದಾಟುತ್ತಿದ್ದಾಗ ಇದ್ದಕ್ಕಿದ್ದಂತೆ ಮಹಾಪೂರ ಬಂತು. ಧಾನ್ಯ ರಾಶಿ ನೀರು ಪಾಲು. ಸಹಾಯ ಪಡೆದವನು ಮರಳಿ ಬಂದು ಕುಬೇರನಿಗೆ ವಿವರಿಸಿದಾಗ ಆತ ಅಂದನಂತೆ: "ಇನ್ನೊಂದು ಸಹಸ್ರ ಗಾಡಿ ಕಟ್ಟಿಸಿಕೊಂಡು ಹೋಗಿ........"

* * * * *

ದೊಡ್ಡ ವ್ಯಕ್ತಿ ಎನ್ನಲು ಇಷ್ಟು ಸಾಲದೆ ?

ಆ ವ್ಯಕ್ತಿತ್ವದ ಹಿರಿತನಕ್ಕೆ ಮೆರಗು ದೊರೆತಿರುವುದು ಅವರು ಕನ್ನಡದ ಶ್ರೇಷ್ಠ ನಗೆಬರೆಹಗಾರರು ಎಂಬ ಕಾರಣದಿಂದ.

ಲೋಕಸಾಹಿತ್ಯದ ಅಮರರು ಕೆಲವರು ವೈದ್ಯರಾಗಿದ್ದುಕೊಂಡೋ ವೈದ್ಯಕೀಯ ಶಿಕ್ಷಣದ ಅನಂತರವೋ ಪದಬ್ರಹ್ಮರಾದವರು. ರಾ.ಶಿ.ಯವರದು ಅಂತಹ ಶ್ರೇಣಿ.

ಬದುಕು ದೊಡ್ಡದು, ಎಂದೇ ಬರವಣಿಗೆಯೂ ದೊಡ್ಡದು. ಇದು ಹಾಸ್ಯ-ಕೈಲಾಸ. ಖ್ಯಾತ ವೈದ್ಯರು. ಕೈಗುಣವೆನ್ನುವುದೆ ? ನಾಲಿಗೆ ಗುಣ ಎನ್ನುವುದೆ ? ಏನನ್ನು ತಾನೇ ಸಾಧಿಸಲಾರದು ನಗೆ ?

ಆದರೆ ನಗೆಯೊಂದು ಕವಚ. ವಾಸ್ತವವಾಗಿ, ನಗೆಯ ರಕ್ಷಾಕವಚವಿರುವವನಿಗೆ ಬೇರೆ ಯಾವ ತಾಯಿತವೂ ಬೇಡ.

ಸಣ್ಣಪುಟ್ಟ ಸಾಧನೆಗಳ ಜನ ಆಕಾಶ ನೋಡುತ್ತ ನಡೆಯುತ್ತಾರೆ, ತುಂಬು ಜೀವನದ ಅರ್ಥ ಕಂಡವರು ವಿನಮ್ರರಲ್ಲಿ ವಿನಮ್ರರಾಗಿರುತ್ತಾರೆ. ಈ ಹೃದಯ ವೈಶಾಲ್ಯ ಸೌಂದರ್ಯೋಪಾಸಕರಿಗೆ, ಜಿಜ್ಞಾಸುಗಳಿಗೆ ಚೇತೋಹಾರಿ. ರಾಶಿ, ವಾಸ್ತವವಾಗಿಯೂ ಅಗುಳಲ್ಲ, ಕಾಳಲ್ಲ – ರಾಶಿಯೇ.

* * * * *

ಚಿರಜವ್ವನಿಕೆಯ 'ಕೊರವಂಜಿ'ಯನ್ನು ನಾಡಿಗೆ ಕೊಟ್ಟವರು ಶಿವರಾಮ್.

ಅಂಥವರಿಗೆ 'ನಗೆನಂದನ'ವೆಂಬ ಬೃಹತ್ ಗ್ರಂಥವನ್ನು–ನೂರಐವತ್ತು ಜನ ಹಿಂದಿನ ಇಂದಿನ ಲೇಖಕರು ನೀಡಿದ ಹಾಸ್ಯ ಬರೆಹಗಳ ರಸಾಯನವನ್ನು– ಸೂರ್ಯನಾರಾಯಣ ಚಡಗರ ನೇತೃತ್ವದಲ್ಲಿ ನಂದನ ಪ್ರಕಾಶನದವರು ಮೊನ್ನೆ ಅರ್ಪಿಸಿದರು ರಾಜರತ್ನಂರ ಪೌರೋಹಿತ್ಯದಲ್ಲಿ. ಸ್ವತಃ ಲೇಖಕರಾದ ಚಡಗರದು ಪ್ರಶಂಸನೀಯ ಸಾಧನೆ. ಅದನ್ನು ರಾಶಿಯವರಿಗೆ ಅರ್ಪಿಸಿದ್ದರ ಔಚಿತ್ಯದ ಬಗೆಗಂತೂ ಬೇರೆ ಮಾತಿಲ್ಲ.

ಬೆಂಗಳೂರಿನ ನಾಗರಿಕರ ಪಾಲಿಗೆ ಈ ತೆರನಾದ ಸನ್ಮಾನಗಳೆಂದರೆ ಇಷ್ಟ. ಕಾರಂತ, ಅನಕೃ, ರಾಶಿ–ಮುಂದೆ ಯಾರ ಸರದಿ ? ಎಂದು ಕೇಳುವಷ್ಟು ಕುತೂಹಲ.

ರಾಶಿ ಮಾತನಾಡುವಾಗ ಒಮ್ಮೆ ಅಂದರು : 'ನಗೆಗನ್ನಡಂ ಗೆಲ್ಗೆ !' ಆಕ್ರೋಶ, ಅಸಹನೆ, ಹಿಂಸೆಗಳ ಜಗತ್ತಿನಲ್ಲಿ ಮಾರ್ದೊಳಗಬೇಕಾದ ಘೋಷ ಇದು : 'ನಗೆಗನ್ನಡಂ ಗೆಲ್ಗೆ !'

೨೦ ಜುಲೈ, ೧೯೬೯

ನಮ್ಮ ಅದೃಷ್ಟವಂತರು

ಹಿತ್ತಿಲ ಗಿಡ ಯಾಕೆ ತಾನೆ ಮದ್ದಾದೀತು ? ತಾಯಿನುಡಿಯಲ್ಲಿ ಒಬ್ಬ ಲೇಖಕ ಶ್ರೇಷ್ಠತಮ ಕೃತಿಯನ್ನೇ ರಚಿಸಬಹುದು. ಆದರೆ, ಅವನ ಭಾಷೆಯ ಸೀಮಿತ ಪ್ರದೇಶದ ಹೊರಗೆ ಆ ಕೃತಿಯ ಬಗೆಗೆ ಒಂದು ಮಾತನ್ನಾದರೂ ಆಡುವವರು ಯಾರು ?

('ಸಾಹಿತ್ಯ ಅಕಾಡೆಮಿ'— ಎಂದು ಉತ್ತರಿಸೀರಿ ಎಲ್ಲಿಯಾದರೂ ! ದಯವಿಟ್ಟು ಅದರ ಪ್ರಸ್ತಾಪ ಈಗ ಬೇಡ. ಅಕಾಡೆಮಿ ಸ್ಥಾಪಿಸಿ ಸಾಹಿತ್ಯವನ್ನು ಪೋಷಿಸುತ್ತಿದ್ದೇವೆಂದು ಸರಕಾರೀ ಪಕ್ಷದವರೂ ಆ ಸಂಸ್ಥೆಯ ಮೂಲಕ ಸಾಹಿತ್ಯದ ಶೋಷಣೆಯಾಗುತ್ತಿದೆ ಎಂದು ಪ್ರತಿ ಪಕ್ಷಗಳ ಜನರೂ ವಾದ-ಪ್ರತಿವಾದ ಹೂಡಬಹುದು. ಸದ್ಯ ಚುನಾವಣೆ ಮುಗಿಯಲಿ).

ವಾಸ್ತವವಾಗಿ ಭಾರತೀಯ ಲೇಖಕ, ಎಂಬ ಜಾತಿ ಒಂದುಂಟೆ ?

ಆಗಿಹೋದ ಕೆಲವರ ಹೆಸರುಗಳನ್ನು ಉಚ್ಚರಿಸಿ 'ಇವರೇ ಭಾರತೀಯ ಸಾಹಿತ್ಯದ ನಿರ್ಮಾತೃಗಳು' ಎಂದು ಸಾರಬಹುದು. ಆದರೆ ಇದೆಲ್ಲಾ ಹಿಂದಿನದಕ್ಕೆ ಸಂಬಂಧಿಸಿ. ಈಗ ?

ಕೃತಿರತ್ನ ಯಾವ ಭಾಷೆಯದಾದರೇನು ? ತನ್ನ ಪ್ರಭೆಯನ್ನದು ಎಲ್ಲ ದಿಕ್ಕುಗಳಿಗೂ ತೋರುವುದೇನೋ ಖಂಡಿತ.

ಆದರೆ ಯಾವಾಗ ? ಕರ್ತೃವಿನ ಮರಣಾನಂತರ ಅಲ್ಲ ತಾನೆ ? ಸಾಲದ್ದಕ್ಕೆ 'ಸತ್ತ ಮೇಲೆ ಸತ್ಕಾರ' ಎಂಬ ಖ್ಯಾತಿಗೆ ಗುರಿಯಾದವರು ನಾವು.

ಠಾಕೂರರಿರಲಿಲ್ಲವೆ ? ಬಂಗಾಳಿಯಲ್ಲಿ ಬರೆದರೂ ಜಗದ್ವಂದ್ಯರಾದರು.

ಜಗದ್ವಂದ್ಯರಾದ ಬಳಿಕ 'ರಾಷ್ಟ್ರಕವಿ' ಎಂದು ಪ್ರಸಿದ್ಧರಾದರು. ಏನನ್ನೋಣ ಈ ವಿರೋಧಾಭಾಸಕ್ಕೆ ?

ರವೀಂದ್ರನಾಥರು ಅದೃಷ್ಟವಂತರು. ಅವರು ಕರ್ನಾಟಕದಲ್ಲಿ ಹುಟ್ಟಲಿಲ್ಲ. ಮಾತೃ ಭಾಷೆಯ ಮೇಲೆ ಅಪಾರ ಮಮತೆಯುಳ್ಳ ಬಂಗಾಳಿಗಳ ಮಧ್ಯೆ ಜನ್ಮ ತಾಳಿದರು. ಅದೂ ಪ್ರಸಿದ್ಧ ಮನೆತನದಲ್ಲಿ. ಅಲ್ಲಿತ್ತು ಕಲಾವಂತಿಕೆಯ ವಿಕಾಸಕ್ಕೆ ನೆರವಾದ ಸಿರಿವಂತಿಕೆ. ಬಾಲ್ಯದಿಂದ ಮೊದಲಾಗಿ ನಡುವಯಸ್ಸಿನವರೆಗೂ ಆಗಾಗ್ಗೆ ವಿಶ್ವಪರ್ಯಟನ. ಪ್ರತಿಯೊಂದು ದೇಶದಲ್ಲೂ ಪ್ರಭಾವಶಾಲಿ ಮಿತ್ರರು. ಆ ಮೈತ್ರಿ ಸುಲಭವಾಗುವಂತೆ ಇಂಗ್ಲಿಷಿಗೆ ಅನುವಾದಿತವಾದ ಅವರ ಕೃತಿಗಳು. ಅವರ

ವ್ಯಕ್ತಿತ್ವವನ್ನೂ ವಾಣಿಯನ್ನೂ ಸಂಕೇತಗಳಾಗಿ ಮಾರ್ಪಡಿಸಿದ ಮಹಾನ್ ರಾಷ್ಟ್ರೀಯ ಚಳುವಳಿ.

ಕೀರ್ತಿ ಶಿಖರಕ್ಕೆ ಇವೆಲ್ಲ ಸುಭದ್ರ ಸೋಪಾನಗಳೇ.

ಆ ಪಯಣದ ಒಂದು ಮಜಲಾಗಿ ನೋಬೆಲ್ ಪಾರಿತೋಷಕ ಬಂತು. ವಂಗ ಕವಿ ಠಾಕೂರರು 'ವಿಶ್ವಕವಿ'ಯಾದರು. ಅದೇ ಆಗ ಕಣ್ಣುಬಿಟ್ಟದ್ದ ಭಾರತೀಯ ಸ್ವಾಭಿಮಾನಕ್ಕೆ ಪುಕ್ಕ ಹುಟ್ಟಿತು. ರಾಷ್ಟ್ರೀಯ ಬದುಕಿನ ಅವಿಭಾಜ್ಯ ಅಂಗವಾಗಿ ಮೆರೆದರು ರವೀಂದ್ರರು. ಶತಮಾನದ ಶ್ರೇಷ್ಠ ಕವಿ ಎನಿಸಿಕೊಂಡರು.

ಅವರು ಅದೃಷ್ಟವಂತರು ಎನ್ನುವುದು ಇದಕ್ಕೇ.

ರಾಷ್ಟ್ರ ಜೀವನದ ವಿಶಿಷ್ಟ ಕಾಲಾವಧಿಯ ಆ ಅನುಕೂಲಗಳು ಈಗ ಇಲ್ಲ. ಶ್ರೇಷ್ಠ ಕವಿತೆಯಾಗಲೀ, ಕಾವ್ಯವಾಗಲೀ ಈ ದೇಶದಲ್ಲಿ ಈಗ ಹುಟ್ಟುತ್ತಿಲ್ಲ ಎಂದು ಇದರರ್ಥವಲ್ಲ. ಅದು ಶ್ರೇಷ್ಠವೆಂದು ಲೋಕ ಮನ್ನಣೆಗೆ ಪಾತ್ರವಾಗಲು ಅವಕಾಶಗಳಿಲ್ಲ, ಅಷ್ಟೆ.

ಒಂದು ಕೃತಿಗೆ ರಾಷ್ಟ್ರಮಾನ್ಯತೆ ದೊರೆತು ಅದು ಭಾರತೀಯ ಕೃತಿ ಎನಿಸಬೇಕಾದರೆ ಕೈಗೊಳ್ಳಬೇಕಾದ ಕ್ರಮ ಯಾವುದು ? ಹಿಂದಿಯಿಂದ ಮೊದಲ್ಗೊಂಡು ದೇಶದ ಪ್ರಮುಖ ಭಾಷೆಗಳಲ್ಲೆಲ್ಲ ಆ ಕೃತಿಯ ಪ್ರಕಟಣೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಹದಿನೈದು ವರ್ಷಗಳಾದರೂ ಆ ದಿಕ್ಕಿನಲ್ಲಿ ಇಡಲಾಗಿರುವುದು ಕುಂಟು ಹೆಜ್ಜೆಗಳನ್ನು ಮಾತ್ರ. ರಾಷ್ಟ್ರದ ಕಲ್ಪನೆ ಮಸಕಾಗಿ ಪ್ರಾದೇಶಿಕ ವ್ಯಾಮೋಹಕ್ಕೇ ಮೇಲ್ಗೈಯಾಗಿರುವ ಈಗಿನ ಪರಿಸ್ಥಿತಿಯಲ್ಲಿ ಈ ಕೆಲಸ ಸುಲಭವಲ್ಲ. ಇದು ಸಾಧ್ಯವಾಗುವವರೆಗೂ 'ಭಾರತೀಯ ಸಾಹಿತ್ಯ'ವೆನ್ನುವುದಾಗಲಿ, 'ಭಾರತೀಯ ಲೇಖಕ ಎನ್ನುವುದಾಗಲಿ ಬರೀ ಮಾತು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ 'ಭಾರತೀಯ ಸಾಹಿತ್ಯ'ವೆಂದು ಈಗ ಯಾವುದನ್ನು ಪರಿಗಣಿಸುತ್ತಾರೆ ? ಇಂಗ್ಲಿಷಿಗೆ ಭಾಷಾಂತರಗೊಂಡಿರುವ ಈ ದೇಶದ ಶ್ರೇಷ್ಠ ಕೃತಿಗಳನ್ನಲ್ಲ. ಇಂಗ್ಲಿಷಿನಲ್ಲಿಯೇ ಭಾರತೀಯರು ಬರೆದ ಕತೆ, ಕಾದಂಬರಿಗಳನ್ನು. ಅವು ಉತ್ತಮವಿರಬಹುದು, ಇಲ್ಲದಿರಬಹುದು. ಭಾರತೀಯ ಜೀವನದ ಸ್ಪಂದನ ಅಲ್ಲಿ ಕಾಣಿಸಬಹುದು, ಕಾಣಿಸದಿರಬಹುದು. ಆದರೂ ವಿದೇಶಗಳಲ್ಲಿ ಅವು ಪ್ರಕಟವಾಗುತ್ತವೆ ; ಮನ್ನಣೆಗೆ ಪಾತ್ರವಾಗುತ್ತವೆ.

ಶ್ರೀರಂಗರ 'ಗೌತಮನ ಶಾಪ' ಕಾದಂಬರಿ ಧಾರವಾಹಿಯಾಗಿ ಪ್ರಕಟಗೊಂಡು ಎಷ್ಟು ಕಾಲವಾಯಿತು ? ಎರಡು ವರ್ಷ ? ಅದಕ್ಕಿಂತಲೂ ಹೆಚ್ಚು. ಪುಸ್ತಕ ರೂಪದಲ್ಲಿ ಹೊರಬೀಳುವ ಯೋಗ ಮಾತ್ರ ಇನ್ನೂ ಆ ಕಾದಂಬರಿಗೆ ಒದಗಿಬಂದಿಲ್ಲ.

ಆದರೆ ಇತ್ತೀಚೆಗೆ 'ಇಲ್ಲಸ್ಟ್ರೇಟೆಡ್ ವೀಕ್ಲಿ'ಯಲ್ಲಿ ಧಾರವಾಹಿಯಾಗಿ ಅಚ್ಚಾದ ಆರ್. ಕೆ. ನಾರಾಯಣರ 'ದಿ ಮ್ಯಾನ್ ಈಟರ್ ಆಫ್ ಮಾಲ್ಗುಡಿ' ಅಮೆರಿಕದಲ್ಲಿ ಈಗಾಗಲೇ ಪುಸ್ತಕರೂಪದಲ್ಲಿ ಪ್ರಕಟವಾಗಿದೆ.

ಅದೃಷ್ಟವಂತರ ಜಾತಿಗೆ ಸೇರಿದ ಭಾರತೀಯ ಲೇಖಕ ಶ್ರೀ ಆರ್. ಕೆ. ನಾರಾಯಣ್.

ನ್ಯೂಯಾರ್ಕಿನ ಲೋಕ ಪ್ರಸಿದ್ಧ ಬ್ರಾಡ್‌ವೇ ರಂಗಮಂದಿರದಲ್ಲಿ ಭಾರತವನ್ನು ಕುರಿತು ಭಾರತೀಯರೇ ರಚಿಸಿದ ನಾಟಕವೊಂದು ಜನವರಿ ೩೧ ರಿಂದ ಪ್ರದರ್ಶಿತವಾಗುತ್ತಿದೆ; ಜಯಭೇರಿ ಬಾರಿಸುತ್ತಿದೆ.

ಅದರ ಹೆಸರು 'ಎ ಪ್ಯಾಸೇಜ್ ಟು ಇಂಡಿಯಾ'. ಪ್ರಖ್ಯಾತ ಆಂಗ್ಲ ಕಾದಂಬರಿಕಾರ ಫಾರ್ಸ್ಟರ್ ಬರೆದಿರುವ ಅದೇ ಹೆಸರಿನ ಕಾದಂಬರಿಯ ನಾಟಕ ರೂಪ. ರೂಪಾಂತರಿಸಿದವರು ಭಾರತದ ಶಾಂತಾ ರಾಮರಾವ್.

ಮುಂಬಯಿಯಲ್ಲಿ ಬರೆದದ್ದು ಬ್ರಾಡ್‌ವೇಯನ್ನು ಸುಲಭವಾಗಿ ತಲಪಿತೇನು?

ಶಾಂತಾ ರಾಮರಾವ್ ಹೇಳಿರುವಂತೆ 'ಅದೆಲ್ಲಾ ಅದೃಷ್ಟ.'

ಯಾವುದೋ ಅನಿರೀಕ್ಷಿತ ಭೇಟಿ ಸಂಭಾಷಣೆಯ ಮಧ್ಯೆ ಹುಟ್ಟಿದ ಯೋಚನೆ ಈ ರೂಪಾಂತರ.

ಧೈರ್ಯ ತಂದುಕೊಂಡು ಲೇಖಕಿ ಹಸ್ತಪ್ರತಿಯನ್ನು ಫಾರ್ಸ್ಟರ್‌ಗೆ ಕಳುಹಿಸಿ ಕೊಟ್ಟರು. ಅವರಿಗೆ ಅದು ಇಷ್ಟವಾಯಿತು.

ಆದರೆ ಅಭಿನಯಿಸುವವರು ಯಾರು? ನಾಲ್ಕು ವರ್ಷ ಅಟ್ಲಾಂಟಿಕ್ ಸಾಗರದ ಆ ಕಡೆಯ ಈ ಕಡೆಯ ನಾಟಕ ನಿರ್ಮಾತೃಗಳೆಲ್ಲ 'ಊಹೂಂ' ಎಂದರು.

ಮುಂದೊಮ್ಮೆ ಭಾರತ ಪ್ರವಾಸಕ್ಕೆ ಬಂದ ನಿರ್ಮಾತೃ ಫ್ರಾಂಕ್ ಹಾಸೆರ್, ಇಂಗ್ಲೆಂಡಿನ ಪುಟ್ಟದೊಂದು ನಾಟ್ಯಸಂಘವಾದ 'ಆಕ್ಸ್‌ಫರ್ಡ್ ಪ್ಲೇ ಹೌಸ'ನ ನಿರ್ದೇಶಕ, ಆ ಹಸ್ತಪ್ರತಿಯ ಬಗೆಗೆ ಆಸಕ್ತಿ ತೋರಿ, ಪ್ರಯೋಗಿಸಿ ನೋಡಲು ಸಮ್ಮತಿ ಕೇಳಿದರು.

ಸಂಭಾವನೆ: ಬರೇ ೨೦೦ ಡಾಲರ್.

೧೯೬೦ರ ಜನವರಿಯಲ್ಲಿ ಲಂಡನಿನಲ್ಲಿ ಆ ನಾಟಕ ಅಭಿನಯಿಸಲ್ಪಟ್ಟಿತು. ಪ್ರೇಕ್ಷಕರೂ ವಿಮರ್ಶಕರೂ ಕೊಂಡಾಡಿದ್ದೂ ಕೊಂಡಾಡಿದ್ದೇ.

ಆ ಬಳಿಕ ನಾಮುಂದು ತಾಮುಂದು ಎಂದು ಬೇರೆ ನಾಟಕ ನಿರ್ಮಾತೃಗಳು ಬಂದರು? ಲಂಡನ್ನಿನ ಕಾಮೆಡಿ ಥೀಯೇಟರಿನಲ್ಲಿ ಡಿಸೆಂಬರ್ ಅಂತ್ಯದವರೆಗೂ ಪ್ರತಿದಿನ 'ಪ್ರದರ್ಶಿತ'ವಾಯಿತು.

ಅನಂತರ ಅಟ್ಲಾಂಟಿಕ್ ಸಾಗರದಾಚೆಗೆ. ಮೊದಲು ಬಾಸ್ಟನ್‌ನಲ್ಲಿ, ಅಲ್ಲಿಂದ ಬ್ರಾಡ್‌ವೇಗೆ.

ಹಂಬಲ, ಶ್ರದ್ಧೆ, ನಡುನಡುವೆ ನಿರಾಶೆ, ಅದೃಷ್ಟ ಖುಲಾಯಿಸಿದಾಗ ಕೀರ್ತಿ ಕಾಂಚನ.

ಹೌದು; ಶಾಂತಾ ರಾಮರಾವ್ ಕೂಡ ಅದೃಷ್ಟವಂತ ಭಾರತೀಯ ಲೇಖಕರ ಜಾತಿಗೆ ಸೇರಿದವರು.

೧೮ ಫೆಬ್ರವರಿ, ೧೯೬೨

ಗರ್ಭಗುಡಿಯಿಂದ 'ಗೆಸ್ಟ್‌ರೂಮಿ'ಗೆ

ಇಂಗ್ಲಿಷರು ಈ ದೇಶವನ್ನು ಆಕ್ರಮಿಸದೇ ಇದ್ದಿದ್ದರೆ ಏನಾಗುತ್ತಿತ್ತು ?

ಈ ಪ್ರಶ್ನೆಗೆ ಉತ್ತರವೆಂದರೆ....

'ಫ್ರೆಂಚರೋ, ಡಚ್ಚರೋ ಪೋರ್ಚುಗೀಸರೋ ಭಾರತವನ್ನು ಪದಾಕ್ರಾಂತ ಮಾಡುತ್ತಿದ್ದರು.'

ವಾಸ್ಕೋಡಗಾಮಾ ಕಲ್ಲಿಕೋಟೆಯ ಬಳಿ ಕಡಲದಂಡೆಯನ್ನು ಮುಟ್ಟದೇ ಇದ್ದಿದ್ದರೆ ? ಪಾಶ್ಚಾತ್ಯ ರಾಷ್ಟ್ರಗಳ ಸಾಮ್ರಾಜ್ಯ ದಾಹಕ್ಕೆ ಇಂಡಿಯಾ ತುತ್ತಾಗದೆ ಇರುತ್ತಿದ್ದರೆ ?

ಅಂತಹ ಸನ್ನಿವೇಶದಲ್ಲಿ ಕಳೆದ ಎರಡು ಶತಮಾನಗಳ ಭಾರತೇತಿಹಾಸ ಯಾವ ರೂಪ ತಳೆಯುತ್ತಿತ್ತು ?

ಏಳುವ, ಬೀಳುವ ಸಿಂಹಾಸನಗಳ ಚಿತ್ರಮಾಲೆ. ಪಾಳೆಯಗಾರರ ಪ್ರಭುಗಳೊಳಗಿನ ಅಂತಃಕಲಹ ; ಯಾವನೋ ಜನಾನುರಾಗಿ ರಾಜನ ಕೆಳಗೆ ಶಾಂತಿ ನೆಮ್ಮದಿ. ಜನತೆಯ ಪಾಲಿಗೆ ಸುಖ ಸಮೃದ್ಧಿ ; ಅವನ ಅನಂತರ ಪಟ್ಟಕ್ಕಾಗಿ ಕಚ್ಚಾಟ.

ಆ ಭಾರತದಲ್ಲಿ ಅರಸರೆಷ್ಟು ?

ಒಂದಲ್ಲ, ಎರಡಲ್ಲ, ನೂರಾರು !

ಅಶೋಕನಂತಹ, ಅಕ್ಬರನಂತಹ ಮಹಾನ್ ಸಮ್ರಾಟನೂ ಒಬ್ಬ ಮತ್ತೆ ಉದಯಿಸುತ್ತಿದ್ದನೇನೋ ?

ಇಡಿಯ ದೇಶದ ಒಂದಾದ ಆ ರಾಜ್ಯಭಾರದ ಬಳಿಕ ಪುನಃ ಗೊಂದಲ.

ಹದಿನೆಂಟನೆಯ ಶತಮಾನದಲ್ಲಿ ಫ್ರಾನ್ಸಿನಲ್ಲಿ ರಾಜಮುಕುಟ ಉರುಳಿತು. ಮಹಾಕ್ರಾಂತಿ. ಅದು ಎಡೆಮಾಡಿಕೊಟ್ಟಿತು, ಮತ್ತೊಂದು ಕ್ರಾಂತಿಗೆ.

ಈ ದೇಶದಲ್ಲೂ ಆ ಬಗೆಯ ಘಟನೆಗಳ ಸಾಧ್ಯತೆ ?

ಆದರೆ ಭಾರತ ಹಲವಾರು ಫ್ರೆಂಚ್ ದೇಶಗಳ ವಿಸ್ತಾರವುಳ್ಳ ಭೂಖಂಡ. ಹದಿನಾಲ್ಕನೆಯ ಲೂಯಿಗಳು ಇಲ್ಲಿ ಹಲವರು. ಒಂದಕ್ಕೆ ಸಹಸ್ರವಾಗಿ ಚಿಗುರುವ ಕತ್ತುಗಳು. ದೇಶದಾದ್ಯಂತ ಪ್ಯಾರಿಸ್ ಪ್ರಕರಣ ? ಅರೆಯುವ ಗಾಣ, ಗಿಲೋಟಿನುಗಳು ?

ಉದ್ಗಾರ :

'ಆಗದ ಮಾತು !'

ಇಂಗ್ಲಿಷರು ಈ ದೇಶವನ್ನು ಆಕ್ರಮಿಸದೇ ಇದ್ದಿದ್ದರೆ ಏನಾಗುತ್ತಿತ್ತು ?

ಶಾಸ್ತ್ರೀಯ ಪೃಥಕ್ಕರಣಕ್ಕೂ ವಿಮರ್ಶೆಗೂ ಅವಕಾಶವಿಲ್ಲದ ಈ ಕಲ್ಪನೆ 'ಕೆಲಸ ವಿಲ್ಲದವರ ಕೆಲಸ' ಎಂದು ಸುಮ್ಮನಾಗೋಣ.

ಆದರೆ, ಇಂಗ್ಲಿಷು ಈ ದೇಶಕ್ಕೆ ಬರದೇ ಇರುತ್ತಿದ್ದರೆ ಏನಾಗುತ್ತಿತ್ತು ?

ಈ ಪ್ರಶ್ನೆಗೆ ಉತ್ತರ ?

ಉತ್ತರದ ಪ್ರಯತ್ನ ಇಲ್ಲಿಯೂ ಹಿಡಿಯಬೇಕಾಗಿರುವುದು ರಮ್ಯ ಕಲ್ಪನೆಯ ಜಾಡನ್ನೇ !

ನಮ್ಮ ದೇಶಿಯ ಭಾಷೆಗಳು ಇಂಗ್ಲಿಷಿನ ಪ್ರಭಾವವಿಲ್ಲದೆ ಬೆಳೆಯಲಿದ್ದ ಬಗೆ ಯಾವುದು ? ಇಡಿಯ ದೇಶದಲ್ಲಿ — ಅದು ಒಂದು ಎಂದು ಕಲ್ಪಿಸಿಕೊಂಡರೆ — ಯಾವುದು ಆಡಳಿತ ಭಾಷೆಯಾಗುತ್ತಿತ್ತು ? ಅಥವಾ ಅನೇಕ ಆಡಳಿತ ಭಾಷೆಗಳಿದ್ದು ವ್ಯವಹಾರ ಸಂಪರ್ಕಕ್ಕೋಸ್ಕರ ಯಾವುದಾದರೂ ಒಂದು ಭಾಷೆ ಇರುತ್ತಿತ್ತೆ ?

ಉತ್ತರ ಸುಲಭವಲ್ಲ, ಎನಿಸಬಹುದು.

ಇಂಗ್ಲಿಷು ಬೋಧಕ ಮಾಧ್ಯಮವಾಗದೆಯೇ ನಾವು ಆಧುನಿಕ ರಾಷ್ಟ್ರವಾಗು ತ್ತಿದ್ದೆವೆ ? ವೈಜ್ಞಾನಿಕ, ತಾಂತ್ರಿಕ ಪ್ರಗತಿ ಸಾಧ್ಯವಾಗುತ್ತಿತ್ತೆ ? — ಈ ರೀತಿ ಪ್ರಶ್ನೆಯನ್ನು ಸೀಮಿತಗೊಳಿಸೋಣ.

ಈಗ ಧೈರ್ಯವಾಗಿ ಉತ್ತರಿಸಬಹುದು.

'ಇಂಗ್ಲಿಷು ಬೋಧಕ ಮಾಧ್ಯಮವಾಗದೆಯೇ ನಾವು ಆಧುನಿಕ ರಾಷ್ಟ್ರವಾಗು ತ್ತಿದ್ದೆವು. ವೈಜ್ಞಾನಿಕ ತಾಂತ್ರಿಕ ಪ್ರಗತಿ ಖಂಡಿತವಾಗಿಯೂ ಸಾಧ್ಯವಾಗುತ್ತಿತ್ತು.'

ಆಂಗ್ಲ ಪ್ರಭಾವಕ್ಕೆ ಒಳಗಾಗದ ಅನೇಕ ರಾಷ್ಟ್ರಗಳು ನಮ್ಮ ಮುಂದಿವೆ. (ಜಪಾನ್, ಜರ್ಮನಿ, ರಷ್ಯ ಇತ್ಯಾದಿ....) ಆ ರಾಷ್ಟ್ರಗಳ ಶ್ರೇಣಿಯಲ್ಲಿ ನಮ್ಮದೂ ರಾಜಾಜಿಸುವುದು ಶಕ್ಯವಿತ್ತು.

* * *

ಆ ರೀತಿಯ ಸ್ವತಂತ್ರ ಬೆಳವಣಿಗೆಯ ನಡುವೆ ಇಂಗ್ಲಿಷಿನ ವಿಷಯದಲ್ಲಿ ನಾವು ಆಸಕ್ತಿ ತೋರಿಸುತ್ತಿದ್ದೇವೆ ?

ಇದೊಂದು ಉಪಪ್ರಶ್ನೆ.

ಪ್ರಾಚೀನ ಲಲಿತ ಸಾಹಿತ್ಯವೂ ಅರ್ವಾಚೀನ ವೈಜ್ಞಾನಿಕ ಸಾಹಿತ್ಯವೂ ವಿಪುಲವಾಗುಳ್ಳ, ವಿಶ್ವದ ಬಹುಮಟ್ಟಿನ ಪ್ರತಿಭೆಗೆ ನಿಲುವುಗನ್ನಡಿಯಾದ, ಇಂಗ್ಲಿ ಷನ್ನು ನಾವು ಅಗತ್ಯವಾಗಿ ಕಲಿಯುತ್ತಿದ್ದೆವು. ಹಲವು ಪುಣ್ಯನದಿಗಳಲ್ಲಿ ಮುಳು ಗೇಳುವ ಸಾಧಕನಿಗೆ ಥೇಮ್ಸ್ ಸ್ನಾನವೊಂದು ಹೆಚ್ಚೆ ?

* * *

ನಮ್ಮ ದೇಶದ ಪುಟ್ಟದೊಂದು ರಾಜ್ಯದಷ್ಟು ವಿಸ್ತೀರ್ಣವುಳ್ಳ ರಾಷ್ಟ್ರ ಪೋಲೆಂಡ್. ಪ್ರೇಮಕ್ಕೂ ಸ್ವಾಭಿಮಾನಕ್ಕೂ ತವರು. ಈಗ ಕೆಂಪು ಬಣ್ಣದ್ದು

ಅಲ್ಲಿಯ ಜನ ಇಂಗ್ಲಿಷ್ ಕಲಿಯುತ್ತಾರೆ.

ಎಷ್ಟು ?

ವಾರ್ಸಾ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕ ಡಾ|| ಆಲ್ಫ್ರೆಡ್ ರೆಜ್‌ಕೀವಿಜ್ 'ಪೋಲಿಷ್ ವೀಕ್ಲಿ'ಯಲ್ಲಿ ಬರೆಯುತ್ತ, ಸ್ವಾರಸ್ಯದ್ದೆನಿಸುವ ಕೆಲ ಅಂಶಗಳನ್ನು ತಿಳಿಸಿದ್ದಾರೆ :

'ದ್ವಿತೀಯ ಜಾಗತಿಕ ಯುದ್ಧಕ್ಕೆ ಮುನ್ನ ಪೋಲೆಂಡಿನಲ್ಲಿ ಇಂಗ್ಲಿಷಿನ ಜ್ಞಾನವೇ ಇರಲಿಲ್ಲವೆಂದರೂ ಸರಿ. ಅದು ಸತ್ಯಕ್ಕೆ ಬಹಳ ದೂರವಾಗುವುದಿಲ್ಲ. ಆ ಭಾಷೆಯನ್ನು ತಿಳಿದವರ ಸಂಖ್ಯೆ ಅತ್ಯಲ್ಪವಾಗಿತ್ತು. ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಭಾಷಾಶಾಸ್ತ್ರದ ಅಧ್ಯಯನವನ್ನು ಮಾಡುತ್ತಿದ್ದ ವಿದ್ಯಾರ್ಥಿಗಳ ಸಣ್ಣದೊಂದು ಗುಂಪಷ್ಟೇ ಇತ್ತು. ಸೆಕೆಂಡರಿ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುವುದಂತೂ ಅಪೂರ್ವ ಸಂಗತಿ.'

ಯುದ್ಧ ಆರಂಭವಾದ ಬಳಿಕ ಏನಾಯಿತು ?

....'ಕ್ಷಿಪ್ರ ಬದಲಾವಣೆಯೊಂದು ಉಂಟಾಯಿತು. ಜರ್ಮನ್ ಭಾಷೆಯನ್ನು ಆಡುತ್ತಿದ್ದ ಆಕ್ರಮಣಕಾರಿ ಸೈನಿಕ ದ್ವೇಷಿಸಲ್ಪಟ್ಟ. ದೊಡ್ಡ ಪ್ರಮಾಣದಲ್ಲಿ ನಾವು ಇಂಗ್ಲಿಷ್ ಭಾಷೆಯತ್ತ ಹೊರಳಿದೆವು. ಆಗ, ಮತ್ತು ವಿಶೇಷವಾಗಿ ಯುದ್ಧಾನಂತರ, ನಮ್ಮ ಇತಿಹಾಸದಲ್ಲೇ ಮೊದಲ ಬಾರಿ, ಕೆಲವೇ ವ್ಯಕ್ತಿಗಳಲ್ಲ ಇಡೀ ರಾಷ್ಟ್ರವೇ ಇಂಗ್ಲಿಷನ್ನು ಕಲಿಯುವುದಕ್ಕೂ ಬಳಸುವುದಕ್ಕೂ ತೊಡಗಿತು.'

ಈ ದಿನ ಪೊಲೆಂಡಿನಲ್ಲಿ ಇಂಗ್ಲಿಷಿನ ಸ್ಥಾನಮಾನಗಳೇನು ?

....'ಎಲ್ಲ ಮಟ್ಟಗಳಲ್ಲೂ ಎಲ್ಲ ಕಡೆಗಳಲ್ಲೂ ಇಂಗ್ಲಿಷನ್ನು ಕಲಿಸಲಾಗುತ್ತಿದೆ. ವಿಶ್ವವಿದ್ಯಾಲಯಗಳ ಇಂಗ್ಲಿಷ್ ವಿಭಾಗಗಳಲ್ಲಿ ಮಾತ್ರವಲ್ಲ, ಸಮಾಜಶಾಸ್ತ್ರ, ತತ್ವಜ್ಞಾನ, ಭೌತಶಾಸ್ತ್ರ, ಗಣಿತ ಈ ಎಲ್ಲಾ ವಿಭಾಗಗಳಲ್ಲೂ ಯಂತ್ರವಿಜ್ಞಾನ, ಶಾಲೆ, ಗಣಿ ವಿದ್ಯಾಲಯ, ವೈದ್ಯಕೀಯ ವಿದ್ಯಾಸಂಸ್ಥೆ, ವ್ಯವಸಾಯ ಮತ್ತು ಅರಣ್ಯ ಸಂಸ್ಥೆಗಳು — ಇಲ್ಲೆಲ್ಲ ಇಂಗ್ಲಿಷನ್ನು ಕಲಿಸಲಾಗುತ್ತಿದೆ. ದೇಶದಲ್ಲೆಲ್ಲ ಬಹುಸಂಖ್ಯಾಕ ಸೆಕೆಂಡರಿ ಶಾಲೆಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲೂ ಕೂಡ — ಇಂಗ್ಲಿಷನ್ನು ಹೇಳಿಕೊಡುತ್ತಾರೆ. ಕಿಂಡರ್‌ಗಾರ್ಟನ್‌ಗಳಲ್ಲೂ ಇಂಗ್ಲಿಷ್ ಪಾಠವಿದೆ. ಅಲ್ಲಂತೂ ಆ ಅಧ್ಯಯನಕ್ಕೆ ವಿಶೇಷ ಯಶಸ್ಸು. ಅಲ್ಲದೆ, ಬೆಳಗ್ಗೆ ಅಥವಾ ಸಂಜೆ ವಯಸ್ಕರು ಇಂಗ್ಲಿಷ್ ಕಲಿಯುವುದಕ್ಕೂ ಅವಕಾಶಗಳಿವೆ....'

* * *

ಮೇಲಿನದು ಉಸಿರುಗಟ್ಟಿಸುವಂತಹ ಉದಾಹರಣೆ.

ಪೋಲೆಂಡಿನಲ್ಲಿ ಪೋಲಿಷ್ ಭಾಷೆಯೇ ಬೋಧನ ಮಾಧ್ಯಮ. ಆದರೆ ಪೋಲ್ ಜನರು ಇತರ ಪಾಠಗಳ ಜೊತೆಗೆ ಇಂಗ್ಲಿಷನ್ನು ಕಲಿಯುತ್ತಾರೆ. ಅದರಿಂದ ತಮಗೆ, ತಮ್ಮ ನಾಡಿಗೆ, ಲಾಭವಾಗಲಿ ಎಂದು.

ನಮಗಾದರೂ ಆ ದೃಷ್ಟಿಯಿಂದ ಇಂಗ್ಲಿಷ್ ಬೇಕು.

ಈ ದೇಶದಲ್ಲಿ ಇಂಗ್ಲಿಷೇ ಸದಾಕಾಲವೂ ಬೋಧನ ಮಾಧ್ಯಮವಾಗಿರಲೆಂಬ ವಾದವನ್ನು ವಿವೇಕಮತಿಗಳು ಒಪ್ಪಲಾರರು. ತಾಯಿನುಡಿಯ ಮೂಲಕವೇ ಜ್ಞಾನಾರ್ಜನೆ, ಸಹಜವಾದ ನೈಸರ್ಗಿಕವಾದ ಕಾರ್ಯವಿಧಾನ.

ಹಾಗೆಂದ ಮಾತ್ರಕ್ಕೆ ಇಂಗ್ಲಿಷ್ ನಮಗೆಂದಿಗೂ ಬೇಡ ಎನ್ನುವುದು ವಿವೇಕ ರಾಹಿತ್ಯದ ಪರಮಾವಧಿಯೇ. ನಾವು ಬೀಳ್ಕೊಟ್ಟಿರುವುದು (ಅಥವಾ ಹೊರಕ್ಕೆ ಅಟ್ಟಿರುವುದು) ಇಂಗ್ಲಿಷರನ್ನೇ ಹೊರತು ಇಂಗ್ಲಿಷನ್ನಲ್ಲ. ಗರ್ಭಗುಡಿಯಿಂದ ಕಿತ್ತು ಬೀದಿಗೆಸೆಯದೆ ಅತಿಥಿಗಳ ಕೊಠಡಿಗೆ ನಾವದನ್ನು ಸ್ಥಳಾಂತರಿಸಬೇಕು.

೪ ಮಾರ್ಚ್, ೧೯೬೩

ಸುಂದರ ಚಿತ್ರಕ್ಕೊಂದು ಹೂಮಾಲೆ

ಡಾ|| ಎ.ಆರ್. ಕೃಷ್ಣಶಾಸ್ತ್ರೀ ಅವರ 'ಬಂಗಾಳೀ ಕಾದಂಬರಿಕಾರ ಬಂಕಿಮ ಚಂದ್ರ' ಕೃತಿಗೆ, ಈ ವರ್ಷದ ಅಕಾಡೆಮಿ ಪುರಸ್ಕಾರ ದೊರೆತಿದೆ. ಉತ್ಕೃಷ್ಟ ಗ್ರಂಥ ವೆಂದು ಕನ್ನಡಿಗರಿಂದ ಈಗಾಗಲೇ ಪರಿಗಣಿತವಾಗಿರುವ ಕೃತಿಯೊಂದು ಭಾರತೀಯ ಮನ್ನಣೆಗೂ ಪಾತ್ರವಾಗಿರುವುದು ಸಂತೋಷದ ಸಂಗತಿ.

ಸಾಹಿತ್ಯ ಅಕಾಡೆಮಿ ರಾಷ್ಟ್ರವ್ಯಾಪ್ತಿಯುಳ್ಳ ಸಂಸ್ಥೆ. ಆ ಕಾರಣದಿಂದ, ಅದು ನೀಡುವ ಪುರಸ್ಕಾರ ಒಂದು ಬಗೆಯ ರಾಷ್ಟ್ರ ಮನ್ನಣೆ.

ಈ ವರ್ಷ ವಿವಿಧ ಭಾಷೆಗಳ ಹದಿಮೂರು ಭಾರತೀಯ ಕೃತಿಗಳಿಗೆ ಅಕಾಡೆಮಿ ಗೌರವ ಸಲ್ಲಿಸಿದೆ. ಅವುಗಳಲ್ಲೊಂದು 'ಬಂಕಿಮಚಂದ್ರ.'

ಮೊದಲೇ ಸುಂದರ ಚಿತ್ರ. ಅದರ ಚೌಕಟ್ಟನ್ನು ಅಲಂಕರಿಸಲು ಈಗೊಂದು ಹೂಮಾಲೆ.

ಬಂಕಿಮಚಂದ್ರರನ್ನು ಸತ್ಕರಿಸಲು ಭಾರೀ ಸಭೆಯೊಂದು ಹಿಂದೆ ಬಂಗಾಳದಲ್ಲಿ ಜರಗಿತಂತೆ. ಬಂಕಿಮಬಾಬು ತಮ್ಮ ಕೊರಳಿಂದ ಪುಷ್ಪಹಾರವನ್ನು ತೆಗೆದು, ಹತ್ತಿರದಲ್ಲೇ ಇದ್ದ ಯುವಕನೊಬ್ಬನಿಗೆ ಹಾಕಿ, ಅಂದರಂತೆ :

'ನೆನಪಿಡಿ. ಮುಂದೆ ಈತನ ವಿಷಯದಲ್ಲಿ ಇಡೀ ಬಂಗಾಳವೇ ಹೆಮ್ಮೆಪಡುತ್ತದೆ.'

ಆ ತರುಣ, ರವೀಂದ್ರನಾಥ ಠಾಕೂರ್. ಬಂಗಾಳವಷ್ಟೇ ಅಲ್ಲ, ಇಡೀ ರಾಷ್ಟ್ರವೇ ಮುಂದೆ ಅಭಿಮಾನದಿಂದ ಕಂಡ ವ್ಯಕ್ತಿ; ಜಗತ್ತಿನ ಮನ್ನಣೆಗೂ ಪಾತ್ರನಾದ ಮಹಾನುಭಾವ.

ಆಗ ಅಕಾಡೆಮಿಗಳಿರಲಿಲ್ಲ. ಆದರೂ ಪ್ರಮುಖ ಬರೆಹಗಾರರೂ ಕಲಾವಿದರೂ ಪುರಸ್ಕೃತರಾಗುತ್ತಿದ್ದರು.

ಈಗಿನದಾದರೋ 'ಆನಂದ ಮಠ'ದಂತಹ ಕಾದಂಬರಿಗಳನ್ನು ಬರೆಯುವುದು ಅನಗತ್ಯವಾದ ಸ್ವತಂತ್ರ ವಾತಾವರಣ.

ಆ ವಾತಾವರಣದ ಫಲ: ಸಾಹಿತ್ಯದ ಪೋಷಣೆಗೆಂದೇ ರಚಿತವಾಗಿರುವ ಅಕಾಡೆಮಿಗಳು.

ಈಗ ಕೃತಿಯ-ಕರ್ತೃವಿನ-ಶ್ರೇಷ್ಠತೆಯನ್ನು ಗುರುತಿಸುವ ಜವಾಬ್ದಾರಿಯನ್ನು ಅಂತಹ ಅಕಾಡೆಮಿಗಳಿಗೆ ಸಾಹಿತಿಗಳೂ ಜನರೂ ಬಿಟ್ಟುಕೊಟ್ಟಿದ್ದಾರೆ !

ಸಾಹಿತ್ಯ ಅಕಾಡೆಮಿ, ಸಾಕಷ್ಟು ಸ್ವಾಯತ್ತೆ ಇರುವ ಸಂಸ್ಥೆ. ಆದರೂ ಹಣದ ವಿಷಯದಲ್ಲಿ ಅದು ಪರಾವಲಂಬಿ. ಸರಕಾರ ಅದರ ದಾತೃ. ಹೀಗಾಗಿ, ಆ ದಾತೃವಿನ ಸ್ಥೂಲ ಇಚ್ಛೆಗೆ ಅನುಸಾರವಾಗಿಯೇ ಈ ಸಂಸ್ಥೆಯ ಚಟುವಟಿಕೆಗಳು ನಡೆಯಬೇಕು.

ಸರಕಾರ ಪ್ರಜಾಪ್ರಭುತ್ವದ ಕೂಸು. ಅಂತಹ ಸರಕಾರದ ಪರಮಾಧಿಕಾರವುಳ್ಳ ಸಂಸ್ಥೆಯೂ ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾಗಿಯೇ ನಡೆಯಬೇಕು ತಾನೆ?

ಆದುದರಿಂದ ಆಕ್ರೋಶಗಳಿಗೆದುರು ಅದು ತಲೆಬಾಗುತ್ತದೆ; ಆಂದೋಲನಗಳಿಗೆ ಶರಣಾಗುತ್ತದೆ. ಸಾಹಿತ್ಯದ ಮೌಲ್ಯಗಳಿಗಿಂತಲೂ ಪ್ರಜಾಧಿಕಾರದ ಪಾರಮ್ಯದ ಕಡೆಗೆ ಅದರ ಗಮನ ಹೆಚ್ಚಾಗಿ ಹರಿಯುತ್ತದೆ.

ಪುರಸ್ಕಾರಕ್ಕೆಂದು ಗ್ರಂಥಗಳನ್ನಾರಿಸುವಾಗಲೂ ಮತದಾನವುಂಟು. ಬ್ಯಾಲಟ್ ಪೇಪರುಗಳ ಪರೀಕ್ಷೆ ನಡೆದು, ಹೆಚ್ಚು ಮತ ಗಳಿಸಿದವರಿಗೇ ಪ್ರಾಶಸ್ತ್ಯ. ಪ್ರಜಾಪ್ರಭುತ್ವ ತತ್ವವನ್ನು ಒಪ್ಪಿಕೊಂಡಿರುವೆವೆಂದ ಮೇಲೆ 'ಸರ್ವಾನುಮತದ ಸೂಚನೆಯಾಗಲಿ,' 'ಅವಿರೋಧ ಆಯ್ಕೆಯಾಗಲಿ,' ಎಂದು ಕೇಳುವುದು ಯಾವ ನ್ಯಾಯ?

'ಬಂಕಿಮಚಂದ್ರ'ವೂ ಈ ಬಗೆಯ ವಿಧಿ ವಿಧಾನಗಳಿಗೆ ಒಳಗಾಯಿತಂತೆ. ಆಯ್ಕೆಯೇನೋ 'ಪ್ರಚಂಡ ಬಹುಮತ'ದಿಂದಲೇ ನೆರವೇರಿತೆನ್ನೋಣ.

ಶ್ರೇಷ್ಠ ಗ್ರಂಥದ ಕರ್ತೃವನ್ನು ಗೌರವಿಸುವ ಬೇರೆ ವಿಧಾನ ನಮ್ಮಲ್ಲಿಲ್ಲ ಎಂದು ನಾವು ಬೇಸರಪಡಬೇಕು. ಶ್ರೀ ಕೃಷ್ಣಶಾಸ್ತ್ರಿಯವರು ನಮ್ಮನ್ನು ಕ್ಷಮಿಸಬೇಕು.

ಅಕಾಡೆಮಿಯ ಪುರಸ್ಕಾರಕ್ಕೆ ಏನು ಬೆಲೆ? ಐದು ಸಾವಿರ ರೂಪಾಯಿಗಳೆ?

ಆ ಗಂಟನ್ನು ಅಕಾಡೆಮಿ ಅಗತ್ಯವಾಗಿ ಲೇಖಕರಿಗೆ ಕೊಡಲಿ.

ಆದರೆ, ಅದೇ ಮುಖ್ಯವಲ್ಲ, ಅಕಾಡೆಮಿಯ ಪಾರಿತೋಷಕ ವಾಸ್ತವವಾಗಿಯೂ ಭಾರತೀಯ ಮನ್ನಣೆಯನ್ನು ಆ ಲೇಖಕರಿಗೆ ದೊರಕಿಸಿಕೊಡಬೇಕು.

ಹೇಗೆ?

ಪ್ರತಿ ವರ್ಷವೂ ಅಕಾಡೆಮಿಯಿಂದ ಪುರಸ್ಕೃತವಾದ ಪುಸ್ತಕ, ಆ ವರ್ಷಾಂತ್ಯದೊಳಗೆ ಭಾರತದ ಹದಿನಾಲ್ಕು ಪ್ರಮುಖ ಭಾಷೆಗಳಲ್ಲೂ ಪ್ರಕಟವಾಗಬೇಕು. ಹೀಗೆ ಪ್ರತಿಯೊಂದು ಭಾಷೆಯಲ್ಲೂ ಸಿಗುವ ಹದಿಮೂರು ಹದಿನಾಲ್ಕು ಬಹುಮಾನಿತ ಕೃತಿಗಳು, ದೇಶದ ಜನತೆಗೆ ಅಕಾಡೆಮಿ ಕೊಡಬಹುದಾದ ಕೊಡುಗೆ.

ಬಂಗಾಳೀ ಕಾದಂಬರಿಕಾರ ಬಂಕಿಮಚಂದ್ರರನ್ನು ಕುರಿತು ಕನ್ನಡಿಗ ಬರೆದ ಉದ್ಗ್ರಂಥ ಭಾಷಾಂತರಗೊಂಡು ಬಂಗಾಳಿಯಲ್ಲೇ ಬೆಳಕು ಕಾಣುವ ಸಂದರ್ಭ!

ಲೇಖಕನಿಗೆ–ಕನ್ನಡಿಗನಿಗೆ–ಇದಕ್ಕಿಂತ ಹೆಚ್ಚಿನ ಉಡುಗೊರೆ ಯಾವುದು?

ಒಂದು ಕೃತಿ ದೇಶದ ಹದಿನಾಲ್ಕು ಭಾಷೆಗಳಲ್ಲೂ ಏಕ ಕಾಲದಲ್ಲೇ ಪ್ರಕಟವಾಗುವ ಅವಕಾಶ!

ಮೂಲ ಬರೆಹಗಾರನಿಗೆ ಇದಕ್ಕಿಂತ ಹೆಚ್ಚಿನ ಹರ್ಷವನ್ನು ಬೇರೇನು ನೀಡೀತು?

೧೯೬೧ರ ಆಗಸ್ಟ್ ತಿಂಗಳು ಮೊದಲ್ಗೊಂಡು ಎಲ್ಲೆಲ್ಲೂ ರಾಷ್ಟ್ರೀಯ ಭಾವೈಕ್ಯದ ಮಾತನ್ನು ಕೇಳಿದೆವು. ದಿಲ್ಲೀಶ್ವರರಿಂದ ಹಿಡಿದು ರಾಜ್ಯಾಧಿಪರವರೆಗೆ, ಅಲ್ಲಿಂದ ಗ್ರಾಮ ಪಂಚಾಯಿತಿಗಳ ತನಕ, ಎಲ್ಲರೂ ಭಾವೈಕ್ಯದ ತುತೂರಿಯನ್ನೇ ಊದಿದರು. ಪರಿಸ್ಥಿತಿಯಿಂದ ಸ್ಫೂರ್ತಿಗೊಂಡ ಸಚಿವ ಹುಮಾಯೂನ್ ಕಬೀರರು (ಇವರು ಬಂಗಾಳೀ ಬರೆಹಗಾರರೆಂಬ ಆರೋಪವೂ ಇದೆ), ರಾಷ್ಟ್ರೀಯ ಭಾವೈಕ್ಯವನ್ನು ಪ್ರತಿಪಾದಿಸುವ ಪ್ರತಿಯೊಂದು ಭಾಷೆಯ ಉತ್ತಮ ನಾಟಕಕ್ಕೆ ನಾಲ್ಕು ಸಾವಿರ ರೂಪಾಯಿ ಬಹುಮಾನ ಕೊಡುವೆವೆಂದು ಸಾರಿದರು.

[ಕಬೀರರದು ವೈಜ್ಞಾನಿಕ ಸಂಶೋಧನೆ ಮತ್ತು ತಾಂತ್ರಿಕ ಶಿಕ್ಷಣದ ಶಾಖೆ. ಇದಕ್ಕೂ ಗೋಕುಲಾಷ್ಟಮಿಗೂ ಏನು ಸಂಬಂಧ ಎನ್ನುವಿರೇನೊ? ರಾಷ್ಟ್ರೀಯ ಭಾವೈಕ್ಯ ಸಾಧ್ಯವೆ ಎಂಬ ಜಿಜ್ಞಾಸೆ ಒಂದು ರೀತಿಯ ವೈಜ್ಞಾನಿಕ ಸಂಶೋಧನೆಯೇ! ಆ ಭಾವೈಕ್ಯ ಅಗತ್ಯವೆಂದು ಪ್ರಚಾರ ಮಾಡುವುದು ಒಂದು ಬಗೆಯ ತಾಂತ್ರಿಕ ಶಿಕ್ಷಣವೇ!]

ಇಷ್ಟೆಲ್ಲಾ ಆದ ಮೇಲೆ ಇದ್ದಕ್ಕಿದ್ದಂತೆ ಭಾವೈಕ್ಯದ ಹಾಡು ಮರೆಯಾಯಿತು. ಚುನಾವಣೆಯ ಘೋಷಣೆಗಳೂ ಭಾಷಣಗಳೂ ವಾತಾವರಣ ತುಂಬ ಧುಮುಘುಮಿಸಿದುವು. ಎಲ್ಲ ಬಗೆಯ ಛಿದ್ರ ಪ್ರವೃತ್ತಿಗಳೂ ಲಾಸ್ಯವಾಡಿದ ಮಹಾ ಚುನಾವಣೆಯ ಅವಧಿಯಲ್ಲಿ ಎಲ್ಲಿಯ ಐಕ್ಯಗಾನ?

ಈಗ ಚುನಾವಣೆಗಳು ಮುಗಿದಿವೆ. ಆರ್ಥಿಕ ವರ್ಷ ಮುಕ್ತಾಯಕ್ಕೆ ಬರುತ್ತಿರುವುದರಿಂದ ಉಳಿದಿರುವ ಹಣದ ವಿತರಣೆಯೂ ಬೇಗ ಬೇಗನೆ ಆಗಲಿದೆ.

ಇಷ್ಟಾದ ಮೇಲೆ ಇನ್ನೊಂದು ಅಧ್ಯಾಯ.

ಜವಾಹರರು ಮತ್ತೊಂದು ರಾಷ್ಟ್ರೀಯ ಭಾವೈಕ್ಯ ಸಮ್ಮೇಳನವನ್ನು ಕರೆಯಬಹುದು. ಅಲ್ಲಿಂದ ಇಲ್ಲಿಯ ತನಕ ಮರೆತ ಹಾಡು ಮತ್ತೆ ಧ್ವನಿಸಬಹುದು. ಕಬೀರರು ತಮ್ಮ ನಾಟಕಗಳನ್ನು ಆಡಿಸಲು ಸನ್ನದ್ಧರಾಗಬಹುದು.

ಆದರೆ, ಶ್ರೇಷ್ಠ ಸಾಹಿತ್ಯ ಭಾರತದ ಎಲ್ಲ ಭಾಷೆಗಳಲ್ಲೂ ಏಕಕಾಲದಲ್ಲಿ ಪ್ರಕಟವಾಗುವುದೇ ಭಾವೈಕ್ಯ ಸಾಧನೆಗೆ ಬುನಾದಿ—ಎಂಬ ಅರಿವು ಸಂಬಂಧಪಟ್ಟವರಿಗೆ ಮೂಡುವುದು ಸಾಧ್ಯವಾದರೆ! ನೂರು ಕೃತಿಗಳನ್ನು, ಅದಾಗದೇ ಇದ್ದರೆ ಈ ವರ್ಷ ಅಕಾಡೆಮಿ ಪುರಸ್ಕರಿಸುವ ಹದಿಮೂರು ಕೃತಿಗಳನ್ನಾದರೂ ಭಾರತೀಯ ಭಾಷೆಗಳಲ್ಲಿ ಏಕಕಾಲದಲ್ಲಿ ಈ ವರ್ಷವೇ ಪ್ರಕಟಿಸುವುದು ಶಕ್ಯವಾದರೆ!

ಇದಕ್ಕೋಸ್ಕರ ಪ್ರತ್ಯೇಕ ಮಂತ್ರಿಶಾಖೆಯೊಂದನ್ನು ನಿರ್ಮಿಸಿದರೂ ಚಿಂತಿಲ್ಲ. ಇಷ್ಟು ಕೆಲಸವನ್ನು ಮಾತ್ರ ಅಕಾಡೆಮಿಗಳ ಸೂತ್ರಚಾಲಕ ಸರಕಾರ ದಯವಿಟ್ಟು ಮಾಡಲಿ.

೧೮ ಮಾರ್ಚ್, ೧೯೬೭

ಅಪೂರ್ವ ಸ್ಮೃತಿ ಚಿತ್ರ

ಈ ಕೆಳಗಿನ ಅಂಶ ಒಂದು ಗ್ರಂಥದಿಂದ ಉಲ್ಲೇಖ :

....ಭಾಷಾ ಶಾಸ್ತ್ರದ ಅಭ್ಯಾಸಕ್ಕೆ ಎಷ್ಟೋ ಸಮಯದವರೆಗೆ ನನ್ನ ವರ್ಗದಲ್ಲಿ ನಾನೊಬ್ಬನೇ ವಿದ್ಯಾರ್ಥಿ. ಭಾರತೀಯರಲ್ಲಿ, ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಆ ವಿಷಯ ಎಂ.ಎ.ಗಾಗಿ ಓದುವವರಲ್ಲಿ ನಾನೇ ಮೊದಲಿಗನಾಗಿದ್ದರೂ ಆಗಿರಬಹುದು–ಎಂಬ ಸಂದೇಹ. ನನ್ನ ಪ್ರಾಧ್ಯಾಪಕ ಲಂಡನ್‌ನಿಂದ ಸಲವತ್ತು ಮೈಲಿಗಳಷ್ಟು ದೂರದ ಬಿಷಪ್ ಆನ್–ಸ್ಟಾರ್ಟ ಫರ್ಡ್ ಎಂಬಲ್ಲಿ ಇರುತ್ತಿದ್ದರು. ಒಂದೊಂದು ದಿನ ನನ್ನ ಸಲುವಾಗಿಯೆ ಬಂದುಹೋಗಬೇಕಾಗುತ್ತಿತ್ತು. ಸಾಯಂಕಾಲ ೬ ರಿಂದ ೭ರ ವರೆಗೆ ನನ್ನ ಕ್ಲಾಸ್‌ಉ. ಹೀಗಿರುವಾಗ ಒಂದು ದಿನ ಸಾಯಂಕಾಲ ಅಯ್ದೂವರೆ ಗಂಟೆಗೇ ಅವರನ್ನು ಕಂಡೆ, ಅಪರಾಧಿಯ ಮುಖಮುದ್ರೆಯಿಂದ ನಿಂತೆ. ಅವರಿಗೇನೊ ಬೇರೆ ಅರ್ಥವಾಯಿತು. 'ಮನೆಯಿಂದ ಏನಾದರೂ ಅನಿಷ್ಟ ಸುದ್ದಿ ಬಂದಿದೆಯೆ?' ಎಂದು ಕೇಳಿದರು. ಇಲ್ಲ, ಎಂದು ತಲೆಯನ್ನಲ್ಲಾಡಿಸಿದೆ. 'ನಿನ್ನ ಮೈಯಲ್ಲಿ ಸ್ವಸ್ಥವಿಲ್ಲವೆ?' ಎಂದು ಕೇಳಿದರು. ಅವರ ಕಣ್ಣೆದುರಿನಲ್ಲಿಯೆ ದಪ್ಪಪುಷ್ಟನಾಗಿ ನಿಂತ ನನಗೆ ಸುಳ್ಳನ್ನು ಹೇಳಲು ಧೈರ್ಯವಾಗದೆ ಮತ್ತೆ ತಲೆಯಲ್ಲಾಡಿಸಿದೆ.

'ಹಾಗಾದರೆ? ಆಗಿದೆಯಾದರೂ ಏನು? ಸಂಕೋಚ ಯಾಕೆ?' ಎಂದರು.

'ನಾನೊಂದು ತಪ್ಪನ್ನು ಮಾಡಿದ್ದೇನೆ. ಅದೂ ನಿಮಗೆ ತಿಳುಹಿಸದೆಯೆ–'

'ಏನದು?'

'ಏನೊ–ಇನ್ನೊಮ್ಮೆ ಇಂತಹ ಅವಕಾಶ ಸಿಕ್ಕಲಿಕ್ಕಿಲ್ಲ ಎಂದು ದುಡುಕಿದೆ.'

'ಮಾಡಿದ್ದಾದರೂ ಏನು? ನನ್ನಿಂದ ಸಹಾಯವಾಗುವಂತಿದ್ದರೆ....

'ನನಗೆ ತಿಳಿದಿದ್ದರೆ ನಾನು ಮಾಡುತ್ತಿರಲಿಲ್ಲ.'

'ಮಾಡಿದ್ದು ಏನು ಎಂದೆ' ತುಸು ಬೇಜಾರದ ದನಿಯಲ್ಲಿಯೆ ಕೇಳಿದರು.

'ನಾಟಕ ನೋಡೋಣ ಎಂದು ಟಿಕೆಟ್—'

'ಈ ಸಾಯಂಕಾಲವೆ?'

ತಲೆಯನ್ನಲ್ಲಾಡಿಸಿದೆ.

'ನಾಳೆಯೆ?'

ಮತ್ತೂ ತಲೆಯನ್ನಲ್ಲಾಡಿಸಿದೆ.

'ಎಂದರೆ ಯಾವ ವಾರ ಎಂದು ನನ್ನನ್ನು ಕೇಳುವ ಅಪೇಕ್ಷೆಯೆ ?' ಎಂದರು.

ಕೊನೆಯಲ್ಲಿ ಗಟ್ಟಿ ಮನಸ್ಸಿನಿಂದ ಹೇಳಿದೆ 'ಈ ಇಡಿಯ ವಾರದ ಪ್ರಯೋಗಗಳನ್ನು....'

ಒಮ್ಮೆಲೆ ನಕ್ಕರು. ಇಡಿಯ ವಾರದ ಅದೇ ನಾಟಕದ ಎಂಟೂ ಪ್ರಯೋಗಗಳಿಗೆ ನಾನು ಮುಂಗಡ ಟಿಕೆಟ್ಟನ್ನು ಕೊಂಡುದಕ್ಕೆ ಯಾರಾದರೂ ನಗಬಹುದಾಗಿತ್ತು. ಯಾವ ನಾಟಕ—ಎಂದರು. ಹೇಳಿದೆ. ಆಗ ಒಮ್ಮೆಲೆ 'ಓಹೊ ! ನನಗೆ ಗೊತ್ತಿರಲಿಲ್ಲ. ನಿನಗೆ ನಾಟಕದಲ್ಲಿ ಆಸಕ್ತಿ ಎಂದು ಮುಂಚಿತ ಹೇಳಿ ಉಪಕಾರ ಮಾಡಿದಿ. Thanks.' ಎಂದರು.

ಮೇಲಿನ ಸಂಭಾಷಣೆ ನಡೆದುದು ಮೂವತ್ತು-ಮೂವತ್ತೈದು ವರ್ಷಗಳಿಗೆ ಹಿಂದೆ. ಸ್ಥಳ : ಲಂಡನ್ ವಿಶ್ವವಿದ್ಯಾನಿಲಯ. ಇಡಿಯ ವಾರದ ಪ್ರಯೋಗಗಳನ್ನು ನೋಡಲು ಭಾಷಾಶಾಸ್ತ್ರದ ಆ ಭಾರತೀಯ ವಿದ್ಯಾರ್ಥಿ ಟಿಕೆಟ್ ಕೊಂಡಿದ್ದರಲ್ಲ ? ಆ ನಾಟಕ, ಬರ್ನಾರ್ಡ್‌ಷಾ ವಿರಚಿತ 'ಸೇಂಟ್ ಜೋನ್' ಇಪ್ಪತ್ತು ದಾಟಿದ ಆ ವಿದ್ಯಾರ್ಥಿ ಆರ್.ವಿ. ಜಾ(ಹ)ಗಿರದಾರ್.

ಇಂಗ್ಲೆಂಡಿನಲ್ಲಿ ತಜ್ಞ ಪ್ರಾಧ್ಯಾಪಕನಿಂದ ಭಾಷಾಶಾಸ್ತ್ರ ಕಲಿತು, 'with distinction' ಎಂ.ಎ. ಡಿಗ್ರಿಯನ್ನು ಪಡೆದು ಜಾಗಿರದಾರರು ಸ್ವದೇಶಕ್ಕೆ ಮರಳಿದರು. ಉದ್ಯೋಗಕ್ಕಾಗಿ ಅಲೆದರು, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಹತ್ತೊಂಭತ್ತು ವರ್ಷಗಳ ಕಾಲ ಸಂಸ್ಕೃತ ಪ್ರಾಧ್ಯಾಪಕರಾಗಿದ್ದು ರಾಜಿನಾಮೆ ಕೊಟ್ಟರು. ಆಮೇಲೂ ಒಂದೆರಡು 'ನೋಕರಿ'ಗಳಿದ್ದವು. ಈ ದುಡಿಮೆಯನ್ನು ಅವರು ಮಾಡಿದ್ದು ಆದ್ಯ ರಂಗಾಚಾರ್ಯರೆಂದು ; ಹೆಸರು ಬದಲಾಯಿಸಿ.

ಇಷ್ಟಾದರೂ ಅವರು ಪ್ರಖ್ಯಾತವಾಗಿರುವುದು ಶ್ರೇಷ್ಠ ನಾಟಕಕಾರರಾಗಿ, 'ಶ್ರೀರಂಗ' ನಾಮಧೇಯದಿಂದ.

ಆದರೂ ಅವರನ್ನು 'ಪ್ರೊಫೆಸರ್' ಎಂದು ಇಂದಿಗೂ ಕರೆಯುವ ಹಳೆಯ ವಿದ್ಯಾರ್ಥಿಗಳ ಬಳಗ ದೊಡ್ಡದು....!

ಅನೇಕರಿಗೆ ಪಾಲಿ ಪ್ರೊಫೆಸರ್ ಆಗಿರುವ ಜಾಗಿರದಾರರು ಇತ್ತೀಚೆಗೆ....

ಇಲ್ಲ, ಮುಂದೆ ಓದಿನೋಡಿ. ಆರಂಭದಲ್ಲಿ ಪ್ರಸ್ತಾಪಿಸಿದ ಗ್ರಂಥದಿಂದಲೇ ಉಲ್ಲೇಖ :

ಸ್ವದೇಶಕ್ಕೆ ಮರಳುವ ಸಮಯ ಬಂದಿತು. 'ಹೋದಮೇಲೆ ಏನು ಮಾಡುವೆ?' ಎಂದು ಕೇಳಿದರು ಪ್ರಾಧ್ಯಾಪಕರು. ಭಾರತೀಯರ ಜನ್ಮಸಿದ್ಧ ಹಕ್ಕಿನಂತಿದ್ದ ನೋಕರಿಯನ್ನು ಹುಡುಕುವೆ—ಎಂದೆ.

....ಎರಡು ವರ್ಷಗಳ ಹಿಂದೆ ಒಂದು ಸಮ್ಮೇಳನಕ್ಕೆಂದು ದಿಲ್ಲಿಗೆ ಹೋಗಿದ್ದಾಗ ಪ್ರಧಾನ ಮಂತ್ರಿಯವರು ಸಮ್ಮೇಳನದ ಪ್ರತಿನಿಧಿಗಳಿಗೆ ಸತ್ಕಾರದುಪಹಾರವನ್ನು ಏರ್ಪಡಿಸಿದ್ದರು. ಅಲ್ಲಿ ಗಡ್ಡದ ಇಂಗ್ಲಿಷ್ ವಯಸ್ಕನೊಬ್ಬನನ್ನು ನೋಡಿದೆ....ಏನೊ

ಪರಿಚಯ. ನಾನು ಮೊದಲು ನೋಡಿದಾಗ ಆ ಮುಖಕ್ಕೆ ಗಡ್ಡವಿದ್ದಿರಲಿಲ್ಲ ಎಂಬ ಊಹೆ. ಆ ವ್ಯಕ್ತಿಯೂ ನನ್ನನ್ನು ದಿಟ್ಟಿಸಿ ಕೊನೆಗೆ 'Are you Jahagirdar ?' ಎಂದರು. ತಟ್ಟನೆ ಪರಿಚಯ ಸಿಕ್ಕಿತು. ಮೂವತ್ತು ವರ್ಷಗಳ ಮುಂಚೆ ನನ್ನ ಭಾಷಾ ಶಾಸ್ತ್ರದ ಪ್ರಾಧ್ಯಾಪಕ: ಈಗ ಅದೇ ಸಂಸ್ಥೆಗೆ ಹಿರಿಯ; 'ಸರ್' ಎಂಬ ಬಿರುದು ದೊರೆತಿದೆ. 'ಏನು ಮಾಡುತ್ತಿರುವೆ?' ಎಂದು ಕೇಳಿದರು ಪ್ರಾಧ್ಯಾಪಕರು. ಸಾಹಿತಿಗಳ ಸಮ್ಮೇಳನದ ಪ್ರತಿನಿಧಿಯಾಗಿದ್ದು ಭಾಷಾ ಶಾಸ್ತ್ರದ ಸಂಶೋಧಕನಾಗಿದ್ದೇನೆ ಎಂದು ಸುಳ್ಳು ಹೇಳಲೆ? 'ನಾಟಕಗಳನ್ನು ಬರೆಯುತ್ತಿದ್ದೇನೆ' ಎಂದೆ. 'Good' ಎಂದರು. ಅದೇ ಮುವ್ವತ್ತು ವರ್ಷಗಳ ಹಿಂದಿನ ದನಿ. ಸುದೈವದಿಂದ 'ಮುಂಚಿತ ಹೇಳಿದ್ದಕ್ಕೆ Thanks' ಎನ್ನಲಿಲ್ಲ!

ಗಡ್ಡವಿದ್ದ ಆ ಆಂಗ್ಲ ವೃದ್ಧರು ಪ್ರಾಧ್ಯಾಪಕರ ಪ್ರಾಧ್ಯಾಪಕರು. ಯಾಕೆಂದರೆ ಶ್ರೀರಂಗರು ನಾಟಕಕಾರರಾದರೂ ಇವರನ್ನು ಪ್ರೊಫೆಸರ್ ಜಾಗಿರದಾರರೆಂದು ಸ್ಮರಿಸಿಕೊಳ್ಳುವ ಹಳೆಯ ವಿದ್ಯಾರ್ಥಿಗಳ ಬಳಗ ದೊಡ್ಡದು.

ಸರಕಾರೀ ಉದ್ಯೋಗದಲ್ಲೇ ಉಳಿದಿದ್ದರೆ ಶ್ರೀರಂಗರದೀಗ ನಿವೃತ್ತಿ ಹೊಂದುವ ವಯಸ್ಸು. ಹಾಗೆ ಸಿಗಬಹುದಾಗಿದ್ದ ವಿರಾಮ ವೇತನಕ್ಕೂ ಎಳ್ಳುನೀರು ಬಿಟ್ಟು ಅವರೀಗ ನಿವೃತ್ತಿಯೇ ಇಲ್ಲದ ಬರೆದು ಬದುಕುವ ಬರೆಹಗಾರರಾಗಿದ್ದಾರೆ.

ಮೇಲೆ ಉದ್ಧರಿಸಿರುವ ಗ್ರಂಥದಿಂದಲೇ ಇನ್ನೂ ಒಂದು ಉಲ್ಲೇಖ:

'ಇಂದು ಅನೇಕ ಭಾಷೆಗಳಲ್ಲಿ ಪುಸ್ತಕ ಪ್ರಕಟನೆಯು ಒಂದು ಅಂದವಾದ ಕಲೆಯಾಗಿದೆ. ನನ್ನ ಈ ಪುಸ್ತಕ ಕಲಾತ್ಮಕವಾಗಿ ಅಂದವಾಗಿಲ್ಲ. ಸ್ಮೃತಿ ಗ್ರಂಥಗಳ ಗಾತ್ರ ದೊಡ್ಡದಾಗಿರುವಂತೆ ಜನರು ಅಪೇಕ್ಷಿಸುತ್ತಾರೆ. ಈ ನನ್ನ ಗ್ರಂಥ ದೊಡ್ಡದಾಗಿಲ್ಲ. ನನ್ನ ರಂಗಭೂಮಿಯ ಅನುಭವ ಚಿಕ್ಕದೆನ್ನಿಸದಿದ್ದರೂ ಈ ಗ್ರಂಥ ಚಿಕ್ಕದಾಗಿದೆ. ಇದಕ್ಕೆಲ್ಲ ಗ್ರಂಥಕರ್ತನ ಪರಿಸ್ಥಿತಿಯೇ ಕಾರಣ. ನಮ್ಮಲ್ಲಿ ಪ್ರಕಟನೆ ಎಂಬುದು ವ್ಯವಸಾಯವಾಗಿದೆ. ಕಲೆಯಾಗಿಲ್ಲ. ಆ ವ್ಯವಸಾಯದಲ್ಲೂ ಒಂದು ಇಲ್ಲವೆ ಎರಡು ಪ್ರಕಾರಗಳ ಸಾಹಿತ್ಯಕ್ಕೆ ಮಾತ್ರ ಪ್ರವೇಶವಿದೆ. ಮಿಕ್ಕ ಎಲ್ಲ ಸಾಹಿತ್ಯ ಬರೆದವನೇ ಪ್ರಕಟಿಸಬೇಕು, ಇಲ್ಲವೆ ಬರೆಯದೆಯೆ ಸಾಯಬೇಕು....'

ಇವು ಈಗಿನ ಪರಿಸ್ಥಿತಿಯನ್ನು ಕುರಿತ ಮಾತುಗಳು.

ಕೊನೆಯಲ್ಲಿ—

'ಸಾಹಿತಿ ಬದುಕಬೇಕಾದರೆ ಪುಸ್ತಕ ಪ್ರಕಟವಾಗುವುದು ಶಕ್ಯವಿಲ್ಲ; ಪುಸ್ತಕ ಪ್ರಕಟವಾಗುವುದಾದರೆ ಸಾಹಿತಿ ಬದುಕುವುದು ಶಕ್ಯವಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ ಇನ್ನೂ ಆದಷ್ಟೂ ಕಾಲ ಬದುಕಬೇಕೆಂಬ ಹಟ, ಜೊತೆಗೆ ನನ್ನ ಬರವಣಿಗೆ ಪ್ರಕಟಿತವಾಗಬೇಕೆಂದೂ ಹಟ.'

ಮೇಲಿನ ಪೀಠಿಕೆಯೊಡನೆ ಆರಂಭವಾಗಿ 'ಕಿರಿದರೊಳ್ ಪಿರಿದ'ನ್ನು ತುಂಬಿರುವ ಕೃತಿ, ಶ್ರೀರಂಗರ 'ನನ್ನ ನಾಟ್ಯ ನೆನಪುಗಳು.' ೩ ಮೇ, ೧೯೬೭

ತನ್ನನ್ನು ತಾನೇ ಕಂಡ ಜಿಲಾಸ್

ನಾಗರಿಕತೆಯ ಬೆಳವಣಿಗೆಯ ಪ್ರತಿಯೊಂದು ಘಟ್ಟದಲ್ಲೂ ಪ್ರತಿ ಶತಮಾನದಲ್ಲೂ ಹುತಾತ್ಮರಿರಲೇಬೇಕು. ಸಮಾಜದ ರೂಢಮೂಲ ವಿಚಾರಗಳಿಗೆ, ಅಂತಹ ವಿಚಾರಗಳನ್ನು ರೂಪಿಸಿದ ಆಳುವ ವರ್ಗಕ್ಕೆ, ಆಹ್ವಾನ ನೀಡಿದವರೆಲ್ಲರ ಆತ್ಮಾಹುತಿ ಆಗಲೇ ಬೇಕು. ಹಿಂದೆಯೂ ಅಷ್ಟೇ; ಈಗಲೂ ಅಷ್ಟೇ; ಇನ್ನು ಮುಂದೆಯೂ ಅಷ್ಟೇ!

ಹುಟ್ಟನಿಂದಲೂ ಕುರುಡರಾಗಿದ್ದು ದಿನ ಕಳೆದು ಸಾಯುವುದೊಂದು ತೆರ. ಆದರೆ ನಡುವಯಸ್ಸಿನಲ್ಲಿ ದೃಷ್ಟಿಬಂದು ಆವರೆಗಿನ ತನ್ನ ಸಿಹಿ ಕನಸುಗಳೆಲ್ಲ ಮಹಾ ಭ್ರಮೆ ಎಂದು ಮನಗಾಣುವುದಿದೆಯಲ್ಲ? ಅದೊಂದು ಕ್ರೂರ ಸಂಕಟ.

ತಾನು ಅತ್ಯಂತ ಸ್ಫುರದ್ರೂಪಿ ಎಂಬ ಬಗ್ಗೆ ಯಾವ ಸಂದೇಹವನ್ನೂ ತಾಳದೆ ಕನ್ನಡಿಯನ್ನೇ ನೋಡಲು ನಿರಾಕರಿಸಿದ ಮನುಷ್ಯ, ಮುಂದೊಂದು ದಿನ ನಿಲುವುಗನ್ನಡಿಯಲ್ಲಿ ತನ್ನ ಪ್ರತಿಬಿಂಬ ಕಂಡು ಆಕಾಶವೇ ಕಳಚಿಬಿತ್ತೆಂದು ಗೋಳಿಡುವುದು ದಯನೀಯ ಪರಿಸ್ಥಿತಿ.

ನಂಬಿದ 'ದೇವರು' ಕೈಕೊಟ್ಟನೆಂದು ಗರ್ಭಗುಡಿಯಿಂದಲೇ ಮೂರ್ತಿಯನ್ನು ಕೀಳಲೆತ್ನಿಸುವ ಸನ್ನಿವೇಶ ಬಲು ರುದ್ರ.

೦ ೦ ೦

ಹಾಗೆ ಎದೆ ಬಡಿದುಕೊಳ್ಳುತ್ತಿರುವ ಈ ಶತಮಾನದ ಒಬ್ಬ ಹಿರಿಯ ಜೀವ, ಯುಗೊಸ್ಲಾವಿಯಾದ ಮಿಲಾನ್ ಜಿಲಾಸ್.

ಈತನಿಗೆ 'ಕಣ್ಣು' ಬಂದುದು ತಡವಾಗಿ, ನಾಲ್ವತ್ತನೆಯ ವಯಸ್ಸಿನಲ್ಲಿ, ಅಲ್ಲಿಂದ ಈ ಹನ್ನೊಂದು ವರ್ಷಗಳ ಕಾಲ, ತಾನು ಇದೀಗ ಕಂಡಿರುವ ಸತ್ಯದ ಪ್ರತಿಪಾದಕನಾಗಿದ್ದಾನೆ ಈ ಮನುಷ್ಯ.

ಸತ್ಯವಾದರೋ ಮೊದಲಿನಿಂದಲೂ ಇತ್ತು; ತನ್ನ ದುರ್ಗತಿಗಾಗಿ ಮರುಗುತ್ತಿತ್ತು. ಅದನ್ನು ಈ ಮೊದಲೇ ಕಾಣದೆ ಹೋದೆನಲ್ಲ ಎಂದು ಜಿಲಾಸ್‌ಗೆ ಯಾತನೆ. ಈಗ ಶುಚಿರ್ಭೂತನಾದ ಬಳಿಕ, ತಾನು ಕಂಡ ಸತ್ಯವನ್ನು ಲೋಕಕ್ಕೆಲ್ಲ ಸಾರುವ ತವಕ.

ಅಂತಹ ಪ್ರಚಾರದ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ—ಜಿಲಾಸ್ ಜೀವಿಸಿರುವ ಸಮಾಜದಲ್ಲಿಲ್ಲ. ಅದಕ್ಕಾಗಿ ಆತ ಬೆಲೆ ತೆರಬೇಕು—ಶಿಲುಬೆಯನ್ನಪ್ಪಿಕೊಳ್ಳುವ ಬೆಲೆ.

o o o

ಅವನ ಆತ್ಮಕತೆಯ ಮೊದಲ ಸಂಪುಟವಾದ 'ನ್ಯಾಯವಿಲ್ಲದ ನಾಡು' ಆತ ನುಡಿಯುತ್ತಿರುವ ಸ್ವಾತಂತ್ರ್ಯ ಗೀತದ ಮೊದಲ ಹಾಡು.

ಹುಟ್ಟಿ ಬೆಳೆದದ್ದು ಮೊಂಟನಿಗ್ರೋದಲ್ಲಿ, ಅದು ಐದು ಶತಮಾನಗಳ ಕಾಲ ಆಕ್ರಮಣಕಾರರಿಗೆ ತಲೆಬಾಗಲು ನಿರಾಕರಿಸಿ ಸತತ ಹೋರಾಟ ನಡೆಸಿದ ರಕ್ತಭೂಮಿ. ಆ ಜನರದು ಅಪಾಯವನ್ನರಸಿ ಹೋಗುವ ಧೀರತನ. ಮೊಂಟನಿಗ್ರೋ ಕರಿದು ಶಿಲೆಗಳ ಕಲ್ನೆಲ. ದರಿದ್ರ ಕುಗ್ರಾಮಗಳ ಪ್ರದೇಶ. ಕ್ಷಾಮ, ರೋಗ–ರುಜಿನಗಳ ಆವಾಸಸ್ಥಾನ. ಅಲ್ಲಿ ಅಂಬೆಗಾಲಿಟ್ಟ ಮಗು ಧೀರ ಬಂಡಾಯಗಾರನಲ್ಲದೆ ಬೇರೇನು ಆಗುವುದೂ ಅಸಾಧ್ಯವಾದ ಮಾತು.

ಹೆಜ್ಜೆಗಳು ಬಲಗೊಂಡಾಗ ಜಿಲಾಸ್ ಕಮ್ಯೂನಿಸಮನ್ನು ಅಪ್ಪಿಕೊಂಡದ್ದು ಆಗಿನ ವಾತಾವರಣಕ್ಕೆ ಅತ್ಯಂತ ಸಹಜವಾದ ಘಟನೆ.

o o o

ಮನುಷ್ಯನಿಗೆ ಕಮ್ಯೂನಿಸಮಿನ ದೀಕ್ಷೆ, ಕುದುರೆಗೆ ಕಣ್‌ಪಟ್ಟಿ ಕಟ್ಟಿದ ಹಾಗೆ ರೈಲು ಹಳಿಗಳ ಮೇಲೆ ಉಗಿಯಂತ್ರವನ್ನಿಟ್ಟು ಚಾಲನೆಕೊಟ್ಟ ಹಾಗೆ. ಕಲ್ಪಿಸಿಕೊಂಡಿರುವ ಗುರಿಯ ಕಡೆಗೆ ಅದರ ಓಟ ನೇರ, ಅಬಾಧಿತ.

ಭೂಗತ ಬದುಕು ಕಷ್ಟ–ಗಂಡಾಂತರಗಳೆಲ್ಲ ಕ್ರಾಂತಿಯ ಮಹಾ ಪ್ರಣಯದ ಸಾಮಾನ್ಯ ಚೆಲ್ಲಾಟಗಳು. ಸೆರೆಮನೆವಾಸ ಚಿಲ್ಲರೆ ವಿಷಯ.

ವಿದ್ಯಾರ್ಥಿ ದೆಸೆಯಲ್ಲೇ ರಾಜಕೀಯ ಪ್ರಕ್ಷೋಭೆಕಾರನಾಗಿ ಮಾರ್ಪಟ್ಟ ಜಿಲಾಸ್, ಸೆರೆಮನೆಯಲ್ಲಿ ಉಕ್ಕಾಗಿ ಹೊರಬಂದ. ಆಗ ಆತನಿಗೆ ಇಪ್ಪತ್ತೈದು ವರ್ಷ ಪ್ರಾಯ. ಆಗಿನಿಂದ ಟಿಟೋ ಮತ್ತು ಆತ ಪರಮ ಸ್ನೇಹಿತರು. ಮಾರ್ಕ್ಸ್‌ವಾದಿ ತತ್ತ್ವಜ್ಞಾನದ ಆಚಾರ್ಯ ಜಿಲಾಸ್, ಸಂಘಟಕ ಟಿಟೋಗೆ ಪೂರಕ ಶಕ್ತಿಯಾದ.

ಕಮ್ಯೂನಿಸ್ಟರ ಆಗಿನ ಜಗದೇಕ ಮಲ್ಲ ಸ್ಟಾಲಿನ್, ಜಿಲಾಸ್‌ನ ಅಧಿದೇವತೆ.

'ಸ್ಟಾಲಿನ್ನನ ಅತ್ಯಂತ ಸಮೀಪದ ಹಾಗೂ ಅತ್ಯಂತ ಪ್ರೀತಿಯ ಸಂಗಾತಿ ಎನ್ನುವ ಭಾವನೆಗಿಂತ ಹಿರಿದಾದ ಗೌರವವಾಗಲೀ ಸಂತಸವಾಗಲೀ ಬೇರೆಯುಂಟೆ?... ಪ್ರಶಾಂತ ಮನಸ್ಸಾಕ್ಷಿಯೂ ಪರೋಪಕಾರಿ ಹೃದಯವೂ ಇರುವ ರಾಜಕಾರಣಿ ಸ್ಟಾಲಿನ್ನನೊಬ್ಬನೇ...ಸ್ಟಾಲಿನ್ ಮಾನವರಲ್ಲೆಲ್ಲ ಅತ್ಯಂತ ಪರಿಪೂರ್ಣನಾದವನು... ಆತ ಎಲ್ಲವನ್ನೂ ಬಲ್ಲ; ಎಲ್ಲವೂ ಅವನಿಗೆ ಗೋಚರ....'

—ಇದೀಗ ಆ ಅವಧಿಯ ಜಿಲಾಸ್ ವ್ಯಕ್ತಪಡಿಸಿದ ಅಭಿಪ್ರಾಯ.

o o o o

ದ್ವಿತೀಯ ಜಾಗತಿಕ ಮಹಾಯುದ್ಧದ ಅವಧಿಯಲ್ಲಿ ಯುಗೊಸ್ಲಾವಿಯಾದ ಇತಿಹಾಸ ಬದಲಾಯಿತು. ಟಿಟೋ, ಜಿಲಾಸ್ ಮತ್ತು ಸಂಗಡಿಗರು ಯುಗೊಸ್ಲಾವಿಯಾವನ್ನು ಬಂಧಮುಕ್ತಗೊಳಿಸಿದರು. ೧೯ನೆಯ ಶತಮಾನದ ಆರಂಭದಿಂದ ಇಪ್ಪತ್ತೆಂಟು ಸಾರಿ ಬಂಡಾಯವೆದ್ದಿದ್ದ ಯುಗೊಸ್ಲಾವಿಯಾದ ಜನರು ಈ ಸಲ ಸ್ವತಂತ್ರರಾದರು.

ಆದರೆ ಇದು, ಕಮ್ಯೂನಿಸ್ಟ್ ಪಕ್ಷ ದೊರಕಿಸಿಕೊಟ್ಟ ಸ್ವಾತಂತ್ರ್ಯ. ಮಾಸ್ಕೋ ಸಾರ್ವಭೌಮನಿಗೆ ಇವರು ಮಾಂಡಲಿಕರು.

ಯುಗೊಸ್ಲಾವಿಯಾದಲ್ಲಿ, ಸ್ಟಾಲಿನ್ನನೂ ಬೆರಗಾಗುವಂತಹ ನಿಷ್ಠುರ ಸರ್ವಾಧಿಕಾರದ ಸ್ಥಾಪನೆಯಾಯಿತು. ಜಿಲಾಸ್ ತನ್ನ ದೇಶದ ಕಮ್ಯೂನಿಸ್ಟರಿಗೆ ವಿದ್ಯಾಗುರುವಾದ. ಅವನು ಒಪ್ಪಿದ ಕವಿ, ಕಾದಂಬರಿಕಾರ, ನಾಟಕಕಾರರಷ್ಟೇ ಪುರಸ್ಕೃತರಾದರು ; ಉಳಿದವರು ಶಿಲುಬೆಗಳನ್ನರಸಿದರು.

ಮಾಸ್ಕೋ ಮಕ್ಕಾ ಆದರೆ, ಬೆಲ್‌ಗ್ರೇಡ್ ಮದೀನಾ ಎನ್ನಿಸಿಕೊಂಡಿತು.

೦ ೦ ೦ ೦

ಆದರೆ ಚಕ್ರವರ್ತಿಗೆ, ಮಾಂಡಲಿಕ ಟಿಟೋನ ಪ್ರಾಬಲ್ಯ ಸಹ್ಯವಾಗಲಿಲ್ಲ.

'ನನ್ನ ಕಿರುಬೆರಳೆನ್ನುತ್ತವೆ. ಆಗ ಟಿಟೋ ನಿರ್ನಾಮವಾಗುವ, ಆತನ ಪತನವಾಗುವುದು'

....ಎಂದ ಸ್ಟಾಲಿನ್, ಕ್ರುಶ್ಚಾಫ್ ಜತೆ. ಆದರೆ ಸ್ಟಾಲಿನ್ನನ ಅಬ್ಬರ ಹುಸಿಯಾಯಿತು.

ಜಿಲಾಸ್ ವಿಚಾರಪರನಾದುದು, ಸ್ಟಾಲಿನ್ ಆಡಳಿತದ ಬಗೆಗೆ ಚಿಕಿತ್ಸಕ ಬುದ್ಧಿಯಿಂದ ನೋಡತೊಡಗಿದುದು, ಆಗ.

ಕಣ್ಣು ತೆರೆಯತೊಡಗಿದ ಘಳಿಗೆಯಲ್ಲಿ ರಷ್ಯದಲ್ಲಿ ಸಮಾಜವಾದವಿಲ್ಲವೆಂದು ಆತನಿಗೆ ಮನವರಿಕೆಯಾಯಿತು. ಹಾಗೆ ಮೂಡಿದ ಅರಿವಿನ ಬೆಳಕಿನಲ್ಲಿ ಯುಗೊಸ್ಲಾವಿಯಾದ ರಾಜ್ಯ ವ್ಯವಸ್ಥೆಯ ನಿಜರೂಪದ ದರ್ಶನವೂ ಆತನಿಗಾಯಿತು. ಅದರ ಅಂಗವಾದ ತನ್ನ ರೂಪವೂ ಕನ್ನಡಿಯಲ್ಲಿ ಕಂಡಿತು.

ಪರಿಣಾಮ, ಆತನ ಅಮೂಲ್ಯ ಕೃತಿ :

'ದಿ ನ್ಯೂ ಕ್ಲಾಸ್'.

ವರ್ಣರಹಿತ ಸಮಾಜ ಸ್ಥಾಪಿಸಹೊರಟವರದೇ ಒಂದು ವರ್ಗ ರೂಪುಗೊಂಡಿತ್ತು !

೦ ೦ ೦ ೦

ನಾಲ್ಕು ದಶಕ ಬಿಗಿಗೊಳ್ಳುತ್ತ ಬಂದಿದ್ದ ಸ್ಪ್ರಿಂಗ್ ಕಟ್ಟಕಡೆಗೊಮ್ಮೆ ಕಿರ್ರೆಂದು ಹಿಮ್ಮುಖವಾಗಿ ತಿರುಗಿತ್ತು. ಅದು ಸಡಿಲಗೊಂಡು ಕುಪ್ಪಳಿಸಿತು.

ಟಿಟೋ ಸರ್ವಾಧಿಕಾರ ಆ ಸ್ಪ್ರಿಂಗನ್ನು ತುಳಿದು ಮುರಿಯನೋಡಿತು.

ಜಿಲಾಸ್ ಸೆರೆಮನೆ ಸೇರಿದ.

ಅಂದಿನಿಂದ ಜಿಲಾಸ್ ಏಕಾಂಗಿ. ಆದರೂ ಈ ಒಂಟಿ ಮನುಷ್ಯನೊಂದು ಸಂಕೇತ. ಆತನ ದೇಶಕ್ಕೆ ಮಾತ್ರವಲ್ಲ, ಇಡಿಯ ಲೋಕಕ್ಕೇ.

ಯಾವ ಸರ್ಕಾರದ ಸ್ಥಾಪನೆಗಾಗಿ ತನ್ನ ಜೀವನದ ಮುಖ್ಯ ಭಾಗವನ್ನು ಜಿಲಾಸ್ ಸವೆದಿದ್ದನೋ ಆ ಆಳುವ ವರ್ಗವೇ ಅವನನ್ನು ಕಪ್ಪು ಕೋಣೆಯಲ್ಲಿರಿಸಿತ್ತು....ಕಣ್ ಪಟ್ಟಿ ಬಿಚ್ಚಿದ ತಪ್ಪಗಾಗಿ.

ಮುಂದೆ ಲೋಕಾಭಿಪ್ರಾಯದ ಒತ್ತಡ ಜಿಲಾಸನ ಬಿಡುಗಡೆಯನ್ನು ದೊರಕಿಸಿತು.

ಹಿಂದೆ ಕುರುಡ ಜಿಲಾಸ್ ಟಿಟೋಗೆ ಊರುಗೋಲಾಗಿದ್ದ. ಆದರೆ ಈಗ, ಕಣ್ಣು ಕಾಣಿಸತೊಡಗಿದ್ದ ಮನುಷ್ಯ ಸಿಂಹಸ್ವಪ್ನವಾದ.

ಬರೆವಣಿಗೆಯ ಕಾರ್ಯದಲ್ಲಿ ಜಿಲಾಸ್ ಇನ್ನು ನಿರತನಾಗಬಾರದು ಎಂದು ಟಿಟೋ ಸರ್ಕಾರ ಅಪೇಕ್ಷಿಸಿತ್ತು. ಜಿಲಾಸ್‌ನಲ್ಲಿದ್ದುದಾದರೋ ಲೇಖನಿಯ ಆಯುಧವೊಂದೇ. ಒಳಗಿನ ಸಂಕಟವನ್ನು ಹೊರಹೊಮ್ಮಿಸಿ ನೆಮ್ಮದಿ ಪಡೆಯಲು ಬರೆವಣಿಗೆಯೊಂದೇ ಅವನಿಗಿದ್ದ ಮಾರ್ಗ.

ಪರಿಣಾಮ: 'ಸ್ಟಾಲಿನ್ನನೊಡನೆ ಸಂಭಾಷಣೆ' ಎಂಬ ಪುಸ್ತಕ; 'ಮೊಂಟಿನಿಗ್ರೋ' ಎಂಬ ಕಾದಂಬರಿ; ಒಂದು ಕಥಾಸಂಗ್ರಹ.

೦ ೦ ೦ ೦

ಈ ಬರೆಯುವ ಮನುಷ್ಯನನ್ನು ಬಂಧಿಸಬೇಕೆಂದಿತು ಟಿಟೋ ಸರ್ಕಾರ. ಆರೂವರೆ ಗಂಟೆಗಳ ಕಾಲ ನಡೆದ ವಿಚಾರಣೆಯೊಂದು ಪ್ರಹಸನ. ಅದರ ಪರ್ಯವಸಾನ ದಂಡನೆಯಲ್ಲಿ; ಜಿಲಾಸ್‌ಗೆ ದೊರೆತುದು ಒಂಭತ್ತು ವರ್ಷಗಳ ಸೆರೆಮನೆ ವಾಸ.

ಇದೀಗ ಸತ್ಯಶೋಧನೆಯ ಮಹಾ ಪ್ರಣಯದ ಪ್ರತಿಫಲ.

ವಿಚಾರ ಸ್ವಾತಂತ್ರ್ಯದ (ಲೇಖನ ಸ್ವಾತಂತ್ರ್ಯ-ವ್ಯಕ್ತಿ ಸ್ವಾತಂತ್ರ್ಯಗಳ) ಒಂದು ಸಂಕೇತ ಯುಗೊಸ್ಲಾವಿಯದ ಸೆರೆಮನೆಯಲ್ಲೀಗ ಬಂಧಿತವಾಗಿದೆ.

ತನ್ನನ್ನು ತಾನೇ ಕಂಡ ಜಿಲಾಸನ ಚಿಂತನೆ ಮಾತ್ರ ನಾಲ್ಕು ಗೋಡೆಗಳ ನಡುವೆ ನಿರಾತಂಕವಾಗಿ ಸಾಗಿದೆ.

೯ ಸೆಪ್ಟೆಂಬರ್, ೧೯೬೨

ಪ್ರೊ|| ಪುಂಗರ ಬಂಧವಿಮೋಚನೆ

'ಮಹಾಕವಿ' ಮಾವೋ ತ್ಸೆ-ತುಂಗ್ ತನ್ನ ದೇಶದ ಕಲೆ ಸಾಹಿತ್ಯಗಳ ಹಾಗೂ ವಿದ್ವತ್ತಿನ ಉದ್ಧಾರಕ್ಕಾಗಿ ಒಮ್ಮೆ ಅಪೂರ್ವ ಕ್ರಮಗಳನ್ನು ಕೈಗೊಂಡ.

ಚೀನದ ಕಲಾವಿದರನ್ನೂ ಲೇಖಕರನ್ನೂ ಉದ್ದೇಶಿಸಿ ಅವನೆಂದ :

'ನೂರು ಹೂಗಳು ಅರಳಲಿ !'
ವಿದ್ವಜ್ಜನರ ಕಡೆಗೆ ಹೊರಳಿ ಆತನೆಂದ :
'ಅನೇಕಾನೇಕ ವಿಚಾರ ಸರಣಿಗಳ ತಾಕಲಾಟವಾಗಲಿ !'
ಇದನ್ನು ಕೇಳಿ ಜಗತ್ತು ವಿಸ್ಮಯಗೊಂಡಿತು :
ಮಾರ್ಕ್ಸ್‌ವಾದಿ ಆಡುವ ಮಾತೆ ಇದು ?
ಲೋಕದ ಉದಾರವಾದಿಗಳೆಂದರು :
'ಇದೊಂದು ಶುಭಸಂಕೇತ.'

o o o o

ಸೆರೆಮನೆಯೊಳಗಿನ ಕೊಠಡಿ. ಹೆಬ್ಬಾಗಿಲು ಕಿರ್ರೆಂದು ತೆರೆದುಕೊಂಡಿತು. ಕೈದಿಗಳಿಗೆ ಕಾವಲಿನ ಸಶಸ್ತ್ರ ಭಟರೆಂದರು :

'ನಿಮ್ಮನ್ನು ಬಿಡುಗಡೆ ಮಾಡಲಾಗಿದೆ. ನೀವಿನ್ನು ಹೊರಡಬಹುದು.'

ಬಂದಿಗಳಿಗೆ ಅಳುಕು. ಇದು ಕನಸೋ ? ನಿಜವೋ ?

ಕಾವಲು ಭಟರು ಗದರಿದರು :

'ಕೇಳಿಸಲಿಲ್ಲವೇ ? ನಡೀರಿ ಮುಂದಕ್ಕೆ. ಕಿಂಡಿಬಾಗಿಲಿಂದ ಹೊರಹೋಗಿ.'

ನಡೆಯುವುದೇ ಮರೆತುಹೋಗಿತ್ತು ಕೈದಿಗಳಿಗೆ. ಆದರೂ ಅವರ ಕಾಲುಗಳು ಮೆಲ್ಲನೆ ಚಲಿಸಿದುವು. ನಾಲ್ಕು ಹೆಜ್ಜೆ ಹೋದ ಬಳಿಕ ಬೇಗಬೇಗನೆ ಮುಂದು ವರಿದುವು.

o o o o

ಮಾವೋ ಘೋಷಣೆ ಕೇಳಿ ಮೊದಲು ದಂಗಾದ ಜನ, ಚೇತರಿಸಿಕೊಂಡ ಬಳಿಕ, ಮೆಲ್ಲಮೆಲ್ಲನೆ ತುಟಿಗಳನ್ನು ತೆರೆದರು.

ಲೇಖನಿಗಳೂ ಕುಂಚಗಳೂ ತುಸು ಸರಾಗವಾಗಿ ಚಲಿಸಿದುವು. ಗಿಡ ಬಳ್ಳಿ ಗಳಲ್ಲೀ ಮುದುಡಿದ್ದ ನೂರು ಮೊಗ್ಗುಗಳು ನಾಚುತ್ತ ನಾಚುತ್ತ ಅರಳಿದುವು.

ಮೊದಲು ಅಳುಕುತ್ತ, ಬಳಿಕ ತುಸು ಧೈರ್ಯವಾಗಿ, ವಿವಿಧ ವಿಚಾರ ಸರಣಿಗಳು ತಾಕಲಾಡಿದುವು.

ಮುಂದೆ ಏನಾಯಿತು ?

೦ ೦ ೦ ೦

ಕಳೆದುದು ಆರೇ ತಿಂಗಳು.

ಮಿಾನುಗಳೆಲ್ಲ ಕಾಣಿಸಿದೊಡನೆಯೇ ಬೆಸ್ತ ಬಲೆ ಬೀಸಿದ. ಎಂಥೆಂಥ 'ಪ್ರತಿಗಾಮಿ' ಮಿಾನುಗಳು ಮಾವೋಗೆ ದೊರೆತುವು !

ಪುಷ್ಪೋದ್ಯಾನದ ಕಡೆಗೆ ತೋಟಗಾರ ಧಾವಿಸಿದ. ಅರಳಿದ ಹೂಗಳನ್ನೆಲ್ಲ ಕಿತ್ತು ಬುಟ್ಟಿ ತುಂಬಿಸಿದ.

ಗಿಡ ಬಳ್ಳಿಗಳು ಬಾಡಿದುವು. ಅರಳದೇ ಇದ್ದ ಮೊಗ್ಗುಗಳು ಮುರುಟಿಕೊಂಡುವು. ವಿವಿಧ ವಿಚಾರ ಸರಣಿಗಳು ಆವಿಯಾಗಿ ಹೋದುವು.

'ಚೀನವೀಗ ಶುಚಿರ್ಭೂತವಾಗಿದೆ' ಎಂದು ಸಾರಿತು, ಚೀನೀ ಕಮ್ಯೂನಿಸ್ಟ್ ಪಕ್ಷ.

ಬಿಡುಗಡೆ ಹೊಂದಿದ್ದ ಬಂದಿಗಳ ಬೆನ್ನ ಹಿಂದೆಯೇ ಇದ್ದುವು, ಸಶಸ್ತ್ರ ನೆರಳುಗಳು. ಆಯಕಟ್ಟಿನ ಸ್ಥಳದಲ್ಲಿ, ಆ ನೆರಳುಗಳೆಂದುವು :

'ಕೈಗಳನ್ನು ಮೇಲಕ್ಕೆತ್ತಿ !'

೦ ೦ ೦

ಒಂದು ಕಾಲದಲ್ಲಿ ಚೀನಾ ವೈಚಾರಿಕ ಹಾಗೂ ತಾರ್ಕಿಕ ಬೆಳವಣಿಗೆಗೆ ಹೆಸರಾಗಿದ್ದ ದೇಶ.

ಅಲ್ಲಿ ಕಳೆದ ಒಂದು ದಶಕದಲ್ಲಿ, ವಿಚಾರವಂತರನ್ನೆಲ್ಲ ಕಮ್ಯೂನಿಸಮ್ಮಿನ ಎಣ್ಣೆಯ ಗಾಣಕ್ಕೆ ಮಾವೋ ತ್ಸೆ-ತುಂಗ್ ಹೂಡಿದ ರೀತಿ ಅದ್ಭುತವಾದದ್ದು.

ಅದೇನೆಂದು ತಿಳಿಯಲು ಮುಂದಿನ ಈ ಒಂದು ಉದಾಹರಣೆ ಸಾಕು.

೦ ೦ ೦

'ನಾನು ಕೂಡಾ ಬಂಧಮುಕ್ತನಾಗಿದ್ದೇನೆ ಎಂದು ಈಗ ನನಗೆ ಭಾಸವಾಗುತ್ತಿದೆ. ಮಾರ್ಕ್ಸ್‌ವಾದ–ಲೆನಿನ್‌ವಾದದ ಮತ್ತು ಮಾವೋ ತ್ಸೆ–ತುಂಗರ ವಿಚಾರ ಹಾಗೂ ನವಸಮಾಜದ ವಿವಿಧ ಅಂಗಗಳಲ್ಲಿನ ಆಚರಣೆಗಳು ನನ್ನ ವಿಚಾರಸರಣಿಯನ್ನು ಬದಲಾಯಿಸಿವೆ. ಇವು ಪ್ರತಿಗಾಮಿತ್ವದಿಂದ ಕ್ರಾಂತಿಯ ಕಡೆಗೆ, ವ್ಯಕ್ತಿಗಳ ಸೇವೆಯಿಂದ ಜನಸಮುದಾಯದ ಸೇವೆಗೆ, ಅಸ್ಪಷ್ಟ ವಿಷಯಗಳಿಂದ ನಿರ್ದಿಷ್ಟ ವಿಷಯಗಳಿಗೆ, ಭ್ರಮೆಯಿಂದ ವಾಸ್ತವತೆಗೆ ನನ್ನನ್ನು ಹೊರಳಿಸಿವೆ.'

—ಈ ಉಲ್ಲೇಖ, ಒಂದು 'ತಪ್ಪೊಪ್ಪಿಗೆ'ಯಿಂದ. ಅದನ್ನು ಬರೆದವರು ಪ್ರೊ|| ಫುಂಗ್ ಯು ಲಾನ್.

ಭಾರತದಲ್ಲಿ ತತ್ತ್ವಜ್ಞಾನಿ ರಾಧಾಕೃಷ್ಣನ್ನರಿಗಿರುವ ಗೌರವ, ಚೀನದಲ್ಲಿ ಅವರಿಗೆ ದೊರೆಯುತ್ತಿತ್ತು. ಚೀನೀ ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದೊಡನೆಯೇ ಅವರೆಗೆ ಬರೆದುದನ್ನೆಲ್ಲ ಆತ ಅಲ್ಲಗಳೆಯಬೇಕೆಂದು ಆಜ್ಞಾಪಿಸಲಾಯಿತು.

ಹಾಗೆ ಮಾಡದೇ ಇದ್ದರೆ? ಬೆದರಿಕೆ ಯಾವ ಸ್ವರೂಪದ್ದು?

ಇತರ ಹಲವು ಸಹಸ್ರ ಜನರಿಗಾದಂತೆ ಅವರಿಗೂ ಸೆರೆಮನೆ, ಏಕಾಂತವಾಸ, ಸರಕಾರ ಏರ್ಪಡಿಸುವ ಸಾಮಾಜಿಕ ಬಹಿಷ್ಕಾರ.

ಮಾನಸಿಕ ಯಾತನೆಯ ಹಲವು ಹಗಲಿರುಳುಗಳನ್ನು ಕಳೆದು ಪ್ರೊ॥ ಫುಂಗ್ ಯು ಲಾನ್ ಮೇಲೆ ಉಲ್ಲೇಖಿಸಿದ ಬಹಿರಂಗ ಹೇಳಿಕೆಯೊಂದನ್ನಿತ್ತರು.

o o o

ಅದರ ಕೊನೆಯಲ್ಲಿ ಅವರು ಹೀಗೆಂದರು :

'....ನವಸಮಾಜದಲ್ಲಿ ನಾನು ತತ್ತ್ವಜ್ಞಾನದ ಕಾರ್ಯಕರ್ತನಾಗುವುದಕ್ಕೆ ಮುನ್ನ, ಮತ್ತೊಮ್ಮೆ ತೀರಾ ಮೊದಲಿನಿಂದಲೇ ನನ್ನ ಅಧ್ಯಯನವನ್ನು ನಡೆಸಬೇಕಾಗಿದೆ ಎಂಬುದು, ಈಗ ನನಗೆ ಮನವರಿಕೆಯಾಗಿದೆ. ಮುಂಚೆ, ತಾವು ಅಧ್ಯಕ್ಷ ಮಾವೋರ ಶಿಷ್ಯರಾಗಲು ಬಯಸುವುದಾಗಿ ಯಾರಾದರೂ ಹೇಳಿದಾಗ, ಆ ಮಾತು ನನಗೆ ಅತಿಶಯೋಕ್ತಿಯದಾಗಿ ಕಾಣುತ್ತಿತ್ತು. ಆದರೆ ಈಗ, ಅಧ್ಯಕ್ಷ ಮಾವೋರ ಶಿಷ್ಯನಾಗುವ ಯೋಗ್ಯತೆ ಕೂಡಾ ನನಗಿಲ್ಲ ವೆಂದೂ ಅಂಥ ಶಿಷ್ಯನಾಗುವ ಯೋಗ್ಯತೆ ಗಳಿಸಲು ನಾನು ಬಹಳ ಪ್ರಯತ್ನ ಪಡಬೇಕಾಗಿದೆಯೆಂದೂ ನನಗೆ ಅನ್ನಿಸುತ್ತದೆ.'

o o o

ಇದು ಪ್ರೊ॥ ಫುಂಗ್ ಯು ಲಾನ್ ಮಾಡಿಕೊಂಡ ಬೌದ್ಧಿಕ 'ಹರಕಿರಿ'?

ಆಧುನಿಕ ಚೀನೀ ಇಂದ್ರಜಾಲದ ಫಲವಾಗಿ, ಫುಂಗ್ ವಾಸ್ತವವಾಗಿ ಸತ್ತಿದ್ದರೂ ಜೀವಂತವಿರುವಂತೆ ಕಾಣಿಸುತ್ತಿದ್ದಾರೆ.

ಹೆಬ್ಬೆರಳು? ಗುರುದಕ್ಷಿಣೆಯಾಗಿ ಹೆಬ್ಬೆರಳನ್ನೇ ಕತ್ತರಿಸಿ ಕೊಡಬೇಕಾದೀತೆಂದೆ?

ಚೀನದಲ್ಲಿ ಮಿದುಳು ಹೃದಯಗಳೆರಡನ್ನೂ ಕಿತ್ತು ಪರಮಗುರುವಿನ ಪದತಲಕ್ಕೆ ಒಪ್ಪಿಸಬೇಕು. ಹಾಗೆ ಒಪ್ಪಿಸಿದಾಗಲೇ ತನ್ನ ಬಂಧವಿಮೋಚನೆಯಾಯ್ತು ಎಂದು ಶಿಷ್ಯನಿಗೆ ಭಾಸವಾಗುತ್ತದೆ!

೨೫ ನವೆಂಬರ್, ೧೯೬೨

ಗುಲವಾಡಿ ಕೃತ 'ಇಂದಿರಾಬಾಯಿ'

INDIRA BAI OR THE TRIUMPH OF TRUTH AND VIRTUE.

A Novel in Kanarese.

—ಇದು ಮಂಗಳೂರಿನ ಬಾಸೆಲ್ ಮಿಶನ್ ಛಾಪಾಖಾನೆಯಲ್ಲಿ ೧೯೯೯ ರಲ್ಲಿ ಅಚ್ಚಾದ ಒಂದು ಕನ್ನಡ ಕಾದಂಬರಿಯ ಮುಖಪುಟದಿಂದ :

ಇಂಗ್ಲಿಷಿನಲ್ಲಿರುವ ಆ ಶೀರ್ಷಿಕೆಯ ಕೆಳಗೆ :

ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯವು.

(ಗುಲವಾಡಿ ವೆಂಕಟರಾಯನಿಂದ ರಚಿತವಾದುದು.)

ಅಷ್ಟಾದ ಬಳಿಕ ಪದ್ಯದ ಚರಣಗಳು :

ಗಿರಿದುರ್ಗಂ ವನದುರ್ಗಂ
ಜಲದುರ್ಗಂ ಯಂತ್ರ ತಂತ್ರಬಲಂ ಕಾಯ್ವವೇ ? |
ನಿರುತಂ ಕಾಯ್ವುದು ಸತ್ಯಂ
ಶರಣಂ ಸತ್ಯಂ ಶರಣಂ ಸತ್ಯಂ ನಿಜಮಿದು ತನಯಾ ||

ಇನ್ನೂ ಒಂದು :

ಪೊಡೆಯೊಳ್ತುಂಬಿರೆ ಪಂಕ ಮೇಲೆ
ತೊಳೆಯಲ್ತಾಂ ಶುದ್ಧಮಂ ಮಾಳ್ಪನೇ ?
ಕಡುಪಾಪಂ ಜಲಮಿಾಯಲಾತ ಶುಚಿಯೇ ?
ಕಾಕಾಳಿಗಳ್ ಮಿಾಯವೇ ?

ಗುಡಪಾನಂಗಳೊಳಿರ್ದ ಬೇವಿನ ಫಲಂ
ಸ್ವಾದವುದೇ ? ಬಾಹ್ಯದೊಳ್
ಮಡಿಯೇ ನಿರ್ಮಲ ಚಿತ್ತವೈ ಹರಹರಾ
ಶ್ರೀ ಚೆನ್ನಸೋಮೇಶ್ವರಾ ||

○ ○ ○

'ಇಂದಿರಾಬಾಯಿ' ಮೊದಲು ಅಚ್ಚಾಗಿ ಅರುವತ್ತ ಮೂರು ವರ್ಷಗಳು ಸಂದ ಬಳಿಕ ಈಗ ಮತ್ತೊಮ್ಮೆ ಮುದ್ರಣಗೊಂಡಿದೆ. ಕನ್ನಡದ ಎರಡನೆಯ ಸ್ವತಂತ್ರ ಕಾದಂಬರಿಯಾದ 'ವಾಗ್ದೇವಿ'ಯನ್ನು (ಕರ್ತೃ: ಬೋಳಾರ ಬಾಬುರಾವ್; ಪ್ರಕಟಣೆ: ೧೯೦೫) ಪುನಃ ಬೆಳಕಿಗೆ ತಂದ ಮಂಗಳೂರಿನ ಕನ್ನಡ ಪ್ರಪಂಚ ಪ್ರಕಾಶನದ ಬಿ. ಶಂಕರಭಟ್ಟರೇ 'ಇಂದಿರಾಬಾಯಿ'ಯನ್ನೂ ಪ್ರಕಟಿಸಿದ್ದಾರೆ.

ಈ ಕೃತಿ ಕಳೆದ ಶತಮಾನದ ಕೊನೆಯಲ್ಲಿ ಪ್ರಕಟವಾದ ಕನ್ನಡದ ಪ್ರಥಮ ಕಾದಂಬರಿ ಎಂಬುದಿಷ್ಟೇ ಇದರ ಹಿರಿಮೆಯಲ್ಲ. ಭಾಷೆ, ಶೈಲಿ, ಕಥನ ಕಲೆಯ ಸ್ವಾರಸ್ಯ, ಪ್ರತಿಪಾದಿತ ವಿಚಾರಗಳ ಮಾನವೀಯತೆ–ಉದಾತ್ತತೆ ಈ ಎಲ್ಲ ದೃಷ್ಟಿಗಳಿಂದಲೂ ಇದು ಹಿರಿದು. ಮರಾಠಿಯ ಮೊದಲ ಕಾದಂಬರಿಯಾದ 'ಪಣ್ ಲಕ್ಷ್ಯಾಂತ್ ಕೋಣ್ ಘೇತೊ'ಗೆ (ಕರ್ತೃ: ಹರಿನಾರಾಯಣ ಆಪ್ಟೆ) ಆ ಪ್ರಾಂತದಲ್ಲಿ ಯಾವ ಗೌರವ ಸಲ್ಲುತ್ತಿದೆಯೋ ಅಂಥದೇ ಗೌರವಕ್ಕೆ ನಮ್ಮ ನಾಡಿನಲ್ಲಿ 'ಇಂದಿರಾಬಾಯಿ' ಅರ್ಹವಾಗಿದೆ.

o o o

ಪಂಡಿತವಕ್ಕಿ (ರಾಷ್ಟ್ರ ಕವಿ) ಗೋವಿಂದ ಪೈಯವರು ಹೇಳಿರುವುದಿದು :

'ಇದೊಂದು ಕಾದಂಬರಿ (ಇಂದಿರಾಬಾಯಿ) ನಾನು ಬಲ್ಲಷ್ಟರಮಟ್ಟಿಗೆ ಇಡಿಯ ಕನ್ನಡ ನಾಡಿನಲ್ಲಿ ಮೊತ್ತಮೊದಲನೆಯ ಕಾದಂಬರಿ'....

'ಇದು ರಚಿತವಾಗಿ (೧೮೯೯) ಇಂದಿಗೆ (೧೨–೭–೬೧) ೬೨ ವರ್ಷವಾಯಿತು. ಆ ಕಾಲವೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬ್ರಾಹ್ಮಣರ ಸಮಾಜವು ಆಗ್ಗೆ ಮುಗಿಯುತ್ತ ಬರುತ್ತಲಿದ್ದ ಅಂದಿನ ಪೂರ್ವಾಚಾರ ಯುಗದಿಂದ ಇಂದಿನ ಆಂಗ್ಲ ಸಂಸ್ಕೃತಿಯ ಹೊಸ ಯುಗದಲ್ಲಿ ಪ್ರವೇಶಿಸಲಿಕ್ಕೆ ಕಾಲೆತ್ತುತ್ತಿದ್ದ ಆಂದೋಲನದ ಕಾಲ. ಅದರ ಫಲವಾಗಿ ಆ ಗಣ್ಯ ಸಮಾಜದ ಅವಸ್ಥೆಯಲ್ಲಿ ಯದೃಚ್ಛಯಾ ಆಗುತ್ತಲಿದ್ದ ಪರಿವರ್ತನೆಗಳ ವಿವಿಧ ದೃಶ್ಯಗಳನ್ನು ಒಂದರ ಹಿಂದೆ ಒಂದನ್ನಂತೆ ಇದರ ಲೇಖಕರು ತಮ್ಮ ದೃಷ್ಟಿ ವಿಶೇಷಕ್ಕೆ ತೋರಿಬಂದಂತೆ ಇದರಲ್ಲಿ ನಿರೂಪಿಸಿರುತ್ತಾರೆ. ಅವನ್ನು ಓದಿಯೇ ತಿಳಕೊಳ್ಳಬೇಕು.'

ವಸ್ತುವಿಗಿರುವಷ್ಟೇ ಅದನ್ನು ಬಳಸಿಕೊಂಡಿರುವ ಗುಲವಾಡಿ ವೆಂಕಟರಾಯರ ದೃಷ್ಟಿವಿಶೇಷಕ್ಕೂ ಇಲ್ಲಿ ಮಹತ್ವವಿದೆ. ಆ ದೃಷ್ಟಿವಿಶೇಷ ಸಮಾಜದ ಪ್ರತಿಷ್ಠಿತ ವ್ಯಕ್ತಿಯಾಗಿ ವೆಂಕಟರಾಯರು ಕೈಗೊಂಡಿದ್ದ ಅನೇಕ ಸಾರ್ವಜನಿಕ ಚಟುವಟಿಕೆಗಳ ಫಲವಾಗಿ ದೊರೆತದ್ದು.

o o o

ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ನದೀ ತೀರದಲ್ಲಿ ಗುಲವಾಡಿಯಲ್ಲಿ ೧೮೪೪ ರಲ್ಲಿ ವೆಂಕಟರಾಯರು ಜನ್ಮವೆತ್ತಿದರು. (೧೯೧೩ ರಲ್ಲಿ ಮಡಿಕೇರಿಯಲ್ಲಿ ನಿಧನ

ಹೊಂದಿದರು.) ಇವರು ಈ ನಾಡಿನ ಕಳೆದ ಶತಮಾನದ ಕೆಲವೇ ಪದವೀಧರರಲ್ಲಿ ಒಬ್ಬರು. ಹೃಷ್ಟಪುಷ್ಟ ದೇಹ, ಎತ್ತರದ ನಿಲುವು, ಗಂಭೀರ ಗಲ್ಲಮೀಸೆಗಳು.

ವೆಂಕಟರಾಯರು ಉದ್ಯೋಗಕ್ಕಾಗಿ ಪೋಲೀಸ್ ಖಾತೆಯನ್ನು ಆರಿಸಿಕೊಂಡರು.

ಪೋಲೀಸ್ ಇನ್ಸ್‌ಪೆಕ್ಟರ್ ಗುಲವಾಡಿಯವರು ನಿವೃತ್ತರಾದ ಸುಮಾರಿಗೇ 'ಇಂದಿರಾಬಾಯಿ' ಸಿದ್ಧವಾಗಿತ್ತು. (೨೬೦ ಪುಟಗಳ ಕೃತಿ) ಅನಂತರ ಅವರು 'ಭಾಗೀರಥಿ' ಮತ್ತು 'ಸೀಮಂತಿನಿ' ಎಂಬ ಕಾದಂಬರಿಗಳನ್ನು ಬರೆದರು. 'ಲಾಡುಪ್ರಿಯಾಚಾರ್ಯ' ಮತ್ತು 'ವೇಣಮ್ಮ ನಾಗಮ್ಮರ ಸಂವಾದ' ಎಂಬ ಅವರ ಲಘುಬರೆಹಗಳೂ ಪ್ರಕಟವಾದುವು. ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಆಗಿನ ಕೆಲ ವೃತ್ತಪತ್ರಿಕೆಗಳಲ್ಲಿ ಅವರ ಬೇರೆ ಬರೆವಣಿಗೆಗಳೂ ಅಚ್ಚಾದವು.

ಮುದ್ರಣದ ಕೃತಿಗಳು ಒತ್ತಟ್ಟಿಗೆ, ಆಂಗ್ಲ ಸಾಹಿತ್ಯದ ಪ್ರಭಾವಕ್ಕೊಳಗಾದ 'ಇಂದಿರಾಬಾಯಿ' ಮತ್ತಿತರ ಕೃತಿಗಳು ಇನ್ನೊತ್ತಟ್ಟಿಗೆ—ಹೀಗೆ ಆ ಕಡಲತೀರದ ಸಾಂಸ್ಕೃತಿಕ ಕ್ಷೇತ್ರ ಈ ಶತಮಾನದ ಮೊದಲ ದಶಕದಲ್ಲಿ ಲವಲವಿಕೆಯಿಂದ ತುಂಬಿತು.

'ಇಂದಿರಾಬಾಯಿ' ಸಾರ್ವಜನಿಕ ಆಸಕ್ತಿಯನ್ನು ಕೆರಳಿಸಿತೆನ್ನುವುದಕ್ಕೆ, ಕನ್ನಡ ಜಿಲ್ಲೆಯ ಆಗಿನ ಆಂಗ್ಲ ಕಲೆಕ್ಟರ್ ಕೌಚ್‌ಮನ್ ಆ ಕಾದಂಬರಿಯನ್ನು ಇಂಗ್ಲಿಷಿಗೆ ಭಾಷಾಂತರಿಸಿ ಪ್ರಕಟಿಸಿದನೆನ್ನುವುದೂ ಒಂದು ಪುರಾವೆಯಾಗಿದೆ.

o o o

ಕೌತುಕದ ಸಂಗತಿಯೆಂದರೆ ಮುಂದಿನ ಎರಡು ದಶಕಗಳಲ್ಲಿ 'ಇಂದಿರಾಬಾಯಿ'ಯ ಕನ್ನಡ ಪ್ರತಿಗಳೆಲ್ಲ ಕಣ್ಮರೆಯಾದವು. ಕೌಚ್‌ಮನ್ ದೊರೆ ಮಾಡಿದ ಆಂಗ್ಲ ಭಾಷಾಂತರವೊಂದೇ ಉಳಿಯಿತು.

ಅದನ್ನೋದಿದ ಶಿವರಾಮ ಕಾರಂತರು, ಕೆಲ ವರ್ಷಗಳ ಹಿಂದೆ, ಕನ್ನಡದ ಆದ್ಯ ಕಾದಂಬರಿಕಾರನ ಬಗೆಗೆ ಒಂದು ಲೇಖನವನ್ನು ಬರೆದರು. ಅದನ್ನೋದಿದ ಕವಿ ಕಾವ್ಯ ಪಕ್ಷಪಾತಿ ಬಿ. ಶಂಕರ ಭಟ್ಟರು ಮೂಲ ಕನ್ನಡ ಪ್ರತಿಯನ್ನು ಪತ್ತೆಹಚ್ಚಲು ನಿರ್ಧರಿಸಿದರು.

ಒಮ್ಮೆ ಮಂಜೇಶ್ವರಕ್ಕೆ ಗೋವಿಂದ ಪೈಯವರಲ್ಲಿಗೆ ಹೋಗಿದ್ದಾಗ, 'ಇಂದಿರಾಬಾಯಿ'ಯನ್ನು ಕುರಿತು ಶಂಕರ ಭಟ್ಟರು ಪ್ರಸ್ತಾಪಿಸಿದರು.

'ಅದರ ಒಂದು ಪ್ರತಿ ನನ್ನ ಸಂಗ್ರಹದಲ್ಲೂ ಇತ್ತು. ನಮ್ಮ ಅಜ್ಜ ನರಸಯ್ಯ ಶ್ಯಾನುಭಾಗರಿಗೆ ಗುಲ್ವಾಡಿಯವರೇ ಕೊಟ್ಟ ಪ್ರತಿ ಅದು,' ಎಂದರು ಪೈಯವರು.

ಮಾತುಕತೆಯನ್ನು ಕೇಳುತ್ತ ಅಲ್ಲೇ ಕುಳಿತಿದ್ದ ಗೋವಿಂದ ಪೈಯವರ ಅನುಜ ಸುಬ್ರಾಯ ಪೈಯವರು, 'ಅದು ನನ್ನ ಬಳಿ ಇದೆ,' ಎಂದರು.

'ನೀವು ಆ ಪ್ರತಿಯನ್ನು ಕೊಡುವುದಾದರೆ ನಾನು ಅದನ್ನು ಅಚ್ಚುಹಾಕಿಸುತ್ತೇನೆ,' ಎಂದರು ಭಟ್ಟರು.

ಅವರು ಸಂತೋಷದಿಂದ ಕೊಟ್ಟರು.

ಪರಿಣಾಮ : ಪುನಃ ಮುದ್ರಣಗೊಂಡು ಕನ್ನಡಿಗರಿಗೆ ಈಗ ದೊರೆತಿರುವ 'ಇಂದಿರಾಬಾಯಿ.'

○ ○ ○

ಆರೇಳು ದಶಕಗಳಿಗೆ ಹಿಂದಿನ ಸಾಮಾಜಿಕ ಸ್ಥಿತಿಗಳ ಚಿತ್ರಣವೆಂದು, ಅಪೂರ್ವ ಕಲಾಕೃತಿಯೆಂದು, ಕನ್ನಡದ ಮೊದಲ ಸ್ವತಂತ್ರ ಕಾದಂಬರಿಯೆಂದು, 'ಇಂದಿರಾಬಾಯಿ' ಸಂಗ್ರಾಹ್ಯವೆನಿಸಿದೆ. ಅಂತಹ ಶ್ರೇಷ್ಠ ಕೃತಿಯ ಕರ್ತೃವೆಂದು ಗುಲವಾಡಿ ವೆಂಕಟರಾಯರು ಸ್ಮರಣೀಯರೆನಿಸಿದ್ದಾರೆ.

೧೩ ಜನವರಿ, ೧೯೬೩

ಆಸ್ಥಾನ ಕವಿಗೆ ಅರ್ಧಚಂದ್ರ

ಸೋವಿಯತ್ ಲೇಖಕರ ತಂಡವೊಂದು ಭಾರತದಲ್ಲಿ ಪ್ರವಾಸ ಕೈಗೊಂಡಿದೆ. ಅವರಿಗೆ ಸುಸ್ವಾಗತ.

ಈ ಸೌಹಾರ್ದ ನಿಯೋಗದ ಸದಸ್ಯರ ಹೆಸರುಗಳ ಪಟ್ಟಿಯಲ್ಲಿ ಯೆವ್ತುಶೆಂಕೋ ಎಂಬ ಒಂದು ಹೆಸರಿಲ್ಲ. ಇರಬಹುದಾಗಿತ್ತು, ಇಲ್ಲ.

* * *

ಮೂರು ವರ್ಷಗಳಿಗೆ ಹಿಂದೆ ಎವ್‌ಜಿನ್ ಯೆವ್ತುಶೆಂಕೋ ಎಂಬ ಯುವಕ ಪ್ರಖ್ಯಾತನಾಗಿರಲಿಲ್ಲ. ಆತನನ್ನು ಕವಿಯೆಂದು ಸೋವಿಯೆತ್ ರಷ್ಯ ಕೊಂಡಾಡುತ್ತಲೂ ಇರಲಿಲ್ಲ.

ಆದರೂ ಕೆಲವೇ ಮಾಸಗಳ ಅವಧಿಯಲ್ಲಿ ಯೆವ್ತುಶೆಂಕೋ ಕೃತಿಗಳು ಆ ರಾಷ್ಟ್ರದಲ್ಲಿ ಮನೆ ಮಾತಾದವು. ರಾಜಕೀಯ ವೃತ್ತ ಪತ್ರಿಕೆಗಳೂ ಸಾಂಸ್ಕೃತಿಕ ನಿಯತಕಾಲಿಕಗಳೂ ಆತನ ಕವಿತೆಗಳನ್ನು ಪ್ರಕಟಿಸಿದವು.

ಇದ್ದಕ್ಕಿದ್ದಂತೆ ರಷ್ಯದ ಸಾಹಿತ್ಯಾಕಾಶದಲ್ಲಿ ಯೆವ್ತುಶೆಂಕೋ ಪ್ರಕಾಶಮಾನ ತಾರೆಯಾದ. ಸೋವಿಯೆತ್ ನಾಯಕ ಖ್ರುಶ್ಚೋವ್‌ಗೆ ಅತಿ ಪ್ರೀತಿಪಾತ್ರನಾದ.

* * *

ಯಾಕೆ ? ಕಾರಣ ಏನು ?

ಯೆವ್ತುಶೆಂಕೋನ ಕವಿತೆಗಳಲ್ಲಿ ಖ್ರುಶ್ಚೋವ್ ರೀತಿ ನೀತಿಗಳು ಪ್ರತಿಧ್ವನಿತವಾಗಿದ್ದವು. ಸ್ಟಾಲಿನ್ನನ ಕಾಲದ ವ್ಯಕ್ತಿ ಪೂಜೆಯ ಖಂಡನೆ ಅವನ ಕೃತಿಗಳ ಮುಖ್ಯ ವಸ್ತುವಾಗಿತ್ತು. ಖ್ರುಶ್ಚೋವ್ ಆರಂಭಿಸಿದ ಹೊಸ ರಾಜಕೀಯ ನೀತಿಯ ಪ್ರತಿಪಾದನೆ ಆ ಕವನಗಳಲ್ಲಿತ್ತು.

ಸ್ಟಾಲಿನ್ ಯುಗದ ಕೂದಲು ನೆರೆತ ಕವಿಗಳಿಗಿಂತಲೂ ಯುವಕ ಯೆವ್ತುಶೆಂಕೋ ಸುಲಭವಾಗಿ, ರಷ್ಯದ ಆಸ್ಥಾನ ಕವಿಯಾದ.

ರಾಜಕೀಯ ನೀತಿ ಪ್ರತಿಪಾದನೆಯ ಜತೆಗೆ ಸಮಾಜದ ವಿಮರ್ಶೆಯೂ ಯೆವ್ತುಶೆಂಕೋನ ಕೃತಿಗಳಲ್ಲಿದೆ. ಮಾನವನ ಬಗೆಗೆ ಮಾನವ ತೋರುವ ಕ್ರೌರ್ಯವನ್ನು

ಕಂಡರೆ ಈತನಿಗೆ ಆಗದು. ಮೋಸ-ವಂಚನೆಗಳಿಗೆ ಇವನು ವೈರಿ. ನೌಕರಶಾಹಿಯ ವಿರೋಧಿ.

ಆತನ ಕವಿತೆಗಳಲ್ಲಿರುವ ಈ ಅಂಶಗಳು ಕೆಲವೇ ದಿನಗಳಲ್ಲಿ ಯೆವ್ತುಶೆಂಕೋನನ್ನು ಜನಪ್ರಿಯನನ್ನಾಗಿ ಮಾಡಿದುವು. ಆತ ಸ್ವವಿರಚಿತ ಗೀತಗಳನ್ನು ಹಾಡ ಬಯಸಿದಾಗ ಜನ ಕಿಕ್ಕಿರಿದು ನೆರೆದರು. ಅಚ್ಚಾದ ಅವನ ಕವಿತೆಗಳನ್ನು ಉತ್ಸುಕತೆಯಿಂದ ಓದಿದರು.

ಸೋವಿಯೆತ್ ರಷ್ಯದಲ್ಲಿ ಅವನ ಕವನ ಸಂಕಲನ ೧,೦೦,೦೦೦ ಪ್ರತಿಗಳಷ್ಟು ಮಾರಾಟವಾಯಿತು.

* * *

ಉಕ್ಕಿನ ಪರದೆಗಳು ಎಷ್ಟೇ ಬಲವಾಗಿದ್ದರೂ ಇಂತಹ ಸಂಭವಗಳು ಬಾಹ್ಯ ಜಗತ್ತಿಗೆ ತಿಳಿಯದೆ ಹೋಗುವುದಿಲ್ಲ.

ಹೊಸದಾಗಿ ಉದಯಿಸಿದ್ದ ಕವಿಯ ಕಿರಣಗಳು ಲೋಕದ ಹತ್ತು ಮೂಲೆಗಳಿಗೆ ಹರಡಿದವು.

'ಡಾ|| ಝಿವಾಗೋ' ಕರ್ತೃ ಪಾಸ್ಟರ್‌ನಾಕ್, ಖ್ರುಶ್ಚೋವ್ ಯುಗದಲ್ಲಿ ಮೊದಲು ತೇಜೋವಧೆಗೊಳಗಾಗಿ ಬಳಿಕ ನಿಧನ ಹೊಂದಿದನಷ್ಟೆ. ಅದರ ಅನಂತರ ಯೆವ್ತುಶೆಂಕೋನ ರಂಗ ಪ್ರವೇಶವೇ ಪ್ರೇಕ್ಷಕ ಜಗತ್ತಿನ ದೃಷ್ಟಿಯಲ್ಲಿ ಪ್ರಮುಖ ಸಾಹಿತ್ಯ ಘಟನೆಯಾಯಿತು.

'ಯೆವ್ತುಶೆಂಕೋನ ಆಯ್ದ ಕವಿತೆಗಳು' ಎಂಬ ಸಂಕಲನವೊಂದನ್ನು ಲಂಡನ್ನಿನ ಪೆಂಗ್ವಿನ್ ಸಂಸ್ಥೆ ಪ್ರಕಟಿಸಿತು. ಹೀಗೆ ಇಂಗ್ಲಿಷ್ ಭಾಷೆಯಲ್ಲೂ ಯೆವ್ತುಶೆಂಕೋನ ಕೃತಿಗಳು ದೊರೆತವು.

ಪಾಶ್ಚಿಮಾತ್ಯ ವಿಮರ್ಶಕರು ಸಾಧಾರಣವಾಗಿ ಅಳೆಯಲು ಬಳಸುವುದು ತಮ್ಮ ಮಾನದಂಡದಿಂದಲೇ. ಅದು ಸ್ವಾಭಾವಿಕ. ಅವರ ದೃಷ್ಟಿಯಲ್ಲಿ ಯೆವ್ತುಶೆಂಕೋ 'Angry Young Man' ಆದ.

* * *

ಯೆವ್ತುಶೆಂಕೋನ ಒಂದು ನೀಳ್ಗವಿತೆಯ ಹೆಸರು : 'ಸ್ಟಾಲಿನ್ನನ ವಾರಸುದಾರರು.' ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ 'ಪ್ರಾವ್ದಾ' ಪತ್ರಿಕೆಯ ಒಂದು ಸಂಚಿಕೆಯಲ್ಲಿ ಅದು ಪ್ರಕಟವಾಯಿತು. ಹಸ್ತಪ್ರತಿಯನ್ನು ಸ್ವತಃ ಖ್ರುಶ್ಚೋವ್ ಓದಿನೋಡಿ 'ಪ್ರಕಟಿಸಬಹುದು' ಎಂದನಂತೆ.

ಆ ಕವಿತೆಯ ಕೆಲ ಸಾಲುಗಳ ಗದ್ಯಾನುವಾದ :

'ವಾರಸುದಾರರ ಹೃದಯದಿಂದ ಎಂತು ಕೀಳುವಿರಿ ಸ್ಟಾಲಿನ್ನನ? ಕೆಲವರೀಗ ನಿವೃತ್ತರು ; ಕೈಯಂಗಳದಿ ಹೂಗಿಡಗಳ ಆರೈಕೆ ಮಾಡುವರು. ಆದರೆ ಒಳಗಿಂದೊಳಗೆ ಈ ನಿವೃತ್ತಿ ಸ್ಥಿರವಾಗದೆಂದು ಚಿಂತಿಪರು. ಇತರರು ಬಹಿ

ರಂಗವಾಗಿ ಸ್ಟಾಲಿನ್ನನ ಛೀಗಳೆವರು. ಆದರೆ ಇರುಳಲ್ಲಿ ಒಂಟಿಯಾಗಿ ಗತ ಕಾಲವ ನೆನೆದು ವ್ಯಥೆಪಡುವರು.'

ಖ್ರುಶ್ಚೋವ್‌ಗೆ ಆ ಕವಿತೆ ಇಷ್ಟವಾದುದರಲ್ಲಿ ಆಶ್ಚರ್ಯವಿಲ್ಲ. ಸ್ಟಾಲಿನ್ ಪಂಥದವರಿಗಿದಿರಾದ ಅವನ ಹೋರಾಟವಿನ್ನೂ ಮುಗಿದಿಲ್ಲ.

ಆದರೆ ಯೆವ್ತುಶೆಂಕೋ ಬೇರೆಯೂ ಕವಿತೆಗಳನ್ನು ಬರೆದಿದ್ದಾನೆ. ಒಂದರ ಗದ್ಯಾನುವಾದ ಹೀಗಿದೆ :

'ಯಾವ ಜನರೂ ನೀರಸವಲ್ಲ. ಗ್ರಹಗಳ ವಂಶಾವಳಿಯ ಹಾಗೆ ಅವರ ವಿಧಿ. ಸಾಯುವ ಒಬ್ಬ ನೊಡನೆ ಮೊದಲ ಹಿಮ, ಚುಂಬನ ಹೋರಾಟಗಳೂ ಸಾಯುವುವು. ಬರಿಯ ಜನರಲ್ಲ, ಜಗತ್ತುಗಳೇ ಅವರೊಡನೆ ಸಾಯುವುವು.'

ಮೇಲಿನ ಕವಿತೆಯೂ ಇಷ್ಟವಾಗಿದೆಯೇ ಖ್ರುಶ್ಚೋವ್‌ಗೆ?

ಸಂಶಯಾಸ್ಪದ.

*　　*　　*

'ಕ್ರುದ್ಧ ಯುವಕ', 'ಬಂಡಾಯಗಾರ' ಎಂದು ಪಶ್ಚಿಮದ ಕೆಲ ವಿಮರ್ಶಕರು ಭಾವಿಸಿದ್ದ ಯೆವ್ತುಶೆಂಕೋ, ಸೋವಿಯತ್ ಪ್ರಭೃತಿಗಳ ಸಮ್ಮತಿಯೊಡನೆ, ಯೂರೋಪಿನ ಕೆಲ ರಾಷ್ಟ್ರಗಳಲ್ಲಿ ಪ್ರವಾಸ ಬೆಳೆಸಿದ.

ತನ್ನ ಭಾಷಣಗಳಲ್ಲಿ ಖ್ರುಶ್ಚೋವ್‌ಗೆ ಇದಿರಾಗಿ ಆತ ಏನನ್ನೂ ಹೇಳಲಿಲ್ಲ. ಸೋವಿಯತ್ ಸಮಾಜ ವ್ಯವಸ್ಥೆಯ ಸಮರ್ಥನೆಯನ್ನೇ ಆತ ಮಾಡಿದ.

ಆದರೂ—

ಅವನ ಕವಿತೆಗಳು ಭಿನ್ನವಾಗಿದ್ದುವು. ಅವುಗಳಲ್ಲಿ ಸದಾ ಮಿಡಿಯುವ ಮಿಸುಕುವ ಜೀವವಿತ್ತು.

ಅಷ್ಟೇ ಅಲ್ಲ, ಯೆವ್ತುಶೆಂಕೋನ ಜಾಡನ್ನೇ ಹಿಡಿದು ಅನೇಕ ಸೋವಿಯೆತ್ ಯುವ ಕವಿಗಳು ಬರೆಯತೊಡಗಿದ್ದರು.

ಪರಿಸ್ಥಿತಿಯಲ್ಲಿ ಕಂಡುಬಂದುದು : ರಷ್ಯದ ಕಲೆ–ಸಾಹಿತ್ಯಗಳಲ್ಲಿ ಇರಬೇಕಾದ ಏಕಮಾತ್ರ ಸಿದ್ಧಾಂತವಾದ 'ಸಮಾಜವಾದೀ ವಾಸ್ತವವಾದ'ಕ್ಕೆ ಗಂಡಾಂತರ ಒದಗುವ ಸಾಧ್ಯತೆ !

*　　*　　*

ಅಂತಹ ಅಪಾಯವನ್ನು ತಡೆಗಟ್ಟಲು ಸೋವಿಯೆತ್ ನಾಯಕರು ಕೈಕೊಂಡ ಕ್ರಮ ?

ಕವಿ ಯೆವ್ತುಶೆಂಕೋನ 'ಪದಚ್ಯುತಿ.' ಆತನ ಪ್ರವಾಸ ಅರ್ಧಕ್ಕೇ ನಿಂತಿದೆ.

ಅನಾನುಕೂಲತೆಗಳ ಕಾರಣದಿಂದ ಕವಿ ಯೆವ್ತುಶೆಂಕೋ ವಿದೇಶಗಳಲ್ಲಿ ಪ್ರವಾಸ ಕೈಗೊಳ್ಳುವುದಿಲ್ಲ ಎಂದು ಸಾರಲಾಗಿದೆ.

ಸೋವಿಯೆತ್ ಸಾಹಿತ್ಯದ ಹಳೆಯ ಹುಲಿಗಳು (ಪಾಸ್ಟರ್‌ನಾಕ್‌ನನ್ನು ಬಲಿ ತೆಗೆದುಕೊಂಡವರೇ) ಯೆವ್ತುಶೆಂಕೋನ ತಾತ್ವಿಕ ವಿಚಾರ ಸರಣಿ ಪರಿಶುದ್ಧವಾಗಿಲ್ಲ ಎಂದಿದ್ದಾರೆ.

ಯೆವ್ತುಶೆಂಕೋ ಈಗ 'ರೋಗಿ'. ಇನ್ನು ಆತ 'ಚಿಕಿತ್ಸೆ' ಪಡೆಯಬೇಕು.

* * *

ಆರಂಭದಲ್ಲೇ ಹೇಳಿದ ಹಾಗೆ :

ಸೋವಿಯೆತ್ ಲೇಖಕರ ತಂಡವೊಂದು ಭಾರತದಲ್ಲಿ ಪ್ರವಾಸ ಕೈಗೊಂಡಿದೆ. ಅವರಿಗೆ ಸುಸ್ವಾಗತ.

ಈ ಸೌಹಾರ್ದ ನಿಯೋಗದ ಸದಸ್ಯರ ಹೆಸರುಗಳ ಪಟ್ಟಿಯಲ್ಲಿ ಯೆವ್ತು-ಶೆಂಕೋ ಎಂಬ ಒಂದು ಹೆಸರಿಲ್ಲ. ಇರಬಹುದಾಗಿತ್ತು, ಇಲ್ಲ.

೨೮ ಏಪ್ರಿಲ್, ೧೯೬೩

ತ್ರಿವೇಣಿ

'ಪತ್ರಿಕೆ ನೋಡಿದಿರಾ ?'

'ಏನಿದೆ ?'

—ಏನಿಲ್ಲ ಪತ್ರಿಕೆಯಲ್ಲಿ ? ಉತ್ತರದ ಗಡಿಯಲ್ಲಿ ಚೀಣೀ ಸೈನ್ಯದ ಜಮಾವಣೆ; ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ವಿವರಣೆ; ನಾಪತ್ತೆಯಾದ ವಿಮಾನಕ್ಕಾಗಿ ಶೋಧನೆ....

'ಅದಲ್ಲ.'

'ಮತ್ತೆ ?'

'ತ್ರಿವೇಣಿ—'

'ಏನು ?'

'ಇನ್ನಿಲ್ಲ....'

'ಹಾಂ ?'

*　　　　*　　　　*

ತ್ರಿವೇಣಿ ನಿಧನ. ಸಹಸ್ರ ಸಹಸ್ರ ಕನ್ನಡ ಗೃಹಿಣಿಯರನ್ನು, ತರುಣ, ತರುಣಿಯರನ್ನು, ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ದಂಗು ಬಡಿಸಿದ, ಶೋಕಾರ್ತರನ್ನಾಗಿ ಮಾಡಿದ ವಾರ್ತೆ.

'ಏನಾಗಿತ್ತು ?'

'ಹೆರಿಗೆ. ತ್ರಿವೇಣಿ ತಾಯಿಯಾದರು.'

'ಮಾತೃತ್ವದ ಪರಮ ಸುಖ....'

'ಆದರೆ ಕಾಲನ ದೂತರು—'

'ನಿರ್ದಯಿಗಳು.'

'ಬರಬೇಕಂತೆ, ಎಂದರು'.

'ಇವರು ಕಾದಂಬರಿಗಳನ್ನು ಬರೀತಾರೆ ಅಂತ ಹೊಟ್ಟೆ ಉರಿಯಿತೇನೋ ದೇವತೆಗಳಿಗೆ ?'

'ಹನ್ನೊಂದು ದಿನಗಳ ಹಸುಳೆ ತಬ್ಬಲಿ.'

'ಆಕೆಗೆ ಚಿಕ್ಕ ವಯಸ್ಸು. ಹೆಣ್ಣಾಗಿ ಹುಟ್ಟಬಾರದು ದೇವರೇ, ಹೆಣ್ಣಾಗಿ ಹುಟ್ಟಬಾರದು—'

ಇಪ್ಪತ್ತೆರಡು ಕಾದಂಬರಿಗಳಲ್ಲಿ, ಆ ಸಂಖ್ಯೆಯ ಮೂರರಷ್ಟು ಕತೆಗಳಲ್ಲಿ, ಸ್ತ್ರೀಯನ್ನು ಕುರಿತೇ ಅಲ್ಲವೆ ತ್ರಿವೇಣಿ ಬರೆದುದು ?

ಆಕೆ ರಚಿಸದೇ ಹೋದೊಂದು ದುರಂತ ಕಾದಂಬರಿಯ ವಸ್ತುವಾಯಿತಲ್ಲ ಅವರ ಸ್ವಂತದ ಬದುಕು !

ಬಹಳ ಜನರಿಗೆ ತಿಳಿಯದು. ಕತೆಗಾರ್ತಿ ತ್ರಿವೇಣಿ ತಾವು ಪ್ರೀತಿಸಿದ ಶಂಕರನನ್ನು ಮದುವೆಯಾದ ಹೊಸತಿನಲ್ಲಿ (ಹನ್ನೆರಡು ವರ್ಷಗಳಿಗೆ ಹಿಂದಿನ ಮಾತು) ಕಾದಂಬರಿಗಾರ್ತಿಯಾದರು, 'ಅಪಸ್ವರ'ದ ಚೊಚ್ಚಲ ಸೃಷ್ಟಿಯೊಂದಿಗೆ.

ಆ ಕೃತಿಯ ಹಸ್ತಪ್ರತಿಯನ್ನೋದಿ ಈ ಲೇಖಕ ಬರೆದ :

'ಇದೊಂದು ಸುಂದರ ಕಾದಂಬರಿ. ಇಪ್ಪತ್ತೈದು ವರ್ಷಗಳ ಕಾಲವಾದರೂ ಇದು ಉಳಿಯುವುದು ಖಂಡಿತ.'

(ಚಿರಕಾಲವೆನ್ನಬಹುದಿತ್ತು. ಒಂದು ಶತಮಾನವೆಂದಾದರೂ ಹೇಳಬಹುದಿತ್ತು. ಅತಿಶಯೋಕ್ತಿಯಾದೀತೇನೋ ಎಂಬ ಅಂಜಿಕೆ.)

ಪ್ರಕಟವಾದರಲ್ಲವೆ ಭವಿಷ್ಯವಾಣಿ ಸುಳ್ಳಾಗುವುದೊ ನಿಜವಾಗುವುದೊ ಎಂದು ತಿಳಿಯುವ ಅವಕಾಶ ? ಈ ಲೇಖಕ ಹಸ್ತಪ್ರತಿಯೊಡನೆ ಒಬ್ಬಿಬ್ಬರು ಪ್ರಕಾಶಕರನ್ನು ಕಂಡ. ಆದರೆ ಹೊಸಬರ ಕೃತಿಗೆ ಸುಲಭ ಮನ್ನಣೆ ಹೇಗೆ ದೊರೆಯಬೇಕು ?

ಮುಂದೆ ಆ ಕೃತಿ ಗ್ರಂಥವಾದದ್ದು 'ವಾಹಿನಿ' ಸ್ಪರ್ಶದಿಂದ.

ಆ ಬಳಿಕ ? ತ್ರಿವೇಣಿ ವಿರಚಿತ ಕೃತಿಗಳ ಮುದ್ರಣಕ್ಕಾಗಿ ನಾ ಮುಂದು ತಾ ಮುಂದು ಎಂದು ಪ್ರಕಾಶಕರು ಬಂದರು.

ಆ ಲೇಖಕಿ ಬೇಗನೆ ಕನ್ನಡ ಗೃಹಿಣಿಯರ ಪ್ರೀತಿಗೆ ಪಾತ್ರರಾದರು. ಪುರುಷ ಲೋಕದ ಕಣ್ಣನ್ನೂ ಅವರು ತೆರೆದರು.

ಇಪ್ಪತ್ತೈದು ವರ್ಷಗಳಿಗೆ ಹಿಂದೆ ಕೊಡಗಿನ ಗೌರಮ್ಮ (ಚಿಕ್ಕ ವಯಸ್ಸಿನಲ್ಲೇ ಈಸುವಾಗ ಕೈ ಸೋತು ನೀರು ಪಾಲಾದ ಮಹಿಳೆ) ಸಣ್ಣ ಕತೆಗಳ ಕ್ಷೇತ್ರದಲ್ಲಿ ಕೀರ್ತಿಶಾಲಿಯಾಗಲಿಲ್ಲವೆ ? ಅಂತಹ ಖ್ಯಾತಿಯನ್ನು ಕಾದಂಬರಿಯ ಕ್ಷೇತ್ರದಲ್ಲಿ ಸುಮಾರು ಅದೇ ವಯಸ್ಸಿನಲ್ಲೇ ತ್ರಿವೇಣಿ ಗಳಿಸಿದರು, ಸುಲಭವಾಗಿ.

ಅದು ಪ್ರಾದೇಶಿಕ ಭಾಷೆಯ ಸೀಮಿತ ಕ್ಷೇತ್ರವನ್ನೂ ದಾಟಿ ಹಬ್ಬಿದ ಕೀರ್ತಿ.

'ಹೂವು ಹಣ್ಣು', 'ಸೋತು ಗೆದ್ದವಳು', 'ಬೆಕ್ಕಿನ ಕಣ್ಣು', 'ಕೀಲು ಗೊಂಬೆ', 'ಬೆಳ್ಳಿ ಮೋಡ,' 'ಆ ಮನೆ'—ಒಂದಲ್ಲ ಎರಡಲ್ಲ ಜನ ಮೆಚ್ಚಿದ ತ್ರಿವೇಣಿ ಕೃತಿಗಳು.

ವೇಗದ ಮೇಲಾಟದ ಈ ಯುಗದಲ್ಲಿ ಬರೆದ ಕೃತಿಗಳೆಲ್ಲ ಶ್ರೇಷ್ಠವೆನಿಸುವುದಿಲ್ಲ. ಒಂದರ ತೂಕ ಹೆಚ್ಚು. ಇನ್ನೊಂದರದು ಕಮ್ಮಿ. ಆದರೆ ಕೆಲಸ ಯಾವಾಗಲೂ ಕುಸುರಿನದು ; ಕಥನ ಕಲೆ ಯಾವಾಗಲೂ ಮೇಲ್ಮಟ್ಟದ್ದು.

ಕೇಳುವ ಕಿವಿ, ನೋಡುವ ಕಣ್ಣು ಸದಾ ಜಾಗೃತವಿರುವಾಗ ವಸ್ತುವಿಗೆ ಬರಗಾಲವೆ? ಮೆದುಳನ್ನು ತಪ್ತಗೊಳಿಸುವ, ಬಳಲಿಸುವ ಗೋಜಿಗೆ ಹೋಗದೆ, ಹೃದಯವನ್ನು ಮುದುಡಿಸುವ—ಉಲ್ಲಾಸಪಡಿಸುವ ಕಲಾನೈಪುಣ್ಯವನ್ನು ಅವರು ತೋರಿದರು. ವಿಸ್ತಾರವಾದ ಬಯಲು. ಅಲ್ಲಿ ವಿಹಾರ. ಗಿರಿಶಿಖರವನ್ನು ಏರಲಿಲ್ಲ, ಪ್ರಪಾತಕ್ಕೆ ಇಳಿಯಲಿಲ್ಲ. ಬಯಲಿನ ವೈಚಿತ್ರ್ಯಗಳನ್ನು ತೋರಿಸುತ್ತ ಓದುಗರನ್ನು ತಮ್ಮೊಡನೆ ಅವರು ಕರೆದೊಯ್ದರು.

*   *   *

ಸರಸಿಯಾದ, ಸುಸಂಸ್ಕೃತನಾದ, ಸಮರ್ಥ ಬರೆಹಗಾರನೂ ಆದ ಪತಿ. ವಾತ್ಸಲ್ಯಮಯಿಯಾದ ಅತ್ತೆ. ಆದರಿಸುತ್ತಿದ್ದ ಬಂಧುಬಳಗ. ಮೆಚ್ಚಿಕೊಂಡಿದ್ದ ಸಾಹಿತ್ಯ ಪ್ರಿಯರು. ಆರಾಧಿಸುತ್ತಿದ್ದ ಸಾಹಿತ್ಯ ಭಕ್ತರು. ಇಷ್ಟಿದ್ದೂ ತ್ರಿವೇಣಿ, ಅಲ್ಪಾವಧಿಯ ವಾಸಕ್ಕೆಂದು ಈ ನೆಲಕ್ಕೆ ಬಂದವರಂತೆ, ನಾಲ್ಕು ಜನರ ನಡುವೆ ತಂಗಿದ ಪರಕೀಯಳಂತೆ, ದಿನಕಳೆದರು.

ಪರಿಪೂರ್ಣತೆಗಾಗಿ ಅನಾದಿ ಕಾಲದಿಂದಲೂ ಶೋಧ ನಡೆದಿರುವ ನಮ್ಮ ದೇಶದಲ್ಲಿ ಆ ಬಗೆಯ ಜೀವನ ಅಸಹಜವಾದುದೇನೂ ಅಲ್ಲ.

೧೯೮೮ ರ ಒಂದು ಚಿತ್ರ. ನಾಡು ಶ್ರೀಮತಿ ತ್ರಿವೇಣಿಯವರ ಅರುವತ್ತನೆಯ ಹುಟ್ಟುಹಬ್ಬವನ್ನು ಆಚರಿಸುತ್ತಿದೆ. ಪತಿ ಹಾಗೂ ಯೌವನಾವಸ್ಥೆಯಲ್ಲಿರುವ ಮಕ್ಕಳೊಡಗೂಡಿ ತ್ರಿವೇಣಿ, ರಾಷ್ಟ್ರದ ಎಲ್ಲೆಡೆಗಳಿಂದ ಬಂದಿರುವ ಶುಭಾಶಯಗಳನ್ನು ಸ್ವೀಕರಿಸುತ್ತಿದ್ದಾರೆ. ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಆಗಲೇ ಅವರಿಗೆ ಸಂದಿದೆ. ಅಕಾಡೆಮಿಯ ಸಾಹಿತ್ಯ ಪ್ರಶಸ್ತಿಯೂ ದೊರೆತಿದೆ. ಅವರ ನೂರನೆಯ ಕೃತಿಯೂ ಪ್ರಕಟವಾಗಿದೆ. ಆ ನೂರರಲ್ಲಿ ಒಂದೆರಡು ವಿಶ್ವದ ಹಲವಾರು ಭಾಷೆಗಳಿಗೆ ಪರಿವರ್ತಿತವಾಗಿವೆ. ಒಂದು ಕೃತಿಗೆ ನೊಬೆಲ್ ಪಾರಿತೋಷಕ ದೊರೆಯುವ ಸಂಭವವಿದೆಯೆಂದು ಹೇಳಲಾಗುತ್ತಿದೆ.

ತ್ರಿವೇಣಿ ಎನ್ನುತ್ತಿದ್ದಾರೆ :

'ಇಪ್ಪತ್ತೈದು ವರ್ಷಗಳಿಗೆ ಹಿಂದೆ, ನಾನು ಚಿಕ್ಕವಳಿದ್ದಾಗ, ಬರೆದುದೆಲ್ಲ ಬಾಲಿಶ. ಆದರೆ ಆಗ ಜನರು ತೋರಿದ ಪ್ರೀತಿ ವಿಶ್ವಾಸಗಳೇ ನನ್ನ ದಾರಿಬುತ್ತಿಯಾಗಿ, ಶ್ರೇಷ್ಠವೆಂದು ನೀವು ಕರೆಯುತ್ತಿರುವ ನನ್ನ ಕೆಲ ಕೃತಿಗಳ ನಿರ್ಮಾಣಕ್ಕೆ ನೆರವಾಗಿವೆ. ಆದರೆ ನನಗಿನ್ನೂ ತೃಪ್ತಿಯಿಲ್ಲ. ಹೊಸಹೊಸ ಅನುಭವಗಳನ್ನು ನಾನು ಪಡೆಯಬೇಕು. ಹೊಸಹೊಸ ಕೃತಿಗಳನ್ನು ನಾನು ರಚಿಸಬೇಕು.'

*   *   *

ಮೇಲಿನ ಚಿತ್ರ ಅರ್ಥವಿಲ್ಲದ್ದು. ಸಾವಿನ ಅನುಭವವನ್ನು ಪಡೆದು ಹೊರಟು ಹೋದವರು ಇನ್ನೆಂದೂ ಮರಳಿ ಬರಲಾರರೆಂದ ಮೇಲೆ—

೪ ಆಗಸ್ಟ್, ೧೯೬೩

ಕೃಷಿ ಪಂಡಿತರು

'ಅದೇನು ಗೊತ್ತಿದೆಯೆ ?' ಎಂದು ರಾಯರು ಫೈಲಿಯನ್ನು ತೋರಿಸಿ ಕೇಳಿದರು.

'ಇದ್ದೀತು, ಕಾಗದ ಪತ್ರ.'

'ಅದೆಂಥದು ?'

'ನನಗೇನು ಗೊತ್ತು ? ಯಾರದಾದರೂ ಮೃತ್ಯು ಪತ್ರವಿದ್ದೀತು ! ಅದಕ್ಕೇ ಕಟ್ಟಿಟ್ಟೀರಿ. ಹೇಳಿ ಕೇಳಿ ವಕೀಲರು.'

ರಾಯರು ಬಾಯೊಳಗೇ ನಕ್ಕರು.

'ಕಾಂತಾ, ನಿನ್ನಂಥ ಮರುಳಿಯನ್ನು ನಾನೆಲ್ಲಿಯೂ ನೋಡಲಿಲ್ಲ.'

'ಹೌದು, ನಾನೇನು ನಿಮ್ಮಂತೆ ಟಿಸ್‌ಪಿಸ್ ಕಲಿಯಲಿಲ್ಲ ; ವಕೀಲಿ ಪಾಸಾಗಿ, ದಿನವೊಂದಕ್ಕೂ ಮಂದಿಯನ್ನು ಹಾಳುಮಾಡುವ ಕಾರಭಾರ ಮಾಡಲಿಲ್ಲ.'

ರಾಯರು ಕೆಲಹೊತ್ತು ಸ್ತಬ್ಧರಾದರು.

'ನಾನು ಹೆಳಲು ಹಾಕಿ ಹೂ ಮುಡಿದುಕೊಂಡು ಬರಲೇ ?' ಎಂದು ಸಾನಿ ಎದ್ದಳು. ರಾಯರು ಕೂಡಲೆ ಆರಾಮ ಕುರ್ಚಿಯ ಹಿಂಗಡೆಯಿಂದ ಮುಂದೆ ತೂಗಿ ನುಡಿದರು.

'ಹುಚ್ಚಿಯೆಂದರೆ ಓ ಎನ್ನುವಿ. ತೆಗೆದುಕೊ ಆ ಚೀಲವನ್ನು ; ನಿನ್ನ ತಿಜೋರಿಯಲ್ಲಿಡು.'

'ಆಗಲಿ ನಿಮ್ಮಾಜ್ಞೆ........'

* * *

ಮೇಲಿನ ಉಲ್ಲೇಖ ಒಂದು ಕನ್ನಡ ಕಾದಂಬರಿಯಿಂದ.

ಈ ಕಾದಂಬರಿ ಹೊಚ್ಚ ಹೊಸದೆ ? ಅಥವಾ ಹಳೆಯದೆ ?

ಇದರ ಕರ್ತೃ ಕರ್ನಾಟಕದ ಯಾವ ಭಾಗದವರು ? (ಹಳೆಯ) ಮೈಸೂರಿನವರೆ ? ಉತ್ತರ ಕರ್ನಾಟಕದವರೆ ? ದಕ್ಷಿಣ ಕನ್ನಡದವರೆ ? ಅಥವಾ ಕೊಡಗಿನವರೆ ?

ನೂರರಲ್ಲಿ ನೂರು ಅಂಕ ಗಳಿಸುವ ಉತ್ತರ ಪ್ರಾಯಶಃ ಯಾರಿಂದಲೂ ಸಾಧ್ಯವಾಗಲಾರದು.

*   *   *

ಕಾರಣ : ಉಲ್ಲೇಖಿಸಿದ ದೃಷ್ಟಾಂತದಿಂದ ಸ್ಪಷ್ಟವಾಗುವಂತೆ, ಕಾದಂಬರಿಯಲ್ಲಿ ಬಳಸಲಾಗಿರುವ ಕನ್ನಡ ಯಾವುದೇ ನಿರ್ದಿಷ್ಟ ಪ್ರದೇಶದ ಆಡುಮಾತನ್ನು ಹೋಲುವುದಿಲ್ಲ.

ಇದು ಆಕಸ್ಮಿಕವೇನಲ್ಲ. ಕಾದಂಬರಿಯ ಕರ್ತೃ ಉದ್ದೇಶಪೂರ್ವಕವಾಗಿಯೇ ಆ ಕನ್ನಡವನ್ನು ಬಳಸಿದ್ದಾರೆ.

*   *   *

ಆ ಕಾದಂಬರಿಕಾರರ ಮಾತಿನಲ್ಲೇ ಹೇಳುವುದಾದರೆ :

'ಇಲ್ಲಿ ಬಳಸಿದ ಭಾಷೆ ಪ್ರಯೋಗಗಳ ರೂಪವಾಗಿದೆ. ಉತ್ತರ ಕರ್ನಾಟಕದ ಮನೆಮಾತಿಗೆ ಒಂದು ಕಟ್ಟಳೆಯ ಮೇರೆಗೆ ತಿದ್ದಿದ ಮಾತಿನ ರೂಪ ಕೊಡುವುದೇ ಅದರ ಉದ್ದಿಷ್ಟ. ಆ ಕಟ್ಟಳೆಯೆಂದರೆ ಲೇಖಕನು ತಾನಾಡುವಾಗ, ಪ್ರೌಢತೆಯ ತೋರಿಕೆಯಿಂದ ಸ್ವಾಭಾವಿಕವಾದ ಕಥನ ಸರಣಿ ಅಳಿಯದಂತೆ ಮಾತು ತಿಳಿಯಾಗಬೇಕು, ಮುಕ್ಕಾಲುಪಾಲು ಶುದ್ಧೀಕೃತವಾಗಿ ನಿಲ್ಲಬೇಕು....ಪಾತ್ರಗಳು ಬಾಯಲ್ಲಿ ಯಾವಾಗಲೂ ರೂಢಶೈಲಿಯನ್ನೇ ತರುವುದರಿಂದ ಇಡಿಯ ಕನ್ನಡ ಜನಕ್ಕೆ ಅದರ ಸೊಲ್ಲು ಕೇಳದು. ಶೈಲಿಯ ವೈವಿಧ್ಯ ತೋರದು. ಇಲ್ಲಿ ಬೇಕಾದದು ಪ್ರೌಢತೆ ಸಹಜತೆಗಳ ನಡುವಣ ಸಮತೆ. ಅದಕ್ಕಾಗಿ ಪ್ರಯೋಗವನ್ನು ಹೂಡಿದೆ.'

*   *   *

ಪ್ರೌಢತೆ ಸಹಜತೆಗಳ ನಡುವಣ ಸಮತೆ.

ಇದನ್ನು ಸಾಧಿಸಲು ಯತ್ನಿಸಿದವರು ರಂ.ಶ್ರೀ. ಮುಗಳಿಯವರು. ಮೂವತ್ತು ವರ್ಷಗಳಿಗೆ ಹಿಂದೆ ಬರೆದ ತಮ್ಮ 'ಬಾಳುರಿ' ಕಾದಂಬರಿಯಲ್ಲಿ.

ಅವರು ನಡೆಸಿದ್ದು ಯಶಸ್ವೀ ಪ್ರಯೋಗ

*   *   *

ಯಾವುದೇ ಕೃತಿಯ ಪಾತ್ರಗಳ ನಡುವಿನ ಸಂಭಾಷಣೆ, ಅವರವರ ಶಿಕ್ಷಣ ಸಂಸ್ಕೃತಿಗಳಿಗೆ ಅನುಗುಣವಾದ ಆಡುಮಾತಿನಲ್ಲಿ ನಡೆಯಬೇಕೆನ್ನುವುದು, ಸಾರ್ವತ್ರಿಕವಾಗಿ ಈಗ ಒಪ್ಪಿಕೊಳ್ಳಲಾಗಿರುವ ಸಂಗತಿ. ಕಟ್ಟು ಕಥೆ ಸಹಜತೆಯ ಮಟ್ಟಕ್ಕೇರುವುದು ಇದರಿಂದಲೇ. ಸಾಹಿತ್ಯ ಜೀವನಕ್ಕೆ ಸಮೀಪವಾಗುವುದೂ ಈ ರೀತಿಯಲ್ಲೇ.

(ಈಗಲೂ ಅಸಹಜವಾದ ಗ್ರಾಂಥಿಕವೆನ್ನಿಸುವ ಕನ್ನಡವನ್ನು ನಮ್ಮ ಪಾತ್ರಗಳು ಆಡದೆ ಇಲ್ಲ. ತಾವು ಹಿಡಿದದ್ದೇ ಬಡಿಗೆ ಎನ್ನುವ ಕರ್ತೃಗಳೂ ಇಲ್ಲದಿಲ್ಲ. ಆದರೆ ಇಂಥವರು ಅಲ್ಪ ಸಂಖ್ಯಾಕರು.)

ಮೂವತ್ತು ವರ್ಷಗಳಿಗೆ ಹಿಂದೆ ಕನ್ನಡದ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿತ್ತು. ಹೊಸ ಪ್ರಕಾರಗಳ ವಿಪುಲ ಸೃಷ್ಟಿ ನಡೆದಿತ್ತು. ಆಗ ಅವುಗಳಿಗೆ ಸರಿಹೋಗುವಂತೆ ಕನ್ನಡ ಭಾಷೆ ಹದಗೊಳ್ಳತೊಡಗಿತ್ತು.

ಯುವಕರು ಹೊಸ ಮಾತುಗಳನ್ನು ಆಡುತ್ತ ಕಟ್ಟುಪಾಡುಗಳ ಕೋಟೆ ಕೊತ್ತಲಗಳಿಗೆ ಲಗ್ಗೆ ಇಟ್ಟು ಸೃಷ್ಟ್ಯಾತ್ಮಕ ಸಾಹಿತ್ಯದ ಬಾವುಟವನ್ನು ಮೆರೆಯಿಸಿದ ಕಾಲ ಅದು.

ಆ ದೃಷ್ಟಿಯಿಂದ ತರುಣ ರಂ. ಶ್ರೀ. ಮುಗುಳಿಯವರ ಆಗಿನ ಯತ್ನ ಮಹತ್ವದ್ದು.

*　　　*　　　*

ಕನ್ನಡ ಸಾಹಿತ್ಯದಲ್ಲಿನ ಪುನರುದಯದ ಕಾಲಘಟ್ಟವನ್ನು ಕುರಿತು ಬರೆಯುವಾಗ, ಇತರ ಅನೇಕ ಕೃತಿಗಳಂತೆ ಯುವಕ ಮುಗುಳಿಯವರ 'ಬಾಳುರಿ'ಗೂ ಚರಿತ್ರೆಕಾರ ಸ್ಥಾನ ಕೊಟ್ಟೇ ಕೊಡುತ್ತಾನೆ.

ಸೋಜಿಗದ ಸಂಗತಿಯೆಂದರೆ, ಕಾವೇರಿಯಲ್ಲಿ ಕಳೆದ ಮೂವತ್ತು ವರ್ಷಗಳ ಕಾಲ ನೀರು ಹರಿದಮೇಲೂ 'ಪ್ರೌಢತೆ ಸಹಜತೆಗಳ ನಡುವಣ ಸಮತೆ'ಯನ್ನು ಭಾಷೆಯಲ್ಲಿ ಸಾಧಿಸಬೇಕೆನ್ನುವ ಮಾತು ಜಲರಾಶಿಯಿಂದೆದ್ದ ಕೋಡುಗಲ್ಲಿನಂತೆ ಸ್ಥಿರವಾಗಿ ನಿಂತಿರುವುದು.

ಜನರ ವ್ಯಾವಹಾರಿಕ ಭಾಷೆಯಲ್ಲೇ ಸಾಹಿತ್ಯವನ್ನು ಪೂರ್ತಿಯಾಗಿ ರಚಿಸಬೇಕೆಂಬ ವಾದ ಒಂದಿದೆ. ಇದರಲ್ಲಿ ಹುರುಳಿಲ್ಲದೆ ಇಲ್ಲ.

ಆದರೆ ಸಾಕ್ಷರತೆ ಹೆಚ್ಚಿದಂತೆ, ಶಿಕ್ಷಣದ ಮಟ್ಟ ಉನ್ನತವಾದಂತೆ, ಜನರ ಬಳಕೆ ಭಾಷೆಯಲ್ಲೂ ಕಂಡೂ ಕಾಣಿಸದ ಮಾರ್ಪಾಟು ಆಗುವುದು ಖಂಡಿತ.

ಈ ಬಗೆಯ ಮಾರ್ಪಾಟಿಗೆ 'ಪ್ರೌಢತೆ ಸಹಜತೆಗಳ ನಡುವಣ ಸಮತೆ' ಸಹಕಾರಿ.

೨೯ ಡಿಸೆಂಬರ್, ೧೯೬೩

ಮುದ್ರಣ ಪರಂಪರೆ

ಕಳೆದ ಎರಡು ಮೂರು ಸಂವತ್ಸರಗಳಲ್ಲಿ ಗ್ರಹಾಂತರ ಹೊಂದಿದ ಕನ್ನಡ ಸಾಹಿತಿಗಳೂ ಕಲಾವಿದರೂ ಕಾಲ ಕಳೆಯುವ ಸಾಧನೆಗಳಲ್ಲಿ ನಿರತರಾಗಿದ್ದರು.

'ಗ್ರಹ' 'ಉಪಗ್ರಹ'ಗಳ ಹುಟ್ಟು ಅರ್ಥ ವಿಸ್ತಾರಗಳನ್ನು ಕುರಿತು ಮಂಜೇಶ್ವರ ಗೋವಿಂದ ಪೈ ತಮ್ಮಷ್ಟಕ್ಕೆ ವಿವೇಚನೆ ನಡೆಸಿದ್ದರು.

ಆಲೂರ ವೆಂಕಟರಾಯರು, ಭೂಲೋಕದಿಂದ ಬಂದಿದ್ದ ಪತ್ರಿಕೆಗಳನ್ನು ಓದುತ್ತಲಿದ್ದರು. ದ್ವಿಕರ್ನಾಟಕದ ವಾದವಿವಾದ ಅವರ ಗಮನ ಸೆಳೆದಿತ್ತು. ಆಲೂರರನ್ನು ಹಿಂಬಾಲಿಸಿ ಕನ್ನಡ ನಾಡಿನಿಂದ ಹೊರಟು ಬಂದಿದ್ದ ಮಹದೇವ ಸ್ವಾಮಿಯವರೊಡನೆ, ಸುಬ್ಬಯ್ಯ ನಾಯ್ಡು ಕುಶಲ ಸಂಭಾಷಣೆ ನಡೆಸಿದ್ದರು.

ನೋಟುಗೋಲನ್ನು ಕಂಕುಳಲ್ಲಿರಿಸಿಕೊಂಡು ನಿಧಾನವಾಗಿ ನಡೆಯುತ್ತ ಬಂದರು ಆನಂದ. ಪ್ಯಾಂಟು, ಬುಷ್‌ಕೋಟು, ಕತ್ತಿನ ಸುತ್ತಲೂ ಮಫ್ಲರ್. ತಲೆಯ ಮೇಲೊಂದು ಫೆಜ್ ಕ್ಯಾಪ್.

ಅವರ ಮಗ್ಗುಲಲ್ಲಿದ್ದರು ಧೋತರ, ಜುಬ್ಬಗಳ ದ. ಬಾ. ಕುಲಕರ್ಣಿ.

ಂ ಂ ಂ

ದ. ಬಾ. ಅಂದರು :

'ಆನಂದರೆ, ಈ ಜೀವನ ಬೇಸರವಾಯಿತಲ್ಲ.'

ಆ ಕಂಚಿನ ಕಂಠ ಕೇಳಿ ನಕ್ಕು, ನುಡಿದರು ಆನಂದ :

'ಯಾಕಪ್ಪ? ಬದುಕಿನ ಹೋರಾಟವಿಲ್ಲ, ರಕ್ತದ ಜಾಸ್ತಿ ಒತ್ತಡವಿಲ್ಲ, ಅಂತಲೊ?'

'ಹಸಿ ಮಸಿಯ ವಾಸನೆ ಇಲ್ಲ ಅಂತ. ಜತೆಗೆ ಮುದ್ರಣ ಯಂತ್ರದ ಸಂಗೀತವೂ ಇಲ್ಲ ನೋಡಿ.'

'ಈ ಬೇಸರಕ್ಕೆ ಪರಿಹಾರ ಇದೆ.'

'ಅಪ್ಪಣೆಯಾಗಲಿ.'

'ಇಲ್ಲೊಂದು ಕ್ರಿಕೆಟ್ ಮ್ಯಾಚ್ ಏರ್ಪಡಿಸಬೇಕು ನೋಡು.'

'ನಾವೇನೋ ಹತ್ತರ ಮೇಲೊಂದು ಹನ್ನೊಂದಾಗ್ತೀವಿ. ಎದುರಾಳಿಗಳು'

'ನಿಜ. ಲೇಖಕರನ್ನಷ್ಟೇ ಭೂಲೋಕದಿಂದ ವರ್ಗಾಯಿಸ್ತಿದಾರೆ. ಪ್ರಕಾಶಕ ಮು-ಗಂಡರಲ್ಲಿ ಯಾರಿಗೂ ಹೃದಯಾಘಾತ ಆಗೋದೇ ಇಲ್ಲ.'

'ಕಾವ್ಯ ಗ್ರಹದಲ್ಲಿ ಜಾಗ ಇಲ್ಲಾಂತ ನಮಗೋಸ್ಕರ ಈ ಹೊಸ ಗ್ರಹ ನಿರ್ಮಿಸಿದ್ದಾರೆ ಅಲ್ಲವೆ? ಇಲ್ಲೂ ಜನಸಂಖ್ಯೆ ಒತ್ತಡ! ನೃಪತುಂಗರ ನೇತೃತ್ವದಲ್ಲಿ ಒಂದು ಟೀಮ್ ಕಟ್ಕೊಳ್ಳಿ. ಶ್ರೀಯವರನ್ನ ನಮ್ಮ ಕಡೆಗೆ ಕರೆಸಿಕೊಳ್ಳೋಣ. ಮುದ್ದಣನನ್ನು ಮಾತ್ರ—'

'ಅಂಪೈರ್ ಕಾಣಯ್ಯ, ಆತ ಅಂಪೈರ್....ಅಗೋ ಪ್ರೇಕ್ಷಕರು ಬರ್‍ತಿದ್ದಾರೆ.'

ಂ ಂ ಂ

ಅವರನ್ನು ಸಮೀಪಿಸಿದವರು ನಾಯ್ಡು ಮತ್ತು ಮಹದೇವಸ್ವಾಮಿ.

ಆನಂದ :

'ಪ್ರೇಕ್ಷಕ ಮಹಾಶಯರು ದಯಮಾಡಿಸ್ಬೇಕು.'

ನಾಯ್ಡು :

ಎಲ್ಲಾ ತಳಕಮಳಕ ಆಗಿದೆಯಲ್ಲ? ನಾವಲ್ಲವೆ ನಟರು ?'

'ಆಗಲಪ್ಪ ನಟರೇ, ಸೂತ್ರಧಾರರೇ ; ಕುಶಲವೆ ?'

'ಇಷ್ಟರಮಟ್ಟಿಗಿದೆ ಸಾಹಿತ್ಯ ಸಾರ್ವಭೌಮ. ಆದರೆ ಯಾಕೋ ಬೇಸರ.'

'(ದ.ಬಾ. ಕಡೆಗೆ ಹೊರಳಿ) ನೋಡಿದೆಯಾ ? ಇದು ಅಂಟು ಜಾಡ್ಯ !'

'ಹಾವಾಭಾವಗಳಿಲ್ಲದೆ ಅಂಗಾಂಗ ನೋವು. ಆಡದೆ, ಹಾಡದೆ ಗಂಟಲು ಗೊಗ್ಗರವಾಗಿದೆ.'

ಮಹದೇವಸ್ವಾಮಿ :

'ಆನಂದರೆ, ಒಂದು ನಾಟಕ ಬರೆದು ಕೊಡಿ. ನಾನು ಆಡಿಸ್ತೀನಿ. ರಾಯಲ್ಟಿ—'

ಆನಂದ (ಸಿಗರೇಟು ಕಚ್ಚಿಕೊಂಡು) :

'ಸಾರಿ. ಇನ್ನು ನೂರು ವರ್ಷ ನಾನು ಲೇಖನಿ ಮುಟ್ಟೋದಿಲ್ಲ. ನಾಟ್ಯ ಗ್ರಹಕ್ಕೆ ಹೋಗಿ ಬನ್ನಿ. ಅಲ್ಲಿ ಕೈಲಾಸಂ ಇದಾರೆ. ನಡಿಯಯ್ಯ ದ.ಬಾ.'

ಂ ಂ ಂ

ಆಲದ ಮರದ ಬೀಳಲುಗಳನ್ನು ನೋಡುತ್ತ ನಿಂತಿದ್ದ ತ್ರಿವೇಣಿಯನ್ನು ಸಮೀಪಿಸಿ ಆನಂದ :

'ಏನು ನೋಡುತಿದೀರಿ ತಾಯಿ ?'

'ಈ ಬೀಳಲು ಹೀಗೇ ಕೆಳಕ್ಕೆ ಇಳಿದರೆ ಭೂಲೋಕ ತಲುಪೋಕೆ ಇನ್ನೆಷ್ಟು ಕಾಲ ಬೇಕಾದೀತು ಅಂತ ಯೋಚಿಸ್ತಿದೀನಿ ?'

ದ.ಬಾ. :

ಈ ಬೀಳಲು ಬೀಳಲು ಅಲ್ಲ. ಮರೆತುಬಿಡಿ, ತ್ರಿವೇಣಿಯವರೆ.'

'ನಿಮ್ಮದು ನವುರು ಹಾಸ್ಯ. ಅಂದ ಹಾಗೆ, ಎಲ್ಲಿ ನೀವು ಕಂಡ ಗೌರಮ್ಮ ?'

‘ಬಂದ ದಿನವೇ ವಿಚಾರಿಸಿದೆ. ಸರ್ವೋದಯ ಗ್ರಹದಲ್ಲಿ ಇದ್ದಾರಂತೆ.’

‘ನೋಡಬೇಕಲ್ಲ ಒಮ್ಮೆ. (ಒಮ್ಮೆಲೆ) ಶ್ಶ್–ಇದೇನು ?’

ಆನಂದ : ‘ಏನಾಯಿತು ತಾಯಿ ?’

‘ಬಲಗಣ್ಣು ಅದುರುತ್ತಿದೆ. ನನಗೆ ಇಷ್ಟವಾದವರು ಯಾರೋ ಬರುತ್ತಿದ್ದಾರೆ.’

ಪ್ರತಿಯಾಗಿ ಏನನ್ನೂ ಹೇಳದೆ, ಕನ್ನಡಕ ತೆಗೆದು ಬುಶ್‌ಕೋಟಿನ ಅಂಚಿನಿಂದ ಒರೆಸುತ್ತಾರೆ ಆನಂದ.

ಅಷ್ಟರಲ್ಲಿ ದ್ವಾರಪಾಲಕರ ಧ್ವನಿ :

‘ಕನ್ನಡದ ಹೆಸರಾಂತ ಕಾದಂಬರಿಗಾರ್ತಿ, ಖ್ಯಾತ ಕತೆಗಾರ್ತಿ, ಹಲವಾರು ಪ್ರಬಂಧ ನಿಬಂಧಗಳ ಲೇಖಕಿ ಎಂ. ಕೆ. ಜಯಲಕ್ಷ್ಮಿಯವರು ದಯಮಾಡಿಸುತ್ತಿದಾರೇ........’

ಆನಂದ ಕನ್ನಡಕವನ್ನು ಮತ್ತೆ ಏರಿಸಿ ಮುಗುಳುನಗೆಯ ಮುಖವಾಡ ಧರಿಸುತ್ತಾರೆ. ತ್ರಿವೇಣಿ ಅರಳು ಕಣ್ಣುಗಳನ್ನು ಮುಚ್ಚದೆ ಮಹಾದ್ವಾರದ ಕಡೆ ದಿಟ್ಟಿಸುತ್ತಾರೆ. ದ.ಬಾ. ಅಂಗಿಯ ಮಗ್ಗುಲು ಜೇಬನ್ನು ಮುಟ್ಟಿ ಸಿಗರೇಟಿಗಾಗಿ ತಡಕಾಡುತ್ತಾರೆ.

° ° °

‘ಬಾ, ತಾಯಿ,’

—‘ಬಾ, ಜಯಾ.,

—‘ಬನ್ನಿ ಜಯಲಕ್ಷ್ಮಿಯವರೇ.’

ಬಂಧುಗಳನ್ನು ಕಂಡ ಭಾವೋದ್ವೇಗದಿಂದ ಜಯಲಕ್ಷ್ಮಿಗೆ ಮಾತು ಹೊರಡುತ್ತಿಲ್ಲ.

ತ್ರಿವೇಣಿ ತೋಳಿನಿಂದ ಗೆಳತಿಯನ್ನು ಬಳಸಿ ಕೇಳುತ್ತಾರೆ :

‘ಪ್ರಯಾಣ ಕಷ್ಟವಾಯಿತೆ ?’

‘ನೀನು ಬಂದೆಯಲ್ಲ ಅಕ್ಕ ? ಅದೇ ಸರ್ವಿಸು. ಆ ಪುಷ್ಪಕ ವಿಮಾನದಲ್ಲೇ ನಾನು ಬಂದೆ.’

‘ಇತ್ತೀಚೆಗೆ ಏನು ಬರೆದೆ ?’

‘ನೀನು ಬರೆದೆಯಲ್ಲ ಅಕ್ಕ ? ಅದೇ. ಅಂಥದೇ ಕೃತಿ.’

ದ.ಬಾ. ನಡುವೆ ಬಾಯಿ ಹಾಕಿ :

‘ನಿಮಗೆ ಜತೆಯಾಯಿತು, ತ್ರಿವೇಣಿಯವರೇ. ಆನಂದರೂ ನಾನೂ ಒಂದಿಷ್ಟು ಅಡ್ಡಾಡ್ಕೊಂಡು ಬರ್ತೇವೆ.’

ತ್ರಿವೇಣಿ :

‘ನಮ್ಮ ಆಕ್ಷೇಪವಿಲ್ಲ.’

° ° °

ಮಾತಿಲ್ಲದೆ ಬಹಳ ದೂರ ಆನಂದ ಮತ್ತು ದ.ಬಾ. ನಡೆಯುತ್ತಾರೆ.

ದೀರ್ಘ ನಿಟ್ಟುಸಿರು ಬಿಟ್ಟು ಕೊನೆಯಲ್ಲಿ ಆನಂದ ಅನ್ನುತ್ತಾರೆ :

'ಅರುವತ್ತು ದಾಟಿದವರು ಆ ಲೋಕದಿಂದ ಹೊರಡಬಹುದು. ಎಪ್ಪತ್ತು ಎಂಬತ್ತು ದಾಟಿದವರಿಗಂತೂ ಸೀಟುಗಳು ರಿಸರ್ವ್ ಆಗಿಯೇ ಇರುತ್ವೆ. ಆದರೆ ಈ ಮೂವತ್ತರ ಹರೆಯದವರನ್ನು ಯಾಕೆ ಗ್ರಹಾಂತರಿಸ್ತಾರೋ ನಾ ಕಾಣೆ.'

ದ.ಬಾ. :

'ಮುದ್ದಣ ಪರಂಪರೆ, ಆನಂದರೆ.'

ಏಪ್ರಿಲ್ ೨೬, ೧೯೬೪

೧೧

ಸಂದರ್ಶನ

○ ಸಂದರ್ಶನಕ್ಕೆ ಸಾಹಿತಿ, ವಿಜ್ಞಾನಿ, ರಾಜಕಾರಣಿ, ಕ್ರೀಡಾಪಟು ಎಂಬ ಭೇದ ವಿಲ್ಲ. ವ್ಯಕ್ತಿಯ ಅಂತರಂಗ ದರ್ಶನಕ್ಕೆ 'ಸಂದರ್ಶನ' ಒಳ್ಳೆಯ ವಿಧಾನ.

ಇಲ್ಲಿರುವ ಮೂರು ಸಂದರ್ಶನಗಳು ಒಂದಕ್ಕಿಂತ ಒಂದು ಭಿನ್ನ. 'ಕ್ರಾಂತಿ ಕಲ್ಯಾಣ'ಕ್ಕೆ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಬಂದ ಸಂದರ್ಭದಲ್ಲಿ ಬಿ. ಪುಟ್ಟ ಸ್ವಾಮಯ್ಯನವರನ್ನು ನಾನು ಸಂದರ್ಶಿಸಿದೆ. ಮುಂದೆ ಕೆಲವು ವರ್ಷಗಳ ಬಳಿಕ ಶಿವಪ್ಪನಾಯಕ (ಬಿದರಹಳ್ಳಿ ನರಸಿಂಹಮೂರ್ತಿ) ನನ್ನನ್ನು ಸಂದರ್ಶಿಸಿದರು. ನಿಮಿತ್ತ : ಅವರು ಓದಿ ಮೆಚ್ಚಿಕೊಂಡಿದ್ದ, ಕೇಂದ್ರ ಸಾಹಿತ್ಯ ಅಕಾದೆಮಿ ಕಡೆಗಣಿಸಿದ್ದ, ಆಗ ಸಮಕಾಲೀನ ವಿಮರ್ಶಕರು ಉಪೇಕ್ಷಿಸಿದ್ದ ನನ್ನ 'ಮೃತ್ಯುಂಜಯ' ಕಾದಂಬರಿ.

ಕೊನೆಯ ಸಂದರ್ಶನದಲ್ಲಿ ಕುಳುಕುಂದ ಶಿವರಾಯ ಮತ್ತು ನಿರಂಜನ ಮುಖಾಮುಖಿಯಾಗುತ್ತಾರೆ !

ಇನ್ನಷ್ಟು ಸಂದರ್ಶನ ಇತ್ಯಾದಿ 'ನಿರಂಜನ : ಮೂವತ್ತು ಸಂಪುಟಗಳಲ್ಲಿ' ಸರಣಿಯ ೧೬ನೇ ಸಂಪುಟದಲ್ಲಿವೆ.

ಕ್ರಾಂತಿ ಕಲ್ಯಾಣದ 'ತಾತಾ'

"ತಾತ........"

ಚಳಿಗಾಲದ ಬೆಳಗಿನ ನಿದ್ದೆ ತಾತನಿಗೆ.

"ತಾತಾ........"

"ಹ್ಞ ?"

"ನಿನ್ನ ಪುಸ್ತಕಕ್ಕೆ ಅದೇನೋ ಬಂದಿದೆ."

"ಹ್ಞ ?"

"ಪೇಪರ್‍ನಲ್ಲಿದೆ ಕ್ರಾಂತಿ ಕಲ್ಯಾಣಕ್ಕೆ...."

ಪುಟ್ಟಸ್ವಾಮಯ್ಯನವರಿಗೆ ಎಚ್ಚರವಾಯಿತು. ತಮ್ಮದೇ ಕಂದ ಎನ್ನುವಂತೆ ಅವರು ಸಾಕಿ ಸಲಹುತ್ತಿರುವ ಎಂಟು ವರ್ಷಗಳ ಎಳೆಯ ಉಷಾ ಕೈಯಲ್ಲಿ 'ಪ್ರಜಾ ವಾಣಿ' ಹಿಡಿದು ಅವರ ಹಾಸಿಗೆಯ ಮಗ್ಗುಲಲ್ಲಿದ್ದಳು. ಅದರ ಮೊದಲ ಕಾಲಮಿನಲ್ಲಿತ್ತು ಕನ್ನಡಿಗರಿಗೆ ಹರ್ಷ ತಂದ ಸುದ್ದಿ.

ಹಿಂದಿನ ರಾತ್ರೆ ಅವರು ರೇಡಿಯೋ ಕೇಳಿರಲಿಲ್ಲ.

ಕನ್ನಡದ ಪ್ರಖ್ಯಾತ ನಾಟಕಕಾರ ಕಾದಂಬರಿಕಾರ ಪುಟ್ಟಸ್ವಾಮಯ್ಯನವರು ಇಳಿವಯಸ್ಸಿನ ಕನಸುಗಳೊಡನೆ ರಾತ್ರೆ ಮಲಗಿದ್ದರು.

ಅಕಾಡೆಮಿ ಪ್ರಶಸ್ತಿ ವಿಜೇತರಾಗಿ ಅವರು ಬೆಳಗ್ಗೆ ಎದ್ದರು.

o o o

"ಕ್ರಾಂತಿ ಕಲ್ಯಾಣ" ಕನ್ನಡಕ್ಕೂ ಪುಟ್ಟಸ್ವಾಮಯನವರಿಗೂ ಕೀರ್ತಿ ತಂದಿರುವ ಕಾದಂಬರಿ.

ಆರು ಭಾಗಗಳು. ಎರಡು ಸಾವಿರಕ್ಕೂ ಹೆಚ್ಚು ಪುಟಗಳು. ಈ ಕಾದಂಬರೀ ಮಾಲೆಗೇ ಈಗಿನ ಹೆಸರು "ಕ್ರಾಂತಿ ಕಲ್ಯಾಣ".

ಇದನ್ನು ಅಚ್ಚುಕಟ್ಟಾಗಿ ಹೊರತಂದಿರುವ ಶಾರದಾ ಪ್ರಕಟನಾಲಯದ ಪರಿಚಯ ಟಿಪ್ಪಣಿ ಹೇಳುವ ಮಾತುಗಳು ಇವು :

ಕಾದಂಬರಿ ಮಾಲೆಯ ಪೂರ್ವಾರ್ಧದಲ್ಲಿ :

ಒಂದನೆಯ ಭಾಗ, "ಉದಯ ರವಿ"

ಬಸವೇಶ್ವರನ ಬಾಲ್ಯ, ಗುರುಕುಲವಾಸ, ಯೌವನ, ವಿವಾಹ, ಬಿಜ್ಜಳನ ಹತ್ತಿರ ಕರಣಿಕನಾಗಿ ನೇಮಕ, ನಿಧಿ ಶೋಧನೆ, ಮಂತ್ರಿ ಪದವಿ ಪ್ರಾಪ್ತಿ ಈ ಘಟನೆಗಳ ರಮ್ಯ ರಂಜನಾತ್ಮಕ ನಿರೂಪಣೆ.

ಎರಡನೆಯ ಭಾಗ, "ರಾಜ್ಯಪಾಲ"

ತ್ರೈಲಪ ಬಿಜ್ಜಳರ ನಡುವೆ ನಡೆಯಲಿದ್ದ ಅಂತಃಕಲಹವನ್ನು ನಿಲ್ಲಿಸಲು ಬಸವೇಶ್ವರನು ನಡೆಸಿದ ಸಂಧಾನ, ಬನವಾಸಿಯ ರಾಜ್ಯಪಾಲನಾಗಿ ನೇಮಕ, ರಾಜ್ಯಾಪಹಾರವೇ ಬಿಜ್ಜಳನ ಉದ್ದೇಶವೆಂದು ತಿಳಿದಾಗ ಬಸವೇಶ್ವರನು ಅಧಿಕಾರ ನಿವೃತ್ತನಾಗಿ ಕಲ್ಯಾಣಕ್ಕೆ ಹಿಂದಿರುಗಿದ್ದು, ಈ ಚಾರಿತ್ರಿಕ ಘಟನೆಗಳ ಸುಂದರ, ರಸಾತ್ಮಕ ಸಂವಿಧಾನ.

ಮೂರನೆಯದು "ಕಲ್ಯಾಣೇಶ್ವರ"

ತ್ರೈಲಪನ ಮರಣಾನಂತರ ಚಾಲುಕ್ಯ ವಂಶದ ಉದ್ಧಾರಕ್ಕಾಗಿ ರಾಣೀ ಕಾಮೇಶ್ವರಿಯ ಕಾಮುಕಲ್ಪ, ಪ್ರೇಮಾವತಿ ಪಾಟಲಿಕೆಯರ ಬಲಿದಾನ, ಬಸವೇಶ್ವರನಿಂದ ಅನುಭವ ಮಂಟಪದ ಸ್ಥಾಪನೆ, ಪ್ರಗತಿ, ಅಭ್ಯುದಯ, ಈ ಪ್ರಭಾವಶಾಲಿ ಐತಿಹಾಸಿಕ ಘಟನೆಗಳ ತತ್ತ್ವಪೂರ್ಣ ಮನೋರಂಜಕ ವಿಶ್ಲೇಷಣೆ.

ಕಾದಂಬರೀ ಮಾಲೆಯ ಉತ್ತರಾರ್ಧದಲ್ಲಿ :

ಒಂದನೆಯ ಭಾಗ, "ನಾಗಬಂಧ"

ಚಾಲುಕ್ಯ ಅರಸೊತ್ತಿಗೆಯ ಪುನಃ ಪ್ರತಿಷ್ಠೆಗಾಗಿ ರಾಣಿ ಕಾಮೇಶ್ವರಿಯ ಒಳಸಂಚು, ಚೆನ್ನಬಸವಣ್ಣನ ನೇತೃತ್ವದಲ್ಲಿ ಶರಣರ ದೇವಗಿರಿ ಯಾತ್ರೆ; ಕ್ರಮಿತನ ಯಜ್ಞಭಂಗ, ಗುಹೆಯಲ್ಲಿ ಶೀಲವಂತನನ್ನು ಹಾವು ಕಚ್ಚುವುದು, ಕುಸುಮಾವಳಿಯ ಬಲಿದಾನ, ಕೈಲಾಸ ಗುಹಾಲಯ ನಿರ್ಮಾಣ ಕುರಿತ ಐತಿಹ್ಯ, ಇವು ಈ ಭಾಗದ ಉಜ್ವಲ ಪ್ರಸಂಗಗಳು.

ಎರಡನೆಯದು "ಮುಗಿಯದ ಕನಸು"

ಶೀಲವಂತ ಲಾವಣ್ಯವತಿಯರ ಪ್ರೇಮ ಮತ್ತು ವಿವಾಹ, ಶರಣರ ಮೇಲೆ ವರ್ಣಸಂಕರದ ಆಪಾದನೆ, ಬಿಜ್ಜಳನ ಸಭೆಯಲ್ಲಿ ಆಪಾದನೆಯನ್ನು ಕುರಿತ ವಿಚಾರಣೆ, ನಿರ್ವಾಸಿತನಾಗಿ ಬಸವೇಶ್ವರನು ಕಲ್ಯಾಣವನ್ನು ಬಿಡುವುದು, ಈ ಚಾರಿತ್ರಿಕ ಘಟನೆಗಳ ಶಕ್ತಿಪೂರ್ಣ, ಪ್ರಭಾವಶಾಲಿ ನಿರೂಪಣೆ.

ಮೂರನೆಯದು "ಕ್ರಾಂತಿ ಕಲ್ಯಾಣ"

ಬಸವೇಶ್ವರನ ನಿರ್ವಾಸನಾ ನಂತರ ಕಲ್ಯಾಣದಲ್ಲಿ ನಡೆದ ನೂರು ದಿನಗಳ ಕ್ರಾಂತಿಕಾರಿ ಮಹತ್ತ್ವಪೂರ್ಣ ಘಟನೆಗಳು.... ರಾಣಿ ಕಾಮೇಶ್ವರಿಯ ಒಳಸಂಚು ಶರವೇಗದಿಂದ ದುರಂತದ ಕಡೆ ಧಾವಿಸಿ, ತನ್ನಂತೆ ಬಿಜ್ಜಳನ ಅಂತ್ಯಕ್ಕೂ ಕಾರಣವಾಗಿ ಶರಣ ಧರ್ಮವನ್ನು ಕಷ್ಟಪರಂಪರೆಯಲ್ಲಿ ಮುಳುಗಿಸಿದ ಹೃದಯ ವಿದ್ರಾವಕ ಘಟನೆಗಳ ವಿಸ್ತಾರ ನಿರೂಪಣೆ....

ಚುಟುಕಾಗಿ ಹೇಳುವುದಾದರೆ, ಕರ್ನಾಟಕದ ಗತ ಇತಿಹಾಸದ ಅದ್ಭುತ ಭಾಗವೊಂದನ್ನು–ಹನ್ನೆರಡನೆಯ ಶತಮಾನವನ್ನು– ಪುನಃ ಸೃಷ್ಟಿಸಿ, ಸಪ್ತ ವರ್ಣಗಳಲ್ಲಿ (ನವರಸಗಳಲ್ಲಿ) ಚಿತ್ರಿಸಿ, ಲೋಕದ ಮುಂದಿಟ್ಟಿರುವ ಬೃಹನ್ ಕಾದಂಬರಿ "ಕ್ರಾಂತಿ ಕಲ್ಯಾಣ".

"ಈ ಕಾದಂಬರಿಯನ್ನು ಬರೆಯುವ ಯೋಚನೆ ಮೊದಲು ನಿಮಗೆ ಹೊಳೆದದ್ದು ಯಾವಾಗ ?"

"ಹಿಂದೆ ಚಂದ್ರಶೇಖರ ಶಾಸ್ತ್ರಿಗಳು ಬಸವೇಶ್ವರರ ವಿಚಾರವಾಗಿ ಪಿಕ್ಚರ್ ಮಾಡೋಕೆ ಹೊರಟಿದ್ರಲ್ಲ—"

"ವ್ಯಾಕರಣ ತೀರ್ಥರು."

"ಹ್ಞಾ. ಆಗ ಅವರಿಗಾಗಿ ನಾನೂ ಒಂದು ಸಿನಾಪ್ಸಿಸ್ ತಯಾರಿಸ್ದೆ. ಏನೇನೋ ತೊಂದರೆಗಳಿಂದ ಪಿಕ್ಚರ್ ಆಗ್ಲಿಲ್ಲ."

"ಹೌದು."

"ಆಮೇಲೆ ವೀರಣ್ಣನವರಿಗೋಸ್ಕರ ಅದೇ ಕಥೆ ಇಟ್ಕೊಂಡು ಒಂದು ನಾಟಕ ಬರೆದೆ, ತೃಪ್ತಿಯಾಗ್ಲಿಲ್ಲ. ಈ ನಾಟಕ ಬೇಡ ಅಂದೆ."

"ಹೂಂ"

"ವಸ್ತು ವೈಶಾಲ್ಯದ ದೃಷ್ಟಿಯಿಂದ ಕಾದಂಬರಿಯೇ ಸರಿ ಅನಿಸ್ತು."

"ಹೂಂ"

"ಗ್ವಾಳಲರಲ್ಲಿ ಕಾಹಿಲೆ ಬಿದ್ಮೇಲೆ, ಉದ್ಯೋಗದ ತೊಂದರೆ ಇಲ್ದೆ, ಸಮಯವೂ ಬೇಕಾದಷ್ಟಿತ್ತು. ಬಸವೇಶ್ವರರ ವಿಚಾರವಾಗಿ ಹೆಚ್ಚು ಹೆಚ್ಚು ವಿಷಯ ಸಂಗ್ರಹಿಸಿದೆ, ದಾಖಲೆಗಳು, ಪ್ರಕಟಣೆಗಳು—ಏನಿದ್ದುವೋ ಎಲ್ಲ ಓದಿದೆ."

"ನೋಟ್ಸ್ ?"

"ಹ್ಞಾ. ನಾಲ್ಕು ಎಕ್ಸರ್‌ಸೈಜ್ ಪುಸ್ತಕಗಳಷ್ಟು ಟಿಪ್ಪಣಿ ಮಾಡಿದ್ದು ಬೇರೆ ಯಾರಿಗೂ ಅರ್ಥವಾಗೋದಿಲ್ಲ ಅನ್ನಿ."

"ಹ್ಞೂ."

ಇವುಗಳ ಆಧಾರದ ಮೇಲೆ ಆಗಿನ ಸಮಾಜವನ್ನು ಮನಸ್ಸಿನಲ್ಲೇ ಬಹಳ ಕಾಲ ಚಿತ್ರಿಸಿಕೊಂಡೆ."

"ಸುದೀರ್ಘ ಪ್ರಸವವೇದನೆ."

"ಬರೆದದ್ದು ೫೭–೬೦ರ ಅವಧಿಯಲ್ಲಿ. ಕೊನೆ ಭಾಗ ಸ್ವಲ್ಪ ನಿಧಾನವಾಯ್ತು.

ಒಂದು ಥರ ಅಳುಕು, ಕೊನೇ ನೋಡಿ. ಅಷ್ಟರಲ್ಲಿ ಸಿಂಗ್ ಅಲ್ಲಮನ ಮೇಲೆ ಬರಕೊಡಿ ಅಂದ(ರು)–ದೀಪಾವಳಿ ಸಂಚಿಕೆಗೆ (ಪ್ರಜಾವಾಣೀದು). ಬರೆದೆ. ಮನಸ್ಸು ತಿಳಿಯಾಗಿ, ಎಲ್ಲಾ ಸ್ಪಷ್ಟವಾಗಿ ಕಂಡ್ತು. ಕ್ರಾಂತಿ ಕಲ್ಯಾಣವನ್ನು (ಕೊನೇ ಭಾಗ) ಬರೆದು ಮುಗಿಸ್ದೆ."

"ಈ ಸೃಷ್ಟಿ ಒಂದು (spiritual experience) ಆಗಿರ್ಬೇಕು ನಿಮಗೆ."

"ಅಲ್ಲವೆ ! ಈ ಬರವಣಿಗೆಯ ಯೋಚನೆ ಹೊಕ್ಕಾಗ್ನಿಂದ ಆರೋಗ್ಯ ಬಹಳ ಸುಧಾರಿಸ್ತು."

ಂ ಂ ಂ

ಬಳೇಪೇಟೆಯ ಚೌಕದಿಂದ ಅರಳೇಪೇಟೆಗೆ ಹೋಗುವಾಗ ಬಲಕ್ಕೊಂದು ಮಸೀದಿ, ನಾಲ್ಕು ಹೆಜ್ಜೆ ಮುಂದೆ ಎಡಕ್ಕೊಂದು ಪ್ರಾಕಾರ (ಸುಣ್ಣ ಬಳಿದದ್ದು); ಅದರ ಮೇಲೊಂದು ಬಸವ. ಬಸವನ ಬಲಕ್ಕೆ ಗೋಡೆಯಲ್ಲೊಂದು ಕಿರಿದು ಬಾಗಿಲು. (ನಾಮ ಫಲಕವಿಲ್ಲ.) ಒಳಗೆ ಕಲ್ಲು ಹಾಸುಗೆಯ ಅಂಗಳ. ಪುರಾತನವಾದ ಪುಟ್ಟ ಮನೆ.

"ಕ್ರಾಂತಿ ಕಲ್ಯಾಣ"ದ ಕರ್ತೃವಿನ ಕುಟೀರ ಅದು.

ಆ ಮನುಷ್ಯನೋ, "ಆಗರ್ಭ ಶ್ರೀಮಂತ" ಎನ್ನಬೇಕು ನೋಡಿದ ಯಾರಾದರೂ. ಅಂಥ ನಡೆ, ಅಂಥ ನುಡಿ.

ಭಾರತೀಯ ಭಾಷೆ ಸಾಹಿತ್ಯಗಳ ಪುನರುದಯ ಕಾಲದಲ್ಲಿ ಮೂಡಿಬಂದ ಚೇತನ ಇದು.

ಉಡುಗೆ ತೊಡುಗೆ ಎಲ್ಲ ಅಚ್ಚುಕಟ್ಟು. ಮಂತ್ರಿಯಲ್ಲ. ಬಂಗಾಳೀ ಕಾದಂಬರಿಗಳ ಪಾತ್ರದ ಹಾಗೆ.

"ಬಿ ಅಂದರೆ ?

"ಬಸಪ್ಪ. ತಂದೆಯ ಹೆಸರು."

(ಪ್ಲೇಗಿಗೆ ತುತ್ತಾದರು, ನಲ್ವತ್ತನೆಯ ವಯಸ್ಸಿನಲ್ಲೇ.)

"ಊರು–"

"ಬೆಂಗಳೂರು ; ಬಿ. ಯೇ !"

ಕೆಲವು ತಲೆಮಾರುಗಳ ಹಿಂದೆ ಆ ಮನೆತನ ಕಾಂಜೀವರಂ ಕಡೆಯಿಂದ ಇಲ್ಲಿಗೆ ಬಂದು ನೆಲೆಸಿತು. "ಪ್ರಭುಲಿಂಗಲೀಲೆಯನ್ನು ತಮಿಳಿಗೆ ಭಾಷಾಂತರಿಸಿದ ಶಿವಕುಮಾರ ಸ್ವಾಮಿಯವರು ತಮ್ಮ ಮನೆತನದ ಗುರುಗಳು– ಎನ್ನುತ್ತಿದ್ದರಂತೆ ಪುಟ್ಟಸ್ವಾಮಯ್ಯನವರ ಮುತ್ತಾತ.

ವಿಶ್ವವಿದ್ಯಾನಿಲಯ, ಸಂಶೋಧನೆ, ನಿಬಂಧ, ಡಾಕ್ಟರೇಟ್, ಪ್ರಾಧ್ಯಾಪಕ ಪದವಿ–ಅದಲ್ಲ. ಪುಟ್ಟಸ್ವಾಮಯ್ಯ ತುಳಿದದ್ದು ಅದಕ್ಕಿಂತ ಭಿನ್ನವಾದ ದಾರಿಯನ್ನು.

"ನೀವು ಎಪ್ಪತ್ತನ್ನು ಸಮೀಪಿಸಿದೀರಿ ಅಂತ ಬರೆದಿದಾರೆ.

"ಹೌದು. ಅರವತ್ತೆಂಟು ನಡೀತಿದೆ.

"ನಿಜವಾಗಿಯೂ ! ಅರುವತ್ತರ ಹತ್ತಿರ ಇರಬಹುದು ಅಂದ್ಕೊಂಡಿದ್ದೆ.

"ನಮ್ಮ ತಾತ, ಅಜ್ಜಿ ಬಹಳ ವಯಸ್ಸಿನವರೆಗೂ ಇದ್ರು. ೧೮೭೦ರಲ್ಲಿ ತಾತ ಕಾಶಿಗೆ ಹೋಗಿ ಬಂದ್ರಂತೆ. ಪಾದಯಾತ್ರೆ ಆರು ತಿಂಗಳು ಹಿಡೀತಂತೆ."

"ನೀವು ?"

"ಇನ್ನೂ ಹೋಗಿಲ್ಲ !"

ಹುಟ್ಟಿದ್ದು ಕಳೆದ ಶತಮಾನದಲ್ಲಿ.

ಹಳತಿನ ಒಳ್ಳಿತನ್ನೆಲ್ಲ ಮೈಗೂಡಿಸಿಕೊಂಡು, ಹೊಸತಿನ ವಾತಾವರಣದಲ್ಲಿ ಬೆಳೆದಿರುವ ಜೀವ. ಭಾರತೀಯ ಸಾಹಿತ್ಯ ಪರಂಪರೆಗೆ ಅನುಗುಣವಾದ ಬರವಣಿಗೆಯ ಜಾಡು.

ಕೆಲವಾರು ವರ್ಷಗಳ ಹಿಂದೆ ನಾಟಕಕಾರರೆಂದೇ ಪುಟ್ಟಸ್ವಾಮಯ್ಯ ಪ್ರಖ್ಯಾತರು. ಕರ್ನಾಟಕದ ರಂಗಭೂಮಿಯ ಜತೆಯಲ್ಲೇ ಬೆಳೆದವರು ಅವರು. ೧೯೩೨ರಲ್ಲಿ ಪೀರ್ (ಬುದ್ಧ) ಕಂಪನಿಯ ಜತೆ ಅವರ ಒಡನಾಟವಿತ್ತು. ಕೈಲಾಸಂ ಜತೆ ಆ ದಿನಗಳಲ್ಲಿ ಅವರು ಓಡಿ ಆಡಿದರು.

"ನಿಮಗೆ ತೃಪ್ತಿ ಕೊಟ್ಟಿರುವ ನಾಟಕಗಳು ?"

"ಬುದ್ಧ, ಅಕ್ಕಮಹಾದೇವಿ. ಅಕ್ಕಮಹಾದೇವೀನ ಜಯಮ್ಮನಿಗೋಸ್ಕರ ಅಂತೇ ಬರೆದೆ. ಆದರೆ ಅಸ್ವಾಸ್ಥ್ಯದ ಕಾರಣ ಜಯಮ್ಮ ಪಾತ್ರ ವಹಿಸಲಿಲ್ಲ. ಸ್ವರ್ಣಮ್ಮ, ಮಾಲತಮ್ಮ ಮಾಡಿದ್ರು."

"ಕಂಪೆನಿಗೆ ಸಂಪಾದನೆಯ ದೃಷ್ಟಿಯಿಂದ ಹೆಸರು ಪಡೆದ ನಾಟಕಗಳು ?"

"ಕುರುಕ್ಷೇತ್ರ, ಸಂಪೂರ್ಣ ರಾಮಾಯಣ."

○ ○ ○

ಆರಂಭದಲ್ಲಿ ಕೆಲವು ಕವಿತೆಗಳನ್ನೂ ರಚಿಸಿದರು ಪುಟ್ಟಸ್ವಾಮಯ್ಯ (ಪ್ರಕಟಣೆ ತಾರಾನಾಥರ 'ಪ್ರೇಮಾ'ದಲ್ಲಿ). ಸಣ್ಣಕತೆಗಳನ್ನೂ ಬರೆದುದುಂಟು. (ಸಂಕಲನ : 'ನಾಟ್ಯವಾಹಿನಿ') ಚಲಚ್ಚಿತ್ರಗಳಿಗಾಗಿಯೂ ಒಂದಿಷ್ಟು ಬರೆದರು. (ಅನುಭವಸಾರ : 'ನಾಟ್ಯರಂಗ-ಚಿತ್ರರಂಗ')

"ಆಧುನಿಕ ಯುಗದ ಮಹಾಕಾವ್ಯ ಕಾದಂಬರಿಯೇ ಅಲ್ಲವೇ ?"

"ಹೌದೆಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಪ್ರತಿಭೆಯ ಪೂರ್ಣ ವಿಕಾಸಕ್ಕೆ ಕಾದಂಬರಿಯ ವಿಸ್ತಾರವಿರಬೇಕು."

ಯಶಸ್ವೀ ನಾಟಕಗಳನ್ನು ಬರೆದ ಪುಟ್ಟಸ್ವಾಮಯ್ಯನವರ ಲೇಖನಿಯೇ ಹತ್ತು ಹದಿನೇಳು ಯಶಸ್ವೀ ಕಾದಂಬರಿಗಳನ್ನು ಬರೆದಿದೆ.

ಬರೆಯುತ್ತ ಬದುಕಿದ ಇವರು ನಡು ನಡುವೆ ಪತ್ರಿಕಾ ವ್ಯವಸಾಯ ಕೈಗೊಂಡುದುಂಟು. (ಉದ್ಯೋಗ)

ವೀರಣ್ಣಗೌಡರು ಸಂಪಾಕತ್ವವನ್ನು ಬಿಟ್ಟಮೇಲೆ ಪುಟ್ಟಸ್ವಾಮಯ್ಯನವರು ನಾಲ್ಕು ವರ್ಷಗಳ ಕಾಲ ಒಕ್ಕಲಿಗರ ಪತ್ರಿಕೆ ಸಂಪಾದಕರಾಗಿದ್ದರು. (ನಂಬಿದರ ನಂಬಿ... ?) ಅನಂತರ ಗುಪ್ತರ 'ಜನವಾಣಿ', 'ಪ್ರಜಾಮತ'ಗಳಲ್ಲಿ. ಮಾತೃಭೂಮಿಯಲ್ಲಿ 'ಪ್ರಜಾವಾಣಿ'ಯಲ್ಲಿ. ಒಂದು ವರ್ಷ ಜಯಭಾರತದಲ್ಲಿ....

ಪತ್ರಿಕೋದ್ಯಮ, ಸೃಷ್ಟ್ಯಾತ್ಮಕ ಬರವಣಿಗೆಗೆ ಲೇಖನವನ್ನು ಅಣಿಗೊಳಿಸುತ್ತದೆ—ಎನ್ನುವುದು ಪುಟ್ಟಸ್ವಾಮಯ್ಯನವರ ಖಚಿತಾಭಿಪ್ರಾಯ.

ಸತ್ಯನಿಷ್ಠೆ, ವಿವರಗಳನ್ನು ತಿಳಿಯುವ ಪ್ರವೃತ್ತಿ, ಸಮರ್ಥ ಪ್ರತಿಪಾದನೆ—ಇವು ಪತ್ರಿಕೋದ್ಯೋಗಿಗೆ ಎಷ್ಟು ಅಗತ್ಯವೋ, ಬೇರೆ ಬರಹಗಾರನಿಗೂ ಅಷ್ಟೇ ಅಗತ್ಯ.

ಉದಾಹರಣೆಗೆ "ಕ್ರಾಂತಿ ಕಲ್ಯಾಣ." ಪುಟ್ಟಸ್ವಾಮಯ್ಯನವರು ಚಿತ್ರಿಸ ಬಯಸಿದ್ದು ಹನ್ನೆರಡನೆಯ ಶತಮಾನವನ್ನು. ಅದಕ್ಕೂ ಪೂರ್ವದಲ್ಲಿ—ಹನ್ನೊಂದನೆಯ ಶತಮಾನದಲ್ಲಿ—ಏನಾಯಿತು ಎಂಬುದನ್ನು ಅವರು ಅಭ್ಯಾಸ ಮಾಡಿದರು. ಮುಂದೆ ಹದಿನಾಲ್ಕನೆಯ ಶತಮಾನದ ಬಗೆಗೆ ಅರಿತರು. ವಿಜಯನಗರದಿಂದ ಹಿಂದಕ್ಕೆ ಹೊಯ್ಸಳರಲ್ಲಿಗೆ ಹೋದರು. ಅಲ್ಲಿಂದ ಚಾಲುಕ್ಯರಲ್ಲಿಗೆ. ಚಾಲುಕ್ಯರಿಂದ ಹನ್ನೆರಡನೆಯ ಶತಮಾನಕ್ಕೆ.

ಹೀಗೆ ಬಸವೇಶ್ವರರ ಕಾಲಾವಧಿಯ ಪೂರ್ವಾಪರವನ್ನು ಅರಿತುಕೊಂಡರು.

"ಬೇರೆಯವರು ಈರೀತಿ ಸಂಶೋಧನೆಯ ಕಾರ್ಯ ಮಾಡಿದರೆ ಡಾಕ್ಟರೇಟ್ ಸಿಗುತ್ತೆ."

"ಮಾಳವಾಡ್ ಅದನ್ನೇ ಅಂದ್ರು. ಮೂಲ ಸಾಮಾಗ್ರಿಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಅಂತ ಮುಗಳಿಯವರೂ ಅಂದ್ರು."

"ಡಾಕ್ಟರೇಟ್ ಕೊಟ್ಟು ನಿಮ್ಮನ್ನು ಗೌರವಿಸೋದಿಕ್ಕೆ 'ಕ್ರಾಂತಿ ಕಲ್ಯಾಣ' ವೊಂದೇ ಸಾಕು."

ಮಾತಿಲ್ಲ.

"ನಮ್ಮಲ್ಲೀಗ ಮೂರು ವಿಶ್ವವಿದ್ಯಾನಿಲಯಗಳಿವೆ."

ಮಾತಿಲ್ಲ.

ಒಳಗೆ (ನೇಪಥ್ಯದಲ್ಲಿ) ನಸುನಕ್ಕಿರಬಹುದು. ಸ್ವಗತ.

ಏನನ್ನಾದರೂ ಆಡಿಕೊಂಡಿರಬಹುದು. ಹೊರಗೆ ಮಾತ್ರ ತೆರೆ.

o o o

ಶುದ್ಧ ಕನ್ನಡದಲ್ಲಿ, ಸುಂದರವಾದ ಶೈಲಿಯಲ್ಲಿ ಲೀಲಾಜಾಲವಾಗಿ ಬರೆಯುವ ಪುಟ್ಟಸ್ವಾಮಯ್ಯನವರ ಕೃತಿಗಳಲ್ಲಿ ಕೆಲವನ್ನು ಕನ್ನಡದ ವಿಶ್ವವಿದ್ಯಾನಿಲಯಗಳಲ್ಲೂ ಪ್ರೌಢಶಾಲೆಗಳಲ್ಲೂ ಎಳೆಯರು ಅಭ್ಯಸಿಸಿದ್ದಾರೆ. ಪುಟ್ಟಸ್ವಾಮಯ್ಯನವರ ಈ ಪರಿಚಯ ಅವರ ರೇಡಿಯೋ ಪ್ರಸಾರಗಳ ಮೂಲಕ, ಕಿರಿಯರ ಪಾಲಿಗೆ ಗಾಢವಾಗುತ್ತದೆ.

ಮುಂದೆ ಜೀವನ ರಂಗವನ್ನು ಹೊಗುವ ವೇಳೆಗೆ ಪುಟ್ಟಸ್ವಾಮಯ್ಯನವರ ಇತರ ಎಲ್ಲ ಕೃತಿಗಳ ಉಡುಗೊರೆಯನ್ನು ಯುವಕರು ಪಡೆಯುತ್ತಾರೆ.

ಜೀವನವನ್ನು ಹಸನುಗೊಳಿಸಲು ಒಂದಿಷ್ಟು ಸೌಂದರ್ಯವನ್ನೂ ಮಾಧುರ್ಯವನ್ನೂ ಸಂಸ್ಕಾರವನ್ನೂ ಅದರಲ್ಲಿ ತುಂಬಲು ಆ ಕೃತಿಗಳು ಅವರಿಗೆ ನೆರವಾಗುತ್ತವೆ.

೩೧ ಜನವರಿ, ೧೯೬೫

ನಿರಂಜನ: ಹೊತ್ತಿ ಉರಿವ ಇತಿಹಾಸ ಪ್ರಜ್ಞೆ

—ಶಿವಪ್ಪ ನಾಯಕ

ಜನವರಿಯಲ್ಲಿ ನಡೆದ ಸಮುದಾಯ 'ಸಾಂಸ್ಕೃತಿಕ ಜಾತಾ'ದ ನೆನಪಿಗಾಗಿ 'ವಿಚಾರಿ' ಆರು ವಿಶೇಷ ಸಂಚಿಕೆಗಳನ್ನು ಪ್ರಕಟಿಸಿತಷ್ಟೆ. 'ನೀವು ತಪ್ಪದೇ ಓದಲೇ ಬೇಕಾದ ಪುಸ್ತಕ' ಎಂಬ ಶೀರ್ಷಿಕೆಯಡಿ 'ಮೃತ್ಯುಂಜಯ' ಎಂಬ ಕಾದಂಬರಿ ಕುರಿತು ಬರೆದಿದ್ದೆ. ಲೇಖನ ಪ್ರಕಟವಾಗಿ ಸುಮಾರು ಒಂದು ತಿಂಗಳ ನಂತರ ನನ್ನ ಹೆಸರಿಗೊಂದು ಪತ್ರ ಬಂತು. 'ಮೃತ್ಯುಂಜಯ'ದ ಲೇಖಕ ಶ್ರೀ ನಿರಂಜನರಿಂದ. ಆವರೆಗೂ ಅಪರಿಚಿತರಾಗಿದ್ದ ನನ್ನನ್ನು ಈ ಪತ್ರದ ಆತ್ಮೀಯತೆ ಬೆಸೆಯಿತು.

ಇತಿಹಾಸದ ವಿದ್ಯಾರ್ಥಿಯಾದ ನನಗೆ ಪ್ರಾಚೀನ ಈಜಿಪ್ಟಿನ ನಾಗರಿಕತೆಯ ಗೂಢಸ್ವರೂಪಗಳು ಮೊದಲಿನಿಂದಲೂ ಗುಂಗು ಹಿಡಿಸಿದ್ದವು. ನಿರಂಜನರ ಕಾದಂಬರಿ ಸ್ವಾಭಾವಿಕವಾಗಿಯೆ ನನ್ನನ್ನು ಸೆಳೆಯಿತು. ಅಲ್ಲಿನ ಸಾಹಿತ್ಯಕ ಮೌಲ್ಯ, ಜೀವನ ದರ್ಶನಗಳು ಕಂಡು ಆಶ್ಚರ್ಯಗೊಂಡೆ. ಜೊತೆಗೆ, ಕನ್ನಡದ ಯಾವ ವಿಮರ್ಶಕರೂ ಅದರ ಕಡೆಗೆ ಕಣ್ಣು ಬಿಟ್ಟು ನೋಡದಿದ್ದುದು ನನ್ನ ವಿಸ್ಮಯಕ್ಕೆ ಕಾರಣವಾಯಿತು. ನನ್ನ ಲೇಖನ ಪ್ರಕಟವಾದ ಸಂಚಿಕೆಯನ್ನು ಯಾರೋ ಮಿತ್ರರು ನಿರಂಜನರಿಗೆ ತೋರಿಸಿದರಂತೆ. ಅಂತೆಯೆ ಅವರಿಂದ ಪತ್ರ. 'ಈ ಶತಮಾನದಲ್ಲಿ ಯಾರೂ ಈ ಕಾದಂಬರಿಯನ್ನು ಕಣ್ಣೆತ್ತಿ ನೋಡಲಾರರು ಎನ್ನಿಸಿಬಿಟ್ಟಿತ್ತು' ಎಂದು ಬರೆದಿದ್ದರು. ಒಂದು ಭಾಷೆಯ ಸಾರಸ್ವತ ಲೋಕ ಒಬ್ಬ ಸತ್ವಶೀಲ ಲೇಖಕನಿಗೆ ಎಂಥ ಅಪಚಾರಗೈಯಲು ಸಾಧ್ಯ ಎಂಬ ಅರಿವು ಮೂಡಿತು ನನಗೆ.

ನಿರಂಜನರು ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಧುರೀಣರು, ಮೊದಲಿನಿಂದಲೂ ಸ್ಪಷ್ಟವಾದ ಎಡ ರಾಜಕೀಯ ನಿಲುವುಳ್ಳ ವ್ಯಕ್ತಿ. ಅವರ 'ಚಿರಸ್ಮರಣೆ' ಎಂಬ ಕಾದಂಬರಿ ಕಯ್ಯೂರು ಹೋರಾಟದ ಮಾರ್ಮಿಕ ಚಿತ್ರ

ಕೊಡುತ್ತದೆ. 'ವಿಮೋಚನೆ', 'ರಂಗಮ್ಮನ ವಠಾರ', 'ನೋವು', 'ಸ್ಮರಣೆಯೊಂದೇ ಸಾಲದೆ ?', 'ನಂದಗೋಕುಲ', 'ಬನಶಂಕರಿ', 'ಸ್ವಾಮಿ ಅಪರಂಪಾರ', 'ಅಭಯ', 'ಕಲ್ಯಾಣಸ್ವಾಮಿ', 'ಬಂಗಾರದ ಜಿಂಕೆ' ಅವರ ಕಾದಂಬರಿಗಳು. ಇದಲ್ಲದೆ ರಷ್ಯಾದ ಸುಪ್ರಸಿದ್ಧ ಲೇಖಕ ಮ್ಯಾಕ್ಸಿಂ ಗಾರ್ಕಿಯ ಕಾದಂಬರಿಗಳನ್ನೂ ಕನ್ನಡಕ್ಕೆ ತಂದ ಕೀರ್ತಿ ಇವರದು. 'ನನ್ನ ಬಾಲ್ಯ', 'ತಾಯಿ', 'ಜನತೆಯ ನಡುವೆ' ಅವರ ಮುಖ್ಯ ಅನುವಾದಗಳು.

ಅವರ ಅಭಿಮಾನದ ಕರೆ. ನಾ ಮೆಚ್ಚಿದ ಲೇಖಕರೊಬ್ಬರನ್ನು ಕಾಣುವ ಕುತೂಹಲ. ಇವೆರೆಡಕ್ಕೂ ಇಂಬು ಕೊಟ್ಟಿತು 'ವಿಚಾರಿ' ಸಂಪಾದಕರ ಮನವಿ. ಪೂರ್ವ ಸೂಚನೆಯನ್ನೇ ಕೊಡದೆ ಬೆಂಗಳೂರು ಜಯನಗರದ ಅವರ ನಿವಾಸದ ಮುಂದೆ ನಿಂತೆ ಒಂದು ಸಂಜೆ. ಮನೆಯ ಹೆಸರೇ 'ಕಥೆ'. 'ವಿಶ್ವಕಥಾಕೋಶ' ಪ್ರಧಾನ ಸಂಪಾದಕರ ಅಭಿರುಚಿಗೆ ಮಣಿದು ಬೆಲ್ ಒತ್ತಿದೆ. ಮನೆ ಮುಂದಣ ಕೈತೋಟ ತಣ್ಣಗೆ ಗಾಳಿ ಬೀಸಿ ಹಾಯೆನಿಸುತ್ತಿದ್ದಂತೆ ತೆರೆದ ಬಾಗಿಲು. 'ಬನ್ನಿ, ಯಾರು ?' ಅವರ ಪತ್ನಿ ಡಾ. ಅನುಪಮಾ ನಿರಂಜನರವರು, ನನ್ನ ಹಾಗೂ ನನ್ನ ಗೆಳೆಯರ ಸಂಕೋಚಕ್ಕೆ ಎಡೆಕೊಡದೆ ಸೀದ ಹಿರಿ ಜೀವಿ ನಿರಂಜನರ ಬದುಕು-ಬರಹದ ಕೊಠಡಿಗೆ ನಮ್ಮನ್ನ ಕರೆದೊಯ್ದರು. ಪುಸ್ತಕದ ಷೆಲ್ಫುಗಳ ಮಧ್ಯೆ ಕೂತು ಬರವಣಿಗೆಯಲ್ಲಿ ತೊಡಗಿದ್ದ ಲೇಖಕರು ತುಂಬು ಹೃದಯದಿಂದ ಸ್ವಾಗತಿಸಿದರು. ಕಿಟಕಿ ತೆರೆದು ಬೆಂಗಳೂರಿನ ದೀಪರಾಜಿಗೆ ಕಣ್ಣಾಗಿತ್ತು. ತಂಪಾದ ಶರಬತ್ತು ಸವಿಯುತ್ತ ನಿರಂಜನರ ಮಾತುಗಳಿಗೆ ಒಡ್ಡಿಕೊಂಡಿವಿ. ರಾತ್ರಿ ಬಹಳ ಹೊತ್ತಾದರೂ ಪರಿವೆಯೆ ಇರಲಿಲ.

ನನ್ನ ಮಟ್ಟಿಗೆ ಒಬ್ಬ ಲೇಖಕನನ್ನ ಅಳೆಯುವ ಮಾನದಂಡವೆಂದರೆ ಇದು : ಅವನ ಕೃತಿ ನಮ್ಮಲ್ಲಿ ಮೂಡಿಸಿದ 'ಕುತೂಹಲ' ಆತನನ್ನು ಪ್ರತ್ಯಕ್ಷ ಕಂಡು ಮಾತನಾಡಿಸಿದ ಮೇಲೂ ಉಳಿದುಕೊಂಡು ಬರಬೇಕು. ಯಾಕೆಂದರೆ ನಮ್ಮ ಎಷ್ಟೋ ಜನ ಲೇಖಕರಲ್ಲಿ ಇಂದು ಇಂಥ ಗಟ್ಟಿತನ ಮಾಯವಾಗುತ್ತಿದೆ. ಒಂದು ಕೃತಿ ಓದಿ ಅದರ ಲೇಖನ ಬಗ್ಗೆ ಓದುಗ ಕಲ್ಪಿಸಿಕೊಂಡದ್ದನ್ನೆಲ್ಲ ಎಷ್ಟೋ ಸಾರಿ ಆ ಲೇಖನ ದರ್ಶನ ಅಳಿಸಿ ಹಾಕಿಬಿಡುತ್ತದೆ.

ನಿರಂಜನರನ್ನು ಭೇಟಿಯಾದ ದಿನ ಅವರೊಂದಿಗೆ ಕಳೆದ ಮೂರು ತಾಸು ನಿಜಕ್ಕೂ ನನ್ನ ಕುತೂಹಲವನ್ನು ಇಮ್ಮಡಿಗೊಳಿಸಿದವು. ಅವರು ಜ್ಞಾನ ತುಂಬಿದ ಕೊಡ. ವ್ಯಾಪಕವಾಗಿ ಅಧ್ಯಯನ ನಡೆಸಿದವರು. ಜೊತೆಗೆ ನಮ್ಮ ಎಲ್ಲ ಸಮಸ್ಯೆಗಳನ್ನು ಆಳವಾಗಿ ವಿಶ್ಲೇಷಿಸುವ ಶ್ರೇಷ್ಠ ಮಟ್ಟದ ಚಿಂತಕರು. ನಮ್ಮ ದೇಶದ ಇಡೀ ಚರಿತ್ರೆಯನ್ನ ಒನ್ನೆಲಿಗಿಟ್ಟುಕೊಂಡೆ ಪ್ರತಿಯೊಂದನ್ನೂ ಚರ್ಚಿಸಬಲ್ಲಂಥ ಮೇಧಾವಿ. ಇತಿಹಾಸ ಚಕ್ರದ ಉರುಳುಗಳನ್ನ ಗುರ್ತಿಸಿ ಕ್ರಿಯಾ ಪ್ರವರ್ತಕರಾಗಬೇಕೆನ್ನುವವರು. ಅವರು ಪ್ರಸ್ತಾಪ ಮಾಡಿದ ಎಷ್ಟೋ ವಿದ್ಯಮಾನಗಳು

ಪುಸ್ತಕಗಳು ನಾವು ಮೊದಲ ಬಾರಿಗೆ ಕೇಳಿದಂತವು. ಹೀಗೆ ಒಂದು ಇಡೀ ಸಂಸ್ಕೃತಿ, ಇಡೀ ನಾಗರಿಕತೆಯನ್ನೇ ತಲೆಯಲ್ಲಿ ತುಂಬಿಕೊಳ್ಳಬೇಕಾದ್ದು ಪ್ರತಿಯೊಬ್ಬ ಗಂಭೀರ ಲೇಖಕನ ಆದ್ಯ ಕರ್ತವ್ಯ.

ಇಷ್ಟಿದ್ದರೂ ಅವರು ತುಂಬ ನಿಗರ್ವಿ. ಸದಾ ಹಸನ್ಮುಖಿ. ತಮ್ಮ ತಲೆಮಾರಿನ ಅಭಿಪ್ರಾಯಗಳನ್ನಷ್ಟೇ ತಲೆಯಲ್ಲಿ ತುಂಬಿಕೊಂಡು ಬೆಳೆಯದೆ ಎಲ್ಲೋ ನಿಂತುಬಿಟ್ಟವರಲ್ಲ. ಸದಾ ಅರ್ಥಪೂರ್ಣವಾದ ಹೊಸತನ್ನು ಸ್ವಾಗತಿಸುವವರು. ಇಂಥವರಲ್ಲಿ 'ವಿಚಾರಿ'ಗಾಗಿ ನಾನು ಕೇಳಬೇಕಾಗಿದ್ದ ಪ್ರಶ್ನೆಗಳನ್ನು ಮಂಡಿಸಿದಾಗ ಅವರಿಂದ ಬಂದ ಉತ್ತರ ಇಗೊ ಇಲ್ಲಿವೆ :

ಚಿಂತನಶೀಲ ಲೇಖಕನಿಗೆ ಸಾಮಾಜಿಕ ಕಳಕಳಿಯೊಂದೆ ಸಾಲದೆ ?

ರಾಜಕೀಯ ಸಿದ್ಧಾಂತವೊಂದಕ್ಕೆ ಬದ್ಧನಾಗಿರುವುದು ಅವಶ್ಯಕವೆ ?

ಸಾಮಾಜಿಕ ಕಳಕಳಿಯುಳ್ಳ ಚಿಂತನಶೀಲ ಲೇಖಕ ಒಳ್ಳೆಯ ಸಾಹಿತ್ಯ ಕೃತಿಯನ್ನು ರಚಿಸಬಲ್ಲ. ಆ ಕಳಕಳಿ ಕಾರ್ಯಶೀಲವಾಗುವ ರೀತಿ ಯಾವುದು ? ಬಿಡಿಬಿಡಿಯಾದ ದೈನಂದಿನ ಸಂಭವಗಳಿಗೆ ಸ್ಪಂದಿಸುವವನು ಹನಿಹನಿಯಾಗಿ ಕರುಣೆಯ ಕೊಳ ನಿರ್ಮಿಸಲು ಅಥವಾ ಆಗೊಮ್ಮೆ ಈಗೊಮ್ಮೆ ರೋಷದಿಂದ ಗರ್ಜಿಸಲು ಶಕ್ತ. ಆದರೆ ಇತಿಹಾಸ ಪ್ರಜ್ಞೆಯೂ ಇರುವವನ ಸಾಮಾಜಿಕ ಕಳಕಳಿ ಹೆಚ್ಚು ಅರ್ಥಪೂರ್ಣವಾಗ್ತದೆ; ಕೃತಿ ಪರಿಣಾಮಕಾರಿಯಾಗ್ತದೆ. ಇನ್ನು, ರಾಜಕೀಯ ಸಿದ್ಧಾಂತಕ್ಕೆ ಬದ್ಧತೆಯ ಪ್ರಶ್ನೆ. ನನ್ನ ಮಟ್ಟಿಗೆ ಹೇಳುವುದಾದರೆ, ನಾನು ರಾಜಕೀಯದಲ್ಲಿ ಆಸಕ್ತ. ಸಮಾಜದ ರೂಪಪರಿವರ್ತನೆಗೆ ಅಗತ್ಯವಿರುವ ಸೂಕ್ಷ್ಮಾಣುಗಳು ಸಮಾಜದೊಳಗೇ ಇವೆ. ಪರಿವರ್ತನೆ ಅಪೇಕ್ಷಿತ ರೀತಿಯಲ್ಲಿ ಆಗ್ಬೇಕಾದರೆ, ಬದುಕು ಪ್ರಯೋಗ ಶಾಲೆಯಾಗ್ಬೇಕು. ಅಲ್ಲಿ ರಾಜಕೀಯ ವಿಜ್ಞಾನಿಯೊಂದಿಗೆ ಸಾಹಿತಿಯೂ ಸಹಪ್ರವರ್ತಕನಾಗಿ ದುಡೀಬೇಕು – ಆಳಾಗಿ ಅಲ್ಲ. ಅಂತಹ ಪ್ರಯೋಗ ಶಾಲೆಯಲ್ಲಿ ನಾನೊಬ್ಬ ಜತೆದುಡಿಮೆಗಾರ. ನಿರ್ದಿಷ್ಟ ರಾಜಕೀಯ ಸಿದ್ಧಾಂತಕ್ಕೆ ಬದ್ಧರಾದವರೂ ಸೊಗಸಾದ ಸಾಹಿತ್ಯ ಕೃತಿಗಳನ್ನು ರಚಿಸಬಲ್ಲರು. ಬದುಕಿಗೆ ಬದ್ಧತೆ ಎನ್ನುವವರಿಂದಲೂ ಒಳ್ಳೆಯ ಬರವಣಿಗೆಯನ್ನು ನಿರೀಕ್ಷಿಸಬಹುದು. ನಿರ್ದಿಷ್ಟ ರಾಜಕೀಯ ಸಿದ್ಧಾಂತವನ್ನು ಪ್ರತಿಪಾದಿಸುವ ಪಕ್ಷದ ಸದಸ್ಯನಾಗಿಯೂ ದುಡಿಯುವ ಹಕ್ಕು ಚಿಂತನಶೀಲ ಲೇಖಕನಿಗಿದೆ. ಆಗ ಆ ಪಕ್ಷದ ನೀತಿ ನಡಾವಳಿಗೆ ಅನುಸಾರವಾಗಿ ಆ ಲೇಖಕನ ಬರೆಹಗಳಲ್ಲೂ ಪಲ್ಲಟಗಳಾಗ್ತವೆ. ಒಮ್ಮೆ ಮೊನೆ ಕಂಡರೆ ಮತ್ತೊಮ್ಮೆ ಅವನ್ನು ಮಂಕು ಕವೀತದೆ. ಇದಕ್ಕೆ ಪರಿಹಾರವಿಲ್ಲ ಎನ್ನಲಾರೆ. ಪರಿಹಾರ ಇತ್ಯಾದಿ ಪ್ರಶ್ನೆಯ ವ್ಯಾಪ್ತಿಗೆ ಮೀರಿದ್ದು. ಇನ್ನೊಮ್ಮೆ ಚರ್ಚಿಸೋಣ.

ಕರ್ನಾಟಕದ (ಇತ್ತೀಚಿನ) ರೈತ ಬಂಡಾಯಗಳನ್ನು ನೀವು ಮುಂದಾಗಿ ಮನಗಂಡಿದ್ದೀರಾ ?

ಇಲ್ಲ, ಈ ವಿಷಯದಲ್ಲಿ ರಾಜಕೀಯ ವಿಜ್ಞಾನಿಗಳೂ 'ಭವಿಷ್ಯ' ನುಡಿಯಲಿಲ್ಲ. ಕಾರಣ ಜನತೆಗೂ ಅವರಿಗೂ ನಡುವೆ ಏರ್ಪಟ್ಟಿರುವ ಭಾರೀ ಕಂದಕ. ಬಡ ಗುಡಿಸಲಿಗೆ ಬೆಂಕಿ ಬಿದ್ದಾಗ ಚಳಿ ಕಾಯಿಸಲು ಓಡುತ್ತಾರೆಯೆ ? ನೇರವಾಗು ವುದೇನೋ ನ್ಯಾಯೋಚಿತ. ಕರ್ನಾಟಕದಲ್ಲಿ ವೈಜ್ಞಾನಿಕ ಸಮಾಜವಾದದ ಮಾತು ಕೇಳಿ ೪೦ ವರ್ಷಗಳಿಗೂ ಹೆಚ್ಚಾಯಿತು. ಕೆಲವೆಡೆ ರೈತರ ಸಂಘಟನೆಯೂ ಆಯಿತು. ಮತ್ತೆ ಹಿಮಯುಗ ಬಂತು. ಹಿಮ ಈಗ ಕರಗ್ತಿದೆ ತಾನಾಗಿ. ಈ ಕಾವನ್ನು ಈಗಲಾದರೂ ಉಳಿಸಿಕೊಳ್ಳದಿದ್ದರೆ ಮುಂದೆ ಬೂದಿಯುಗ ಬರ್ತದೆ ! [ಅಂದಹಾಗೆ, ರಷ್ಯದ ಕತೆ ಬಲ್ಲಿರಿ ಅಲ್ಲವೆ ? ೧೮೦೧ ರಿಂದ ೧೮೬೧ ರ ವರೆಗೆ, ೬೦ ವರ್ಷಗಳ ಅವಧಿಯಲ್ಲಿ ಅಲ್ಲಿ ೨೦೦೦ ರೈತ ದಂಗೆಗಳಾದವು. ತ್ಸಾರ್ ಚಕ್ರವರ್ತಿ ಜೀತ ವಿಮೋಚನೆಯ ಅನುಜ್ಞೆ ಹೊರಡಿಸಿದ. (ಬಂಡವಾಳಗಾರರಾಗಿ ಮಾರ್ಪಟ್ಟಿದ್ದ ವರ್ತಕರಿಗೆ ಹೇರಳ ಸಂಖ್ಯೆಯಲ್ಲಿ ಜೀತದಾಳುಗಳು ಬೇಕಾಗಿದ್ದರು !) ಆದರೆ ಚರ್ಚುಗಳೂ ಭೂಮಾಲಿಕರೂ ಪಟ್ಟುಬಿಡಲಿಲ್ಲ. ಜೀತ ವಿಮೋಚನೆಯ ಅನುಜ್ಞೆ ಯನ್ನು ಕಾರ್ಯಗತಗೊಳಿಸಲೆಂದೇ ಆ ಒಂದೇ ವರ್ಷದಲ್ಲಿ ರೈತರು ನಡೆಸಿದ ಹೋರಾಟ ಗಳು ೧೮೮೦. ಇವನ್ನೆಲ್ಲ ಯಾರೂ ಮುಂದಾಗಿ ಮನಗಂಡಿರಲಿಲ್ಲ. ಆದರೆ ಆದುದನ್ನು ಪೃಥಕ್ಕರಿಸಿ ಅನಂತರದ ದಾರಿ ನಿರ್ಧರಿಸಲು ಲೆನಿನ್‌ಗೆ ಮಾರ್ಕ್ಸ್‌ವಾದ ನೆರವು ನೀಡಿತು.]

ಪ್ರಾಚೀನ ಐಗುಪ್ತದ ಸಮಗ್ರ ದರ್ಶನ ಮಾಡಿಸುವ ನಿಮ್ಮ ಮಹತ್ವದ ಕಾದಂಬರಿ 'ಮೃತ್ಯುಂಜಯ'ಕ್ಕೆ ಪ್ರೇರಣೆಗಳೇನು ?

'ಜ್ಞಾನಗಂಗೋತ್ರಿ' ಕಿರಿಯರ ವಿಶ್ವಕೋಶದ ಕೆಲ ಲೇಖನಗಳಿಗಾಗಿ ಸಾಮಗ್ರಿ ಸಂಗ್ರಹಿಸುತ್ತಿದ್ದಾಗ ದೊರೆತೊಂದು ಪುಟ್ಟ ಕಥಾಬೀಜ ನನ್ನನ್ನು ಕೆಣಕಿತು. 'ಜ್ಞಾನಗಂಗೋತ್ರಿ' ಯೋಜನೆ ೧೯೭೪ರಲ್ಲಿ ಪೂರ್ತಿಯಾದೊಡನೆ ಪ್ರಾಚೀನ ಐಗುಪ್ತಕ್ಕೆ 'ಧಾವಿಸಿದೆ'. ಅಲ್ಲಿನ ಸಾಮಾಜಿಕ-ಆರ್ಥಿಕ-ರಾಜಕೀಯ. ಧಾರ್ಮಿಕ-ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಕುರಿತು ಆಮೂಲಾಗ್ರ ಅಧ್ಯಯನ, ಇಂದಿಗೆ ೪೫೦೦ ವರ್ಷ ಹಿಂದೆ ಅಲ್ಲಿ ನಡೆದಿತ್ತು. ಮಾನವಕುಲದ ಮೊಟ್ಟಮೊದಲ ರೈತ ಬಂಡಾಯ, ದೇಶದ ಬಲಾಢ್ಯರಿಗಿದಿರು, ಲಿಪಿಕಾರನಾಗಲು ತುಡಿತ. ೧೯೭೫ರ ಬೇಸಗೆಯಲ್ಲಿ ಬರೆಯತೊಡಗಿದೆ. ಸುತ್ತಲೂ ಉಸಿರುಕಟ್ಟಿಸುವ 'ಯಮ'ರ್ಜನ್ಸಿ. ಎಂಥ ದುರ ವಸ್ಥೆ ಒದಗಿತ್ತು ನಮ್ಮ ದೇಶಕ್ಕೆ, ಜನತೆಗೆ ! ಕಾಲ ದೇಶಗಳನ್ನು ದಾಟಿ ಎಲ್ಲಿ ಭೂಗತನಾದರೂ ಪರಿಸರ ಬಿಡ್ತದಾ ? ನಾನು ಬೇರೇನನ್ನೂ ಮಾಡಲಾಗದ ಅಸಹಾಯ ಅಂಗವಿಕಲ. ತಪ್ತ ಮಿದುಳು ಬಲಗೈಯಲ್ಲಿ ಮಾತ್ರ ಶಕ್ತಿ. ಆಧುನಿಕ ರನ್ನು ಮರೆಯದೆ ಪ್ರಾಚೀನರನ್ನು ಕುರಿತು ಬರೆದೆ. ಎಲ್ಲಿ ಕ್ರೌರ್ಯ ದಬ್ಬಾಳಿಕೆ ಇರ್ತದೋ ಅಲ್ಲಿ ಜನರ ಬಂಡಾಯ ಖಚಿತ. ಆ ಮೊಟ್ಟಮೊದಲ ಬಂಡಾಯ ವಿಫಲ ವಾಯಿತಲ್ಲ ? ಮುಂದೆಯೂ ಹಾಗೆ ಆಗಬಹುದಲ್ಲ ? ಅದಕ್ಕಾಗಿಯೇ ಧರ್ಮ

ಭ್ರಷ್ಟ ಮೆನ್ನನ ಮಾತಿನಿಂದ ಕಾದಂಬರಿಯ ಮುಕ್ತಾಯ : 'ಕತ್ತಲಾದ ಮೇಲೆ ಬೆಳಕು ಹರೀತದೆ. ಇದು ಸಾಮಾನ್ಯ ಅಂತ ತೋರುವ ಅಸಾಮಾನ್ಯ ವಿಷಯ, ನೆನಪಿಡಿ'. (ಬರೆದದ್ದನ್ನು ಜನ ಓದಬೇಕು. ಬರೆಯುತ್ತಲಿದ್ದಂತೆ ಒಂದೊಂದೇ ಅಧ್ಯಾಯವನ್ನು ತರಿಸಿಕೊಂಡು 'ಕರ್ಮವೀರ' ಸಂಪಾದಕ ಶಂಕರ ಪಾಟೀಲರು ಧಾರವಾಹಿಯಾಗಿ ಪ್ರಕಟಿಸಿದರು. ಜತೆಯಲ್ಲೇ ಪುಸ್ತಕ ರೂಪದ ಮುದ್ರಣ ಕೂಡ. ಅಂತಿಮ ಅಧ್ಯಾಯವನ್ನು ಬರೆದ ಕೆಲವೇ ದಿನಗಳಲ್ಲಿ, ೧೯೭೬ ನವೆಂಬರ್‌ನಲ್ಲಿ, 'ಮೃತ್ಯುಂಜಯ' ಪುಸ್ತಕ ರೂಪದಲ್ಲೂ ಹೊರಬಿತ್ತು. ಒಂದು ಪ್ರತಿ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಧಾವಿಸಿತು. ಅಲ್ಲಿದ್ದ ನನ್ನ ಆತ್ಮೀಯ ಮಿತ್ರರೊಬ್ಬರನ್ನು ಹುಡುಕಿಕೊಂಡು ! ಸೆರೆಮನೆಯ ಅಧಿಕಾರಿ ತಾವೂ ಅದನ್ನು ಓದಬೇಕೆಂದು ಹಟ ತೊಟ್ಟರು !) (ನಿಮ್ಮ ಪ್ರಶ್ನೆಗೆ ಸಂಬಂಧಿಸದ ಎರಡು ವಾಕ್ಯ–ಕ್ಷಮಿಸಿ : ನಿರಂಜನ ಪ್ರಗತಿಪಂಥ ರೂಪಿಸಿದ್ದು ಇಂದಿರಾ ಜಯಕಾರಕ್ಕೆ–ಅಂತ ಕ್ಷುದ್ರ ಪ್ರಚಾರ ನಡೆಸಿದ್ದ, ತಾವು ಎಮರ್ಜೆನ್ಸಿ ಹೀರೋಗಳೆಂದು ಮೆರೆಯಬಯಸಿದ್ದ, ಸಾಹಿತ್ಯ ಪ್ರತಿಷ್ಠಿತರಿಗೆ 'ಮೃತ್ಯುಂಜಯ' ಹೇಗೆ ಸಹ್ಯವಾಗಬೇಕು ? ಎರಡೆರಡು ಪ್ರತಿ ಕಳಿಸಿದರೂ ಬಹುಪ್ರಸಾರ ಮಾಧ್ಯಮಗಳು ಕಾದಂಬರಿಯ ತಂಟೆಗೆ ಹೋಗಲಿಲ್ಲ. ಆದರೆ ಹೆಸರೇ 'ಮೃತ್ಯುಂಜಯ' ಪಟ್ಟಭದ್ರರ ಯೋಜಿತಮೌನದಿಂದ ಅದು ಸತ್ತೀತೆ ?)

ನಿಮ್ಮ ಮುಂದಿನ ಕೃತಿ ಯಾವುದು ?

ನನ್ನ 'ಕನಸಿನ ಕಾದಂಬರಿ'; ಖಂಡಿತವಾಗಿಯೂ ಕೊನೆಯ ಕಾದಂಬರಿ. 'ಮೃತ್ಯುಂಜಯ' ಮುಗಿಯುತ್ತ ಬಂದಂತೆ ಆ ಕಣ್ಣುಮುಚ್ಚಾಲೆ ನಡೆದುಹೋಗಿತ್ತು. ಒಂಟಿಯಾಗಿರುವವನನ್ನು ನೋಡಲು ಆಗೊಮ್ಮೆ ಈಗೊಮ್ಮೆ ಸಹೃದಯರು ಬರುವುದುಂಟು. ಪ್ರತಿಕ್ರಿಯೆ ತಿಳಿಯುವ ಕುತೂಹಲದಿಂದ ಅವರೊಡನೆ ನನ್ನ ಆ ಕಾದಂಬರಿಯನ್ನು ಕುರಿತು ಚರ್ಚಿಸಿದ್ದುಂಟು. ಯಾರೋ ಹೇಳಿದ್ದಾನೆ : ಯಾವ ವಸ್ತುವಿನ ಬಗ್ಗೆ ಲೇಖಕ ಅತಿ ಹೆಚ್ಚು ಮಾತನಾಡ್ತಾನೋ ಆ ಕೃತಿಯನ್ನು ಆತ ಬರೆಯದೇ ಹೋಗುವ ಸಂಭವ ಹೆಚ್ಚು ಅಂತ. ನನ್ನ ಮುಂದಿನ ಕೃತಿಗೂ ಅಂಥ ಅವಸ್ಥೆ ಒದಗಬಹುದೆ ? ನೀವು ಒಳ್ಳೆಯವರು : 'ಬಿಡ್ತು ಅನ್ನಿ' ಎನ್ನಬಹುದು. ಬೇಡಿ ಶಿವಪ್ಪ ನಾಯಕರೇ, ನಿಮ್ಮ ನಾಲ್ಕನೆಯ ಪ್ರಶ್ನೆಯನ್ನು ಉತ್ತರಿಸುವುದಿಲ್ಲ. (Marks ಕಮ್ಮಿಯಾದರೂ ಪರವಾಗಿಲ್ಲ !)

ನಮ್ಮ ದಲಿತ ಸಾಹಿತ್ಯ ನಿಜವಾದ ಅರ್ಥದಲ್ಲಿ ದಲಿತರನ್ನ ಮುಟ್ಟುತ್ತಿದೆಯೇ ?

ಎಲ್ಲಿ ಬಂತು ? ಅಕ್ಷರಸ್ಥರು ಬೇಡವೆ ? ಸಾಹಿತ್ಯಾಸಕ್ತರು ಬೇಡವೆ ? ಆದರೆ ಒಂದು, ಅವರನ್ನಲ್ಲವಾದರೆ ಇತರರನ್ನಾದರೂ ಮುಟ್ಟಲಿ–ಸಾಧ್ಯವಿದ್ದರೆ. ಹಾಡು–ನಾಟಕಗಳ ವಿಷಯದಲ್ಲಿ ಮಾತ್ರ ನಾನು ಆಶಾವಾದಿ. ಇವೆರಡರಿಂದ ಬಹಳ ಕೆಲಸ ಆಗ್ತದೆ.

ಸಂದರ್ಶನ ಮುಗಿದು ಹೊರಟಾಗ ಇನ್ನೂ ಅಲ್ಲೆ ಕೂತಿದ್ದು ಅವರೊಂದಿಗೆ ಅನೇಕ ವಿಷಯಗಳ ಮೇಲೆ ಚರ್ಚಿಸಬೇಕೆಂಬ ತವಕ. ಕಾಲ ನಮಗಾಗಿ ನಿಲ್ಲುವಂತಿದ್ದರೆ !

ಅವರ ಪತ್ನಿ ಡಾ. ಅನುಪಮಾ ನಿರಂಜನ ನಿರಾಡಂಬರದ ಸರಳಜೀವಿ. ಅವರ ಪುತ್ರಿ ತೇಜಸ್ವಿನಿ ಮುಂಬೈನಲ್ಲಿದ್ದಾರೆಂದು ತಿಳಿಯಿತು. ದಂಪತಿಗಳು, ಅವರ ದ್ವಿತೀಯ ಪುತ್ರಿ ಸೀಮಾ ಹಸನ್ಮುಖರಾಗಿ ಬೀಳ್ಕೊಟ್ಟರು 'ಮತ್ತೆ ಬನ್ನಿ' ಎನ್ನುತ್ತ. ಹೊರಗೆ ರಾತ್ರಿ ನಿಶ್ಶಬ್ದವಾಗಿತ್ತು. ಯಾವುದೋ ಲೋಕದಿಂದ ಬೆಂಗಳೂರಿನ ಜಯನಗರದ ರಸ್ತೆಗಿಳಿದಂತೆ.

—ಗೀಲಗ

ಕುಳುಕುಂದ ಶಿವರಾಯ-ನಿರಂಜನ ಸಂವಾದ

ನೀಲಿ ಬುಶ್ ಶರಟು ಬಿಳಿಯ ಪ್ಯಾಂಟು ತೊಟ್ಟ ಇಪ್ಪತ್ತಾರರ ಸ್ಫುರದ್ರೂಪಿ ಯುವಕ ಒಳಗೆ ಬಂದ(ರು). ಮುಗುಳುನಗೆ ಮೋಹಕವಾಗಿತ್ತು.

"ಗುರುತು ಸಿಕ್ಕಿತಾ ?"

"ಸಿಕ್ತು, ಶಿವ. ನನ್ನ ಬದುಕಿಗೆ ಅಂಟಿದ ಪೀಡೆ ನೀನು. ಹೇಗೆ ಮರೆತೇನು ?"

"ಸಿಟ್ಟು ಮೂಗಿನ ತುದಿಯಲ್ಲೇ ಇದೆ-ಇನ್ನೂ !"

"ಇಲ್ಲ ಮಹಾರಾಯ. ಅರುವತ್ತಾಯಿತು. ಇನ್ನಾದರೂ ತಣ್ಣಗಾಗೋದು ಬೇಡವಾ ?"

"ಅದು ಗೋಸ್ಕಾರ ಮಾತು. ನೀನು ತಣ್ಣಗಾಗೋದು ಒಮ್ಮೆಯೇ !"

"ಸರಿಯಪ್ಪ ವೈಯಕ್ತಿಕ ವಿಷಯದಲ್ಲಾದರೂ ದುಡುಕು ಸಿಡುಕು ಕಮ್ಮಿಯಾಗಿವೆ. ಒಪ್ತೀಯಾ ?"

"ನಿನ್ನ ಹೆಂಡತಿ ಮಕ್ಕಳನ್ನು ಕೇಳಿ ನೋಡಬೇಕು."

"………………"

"ಮೌನಕ್ಕೆ ಕಾರಣ ?"

"ಬದುಕು ಸಾವು ಎರಡರ ಜತೆಗೂ ರಾಜಿ ಮಾಡಿಕೊಂಡಿರುವ ಮನುಷ್ಯ. ಒಂದಿಷ್ಟು ಮೌನವಾಗಿರುವ ಹಕ್ಕೂ ಇಲ್ಲವೆ ನನಗೆ ?"

"ಇಲ್ಲ ಎನ್ನಲಾರೆ....ಬೆಳಗ್ಗೆ ಇಳಾ ಪ್ರಿಂಟರ್ಸ್‌ಗೆ ಹೋಗಿದ್ದೆ."

"ವಿಜಯಾ ಸಿಕ್ಕಿದರಾ ?"

ಊಹೂಂ. ಗುರುಮೂರ್ತಿ-ಭಾರತಿ ಇದ್ದರು. ಮೇಜಿನ ಮೇಲೆ ನಿನ್ನ 'ಮುಖತಃ' ಪುಸ್ತಕದ ಮುದ್ರಿತ ಪುಟಗಳನ್ನು ನೋಡಿದೆ."

"ಓದಿದೆಯಾ ?"

ಹ್ಞ. ಅವರೇನೂ ಬೇಡ ಅನ್ಲಿಲ್ಲ."

"ಒಳ್ಳೆಯವರು, ಉದಾರಿ ದಂಪತಿ...."

ನಿರಂಜನರಿಗೆ ಚಲನೆ ಕಷ್ಟ. ಲಕ್ವಾ, ನೋಡಿ. ಇಲ್ದಿದ್ರೆ ಪ್ರೂಫ್ ಓದೋಕ್ಕೆ ಅವರೇ ಬರ್ತಿದ್ರು ಅಂದ್ರು. ನನ್ನ ಎಡಗೈ ಎಡಗಾಲು ನೀವಿಕೊಂಡೆ !"

"ಹುಚ್ಚಪ್ಪ."

"ಹಸ್ತಪ್ರತಿ ಪೂರ್ತಿ ಕೊಟ್ಟಿದಾಸಾ ?-ಅಂತ ಕೇಳಿದೆ."

"ಇಲ್ಲ ; ಕೊನೇ ಲೇಖನ ಬರಬೇಕು ಅಂದ್ರು. ಕತೆ, ಕಾದಂಬರಿ, ಲೇಖನ, ವಿಮರ್ಶೆ, ಅನುವಾದ........ಪ್ರೆಸ್ಸಿನ ಒಂದು ಮೂಲೆಯಲ್ಲಿ ಕೂತ್ಕೊಂಡು ನೀನು ಮಾಡದೇ ಇದ್ದ ಕೆಲಸ ಯಾವುದು ?"

"ನಾನೊ ? ನೀನೊ ?"

"ಹಲವು ವರ್ಷ ನಾನು. ಕೆಲವು ವರ್ಷ ನೀನು."

"ನಿನ್ನ ಯೌವನದ ಕರಾಮತ್ತುಗಳು ನೆನಪಾದಾಗಲೆಲ್ಲ ಸ್ವಲ್ಪ ಕರುಬ್ತೇನೆ. ಹೋಗಲಿ ಆ ವಿಷಯ. ಒಟ್ಟಿನಲ್ಲಿ 'ಮುಖತಃ'ದ ಬಗ್ಗೆ ಏನು ಅನ್ನಿಸ್ತು ?"

"ಈಗ, ನೀನು ಪ್ರಶಂಸೆಗೆ ಮಾರು ಹೋಗುವುದಿಲ್ಲ, ಟೀಕೆಯಿಂದ ನೋಯೋದಿಲ್ಲ-ಅಂತ ಕೇಳಿದ್ದೇನೆ."

"ಹೊರ ಪದರದಲ್ಲಿ ಹೌದು. ಒಳಗಿನದು ಹೇಳಲಾರೆ. ನಿನ್ನಲ್ಲಿ ಯಾಕೆ ಮುಚ್ಚುಮರೆ ?"

"ಈ ಸಂಕಲನದಿಂದ ನಿನ್ನ ಅಹಮಿಗೆ ಖುಶಿಯಾಗ್ತದೆ-ಅಲ್ಲ ?"

"೧೯೪೦ರ ವರ್ಷಗಳಲ್ಲಿ ನಿನ್ನನ್ನು ಕು. ಶಿ. ರಾಯ ಅಂತಲೂ ಕರೀತಿದ್ರು."

"ಮರೆತಿಲ್ಲ. 'ಕಿಶೋರ' 'ಕು. ಶಿ. ರಾಯ' 'ಶಿ. ರಾ. ಕುಳುಕುಂದ' 'ಕುಳುಕುಂದ ಶಿವರಾಯ'....ಆ ಮೇಲೆ ರೂಪಾಂತರ, ನಾಮಾಂತರ !"

"....................."

"೧೯೭೬ ರಿಂದ ೧೯೮೪ರ ವರೆಗೆ ನಿನ್ನ ವಿಚಾರದೋಣಿ ಹೇಗೆ ಹೊಯ್ದಾಡಿತು, ಎಷ್ಟು ದೂರವನ್ನು ಕ್ರಮಿಸಿತು ಅಂತ ತಿಳಿಯೋದಕ್ಕೆ 'ಮುಖತಃ' ಸಹಾಯಕವಾಗ್ತದೆ."

"೧೯೪೩ ರಲ್ಲಿ ನೀನು ಸಂದರ್ಶಕನಾಗಿದ್ದೆ....ಮಂಗಳೂರಿನಲ್ಲಿ."

"ಸೆರೆಮನೆಯಿಂದ ಹೊರ ಬಂದಿದ್ದ ಎಂ. ಧರ್ಮಸಾಮ್ರಾಜ್ಯ ಅಧಿಕಾರಿ ಬರ ಹೇಳಿದರೆಂದು ಹೋದೆ. ಕೃಷ್ಣ ಭವನ ಹೋಟೆಲಿಗೆ. ಆಗ ನನಗೆ ಹತ್ತೊಂಬತ್ತು. ಕಮ್ಯೂನಿಸ್ಟ್ ಮುದ್ರೆ ಒತ್ತಿಸಿಕೊಂಡಿದ್ದೆ. ಮೊದಲು, ಯುದ್ಧದಲ್ಲಿ ಫಾಸಿಸಂ ಸೋಲಬೇಕು ; ಸ್ವಾತಂತ್ರ್ಯ ಸಂಗ್ರಾಮ ಆ ವೇಳೆಯಲ್ಲಿ ಉಗ್ರವಾಗಬಾರದು-ಎನ್ನುವ ವಿಚಾರ ಧಾರೆ. 'ಹಿಂಸಾಚರಣೆ ಸರಿಯೆ ?' ಅಂತ ಅವರನ್ನು ಕೇಳಿದೆ. 'ಸರಿಯಲ್ಲ' ಅಂದರು. ಸಂಭಾಷಣೆ ಸ್ವರೂಪದ ಸಂದರ್ಶನ 'ನವಭಾರತ'ದಲ್ಲಿ ಪ್ರಕಟವಾಯ್ತು."

"ಖಿಲಾಡಿ ಬುದ್ಧಿ ಅನ್ನೋದು ಇದಕ್ಕೇ ! ಸಂದರ್ಶನ ನೀಡುವವರನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿ ನಿನಗೆ ಬೇಕಾದ ಉತ್ತರ ಪಡೆಯೋದು !"

"ಒಪ್ಪಿದೆ. ೧೯೪೬ರ ಆರಂಭದಲ್ಲಿ ಬೆಂಗಳೂರಿನಲ್ಲಿ ಡಾ|| ಶಿವರಾಮ್ ಮನೆಯಲ್ಲಿ ಕೈಲಾಸಂರನ್ನು ಭೇಟಿಯಾದಾಗಲೂ ಅದೇ ಬುದ್ಧಿ ಇತ್ತು. ಫಾಸಿಸಂ, ಪ್ರಗತಿಶೀಲ ಸಾಹಿತ್ಯ ಸಂಬಂಧವಾಗಿ ಅವರಿಂದ 'ಪ್ರಗತಿಪರ' ಉತ್ತರ ಪಡೆದೆ. ಸಂದರ್ಶನ ಲೇಖನ 'ಉಷಾ'ದಲ್ಲಿ ಅಚ್ಚಾಯ್ತು....ಆದರೆ ಒಂದು : ಖಿಲಾಡಿಯಾಗಿದ್ದರೂ ಸಂದರ್ಶನಕ್ಕೆ ಒಳಗಾದವರ ವಿಚಾರದಲ್ಲಿ ನನಗೆ ಗೌರವವಿತ್ತು."

"ನೀನು ನಾನಾದ ಬಳಿಕ 'ಜನಪ್ರಗತಿ'ಯ 'ಸಾಧನ ಸಂಚಯ'ದಲ್ಲಿ ಕೆಲವು ಸಲ ಮಾತುಕತೆಗಳನ್ನು ಆಧರಿಸಿ ಓಲೆ ಬರೀತಿದ್ದೆ. ಮುಂದೆ ಧಾರವಾಡದಲ್ಲಿದ್ದಾಗ, ವಿಶಿಷ್ಟ ರೀತಿಯ ಸಂದರ್ಶನ ಪಡೆದೆ, ಕವಿ ವಿನಾಯಕರಿಂದ. ಅವರಿಗೆ ಯಾವುದೋ ಪ್ರಶಸ್ತಿ ಲಭಿಸಿದ ಸಂದರ್ಭ. ವಿನಾಯಕರ ಸಂದರ್ಶನ ಲೇಖನಕ್ಕಾಗಿ 'ಪ್ರಜಾವಾಣಿ'ಯಿಂದ ತಂತಿ ಕರೆ ಬಂತು. ವಿನಾಯಕರು ಈ ಊರು ಬಿಟ್ಟು ಹೈದರಾಬಾದಿಗೆ ಹೋಗಿದ್ದಾರೆ; ಕಾಲ್ಪನಿಕ ಭೇಟಿ ಒಪ್ಪಿಗೆಯೇ ? ಎಂದು ಕೇಳಿದೆ. "ಸರಿ" ಎಂದಿತು ತಾರು. (ಹಿಂದೊಮ್ಮೆ ಡಿ. ವಿ. ಜಿ. ಭೇಟಿ ನಿರಾಕರಿಸಿದಾಗ ರಾಮಚಂದ್ರ ಶರ್ಮ ಕಾಲ್ಪನಿಕ ಸಂದರ್ಶನ ನಡೆಸಿದ್ದು ನೆನಪಿತ್ತು.) 'ನಿರಂತರ ಯಾತ್ರಿಕ' ಚೆನ್ನಾಗಿ ಬಂತು."

"ಬೆಂಗಳೂರಿಗೆ ನೀನು ವಾಪಸಾದ ಮೇಲೆ ?"

"ಪ್ರಜಾವಾಣಿಯಲ್ಲಿ ಶುರುಮಾಡಿದ 'ಬೇವು ಬೆಲ್ಲ' ಅಂಕಣಕ್ಕಾಗಿ ಆಗೊಮ್ಮೆ ಈಗೊಮ್ಮೆ ಅವರಿವರನ್ನು ಕಂಡದ್ದುಂಟು. 'ಸುಧಾ'ಕ್ಕೋಸ್ಕರ ಪುಟ್ಟಸ್ವಾಮಯ್ಯನವರನ್ನು ('ಕಲ್ಯಾಣ ಕ್ರಾಂತಿ'ಯ ತಾತ) ಭೇಟಿಯಾದೆ."

"ಇನ್ಫಾ(ಇಂಡಿಯಾ ನ್ಯೂಸ್ ಅಂಡ್ ಫೀಚರ್ ಅಲಯನ್ಸ್)ದಲ್ಲಿದ್ದಾಗಲೂ ಸಂದರ್ಶನದ ಹೂರಣವಿದ್ದ ಲೇಖನಗಳನ್ನು ಒಂದಷ್ಟು ನೀನು ಬರೆದೆ. 'ಜ್ಞಾನ ಗಂಗೋತ್ರಿ' ಕಿರಿಯರ ವಿಶ್ವಕೋಶ ಕೆಲಸಕ್ಕೆ ಕೈ ಇಕ್ಕಿದ ಅನಂತರ ನಿನ್ನ ಸಂದರ್ಶಕ ಪಾತ್ರ ಸಮಾಪ್ತವಾಯಿತು ಎನ್ನೋಣವಾ ?"

"ನಿಜ."

"ಆಗಿನಿಂದ ನೀನೇ ಸಂದರ್ಶನಕ್ಕೆ ಒಳಗಾಗುವ ವ್ಯಕ್ತಿಯಾದೆ !"

"ಏಳು ಸಂಪುಟಗಳ ಜ್ಞಾನ ಗಂಗೋತ್ರಿ ಕಾರ್ಯ ಆರಂಭವಾದಾಗ 'ಸಂಯುಕ್ತ ಕರ್ನಾಟಕ'ದ ಮಿತ್ರ ಸುರೇಂದ್ರ ದಾನಿ ಉಪ ಸಂಪಾದಕ ಶ್ಯಾಮಸುಂದರ್ ಜತೆ ಬಂದರು. ಶ್ಯಾಮಸುಂದರರ ಸ್ಪಷ್ಟ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ. ೧೯೭೭ರ ಯುಗಾದಿಯ ಮುನ್ನಾ ದಿನ ಎಡಗಾಲು ಎಡಗೈ ಮೇಲೆ ಹತೋಟಿ ಕಳೆದುಕೊಂಡೆ ನೋಡು. ಆ ಸ್ಥಿತಿಯಲ್ಲೂ ನಾನು ದುಡಿಮೆ ಮುಂದುವರಿಸಿ ಇತರರ ಕೌತುಕಕ್ಕೂ ಕುತೂಹಲಕ್ಕೂ (ಕೆಲವರ ಮತ್ಸರಕ್ಕೂ) ಕಾರಣನಾದೆ ಅಂತ ತೋರ್ತದೆ. 'ಸಾಹಿತ್ಯ ಮತ್ತು ಕಲೆ' ಸಂಪುಟ–ಐದನೇದು–ಮುಕ್ತಾಯ ಹಂತದಲ್ಲಿದ್ದಾಗ ಕಾರ್ಕಳದ ಭುವನೇಂದ್ರ ಕಾಲೇಜಿನ ಆಚಾರ್ಯ ಎಂ. ರಾಮಚಂದ್ರರು

ಬಂದರು. ಊರಿಗೆ ಮರಳಿ ತಾವು ಕಂಡುದನ್ನು ಶಬ್ದಗಳಲ್ಲಿ ಚಿತ್ರಿಸಿದರು. ಸ್ವತಃ ಸೃಜನಶೀಲ ಬರೆಹಗಾರ ಮೂಡಿಸಿದ ನುಡಿ ಚಿತ್ರ. 'ಉದಯವಾಣಿ'ಯಲ್ಲಿ ಅಚ್ಚಾಯಿತು. ಯೋಜನೆ ಮುಕ್ತಾಯವಾದಾಗ ಗೆಳೆಯ ಎಚ್ಚೆಸ್ಕೆಯವರ ವಾದದ ವ್ಯಕ್ತಿ 'ಸುಧಾ' ಅಂಕಣಕ್ಕೆ ಗ್ರಾಸವಾದೆ."

"'ಮುಖತಃ'ದಲ್ಲಿರುವುದು ಮುಂದಿನ ಕಾಲಾವಧಿಯ ಸಂದರ್ಶನಗಳು ಅನ್ನು."

"ಹೆಚ್ಚು ಕಡಮೆ."

"ಬಲ್ಲೆ. 'ಹೆರಾಲ್ಡ್'ಗೋಸ್ಕರ ಪತ್ರಕರ್ತೆ ದಕ್ಷಾ ಹಾಥಿ ಸಂದರ್ಶನ ನಡೆಸಿ 'ದಿ ಲಿಟರರಿ ಕ್ವಾರ್ಟೆಟ್' ಅಂತ ನಿರಂಜನ ಹೆಸರು ಹೊತ್ತ ತಂದೆ ತಾಯಿ ಮಕ್ಕಳ ಮೇಲೆ ಬರೆದದ್ದು....ಅಂತೂ ಸುದ್ದಿಯಲ್ಲಿರ್ತಿದ್ದೆ, ಅನ್ನು."

"ಬರೆಹಗಾರನ ಬದುಕು ಒಂದು ರೀತಿಯಲ್ಲಿ ಖಾಸಗಿ; ಇನ್ನೊಂದು ರೀತಿಯಲ್ಲಿ ಸಾರ್ವಜನಿಕ."

"ಅದಕ್ಕೇ ೧೯೭೬ರಲ್ಲಿ ಪ್ರಗತಿಪಂಥ ಕಟ್ಟೋದಕ್ಕೆ ಹೊರಟೆ ಅಲ್ಲವಾ ?"

"ಏನಪ್ಪ ಮಾಡಲಿ ? ಇಂದಿರಮ್ಮನ 'ಯಮ'ರ್ಜೆನ್ಸಿಲಿ ಹೆಳವನಾದ ನನ್ನಿಂದ ಸಾಧ್ಯವಿದ್ದದ್ದು ಅಷ್ಟೆ. ತಲೆಗಳ ತಾಕಲಾಟಕ್ಕೆ ಒಂದು ವೇದಿಕೆ ಇರಲಿ ಅನಿಸ್ತು. ಸಾಹಿತಿಗಳ ಹೆಸರಿನಲ್ಲಿ ಇಂದಿರಾ ಜಯಕಾರದ ಯತ್ನವನ್ನು ಮುರಿದೆ."

"ಕಡೆಗೆ ಆದದ್ದು–ನೀವು ಕಂಡಿರಾ ? ನೀವು ಕಂಡಿರಾ ?"

"ಹತ್ತೊಂಭತ್ತು–ಇಪ್ಪತ್ತರ ವಯಸ್ಸಿನ ಕತೆಗಾರನಾಗಿ ನೀನೂ ಕಟ್ಟಿದೆಯಲ್ಲ ಪ್ರಗತಿಶೀಲ ಲೇಖಕರ ಸಂಘ ? ಏನಾಯಿತು ಕಡೆಗೆ ?"

"ಯಾರ‍್ಯಾರದೋ ಪಿಎಚ್.ಡಿ. ಥೀಸಿಸ್‌ನಲ್ಲಿ ದಾಖಲೆಯಾಗ್ತೇವೆ ಇಬ್ಬರೂ."

"ಉದ್ಧಾರವಾಯ್ತು ! ಸಂಘಟನೆಯ ಸದ್ದು ಗದ್ದಲಕ್ಕಿಂತ ದೂರವಾಗಿ, ಒಂಟಿಯಾಗಿ, 'ಸೃಷ್ಟಿ' ಕಾರ್ಯದಲ್ಲಿ ನಿರತನಾಗೋದು ಮೇಲು ಅನ್ನೋ ತೀರ್ಮಾನಕ್ಕೆ ಬಂದಿದ್ದೇನೆ."

"ಗವಿವಾಸದಲ್ಲೇ ನೀನು 'ಮೃತ್ಯುಂಜಯ' ಬರೆದದ್ದು. ಒಳ್ಳೇ ಪುಸ್ತಕ, ನಿನ್ನನ್ನು ಅಭಿನಂದಿಸ್ಬೇಕು. ಅದೇ ರೀತಿ ಮುಂದುವರಿದಿದ್ದರೆ 'ಪ್ರಾಗ್ಭಾರತ ಗಾಥಾ'...."

"ಹೆಸರು ಬದಲಾಯಿಸಿದ್ದೇನೆ–'ಹೆಜ್ಜೆ' ಅಂತ."

"ಕಿವಿಗೆ ಇಂಪಾಗಿದೆ. ಇಷ್ಟು ಹೊತ್ತಿಗೆ 'ಹೆಜ್ಜೆ' ಬರೆದು ಮುಗಿಸಬಹುದಾಗಿತ್ತು. ಆದರೆ, 'ವಿಶ್ವ ಕಥಾಕೋಶ'ದಲ್ಲಿ ನೀನು ಬಂದಿಯಾದೆ."

"ಕೋಶದಲ್ಲಿ ದೋಷವಿಲ್ಲ–ನನಗಾದ ಕಾಲ ನಷ್ಟವನ್ನು ಮರೆತರೆ."

"ಒಂದಷ್ಟು ಪ್ರಚಾರ ಸಿಕ್ತು. 'ಹೆರಾಲ್ಡ್'ನಲ್ಲಿ ಹಬೀಬ್ ಬರೆದ ಲೇಖನ ಓದಿದ್ದೇನೆ....ಆಮೇಲೆ ನಿನ್ನನ್ನು ಇಡಿಯಾಗಿ ತೂಗಿದ ಭಾರೀ ಸಂದರ್ಶನ 'ಸುಧಾ'ದಲ್ಲಿ."

"ಸೋಮತ್ತನಹಳ್ಳಿ ದಿವಾಕರ್ ಬರೆದದ್ದು. ಆದರೆ ಇಬ್ಬರಿಗೂ ಸರಿಹೋಗುವ ಧ್ವನಿತರಂಗ ಇಲ್ಲದೆ ಪೇಚಾಟವಾಯ್ತು. ನಾಲ್ಕು ದಿನ ಪೂರ್ವಾಹ್ನ ರುಬ್ಬಿದೆವು. ಅರೆಬರೆ ಟಿಪ್ಪಣಿ. ಒಂದು ತಿಂಗಳಾದ ಮೇಲೆ ಬರೆದರು. ನೆನಪು ಕೈ ಕೊಟ್ಟದ್ದು ಸ್ವಾಭಾವಿಕ."

"ಧ್ವನಿ ಮುದ್ರಿಸಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು."

"ನಿಜ. ಆದರೆ ಸ್ವಯಂ ಸೃಜನಶೀಲ ಲೇಖಕರಾದ ದಿವಾಕರ್‌ಗೆ ಅಪಾರ ಆತ್ಮ ವಿಶ್ವಾಸ. ಅಲ್ಲಿ ಇಲ್ಲಿ ತಪ್ಪುಗಳಿದ್ದರೂ ಓದಿಸಿಕೊಂಡು ಹೋಗುವ ನಿರಂಜನ ಕಥಾ ಬರೆದೇ ಬಿಟ್ಟರು. ಮುಂದೆ, 'ನಿಮ್ಮ ಬಯೊಡೇಟಕ್ಕಾಗಿ ದಿವಾಕರರ ಲೇಖನ ಬಳಸ್ತೀವೆ'–ಅಂತ ಇಬ್ಬರು ಮೂವರು ಸಾಹಿತ್ಯಾಸಕ್ತರು ತಿಳಿಸಿದಾಗ, ನನಗೆ ನಾನೇ ಹಿಡಿಶಾಪ ಹಾಕಿದೆ."

"ನಿರಂಜನ ಕಥಾ ಈ ಸಂಕಲನದಲ್ಲಿಲ್ಲ."

"ಇದು ಸಮಗ್ರ ಸಂದರ್ಶನ ಸಂಪುಟವಲ್ಲ. ಅಲ್ಲದೆ, ಅಂಥ ಸೊಗಸಾದ ಬರಿವಣಿಗೆ ದಿವಾಕರರ ಸ್ವಂತ ಸಂಕಲನದಲ್ಲೇ ಬರಬೇಕು."

"ಬಂದೀತು....ಒಂದು ಪ್ರಶ್ನೆ. 'ಸಂದರ್ಶನ' ಪ್ರಕಾರ ಪಶ್ಚಿಮದ ಕೊಡುಗೆ; ಇಲ್ಲಿ ಕೃಷಿ ನಡೆದದ್ದು ಪತ್ರಕರ್ತರಿಂದ ಅನ್ನಬಹುದೆ ?"

"ಬಹುಮಟ್ಟಿಗೆ ಸರಿ. ಆದರೆ, ಕಲೆ–ಸಾಹಿತ್ಯ ಕ್ಷೇತ್ರಗಳಲ್ಲಿ ವೃತ್ತಿ ನಿರತರನ್ನು ಅವರ ಬಾಂಧವರೇ ಸಂದರ್ಶಿಸುವುದುಂಟು. ಸಂದರ್ಶಕ ಪಾತ್ರದಲ್ಲಿ ವಿಮರ್ಶಕರನ್ನು, ಸೃಜನಶೀಲರನ್ನು ಕಾಣ್ತೇವೆ."

"ರಾಜಕೀಯ ಮುಖಂಡರಿಗೆ ಸಂಬಂಧಿಸಿ ಮಾತ್ರ ಪತ್ರಕರ್ತರದೇ ಮೇಲುಗೈ."

"ಅದು ಮೋಜಿನ ಆಟ. ಇದರಲ್ಲಿ ಮೂರು ವಿಧ: ಖಚಿತ ಪ್ರಶ್ನೆಗಳ ಪಟ್ಟಿ ಕೊಟ್ಟು ಉತ್ತರ ಪಡೆಯೋದು ; ಗಂಭೀರ ಮಾತುಕತೆ ನಡೆಸೋದು ; No holds barred ರೀತಿಯದು–ಈಟಿ ಮೊನೆಗಳಿಂದ ಕಿವಿಗಳನ್ನು ಚುಚ್ಚಿ ಬೋಧೆ ತಪ್ಪಿಸಿ ಆಳಕ್ಕೆ ಕೈಹಾಕಿ ಬಗೆ ಬಗೆಯ ಉತ್ತರಗಳನ್ನು ಲೂಟಿ ಹೊಡೆಯೋದು–ಮೂರನೆಯದು. ಇದು ಅನ್ಯೋನ್ಯ ಒಪ್ಪಿಗೆಯಿಂದ ಆಗುವಂಥದು."

"ಸಂದರ್ಶನದ ಕೇಳಿಗೆ ಒಂದು ನೀತಿ ಸಂಹಿತೆ ರೂಪಿಸಬಹುದೂಂತ ತೋರ್‍ತದೆ."

"–ಬಹುದು. ಸಂದರ್ಶನಕ್ಕೆ ಒಳಗಾದವ ಸುಳ್ಳು ಹೇಳಬಾರದು. ಸಂದರ್ಶಕ ಪೂರ್ವಾಗ್ರಹದಿಂದ ಕಲುಷಿತನಾಗಿರಬಾರದು. ಪರಸ್ಪರ ಆದರ ಇರಬೇಕು. ಟೇಪ್ ರೆಕಾರ್ಡರನ್ನು ತಪ್ಪದೆ ಬಳಸಬೇಕು."

"ಆಕಾಶವಾಣಿ ಸಂದರ್ಶನದಲ್ಲಿ ತೊಂದರೆಯೇ ಇಲ್ಲ! ನೇರವಾಗಿ ರೆಕಾರ್ಡ್ ಆಗ್ತದೆ."

"ಇಬ್ಬರೂ ಒಳ್ಳೆಯ ಮಾತುಗಾರರಾಗಿರಬೇಕಾದ್ದು ಇಲ್ಲಿ ಮುಖ್ಯ."

"ನೀನು ಅಂಥ ಮಾತುಗಾರನೋ ?"

"ಅಲ್ಲವಪ್ಪ–ಮಾತುಗಾರಿಕೆ ನನ್ನ ವೃತ್ತಿಯಲ್ಲ."

"ಹಾಗಾದರೆ ದ್ವಂದ್ವಗಾಯನಕ್ಕೆ ನೀನು ನಾಲಾಯಕ್ಕು."

"ಸದ್ಯಕ್ಕೆ ಸರಿಯಾದ ಅಭಿಪ್ರಾಯ. ನಾನು ಚಿಕ್ಕವನಿದ್ದಾಗ ಒಬ್ಬರು ಮೇಸ್ಟ್ರು ಹಾರ್ಮೋನಿಯಂ ಬಾರಿಸ್ತಾ ಚೆನ್ನಾಗಿ ಹಾಡ್ತಿದ್ರು. ಸುತ್ತಲೂ ಹುಡುಗಿಯರು. ನೆನಪು ಮಾಡ್ಕೊ. ಒಮ್ಮೆ ನೀನು ಹುಡುಗಿಯರ ಪಕ್ಕದಲ್ಲಿ ನಿಂತು, 'ಮಾಸ್ಟ್ರೆ, ನನಗೂ ಹೇಳಿಕೊಡ್ತೀರಾ?' ಅಂತ ಕೇಳಿದೆ. 'ಇದು ನಿನಗಲ್ಲ' ಅಂತ ಓಡಿಸಿಬಿಟ್ರು!"

"ಹೌದು. ಆದರೆ ಹೈಸ್ಕೂಲಿನಲ್ಲಿದ್ದಾಗ? ಮಲಯಾಳಿ ಕನ್ನಡಿಗ ವಿದ್ಯಾರ್ಥಿಗಳ ಜಂಟಿ ಸಭೆಯಲ್ಲಿ, ಸ್ವಾತಂತ್ರ್ಯ ಸಂಗ್ರಾಮದ ವಿಷಯ ಆಳುತ್ತಿದ್ದ ವಿದೇಶೀಯರ ಭಾಷೆಯಲ್ಲಿ, ದೀರ್ಘವಾಗಿ ಕೊರೆದೆ."

"ಅಧ್ಯಕ್ಷರಾಗಿದ್ದ ಇತಿಹಾಸದ ಅಧ್ಯಾಪಕರು ಅಂದ್ರು: For the last one hour Mr. Shivrao kept us spell-bound........"

"ಹಹ್ಹ! ನಿನ್ನ ಸ್ಮರಣ ಶಕ್ತಿಗೆ ಮೆಚ್ಚಿದೆ....ಭಾಷಣ ಮಾತ್ರ ಈ ವರ್ಷಗಳಲ್ಲಿ ನಿನಗೆ ಕಷ್ಟವಾಗ್ತಿದೆಯಂತೆ, ಉಮ್ಮಳ ಕಾಡ್ತದಂತೆ."

"ಇದು ಪಾರ್ಶ್ವ ಪೀಡಿತನಾದ ಅನಂತರದ ಸ್ಥಿತಿ. ಒಳಗಿನ ರಕ್ಷಣ ವ್ಯವಸ್ಥೆ ನಿಸ್ಸಂದೇಹವಾಗಿ ಕುಸೀತಿದೆ. ಧೂರ್ತರು ಎದುರಿಗಿದ್ದರೆ ಏನೂ ಆಗುವುದಿಲ್ಲ. ಪ್ರಾಮಾಣಿಕರು, ಸತ್ಯನಿಷ್ಠರು ಸಭೆಯಲ್ಲಿ ಹೆಚ್ಚಾಗಿದ್ದರೆ, ಅವರ ನಿರೀಕ್ಷೆಯನ್ನೂ ಕನಸುಗಳನ್ನೂ ಕಂಡಾಗ ಕುಸೀತೇನೆ. ಆಡಿದ ಮಾತಿನಿಂದ ಬೇರೆ ಯಾವುದರದೋ ದರ್ಶನವಾಗಿ ಬಿಕ್ಕುತ್ತೇನೆ. ಹೇಗೂ ನಡೆಯಲು ಆಗುವುದಿಲ್ಲ. ಸಭೆ ಸಮಾರಂಭಗಳಿಗೆ ಹೋಗುವುದನ್ನು ಈಗ ನಿಲ್ಲಿಸಿದ್ದೇನೆ....ಗವಿಯ ಏಕಾಂತ ತೃಪ್ತಿ ನೀಡ್ತಿದೆ...."

"ಮಾತು–"

"ಮೌನವಾಗ್ಬೇಕು."

"....ನನ್ನ ಬಾಯಿ ಕಟ್ಟಿದೆ."

"ನನ್ನ ಸ್ಥಿತಿಗೇ ಬಂದು ತಲುಪಿದೆಯಲ್ಲ ಶಿವ?"

* * * *

"ಕೊನೆಯದಾಗಿ...."

"ಸಂದರ್ಶಕರು ಸಾಧಾರಣವಾಗಿ ಹೇಳುವಂತೆ...."

"'ಮುಖತಃ' ಪುಸ್ತಕದಲ್ಲಿರುವ ಸಂದರ್ಶನಗಳ ಒಡೆತನ ಯಾರದು?"

"೧೯೫೭ರಲ್ಲಿ ಭಾರತ ಲೋಕಸಭೆ ಸ್ವೀಕರಿಸಿದ ಕಾಪಿರೈಟ್ ಶಾಸನದಲ್ಲಾಗಲೀ ೧೯೮೪ರಲ್ಲಿ ಅದಕ್ಕೆ ಸೇರಿದ ಕಲಮುಗಳಲ್ಲಾಗಲೀ ಈ ಅಂಶ ಸ್ಪಷ್ಟವಿಲ್ಲ....ದೊಡ್ಡಮಗಳ ಸಾಹಿತ್ಯಾಸಕ್ತಿ ಗಾಢವಾಯ್ತೂಂತ ೧೯೭೫–೭೭ರ ಅವಧಿಯಲ್ಲಿ ದುಬಾರಿ ಚಂದಾ ತೆತ್ತು ಲಂಡನಿನಿಂದ 'ಟೈಮ್ಸ್ ಲಿಟರರಿ ಸಪ್ಲಿಮೆಂಟ್' ತರಿಸೋದಕ್ಕೆ

ಏರ್ಪಾಟು ಮಾಡಿದೆ. ಕುತೂಹಲದಿಂದ ಪುಟಗಳನ್ನು ನಾನೂ ತಿರುವುತ್ತಿದ್ದೆ. ಅದರ ಒಂದು ಅಂಕಣ: ಸಂಪಾದಕರ ಪ್ರಶ್ನೆಗೆ ವಿವಿಧ ಲೇಖಕರಿಂದ ಉತ್ತರ. ಒಮ್ಮೆ ನಬೊಕೊವ್ ಉತ್ತರ ಕೊಟ್ಟಿದ್ದ. ಕೆಲವೇ ಸಾಲುಗಳು ಕೆಳಗೆ © Nabokov ಎಂದಿತ್ತು. ಉತ್ತರದ ಸ್ವಾಮ್ಯ ಅದನ್ನು ನೀಡಿದವನದು ! ಅಂದ ಮೇಲೆ ಪ್ರಶ್ನೆಯ ಸ್ವಾಮ್ಯ ಅದನ್ನು ಕೇಳಿದವನದೇ ಎಂಬುದು ಸ್ಪಷ್ಟ....ಯೋಚಿಸಿ, ಯೋಚಿಸಿ ನಾನೊಂದು ಮಾರ್ಗ ಹಿಡಿದಿದ್ದೇನೆ. ಸಂಕಲನ ರೂಪದಲ್ಲಿ ಈ ಪುಸ್ತಕದ ಒಡೆತನ ನನ್ನ ಎಲ್ಲ ಬರೆವಣಿಗೆಯ ಹಕ್ಕುದಾರಳಾದ ಸೀಮಂತಿನಿಯದು. ಬಿಡಿ ಬಿಡಿಯಾಗಿ, ಆಯಾ ಸಂದರ್ಶಕ ಅಥವಾ ಸಂದರ್ಶಕಿ ತನ್ನ ಸಂದರ್ಶನ ಲೇಖನವನ್ನು ಇಷ್ಟ ಬಂದಂತೆ ಬಳಸಬಹುದು."

"ಇದು ಅನುಕರಣೀಯ ಮೇಲ್ಪಂಕ್ತಿ........ವಿಶ್ವಕಥಾ ಕೋಶದ ಇಪ್ಪತ್ತೈದು ಸಂಪುಟಗಳಿಗೆ ನೀನು ಬರೆದ ಪ್ರಸ್ತಾವನೆಗಳಿಗೆ ಸಂಬಂಧಿಸಿ–"

"Sorry ಕೊನೆಯ ಪ್ರಶ್ನೆಯನ್ನು ಆಗಲೇ ನೀನು ಕೇಳಿ ಆಯಿತು. ಪ್ರಸ್ತಾವನೆಗಳ ಪ್ರಸ್ತಾಪ ಈಗ ಬೇಡ."

"ಓಕೆ, ಅ–ಲಕ್ ನಿರಂಜನ್ !"

–ಅವನು ಎದ್ದ.

"ಕುಳಿತಲ್ಲಿಂದಲೇ ಬೀಳ್ಕೊಡ್ತೇನೆ, ಶಿವ. ಮತ್ತೆ ಯಾವತ್ತಾದರೂ ಬಾ."

"ಬಾ ಪೀಡೆಯೇ–ಅನ್ನು !"

–ನಾನು ನಕ್ಕೆ. ಅಸೂಯೆ. ಅಳು ಬರಲಿಲ್ಲ.

—ಯುಗಾದಿ ೧೯೮೫

೧೧

ಉಪನ್ಯಾಸ

○ ಮಾತಿನಿಂದ ಭಾಷಣ ಅಥವಾ ಉಪನ್ಯಾಸ. ಇದಿಲ್ಲದೆ ಪ್ರಜಾಪ್ರಭುತ್ವವಿಲ್ಲ; ಬೌದ್ಧಿಕ ವಿಕಾಸವಿಲ್ಲ. ಬರೆದು ತರದೆ ಹಾಗೆಯೇ ಬಿಗಿಯುವ ಒಳ್ಳೆಯ ಭಾಷಣಕ್ಕೆ "ಭೇಷ್ ! ಭೇಷ್ !" ಪ್ರತಿಕ್ರಿಯೆ ಖಂಡಿತ. ಲಿಪಿರೂಪಕ್ಕಿಳಿಸಿದನ್ನು ಉಪನ್ಯಾಸವಾಗಿ ಒಪ್ಪಿಸುವುದು 'ಬೋರ್' ಎನಿಸಬಹುದು. ಈ ಕೆಲಸವನ್ನೂ ದಕ್ಷತೆಯಿಂದ, ಕೌಶಲದಿಂದ ಮಾಡುವವರುಂಟು.

ಏನೇ ಇರಲಿ, ಈಗ ನಾನು ನೀಡಲಿರುವ ಎರಡು ಉಪನ್ಯಾಸಗಳು ಬಾಯ್ದೆರೆ ಜಾತಿಯವಲ್ಲ. ಬರೆದು, ಅಚ್ಚು ಮಾಡಿಸಿದ್ದು. ಅಧ್ಯಕ್ಷ ಭಾಷಣಗಳು. ಒಂದು ೧೯೫೫ರಲ್ಲಿ ರಾಯಚೂರಿನಲ್ಲಿ ಶ್ರೀರಂಗರ ಅಧ್ಯಕ್ಷತೆಯಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಲೇಖಕ ಗೋಷ್ಠಿಯ ಅಧ್ಯಕ್ಷ ಭಾಷಣ. ಇನ್ನೊಂದು ೧೯೭೩ ರಲ್ಲಿ ದಾವಣಗೆರೆಯಲ್ಲಿ ಸಮಾವೇಶಗೊಂಡ ಪ್ರಗತಿ ಪಂಥ ಸಂಸ್ಥಾಪನಾ ಸಮ್ಮೇಳನದ ಅಧ್ಯಕ್ಷ ಭಾಷಣ.

ಮೂಲ—'ನಿರಂಜನ; ಮೂವತ್ತು ಸಂಪುಟಗಳಲ್ಲಿ' ಸರಣಿಯ ೧೬ನೆಯ ಸಂಪುಟ.

ವಿಚಾರ ಸಾಹಿತ್ಯ

ಸಮ್ಮೇಳನಾಧ್ಯಕ್ಷ ಶ್ರೀರಂಗರೇ, ನೆರೆದಿರುವ ಲೇಖಕ ಬಾಂಧವರೇ, ಸಾಹಿತ್ಯ ಪ್ರಿಯರೇ,

ಈ ಲೇಖಕಗೋಷ್ಠಿಯ ಅಧ್ಯಕ್ಷನಾಗಬೇಕೆಂಬ ಕರೆಯೋಲೆ ಬಂದಾಗ, ಕಳುಹಿದವರ ಅಜಾಗರೂಕತೆಯಿಂದ ಅಪ್ಪಿತಪ್ಪಿ ಇದು ನನ್ನೆಡೆಗೆ ಬಂದಿರಬಾರದಷ್ಟೆ— ಎಂಬ ಸಂದೇಹ ನನ್ನನ್ನು ಕ್ಷಣಕಾಲ ಕಾಡಿತು. ಆದರೆ, ಓಲೆಯಲ್ಲಿದ್ದ ಸುಸ್ಪಷ್ಟವಾದ ಒಕ್ಕಣೆ ಕಂಡು ನಾನು ಅಸಹಾಯನಾದೆ. ಬಳಿಕ, ಇದು ಕಾಲಧರ್ಮದ ಚಿಹ್ನೆ ಇರಬಹುದೆಂದು ನನ್ನನ್ನು ನಾನೇ ಸಮಾಧಾನಪಡಿಸಿದೆ. ಸಮ್ಮೇಳನಾಧ್ಯಕ್ಷರ ನೇತೃತ್ವದಲ್ಲಿ ಕಾರ್ಯ ಕಲಾಪಗಳೆಲ್ಲ ನಡೆಯುವಾಗ ಮರಿ ಸಮ್ಮೇಳನಗಳ ಅವಶ್ಯತೆಯಾದರೂ ಏನು ?–ಎಂದು ಆಕ್ಷೇಪಿಸಿದವನು ನಾನು. ಹೀಗಿದ್ದರೂ ನನ್ನನ್ನೆ ಹಿಡಿದುತರುವ ಎದೆಗಾರಿಕೆಯನ್ನು ಸಮ್ಮೇಳನದ ಸಂಘಟಕರು ತೋರಿದ್ದಾರೆ. ಅವರು ಅಭಿನಂದನೆಗೆ ಅರ್ಹರು ಎನ್ನಲೆ ?

ನನ್ನ ಆಯ್ಕೆಯನ್ನು ಕುರಿತು ನಾನೇ ಟೀಕಿಸತೊಡಗುವುದು ಆಭಾಸವೆನಿಸೀತು. ಈ ಆಯ್ಕೆಯ ಮೂಲಕ ಕನ್ನಡ ಸಾಹಿತ್ಯಲೋಕದ ಯುವಜನಾಂಗವನ್ನೆ ಗೌರವಿಸಲಾಗಿದೆ–ಎಂಬ ದೊಡ್ಡ ಮಾತೊಂದನ್ನು ಹೇಳಲು ಮನಸ್ಸಾಗುತ್ತಿದೆ. ಹಾಗೆ ಹೇಳುವುದರಿಂದ, ನನ್ನ ಹೊಣೆಗಾರಿಕೆಯನ್ನು ನಾನು ಹೆಚ್ಚಿಸಿಕೊಂಡಂತೆ. ನನಗೆ ನಾನೇ ಜವಾಬ್ದಾರನಾಗಿರುವ ಸುಲಭ ಕೆಲಸದ ಬದಲು, ಇತರರ ಪರವಾಗಿಯೂ ಮಾತನಾಡುವ ಹೊಣೆಯನ್ನು ಹೊರುವುದು ಇದೆಲ್ಲಿಯ ಗೋಳು ?

ಸ್ವಾಗತ ಸಮಿತಿಯವರು, 'ನಿಮ್ಮ ಭಾಷಣವನ್ನು ಬರೆದು ಕಳುಹಿಸಿ' ಎಂದು ಒಂದು ಪತ್ರದಲ್ಲಿ ಬರೆದರು. ಇನ್ನೊಂದು ಪತ್ರದಲ್ಲಿ, 'ನಿಮ್ಮ ಲೇಖನ ಬೇಗನೆ ಬರಲಿ' ಎಂದರು. ಬೇಕಾಗಿರುವುದು ಭಾಷಣವೆ ಲೇಖನವೆ ಎಂದು ನಾನು ತಬ್ಬಿಬ್ಬಾಗಲಿಲ್ಲ. ಬರೆಹಗಾರನ ಭಾಷಣ, ಲೇಖನದಂತೆಯೆ ಇರಬೇಕಾದುದು ನ್ಯಾಯ ತಾನೆ ?

ಅಮೆರಿಕದ ಸಾಹಿತಿ ಅರ್ನೆಸ್ಟ್ ಹೆಮಿಂಗ್‌ವೇ, 'ಬರೆಹಗಾರ ಎಂದಿಗೂ ಭಾಷಣಕಾರನಾಗಬಾರದು' ಎಂದಿದ್ದಾರೆ. ಇದನ್ನು ಒಪ್ಪಿಕೊಳ್ಳುವ ಆಸೆ. ಆದರೂ ಬರೆಹಗಾರ ಭಾಷಣಕಾರನಲ್ಲ ಎಂಬುದನ್ನೊಪ್ಪಿಕೊಂಡು ಆತ ಭಾಷಣವನ್ನೇನಾದರೂ ಮಾಡಿದರೆ ಅದು ಲೇಖನದಂತಿರಬೇಕು ಎಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ.

ಯಾವುದು ವಿಚಾರ ಸಾಹಿತ್ಯ ?

ವಿಚಾರ ಸಾಹಿತ್ಯವನ್ನು ಕುರಿತು ಲೇಖಕ ಗೋಷ್ಠಿಯ ಅಧ್ಯಕ್ಷಭಾಷಣ ನಡೆಯಬೇಕೆಂದು ನನಗೆ ಮುನ್ಸೂಚನೆ ದೊರೆತಿದೆ. ಹೀಗೆ ವಿಷಯವನ್ನು ನಿರ್ದಿಷ್ಟಗೊಳಿಸಿರುವುದು, ಮಾತನಾಡುವವರ ಹಾಗೂ ಕೇಳುವವರ ಇಬ್ಬರ ಆರೋಗ್ಯದ ದೃಷ್ಟಿಯಿಂದಲೂ ಒಳ್ಳೆಯದೇ ಎಂಬುದರಲ್ಲಿ ಸಂದೇಹವಿಲ್ಲ.

ವಿಚಾರ ಸಾಹಿತ್ಯವೆಂದು ವಾಙ್ಮಯದ ಯಾವ ಅಂಗವನ್ನು ಕುರಿತು ಮಾತನಾಡಲಿ ? ಪ್ರಾಚೀನ ಕನ್ನಡ ಸಾಹಿತ್ಯದ ಬೂಜು ಹಿಡಿದಿರುವ ಗ್ರಂಥ ಭಂಡಾರವನ್ನು ತೆರೆದು, ಅಲಂಕಾರ ಗ್ರಂಥಗಳು ವ್ಯಾಕರಣ ಗ್ರಂಥಗಳು ಗಣಿತಶಾಸ್ತ್ರ ಪಾಕಶಾಸ್ತ್ರ ಕಾಮಶಾಸ್ತ್ರ ವೈದ್ಯಶಾಸ್ತ್ರಗಳನ್ನೆತ್ತಿಕೊಳ್ಳಲೆ ? ಇದನ್ನೇ ಗತವೈಭವವೆಂದು ಕರೆದು ಇಹವನ್ನೆ ಮರೆತುಬಿಡುವುದು ಎಷ್ಟು ಸುಖಕರ! ಅಥವಾ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜ್ಞಾನ ತತ್ತ್ವಜ್ಞಾನ ಇತಿಹಾಸ ಮತ್ತಿತರ ವಿಷಯಗಳ ಮೇಲೆ ಅಲ್ಲೊಂದು ಇಲ್ಲೊಂದು ಪ್ರಕಟವಾಗಿರುವ ಪುಸ್ತಕಗಳನ್ನು ಕುರಿತು ವ್ಯಾಖ್ಯಾನ ಕೊಡಲೆ ? ಅಂತಹ ಕೃತಿಗಳ ಯಾದಿಯೊಂದನ್ನು ಸಿದ್ಧಗೊಳಿಸಿ ನಿಮ್ಮ ಮುಂದಿಡಲೆ ? ಇಲ್ಲವೆ, ಪಾಶ್ಚಾತ್ಯ ದಾರ್ಶನಿಕರ ವಿವಿಧ ಶಾಸ್ತ್ರ ಪಾರಂಗತರ ನಾಮಾವಳಿಯನ್ನು ಜಪಿಸಿ ಶ್ರೋತೃಗಳನ್ನು ದಂಗುಬಡಿಸುವ ವಿಫಲ ಯತ್ನವನ್ನು ಮಾಡಲೆ ?

ಮಾರಾಟಕ್ಕಿರುವ ಕನ್ನಡ ಪುಸ್ತಕಗಳ ಕ್ರಯಪಟ್ಟಿಯನ್ನು ನಮ್ಮ ಪ್ರಕಾಶಕರು ಆಗಾಗ್ಗೆ ಸಿದ್ಧಪಡಿಸುವುದುಂಟು. ಅದರಲ್ಲಿ ಮೊದಲು ಕಾಣಿಸುವ ಶೀರ್ಷಿಕೆ–ಕಾದಂಬರಿ. ಅನಂತರ–ಸಣ್ಣಕತೆ. ಬಳಿಕ–ನಾಟಕ. ಅದಾದ ಮೇಲೆ–ಕವಿತೆ. ಕೊನೆಯದಾಗಿ–ಇನ್ನಿತರ. ಆ 'ಇನ್ನಿತರ'ದಲ್ಲಿ, ಹರಟೆ ಪ್ರಬಂಧಗಳ ಜತೆಗೆ ಜ್ಞಾನ ಸಾಹಿತ್ಯವನ್ನೂ ಕಾಣುವೆವು. ಪುಸ್ತಕಗಳ ಮೊತ್ತದಲ್ಲಿ ಆ ಸಾಹಿತ್ಯದ ಪ್ರಮಾಣ ಅತ್ಯಲ್ಪ. ಸಾಮಾನ್ಯವಾಗಿ ನಾವು ವಿಚಾರ ಸಾಹಿತ್ಯವೆನ್ನುವುದು ಆ ಅಲ್ಪ ಪ್ರಮಾಣವನ್ನೇ. ಆದರೆ, ಆ ರೀತಿಯಾದ ವರ್ಗೀಕರಣವನ್ನು ಸರಿಯೆಂದು ಒಪ್ಪಿಕೊಳ್ಳುವುದು ನನಗೆ ಇಷ್ಟವಿಲ್ಲ.

ವಿಚಾರ ಸಾಹಿತ್ಯ ಎನ್ನುವುದರ ವಿಪುಲ ಅರ್ಥವೇನು ಹಾಗಾದರೆ ?

ಮನೋರಂಜನೆಯೊಂದೇ ಸೃಷ್ಟಿ ಸಾಹಿತ್ಯದ ಗುರಿ ಎಂದು ವಾದಿಸುವವರುಂಟು. ಅವರ ದೃಷ್ಟಿಯಲ್ಲಿ ಕತೆ–ಕಾದಂಬರಿ, ಕಾಲಹರಣ ಸಾಧನ ಮಾತ್ರ.

ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ದುರ್ಬಲವಾಗುತ್ತಿರುವ ಆ ಪ್ರತಿಪಾದನೆಯನ್ನು ಒಪ್ಪದಿರುವವರಲ್ಲಿ ನಾನೊಬ್ಬ. ಸೃಷ್ಟಿ ಸಾಹಿತ್ಯದಲ್ಲೂ ವಿಚಾರದ ಅಂಶವಿದ್ದೇ ತೀರಬೇಕು, ವಿಚಾರದ ಅಂಶವೂ ಕಲೆಯ ಅಂಶವೂ ಸಮ ಸಮನಾಗಿರಬೇಕು–ಸಮರಸ ಹೊಂದಿರಬೇಕು, ಎನ್ನುವ ಅಭಿಪ್ರಾಯ ನನ್ನದು.

ವಿಚಾರ ಸಾಹಿತ್ಯ ಎನ್ನುವುದಕ್ಕೆ ವ್ಯಾಪಕವಾದ ಅರ್ಥವನ್ನು ಕಲ್ಪಿಸುವುದು ಅಗತ್ಯ. ವಿಚಾರಶೀಲವಾದ, ವಿಚಾರವನ್ನುಳ್ಳ, ಸಾಹಿತ್ಯವೆಲ್ಲಾ ವಿಚಾರ ಸಾಹಿತ್ಯವೇ.

ಸತ್ಯ ಮತ್ತು ಸೌಂದರ್ಯ

ಜ್ಞಾನಿಯನ್ನು ಸತ್ಯಾನ್ವೇಷಕನೆನ್ನುತ್ತಾರೆ. ಸೌಂದರ್ಯೋಪಾಸಕನೆನ್ನಿಸಿಕೊಳ್ಳುವವನು ಕಲಾವಿದ–ಬರೆಹಗಾರ. ಸತ್ಯಾನ್ವೇಷಣೆಯೂ ಸೌಂದರ್ಯೋಪಾಸನೆಯೂ ವಿಭಿನ್ನ ಎಂಬ ಸಾಮಾನ್ಯ ಅಭಿಪ್ರಾಯವೊಂದು ರೂಢಿಯಲ್ಲಿದೆ. ಇದು ಸರಿಯೆ ವಿಚಾರ ಮಾಡೋಣ.

ವಿಜ್ಞಾನಿಗಿರುವುದು ಬರ್ಹಿಮುಖ ದೃಷ್ಟಿ. ಸುತ್ತಲಿನ ವಸ್ತುಸ್ಥಿತಿಯಲ್ಲಿ ಆತ ಸತ್ಯವನ್ನು ಅರಸುತ್ತಾನೆ. ಹಾಗೆಯೇ ಸೌಂದರ್ಯದ ಉಪಾಸನೆ ಕೂಡಾ. 'ಸುಂದರ' ಎಂಬ ಅನುಭವವಾಗುವುದು ಯಾವುದನ್ನೋ ಕಂಡಾಗ, ಹೊರಗಿನ ಯಾವುದನ್ನೋ ಕುರಿತು ನಮ್ಮ ಅಂತರಂಗ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದಾಗ. ಹೀಗೆ ಸತ್ಯ ಮತ್ತು ಸೌಂದರ್ಯ–ಎರಡನ್ನ ನಾವು ಕಾಣುವುದು ನಮ್ಮ ಸುತ್ತು ಮುತ್ತಲಿನ ಇರುವಿಕೆಯಲ್ಲಿ. ಆ ಇರುವಿಕೆಯೇ ನಮ್ಮಲ್ಲಿ ಅರಿವನ್ನುಂಟುಮಾಡುವ ಪ್ರೇರಕ ಶಕ್ತಿ–ನಿರ್ಣಾಯಕ ಶಕ್ತಿ. ಹೀಗೆ ತಿಳಿದುಕೊಳ್ಳುವುದರ ಬದಲು, ವಿಜ್ಞಾನವು ಬಹಿರಂಗಕ್ಕೆ ಸಂಬಂಧಿಸಿದ್ದೆಂದೂ ಕಲೆ ಅಂತರಂಗಕ್ಕೆ ಸಂಬಂಧಿಸಿದ್ದೆಂದೂ ಮಾಡುವ ವಾದ ಬುಡವಿಲ್ಲದ್ದು. ಮೆದುಳನ್ನೆಲ್ಲ ವಿಜ್ಞಾನಿಗಳ ಗುತ್ತಿಗೆಯಾಗಿ ಮಾಡಿ, ಹೃದಯ ಮಾತ್ರ ನಮ್ಮ ಬಂಡವಾಳ ಎನ್ನೋಣವೆ? ಅಂತಹ ತ್ಯಾಗಬುದ್ಧಿಯಿಂದ ಅಪಹಾಸ್ಯಕ್ಕೆ ಕಾರಣರಾದೇವು, ಅಷ್ಟೆ.

ಆಂಗ್ಲ ಮಹಾಕವಿ ಕೀಟ್ಸ್, "ಸೌಂದರ್ಯವು ಸತ್ಯ, ಸತ್ಯವು ಸೌಂದರ್ಯ" ಎಂದ. ಆತ ಆಡಿರುವ ಮಾತು ಸಾರ್ವಕಾಲಿಕವಾದದ್ದು.

ವಿಜ್ಞಾನಿ ಅರಸುವ ಅಂಶವೂ ಕಲಾವಿದ ಕಾಣುವ ಅಂಶವೂ ವಸ್ತುಸ್ಥಿತಿಯಲ್ಲೇ ವಾಸ್ತವತೆಯಲ್ಲೇ ಅಡಕವಾಗಿವೆ. ಎಲ್ಲ ವಾಸ್ತವತೆಯ ಮೂಲವೇ ಸಮಾಜ. ಹೀಗಾಗಿ, ವಿಜ್ಞಾನಿಯ ಕೆಲಸವೇ ಇರಲಿ, ಕಲಾವಿದನ ಕೆಲಸವೇ ಇರಲಿ, ಆ ಸೃಷ್ಟಿಯೆಲ್ಲ ಸಾಮಾಜಿಕವಾದುದು.

ಒಂದು ಶತಮಾನದ ಹಿಂದೆ ರಷ್ಯಾದೇಶದ ಮಹಾ ವಿಮರ್ಶಕ ಬೆಲಿನ್ಸ್ಕಿ ಕಲೆ ಮತ್ತು ವಿಜ್ಞಾನಗಳಿಗೆ ಸಂಬಂಧಿಸಿ ಬರೆದ ಮಾತುಗಳು ಹೀಗಿವೆ :

"....ಕಲೆಯೂ ವಿಜ್ಞಾನವೂ ಒಂದೇ ಅಲ್ಲವೆಂಬುದನ್ನು ಜನರು ಬಲ್ಲರು. ಆದರೆ, ತಿರುಳಿಗೆ ಸಂಬಂಧಿಸಿ ವ್ಯತ್ಯಾಸವಿಲ್ಲವೆಂಬುದೂ ವ್ಯತ್ಯಾಸವಿರುವುದು ವಸ್ತುವನ್ನು ವಿಸ್ತರಿಸುವ ವಿಧಾನದಲ್ಲಿ ಮಾತ್ರವೆಂಬುದೂ ಅವರಿಗೆ ತಿಳಿಯದು. ತತ್ತ್ವಜ್ಞಾನಿ ಯುಕ್ತಿಸರಣಿಯಲ್ಲಿ ಮಾತನಾಡುತ್ತಾನೆ; ಕವಿ ಪ್ರತಿಮೆಗಳು ಮತ್ತು ಚಿತ್ರಗಳ ರೂಪದಲ್ಲಿ ಮಾತನಾಡುತ್ತಾನೆ. ಆದರೆ, ಇಬ್ಬರೂ ಹೇಳುವ ವಿಷಯ ಮಾತ್ರ ಒಂದೇ. ರಾಜಕೀಯ ಅರ್ಥಶಾಸ್ತ್ರಜ್ಞ ಅಂಕಿಸಂಖ್ಯೆಗಳೊಡನೆ ಸನ್ನದ್ಧನಾಗಿ, ಸಮಾಜದಲ್ಲಿ ಇಂತಹ ಇಂತಹ ವರ್ಗದ ಸ್ಥಿತಿಗತಿ ಇಂತಹ ಇಂತಹ ಕಾರಣಗಳಿಗಾಗಿ ಸುಧಾರಿಸಿದೆಯೆಂದೋ ಕೆಟ್ಟದೆಯೆಂದೋ ಸಿದ್ಧಪಡಿಸಿತೋರಿಸುತ್ತಾನೆ. ಕವಿ, ಬದುಕಿನ ಮುಖ್ಯವಾದ ಕಣ್ಣಿಗೆ ಕಟ್ಟುವ ವರ್ಣನೆಯಿಂದ, ಪ್ರಾಮಾಣಿಕವಾದ ಚಿತ್ರವನ್ನು ಕೊಟ್ಟು ಓದುಗರ ಮನಸ್ಸನ್ನು ಪ್ರಚೋದಿಸಿ, ಸಮಾಜದಲ್ಲಿ ಇಂತಹ ಇಂತಹ ವರ್ಗದ ಸ್ಥಿತಿಗತಿ ಆ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡಿಸುತ್ತಾನೆ. ಒಬ್ಬಾತ ಸಿದ್ಧಪಡಿಸಿಕೊಟ್ಟರೆ, ಇನ್ನೊಬ್ಬ ತೋರಿಸಿಕೊಡುತ್ತಾನೆ. ಆ ಇಬ್ಬರೂ ಮನಗಾಣಿಸಿಕೊಡುವುದು ಸತ್ಯವನ್ನೇ, ಒಬ್ಬ ತರ್ಕಬದ್ಧವಾದ ಲೆಕ್ಕಾಚಾರದಿಂದ, ಇನ್ನೊಬ್ಬ ಚಿತ್ರಗಳ ಮೂಲಕ. ಮೊದಲಿನದನ್ನು ತಿಳಿದುಕೊಳ್ಳುವವರ ಸಂಖ್ಯೆ ಮಾತ್ರ ಬಲು ಸ್ವಲ್ಪ. ಎರಡನೆಯದು ಎಲ್ಲರಿಗೂ ಅರ್ಥವಾಗುತ್ತದೆ. ಸಮಾಜವು ಅತಿ ಹೆಚ್ಚು ಹಾಗೂ ಅತ್ಯಂತ ಪವಿತ್ರ ಆಸಕ್ತಿಯನ್ನು ವಹಿಸುವುದು ತನ್ನ ಸ್ವಂತದ ಕಲ್ಯಾಣದಲ್ಲಿ. ಸಮಾಜದ ಸದಸ್ಯರೆಲ್ಲರೂ ಆ ಆಸಕ್ತಿಯನ್ನು ತೋರಿಸುತ್ತಾರೆ. ಆ ಕಲ್ಯಾಣ ಸಾಧನೆಯ ಹಾದಿಯು ತಿಳಿವಳಿಕೆ. ಕಲೆಯು ವಿಜ್ಞಾನದಷ್ಟೇ ಚೆನ್ನಾಗಿ ಆ ತಿಳಿವಳಿಕೆಯನ್ನು ಹೆಚ್ಚಿಸಬಲ್ಲುದು. ಇಲ್ಲಿ ವಿಜ್ಞಾನ ಮತ್ತು ಕಲೆ ಎರಡೂ ಏಕಪ್ರಕಾರವಾಗಿ ಅವಶ್ಯವಾಗಿವೆ. ಕಲೆಗಿಂತ ವಿಜ್ಞಾನ ಹೆಚ್ಚು ಮಹತ್ವದ್ದಾಗುವುದು ಇಲ್ಲವೆ ವಿಜ್ಞಾನಕ್ಕಿಂತ ಕಲೆ ಹೆಚ್ಚು ಮಹತ್ವದ್ದಾಗುವುದು ಸಾಧ್ಯವಿಲ್ಲ."

ಸ್ವತಃ ನಮ್ಮನ್ನೂ ಒಳಗೊಂಡ ಸಮಾಜದ ಕಲ್ಯಾಣವೇ ಲೋಕಕಲ್ಯಾಣವೇ ನಮ್ಮೆಲ್ಲರ ಗುರಿ ಎಂಬುದನ್ನು ಒಪ್ಪಿಕೊಳ್ಳಬಹುದಲ್ಲವೆ? 'ಅಖಿಳಭುವನ ಹಿತಂಗಳ'ನು ಸಾಹಿತ್ಯ ಸಾಧಿಸಬೇಕು—ಎಂದ ನೃಪತುಂಗ, ಏಳು ಶತಮಾನಗಳಿಗೆ ಹಿಂದೆಯೇ ಅಥವಾ, ಈ ಶತಮಾನದಲ್ಲೇ ಮಹಾಪ್ರಭೃತಿ ಕೈಲಾಸಂ ಹೇಳಿದ ಹಾಗೆ, "ಸಾಹಿತ್ಯ ಆಗಲಿ, ವಿಜ್ಞಾನ ಆಗಲಿ, ಯಾರು ಯಾವ ದಾರಿನೇ ಹಿಡೀಲಿ, ನಾವು ಹುಟ್ಟಿದ ಸಮಾಜಕ್ಕೆ ಸಲ್ಲಿಸ್ಬೇಕಾದ ಋಣ-ಸಮಾಜ ಸೇವೆ...."

ಸತ್ಯ ಸೌಂದರ್ಯಗಳೆರಡೂ ದೊರೆಯುವುದು ಸುತ್ತಲಿನ ಇರುವಿಕೆಯಿಂದಲೇ ಎಂದು ಮನಗಂಡ ನಾವು, ರೂಪಗಳು ಭಿನ್ನವಾದರೂ ವಿಜ್ಞಾನ ಮತ್ತು ಸಾಹಿತ್ಯಗಳ ಗುರಿಯೊಂದೇ ಎಂಬ ಮತವನ್ನು ಸ್ವೀಕರಿಸಿದ ಹಾಗಾಯಿತು.

ಗುರಿಯೊಂದೇ. ದಾರಿಗಳು ಬೇರೆಬೇರೆ. ಆದರೂ ಸಾಧನೆಯ ಮಾರ್ಗದಲ್ಲಿ ಬಳಸುವ ಅಂಶಗಳು ಮಾತ್ರ ಸಮಾನವಾದವು: ನಮ್ಮ ಆವರಣ, ಅದರಿಂದ ಹುಟ್ಟಿದ ತಿಳಿವಳಿಕೆ, ನಾವು ಉಸಿರಾಡುತ್ತಿರುವ ವ್ಯಾಪಕವಾದ ಬದುಕು.

ಕಳೆದ ಕೆಲ ಶತಮಾನಗಳಿಂದೀಚೆಗೆ ವಿಜ್ಞಾನ ಸಾಧಿಸಿರುವ ಪ್ರಗತಿ ಅದ್ಭುತವಾದುದು. ಕಲ್ಲುಕಲ್ಲುಗಳ ಚಕಮುಕಿಯಿಂದ ಕಿಡಿ ಹುಟ್ಟಿಸಿದ ಆ ಹಿರಿಯನಿಂದ, ಸರ್ವ ಸಂಹಾರಕ ಮಾರಣಾಸ್ತ್ರದವರೆಗೆ ಸಾಗಿಬಂದಿರುವ ಹಾದಿಯು ಕಲ್ಪನೆಯೇ ರೋಮಾಂಚಕಾರಿಯಾಗಿದೆ. ಕಾಲಕಾಲಕ್ಕೂ ವೈಜ್ಞಾನಿಕ ಸಂಶೋಧನೆಗಳು ಸಾಮಾಜಿಕ ಪರಿವರ್ತನೆಗಳಿಗೆ ಕಾರಣವಾದವು ಯಂತ್ರಯುಗ, ಮಹತ್ಸಾಧನೆಗಳಿಗೆ ಪೈಪೋಟಿ-ಯುದ್ಧಗಳಿಗೆ ಮಾತೃಕೆಯಾಯಿತು. ಬದುಕು ಹಸನಾಯಿತು, ಅಸಹನೀಯವೂ ಆಯಿತು. ಮಾನವನ 'ವಿದ್ಯಾಕುಸುಮಪರಾಗ'ವಾದ 'ಶೀಲ ಸೌಭಾಗ್ಯ'ವಾದ ಸಂಸ್ಕೃತಿ, ಬೇರೆಬೇರೆ ಕಡೆ ಬೇರೆಬೇರೆ ರೂಪ ತಳೆಯಿತು.

ಹೊಲದ ಬಿತ್ತನೆಯ ಕಾಲದಲ್ಲೂ ಕುಯಿಲಿನ ಕಾಲದಲ್ಲೂ ಹಾಡು ಹುಟ್ಟಿ ಬಂತು, ಹಿಂದೆ. ರಾಗಿ ಬೀಸುವ ತಂಗಿ, ತೊಟ್ಟಿಲು ತೂಗುವ ತಾಯಿ, ದೋಣಿ ದಾಟಿಸುವ ಅಂಬಿಗ-ಹೀಗೆ ದುಡಿಮೆಯ ಜತೆಯಲ್ಲೇ ಸಾಹಿತ್ಯ ಸೃಷ್ಟಿ. ಯಾವಾಗಲೂ ಅಷ್ಟೆ. ಪ್ರಕೃತಿಯನ್ನು ಬದಲಾಯಿಸುವ ಮಾನವನ ಹೋರಾಟದಿಂದಲೇ ಅಮರಗಾನದ ಜನನ. ಸಾಹಿತ್ಯ, ಆಯಾಕಾಲದ ವಾಸ್ತವತೆಯ ಪ್ರತಿರೂಪ-ಕಲಾತ್ಮಕ ಪ್ರತ್ಯುತ್ಪಾದನೆ. ಅಲ್ಲದೆ, ಇರುವಿಕೆಯ ಚಿತ್ರಣದಲ್ಲಿ ಬಯಕೆಯ ಬರುವಿಕೆಯ ಸೊಗಸಾದ ಬಣ್ಣಗಳ ಸಂಯೋಜನೆ ಸಹಾ. ವಿಜ್ಞಾನದ ಮಾಯಾ ಬಾಜಾರಿನಲ್ಲಿ ಸಾಹಿತ್ಯ ಎಂದೂ ಸೋತುದಿಲ್ಲ. ಬಹ್ವಂಶ ಸಾಹಿತ್ಯ, ಯಾವಾಗಲೂ ಆಯಾ ಕಾಲಧರ್ಮದ ಪ್ರತೀಕವೇ. ಬಲಗೊಳ್ಳುತ್ತಿರುವ ಅಥವಾ ಕುಸಿಯುತ್ತಿರುವ ಸಮಾಜದ, ಬದಲಾಗುತ್ತಿರುವ ಮಾನವ ಸಂಬಂಧಗಳ, ಚಿತ್ರಣ.

ವಿಜ್ಞಾನ ಬದುಕಿನ ಮಹಾಪರಿವರ್ತಕವೆಂಬುದರಲ್ಲಿ ಸಂದೇಹವಿಲ್ಲ. ಆ ವಿಶೇಷ ಜ್ಞಾನ, ಸಂಶೋಧನೆಗಳು, ಬೋಧನೆಗಳು, ನಮ್ಮನ್ನು ನಾವೇ ಸರಿಯಾಗಿ ಕಂಡುಕೊಳ್ಳಲು ಸಹಾಯಕವಾಗಿವೆ. ನಮ್ಮ ಸ್ತ್ರೀ-ಪುರುಷರನ್ನು ಅರಿತುಕೊಳ್ಳಲು ಸಮಾಜವನ್ನು ವಿಭಜಿಸಿ ನೋಡಲು, ಏನು ಯಾಕೆಗಳಿಗೆ ಸಮಾಧಾನಕರ ಉತ್ತರವ ಪಡೆಯಲು ನೆರವಾಗಿವೆ.

ಹದಿನೈದನೆಯ ಶತಮಾನದ ಇಟಲಿಯ ಲಿಯೊನಾರ್ದೊದ ವಿಂಚಿ ಅಪ್ರತಿಮ ಚಿತ್ರಕಾರನಾಗಿದ್ದ; ಆ ಕಾಲದ ಪ್ರಖ್ಯಾತ ವಿಜ್ಞಾನಿಯೂ ಆಗಿದ್ದ. ಅಂತಹ ಇತ್ತಂಡ ಬೃಹತ್‌ಸಾಧನೆ ಎಲ್ಲಾ ಕಲಾವಿದರಿಗೂ ಬರಹಗಾರರಿಗೂ ಸಾಧ್ಯವಾಗದು. ನಿಜ. ಆದರೆ ಪ್ರತಿಯೊಬ್ಬನೂ ತನ್ನ ಜ್ಞಾನಸಂಪತ್ತನ್ನು ಬೆಳೆಸಿಕೊಳ್ಳಲು, ಅಡ್ಡಿ ಮಾಡುವವರು ಯಾರು ? ವಿಜ್ಞಾನದ ತತ್ತ್ವಜ್ಞಾನದ ಅರ್ಥಶಾಸ್ತ್ರದ ರಾಜ್ಯ

ಶಾಸ್ತ್ರದ ವಿವಿಧ ಶಾಸ್ತ್ರಗಳ ತಿರುಳನ್ನು ಸ್ವಾಧೀನಪಡಿಸಿಕೊಂಡು, ತನ್ನ ಅನುಭವದ ಜ್ಞಾನದ ಆಳವನ್ನೂ ವಿಸ್ತಾರವನ್ನೂ ಹೆಚ್ಚಿಸದೇ ಇದ್ದರೆ, ಬರೆಹಗಾರ ಬೆಲೆಬಾಳುವ ಕೃತಿಯನ್ನು ಹೇಗೆ ತಾನೇ ರಚಿಸಬಲ್ಲ?

ಆಂಗ್ಲ ಸಾಹಿತ್ಯದ ಪುರಾತನ ಕಾದಂಬರಿಕಾರನಾದ ಫೀಲ್ಡಿಂಗ್, ಸಾಹಿತ್ಯದಲ್ಲಿನ ತನ್ನ ಆರಾಧ್ಯಮೂರ್ತಿಗಳಾದ ಹೋವರ್ ಮತ್ತು ಮಿಲ್ಟನ್ನರನ್ನು ಕುರಿತು ಹೇಳುತ್ತಾ, "ಅವರು ತಮ್ಮ ಕಾಲದ ವಿದ್ವತ್ತನ್ನೆಲ್ಲ ಕರಗತಮಾಡಿಕೊಂಡಿದ್ದರು; ಸಮಾಜದ ಎಲ್ಲಾ ಹಂತಗಳ ಜನರೊಡನೆಯೂ ಸರಿಸಮಾನರಾಗಿದ್ದರು," ಎಂದಿದ್ದಾನೆ. ಹೋಮರ್ ಮಿಲ್ಟನರಿಗಿದ್ದುದು ಅಪೇಕ್ಷಣೀಯ ಗುಣಗಳೇ. ಬರೆಹಗಾರ, ತನ್ನ ಕಾಲದ ಸಮಸ್ಯೆಗಳ ಸಾರವನ್ನು ಕಂಡುಹಿಡಿಯುವುದು, ಸಾಮಾಜಿಕ ಸಾಂಸ್ಕೃತಿಕ ರೂಪುರೇಷೆಗಳನ್ನು ಗುರುತಿಸಿಕೊಳ್ಳುವುದು, ಎಲ್ಲ ಹಂತಗಳ ಜನರೊಡನೆಯೂ ಸಮಾನನಾಗಿರಲು ಸಮರ್ಥನಾಗುವುದು, ಅತ್ಯಂತ ಸ್ವಾಗತಾರ್ಹವಾದ ಆವಶ್ಯಕತೆ.

ಈ ಪ್ರಪಂಚದಲ್ಲಿ ಸಹಸ್ರ ವಸ್ತುಗಳು ಕಣ್ಣಿಗೆ ಕಾಣಿಸುತ್ತವೆ. ಕಾಣಿಸದೆ ಇರುವ ವಸ್ತುಗಳ ಸಂಖ್ಯೆಯೂ ಸಹಸ್ರವೇ. ಇವುಗಳಲ್ಲೆಲ್ಲಾ ಸತ್ಯವೆಷ್ಟು, ಮಿಥ್ಯವೆಷ್ಟು? ಪ್ರತಿಯೊಬ್ಬನೂ-ಮುಖ್ಯವಾಗಿ ಬರೆಹಗಾರ-ಇದನ್ನು ತಿಳಿಯುವುದಗತ್ಯ. ಶತಮಾನಗಳಿಂದ ಬೆಳೆದುಬಂದಿರುವ ವಿಚಾರಗಳು, ಹೊಸದಾಗಿ ಹುಟ್ಟಿರುವ ವಿಚಾರಗಳು, ವೈಜ್ಞಾನಿಕ ಸಂಶೋಧನೆಗಳು, ಇವೆಲ್ಲವೂ ಆ ಕಾರ್ಯದಲ್ಲಿ ಬರೆಹಗಾರನಿಗೆ ನೆರವಾಗುತ್ತವೆ. ಸತ್ಯದ ನೆರವಿನಿಂದ ಜಗತ್ತನ್ನೇ ಬದಲಾಯಿಸುತ್ತಾನೆ ಮಾನವ. ಜತೆಯಲ್ಲೇ ತಾನೂ ಬದಲಾಗುತ್ತಾನೆ. ಸೌಂದರ್ಯೋಪಾಸಕನಾದ ಬರೆಹಗಾರ ಅಂತಹ ಸತ್ಯವನ್ನು ತಿಳಿದುಕೊಂಡಾಗ, ಆತನ ಲೇಖನಿ ಸತ್ಯದ ಬಲದಿಂದ ಜಗತ್ತನ್ನು ಸುಂದರಗೊಳಿಸುವ ಮಹಾಕಾರ್ಯಕ್ಕೆ ಮುಡುಪಾಗುತ್ತದೆ.

ಬರೆಹಗಾರನ ದೃಷ್ಟಿ

ಆಳವಾದ ಅನುಭವವೂ ಸೂಕ್ಷ್ಮವಾದ ನಿರೀಕ್ಷಣ ಸಾಮರ್ಥ್ಯವೂ ಇರುವ ಲೇಖಕನಿಂದಲೇ ಒಳ್ಳೆಯ ಸಾಹಿತ್ಯಸೃಷ್ಟಿ ಸಾಧ್ಯ. ಪ್ರತಿಯೊಬ್ಬ ಬರೆಹಗಾರನೂ ವಿಚಾರಶೀಲನಾಗಲೇಬೇಕು ಎಂದು ಅಪೇಕ್ಷಿಸುವ ನಾವು, ಸಾಹಿತ್ಯ ಸೃಷ್ಟಿಯ ಮಹಾಯಜ್ಞದಲ್ಲಿ ಆತ ತೋರಬೇಕಾದ ಹಿರಿಯ ಗುಣಗಳನ್ನು ಕುರಿತು ಪ್ರಸ್ತಾಪ ಮಾಡೋಣ.

ಬರೆಹಗಾರ ತನ್ನ ಸಾಹಿತ್ಯದ ಭವ್ಯಪರಂಪರೆಯ ನಿಜವಾದ ವಾರಸುದಾರನಾಗಬೇಕೆಂಬ ವಿಷಯವಾಗಿ ಭಿನ್ನಾಭಿಪ್ರಾಯವಿರಲಾರದು. ಗತಕಾಲವನ್ನೆಲ್ಲ ಅಲ್ಲಗಳೆಯುವ ಪ್ರವೃತ್ತಿ ಆತ್ಮಘಾತುಕವಾದುದೇ ಸರಿ. ನಿನ್ನೆಯ ನೆನೆಗೊಬ್ಬರದೊಳಗೆ ಬೇರುಬಿಡದ ಗಿಡ, ನಾಳೆಯ ಮಾತೇಕೆ-ಇವತ್ತಿನ ಒಂದು ಹೊತ್ತನ್ನೂ ಕಮರದೆ

ಕಳೆಯದು. ನಮ್ಮ ನಾಡಿನ ಬರೆಹಗಾರರಿಗಿರುವ ಪರಂಪರೆ ಯಾವುದು? ಪ್ರಾಚೀನ ಕನ್ನಡ ಸಾಹಿತ್ಯದ್ದು ಮಾತ್ರ ಎನ್ನೋಣವೆ? ಹಾಗೆ ಹೇಳುವುದು ಸರಿಯಾಗಲಾರದು. ಸಂಸ್ಕೃತವೂ ನಮ್ಮದೇ. ಉರ್ದೂ-ಬಂಗಾಳಿ ಭಾಷೆಗಳೂ ನಮ್ಮವೇ. ಅಷ್ಟೇಕೆ, ಪ್ರಪಂಚದ ಎಲ್ಲ ಭಾಷೆಗಳಲ್ಲೂ ಸೃಷ್ಟಿಯಾಗುವ ಸಾಹಿತ್ಯ, ಎಲ್ಲಾ ಜನರಿಗೂ ಸೇರಿದ ಸೊತ್ತು. ಬರೆಹಗಾರ ಪ್ರಪಂಚದ ಯಾವ ಮೂಲೆಯಲ್ಲೇ ಇರಲಿ, ವಿಶ್ವ ಸಾಹಿತ್ಯವೆಲ್ಲ ಭವ್ಯತೆಗೂ ಆತ ಹಕ್ಕುದಾರ. ನಮ್ಮ ಪ್ರವಾಹದ ಉಗಮವಾಗುವುದೇನೋ ತಲಕಾವೇರಿಯಿಂದಲೇ. ಆದರೆ ಮುಂದುವರಿದಂತೆ ಹತ್ತು ದಿಕ್ಕಿನ ನೀರು ನಮ್ಮನ್ನು ಸೇರಿಯೇ ತೀರಬೇಕು.

ಭಾರತದ ಹಿರಿಯ ತತ್ತ್ವವೇತ್ತರಾದ ಸರ್ವಪಳ್ಳಿ ರಾಧಾಕೃಷ್ಣನ್ "ಪೌರಸ್ತ್ಯ ಮತಗಳು ಮತ್ತು ಪಾಶ್ಚಾತ್ಯ ಚಿಂತನೆ" ಎಂಬ ತಮ್ಮ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ:

"ನಮ್ಮಲ್ಲಿ ಕೆಲವರು, ಬಾಹ್ಯಪ್ರಭಾವಗಳನ್ನೆಲ್ಲ ಇದಿರಿಸಬೇಕೆನ್ನುತ್ತಾರೆ. ಹಾಗೆ ಮಾಡಲು ಮೂರ್ಖ ಅಭಿಮಾನವೇ ಕಾರಣ. ಮಾನವ ಕುಟುಂಬದ ಒಂದು ಶಾಖೆ ಆಧ್ಯಾತ್ಮಿಕ ಪ್ರಗತಿಯನ್ನೋ ವೈಜ್ಞಾನಿಕ ಪ್ರಗತಿಯನ್ನೋ ಸಾಧಿಸುತ್ತದೆಂದಿಟ್ಟುಕೊಳ್ಳಿ. ಆ ಪ್ರಗತಿಯನ್ನು ಆ ಶಾಖೆಯು ತನಗೋಸ್ಕರ ಮಾತ್ರ ಸಾಧಿಸಿಲ್ಲ. ಇಡೀ ಮಾನವ ಕೋಟಿಗಾಗಿ ಸಾಧಿಸಿದೆ."

ಆಧ್ಯಾತ್ಮಕ್ಕೂ ವಿಜ್ಞಾನಕ್ಕೂ ಅನ್ವಯಿಸುವ ಈ ಮಾತು, ಸಾಹಿತ್ಯದ ಪಾಲಿಗೂ ಅಷ್ಟೇ ಸತ್ಯವಾದುದೆಂದು ಬೇರೆ ಹೇಳಬೇಕಾಗಿಲ್ಲ.

ಹೀಗೆ, ಮಾನವ ಸೃಷ್ಟಿಯಾದ ಸಾಹಿತ್ಯ ಲೋಕದಲ್ಲಿ ಹಿರಿದಾದುದೆಲ್ಲವನ್ನೂ ಭವ್ಯವಾದುದೆಲ್ಲವನ್ನೂ ಸೂರೆಗೊಳ್ಳುವುದು ಬರೆಹಗಾರನ ಕರ್ತವ್ಯ.

ವಿಶ್ವಸಾಹಿತ್ಯದಲ್ಲಿ, ಒಟ್ಟಿನಲ್ಲಿ ಅತ್ಯಂತ ಪ್ರಧಾನವಾಗಿ ಎದ್ದು ಕಾಣಿಸುವ ಅಂಶ ಯಾವುದು? ಕಾಲಧರ್ಮವನ್ನು ಪ್ರತಿಬಿಂಬಿಸಿದ, ಬದುಕಿನಿಂದ ಚಿಮ್ಮಿದ, ಮಾನವರನ್ನು ಕುರಿತು ಓದುಗರ ಬೋಧೆಯನ್ನು ಹೆಚ್ಚಿಸಿದ ಸಾಹಿತ್ಯ ಮಾತ್ರವೇ ಚಿರಕಾಲ ಬದುಕುವ ಸಾಮರ್ಥ್ಯವನ್ನು ಗಳಿಸಿದೆ. ಆ ಸಾಹಿತ್ಯ ವಾಹಿನಿಯೇ ವಾಸ್ತವವಾದದ ಪರಂಪರೆ.

ಎಲ್ಲ ಜನರೂ ಸುಖಿಗಳಾಗಬೇಕು ಎಂದು ಬಯಸುವ ಬರೆಹಗಾರ-ಸೂಕ್ಷ್ಮಸ್ಪರ್ಶಿಯೂ ಸಂವೇದನಾಜೀವಿಯೂ ಆದ ಬುದ್ಧಿಜೀವಿ-ಬದುಕನ್ನು, ಅಂದರೆ ತನ್ನ ಕೃತಿಗಳ ಸಹಸ್ರ ಪಾತ್ರಗಳನ್ನು, ಅವರ ಚಲನವಲನವನ್ನು, ನೋಡುವ ದೃಷ್ಟಿ ಮಾನವೀಯವಾಗುವುದು ಸ್ವಾಭಾವಿಕ. ಅದು, ಸುಂದರವಾದುದೆಲ್ಲವನ್ನೂ ಆರಾಧಿಸುವ, ಹೊಲಸಾದುದೆಲ್ಲವನ್ನೂ ದ್ವೇಷಿಸುವ, ಮಾನವೀಯತೆ. ಕಂಬನಿಯನ್ನು ಕೈಯಿಂದೊರೆಸಿ ತುಟಿಗಳು ಮುಗುಳುನಗುವಂತೆ ಮಾಡುವ ಸಚೇತನ ಮಾನವೀಯತೆ. ಅಂತಹ ಕಲಾವಿದ, ಬಲು ಸುಲಭವಾಗಿ ಮಾನವ ಹೃದಯಗಳಿಗೆ

ಲಗ್ಗೆ ಇಡುವ ರಣಾಗ್ರೇಸರ. ಹಾಗೆ ಲಗ್ಗೆ ಇಡುವಾಗ ಆತನ ದೃಷ್ಟಿಯೆಲ್ಲ ಮಿಡುಕಿನ ಕಡೆಗೇ. ಅಲ್ಲಿ ವಿಜಯಪತಾಕೆ ಹಾರಿದಾಗಲೇ ಆತ ತೃಪ್ತ.

ನಾವು ಸೃಷ್ಟಿಸುವ ಕೃತಿಯನ್ನೋದಿ ಇನ್ನೊಂದು ಜೀವನದ ಆತ್ಮಸಂಸ್ಕಾರವಾಯಿತೆನ್ನುವುದಕ್ಕಿಂತ ಹೆಚ್ಚಿನ ಉಡುಗೊರೆ ಬರೆಹಗಾರನಿಗೆ ಇನ್ನೇನು ಬೇಕು?

ಸಾಹಿತ್ಯ ಸೃಷ್ಟಿಗೆ ವಿಷಯದಾರಿದ್ರ್ಯ ಎನ್ನುವುದು ಇಲ್ಲವೇ ಇಲ್ಲ. ಹೃದಯ ಬಡವಾದ ಮಿದುಳು ಜಡವಾದ ಬರೆಹಗಾರನಿಗೆ ಮಾತ್ರ ಅಂತಹ ಸಂಕಟ. ಬದುಕಿನಿಂದ ಎಂದೂ ವಿಮುಖನಾಗದ, ಸದಾ ಜಾಗೃತನಾದ, ಬರೆಹಗಾರನಿಗೆ ಸಾವಿರ ಕಣ್ಣು; ಕಾಣಸಿಗುವುದು ಸಾವಿರ ನೋಟ. ಅವನ ಲೇಖನಿ ಅಮರ. ಆತ ಅದನ್ನು ಅದ್ದಿ ಬರೆಯುವುದು ಸಾಹಿತ್ಯಾಮೃತದ ಅಕ್ಷಯ ಪಾತ್ರೆಯಲ್ಲೇ

ಆದರೆ ಇನ್ನೊಂದು ದೃಷ್ಟಿಯ ಬರೆಹಗಾರರೂ ಇರುವುದನ್ನು ನಾವು ಬಲ್ಲೆವು. ಮಾಡುವುದೇನೋ ಸಾಹಿತ್ಯ ಜಪ; ಆದ ಧನಿ ಮಾತ್ರ ಧನಲಕ್ಷ್ಮಿಯ ಗುಡಿಯಲ್ಲೇ. ಕಾಲದ ಪರೀಕ್ಷೆಯಲ್ಲಿ ಎಂದೂ ಜಯಿಸದಂತಹ ಕ್ಷಣಿಕಬಾಳ್ವೆಯ ಕೃತಿಗಳು ಅಂಥವರಿಂದ ಸೃಷ್ಟಿಯಾಗಬಲ್ಲುವು.

ವಿಶಾಲವೂ ಮಾನವೀಯವೂ ನ್ಯಾಯಪಕ್ಷಪಾತಿಯೂ ಆದ ದೃಷ್ಟಿ ಇರಬೇಕು ಬರೆಹಗಾರನಿಗೆ. ಆತ ಯಾವುದೇ ಜಡತತ್ತ್ವದ ಕಣ್‌ಪಟ್ಟಿ ಕಟ್ಟಿದ ಸವಾರಿ ಕುದುರೆಯಾಗುವುದು ಸಾಧ್ಯವೇ ಇಲ್ಲ. ಇದೇ ಕೊನೆಯಲ್ಲ, ಯಾವುದರಲ್ಲೂ ಇದೇ ಕೊನೆ ಎಂಬುದಿಲ್ಲ–ಎನ್ನುವುದನ್ನು ಆತ ಸದಾ ನೆನಪಿಡಬೇಕು. ಜನರ ಮನೋರಾಜ್ಯದ ಅಧಿಪತಿಯಾದ ತಾನು ನಿರಂಕುಶಮತಿ ಎಂಬ ಭಾವನೆ ಬರೆಹಗಾರನಲ್ಲಿ ಎಂದು ಮೂಡಿತೋ ಅಂದಿಗೆ ಆತನ ಅಧಃಪತನವಾದಂತೆಯೇ. ತಾನು ಸಮಾಜದ ಒಬ್ಬ ಜವಾಬ್ದಾರನಾದ ಸದಸ್ಯ, ಜನಪದದ ವಿನೀತಕಿಂಕರ, ಎಂಬ ಅಭಿಪ್ರಾಯ ಬರೆಹಗಾರನಲ್ಲಿ ಬಲಗೊಂಡಷ್ಟು ಆತನ ದೃಷ್ಟಿ ಹೆಚ್ಚು ನಿಚ್ಚಳವಾಗುವುದು, ನಿರ್ಮಲವಾಗುವುದು; ಸೃಷ್ಟಿ ಪವಿತ್ರವಾಗುವುದು.

ಬರೆಹಗಾರನಿಗೆ ಅತ್ಯಗತ್ಯವಾಗಿ ಇರಬೇಕಾದ ಇನ್ನೊಂದು ಅಂಶ–ಇತಿಹಾಸದ ನೋಟ. ನಿನ್ನೆಯ ಜನ ಇತಿಹಾಸ ರಚಿಸಿದರು. ಈ ದಿನ ನಮ್ಮ ಕಣ್ಣೆದುರಲ್ಲೇ ಇತಿಹಾಸದ ರಚನೆಯಾಗುತ್ತಿದೆ. ನಾಳೆಯ ದಿನ ಬದುಕಿನ ರೂಪ ಮತ್ತೆ ಬದಲಾಗಲಿದೆ. ಈ ಪರಿವರ್ತನೆಯ ಪ್ರವಾಹದ ಸೆಳವನ್ನು ಗುರುತಿಸುವ ಸಾಮರ್ಥ್ಯ, ಲೇಖಕನ ಪಾಲಿನ ಐಶ್ವರ್ಯವೇ ಸರಿ. ಗತಕಾಲದ ಪ್ರತಿನಿಧಿಯಾಗಿ, ವರ್ತಮಾನ ಕಾಲದ ಕಷ್ಟಸುಖಗಳಲ್ಲಿ ಪಾಲುಗಾರನಾಗಿ, ಭವಿಷ್ಯತ್ಕಾಲದ ಹರಿಕಾರನಾಗುವುದು ಬರೆಹಗಾರ ನಿರ್ವಹಿಸಬೇಕಾದ ಚಾರಿತ್ರಿಕ ಪಾತ್ರ.

ವಿಚಾರವಂತನಾದ ಲೇಖಕ ಯಾವುದೇ ರಾಜಕೀಯ ನೀತಿಯ ಪ್ರಚಾರಕನಾಗಬೇಕೆ?– ಎಂದು ಯಾರಾದರೂ ಕೇಳಬಹುದು. ನೂರು ಎಳೆಗಳಿಂದ ಬದುಕಿಗೆ ಬಂಧಿತನಾಗಿರುವ ಧೀಮಂತ ಬರೆಹಗಾರ, ಜನರ ಇರುವಿಕೆಯನ್ನೇ ನಿರ್ಧರಿಸುವ,

ತೋರಿಕೆಗೆ ಸರ್ವಶಕ್ತನಾಗಿಯೇ ಇರುವ, ರಾಜಕೀಯದಿಂದ ನಿರ್ಲಿಪ್ತನಾಗುವುದು ಸಾಧ್ಯವೇ ಇಲ್ಲ. ಆದರೆ ಆತ, ಯಾವುದೇ ರಾಜಕೀಯ ಪಕ್ಷದ ವಿವಿಧ ನೀತಿಗಳನ್ನು ಸಾಹಿತ್ಯದಲ್ಲಿ ಪ್ರತಿಪಾದಿಸತೊಡಗುವುದು ಖಂಡಿತವಾಗಿಯೂ ತಪ್ಪು. ಹಿಂದೆ ಸ್ವಾತಂತ್ರ್ಯಸಮರದಲ್ಲಿ ಜನರೊಡನೆ ಬೆರೆತು ಎಷ್ಟೋ ಬರೆಹಗಾರರು ಹೋರಾಡಿದರು. ಮುಂದೆ, ಜನರ ಒಲವಿನ ದುರುಪಯೋಗವನ್ನು ಕೆಲ ಸ್ವಾತಂತ್ರ್ಯನಾಯಕರು ಮಾಡಿದಾಗ, ಆ ಬರೆಹಗಾರರೇ ಅವನ್ನು ಬಯಲಿಗೆಳೆದರು. ನ್ಯಾಯ ಎಲ್ಲಿಯೇ ಇರಲಿ, ಅದನ್ನು ನಾವು ಸಮರ್ಥಿಸಬೇಕು. ಅನ್ಯಾಯ ಎಲ್ಲಿಯೇ ಇರಲಿ, ಅದನ್ನು ನಾವು ಖಂಡಿಸಬೇಕು. ಅದೇ ಸರಿಯಾದ ದೃಷ್ಟಿ.

ಕೃತಿರಚನೆಯಲ್ಲಿ ಬರೆಹಗಾರ ಗಮನಿಸಬೇಕಾದ ಅಂಶಗಳನ್ನು ಕುರಿತು ಮಹರ್ಷಿ ಟೋಲ್‌ಸ್ಟೋಯ್ ಒಂದೆಡೆ ಹೀಗೆ ಹೇಳಿದ್ದಾರೆ :

"ಮೊದಲನೆಯದಾಗಿ, ತಾನು ಆರಿಸಿಕೊಂಡಿರುವ ವಸ್ತುವನ್ನು ಕುರಿತು ಸ್ಪಷ್ಟವಾದ, ಅಂದರೆ ನೈತಿಕವಾದ, ದೃಷ್ಟಿ ಗ್ರಂಥಕರ್ತನಿಗಿರಬೇಕು."

"ಎರಡನೆಯದಾಗಿ, ಉಚ್ಚಾರದ ಸ್ಪಷ್ಟತೆ ಅಥವಾ ರಚನಾ ಸೌಂದರ್ಯ-ಇವೆರಡೂ ಒಂದೇ."

"ಮೂರನೆಯದಾಗಿ, ಪ್ರಾಮಾಣಿಕತೆ; ಅಂದರೆ, ತಾನು ಮುಂದಿಡುತ್ತಿರುವ ವಿಷಯವನ್ನು ಕುರಿತು ಪ್ರಾಮಾಣಿಕವಾದ ಒಲವು ಅಥವಾ ದ್ವೇಷ."

ವಿಶ್ವಸಾಹಿತ್ಯಕ್ಕೆ ಮಹೋನ್ನತ ಕೃತಿಗಳ ಕಾಣಿಕೆಯನ್ನು ನೀಡಿದ ಟೋಲ್‌ಸ್ಟೋಯ್‌ಯ ಈ ಮಾತುಗಳು ಗಮನಾರ್ಹವೇ ಸರಿ.

ಕಾವ್ಯಮೀಮಾಂಸೆಯ ಮಹತ್ವ

ಬರೆಹಗಾರ ಮತ್ತು ಓದುಗರ ನಡುವೆ ಮುಖ್ಯವಾದೊಂದು ಪಾತ್ರವನ್ನು ನಿರ್ವಹಿಸುತ್ತಿರುವ ವ್ಯಕ್ತಿಯೊಂದಿದೆ. ಆತ ವಿಮರ್ಶಕ. ಸೌಂದರ್ಯ ಸಮೀಕ್ಷೆಯನ್ನು ಮಾಡುವ ಈ ಮಹಾನುಭಾವ, ಕೃತಿಯ ರಸಾಸ್ವಾದನೆಯಲ್ಲಿ ಓದುಗನಿಗೆ ನೆರವಾಗುತ್ತಾನೆ. ಕೃತಿಯಲ್ಲಿ ಪ್ರತಿಪಾದಿತವಾಗಿರುವ ವಿಚಾರವಾದ ಮೇಲೆ ಬೆಳಕು ಬೀರುತ್ತಾನೆ.

ವಿಮರ್ಶೆಯನ್ನು ಒಂದು ಶಾಸ್ತ್ರವೆಂದು ಪರಿಗಣಿಸುವವರು ನಮ್ಮಲ್ಲಿ ಕಡಿಮೆ. ಸಾಹಿತ್ಯ ಸೃಷ್ಟಿಯ ಮೌಲ್ಯವನ್ನಳೆಯುವ ಮಾನದಂಡ, ಕೃತಿಯಿಂದ ಕೃತಿಗೆ ಕರ್ತೃವಿನಿಂದ ಕರ್ತೃವಿಗೆ ಬದಲಾಗುವುದು ತೀರಾ ಸಾಮಾನ್ಯವಾದ ವಿಷಯ. ಕನ್ನಡದಲ್ಲಿ ಬಹುಮಟ್ಟಿಗೆ ಕಾಣಸಿಗುವ ವಿಮರ್ಶೆಯೆಲ್ಲ, ಕೃತಿಯನ್ನೂ ಕರ್ತೃವನ್ನೂ ಕುರಿತಾದ ಪೂರ್ವಾಗ್ರಹಪೀಡಿತ ಪ್ರಶಂಸೆ ಇಲ್ಲವೆ ನಿಂದೆ.

ಜೀವನವನ್ನು ವೈಜ್ಞಾನಿಕವಾಗಿ ನೋಡಲೊಪ್ಪದ, ಬದುಕಿಗೂ ಸಾಹಿತ್ಯಕ್ಕೂ ಸಂಬಂಧವಿದೆಯೆಂದು ನಂಬದ, ಕೆಲವರು ವಿಮರ್ಶೆಯ ಕಾರ್ಯಕ್ಕೆ 'ಶುದ್ಧ ಸಾಹಿತ್ಯ'ದ ಅಳತೆಗೋಲನ್ನು ಬಳಸುವುದುಂಟು. 'ಕಲೆಗಾಗಿ ಕಲೆ' ಎನ್ನುವ

ಘೋಷವನ್ನು ಮುಂದಿಡುವವರೂ ಅದೇ ಜನ. ವಿಚಾರದ ಅಂಶ ಎಳ್ಳಿನಷ್ಟೂ ಇಲ್ಲದ ಸಾಹಿತ್ಯವೊಂದೇ ಅವರ ದೃಷ್ಟಿಯಲ್ಲಿ ಶುದ್ಧಸಾಹಿತ್ಯ. ಬರೆಯುವ ಚಟಕ್ಕೋಸ್ಕರ ಬರೆದರಾಯಿತು, ಏನನ್ನು ಬೇಕಾದರೂ. ಉದ್ದಕ್ಕೂ ಕುಣಿಯುವ ಪದಗಳ ಮೋಹಕ ಜೋಡಣೆ. ಸಮಾಜದಲ್ಲಿನ ಅತ್ಯಂತ ಪ್ರಭಾವಶಾಲಿ ಶಕ್ತಿಯಾದ ಸಾಹಿತ್ಯವನ್ನು ನಿರ್ವೀರ್ಯಗೊಳಿಸಬಲ್ಲವರೇ 'ಶುದ್ಧ ಸಾಹಿತ್ಯ'ದ ಮಾತನ್ನಾಡುತ್ತಾರೆ. ಜನ ಜಾಗೃತಿಗೆ ಹೆದರುವವರೇ 'ಪರಿಶುದ್ಧ ಕಲೆ'ಯ ಬಡಬಾವುಟವನ್ನೆತ್ತುತ್ತಾರೆ.

ಭಾವವಾದದ ಮೆದುಮಣ್ಣಿನಲ್ಲಿ ಮೇಲಕ್ಕೆ ಏಳಲಾಗದಷ್ಟು ಆಳಕ್ಕೆ ಇಳಿದಿರುವ ಜನರ ದೃಷ್ಟಿಯಲ್ಲಿ, ಸೌಂದರ್ಯವೆನ್ನುವುದು ಮಾಯೆ. ಸೌಂದರ್ಯದ ಸಾಕ್ಷಾತ್ಕಾರವೆನ್ನುವುದು ಮನಶ್ಚಕ್ಷುವಿಗೆ ಮಾತ್ರ ಗೋಚರವಾಗುವ ದಿವ್ಯದರ್ಶನ. ಅವರ ಅಭಿಪ್ರಾಯದಂತೆ, ಕಲಾಕೃತಿಯ ಸನ್ನಿಧಿಯಲ್ಲಿ ತನಗುಂಟಾಗುವ ಭಾವಗಳನ್ನು ವ್ಯಕ್ತಗೊಳಿಸುವುದಷ್ಟೇ ವಿಮರ್ಶಕನ ಹೊಣೆಗಾರಿಕೆ.

ಇಂತಹ ಘೋಷಣೆಯಿಂದ ಸಾಹಿತಿಗಾಗಲೀ ಸಮಾಜಕ್ಕಾಗಲೀ ಒಳಿತಾಗದೆಂಬುದು ಸ್ಪಷ್ಟ.

ಹಾಗಾದರೆ, ಸೌಂದರ್ಯ ಸಮೀಕ್ಷೆಯಲ್ಲಿ ಕೈಗೊಳ್ಳಬೇಕಾದ ಸರಿಯಾದ ವಿಧಾನ ಯಾವುದು ?

ಸಾಹಿತ್ಯ ಕೃತಿಯಲ್ಲಿ ಸೃಷ್ಟಿಯಾಗಿರುವ ಪ್ರತಿಬಿಂಬವನ್ನು, ಮೂಲದೊಡನೆ ಹೋಲಿಸಿ ನೋಡುವುದೇ ಮೊದಲ ಹೆಜ್ಜೆ. ಪ್ರತಿಯೊಂದು ಕೃತಿಯೂ ವಾಸ್ತವ ಬದುಕಿನ ಕಾಲ್ಪನಿಕ ಪ್ರತಿಬಿಂಬ. ಆ ರೀತಿಯ ತುಲನೆಯೊಡನೆ ಮೂಡಿ ಬರುವ ಪ್ರಶ್ನೆಗಳಿವು: ಆರಿಸಿಕೊಂಡಿರುವ ವಸ್ತುವಿನ ವಿಷಯದಲ್ಲಿ ಬರೆಹಗಾರನ ದೃಷ್ಟಿ ಪ್ರಾಮಾಣಿಕವಾಗಿದೆಯೆ ? ಅದನ್ನು ಆಂತರಿಕ ಪ್ರೇರಣೆಯಿಂದ ಆತ ಬರೆದಿರುವನೆ ? ಕೃತಿಯಲ್ಲಿ ಪ್ರತಿಪಾದಿತವಾಗಿರುವ ವಿಚಾರದ ಮೌಲ್ಯವೆಷ್ಟು ? ಯುಗಧರ್ಮ ಆ ಕೃತಿಯಲ್ಲಿ ಪ್ರತಿಧ್ವನಿತವಾಗಿದೆಯೆ ? ಅದು ಕಲೆಯೆ ಅಥವಾ ಬರಿಯ ವಿಚಾರಗಳ ನೀರಸ ಜೋಡಣೆಯೆ ? ಆತ ತೋರಿರುವ ಕಲಾವಂತಿಕೆಯ ಶ್ರದ್ಧೆ ಎಷ್ಟು ? ಸಮಕಾಲೀನ ಸಾಹಿತ್ಯದಲ್ಲಿ ಅದರ ಸ್ಥಾನಮಾನಗಳೇನು ?—ಈ ಎಲ್ಲ ಪ್ರಶ್ನೆಗಳಿಗೆ ದೊರೆಯುವ ತರ್ಕಬದ್ಧ ಉತ್ತರವೇ ವಿಮರ್ಶೆ.

ಸಮಸ್ಯೆಯನ್ನು ಚಿತ್ರಿಸಿ, ಪರಿಹಾರವನ್ನು ಸೂಚಿಸಿ.–ಎಂದು ಸಲಹೆ ನೀಡುವ ವಿಮರ್ಶಕ ಗುಣವೊಂದುಂಟು. ಯಾವುದೋ ಸಮಸ್ಯೆಯ ಚಿತ್ರಣ ಇಲ್ಲಿದೆ ಎಂದು ಸಾರಿ ಹೇಳುವುದು, 'ಇದು ವಿಚಾರಪೂರಿತ ಕೃತಿ' ಎಂದು ತುತ್ತೂರಿ ಊದಿದಂತೆ. ಪ್ರಚಲಿತ ಬದುಕಿನಿಂದ ವಸ್ತುವನ್ನಾಯ್ದುಕೊಂಡಾಗ ಅಲ್ಲೊಂದು ಸಮಸ್ಯೆ ಸಾಮಾನ್ಯವಾಗಿ ಅಡಕವಾಗಿರುವುದು ಸಹಜ. ಹೀಗಿದ್ದರೂ ಆ ಕೃತಿಗೊಂದು ಸಮಸ್ಯೆಯ ಹಣೆಪಟ್ಟಿ ಕಟ್ಟುವುದು, ಮಾರುಕಟ್ಟೆಯ ನೀತಿಗನುಸಾರವಾಗಿಯೆ ಎಂದು ಹೇಳದೆ ವಿಧಿಯಿಲ್ಲ. ಇನ್ನು ಪರಿಹಾರದ ವಿಷಯ. ಬರೆಹಗಾರ ಎಲ್ಲ

ರೋಗಗಳಿಗೂ ಔಷಧಿ ಕೊಡುವ ಧನ್ವಂತರಿಯಾಗುವುದು ಉದ್ಧಟತನವೇ ಸರಿ. ಎಷ್ಟೋ ಕಡೆ ರೋಗವೇನೆಂದು ತಿಳಿಸಿದರೆ ಸಾಕು. ಚಿಕಿತ್ಸೆ ಸ್ವಯಂ ವ್ಯಕ್ತವಾಗುವುದು. ಸಾಹಿತ್ಯ ಕೃತಿಗಳಲ್ಲಿ ಪರಿಹಾರದ ಸುಳಿವು ಎಂದೂ ಇರಕೂಡದೆಂಬುದು ನನ್ನ ಅಭಿಪ್ರಾಯವಲ್ಲ. ಕಲೆಗೂ ಕಥೆಗೂ ಕುಂದುಬಾರದಂತೆ ಆ ವಿಷಯವನ್ನು ಬೆರೆಸುವುದು ಸಾಧ್ಯವಾದರೆ ಸಂತೋಷ. ಬದಲು ಪ್ರತಿಯೊಂದರಲ್ಲೂ ಪರಿಹಾರದ ಸೂಚನೆ ಇದ್ದೇ ಇರಬೇಕೆನ್ನುವುದು ಅರ್ಥವಿಲ್ಲದ ಮಾತು

ಒಂದು ಕೃತಿಯ ವಾಚನದಿಂದ ಓದುಗ ಹೆಚ್ಚು ಬುದ್ಧಿವಂತನಾದರೆ, ಮನುಷ್ಯರನ್ನೂ ಸಮಾಜವನ್ನೂ ಕುರಿತಾದ ಆತನ ತಿಳಿವಳಿಕೆ ಹೆಚ್ಚಿದರೆ, ಆ ಸೃಷ್ಟಿ ಸಾರ್ಥಕವಾದಂತೆಯೇ. ಓದಿದಬಳಿಕ ಪರಿಹಾರ ತನ್ನಿಂತ ನಾಗಿಯೇ ಸ್ಪಷ್ಟವಾಗುವಂತಹ ಕೃತಿಯೇ ಉತ್ತಮವಾದದ್ದು. ಕೃತಿಯಲ್ಲಿ ಅಡಕವ ಗಿರುವ ಯಾವುದೇ ವಿಚಾರ, ಕಥೆಯ ಬೆಳವಣಿಗೆಯೊಡನೆ ಸನ್ನಿವೇಶಗಳೊಡನೆ ಒಂದುಗೂಡಿ ತೋರಬೇಕಲ್ಲದೆ, ತಾನೇ ಪ್ರತ್ಯೇಕವಾಗಿ ಕಾಣಿಸಿಕೊಳ್ಳಬಾರದು.

ಬರೆಹಗಾರ ಕೃತಿಯಲ್ಲಿ ತನ್ನ ವೈಯಕ್ತಿಕ ವಿಚಾರಗಳನ್ನು ತುರುಕಬಹುದೆ? ಕಳೆದ ಶತಮಾನದ ಫ್ರೆಂಚ್ ಸಾಹಿತಿ ಫ್ಲಾಬೇರ್ ಆ ವಿಷಯವಾಗಿ ಸೊಗಸಾದ ಉತ್ತರ ನೀಡಿದ್ದಾನೆ:

"ವಿಶ್ವದಲ್ಲಿ ದೇವರು ಇರುವಂತೆ, ಕೃತಿಯಲ್ಲಿ ಕರ್ತೃವಿರಬೇಕು. ಆತ ಸರ್ವಾಂತರ್ಯಾಮಿಯಾಗಿದ್ದರೂ ಎಲ್ಲಿಯೂ ಗೋಚರನಾಗಬಾರದು."

ಬರೆಹಗಾರನೂ ಮನುಷ್ಯನೇ. ಆತ ಸಮಾಜದ ಸದಸ್ಯ, ರಾಷ್ಟ್ರದ ಪ್ರಜೆ. ಕಾಲಧರ್ಮದಿಂದ ಅವನೂ ಬಾಧಿತನೇ. ಹೀಗಾಗಿ ಆತನನ್ನೂ ಆತನ ಕೃತಿಯನ್ನೂ ವಾತಾವರಣದ ವೃತ್ತದೊಳಗೇ ಇರಿಸಿ ಸೌಂದರ್ಯಸಮೀಕ್ಷೆಯನ್ನು ಮಾಡಬೇಕು. ಅದೇ ಸರಿಯಾದ ಕಾವ್ಯ ಮೀಮಾಂಸೆ.

ಕನ್ನಡ ಸಾಹಿತ್ಯದಲ್ಲಿ ವಿಚಾರದ ಪರಂಪರೆ

ಪ್ರಾಚೀನ ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ನಮ್ಮ ಆಧುನಿಕರು ಆಸಕ್ತಿ ತೋರುವುದು ಕಡಿಮೆ. ಇಂಗ್ಲಿಷ್ ತಿಳಿದವರೇ ನಾಗರಿಕರೆನ್ನುವ ದಾಸ್ಯಮನೋಭಾವವೊಂದು ಬಲಗೊಂಡು, ನಮ್ಮ ಜನರನ್ನು ಸ್ವಾಭಿಮಾನಶೂನ್ಯರನ್ನಾಗಿ ಮಾಡಿತು. "ನಮ್ಮಲ್ಲೇನಿದೆ!" ಎನ್ನುವ ಉದ್ಗಾರ ಒಂದು ರೀತಿಯ ಸಂತೋಷದಿಂದಲೇ ಹೊರಟಿತು. ಎಡೆಬಿಡದ ಪಾಳೆಯಗಾರರ ಕದನಗಳ ದೆಸೆಯಿಂದ, ಬಳಿಕ ಪರಕೀಯರ ಆಡಳಿತದ ಕಾರಣದಿಂದ, ಒಂದು ಜನಾಂಗವಾಗಿ ನಮ್ಮ ಜನಪದ ಬಾಳಲು ಬೆಳೆಯಲು ಅವಕಾಶ ದೊರೆಯಲಿಲ್ಲ. ಆದರೂ ಪುರಾತನವಾದ ನಮ್ಮ ನಾಗರಿಕತೆ ಸಾಹಿತ್ಯ ಸೃಷ್ಟಿಗೆ ಮಾತೃಕೆಯಾಗಲೇ ಇಲ್ಲ ಎನ್ನುವುದುಂಟೆ? ಆರನೆಯ ಶತಮಾನದಿಂದ ಹಿಡಿದು ಇಪ್ಪತ್ತರ ಆರಂಭದವರೆಗೆ ಆಗಿರುವ ಕನ್ನಡ

ಸಾಹಿತ್ಯಕೃಷಿ ಅಲ್ಪವೇನೂ ಅಲ್ಲ. ಆದರೆ ನಮ್ಮಲ್ಲಿನ ಬಹ್ವಂಶ ಓದುಗರಿಗೆ, ಎಲ್ಲಿ ನೋಡಿದಲ್ಲಿ ದೊರೆಯುವ ಕಥೆ ಪುಸ್ತಕಗಳು ಮಾತ್ರ ಕನ್ನಡ ಸಾಹಿತ್ಯ. ಪ್ರಾಚೀನ ಕೃತಿಗಳನ್ನು ಪಠ್ಯವೆಂದು ಅಭ್ಯಾಸ ಮಾಡುವ ವಿದ್ಯಾರ್ಥಿಗಳುಂಟು. ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೊಂದೇ ಅಂತಹ ಅಭ್ಯಾಸದ ಗುರಿ. ಜ್ಞಾನಸಾಹಿತ್ಯ ಸ್ವಲ್ಪ ಮಟ್ಟಿಗೆ ಹಿಂದೆಯೂ ರಚಿಸಲ್ಪಟ್ಟದನ್ನು ನಾವು ಬಲ್ಲೆವು. ಕಾಲಗತಿಯ ವಿಚಾರದ ಪ್ರಗತಿಯ ಒರೆಗೆ ಹಚ್ಚಿ ನೋಡುವ ಮಾತಂತಿರಲಿ, ಬರಿಯ ಕುತೂಹಲಕ್ಕಾದರೂ ಆ ಕೃತಿಗಳನ್ನು ಓದಿ ನೋಡ ವವರೆಷ್ಟು ಜನ? ಶುದ್ಧಾಂಗ ಮತಪ್ರಚಾರವಿರುವ ಕೆಲ ಕೃತಿಗಳನ್ನೇನೋ ಕೆಲವರು ಆಗೊಮ್ಮೆ ಈಗೊಮ್ಮೆ ಮುಟ್ಟಿನೋಡುವುದುಂಟು. ಗಮಕಿಗಳ ಕೃಪೆಯಿಂದ ವಚನಗಳು; ದೇವರನಾಮಗಳು ಕರ್ಣರಸಾಯನ ವಾಗುವುದುಂಟು. ಇತರ ಪ್ರಾಚೀನ ಸಾಹಿತ್ಯವೆಲ್ಲ ಈಗಿನವರಿಗೆ ಕಬ್ಬಿಣದ ಕಡಲೆ.

ಈ ದುಃಸ್ಥಿತಿಗೆ ನಮ್ಮ ಕನ್ನಡಬಲ್ಲಿದರೂ, ಸೌಂದರ್ಯ ಸಮೀಕ್ಷಕರೂ ಸ್ವಲ್ಪ ಮಟ್ಟಿಗೆ ಕಾರಣರಾಗಿದ್ದಾರೆ. ರಗಳೆಯ ಹರಿಹರ, ಷಟ್ಪದಿಯ ರಾಘವಾಂಕ ಎನ್ನುವವರೇ ಹೊರತು, ಆ ಕರ್ತೃಗಳನ್ನೂ ಕೃತಿಗಳನ್ನೂ ಆಗಿನ ವಾತಾವರಣದೊಳ ಗಿರಿಸಿ ತೂಗಿ ನೋಡುವವರು ಬೆಲೆಕಟ್ಟುವವರು ಕಡಮೆ ಗತಕಾಲದ ನಮ್ಮ ಬದುಕಿ ನಲ್ಲಿ ಮತದ ಪ್ರಭಾವವೇ ಅತಿಮುಖ್ಯವಾಗಿತ್ತೆಂದು ಒಪ್ಪಿಕೊಳ್ಳೋಣ. ಆದರೆ ಯಾವ ಮತ ಪ್ರಚಾರವೇ ಆಗಲಿ ಎಂದಾದರೂ ಶೂನ್ಯದಲ್ಲಿ ನಡೆದುದುಂಟೆ? ಎಲ್ಲಾ ಬೋಧನೆಗಳೂ ಪ್ರತಿಪಾದನೆಗಳೂ ಆಯಾ ಕಾಲದ ಸಾಮಾಜಿಕ ಹಿನ್ನೆಲೆಗಳಲ್ಲೆ ಆದುವಲ್ಲವೆ? ಹೀಗೆ ಸಾಹಿತ್ಯದ ಮೂಲಕ ನಮ್ಮ ಪುರಾತನರ ಬದುಕನ್ನು ತಿಳಿದು ಕೊಂಡು, ಒಂದೊಂದೇ ಚಿತ್ರವನ್ನೆತ್ತಿ ಹಿಡಿದು ಕ್ರಮಬದ್ಧವಾಗಿ ವೈಜ್ಞಾನಿಕವಾಗಿ ಜೋಡಿಸಿ, ಸಮಗ್ರವಾದೊಂದು ಚಿತ್ರಶಾಲೆಯನ್ನು ರಚಿಸುವುದು ಎಷ್ಟು ಸ್ವಾರಸ್ಯ ಪೂರ್ಣವಾದ ಆಹ್ಲಾದಕರವಾದ ಕೆಲಸ! ಆ ರೀತಿ ಪ್ರಾಚೀನ ಸಾಹಿತ್ಯಕ್ಕೂ ಆಗಿನ ಬದುಕಿಗೂ ಸಂಬಂಧ ಕಲ್ಪಿಸಿ ಮಾಡುವ ಸೌಂದರ್ಯ ಸಮೀಕ್ಷೆಯಿಂದ ಆಶ್ಚರ್ಯಕರ ವೆನ್ನಿಸುವಂತಹ ಪರಿಣಾಮ ಉಂಟಾಗುವುದರಲ್ಲಿ ಸಂದೇಹವಿಲ್ಲ.

ಪ್ರಾಚೀನ ಸಾಹಿತ್ಯವನ್ನಿಷ್ಟು ಪರಾಮರ್ಶಿಸಿ ನೋಡಿ. ಗೊತ್ತುಗುರಿ ಇಲ್ಲದ ಬರವಣಿಗೆ ಅದಲ್ಲವೇ ಅಲ್ಲ. ವಿಚಾರದ ಅಂಶಕ್ಕಂತೂ–ಅದೆಂತಹ ವಿಚಾರವೇ ಇರಲಿ– ಕೊರತೆ ಇಲ್ಲವೇ ಇಲ್ಲ. ಕಾವ್ಯಗಳ ತುಂಬಾ ಬದುಕಿನ ಮೀಮಾಂಸೆಯೇ, ಸಮಾಜದ ವಿಮರ್ಶೆ. ಕಲೆಯ ವಿಚಾರದ ವಿಕಾಸಕ್ಕೆ ಹಿಂದಿನ ಕಟ್ಟುಪಾಡು ಗಳು ಅಡ್ಡಿಯಾದಾಗ, ಬಂಡಾಯವೇಳುವ ಮನೋವೃತ್ತಿಯ ನಿದರ್ಶನಗಳು ಎಷ್ಟೊಂದು! ನ್ಯಾಯ ಪಕ್ಷಪಾತ, ಸತ್ಯನಿಷ್ಠುರತೆ ಎಲ್ಲವೂ ಅಲ್ಲಿವೆ. ಬಸವಣ್ಣ ನವರ ವಚನಗಳೆ, ದಾಸರ ಪದಗಳೆ, ಸರ್ವಜ್ಞನೆ, ಸಂಚಿಯ ಹೊನ್ನಮ್ಮನೆ? ಇರು ವಿಕೆಯ ಸ್ಥಿತಿಗಳನ್ನು ಕುರಿತೇ ಅಲ್ಲವೆ ಅವರು ಬರೆದುದು, ಒರೆದುದು?

ಇದೀಗ, ಶತಶತಮಾನಗಳಿಂದ ವಿಚಾರವಾಹಿನಿ ಕನ್ನಡ ಹೊಲದಲ್ಲಿ ಹರಿದು ಬಂದಿರುವ ಕಥೆ.

ಯಾವುದೂ ಜಡವಲ್ಲದ ಈ ಬದುಕಿನಲ್ಲಿ ವಿಚಾರಗಳೂ ಬದಲಾಗುತ್ತ ಬಂದುದನ್ನು ನಾವು ಕಂಡಿದ್ದೇವೆ. ಯಂತ್ರಗಳ ಆಗಮನ ಹಳೆಯ ಆರ್ಥಿಕ ಬುಡಕಟ್ಟನ್ನು ಹಿಡಿದು ಕುಲುಕಿತು. ಪಶ್ಚಿಮದ ಪ್ರತಿಭೆ ನಮ್ಮ ಜ್ಞಾನಸರೋವರವನ್ನು ಕಲಕಿತು. ಜೀವನದಮೇಲೆ ಅದರಿಂದಾದ ಪರಿಣಾಮದ ಪ್ರತಿಬಿಂಬ ಈ ಶತಮಾನದ ಆರಂಭದ ಸಾಹಿತ್ಯದಲ್ಲಿ ಒಡಮೂಡಿತು.

ಈ ಸಂದರ್ಭದಲ್ಲಿ, ಆಧುನಿಕ ಕನ್ನಡ ಸಾಹಿತ್ಯದ ಎರಡು ಆರಂಭ ಕೃತಿಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸ ಬಯಸುವೆ. ಒಂದರ ಹೆಸರು: 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ', ಇನ್ನೊಂದು 'ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯವು.'

'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ' ಪ್ರಕಟವಾದುದು ೧೮೮೭ ರಲ್ಲಿ. ಆಗ ಪ್ರಕಟವಾಗಿದ್ದಂತೆ 'ಹವ್ಯಕ ಹಿತೇಚ್ಛು ವಿದ್ವಾಂಸರೊಬ್ಬರು' ಆ ನಾಟಕದ ಕರ್ತೃ. ಸುಮಾರು ಎಪ್ಪತ್ತು ವರ್ಷಗಳಿಗೆ ಹಿಂದೆ ರಚಿಸಲ್ಪಟ್ಟ ಆ ಕೃತಿಯ ವಸ್ತು, ಕನ್ಯಾವಿಕ್ರಯದಂತಹ ಸಾಮಾಜಿಕ ರೋಗ. ಹಣ್ಣು ಮುದುಕ, ವಿಧುರ, ಇಗ್ಗಪ್ಪ ಹೆಗ್ಗಡೆ ಕನ್ನಿಕೆಯೊಬ್ಬಳನ್ನು ಮದುವೆಯಾಗುತ್ತಾನೆ. ಆಕೆ ವಿಧವೆಯಾಗುತ್ತಾಳೆ. ಸ್ವಾಭಾವಿಕವಾಗಿಯೇ ಆಕೆಗೆ ದೊರೆತುದು ರಕ್ಷಣೆ ಮಾತ್ರವೇ ಅಲ್ಲ. ಸಮಾಜದ ದೃಷ್ಟಿಯಲ್ಲಿ ಅದು ಪಾಪಿಯ ಬದುಕು. ಪರಿವಾರ ಭ್ರೂಣ ಹತ್ಯ. ಶಿರಸಿಯ ನ್ಯಾಯಾಸ್ಥಾನದಲ್ಲಿ ನಡೆಯುವ ವಿಚಾರಣೆಯೆ! ನಾಟಕಕಾರರ ವಿಶಿಷ್ಟ ಸೃಷ್ಟಿಯಾದ ನ್ಯಾಯಾಧೀಶ ತೀರ್ಪು ಕೊಡುತ್ತ, ಸಮಾಜದ ದುಷ್ಟ ಪದ್ಧತಿಗಳನ್ನು ಧಿಕ್ಕರಿಸುತ್ತಾನೆ. ದುರಾಚಾರಗಳನ್ನು ಪ್ರತಿಬಂಧಿಸುವುದರ ಬದಲು ದುರುಳರಿಗೆ ನೆರವಾಗುವಂತಹ ಮಠಾಧಿಪತಿಗಳನ್ನು ಜರೆಯುತ್ತಾನೆ. ಈ ನಾಟಕದೊಳಗಿನ ಸಂಭಾಷಣೆಯೆಲ್ಲ ನಡೆಯುವುದು ಮನೆವಾತಿನಲ್ಲಿ, ಮಲೆನಾಡಿನೊಂದು ಜನವಿಭಾಗದ ಆಡುಭಾಷೆಯಲ್ಲಿ. ಅದರಲ್ಲೂ ಭೋಳೀ ಹೆಣ್ಣು ಆಡುವ ಕನ್ನಡ ಒಂದು ತೆರ; ನ್ಯಾಯಾಧೀಶರ ಕನ್ನಡ ಒಂದು ತೆರ. ಅಂತಹ ಸೂಕ್ಷ್ಮ ವಿಷಯದಲ್ಲೂ ನಾಟಕಕಾರರು ತೋರಿರುವುದು ಪ್ರಶಂಸೆಗೆ ಅರ್ಹವಾದ ಪ್ರಾಮಾಣಿಕತೆ. ಕೃತಿಯ ಉದ್ದಕ್ಕೂ ಮಿಡಿಯುತ್ತಿರುವುದು ಸಮಾಜ ಸುಧಾರಣೆಯ ಹಂಬಲ, ಹೊಲಸನ್ನು ಕಂಡು ಕನಲುವ ಮನೋವೃತ್ತಿ, ಸಚೇತನವಾದ ಮಾನವೀಯತೆ. ಈ ಕೃತಿ ರಚನೆಯ ಉದ್ದೇಶ? ಅದನ್ನು ನಾಟಕಕಾರರು ಮರೆಮಾಚಿಯೇ ಇಲ್ಲ. ಅವರ ಹಿಮ್ಮೇಳನದಲ್ಲಿದ್ದುದು ಮನೋರಂಜನೆಯ ಏಕನಾದವಲ್ಲ–ಜನಜಾಗೃತಿಯ ಝೇಂಕಾರ.

ವೆಂಕಟರಮಣ ಶಾಸ್ತ್ರಿ ಎಂಬವರೇ ಆ ವಿದ್ವಾಂಸರಿರಬೇಕೆಂದು ಇತ್ತೀಚೆಗೆ ಸಿದ್ಧಪಡಿಸಲಾಗಿದೆ. ಆಗಿನ ಕಾಲಕ್ಕೆ ಕ್ರಾಂತಿಕಾರಕ ವಿಚಾರಗಳನ್ನು ಪ್ರತಿಪಾದಿಸಿದ, ಆಳುತ್ತಿದ್ದ ಆಂಗ್ಲರ ಕಣ್ಣಲ್ಲಿ ಕೆಟ್ಟವನೆನಿಸಿಕೊಂಡ, ವೆಂಕಟರಮಣ ಶಾಸ್ತ್ರಿಯವರು ಊರೂರು ಅಲೆದು ಸಾಹಸೀ ಜೀವನವನ್ನು ನಡೆಸಿ, ಕಡುಬಡತನದಲ್ಲಿ ಕೊನೆಗಾಲವನ್ನು ಕಳೆದರಂತೆ.*

'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ' ಪ್ರಕಾಶಿತವಾದ ಹನ್ನೆರಡು ವರ್ಷಗಳಲ್ಲೇ– ೧೮೯೯ರಲ್ಲಿ 'ಇಂದಿರಾಬಾಯಿ' ಎಂಬೊಂದು ಕೃತಿ ಪ್ರಕಟವಾಯಿತು. ಅದು ೨೫೦ ಪುಟಗಳ ಕಾದಂಬರಿ. ಬರೆದವರ ಹೆಸರು ಗುಲ್ವಾಡಿ ವೆಂಕಟರಾಯರು. ಆ ಕೃತಿಯನ್ನು ಕುರಿತು ಶಿವರಾಮ ಕಾರಂತರು ಹೇಳಿರುವ ಕೆಲಮಾತುಗಳು ಮನೋಜ್ಞವಾಗಿವೆ.

"ಗ್ರಂಥಕರ್ತರು ತಮ್ಮ ಕಾಲದ ಸಾಮಾಜಿಕ ಪ್ರಶ್ನೆಗಳನ್ನು ಸುರಸವಾಗಿ ಯಥಾರ್ಥಿಕವಾಗಿ ಅದರಲ್ಲಿ ಚಿತ್ರಿಸಿದ್ದಾರೆ........ ಇದು ಒಂದು ಶತಮಾನದ ಹಿಂದಿನ, ದಕ್ಷಿಣ ಕನ್ನಡದ– ಅದರಲ್ಲೂ ಮಂಗಳೂರಿನ– ಸಾರಸ್ವತ ಸಮಾಜದ ವಾಸ್ತವಿಕ ಚಿತ್ರವೆಂದರೆ ತಪ್ಪಾಗಲಾರದು. ಮಾನವನ ದುಷ್ಟತನ, ಸೌಜನ್ಯ, ನಯ, ವಿನಯ, ಔದ್ಧತ್ಯ ಎಲ್ಲವನ್ನೂ ತೂಕಮಾಡಿ ತೋರಿಸಿಕೊಟ್ಟಿದ್ದಾರೆ........ತಮ್ಮ ಕಾಲದ ಜನಗಳ ನಂಬಿಕೆಯನ್ನು ಚಿತ್ರಿಸುವಾಗಲೂ ಈ ಕಾದಂಬರಿಕಾರರು ಯಥಾವತ್ತಾಗಿಯೇ ಅದನ್ನು ಚಿತ್ರಿಸಿದ್ದಾರೆ. ಸಮಾಜ ಸುಧಾರಣೆಯ ಆವೇಶಕ್ಕೆ ಮನಗೊಟ್ಟು, ಬರವಣಿಗೆಯಲ್ಲಿ ಅಳತೆ ತಪ್ಪಿಲ್ಲ."

ಇದೀಗ ಕನ್ನಡದ ಮೊದಲ ಕಾದಂಬರಿ– ವಿಚಾರ ಮತ್ತು ಕಲೆಯ ಅಂಶಗಳು ಸಮರಸಗೊಂಡಿರುವ ಸಾಹಿತ್ಯ ಕೃತಿ!

ನಾಡು ಛಿದ್ರಛಿದ್ರವಾಗಿದ್ದ ಈ ದರಿದ್ರ ಭೂಮಿಯಲ್ಲಿ ಈ ಕೃತಿರತ್ನಗಳು ಪ್ರಾದೇಶಿಕವಾಗಿಯೇ ಉಳಿದುವು; ಕನ್ನಡ ಕಲೆಯ ಮುನ್ನಡೆಯಲ್ಲಿ ಅವು ಹೆಗ್ಗುರುತುಗಳಾಗುವುದು ಸಾಧ್ಯವಾಗಲಿಲ್ಲ. ಆದರೂ ಅವುಗಳ ಚಾರಿತ್ರಿಕ ಮಹತ್ವವನ್ನು ಈ ದಿನ ನಾವು ಅಲ್ಲಗಳೆಯುವುದುಂಟೆ ? ಅವುಗಳ ಹಿರಿಮೆಯನ್ನು ಗುರುತಿಸದೆ ಮುಂದುವರಿಯುವುದುಂಟೆ ?

ಈ ಶತಮಾನದ ಸೃಷ್ಟಿ

ಆಧುನಿಕ ಕನ್ನಡ ಸಾಹಿತ್ಯದ ಬಹುಮುಖ ಬೆಳವಣಿಗೆಯನ್ನು ನಾವು ಕಾಣುವುದು ಕಳೆದ ಮೂರು ದಶಕಗಳಲ್ಲಿ. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ, ದೀರ್ಘ

* [ಕುಮಟೆಯಲ್ಲಿ ಜರಗಿದ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಲಿಂಗೇಶಶರ್ಮರು ಪ್ರಕಟಿಸಿದ ಈ ಪ್ರಹಸನದ ದ್ವಿತೀಯ ಆವೃತ್ತಿಯಲ್ಲಿ ವೆಂಕಟರಮಣ ಶಾಸ್ತ್ರಿಯವರ ತುಂಬು ಜೀವನದ ರುದ್ರವೂ ರಮ್ಯವೂ ಆದ ಕಥಾಚಿತ್ರವಿದೆ]

ಕಾಲದಿಂದ ಮುದುಡಿಕೊಂಡಿದ್ದ ಕ್ರಿಯಾಶಕ್ತಿಗಳಿಗೆಲ್ಲ ಚಾಲನೆಯನ್ನು ಕೊಟ್ಟಿತು. ಜನಾಂಗದ ಸ್ವಾಭಿಮಾನ, ವ್ಯಾಪಕವಾದ ರಾಷ್ಟ್ರಾಭಿಮಾನಕ್ಕೆ ಪೂರಕವಾಯಿತು. ಹಾಗೆ ಮೊದಲಾದುದೇ ಕನ್ನಡದ ಪುನರುದಯ ಚಳುವಳಿ.

ಆಗಲೇ ರಕ್ತಗತವಾಗಿದ್ದ ಪರಭಾಷೆಯ ವ್ಯಾಮೋಹವನ್ನು ಬಿಟ್ಟು, ಒಳಗಿರುವುದನ್ನು ತಾಯ್ನುಡಿಯಲ್ಲಿ ಹೊರಗೆಡವಲು ಆಗಿನ ಯುವಜನಾಂಗ ಮಾಡಿದ ಯತ್ನ-ಗಳಿಸಿದ ಯಶಸ್ಸು-ಸ್ಮರಣೀಯವಾದುದು. ಆಗ ಕೃತಿಯ ತಿರುಳೇನು ಎಂದು ಯೋಚಿಸಿದವರಿಲ್ಲ. ಎಷ್ಟೋ ಕಾಲದ ಅನಂತರ ಹುಟ್ಟಿದ ಮಗು ಹೇಗಿದ್ದರೂ ಮುದ್ದೇ. ಒಟ್ಟಿನಲ್ಲಿ ಕನ್ನಡವಾದರಾಯಿತು. ಕನ್ನಡದ ಕತೆ, ಕನ್ನಡದ ಕವಿತೆ, ಕನ್ನಡದ ನಾಟಕ, ಕನ್ನಡ ಕಾದಂಬರಿ....

ನಾವೆಲ್ಲ ಕಂಡಿರುವ ಹಾಗೆ ಭಾವಾವೇಶದ ಆ ಕಾಲಘಟ್ಟ ಬಲು ಬೇಗನೆ ಕಳೆಯಿತು. ಕನ್ನಡ ಕೃತಿಯಾದರೆ ಸಾಲದು, ಒಳ್ಳೆಯ ಕನ್ನಡ ಕೃತಿಯಾಗಬೇಕು-ಎಂಬ ಆಶಯ ವ್ಯಕ್ತಪಟ್ಟಿತು.

ಮೂವತ್ತು ವರ್ಷಗಳ ಕಾಲ, ಯಾವುದೇ ಜನಾಂಗದ ಇಲ್ಲವೆ ರಾಷ್ಟ್ರದ ಇತಿಹಾಸದಲ್ಲಿ ಅಲ್ಪಾವಧಿಯೇನೂ ಅಲ್ಲ. ಆದರೆ ನಾವು ಬದುಕಿದ್ದುದು ಪರತಂತ್ರ ದೇಶದಲ್ಲಿ, ಹರಿಹಂಚಿದ ನಾಡಿನಲ್ಲಿ. ಸ್ವತಂತ್ರವಲ್ಲದ ಜನಾಂಗದ ಪ್ರಗತಿಗೆ ಅವಕಾಶ ಕಡಮೆ. ನಮ್ಮ ಆಧುನಿಕ ಸಾಹಿತ್ಯದ ಬೆಳವಣಿಗೆಯನ್ನು ಆ ಹಿನ್ನೆಲೆಯಲ್ಲಿ ನಾವು ಗಮನಿಸಬೇಕು.

ವಿಜ್ಞಾನಕ್ಕೆ, ತತ್ತ್ವಜ್ಞಾನಕ್ಕೆ, ಇನ್ನಿತರ ಶಾಸ್ತ್ರಗಳಿಗೆ ಸಂಬಂಧಿಸಿ ಕನ್ನಡದಲ್ಲಿ ಪ್ರಕಟವಾಗಿರುವ ಪುಸ್ತಕಗಳ ಸಂಖ್ಯೆ ಎಷ್ಟು ? ಸೃಷ್ಟಿಯ ಸಾಹಿತ್ಯ ನೂರರಷ್ಟು ಪ್ರಕಟವಾದಾಗ ಜ್ಞಾನ ಸಾಹಿತ್ಯ ಒಂದರಷ್ಟಾದರೂ ಪ್ರಕಟವಾಗಿದೆಯೆ ? ಪರಪೀಡಕರಾದ ಆಂಗ್ಲರ ಆಡಳಿತವನ್ನು ಬಿಟ್ಟುಬಿಡೋಣ. ಅವರ ಭಾಷೆ ಮತ್ತು ಸಾಹಿತ್ಯ ಮಾತ್ರ ನಮಗೆ ಮಹದುಪಕಾರ ಮಾಡಿದೆ ಎಂಬುದು ನಿರ್ವಿವಾದ. ಆಂಗ್ಲರ ಆಳ್ವಿಕೆ ಇಲ್ಲದೇ ಇರುತ್ತಿದ್ದರೆ, ರಷ್ಯದವರಂತೆ ಚೀಣದವರಂತೆ ಈ ಕ್ಷೇತ್ರದಲ್ಲಿ ಬೆಳವಣಿಗೆಯ ಬೇರೆಯೇ ಹಾದಿಯನ್ನು ನಾವು ನಿರ್ಮಿಸಿಕೊಳ್ಳುತ್ತಿದ್ದೆವು, ನಿಜ. ಆದರೆ ವಸ್ತುತವಾಗಿ ಯಂತ್ರಯುಗದ ವೈಜ್ಞಾನಿಕ ಪ್ರಗತಿಗೆಲ್ಲ ಇಂಗ್ಲಿಷೇ ನಮಗೆ ಬೆಳಕಿಂಡಿಯಾಯಿತಲ್ಲವೆ ? ಅಂತಹ ಇಂಗ್ಲಿಷಿನ ಮೂಲಕ ಜ್ಞಾನಸಂಪತ್ತನ್ನು ಹೆಚ್ಚಿಸಿಕೊಂಡು, ಅದೆಲ್ಲವನ್ನೂ ಅರಗಿಸಿ ಕನ್ನಡದಲ್ಲಿ ವ್ಯಕ್ತಪಡಿಸಿ ಜನಸಮುದಾಯದ ಸೊತ್ತಾಗಿ ಮಾಡಿದವರೆಷ್ಟು ಜನ ? ಮಾನವನ ಬದುಕಿನ ಮೇಲೆ ಪರಿಣಾಮವನ್ನುಂಟುಮಾಡುವಂತಹ ಇಂತಹ ಪ್ರಕಟಣೆಗಳು, ಏನೂ ಬಂದೇ ಇಲ್ಲವೆನ್ನುವುದು ತಪ್ಪಾದೀತು. ಪ್ರಕಟವಾಗಿರುವ ಜ್ಞಾನಸಾಹಿತ್ಯವೆಲ್ಲ, ಬೆಂಗಾಡಿನಲ್ಲಿ ಗುರುತೇ ಉಳಿಯದಂತೆ ಎಲ್ಲಿಯೋ ಸುರಿದ ನಾಲ್ಕು ತುಂತುರು ಹನಿಮಾತ್ರ.

ಸೃಷ್ಟಿ ಸಾಹಿತ್ಯ ಕ್ಷೇತ್ರದಲ್ಲಿ ವಾಸ್ತವವಾದದ ಹೆದ್ದಾರಿಯನ್ನೇನೋ ಕೆಲವರು ತುಳಿದರು. ಹೆಮ್ಮೆಪಡುವಂತಹ ಕೃತಿಗಳು ಕೆಲವು–ನಾಟಕಗಳು, ಕವಿತೆಗಳು, ಕೆಲ ಕತೆ ಕಾದಂಬರಿಗಳು–ಸೃಷ್ಟಿಯಾದುವು. ನೀರು ನಿಂತಲ್ಲೇ ನಿಂತಿತ್ತೇನೋ ಎಂದು ಕಂಡಾಗ, ಪ್ರಗತಿಶೀಲತೆಯ ಬಿರುಗಾಳಿಯೊಂದು ಬೀಸಿ, ತೆರೆಗಳನ್ನೆಬ್ಬಿಸಿ ದಂಡೆಗೆ ಬಡಿದು ಕೋಲಾಹಲವನ್ನುಂಟುಮಾಡಿತು. ಇಷ್ಟಿದ್ದರೂ ಕಂಡುಬರುವುದೇನು? ನಾವು ಕ್ರಮಿಸಿರುವ ಹಾದಿ ಸ್ವಲ್ಪವೆ–ಬಲು ಸ್ವಲ್ಪವೇ.

ಈ ಶತಮಾನದಲ್ಲಿ ದೇಶ ಸ್ವತಂತ್ರವಾದುದೇ ನಾವು ಕಂಡ ಮಹಾ ಸಂಭವ. ಆದರೆ ಯಾದವೀಕಲಹದ ಹೊಗೆ ಬಂಧವಿಮುಕ್ತರ ಉಸಿರು ಕಟ್ಟಿಸಿತು. ದೇಶದ ವಿಭಜನೆ, ಅನಂತರದ ಮಾರಣ ಹೋಮ, ನಮ್ಮೆಲ್ಲರ ಹೃದಯದ ಮೇಲೆ ಬರೆ ಎಳೆಯಿತು. ಕತ್ತಲೆಯ ಕನಸಿನಲ್ಲಿ ಕಂಡುದನ್ನು ಬೆಳಕಿನಲ್ಲಿ ನಾವು ಹುಡುಕಿದೆವು. ನಮಗೆ ದೊರೆತುದು ನಿರಾಶೆಯ ಪ್ರತಿಫಲ. ಸೂಕ್ಷ್ಮಜೀವಿಯಾದ ಬರೆಹಗಾರನಿಗಂತೂ ಆ ಭ್ರಮೆ ನಿರಸನ ಕುಠಾರಪ್ರಾಯವಾದದ್ದು. ಅದರ ನೇರವಾದ ಪರಿಣಾಮವನ್ನು ನಾವು ಕಾಣುವುದು ಆತನ ಕೃತಿಗಳಲ್ಲೇ. ಬದುಕಿನಿಂದ ವಿಮುಖನಾದ ಬರೆಹಗಾರ ಪರದ ಚಿಂತನೆಯೊಂದನ್ನೇ ಮಾಡಿದ; ಇಲ್ಲವೆ ಭಾವಲೋಕದಲ್ಲಿ ಮೈಮರೆತ; ಅಥವಾ ಅತಿಶಯವಾದ ವಿಷಯಾಸಕ್ತಿಯ ಜಾರುಗುಂಡಿಯಲ್ಲಿ ತಳವಿಲ್ಲದ ಆಳಕ್ಕೆ ಇಳಿದ ಆತ ಮಾಡಿದುದೇ ಆತನ ಕೃತಿಯಲ್ಲಿ ಒಡಮೂಡಿತು.

ಈ ದಿನದ ಸಾಹಿತ್ಯಸೃಷ್ಟಿಯಲ್ಲಿ ಅನಿಷ್ಟಕಾರಕವೆಂದು ನನಗೆ ಅನಿಸುವ ಕೆಲ ಪ್ರವೃತ್ತಿಗಳನ್ನು ಕುರಿತು ಒಂದೆರಡು ಮಾತು ಇಲ್ಲಿ ಹೇಳಬೇಕು. ಸಾಮಾಜಿಕ ಜೀವನದಿಂದ, ಜೀವನ ಪ್ರವಾಹದಿಂದ, ದೂರಹೋಗುವ ಬರೆಹಗಾರನಿಗೆ ಒಳ್ಳೆಯ ನಿದರ್ಶನವೆಂದರೆ ನಮ್ಮ ನವ್ಯ ಕವಿ. ಈಗ ಈತ ಸೃಷ್ಟಿಸುವುದು ವೈಯಕ್ತಿಕ ಕಾವ್ಯವನ್ನು, ಮಾತನಾಡುವುದು ವೈಯಕ್ತಿಕ ಪ್ರತಿಮೆಗಳ ಮೂಲಕ. ಕವಿವಾಣಿ ವಿಶ್ವವಾಣಿಯಾಗುವ ಕಾಲ ಕಳೆದಂತೆಯೇ! ಈ ಸಿನಿಕತನ ನಿರಾಶಾವಾದ, ವಕ್ರತಾತ್ತ್ವಿಕ ದೃಷ್ಟಿ– ಎಷ್ಟು ಸರಿಯೋ ಎಷ್ಟು ತಪ್ಪೋ, ಓದುಗರಿಗೆ ಅದು ತಿಳಿದರೆ ತಾನೆ? ಯಾಕೆ ಹೀಗೆ–ಎಂದು ನವ್ಯ ಕವಿಯನ್ನು ಕೇಳಿನೋಡಿ. ದೊರೆಯುವ ಉತ್ತರ ಎಂಥದು? "ನಾನು ಬರೆಯೋದು ಇವತ್ತು ಹತ್ತೇಜನರಿಗೆ ತಿಳಿದರೂ ಸಾಕು. ನಾಳೆಯ ಜನರೆಲ್ಲ ನನ್ನ ಕೃತಿಯನ್ನು ಖಂಡಿತವಾಗಿಯೂ ಕೊಂಡಾಡುವರು." ಇಂಗ್ಲೆಂಡಿನಲ್ಲಿ ಕವಿತೆಗೆ ಎಂತಹ ಗತಿ ಒದಗಿತೆಂಬುದು ಪ್ರಾಯಶಃ ಈ ಸ್ನೇಹಿತರಿಗೆ ತಿಳಿಯದು. ಅಲ್ಲಿ ೧೮೦೦ ನೆಯ ಇಸವಿಯಲ್ಲಿ ನೂರರಲ್ಲಿ ತೊಂಬತ್ತರಷ್ಟು ಜನ ನಿರಕ್ಷರರಾಗಿದ್ದರು. ಆಗ ಸಾಮಾನ್ಯ ಓದುಗರ ಸಂಖ್ಯೆ ೧,೫೦,೦೦೦. ಇಪ್ಪತ್ತನೆಯ ಶತಮಾನದ ಮಧ್ಯಂತರದಲ್ಲಿ ಸಾಮಾನ್ಯ ಓದುಗರ ಸಂಖ್ಯೆ ಎರಡು ಕೋಟಿ. ಆಗ ಓದುಗರ ಸಂಖ್ಯೆ ಅಷ್ಟೊಂದು ಕಡಿಮೆ ಇದ್ದರೂ ಕವಿತಾ ಸಂಗ್ರಹಗಳು ಈಗಿನದಕ್ಕಿಂತ ಹೆಚ್ಚು ಮಾರಾಟವಾಗುತ್ತಿದ್ದುವು. ಅದಕ್ಕೇನು ಕಾರಣ?

ಕಳೆದ ಮೂರು ದಶಕಗಳಿಂದ ನವ್ಯಕವಿತೆ ಬರೆಯುತ್ತಿರುವ ಆಂಗ್ಲ ಕವಿಗಳು ಆ ಪ್ರಶ್ನೆಗೆ ಉತ್ತರ ಕೊಡಬೇಕು. ಅಂಕೆ ಸಂಖ್ಯೆಗಳು ಕಲಿಸುವ ಅಮೂಲ್ಯ ಪಾಠವನ್ನು ನಮ್ಮವರು ದಯವಿಟ್ಟು ಗಮನಿಸಬೇಕು.

ನಾಟಕಗಳಂತೂ ಹಾಸ್ಯರಸ ಒಂದಿದ್ದರಾಯಿತೆನ್ನುವುದು ಪ್ರಚಲಿತ ಮತ. 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ'ದ ಪರಂಪರೆ ನಮಗೆ ತಿಳಿದಿರಲಿಲ್ಲವೆನ್ನೋಣ. ಆದರೆ, ನಮಗೆ ಪರಿಚಿತರಾದ ಷಾ, ಇಬ್ಸೆನ್, ಮಾಲಿಯರರ ವಿಷಯವೇನು? ಕೈಲಾಸಂ ಕಣ್ಮರೆಯಾದರೆಂದು, ಅವರು ತುಳಿದ ಹೆದ್ದಾರಿಯನ್ನು ಮರೆಯೋಣವೇ?

ಕನ್ನಡದ ಸಣ್ಣಕತೆಗಳನ್ನು ನಮ್ಮ ಕತೆಗಾರರೇ ಸಾಯಬಡೆದರು. ಆ ಬಡ ಕೈಗಳಿಗೆ ಬಡಿಗೆಯನ್ನು ಒದಗಿಸಿಕೊಟ್ಟವನು ವ್ಯಾಪಾರೀ ಪ್ರಕಾಶಕ.

ಹರಟೆ-ಪ್ರಬಂಧಗಳ ಮಾತು. ಆ ಚಿಲ್ಲರೆಯವರನ್ನು 'ಹೇಗಿದ್ದೀರಪ್ಪಾ?' ಎಂದು ವಿಚಾರಿಸುವವರಾದರೂ ಯಾರು?

ಕತ್ತಿನವರೆಗೂ ಕಳೆತುಂಬಿದ ಫಲಪುಷ್ಪಗಳ ತೋಟವೊಂದೇ, ಕಾದಂಬರಿಯದು. ಇಲ್ಲಿನ ನೆಗೆತ ಕಸರತ್ತುಗಳೋ ಅದ್ಭುತ. ಜನಪ್ರಿಯ ಸರಕೆಲ್ಲ ಸಂತೆಗೋಸ್ಕರ ನೇಯುವ ಮೂರು ಮೊಳ. ಅದನ್ನು ಸಿದ್ಧಗೊಳಿಸಿದ ಕಂಪನಿಯ ಹಳೆಯ ಪ್ರಸಿದ್ಧಿಯ ಮೇಲಿಂದಲೇ ಅದರ ಮಾರಾಟವಾಗಬೇಕು. ಕೃತಿಯ ವಸ್ತುವಿಗೆ ಅನುಗುಣವಾಗಿ ಸ್ವರೂಪ (ತಂತ್ರ-ಶೈಲಿ) ಎಂದು ನೀವೆಲ್ಲಾದರೂ ಭಾವಿಸಬಹುದು. ಆದರೆ ನಮ್ಮ ಆಧುನಿಕ ಕಾದಂಬರಿಕಾರ ಮೊದಲು ತಂತ್ರವನ್ನು ಸೃಷ್ಟಿಸುತ್ತಾನೆ; ಬಳಿಕ ವಸ್ತುವನ್ನು! ಮನಶ್ಶಾಸ್ತ್ರ ವಿಜ್ಞಾನದೊಂದು ಶಾಖೆ ಎಂದು ನಾವೆಲ್ಲ ಒಪ್ಪಿದ್ದೇವೆ. ತನ್ನ ಪಾತ್ರಗಳನ್ನು ಸರಿಯಾಗಿ ತಿಳಿದುಕೊಳ್ಳಲು ಬರೆಹಗಾರನಿಗೆ ಆ ಶಾಸ್ತ್ರ ನೆರವಾಗುತ್ತದೆಂಬುದೂ ನಿಜ. ಪ್ರತಿಯೊಂದು ಸಾಹಿತ್ಯ ಕೃತಿಯಲ್ಲೂ ಪಾತ್ರಪೋಷಣೆಯಲ್ಲಿ ಮನೋವಿಶ್ಲೇಷಣೆಯ ಸಾಮರ್ಥ್ಯ ಕಂಡು ಬರಲೇಬೇಕು. ಆದರೆ ನಾವು ಮಾತ್ರ ಕಾದಂಬರೀ ರೂಪದಲ್ಲಿ ಬರೆಯುವುದು ಮನೋರೋಗವನ್ನು ಕುರಿತಾದ ನಿಬಂಧವನ್ನು, ನಮ್ಮ ದೃಷ್ಟಿಯಲ್ಲಿದು ಮುಂದುವರಿದ ನಾಗರಿಕತೆ; ನಾವು ಸಾಧಿಸಿರುವ ವೈಜ್ಞಾನಿಕ ಪ್ರಗತಿ! ಇದರ ಜತೆಯಲ್ಲೇ ಕಾಣುವಿರಿ-ಅದ್ಭುತ ಪವಾಡಗಳ ಚಿತ್ರಣವನ್ನು. ದೇವ ದೇವತೆಯನ್ನೂ ನಾಚಿಸುವಂತಹ ಪಾತ್ರಗಳು. ಮಾನವನ ಆತ್ಮವಿಶ್ವಾಸವೆಲ್ಲ ನಷ್ಟವಾಗಿ ಕುರುಡು ನಂಬಿಕೆಗೇ ಅಂಟಿಕೊಳ್ಳುವಂತೆ ಮಾಡುವ ಯತ್ನ. ಅನಂತ ತ್ರಿಕೋಣದ ಹಾವಳಿಯಂತೂ ಕೇಳಲೇಬೇಡಿ. ಇದು ಬೇಸರವಾಯಿತೆಂದು ನೀವು ದೃಷ್ಟಿ ಹೊರಳಿಸುವುದು ಗತಕಾಲದ ಕಥೆಗಳ ಕಡೆಗೆ. ಅಲ್ಲಿಯಂತೂ ನಮ್ಮದು ಲೀಲಾಜಾಲವಾದ ನೆಯ್ಗೆ. ಎದುರಿಗಿರುವ ವಸ್ತುವಾದರೆ ಜವಾಬ್ದಾರಿ ಹೆಚ್ಚು. ಹಿಂದಿನದು ಎಂದ ಬಳಿಕ ನಾವಾಡಿದುದೇ ಸತ್ಯ. ಈ ದಿನದ ಇರುವಿಕೆಗೂ ನಾಳೆಯ ಬದುಕಿಗೂ

ನಿನ್ನೆಯ ಚಿತ್ರ ನೆರವಾಗಬೇಕೆಂಬುದೆಲ್ಲ ಎಲ್ಲಿಯ ವಾದ? ಯಾವ ಆಧಾರಗಳೂ ಇಲ್ಲದ ಐತಿಹಾಸಿಕ ಸರಸ ಕಲ್ಪನೆಯ ಪ್ರವೃತ್ತಿಯೇ ಹೊಸದು! ಇನ್ನು ಪತ್ತೇದಾರಿ ಕಾದಂಬರಿಗಳನ್ನೆತ್ತಿಕೊಂಡಿರೋ, ಅಲ್ಲಿರುವ ಚಿತ್ರಣಕ್ಕೂ ನಮ್ಮ ಬದುಕಿಗೂ ನಡುವೆ ಇರುವುದು ಹಲವು ಸಹಸ್ರ ಹರದಾರಿಗಳ ಅಂತರ ..

ಈ ಕುರಿತು ಯೋಚಿಸಿದ ಬಳಿಕ, ಕನ್ನಡದಲ್ಲಿ ಒಳ್ಳೆಯ ಕಾದಂಬರಿಗಳು ಬಂದೇ ಇಲ್ಲವೆಂದು ಯಾರೂ ಹೇಳಬಾರದು. ವಿಮರ್ಶಕಬುದ್ಧಿಯುಳ್ಳ ಯಾರೂ ಹಾಗೆ ಹೇಳಲಾರರು. ಮೇಲಿನ ನಿರೂಪಣೆಗಳಿಗೆ ಅಪವಾದಗಳು ಇದ್ದೇ ಇವೆ. ಆದರೆ ಎಷ್ಟೇ ಅಪವಾದಗಳಿದ್ದರೂ ವೈಜ್ಞಾನಿಕ ನೋಟವುಳ್ಳ, ಬದುಕಿನ ಸಮಗ್ರ ಚಿತ್ರವನ್ನು ಕೊಡುವ, ಒಂದು ಪಾತ್ರದ ಮೂಲಕ ಹೆಚ್ಚು ಕಡಮೆ ಅಂತಹದೇ ಸಾವಿರ ವ್ಯಕ್ತಿಗಳ ಪರಿಚಯ ಮಾಡಿಸುವ, ವಿಚಾರವೂ ಕಲೆಯೂ ಸಮರಸ ಹೊಂದಿರುವ, ಕೃತಿಗಳ ಸಂಖ್ಯೆ ಬಲು ಬಡಕಲು.

ಇದೀಗ ನಮ್ಮ ದುರವಸ್ಥೆ; ನಾವು ಸಿಲುಕಿ ಬಿದ್ದಿರುವ ವಿಷವ್ಯೂಹ. ನಮ್ಮ ಸಾಹಿತ್ಯ ಈ ಎಲ್ಲ ಬಂಧನಗಳನ್ನು ಕಡಿದೊಗೆದು ಝಾಡಿಸಿ ಮುಂದಕ್ಕೆ ಧಾವಿಸುವುದು ಸಾಧ್ಯವಿಲ್ಲವೆ? ಸತ್ಯದ ಸಾಮರ್ಥ್ಯವನ್ನು ಬಲ್ಲ ಯಾವ ಸೌಂದರ್ಯೋಪಾಸಕನೂ 'ಇಲ್ಲ' ಎನ್ನಲಾರ.

ಆಹ್ವಾನ

ಇದೊಂದು ಪರ್ವಕಾಲ. ಸಂದೇಹ ಸಂಶಯಗಳ ಕಲುಷಿತ ವಾತಾವರಣದಲ್ಲೂ ವಿಶ್ವಬಂಧುತ್ವದ ಕಿರುಧ್ವನಿ ಮೋಹಕವಾಗಿ ಒರಲುತ್ತಿದೆ. ಮಾರಣಾಸ್ತ್ರಗಳ ಪ್ರಯೋಗಾರ್ಥ ಸ್ಫೋಟನದಿಂದ ಕಿವಿಯೊಡೆಯುತ್ತಿದ್ದರೂ ವಿಶ್ವಶಾಂತಿಯ ಗುಂಯಾರವ ಕೇಳಿ ಬರುತ್ತಿದೆ. ಪ್ರಕೃತಿಯ ಮೇಲೆ ಮಹಾವಿಜಯಗಳನ್ನು ಸಾಧಿಸಿದ ಮಾನವ, ವಿಜ್ಞಾನವನ್ನು ಲೋಕ ಕಲ್ಯಾಣಕ್ಕಾಗಿ ಬಳಸಲು ಪಣತೊಟ್ಟಿದ್ದಾನೆ. ಒಂದೆಡೆ, ಭಾರತ ಸ್ವಾತಂತ್ರ್ಯದ ಸುಂದರ ಕಲ್ಪನೆ ದಿಟವಾಗುತ್ತಿರುವಂತೆಯೇ, ಇನ್ನೊಂದೆಡೆ, ಕನ್ನಡ ಜನಕೋಟಿಯ ಕನಸಿನ ರಾಜ್ಯದ ಮಂಗಳೋದಯವಾಗುತ್ತಿದೆ. ಸಮಾಜವಾದದ ಮುಂಬೆಳಗಿನಿಂದ ಭಾರತದ ಪ್ರಜೆ ಎಚ್ಚರಗೊಂಡಿದ್ದಾನೆ. ವಿಶ್ವದ ಪ್ರಜೆ ಜನತೆಯ ಜತೆಸೇರಿ ತಮ್ಮ ಬದುಕನ್ನೂ ಬದಲಾಯಿಸಲು ಭಾರತೀಯರು ಬದ್ಧ ಕಂಕಣರಾಗಿದ್ದಾರೆ. ಭಾರತ ರಾಷ್ಟ್ರದ ಅಭಿಮಾನಧನನಾಗುವ ಸದವಕಾಶ ಕನ್ನಡಿಗನಿಗೆ ಈಗ ದೊರೆತಿದೆ.

ಇಂತಹ ಸನ್ನಿವೇಶದಿಂದ ನಮ್ಮ ಕಲಾವಿದರೆಲ್ಲರ, ಬರೆಹಗಾರರೆಲ್ಲರ, ಮೈ ಪುಲಕಗೊಳ್ಳದೆ ಇರುವುದು ಸಾಧ್ಯವೆ?

ಸಾಕ್ಷರರ ಸುಸಂಸ್ಕೃತರ ನಾಡಾಗಬೇಕು ಈ ಭೂಮಿ; ಸುಖ ಸಮೃದ್ಧಿಯ ಬೀಡಾಗಬೇಕು; ವಿಶ್ವಮಾನ್ಯತೆಗೆ ಅರ್ಹವಾದ ಸಾಹಿತ್ಯ ಕಲೆಗಳ ಆಗರವಾಗ

ಬೇಕು. ಈ ಕಾರ್ಯಸಾಧನೆಯಲ್ಲಿ ನಾವು ನಿರ್ವಹಿಸಬೇಕಾಗಿರುವ ಪಾತ್ರ ಹಿರಿದು.

ಇಪ್ಪತ್ತೇಳು ವರ್ಷಗಳಿಗೆ ಹಿಂದೆ ಕಲಬುರ್ಗಿಯ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡುತ್ತ 'ಶ್ರೀ'ಯವರೆಂದರು—

"ನಾವು, ಕನ್ನಡಿಗರು, ಇಂದು, ಸತ್ತವರನ್ನು ಎಬ್ಬಿಸುವುದೇ ಅಲ್ಲ; ಬದುಕಿರುವವರನ್ನು ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು. ಹಿಂದಿನ ಸಾಹಿತ್ಯವನ್ನು ಪ್ರಯೋಜನಕಾರಿಯಾಗಿ ಮಾಡುವುದಕ್ಕೆ ಅಲ್ಲ; ಹೊಸ ಉತ್ತಮ ಸಾಹಿತ್ಯವೊಂದನ್ನು ಸೃಷ್ಟಿ ಮಾಡುವುದಕ್ಕೆ ಹೊರಟಿರುವೆವು. ಹೊರಟವರು, ವಿಲಾಸವತಿಯ ಕೊರಳಿನ ಪುಷ್ಪಮಾಲಿಕೆಯೇ ಅಲ್ಲ ಸಾಹಿತ್ಯ, ಮಾನವ ಜೀವನದ ಪುನರ್ನಿರ್ಮಾಣ ಕಾರ್ಯದಲ್ಲಿ ಬದ್ಧ ಕಂಕಣವಾಗಿರುವ ವೀರನ ಕೈಯಿನ ಖಡ್ಗವೂ ಅಹುದೆಂದು ತಿಳಿದಿರುವೆವು."

ಕನ್ನಡದ ಪುನರುದಯ ಕಾಲದ ಆ ಶಂಖ ಧ್ವನಿ, ಈ ನವೋದಯ ಕಾಲದಲ್ಲೂ ಮತ್ತೆ ಮೊಳಗುವುದು ಸಮಂಜಸವಾಗಿದೆ.

ಸತ್ಯದ ಆರಾಧಕರಾದ ನಾವು ಇನ್ನು ವೀರಕಚ್ಚೆಯನ್ನು ಬಿಗಿಯೋಣ. ಜ್ಞಾನದ ಹಸಿವಿನಿಂದ ಬಳಲುತ್ತಿರುವ ಜನಕೋಟಿಯನ್ನು ವಿಚಾರದ ಔತಣಕ್ಕೆ ಕರೆಯೋಣ. ಬದುಕನ್ನು ಸುಂದರಗೊಳಿಸುವ ಮಹಾಯಜ್ಞದ ಯಶಸ್ಸಿಗೋಸ್ಕರ ನಮ್ಮ ಲೇಖನಿಯ ಕಲಾ ಸಾಮರ್ಥ್ಯವನ್ನು ಮುಡುಪಾಗಿಡೋಣ. ಎಲ್ಲ ಬರೆಹಗಾರ ಬಾಂಧವರಿಗಿದು ಆಹ್ವಾನ! ಬನ್ನಿ!

—೧೯೫೫

ಪ್ರಗತಿಪಂಥ : ಅಧ್ಯಕ್ಷ ಭಾಷಣ

ಪ್ರಿಯ ಬಂಧುಗಳೇ,

ಕರ್ನಾಟಕದ ಸಾಹಿತ್ಯ ಕಲೆಗಳ ಕ್ಷೇತ್ರದಲ್ಲಿ ಪ್ರಗತಿಪಂಥವನ್ನು ರೂಪಿಸುವ ಮಹತ್ಕಾರ್ಯಕ್ಕಾಗಿ ನಾವಿಲ್ಲಿ ನೆರೆದಿದ್ದೇವೆ. ನನಗೆ ಒಪ್ಪಿಸಲಾಗಿರುವ ಅಧ್ಯಕ್ಷತೆಯ ಹೊಣೆ ಗುರುತರವಾದದ್ದೆಂದು ಬಲ್ಲೆ. ನನ್ನ ಬಗೆಗೆ ಗೆಳೆಯರು ತೋರಿಸುವ ವಿಶ್ವಾಸಕ್ಕಾಗಿಯೂ ಗೌರವಕ್ಕಾಗಿಯೂ ನಾನು ಋಣಿಯಾಗಿದ್ದೇನೆ. ನಿಮ್ಮೆಲ್ಲರ ನೆರವಿನಿಂದ ನನ್ನ ಕೆಲಸ ಹಗುರವಾಗುತ್ತದೆಂಬ ನಂಬಿಕೆ ನನಗಿದೆ.

ಪ್ರಗತಿಯ ಝೇಂಕಾರ ಕನ್ನಡಕ್ಕೆ ಹೊಸದಲ್ಲ. ನಾಲ್ಕನೆಯ ದಶಕದಲ್ಲಿ ಈ ದುಂಬಿಗಳು ಕನ್ನಡ ಸಾಹಿತ್ಯೋದ್ಯಾನಕ್ಕೆ ಮೆರುಗು ನೀಡಿದುವು.

ಆ ಝೇಂಕಾರವನ್ನು ಈ ದಿನ ಮತ್ತೆ ಕೇಳುತ್ತಿದ್ದೇವೆ. ಇಲ್ಲಿ ಹಿರಿದುಂಬಿಗಳಿವೆ ಮರಿದುಂಬಿಗಳಿವೆ. ಕಾಡು ಹೂವಿನಿಂದ ಕ್ಷಾತ್ರಮಧುವನ್ನು ತರಬಲ್ಲ ಸಾಹಸ ಜೀವಿಗಳು. ದುಡಿಮೆಯಲ್ಲಿ ಸುಖವನ್ನರಸುವ ಸಂಸಾರ ಇದು.

ಕಾಲಪುರುಷ ಅಸ್ಪೃಷ್ಟನೆಂಬುದು ಸುಳ್ಳು. ನಮ್ಮ ಒಡಲಿಗೇ ಅವನು ಕಿಚ್ಚನ್ನಿಟ್ಟಿದ್ದಾನೆ. ಕನ್ನಡ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಅಧ್ವರ್ಯುರಾಗಿದ್ದ ಅ.ನ.ಕೃ. ನಮ್ಮನ್ನು ಅಗಲಿದರು; ಮಂಗಳೂರು ಪ್ರಗತಿಶೀಲ ಲೇಖಕರ ಸಂಘದ ಉಪಾಧ್ಯಕ್ಷರಾಗಿದ್ದ ಬಿ. ಶಂಕರ ಭಟ್ಟ, ಧಾರವಾಡ ಪ್ರಗತಿಶೀಲ ಲೇಖಕರ ಸಂಘದ ಕಾರ್ಯದರ್ಶಿಯಾಗಿದ್ದ ದ. ಬಾ. ಕುಲಕರ್ಣಿ ಕಣ್ಣುಮುಚ್ಚಿದರು. ಈ ಮೂವರು ಹೊರಟುದುದು ವೃದ್ಧಾಪ್ಯಕ್ಕೆ ಮುನ್ನವೇ. 'ಜನಶಕ್ತಿ'ಯಲ್ಲಿ ನನ್ನ ಸಹೋದ್ಯೋಗಿಗಳಾಗಿದ್ದ ಶಿವೇಶ್ವರ ದೊಡ್ಡಮನಿ ಮತ್ತು ಸದಾಶಿವ ಎಳವೆಯಲ್ಲೇ ನಿಧನರಾದರು. ಯುವಕ ಪ್ರಗತಿಶೀಲ ಕತೆಗಾರ ಅ. ಸೋಗಾಲ ಅಪಮೃತ್ಯುವಿಗೆ ತುತ್ತಾದರು. ಇದು ಜೇನುತೊಟ್ಟಿಗೆ ಸೊಡರಿನ ಸೋಂಕು.

ಭ್ರಮರಗಳ ಬೃಹತ್ ಸಂಸಾರಕ್ಕೆ ಕಳೆದ ಕೆಲ ವರ್ಷಗಳಲ್ಲಿ ರಾಷ್ಟ್ರದ ವ್ಯಾಪ್ತಿಯಲ್ಲೂ ಹಾನಿ ತಟ್ಟಿದೆ; ವಿಶ್ವದ ವ್ಯಾಪ್ತಿಯಲ್ಲೂ ಧಕ್ಕೆಯುಂಟಾಗಿದೆ. ಸಜ್ಜದ್ ಜಾಹೀರ್, ರಾಹುಲ ಸಾಂಕೃತ್ಯಾಯನ, ಬಲರಾಜ ಸಹಾನಿ ಇನ್ನಿಲ್ಲ. ಪುರೋಗಾಮಿ

ಜಗತ್ತಿನ ಕಾವ್ಯರ್ಷಿ ಪಾಬ್ಲೋ ನೆರುದಾ ತಮ್ಮ ತಾಯ್ನಾಡು ಚಿಲಿ ಫ್ಯಾಸಿಸ್ಟ್ ಶಕ್ತಿಗಳಿಗೆ ಬಲಿಯಾದ ಘಳಿಗೆಯಲ್ಲಿ ಜರ್ಜರಿತರಾಗಿ ಅಸು ನೀಗಿದರು.

ಈ ಎಲ್ಲ ಚೇತನಗಳನ್ನು ಇಲ್ಲಿ ನೆನೆಯೋಣ. ಶ್ರದ್ಧಾಂಜಲಿ ಅರ್ಪಿಸಿ, ಮುಂದೆ ನಡೆಯೋಣ.

ಕರ್ನಾಟಕದಲ್ಲಿ ಪ್ರಗತಿಯ ಕರೆ

ಆಳುತ್ತಿದ್ದ ಸಾಮ್ರಾಜ್ಯಶಾಹಿ ದುರ್ಬಲವಾಗಿ, ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಅಂತಿಮ ಘಟ್ಟವನ್ನು ತಲುಪಿತ್ತು. ಸೋವಿಯೆತ್ ಕೆಂಪು ಸೇನೆಯ ಕೈಯಲ್ಲಿ ಫ್ಯಾಸಿಸ್ಟ್ ಶಕ್ತಿಗಳು ತತ್ತರಿಸತೊಡಗಿದ್ದುವು. ಮೂಲಭೂತ ಪ್ರಶ್ನೆಗಳು ಜನಪದವನ್ನು ಕಾಡಿದ ಕಾಲ ಅದು. ಆಗ, ರಾಷ್ಟ್ರದ ಸಾಹಿತ್ಯ ಕಲೆಗಳ ವಲಯದಲ್ಲಿ ಪ್ರಗತಿಶೀಲತೆಯ ಗಾಳಿ ಬಲವಾಗಿ ಬೀಸಿತು. ಕರ್ನಾಟಕವನ್ನೂ ಅದು ಆವರಿಸಿತು. ನನ್ನಂಥ ಎಳೆಯರು ಮಾತ್ರವಲ್ಲ; ಅನಕೃ, ಶ್ರೀರಂಗ, ವಿನಾಯಕರಂಥ ಸಾಹಿತ್ಯ ಪ್ರಮುಖರೂ ದ. ಕೃ. ಭಾರದ್ವಾಜರಂಥ ವಿದ್ವಾಂಸರೂ ಪ್ರಗತಿಶೀಲತೆಯತ್ತ ಆಕರ್ಷಿತರಾದರು. ಪ್ರಗತಿಯ ಸಂದೇಶವನ್ನು ಬರೆವಣಿಗೆಯ ಕತ್ತಲು ಕೋಣೆಗಳಿಗೆ ಒಯ್ಯಲು ಅ.ನ.ಕೃ. ಮತ್ತು ಅವರ ಯುವಕ ಮಿತ್ರವೃಂದ (ತ.ರಾ.ಸು., ಚದುರಂಗ, ಮಾ. ನಾ. ಚೌಡಪ್ಪ, ಎಸ್. ಅನಂತನಾರಾಯಣ, ಕುಮಾರ ವೆಂಕಣ್ಣ, ನಾಡಿಗೇರ ಕೃಷ್ಣರಾವ್, ಅರ್ಚಿಕ ವೆಂಕಟೇಶ........) ಪಟ್ಟ ಪರಿಶ್ರಮ ಅಪಾರ. ಪ್ರಭಾವಶಾಲಿಯಾದ ಇನ್ನೊಂದು ಮಾಧ್ಯಮವನ್ನು ಬಳಸಿ ಬಸವರಾಜ ಕಟ್ಟೀಮನಿ ಪ್ರಗತಿಯ ಪಾಂಚಜನ್ಯವನ್ನು ಮೊಳಗಿದರು. (ಕಟ್ಟೀಮನಿ, ಕುಳಕುಂದ, ಪಾಟೀಲ ಪುಟ್ಟಪ್ಪ, ಕೋ. ಚೆನ್ನಬಸಪ್ಪ–ಇವರ ಕೃತಿಗಳನ್ನು ಪ್ರಕಟಿಸಿ 'ಉಷಾ' ಕನ್ನಡ ಸಾಹಿತ್ಯದ ಹೊಸ ಅಧ್ಯಾಯದ ಬರೆವಣಿಗೆಯಲ್ಲಿ ಸಕ್ರಿಯ ಪಾತ್ರ ವಹಿಸಿತು.) ಇದಲ್ಲದೆ, ಒಂದೆಡೆ ಎಚ್ಚೆಸ್ಕೆ ಮತ್ತು ಕೆ. ಶ್ರೀನಿವಾಸನ್. ಮತ್ತೊಂದೆಡೆ ಬಿ. ಶಂಕರ ಭಟ್ಟ ಮತ್ತು ಕೆ. ನಾರಾಯಣ ತಮ್ಮ ಬರೆಹಗಳಿಂದಲೂ ಚಟುವಟಿಕೆಗಳಿಂದಲೂ ಹೊಸ ವಿಚಾರ ಧಾರೆಯನ್ನು ಪ್ರಚುರಗೊಳಿಸಲು ನೆರವಾದರು.

ಪ್ರಗತಿಶೀಲ ಲೇಖಕರ ಸಂಘಟನೆಯ ಜೊತೆ ಜನತಾ ರಂಗಭೂಮಿಯೂ ಜನ್ಮ ತಳೆಯಿತು. [ಇದರ ಮಂಗಳೂರು ಘಟಕವನ್ನು ಶಿವರಾಮ ಕಾರಂತರು ಉದ್ಘಾಟಿಸಿದರು.]

ಹೊಸ ನೆಲದಲ್ಲಿ ಉಳುಮೆ, ಹೊಸ ಕೃಷಿ ವಿಧಾನ. ಬಹಳ ಜನ ಸಾಹಿತ್ಯ ಕಲೆಗಳ ಬೇಸಾಯಗಾರರು ಆ ಸಂಭವದತ್ತ ದೃಷ್ಟಿ ಬೀರಿದರು. ಕೆಲವರು ಮೆಚ್ಚುಗೆಯಿಂದ, ಬೇರೆ ಕೆಲವರು ಕುತೂಹಲದಿಂದ, ಮತ್ತೆ ಕೆಲವರು ತಿರಸ್ಕಾರದಿಂದ. ಆದರೆ ದಿನಕಳೆದಂತೆ ಪ್ರಗತಿಶೀಲತೆ ಅವಿನಾಶಿ ಎಂಬುದು ಸ್ಪಷ್ಟವಾಯಿತು. ಸಂಘಟನೆ ನಾನಾ ಕಾರಣಗಳಿಂದ ನಿಷ್ಕ್ರಿಯವಾದರೂ ಹಣೆಪಟ್ಟಿ ಕಳಚಿಬಿದ್ದರೂ ಪ್ರಗತಿ

ಶೀಲತೆಯ ತಾತ್ವಿಕ ನಿಲುವು ಬಲಗೊಂಡಿತು. ನಾವೀನ್ಯ ಸಹಜವಾಗಿ ಸತ್ವಹೀನ ವಾಗಿದ್ದ ನವೋದಯ ಸಾಹಿತ್ಯ ತಾನು ವಿರಾಜಮಾನವಾಗಿದ್ದ ವೇದಿಕೆಯಲ್ಲಿ ಪ್ರಗತಿ ಶೀಲ ಸಾಹಿತ್ಯಕ್ಕೂ ಸ್ಥಳ ನೀಡಿತು, ಕಠೋರ ಬದುಕಿನ ವಾಸ್ತವತೆ ಕನ್ನಡ ಸಾಹಿತ್ಯ ಕೃತಿಗಳಿಗೆ ಮಾತೃಕೆಯಾಯಿತು. ಸಮಾಜದ ದಲಿತರು ಪಾತ್ರಗಳಾದರು. ಆಡುಭಾಷೆ ಸಾಹಿತ್ಯ ಮನ್ನಣೆ ಪಡೆಯಿತು. ಆದರೆ, ಪ್ರಗತಿಶೀಲರ ವಿಚಾರಸರಣಿ ಅವರ ಕೃತಿಗಳಲ್ಲಿ ಹೆಚ್ಚು ಹೆಚ್ಚಾಗಿ ಒಡಮೂಡದೆ ಇದ್ದುದು ಒಂದು ದುರಂತ. ಒಳ್ಳೆಯ ಕೆಲವು ಕೃತಿಗಳನ್ನು ಅವರು ರಚಿಸಿದಾಗಲೂ ಸಾಹಿತ್ಯ ಕ್ಷೇತ್ರದಲ್ಲಿ ಅವು ಗಳಿಗೆ ಯೋಗ್ಯ ಮನ್ನಣೆ ಲಭಿಸಲಿಲ್ಲ. ಪಟ್ಟಭದ್ರರ ಅಸೂಯೆಗೆ, ವಿಮರ್ಶಕರ ಮಡಿವಂತಿಕೆಗೆ ಅವು ಗುರಿಯಾದವು.

ಪಥಭ್ರಾಂತರು

ಪ್ರತಿರೋಧ ಶಕ್ತಿ ಕುಗ್ಗಿದಾಗ ಹೊಸ ಶಕ್ತಿಗಳ ಪ್ರವೇಶ ಸುಲಭ. ಪ್ರಗತಿ ಶೀಲರ ಧ್ವನಿ ಹಿನ್ನೆಲೆಗೆ ಸರಿದ ಸನ್ನಿವೇಶದಲ್ಲಿ, ಸ್ವಾತಂತ್ರ್ಯಾನಂತರದ ಸಂಕೀರ್ಣ ಬದುಕಿಗೆ ಅಭಿವ್ಯಕ್ತಿ ನೀಡಬೇಕೆಂಬ ಒಳ್ಳೆಯ ವಾದವನ್ನು ಮುಂದಿಟ್ಟು, ಅದರ ಮರೆ ಯಲ್ಲಿ ಸೃಜನಶೀಲರನ್ನೆಲ್ಲ ಜನಸಮುದಾಯದಿಂದ ದೂರ ಒಯ್ಯುವ ಒಂದು ಪ್ರವೃತ್ತಿ ಮೊಳೆತು ಬಲಿಯಿತು. ಇದರ ಪ್ರತಿಪಾದಕರು ನವ್ಯರೆಂಬ ಹೆಸರಿನಲ್ಲಿ ಬೌದ್ಧಿಕ ಕಸರತ್ತುಗಳಲ್ಲಿ ನಿರತರಾದರು, ಮೈಮರೆತರು. ಬಹುಪ್ರಸಾರದ ಸಂಪರ್ಕ ಮಾಧ್ಯಮಗಳು ಇವರಿಗೆ ಸೇವೆ ಸಲ್ಲಿಸಿದ ರೀತಿ ನೋಟಕರಿಗೆ ದಿಗ್ಭ್ರಮೆ ಹುಟ್ಟಿಸು ವಂಥದು. ಪರಸ್ಪರ ಪ್ರಶಂಸೆಯಲ್ಲಂತೂ ನವ್ಯರು ನವೋದಯದ ಪ್ರಮುಖರನ್ನು ಮೀರಿಸಿದರು. ದಿನ ಕಳೆದಂತೆ, ಪರಸ್ಪರರ ಕಣ್ಣುಗಳಲ್ಲಿ ತಮ್ಮ ತಮ್ಮ ಪ್ರತಿಬಿಂಬ ಗಳನ್ನು ಕಂಡು ಬೇಸತ್ತ ಇವರು ಕಾಲಯಾಪನೆಗೆಂದು ಒಬ್ಬರನ್ನೊಬ್ಬರು ದೂಷಿ ಸುವ ಆಟ ಆರಂಭಿಸಿದರು. ಪರಿಣಾಮ–ವಿಘಟನ ಕ್ರಿಯೆ. ಮೂರಾಬಟ್ಟೆ ಯಾಯಿತು ನವ್ಯಪಂಥ.

ಆದರೆ, ಜೀವಮಾನವೆಲ್ಲ ನಟಿಸುತ್ತ ಬಂದವರಿಗೆ ಎಲ್ಲಿಯ ನಿವೃತ್ತಿ ? ಕೆಲವ ರಂತೂ ನಟಭಯಂಕರರು. ಪ್ರೇಕ್ಷಕರ ಚಪ್ಪಾಳೆಯೇ ಅವರ ಜೀವನದ ಉಸಿರು. ಅಂಥವರಿಗೆ ಯಾವ ನಾಟಕವಾದರೇನು ? ಅಭಿನಯ ಪ್ರದರ್ಶನಕ್ಕೆ ಪೂರ್ಣಾವ ಕಾಶ ದೊರೆತರಾಯಿತು.

ನೀವು ಹಿಡಿದಿರುವುದು ಸರಿದಾರಿಯಲ್ಲ–ದಾರಿಯೇ ಅಲ್ಲ–ಎಂದರೆ, ಭ್ರಾಂತರು ಸುಲಭವಾಗಿ ಒಪ್ಪುವುದಿಲ್ಲ.

ಕಾಣುಕದ ಸತ್ಯ, ಕಾಣುಕದ ಸೌಂದರ್ಯ

"ಆಡುವ ಮಾತು ಮಾನಸಿಕ ಅನುಭವದ ಸಂಕೇತ; ಬರೆಯುವ ಪದ ಆಡುವ ಮಾತಿನ ಸಂಕೇತ"—ಇದು ಒಂದು ಗ್ರೀಕ್ ಕಲ್ಪನೆ.

ಹದಿನೈದನೆಯ ಶತಮಾನದ ಮಹಾಪ್ರತಿಭಾಶಾಲಿ ವಿಂಚಿ ಚಿತ್ರಕಲಾಭ್ಯಾಸಿಗಳಿಗೆ "ಮನಸ್ಸಿನೊಳಗೆ ನಡೆಯುವುದು ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಮುಖವನ್ನು ಚಿತ್ರಿಸಿ" ಎಂದ.

ಅವನ ಸಮಕಾಲೀನ ಮೈಕೆಲೆಂಜಲೋ, "ಚಿತ್ರಕಲೆಯು ಸಂಗಿತ, ಮಧುರ ರಾಗ" ಎಂದು ಇಂಪುನುಡಿ ಆಡಿದ.

ನಾಗರಿಕನಾಗಲು ಮಾನವ ಹೆಣಗಿದ ಹಲವು ಶತಮಾನಗಳ ಇತಿಹಾಸದ ನೆಲೆಯಲ್ಲಿ ಗ್ರೀಕರು ಆಧುನಿಕರು; ವಿಂಚಿ–ಮೈಕೆಲೆಂಜಲೋ ಅತ್ಯಾಧುನಿಕರು. ಸಾಹಿತ್ಯಕಲೆಗಳ ಉಗಮವನ್ನು ತಿಳಿಯಲು ಇತಿಹಾಸಕ್ಕೂ ಹಿಂದಿನ ಹಲವು ಸಹಸ್ರ ವರ್ಷಗಳ ಆಚೆಗಿನ ಕತ್ತಲೆಯೊಳಕ್ಕೆ ನಾವು ಇಣಿಕಿ ನೋಡಬೇಕು. ರಾಗ ಮೊದಲೊ? ಪದ ಮೊದಲೊ? ಕುಣಿತ ಮೊದಲೊ? ನಟನೆ ಮೊದಲೊ? ಯಾವುದರ ಬಳಿಕ ಅಥವಾ ಯಾವುದಕ್ಕೆ ಮುಂಚೆ ಹುಟ್ಟಿತು ಚಿತ್ರಕಲೆ? ಇವೆಲ್ಲವೂ ಅಭಿವ್ಯಕ್ತಿಯ ಯತ್ನ, ಮನಸ್ಸಿನಲ್ಲಿದ್ದುದನ್ನು ಇನ್ನೊಬ್ಬರಿಗೆ ತಿಳಿಯ ಹೇಳುವ ಪ್ರಯತ್ನ. ಈ ಸಂಗಮನ ಕ್ರಿಯೆಯೆಲ್ಲ ಸಾಮಾಜಿಕ ಸ್ವರೂಪದ್ದೆನ್ನುವುದು ನೆನಪಿಡಬೇಕಾದ ಅಂಶ. ಬೇಟೆಯ ಹರ್ಷೋನ್ಮಾದವನ್ನೂ ಭಯ ಸಂಕಟವನ್ನೂ ಮಾನವ ಚಿತ್ರಿಸಿದ–ಕಲ್ಲಿನ ಮೇಲೆ. ಕರಡಿ–ಕಾಡುಕೋಣ–ಕಾಂಗರೂ–ನವಿಲು ನೃತ್ಯಗಳ ಮೂಲವೇನು? ತಾನು ಅವನ್ನು ಮಣಿಸಿದ ಅಥವಾ ಅವಕ್ಕೆ ಒಲಿದ ಸಂತಸವನ್ನು, ಆ ಪ್ರಾಣಿಗಳಂತೆಯೇ ಹೆಜ್ಜೆ ಇಟ್ಟು ಕುಣಿದು, ಇತರ ಸಾಮಾಜಿಕರಿಗೆ ಆತ ಹಂಚಿದ. ಕೃಷೀವಲನಾದಾಗ ಬಿತ್ತನೆ ನೃತ್ಯ. ಕೊರೆದ ಮರದ ದಿಮ್ಮಿಯನ್ನು ನೀರಿನಲ್ಲಿ ಚಲಿಸಿದ ದಿನದಿಂದ ಅಂಬಿಗ ನರ್ತನ, ಹಾಡು; ನಡೆದುದಕ್ಕೆ ರೆಕ್ಕೆ ಪುಕ್ಕ ಹಚ್ಚಿ ಬಣ್ಣಿಸಿ ಹೇಳುವ ಕಥೆ. ಹೀಗೆ ಸಾಹಿತ್ಯ ಕಲೆಗಳೆಲ್ಲ ಹುಟ್ಟಿದ್ದು ದುಡಿಮೆಯ ಜೊತೆಯಲ್ಲೇ ಮಾನವನ ಕಾಯಕದಲ್ಲೇ.

ತನ್ನ ಹೋರಾಟದ ಬದುಕಿನಲ್ಲಿ ಮನುಷ್ಯ ಸತ್ಯಾನ್ವೇಷಕನಾದ, ಸೌಂದರ್ಯೋಪಾಸಕನೂ ಆದ. ಇವೆರಡನ್ನೂ ತನ್ನ ಸುತ್ತಮುತ್ತಲ ಇರುವಿಕೆಯಲ್ಲೇ ಆತ ಕಂಡ. ಇರುವಿಕೆ ಮೂಡಿಸಿದ ಅರಿವಿನಿಂದಾಗಿ ಅವನು ತತ್ತ್ವಜ್ಞಾನಿಯಾದ. ಆ ಅರಿವು ಅವನ ಕೈಯಲ್ಲೊಂದು ಆಯುಧವಾಯಿತು. ಅದನ್ನು ಬಳಸಿ ಸಮಾಜವನ್ನೇ ಆತ ಪರಿವರ್ತಿಸತೊಡಗಿದ.

ತತ್ತ್ವಜ್ಞಾನಿ ತರ್ಕಸರಣಿಯಲ್ಲಿ ಮಾತನಾಡುತ್ತಾನೆ. (ಇಂದಿನ ವಿಜ್ಞಾನಿಯೂ ಅಷ್ಟೆ.) ಕವಿ ನುಡಿಯುವುದು ಪ್ರತಿಮೆಗಳು ಮತ್ತು ಚಿತ್ರರೂಪದಲ್ಲಿ. ಆಗಲೂ–ಈಗಲೂ.

ಕಾವ್ಯವನ್ನು 'ವಾಸ್ತವತೆ ಮತ್ತು ನೈಜ ವಿಚಾರಗಳ ಕಲೆ' ಎಂದು ಹತ್ತೊಂಭತ್ತನೆಯ ಶತಮಾನದ ಐರೋಪ್ಯ ಸಾಹಿತ್ಯದ ಅಗ್ರಪಂಕ್ತಿಯ ಪ್ರಭೃತಿ ರಷ್ಯನ್ ವಿಮರ್ಶಕ ಬೆಲಿನ್‌ಸ್ಕಿ ಕರೆದಿರುವುದು ಎಷ್ಟು ಸಮಂಜಸ!

ಇದನ್ನೆಲ್ಲ ತರ್ಕಬದ್ಧವಾಗಿ ಯೋಚಿಸಿದಾಗ ಒಂದು ಸತ್ಯ ಮೂಡಿಬರುತ್ತದೆ: ಕವಿಯ ಅಥವಾ ಕಲಾವಿದನ ಅಭಿವ್ಯಕ್ತಿ ಪರಮ ಶ್ರೇಷ್ಠವಾಗುವುದು–ಬದುಕಿನ ಒಂದಂಶವನ್ನು ಆತ ಕಂಡಾಗ ಅಲ್ಲ, ಬದುಕಿನ ಸಮಗ್ರ ಸ್ವರೂಪವನ್ನೇ ಆತ ಕಾಣುವುದು ಸಾಧ್ಯವಾದಾಗ ಮಾತ್ರ.

ಸಮಾಜದೊಡನೆ ನಂಟು

ದೀರ್ಘಶೋಧೆಯ ಬಳಿಕ ಸತ್ಯದರ್ಶನವಾದವನ ಉತ್ಸಾಹದಿಂದ ಬೆಲಿನ್ಸ್‌ಕಿ ಸಾರಿದ:

"ವಾಸ್ತವತೆ–ಇದೀಗ ಆಧುನಿಕ ಜಗತ್ತಿನ ಘೋಷ ಮತ್ತು ಕೊನೇ ಮಾತು!....ವಾಸ್ತವತೆ ಮಣ್ಣಿನಿಂದ ಚಿಮ್ಮುತ್ತದೆ ಮತ್ತು ಎಲ್ಲ ವಾಸ್ತವತೆಯಾದ ಮಣ್ಣೇ ಸಮಾಜ."

"ನಮ್ಮ ಕಾಲದ ಕಲೆ ಎಂಥದು?" ಎಂದು ಪ್ರಶ್ನಿಸಿ, ಆತನೇ ಉತ್ತರವಿತ್ತ:

"ಅದು ಸಮಾಜವನ್ನು ಕುರಿತಾದ ತೀರ್ಪು, ಪೃಥಕ್ಕರಣ; ಪರಿಣಾಮವಾಗಿ ಸಮಾಜದ ವಿಮರ್ಶೆ. ಈಗ ವಿಚಾರದ ಅಂಶ ಕಲೆಯ ಅಂಶದೊಡನೆ ಬೆರೆತಿದೆ. ನಮ್ಮ ಕಾಲದಲ್ಲಿ ಕಲಾಕೃತಿಯ ಯುಗಧರ್ಮದ ಮಹತ್ತರವಾದ ಅಂತಃಸ್ಫೂರ್ತಿಯಿಂದ ಹುಟ್ಟಿದೆ. ಚಿತ್ರಿಸಬೇಕು ಎನ್ನುವ ಒಂದೇ ಉದ್ದೇಶಕ್ಕೋಸ್ಕರ ಬದುಕನ್ನು ಚಿತ್ರಿಸಿದರೆ, ಅದು ಸಂಕಟದ ಕೂಗು ಇಲ್ಲವೆ ಮಹದಾನಂದದ ಅಮರಗಾನವಾಗದೆ ಇದ್ದರೆ, ಆ ಕೃತಿ ನಿರ್ಜೀವ ಎನಿಸಿಕೊಳ್ಳುವುದು."

ನಮ್ಮ ಕಾಲದ ಸಮಸ್ಯೆಗಳ ಸಾರವೇನು? ಜನತೆಯ ಆಶೋತ್ತರಗಳೇನು? ಯಾವುದು ನಡೆದು ಬಂದ ದಾರಿ? ಸಾಮಾಜಿಕ ಸಾಂಸ್ಕೃತಿಕ ರೂಪುರೇಖೆಗಳು ಯಾವುವು? ಎಂಬುದನ್ನು ಸ್ಪಷ್ಟವಾಗಿ ಅರಿತಿರುವ ಬರೆಹಗಾರ ಮಾತ್ರ ಅರ್ಥಪೂರ್ಣ ಕೃತಿಗಳನ್ನು ರಚಿಸಬಲ್ಲ.

ಆಂಗ್ಲ ಕಾದಂಬರಿಯ ಜನಕ ಹೆನ್ರಿ ಫೀಲ್ಡಿಂಗ್–ಹೋಮರ್–ಮಿಲ್ಟನ್‌ರ ಬಗೆಗೆ ಬರೆಯುತ್ತ, "ಅವರು ತಮ್ಮ ಕಾಲದ ಜ್ಞಾನವನ್ನೆಲ್ಲ ಕರಗತಮಾಡಿಕೊಂಡಿದ್ದರು; ಸಮಾಜದ ಎಲ್ಲ ಹಂತಗಳ ಜನರೊಡನೆಯೂ ಸಮಾನ ಸಂಪರ್ಕ ಪಡೆದಿದ್ದರು," ಎಂದಿದ್ದಾನೆ.

ನಮ್ಮ ವಾಲ್ಮೀಕಿ ವ್ಯಾಸರ ಬಗೆಗೂ ಪಂಪ ಕುಮಾರವ್ಯಾಸರ ವಿಷಯದಲ್ಲೂ ಅಂಥವೇ ಮಾತನ್ನು ನಾವು ಆಡುವುದು ಸಾಧ್ಯ.

ಇರುವಿಕೆಯನ್ನು ಕುರಿತ ನಮ್ಮ ಅರಿವು ಅಗಾಧವಾಗಿದ್ದರೆ ಮಾತ್ರ, ನಾವು ರಚಿಸುವ ಕೃತಿ ಬಲಗೊಳ್ಳುತ್ತಿರುವ ಅಥವಾ ಕುಸಿಯುತ್ತಿರುವ ಸಮಾಜದ, ಬದಲಾಗುತ್ತಿರುವ ಮಾನವ ಸಂಬಂಧಗಳ ಚಿತ್ರಣವಾಗುತ್ತದೆ. ಸಮಾಜವನ್ನು ಕುರಿತ

ಓದುಗರ ಪರಿಜ್ಞಾನವನ್ನು ಹೆಚ್ಚಿಸಲು ಆ ಕೃತಿ ಕಾರಣವಾಗುತ್ತದೆ; ನಾಲ್ಕು ದಿನ ಬಾಳುತ್ತದೆ.

ರಷ್ಯದ ಮಹಾ ಸಾಹಿತಿ ಮಹರ್ಷಿ ತೋಲ್‌ಸ್ತೋಯ್ ಬಹಳ ಮೆಚ್ಚಿದ್ದ ಕೃತಿ–ಇಂಗ್ಲಿಷಿನ 'ರಾಬಿನ್‌ಸನ್ ಕ್ರೂಸೊ'. "ಇನ್ನೊಮ್ಮೆ ಹುಟ್ಟಿಬಂದರೆ ನಾನೊಂದು 'ರಷ್ಯನ್ ರಾಬಿನ್‌ಸನ್' ಬರೆಯಬೇಕು," ಎನ್ನುತ್ತಿದ್ದ ತೋಲ್‌ಸ್ತೋಯ್ ಇಳಿವಯಸ್ಸಿನಲ್ಲಿ. 'ರಾಬಿನ್‌ಸನ್ ಕ್ರೂಸೊ' ಬರೆದ ಡೇನಿಯಲ್ ಡೆಫೋ ತೋಲ್‌ಸ್ತೋಯ್‌ಗಿಂತ ಎರಡು ಶತಮಾನ ಹಿಂದಿನವನು. ಅಸಾಮಾನ್ಯ ಮನುಷ್ಯ. ಅರಸನಿಗಿರಿದಾದ ಚಟುವಟಿಕೆಗಳಿಗಾಗಿ ಉಗ್ರಶಿಕ್ಷೆಗೆ ಗುರಿಯಾಗಿದ್ದ. ಆದರೆ, ಅರುವತ್ತು ದಾಟಿದ ಮೇಲೆ 'ರಾಬಿನ್‌ಸನ್ ಕ್ರೂಸೊ' ಬರೆದು, ಲೋಕವನ್ನೇ ಬೆರಗುಗೊಳಿಸಿದ. ಹದಿನೆಂಟನೆಯ ಶತಮಾನದುದ್ದಕ್ಕೂ ಇಂಗ್ಲೆಂಡಿನಲ್ಲಿ 'ರಾಜಕೀಯ ಅರ್ಥಶಾಸ್ತ್ರ'ದ ಬೋಧನೆಗೆ ಡೆಫೋನ ಆ ಕೃತಿ ಆಧಾರ ಗ್ರಂಥವಾಯಿತು.

ಒಂದು ಕಾಲದಲ್ಲಿ ಕನ್ನಡದ ನವ್ಯಪಂಥೀಯರ ಆರಾಧ್ಯ ದೈವವಾಗಿದ್ದ ಟಿ. ಎಸ್. ಇಲಿಯಟ್ ನಮ್ಮ ವೈಯಕ್ತಿಕ ಹಿತವರ್ಧನೆಯನ್ನು ನಾವು ಬಯಸುವಂತೆ ಸಮಾಜದ ಹಿತವರ್ಧನೆಯ ಕಡೆಗೂ ಗಮನವೀಯಬೇಕು–ಎಂದು ಅಭಿಪ್ರಾಯಪಟ್ಟಿದ್ದಾನೆ. "ಸಮಾಜದ ವಿಷಯದಲ್ಲಿ ನಾವು ಇಷ್ಟನ್ನು ಹೇಳಬಹುದು : ಅತಿರೇಕವಾಗಲೀ ಕೊರತೆಯಾಗಲೀ ಇರುವಲ್ಲಿ ಅದನ್ನು ಸರಿಪಡಿಸಲು ನಾವು ಯತ್ನಿಸುವೆವು" ಎಂದಿದ್ದಾನೆ.

ಪ್ರಗತಿಶೀಲರ ಕೈಕಂಬ ಮಾಕ್ಸಿಂ ಗೋರ್ಕಿ ನಿಸ್ಸಂದಿಗ್ಧ ಮಾತುಗಳಲ್ಲಿ ಹೀಗೆ ನುಡಿದಿದ್ದಾನೆ:

"ಬದುಕನ್ನೂ ದುಡಿಮೆಯನ್ನೂ ಪ್ರತಿಬಿಂಬಿಸುವುದು, ಚಿತ್ರಿಸುವುದು; ಪ್ರತಿಮೆಗಳಲ್ಲಿ, ಪಾತ್ರಗಳಲ್ಲಿ, ವ್ಯಕ್ತಿಗಳ ಮಾದರಿಗಳಲ್ಲಿ ಸತ್ಯವನ್ನು ಒಡಮೂಡಿಸುವುದು ಸಾಹಿತ್ಯದ ಕರ್ತವ್ಯ. ಹೆಚ್ಚು ಎತ್ತರಕ್ಕೆ ಏರಿದಷ್ಟೂ ಮತ್ತಷ್ಟು ದೂರ ನಮಗೆ ಕಾಣಿಸುವುದು ಎಂಬ ಗಾದೆ ಇದೆ. ಈಗಾಗಲೇ ಅಸ್ತಿತ್ವದಲ್ಲಿರುವ ವಿಷಯಗಳ ಚಿತ್ರಣದಿಂದಲೇ ಸೃಜನಶೀಲ ಬರೆವಣಿಗೆ ತೃಪ್ತವಾಗಬಾರದು. ನಾವು ಬಯಸುವ ವಿಷಯಗಳನ್ನೂ ಸಾಧಿಸುವುದು ಶಕ್ತವಿರುವ ಸಂಗತಿಗಳನ್ನೂ ನಾವು ಗಮನದಲ್ಲಿಡಬೇಕು."

ಇದು ಎಲ್ಲ ಕಾಲಗಳ ಎಲ್ಲ ಸಮಾಜಗಳ ಬರೆಹಗಾರರಿಗೂ ಅನ್ವಯವಾಗುವ ಮಾತು.

ರಾಜಕೀಯ–ಸಾಹಿತ್ಯ

ಜಗತ್ತಿನಲ್ಲಿ ಆರಂಭದ ಸಾಮಾಜಿಕ ವ್ಯವಸ್ಥೆಗಳ ಕಾಲದಿಂದಲೂ ರಾಜಕೀಯ ತನ್ನ ಹಿರಿಮೆಯನ್ನು ಮೆರೆದಿದೆ. ಜನಸಮುದಾಯದ ಆಗುಹೋಗುಗಳನ್ನು ನಿರ್ದೇ

ಶಿಸುವ, ನಿಯಂತ್ರಿಸುವ, ಸಾಮರ್ಥ್ಯ ಅವರದು. ಬದುಕಿಗೆ–ಸಮಾಜಕ್ಕೆ–ನೂರು ಎಳೆಗಳಿಂದ ಬರಹಗಾರ ಬಂಧಿತನಾಗಬೇಕು ಎನ್ನುವಾಗ, ರಾಜಕೀಯದಿಂದ ಆತ ದೂರವಿರುವುದು ಹೇಗೆ ಸಾಧ್ಯ ?

ಗ್ರೀಕ್ ಮಹಾಕಾವ್ಯಗಳ ಕರ್ತೃವಾಗಲೀ ಭಾರತೀಯ ಮಹಾಕಾವ್ಯಗಳನ್ನು ರಚಿಸಿದವರಾಗಲೀ ರಾಜಕೀಯವನ್ನು ಬಿಟ್ಟಿರಲಿಲ್ಲ. ರಾಷ್ಟ್ರದ ಕಲ್ಪನೆಯನ್ನು ಬಲಗೊಳಿಸಿ, ರಾಷ್ಟ್ರೀಯ ಏಕತೆಯನ್ನು ಪರೋಕ್ಷವಾಗಿ ಸಾಧಿಸಲು ಆ ಕಾವ್ಯಗಳು ಬಹುಮಟ್ಟಿಗೆ ಕಾರಣವಾದುವು.

ಎಲ್ಲ ದೇಶಗಳ ಎಲ್ಲ ಕಾಲಗಳ ಪ್ರತಿಭಾನ್ವಿತ ಬರಹಗಾರರೂ ಕಲಾವಿದರೂ ಒಂದಲ್ಲ ಒಂದು ರೀತಿಯಲ್ಲಿ ರಾಜಕೀಯ ಸೇಚನಕ್ಕೆ ಗುರಿಯಾದವರೇ. ಪನ್ನೀರು, ರಾಡಿ ಎರಡರ ಬಳಕೆಯೂ ಉಂಟು ಈ ಸೇಚನದಲ್ಲಿ. ರಾಜಕೀಯದ ಪ್ರಭೃತಿಗಳೊಡನೆ ಒಮ್ಮೊಮ್ಮೆ ಘರ್ಷಣೆಯೂ ಇಲ್ಲದಿಲ್ಲ.

ಷೇಕ್ಸ್‌ಪಿಯರನ ಚಾರಿತ್ರಿಕ ನಾಟಕಗಳಲ್ಲಿ ಕಂಡುಬರುವ ರಾಜಕೀಯ ಜ್ಞಾನ ಸಗಟು. ಮಹಾಕವಿ ಮಿಲ್ಟನ್ ತನ್ನ ಉನ್ನತ ಘೋಷಣೆ ನಿರ್ಭಯ ಪ್ರತಿಪಾದನೆಗಳಿಗಾಗಿ ಬಹಳ ಬೆಲೆ ತೆತ್ತ. ಎರಡನೆಯ ಚಾರ್ಲ್ಸ್ ದೊರೆಯಿಂದ ಬಂಧಿತನಾದ. "ಮನುಷ್ಯನನ್ನು ಕೊಲ್ಲುವವನು ವಿಚಾರವಂತ ಪ್ರಾಣಿಯನ್ನು ಕೊಲ್ಲುತ್ತಾನೆ; ಆದರೆ ಪುಸ್ತಕಗಳನ್ನು ನಾಶಮಾಡುವವನು ವಿಚಾರಗಳನ್ನು ನಾಶಮಾಡುತ್ತಾನೆ," ಎಂದ ಮಿಲ್ಟನ್. ಮುದ್ರಣ ಸ್ವಾತಂತ್ರ್ಯವನ್ನು ಪ್ರತಿಪಾದಿಸಿ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದಲ್ಲಿ ಆತ ಹೀಗೆಂದ :

"ಮಾನ್ಯ ಸದಸ್ಯರಾದ ಪ್ರಭುಗಳೇ ಸಾಮಾನ್ಯರೇ ನಿಮ್ಮ ಧೀರೋದಾತ್ತ ಮತ್ತು ಸಂತೃಪ್ತ ನಿಲುವು ನಮಗೋಸ್ಕರ ದೊರಕಿಸಿಕೊಟ್ಟ ಸ್ವಾತಂತ್ರ್ಯ ಇದು ; ಎಲ್ಲ ಜ್ಞಾನವನ್ನೂ ವಿವೇಕವನ್ನೂ ಪೋಷಿಸಿದ ಸ್ವಾತಂತ್ರ್ಯ. 'ಈ ಸ್ವಾತಂತ್ರ್ಯವೇ ಸ್ವರ್ಗದ ಪ್ರಭಾವದ ಹಾಗೆ ನಮ್ಮ ಚೇತನಗಳನ್ನು ಪರಿಶುದ್ಧಗೊಳಿಸಿದೆ, ಬೆಳಗಿದೆ.... ಬೇರೆಲ್ಲ ಸ್ವಾತಂತ್ರ್ಯಗಳಿಗಿಂತಲೂ ಮಿಗಿಲಾಗಿ, ಅರಿಯುವ ನುಡಿಯುವ ಆತ್ಮಸಾಕ್ಷಿಗೆ ಅನುಗುಣವಾಗಿ ಅನಿರ್ಬಂಧಿತವಾಗಿ ಚರ್ಚಿಸುವ ಸ್ವಾತಂತ್ರ್ಯವನ್ನು ನನಗೆ ಕೊಡಿ...."

ಪರಿಪೂರ್ಣತೆಯತ್ತ ಸಾಗುವ ಮಾನವನ ದೀರ್ಘ ಪಯಣದುದ್ದಕ್ಕೂ ಮಿಲ್ಟನನ ಈ ಮಾತುಗಳು ಖಂಡಿತವಾಗಿಯೂ ಪ್ರತಿಧ್ವನಿಸುತ್ತವೆ.

ಮಿಲ್ಟನನಂತೆ ವರ್ಡ್ಸ್‌ವರ್ತನೂ ಪಾರ್ಲಿಮೆಂಟ್ ಸದಸ್ಯನಾಗಿ ತನ್ನ ಕಾಲದ ರಾಜಕೀಯದಲ್ಲಿ ಸಕ್ರಿಯ ಪಾತ್ರ ವಹಿಸಿದ.

ಸ್ವಾತಂತ್ರ್ಯ ಯಾವ ಭೌಗೋಳಿಕ ಕಟ್ಟುಪಾಡುಗಳನ್ನೂ ಲೆಕ್ಕಿಸದ ಕಲ್ಪನೆ; ಪ್ರಜಾಪ್ರಭುತ್ವವೂ ಅಷ್ಟೆ. ಕವಿ ಬೈರನ್ ಗ್ರೀಸಿನ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತ

ಮಡಿದ; ಲೇಖಕ ರಾಲ್ಫ್‌ಫಾಕ್ಸ್ ಫ್ರಾಂಕೋ ಸರಕಾರಕ್ಕಿದಿರು ಕೈದು ಎತ್ತಿ ಸ್ಪೇನಿನಲ್ಲಿ ದೇಹವಿಟ್ಟ.

ಫ್ರಾನ್ಸಿನ ಅನತೋಲ್ ಫ್ರಾನ್ಸ್ ತನ್ನ ಕೊನೆಗಾಲದಲ್ಲಿ ಪ್ಯಾರಿಸಿನ ಬೀದಿಗಳಲ್ಲಿ ಕಾರ್ಮಿಕರ ಒಂದು ಮೆರವಣಿಗೆಯಲ್ಲಿ ಭಾಗವಹಿಸಿದ. ರೋಮೆ ರೋಲಾ ಫಾಸಿಸಮಿಗಿದಿರು ದಿಟ್ಟತನದಿಂದ ಹೋರಾಡಿ, ಸೆರೆಮನೆಯಲ್ಲಿ ಸಾವನ್ನಪ್ಪಿದ.

ಜರ್ಮನಿಯಲ್ಲಿ ನಾಟಕಕಾರ ಬ್ರೆಕ್ಟ್, ಕಾದಂಬರಿಕಾರ ಥಾಮಸ್ ಮಾನ್, ಲೇಖಕ ಅರ್ನೆಸ್ಟ್ ಟಾಲರ್, ಬರೆಹಗಾರ್ತಿ ಅನ್ನಾ ಸೆಯರ್ಸ್ ಫಾಸಿಸಮನ್ನು ಖಂಡಿಸಿದರು.

ಪರತಂತ್ರ ಭಾರತದಲ್ಲಿ ಬಂಕಿಮಚಂದ್ರ ಚಟ್ಟೋಪಾಧ್ಯಾಯ, ರವೀಂದ್ರನಾಥ ಠಾಕೂರ್, ಸರೋಜಿನಿ ನಾಯ್ಡು, ಅಬನೀಂದ್ರನಾಥ ಠಾಕೂರ್ ಮತ್ತಿತರ ಹಲವರು ರಾಜಕೀಯದಲ್ಲಿ ಆಸಕ್ತರಾಗಿದ್ದರು.

ತನ್ನ ವೃದ್ಧಾಪ್ಯದ ಕೊನೆಯ ವರ್ಷಗಳಲ್ಲಿ (೧೯೦೭–೧೯೧೦) ತೋಲ್‌ಸ್ತೋಯ್ ವಿಶೇಷವಾಗಿ ಇಷ್ಟಪಡುತ್ತಿದ್ದ ಸಂದರ್ಶಕರು ಎಡ ರಾಜಕೀಯದವರು; ರಾಜಕೀಯ ಬೋಧೆ ಇದ್ದವರು. ೧೯೦೫ರ ಕ್ರಾಂತಿ ವಿಫಲವಾದ ಬಳಿಕ, ಪ್ರಭುತ್ವಕ್ಕಿದಿರಾದ ರಾಜಕೀಯ ಚಟುವಟಿಕೆಗಳನ್ನು ತೋಲ್‌ಸ್ತೋಯ್ ಆತ್ಮೀಯತೆಯಿಂದ ಕಂಡ. 'ನಾನು ಮೌನವಾಗಿರಲಾರೆ' ಎಂಬ ಲೇಖನ ಬರೆದು ಜಾರ್‌ಶಾಹಿಯನ್ನು ಆತ ಖಂಡಿಸಿದ. ದಬ್ಬಾಳಿಕೆಯನ್ನೂ ರಾಜಕೀಯ ಮರಣ ದಂಡನೆಗಳನ್ನೂ ಕೊನೆಗಾಣಿಸಬೇಕೆಂದು ಕರೆನೀಡಿದ. ಎಂಬತ್ತನ್ನೂ ಸಮೀಪಿಸುತ್ತಿದ್ದ ತೋಲ್‌ಸ್ತೋಯ್ ಸೆರೆಮನೆಯಲ್ಲಿದ್ದ ಲಾಂಡರ್ ಎಂಬ ಕ್ರಾಂತಿಕಾರಿಗೆ ಸ್ಥಾನಬದ್ಧತೆಯಿಂದ ಬಿಡುಗಡೆ ಹೊಂದಲು ಜಾಮೀನು ನಿಂತುದು ಹೃದಯಸ್ಪರ್ಶಿಯಾದೊಂದು ಸಂಭವ.

ಪ್ರಭುತ್ವದ ಕರಿನೆರಳು

ಸೃಜನಶೀಲ ಸಾಹಿತ್ಯದ ಬಗೆಗೆ ಪ್ರಭುತ್ವಗಳು ವಹಿಸುವ ಗಾಢ ಆಸಕ್ತಿಗೆ ಹತ್ತೊಂಭತ್ತನೆಯ ಶತಮಾನದ ಫ್ರಾನ್ಸ್, ರಷ್ಯ ಶ್ರೇಷ್ಠ ದೃಷ್ಟಾಂತಗಳು.

ಸಮಾಜದ ಪ್ರತಿಷ್ಠಿತರ ಕೆಂಗಣ್ಣಿಗೆ ಗುರಿಯಾದ ಫ್ಲಾಬೇರ್ ನ್ಯಾಯಸ್ಥಾನದಲ್ಲಿ ಆರೋಪಿಯಾಗಿ ನಿಲ್ಲಬೇಕಾಯಿತು. ಆಗ ಇನ್ನೊಬ್ಬ ಸಾಹಿತಿ ಥಿಯೊಫಿಲ್ ಗಾಟಿಯೆರ್ ಅಂದ:

"ನಿಜವಾಗಿಯೂ ನನ್ನ ವೃತ್ತಿಯ ಬಗೆಗೆ ನನಗೆ ನಾಚಿಕೆ! ಬರೆದು ಸಂಪಾದಿಸದಿದ್ದರೆ ಉಪವಾಸ ಬಿದ್ದು ಸಾಯಬೇಕು. ಗಳಿಸುವ ಅಲ್ಪ ಹಣಕ್ಕಾಗಿ ನಾನು ಯೋಚಿಸುವುದರ ಅರ್ಧಾಂಶ ಅಥವಾ ಕಾಲಂಶ ಮಾತ್ರ ಹೇಳುತ್ತೇನೆ. ಹೀಗಿದ್ದರೂ ಬರೆಯುವ ಪ್ರತಿ ವಾಕ್ಯಕ್ಕಾಗಿ ನ್ಯಾಯಾಸ್ಥಾನಕ್ಕೆ ನಾನು ಹೋಗಬೇಕಾದ ಅಪಾಯ ಇದ್ದೇ ಇದೆ."

ಇಂಥ ಪರಿಸ್ಥಿತಿಯಲ್ಲಿ ಬದುಕಿನ ಸಮಸ್ಯೆಗಳಿಂದ ಬರೆಹಗಾರ ವಿಮುಖನಾಗುವುದು ಸಂಭವನೀಯ.

ಎಲ್ಲ ಬಗೆಯ ರಾಜಕೀಯ ವ್ಯಕ್ತಿಗಳ ಬಗೆಗೆ ಭ್ರಮನಿರಸನ ಉಂಟಾದಾಗ ಏನಾಗುತ್ತದೆ ? ಹೆಸರಾಂತ ಫ್ರೆಂಚ್ ಸಾಹಿತಿಗಳಾದ ಗಾಂಕೊರ್ಟ್ ಸೋದರರು ತಮ್ಮ 'ದಿನಚರಿ'ಯಲ್ಲಿ ಹೀಗೆ ಹೇಳಿದ್ದಾರೆ :

"....ಪ್ರತಿಯೊಂದು ನಂಬುಗೆಯ ವಿಷಯದಲ್ಲಿ ಅಸಹ್ಯ ಭಾವನೆ, ಯಾವ ಪ್ರಭುತ್ವ ಬಂದರೂ ಸಹಿಷ್ಣುತೆ, ರಾಜಕೀಯ ಶ್ರದ್ಧೆಯ ಬಗೆಗೆ ಉಪೇಕ್ಷೆ........ ಅನಿಸುದಷ್ಟು : ಯಾವ ಧ್ಯೇಯಕ್ಕಾಗಿಯೂ ಸಾಯಬೇಕಾಗಿಲ್ಲ, ಇರುವ ಸರಕಾರ ಯಾವುದೇ ಇರಲಿ ಅದರೊಡನೆ ಬಾಳಬೇಕು, ಕಲೆಯೊಂದರ ಹೊರತು ಬೇರೆ ಯಾವುದರಲ್ಲೂ ನಂಬುಗೆ ಇರಬಾರದು, ಸಾಹಿತ್ಯದ ಹೊರತಾಗಿ ಬೇರೆ ಯಾವ ಶ್ರದ್ಧೆಯನ್ನೂ ಒಪ್ಪಬಾರದು."

ಎಂಥ ಮಾನಸಿಕ ಸಂಕಟ, ತೊಳಲಾಟ ! ಯಾವ ಬರೆಹಗಾರನಿಗೂ ಕಲಾವಿದನಿಗೂ ಒದಗಬಾರದ ದುಃಸ್ಥಿತಿ ಇದು.

ಮಹಾಕವಿ ಪೂಷ್ಕಿನ್ ಪಟ್ಟಪಾಡು ಕೂಡಾ ಕರುಳು ಕತ್ತರಿಸುವಂಥದು. ಪೂಷ್ಕಿನನ 'ಯೌವನದ ರಾಜಕೀಯ ತಪ್ಪು'ಗಳನ್ನು ದೊರೆ ಒಂದನೆಯ ನಿಕೊಲಸ್ ಮನ್ನಿಸಿ, ಅವನ ಪೋಷಕನಾದ. ಈ ಕವಿಯ "ಲೇಖನಿಯನ್ನೂ ಮಾತುಗಾರಿಕೆಯನ್ನೂ ನಿರ್ದೇಶಿಸುವುದು ಸಾಧ್ಯವಾದರೆ ಅದರಿಂಧ ಲಾಭವಿದೆ," ಎಂಬುದು ಪೋಲೀಸರ ಮುಖ್ಯಸ್ಥ ಅನಂತರ ಸಲ್ಲಿಸಿದ ವರದಿ. ಆಗಿನ ರಾಜ್ಯ ವ್ಯವಸ್ಥೆಯನ್ನು ಪೂಷ್ಕಿನ್ ಹೊಗಳುವಂತೆ ಮಾಡುವುದು ಅರಸನ ಹಾಗೂ ಪೋಲೀಸರ ಮುಖ್ಯಸ್ಥನ ಬಯಕೆಯಾಗಿತ್ತು. ಕವಿಗೆ ಪ್ರಾಪ್ತವಾದ ಅಕಾಲ ಮೃತ್ಯು ಅವರ ಹಂಚಿಕೆಗಳನ್ನು ಮಣ್ಣುಗೂಡಿಸಿತು.

ಎಲೀಟೀಕರಣ

ಸಮಾಜದ ಎಲೀಟ್ ಜನ–ಪ್ರತಿಷ್ಠಿತರು–ಬಂಡಾಯಗಾರ ಬರೆಹಗಾರ ಅಥವಾ ಕಲಾವಿದನ ವಿಷಯದಲ್ಲಿ ತಳೆಯುವ ಔದಾರ್ಯ ಅವನ ಪಾಲಿಗೆ ಉರುಳಾಗುತ್ತದೆ. ಯಾವನಾದರೂ ಅಂಥ ಉರುಳು ತನಗೆ ಬೇಡ ಅಂದರೆ, ಪ್ರತಿಷ್ಠಿತರಿಗೆ ಅದೆಷ್ಟು ಕಾತರ !

ಪೋಪ್‌ನ ಪ್ರಕಾರ, "ಆಳುತ್ತಿದ್ದ ಪ್ರಭುವಿನ ಮತ್ತು ಆಸ್ಥಾನದ ಆಶ್ರಯ ಷೇಕ್ಸ್‌ಪಿಯರ್‌ಗೆ ದೊರೆತಿದ್ದರೆ ಆತ ಇನ್ನಷ್ಟು ಚೆನ್ನಾಗಿ ಬರೆಯುತ್ತಿದ್ದ."

ವಿಶ್ವದ ಸಾಹಿತ್ಯಪ್ರಿಯರು ಪುಣ್ಯವಂತರು ! –ಷೇಕ್ಸ್‌ಪಿಯರ್ ತನಗೆ ಜನಾಶ್ರಯ ಸಾಕು ಎಂದ.

ವಾಲ್ಟೇರ್ ಕ್ರಾಂತಿಕಾರೀ ಲೇಖಕ. ಆದರೆ ಇವನ ಒಡನಾಟವನ್ನು ಬಯಸಿದ ಪ್ರಭುಗಳಿದ್ದರು. ಅವರ ಸಾನಿಧ್ಯದಲ್ಲಿ ವಾಲ್ಟೇರನ ಅಭಿರುಚಿಗಳೂ ಸುಲಭವಾಗಿ ರೂಪಾಂತರ ಹೊಂದುತ್ತಿದ್ದುವು. 'ಹ್ಯಾಮ್ಲೆಟ್' ನಾಟಕದಲ್ಲಿ ಕಾವಲುಗಾರ "ಒಂದು ಇಲಿಯೂ ಮಿಸುಕುತ್ತಿಲ್ಲ," ಎನ್ನುತ್ತಾನೆ. ರಾಷ್ಟ್ರದ ಪ್ರಥಮ ಪ್ರಜೆಗಳು ಎದುರುಗಡೆ ಆಸೀನರಾಗಿರುವಾಗ ಇಂಥ ಮಾತುಗಳನ್ನು ಆಡುವುದೆ ?—ಎಂದು ಷೇಕ್ಸ್‌ಪಿಯರನನ್ನು ಕುರಿತು ವಾಲ್ಟೇರನ ಟೀಕೆ. ಎಲೀಟ್ ಜನರ ಸಮ್ಮೋಹನಾಸ್ತ್ರದ ಪ್ರಭಾವ ಎಂಥದೆಂಬುದಕ್ಕೆ ಬೇರೆ ಉದಾಹರಣೆ ಬೇಕೆ ?

"ಪ್ರತಿಷ್ಠಿತ ವ್ಯಕ್ತಿಯಾಗಿ ಅಪಾರ ಜನ ಮನ್ನಣೆ ಪಡೆಯಬೇಕೆಂಬ ಮಹತ್ವಾಕಾಂಕ್ಷೆ ರಣಹದ್ದಿನಂತೆ ನನ್ನ ಹೃದಯವನ್ನು ಕುಕ್ಕಿ ಮುಕ್ಕುತ್ತಿತ್ತು," ಎಂದು ತನ್ನ ಟಿಪ್ಪಣಿ ಪುಸ್ತಕದಲ್ಲಿ ಫ್ಲಾಬೆರ್ ಬರೆದಿದ್ದಾನೆ. ಈ ನೆಲೆಯಿಂದ ಹೊರಟು 'ಯಾವುದನ್ನು ಕುರಿತು ಬರೆದಿದ್ದೇನೆ ಎಂಬುದಕ್ಕಿಂತ ಯಾವ ರೀತಿಯಲ್ಲಿ ಬರೆದಿದ್ದೇನೆ ಎಂಬುದು ಮುಖ್ಯ' ಎಂಬ ನಿಲುವಿಗೆ ಫ್ಲಾಬೇರ್ ಬಂದು ಮುಟ್ಟಿದ್ದು ಅತ್ಯಂತ ಸಹಜ ಕ್ರಿಯೆ.

ಅಮೆರಿಕದ ಕ್ರಾಂತಿಕಾರಿ ಸಾಹಿತಿ ಜಾಕ್ ಲಂಡನ್ ಒಪ್ಪಿಕೊಂಡಿದ್ದಾನೆ :

"ಬರೆದು ಮುಗಿಸಿದ ಮೇಲೆ ನನ್ನ ಬರೆಹಗಳ ಬಗೆಗೆ ನನಗೆ ದ್ವೇಷ ಉಂಟಾಗುತ್ತದೆ. ನನಗೆ ದುಡ್ಡಿನ ಅಗತ್ಯವಿದೆ. ಅದಕ್ಕಾಗಿ ಬರೆಯುತ್ತೇನೆ. ಇದು ಹಣಗಳಿಸಲು ಸುಲಭ ದಾರಿ. ಆದರೆ ನನ್ನಿಂದ ಸಾಧ್ಯವಿದ್ದಿದ್ದರೆ, ಶ್ರೀಮಂತರ ಮೇಲಿನ ನನ್ನ ದ್ವೇಷವನ್ನು ವ್ಯಕ್ತಪಡಿಸುವ ಲೇಖನಗಳನ್ನು ಬಿಟ್ಟು ಮತ್ತೇನನ್ನೂ ನಾನು ಬರೆಯುತ್ತಿರಲಿಲ್ಲ."

ಏನನ್ನೂ ಮರೆಮಾಚದ ಈ ಮಾತುಗಳಿಗಾಗಿ ಜಾಕ್ ಲಂಡನ್‌ನನ್ನು ನಾವು ಅಭಿನಂದಿಸಬಹುದು.

ಬಹು ಜನ ಬರೆಹಗಾರರು-ಕಲಾವಿದರೆಲ್ಲ ಬಡತನ ಎಂದರೇನೆಂಬುದನ್ನು ಅರಿತವರು. ಸಮಾಜದ ಬೆಳವಣಿಗೆಯ ಸೂತ್ರಗಳನ್ನು ಅರ್ಥ ಮಾಡಿಕೊಂಡು, ಹೊಸ ಜಗತ್ತನ್ನು ಬಯಸುವವರು ಕಡಮೆ. ಒಂದಿಷ್ಟು ಕೀರ್ತಿ ಒಂದಿಷ್ಟು ಕಾಂಚನ ಲಭ್ಯವಾದಾಗ ಅವರ ತಲೆ ತಿರುಗುತ್ತದೆ. ಮೇಲಣ ಹಂತವನ್ನು ತಲಪಬೇಕೆಂಬ ಬಯಕೆ ಅವರನ್ನು ಕೊರೆಯುವ ಕೀಟವಾಗುತ್ತದೆ.

ಎಚ್. ಜಿ. ವೆಲ್ಸ್ ಮತ್ತು ಡಿ. ಎಚ್. ಲಾರೆನ್ಸ್ ಇಬ್ಬರೂ ಕಾರ್ಮಿಕವರ್ಗದಿಂದ ಬಂದರು. ಎಲೀಟೀಕರಣಕ್ಕೆ ಬಲಿಯಾದರು. ಆ ಮಟ್ಟಿಗೆ ಅವರ ಬರೆವಣಿಗೆ ಬಡವಾಯಿತು.

ಉಳ್ಳವರ ಕೃಪಾಛತ್ರವನ್ನು ಬಯಸದ ಬರೆಹಗಾರರೂ ಕಲಾವಿದರೂ ಇಲ್ಲವೇ ಇಲ್ಲ ಎಂದಲ್ಲ. ಆದರೆ ಎಲ್ಲ ಕಾಲಗಳಲ್ಲೂ ಅವರ ಸಂಖ್ಯೆ ಕಡಮೆ.

ಆ ಅಲ್ಪ ಸಂಖ್ಯಾಕರಲ್ಲೊಬ್ಬ ಪೋತನ. ಆಂಧ್ರದ ಕವಿ ಶ್ರೀನಾಥ ಅರಸೊತ್ತಿಗೆಯಿಂದ ಅನೇಕ ಸಾಹಿತ್ಯ ಗೌರವಗಳನ್ನು ಸಂಪಾದಿಸಿದವನು. ಪೋತನ ಅಂಥದೊಂದೂ ಬೇಡ–ಎಂದವನು. ಆವನಿಗೆ ಸುಖ ಸೌಕರ್ಯ, ಇವನಿಗೆ ಕಡುಬಡತನ. "ವಾಸ್ತವ ದೃಷ್ಟಿ ಬೆಳೆಸಿಕೋ," ಎಂದು ಶ್ರೀನಾಥ ತನ್ನ ಮಿತ್ರನಿಗೆ ಎಷ್ಟೋ ಹೇಳಿದ. ಪೋತನ ಒಪ್ಪಲಿಲ್ಲ.

ತುಂಬು ಗೌರವದ ಪ್ರಣಾಮಕ್ಕೆ ಆ ಪೋತನ ಅರ್ಹ.

ಅಧಃಪತನದ ಜಾರುಬಂಡೆ

ಎಲೀಟೀಕರಣಕ್ಕೆ ತುತ್ತಾದವನ ಮುಂದಿರುವುದು ಅಧಃಪತನದ ಜಾರಬಂಡೆ ಕ್ಷಣಕ್ಷಣಕ್ಕೂ ಜಾರುತ್ತಿದ್ದರೂ ಇದ್ದಲ್ಲಿಯೇ ಇದ್ದೇನೆ ಎನ್ನುವ ಚಪಲ. ಮೊದಲು ಹಟಸಾಧನೆ, ಬಳಿಕ ನಟನೆ. ಪಥಭ್ರಾಂತನ ಹಾಗೆ.

ಕಣ್ಣಿಗೆ ಪರೆ. ಪರೆ ಮುಖವನ್ನು ಮುಚ್ಚುವ ಪರದೆಯಾಗುತ್ತದೆ. ತೆಳು ಪರದೆ ಗಟ್ಟಿ ರಟ್ಟಾಗುತ್ತದೆ. ರಟ್ಟು ಬಹಳ ಬೇಗನೆ ಬಣ್ಣ ಬಳಿದ ಮುಖವಾಡವಾಗುತ್ತದೆ. ಮುಖವಾಡದ ಮನುಷ್ಯನಾಗುತ್ತಾನೆ, ಆ ಬರೆಹಗಾರ, ಕಲಾವಿದ.

ಶೋಷಣೆಯೇ ಪ್ರಧಾನವಾಗಿರುವ ಸಮಾಜದಲ್ಲಿ ಸುಲಿಗೆಗಾರರ ಪಕ್ಷವಹಿಸುವ ಬರೆಹಗಾರರೂ ಕಲಾವಿದರೂ ವರ್ಗಸಮರದಲ್ಲಿ ತಮ್ಮೆಲ್ಲ ಬಲವನ್ನು ಬಳಸುತ್ತಾರೆ. ತಾವು ಓಲೈಸುವ ವರ್ಗಕ್ಕೆ ಭವಿತವ್ಯ ಇಲ್ಲವೆಂಬ ಕಟು ಸತ್ಯವನ್ನು ಒಪ್ಪಲು ನಿರಾಕರಿಸುತ್ತಾರೆ. ತಾತ್ತ್ವಿಕ ದಿವಾಳಿತನದ ಫಲವಾಗಿ, ಕೃತಿರಚನೆಯಲ್ಲಿ, ಹೂರಣದ ಬದಲು ಹೊರ ಆಕಾರಕ್ಕೇ ಮಹತ್ವ ನೀಡುತ್ತಾರೆ. 'ಕಲೆಗಾಗಿ ಕಲೆ' ಅವರ ಕೌಪೀನಘೋಷವಾಗುತ್ತದೆ.

ಅವರಿಂದ ಸೃಷ್ಟಿಯಾಗುವುದು ಅಗ್ಗದ ಸಾಹಿತ್ಯ. ಅತೀವ ಅಂತರ್ಮುಖತೆ, ಅಸಹಾಯಕತೆಯ–ನಿರಾಶೆಯ ಧ್ವನಿ, ಕಾಮ ವೈಪರೀತ್ಯಗಳಿಗಾಗಿ ಆದ್ಯತೆ–ಈ ಪ್ರವೃತ್ತಿಗಳನ್ನು ಆ ಸಾಹಿತ್ಯದಲ್ಲಿ ಮುಖ್ಯವಾಗಿ ಕಾಣುತ್ತೇವೆ. ಮಾನವನ ಕರ್ತೃತ್ವ ಶಕ್ತಿಯನ್ನು ಹ್ರಾಸಗೊಳಿಸುವ ದುಷ್ಪ್ರವೃತ್ತಿಗಳು ಇವು.

ಸಮಾಜವಾದದ ಆಹ್ವಾನ

ಕರ್ನಾಟಕದಲ್ಲಿ ಮತ್ತೆ ಪ್ರಗತಿಮಾರ್ಗದ ಪಥಿಕರಾಗಲು ಬಯಸಿರುವ ನಾವು ಇಂದು ಇದಿರಿಸಬೇಕಾದ ಸವಾಲು ಯಾವುದು ? ನಮ್ಮ ಮುಂದಿರುವ ಜ್ವಲಂತ ಸಮಸ್ಯೆಗಳು ಯಾವುವು ? ಇಂದಿನ ಪರಿಸ್ಥಿತಿಯ ವಿಶೇಷ ಲಕ್ಷಣವೇನು ?

ಪರತಂತ್ರ ಭಾರತದಲ್ಲಿ ಸ್ವಾತಂತ್ರ್ಯ ಸಾಧನೆ ಎಚ್ಚತ್ತ ಜನತೆಯ ಮುಖ್ಯ ಗುರಿಯಾಗಿತ್ತು. ದೇಶದ ವಿವಿಧ ಭಾಷಾ ಪ್ರದೇಶಗಳಲ್ಲಿ ಪುನರುದಯ ಚಳವಳಿ ನಡೆದದ್ದು ಸ್ವಾತಂತ್ರ್ಯ ಸಂಗ್ರಾಮದ ಪ್ರಭೆಯಲ್ಲೇ. ಬಿಡುಗಡೆಯ ಹೋರಾಟ

ತೀವ್ರಗೊಂಡಂತೆ 'ನಾಳೆಯ ಭಾರತ ಹೇಗಿರಬೇಕು ?' ಎಂಬ ಜಿಜ್ಞಾಸೆಯೂ ಆರಂಭವಾಯಿತು.

ಇಂದಿಗೆ ಸುಮಾರು ಐದು ದಶಕಗಳ ಜನನಾಯಕ ಜವಾಹರಲಾಲರು ಹೇಳಿದ ಮಾತುಗಳನ್ನು ನಿಮ್ಮ ಗಮನಕ್ಕೆ ತರಬಯಸುವೆ :

"ಜಗತ್ತಿನ ಸಮಸ್ಯೆಗಳ ಹಾಗೂ ಭಾರತದ ಸಮಸ್ಯೆಗಳ ಪರಿಹಾರ ಸಾಧ್ಯವಿರುವುದು ಸಮಾಜವಾದದಲ್ಲೇ ಎಂಬುದು ನನಗೆ ಮನವರಿಕೆಯಾಗಿದೆ. ಈ ಪದವನ್ನು ನಾನು ಬಳಸುವುದು ಅಸ್ಪಷ್ಟವಾದ, ಮಾನವೀಯತೆಯ ರೀತಿಯಲ್ಲಲ್ಲ. ಅದನ್ನು ಬಳಸುತ್ತಿರುವುದು ವೈಜ್ಞಾನಿಕ ಮತ್ತು ಆರ್ಥಿಕ ಅರ್ಥದಲ್ಲಿ. ಅದು ಹೀಗಿದ್ದರೂ ಸಮಾಜವಾದ ಆರ್ಥಿಕ ಸಿದ್ಧಾಂತಕ್ಕಿಂತಲೂ ಮಿಗಿಲಾದದ್ದು. ಅದೊಂದು ಜೀವನ ದರ್ಶನ. ಆ ರೀತಿಯಲ್ಲೂ ನನಗೆ ಅದು ಮೆಚ್ಚುಗೆ. ಭಾರತೀಯ ಜನತೆಯನ್ನು ಕಾಡುತ್ತಿರುವ ದಾರಿದ್ರ್ಯವನ್ನು, ಭಾರೀ ನಿರುದ್ಯೋಗವನ್ನು, ಅಧಃಪತನವನ್ನು, ದಾಸ್ಯವನ್ನು ಕೊನೆಗಾಣಿಸಲು ಸಮಾಜವಾದದ ಹೊರತಾಗಿ ಬೇರೆ ದಾರಿ ನನಗೆ ಕಾಣಿಸುತ್ತಿಲ್ಲ. ನಮ್ಮ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ವಿಸ್ತೃತ, ಕ್ರಾಂತಿಕಾರಿ ಬದಲಾವಣೆಗಳನ್ನು ಅದು ಒಳಗೊಳ್ಳುತ್ತದೆ....ಅಂತಿಮವಾಗಿ ನಮ್ಮ ಸಹಜ ಪ್ರವೃತ್ತಿಗಳಲ್ಲಿ, ಅಭ್ಯಾಸಗಳಲ್ಲಿ, ಅಪೇಕ್ಷೆಗಳಲ್ಲಿ ಬದಲಾವಣೆ ಅಗತ್ಯವಾಗುತ್ತದೆ. ಒಟ್ಟಿನಲ್ಲಿ ಈಗಿನ ಬಂಡವಾಳಶಾಹೀ ವ್ಯವಸ್ಥೆಗಿಂತ ತೀವ್ರವಾಗಿ ಭಿನ್ನವಾದ ಹೊಸ ನಾಗರಿಕತೆ ರೂಪುಗೊಳ್ಳುತ್ತದೆ...."

ಯಾವ ಗೊಂದಲಕ್ಕೂ ಎಡೆಗೊಡದ ಸ್ಪಷ್ಟ ವಿಚಾರಗಳು. ಅರ್ಧ ಶತಮಾನ ಕಳೆದರೂ ಇವು ಕೃತಿಗಿಳಿದಿಲ್ಲ ಎನ್ನುವುದು ಆ ನಿಲುವಿಗೆ ಇರುವ ವಿರೋಧದ ಅಗಾಧತೆಯನ್ನು ಸೂಚಿಸುತ್ತದೆ. ಸಮಾಜವಾದದ ಗುರಿಯನ್ನು ಬರಿಯ ಘೋಷಣೆ ಭಾಷಣಗಳಿಂದ ಸಾಧಿಸುವುದು ಶಕ್ಯವಿದ್ದಿದ್ದರೆ, ಭಾರತ ಈ ಹೊತ್ತಿಗೆ ಭೂಮಿಯ ಮೇಲಿನ ಸ್ವರ್ಗವಾಗುತ್ತಿತ್ತು. ಪಟ್ಟಭದ್ರರು ಸಮಾಜದ ಮೇಲಿನ ತಮ್ಮ ಹಿಡಿತವನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡುವುದುಂಟೆ ? ವರ್ಗಸಮರ ತೀವ್ರವಾಗದೆ ಈ ಪ್ರಶ್ನೆ ಬಗೆಹರಿಯುವುದಿಲ್ಲ. ತಮ್ಮ ಶಿಬಿರ ದುರ್ಬಲವಾಗುತ್ತಿದೆ ಎನಿಸಿದಾಗ ಉಳ್ಳವರು ಪ್ರಜಾಪ್ರಭುತ್ವದ ನಾಟಕವನ್ನು ಮುಕ್ತಾಯಗೊಳಿಸಿ, ಸರ್ವಾಧಿಕಾರದ ರುದ್ರನೃತ್ಯಕ್ಕೆ ಅಣಿಯಾಗುತ್ತಾರೆ. ಮತಾಂಧರು, ಧರ್ಮಾಂಧರು, ಸಮಾಜದ ಯಥಾಸ್ಥಿತಿಯನ್ನು ಬಯಸುವ ಕೆಲ ಬುದ್ಧಿಜೀವಿಗಳು–ಇವರೆಲ್ಲ ಆ ಶಕ್ತಿಯ ಸುತ್ತ ನೆರೆಯುತ್ತಾರೆ ; ಶ್ರಮಜೀವಿಗಳ ಮೇಲೆ ಯುದ್ಧ ಸಾರುತ್ತಾರೆ.

ಈಗಲೂ ಸಮಾಜವಾದ ಸ್ವತಂತ್ರ ಭಾರತದ ಸಾಮಾಜಿಕ ಗುರಿ. ಇದರಿಂದ ಜನತೆಯ ಕಲ್ಯಾಣವಾಗುತ್ತದೆಂದು ರಾಷ್ಟ್ರನಾಯಕತ್ವ ದೃಢವಾಗಿ ನಂಬಿದೆ ; ಕಾರ್ಯೋನ್ಮುಖವಾಗಿದೆ. ಆದರೆ ಇಲ್ಲಿ ಹೊಲ ಮೇಯುವ ಬೇಲಿಗಳಿವೆ ; ಸುಲಿಯುವವರೇ ಸಮಾಜವಾದೀಮುಖ ವ್ಯಾಘ್ರಗಳಾಗುತ್ತಾರೆ. ಜನ ಎಚ್ಚತ್ತು ಹೋರಾಡ

ದಿದ್ದರೆ ಸಮಾಜವಾದ ಬರಿಯ ಘೋಷವಾಗಿ, ಹೂರಣವಿಲ್ಲದ ಹೊರ ಆಕಾರವಾಗು ತ್ತದೆ; ಟೊಳ್ಳಾಗುತ್ತದೆ.

ತಲೆತಲಾಂತರಗಳಿಂದ ಕ್ರೂರ ಶೋಷಣೆಗೆ ಒಳಗಾದ ಈ ದೇಶದ ಬಹು ಜನ ಸಮುದಾಯ ಎದ್ದು ನಿಲ್ಲಲು ಹವಣಿಸುತ್ತಿರುವ ಈ ಘಳಿಗೆಯಲ್ಲಿ ಬರಹಗಾರರು ಕಲಾವಿದರ ಪಾತ್ರವೇನು ? ತೀವ್ರಗೊಳ್ಳುವ ಹೋರಾಟದಲ್ಲಿ ನಾವು ಬಯಸುವುದು ಯಾರ ಹಿತವನ್ನು ? ನಾವು ಯಾರ ಕಡೆ ? ನಮ್ಮ ಸಹಾನುಭೂತಿ, ಬೆಂಬಲ ಯಾರಿಗೆ ?

ಇತಿಹಾಸದುದ್ದಕ್ಕೂ ಬರೆಯುವವರನ್ನು, ಚಿತ್ರಿಸುವವರನ್ನು, ಚಿಂತಿಸುವವ ರನ್ನು ಕಾಡುತ್ತ ಬಂದಿರುವ ಪ್ರಶ್ನೆ ಉತ್ತರಕ್ಕಾಗಿ ನಮ್ಮನ್ನೂ ಈಗ ಆಗ್ರಹಪಡಿಸು ತ್ತಿದೆ. ಅನಾಗರಿಕ ಮಾನವ ತನ್ನ ರಟ್ಟೆಯ, ಕೊರಡಿನ ಅಧಿಕ ಬಲವನ್ನು ಪ್ರಯೋ ಗಿಸಿ, ಇನ್ನೊಬ್ಬ ಬೇಟೆಯಾಡಿ ತಂದುದನ್ನು ಕಸಿದುಕೊಂಡಾಗಿನಿಂದ ಬೆಳೆದುಬಂದಿ ರುವ ಉಳಿದುಬಂದಿರುವ ದುಷ್ಟತನಕ್ಕೆ, ನಾವು ಜಯ ಹಾರಯಿಸೋಣವೆ ? ಮಾನ ವೀಯತೆಯ ಅರ್ಚಕರು ಮಾಡುವ ಕೆಲಸ ಇದಲ್ಲ. ಹಾಗಾದರೆ ತಟಸ್ಥರಾಗೋಣವೆ ? ಸಜ್ಜನರ ತಾಟಸ್ಥ್ಯ ದುರ್ಜನರ ಬಂಡವಾಳವಾಗಬಹುದು. ಈ ಎರಡೂ ಸರಿ ಯಲ್ಲವೆಂದಾದರೆ, ಉಳಿಯುವ ದಾರಿಯೊಂದೇ: ಅಂಗಾತಸ್ಥಿತಿಯಿಂದ ಎದ್ದು ನಿಲ್ಲಲು ಚಡಪಡಿಸುತ್ತಿರುವ ಮಾನವನಿಗೆ ಆಸರೆಯಾಗುವುದು, ಅವನ ಊರು ಗೋಲಾಗುವುದು.

ಗಹನ ವಿಷಯ. ಯೋಚಿಸಬೇಕು, ಚರ್ಚಿಸಬೇಕು. ನಾಳೆಯ ಪೀಳಿಗೆ ಮೆಚ್ಚಿ ಹೆಮ್ಮೆ ಪಡುವಂಥ ತೀರ್ಮಾನ ಕೈಗೊಳ್ಳಬೇಕು.

ಆರ್ತರು, ದಲಿತರು, ಅನ್ಯಾಯಕ್ಕೊಳಗಾದವರು, ಸಮಾಜದ ಎಲ್ಲ ಬಗೆಯ ಮರ್ದಿತರು ಕರೆದು ಹೇಳುತ್ತಿದ್ದಾರೆ: “ನಮ್ಮಲ್ಲಿ ಹಣವಿಲ್ಲ, ಅಧಿಕಾರವಿಲ್ಲ, ಪ್ರತಿಷ್ಠೆ ಇಲ್ಲ; ಆದರೆ ಎಂದೂ ಇಂಗದ ಒಲವಿದೆ, ಬಂಧುತ್ವದ ಭಾವವಿದೆ. ಬನ್ನಿ.”

“ಇಲ್ಲ” ಎನ್ನುತ್ತೀರಾ ?

ನಾವು !

ನಾವು ಅವರ ಕರೆಗೆ ಓಗೊಡುವವರು, ಪ್ರಗತಿಪಂಥೀಯರು. ಲೆಕ್ಕಣಿಕೆ, ಕುಂಚ, ಭಾವಪ್ರದರ್ಶನ ನಮ್ಮ ಉಪಕರಣಗಳು. ನಾವು ಹೃದಯದ ದಾರಿಯಾಗಿ ಮೆದುಳಿಗೆ ಲಗ್ಗೆ ಇಡುವವರು. ಕಂಡ ಸತ್ಯವನ್ನು ಕೃತಿಗಳ ಮೂಲಕ ಸಾರುವವರು. ತೀರಾ ಸರಳವೆಂದು ತೋರುವ ರಾಜಕಾರಣಿಯ ವಾಕ್ಸರಣಿಗಿಂತ ನಮ್ಮದು ಭಿನ್ನ. ನಾವು ಮಾತನಾಡುವುದು ಪ್ರತಿಮೆಗಳ ಮೂಲಕ, ವರ್ಣ–ಆಕಾರಗಳ ಮೂಲಕ

ನಮ್ಮ ಕೃತಿಗಳು ಕಾಲಧರ್ಮವನ್ನು ಪ್ರತಿಬಿಂಬಿಸಬೇಕು, ಬದುಕಿನಿಂದ ಚಿಮ್ಮಬೇಕು, ಮಾನವನನ್ನು ಕುರಿತು ಓದುಗರ–ಪ್ರೇಕ್ಷಕರ–ಬೋಧೆಯನ್ನು ಹೆಚ್ಚಿಸ ಬೇಕು ಎಂಬುದನ್ನು ನಾವು ಬಲ್ಲೆವು.

ಜಾತೀಯತೆಯ ವಿಷಗಾಳಿ ನಮ್ಮನ್ನು ಉಸಿರು ಕಟ್ಟಿಸದಂತೆ ಎಚ್ಚರವಹಿಸುತ್ತೇವೆ; ಮತ ಧರ್ಮಗಳ ಹೆಸರಲ್ಲಿ ಚೇತನ ಮುರುಟಿಹೋಗದಂತೆ ನಾವು ಜಾಗರೂಕರಾಗುತ್ತೇವೆ.

ನಮ್ಮ ಲೇಖನಿ ಕುಂಚಗಳು ಶೃಂಖಲೆಗಳನ್ನು ಕತ್ತರಿಸುವ ಕರಾಳವಾಗಬಲ್ಲುವು; ಕವಿದ ಜೇಡರಬಲೆಗಳನ್ನು ಸರಿಸುವ ಹಾರಿಸುವ ಕಸಬರಿಕೆಯಾಗಬಲ್ಲುವು.

ನಾವು ಸತ್ಯಾನ್ವೇಷಕ ಝಾಡಮಾಲಿಗಳು, ಸೌಂದರ್ಯೋಪಾಸಕ ಜಲಗಾರರು. ಶತಮಾನಗಳಿಂದ ಮನಸ್ಸುಗಳನ್ನು ಕವಿದಿರುವ ಜೇಡರ ಬಲೆಗಳೇ, ನೇರ ದಾರಿಗಳನ್ನು ಹೊಲಸುಗೊಳಿಸಿರುವ ತಿಪ್ಪೆ ರಾಶಿಗಳೇ, ಎಚ್ಚರ!

ನಾವು ಯಾವುದೇ ರಾಜಕೀಯ ಪಕ್ಷದ ಪ್ರಚಾರಕರಲ್ಲ, ಸ್ತುತಿ ಪಾಠಕರಲ್ಲ. ಎಲ್ಲ ಪಕ್ಷಗಳ ಮೇಲೂ ಕಣ್ಣಿಡುವ ಜನತೆಯ ಕಾವಲುಗಾರರು ನಾವು.

ಎಲ್ಲವನ್ನೂ ಬಲ್ಲೆವೆಂಬ ಹಮ್ಮು ನಮಗಿಲ್ಲ. ನಾವು ಬದುಕಿನ ನಿರಂತರ ವಿದ್ಯಾರ್ಥಿಗಳು.

ನಮ್ಮ ರಚನೆಯೇ ಮೇರುಕೃತಿ ಎಂದು ನಾವು ನಗಾರಿ ಬಾರಿಸುವುದಿಲ್ಲ. 'ನಾನು ಏನನ್ನೂ ಸಾಧಿಸಲಿಲ್ಲ' ಎಂದು ನುಡಿದು ಸತ್ತ ಅಮರ ಶಿಲ್ಪಿ ಮೈಕೆಲೆಂಜಲೋನ ವಂಶಜರು ನಾವು.

ನಾವು ಸಿರಿವಂತರು–ಎಲ್ಲ ಮಾನವಕೋಟಿಯ ಸಂಸ್ಕೃತಿ ಸಂಸ್ಕಾರಗಳ ವಾರಸುದಾರರು; ಯುಗಯುಗಗಳಿಂದ ಬಳುವಳಿಯಾಗಿ ಬಂದಿರುವ ಎಲ್ಲ ಶ್ರೇಷ್ಠ ಸಾಹಿತ್ಯ–ಕಲೆಗಳ ಹಕ್ಕುದಾರರು.

ನಮ್ಮದು ಮಠವಲ್ಲ, ಗುಂಪಲ್ಲ–ಪುರೋಗಾಮಿ ವಿಚಾರಧಾರೆಯ ಎಲ್ಲ ಬರೆಹಗಾರರೂ ಕಲಾವಿದರೂ ಮೇಳೈಸುವ ವಿಶಾಲ ವೇದಿಕೆ.

ಇಗೋ, ಸಾಹಿತ್ಯ–ಕಲೆಗಳ ಅಮರ ಚೇತನಗಳಿಗೆ ನಮಿಸಿ, ದಾವಣಗೆರೆಯ ಎಚ್ಚೆತ್ತ ಜನತೆಯ ಸಾಕ್ಷಿಯಾಗಿ, ನಾವು ಹೊರಡುತ್ತಿದ್ದೇವೆ–ಬೌದ್ಧಿಕ ಜೈತ್ರಯಾತ್ರೆಗೆ.

ಇದಿಗೋ ಆಶ್ವಾಸನೆ: ತೊರೆಯಾಗಿ ಹೊರಟ ನಾವು, ಬೇಗನೆ ಭೋರ್ಗರೆಯುವ ವಾಹಿನಿಯಾಗುತ್ತೇವೆ, ಮೊರೆಯುವ ಕಡಲಾಗುತ್ತೇವೆ.

೧೨

ಪ್ರಸ್ತಾವನೆ

○ ಉಪೋದ್ಘಾತ ? ಪೀಠಿಕೆ ? ಪ್ರಸ್ತಾವನೆ ? ಮುನ್ನುಡಿ ? ಯಾವ ಹೆಸರಿನಿಂದ ಕರೆದರೂ ಮೊದಲ ಮಾತು ಮೊದಲ ಮಾತೇ. ಅದು ಒಂದು ಮಾತು ಇರಬಹುದು ಅಥವಾ ಎರಡು ಮಾತು. ಎಲ್ಲಾ ಒಂದೇ. ಒಬ್ಬರ ಕೃತಿಗೆ ಇನ್ನೊಬ್ಬರು ಪ್ರಸ್ತಾವನೆ ಬರೆಯಬಹುದು. ಸ್ವಂತ ಕೃತಿಗೆ ಕರ್ತೃವೇ ತಿಲಕ ಇಡಬಹುದು. ಸಂಪಾದಿಸಿದ ಗ್ರಂಥಕ್ಕೆ ಸಂಪಾದಕ ಪ್ರಸ್ತಾವನೆ ನೀಡಬಹುದು.

೧೯೭೯-೧೯೮೨ ಅವಧಿಯ ನಾಲ್ಕು ವರ್ಷಗಳಲ್ಲಿ ಇಪ್ಪತ್ತೈದು ಸಂಪುಟಗಳ ವಿಶ್ವಕಥಾಕೋಶದ ರಚನೆಯಲ್ಲಿ ನಾನು ನಿರತನಾಗಿದ್ದೆ. ಪ್ರತಿಯೊಂದು ಸಂಪುಟಕ್ಕೂ ಆಯಾ ಭಾಷೆಯ-ದೇಶದ ಹಿನ್ನೆಲೆ ನೀಡಬೇಕು, ಆ ಪ್ರಸ್ತಾವನೆಯ ಬೆಳಕಿನಲ್ಲಿ ಅಲ್ಲಿನ ಕಥೆಗಳ ವಾಚನ ಅರ್ಥ ಪಡೆಯಬೇಕು—ಎಂದು ಯೋಚಿಸಿದೆ. ಒಂದೊಂದು ಸಂಪುಟ ಪೂರ್ತಿಯಾದಂತೆ ನಾನು ಮಾಡುತ್ತಿದ್ದುದು ಪ್ರಸ್ತಾವನೆಯ ಬರವಣಿಗೆ. ಅದನ್ನು ಇಷ್ಟಪಟ್ಟವರು "ಒಂದೇ ಪುಸ್ತಕದಲ್ಲಿ ಎಲ್ಲ ಇಪ್ಪತ್ತೈದು ಪ್ರಸ್ತಾವನೆಗಳನ್ನು ಕೊಡಿ" ಎಂದು ಆಗ್ರಹಿಸಿದರು. ಇವರ ಸಂಖ್ಯೆ ದೊಡ್ಡದು.

ಓದುಗರ ಮೆಚ್ಚುಗೆ ಗಳಿಸಿದ ವಿಶ್ವಕಥಾಕೋಶದ ಪ್ರಸ್ತಾವನೆಗಳ ಒಂದು ಮಾದರಿ ಇಲ್ಲಿದೆ. 'ಆಫ್ರಿಕದ ಹಾಡು' ಸಂಪುಟಕ್ಕೆಂದು ನಾನು ಬರೆದುದು. ಮೂಲ : 'ನಿರಂಜನ : ಮೂವತ್ತು ಸಂಪುಟಗಳಲ್ಲಿ' ಸರಣಿಯ ೧೮ ನೆಯ ಸಂಪುಟ.

ಪ್ರಸ್ತಾವನೆ

ಪೂರ್ವಾರ್ಧ

ಪ್ರಾಚೀನ ಮನುಷ್ಯನಿಗೆ, ಮಾತು ಬಂದುದಕ್ಕೂ ಮುಂಚೆ ಗಂಟಲಿನಿಂದ ರಾಗ ಹೊರಟಿತು. ಗುಡ್ಡದ ಈಚೆ ತಪ್ಪಲಿನಲ್ಲಿ ತಾನಿದ್ದೇನೆ ಎಂದು ಆಚೆ ತಪ್ಪಲಿನವನಿಗೆ ತಿಳಿಸುವುದಕ್ಕೆ ಕೂಗು. ಮಿಕವನ್ನು ಬೆನ್ನಟ್ಟಿದಾಗ ನಡುಕ ಹುಟ್ಟಿಸುವ ರಾಗಮೇಳ. ದೋಣಿಗೆ ಹುಟ್ಟು ಹಾಕುವಾಗ ಪರಿಸರಕ್ಕೆ ಮೇಳೈಸಿ ಆಲಾಪನೆ. ಹೆಜ್ಜೆಗಳು ಲಯಬದ್ಧವಾದಾಗ ರಾಗದ ಜತೆ ಕುಣಿತ. ಪದಗಳಿಗೆ ಅರ್ಥ ನಿಶ್ಚಿತವಾದಾಗ, ಹಾಡು.

ಜತೆಯಲ್ಲಿ, ಸ್ಪಂದಿಸುವ ಬೆರಳುಗಳು ಮಣ್ಣಿನ ಬಣ್ಣದಿಂದ ಗವಿಯ ಶಿಲಾಭಿತ್ತಿನಲ್ಲಿ ಭಯಾನಕ ಮಿಕದ ಚಿತ್ರ ಬರೆದುವು. ಅದನ್ನು ತಾನು ಕೊಂದಂತೆ ಚಿತ್ರಿಸಿದಾಗ, ಸಂತೋಷ–ಸಮಾಧಾನ–ಆತ್ಮವಿಶ್ವಾಸ.

ಶಬ್ದಗಳು ಖಚಿತ ಅರ್ಥ ಪಡೆದ ಮಾತು ಬಳಿಕ ಸರಾಗವಾಯಿತು. ಆಹಾರ ಸಂಪಾದನೆಗೆ ಹೋದ ಗಂಡಸು ಗವಿಗೆ ಮರಳಿದ ಮೇಲೆ ತನ್ನ ಸಾಹಸದ ವಿವರವನ್ನು ನೀಡಿದ. ಅವನಿಲ್ಲದಾಗ ಗವಿಯತ್ತ ಕಣ್ಣು ಹಾಯಿಸಿದ ಕಾಡು ಪ್ರಾಣಿಯನ್ನು ತಾನು ಹೇಗೆ ಓಡಿಸಿದೆ ಎಂಬುದನ್ನು, ಯಜಮಾನಿ ಬಣ್ಣಿಸಿದಳು. ವಾಸ್ತವತೆಗೆ ರೆಕ್ಕೆ ಪುಕ್ಕ ಹುಟ್ಟಿದಾಗ ಅದು ಕಥೆಯಾಯಿತು....

ಜತೆಯಾಗಿ ಪಯಣ ಹೊರಟಾಗ ಮಾರ್ಗ ಕ್ರಮಣಕ್ಕೆ ಕಥೆ ಸಹಾಯಕ. ದಿನದ ದುಡಿಮೆ ಮುಗಿದು, ಗುಡಿಸಿಲಿನ ಸುತ್ತು ಬೆಂಕಿ ಕಾಯಿಸುತ್ತ ಕುಳಿತಾಗ ಕಥೆ ಬೇಕು.

ಕಥನ ಕವನಗಳು ಪೀಳಿಗೆಯಿಂದ ಪೀಳಿಗೆಗೆ ಬಳುವಳಿಯಾಗಿ ಬಂದುವು. ಅಜ್ಜಿ ಹೇಳಿದ ಕಥೆಯೂ ಅಷ್ಟೆ. ಕಾಲ ಸವೆದರೂ ಮಾಸದ ನೆನಪು.

ಜಾದುಗಾರ, ಔಷಧಿ ಕೊಡುವಾತ, ದೇವರ ಅಥವಾ ದೈವದ ಅರ್ಚಕ ಈ ಎಲ್ಲ ಪಾತ್ರಗಳನ್ನು ಹಿಂದೆ ಒಬ್ಬನೇ ಮಾಡುತ್ತಿದ್ದ. ಜನತೆಯ ಮೇಲೆ ಅವನದೇ

ಪ್ರಭಾವ. ಸುಮಾರು ಐದು ಸಾವಿರ ವರ್ಷದ ಹಿಂದೆ ಈಜಿಪ್ಟಿನ ಪ್ರಭು ಖುಫು (ಶ್ರೇಷ್ಠತಮ ಗೋರಿ ನಿರ್ಮಾಪಕ) ನಿತ್ಯವೂ ಮಕ್ಕಳನ್ನು ತನ್ನ ಬಳಿಗೆ ಕರೆಯುತ್ತಿದ್ದ. "ಅರ್ಚಕ ಹೇಳಿದ ಕಥೆಗಳನ್ನೆಲ್ಲ ನನಗೆ ಒಂದೊಂದಾಗಿ ತಿಳಿಸಿ", ಎನ್ನುತ್ತಿದ್ದ. ಆ ಕಥೆಗಳನ್ನು ಕೆದಕಿ ಕೆದಕಿ ಅರ್ಚಕರ ಬಲದ ಮೂಲವನ್ನು ತಿಳಿಯುವ ತವಕ ಖುಫುಗೆ. (ಮುಂದೆ ಅರ್ಚಕರ ಸಂಪತ್ತನ್ನೆಲ್ಲ ವಶಪಡಿಸಿಕೊಂಡು, ದೇವ ಮಂದಿರಗಳಿಗೆ ಬೀಗಮುದ್ರೆ ಹಾಕಿ, ಶಾಶ್ವತ ವಾಸಕ್ಕಾಗಿ ಭಾರೀ ಗೋರಿಗಳನ್ನು ಕಟ್ಟಿಸಿದ ಈ ಭೂಪ !)

ಅನಂತರ ೨೫೦೦ ವರ್ಷಗಳಾದ ಮೇಲೆ, ಈ ನೆಲದಲ್ಲಿ, ಧರ್ಮದ ತಿರುಳನ್ನು ತಿಳಿಯಹೇಳಲು ಕಥೆಗಳನ್ನು ಬುದ್ಧನೂ ಅವನ ಅನುಯಾಯಿಗಳೂ ಬಳಸಿದರು. ಮುಂದೆ ಯೇಸು ಕ್ರಿಸ್ತನ ಧರ್ಮಬೋಧನೆಗೂ ಕಥೆಗಳು ಹಾಸುಗಲ್ಲುಗಳಾದುವು.

ಆರ್ಯಾವರ್ತದಲ್ಲಿ ವೇದೋಪನಿಷತ್ತುಗಳ ಹಾಗೂ ಮಹಾಕಾವ್ಯಗಳ ರಚನೆ ಮುಗಿದು ಕೆಲ ಶತಮಾನಗಳಾದ ಮೇಲೆ, ಬೃಹತ್ಕಥಾ (ಕಥಾಸರಿತ್ಸಾಗರ), ಹಿತೋಪದೇಶ, ಪಂಚತಂತ್ರ ಕಥೆಗಳು ರೂಪುಗೊಂಡುವು. ಕಥೆಗಳು ಕಥೆಗಳೇ. ಅವು ಒಂಟೆಗಳ ಮೇಲೆ ಕುಳಿತು ಮರುಭೂಮಿಗಳನ್ನು ದಾಟಿ ಹೋದುವು. ವಣಿಕರೂ ಅಲೆಮಾರಿಗಳೂ ಪೂರ್ವದಿಂದ ಪಶ್ಚಿಮಕ್ಕೆ ಒಯ್ದ ಕಥೆಗಳೆಷ್ಟು ! ಅಲ್ಲಿಂದ ಇಲ್ಲಿಗೆ ತಂದ ಕಥೆಗಳೆಷ್ಟು ! ವಣಿಕ ಮಾರ್ಗಗಳು ಪರಸ್ಪರ ಸಂಧಿಸುತ್ತಿದ್ದ ತಾಣ ಬಾಗ್ದಾದ್. ಕಾಲ ಕಳೆದಂತೆ ಹತ್ತು ದಿಕ್ಕುಗಳ ಕಥೆಗಳು ಇಲ್ಲಿ ಹುಲುಸಾಗಿ ಬೆಳೆದು ಯವನ ಯಾಮಿನೀ ವಿನೋದ ಕಥೆಗಳ ಸುರೆ ಸಿದ್ಧವಾಯಿತು.

ನೌಕಾ ವ್ಯಾಪಾರಿಗಳೂ ಅಂಬಿಗರೂ ಕಥೆಗಳನ್ನೊಯ್ದರು. ಬಂದರಿನಿಂದ ಬಂದರಿಗೆ–ದೇಶದಿಂದ ದೇಶಕ್ಕೆ. ಕಂಠಶ್ರೀ ನೆರವಾದಾಗ ಹಾಡುಗಬ್ಬ. ಅದಿಲ್ಲದಾಗ ಕಾವ್ಯದ ಕವಚ ಒಡೆದು ಕಥಾರತ್ನಗಳ ರಾಶಿ.

ನೀತಿಪ್ರಸಾರ, ಧರ್ಮಬೋಧೆ ಇಲ್ಲದಾಗ, ಕಥೆಗಳ ಹೊಳಪೇ ಬೇರೆ. ಕ್ರಿಸ್ತಶಕ ನಾಲ್ಕನೆಯ ಶತಮಾನದಲ್ಲಿ ಟ್ರಿಸಿಯಾ ಊರಲ್ಲಿ ಹಿಲಿಯೊಡೊರಸ್ ಎಂಬ ಹೆಸರಿನ ಬಿಶಪ್ ಇದ್ದ. ಅವನಿಗೆ ಕಥೆ ಬರೆಯುವ ಖಯಾಲಿ. ಬದುಕಿನ ಸೆಲೆಗಳಿಂದ ವಸ್ತುಗಳ ಆಯ್ಕೆ. ಮೇಲಣ ಧರ್ಮಾಧಿಕಾರಿಗಳ ಕಣ್ಣು ಕೆಂಪಾಯಿತು. ಸಭೆಸೇರಿ, ವಿಚಾರಣೆ ನಡೆಸಿ, ತೀರ್ಮಾನವಿತ್ತರು :

"ನಿನ್ನ ಕಥೆಗಳನ್ನೆಲ್ಲ ಬೆಂಕಿಗೆ ಹಾಕು, ಇಲ್ಲವೆ ಬಿಶಪ್ ಪದವಿ ತ್ಯಜಿಸು."

ಹಿಲಿಯೊಡೊರಸ್ ಬಿಶಪ್ ಪದವಿ ಬಿಟ್ಟು, ಕಥೆಗಳ ಕಂತೆಯೊಡನೆ ಬೀದಿಗಿಳಿದ....

೧೫ ನೆಯ ಶತಮಾನದಲ್ಲಿ ಜರ್ಮನಿಯಲ್ಲಿ ಗುಟೆನ್‌ಬರ್ಗ್ ಮುದ್ರಣ ಯಂತ್ರವನ್ನು ಕಂಡುಹಿಡಿದ ಮೇಲೆ ಕಥೆಗಳು ವಿಶ್ವದ ಮೂಲೆಮೂಲೆಗಳಿಗೆ ಬೇಗ ಬೇಗನೆ ಸಂಚಾರ ಮಾಡಿದುವು. ಲೋಕಸಮಾಜದ ಚಪ್ಪರ ತುಂಬ ಕಥಾ ಬಳ್ಳಿ

ಗಳು. ಮೂಲ ಇಂಥ ನೆಲದಲ್ಲಿದೆ ಎಂದು ಮುಟ್ಟಿ ತೋರಿಸುವುದು ಕಷ್ಟಸಾಧ್ಯ ವೆನಿಸಿದ ವರ್ಣವೈವಿಧ್ಯ....

ಸಣ್ಣ ಕಥೆ ಎನ್ನುವುದು ಯಾವುದಕ್ಕೆ? ಅದು ಮೂರೇ ಪುಟಗಳದಿರ ಬಹುದು; ಮೂವತ್ತು ಪುಟಗಳದೂ ಇರಬಹುದು. ಮುಖ್ಯ ಗುಣ–ಸೂಕ್ಷ್ಮ ಸ್ವರೂಪ. ಆದರೆ ಅದರಲ್ಲಿ ಬ್ರಹ್ಮಾಂಡವನ್ನು ಕಾಣುವುದೂ ಶಕ್ಯ. ಕಾಲದ ಒಂದು ತುಣುಕನ್ನು ಅಲ್ಲಿ ಸೆರೆಹಿಡಿದು, ಅನಂತಕ್ಕೆ ಅನ್ವಯಿಸಬಹುದು. ಕೆಲವೇ ಪಾತ್ರಗಳಿದ್ದರೂ ಇದು ಅಸಂಖ್ಯ ವೇಷಧಾರಿಗಳ ಬೃಹತ್ ನಾಟಕಶಾಲೆ ಎಂಬ ಭಾವನೆ ಮೂಡಬಹುದು. ಕಾದಂಬರಿಯ ವಿಸ್ತಾರದ ಅನುಕೂಲ ಕಥೆಗಿಲ್ಲ. ಇದು ಹೆಚ್ಚು ಕುಸುರಿನ ಕೆಲಸ. ದಂತದ ಪುಟ್ಟ ತುಣುಕಿನಲ್ಲಿ ಚಿತ್ತಾರ. ಆ ತುಣುಕು, ವಾಸ್ತವತೆ. ಆ ವಾಸ್ತವತೆಯ ಅಡಿಪಾಯದ ಮೇಲಿರುವುದು ಕಲ್ಪನೆಯ ಕಟ್ಟಡ.

ಜಗತ್ತಿನ ಮಾನವನ ಬೆಳವಣಿಗೆ ಏಕರೀತಿಯಾಗಿಲ್ಲ. ಸಹಸ್ರಾವಧಿ ವರ್ಷ ಗಳಿಂದ ಉತ್ತಮತರ ಬದುಕಿಗಾಗಿ ಆತ ಹೋರಾಡುತ್ತಲೇ ಇದ್ದಾನೆ. ಶೋಷಕ ಶಕ್ತಿಗಳ ವಿರುದ್ಧ ಅವನ ಸಮರ ಬೇರೆಬೇರೆ ದೇಶಗಳಲ್ಲಿ ಬೇರೆಬೇರೆ ಹಂತಗಳಿಗೆ ಅವನನ್ನು ಒಯ್ದು ಮುಟ್ಟಿಸಿದೆ. ಇರುವ ನೆಲೆ ಯಾವುದಾದರೇನು? ಪ್ರಾಚೀನ ಕಾಲದಲ್ಲಿದ್ದಂತೆ ಈಗಲೂ ಕಲಾಭಿವ್ಯಕ್ತಿ ಮಾನವನ ಬದುಕಿನ ಅವಿಭಾಜ್ಯ ಅಂಗ. ಜೀವನ ವಿಧಾನ ವಿಭಿನ್ನ. ಕಥೆಗಳೂ ಅಷ್ಟೇ.

ನಾಗರಿಕತೆಯ ದಾರಿಯಲ್ಲಿ, ಭೌಗೋಳಿಕ ಎಲ್ಲೆ ಕಟ್ಟುಗಳಿರುವ ರಾಷ್ಟ್ರದ ನಿರ್ಮಾಣ ಒಂದು ಘಟ್ಟ. ಭಾಷೆ, ಸಾಂಸ್ಕೃತಿಕ ಏಕರೂಪತೆ ಇಂಥ ರಾಷ್ಟ್ರಗಳು ರೂಪುಗೊಳ್ಳಲು ಆಧಾರ.

ಈ ಜಗತ್ತಿನಲ್ಲಿ ಎಷ್ಟೊಂದು ರಾಷ್ಟ್ರಗಳು! ಎಷ್ಟೊಂದು ಭಾಷೆಗಳು! ಕಥೆ ಗಳಲ್ಲೂ ಎಷ್ಟು ವಿವಿಧತೆ! ಈ ರಾಶಿಯಿಂದ ವಿಶ್ವಕಥಾಕೋಶದ ಇಪ್ಪತ್ತೈದು ಸಂಪುಟಗಳಿಗಾಗಿ ಕಥೆಗಳನ್ನು ಆರಿಸುವುದು ಸುಲಭ ಎಂದು ಯಾವನೂ ಹೇಳಲಾರ.

ಜಗತ್ತಿನ ನಾನಾ ಭಾಷೆಗಳ–ಪ್ರದೇಶಗಳ–ಕಥೆಗಳನ್ನು ಈ ಕೋಶದಲ್ಲಿ ಕಲೆ ಹಾಕುವ ಯತ್ನ ನಡೆದಿದೆ. ಅಲ್ಲಲ್ಲಿನ ಸಾಹಿತ್ಯದಲ್ಲಿ ಹೆಗ್ಗುರುತುಗಳಾಗಬಹುದಾದ ಕಥೆಗಳು; ಯುದ್ಧ–ಕ್ರಾಂತಿ–ಸ್ವಾತಂತ್ರ್ಯ ಹೋರಾಟ, ನೋವು ದುಃಖ, ನಗೆ ನಲಿವು ಇವುಗಳನ್ನು ಚಿತ್ರಿಸುವಂಥವು; ಲೋಕದ ಕಥಾ ಸಾಹಿತ್ಯಕ್ಕೇ ತಿರುವು ನೀಡಲು ಸಮರ್ಥವಾದ ಕೃತಿಗಳು. ಪ್ರತಿಯೊಂದು ಸಂಪುಟದಲ್ಲೂ ಸಮಗ್ರ ರಸಾನುಭವ ಸಾಧ್ಯವಾಗುವಂತೆ ಎಚ್ಚರ. ಸಂಪುಟಗಳ ಸರಣಿಯನ್ನು ನಿಶ್ಚಯಿಸು ವಾಗಲೂ ವೈವಿಧ್ಯಕ್ಕೆ ಪ್ರಾಶಸ್ತ್ಯ.

ಇಪ್ಪತ್ತೈದು ಸಂಪುಟಗಳ ವಿಶ್ವಕಥಾಕೋಶ ಕನ್ನಡ ಸಾಹಿತ್ಯಕ್ಕೊಂದು ಬೆಲೆಬಾಳುವ ಕೊಡುಗೆಯಾಗಬೇಕೆನ್ನುವುದು ನಮ್ಮ ಬಯಕೆ. ಈ ಬಯಕೆ ಈಡೇರುತ್ತದೆಂಬ ಭರವಸೆ ನಮಗಿದೆ ಎಂದು ವಿನಮ್ರವಾಗಿ ಹೇಳಬಹುದೆ?

ಉತ್ತರಾರ್ಧ

ನೀಗ್ರೋಗಳು ಮಾರಾಟಕಿದ್ದಾರೆ

ಆಫ್ರಿಕದ ಪವನ ಕರಾವಳಿಯಿಂದ ಇದೀಗ ಬಂದಿರುವ 'ಇಬ್ಬರು ಸೋದರರು' ಹಡಗು ಅಪೂರ್ವ ಮ್ಹಾಲನ್ನು ತಂದಿದೆ—ಬಹಳ ಸೊಗಸಾದ, ಒಳ್ಳೇ ಸ್ಥಿತಿಯಲ್ಲಿರುವ, ತಕ್ಷಣವೇ ದುಡಿಮೆಗೆ ತಕ್ಕವರಾದ, ಹೃಷ್ಟಪುಷ್ಟ ಗಂಡಸರು ಮತ್ತು ಹೆಂಗಸರು. ಶರತಗಳು : ಅರ್ಧಬೆಲೆ ನಗದಾಗಿ ಅಥವಾ ಧಾನ್ಯರೂಪದಲ್ಲಿ ಈಗ ಸಂದಾಯ. ಉಳಿದರ್ಧ ಜನವರಿ ಮೊದಲ ದಿನ. ಅಗತ್ಯವೆನಿಸಿದರೆ ಸಾಲಪತ್ರ-ಭದ್ರತಾಪತ್ರಗಳನ್ನು ಬರೆದುಕೊಡಬೇಕು.

ಕೊಲ್ಲಿಯಲ್ಲಿರುವ ಶ್ರೀ ಬೋರ್ಡೋ ಅವರ ತೋಟದಲ್ಲಿ (ನಂ. ೪೮) ಪ್ರತಿದಿನ ಬೆಳಿಗ್ಗೆ ೧೦ ಗಂಟೆಗೆ ಮಾರಾಟ ಆರಂಭ.

ಮೇ ೧೯, ೧೭೮೪ ಜಾನ್ ಮಿಶೆಲ್

'ಒಳ್ಳೇ ಸ್ಥಿತಿಯಲ್ಲಿರುವ' ಎನ್ನುವುದು ಸುಳ್ಳು. 'ಹೃಷ್ಟಪುಷ್ಟ' ಎಂಬುದೂ ಅಷ್ಟೇ.

ಹೊಡೆದು, ಬಡಿದು, ಬೇಟೆಯಾಡಿ, ಬಲೆಯಲ್ಲಿ ಕೆಡವಿ, ಹೆಡೆಮುರಿ ಕಟ್ಟಿ ಸಾಗಣೆ. ಇಂಥ ಬೇಟೆಗಳಲ್ಲಿ ಜೀವ ಬಿಟ್ಟವರು, ಸಾಗರ ದಾಟುತ್ತ ಕೊನೆಯ ಉಸಿರೆಳೆದವರು ಪ್ರತಿಸಲವೂ ಸಹಸ್ರಾರು ಜನ. ಇದು ಬಿಳಿಯ ವ್ಯಾಪಾರಿಗಳಿಗಾದ ನಷ್ಟ. ಮೂರು ಶತಮಾನಗಳ ಅವಧಿಯಲ್ಲಿ ನವಭೂಮಿ ಅಮೆರಿಕವನ್ನು ತಲುಪಿ ಅಲ್ಲಿ ಮಾರಾಟವಾದ ನೀಗ್ರೋ ಗುಲಾಮರ ಸಂಖ್ಯೆಯನ್ನಷ್ಟೇ ಪರಿಗಣಿಸಿದರೆ, ಅದು ಒಂದು ಕೋಟಿ.

....ಆಫ್ರಿಕ ಖಂಡದ ವಿಸ್ತೀರ್ಣ ಭಾರತದ ಹತ್ತು ಪಾಲಷ್ಟು; ೨೯೪.೪ ಲಕ್ಷ ಚದುರ ಕಿಲೊ ಮೀಟರ್. (ಇದರ ಭೂಪಟ ಪ್ರಥಮವಾಗಿ ಸಿದ್ಧವಾದದ್ದೇ ಈಚೆಗೆ, ೧೯೦೦ ರಲ್ಲಿ.

ಲೋಕದ ಇತಿಹಾಸದಲ್ಲಿ ಆಫ್ರಿಕದ್ದು ಹಿರಿಯ ಸ್ಥಾನ. ಇದರದು 'ಮನುಕುಲದ ತೊಟ್ಟಿಲು ತಾನು' ಎಂಬ ಹೆಗ್ಗಳಿಕೆ. ಮನುಷ್ಯನನ್ನು ಹೋಲುವ ಪ್ರಾಣಿಗಳು ಮೂವತ್ತು ಲಕ್ಷ ವರ್ಷ ಹಿಂದೆ ಈ ಭೂಭಾಗದಲ್ಲಿದ್ದುವು. ವಿವಿಧ ತಳಿಗಳು. ಗಟ್ಟಿ ಕಾಳು ಉಳಿದು, ಮನುಷ್ಯನ ಪೂರ್ವಜರಲ್ಲಿ ಮೊದಲಿಗರಿಗೆ ಜನ್ಮ ನೀಡಿತು. ಖ್ಯಾತ ಪುರಾತತ್ವಜ್ಞ ಡಾ. ಲೂಯಿ ಲೀಕಿಯವರ ಅಭಿಪ್ರಾಯದಂತೆ, ಈ ಪೂರ್ವಜರು ಟಾನ್‌ಜಾನಿಯಾದ ವಾಯುವ್ಯ ಪ್ರದೇಶದಲ್ಲಿ [ಟಾನ್‌ಜಾನಿಯಾ-ಟಾಂಗ

ನೀಕ ಮತ್ತು ಜಾಂಜಿಬಾರ್ ಸೇರಿ ಈ ಹೊಸ ಹೆಸರು] ನೆಲೆಸಿದ್ದರು. ಪೂರ್ವ ಆಫ್ರಿಕದಲ್ಲಿ ಇನ್ನೊಂದು ತಳಿ ಇತ್ತು. ಇಲ್ಲಿಯೂ ಮಾನವನ ಪೂರ್ವಜರಿದ್ದರು. ಬೇಟೆಯಾಡುತ್ತ ಆಡುತ್ತ, ಹಣ್ಣು ಹಂಪಲುಗಳ ರುಚಿ ನೋಡುತ್ತ, ಬೇರೆ ಭೂಖಂಡಗಳನ್ನೂ ಇವರು ತಲುಪಿದರು. ಮುಂದೆ ಆ ಪ್ರದೇಶಗಳಲ್ಲೂ ಅಲ್ಲಿ ಇಲ್ಲಿ ಬೇರೆ ತಳಿಯ ಮನುಷ್ಯ ಪ್ರಾಣಿಗಳು ಎದ್ದು ನಡೆಯತೊಡಗಿದವು.

ನಿರ್ದಿಷ್ಟವಾಗಿ ನಿಜಮಾನವ ತನ್ನ ದಾಯಾದಿ ಮನುಷ್ಯ ಪ್ರಾಣಿಗಳಿಗಿಂತ ಬೇರೆಯಾದದ್ದು, ಇಪ್ಪತ್ತು ಲಕ್ಷ ವರ್ಷ ಹಿಂದೆ.

ಅನಂತರ ಅವನಿಗೆ ಹದಿನೈದು ಲಕ್ಷ ವರ್ಷ ಹಿಡಿಯಿತು—ಬೆಂಕಿ ಕಂಡುಹಿಡಿಯಲು, ಉಪಯುಕ್ತ ಉಪಕರಣಗಳನ್ನು ರೂಪಿಸಲು.

೩೫,೦೦೦ ವರ್ಷ ಹಿಂದೆ ಬಿಲ್ಲು ಬಳಕೆಗೆ ಬಂತು.

ಕಲ್ಲು, ಬೆಂಕಿ, ಬಿಲ್ಲು, ಹಸಿರು ಹುಲ್ಲಿನ ವಿಸ್ತಾರ ಕಣ್ಣಿಗೆ ತಣುವು ನೀಡಲು, ಅಲ್ಲಿಂದ ಮತ್ತೂ ೨೫,೦೦೦ ವರ್ಷ ದೂರ. ಕ್ರಿ. ಪೂ. ೧೦,೦೦೦ ವರ್ಷದ ವೇಳೆಗೆ, ಸಹಾರಾ ಪ್ರದೇಶದಲ್ಲಿ ಹವಾಮಾನ ತಣ್ಣಗಾಯಿತು ; ನೆಲದಿಂದ ನೀರು ಒಸರಿತು ; ನದಿಗಳು ಹರಿದುವು ; ಹೆಚ್ಚಿನ ಭೂಮಿ ಸಾರವತ್ತಾಯಿತು. ಹಸಿರು ಹುಲ್ಲು ತಲೆ ಎತ್ತಿತು.

ಆ ಸಮಯದಲ್ಲೇ ಈಜಿಪ್ಟಿನಲ್ಲಿ ನೈಲ್ ನದಿಯುದ್ದಕ್ಕೂ ಎರಡು ದಡಗಳಲ್ಲೂ ಹೂಳು ನಿಂತು, ಸಸಿ ಮೊಳೆಯಲು ಫಲವತ್ತಾದ ನೆಲ ಸಿದ್ಧವಾಯಿತು.

ಬೇರೆ ಮೂಲಗಳ ಮಾನವರು ಈಶಾನ್ಯ ದಿಕ್ಕಿನಿಂದ ಆಫ್ರಿಕದ ಒಳಬಂದುದು ಆ ಸಮಯದಲ್ಲೇ.

ಕ್ರಿ. ಪೂ. ೫೦೦ ಆಫ್ರಿಕದ ನವ ಶಿಲಾಯುಗದ ಕಾಲಾವಧಿ–ಆಗ ಮೂರು ಬಗೆ ಜನರು ಆ ಭೂಖಂಡದಲ್ಲಿದ್ದರು : ತೀರಾ ದಕ್ಷಿಣದಲ್ಲಿ 'ಬೂಷ್‌ಮನ್'—ಪೊದೆಪೊದರು ನಿವಾಸಿಗಳು ; ಹೆಚ್ಚಿನ ಭಾಗದಲ್ಲಿ ನೀಗ್ರೊ ಮಾದರಿ ಜನರು ; ಉತ್ತರ ಆಫ್ರಿಕ, ಭೂಮಧ್ಯ ಸಮುದ್ರತೀರ, ಈಶಾನ್ಯ ಈ ಎಲ್ಲ ಕಡೆಗಳ ಜನರ ಸಂಕರದಿಂದ ರೂಪುಗೊಂಡವರು–ಉತ್ತರದಲ್ಲಿ.

ನೈಲ್ ಕಣಿವೆಯಲ್ಲಿ, ಕ್ರಿ. ಪೂ. ೩೫೦೦ ರಲ್ಲಿ ಸಮಾಜಗಳೂ ರಾಜ್ಯಗಳೂ ಮೈತಳೆದವು. ಫೇರೋಗಳ ಆಳ್ವಿಕೆಯಲ್ಲಿ ಈಜಿಪ್ಟ್ ಬಲಶಾಲಿಯಾಯಿತು. ಕೃಷಿಯಿಂದ ಮೊದಲ್ಗೊಂಡು ವಾಸ್ತುಶಿಲ್ಪದವರೆಗೆ ಅಲ್ಲಿನ ಜನರ ಸಾಧನೆ ಅದ್ಭುತ.

ನೈಲ್‌ನದಿಯ ಉಗಮ ಪ್ರದೇಶದಲ್ಲಿ ಇಥಿಯೋಪಿಯ ಎಂಬ ದೇಶ ಇದೆ ಎಂದು ತಿಳಿದ ಒಬ್ಬ ಫೆರೋ, ಗೆಳೆತನ ಬಯಸಿ, ರಾಯಭಾರಿಗಳನ್ನು ಕಳಿಸಿದ. ಸ್ನೇಹದ ಕಾಣಿಕೆ–ಶ್ರೇಷ್ಠ ಅಕ್ಕಸಾಲಿಗ ನಿರ್ಮಿಸಿದ್ದ ಬಂಗಾರದ ಕಂಠಹಾರ. ಆ ಹಾರವನ್ನು ನೋಡಿದ ಇಥಿಯೋಪಿಯದ ಅರಸ ಮುಗುಳ್ನಕ್ಕ. ಈಜಿಪ್ಟಿನ ರಾಯ

ಭಾರಿಗಳನ್ನು ತನ್ನ ಆನೆಗಳ ಲಾಯಕ್ಕೆ ಒಯ್ದ. ಆನೆಗಳ ಕಾಲುಗಳಿಗೆ ಬಂಗಾರದ ಸಂಪಣಿಗಳನ್ನು ಬಿಗಿದಿದ್ದರು!

ಕ್ರಿ. ಪೂ. ಏಳನೇ ಶತಮಾನದಲ್ಲಿ ಅಸ್ಸೀರಿಯನರ ಆಗಮನ, ಈಜಿಪ್ಟಿಗೆ. ಆಳಲು ಬಂದವರು, ಮುಂದೆ ಕ್ರಿಸ್ತ ಶಕ ಏಳನೇ ಶತಮಾನದವರೆಗೂ ಆಕ್ರಮಣ ಕಾರರು ಬರುತ್ತಲೇ ಇದ್ದರು ; ಗ್ರೀಕರು, ರೋಮನರು, ಮುಸಲ್ಮಾನ ಅರಬರು.....

ಜಗತ್ತಿನ ಮೊದಲ ಇತಿಹಾಸಕಾರ ಹಿರೊಡೊಟಸ್ ಒಳನಾಡಿನಲ್ಲಿ ಸ್ವಲ್ಪ ಮಟ್ಟಿಗೆ ಪ್ರವಾಸಮಾಡಿ ಇಥಿಯೋಪಿಯದ ಬಗ್ಗೆ ಬರೆದ :

“ಇಲ್ಲಿ ಬಂಗಾರ ವಿಪುಲವಾಗಿ ಸಿಗುತ್ತದೆ. ಭಾರೀ ಗಾತ್ರದ ಆನೆಗಳಿವೆ. ಕರಿ ಮರವಿದೆ. ಬಹಳ ವಯಸ್ಸಾದ ನಾನಾ ಬಗೆಯ ವೃಕ್ಷಗಳಿವೆ. ಮನುಷ್ಯರೂ ಜಗತ್ತಿನಲ್ಲೇ ಅತಿ ಎತ್ತರದವರು, ಅತ್ಯಂತ ಸುಂದರ ಕಾಯರು, ದೀರ್ಘಾಯುಗಳು.”

ಕಬ್ಬಿಣಯುಗಕ್ಕೆ ಈಜಿಪ್ಟ್ ಕಾಲಿಟ್ಟುದು ಕ್ರಿ. ಪೂ. ಮೂರನೇ ಶತಮಾನ ದಲ್ಲಿ. ಕಬ್ಬಿಣದ ಬಳಕೆ ನಿಧಾನವಾಗಿ ಆಫ್ರಿಕದ ಎಲ್ಲೆಡೆಗಳಿಗೆ ಹರಡಿತು. ಕ್ರಿಸ್ತ ಶಕ ಆರಂಭದಲ್ಲಿ ಆಫ್ರಿಕ ಖಂಡದಲ್ಲಿದ್ದುದು, ಕೇವಲ ಮೂವತ್ತು-ನಾಲ್ವತ್ತು ಲಕ್ಷ ಜನ ಮಾತ್ರ. ಬಳಸುವ ಉಪಕರಣಗಳು ಬದಲಾದಂತೆ, ಆಹಾರದ ಕೊರತೆ ನೀಗಿ, ಜನಸಂಖ್ಯೆ ಹೆಚ್ಚತೊಡಗಿತು. (ಈಗಿನ ಒಟ್ಟು ಜನಸಂಖ್ಯೆ ಸುಮಾರು ೪೦ ಕೋಟಿ ವಿಸ್ತಾರ ಭಾರತದ ಹತ್ತು ಪಾಲಷ್ಟು ಎಂಬುದನ್ನು ಗಮನಿಸಿದಾಗ, ಈ ಸಂಖ್ಯೆಯೂ ಸಣ್ಣದೇ.)

ತಾಯಿ ಆಫ್ರಿಕ ಹೆತ್ತ ಮಕ್ಕಳ ವೈವಿಧ್ಯಕ್ಕೆ ಸಾಟಿ ಇಲ್ಲ. ಸಹಸ್ರಾರು ಬಣ ಗಳು; ಭಾಷೆಗಳೂ ಅಷ್ಟೇ. ಕೆಲವು ಪಂಗಡಗಳಿಗೆ ಅರಸರು. ಇನ್ನು ಕೆಲ ಪಂಗಡಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ. ಸುಡಾನಿನ ಬಯಲು ಭೂಮಿ, ಪೂರ್ವ ಆಫ್ರಿಕದ ಉನ್ನತ ಪ್ರದೇಶ, ಕಾಂಗೋ (ಬಹಳ ಹಿಂದೆ ಅದಕಿದ್ದ ಹೆಸರು ಜಾಯ್‌ರೆ) ನದೀಪಾತ್ರ-ಇಲ್ಲೆಲ್ಲ ಭಿನ್ನ ಭಿನ್ನ ಜೀವನ ವೈಖರಿ. ಮಾರಕಾಸ್ತ್ರಗಳ ನಿರ್ಮಾಣದಲ್ಲಿ ಪ್ರಗತಿ ಸಾಧಿಸಿದ್ದ ಐರೋಪ್ಯರ ನಾಲಿಗೆಯಲ್ಲಿ ನೀರೂರಿದ್ದು ಆಫ್ರಿಕದ ಖನಿಜಸಂಪತ್ತನ್ನು ಕಂಡಾಗ. ಅಲ್ಲಿದ್ದುವು ಬಂಡವಾಳಶಾಹೀ ಲೋಕದ ವಜ್ರನಿಧಿಯ ನೂರರಲ್ಲಿ ತೊಂಭತ್ತು ಪಾಲು ; ಬಂಗಾರದ ಅರ್ಧಪಾಲು, ಗಣಿಗಳಲ್ಲಿ ಒತ್ತಾಯದ ದುಡಿಮೆಗೆ ಕರಿಯ ಬಡಪಾಯಿಗಳು ಬೇರೆ.

ಉತ್ತರದಲ್ಲಿ ಭೂಮಧ್ಯ ಸಮುದ್ರ ತಟದಲ್ಲಿ ಬೆರ್ಬೆರ್ ಭಾಷೆ ಆಡುತ್ತಿದ್ದ ಜನರ ಸಮಾಜಗಳು, ರಾಜ್ಯಗಳಿದ್ದುವು. ಪ್ರಗತಿಯ ದಾರಿಯಲ್ಲಿ ಇವುಗಳ ಪಯಣ.

ಸಹಾರಾದ ಹಸಿರು ಉಳಿದದ್ದು ಎರಡು ಸಾವಿರ ವರ್ಷ ಮಾತ್ರ. ನೀರು ಬತ್ತಿತ್ತು, ನೆಲ ಒಣಗಿತು, ಭೂಮಿ ಮರಳು ಕಾಡಾಯಿತು. ಅಲ್ಲಿನ ಜನ ನೈಲ್ ಕಣಿವೆಗೆ ನುಗ್ಗಲು ಯತ್ನಿಸಿ, ‘ ಉಣ್ಣಲು ಇಲ್ಲದ ಭಿಕಾರಿಗಳು ’ ಎಂದು ಈಜಿಪ್ಷಿ ನವರ ಕೈಯಲ್ಲಿ ಭರ್ತ್ಸನೆಗೆ ಗುರಿಯಾದರು.

ಇತಿಹಾಸ ಕಾಲದಲ್ಲಿ ಖಂಡದಾಚೆಯಿಂದ ಬಂದವರು ಶಿಕಾರಿಗಳು. ಉತ್ತರದ ಲಿಬಿಯ, ಆಲ್ಜೀರಿಯ, ಮೊರೊಕ್ಕೊ, ಮಾಲಿ, ಸೋಂಘೇ; ಪಶ್ಚಿಮ ತೀರದ ನದೀ ಪಾತ್ರಗಳಲ್ಲಿ ನಗರರಾಜ್ಯಗಳಾಗಿ ರೂಪುಗೊಂಡ ಬೆಸ್ತರ ಹಳ್ಳಿಗಳು, ಘಾನ, ನೈಜೀರಿಯ, ಕಾಮೆರೂನ್, ಅಂಗೋಲಾ; ಮಧ್ಯಭಾಗದಲ್ಲಿ ಸುಡಾನ್, ಉಗಾಂಡಾ, ಜಾಯ್‌ರೆ, ಜಾಂಬಿಯಾ; ಪೂರ್ವ ತೀರದಲ್ಲಿ ಇಥಿಯೋಪಿಯ, ಸೊಮಾಲಿ, ಕೀನ್ಯ, ಟಾನ್‌ಜಾನಿಯಾ, ರ್‍ಹೊಡೀಸಿಯ, ಮೊಜಾಂಬಿಕ್, ಮಡಗಾಸ್ಕರ್; ಇನ್ನೂ ಕೆಳಗೆ ದಕ್ಷಿಣ ಆಫ್ರಿಕ....ಹೀಗೆ ರೂಪುಗೊಂಡ ದೇಶಪ್ರದೇಶಗಳು ಐವತ್ತು ಅರುವತ್ತರಷ್ಟು.

ಯೂರೋಪಿನಿಂದ ಏಷ್ಯದತ್ತ ಹೋಗುತ್ತಿದ್ದ ವಣಿಕರು ಆಫ್ರಿಕದ ದಕ್ಷಿಣ ಭೂಶಿರವನ್ನು ಬಳಸುತ್ತಿದ್ದ ಕಾಲ. ಅಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಮುಂದಿನ ಪಯಣಕ್ಕೆ ಆಹಾರ ಸಂಗ್ರಹಿಸುತ್ತಿದ್ದರು. ಡಚ್ ಈಸ್ಟ್ ಇಂಡಿಯಾ ಕಂಪೆನಿಗೆ ಒಂದು ಯೋಚನೆ ಹೊಳೆಯಿತು (೧೬೫೨). ತರಕಾರಿ ಬೆಳೆಸಿ, ಮಾಂಸ ಸಂಗ್ರಹಿಸ ಲೆಂದು ಜಾನ್ ವಾನ್‌ರೀಬೆಕ್ ಎಂಬವನನ್ನು ಅಲ್ಲಿಯೇ ಬಿಟ್ಟರು. ಮುಂದೆ ಎರಡೇ ವರ್ಷಗಳಲ್ಲಿ ಕೆಲಸ ದೊಡ್ಡ ಪ್ರಮಾಣದಲ್ಲಿ ಆಗಲಿ; ಕೃಷಿಯೂ ನಡೆಯಲಿ, ಎಂದರು. ಹಾಗೆ ನೆಲೆಸಿದವರು ಒಂಭತ್ತು ಜನ. ಭೂಮಾಲಿಕರೆಂದು ಕರೆಸಿಕೊಂಡ ಈ ನವರತ್ನಗಳು ಸ್ಥಳೀಯ ಕರಿಯರನ್ನು ತಮ್ಮ ದಾಸರಾಗಿ ಮಾಡಿಕೊಂಡರು. ಅದೇ ಇಂದಿನ ದಕ್ಷಿಣ ಆಫ್ರಿಕ ಗಣರಾಜ್ಯದ ಮೂಲ.

ಅಟ್ಲಾಂಟಿಕ್ ಸಾಗರವನ್ನು ಮನುಷ್ಯ ದಾಟಿದ ಮೇಲೆ, ಆಫ್ರಿಕದ ಮನುಷ್ಯ ಮಾರಾಟದ ವಸ್ತುವಾದ. ಅಮೆರಿಕ ಸಂಯುಕ್ತ ಸಂಸ್ಥಾನ, ಲ್ಯಾಟಿನ್ ಅಮೆರಿಕ, ಯೂರೋಪಿನ ಕೇಂದ್ರಗಳು ಇಲ್ಲಿಗೆಲ್ಲ ಆಫ್ರಿಕ ಗುಲಾಮರ ಪೂರೈಕೆ. ಈ ಅಮಾನುಷ ಅಧ್ಯಾಯ ಮೂರು ಶತಮಾನಗಳಿಗೂ ಮೀರಿ ನಡೆಯಿತು.

ಪಶ್ಚಿಮ ಆಫ್ರಿಕದ ಸ್ವಾಹಿಲಿ (ಕರಾವಳಿಯ ಜನ) ಅತ್ಯಂತ ನಿಷ್ಣಾತರಾದ ದೋಣಿ ನಿರ್ಮಾಪಕರು. ಅವರ ನಗರಗಳನ್ನೆಲ್ಲ ಪೋರ್ಚುಗೀಸರು ನೆಲಸಮ ಮಾಡಿದರು.

ತಾಮ್ರ, ಬಂಗಾರ, ವಜ್ರ ಗಣಿಗಳಲ್ಲಿ ದುಡಿದ ಕರಿಯರು ಕ್ಷಯರೋಗ ಪೀಡಿತರಾಗಿ ಹಳ್ಳಿಗಳಿಗೆ ಮರಳಿದರು. ಆದರೆ, ಚಾಟಿ ಬಂದೂಕುಗಳಿಗೆ ಪ್ರತಿಕ್ರಿಯೆಯಾಗಿ ಅವರಲ್ಲಿ ಸ್ವಾಭಿಮಾನ ಕೆರಳಿತ್ತು.

ಆಫ್ರಿಕವನ್ನು ಹಂಚಿಕೊಂಡ ಐರೋಪ್ಯ ಸಾಮ್ರಾಜ್ಯವಾದಿ ರಾಷ್ಟ್ರಗಳು ಹತ್ತಾರು. [ಪುಟ್ಟ ಬೆಲ್ಜಿಯಮಿನ ವಿಸ್ತಾರದ ಎಂಬತ್ತರಷ್ಟಿತ್ತು ಅದು ಸ್ಥಾಪಿಸಿದ ಕಾಂಗೋ ಸಾಮ್ರಾಜ್ಯ!]

ಬೇರೆ ಜನರೂ ವ್ಯಾಪಾರಕ್ಕೆ ಬರುತ್ತಿದ್ದರು. ಭಾರತದಿಂದ ಗುಜರಾತಿನ ಮತ್ತು ಕೆಳಗಣ ಪಶ್ಚಿಮ ತೀರದ ವಣಿಕರು. ಅವರ ಹಡಗುಗಳು ಆಫ್ರಿಕದ ಪೂರ್ವ ತೀರಕ್ಕೆ ತರುತ್ತಿದ್ದ ಸರಕು ಬಟ್ಟೆ. ಅದು ಒಳನಾಡಿಗೂ ಹೋಗುತ್ತಿತ್ತು.

ಅದರ ವಿನಿಮಯ ಹಸ್ತಿದಂತಕ್ಕೆ ಮತ್ತು ಆಮೆ ಚಿಪ್ಪಿಗೆ! ೧೫೦೦ಕ್ಕೆ ಮುಂಚೆ ಎರಡು ಮೂರು ಶತಮಾನ ಬಟ್ಟೆಗೆ ಪ್ರತಿಯಾಗಿ ಬಂಗಾರದ ಮತ್ತು ತಾಮ್ರದ ಗಟ್ಟಿಗಳೇ ಸಿಗುತ್ತಿದ್ದುವು. ಇಂಡೊನೇಷ್ಯದಿಂದಲೂ ವ್ಯಾಪಾರಿಗಳು ಬರುತ್ತಿದ್ದರು. ಭಾರತದ ಬಾಳೆಯ ಹಣ್ಣಿನ ರುಚಿಯನ್ನು ಆಫ್ರಿಕದ ಜನತೆಗೆ ಮಾಡಿಕೊಟ್ಟವರು ಈ ವ್ಯಾಪಾರಿಗಳು.

ಭೂತಚೇತನಗಳಲ್ಲಿ ನಂಬಿಕೆ ಆಫ್ರಿಕದ ಜನರಿಗೆ. ಜತೆಯಾಗಿ ಬಂದುವು ಕ್ರೈಸ್ತಧರ್ಮ, ಮುಹಮ್ಮದೀಯ ಧರ್ಮ. ಕ್ರಮೇಣ, ಪಾಶ್ಚಾತ್ಯ ಶಿಕ್ಷಣದ ಮೂಲಕ ವಿಜ್ಞಾನದ ತುಸು ಪರಿಚಯವೂ ಅವರಿಗಾಯಿತು.

ಐರೋಪ್ಯರ ಸಂಪರ್ಕಕ್ಕೆ ಮುಂಚೆ ಆಫ್ರಿಕದ ಜನ ಅವಿದ್ಯಾವಂತರೂ ಅನಾಗರಿಕರೂ ಆಗಿರಲಿಲ್ಲ ಎಂಬುದನ್ನು ಹಿಂದೆಯೇ ಗಮನಿಸಿದ್ದೇವೆ. ಆ ಶಿಕ್ಷಣದ ಮಟ್ಟ ಎಷ್ಟು ಉನ್ನತವಾಗಿತ್ತು ಎಂಬುದಕ್ಕೆ ಒಂದು ಸಾಕ್ಷ್ಯ ಕೆಳಗಿದೆ.

ಆಫ್ರಿಕದ ಪ್ರವಾಸ ಮಾಡಿ ಮರಳಿದ ಇಟೆಲಿಯ ಲಿಯೊ ತನ್ನ ದೇಶಬಾಂಧವರ ಮಾಹಿತಿಗೋಸ್ಕರ ಬರೆದ :

"ಇಲ್ಲಿ, ಟಿಂಬಕ್ಟೂ ನಗರದಲ್ಲಿ, ಬೆರ್ಬೆರ್ ದೇಶಗಳಿಂದ ಬರುವ (ಹಸ್ತಪ್ರತಿಯ) ಪುಸ್ತಕಗಳಿಗಾಗಿ ಭಾರೀ ಬೇಡಿಕೆ, ಬೇರೆ ಸಾಮಗ್ರಿಗಳ ಮಾರಾಟದಿಂದ ದೊರೆಯುವುದಕ್ಕಿಂತ ಎಷ್ಟೋ ಹೆಚ್ಚು ಲಾಭ ಪುಸ್ತಕಗಳ ಮಾರಾಟದಿಂದ ಸಿಗುತ್ತದೆ."

ಟಿಂಬಕ್ಟೂವಿನ ಈ ಖ್ಯಾತಿ ಇದೇ ರೀತಿ ಮುಂದುವರಿದು, ೧೭ನೆಯ ಶತಮಾನದ ಆದಿಯಲ್ಲಿ ಉನ್ನತ ಮಟ್ಟವನ್ನು ಮುಟ್ಟಿತು.

ಆಫ್ರಿಕದ ಪ್ರಾಚೀನ ನಿವಾಸಿಗಳ ಅಶಂತಿ, ಸ್ವಾಹಿಲಿ, ಬಂಟು ಮತ್ತಿತರ ಭಾಷೆಗಳು ಪ್ರಬುದ್ಧ. ಬಣಗಳ ಹಾಡುಗಳು – ಹಾಡುಗಬ್ಬಗಳು – ಆ ಜನಪದದ ಉದ್ಗ್ರಂಥ. ಡಮರು, ಅದು ನೀಡುವ ತಾಳ ಲಯ ಧ್ವನಿ, ಅವರ ಬದುಕಿನ ಒಂದಂಗ. (ಡಮರಿನ ಸ್ವರಸಂಕೇತ ಪಕ್ಕದ ಹಳ್ಳಿಗೆ ಸಂದೇಶ ತಲುಪಿಸುತ್ತದೆ. ಅಲ್ಲಿಂದ ಇನ್ನೊಂದು ಹಳ್ಳಿಗೆ. ಮತ್ತೂ ಮುಂದಕ್ಕೆ. ಎರಡೇ ಗಂಟೆಗಳ ಅವಧಿಯಲ್ಲಿ ಸಂದೇಶ ೧೬೦ ಕಿಲೊ ಮೀಟರ್ ದೂರಕ್ಕೆ ಮುಟ್ಟುವುದು ಸಾಧ್ಯ.) ನೀಗ್ರೋಗಳ ಸೌಂದರ್ಯ ಪ್ರಜ್ಞೆಯನ್ನು ಉತ್ಕಟಗೊಳಿಸುತ್ತವೆ—ಡಮರು, ಗೀತ, ನರ್ತನ.

ಆಫ್ರಿಕದ ಕುಬ್ಜರಿಗೆ ಆನೆ ವೈರಿ. ಅದರ ತುಳಿತಕ್ಕೆ ಅವರ ಪುಟ್ಟ ಗುಡಿಸಲುಗಳು ನಾಶವಾಗುತ್ತವೆ. ಆನೆಯ ಬೇಟೆಯಲ್ಲಿ ಕುಬ್ಜರದು ಎತ್ತಿದ ಕೈ.

ಆನೆ ಸತ್ತು ಬಿದ್ದಾಗ ಅದರ ಸುತ್ತಲೂ ಕುಣಿಯುತ್ತ ಅವರು ಹಾಡುತ್ತಾರೆ :

"ಗುರಿ ತಪ್ಪಿತು ಈ ಈಟಿ
ಓ ನಮ್ಮಪ್ಪ ಆನೆಯೇ !

ಅಪ್ಪಿತಪ್ಪಿ ನಿನ್ನನ್ನಿರಿಯಿತು
ಓ ನಮ್ಮಪ್ಪ ಆನೆಯೇ !

ನಿನ್ನನ್ನು ಕೊಲ್ಲೋ ಯೋಚನೆ ಇರ್ಲಿಲ್ಲ
ಇರ್ಲಿಲ್ಲ ನಿನ್ನನ್ನು ಕೊಲ್ಲೋ ಯೋಚನೆ
ಓ ನಮ್ಮಪ್ಪ ಆನೆಯೇ !

ನಿನ್ನ ಜೀವಕ್ಕೆ ಮುಳಿವಾದ್ದು ನಾವಲ್ಲ
ಮುಗಿದಿತ್ತು ನಿನ್ನ ಆಯಸ್ಸು
ಓ ನಮ್ಮಪ್ಪ ಆನೆಯೇ !

ತುಳೀಬೇಡ ನಮ್ಮ ಗುಡ್ಲು
ಓ ನಮ್ಮಪ್ಪ ಆನೆಯೇ ! ”

ಪರಿಹಾಸ್ಯ ಬೆರೆತ ಈ ನಿಲುವು ಕುಬ್ಜರಿಗೇನು, ಯಾವ ಜನಾಂಗಕ್ಕಾದರೂ ಭೂಷಣ. (ಈ ಕುಬ್ಜರು ಎಷ್ಟು ಮುಗ್ಧರೆಂದರೆ ಹಸ್ತಿ ದಂತವನ್ನು ಬಂಟುಗಳಿಗೆ ಕೊಟ್ಟು, ಅವರು ಬೆಳೆಯುವ ಬಾಳೆಹಣ್ಣಿನ ಗೊನೆ ಪಡೆದು ತಿಂದು ಸಂತೃಪ್ತ ರಾಗುತ್ತಾರೆ. ತಾವು ಸ್ವತಃ ಬಾಳೆ ಗಿಡ ಬೆಳೆಯುವುದು ತಮ್ಮ ಗೌರವಕ್ಕೆ ತಕ್ಕು ದಲ್ಲ ಎಂಬ ಭಾವನೆ ಬೇರೆ !)

ಸುಲಿಗೆಯ ಯಂತ್ರಗಳು ದೀರ್ಘಕಾಲ ಚಲಿಸಿದ ಮೇಲೆ, ಶ್ರಮಿಕ ವರ್ಗಗಳ ನಾಯಕರು ತಮ್ಮ ಮೂಕ ಜನತೆಯ ಯಾತನೆಗೆ ವಾಣಿಯಾದರು. ಪರಿಣಾಮ : ಆ ಧ್ವನಿಯನ್ನು ಹತ್ತಿಕ್ಕುವ ಯತ್ನ ; ಅದಕ್ಕಾಗಿ ಶ್ರಮಶಿಬಿರ ; ಸಾಮೂಹಿಕ ಕೊಲೆ.

ಆಫ್ರಿಕದ ಜನತೆಯ ಒಳಗಿನ ದುಗುಡವನ್ನು ಹೊರಗೆಡಹುವ ಒಂದು ಪುಸ್ತಕವನ್ನು ಆಫ್ರಿಕನಸ್ ಹೊರ್ಟನ್ ಎಂಬಾತ ೧೮೬೮ ರಲ್ಲಿ ಬರೆದ. ಅದರಲ್ಲಿ ಆತ ಕೇಳಿದ :

“ಈಜಿಪ್ಟನ್ನು ಆಳಿದ ಈ ಕುಲ ಮತ್ತೊಮ್ಮೆ ತನ್ನ ಕಾಲುಗಳ ಮೇಲೆಯೇ ನಿಂತು, ನಾಗರಿಕ ಜಗತ್ತಿನ ತಕ್ಕಡಿಯಲ್ಲಿ ತನ್ನ ವ್ಯಕ್ತಿತ್ವದ ತೂಕವನ್ನು ಹೆಚ್ಚಿಸಿ ಕೊಳ್ಳಲು ಯತ್ನಿಸಬಾರದೇಕೆ ?”

ಮೊದಲ ಲೋಕಮಹಾಯುದ್ಧ ಆರಂಭವಾದಾಗ (೧೯೧೪) ನೀಗ್ರೋಗಳನ್ನು ಬಹುಸಂಖ್ಯೆಯಲ್ಲಿ ಐರೋಪ್ಯರು ಸೈನ್ಯಗಳಿಗೆ ಒತ್ತಾಯವಾಗಿ ಭರ್ತಿಮಾಡಿದರು ; ಯುದ್ಧರಂಗಗಳಿಗೊಯ್ದು ಬಲಿಕೊಟ್ಟರು.

(ಫ್ರೆಂಚರು ಒಯ್ದದ್ದು ೨೧೧,೦೦೦ ನೀಗ್ರೋಗಳನ್ನು, ಬಳಸಿದ್ದು ೧೬೪,೦೦೦ ಮಂದಿಯನ್ನು. ಅಧಿಕೃತವಾಗಿ ಸತ್ತವರು ೨೪,೭೬೨ ಜನ. ನಾಪತ್ತೆಯಾದವರ ಸಂಖ್ಯೆ ಗೊತ್ತಾಗಲೇ ಇಲ್ಲ.

೧೯೨೧ ರಲ್ಲಿ 'ಗೋಲ್ಡ್ ಕೋಸ್ಟ್ ಇಂಡಿಪೆಂಡೆಂಟ್' ಎನ್ನುವ ಪತ್ರಿಕೆ ಬರೆಯಿತು :

"ಆಫ್ರಿಕದ ಸ್ವಯಂಸೇವಕರು ಐರೋಪ್ಯ ರಕ್ಷಣೆಯ ರಣರಂಗಗಳಲ್ಲಿ ಸರಳಲು ಯೋಗ್ಯರಾಗಿದ್ದಾರೆ, ತಮ್ಮ ರಾಷ್ಟ್ರಗಳ ಹಕ್ಕು ಪಡೆಯುವುದಕ್ಕೂ ಅಷ್ಟೇ ಯೋಗ್ಯ ರಾಗಿದ್ದಾರೆ.

ಅಮೆರಿಕದ ನೀಗ್ರೊ ನಾಯಕ ದು ಬಾಯ್ ಆಫ್ರಿಕದ ತನ್ನ ಬಂಧುಗಳ ಪರವಾಗಿ ಒಂದೇ ಸಮನೆ ವಾದಿಸಿದ.

[ಟಾಲ್‌ಸ್ಟಾಯ್‌ಯನ್ನು ಗುರುವೆಂದು ಸ್ವೀಕರಿಸಿದ ಯುವಕ ವಕೀಲ ಮೋಹನದಾಸ ಕರಮಚಂದ ಗಾಂಧೀ ದಕ್ಷಿಣ ಆಫ್ರಿಕದ ಬಿಳಿಯರ ದೌರ್ಜನ್ಯದ ವಿರುದ್ಧ ಸತ್ಯಾಗ್ರಹ ಅಸ್ತ್ರವನ್ನು ಹೊಸೆದದ್ದು ಈ ಕಾಲಾವಧಿಯಲ್ಲೇ.]

ಆಫ್ರಿಕದಲ್ಲಿ ಕಿಡಿ ಹೆಚ್ಚಾಯಿತು; ಕಿಚ್ಚು ನಾಲ್ಕು ದಿಕ್ಕುಗಳಿಗೂ ಹಬ್ಬಿ ದಳ್ಳುರಿಯಾಯಿತು.

೧೯೨೬ ಮೇ ತಿಂಗಳಲ್ಲೊಂದು ದಿನ ಮೊರೊಕ್ಕೋದ ಜನನಾಯಕ ಅಬ್ದುಲ್ ಕರೀಮನ ಹಳ್ಳಿಯ ಮೇಲೆ ಫ್ರೆಂಚ್ ಮತ್ತು ಸ್ಪಾನಿಷ್ ವಿಮಾನಗಳು ಬಾಂಬಿನ ಮಳೆಗರೆದುವು. ಸೆರೆಸಿಕ್ಕ ಕರೀಮ್ ಫ್ರೆಂಚ್ ಅಧಿಕಾರಿಗಳಿಗೆ ಹೇಳಿದ :

"ಈ ಸಲ ನಿಮ್ಮ ವಿಮಾನಗಳು ಗಂಡಸರನ್ನು ಕೊಂದಿವೆ ಅಂತ ನನಗೆ ಆಶ್ಚರ್ಯವಾಗಿದೆ; ಸಾಧಾರಣವಾಗಿ ಅವು ಹೆಂಗಸರನ್ನು ಕೊಲ್ಲುತ್ತವೆ. ನಿಮ್ಮದು ಸಿಡಿಮದ್ದಿನ ನಾಗರಿಕತೆ. ನಿಮ್ಮ ಬಳಿ ದೊಡ್ಡ ಬಾಂಬುಗಳಿವೆ. ಆದ್ದರಿಂದ ನೀವು ನಾಗರಿಕರು. ನನ್ನಲ್ಲಿರುವುದು ರೈಫಲ್ ಗುಂಡುಗಳು ಮಾತ್ರ. ಆದ್ದರಿಂದ ನಾನು ಅನಾಗರಿಕ."

ಮುಂದೆ ೧೯೩೫ ರಲ್ಲಿ ಮತ್ತಷ್ಟು ಮೇಲ್ಮಟ್ಟದ 'ನಾಗರಿಕ'ರಾದ ಮುಸೋಲಿನಿಯ ಫಾಸಿಸ್ಟ್ ಭಟರು ಇಥಿಯೋಪಿಯದ ಮೇಲೆ ಬಾಂಬುಗಳನ್ನು ಸುರಿದು ದೇಶವನ್ನು ವಶಪಡಿಸಿಕೊಂಡರು. ನಾಲ್ಕು ದಶಕಗಳ ಹಿಂದೆ ಇಟಾಲಿಯನರು ಇಥಿಯೋಪಿಯವನ್ನು ಆಕ್ರಮಿಸಿದಾಗ ಸೋಲು ಅನುಭವಿಸಿದ್ದರಂತೆ. ಅದಕ್ಕೆ ಪ್ರತೀಕಾರ ಈ ಯುದ್ಧ! ತೋಳ-ಕುರಿಮರಿ ನ್ಯಾಯದ ಕಥೆಯನ್ನು ಇದೇ ಬಗೆಯವರನ್ನು ನೋಡಿಯೇ ಬರೆದಿರಬೇಕು.

ವೈಮನಸ್ಸುಗಳನ್ನು ಬೇಯಿಸುವ ಇಂಥ ಹಿನ್ನೆಲೆಯಲ್ಲಿ ಹುಟ್ಟಿತು ಆಫ್ರಿಕದ ಆಧುನಿಕ ಸಾಹಿತ್ಯ. ಕೆಲವರು ತಮ್ಮ ತಮ್ಮ ಭಾಷೆಗಳಲ್ಲಿ ಬರೆದರು. ಕೆಲವರು ತಮ್ಮನ್ನು ಆಳುತ್ತಿದ್ದ ವಸಾಹತುವಾದಿಗಳ ಭಾಷೆಗಳಲ್ಲಿ.

ದಕ್ಷಿಣ ಆಫ್ರಿಕದ ಕವಯಿತ್ರಿ ಬಾರ್ಬರಾ ಮುಸಕೆಲಾ 'ಭೂಮಿಗೆ ರೋಷವಿಲ್ಲ' ಎಂಬ ಕವನದಲ್ಲಿ ಬರೆದಳು :

"ನಾನು ಮೆದುವಾಗುವೆ
ಆದರೆ ಆರುವುದಿಲ್ಲ.
ಪುನಃ ಇಡಿಯಾಗುವೆ
ನೋವಿಲ್ಲದೆ ಅಲ್ಲ.
ನಿನ್ನೆಣಿಕೆ ನೀನು ಕ್ಯಾನ್ಸರ್ ಅಂತ
ನಾನು ಬಲ್ಲೆ : ನೀನೊಂದು ಮಡುಮೆಗುಳ್ಳೆ."

ಕಲಾಕೃತಿಗಳ ಕೆತ್ತನೆಯನ್ನೂ ಒಳಗೊಂಡು ಆಫ್ರಿಕದ ಗುಡಿಸಲು ಕೈಗಾರಿಕೆಗಳನ್ನೆಲ್ಲ ವಸಾಹತುವಾದಿಗಳು ನಾಶಪಡಿಸಿದರು. ಆದರೆ, ಸಾಹಿತ್ಯವನ್ನು ಸೃಷ್ಟಿಸುವ ಪ್ರತಿಭೆಯನ್ನೂ ಬರೆಯುವ ಲೇಖನಿಯನ್ನೂ ನಾಶಮಾಡಲು ಅವರು ಶಕ್ತರಾಗಲಿಲ್ಲ.

ಆಫ್ರಿಕದ ಕಾರ್ಮಿಕ ವರ್ಗ ಸಂಖ್ಯೆಯಲ್ಲಿ ಚಿಕ್ಕದು. ಗಣಿಗಳಲ್ಲೂ ತಯಾರಿ ಉದ್ಯಮಗಳಲ್ಲೂ ದುಡಿಯುವವರು ಮೂವತ್ತು ಲಕ್ಷ ಮಾತ್ರ. ಆದರೆ ಅವರ ಕಿವಿಗೂ ಮುಟ್ಟಿತ್ತು, ಜಗತ್ತಿನ ಆರರಲ್ಲೊಂದು ಭಾಗದಲ್ಲಿ, ೧೯೧೭ ರಲ್ಲಿ, ಸುಲಿಗೆಯಿಲ್ಲದ ಸಮಾಜವಾದೀ ರಾಷ್ಟ್ರ ಸ್ಥಾಪಿತವಾಗಿದ್ದ ಕಥೆ.

ಈ ಶತಮಾನದಲ್ಲಿ ಅರ್ಥಪೂರ್ಣ ಕಥಾ ಸಾಹಿತ್ಯವನ್ನು ಆಫ್ರಿಕದಿಂದ ನೀಡಿದವರಲ್ಲಿ ಮೊದಲಿಗ ದಕ್ಷಿಣ ಆಫ್ರಿಕದ ಅಲನ್ ಪೇಟನ್. ಅನಂತರದ ಪೀಳಿಗೆಯವನು ಅಂಗೋಲದ ಅಗೊಸ್ಟಿನೊ ನೆಟೋ. ಈ ಕವಿ ಲೇಖನಿಯನ್ನೊಂದು ಕೈಯಲ್ಲೂ ಬಂದೂಕನ್ನು ಇನ್ನೊಂದರಲ್ಲೂ ಹಿಡಿದ. ಪೋರ್ಚುಗೀಸರ ಮೂರೂವರೆ ಶತಮಾನಗಳ ದಾಸ್ಯವನ್ನು ಕೊನೆಗಾಣಿಸಿದ. ಹೊಸ ಅಂಗೋಲದ ಕತ್ತು ಹಿಸುಕಲು ಅಮೆರಿಕ ಮುಂದಾದಾಗ, ಸೋವಿಯೆತ್ ಒಕ್ಕೂಟ–ಕ್ಯೂಬಗಳ ನೆರವನ್ನೂ ಪಡೆದು ನಾಡಿನ ಸ್ವಾತಂತ್ರ್ಯವನ್ನು ರಕ್ಷಿಸಿದ. ಈ ಕವಿ ಅಂಗೋಲದ ಅಧ್ಯಕ್ಷನಾದ. (ಸಾವು ೧೯೭೯ ರಲ್ಲಿ, ೫೭ ನೆಯ ವಯಸ್ಸಿನಲ್ಲಿ.)

ಆಫ್ರಿಕದ ಸಾಹಿತ್ಯದಲ್ಲಿ ಮತ್ತೊಂದು ದೊಡ್ಡ ಹೆಸರು ಚಿನುವ ಅಹೇಬೆ. ಈ ಕಥೆಗಾರ ಕಾದಂಬರಿಕಾರ ಸ್ವತಂತ್ರ ನೈಜೀರಿಯದ ಪ್ರಸಾರ ಮಾಧ್ಯಮದಲ್ಲಿ ದುಡಿದ ಅನುಭವಿ. ವೊಲೆ ಸೊಯಿಂಕಾ–ಕವಿ, ನಾಟಕಕಾರ–ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ನೈಜೀರಿಯಾದಲ್ಲಿ ಸೆರೆಮನೆಯ ಸುಖ ಕಂಡವನು. ಮುಂದೆ ಪೋಣಿಸಬೇಕಾದ ಹೆಸರುಗಳು—ರಿಚರ್ಡ್ ರೀವೆ, ಆರ್ಥರ್ ಮೈಮಾನೆ, ಎಂಫಲೀಲಿ, ಕ್ರೇಹ, ಎಡ್ ಡೋಡು, ಎಫೆಂಡಿ....

ಸಾಹಿತ್ಯಕ್ಕೂ ಬದುಕಿಗೂ ಹೊಸ ಮೌಲ್ಯಗಳು ಕಂಡುಬಂದುದು ಎರಡನೆಯ ಲೋಕ ಮಹಾಯುದ್ಧದ ಕರಾಳ ವರ್ಷಗಳು ಕಳೆದ ಮೇಲೆ, ಆ ವರ್ಷಗಳಲ್ಲಿ, ದಶಕಗಳಲ್ಲಿ, ಆಫ್ರಿಕದ ರಾಷ್ಟ್ರೀಯತೆ ತೀವ್ರಗೊಂಡು ಬಿಡುಗಡೆಯ ಹೋರಾಟಗಳು

ಪ್ರಖರವಾದುವು. ದೇಶಗಳು ಒಂದೊಂದಾಗಿ ಸ್ವಾತಂತ್ರ್ಯ ಸಾರಿದುವು : ಲಿಬಿಯ, ಈಜಿಪ್ಟ್, ಆಲ್ಜೀರಿಯಾ, ಟ್ಯುನೀಸಿಯ, ಮೊರೊಕ್ಕೊ, ಘಾನ, ಗಿನಿ, ನೈಜೀರಿಯ, ಸುಡಾನ್, ಸಿಯಾರ ಲಿಯೊನೆ, ಮಡಗಾಸ್ಕರ್, ಟಾನ್‌ಜಾನಿಯ, ಕೀನ್ಯ, ಮಾಲವಿ, ಜಾಂಬಿಯ, ಮಾರಿಷಸ್....ಮೊಜಾಂಬಿಕ್, ಅಂಗೋಲಾ (೧೯೭೬ರಲ್ಲಿ). ಹೀಗೆಯೇ ಹಲವು. [ಇಟಾಲಿಯನರಂತೂ ೧೯೪೧ ರಲ್ಲೇ ಇಥಿಯೋಪಿಯದಿಂದ ವಾಪಾಸಾಗಿದ್ದಾರು.] ಆಫ್ರಿಕದ ೪೮ ನೆಯ ಸ್ವತಂತ್ರ ದೇಶವೆನಿಸಿದ್ದು ಸೆಚಿಲೆಸ್. ಈಗ ೪೯ ನೆಯದು ರ್‍ಹೊಡೀಸಿಯ.

ಒಂದು ರಾಷ್ಟ್ರ. ಅದಕ್ಕೊಂದು ಬಾವುಟ, ಲಾಂಛನ. ಇಷ್ಟು ಸಾಕೆ? ಸಾಲದು ಎಂದು ಅರ್ಥಮಾಡಿಕೊಂಡ ಆಫ್ರಿಕದ ಅನೇಕ ಸ್ವತಂತ್ರ ದೇಶಗಳು ಈಗ ಸಂಪೂರ್ಣ ಆರ್ಥಿಕ ಮತ್ತು ಸಾಮಾಜಿಕ ವಿಮೋಚನೆಯಲ್ಲಿ ನಿರತವಾಗಿವೆ.

ಇಂಥ ಪರಿಸ್ಥಿತಿಯಲ್ಲೂ ದಕ್ಷಿಣ ಆಫ್ರಿಕದಿಂದ ತೊಲಗಲು ಬಿಳಿಯರು ನಿರಾಕರಿಸುತ್ತಿದ್ದಾರೆ. ಅಮೆರಿಕ ಬ್ರಿಟನ್‌ಗಳ ಬೆಂಬಲ ಇದೆಯೆಂದು ಈ ಎದೆಗಾರಿಕೆ. ಆದರೆ ಇದೆಷ್ಟು ಕಾಲ ನಡೆದೀತು?

ವಾಸ್ತವವಾಗಿ ಆಫ್ರಿಕದಲ್ಲಿ ನೆಲಕ್ಕೆ ಒದಗಿರುವ ಸಾಮ್ರಾಜ್ಯಶಾಹಿ ಆನೆ ಈಗ ಕೊನೆಯ ಬಿಡುಗಡೆಗಾಗಿ ಚಡಪಡಿಸುತ್ತಿದೆ. ಆಫ್ರಿಕದ ಜನಪದ ಅದರ ಸುತ್ತಲೂ ಕುಣಿಯುತ್ತ 'ಮುಗಿದಿದೆ ನಿನ್ನ ಆಯುಸ್ಸು' ಎಂದು ಸಾರಿ ಹೇಳುತ್ತಿದೆ.

ಹೊಸ ಬದುಕಿನ ಮುಂಜಾವದಲ್ಲಿ ಆಫ್ರಿಕ ಪಿಳಿಪಿಳಿ ಕಣ್ಣು ಬಿಡುತ್ತಿದೆ.

ಸ್ಥಿತ್ಯಂತರದ ಈ ಅವಧಿಯಲ್ಲಿ, ಆಫ್ರಿಕದ ಜನತೆಯನ್ನು ಅರ್ಥೈಸಿಕೊಳ್ಳಲು ನೆರವಾಗುತ್ತದೆ. ಹದಿಮೂರು ಕಥೆಗಳ 'ಆಫ್ರಿಕದ ಹಾಡು.' ಪ್ರತಿಯೊಂದು ಕಥೆಯೂ ಆ ಹಾಡಿನ ಒಂದೊಂದು ಸೊಲ್ಲು....

ಈ ಹಾಡನ್ನು ಕೇಳಿ, 'ಕಾಡಿನಲ್ಲಿ ಬೆಳದಿಂಗಳ'ನ್ನು ಕಾಣಲು ಹೊರಡೋಣ.

—೧೯೮೦

೧೩

ರಾಜಕೀಯ

○ ಒಬ್ಬ ಸೃಜನಶೀಲ ಲೇಖಕ ಎಷ್ಟು ರಾಜಕೀಯವನ್ನು (ಸಿದ್ಧಾಂತ, ಚಟುವಟಿಕೆ ಇತ್ಯಾದಿ) ಜೀರ್ಣಿಸಿಕೊಳ್ಳಬಲ್ಲ? ಅದರಿಂದ ಆಗುವ ಒಳಿತೆಷ್ಟು? ಹಾನಿ ಎಷ್ಟು? ಕರಾರುವಾಕ್ಕಾಗಿ ಇಷ್ಟೇ-ಎಂದು ಯಾರಾದರೂ ಹೇಳಬಲ್ಲರೆ? ಈ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರವಿಲ್ಲ.

ರಾಜಕೀಯದ ಕುದಿಯುವ ಕಡಾಯಿಗೆ ಧುಮುಕಿ ಹೊರಬಂದ ಆಸಾಮಿ ನಾನು.

ಆ ಕುದಿತದ ರಾಶಿರಾಶಿ ಬರೆವಣಿಗೆ ನನ್ನ ಬಳಿ ಈಗ ಇಲ್ಲ. ಎರಡು ಮೂರು ನಾಲ್ಕು ಪುಸ್ತಕಗಳೇನೋ ಇವೆ. ಅವುಗಳಲ್ಲೊಂದು 'ಹಿಮಾಲಯದ ದಳ್ಳುರಿ.' ಅದರ ಕೆಲವು ಪುಟಗಳು ಇಲ್ಲಿವೆ—ನಿಮ್ಮ ಅವಗಾಹನೆಗೆ. ಮೂಲ: 'ನಿರಂಜನ: ಮೂವತ್ತು ಸಂಪುಟಗಳಲ್ಲಿ' ಸರಣಿಯ ೨೧ನೆಯ ಸಂಪುಟ.

ಹಿಮಾಲಯದ ದಳ್ಳುರಿ

೧೦

ಚೀನಾದಲ್ಲಿ ಸ್ವಾತಂತ್ರ್ಯ ಹೋರಾಟ ರೂಪಗೊಂಡ ರೀತಿ, ಭಾರತ ಹಿಡಿದ ಹಾದಿಗಿಂತ ಭಿನ್ನ.

ತಮ್ಮ ರಾಷ್ಟ್ರದ ಕಾಹಿಲೆಯನ್ನು ವೈದ್ಯ ಸೂನ್ ಯಾತ್-ಸೆನ್ ಗುರುತಿಸಿದಾಗ ಅವರಿನ್ನೂ ಇಪ್ಪತ್ತೇಳರ ಯುವಕ. ಅವರು ಟೀಯೆನ್‌ಟ್ಸಿನ್ನಿಗೆ ಸಾಗಿ, ರಾಜಪ್ರತಿನಿಧಿ-ವೈಸರಾಯ್-ತಮಗೆ ಭೇಟಿ ನೀಡಬೇಕೆಂದು ಕೇಳಿದರು. ಆ ಪ್ರತಿನಿಧಿ, ಶಕ್ತಿಶಾಲಿಯಾದ ರಾಜಕಾರಣಿ ಲಿ ಹುಂಗ್-ಚಾಂಗ್.

ಭೇಟಿ ಏರ್ಪಟ್ಟಿತು.

ಸೂನ್ ಯಾತ್-ಸೆನ್ ವೈಸರಾಯರ ಎದುರು ನಿಂತು, ಅಸಮಾನ ಧೈರ್ಯದಿಂದ ಸ್ವರವನ್ನೆತ್ತಿ ನುಡಿದರು :

"ಚೀನೀ ಸಾಮ್ರಾಜ್ಯದಲ್ಲಿ ಮೇಲಿನಿಂದ ಕೆಳಗಿನವರೆಗೂ ಸಂಪೂರ್ಣ ಬದಲಾವಣೆಯಾಗಬೇಕು."

ರಾಜಪ್ರತಿನಿಧಿ ಲಿ ಆ 'ಉದ್ಧಟಯುವಕ'ನೆದುರು ವಿನಯ ನಟಿಸುತ್ತ ಅಂದ :

"ಆಗದ ಮಾತು. ಕ್ಷಮಿಸಬೇಕು"

ಅಧೋಗತಿಯ ದಾರಿ ಹಿಡಿದಿದ್ದ ಚೀನಾದಲ್ಲಿ ನಡೆದ ಈ ಘಟನೆ ವಾಸ್ತವವಾಗಿ, ಹೊಸ ತಲೆಮಾರಿನ ಚೀನೀ ಜನಾಂಗದ ಆಸೆ ಆಕಾಂಕ್ಷೆಗಳಿಗೆ ಅಭಿವ್ಯಕ್ತಿ ಕೊಟ್ಟಿತ್ತು.

ಕ್ಯಾಂಟನ್‌ನಲ್ಲಿ ಸೂನ್ ಯಾತ್-ಸೆನ್ ವ್ಯಾಪಾರೀ ಸಂಸ್ಥೆಯೊಂದರ ಸೋಗಿನಲ್ಲಿ ಕ್ರಾಂತಿಕಾರಿ ಚಟುವಟಿಕೆಗಳನ್ನು ನಡೆಸಿದರು. ಸುಳಿವು ದೊರೆತ ಅಧಿಕಾರಿಗಳು ದಾಳಿ ನಡೆಸಿದಾಗ, ಮಾಂಸದ ಒಂದು ಮೂಟೆಯಲ್ಲಿ ೬೦೦ ಪಿಸ್ತೂಲುಗಳು ದೊರೆತುವು. ಒಳಸಂಚು ಬಯಲಾಗಿ ಸೂನ್ ಯಾತ್-ಸೆನ್‌ರ ಎಪ್ಪತ್ತು ಜನ ಹಿಂಬಾಲಕರು ಕೊಲ್ಲಲ್ಪಟ್ಟರು. ಸೂನ್ ನಡುರಾತ್ರಿಯಲ್ಲಿ ತಪ್ಪಿಸಿಕೊಂಡು ಹೋದರು.

ಸ್ವಲ್ಪ ಕಾಲ ಜಪಾನಿನಲ್ಲಿ ಅವರು ವಾಸ ಮಾಡಿದರು. ತಾವು ಮಂಚು ಅರಸರಿಗೆ ಅಧೀನರಲ್ಲವೆಂದು ತೋರಿಸುವುದಕ್ಕಾಗಿ ತಮ್ಮ ಜುಟ್ಟನ್ನು ಅವರು ಕತ್ತರಿಸಿ ಹಾಕಿದರು.

ಮುಂದೆ ಅಮೆರಿಕದಲ್ಲೂ ಇಂಗ್ಲೆಂಡಿನಲ್ಲೂ ಅವರು ಪ್ರವಾಸಮಾಡಿ, ತಾವು ಸಂಧಿಸಿದ ಚೀನೀಯರಿಗೆಲ್ಲ ರಾಷ್ಟ್ರೀಯತೆಯ ಸಂದೇಶವನ್ನು ಮುಟ್ಟಿಸಿದರು. ಲಂಡನ್ನಿನಲ್ಲಿ ಅವರನ್ನು ಅಪಹರಿಸುವ ವಿಫಲಯತ್ನವೊಂದು ಮಂಚೂ ಹಸ್ತಕರಿಂದ ನಡೆಯಿತು. ಮುಂದೆ ಹದಿನೈದು ವರ್ಷಗಳ ಕಾಲ ಸೂನ್ ಹಲವಾರು ದೇಶಗಳಲ್ಲಿ ಸಂಚಾರ ಕೈಗೊಂಡು ತಮ್ಮ ಸಂಘಟನೆಯನ್ನು ಸಿದ್ಧಗೊಳಿಸಿದರು ; ಕ್ರಾಂತಿಗಾಗಿ ನಿಧಿ ಸಂಗ್ರಹಿಸಿದರು.

ಸೂನ್ ಪ್ರಾಮಾಣಿಕ ವ್ಯಕ್ತಿ. ಅವರದು ಸರಳ ನಿರಾಡಂಬರ ಜೀವನ. ಯಾವ ವೈಯಕ್ತಿಕ ಆಸೆಗಳೂ ಇರದಿದ್ದ ಮನುಷ್ಯ.

೧೯೦೫ ರಲ್ಲಿ ಅವರು ರಾಷ್ಟ್ರೀಯ ಜನತಾ ಪಕ್ಷವನ್ನು–ಕೂಮಿಂ ಟಾಂಗ್— ಸ್ಥಾಪಿಸಿದರು.

೧೯೦೮ ರಲ್ಲಿ ವೃದ್ಧೆ ಚಕ್ರವರ್ತಿನಿ ಮೃತಳಾದಳು. ಮಗು ಪು ಯಿ ಸಮ್ರಾಟನಾದ. ಸವೆದುಹೋಗಿದ್ದ ರಾಜ್ಯ ಯಂತ್ರದ ಗಾಲಿ ಕೀಲಿಗಳೆಲ್ಲ ಕಳಚತೊಡಗಿದವು. ಚೀನದ ಒಳಪ್ರಾಂತಗಳಲ್ಲಿ ಅತೃಪ್ತಿ ಬಂಡಾಯದ ರೂಪವನ್ನು ತಳೆಯಿತು. ಬಂಡುಗಾರ ಸೇನೆಗಳು ನಾನ್‌ಕಿಂಗನ್ನು ಹಿಡಿದುವು. ದೇಶದ ಬಹುಭಾಗ ಕ್ರಾಂತಿಕಾರರ ಅಧೀನವಾಯಿತು.

ಅಮೆರಿಕದಲ್ಲಿ ರೈಲುಗಾಡಿಯಲ್ಲಿ ಪ್ರವಾಸಮಾಡುತ್ತಿದ್ದಾಗ ಈ ವಾರ್ತೆಯನ್ನು ಪತ್ರಿಕೆಗಳಲ್ಲೋದಿದ ಸೂನ್ ಯಾತ್-ಸೆನ್ ತಾಯ್ನಾಡಿಗೆ ಹಿಂತಿರುಗಲು ನಿರ್ಧರಿಸಿದರು. ೧೯೧೧ರ ಕ್ರಿಸ್‌ಮಸ್ ದಿನ ಅವರು ಶಾಂಘಾಯಿಯನ್ನು ತಲುಪಿದರು. ೧೯೧೨ರ ಮೊದಲದಿನ ಚೀಣೀ ಗಣರಾಜ್ಯದ ಅಧ್ಯಕ್ಷನೆಂದು ನಾನ್‌ಕಿಂಗ್‌ನಲ್ಲಿ ಅವರು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಮಂಚೂ ಮನೆತನ ಕೊನೆಗೊಂಡಿತು. ಅಷ್ಟೇ ಅಲ್ಲ, ೩,೦೦೦ ವರ್ಷಗಳಿಂದ ನಡೆದಿದ್ದ ಅರಸರ ರಾಜ್ಯಭಾರವೂ ಅಲ್ಲಿ ಮುಕ್ತಾಯವಾಯಿತು. ಮಂಚೂ ವಂಶವನ್ನು ಕೊನೆಗಾಣಿಸಿದುದರ ಸಂಕೇತವಾಗಿ ಚೀನೀಯರು ಎಲ್ಲೆಲ್ಲೂ ತಮ್ಮ ಜುಟ್ಟುಗಳನ್ನು ಕತ್ತರಿಸಿಕೊಂಡರು.

> ಕೊನೆಯದಾದ ಶುದ್ಧ ಚೀನೀ ರಾಜವಂಶವು ಮಿಂಗರದು. ಅದರ ಸಂಸ್ಥಾಪಕನು ಮಿಂಗ್ ತಾಯ್-ತ್ಸು. ನಾನ್‌ಕಿಂಗಿನಲ್ಲಿದ್ದ ಆತನ ಸಮಾಧಿಯ ಬಳಿಗೆ ಸೂನ್ ಯಾತ್-ಸೆನ್ ತೆರಳಿ, ಆ ಅರಸನ ಪ್ರೇತಾತ್ಮವನ್ನು ಉದ್ದೇಶಿಸಿ, "ಚೀನೀ ಜನತೆಯ ಸಾರ್ವಭೌಮತ್ವವನ್ನು ಪುನಃ ಸ್ಥಾಪಿಸಿದ್ದೇವೆ ; ಪರಕೀಯ ಮಂಚುಗಳ ಆಳ್ವಿಕೆಯಿಂದ ಚೀನೀಯರನ್ನು ಮುಕ್ತಗೊಳಿಸಿದ್ದೇವೆ" ಎಂದು ಘೋಷಿಸಿದರು.

ಗಣರಾಜ್ಯದ ಸ್ಥಾಪನೆಯೇನೋ ಆಯಿತು. ಆದರೆ ಅಂತರ್ಯುದ್ಧಗಳು ಮುಂದೆಯೂ ದೀರ್ಘಕಾಲ ಚೀನವನ್ನು ಕಾಡಿದುವು. ನಾನ್‌ಕಿಂಗನ್ನು ರಾಜಧಾನಿ

ಯಾಗಿ ಮಾಡಿಕೊಂಡ ಸೂನ್ ಯಾತ್-ಸೆನ್‌ರನ್ನು ಪೀಕಿಂಗ್ ಮತ್ತು ಅದರ ಸುತ್ತಲಿನ ಸ್ವಲ್ಪ ಪ್ರದೇಶ ಪ್ರತಿಭಟಿಸಿದುವು.

ಆಧುನಿಕ ವಿಚಾರ ಸರಣಿಯು ಹೊಸ ಚೀನವನ್ನು ಕಟ್ಟುವುದು ಸುಲಭವಾಗಿರಲಿಲ್ಲ. ಚೀನದಲ್ಲಿ ನೆಲೆಸಿದ್ದ ಪಾಶ್ಚಾತ್ಯರು ಅನೇಕ ವಿಶ್ವವಿದ್ಯಾಲಯಗಳನ್ನು ತೆರೆದಿದ್ದು, ಅಲ್ಲಿ ಸಹಸ್ರಾರು ಚೀನೀ ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದರು. ತಮ್ಮ ಸೇನೆಗೂ ಸರಕಾರಕ್ಕೂ ಬೇಕಾದ ಅಧಿಕಾರಿಗಳನ್ನು ಸೂನ್ ಯಾತ್-ಸೆನ್ ಅಲ್ಲಿಂದ ಆರಿಸಿಕೊಂಡರು.

ರಾಷ್ಟ್ರೀಯ ಚಳುವಳಿಯಿಂದ ಪ್ರಭಾವಿತರಾದ ವಿದ್ಯಾರ್ಥಿಗಳು ಕೆಲವರು ಮಾರ್ಕ್ಸ್‌ವಾದದ ಅಧ್ಯಯನವನ್ನು ಆರಂಭಿಸಿದ್ದರು. ಅವರೆಲ್ಲ ಇಪ್ಪತ್ತರ ಹರೆಯದಲ್ಲಿದ್ದ ಯುವಕರು. ಒಬ್ಬಿಬ್ಬರು ಯೂರೋಪಿಗೆ ತೆರಳಿದರು. ೧೯೨೧ ರಲ್ಲಿ ಚೀನೀ ಕಮ್ಯೂನಿಸ್ಟ್ ಪಕ್ಷ ಸ್ಥಾಪಿಸಲ್ಪಟ್ಟಿತು. ಲಿ ಲಿ-ಸಾನ್ ಅದರ ಮೊದಲ ಕಾರ್ಯದರ್ಶಿ. ಪೀಕಿಂಗ್ ವಿಶ್ವವಿದ್ಯಾಲಯದ ಪುಸ್ತಕ ಭಂಡಾರದ ಅಧಿಕಾರಿಯ ಸಹಾಯಕನಾಗಿದ್ದ ಮಾವೋತ್ಸೆ-ತುಂಗ್ ಸಂಸ್ಥಾಪಕರಲ್ಲೊಬ್ಬ. ಯೂರೋಪಿಗೆ ತೆರಳಿದ್ದ ಚೌ ಎನ್-ಲೇ ಮತ್ತು ಚು ಟೆ ಫ್ರಾನ್ಸಿನಲ್ಲೂ ಜರ್ಮನಿಯಲ್ಲೂ ಚೀನೀಯ ವಲಸೆಗಾರರಿದ್ದ ಕಡೆ ಚೀನೀ ಕಮ್ಯೂನಿಸ್ಟ್ ಪಕ್ಷದ ಶಾಖೆಗಳನ್ನು ಸಂಘಟಿಸಿದರು.

೧೯೧೭ ರಲ್ಲಿ ನಡೆದ ರಷ್ಯದ ಕ್ರಾಂತಿಯೂ ಅಲ್ಲಿ ಸ್ಥಾಪಿತವಾದ ಸೋವಿಯೆಟ್ ಸರಕಾರವೂ ಶೈಶವಾವಸ್ಥೆಯಲ್ಲಿದ್ದ ಚೀನೀ ಗಣರಾಜ್ಯದ ಮೇಲೆ ಪ್ರಭಾವ ಬೀರಿದುವು. ತಮ್ಮ ಸರಕಾರವನ್ನು ಭದ್ರಗೊಳಿಸಲು ಸೂನರಿಗೆ ಪಾಶ್ಚಾತ್ಯ ರಾಷ್ಟ್ರಗಳಿಂದ ಯಾವ ನೆರವೂ ಸಿಗಲಿಲ್ಲ. ಅವರು ಅನಿವಾರ್ಯವಾಗಿ ರಷ್ಯದತ್ತ ನೋಡಿದರು. ತಮ್ಮ ನೆಚ್ಚಿನ ಬೆಂಬಲಿಗರಾದ ಚಿಯಾಂಗ್ ಕೈ-ಷೇಕರನ್ನು ಮಾಸ್ಕೋಗೆ ಕಳಿಸಿದರು.

ರಷ್ಯದಿಂದ ಬೊರೊಡಿನ್ ಎಂಬಾತ ಚಿಯಾಂಗರ ಜೊತೆ ಚೀನಕ್ಕೆ ಬಂದ. ಸೂನ್ ಯಾತ್-ಸೆನರಿಗೆ ಸಲಹೆಗಾರನಾದ ಅವನ ಸೂಚನೆಗಳಿಗನುಸಾರವಾಗಿ ಚೀನೀ ರಾಜ್ಯ ವ್ಯವಸ್ಥೆ ಪುನರ್ಘಟಿಸಲ್ಪಟ್ಟಿತು. ಸಾಮಾಜಿಕ, ಆರ್ಥಿಕ, ರಾಜಕೀಯ ಸುಧಾರಣೆಗಳಾದುವು. ಕೂಮಿಂಗ್‌ಟಾಂಗ್ ಪಕ್ಷ ಎಡಬಲದವರನ್ನೆಲ್ಲ ಒಳಗೊಂಡು ಸುಸಂಘಟಿತವಾಯಿತು. ಚೀನೀ ಸೈನ್ಯವೂ ಭದ್ರಗೊಳಿಸಲ್ಪಟ್ಟುವು. ಚಿಯಾಂಗ್ ಆ ಸೇನೆಯ ಮೊದಲ ಮುಖ್ಯಾಧಿಕಾರಿಯಾದರು. ಯುವಕ ಚೌ ಎನ್-ಲೇ ಸೈನ್ಯಾಧಿಕಾರಿಗಳಿಗೆ ರಾಜಕೀಯ ಗುರುವಾದರು.

"ನಾಯಿಗಳಿಗೂ ಚೀನೀಯರಿಗೂ ಪ್ರವೇಶವಿಲ್ಲ"

—ಎಂದು ಪಾಶ್ಚಾತ್ಯರು ಉದ್ಧಟರಾಗಿ ತಾವು ವಾಸಿಸುತ್ತಿದ್ದ ಚೀನೀ ನಗರಗಳ ಉದ್ಯಾನಗಳಲ್ಲೂ ಸರೋವರದ ದಂಡೆಗಳಲ್ಲೂ ಬೋರ್ಡು ತೂಗುಹಾಕು

ತ್ತಿದ್ದ ದಿನಗಳು ಕಳೆದು ರಾಷ್ಟ್ರೀಯ ಸ್ವಾಭಿಮಾನದಿಂದ ಪ್ರೇರಿತವಾದ ಹೊಸ ಚೀನಾ ತಲೆ ಎತ್ತಿತ್ತು.

ಸೂನ್ ಯಾತ್–ಸೆನ್ ಜನತೆಯ ಮೂರು ತತ್ವಗಳನ್ನು ಪ್ರತಿಪಾದಿಸಿದರು.

೧. ರಾಷ್ಟ್ರೀಯತೆ (ರಾಷ್ಟ್ರದ ವಿಮೋಚನೆ ಮತ್ತು ಮಾನವ ಕುಲಗಳ ಸಮಾನತೆ.)

೨. ಪ್ರಜಾಪ್ರಭುತ್ವ (ಜನತೆಯ ರಾಜಕೀಯ ಹಕ್ಕಗಳು.)

೩. ಜನಜೀವನ (ಜನತೆಯ ಆರ್ಥಿಕ ಕಲ್ಯಾಣ.)

ಚೀನೀ ರಾಷ್ಟ್ರೀಯತೆ ಪಿತನೆಂದು ಆ ಜನತೆ ಪರಿಗಣಿಸಿದ ಸೂನ್ ಯಾತ್–ಸೆನರ ವ್ಯಕ್ತಿತ್ವವೂ ಬೊರೊಡಿನನ ಕಾರ್ಯ ವಿಚಕ್ಷಣತೆಯೂ ಚೀನದ ಪುನರುಜ್ಜೀವನಕ್ಕೆ ಕಾರಣವಾದುವು.

ಆದರೆ ಆ ಕಾರ್ಯ ಪೂರ್ತಿಯಾಗಿ ಯಶಸ್ವಿಯಾಗುವುದಕ್ಕೆ ಮುನ್ನವೇ ಸೂನ್ ಯಾತ್–ಸೆನ್ ತೀವ್ರ ಅಸ್ವಾಸ್ಥ್ಯಕ್ಕೊಳಗಾಗಿ ಕಾಲವಾದರು. ಎಳೆಯ ಚೀನೀ ಗಣರಾಜ್ಯ ತಬ್ಬಲಿಯಾಯಿತು.

ಅವರ ಅನಂತರ ಅಧಿಕಾರಕ್ಕೆ ಬಂದ ಚಿಯಾಂಗ್ ಕೈ–ಷೇಕ್‌ರಿಗೆ ಮಾರ್ಕ್ಸ್‌ವಾದದ ಬಗೆಗಾಗಲೀ ರಷ್ಯವನ್ನು ಕುರಿತಾಗಲೀ ಸಹಾನುಭೂತಿ ಇರಲಿಲ್ಲ. ಆತ ಮಾಡಿದ ಮೊದಲ ಕೆಲಸವೆಂದರೆ, ಚೀನೀ ಸರಕಾರದ ಮೇಲೆ ಬೊರೊಡಿನ್ ಮಾಡುತ್ತಿದ್ದ ಸವಾರಿಯನ್ನು ಕೊನೆಗಾಣಿಸಿದ್ದು. ಸ್ವಲ್ಪ ಕಾಲ ಬೊರೊಡಿನ್ ಚೀನೀ ಕಮ್ಯೂನಿಸ್ಟರ ಜೊತೆ ಸೇರಿ ನಾನ್‌ಕಿಂಗ್ ಆಡಳಿತಕ್ಕೆ ತೊಂದರೆಕೊಟ್ಟರು. ಚೀನದಲ್ಲಿರುವುದು ದುಸ್ಸಾಧ್ಯವಾದಾಗ ಹತಾಶನಾಗಿ ರಷ್ಯಕ್ಕೆ ಮರಳಿದರು. [ಮುಂದೆ ಸರ್ವಾಧಿಕಾರಿ ಸ್ಟಾಲಿನ್ನಿನ ಅವಕೃಪೆಗೆ ಒಳಗಾಗಿ ಸೆರೆಮನೆಯಲ್ಲಿ ಅಸು ನೀಗಿದರು.]

ಚಿಯಾಂಗ್ ಕೈ–ಷೇಕರಲ್ಲಿ ದಕ್ಷತೆಗೇನೂ ಕೊರತೆ ಇರಲಿಲ್ಲ. ಸೂನ್ ಯಾತ್–ಸೆನ್‌ರು ಸಾಯುವುದಕ್ಕೆ ಕೆಲ ದಿನಗಳಿಗೆ ಮುನ್ನ ತಮ್ಮ ಉಯಿಲೊಂದನ್ನು ಬರೆದಿಟ್ಟಿದ್ದರು. ಇದು, ಅದರ ಪೂರ್ತಿ ಪಾಠ.

ನನ್ನ ಉಯಿಲು

ಚೀನಕ್ಕೆ ಸ್ವಾತಂತ್ರ್ಯವನ್ನೂ ರಾಷ್ಟ್ರಗಳ ಶ್ರೇಣಿಯಲ್ಲಿ ಸಮಾನತೆಯನ್ನೂ ದೊರಕಿಸುವ ಒಂದೇ ಉದ್ದೇಶದಿಂದ, ನಾಲ್ವತ್ತು ವರ್ಷಗಳ ಕಾಲ ಜನತಾ ಕ್ರಾಂತಿಯ ಧ್ಯೇಯಕ್ಕಾಗಿ ಏಕಮನಸ್ಸಿನಿಂದ ನಾನು ದುಡಿದಿದ್ದೇನೆ. ಈ ಗುರಿಯನ್ನು ಮುಟ್ಟುವುದಕ್ಕೋಸ್ಕರ ನಮ್ಮ ಜನತೆಯಲ್ಲಿ ಸಂಪೂರ್ಣ ಜಾಗೃತಿಯನ್ನು ಸಾಧಿಸುವುದೂ ನಮ್ಮನ್ನು ಸಮಾನತೆಯಿಂದ ಕಾಣುವ ಜಗತ್ತಿನ ಇತರ ಜನತೆಯ ಹೋರಾಟದೊಡನೆ ನಾವು ಸಮಭುಜರಾಗುವುದೂ,

ಅಗತ್ಯವೆಂಬುದನ್ನು ನಾಲ್ವತ್ತು ವರ್ಷಗಳ ಅನುಭವ ನನಗೆ ಮನಗಾಣಿಸಿ ಕೊಟ್ಟಿದೆ.

ಕ್ರಾಂತಿಯ ಕೆಲಸ ಇನ್ನೂ ಮುಗಿದಿಲ್ಲ. ನನ್ನ 'ರಾಷ್ಟ್ರೀಯ ಪುನರ್ನಿರ್ಮಾಣಕ್ಕೋಸ್ಕರವಾದ ಯೋಜನೆಗಳು', 'ರಾಷ್ಟ್ರೀಯ ಪುನರ್ನಿರ್ಮಾಣದ ಮೂಲಸಿದ್ಧಾಂತಗಳು,' 'ಜನತೆಯ ಮೂರು ತತ್ವಗಳು' ಮತ್ತು ನಮ್ಮ ಪಕ್ಷದ ಮೊದಲ ರಾಷ್ಟ್ರೀಯ ಅಧಿವೇಶನದ ಘೋಷಣೆ-ಇವುಗಳನ್ನು ನಮ್ಮ ಎಲ್ಲ ಸಂಗಾತಿಗಳೂ ಅನುಸರಿಸಲಿ. ಅವುಗಳ ಸಾಧನೆಗಾಗಿ ಮನಃಪೂರ್ವಕವಾಗಿ ಶ್ರಮಿಸಲಿ. ಎಲ್ಲಕ್ಕಿಂತ ಹೆಚ್ಚಾಗಿ ರಾಷ್ಟ್ರೀಯ ಮಹಾಧಿವೇಶನವನ್ನು ಕರೆಯಬೇಕೆಂಬ, ಅವಮಾನಕರ ಒಡಂಬಡಿಕೆಗಳನ್ನು ತೊಡೆದು ಹಾಕಬೇಕೆಂಬ, ನಮ್ಮ ಇತ್ತೀಚಿನ ಘೋಷಣೆಗಳೆಲ್ಲಾ ಯಾವ ವಿಲಂಬವೂ ಇಲ್ಲದೆ ಕಾರ್ಯಗತವಾಗಲಿ. ಇದೀಗ ಹಾರ್ದಿಕವಾಗಿ ನಾನು ನಿಮಗೀಯುವ ಆದೇಶ.

ಸೂನ್ ಯಾತ್-ಸೆನರ ನಿಧನದ ಬಳಿಕ ಈ ಉಯಿಲು ರಾಷ್ಟ್ರೀಯ ಪ್ರಣಾಳಿಕೆಯ ಮಹತ್ವವನ್ನು ಪಡೆಯಿತು. ರಾಷ್ಟ್ರದಾದ್ಯಂತ ಪ್ರತಿ ಸೋಮವಾರ, ಪ್ರತಿಯೊಂದು ಶಾಲೆಯಲ್ಲೂ ಸರಕಾರಿ ಕಛೇರಿಯಲ್ಲೂ ಆ ಉಯಿಲನ್ನು ಶ್ರದ್ಧೆಯಿಂದ ಪಠಿಸುವುದು ಆಚರಣೆಗೆ ಬಂತು.

ಚಿಯಾಂಗ್ ಕೈ-ಷೇಕ್, ಸುಸಜ್ಜಿತ ಸೇನೆಯ ನೆರವಿನಿಂದ ಇನ್ನೂ ಗಣರಾಜ್ಯದಿಂದ ಬೇರೆಯಾಗಿದ್ದ ಉತ್ತರ ಚೀನವನ್ನು-ಅದರ ಕೇಂದ್ರವಾದ ಪೀಕಿಂಗನ್ನು ವಶಪಡಿಸಿಕೊಂಡರು.

ಚೀನದಲ್ಲಿ ವಿದೇಶಿಯರು, ನಾನಾ ಕಾರಣಗಳಿಂದ, ಭಾರತದಲ್ಲಿ ಮಾಡಿದಂತೆ ಪ್ರದೇಶಗಳನ್ನು ಆಕ್ರಮಿಸಿಕೊಂಡಿರಲಿಲ್ಲ. ಸರಕಾರಗಳನ್ನು ಸ್ಥಾಪಿಸಿರಲಿಲ್ಲ. ಆದರೂ ಅವರ ರಕ್ಷಣೆಗಾಗಿ ೪೪,೦೦೦ ವಿದೇಶಿ ಸೈನಿಕರು ಚೀನದಲ್ಲಿದ್ದರು. ಚೀನ ಸ್ವತಂತ್ರವಾಗಿ ಸಮಗ್ರತೆಯನ್ನು ಸಾಧಿಸಿದರೂ ಪರಕೀಯರ ಪರೋಕ್ಷ ಆಕ್ರಮಣ ಮತ್ತೂ ಉಳಿಯಿತು.

೧೯೨೭ ರಲ್ಲಿ ಚಿಯಾಂಗ್ ಕೈ-ಷೇಕ್, ಸೂನ್ ಯಾತ್-ಸೆನರ ವಿಧವೆ ತಂಗಿಯನ್ನು-ಬುದ್ಧಿಶಾಲಿನಿಯೂ ಸುಂದರಿಯೂ ಆದ ಮೇ ಲಿಂಗ್ ಸೂಂಗಳನ್ನು-ಮದುವೆಯಾದರು. ಆ ಸಂದರ್ಭದಲ್ಲಿ ಕ್ರೈಸ್ತಮತಕ್ಕೆ ಮತಾಂತರ ಹೊಂದಿದರು. ಅಂದಿನಿಂದ ಆತನ ಬದುಕಿನಲ್ಲೂ ಚೀನಾ ಹಾಗೂ ಪಾಶ್ಚಾತ್ಯ ರಾಷ್ಟ್ರಗಳ ನಡುವಣ ಸಂಬಂಧದಲ್ಲೂ ಹೊಸ ಅಧ್ಯಾಯ ಆರಂಭವಾಯಿತು.

ಚಿಯಾಂಗ್ ಕೈ-ಷೇಕ್ ಸೂನ್ ಯಾತ್-ಸೆನರ ಸಮಾಧಿಯ ಒಳಗೆ ಹೋಗಿ ಆ ಪ್ರೇತಾತ್ಮವನ್ನು ಕಂಡು "ಚೀನದ ಸಾರ್ವಭೌಮತ್ವವನ್ನು ಈಗ ಪೂರ್ಣಗೊಳಿಸಿದ್ದೇನೆ" ಎಂದು ವರದಿ ಮಾಡಿದರು.

ಚೀನೀ ಕಮ್ಯೂನಿಸ್ಟ್ ಪಕ್ಷ ಆ ವೇಳೆಗಾಗಲೇ ಬಲಗೊಂಡಿದ್ದು ರಾಷ್ಟ್ರೀಯ ಪಕ್ಷವಾದ ಕೂಮಿಂಟಾಂಗಿಗೆ ಸವಾಲು ಹಾಕತೊಡಗಿತ್ತು. ಆದರ್ಶದ ಬೆನ್ನುಹತ್ತಿದ ವಿದ್ಯಾವಂತ ಯುವಕರೂ ತಮ್ಮ ಜೀವನ ಸ್ಥಿತಿಯನ್ನು ಸುಧಾರಿಸಬಯಸಿದ ಕಾರ್ಮಿಕರೂ ಕಮ್ಯೂನಿಸ್ಟ್ ಪಕ್ಷಕ್ಕೆ ಆಕರ್ಷಿತರಾದರು. ಅದರ ಕಾರ್ಯಕರ್ತರು ರೈತರನ್ನು ಸಂಘಟಿಸಿದರು, ಸೇನೆಯನ್ನು ಕಟ್ಟಿದರು. ದಕ್ಷಿಣದ ಕಿಯಾಂಗ್ಸಿಯಲ್ಲಿ ಕೆಲ ಪ್ರದೇಶಗಳು, ಸೂನ್ ಯಾತ್–ಸೆನರ ಕ್ರಾಂತಿಕಾರಿ ವಿಚಾರಗಳಿಗೆ ತಾವೇ ನಿಜವಾದ ವಾರಸುದಾರರೆಂದು ಸಾರಿದ ಕಮ್ಯೂನಿಸ್ಟರ ಪ್ರಭಾವಕ್ಕೊಳಗಾದುವು. ಅಲ್ಲಿ ಅವರು ತಮ್ಮ ಸರಕಾರವನ್ನು ರಚಿಸಿದರು.

ಅದು ಅಂತರ್ಯುದ್ಧದ ಆರಂಭ.

ಕೂಮಿಂಟಾಂಗ್ ಸೇನೆಗಳು ಕಮ್ಯೂನಿಸ್ಟರ ನಿರ್ಮೂಲನಕ್ಕಾಗಿ ದೀರ್ಘ ಹೋರಾಟವನ್ನು ಆರಂಭಿಸಿದುವು.

ಕಮ್ಯೂನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿಯಾದ ಲಿ ಲಿ–ಸಾನ್ ಈಗ ಪದಚ್ಯುತನಾದರು. ಯೋಗ್ಯ ನಾಯಕತ್ವವನ್ನು ಅವರು ಕೊಡಲಿಲ್ಲವೆಂದು, ಆತ ದ್ರೋಹಿಯೆಂದು, ಚೀನೀ ಕಮ್ಯೂನಿಸ್ಟ್ ಪಕ್ಷ ಸಾರಿತು. ಮಾವೋತ್ಸೆ–ತುಂಗರನ್ನು ಹೊಸ ನಾಯಕನಾಗಿ ಆರಿಸಿತು. ದಕ್ಷಿಣ ಚೀನಾದಲ್ಲಿ ಸರಕಾರ ಸ್ಥಾಪಿಸಿದ್ದ ಕಿಯಾಂಗ್ಸಿಯನ್ನು ಅವರು ತ್ಯಜಿಸದೆ ಅನ್ಯಗತಿ ಇರಲಿಲ್ಲ. ಮಾವೋ ಮತ್ತು ಸೇನಾನಿ ಚುಟೆಯ ನಾಯಕತ್ವದಲ್ಲಿ ಚರಿತ್ರಾರ್ಹವಾದ 'ದೀರ್ಘ ಪಯಣ'ವೊಂದು ಆರಂಭವಾಯಿತು. ಕೂಮಿಂಟಾಂಗ್ ಸೇನೆಗಳ ಕೈಗೆಟಕದ ವಾಯುವ್ಯ ಚೀನಾದಲ್ಲಿ ತಮ್ಮ ಸ್ವರ್ಣಭೂಮಿಯನ್ನು ಸ್ಥಾಪಿಸಲೆಂದು ಚೀನೀ ಕಮ್ಯೂನಿಸ್ಟರು ಯಾತ್ರೆ ಕೈಕೊಂಡರು. ಅವರದು ಹರಕಲು ಸಮವಸ್ತ್ರದಲ್ಲೂ ಬರಿಕಾಲಲ್ಲೂ ನಡೆವ ರೈತ ಸೇನೆ. ದಾರಿಯುದ್ದಕ್ಕೂ ರೈತರು ಅದನ್ನು ಸೇರುತ್ತಿದ್ದರು. ಕೆಲವರು ಓಡಿ ಹೋಗುತ್ತಿದ್ದರು ಹೊಸಬರು ಆ ಸ್ಥಾನವನ್ನು ತುಂಬುತ್ತಿದ್ದರು. ಕೆಲ ವೇಳೆ ಅದು ೨೦,೦೦೦ ದಷ್ಟು ದೊಡ್ಡ ಸಂಖ್ಯೆಯ ಸೈನ್ಯವಾಗುತ್ತಿತ್ತು. ಹದಿನೆಂಟು ಪರ್ವತಶ್ರೇಣಿಗಳನ್ನು ಹಾದು, ಇಪ್ಪತ್ತನಾಲ್ಕು ನದಿಗಳನ್ನು ದಾಟಿ, ದಾರಿಯುದ್ದಕ್ಕೂ ಇದಿರಾದ 'ಸಮರಪ್ರಭು'ಗಳೊಡನೆ ಕಾದಾಡುತ್ತ, ಎರಡು ವರ್ಷಗಳ ಅವಧಿಯಲ್ಲಿ ಎಂಟು ಸಾವಿರ ಮೈಲುಗಳ ದೂರವನ್ನು ಕ್ರಮಿಸಿ, ಆ ದಂಡು ಯೆನಾನ್ ಪ್ರಾಂತವನ್ನು ತಲುಪಿತು. ಆಗ ಅವರ ಸಂಖ್ಯೆ ೩೦,೦೦೦ ದಷ್ಟಿತ್ತು. ಅದೇ ಅವರ 'ಜನತಾ ಬಂಧವಿಮೋಚನಾ ಸೇನೆ,' ಅರ್ಥಾತ್ 'ಚೀನೀ ಕೆಂಪು ಸೇನೆ.'

ಅದು, ಜಪಾನು ಬಲಗೊಳ್ಳುತ್ತಲಿದ್ದ ಕಾಲ. ೧೮೯೫ ರಲ್ಲಿ ಚೀನವನ್ನೂ ೧೯೦೫ ರಲ್ಲಿ ರಷ್ಯವನ್ನೂ ಯುದ್ಧಗಳಲ್ಲಿ ಸೋಲಿಸಿದ್ದ ಆ ದೇಶ, ಬೃಹತ್ ಸಾಮ್ರಾಜ್ಯವೊಂದನ್ನು ಕಟ್ಟಲು ಹವಣಿಸುತ್ತಿತ್ತು. ಸ್ವತಂತ್ರ ಚೀನದ ಉದಯ ಅದಕ್ಕೆ ಸಹ್ಯವಾಗುವುದು ಶಕ್ಯವಿರಲಿಲ್ಲ.

ಮಂಚೂರಿಯಾದ ರೈಲು ವ್ಯವಸ್ಥೆಯಲ್ಲಿ ಜಪಾನಿಗೆ ಹೇಗೂ ಪಾಲು ಇತ್ತು. ರೈಲು ವ್ಯವಸ್ಥೆಯ ರಕ್ಷಣೆಗಾಗಿ ಸೈನಿಕರನ್ನು ಜಪಾನು ಅಲ್ಲಿ ನಿಲ್ಲಿಸಿತ್ತು.

೧೯೩೧ ರಲ್ಲಿ [ಸೆಪ್ಟೆಂಬರ್ ೧೮] ಜಪಾನು ಒಮ್ಮಿಂದೊಮ್ಮೆಲೆ ಮುಕ್ಡೆನ್ ಬಂದರನ್ನು ಆಕ್ರಮಿಸಿತು. ಚಿಯಾಂಗ್ ಕೈಷೇಕ್ ಯುದ್ಧ ವಿರಾಮಕ್ಕಾಗಿ ಸಹಿ ಹಾಕುತ್ತಿದ್ದಂತೆಯೇ ಚೀನದ ಪೂರ್ವ ಭಾಗದ ರೈಲು ವ್ಯವಸ್ಥೆಯ ಠಾಣೆಯಾದ ಹಾರ್ಬಿನನ್ನು ಜಪಾನು ವಶಪಡಿಸಿಕೊಂಡಿತು. ೧೯೩೨ ರ ವಸಂತಕಾಲ ಮುಗಿಯು ವುದರೊಳಗಾಗಿ ಜಪಾನು, ಮಂಚೂರಿಯವನ್ನು ಮಂಚು ಕುವೊ ಎಂಬ ಹೊಸ ಹೆಸರಲ್ಲಿ ಗಣರಾಜ್ಯವೆಂದು ಘೋಷಿಸಿತು. ಅಷ್ಟೇ ಅಲ್ಲ, ಚೀನದಲ್ಲಿ ಪದಚ್ಯುತ ನಾಗಿದ್ದ ಮಂಚು ದೊರೆ ಪು ಯಿಯನ್ನು ಆ ಗಣರಾಜ್ಯದ ನಾಯಕನನ್ನಾಗಿ ಮಾಡಿತು.

ಮೊದಲ ಲೋಕಮಹಾಯುದ್ಧದ ಬಳಿಕ ರೂಪುಗೊಂಡಿದ್ದ ರಾಷ್ಟ್ರಸಂಘ [ಲೀಗ್ ಆಫ್ ನೇಶನ್ಸ್] ಮಂಚು ಕುವೊಗೆ ಮನ್ನಣೆ ಕೊಡಲಿಲ್ಲ. ಜಪಾನು ರಾಷ್ಟ್ರ ಸಂಘದಿಂದಲೇ ಹೊರ ನಡೆದು ಸೆಟೆದುನಿಂತಿತು.

ಅಂತರ್ಯುದ್ಧವನ್ನು ಸಾರಿದ್ದ ಕಮ್ಯೂನಿಸ್ಟರನ್ನು ಹತ್ತಿಕ್ಕುವುದರಲ್ಲಿ ನಿರತ ನಾಗಿದ್ದ ಚಿಯಾಂಗ್ ಕೈಷೇಕ್ ಜಪಾನರನ್ನು ಯಶಸ್ವಿಯಾಗಿ ಪ್ರತಿಭಟಿಸಲು ಶಕ್ತರಾಗಲಿಲ್ಲ.

ಯೂರೋಪಿನಲ್ಲಿ ಚೆಕೊಸ್ಲೊವೇಕಿಯಾದ ಪತನವಾದಂತೆ, ಜಪಾನು [೧೯೩೮ ಅಕ್ಟೋಬರ್] ಚೀನದ ಹ್ಯಾಂಕೋ-ಕ್ಯಾಂಟನ್‌ಗಳನ್ನು ಕಬಳಿಸಿತು.

ಅದು, ಯುದ್ಧ ಘೋಷಣೆ ಇಲ್ಲದೆಯೇ ಜಪಾನು ಆರಂಭಿಸಿದ ದುರಾಕ್ರಮಣ.

ಚಿಯಾಂಗ್ ಕೈ-ಷೇಕ್ ತನ್ನ ರಾಜಧಾನಿಯನ್ನು ಯಾಂಗ್‌ಟ್ಸೆ ನದಿಯ ಮೇಲ್ಭಾಗದ ದಂಡೆಯಲ್ಲಿದ್ದ ಚುಂಕಿಂಗಿಗೆ ಸ್ಥಳಾಂತರಿಸಿದರು.

ಜಪಾನು ಚೀನೀ ಪ್ರಾಂತಗಳನ್ನು ಒಂದೊಂದಾಗಿ ವಶಪಡಿಸಿಕೊಳ್ಳುತ್ತ ಮುನ್ನಡೆಯಿತು.

ಯೂರೋಪಿನಲ್ಲಿ ಸರ್ವಾಧಿಕಾರಿಗಳಿಬ್ಬರು ಸ್ನೇಹಿತರಾಗಿ ಕೈ ಕುಲುಕಿದ್ದರು. ಸ್ಟಾಲಿನ್ ಮತ್ತು ಹಿಟ್ಲರ್, ಜರ್ಮನಿ-ಇಟಲಿ-ಜಪಾನುಗಳು ಅಕ್ಷಶಕ್ತಿಯೊಂದನ್ನು ಆಗಲೇ ರಚಿಸಿದ್ದುದರಿಂದ ರಷ್ಯವೂ ಜಪಾನೂ ಗೆಳೆಯರಾದಂತಾಯಿತು. ಇತರ ದೇಶಗಳ ಕಮ್ಯೂನಿಸ್ಟರು ಮಾಡಿದಂತೆ ಚೀನೀ ಕಮ್ಯೂನಿಸ್ಟ್ ಪಕ್ಷವೂ "ನಡೆಯು ತ್ತಿರುವುದು ಸಾಮ್ರಾಜ್ಯವಾದಿಗಳ ಯುದ್ಧ. ನಮಗೂ ಅದಕ್ಕೂ ಸಂಬಂಧವಿಲ್ಲ," ಎಂದು ಹೇಳಬೇಕಾಗಿತ್ತು. ಅದರ ಬದಲು, "ಮಾತೃಭೂಮಿಯ ರಕ್ಷಣೆಗಾಗಿ ಜಪಾನಿಗಿದಿರು ಚೀನೀಯರೆಲ್ಲ ಒಂದಾಗಬೇಕು," ಎಂದು ಚೀನೀ ಕಮ್ಯೂನಿಸ್ಟ್ ಪಕ್ಷ ಕರೆ ಕೊಟ್ಟಿತು. ವಾಯುವ್ಯ ಚೀನಾದಲ್ಲಿ ತಾನು ಸ್ಥಾಪಿಸಿದ್ದ ರಾಜ್ಯವನ್ನು ಭದ್ರ

ಗೊಳಿಸುತ್ತ, ಕ್ರಮಕ್ರಮವಾಗಿ ವಿಸ್ತರಿಸುತ್ತ, ಮುನ್ನುಗ್ಗುತ್ತಿದ್ದ ಜಪಾನೀ ತುಕಡಿಗಳನ್ನು ತಡೆಯುವುದಕ್ಕೋಸ್ಕರ ತನ್ನ ಕೆಂಪು ಸೇನೆಯನ್ನು ಬಳಸಿತು. ಮುಚ್ಚುಮರೆಯಲ್ಲಿ ಅವಿತು ನಿಂತು ನಡೆಸುವ ಗೆರಿಲಾ ಯುದ್ಧ ತಂತ್ರವನ್ನು ರೂಪಿಸಿತು.

ತಮ್ಮ ಕನಸಿನ ರಾಜ್ಯವನ್ನು ಕಟ್ಟುವುದಕ್ಕೆ ಮೊದಲು, ಜಪಾನೀ ಆಕ್ರಮಣದಿಂದ ಚೀನವನ್ನು ಬಂಧವಿಮುಕ್ತಗೊಳಿಸುವುದು ಅಗತ್ಯವೆಂದು ಚೀನೀ ಕಮ್ಯೂನಿಸ್ಟ್ ಪಕ್ಷಕ್ಕೆ ಕಂಡಿತು.

೧೧

ವಿದೇಶಿಯರ ಆಕ್ರಮಣವನ್ನು ಇದಿರಿಸುವುದಕ್ಕೋಸ್ಕರ ತಮ್ಮ ದೇಶವನ್ನು ಸ್ವತಂತ್ರಗೊಳಿಸಿರೆಂದು ಭಾರತೀಯರು ಕೇಳಿದ್ದು ಬ್ರಿಟಿಷರ ದೃಷ್ಟಿಯಲ್ಲಿ ಘೋರ ಅಪರಾಧವೆನಿಸಿತು. 'ನಮ್ಮ ದೇಶವನ್ನು ನಾವು ರಕ್ಷಿಸಿಕೊಳ್ಳುತ್ತೇವೆ. ನೀವಿಲ್ಲಿಂದ ಕಾಲ್ತೆಗೆಯಿರಿ!' ಎಂದು ನುಡಿದುದು ರಾಜದ್ರೋಹವಾಯಿತು.

ಸಾಮ್ರಾಜ್ಯ ವಿಸರ್ಜನೆ ಪೌರೋಹಿತ್ಯ ವಹಿಸುವವರು ತಾವಲ್ಲ–ಎಂದು ಗುಡುಗಿದ ಚರ್ಚಿಲ್ಲರ ನೇತೃತ್ವದಲ್ಲಿ ಬ್ರಿಟಿಷ್ ಸರಕಾರ, ತನ್ನ ಮಾರಣಾಸ್ತ್ರಗಳನ್ನೇ ನೆಚ್ಚಿತು. ಆಗಸ್ಟ್ ೯ ರ ನಸುಕಿನಲ್ಲಿ ರಾಷ್ಟ್ರನಾಯಕರೆಲ್ಲ ಬಂಧಿಸಲ್ಪಟ್ಟರು. ಈ ವಾರ್ತೆ ಕಾಳ್ಗಿಚ್ಚಿನಂತೆ ದೇಶದಾದ್ಯಂತ ಹಬ್ಬಿತು. ಬೆಳಗ್ಗೆ ನಿದ್ದೆಯಿಂದೆದ್ದ ಜನತೆಯ ಕಿವಿಗೆ ಬಿದ್ದುದು, ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಧ್ವನಿ. ಆವರೆಗೂ ಅದುಮಿ ಹಿಡಿದಿದ್ದ ಜನಸಮುದಾಯದ ಮಾನಸಿಕ ಸಂಕಟ ಕಟ್ಟೆಯೊಡೆದು ಘೋರ್ಗರೆಯುತ್ತ ಹರಿಯಿತು. ಸ್ವಾತಂತ್ರ್ಯದ ಸುಂಟರಗಾಳಿ ಭಾರತೀಯ ಜೀವನವನ್ನು ಬುಡಮೇಲು ಮಾಡುತ್ತ ದಿಕ್ಕಿನಿಂದ ದಿಕ್ಕಿಗೆ ಬೀಸಿತು. ಹೋರಾಟವನ್ನು ಹೇಗೆ ಆರಂಭಿಸಬೇಕು ? ಯಾವ ರೀತಿ ಮುನ್ನಡೆಸಬೇಕು ? ಯಾರಿಗೂ ತಿಳಿಯದು–'ಮಾಡು ಇಲ್ಲವೆ ಮಡಿ!' ಎಂಬುದೊಂದೇ ಮಹಾದಂಡನಾಯಕ ನೀಡಿದ್ದ ಸಂದೇಶ.

ದೇಶಪ್ರೇಮಿಗಳು ಆ ಸಂದೇಶಕ್ಕೆ ತಮಗಿಷ್ಟಬಂದಂತೆ ವ್ಯಾಖ್ಯೆ ನೀಡುತ್ತ ಹೋರಾಡಿದರು. ಶಾಂತರೀತಿಯ ಹರತಾಳಗಳ ಜೊತೆಗೆ ವಿಧ್ವಂಸಕ ಕಾರ್ಯಗಳೂ ನಡೆದುವು. ಅನೇಕ ಸ್ಥಳಗಳಲ್ಲಿ ಜನತೆ ಪ್ರತಿ ಸರಕಾರವನ್ನು ಸ್ಥಾಪಿಸಿತು.

ಆ ಕಾಲದಲ್ಲಿ ಸಾಮ್ರಾಜ್ಯವಾದಿ ಆಡಳಿತಗಾರರು ಕೈಕೊಂಡ ದಬ್ಬಾಳಿಕೆಯ ಕ್ರಮಗಳು ಮೃಗೀಯವಾಗಿದ್ದುವು. ಬರಿಯ ಲಾಠಿಗಳ ಕಾಲಕಳೆದು ಬಂದೂಕುಗಳಿಗೆ ಅಗ್ರಸ್ಥಾನ ದೊರೆತಿತ್ತು. ಸಂಯುಕ್ತ ಪ್ರಾಂತದ ಬಾಲಿಯಾದಲ್ಲಿ ವಿಮಾನದಿಂದ ಮೆಶಿನ್‌ಗನ್ ಪ್ರಯೋಗಿಸಿ ಜನರ ಮೇಲೆ ಗುಂಡಿನ ಮಳೆಗರೆಯಲಾಯಿತು. ಬಂಗಾಳದ ಮಿಡ್ನಾಪುರದಲ್ಲಿ ಮಿಲಿಟರಿ ದಬ್ಬಾಳಿಕೆ ಹೊಸದಾಖಲೆಗಳನ್ನು ಸ್ಥಾಪಿಸಿತು. ಮಧ್ಯಪ್ರಾಂತದ ಅಷ್ಟಿ ಚಿಮೂರುಗಳು ಭೂಮಿಯ ಮೇಲಣ ನರಕವಾದುವು.

ಚಾಟಿ ಏಟಿನಿಂದ ಹಿಡಿದು ಕೊಲ್ಲುವವರೆಗೂ ಬಗೆಬಗೆಯ ದಂಡನೆಗಳನ್ನು ವಿಧಿಸಲಾಯಿತು. ಕಾಶಿಯ ಹಿಂದೂ ವಿಶ್ವವಿದ್ಯಾಲಯವನ್ನು ಮುಚ್ಚಿ ಪೊಲೀಸರು ಅದನ್ನು ಆಕ್ರಮಿಸಿಕೊಂಡರು. ಪಟ್ಟಣಗಳ ಮೇಲೂ ಹಳ್ಳಿಗಳ ಮೇಲೂ ಪುಂಡಗಂದಾಯಗಳು ವಿಧಿಸಲ್ಪಟ್ಟವು. ಮಾರಣಹೋಮದ ಉಸಿರುಕಟ್ಟಿಸುವ ಹೊಗೆ ದೇಶವನ್ನೆಲ್ಲಾ ವ್ಯಾಪಿಸಿತು.

ಗಾಂಧೀಜಿಗಾಗಿ ಪೂನಾದ ಆಗಾಖಾನರ ಅರಮನೆಯನ್ನು ಸೆರೆಮನೆಯಾಗಿ ಮಾರ್ಪಡಿಸಲಾಗಿತ್ತು. ಜವಾಹರಲಾಲರು ಮತ್ತಿತರರನ್ನು ಅಹ್ಮದ್ ನಗರದ ದುರ್ಗದೊಳಗಿಡಲಾಗಿತ್ತು. ಮೂರು ವಾರಗಳ ತನಕ ಈ ಮುಖಂಡರಿಗೆ ಹೊರ ಜಗತ್ತಿನೊಡನೆ ಯಾವ ಸಂಪರ್ಕವೂ ಇರಲಿಲ್ಲ.

ಭಾರತವನ್ನೊಂದು ವಿಸ್ತೃತ ಯುದ್ಧ ಶಿಬಿರವಾಗಿ ಮಾರ್ಪಡಿಸಿದ್ದ ಬ್ರಿಟಿಷರಿಗೆ ಭಾರತೀಯ ಜನತೆಯ ಹೋರಾಟವನ್ನು ಹತ್ತಿಕ್ಕುವುದು ಪ್ರಯಾಸದಾಯಿತಾದರೂ ದುಸ್ಸಾಧ್ಯವಾಗಲಿಲ್ಲ. ಆ ಕಾರ್ಯದಲ್ಲಿ ಅವರಿಗೆ ರಾಜನಿಷ್ಠರೂ ಮಹಾತ್ವಾಕಾಂಕ್ಷೆಯ ಮುಸ್ಲಿಂಲೀಗ್ ನಾಯಕರೂ ರಷ್ಯದ ಮೇಲೆ ಹಿಟ್ಲರನ ದಾಳಿ ನಡೆದೊಡನೆಯೇ 'ಯುದ್ಧದ ಸ್ವರೂಪ ಬದಲಾಯಿಸಿತು, ಇನ್ನಿದು ಜನತಾ ಯುದ್ಧ' ಎಂದು ಸಾರಿದ ಭಾರತೀಯ ಕಮ್ಯೂನಿಸ್ಟರೂ ನೆರವಾದರು.

ಸೆರೆಮನೆಯಲ್ಲಿ ೧೯೪೪ರ ಫೆಬ್ರವರಿ ೨೨ ರಂದು ಗಾಂಧೀಜಿಯ ಪತ್ನಿ ಕಸ್ತೂರಿ ಬಾ ಕಾಲವಾದರು. ಅನಂತರ ಮಹಾತ್ಮರ ಆರೋಗ್ಯ ಕೆಟ್ಟು, ದೇಹಸ್ಥಿತಿ ಕಾತರಕ್ಕೆ ಕಾರಣವಾಗಲು, ಬ್ರಿಟಿಷ್ ಸರಕಾರ ಅವರನ್ನು ಬಿಡುಗಡೆಮಾಡಿತು.

ಜಾಗತಿಕ ರಂಗದಲ್ಲಿ ಮಾರ್ಪಾಟುಗಳಾಗತೊಡಗಿದ್ದುವು. ಈಗ ಮಿತ್ರ ರಾಷ್ಟ್ರಗಳಾಗಿದ್ದ ಅಮೆರಿಕ - ಬ್ರಿಟನ್ - ಫ್ರಾನ್ಸ್ - ರಷ್ಯಗಳ ಕೈ ಮೇಲಾಗುತ್ತಲಿತ್ತು. ರಷ್ಯದ ಹಿಮಭೂಮಿಯ ಮೇಲೆ ಹಿಟ್ಲರನ ಶಕ್ತಿ ಜರ್ಜರಿತವಾಗಿತ್ತು. ಜಪಾನಿನ ಚೈತ್ರ ಯಾತ್ರೆಯೂ ಮುಗ್ಗರಿಸಿತ್ತು.

ಬ್ರಿಟಿಷರ ಸೆರೆಯಿಂದ ತಪ್ಪಿಸಿಕೊಂಡು ಪರದೇಶಕ್ಕೆ ಹೋಗಿದ್ದ ಸುಭಾಷ ಬೋಸರು, ಯೂರೋಪಿನ ದಾರಿಯಾಗಿ ಬಂದು ಸಿಂಗಪುರವನ್ನು ತಲಪಿದರು. ಜಪಾನರಿಗೆ ಸೆರೆಸಿಕ್ಕಿದ್ದ ಭಾರತೀಯ ಸೈನಿಕರನ್ನೆಲ್ಲ ಒಂದುಗೂಡಿಸಿ 'ಆಜಾದ್ ಹಿಂದ್ ಸೇನೆ'ಯನ್ನು ಅವರು ನಿರ್ಮಿಸಿದ್ದರು. ಬರ್ಮಾದ ದಾರಿಯಾಗಿ ಭಾರತದ ಗಡಿಯತ್ತ ಆ ಸೈನ್ಯ ಸಾಗಿತ್ತು. "ಚಲೋ ದಿಲ್ಲಿ!" "ಜಯಹಿಂದ್!" ಘೋಷಗಳಿಂದ ಭಾರತದ ಪೂರ್ವದಿಕ್ಕು ಸ್ವಲ್ಪಕಾಲ ಪ್ರತಿಧ್ವನಿಸಿತು. ಆದರೆ, ಪ್ರತಿಕೂಲ ಪರಿಸ್ಥಿತಿಯ ಒತ್ತಡಕ್ಕೊಳಗಾಗಿ ಆ ಧ್ವನಿ ಕ್ರಮೇಣ ಅಡಗಿತು.

ಬಿಕ್ಕಟ್ಟಿನ ಪರಿಸ್ಥಿತಿಯಿಂದ ದೇಶದ ಜನತೆಯನ್ನು ಪಾರುಮಾಡುವುದಕ್ಕೋಸ್ಕರ ಮಹಾತ್ಮಾ ಗಾಂಧಿಯವರು ಬ್ರಿಟಿಷ್ ಸರಕಾರದೊಡನೆ ಮಾತುಕತೆ ಆರಂಭಿಸಿದರು. ಹಿಂದೂ-ಮುಸಲ್ಮಾನರ ಐಕ್ಯಕ್ಕಾಗಿಯೂ ಯತ್ನಿಸಿದರು. ಆದರೆ

ಲೀಗ್ ನಾಯಕ ಜಿನ್ನಾ, ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಮುಂದಿಟ್ಟು, ಪ್ರತ್ಯೇಕ ರಾಷ್ಟ್ರಕ್ಕಾಗಿ ಹೋರಾಟ ನಡೆಸುವೆನೆಂದು ಗುಡುಗಿದರು.

ಹಿಟ್ಲರ್ ಮುಸೋಲಿನಿಯರ ಅವಸಾನದೊಡನೆ ಯೂರೋಪಿನ ಯುದ್ಧ ಮುಕ್ತಾಯವಾಗಿ, ಇಂಗ್ಲೆಂಡಿನಲ್ಲಿ ಸಾರ್ವತ್ರಿಕ ಚುನಾವಣೆಗೆ ಸಿದ್ಧತೆಗಳು ನಡೆದುವು. ಆ ಚುನಾವಣೆಯ ರಂಗದಲ್ಲಿ ಭಾರತದ ಸಮಸ್ಯೆಗೆ ಪ್ರಾಧಾನ್ಯ ದೊರೆಯಿತು.

ಇಂಗ್ಲೆಂಡಿನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂತು. ಭಾರತಕ್ಕೋಸ್ಕರ ರಾಜ್ಯಾಂಗ ರಚನಾ ಸಭೆಯೊಂದನ್ನು ರೂಪಿಸುವ ಉದ್ದೇಶವನ್ನು ಮುಂದಿಟ್ಟು, ಈ ದೇಶದಲ್ಲಿ ಚುನಾವಣೆ ನಡೆಸಲು ಬ್ರಿಟಿಷ್ ಪ್ರಧಾನಿ ಆಟ್ಲಿ ನಿರ್ಧರಿಸಿದರು, ಅದಕ್ಕೂ ಮುನ್ನ ಬಿಡುಗಡೆಹೊಂದಿದ್ದ ರಾಷ್ಟ್ರ ನಾಯಕರ ದೇಶದ ಸ್ವಾತಂತ್ರ್ಯ ಶಕ್ತಿಗಳನ್ನು ಕ್ರೋಡೀಕರಿಸುತ್ತ ಚುನಾವಣೆಯ ಹೋರಾಟಕ್ಕೆ ಸಿದ್ಧರಾದರು.

ಕೇಂದ್ರ ಹಾಗೂ ಪ್ರಾಂತಿಕ ಶಾಸನಸಭೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸು ಗಮನಾರ್ಹ ವಿಜಯವನ್ನು ಗಳಿಸಿತು.

ದೇಶದ ರಾಜಕೀಯ ಪರಿಸ್ಥಿತಿ ತ್ವರಿತಗತಿಯಿಂದ ಮಾರ್ಪಡಲು ಕಾರಣವಾದೊಂದು ಘಟನೆ, ೧೯೪೬ರ ಫೆಬ್ರವರಿ ೧೮ರಂದು ಮುಂಬಯಿಯಲ್ಲಿ ಸಂಭವಿಸಿತು. ಅದು ನಾವಿಕರ ಬಂಡಾಯ. ತಮ್ಮನ್ನು ನಡೆಸಿಕೊಳ್ಳಲಾಗುತ್ತಿದ್ದ ರೀತಿಯ ವಿಷಯದಲ್ಲಿ ಬಹಳ ದಿನಗಳಿಂದ ಭಾರತೀಯ ನಾವಿಕರಲ್ಲಿ ಅಸಮಾಧಾನವಿದ್ದಿತು. ಈಗ ಒಮ್ಮೆಲೆ ಬೆಂಕಿ ಭುಗಿಲ್ಲೆಂದಿತು. ನೌಕಾಪಡೆಯ ಬಹುಭಾಗ ಬಂಡಾಯಗಾರರ ವಶವಾಯಿತು. ಕರಾಚಿ, ಕಲ್ಕತ್ತಾ, ಮದ್ರಾಸುಗಳು ಮುಂಬಯಿಯ ಮೇಲ್ಪಂಕ್ತಿಯನ್ನು ಅನುಸರಿಸಿದುವು. ಎಲ್ಲಾ ನೌಕಾ ಕೇಂದ್ರಗಳಲ್ಲೂ ಮಿಲಿಟರಿ ಪೋಲೀಸರು ಹಾಗೂ ನಾವಿಕರ ನಡುವೆ ಘರ್ಷಣೆಗಳಾದುವು.

ನೌಕಾದಳದಿಂದ ವಿಮಾನದಳಕ್ಕೂ ಬಂಡಾಯದ ಬೆಂಕಿ ಹಬ್ಬಿತು.

೧೮೫೭ರ ಅನಂತರ ಇಂಥ ಅನುಭವ ಆವರೆಗೆ ಬ್ರಿಟನ್ನಿಗೆ ಆಗಿರಲಿಲ್ಲ. ತನ್ನ ಆಧಾರ ಸ್ತಂಭಗಳೇ ಕಳಚಿಬೀಳತೊಡಗಿದ ಆ ಘಳಿಗೆಯಲ್ಲಿ ಬ್ರಿಟಿಷ್ ಸರಕಾರ ಅಧೀರವಾಯಿತು.

ನಾವಿಕರ ಬಂಡಾಯದ ದಿನವೇ ರಾಜಕೀಯ ಅಧಿಕಾರದ ಹಸ್ತಾಂತರದ ಬಗೆಗೆ ಸಂಧಾನ ನಡೆಸುವುದಕ್ಕೋಸ್ಕರ ತನ್ನ ಮಂತ್ರಿಮಂಡಲದ ನಿಯೋಗವೊಂದನ್ನು ಕಳುಹುತ್ತಿರುವುದಾಗಿ ಬ್ರಿಟಿಷ್ ಸರಕಾರ ಘೋಷಿಸಿತು. ಇತ್ತ ರಾಷ್ಟ್ರೀಯ ನಾಯಕರು ಮಧ್ಯೆ ಪ್ರವೇಶಿಸಿದ ಬಳಿಕ, ನೌಕಾಪಡೆ ಹಾಗೂ ವಿಮಾನದಳಗಳ ಬಂಡಾಯ ಕೊನೆಗೊಂಡಿತು.

ದ್ವಿತೀಯ ಲೋಕ ಮಹಾಯುದ್ಧದ ಅನಂತರ ಬ್ರಿಟನ್ನು ಹಲ್ಲುಗಳುದುರಿದ ದುರ್ಬಲಸಿಂಹವಾಗಿತ್ತು. ತನ್ನ ಸಾಮ್ರಾಜ್ಯದ ಮೇಲೆ ಸೂರ್ಯನು ಅಸ್ತಂಗತ

ನಾಗುವ ಘಳಿಗೆ ಸನ್ನಿಹಿತವಾಯಿತೆಂಬುದನ್ನು ಇಂಗ್ಲೆಂಡು ಮನಗಂಡಿದ್ದರೂ ಆ ಮುಚ್ಚಂಜೆಯ ಹೊತ್ತಿನಲ್ಲೂ ಭಾರತೀಯ ರಾಷ್ಟ್ರೀಯವಾದದೊಡನೆ ಸ್ನೇಹಭಾವದಿಂದ ನಡೆದುಕೊಳ್ಳಲು ಅದು ಸಿದ್ಧವಿರಲಿಲ್ಲ. ಬ್ರಿಟಿಷರ ಧೋರಣೆಯಿಂದ ಉತ್ತೇಜಿತರಾದ ಜಿನ್ನಾ, ಹೆಚ್ಚು ಹೆಚ್ಚು ಉದ್ಧಟರಾಗಿ ವರ್ತಿಸಿದರು.

ಹೊಸ ವೈಸರಾಯರಾಗಿ ನೇಮಕಗೊಂಡು ಭಾರತಕ್ಕೆ ಆಗಮಿಸಿದ ಲಾರ್ಡ್ ಮೌಂಟ್ ಬ್ಯಾಟನ್ನರು ದೇಶದ ಮೇಲಿನ ಅಧಿಕಾರದ ಹಸ್ತಾಂತರಕ್ಕೆ ಸಿದ್ಧರಾಗಿಯೇ ಬಂದಿದ್ದರು. ಆದರೆ ರಾಷ್ಟ್ರೀಯ ಅನೈಕ್ಯ ಆ ಬಗೆಯ ಹಸ್ತಾಂತರಕ್ಕೆ ತಡೆಬಂಡೆಯಾಗಿತ್ತು. ಪಾಕಿಸ್ತಾನದ ನಿರ್ಮಾಣಕ್ಕೆ ಒಪ್ಪಿಗೆ ಈಯುವ ಹೊರತು ಅನ್ಯಗತಿ ಇಲ್ಲವೆಂದು ಅವರಿಗೆ ತೋರಿತು. ರಾಷ್ಟ್ರೀಯ ಮುಖಂಡರ ಮನಸ್ಸಿನ ಮೇಲೂ ತಮ್ಮ ಈ ಭಾವನೆಯನ್ನು ಪ್ರತಿಬಿಂಬಿಸಲು ಅವರು ಯತ್ನಿಸಿದರು.

ದೇಶದ ವಿಭಜನೆಗಾಗಿ ಕತ್ತಿಯೊಂದನ್ನಾಗಲೇ ಕುಟಿಲ ರಾಜಕಾರಣಿಗಳು ಮಸೆದು ಸಿದ್ಧಗೊಳಿಸಿದ್ದರು. ಮತೀಯ ಗಲಭೆಗಳಿಂದ ದೇಶವಾಗಲೇ ರಕ್ತದ ಮಡುವಿನಲ್ಲಿ ಮಿಂದಿತ್ತು. ಆ ದುಃಸ್ಥಿತಿಯಿಂದ ರಾಷ್ಟ್ರವು ಪಾರಾಗಲು ವಿಭಜನೆಗೆ ಒಪ್ಪುವುದರ ಹೊರತಾಗಿ ಬೇರೆ ಯಾವ ದಾರಿಯೂ ರಾಷ್ಟ್ರೀಯ ನಾಯಕರಿಗೆ ತೋಚಲಿಲ್ಲ. ಶಸ್ತ್ರ ಚಿಕಿತ್ಸೆಗೆ ಅವರು ಸಮ್ಮತಿಯನ್ನಿತ್ತರು.

ಏಷ್ಯಾ ಖಂಡದಲ್ಲಿ ಎರಡು ಸ್ವತಂತ್ರ ರಾಷ್ಟ್ರಗಳ ಉದಯಕ್ಕೆ ರಂಗ ಸಿದ್ಧವಾಯಿತು.

೧೯೪೭ ಆಗಸ್ಟ್ ೧೪ ರ ಇರುಳು.

ಎಲ್ಲೆಲ್ಲೂ ಸಂತಸ, ಸಡಗರ–ಆನಂದದ ಅಣೆಕಟ್ಟು ಕೋಡಿ ಹರಿದು ಜನಮನವನ್ನು ತೋಯಿಸುತ್ತಿತ್ತು. ರಾಷ್ಟ್ರದ ಬದುಕಿನ ಅಮೃತ ಘಳಿಗೆಯನ್ನಿದಿರು ನೋಡುತ್ತ ಭಾರತೀಯ ಜನತೆ, ಅಮಿತೋತ್ಸಾಹದಿಂದ ನಲಿದಾಡಿತು.

ದೆಹಲಿಯ ಲೋಕಸಭಾ ಭವನದ ಸುತ್ತಲೂ ವಿಪರೀತ ಜನದಟ್ಟಣೆ. ಒಳಗೆ ರಾಜಕೀಯ ಅಧಿಕಾರದ ಹಸ್ತಾಂತರವನ್ನು ವೀಕ್ಷಿಸಲು ರಾಜ್ಯಾಂಗ ಸಭೆ ನೆರೆದಿತ್ತು. ಸಭಾ ಭವನದ ಒಳಸುತ್ತಿನಲ್ಲಿ ಮೇಲ್ಗಡೆ ಸಂದರ್ಶಕರ ಸ್ಥಾನಗಳೆಲ್ಲ ಸ್ತ್ರೀಪುರುಷರಿಂದ ತುಂಬಿದ್ದುವು.

ನಡುವಿರುಳು ಸಮೀಪಿಸುತ್ತಲಿದ್ದಂತೆ ಭವನದೊಳಗೆ ನೀರವತೆ ನೆಲೆಸಿತು.

ಅಧ್ಯಕ್ಷರಿಗೆದುರಾಗಿದ್ದ ಮೊದಲ ಸಾಲಿನಿಂದ, ಗೌರಾಂಗನಾದ, ತೆಳ್ಳಗಿನ, ಎತ್ತರದ, ನಡುವಯಸ್ಸು ದಾಟಿದ್ದರೂ ಯೌವನದ ಕಳೆಯಿದ್ದ ವ್ಯಕ್ತಿಯೊಂದು ಎದ್ದುನಿಂತಿತು. ಭಾವೋದ್ವೇಗವನ್ನು ಅಂಕೆಯೊಳಗಿರಿಸಿಕೊಂಡ ಮುಖಮುದ್ರೆ ಗಂಭೀರವಾಗಿತು.

ಆ ವ್ಯಕ್ತಿಯೇ ಜವಾಹರಲಾಲ ನೆಹರು.

ಮಾತನಾಡತೊಡಗಿದಂತೆ ಅವರ ಮುಖ ತೇಜಃಪುಂಜವಾಯಿತು. ಕಂಠಧ್ವನಿ ಕ್ರಮಶಃ ಚೈತನ್ಯ ಪಡೆಯಿತು. ಪದಗಳು ಅಲೆಯಲೆಯಾಗಿ ಎಲ್ಲೆಡೆಗಳಿಗೂ ಹರಿದುವು.

ಮಾತನಾಡತೊಡಗಿ ಜವಾಹರರೆಂದರು :

"ಮಧ್ಯ ರಾತ್ರಿಯ ಘಂಟೆ ಬಾರಿಸುತ್ತಲೇ ಜಗತ್ತು ನಿದ್ರಿಸುತ್ತಿರುವ ವೇಳೆಯಲ್ಲಿ, ಭಾರತವು ಜೀವ ತಳೆಯುವುದು, ಸ್ವತಂತ್ರವಾಗುವುದು. ಇತಿಹಾಸದಲ್ಲಿ ಎಂದಾದರೊಮ್ಮೆ ಬರುವ ಘಳಿಗೆಯೊಂದುಂಟು. ಅಂತಹ ಘಳಿಗೆಯಲ್ಲಿ ಹಳತಿನಿಂದ ಹೊಸತಿಗೆ ನಾವು ಪದಾರ್ಪಣ ಮಾಡುತ್ತೇವೆ. ಒಂದು ಯುಗ ಮುಕ್ತಾಯವಾಗುತ್ತದೆ; ದೀರ್ಘಕಾಲದಿಂದ ಅದುಮಿ ಹಿಡಿಯಲ್ಪಟ್ಟ ರಾಷ್ಟ್ರವೊಂದರ ಆತ್ಮ ನುಡಿಯತೊಡಗುತ್ತದೆ. ಈ ಗಂಭೀರ ಘಳಿಗೆಯಲ್ಲಿ ಭಾರತದ ಹಾಗೂ ಆಕೆಯ ಜನತೆಯ ಸೇವೆಗಾಗಿಯೂ ಇನ್ನೂ ಹಿರಿದಾದ ಮಾನವಕೋಟಿಯ ಒಳಿತಿಗಾಗಿಯೂ ಜೀವ ಸವೆಯಲು ಪ್ರತಿಜ್ಞೆ ಕೈಕೊಳ್ಳುವುದು ನ್ಯಾಯೋಚಿತವಾಗಿದೆ.

ಸ್ವಲ್ಪ ತಡೆದು ಜವಾಹರರು ಮುಂದುವರಿಸಿದರು :

"ನಮ್ಮ ಮುಂದಿರುವುದು ಸುಖಜೀವನದ ಅಥವಾ ವಿಶ್ರಾಂತಿಯ ಭವಿಷ್ಯತ್ತಲ್ಲ. ಅದು, ನಾವೆಷ್ಟೋ ಸಾರೆ ಸ್ವೀಕರಿಸುತ್ತ ಬಂದಿರುವ ಪ್ರತಿಜ್ಞೆಗಳೂ ಈ ದಿನ ಸ್ವೀಕರಿಸಲಿರುವ ಪ್ರತಿಜ್ಞೆಯೂ ಈಡೇರುವುದು ಸಾಧ್ಯವಾಗುವಂತೆ, ನಾವು ನಡೆಸಬೇಕಾಗಿರುವ ಅವ್ಯಾಹತ ಹೋರಾಟದ ಭವಿಷ್ಯತ್ತು. ಭಾರತದ ಸೇವೆಯೆಂದರೆ, ಸಂಕಟಪಡುತ್ತಿರುವ ಕೋಟ್ಯಾಂತರ ಜನರ ಸೇವೆ ಎಂದರ್ಥ. ದಾರಿದ್ರ್ಯ, ಅಜ್ಞಾನ, ರೋಗರುಜಿನ, ಅವಕಾಶಗಳ ಅಸಮಾನತೆ–ಇವುಗಳನ್ನೆಲ್ಲ ಕೊನೆಗಾಣಿಸುವುದು ಎಂದರ್ಥ."

ಕೊನೆಯಲ್ಲಿ ಅವರೆಂದರು :

"ಈ ಮಹಾಸಾಹಸದಲ್ಲಿ ವಿಶ್ವಾಸದಿಂದಲೂ ಸ್ಥೈರ್ಯದಿಂದಲೂ ನಮ್ಮ ಜೊತೆಗಾರರಾಗಬೇಕೆಂದು ನಾವು ಪ್ರತಿನಿಧಿಸುತ್ತಿರುವ ಜನತೆಗೆ ವಿನಂತಿ ಮಾಡುತ್ತಿದ್ದೇವೆ. ಕ್ಷೇತ್ರ ವಿಧ್ವಂಸಕ ಟೀಕೆಗಿದು ಸಮಯವಲ್ಲ. ದುರ್ಭಾವನೆಗೂ ಇತರರ ಮೇಲಿನ ದೋಷಾರೋಪಣೆಗೂ ಇದು ವೇಳೆಯಲ್ಲ. ಭಾರತದ ಎಲ್ಲ ಮಕ್ಕಳೂ ವಾಸಿಸಬಹುದಾದಂತಹ ಸ್ವತಂತ್ರ ಭಾರತದ ದಿವ್ಯ ಸೌಧವೊಂದನ್ನು ನಾವು ಕಟ್ಟಬೇಕಾಗಿದೆ."

ಗಡಿಯಾರದಲ್ಲಿ ಹನ್ನೆರಡು ಬಾರಿಸಿದಂತೆ ಮಂಗಳವಾದ್ಯಗಳೂ ಶಂಖಧ್ವನಿಗಳೂ ಮೊಳಗಿದುವು. ಜಗತ್ತು ನಿದ್ರಿಸುತ್ತಿದ್ದ ವೇಳೆಯಲ್ಲಿ, ಭಾರತ ಎಚ್ಚೆತ್ತು

ಜೀವತಳೆಯಿತು, ಸ್ವತಂತ್ರವಾಯಿತು. ಸುಮಾರು ಎರಡು ಶತಮಾನಗಳ ಕಾಲ ದಾಸ್ಯದ ಕುರುಹಾಗಿದ್ದ ಯೂನಿಯನ್ ಜಾಕ್ ಕೆಳಗಿಳಿದು, ತ್ರಿವರ್ಣ ಪತಾಕೆಯು ಧ್ವಜಸ್ತಂಭದ ಮೇಲೆ ಹಾರಾಡಿತು.

೧೨

ಯುದ್ಧ ಘೋಷಣೆ ಇಲ್ಲದೆಯೇ ಜಪಾನು ೧೯೩೭ರಲ್ಲಿ ಚೀನದ ಮೇಲೆ ನಡೆಸಿದ ಆಕ್ರಮಣ, ೧೯೪೫ರಲ್ಲಿ ಜಪಾನಿನ ಪರಾಭವದೊಡನೆ ಪರ್ಯವಸಾನವಾಯಿತು. ಅದರೊಡನೆ ಎರಡನೆಯ ಲೋಕ ಮಹಾಯುದ್ಧವೂ ಕೊನೆಗೊಂಡಿತು. ಜಪಾನಿಗಿದಿರಾದ ಎಂಟು ವರ್ಷಗಳ ಯುದ್ಧ ಕೊನೆಗೊಮ್ಮೆ ಮುಕ್ತಾಯವಾಯಿತೆಂದು ಚೀನೀ ಜನತೆ ಸಮಾಧಾನದ ನಿಟ್ಟುಸಿರು ಬಿಟ್ಟಿತಾದರೂ ತನ್ನ ದೇಶದೊಳಗಿನ ಆಂತರಿಕ ಪರಿಸ್ಥಿತಿ ಅಶಾಂತವಾಗಿಯೇ ಇದ್ದುದನ್ನು ಕಂಡು ಕಾತರಕ್ಕೊಳಗಾಯಿತು.

ನಾಜೀ ಜರ್ಮನಿಯ ಪತನವಾದೊಡನೆಯೇ ಜಪಾನಿನ ಸೋಲು ಸನ್ನಿಹಿತವಾಯಿತೆಂದು ಚಿಯಾಂಗರು ನಿರೀಕ್ಷಿಸಿದ್ದರು. ಸ್ಟಾಲಿನ್ನರ ಒಪ್ಪಿಗೆ ಪಡೆದು ಅಧ್ಯಕ್ಷ ಟ್ರೂಮನ್ ಜಪಾನಿನ ಹಿರೋಶಿಮಾ ನಾಗಸಾಕಿ ನಗರಗಳ ಮೇಲೆ ಹಾಕಿದ ಅಣುಬಾಂಬುಗಳು ಜಪಾನಿನ ಶರಣಾಗತಿಯನ್ನು ಶೀಘ್ರಗೊಳಿಸಿದುವು.

೧೯೪೫ರ ಆಗಸ್ಟಿನಲ್ಲಿ ರಷ್ಯಾದೊಡನೆ ಚಿಯಾಂಗರು ಒಂದು ಮೈತ್ರಿ ಒಡಂಬಡಿಕೆಗೆ ಸಹಿ ಹಾಕಿದರು.

ರಷ್ಯ-ಚೀನಗಳ ನಡುವೆ ಒಪ್ಪಂದನೇರ್ಪಟ್ಟುದರಿಂದ ಕೂಮಿಂಟಾಂಗ್ ಮತ್ತು ಕಮ್ಯೂನಿಸ್ಟ್ ಪಕ್ಷಗಳು ಪರಸ್ಪರ ಸಹಕರಿಸಬಹುದೆಂದು ಕೆಲವರು ನಿರೀಕ್ಷಿಸಿದ್ದರು. ಆ ನಿರೀಕ್ಷೆ ಸುಳ್ಳಾಯಿತು. ಇಪ್ಪತ್ತು ವರ್ಷಗಳಿಗೆ ಹಿಂದೆ ಕಮ್ಯೂನಿಸ್ಟರು ಕೂಮಿಂಟಾಂಗ್ ಪಕ್ಷವನ್ನೇ ಆಕ್ರಮಿಸಿಕೊಳ್ಳಲು ಹೇಗೆ ಯತ್ನಿಸಿದ್ದರೆಂಬುದನ್ನು ಚಿಯಾಂಗರು ಮರೆತಿರಲಿಲ್ಲ. ಕಮ್ಯೂನಿಸ್ಟ್ ಪಕ್ಷವನ್ನು ನಿರ್ಮೂಲ ಮಾಡದ ಹೊರತು ಕೂಮಿಂಟಾಂಗಿಗೆ ಉಳಿಗಾಲವಿಲ್ಲವೆಂಬುದು ಚಿಯಾಂಗರ ನಂಬುಗೆಯಾಗಿತ್ತು.

ಜಪಾನಿಗಿದಿರಾದ ಯುದ್ಧ ಮುಕ್ತಾಯವಾದಾಗ ಉತ್ತರ ಚೀನಾದ ಪ್ರಾಂತ್ಯಗಳಾದ ಷಾಟುಂಗ್, ಶೆನ್ಸಿ ಮತ್ತು ಸುಯ್‌ವಾನ್‌ಗಳು ಕಮ್ಯೂನಿಸ್ಟರ ವಶವಿದ್ದುವು. ಯಾಂಗ್‌ಟ್ಸೆ ನದಿಯ ದಕ್ಷಿಣ ಭಾಗ ಚಿಯಾಂಗರ ಅಧೀನದಲ್ಲಿತ್ತು. ಯುದ್ಧಾಂತ್ಯದಲ್ಲಿ ಮಂಚೂರಿಯದಿಂದ ರಷ್ಯನ್ ಪಡೆಗಳು ಹಿಂತಿರುಗಿದಾಗ ಆ ದೇಶ ಚೀನೀ ಕಮ್ಯೂನಿಸ್ಟರಿಗೆ ದೊರೆಯಿತು. ಜಪಾನರು ಕಟ್ಟಿದ್ದ ಔದ್ಯೋಗಿಕ ಕೇಂದ್ರಗಳೂ ಶರಣುಬಂದ ಜಪಾನೀ ಸೇನೆಗಳಿಂದ ತೆಗೆದುಕೊಳ್ಳಲಾಗಿದ್ದ ಹೇರಳವಾದ ಆಧುನಿಕ ಶಸ್ತ್ರಾಸ್ತ್ರಗಳೂ ಕಮ್ಯೂನಿಸ್ಟರ ಕೈಗೆಬಿದ್ದುವು.

ಇಷ್ಟಲ್ಲದೆ ಅನೇಕ ಗ್ರಾಮಾಂತರ ಪ್ರದೇಶಗಳೂ ಕಮ್ಯೂನಿಸ್ಟರ ಕೈಕೆಳಗಿದ್ದುವು. ಶಹರಗಳನ್ನಷ್ಟೇ ಅವರು ಆಕ್ರಮಿಸಿಕೊಂಡಿರಲಿಲ್ಲ.

ಚಿಯಾಂಗರ ವಶದಲ್ಲಿ ದೊಡ್ಡ ಸೈನ್ಯವಿತ್ತು. ಸುಸಜ್ಜಿತ ಸೈನ್ಯ. ಆದರೆ ಆ ಸೈನಿಕರಿಗೆ ದಂಡನಾಯಕ ಚಿಯಾಂಗರ ಬಗ್ಗೆ ವಿಶ್ವಾಸವಿರಲಿಲ್ಲ. ಜನತೆಯ ಮೇಲೂ ಕೂಮಿಂಟಾಂಗಿನ ಹಿಡಿತ ತಪ್ಪಿತು. ಹಿಂದೆಯಾದರೆ ಕೂಮಿಂಟಾಂಗನ್ನು ಬಲಶಾಲಿಯಾದ ರಾಷ್ಟ್ರೀಯ ಪಕ್ಷವೆಂದು ಜನರು ಗೌರವಿಸುತ್ತಿದ್ದರು. ಈಗ 'ಸ್ವರ್ಗವಿತ್ತ ಆದೇಶದ ಅವಧಿ ಈ ಪಕ್ಷಕ್ಕೆ ಮುಗಿಯುತ್ತ ಬಂತು' ಎಂದು ತಿಳಿದಿದ್ದರು. ಆ ಪಕ್ಷದೊಳಗೂ ಐಕ್ಯವಿರಲಿಲ್ಲ. ಪ್ರಮುಖರಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಸಂಪತ್ತನ್ನೇ ಹೆಚ್ಚಿಸುವುದರಲ್ಲಿ ನಿರತರಾಗಿದ್ದರು. ಲಂಚಗುಳಿತನ ವಿಪರೀತವಾಗಿತ್ತು.

ಚಿಯಾಂಗ್, ಮಂಚೂರಿಯದ ಮೇಲೆ ದಂಡಯಾತ್ರೆ ನಡೆಸುವಂತೆ ಪಡೆಗಳಿಗೆ ಆಜ್ಞೆಯಿತ್ತರು. ಸೈನ್ಯಗಳೇನೋ ಮಂಚೂರಿಯಾಕ್ಕೆ ಹೋದುವು. ಆದರೆ ಅಲ್ಲಿ ಕಮ್ಯೂನಿಸ್ಟರಿಂದ ಸೋಲಿಸಲ್ಪಟ್ಟುವು. ಶಹರಗಳಲ್ಲಿ ಬೀಡುಬಿಟ್ಟ ಕೂಮಿಂಟಾಗ್ ಸೈನಿಕರನ್ನು ಚೀನೀ ಕೆಂಪು ಸೇನೆಯ ಯೋಧರು ಸುತ್ತುವರಿದು, ತಮಗೆ ಮಣಿಯುವಂತೆ ಮಾಡಿದರು.

ಮಹಾಪ್ರಾಕಾರದ ದಕ್ಷಿಣದಲ್ಲೂ ಹೀಗೆಯೇ ಆಯಿತು. ಕೂಮಿಂಟಾಂಗ್ ಸೈನಿಕರನ್ನು ಸೋಲಿಸುವುದು ಚೀನೀ ಕೆಂಪು ಸೇನೆಗಳಿಗೆ ಏನೇನೂ ಪ್ರಯಾಸವಾಗಲಿಲ್ಲ. ಕಾದಾಟಕ್ಕಿಂತ ಬೇರೆ ಮಾರ್ಗವನ್ನು ಕಮ್ಯೂನಿಸ್ಟರು ಬಳಸಿದರು. ಕೂಮಿಂಟಾಂಗ್ ಸೈನಿಕರಿಂದ ಅವರ ಶಸ್ತ್ರಾಸ್ತ್ರಗಳನ್ನು ಕಮ್ಯೂನಿಸ್ಟರು ದುಡ್ಡು ಕೊಟ್ಟು ಕೊಂಡುಕೊಂಡರು ! ಕಮ್ಯೂನಿಸ್ಟರ ಗುಂಡುಗಳಿಗೆ ಬಲಿಯಾಗಿ ಸಾಯುವುದಕ್ಕಿಂತ, ಬಂದಷ್ಟು ಹಣಕ್ಕೆ ಶಸ್ತ್ರಾಸ್ತ್ರಗಳನ್ನು ಮಾರಿ, ಬದುಕಿದೆಯಾ ಬಡಜೀವವೇ ಎನ್ನುತ್ತ ಓಡಿಹೋಗುವುದಲ್ಲವೆ ಮೇಲು ? ಸರಿಯಾದ ವೇತನವೂ ಇಲ್ಲದೆ ತೊಳಲಾಡುತ್ತಿದ್ದ ಕೂಮಿಂಟಾಂಗ್ ಸೈನಿಕರು, ಕಮ್ಯೂನಿಸ್ಟರು ನೀಡಿದ ಹಣವನ್ನು ನೋಡಿದೊಡನೆ ಬಾಯಿ ಬಾಯಿ ಬಿಟ್ಟರು.

ಮಹಾಪ್ರಾಕಾರದ ದಕ್ಷಿಣದಲ್ಲಿ ಮಂಚೂರಿಯದಲ್ಲಾದ ಕತೆಯ ಪುನರಾವರ್ತನೆಯಾಯಿತು. ರೈಲುದಾರಿಗಳು ಹೇಗೂ ತಮ್ಮ ವಶದಲ್ಲೇ ಇದ್ದುದರಿಂದ ಕೂಮಿಂಟಾಂಗಿನಿಂದ ಶಸ್ತ್ರಾಸ್ತ್ರ ಹಾಗೂ ಆಹಾರದ ಸರಬರಾಜು ಉತ್ತರದಲ್ಲಿರುವ ಪಡೆಗಳಿಗೆ ಆಗದಿರಲೆಂದು, ರಸ್ತೆಗಳನ್ನು ಕಮ್ಯೂನಿಸ್ಟರು ದಿಗ್ಬಂಧನಕ್ಕೆ ಗುರಿಮಾಡಿದರು.

ಶಹರಗಳು ಒಂದೊಂದಾಗಿ ಕಮ್ಯೂನಿಸ್ಟರಿಗೆ ಶರಣಾಗತವಾದುವು.

೧೯೪೮ರ ಶರತ್ಕಾಲದಲ್ಲಿ ಚೀನೀ ಕಮ್ಯೂನಿಸ್ಟರು ಗೆರಿಲ್ಲಾಯುದ್ಧವನ್ನು ಬಿಟ್ಟುಕೊಟ್ಟು ಬಹಿರಂಗವಾಗಿ ಶಕ್ತಿಪ್ರದರ್ಶನಕ್ಕೆ ಆರಂಭಿಸಿದರು. ಹ್ಸು ಜೋ

ನಗರಕ್ಕೊ್ಯೀಸ್ಕರ ಒಂದು ತಿಂಗಳಕಾಲ ಯುದ್ಧ ನಡೆಯಿತು. ಚೀನೀ ಕೆಂಪು ಪಡೆಗಳಿಗೆ ಜಯವಾಯಿತು.

ಕಮ್ಯೂನಿಸ್ಟ್ ಸೇನೆಗಳು ಯಾಂಗ್‌ಟ್ಸೆ ನದಿಯನ್ನು ದಾಟಬಂದರೆ ಚಿಯಾಂಗರು ಯಶಸ್ವಿಯಾಗಿ ಪ್ರತಿಭಟಿಸಬಹುದೆಂದು ವಿದೇಶಗಳ ವೀಕ್ಷಕರ ಅಭಿಪ್ರಾಯವಾಗಿತ್ತು. ಚಿಯಾಂಗರ ಬಳಿ ಇನ್ನೂ ಹೇರಳವಾದ ಸೇನಾಬಲವಿತ್ತು. ದಕ್ಷಿಣ ಚೀನಾದ ಭೂಪ್ರದೇಶ ಸಮರ ಕಾರ್ಯಾಚರಣೆಗೆ ಅನುಕೂಲವಾಗಿಯೂ ಇತ್ತು. ಸರಬರಾಜುಗಳಿಗೂ ಕೊರತೆ ಇರಲಿಲ್ಲ.

ಆದರೂ ಚಿಯಾಂಗರು ಕಮ್ಯೂನಿಸ್ಟರನ್ನು ಹಿಂದಕ್ಕೆ ಅಟ್ಟಲು ಸಮರ್ಥರಾಗಲಿಲ್ಲ. ಕೆಂಪು ಪಡೆಗಳು ಯಾಂಗ್‌ಟ್ಸೆಯನ್ನು ದಾಟಿದುವು. ಮಂಚೂ ರಾಜವಂಶದ ಪತನದ ಅನಂತರ ಚೀನದ ಹೊಸರಾಜಧಾನಿಯೆಂದು ಮಹತ್ವಗಳಿಸಿದ್ದ, ಸಂಪದ್ಭರಿತವಾಗಿದ್ದ, ನಾನ್‌ಕಿಂಗ್ ನಗರ ಕಮ್ಯೂನಿಸ್ಟರ ವಶವಾಯಿತು. ಯುದ್ಧಕಾಲದ ರಾಜಧಾನಿಯಾದ ಚುಂಕಿಂಗನ್ನೂ ಚಿಯಾಂಗರು ತ್ಯಜಿಸಬೇಕಾಯಿತು.

೧೯೧೧ರಲ್ಲಿ ಮಂಚೂ ಪ್ರಭುತ್ವ ಹೇಗೆ ಕುಸಿಕುಸಿದು ಮಣ್ಣುಪಾಲಾಯಿತೋ ಹಾಗೆಯೇ ಚಿಯಾಂಗರ ಆಡಳಿತ ವ್ಯವಸ್ಥೆಯೂ ಕೊನೆಗೊಂಡಿತು. ಚಿಯಾಂಗರ ಪ್ರಭುತ್ವವನ್ನುಳಿಸಿಕೊಳ್ಳಲು ಅಮೆರಿಕ ಮಾಡಿದ ವಿಶ್ವಪ್ರಯತ್ನ, ಸುರಿದ ಕೋಟಿ ಕೋಟಿ ಡಾಲರುಗಳು, ನೀರ ಮೇಲಣ ಹೋಮವಾದುವು.

ಚಿಯಾಂಗರು ಅಳಿದುಳಿದ ಪಡೆಗಳೊಡನೆ ಫುಕೀನ್ ಪ್ರಾಂತದಿಂದ—ಚೀನಾದ ಭೂಪ್ರದೇಶದಿಂದ—ತೊಂಬತ್ತೊಂಭತ್ತು ಮೈಲು ದೂರದಲ್ಲಿರುವ ಫೋರ್ಮೋಸಾ ದ್ವೀಪಕ್ಕೆ ಪಾರಾಗಿ ಹೋದರು.

ಚೀನಾದ ಮೇಲಿನ ಕೂಮಿಂಟಾಂಗ್ ಹತೋಟಿಯೂ ಆ ಮೂಲಕ ಪಾಶ್ಚಾತ್ಯ ರಾಷ್ಟ್ರಗಳು ಬೀರುತ್ತಿದ್ದ ಪ್ರಭಾವವೂ ಅಲ್ಲಿಗೆ ಮುಗಿದುಹೋದುವು.

೧೯೪೯ ರ ಸೆಪ್ಟೆಂಬರ್ ೨೧ ರಂದು ಚೀನೀ ಜನತಾ ಗಣರಾಜ್ಯ ಅಸ್ತಿತ್ವಕ್ಕೆ ಬಂತೆಂದು ಚೀನಾದ ಕಮ್ಯೂನಿಸ್ಟ್ ಪಕ್ಷ ಸಾರಿತು.

ಇದಕ್ಕೆ ಪೂರ್ವಭಾವಿಯಾಗಿ ಆ ಪಕ್ಷ ಮಾಡಿಕೊಂಡ ರಾಜಕೀಯ ಸಿದ್ಧತೆಗಳು ಗಮನಾರ್ಹವಾಗಿವೆ.

ನಿರ್ಣಾಯಕ ಸ್ವರೂಪದ ಯಾವುದೇ ಸ್ಥಿತ್ಯಂತರವಾಗುವ ಮುನ್ನ ಕಮ್ಯೂನಿಸ್ಟ್ ಪಕ್ಷಗಳು ನೆಲವನ್ನು ಹದಗೊಳಿಸುತ್ತವೆ. ಅವರ ಪ್ರಚಾರ ಯಂತ್ರಗಳು ಭರದಿಂದ ಕೆಲಸ ಮಾಡುತ್ತವೆ. ಜನಾಭಿಪ್ರಾಯವನ್ನು ರೂಪಿಸುವ ಒಂದೇ ಉದ್ದೇಶಕ್ಕಾಗಿ ಸರ್ವಶಕ್ತಿಯನ್ನು ಕಮ್ಯೂನಿಸ್ಟರು ಕೇಂದ್ರೀಕರಿಸುತ್ತಾರೆ.

ಮಾವೋತ್ಸೆ ತುಂಗ್ ಮತ್ತು ಸಂಗಡಿಗರು ಮಾಡಿದುದು ಅದನ್ನೇ.

೧೯೪೭ ರಲ್ಲಿ ಚೀನೀ ಕಮ್ಯೂನಿಸ್ಟ್ ಪಕ್ಷ, ದೇಶದ ಜನತೆಯನ್ನು ಉದ್ದೇಶಿಸಿ ಒಂದು ಘೋಷಣೆ ಹೊರಡಿಸಿತು. 'ಸಾಮ್ರಾಜ್ಯಶಾಹಿಯೂ ಪಾಳೆಯಗಾರ

ಪದ್ಧತಿಯೂ ಚೀನಾದ ಎಲ್ಲ ಸಂಕಟಗಳ ಮೂಲ' ಎಂದು ಆ ಘೋಷಣೆ ಸಾರಿತು. 'ನೂತನ ಪ್ರಜಾಪ್ರಭುತ್ವ ರಾಜ್ಯವ್ಯವಸ್ಥೆಯೊಂದನ್ನು ರೂಪಿಸುವುದರಿಂದ ಚೀನೀ ಜನತೆಯ ಎಲ್ಲ ಯಾತನೆಗಳೂ ದೂರವಾಗುವುವು,' ಎಂದು ಅದು ತಿಳಿಸಿತು. ವೈಯಕ್ತಿಕ ಯತ್ನಕ್ಕಾಗಲೀ, ಖಾಸಗಿ ಬಂಡವಾಳಕ್ಕಾಗಲೀ, 'ಪ್ರಾಮಾಣಿಕವಾಗಿ ಗಳಿಸಿದ' ಖಾಸಗಿ ಸೊತ್ತಿಗಾಗಲೀ ಕಮ್ಯೂನಿಸಂ ವಿರೋಧಿಯಲ್ಲ ಎಂದಿತು. ಮಧ್ಯಮ ವರ್ಗದವರನ್ನು ಒಲಿಸಿಕೊಳ್ಳುವುದಕ್ಕೂ ಶ್ರೀಮಂತರಲ್ಲಿ ಹಲವರನ್ನು ಸಂತೈಸುವುದಕ್ಕೂ ಇಷ್ಟೇ ಸಾಕಾಯಿತು. ಇತರ ಜನವಿಭಾಗಗಳಿಗೂ ಆ ಘೋಷಣೆ ಕರೆ ನೀಡಿತು. ರಾಜಕೀಯವಾಗಿ ಭ್ರಮ ನಿರಸನ ಹೊಂದಿದವರು, ಕೈಗಾರಿಕೋದ್ಯಮಿಗಳು, ಆರ್ಥಿಕವಾಗಿ ಹತಾಶರಾದವರು, ಬುದ್ಧಿ ಜೀವಿಗಳು, ಸಾಲದ ಹೊರೆಯಿಂದ ಬೆನ್ನು ಬಾಗಿದ್ದ ರೈತರು–ಎಲ್ಲರ ಮುಂದೆಯೂ ಸುಖೀ ರಾಜ್ಯದೊಂದು ಚಿತ್ರವನ್ನು ಮಾವೊ ಇರಿಸಿದರು. ದೇಶದಲ್ಲಿ ಅಂತರ್ಯುದ್ಧ ತೀರ್ವಗೊಂಡುದೇ ಈ ಘೋಷಣೆಯ ಫಲಿತಾಂಶ.

ಕಮ್ಯೂನಿಸ್ಟ್ ಪಕ್ಷದ ಸರ್ವಾಧಿಕಾರವನ್ನಲ್ಲ; ಎಲ್ಲ ಪ್ರಜಾಪ್ರಭುತ್ವವಾದೀ ಪಕ್ಷಗಳನ್ನೂ ಒಳಗೊಂಡ ಸರ್ಕಾರವನ್ನು ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಸ್ಥಾಪಿಸುವುದೇ ತಮ್ಮ ಗುರಿ–ಎಂದು ಮಾವೋ ಸಾರಿದರು.

ಚತುರನಾದ ಬೆಸ್ತ ಬೀಸಿದ ಬಲೆ. ದೊಡ್ಡದೊಡ್ಡ ಮೀನುಗಳೇ ಅದರಲ್ಲಿ ಸಿಕ್ಕುವು.

ಚೀನೀ ಕಮ್ಯೂನಿಸ್ಟರು ನಾನ್‌ಕಿಂಗನ್ನು ರಾಜಧಾನಿಯಾಗಿ ಆರಿಸಲಿಲ್ಲ. ಅದರ ಬದಲು ಚೀನದ ವಿವಿಧ ರಾಜಮನೆತನಗಳ ಅರಸರು ಕುಳಿತು ಆಳಿದ್ದ ಪೀಕಿಂಗ್‌ನ್ನೇ ತಮ್ಮ ರಾಜಧಾನಿಯಾಗಿ ಮಾಡಿಕೊಂಡರು. ನಾನ್‌ಕಿಂಗ್ ಒಂದು ಪ್ರಾಂತದ ಮುಖ್ಯ ಪಟ್ಟಣವಾಗಿ ಮಾತ್ರ ಮುಂದುವರೆಯಿತು.

ಮಂಚೂ ಆಳ್ವಿಕೆ ಕೊನೆಗಂಡ ಬಳಿಕ ೧೯೧೨ ರಲ್ಲಿ ಡಾ. ಸೂನ್ ಯಾತ್ ಸೆನರ ನೇತೃತ್ವದಲ್ಲಿ ಗಣರಾಜ್ಯ ಸ್ಥಾಪನೆಯಾಯಿತಷ್ಟೆ. ಆ ಗಣರಾಜ್ಯ ಹೊಸ ಬಾವುಟವೊಂದನ್ನು ಸ್ವೀಕರಿಸಿತು. ಅದು ಪಂಚವರ್ಣಗಳ ಪತಾಕೆ. ಹಿಂದಿನ ಸಾಮ್ರಾಜ್ಯದ ಎಲ್ಲ ಮುಖ್ಯ ಭೂಭಾಗಕ್ಕಾಗಿ ಕೆಂಪು; ಮಂಚೂರಿಯದ ಜನತೆಗಾಗಿ ಹಳದಿ; ಮಂಗೋಲಿಯದ ಜನರಿಗಾಗಿ ನೀಲಿ; ಟಿಬೆಟಿನವರಿಗಾಗಿ ಬಿಳಿ; ಮಹಮ್ಮದೀಯ ಮತಾನುಯಾಯಿಗಳಿಗಾಗಿ ಕಪ್ಪು.

ಈಗ ಜನತಾ ಗಣರಾಜ್ಯವನ್ನು ಸ್ಥಾಪಿಸಿದ ಚೀನೀ ಕಮ್ಯೂನಿಸ್ಟರು ಬೇರೊಂದು ಬಾವುಟವನ್ನು ಸಿದ್ಧಪಡಿಸಿದರು. ಕೆಂಪು ಹಿನ್ನೆಲೆಯಲ್ಲಿ ಬಂಗಾರ ಬಣ್ಣದ ಐದು ನಕ್ಷತ್ರಗಳು. ಇವುಗಳಲ್ಲಿ ಒಂದು ದೊಡ್ಡ ನಕ್ಷತ್ರ. ಅದರ ಸುತ್ತಲೂ ನಾಲ್ಕು. ವಿವಿಧ ಪಕ್ಷಗಳನ್ನೊಳಗೊಂಡ ಸರಕಾರದ ಬಾವುಟ ಎಂದು ಇದರರ್ಥವಲ್ಲ. ಚೀನದ ಇತಿಹಾಸವನ್ನು ಬಲ್ಲವರಿಗೆ ಆ ಸಂಕೇತಗಳೇನು ಎಂಬುದನ್ನು

ತಿಳಿದುಕೊಳ್ಳುವುದು ಕಷ್ಟವಾಗದು. ಮೇಲೆ ಪ್ರಸ್ತಾಪಿಸಿದ ಪಂಚವರ್ಣದ ಪತಾಕೆಯ ಐದು ಬಣ್ಣಗಳು ಇಲ್ಲಿ ಐದು ನಕ್ಷತ್ರಗಳಾಗಿವೆ. ಕೆಂಪು ಹಿನ್ನೆಲೆ ಕಮ್ಯೂನಿಸಮನ್ನು ಸೂಚಿಸುತ್ತದೆ.

ಕಮ್ಯೂನಿಸಮಿನ ತಳಹದಿಯ ಮೇಲೆ ಚೀನೀ ಸಾಮ್ರಾಜ್ಯವನ್ನು ಕಟ್ಟುವ ಮಹಾತ್ವಾಕಾಂಕ್ಷೆಯ ಸಂಕೇತವೇ ಚೀನೀ ಕಮ್ಯೂನಿಸ್ಟರು ತಮ್ಮ ಜನತೆಗೆ ನೀಡಿದ ಹೊಸ ಬಾವುಟ.

ಭಾರತ ಸ್ವತಂತ್ರವಾದ ಸುಮಾರು ಎರಡು ವರ್ಷಗಳ ಅನಂತರ ನೂತನ ಚೀನಾದ ಉದಯವಾಯಿತು. ಸಮರಭೇರಿಯ-ರಣಕಹಳೆಯ ನಿನಾದದೊಡನೆ ಜನತಾ ಗಣರಾಜ್ಯದ ಹೊಸ ಧ್ವಜ ಪೀಕಿಂಗಿನಲ್ಲೂ ಚೀನಾದ ಉಳಿದೆಡೆಗಳಲ್ಲೂ ಹಾರಾಡಿತು.

—೧೯೬೨

ಅನುಬಂಧ

ಪಯಣ

೧೯೨೪ ಜನನ (ಜೂನ್ ೧೫). ದಕ್ಷಿಣ ಕನ್ನಡದ ಕುಳುಕುಂದ ಎಂಬ ಹಳ್ಳಿಯಲ್ಲಿ. ಚಿನ್ನಮ್ಮ ಎಂಟನೆಯ ವಯಸ್ಸಿನಲ್ಲಿ ಮದುವೆಯಾಗಿ ಅದೇ ವರ್ಷ ವಿಧವೆಯಾದಳು. ಮುಂದೆ ತನ್ನ ಮೂವತ್ತನೆಯ ವರ್ಷದಲ್ಲಿ ಶ್ರೀ ಶ್ರೀನಿವಾಸರಾಯ ಎಂಬವರ ಸಂಬಂಧದಿಂದ ತಾಯಿಯಾದಳು. ಮಗುವಿಗೆ ಇಟ್ಟ ಹೆಸರು ಶಿವ(ರಾಯ). ಮಗುವಿಗೆ ಆರು ತಿಂಗಳಾದಾಗ ಪರಿತ್ಯಕ್ತೆಯಾಗಿ ಗ್ರಾಮದಿಂದ ನಿರ್ಗಮನ. ಬೀಡು ಬಿಟ್ಟದ್ದು ಕಾವು ಎಂಬ ಪುಟ್ಟ ಊರಲ್ಲಿ. ಅಲ್ಲಿ ಪಂಚಾಯಿತಿ ವಿಚಾರಣೆ. ಆ ಸ್ಥಳಕ್ಕೆ ತಾಯಿಯನ್ನೂ ಮಗುವನ್ನೂ ಕರೆದುತಂದ ಶ್ರೀ ಮಂಜುನಾಥ ಪೈ, ರಕ್ಷಕ. (ಮುಂದೆ ನೀಲೇಶ್ವರದಲ್ಲಿ ಮಗನ ಹದಿನಾಲ್ಕನೆಯ ಹರೆಯದಲ್ಲಿ ಈ ರಕ್ಷಣೆಯಿಂದ ಬಿಡುಗಡೆ.)

೧೯೩೦–೩೩ ಕಾವು ಲೋವರ್ ಎಲಿಮೆಂಟರಿ ಶಾಲೆಯಲ್ಲಿ (ಮುಖ್ಯೋಪಾಧ್ಯಾಯರು: ಶ್ರೀ ಉಂಗ್ರಿಪುಳಿತ್ತಾಯ) ಮೂರು ವರ್ಷ ಅಧ್ಯಯನದ ಬಳಿಕ ಸುಳ್ಯಕ್ಕೆ ವಲಸೆ.

೧೯೩೪–೩೮ ಪ್ರಾಥಮಿಕ ವಿಭಾಗವೂ ಇದ್ದ ಸುಳ್ಯ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಶಿಕ್ಷಣ. ಮುಖ್ಯೋಪಾಧ್ಯಾಯರು ಶ್ರೀ ಬಿ. ರಾಮಪ್ಪಯ್ಯ.

೧೯೩೪ ಫೆಬ್ರವರಿಯಲ್ಲಿ, ಸುಳ್ಯದ ದಾರಿಯಾಗಿ ಮಡಿಕೇರಿಯಿಂದ ಬಂದ ಗಾಂಧಿಜಿಯನ್ನು ಕಂಡದ್ದು.

೧೯೩೫ ಶ್ರೀ ಕೋಟ ಶಿವರಾಮ ಕಾರಂತರ ನೇತೃತ್ವದಲ್ಲಿ ಸುಳ್ಯದಲ್ಲಿ ನಡೆದ ಮಕ್ಕಳ ಕೂಟದಲ್ಲಿ ಸ್ವಯಂಸೇವಕ. ಕೂಟದ ವ್ಯಾಪ್ತಿ ಆಗಿನ ಪುತ್ತೂರು ತಾಲೂಕು. ಬೆಂಗಾವಲು: ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಮೊಳಹಳ್ಳಿ ಶಿವರಾವ್.

೧೯೩೬ ವಿಟ್ಲ–ಕನ್ಯಾನಗಳಲ್ಲಾದ ಮಕ್ಕಳ ಕೂಟಗಳಲ್ಲಿ ಭಾಗಿ. ರಾಜರತ್ನಂರನ್ನು ಕಂಡದ್ದು.

೧೯೩೫,೩೬ ಪುತ್ತೂರು ನಾಡಹಬ್ಬದಲ್ಲಿ ಪ್ರೇಕ್ಷಕ. ಸರ್ವಶ್ರೀ ತೀ. ನಂ. ಶ್ರೀ., ಗೊರೂರು, ವಿ. ಸೀ., ಅ.ನ.ಕೃ.ರನ್ನು ಹತ್ತಿರದಿಂದ ನೋಡಿದ್ದು.

೧೯೩೭ ಆದಿ ಭಾಗದಲ್ಲಿ ಪುತ್ತೂರಿಗೆ ಹೋಗಿ ಜವಾಹರಲಾಲರ ಭಾಷಣ ಕೇಳಿದ್ದು. ಕಾಂಗ್ರೆಸ್ ಸ್ವಯಂಸೇವಕನಾದದ್ದು.
ತುಳುಭಾಷೆಯಲ್ಲಿ ಕೃತಿರಚನೆ. ಕಾವ್ಯನಾಮ : 'ಕಿಶೋರೆ'. ಮುದ್ರಣ 'ನವಯುಗ' ಸಾಪ್ತಾಹಿಕದ ತುಳುಸಂಚಿಕೆಯಲ್ಲಿ. (ಸಂ: ಶ್ರೀ ಕೆ. ಹೊನ್ನಯ್ಯಶೆಟ್ಟಿ.)
ಕನ್ನಡದಲ್ಲಿ ಕಥಾ ರಚನೆ. ಚೊಚ್ಚಲ ಕೃತಿಯೂ ಅನಂತರದ ಹಲವು ಕತೆಗಳೂ ಅಚ್ಚಾದದ್ದು 'ರಾಷ್ಟ್ರ ಬಂಧು' ಸಾಪ್ತಾಹಿಕದಲ್ಲಿ. (ಸಂ : ಶ್ರೀ ಕಡೆಂಗೋಡ್ಲು ಶಂಕರ ಭಟ್ಟ.)

೧೯೩೮ ಸುಳ್ಯದಲ್ಲಿ ಶಿಕ್ಷಣ ಮುಗಿಸಿ ನೀಲೇಶ್ವರಕ್ಕೆ ಪಯಣ.

೧೯೩೮–೪೧ ರಾಜಾಸ್ ಹೈಸ್ಕೂಲಿನಲ್ಲಿ ಪ್ರೌಢ ವಿದ್ಯಾಭ್ಯಾಸ. ಮುಖ್ಯೋಪಾಧ್ಯಾಯರು : ಶ್ರೀ ಕೆ. ರಾಮಕೃಷ್ಣರಾವ್. ಗಾಂಧಿವಾದ, ಸಮಾಜವಾದಗಳ ಮುಂದುವರಿಕೆಯಾಗಿ ಕಮ್ಯೂನಿಸಮಿನ ಪರಿಚಯ. ೧೯೪೧ರ ಆರಂಭದಲ್ಲಿ ಕಾಸರಗೋಡು ತಾಲೂಕು ವಿದ್ಯಾರ್ಥಿ ಸಮ್ಮೇನದ ಸಂಘಟನಾ ಕಾರ್ಯದರ್ಶಿ. ಕಯ್ಯೂರಿನ ರೈತರ ಚರಿತ್ರಾರ್ಹ ಹೋರಾಟದ ಸಮೀಪ ವೀಕ್ಷಕ. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಬಳಿಕ ಮಂಗಳೂರಿಗೆ ಪ್ರಯಾಣ. 'ರಾಷ್ಟ್ರಬಂಧು'ವಿನಲ್ಲಿ ಉಪ ಸಂಪಾದಕ. ಆಳುವ ಪರಕೀಯರ ಹಂಗು ಬೇಡವೆಂದು ಎಸ್.ಎಸ್.ಎಲ್.ಸಿ. ಉತ್ತೀರ್ಣತಾ ಪತ್ರದ ನಿರಾಕರಣೆ.

೧೯೪೨ 'ರಾಷ್ಟ್ರಬಂಧು' ಸಂಪಾದಕೀಯ ದುಡಿಮೆಯ ಜತೆಗೆ ಹುಬ್ಬಳ್ಳಿಯ 'ಸಂಯುಕ್ತ ಕರ್ನಾಟಕ'ದ ಸುದ್ದಿಗಾರ.

೧೯೪೩ ಕಮ್ಯೂನಿಸ್ಟ್ ಪಕ್ಷದ ಸದಸ್ಯ. ಜೂನ್‌ನಲ್ಲಿ ಮುಂಬಯಿಯಲ್ಲಿ ಜರಗಿದ ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನ ಹಾಗೂ ಜನತಾ ರಂಗಭೂಮಿ ಸಮ್ಮೇಳನಗಳಲ್ಲಿ ಭಾಗಿ. ಲೇಖಕರ ಸಮ್ಮೇಳನದಲ್ಲಿದ್ದ ಕನ್ನಡ ಪ್ರಮುಖರು 'ಶ್ರೀರಂಗ' (ಪ್ರೊ. ಆರ್. ವಿ. ಜಹಗೀರದಾರ್). ಅಲ್ಲಿಂದ ಬೆಂಗಳೂರಿಗೆ ಪ್ರಯಾಣ. ಶ್ರೀ ಅ.ನ.ಕೃ. ಭೇಟಿ.
ನಡುವಯಸ್ಸಿನಲ್ಲಿ ಶ್ರೀ ಶ್ರೀನಿವಾಸರಾಯರು ಹೃದಯಾಘಾತದಿಂದ ನಿಧನರಾದ ವಾರ್ತೆ.

ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಸಂಘಟನಾ ಕಾರ್ಯದರ್ಶಿ. (ಶ್ರೀ ಕಯ್ಯಾರ ಕಿಞ್ಞಣ್ಣ ರೈ ಗೌರವ ಕಾರ್ಯದರ್ಶಿ) ಉತ್ತರ ಕರ್ನಾಟಕದಲ್ಲಿ ಪ್ರಥಮ ಸಂಚಾರ. ಬೆಂಗಳೂರಿನ 'ಉಷಾ' ಮಾಸಿಕದಲ್ಲಿ ಕಥಾ ಪ್ರಕಟಣೆ (ಸಂ : ಬಸವರಾಜ ಕಟ್ಟೀಮನಿ) ವರ್ಷಾಂತ್ಯದಲ್ಲಿ ಶಿವಮೊಗ್ಗೆಯಲ್ಲಿ ಜರುಗಿದ ೨೭ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗಿ (ಶ್ರೀ ದ. ರಾ. ಬೇಂದ್ರೆ ಅಧ್ಯಕ್ಷರು). ಶ್ರೀ ಅ. ನ. ಕೃ. ಜತೆಯಲ್ಲಿ ಪ್ರಗತಿಶೀಲತೆಯ ತುತೂರಿ.

೧೯೪೪ ಮಂಗಳೂರಿನಲ್ಲಿ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ. (ಮದರಾಸಿನ 'ಸ್ವದೇಶ ಮಿತ್ರನ್' ದೈನಿಕದ ಸಂಪಾದಕ ಶ್ರೀ ಸಿ. ಆರ್. ಶ್ರೀನಿವಾಸನ್ ಅಧ್ಯಕ್ಷರು.) ಕರ್ನಾಟಕ ಪತ್ರಿಕೋದ್ಯೋಗಿ ಸಂಘದ ಕಾರ್ಯದರ್ಶಿಯಾಗಿ ಆಯ್ಕೆ. ಮಂಗಳೂರು ಪ್ರಗತಿಶೀಲ ಲೇಖಕರ ಸಂಘ, ಜನತಾ ರಂಗಭೂಮಿಗಳ ಕಾರ್ಯದರ್ಶಿತ್ವ. ಉಡುಪಿ ಕಿರಿಯರ ಸಮ್ಮೇಳನದ ಸೂತ್ರಚಾಲನೆ.

ಹುಬ್ಬಳ್ಳಿಯ 'ಸಂಯುಕ್ತ ಕರ್ನಾಟಕ'ದೊಂದಿಗೆ ಬೆಂಗಳೂರಿನ 'ತಾಯಿನಾಡು', 'DAILY NEWS', 'ಜನವಾಣಿ' ದೈನಿಕಗಳಿಗೂ ಮಂಗಳೂರು ಸುದ್ದಿಗಾರ. ಅಲ್ಲದೆ 'ರಾಷ್ಟ್ರಬಂಧು' ಸಾಪ್ತಾಹಿಕ, 'ನವಭಾರತ' ದೈನಿಕಗಳ ನಗರ ಪ್ರತಿನಿಧಿ.

ನವೆಂಬರ್ ೭ರಂದು ಮಂಗಳೂರು ಮೈದಾನದಲ್ಲಿ 'ನಾವೂ ಮನುಷ್ಯರು' ಬಯಲು ನಾಟಕದ ಪ್ರದರ್ಶನ (ಜನತಾ ರಂಗಭೂಮಿ ಕೊಡುಗೆ).

ವರ್ಷಾಂತ್ಯದಲ್ಲಿ ಧಾರವಾಡದಲ್ಲಿ ಸರ್ವಶ್ರೀ ಶ್ರೀರಂಗ, ಗೋಕಾಕ, ಅ. ನ. ಕೃ. ಭಾಗವಹಿಸಿದ ಪ್ರಗತಿಶೀಲ ಸಾಹಿತಿಗಳ ಸಭೆಯಲ್ಲಿ ಶ್ರೀ ಅ.ನ.ಕೃ. ಕಾರ್ಯ ವೈಖರಿಯ ಟೀಕೆ.

ರಬಕವಿಯಲ್ಲಿ ಸಮಾವೇಶಗೊಂಡ ೨೮ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (ಪ್ರೊ. ಶಿ. ಶಿ. ಬಸವನಾಳರ ಅಧ್ಯಕ್ಷತೆ) ಭಾಗಿ.

೧೯೪೫ ಮಂಗಳೂರು ಮಕ್ಕಳ ಸಮ್ಮೇಳನದ ಉಸ್ತುವಾರಿ.

ಮಂಗಳೂರಿನಿಂದ ಬೆಂಗಳೂರಿಗೆ ವಲಸೆ : ಪುತ್ತೂರು–ಕಾವು–ಸುಳ್ಯ–ಮಡಿಕೇರಿ–ಮೈಸೂರು ಮಾರ್ಗವಾಗಿ. 'ವಾಣಿ' ಮಾಸಪತ್ರಿಕೆಯ ಸಹ ಸಂಪಾದಕತ್ವ; ಯೋಜನೆ ವಿಫಲ. 'ಪ್ರಜಾಮತ' ಸಾಪ್ತಾಹಿಕದ ಸಹಸಂಪಾದಕತ್ವ (ಸಂ : ಶ್ರೀ ಬಿ. ಎನ್. ಗುಪ್ತ).

ಆ ಪತ್ರಿಕೆಯಲ್ಲಿ 'ಸರೂ, ಕೇಳಿದೆಯಾ ?' ಅಂಕಣ.

ಪ್ರಥಮ ಕಥಾ ಸಂಗ್ರಹ 'ಅಯ್ಯನ್ಯೆ !' ಪ್ರಕಟಣೆ.

ಮದರಾಸಿನಲ್ಲಿ ಜರಗಿದ ೨೯ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗಿ. (ಶ್ರೀ ಕೈಲಾಸಂ ಅಧ್ಯಕ್ಷತೆ.)

೧೯೪೬ ಬೆಂಗಳೂರಿನಿಂದ ಹುಬ್ಬಳ್ಳಿಗೆ. ಕಮ್ಯೂನಿಸ್ಟ್ ಪಕ್ಷದ ಕನ್ನಡ ವಾರಪತ್ರಿಕೆ 'ಜನಶಕ್ತಿ' ಪ್ರಕಟಣೆಯ ಯೋಜನೆ. ತಯಾರಿ ವಿಳಂಬ ವಾದುದರಿಂದ ಜನತಾಸಾಹಿತ್ಯದ ಲಾಂಛನದಲ್ಲಿ ಪುಸ್ತಿಕೆಗಳ ಪ್ರಕಟಣೆ ಆರಂಭ.

ಧಾರವಾಡ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದ ಜಂಟಿಕಾರ್ಯ ದರ್ಶಿತ್ವ (ಶ್ರೀ ಪಿ. ವೆಂಕೋಬಾಚಾರ್ ಜತೆಗೆ). ಅಧ್ಯಕ್ಷತೆ ವಹಿಸಲು ಶ್ರೀ ಅ.ನ.ಕೃ.ರಿಗೆ ಆಹ್ವಾನ. ಅವರ ಹಿರಿತನದಲ್ಲಿ ಕಾರ್ಯಕಲಾಪ. 'ಉಷಾ'ದಲ್ಲಿ (ಸಂ: ಶ್ರೀ ಎಸ್. ನಂಜಪ್ಪ) 'ಸರೋಜ ಸಂಚಯ' ಅಂಕಣ. 'ಛಾಯಾ', 'ದೇಶಬಂಧು'ಗಳಲ್ಲಿ ಬರೆವಣಿಗೆ (ಸಂ: ಶ್ರೀ ಬಿ. ಎಸ್. ವೆಂಕಟರಾವ್).

೧೯೪೭ ಮೇ ೧ರಂದು ಆರಂಭವಾದ 'ಜನಶಕ್ತಿ'ಯ ಸಂಪಾದಕತ್ವ. ಅಂಕಣ– 'ಸಂಗಾತಿಯ ಸಂಚಯ'. ಹರಪನಹಳ್ಳಿಯಲ್ಲಿ ಜರಗಿದ ೩೦ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗಿ. ಹಿರಿತನ: ಶ್ರೀ ಸಿ. ಕೆ. ವೆಂಕಟರಾಮಯ್ಯ. ಆ ಸಂದರ್ಭದಲ್ಲಿ ಏರ್ಪಟ್ಟ ಯುವ ಲೇಖಕರ ಪ್ರತ್ಯೇಕ ಸಭೆಯ ಅಧ್ಯಕ್ಷತೆ. ಇದರ ಸಂಘಟಕರು: ಶ್ರೀ ಜಿ. ಎ. ನರಸಿಂಹ ಮೂರ್ತಿ ಮತ್ತು ಶ್ರೀ ಎಲ್. ಎಸ್. ಶೇಷಗಿರಿರಾವ್. ವರ್ಷಾಂತ್ಯದಲ್ಲಿ ಕಾಸರಗೋಡಿನಲ್ಲಿ ಸೇರಿದ ೩೧ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗಿ (ಅಧ್ಯಕ್ಷರು: ಶ್ರೀ ತಿ. ತಾ. ಶರ್ಮ).

೧೯೪೮, ೪೯, ೫೦ ಕಮ್ಯೂನಿಸ್ಟ್ ಪಕ್ಷದ ವಿರುದ್ಧ ಸರಕಾರ ಅಸ್ತ್ರ ಹಿರಿದಾಗ ಭೂಗತ ಬದುಕು. 'ಜನಶಕ್ತಿ'ಯ ಮೇಲೆ ನಿಷೇಧಾಜ್ಞೆ ಜಾರಿಯಾಗುವ ವರೆಗೂ ಹುಬ್ಬಳ್ಳಿ ಧಾರವಾಡಗಳಲ್ಲಿ ತಲೆಮರೆಸಿಕೊಂಡು ಪತ್ರಿಕೆಗೆ ಮ್ಯಾಟರ್ ಪೂರೈಕೆ. ಬಳಿಕ ಭೂಗತನಾಗಿ ಬೆಂಗಳೂರಲ್ಲಿ. ಸರಿ ತಪ್ಪು ಗಳ 'ಸೈದ್ಧಾಂತಿಕ' ತಾಕಲಾಟದಲ್ಲಿ ಬೆಂದು, ಪಕ್ಷದಿಂದ ಬಿಡುಗಡೆ ಬಯಸಿ, ವರಿಷ್ಠರಿಗೆ ಪತ್ರ.

ವೆಂಕಟಲಕ್ಷ್ಮಿ ಎಂಬ 'ಬರೆಯುವ ಹುಡುಗಿ'ಯಲ್ಲಿ ಅನುರಕ್ತ (ಮುಂದೆ ಅನುಪಮಾ ಎಂದು ನಾಮಾಂತರ). ಮುಂಬಯಿಗೆ ತೆರಳಿ, ಶ್ರೀ ಎಂ. ಗೋವಿಂದ ಪೈ ಅಧ್ಯಕ್ಷತೆಯ ೩೪ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಪ್ರತ್ಯಕ್ಷ'.

೧೯೫೧ ಬೆಂಗಳೂರಿಗೆ ಮರಳಿ, ಪುರೋಗಾಮಿ ಪ್ರಕಾಶನದ ಆರಂಭ. ಮುಂಬಯಿಯ ಶ್ರೀ ವಾಸುದೇವ ಜತೆ ಸಂಪಾದಕರು.
ಇಪ್ಪತ್ತಾರು ದಾಟಿದ ಕುಳುಕುಂದ ಶಿವರಾಯ ನಿರಂಜನನಾದ. 'ಜನಶಕ್ತಿ'ಯಲ್ಲಿ ಮೂರು ವರ್ಷಗಳಿಗೆ ಹಿಂದೆ ಬರೆದ ಲೇಖನಗಳಿಗೆ ಸಂಬಂಧಿಸಿ ಬೆಂಗಳೂರಿನಲ್ಲಿ 'ಕೈಕೋಳ ಬಂಧನ'. ಕಾರವಾರಕ್ಕೆ ಒಯ್ದು ದೀರ್ಘ ವಿಚಾರಣೆ, ದಂಡನೆ, ಖುಲಾಸೆ.
ಪುರೋಗಾಮಿ ಪ್ರಕಾಶನದ ಲಾಂಛನದಲ್ಲಿ ಪುಸ್ತಕಗಳ ಪ್ರಕಟಣೆ. 'ಉಷಾ'ದಲ್ಲಿ 'ಸಾಧನ ಸಂಚಯ' ಅಂಕಣ ಆರಂಭ. 'ಜನಪ್ರಗತಿ'ಯಲ್ಲಿ ಈ ಅಂಕಣದ ಮುಂದುವರಿಕೆ (ಸಂ: ಶ್ರೀ ಎನ್. ಎಸ್. ಸೀತಾರಾಮ ಶಾಸ್ತ್ರಿ). 'ಚಿತ್ರಗುಪ್ತ'ದಲ್ಲಿ (ಸಂ: ಶ್ರೀ ಎಂ. ಎಸ್. ಭಾರದ್ವಾಜ್) 'ಓದುಗರೊಡನೆ ಐದು ನಿಮಿಷ', 'ಸಾಹಿತ್ಯ ಸಮೀಕ್ಷೆ' ಅಂಕಣಗಳು.

೧೯೫೨ ಕಥಾರಚನೆ ಮತ್ತಿತರ ಲೇಖನ ವ್ಯವಸಾಯ. ದಾವಣಗೆರೆಯ ಶ್ರೀ ರೇವಣಸಿದ್ಧಯ್ಯನವರ ಸಂಪಾದಕತ್ವದ 'ನವಶಕ್ತಿ' ವಾರಪತ್ರಿಕೆಯಲ್ಲಿ 'ಬಿಸಿಲು ಬೆಳದಿಂಗಳು' ಅಂಕಣ.
ಶ್ರೀ ಅ.ನ.ಕೃ. ಹಿರಿಯೂರಿನಲ್ಲಿ ಸಂಘಟಿಸಿದ ಪ್ರಗತಿಶೀಲ ಲೇಖಕರ ಸಮ್ಮೇಳನದಲ್ಲಿ ಭಾಗವಹಿಸಿದ್ದು (ಕತ್ತಿವರಸೆ).
ಬೇಲೂರಿನಲ್ಲಿ ಜರಗಿದ ೩೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗಿ. ಡಾ. ನಂದೀಮಠ ಅಧ್ಯಕ್ಷರು. ಪ್ರತಿನಿಧಿ ಶ್ರೀ ರಾಮಕೃಷ್ಣ ಹೆಗಡೆ ಅವರ ಪರಿಚಯ.
ದಿಲ್ಲಿಯಲ್ಲಿ ಜರುಗಿದ ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನದಲ್ಲಿ ಶ್ರೀ ವಾಸುದೇವರ ಜತೆ ಭಾಗಿ.
ಮುಂಬಯಿಯ 'ಚೇತನ' ಮಾಸಿಕದಲ್ಲಿ (ಸಂ: ಶಂಕರ ಹೆಜ್ಮಾಡಿ) ಅಂಕಣ.

೧೯೫೩ ವರ್ಷಾರಂಭದಲ್ಲಿ ಕಮ್ಯೂನಿಸ್ಟ್ ಪಕ್ಷದಿಂದ ವಿಮೋಚನೆ. ಕಾದಂಬರಿ ಬರೆಯಲು ಆರಂಭ. ಕೈಹೊತ್ತಗೆಯಾಗಿ ಪ್ರಥಮ ಕಾದಂಬರಿ ಪ್ರಕಟಣೆ.

೧೯೫೫ ಬೆಂಗಳೂರಿನಿಂದ ಮೈಸೂರಿಗೆ. ಶ್ರೀ ಕೋ. ಶಿ. ಕಾರಂತರ ಅಧ್ಯಕ್ಷತೆಯ ೩೭ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗಿ.
ವರ್ಷಾಂತ್ಯದಲ್ಲಿ ಶ್ರೀ ಶ್ರೀರಂಗರ ಹಿರಿತನದಲ್ಲಿ ರಾಯಚೂರಿನಲ್ಲಿ ಜರುಗಿದ ೩೮ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಲೇಖಕರ ಗೋಷ್ಠಿಯ ಅಧ್ಯಕ್ಷ.

೧೯೫೭ ನಿರಂಜನ – ಅನುಪಮಾ ಮದುವೆ. ಹೈದರಾಬಾದಿನ 'ಸಾಧನಾ' ವಾರಪತ್ರಿಕೆಯಲ್ಲಿ (ಸಂ : ಶ್ರೀ ಜೆ.ಕೆ. ಪ್ರಾಣೇಶಾಚಾರ್ಯ) ಕೆಲ ಕಾಲ 'ಮಧುಸಂಚಯ' ಅಂಕಣ.
ಶ್ರೀ ಕುವೆಂಪು ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ನಡೆದ ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಪತ್ನೀಕನಾಗಿ ಭಾಗವಹಿಸಿದ್ದು.

೧೯೫೮ ಮೈಸೂರಿನಿಂದ ಧಾರವಾಡಕ್ಕೆ. ಕುಟುಂಬದ ಹೊಸ ಸದಸ್ಯೆಯಾಗಿ ತೇಜಸ್ವಿನಿಯ ಆಗಮನ.

೧೯೬೧ ಮುಂದಿನ ಬದುಕಿಗಾಗಿ ಬೆಂಗಳೂರಿಗೆ ಸ್ಥಳಾಂತರ.

೧೯೬೨ 'ಪ್ರಜಾವಾಣಿ' ಪುರವಣಿ ಸಂಪಾದಕ ಶ್ರೀ ಎಂ. ಬಿ. ಸಿಂಗ್ ಅಪೇಕ್ಷೆಯಂತೆ 'ಬೇವು ಬೆಲ್ಲ' ಅಂಕಣ ಆರಂಭ. ನಾಲ್ಕು ವರ್ಷಗಳ ಬಳಿಕ ದೈನಿಕದ ಸಂಪಾದಕ ಶ್ರೀ ಟಿ. ಎಸ್. ರಾಮಚಂದ್ರ ರಾಯರ ಆದೇಶದಂತೆ ಅಂಕಣದ ನಿಲುಗಡೆ.
'ಒಂಟಿ ನಕ್ಷತ್ರ ನಕ್ಕಿತು' ಕಥಾಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ.

೧೯೬೩ ಮನೆಗೆ ತೇಜಸ್ವಿನಿಯ ತಂಗಿಯಾಗಿ ಸೀಮಂತಿನಿಯ ಪ್ರವೇಶ.

೧೯೬೪ ವರ್ಷದ ಅಂತ್ಯ ಭಾಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ. (ಅಧ್ಯಕ್ಷರು : ಪ್ರೊ. ಜಿ. ವೆಂಕಟಸುಬ್ಬಯ್ಯ)

೧೯೬೫ ಬೇಸಗೆಯಲ್ಲಿ ಕಾರವಾರದಲ್ಲಿ ೪೫ನೇ ಕನ್ನಡ ಸಾಹಿತ್ಯ ಸಮ್ಮೇಳನ. ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆ. ಸಮ್ಮೇಳನ ಮುಗಿದೊಡನೆ ಸ್ವಇಚ್ಛೆಯಿಂದ ಪರಿಷತ್ತಿನಿಂದ ನಿರ್ಗಮನ. ಕಾರ್ಯನಿರತ ಪತ್ರಿಕೋದ್ಯಮ. ದಿಲ್ಲಿಯ ಇನ್ಫಾ (ಇಂಡಿಯಾ ನ್ಯೂಸ್ ಅಂಡ್ ಫೀಚರ್ ಅಲಯನ್ಸ್) ಸಂಸ್ಥೆಗೆ ಕರ್ನಾಟಕ ಪ್ರತಿನಿಧಿ. ಅಂಕಣಗಳು : 'ರಾಜಧಾನಿಯಿಂದ', 'ದಿನಚರಿಯಿಂದ'.

೧೯೬೯–೭೧ ಮೈಸೂರು, ಬೆಂಗಳೂರು ವಿಶ್ವವಿದ್ಯಾನಿಲಯಗಳ ಸೆನೆಟ್ ಸದಸ್ಯತ್ವ.

೧೯೬೯ ಕಿರಿಯರ ವಿಶ್ವಕೋಶ 'ಜ್ಞಾನಗಂಗೋತ್ರಿ'ಯ ರಚನೆಯ ಉದ್ದೇಶದಿಂದ, ಸ್ವ-ಇಚ್ಛೆಯಿಂದ ಇನ್ಫಾದಿಂದ ಬಿಡುಗಡೆ.

೧೯೬೯–೭೪ 'ಜ್ಞಾನಗಂಗೋತ್ರಿ' ಪ್ರಧಾನ ಸಂಪಾದಕತ್ವ. ದೊಡ್ಡ ಆಕಾರದ ೫೦೦೦ ಪುಟಗಳು, ಏಳು ಸಂಪುಟಗಳಲ್ಲಿ ವಿಶ್ವಕೋಶದ ನಿರ್ಮಾಣ. ಪ್ರಕಟಣೆ ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರದಿಂದ.

೧೯೭೧ ಪಾರ್ಶ್ವವಾಯು ಪೀಡೆ, ಹತೋಟಿ ತಪ್ಪಿದ ಎಡಗೈ, ಎಡಗಾಲು. ಈ ಸ್ಥಿತಿಯಲ್ಲೇ, ನಿಗದಿತ ಅವಧಿಗಿಂತಲೂ ತುಸು ಮುನ್ನವೇ, 'ಜ್ಞಾನ ಗಂಗೋತ್ರಿ' ಯೋಜನೆಯ ಯಶಸ್ವೀ ಮುಕ್ತಾಯ.

೧೯೭೪ ಯೋಜನೆ ಮುಗಿದೊಡನೆ ಪ್ರಕಾಶನ ಮಂದಿರಕ್ಕೆ ಅಂತಿಮ ನಮಸ್ಕಾರ. 'ಚಿರಸ್ಮರಣೆ' ಕಾದಂಬರಿಗೆ ಸೋವಿಯೆತ್ ಲ್ಯಾಂಡ್ – ನೆಹರೂ ಪುರಸ್ಕಾರ.

೧೯೭೫ ತಾಯಿಯ ಮರಣ, ೮೦ನೇ ವಯಸ್ಸಿನಲ್ಲಿ.
ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ.

೧೯೭೬ ದಾವಣಗೆರೆಯಲ್ಲಿ ಸಮಾವೇಶಗೊಂಡ ಪ್ರಗತಿ ಪಂಥ ಸಂಸ್ಥಾಪನಾ ಸಮ್ಮೇಳನದ ಅಧ್ಯಕ್ಷತೆ.

೧೯೭೭ ಪುತ್ತೂರಿನಲ್ಲಿ ಜರಗಿದ ಪ್ರಗತಿ ಪಂಥದ ದ್ವಿತೀಯ ಸಮ್ಮೇಳನದಲ್ಲಿ (ಶ್ರೀ ಶ್ರೀರಂಗ ಅಧ್ಯಕ್ಷರು) ಕಾರ್ಯನಿರ್ವಹಣೆಯ ಹೊಣೆಯನ್ನು ಬೇರೆಯವರಿಗೆ ಒಪ್ಪಿಸಿ, ರಂಗಮಧ್ಯದಿಂದ ನಿಷ್ಕ್ರಮಣ.

೧೯೭೮ ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ.
ಅನುಪಮಾಗೆ ಕ್ಯಾನ್ಸರ್.

೧೯೭೯ 'ಗವಿವಾಸಿ'ಯಾಗಿದ್ದುಕೊಂಡೇ, ನವಕರ್ನಾಟಕ ಪ್ರಕಾಶನ ಸಂಸ್ಥೆಗಾಗಿ ೨೫ ಸಂಪುಟಗಳ 'ವಿಶ್ವಕಥಾಕೋಶ'ದ ಯೋಜನೆ ರೂಪಿಸಿ, ಪ್ರಧಾನ ಸಂಪಾದಕನಾಗಿ, ಯೋಜನೆಯನ್ನು ಕೃತಿಗಿಳಿಸುವ ಹೊಣೆ ಹೊತ್ತದ್ದು.

೧೯೮೦ ಮೇಲಿನ ಯೋಜನೆ ಅಂತಿಮ ಹಂತ ಸಮೀಪಿಸುತ್ತಿದ್ದಂತೆ ಪಾರ್ಶ್ವ ಪೀಡೆಯ ಎರಡನೇ ಆವೃತ್ತಿ, ಈ ಸಲ ದೃಷ್ಟಿಗೂ ಮಾತಿಗೂ ಧಕ್ಕೆ, ಬೇಗನೆ ಚೇತರಿಕೆ. 'ವಿಶ್ವಕಥಾಕೋಶ'ವನ್ನು ಪೂರ್ತಿಗೊಳಿಸಿ ನವ ಕರ್ನಾಟಕ ಪ್ರಕಾಶನಕ್ಕೆ 'ದಸ್ಪಿದಾನಿಯ' (ವಿದಾಯ).

೧೯೮೪ ತೇಜಸ್ವಿನಿ–ವಿವೇಕ ಧಾರೇಶ್ವರ ವಿವಾಹ.

೧೯೮೫ ಪುತ್ತೂರು ಸಂತ ಫಿಲೋಮಿನಾ ಕಾಲೇಜು ಕನ್ನಡ ಸಂಘದ ಆಶ್ರಯದಲ್ಲಿ ನಿರಂಜನ ಸಾಹಿತ್ಯ ವಿಚಾರ ಸಂಕಿರಣ.
ಕನ್ನಡ ಸಾಹಿತ್ಯ ಪರಿಷತ್ತಿನಿಂದ ಗೌರವ ಸದಸ್ಯತ್ವ ನೀಡಿಕೆ.

೧೯೮೬ ಪುತ್ತೂರಿನಲ್ಲಿ 'ನಿರಂಜನ ಅಭಿನಂದನ' ಗ್ರಂಥ ಬಿಡುಗಡೆ.
ಹುಟ್ಟಿದಹಳ್ಳಿ ಕುಳುಕುಂದಕ್ಕೆ ಭೇಟಿ. ಸುಳ್ಯಕ್ಕೆ ಸಂದರ್ಶನ.

ಗ್ರಂಥಸೂಚಿ

ಕಾದಂಬರಿ

ವಿಮೋಚನೆ ೧೯೫೩, ೧೯೫೫, ೧೯೭೬, ೧೯೮೭

  ರಷ್ಯನ್ ಆವೃತ್ತಿ ೧೯೭೦
  ಪೋಲಿಷ್ ಭಾಷಾಂತರ ೧೯೭೬
  ಇಂಗ್ಲಿಷ್ : WAIT FOR THE MOON 1983
  ಮಲಯಾಳಂ : ಮೋಚನಂ ೧೯೮೪
  ತೆಲುಗು : ವಿಮೋಚನ ೧೯೮೫

ಬನಶಂಕರಿ ೧೯೫೪, ೧೯೫೯, ೧೯೭೬

ಸೌಭಾಗ್ಯ ೧೯೫೪

ಅಭಯ ೧೯೫೪, ೧೯೫೯, ೧೯೭೬

  ತೆಲುಗು : ಅಭಯಧಾಮಂ ೧೯೭೩

ರಂಗಮ್ಮನ ವಠಾರ ೧೯೫೪, ೧೯೭೬, ೧೯೭೭, ೧೯೮೭

  ಮಲಯಾಳಂ : ರಂಗಮ್ಮಯುಡೆ ವಾಡಗಪರಂಬು ೧೯೮೦

ದೂರದ ನಕ್ಷತ್ರ ೧೯೫೪, ೧೯೫೬, ೧೯೮೭

ನವೋದಯ ೧೯೫೬, ೧೯೮೭

ಪಾಲಿಗೆ ಬಂದ ಪಂಚಾಮೃತ ೧೯೫೫, ೧೯೮೭

ಏಕಾಂಗಿನಿ ೧೯೫೫, ೧೯೮೭

ಚಿರಸ್ಮರಣೆ ೧೯೫೫, ೧೯೭೫, ೧೯೮೧, ೧೯೮೩, ೧೯೮೭

  ಮಲಯಾಳಂ : ಚಿರಸ್ಮರಣ ೧೯೭೪, ೧೯೭೮
  ತೆಲುಗು : ಚಿರಸ್ಮರಣಂ ೧೯೮೧
  ತಮಿಳು : ನಿನ್ನೈವುಗಳ್ ಅಳಿವದಿಲ್ಲೈ ೧೯೭೯, ೧೯೮೧, ೧೯೮೫
  ಮರಾಠಿ : ಅವಿಸ್ಮರಣೀಯ್ ವೀರಗಾಥಾ ೧೯೭೯
  ಬಂಗಾಳಿ : ಚಿರಸ್ಮರಣೀಯ್ ೧೯೮೧
  ತುಳು : ಮದಪ್ಪಂದಿ ನೆಂಪು ೧೯೮೪
  ಇಂಗ್ಲಿಷ್ : THE STARS SHINE BRIGHELY 1979

ಕೊನೇ ನಮಸ್ಕಾರ ೧೯೫೫
ದೀಕ್ಷೆ ೧೯೫೬
ಕಲ್ಯಾಣ ಸ್ವಾಮಿ ೧೯೫೬, ೧೯೫೮, ೧೯೭೬, ೧೯೮೭
ಮಿಣುಕುಹುಳ ೧೯೫೬
ವಿಲಾಸಿನಿ ೧೯೫೬
ಅಂಜನ ೧೯೫೭
ವಿಶಾಲಾಕ್ಷಿ ೧೯೫೮
ತೊಟ್ಟಿಲು ತೂಗದ ಕೈ – 'ಪ್ರಜಾಮತ' ಧಾರವಾಹಿ ೧೯೬೦-೬೧
    ಈ ಕಾದಂಬರಿಯ ಪುನಃಸೃಷ್ಟಿ ೧೯೮೭
ಹೆಣ್ಣಾಗಿ ಕಾಡಿತ್ತು ಮಾಯೆ ೧೯೬೨
ಬಂಗಾರದ ಜಿಂಕೆ ೧೯೬೩, ೧೯೭೬
ನಂದಗೋಕುಲ ೧೯೬೪, ೧೯೭೬
ಸ್ವಾಮಿ ಅಪರಂಪಾರ ೧೯೬೭, ೧೯೭೬, ೧೯೭೭ ನಾಲ್ಕನೆಯ ಆವೃತ್ತಿ ೧೯೭೭
    ಮಲಯಾಳಂ : ಅಪರಂಪಾರಸ್ವಾಮಿ ೧೯೮೬
ನೋವು (ನೂರು ಜುಟ್ಟು ಮೂರು ಜಡೆ) ೧೯೬೫, ೧೯೭೬
ಸ್ಮರಣೆಯೊಂದೇ ಸಾಲದೆ ? ೧೯೭೧
ಮೃತ್ಯುಂಜಯ ೧೯೭೬, ೧೯೮೨, ೧೯೮೭
    ಮಲಯಾಳಂ : ಮೃತ್ಯುಂಜಯನ್ ೧೯೮೫
    ತೆಲುಗು : ಮೃತ್ಯುಂಜಯುಡು ೧೯೮೫
    ಹಿಂದಿ : ಮೃತ್ಯುಂಜಯ್ (ಅನುವಾದ ಮುಗಿದಿದೆ ೧೯೮೬)
    ಇಂಗ್ಲಿಷ್ : COMING FORTH BY DAY (ಬೆರಳಚ್ಚು ಪ್ರತಿ ಸಿದ್ಧ ೧೯೮೨)
    ಅರಬಿ : ಅರಾಬಿಕ್‌ಗೆ ತುರ್ಜುಮೆ ಮಾಡಲು ಈಜಿಪ್ಟಿನ ಸಾಹಿತ್ಯಾಸಕ್ತರ ಅಪೇಕ್ಷೆ ೧೯೮೬

ಕಥಾಸಂಗ್ರಹ

ಅಯ್ಯನ್ಯೈ ! ೧೯೪೫
ಸಂಧಿಕಾಲ ('ಅಯ್ಯನ್ಯೈ!'ಯ ಹೊಸ ಆವೃತ್ತಿ) ೧೯೪೬
ರಕ್ತ ಸರೋವರ ೧೯೪೭
ಅನ್ನಪೂರ್ಣಾ ೧೯೫೨
ಕೊನೆಯ ಗಿರಾಕಿ ೧೯೫೩
ವಾರದ ಹುಡುಗ ೧೯೫೭
ಕಾತ್ಯಾಯಿನಿ ೧೯೫೭

ಒಂಟಿ ನಕ್ಷತ್ರ ನಕ್ಕಿತು ೧೯೬೦
ಯಾವ ಜನ್ಮದ ಶಾಪ ? ೧೯೬೪
ನಾಸ್ತಿಕ ಕೊಟ್ಟ ದೇವರು ೧೯೬೫, ೧೯೬೮
ಕೆಲವು ಸಣ್ಣ ಕಥೆಗಳು ೧೯೮೬
ಧ್ವನಿ–ಸಮಗ್ರಕಥಾ ಸಂಪುಟ* ೧೯೮೬–೮೭

[ಬೇರೆ ಬೇರೆ ಕಥೆಗಳು ಇಂಗ್ಲಿಷ್, ಹಿಂದಿ, ತೆಲುಗು, ರಷ್ಯನ್, ಮಲಯಾಳಂ ಮತ್ತಿತರ ಭಾಷೆಗಳಿಗೆ ಅನುವಾದಿತ.]

ನಾಟಕ

ಸಂಗಮಸ್ನಾನ ೧೯೬೧
ಆಹ್ವಾನ ೧೯೬೩
ಸಮ್ರಾಜ್ಞಿ ೧೯೬೭
ನಾವೂ ಮನುಷ್ಯರು ! ೧೯೮೫
ಪಾಪಾಸು ಕಳ್ಳಿ*
ಕಣ್ಣಿದ್ದವರಿಗೂ ನೀನೆ ಶಿವಾ....*

ಸಾರಸಂಗ್ರಹ

ಸೌಗಂಧಿಕಾ ಪರಿಣಯ ಮತ್ತು....*

ಜೀವನವೃತ್ತ

ಋತುರಾಜ ೧೯೬೧
ಪುರುಷೋತ್ತಮ (‘ಋತುರಾಜ’–ಪರಿಷ್ಕೃತ) ೧೯೬೪

ವ್ಯಕ್ತಿಚಿತ್ರ ಸಂಕಲನ

ನಡೆ ಚೆನ್ನ, ನುಡಿ ಚೆನ್ನ ೧೯೮೬
....ಹೆಜ್ಜೇನು ಸವಿದಂತೆ*

ಲೇಖನ ಸಂಗ್ರಹ

ಬುದ್ಧಿ, ಭಾವ, ಬದುಕು ೧೯೮೪
ಈ ಪುಸ್ತಕ ಓದಿದ್ದೀರಾ ?*
ಮನ್ಮಥ ಮುಟ್ಟಿದ ಲೇಖನಿ*

ಸಂದರ್ಶನ ಸಂಕಲನ

ಮುಖತಃ ೧೯೮೫

ಅಂಕಣ ಸಂಗ್ರಹ

ಐದು ನಿಮಿಷ ೧೯೫೩
ಸಾಧನಾ ೧೯೫೩
ಕಾಲಕ್ಷೇಪ ೧೯೫೭
ಪುಷ್ಪಹಾರ ೧೯೫೭
ದಿನಚರಿಯಿಂದ ೧೯೭೨
ರಾಜಧಾನಿಯಿಂದ ೧೯೭೨
ಅಂಕಣ ೧೯೭೨
ನೆಳಲು – ಬೆಳಕು*

ದಾಖಲೆ

ಪ್ರಗತಿಶೀಲರ ಅಂತಃಕಲಹ*

ರಾಜಕೀಯ

ಹಿಮಾಲಯದ ದಳ್ಳುರಿ ೧೯೬೨
ಗಾಂಧೀ–ಇಂದು, ನಾಳೆ ೧೯೭೩
ಚಿರಸ್ಮರಣೆಯ ಕಯ್ಯೂರು ೧೯೮೧

ಇತರ

ಮಾಡೋಣ ಚಿಂತೆ*
ಮುನ್ನುಡಿ, ಪ್ರಸ್ತಾವನೆ*

ಭಾಷಾಂತರ

ಸಮತಾವಾದ ೧೯೪೫
ಮಾರ್ಕ್ಸ್‌ವಾದ ಎಂದರೇನು ?*
('ಸಮತಾವಾದ'ದ ಪರಿಷ್ಕೃತ ಆವೃತ್ತಿ)
ತಾಯಿ ೧೯೫೪, ೧೯೮೧
ಅಧಃಪತನ ೧೯೫೮
ನನ್ನ ಬಾಲ್ಯ ೧೯೫೬
ಜನತೆಯ ನಡುವೆ ೧೯೬೧
ನನ್ನ ವಿಶ್ವವಿದ್ಯಾಲಯ ೧೯೬೧
ಚೀಣಾ ದೇಶದ ನೀತಿ ಕಥೆಗಳು ೧೯೫೬

ಮದುವಣಗಿತ್ತಿ ೧೯೫೭
ಮಾನವನ ಪಾಡು ೧೯೬೭
ಕರ್ನಾಟಕ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ* (೧೯೬೫)
ಸಂಗಮ್ ರಾಜಕೀಯ ಸಾಮಾಜಿಕ ವ್ಯವಸ್ಥೆ ೧೯೭೯

ಸಂಪಾದಿತ

ಜನತಾ ಸಾಹಿತ್ಯದ ೨೫ ಪುಸ್ತಕ ೧೯೪೬–೧೯೪೭
ಪುರೋಗಾಮಿ ಪ್ರಕಾಶನದ ೮ ಪುಸ್ತಕ ೧೯೫೧–೧೯೫೩
ಜ್ಞಾನಗಂಗೋತ್ರಿ–ಕಿರಿಯರ ವಿಶ್ವಕೋಶದ ೭ ಸಂಪುಟ ೧೯೭೦–೧೯೭೪
ವಿಶ್ವಕಥಾಕೋಶ – ಜಗತ್ತಿನ ಶ್ರೇಷ್ಠ ಸಣ್ಣ ಕಥೆಗಳು –
೨೫ ಸಂಪುಟಗಳಲ್ಲಿ ೧೯೭೯–೧೯೮೨

ನಾಟಿಕೆ

ಪ್ರತಿಧ್ವನಿ ೧೯೮೭

ಗ್ರಂಥಸೂಚಿಯಲ್ಲಿ ಪಟ್ಟಿಮಾಡಿರುವ ಪುಸ್ತಕಗಳಲ್ಲಿ ಹಲವು ಪುನರ್ಮುದ್ರಣದ ದಾರಿ ನೋಡುತ್ತಿವೆ. *ಗುರುತು ಹಾಕಿರುವ ಪುಸ್ತಕಗಳು ಮುದ್ರಣದ ಅಥವಾ ಸಂಕಲನದ ಹಂತದಲ್ಲಿವೆ. ಎರಡು ಸಾವಿರಕ್ಕೂ ಹೆಚ್ಚು ಪುಟಗಳ ಬಾನುಲಿ ಸಾಹಿತ್ಯ (ಭಾಷಣ, ನುಡಿಚಿತ್ರ, ನಾಟಕ) ಮತ್ತು ಪತ್ರಿಕಾ ಬಿಡಿ ಬರೆಹಗಳು ಅಸಂಕಲಿತ ರೂಪದಲ್ಲಿವೆ. ●

ಈಗ ಒಟ್ಟು ನಿರಂಜನ ಸಾಹಿತ್ಯ (ಡೆಮ್ಮಿ ಅಷ್ಟದಳಾಕೃತಿಯ ೧೫,೦೦೦ ಪುಟ) ಐಬಿಎಚ್ ಪ್ರಕಾಶನದಿಂದ ಮೂವತ್ತು ಸಂಪುಟಗಳಲ್ಲಿ ಪ್ರಕಟವಾಗುತ್ತಿದೆ. ●

‘ಪ್ರತಿಧ್ವನಿ’ ನಿರಂಜನ ವಾಚಿಕೆ. ಅವರ ಎಲ್ಲ ಸಾಹಿತ್ಯ ಪ್ರಕಾರಗಳ ನಮೂನೆಗಳ ಮಾದರಿ ಈ ಸಂಪುಟ. ಅರ್ಧ ಶತಮಾನಕಾಲ ನಿರಂಜನ ಸೃಜಿಸಿದ ಸಾಹಿತ್ಯಕ ಸೂಕ್ಷ್ಮ ಪರಿಚಯು ಇದರಲ್ಲಿ ಲಭ್ಯ. ವಿಸ್ತೃತ ಓದಿಗೆ ಪರಿಚಯುವನ್ನು ಮಾಡಿಕೊಡುತ್ತದೆ. ನಿರಂಜನ ಸಾಹಿತ್ಯ ಎಂಥದೆಂದು ತಿಳಿಯುಲು ‘ಪ್ರತಿಧ್ವನಿ’ಯುನ್ನು ಕೈಗೆತ್ತಿಕೊಂಡರೆ ಸಾಕು. ಓದುಗ ಹಾಗೂ ಲೇಖಕ ಸ್ನೇಹಿತರಾಗಿಬಿಡುತ್ತಾರೆ.

ಬಿ. ಎಂ. ಶ್ರೀ. ಅಚ್ಚುಕೂಟ